A

COMMENTARY

ON

THE OLD TESTAMENT

VOL. I. THE PENTATEUCH

ಶಾಲಾಗೃಹಪಠನೋದ್ದಿಶ್ಯ

ದೇವವಾಕ್ಯವ್ಯಾಖ್ಯಾನವು

ಮೊದಲನೆ ಖಂಡ

ಹಳೆ ಒಡಂಬಡಿಕೆ

ಮೊದಲನೆ ಭಾಗ

ಮೋಶೆಯ ಐದು ಗ್ರಂಥಗಳು

MANGALORE
PUBLISHED BY C. STOLZ
BASEL MISSION BOOK & TRACT DEPOSITORY
1873

A

COMMENTARY

ON

The Pentateuch

IN CANARESE

FROM THE GERMAN

ಮೋಶೆಯ ಐದು ಗ್ರಂಥಗಳ

ವ್ಯಾಖ್ಯಾನವು

MANGALORE
PRINTED BY STOLZ & HIRNER, BASEL MISSION PRESS
1873

ಒಂದನೆ ಖಂಡ

ಹಳೆ ಒಡಂಬಡಿಕೆ



ಹಳೆ ಒಡಂಬಡಿಕೆಯ ಪೀಠಿಕೆ.

೧. ಹಳೆ ಒಡಂಬಡಿಕೆಯ ಪ್ರಕಟಣಾಸಾರಾಂಶ.

ದೇವರು ಕಡೆಗೆ ತನ್ನ ಮಗನ ಮುಖದಿಂದ ನಮ್ಮ ಸಂಗಡ ಮಾತಾಡಿದ ಅತ್ತಲಾಗಿ ನಾನಾ ವಿಧವಾಗಿ ಪ್ರವಾದಿಗಳ ಮುಖಾಂತರ ಪಿತೃಗಳ ಸಂಗಡ ಮಾತಾಡಿದ್ದಾನೆ. ದೇವರು ನಮ್ಮ ಸಂಗಡ ಮಾತಾಡುವದು ಮೂರು ವಿಧವು; ಅವು ಯಾವವೆಂದರೆ: ಮೊದಲು ತಾನು ಒಬ್ಬೊಬ್ಬ ಮನುಷ್ಯನಲ್ಲಿ ಇಟ್ಟಿರುವ ಮನೋಸಾಕ್ಷಿಯಿಂದ ಇದು ಒಳ್ಳೇದು ಅದು ಕೆಟ್ಟದ್ದೆಂದು ತೋರಿಸಿ ಒಳ್ಳೇದಕ್ಕೆ ಮೆಚ್ಚಿಸಿ ಕೆಟ್ಟದ್ದಕ್ಕೆ ನಾಚಿಸಿ ಶಿಕ್ಷಾಕಾರ್ಯ ನಡಿಸಿ ಈ ಪ್ರಕಾರ ಮಾಡುತ್ತಾನೆ. ಇದರಿಂದ ಪಾಪ ಪುಣ್ಯದ ಅರುವು. ಈ ಒಳಗಣ ಶಿಕ್ಷಾಕಾರ್ಯಕ್ಕೆ ಅನುಕೂಲವಾಗಿ ಸೃಷ್ಟಿಯ ದೃಶ್ಯವಾದ ವಸ್ತುಗಳಿಂದ ತನ್ನ ಮಹಿಮಾಧಿಕಾರವನ್ನು ಸಾರುತ್ತಾ ಇದ್ದಾನೆ—ಹಾಗೂ ಒಬ್ಬೊಬ್ಬ ಮನುಷ್ಯನನ್ನೂ ರಾಜ್ಯಗಳನ್ನೂ ನಡಿಸಿ ಪಾರುಪತ್ಯ ಮಾಡುವಲ್ಲಿ ನೀತಿಗೆ ಆಸ್ಪದವಾಗಿ ಪಾಪ ಶಿಕ್ಷಿಸಿ ತೆಗದು ಹಾಕಿ· ಹೀಗೆ ತನ್ನ ನೀತಿ ಪರಿಶುದ್ಧತ್ವಗಳನ್ನು ಸಾರುತ್ತ ಇದ್ದಾನೆ—ಇದು ಆತನು ನುಡಿಯುವ ಎರಡನೆ ತರದ ನುಡಿ. (ಕೀರ್ತನೆ. ೧೯.) ಆದರೆ ಈ ಎರಡು ತರದ· ನುಡಿಗಳು ಮಂದ ಬುದ್ಧಿಯುಳ್ಳವರಾದ ಮನುಷ್ಯರಿಗೆ ಇನ್ನು ಸಾಲದಕ್ಕೆ, ದೇವರು ತಾನಾಗಲಿ, ತನ್ನ ಪರಿಶುದ್ಧಾತ್ಮನಿಂದ ಪ್ರೇರಿಸಿ ಕೊಂಡ ಸದ್ಭಕ್ತರ ಮುಖದಿಂದಾಗಲಿ, ಮಾತಾಡಿ ತನ್ನ ಚಿತ್ತವನ್ನು ತಿಳಿಸ ಬೇಕಾಯಿತು. ಇದೇ ದೇವರ ವಾಕ್ಯ.—ಪಾಪಪತನವಾದಾಗಲೇ ದೇವರ ನಿತ್ಯ ರಕ್ಷಣಾಲೋಚನೆಗಳು ತೋರ ಬಂದವು. ಹ್ಯಾಗಂದರೆ ಆತನು ಮನುಷ್ಯರ ಕಡೆಗೆ ರಕ್ಷಿಸುವ ತನ್ನ ಕೈ ಚಾಚಿ ಮುಂದೆ ಬರುವ ದೊಡ್ಡ ರಕ್ಷಣೆ ತಿಳಿಸಿದನು. ಅಂದಿನಿಂದ ದೇವರಿಗೂ ಮನುಷ್ಯರಿಗೂ ಆದ ಒಡಂಬಡಿಕೆ ಸ್ಥಿರವಾಗುತ್ತಾ ಬಂತು. ಒಡಂಬಡಿಕೆಯ ವಿವರ ಹ್ಯಾಗಂದರೆ: ತಂದೆ ಮಕ್ಕಳು ಕೂಡಿ ಒಂದು ಮನೆತನವಾಗುವರು. ಅನೇಕ ಮನೆತನಗಳು ಕೂಡಿ ಒಂದು ರಾಜ್ಯವಾಗುವವು. ಒಂದೊಂದು ಮನೆತನ ಒಂದೊಂದು ರಾಜ್ಯ ಸುಸೂತ್ರವಾಗಿ ಸಾಗ ಬೇಕಾದರೆ, ತಂದೆ ನಡಿಸಿ ಕೊಳ್ಳುವಾತನು, ಮಕ್ಕಳು ನಡಿದು ಕೊಳ್ಳುವವರು; ಅರಸ ಆಳುವಾತ, ಪ್ರಜೆಗಳು ಆಳಿಸಿ ಕೊಳ್ಳುವವರು ಎಂಬ ಧರ್ಮದ ಮೇಲೆ ನಡೆಯ ಬೇಕು. ಆದರೆ ಮನೆತನದ ಧರ್ಮ ಬೇರೆ, ರಾಜ್ಯದ ಧರ್ಮ ಬೇರೆ. ಅಲ್ಲಿ ಹಿರಿಯರಿಗೂ ಕಿರಿಯರಿಗೂ ಅಷ್ಟು ಹೆಚ್ಚು ಕಡಿಮೆ ಇಲ್ಲ, ತಂದೆಯ ಬದಕು ಮಕ್ಕಳದು, ಮಕ್ಕಳದು ತಂದೆಯದು, ಮನೆತನದ ಕಾರ್ಯ ಒಪ್ಪಿಗೆಯಿಂ

ದಲೂ ಪ್ರೀತಿಯಿಂದಲೂ ಸಾಗುವದು. ಆದರೆ ಅರಸನಿಗೂ ಪ್ರಜೆಗಳಿಗೂ ಒಂದು ದೊಡ್ಡ ಭೇದ ಉಂಟು. ರಾಜ್ಯಕಾರ್ಯ ಬಲತ್ಕಾರದಿಂದ ನಡೆಯುವದು. ಇದಕ್ಕೆ ಸರ್ವರು ಒಪ್ಪಿ ಕೊಳ್ಳುವರು.

ದೇವರು ದೂತರನ್ನೂ ಮನುಷ್ಯರನ್ನೂ ಸೃಷ್ಟಿಸಿ ಒಂದು ದೊಡ್ಡ ಮನೆತನ ಸ್ಥಾಪಿಸಿದ ಬಳಿಕ, ಮನೆಯವರು ಆ ಧರ್ಮವನ್ನು ಮೀರಿ ಪಾಪದಲ್ಲಿ ಬಿದ್ದ ನಿಮಿತ್ತ, ಮೂಲಮನೆತನ ಒಡೆದು ಹೋಯಿತು. ಆದಾಗ್ಯೂ ಮನೆಗೆ ಹೊರಗಾದವರು ತಮ್ಮ ತಂದೆಯ ಶಿಕ್ಷೆಗೆ ತಪ್ಪಿಸಿ ಕೊಳ್ಳಲಾಗಲಿಲ್ಲ. ತಂದೆ ಹೋಗಿ ಅರಸಾದನು; ಮಕ್ಕಳು ಹೋಗಿ ಪ್ರಜೆಗಳಾದರು; ಮನೆ ಹೋಗಿ ನ್ಯಾಯಸ್ಥಾನವಾಯಿತು; ಪ್ರೀತಿಯಿಂದ ಸಾಗುವ ಮನೆತನದ ಕಾರ್ಯ ಹೋಗಿ ಬಲತ್ಕಾರದಿಂದ ನಡೆಯುವ ರಾಜ್ಯಕಾರ್ಯವಾಯಿತು. ಈ ಮೇರೆಗೆ ನಡೆಯುವ ದೇವರ ರಾಜ್ಯವು ಇದ್ದೇ ಇರುತ್ತದೆ. ಎಲ್ಲಾ ಮನುಷ್ಯರು ಇದಕ್ಕೆ ಅಧೀನರಾಗಿದ್ದಾರೆ. ಆದರೆ ರಾಜ್ಯನೀತಿಯನ್ನು ನಿತ್ಯ ಮೀರುವದರಿಂದ, ಅವರಿಗೆ ಈ ರಾಜ್ಯದಲ್ಲಿ ಶಿಕ್ಷಾನಾಶನವಾಗುವದಲ್ಲದೆ, ಪರಿಣಾಮವಿಲ್ಲವೇ ಇಲ್ಲ. ಹೀಗಿರಲಿಕ್ಕೆ ದೇವರು ಆ ಶಿಕ್ಷೆಗಳಿಂದ ಮೆತ್ತಗಾದವರನ್ನು ಮತ್ತು ಶೇರಿಸಿ ಕೊಂಡು ಒಂದು ಹೊಸ ಮನೆತನ ಮಾಡುತ್ತಾನೆ. ನಡಿಸಿ ಕೊಳ್ಳುವದು ದೇವರ ಧರ್ಮ, ನಡೆದು ಕೊಳ್ಳುವದು ಮನುಷ್ಯರ ಧರ್ಮ ಎಂಬ ಒಪ್ಪಿಗೆಯ ಮೇಲೆ ಇದು ನಡೆಯುವದರಿಂದ, ಇದಕ್ಕೆ ಒಡಂಬಡಿಕೆ ಎಂದು ಹೆಸರಾಯಿತು. ಈ ಒಡಂಬಡಿಕೆ ಹುಟ್ಟಿದ ಮೂಲವೂ, ಅದು ಬೆಳೆದು ಗಿಡವಾದದ್ದೂ, ಹಳೆ ಒಡಂಬಡಿಕೆಯಲ್ಲಿ ವಿವರಿಸಿ ಅದೆ.— ಈ ಗಿಡದ ಮೇಲೆ ಹೂವು ಬಿಟ್ಟು ಕಾಯಿ ಹಣ್ಣಾದದ್ದನ್ನು ಹೊಸ ಒಡಂಬಡಿಕೆ ತೋರಿಸುತ್ತದೆ.

ದೇವರು ಮನುಷ್ಯರನ್ನು ತನ್ನನ್ನು ಹೋಲುವವರಾಗಿ ನಿರ್ಮಿಸಿದಲ್ಲಿ, ತನ್ನ ಮಹಿಮಾ ಬಲಗಳಿಗೆ ಸಾಕ್ಷಿಯಾಗಿರ ತಕ್ಕ ಮನೆತನದ ಅಸ್ತಿವಾರ ಹಾಕಿದ ಹಾಗಾಯಿತು. ಮನುಷ್ಯರು ಪಾಪದಲ್ಲಿ ಬಿದ್ದದರಿಂದ, ಅದು ಕೆಡುವ ಹಾಗಾಗಿತ್ತು. ಆದರೆ ಆ ಅಸ್ತಿವಾರ ಮನುಷ್ಯರ ಭಾವದ ಬುಡದಲ್ಲಿ ಹಾಕಿ ಅದೆ; ದೇವರ ಹೋಲ್ವಿಕೆ ಎಂಬ ನರಭಾವದ ಮೂಲದಲ್ಲಿ ಹಾಕಿ ಅದೆ. ಮತ್ತು ಯಾರು ನೆಲೆಗಾಣದ ದೇವರ ಪ್ರೀತಿಯಲ್ಲಿ ನರಭಾವದ ಬೇರು ಊರಿರುವಂಥಾದಾಗಿದೆ. ಇದನ್ನು ಯಾರೂ ಕಿತ್ತು ಹಾಕಲಾರರು. ಈ ಮೂಲ ಒಬ್ಬನಿಂದ ಕಿತ್ತಿ ಹಾಕಿದ್ದಾದರೆ, ಅವನು ಇನ್ನು ಮನುಷ್ಯನಲ್ಲ.— ಮನುಷ್ಯರು ದೇವರ ಆಜ್ಞೆಗೆ ಒದಗದ ದ್ರೋಹ ನೋಡಿದರೆ, ಆತನು ಅವರನ್ನು ಬಿಟ್ಟು ಬಿಡ ತಕ್ಕದ್ದಾಗಿತ್ತು. ಆದರೆ ಅವರು ದೇವರನ್ನು ಹೋಲುವವರಾದ್ದರಿಂದ, ಅವರನ್ನು ಹಿಡಿಯುವದು ಆತನಿಗೆ ಬಿಡದ ಕರ್ಮವಾದ ಹಾಗಾಯಿತು. ತನಗೂ ಮನುಷ್ಯರಿಗೂ ಇರುವ ಸಂಬಂಧ ಹರಿಯ ಬಾರದೆಂಬ ದೇವರ ನಿತ್ಯ ಪ್ರೀತಿಯ ಪ್ರಕಟಣಾವೃಕ್ಷವು ಭೂಮಿಯಲ್ಲಿ ಬೇರೂರಿ ಬೆಳದು ಕಡೆಗೆ ಯೇಸು ಕ್ರಿಸ್ತನಲ್ಲಿ ಫಲಕ್ಕೆ ಬಂತು.

ಯಾರಾದರೂ ನಾಶವಾಗ ಬೇಕೆಂದಲ್ಲ, ಒಬ್ಬೊಬ್ಬನು ಪಶ್ಚಾತ್ತಾಪಕ್ಕೆ ತಿರುಗ ಬೇಕೆಂದು ದೇವರು ಅಪೇಕ್ಷಿಸುತ್ತಾನೆ.— ಆದ್ದರಿಂದ ಪಾಪಪತನಕ್ಕೂ ಜಲಪ್ರಳಯಕ್ಕೂ ನಡುವಿನಲ್ಲಿ ಕಳೆದು ಹೋದ ೧೬೦೦ ವರುಷಗಳೊಳಗೆ ಪಾಪ ಬೆಳೆದು ನಾಶನ ಬಹಳ ಪ್ರಬಲವಾಗಿರಲಾಗಿ, ಆತನು ತನ್ನ ಆತ್ಮನಿಂದ ಶಿಕ್ಷೆ ಮಾಡಿ ಸೇಥ ಹನೋಕ ಎಂಬೀ ಸದ್ಭಕ್ತರ ವಂಶದವರನ್ನು ಅವರ ಹೆಜ್ಜೆಗಳಲ್ಲಿ ನಡಿಸಲಿಕ್ಕೂ ಕಾಯಿನನ ಕೆಟ್ಟ ಸಂತತಿಯನ್ನು ದುರ್ಮಾರ್ಗ ಬಿಡಿಸಲಿಕ್ಕೂ ಯತ್ನ ಮಾಡಿದನು. ಆದರೆ ದೇವಾತ್ಮನ ಈ ಒಳಗಣ ಶಿಕ್ಷೆ ಸಾಲದೆ ಬಿತ್ತು. ಕೆಟ್ಟು ಹೋದ ಮನುಷ್ಯರನ್ನು ರಕ್ಷಿಸುವದಕ್ಕಾಗಿ ದೇವರು ಹೊರಗಿನಿಂದ ಸುಧಾ ಸಹಾಯಕ್ಕೆ ಬರ ಬೇಕಾಯಿತು. ಕಳ್ಳರೊಳಗೆ ಇರುವ ಉತ್ತಮನು ಕಳ್ಳನಾಗುವನು, ಆದರೆ ಉತ್ತಮರೊಳಗೆ ಇರುವ ಕಳ್ಳನು ಉತ್ತಮನಾಗ ಬಹುದು. ಆದ ಕಾರಣ ಮನೆಯಲ್ಲಿ ಹೆಚ್ಚಿದ ಕಳ್ಳರನ್ನು ನಿರ್ಮೂಲ ಮಾಡಿ ಉಳಿದ ಉತ್ತಮರಿಗೆ ಅನುವು ಮಾಡ ಬೇಕಾಯಿತು. ಜಲಪ್ರಳಯ ಕಳುಹಿಸಿ, ದೇವರು ಪಾಪಿಷ್ಟರು ಎಂಬ ಕಸ ಲೋಕ ಎಂಬ ಮನೆಯಿಂದ ಬೋಳಿದು ಹಾಕಿ, ತಿರಿಗಿ ಶುದ್ಧ ಮಾಡಿದನು. ಇಂತು ಹಸನಾದ ಮನೆಯಲ್ಲಿ ನೋಹನು ಶಿಕ್ಷಕನಾಗಿದ್ದ ಕಾಲಕ್ಕೂ, ಪಾಪದ ಬೀಜ ಮತ್ತು ಹುಟ್ಟಿ ಬೆಳೆದು

ಹಬ್ಬಿತು. ಜಲಪ್ರಳಯವಾಗಿ ೧೦೦ ವರುಷವಾದ ತರುವಾಯ, ಮನುಷ್ಯರೆಲ್ಲರು ಕೂಡಿಕೊಂಡು, ತಮ್ಮ ಮನಸಿಗೆ ಬಂದ ಹಾಗೆ ಮಾಡಲಿಕ್ಕೆ ಅನುವು ಆಗುವಂತೆ, ಒಂದು ಏಕಾಧಿಪತ್ಯವನ್ನು ಸ್ಥಾಪಿಸ ನೆನಿಸಿ, ಅದಕ್ಕೆ ಗುರುತಾಗಿ ಒಂದು ಎತ್ತರವಾದ ಗೋಪುರ ಕಟ್ಟುವದಕ್ಕೆ ಕೈ ಹಾಕಿದರು. ಕೇಡಿಗಾಗಿ ಕೂಡಿ ಕೊಂಡಿದ್ದರು. ದೇವರು ಮಾಡಗೊಟ್ಟದ್ದರೆ, ಕೆಟ್ಟತನಕ್ಕೆ ಬಹಳ ಅನುಕೂಲವಾಗುತ್ತಿತ್ತು. ದೇವರು ಅವರ ಮೇಲೆ ಇಟ್ಟ ಶಾಪದಿಂದ ಅವರೊಳಗಣ ಭಾವನೆಯೂ, ಅದನ್ನು ಸೂಚಿಸುವ ಅವರ ಭಾಷೆಯೂ ಭಿನ್ನ ವಾಗಿ ಒಬ್ಬರ ಸಂಗಡ ಒಬ್ಬರ ವ್ಯವಹಾರ ನಡೆಯದಂತೆ ಆಯಿತು. ಇಲ್ಲಿ ತನಕ ಆದಾಮನಿಂದ ಪರಂ ಪರೆಯಾಗಿ ನಡಕೊಂಡು ಬಂದ ಸತ್ಯ ಸಂಪ್ರದಾಯವು ಎಲ್ಲರಿಗೆ ಗೊತ್ತು ಇತ್ತು. ಯಾಕಂದರೆ ಮನು ಷ್ಯರೆಲ್ಲರು ಒಂದೇ ಮನೆತನದಂತೆ ಇದ್ದರು. ಆದರೆ ಈ ಭೇದವಾದಂದಿನಿಂದ ಅವರು ಹರೆ ಬಿದ್ದು ಹೋಗಿ ಮೆಲ್ಲ ಮೆಲ್ಲಗೆ ದೇವರನ್ನು ಮರೆತು, ಆತನಿಂದ ನಿರ್ಮಿತವಾದ ಸೂರ್ಯ ಚಂದ್ರ ನಕ್ಷತ್ರ ಗುಡುಗು ಮಿಂಚು ಮಳೆ ಮುಂತಾದವುಗಳು ತಮಗೆ ಬಹಳ ಹಿತ ಅಥವಾ ಬಹಳ ಭಯ ಕೊಡುವದನ್ನು ಕಂಡು, ಮರುಳ ರಾಗಿ, ಭಯಸ್ಥರಾಗಿ, ಇವೇ ದೇವರು ಅಂತ ಕಲ್ಪಿಸಿ ವಿಗ್ರಹಾರಾಧನೆಗೆ ಒಳಗಾದರು. (ರೋಮ. ೧, ೨೧—೩೨.) ವಸ್ತುವಿಗೆ ಅದು ಇದ್ದಂತೆ ಪೂಜಿಸುವದು ವಸ್ತುಪೂಜೆ. ಅದು ಹ್ಯಾಗಂದರೆ.—ಸೂರ್ಯನ ನ್ನು ಅಥವಾ ಒಂದು ಗಿಡವನ್ನು ಅಥವಾ ಒಂದು ಜೀವಿಯನ್ನು ಅಥವಾ ಒಬ್ಬ ಮನುಷ್ಯನನ್ನು ದೇವರಂ ತೆ ಆರಾಧಿಸುವದು. ದೇವರೆಂದು ತಾವು ಕಲ್ಪಿಸಿದ ವಸ್ತುವಿನ ರೂಪ ಮಾಡಿ ಅದಕ್ಕೆ ಪೂಜೆ ಮಾಡುವದು ಮೂರ್ತಿಪೂಜೆ. ಪ್ರಾಣಿಗಳದಾಗಲಿ, ವಸ್ತುಗಳದಾಗಲಿ, ಯಾವದೊಂದು ಗುಣವನ್ನು ತಮಗೆ ದೇವ ರೆಂದು ಕಲ್ಪಿಸಿ ಕೊಂಡರು. ಈ ದೇಶದಲ್ಲಿ ವೈದಿಕ ಮುಖ್ಯ ದೈವಗಳಾದ ಇಂದ್ರನು (=ಆಕಾಶ, ಬೆಳಕು) ವರುಣ (=ನೀರು, ತೇವಘಾಳಿ) ಅಗ್ನಿ (=ಬೆಂಕೆ) ಹೋಗಿ ಬ್ರಹ್ಮ ವಿಷ್ಣು ಮಹೇಶ್ವರರಾದರು. ಇಲ್ಲಿ ಪಂಚಭೂತಗಳನ್ನು ದೇವರಂತೆ ಮಾಡಿ ಕೊಂಡ ಹಾಗಾಯಿತು. ಆಕಾಶಕ್ಕೆ ಬೆಳಕು ಒಂದು ವಿಶೇಷ ಗು ಣವಾಗೆದೆ. ಈ ಗುಣವನ್ನು ದೇವಿಯನ್ನು ಮಾಡಿ ಕೊಂಡು ಬ್ರಹ್ಮನಿಗೆ ಹೆಂಡತಿಯ ಮಾಡಿ (ಜ್ಞಾನದ ಬೆಳಕನ್ನು ಕೊಡುವಂಥಾ) ಸರಸ್ವತಿ ಎಂದು ಹೆಸರಿಟ್ಟರು. ವರುಷ ವರುಷಕ್ಕೆ ಮಳೆಯಾಗಿ ಬರುವ ತೇವ ದಿಂದ ಎಲ್ಲಾ ಜೀವಿಗಳಿಗೆ ಬೇಕಾದ ಧಾನ್ಯಾದಿಗಳನ್ನು ಬೆಳಿಸಿ ಸಲುಹಿ ಸಂಪತ್ತನ್ನು ಕೊಡುವ ನೀರಿನ ಈ ಗುಣಕ್ಕೆ ವಿಷ್ಣುವಿನ ಹೆಂಡತಿ ಲಕ್ಷ್ಮಿ ದೇವಿ ಅಂದರು. ಮಹೇಶ್ವರನು ಅಂದರೆ ಬೆಂಕೆ; ಇದಕ್ಕೆ ಲಯ ಮಾ ಡುವಂಥಾ ಗುಣ ಉಂಟು. ಇದು ಶಿವನ ಹೆಂಡತಿ ಕಾಳಿಕಾ ದೇವಿ ದುರ್ಗಿ ಅಂತ ಶಕ್ತಿ ಅಂತ ಕಲ್ಪನೆ ಮಾಡಿ ಕೊಂಡರು.—ಇಲ್ಲಿ ಗುಣವನ್ನು ದೇವರಂತೆ ಮಾಡಿ ಕೊಂಡದ್ದಾಯಿತು. ರಾಮಚಂದ್ರನು ಬಹಳ ದೇಶಗಳನ್ನು ಸಾಧಿಸಿ ಕೊಂಡ ಒಬ್ಬ ಮಹಾರಾಜನು. ಕಾಲಾಂತರದಲ್ಲಿ ಇವನು ದೇವರೆಂದು ಭಾವಿಸಿ ಕೊಂಡರು.

ಜಲಪ್ರಳಯದ ಆಚೆ ಮನುಷ್ಯರು ವಿಶೇಷವಾಗಿ ದೇವರನ್ನು ಅಲಕ್ಷ್ಯ ಮಾಡುವ ಅವಿಶ್ವಾಸಿಗಳಾಗಿ ದ್ದರು. ಜಲಪ್ರಳಯದ ಈಚೆ ಅವರು ಸತ್ಯ ಯಾವದು ಸುಳ್ಳು ಯಾವದೆಂದು ವಿಚಾರಿಸಿ ನೋಡಲಾರ ದೆ, ಅಲ್ಲದ ದೈವಗಳಿಗೆ ನಡಕೊಳ್ಳುವ ಮರುಳಿನವರಾಗಿದ್ದರು.—ಇಷ್ಟರಿಂದ ತಿಳಿಯ ಬಂದದ್ದೇನಂದರೆ: ಯಾವ ಶಿಕ್ಷೆಯಿಂದಾದರೂ ಮನುಷ್ಯರು ನೆಟ್ಟಗಾಗುವ ಹಾಗೆ ಇಲ್ಲ; ದೇವರು ತಾನೆ ಮನುಷ್ಯಾವತಾರ ಎತ್ತಿ ಬಂದು ಪುನರ್ಜನ್ಮದಿಂದ ಒಂದು ಹೊಸ ವಂಶವನ್ನು ನಿರ್ಮಿಸಿ ಹೊಸ ಬೀಜ ಈ ಲೋಕದಲ್ಲಿ ಹಾಕ ಬೇಕು.

ಬಾಬೆಲದಲ್ಲಿ ಗೋಪುರ ಕಟ್ಟುವವರಿಗೆ ಶಾಪ ಬಂದಂದು ಮನುಷ್ಯರು ಎರಡು ಭಾಗವಾದರು. ನೋ ಹನ ಮಗ ಸೇಮನ ವಂಶದವರದೊಂದು, ಉಳಿದ ಮನುಷ್ಯರದೊಂದು. ಕ್ರಿಸ್ತನಿಂದ ನಿತ್ಯ ರಕ್ಷಣೆ ಹೊಂದ ಬೇಕೆಂಬದಾಗಿ ದೇವರು ನಿರ್ಣಯ ಮಾಡಿದ್ದನು. ಇದಕ್ಕೆ ಮನುಷ್ಯರನ್ನು ಸಿದ್ಧ ಮಾಡುವದಕ್ಕೆ ಎರಡು ಮಾರ್ಗಗಳು ಇದ್ದವು. ಪ್ರೀತಿಯಿಂದ ಶಿಕ್ಷಿಸಿ ಬುದ್ಧಿ ಹೇಳಿ ಹಾದಿ ತಪ್ಪದಂತೆ ತರಬಿ ಪರಾಮರಿಸುವದೊಂ

ದು; ಇದು ಕೇಳಿ ಮಣಿಯುವವರಿಗೆ ಯೋಗ್ಯವದೆ; ಈ ಮಾರ್ಗದಲ್ಲಿ ದೇವರು ಸೇಮನ ಸಂತತಿಯಲ್ಲಿ ಹುಟ್ಟಿದ ಅಬ್ರಹಾಮನ ವಂಶದವರನ್ನು ನಡಿಸಿ, ಅವರಲ್ಲಿ ತನ್ನ ಅರುವನ್ನೂ ಪಾಪ ಪುಣ್ಯದ ಎಚ್ಚರಿಕೆಯನ್ನೂ ಉಳಿಸಿ, ತನ್ನ ವಾಕ್ಯ ನಡುವ ಹಾಗೆ, ಅವರ ಮನಸನ್ನು ಮೆತ್ತಗೆ ಮಾಡಿದನು.—ಆದರೆ ಶಿಕ್ಷೆಗೆ ಬೊಗ್ಗಿ ಕೊಳ್ಳದ ಕಠಿಣ ಮನಸಾದವರಿಗೆ ಇಂಥಾ ಪ್ರೀತಿಯ ಆರೈಕೆಯಿಂದ ಉಪಯೋಗವಾಗುವದಿಲ್ಲ. ಬುದ್ಧಿ ಹೇಳೋಣ ಎಷ್ಟು ಹೆಚ್ಚೋ ಅಷ್ಟು ಹೆಚ್ಚು ಅವರ ಹಟ ಬೆಳೆಯುವದು. ಬಿಶಿ ಇಲ್ಲದೆ ಬೆಣ್ಣೆ ಕರಗದು ಎಂಬ ಗಾದೆಯಂತೆ, ಅವರಿಗೆ ಕಠಿಣ ದಂಡನೆ ಆದರಲ್ಲದೆ, ಮಣಿಯುವವರಲ್ಲ. ಅದಕ್ಕೆ ದೇವರು ಅವರನ್ನು ಅವರವರ ಹಾದಿಗಳಲ್ಲಿ ನಡೆಯಗೊಟ್ಟನು. ತಮ್ಮ ಕಲ್ಪನಾ ಮಾರ್ಗಗಳಲ್ಲಿ ಅವರು ದಣಕೊಂಡು, ಬೇಸತ್ತು, ಹಟ ಮುರಿದು, ತಾವು ಮಾಡಿದ್ದು ಅನರ್ಥವೆಂದು, ತಾವು ಮರೆತು ಬಿಟ್ಟ ದೇವರಲ್ಲಿಯೇ ಹೊರ್ತು, ತಮಗೆ ಬೇರೆ ಆಶ್ರಯ ಇಲ್ಲವೇ ಇಲ್ಲ ಎಂದು ತಿಳಿದು, ದೇವರ ಪಾದಕ್ಕೆ ಬೀಳುವವರು ಆಗಬೇಕು. ಇದು ಸುತ್ತು ದಾರಿ ಸರಿ. ಆದರೆ ಊರಿಗೆ ಮುಟ್ಟುವಂಥಾದ್ದು. ಇದರಲ್ಲಿ ದೇವರು ತನಗೆ ಹೊರಗಾದ ಅನ್ಯ ಜನರನ್ನು ನಡಿಸಿದನು. ಬೇರೆ ಉಪಾಯ ಇದ್ದಿಲ್ಲ. ಯಾಕಂದರೆ ತಲೆ ತಾಗಿದಲ್ಲದೆ ಬುದ್ಧಿ ಬಾರದು.

ದೇವರು ಆ ಮೊದಲನೇ ಮಾರ್ಗದಲ್ಲಿ ನಡಿಸಿದ ಜನರೇ ಆತನ ಮನೆತನ. ಇದು ಚೂಣಿಯಲ್ಲಿ ಕುಟುಂಬ, ಆ ಮೇಲೆ ಸಭೆ, ಕಡೆಗೆ ರಾಜ್ಯ, ಹೀಗೆ ಮೂರು ಪ್ರಕಾರವಾಯಿತು. ಮೊದಲು ಅಬ್ರಹಾಮನನ್ನು ಹಿಡಿದು ಯಾಕೋಬನ ತನಕ ದೇವರ ಮನೆತನ ಕುಟುಂಬದೋಪಾದಿಯಲ್ಲಿತ್ತು. ಈ ಕುಟುಂಬದಲ್ಲಿ ಅಬ್ರಹಾಮನು, ಇಸಾಕನು, ಯಾಕೋಬನು ಎಂಬೀ ಮೂಲಪಿತೃಗಳು ಹಿರಿಯರಾಗಿದ್ದರು. ಭೂ ಪರಲೋಕ ನಿರ್ಮಾಣ ಮಾಡಿದ ಸರ್ವ ಬಲವುಳ್ಳ ದೇವರು ನಮ್ಮನ್ನು ಬರೇ ಕರುಣದಿಂದ ಕರೆದು, ಅನ್ಯ ಜನರೊಳಗಿಂದ ಆರಿಸಿ ಕೊಂಡ ತಂದೆಯಾಗಿದ್ದಾನೆ, ನಾವು ಮಕ್ಕಳಂತೆ ಆತನನ್ನು ನಂಬ ಬೇಕು; ಆತನನ್ನು ನಂಬಿದ್ದೇ ನೀತಿ ಎಂಬ ಮಾತು ಅವರ ಮುಖಾಂತರ ಘಟ್ಟಿಯಾಯಿತು.—ಇವರು ಇದ್ದ ಕಾಲದಲ್ಲಿ ಮನುಷ್ಯರು ತನ್ನ ಸಮೀಪಕ್ಕೆ ಬರುವಂತೆ ನೀವು ಪಾಪಿಷ್ಟರೆಂದು ದೇವರು ಅವರನ್ನು ಹಂಗಿಸದೆ ನಂಬಿಸುವ ಯತ್ನ ನಡಿಸಿದನು.

ತದನಂತರ ಮೋಸೆಯ ಕಾಲದಿಂದ ಸಾಮುವೇಲನ ತನಕ ದೇವರ ಮನೆತನ ಸಭಾರೂಪವಾಗಿತ್ತು. ಇಸ್ರಾಯೇಲನವರು ಮಿಜ್ರದಲ್ಲಿ ಬಹಳ ಹೆಚ್ಚಿ, ಮಿಜ್ರದ ಶಿಕ್ಷಾಶಾಲೆಯಲ್ಲಿ ಇದ್ದು ದೇವರ ರಕ್ಷಣೆಯ ಕಡೆಗೆ ಅಪೇಕ್ಷೆ ಮಾಡುವವರಾದರು. ಮೋಸೆಯ ಮುಖದಿಂದ ದೇವರು ಅವರನ್ನು ಮಿಜ್ರದ ದಾಸತ್ವದೊಳಗಿಂದ ರಕ್ಷಿಸಿ, ಅರಣ್ಯದಲ್ಲಿ ಅವರಿಗೆ ಬೇರೆ ಬೇರೆ ನೇಮುಗಳನ್ನು ಕೊಟ್ಟು, ಅವರನ್ನು ಒಂದು ಸಭೆಯಾಗಿ ಸ್ಥಾಪಿಸಿದನು. ಆತನು ಸಭಾಪತಿ, ಆವರು ಸಭೆಯವರು. ಇದರಿಂದ ಎರಡು ಫಲಗಳು ಆದವು: ಅವರ ಸುತ್ತಮುತ್ತಲು ಒಂದು ಬೇಲಿಯಾದ ಹಾಗಾಗಿ ಅವರು ಅನ್ಯ ಜನರಿಂದ ಪೂರ್ಣವಾಗಿ ಬೇರೆಯಾದದ್ದೊಂದು. ಹೀಗೆ ಮಾಡದಿದ್ದರೆ ಅನ್ಯ ಜನರೊಳಗೆ ಕೂಡಿ ಹೋಗುತ್ತಿದ್ದರು. ನೀತಿನೇಮ ಆಚಾರನೇಮ ರಾಜ್ಯನೇಮುಗಳಿಂದ ಯಾವಾಗಲು ತಮ್ಮ ಪಾಪಗಳು ನೆನಪಿಗೆ ಬರುತ್ತಿದ್ದವು; ಅದರಿಂದ ಅವರು ಅಂಜುವವರಾಗಿ ಹಣ್ಣಾದದ್ದೊಂದು ಫಲ.

ಮೋಸೆ ತೀರಿದ ಮೇಲೆ, ಯೋಸುವನು ಮೊದಲಾದ ನ್ಯಾಯಾಧೀಶರ ಕೈಲಿ ದೇವರು ತನ್ನ ಸಭೆಯನ್ನು ನಡಿಸಿದನು. ಅಷ್ಟರೊಳಗೆ ವೈರಿಗಳು ಬಹಳವಾದ್ದರಿಂದ, ಅವರನ್ನು ಜೈಸಿ ಸಭೆಗೆ ಆಸರೆ ನಿಲ್ಲುವ ಹಾಗೆ, ಅರಸರನ್ನು ನೇಮಿಸೋಣವಾಯಿತು. ದೇವರ ಮನೆತನ ಹೀಗೆ ರಾಜ್ಯವಾಯಿತು. ಆತನು ಆಳುವ ಬಾಳುವ ಅರಸನೇ, ಜನರು ಆಳಿಸಿ ಕೊಳ್ಳುವ ಪ್ರಜೆಯೇ; ಆಳಿದ ಅರಸರು ದೇವರ ಪ್ರತಿನಿಧಿಗಳೇ.—ಬುದ್ಧಿ ಹೇಳಿ ಬೋಧನೆ ಮಾಡಿ ಒಳಗಣ ಪರಾಮರಿಕೆ ಮಾಡಲಿಕ್ಕೆ ಈ ಕಾಲದಲ್ಲಿ ಪ್ರವಾದಿಗಳು ಎದ್ದರು.—ಹೀಗೆ ದೇವರು ತನ್ನ ಮನೆತನದಲ್ಲಿ ನಡಿಸಿದ ಶಿಕ್ಷಾಕಾರ್ಯಕ್ಕೆ ಸಾಹಿತ್ಯವಾದ ಮೂರು ಉದ್ಯೋಗ

ಗಳು ಆದವು, ಅವು ಯಾವವೆಂದರೆ: ಪ್ರವಾದಿಗಳದೊಂದು, ಯಾಜಕರದೊಂದು, ಅರಸರದೊಂದು. ದೇವರು ಮುಂದೆ ಕಳುಹಿಸುವ ರಕ್ಷಕನು ವಿಶೇಷವಾಗಿ ಬೋಧ ಮಾಡುವ ಪ್ರವಾದಿ ಎಂದು ಜನರು ಮೋಸೆಯ ದಿನಗಳಲ್ಲಿ ನೆನಿಸಿದರು. ಅರಸರ ಕಾಲದಲ್ಲಿ ವಿಶೇಷವಾಗಿ ಆತನು ತನ್ನ ಜನರನ್ನು ಆಳಿ ಅವರ ವೈರಿಗಳನ್ನು ಮುರಿದು ದೊಡ್ಡ ರಾಜ್ಯ ಸ್ಥಾಪನೆ ಮಾಡುವ ಅರಸನೆಂದು ಗ್ರಹಿಸಿದರು. ವಾಸಾಂತರದ ಕಾಲದಲ್ಲಿ ಆತನು ತನ್ನನ್ನು ಬಲಿಯಾಗಿ ಅರ್ಪಿಸುವ ಪ್ರಧಾನಯಾಜಕನೆಂದು ತಿಳುಕೊಂಡರು. ಮನುಷ್ಯರೊಳಗೆ ಮನೋಸಾಕ್ಷಿ ಹ್ಯಾಗೋ ಹಾಗೆ ಇಸ್ರಾಯೇಲನವರಲ್ಲಿ ಇದ್ದ ನೇಮವೂ ಪ್ರವಾದಿಗಳೂ. ನೀವು ಪಾಪಿಷ್ಟರು, ದೇವರ ನಿತ್ಯ ದಂಡನೆಗೆ ಒಳಗಾದವರು ಎಂದು ಮುಖ್ಯವಾಗಿ ನೇಮವು ಅವರನ್ನು ಶಿಕ್ಷಿಸಿ ಇಳಿಸುತ್ತಿತ್ತು. ದೇವರು ಬಡ ಪಾಪಿಷ್ಟರಿಗೆ ಮುಂದೆ ಕೊಡುವ ರಕ್ಷಣೆಯ ಕಡೆಗೆ ಪ್ರವಾದಿಗಳು ತೋರಿಸಿ ಧೈರ್ಯ ಹುಟ್ಟಿಸಿ ಅವರನ್ನು ಏರಿಸುತ್ತಿದ್ದರು. ನೇಮ ಭೂತಕಾಲದ ಕಡೆಗೆ ತೋರಿಸುವ ಕೈ; ಪ್ರವಾದಿಗಳು ಬರುವ ಕಾಲದ ಕಡೆಗೆ ತೋರಿಸುವ ಕೈ.—ನೇಮವು ಅವರಿಗೆ ಪಾಪವನ್ನು ತಿಳಿಯ ಮಾಡಿತು; ಪ್ರವಾದಿಗಳು ಅವರಿಗೆ ಯೇಸು ಕ್ರಿಸ್ತನನ್ನು ತಿಳಿಸಿದರು.

ಇಸ್ರಾಯೇಲನವರು ತಮ್ಮ ಪಾಪದ ಶಿಕ್ಷೆಗಾಗಿ ಕಡೆಗೆ ಬಾಬೆಲದವರ ವಶದಲ್ಲಿ ಬಿದ್ದರು. ಅವರ ರಾಜ್ಯ ಹಾಳಾಯಿತು. ಆದರೂ ದೇವರು ತಾನು ಕೊಟ್ಟಿದ್ದ ವಚನಗಳಿಗೆ ಅನುಸಾರವಾಗಿ ಅವರ ಮೇಲೆ ಕರುಣ ಮಾಡಿ ರಾಜ್ಯವನ್ನು ಅವರಿಗೆ ಮತ್ತು ಸ್ಥಾಪಿಸಿ ಕೊಟ್ಟನು.—ಆದಾಗ್ಯೂ ಅದು ಅನ್ಯ ಜನರ ಕೈ ಕೆಳಗೆ ಮಾತ್ರ ನಡೆಯುತ್ತಿತ್ತು.—ಕಡೆ ಪ್ರವಾದಿಯಾದ ಮಲೆಯಕಿಯ ಇತ್ತಲಾಗಿ ೪೦೦ ವರುಷಗಳು ಯಾವ ಪ್ರವಾದಿಯೂ ಬರಲಿಲ್ಲ. ದೇವರಿಂದ ಆಗ ತಕ್ಕದ್ದು ಆಗಿತ್ತು. ತಮ್ಮನ್ನು ದೇವರ ಚಿತ್ತಕ್ಕೆ ಸರಿಯಾಗಿ ಆಳಿ ಕೊಳ್ಳಲಿಕ್ಕೆ ಇಸ್ರಾಯೇಲನವರಿಗೆ ಸಾಕಷ್ಟು ಸಾಹಿತ್ಯವಾಗಿತ್ತು. ಆದ ಕಾರಣ ದೇವರು ಎಲ್ಲಾ ಜನರನ್ನು ನಡಿಸುವ ಸಾಧಾರಣ ಮಾರ್ಗದಲ್ಲಿ ಅವರನ್ನು ನಡಿಸಿದನು.

ಈ ಹಳೆ ಒಡಂಬಡಿಕೆಯ ಜೀವವೃಕ್ಷದಲ್ಲಿ ಆದಾಮನಿಗೆ ಆದ ಮೂಲಪ್ರಕಟಣೆಯೇ ಹಾಗೂ ಮೂಲಪಿತೃಗಳಿಗೆ ದೊರೆದ ಪ್ರಕಟಣೆಯೇ ಬೇರು, ಮೋಸೆಯಿಂದಾದ ನೇಮವೇ ಬಡ್ಡೆ, ಇಯೊಬನ ಗ್ರಂಥ ಕೀರ್ತನೆ ಮುಂತಾದವುಗಳು ಕೊಂಗೆಗಳು, ಪ್ರವಾದಿಗಳೆ ಬಿಟ್ಟ ಹೂವುಗಳು.

ದೇವರು ಇಸ್ರಾಯೇಲನವರನ್ನು ಹೀಗೆ ಸಾಕಿದ್ದು ಯಾವ ಫಲವಾಯಿತು? ಬಹಳ ಕಾಲದ ತನಕ ಅವರು ಎಡವಿ ಬೀಳುತ್ತ ಏಳುತ್ತ ಇದ್ದು ಸ್ಥಿರ ಗೊತ್ತಿಗೆ ಹೊಂದಲಿಲ್ಲ. ಕಡೆಗೆ ಅಸುರ್ಯರು ಕಲ್ದಿಯರು ಎಂಬ ಬೆತ್ತದಿಂದ ದೇವರು ಅವರನ್ನು ಹೊಡೆದು ವಿಗ್ರಹಾರಾಧನೆಯ ಮರುಳನ್ನು ಪೂರ್ಣವಾಗಿ ಬಿಡಿಸೋಣದರಿಂದ ಅವರು ಅನ್ಯ ಜನರೊಳಗೆ ಎಂದಿಗೂ ಕೂಡದ ಹಾಗಾಯಿತು. ಇದು ಒಂದು ಫಲ.—ಕೆಲವರು ನೇಮದ ಪೆಟ್ಟು ತಿಂದು ತಮ್ಮ ಪಾಪಕ್ಕೆ ದುಃಖ ಪಡುವವರಾಗಿ ಬರುವ ಕ್ರಿಸ್ತನ ದಾರಿಯನ್ನು ವಿಶ್ವಾಸದಿಂದ ನೋಡಿ ದೇವರ ಕೃಪೆ ಪಡ ಕೊಂಡದ್ದೊಂದು ಫಲ.—ಕೆಲವರು ಹಳೆ ಒಡಂಬಡಿಕೆಯ ಕಡೆ ಕಾಲದಲ್ಲಿ ತಮ್ಮ ಜನರಿಗೆ ಆದ ಅಪಮಾನ ಕಷ್ಟಗಳಿಂದ ಲೋಕ ಸಾಕಾಗಿ ನಿತ್ಯ ಮಹಿಮೆಯ ಕಡೆಗೆ ಕಣ್ಣ ತಿರಿಗಿಸ ಕಲಿತು ಕ್ರಿಸ್ತನು ಶ್ರಮೆ ಪಡುವವನಲ್ಲದೆ ಲೋಕದ ಮಹಿಮೆಯಿಂದ ಬರುವವನಲ್ಲವೆಂದು ಅರಿತು ಬಡವನಾಗಿ ಬಂದ ಕ್ರಿಸ್ತನನ್ನು ನಂಬಿಗೆಯಿಂದ ಅಪ್ಪಿ ಕೊಳ್ಳಲಿಕ್ಕೆ ಸಿದ್ಧವಾದದ್ದೊಂದು ಫಲ.—ಕ್ರಿಸ್ತನು ಬಂದು ಮಾಡಿದ್ದು ತಿಳಿಯ ಬೇಕಾದರೆ, ಅನಾದಿ ದೇವರು ಲೋಕ ನಿರ್ಮಿಸಿದ್ದು, ಮನುಷ್ಯರನ್ನು ತನ್ನನ್ನು ಹೋಲುವಂತೆ ರೂಪಿಸಿದ್ದು, ಅವರು ಪಾಪದಲ್ಲಿ ಬಿದ್ದದ್ದು ಮೊದಲಾದ ಕೆಲವು ಮೂಲಬೋಧಗಳನ್ನು ತಿಳುಕೊಳ್ಳ ಬೇಕು. ಇಲ್ಲದಿದ್ದರೆ ಅಕ್ಷರ ಬಾರದವನಿಗೆ ಓದಂದ ಹಾಗಾಗುವದು. ಅದಕ್ಕೆ ದೇವರು ಹಳೆ ಒಡಂಬಡಿಕೆಯಲ್ಲಿ ಮೂಲಪಿತೃಗಳಿಂದ ದೈವಬೋಧದ ಅಕ್ಷರಗಳನ್ನು, ಮೋಸೆಯ ಮುಖಾಂತರ ಶಬ್ದಗಳನ್ನು, ಅರಸರ ಕಾಲದಲ್ಲಿ ವಿಶೇಷವಾಗಿ ಮುಂದಕ್ಕೆ ಬಂದ ಪ್ರವಾದಿಗಳಿಂದ ಶಬ್ದ ಜೋಡಿಸಿ ವಾಕ್ಯಗಳನ್ನು ಕಲಿಸಿ ಕ್ರಿಸ್ತನ ಪ್ರಕಟಣೆಯ ಪುಸ್ತಕ ಓದಿ ತಿಳಿಯಲಾಗುವ ಹಾಗೆ ಮಾಡಿದನು. ಇದು ಒಂದು ಫಲ.

ಆದರೂ ಇಂದೂ ಆಗುವಂತೆ ಅನೇಕರಲ್ಲಿ ಈ ಶಿಕ್ಷಾಕಾರ್ಯವೆಲ್ಲಾ ವ್ಯರ್ಥವಾಯಿತು. ಅವರಲ್ಲಿ ಕೆಲವರು ತಮ್ಮ ಸ್ಥಿತಿಗತಿ ತಿಳುಕೊಳ್ಳದೆ ಹಿರಿಯರ ಕಲ್ಪನಾ ಸಂಪ್ರದಾಯಗಳನ್ನು ಕೈಕೊಳ್ಳುವದರಿಂದ, ತಾವು ನೀತಿವಂತರೆಂದು ಎಣಿಸಿ ಶೀಲವಂತರಾದ ಫರಿಸಾಯರು ಆದರು. ಕೆಲವರು ಸ್ವರ್ಗ ನರಕ ಸುಳ್ಳೆಂದು ಪಾಪ ಪುಣ್ಯದ ಎಚ್ಚರಿಕೆಯನ್ನು ಹಾರಿಸುವ ಮಾಂಸಭೋಗಿಗಳಾದ ಸದ್ದುಕಾಯರಾದರು. ಕೆಲವರು ಮಠಗಳಲ್ಲಿ ಶೇರಿ ಕೊಂಡು ಸಂಸಾರ ಪ್ರಪಂಚ ಬಿಟ್ಟು ತಪಸ್ಸು ಯೋಗಾಭ್ಯಾಸ ನಡಿಸುವ ಎಸ್ಸಾಯರು ಆದರು. ಕೆಲವರು ಬಲಾತ್ಕಾರದಿಂದ ತಮ್ಮ ಮತ ವಿಸ್ತರಿಸ ಬೇಕೆಂಬ ಮತಾಭಿಮಾನಿಗಳು ಆದರು.

---

೨. ಹಳೆ ಒಡಂಬಡಿಕೆಯ ಪ್ರಕಟಣೆಯನ್ನು ಈಗಿನವರು ಹ್ಯಾಗೆ ತಕ್ಕದ್ದಾಗಿ ಪ್ರಯೋಗಿಸ ಬೇಕು.

ಹೊಸ ಒಡಂಬಡಿಕೆಯ ಪ್ರಕಟಣೆಯಿಂದ ಹಳೆ ಒಡಂಬಡಿಕೆಯದು ಬೇಕಿಲ್ಲದ್ದಾಗಲಿಲ್ಲ. ಇದು ಕ್ರಿಸ್ತನ ಅತ್ತಣವರಿಗೆ ವಿಶೇಷವಾಗಿ ಯುಕ್ತವಾದದ್ದು ಸರಿ. ಕ್ರಿಸ್ತನ ಪರ್ವತಪ್ರಸಂಗದಲ್ಲಿಯೂ ಅಪೊಸ್ತಲರು ಬರೆದ ಪತ್ರಿಕೆಗಳಲ್ಲಿಯೂ ಮೋಸೆ ಹೇಳಿದ್ದಕ್ಕಿಂತ ದೇವಾಜ್ಞೆಗಳು ಸ್ಪಷ್ಟವಾಗಿ ವಿವರಿಸಿ ಅವೆ. ಇದಲ್ಲದೆ ಕ್ರಿಸ್ತನ ವಿಷಯಕ್ಕಾದ ಅನೇಕ ಪ್ರವಾದನೆಗಳು ಒದಗಿ ಬಂದವೆ ಸರಿ. ಆದಾಗ್ಯೂ ಹಳೆ ಒಡಂಬಡಿಕೆ ನಮಗೆ ಇದರಿಂದ ನಿಷ್ಪ್ರಯೋಜಕವಾಗದು. ಯಾಕಂದರೆ ದೇವರು ಹಳೆ ಒಡಂಬಡಿಕೆಯ ಪ್ರಕಟಣೆಯಲ್ಲಿ ತಿಳಿಸಿದ್ದು, ನಮ್ಮ ಶಿಕ್ಷಾಜ್ಞಾನಕ್ಕಾಗಿ ಅವಶ್ಯವಿಲ್ಲದ ಪಕ್ಷದಲ್ಲಿಯಾದರು, ಆತನು ಪೂರ್ವದಲ್ಲಿ ಮಾಡಿದ್ದು ಏನು ಎಂದು ಹ್ಯಾಗೆಂದು ವಿಚಾರಿಸಿ ಗ್ರಹಿಸ ತಕ್ಕದ್ದಾಗಿರುತ್ತಿತ್ತು. ಇದಲ್ಲದೆ ಅದು ಬೋಧನೆಗಾಗಿಯೂ ಖಂಡನೆಗಾಗಿಯೂ ತಿದ್ದುಪಾಟಿಗಾಗಿಯೂ ಶಿಕ್ಷೆಗಾಗಿಯೂ ಸಾಹಿತ್ಯವಾಗಿರುವಂಥಾದು.

ಹಳೆ ಒಡಂಬಡಿಕೆಯ ಚರಿತ್ರದಲ್ಲಿಂದ ದೇವರು ಲೋಕವನ್ನು ನಿರ್ಮಿಸಿ ಪರಿಪಾಲನೆ ಮಾಡುವದನ್ನೂ, ಆದಿ ಮನುಷ್ಯರ ಸ್ಥಿತಿಗತಿಗಳನ್ನೂ ನಾವು ಸ್ಪಷ್ಟವಾಗಿ ತಿಳುಕೊಳ್ಳುತ್ತೇವೆ. ಈ ವಿಷಯಕ್ಕೆ ಯಾವ ಕಡೆಯಿಂದಲಾದರೂ ನಮಗೆ ಸತ್ಯವರ್ತಮಾನ ಬರುತ್ತಿದ್ದಿಲ್ಲ. ಹೊಸ ಒಡಂಬಡಿಕೆಯು ದೇವರ ರಾಜ್ಯದ ಒಳ ಮೈಯನ್ನು, ಅದೃಶ್ಯವಾದ ಸಭೆಯನ್ನು, ಆತ್ಮದ ಜೀವವನ್ನು ವಿಶೇಷವಾಗಿ ತೋರಿಸಲಾಗಿ, ಹಳೆ ಒಡಂಬಡಿಕೆಯ ಮೂಲಪಿತೃಗಳ ಚರಿತ್ರದಿಂದ ಮನೆತನಗಳನ್ನು ದೇವರಿಗೆ ಸಮರ್ಪಕವಾಗಿ ಇಡುವ ರೀತಿಯನ್ನೂ, ಅರಸರ ಇತಿಹಾಸಗಳಿಂದ ಸದ್ಭಕ್ತರು ನಡಿಸ ತಕ್ಕ ರಾಜ್ಯಕಾರ್ಯ ರಾಜ್ಯನೀತಿಯ ವಿವರವನ್ನೂ, ಕಲಿತು ಕೊಳ್ಳಲಾಗುವದು. ಇದು ದೇವರ ರಾಜ್ಯದ ಹೊರಮೈಯನ್ನು ತೋರಿಸುವದು.

ನೀತಿನೇಮ ಆಚಾರನೇಮ ರಾಜ್ಯನೇಮವೆಂದು ನೇಮ ಮೂರು ಪ್ರಕಾರವಾಗೆದೆ. ನೀತಿನೇಮವನ್ನು ಕೈಕೊಳ್ಳುವ ಹಂಗು ಎಲ್ಲಾ ಮನುಷ್ಯರಿಗೆ ಸೂರ್ಯ ಚಂದ್ರ ಇರುವ ತನಕ ಉಂಟು. ಆಚಾರನೇಮ ರಾಜ್ಯನೇಮಗಳಿಂದ ದೇವರು ನಮಗೆ ಸೂಚಿಸುವ ಭಾವವನ್ನು ಗ್ರಹಿಸಿ, ಹೊಸ ಒಡಂಬಡಿಕೆಗೆ ಅನುರೂಪವಾಗಿ ಪ್ರಯೋಗಿಸ ಬೇಕು. ಆಚಾರನೇಮದಲ್ಲಿ ದೇವರು ಸಂಜ್ಞೆಗಳಿಂದ ನಮ್ಮ ಸಂಗಡ ಮಾತಾಡಿದ ಹಾಗಾಯಿತು. ಅದು ಒಂದು ಸಂಜ್ಞಾಭಾಷೆ. ಒಂದು ವೇಳೆಯಲ್ಲಿ ಗ್ರಹಿಕೆ ಬೇಗ ಆಗದಕ್ಕೆ, ಬಾಲಕರಿಗೆ ಸಂಜ್ಞೆಗಳಿಂದ ಬೋಧಿಸ ಬೇಕು. ನಮ್ಮ ಬುದ್ಧಿ ಎಚ್ಚರಿಕೆ ಬಹಳ ಮಂದವಾದಲ್ಲಿ, ನಮಗೆ ಈ ಸಂಜ್ಞಾಬೋಧನೆ ಯುಕ್ತವಾದೀತು. ಆ ಬೇರೆ ಬೇರೆ ಆಚಾರಗಳೆಂಬ ಸಂಜ್ಞೆಗಳಿಂದ ದೇವರು ನಮ್ಮ ಪಾಪ ಅಯೋಗ್ಯತೆಗಳನ್ನೂ ತನ್ನ ಪರಿಶುದ್ಧ ರಕ್ಷಣಾಚಿತ್ತವನ್ನೂ ಸೂಚಿಸಿ ನಮ್ಮಲ್ಲಿ ಸತ್ಯ ಪಶ್ಚಾತ್ತಾಪವನ್ನು ತನ್ನ ಕಡೆಗೆ ವಿಶ್ವಾಸ ಧೈರ್ಯವನ್ನು ಎಬ್ಬಿಸುತ್ತಾನೆ. ರಾಜ್ಯಕಾರ್ಯ ನಡಿಸುವವರು ರಾಜ್ಯನೇಮವನ್ನು ನೋಡಿ, ಇಂದೂ

ಬಹಳ ಉಪಯೋಗಕ್ಕೆ ಬೀಳುವ ದಿವ್ಯ ರಾಜ್ಯನೀತಿಯನ್ನು ಕಲಿತು ಕೊಳ್ಳ ಬಹುದು. ನಮ್ಮ ಪ್ರಧಾನಿಗಳೂ ನ್ಯಾಯಾಧೀಶರೂ ಈ ರಾಜ್ಯನೇಮವನ್ನು ಚಂದಾಗಿ ವಿಚಾರಿಸಿ ಮನಸಿಗೆ ತಂದು ನಡಿಸಿದ್ದರೆ, ರಾಜರಿಗೂ ರಾಜ್ಯಗಳಿಗೂ ಬಹಳ ಒಳ್ಳೆದಾಗುತ್ತಿತ್ತು. ನಮ್ಮ ಯೌವನಸ್ಥರು ಸಾಮತಿಗಳನ್ನೂ ಪ್ರಸಂಗಿಯನ್ನೂ ನೆಟ್ಟಗೆ ಓದಲಿ! ಪಾಪದ ಸವಿ ಅವರಿಗೆ ವಿಷದಂತೆ ಕಂಡೀತು. ಗೃಹಸ್ಥರು ಸಾಮತಿಗಳನ್ನು ಓದಿ ತಮ್ಮ ಮನೆತನ ಸುರಕ್ಷಿತವಾಗಿ ವಿವೇಕದಿಂದ ನಡಿಸುವದನ್ನು ಕಲಿತು ಕೊಳ್ಳಲಿ! ಹಾಗಾದರೆ ದಿವಾಳಿ ತೆಗೆಯುವದು ಅಪರೂಪವಾದೀತು.—ನಾವೆಲ್ಲರು ನೇಮದಿಂದ ನೀತಿಯನ್ನು, ಯೋಬನ ಗ್ರಂಥದಿಂದ ತಾಳ್ಮೆಯನ್ನು, ಕೀರ್ತನೆಗಳಿಂದ ಪ್ರಾರ್ಥನೆ ಸ್ತೋತ್ರ ಭಯಭಕ್ತಿಗಳನ್ನು, ಸಾಮತಿಗಳಿಂದ ಪ್ರಪಂಚಕ್ಕೆ ಅಗತ್ಯವಾದ ವಿವೇಕವನ್ನು, ಪ್ರಸಂಗಿಯಿಂದ ಈ ಲೋಕದ ವ್ಯರ್ಥತ್ವವನ್ನು, ಸೊಲೊಮೋನನ ಗೀತದಿಂದ ಕ್ರಿಸ್ತನ ಸವಿ ಪ್ರೀತಿಯನ್ನು ಕಲಿತು ಕೊಳ್ಳೋಣ!

ಪ್ರವಾದನೆಯು ಹಳೆ ಒಡಂಬಡಿಕೆಯ ಕಡೆ ಭಾಗ. ಅದಕ್ಕೂ ಕ್ರಿಸ್ತನಿಂದ ಅದರಲ್ಲಿ ಒದಗಿ ಬಂದದಕ್ಕೂ ಸರಿ ನೋಡೋಣದರಿಂದ (ಮತ್ಥಯನು ಮಾಡಿದಂತೆ) ಆತನು ಬಂದದ್ದು ನಿಶ್ಚಯವೆಂದು ದೃಷ್ಟಾಂತವಾಗುವದೊಂದು, ಸುವಾರ್ತೆಗಳಂತೆ ಕ್ರಿಸ್ತನನ್ನೂ ಆತನ ರಾಜ್ಯವನ್ನೂ ಪ್ರವಾದನೆ ನಮಗೆ ವಿವರವಾಗಿ ಸಾರಿ ಹೇಳುವದೊಂದು, ಹೀಗೆ ಎರಡು ಉಪಯೋಗಗಳು ಒಟ್ಟಿಗೆ ಅದರಿಂದ ಆಗುತ್ತವೆ. ಕ್ರಿಸ್ತನ ರೂಪವು ಆತ್ಮ ದೃಷ್ಟಿಗೆ ಪೂರ್ಣವಾಗಿ ಬೀಳುವ ಹಾಗೆ, ನಾವು ಪ್ರವಾದನೆಗಳನ್ನು ಸುಧಾ ವಿಚಾರಿಸುವದು ಅವಶ್ಯವಾಗೆದೆ. ಕೀರ್ತ. ೨. ೨೨. ೪೦. ೬೯. ಎಶ. ೪೯, ೪ ಮುಂ. ೫೦, ೪—೭. ೫೩. ಜಕ. ೧೧. ಇದಲ್ಲದೆ ಕ್ರಿಸ್ತನ ಭವಿಷ್ಯತ್ರಾಜ್ಯದ ವರ್ಣನೆ ಮುಖ್ಯವಾಗಿ ಹಳೆ ಒಡಂಬಡಿಕೆಯಲ್ಲಿ ಅದೆ.

ಚರಿತ್ರಾಪ್ರವಾದನೆ ಎಂದೂ ಬೋಧನಾಪ್ರವಾದನೆ ಎಂದೂ ಪ್ರವಾದನೆ ಎರಡು ವಿಧ:

a) ಮನುಷ್ಯರು ಅಥವಾ ವಸ್ತುಗಳು ಅಥವಾ ನಡೆದ ಕಾರ್ಯಗಳು ಕ್ರಿಸ್ತನ ವಿಷಯಕ್ಕೆ ಏನಾದರೂ ಒಂದು ಸೂಚನೆ ಕೊಟ್ಟು ಮುಂಗುರ್ತಾಗಿರುವದೇ ಚರಿತ್ರಾಪ್ರವಾದನೆ.—ಕ್ರಿಸ್ತನಿಗೆ ಮುಂಗುರ್ತಾಗಿದ್ದ ಮನುಷ್ಯರಲ್ಲಿ ಕೆಲವರು ಪ್ರವಾದಿಗಳು, ಕೆಲವರು ಪ್ರಧಾನಯಾಜಕರು, ಕೆಲವರು ಅರಸರು, ಕೆಲವರು ಪ್ರಧಾನಯಾಜಕರಾಜರು, ಕೆಲವರು ಸಾಧಾರಣ ಮನುಷ್ಯರು.—ಆದಿ ಮನುಷ್ಯನಾದ ಆದಮನು ಕ್ರಿಸ್ತನನ್ನು ದ್ವಿತಿಯ ಆದಿಮನುಷ್ಯನಾಗಿ ಸೂಚಿಸುವ ಮುಂಗುರುತು (ರೋಮ. ೫, ೧೪), ದೇವರ ಚೊಚ್ಚಲ ಜನಾಂಗವಾದ ಇಸ್ರಾಯೇಲನವರ ಜನಾಂಗ ಕ್ರಿಸ್ತನನ್ನು ದೇವರ ಚೊಚ್ಚಲ ಮಗನಾಗಿ ಸೂಚಿಸುವ ಮುಂಗುರುತು. ಮತ್ಥ. ೨, ೧೫. ಹೊಸೆ. ೧೧, ೧.—ಮೆಲ್ಕೀಜೆದೆಕನು ಕ್ರಿಸ್ತನನ್ನು ಪ್ರಧಾನಯಾಜಕರಾಜನಾಗಿ ಸೂಚಿಸುವ ಮುಂಗುರುತು. ಇಬ್ರಿ. ೫, ೧೦. ೬, ೨೦.—ಸಂಧಿ ೭.—ಆರೋನನು ಮೊದಲುಗೊಂಡು ತಮ್ಮ ಉದ್ಯೋಗಕ್ಕೆ ಪಾತ್ರರಾದ ಪ್ರಧಾನಯಾಜಕರೆಲ್ಲರು ಕ್ರಿಸ್ತನನ್ನು ಪ್ರಧಾನಯಾಜಕನಾಗಿಯೂ (ಜಕ. ೩, ೮.) ಇಸ್ರಾಯೇಲನವರಿಗೆ ರಕ್ಷಕರಾಗಿದ್ದ ನ್ಯಾಯಾಧೀಶರೂ ದಾವೀದನು ಸೊಲೋಮೊನನು ಮೊದಲಾದ ಭಯಭಕ್ತಿಯುಳ್ಳ ಅರಸರೂ ಆತನನ್ನು ಅರಸನಾಗಿಯೂ, ಮೋಸೆ ಸಮುವೇಲನು ಯೋನನು ಎಶಾಯನು ಎರೆಮಿಾಯನು ಎಂಬೀ ಪ್ರವಾದಿಗಳು ಆತನನ್ನು ಪ್ರವಾದಿಯಾಗಿಯೂ ಸೂಚಿಸುವ ಮುಂಗುರುತುಗಳು. (ಮತ್ಥ. ೧, ೨೩. ಎಶ. ೭, ೧೪. ಇಬ್ರಿ. ೨, ೧೩. ಎಶ. ೮, ೧೮.)

ಕ್ರಿಸ್ತನ ವಿಷಯಕ್ಕೆ ಸೂಚನೆ ಕೊಡುವ ಮುಂಗುರುತುಗಳಾದ ವಸ್ತುಗಳು ಯಾವವೆಂದರೆ: ಅರ್ಪಣೆ ಆಗುತ್ತಿದ್ದ ಬಲಿಗಳು, ಸಾಕ್ಷಿಗುಡಾರವು, ದೇವಾಲಯವು, ಯೆರೂಸಲೇಮ ಪಟ್ಟಣ, ಕಾನಾನ ದೇಶ, ಇತ್ಯಾದಿಗಳು. ಇಬ್ರಿ. ೮—೧೦. ಗಲ. ೪. ಇಬ್ರಿ. ೩. ಕಡೆಗೆ ಹಳೆ ಒಡಂಬಡಿಕೆಯಲ್ಲಿ ಹೇಳಿದ ಅನೇಕ ಕಾರ್ಯಗಳು ಕ್ರಿಸ್ತನ ಚರಿತ್ರವನ್ನು ಅಥವಾ ದೇವರ ರಾಜ್ಯದ ತರವನ್ನು ಸೂಚಿಸುವ ಮುಂಗುರುತುಗಳಾಗಿದ್ದಾವೆ. ಅವು ಯಾವವೆಂದರೆ: ಹಾಗರಳ ಮಗನ ವೃತ್ತಾಂತ (ಗಲ. ೪.); ಯೋಸೇಪನ ಕಥೆ; ಇ

ಸ್ರಾಯೇಲನವರು ಮಿಜ್ರದಿಂದ ಹೊರಟದ್ದು (ಹೊಸೆ. ೧೧, ೧. ಮತ್ಥ. ೨, ೧೫.); ದಾವೀದನಿಗೆ ಸಂಭವಿಸಿದ್ದು. ಮತ್ತು ಇಸ್ರಾಯೇಲ ಜನಾಂಗದ ಚರಿತ್ರವೆಲ್ಲಾ ಹೊಸ ಒಡಂಬಡಿಕೆಯ ದೇವರ ರಾಜ್ಯದ ಆದ್ಯಾಂತ್ಯ ಚರಿತ್ರವನ್ನು ತೋರಿಸುವ ಮುಂಗುರುತು. ಸಣ್ಣದರಿಂದ ದೊಡ್ಡದನ್ನು ಮುಂದಾಗಿ ತೋರಿಸುವದು ದೇವರ ತರ. ಎಲ್ಲಾ ಸೃಷ್ಟಿಯಲ್ಲಿ ಆತನು ಹೀಗೆ ನಡಿಸುತ್ತಿದ್ದಾನೆ, ಇದು ಆತನ ಅನಂತ ಗ್ನಾನದ ಒಂದು ಲಕ್ಷಣ.

ಇಸ್ರಾಯೇಲನವರ ಚರಿತ್ರೆ ಕ್ರಿಸ್ತನ ಸಭಾಚರಿತ್ರಕ್ಕೆ ಮುಂಗುರುತು. ದೇವರ ಸಭೆಯು ಸದ್ವಿಶ್ವಾಸ ಅವಿಶ್ವಾಸ, ಸತ್ಯ ಮಿಥ್ಯ ಬೆರಿಕೆಯಾಗಿದ್ದ ಬಾಬೆಲಾಗಿ ಪರಿಶುದ್ಧರ ಸಭೆಯನ್ನು ಶೆರೆ ಹಿಡಿದ ಹಾಗೆ ಆಗಿತ್ತು. ದೇವರು ಕೃಪೆ ಮಾಡಿ ಪುನಃಸ್ಥಾಪನೆಯಿಂದ ಈ ಶೆರೆ ಬಿಡಿಸಿದನು. ನಾವು ಈಗ ಎಸ್ರ ನೆಹೆಮಿಾಯ ಎಂಬಿವರ ಕಾಲದಲ್ಲಿ ಇದ್ದ ಹಾಗೆ ಆಯಿತು. ೧.) ನಾವು ಈ ಮುಂಗುರುತಿಗೆ ಅನುಸಾರವಾಗಿ ಹಳೆ ದೇವಾಲಯವನ್ನೂ ಹಳೆ ಪಟ್ಟಣವನ್ನೂ ತಿರಿಗಿ ಕಟ್ಟ ಬೇಕು, ಅಂದರೆ ನಾವು ನಮ್ಮ ಪರಿಶುದ್ಧ ದೇವವಾಕ್ಯಕ್ಕೆ ಸಂಬಂಧವಾದ ಪೂರ್ವದ ವಿಶ್ವಾಸವಿಧಿಯಲ್ಲಿ ಬೇರೂರಿ ದೇವಾರಾಧನೆ ಆತ್ಮದಿಂದಲೂ ಸತ್ಯದಿಂದಲೂ ನಡಿಯುವಂತೆ ಮಾಡ ಬೇಕು. ೨.) ಅಪೊಸ್ತಲರು ನಡಿಸಿದ ಶಿಕ್ಷಾಕಾರ್ಯವನ್ನು ನಾವು ತಿರಿಗಿ ನಡಿಸುವವರು ಆಗ ಬೇಕು; ಇಲ್ಲದಿದ್ದರೆ ನಾವು ಕಟ್ಟೋದು ತಿರಿಗಿ ಬಿದ್ದೀತು; ಎಸ್ರನು ಮತ್ತು ನೆಹೆಮಿಾಯನು ದೇವವಾಕ್ಯದ ಶಿಕ್ಷೆಗೆ ಒಳಗಾಗದವರನ್ನು ಬಹಿಷ್ಕಾರ ಮಾಡುತ್ತಿದ್ದರು. ೩.) ಸಮಾರ್ಯದವರು ಅಂದರೆ ಅಜ್ಞ ದೇವವಾಕ್ಯಕ್ಕೆ ಹತ್ತಿ ಕೊಳ್ಳದ ಲೌಕಿಕರು ನಿಮ್ಮ ಸಂಗಡ ಕಟ್ಟೇವೆಂದರೆ, ಅವರನ್ನು ಈ ಕಾರ್ಯದ ಪಾಲಿಗೆ ಶೇರಿಸಿ ಕೊಳ್ಳ ಬಾರದು. ೪.) ಆಗಿಂದಾಗ್ಯೆ ಈ ಕೆಲಸ ಕೆಡಿಸ ವೈರಿಗಳು ಬರುತ್ತಿರುವದರಿಂದ, ನಾವು ಒಂದು ಕೈಲಿ ಕಟ್ಟುತ್ತಿರಲಾಗಿ, ಮತ್ತೊಂದು ಕೈಯಲ್ಲಿ ಕತ್ತಿ ಈಟಿ ಹಿಡಕೊಂಡಿರ ಬೇಕು.

ನಾವು ಇರುವ ಕಾಲ ಎಸ್ರನು ಇದ್ದ ಕಾಲಕ್ಕೆ ಸರಿ ಆಗೆದೆ. ಹೀಗಿರಲಿಕ್ಕೆ ಪೂರ್ವ ಕಾಲದವರಿಗೆ ಸಂಭವಿಸಿದ್ದನ್ನು ವಿಚಾರಿಸಿ ನೋಡಿದ ಮೇಲೆ ಇಂದಿನಿಂದ ಕ್ರಿಸ್ತನು ತಿರಿಗಿ ಬರುವ ತನಕ ನಮಗೂ ಆಗುವದು ಏನೆಂದು ನಾವು ಅರಿಯದವರಲ್ಲ. ಎಸ್ರ ಮುಂತಾದ ಹಿರಿಯರಿಂದ ಇಸ್ರಾಯೇಲನವರ ಸಭೆ ತಿರಿಗಿ ಸ್ಥಾಪನೆಯಾಯಿತು. ಜನರ ಮನಸ್ಸು ವಿಶ್ವಾಸದಲ್ಲಿ ಘಟ್ಟಿಯಾಯಿತು. ಹೀಗಾಗಿ ಅಂತಿಕ್ರಿಸ್ತನಿಗೆ ಮುಗುರುತಾಗಿದ್ದ ರಾಜನಾದ ಅಂತಿಯೊಕ ಎಪಿಫಾನನಿಂದ ಆದ ಅಘೋರ ಶೋಧನೆಗಳಲ್ಲಿ ಪಾರಾಗಿ ಬರಲಿಕ್ಕೆ ಸಿದ್ಧವಾದರು. ಅದರಂತೆ ಈಗಿನ ಸಭೆಗೆ ಅಂತಿಕ್ರಿಸ್ತನಿಂದ ಒಂದು ದೊಡ್ಡ ಶೋಧನೆ ಆಗುವದುಂಟು. ಅದನ್ನು ಜಯಿಸಲಿಕ್ಕೆ ಈ ಕಾಲ ಶಕ್ತರಾಗ ತಕ್ಕ ಸಮಯ, ಅಂದು ಇಸ್ರಾಯೇಲನವರಿಂದ ಅನ್ಯ ಜನರಲ್ಲಿ ಸತ್ಯ ದೇವಾರಾಧನೆ ನೆಲೆಗೊಂಡಂತೆ, ಇಂದು ಕ್ರಿಸ್ತನ ಸುದ್ದಿ ಎಲ್ಲಾ ದೇಶಗಳಿಗೆ ಹರಿಯ ಬೇಕು. ಕ್ರಿಸ್ತನು ತಿರಿಗಿ ಬಂದು ತನ್ನ ಮಹಿಮಾಕಾರ್ಯವನ್ನು ಸಿದ್ಧಿಗೆ ತರಲಿಕ್ಕೆ ಎಲ್ಲಾ ಹದವಾಗ ಬೇಕು.

b) ಬೋಧನೆಯಿಂದ ಆಗುವ ಪ್ರವಾದನೆ ಬೋಧನಾ ಪ್ರವಾದನೆ. ಪ್ರಕಟಣೆಯ ಆದಿಯಿಂದ ಬೋಧನಾ ಪ್ರವಾದನೆ ತಕ್ಕಷ್ಟು ಆಗುತ್ತಿತ್ತು. ಹ್ಯಾಗಂದರೆ ೧ ಮೋಸೆ. ೩. ಹವ್ವಳ ವಂಶದವರಲ್ಲಿ ಹಾವನ್ನು ತುಳಿಯುವವನೊಬ್ಬನು ಬರುವನು ಎಂಬ ವಾಕ್ಯವದೆ. ಆ ಮೇಲೆ ನೋಹನು ಶೇಮನ ಸಂತತಿಯಲ್ಲಿ ಹುಟ್ಟಲಿರುವ ಕ್ರಿಸ್ತನನ್ನು ಸಾರಿ ತಿಳಿಸುತ್ತಾನೆ. ಯಾಕೋಬನು ಕ್ರಿಸ್ತನನ್ನು ಯೂದನ ಗೋತ್ರದಿಂದ ಹುಟ್ಟಿ ಬರುವ ಜಯಶಾಲಿಯಾಗಿ ಸೂಚಿಸುತ್ತಾನೆ. ೧ ಮೋಸೆ. ೪೯. ಆತನು ದೊಡ್ಡ ಪ್ರವಾದಿ ಎಂದು ಮೋಸೆ ಆತನ ವಿಷಯ ಮಾತಾಡುತ್ತಾನೆ. ಆತನು ದಾವೀದನ ವಂಶದವನೂ ನಿತ್ಯರಾಜನೂ ಎಂದು ಪ್ರವಾದಿಯಾದ ನಥಾನನು ಹೇಳುತ್ತಾನೆ. ೨ ಸಮು. ೭. ಆದರೂ ಅದು ಮುಖ್ಯವಾಗಿ ಕೀರ್ತನೆಗಳಲ್ಲಿಯೂ ಪ್ರವಾದನೆಗಳಲ್ಲಿಯೂ ಬಂದದೆ. ಬೋಧನಾ ಪ್ರವಾದನೆ ಎರಡು ವಿಧ. ಹ್ಯಾಗಂದರೆ:

aa) ಒಬ್ಬ ಪ್ರವಾದಿಯು ಅಥವಾ ಕೀರ್ತನಾ ಕರ್ತನು ನುಡಿದದ್ದು ತನಗೆ ಅಥವಾ ತಾನು ವರ್ಣಿಸುವ ಒಬ್ಬ ಮನುಷ್ಯನಿಗೆ ಸರಿಯಾಗಿದೆ. ಆದರೆ ತಾನು ಅಥವಾ ತನ್ನಿಂದ ವರ್ಣಿಸಿ ಕೊಳ್ಳುವ ಮನು

ಷ್ಯನು ಕ್ರಿಸ್ತನಿಗೆ ಮುಂಗುರುತಾಗಿದ್ದ ಕಾರಣ, ಆ ನುಡಿ ಕ್ರಿಸ್ತನಿಗೂ ಸರಿ ಬರುವದರಿಂದ, ಅದು ಒಂದು ಬೋಧನಾ ಪ್ರವಾದನೆ ಆಯಿತು. ಈ ಪಕ್ಷದಲ್ಲಿ ಆ ನುಡಿಯೊಳಗೆ ಯಾವಾಗಲು ಗ್ರಂಥಕರ್ತನಿಗೂ ಅಥವಾ ಅವನು ವರ್ಣಿಸುವ ಮನುಷ್ಯನಿಗೂ ಪೂರ್ಣವಾಗಿ ಸರಿ ಬಾರದ ಕೆಲವು ಸಂಗತಿಗಳು ಉಳಿಯುವವು. ದಾವೀದನು ಅನೇಕ ಕೀರ್ತನೆಗಳನ್ನು ಮಾಡಿದನಲ್ಲ. ಅವುಗಳಲ್ಲಿ ಅವನು ಉಪಶಮನಾರ್ಥವಾಗಿ ತನ್ನ ಸುಖ ದುಃಖಾನುಭವವನ್ನು ಹೇಳುವಲ್ಲಿ, ತಾನೂ ತನ್ನ ರಾಜ್ಯವೂ ಕ್ರಿಸ್ತನಿಗೆ ಮುಂಗುರುತಾಗಿದ್ದ ಉದ್ದಿಶ್ಯ, ಮೆಲ್ಲ ಮೆಲ್ಲಗೆ ಅವನ ನುಡಿ ತನ್ನ ಅನುಭವದ ಮಿತಿ ಮೀರಿ ಕ್ರಿಸ್ತನನ್ನೂ ಆತನ ರಾಜ್ಯವನ್ನೂ ಬಣ್ಣಿಸುವಂಥಾದಾಗುತ್ತದೆ.

bb) ಪ್ರವಾದಿಯು ಅಥವಾ ಕೀರ್ತನಾ ಕರ್ತನು ತಿಳಿದು ಈ ಪೃಥ್ವಿಯ ಮೇಲೆ ಯಾವ ಮನುಷ್ಯನಿಗೂ ಯಾವ ಕಾರ್ಯಕ್ಕೂ ಸ್ವಲ್ಪವಾದರೂ ಸರಿ ಬಾರದ ಲಕ್ಷಣಗಳನ್ನು ಒಬ್ಬನ ವಿಷಯಕ್ಕೆ ಹೇಳಿ ವರ್ಣನೆ ಮಾಡುತ್ತಾನೆ. ಆದರೆ ಆ ಕವೀಶ್ವರನು ದೊಡ್ಡವರನ್ನು ಮೆಚ್ಚಿಸಲಿಕ್ಕೆ ಬೆಳಸಿ ಹೇಳುವವನಲ್ಲ. ಸುಮ್ಮನೆ ಕಲ್ಪನಾ ಕಥೆಗಳನ್ನು ಹುಟ್ಟಿಸುವವನಲ್ಲ. ಹೀಗಾಗಿ ಅವನು ನುಡಿದ್ದಕ್ಕೂ ಕ್ರಿಸ್ತನ ವೃತ್ತಾಂತಕ್ಕೂ ಸರಿ ನೋಡಲಾಗಿ, ಅದು ಇದಕ್ಕೆ ಸರಿ ಬರುವ ಪಕ್ಷದಲ್ಲಿ, ಕ್ರಿಸ್ತನನ್ನೂ ಆತನ ರಾಜ್ಯವನ್ನೂ ಮಾತ್ರ ವಿವರಿಸುವ ಬೋಧನಾ ಪ್ರವಾದನೆಯಾಯಿತು. ದೇವರ ಪರಿಶುದ್ಧ ಮನುಷ್ಯರ ಮುಖದಿಂದ ಈ ವಾಕ್ಯವನ್ನು ನುಡಿಸಿದ ಪರಿಶುದ್ಧಾತ್ಮನು ನಿನ್ನಲ್ಲಿ ಬಂದು ಎಷ್ಟು ಬೆಳಕು ಮಾಡುತ್ತಾನೋ ಅಷ್ಟು ಈ ಪ್ರವಾದನಾ ವಾಕ್ಯವು ನಿನಗೆ ತಿಳಿಯ ಬಂದೀತು. ಆತನೆ ದೇವವಾಕ್ಯದ ನಿಕ್ಷೇಪವನ್ನು ಬೈಲಿಗೆ ತರುವ ದ್ರವ್ಯಾಂಜನ. ಇದನ್ನು ನೀನು ಕಣ್ಣಿಗೆ ಹಚ್ಚಿ ಕೊಂಡರೆ, ಪ್ರಕಟಣಾ ಪುಸ್ತಕದಲ್ಲಿ ಹುಗಿದಿರುವ ನಿಕ್ಷೇಪಗಳನ್ನು ಕಂಡು ಸಾಧಿಸಿ ಕೊಳ್ಳಲಾಗುವದು. ಈ ಮೇರೆಗೆ ಅಪೊಸ್ತಲರು ಅನೇಕ ಸಮಾಧಾನ ಸಂತೋಷ ಧೈರ್ಯ ಆದರಣಾ ನಿಕ್ಷೇಪಗಳನ್ನು ಕಂಡು ಎತ್ತಿ ಕೊಂಡದ್ದು ಆದ ಮೇಲೆ, ನೀನು ಅವರ ಹೆಜ್ಜೆ ಹಿಡಕೊಂಡು ನಡೆ!

---

೩. ಹಳೆ ಒಡಂಬಡಿಕೆಯ ಗ್ರಂಥಗಳು.

ಹಳೆ ಒಡಂಬಡಿಕೆಯ ಪ್ರಕಟನೆ, ನಾವು ಮೇಲೆ ವಿವರಿಸಿದಂತೆ, ಇಸ್ರಾಯೇಲನವರಿಗೂ ಕ್ರಿಸ್ತನ ಸಭೆಗೂ ಇಷ್ಟು ದೊಡ್ಡ ಉಪಯೋಗ ಬೀಳುವಂಥಾದು ಆದ ಮೇಲೆ, ದೇವರು, ಅದು ಮರವು ಆಗದ ಹಾಗೆ, ಅದನ್ನು ಅಚ್ಚವಾಗಿ ಉಳಿಸದೆ ಬಿಡಲಿಕ್ಕಿಲ್ಲ. ಒಂದು ಉಪಾಯ ಮಾಡ ಬೇಕಾಯಿತು. ಆದಮನು ಮೊದಲಾದ ಆ ಆದಿಕಾಲದ ಪುರಾತನ ಭಕ್ತರು ದೀರ್ಘಾಯುಷ್ಯದವರೇ, ಭಯಭಕ್ತಿ ಎಚ್ಚರಿಕೆ ಜ್ಞಾನ ಹೆಚ್ಚಿದ್ದವರೇ. ಅದರಿಂದ ಅವರು ದೇವರು ಅರಹಿದ ಕಾರ್ಯಗಳ ಮೇಲೆ ಬಹಳ ಪ್ರೀತಿ ಮಾಡಿ, ಅವನ್ನ ಬಹಳವಾಗಿ ತಮ್ಮ ನೆನಸಿನಲ್ಲಿ ಇಟ್ಟು ಕೊಂಡು, ನೆಟ್ಟಗೆ ಒಂದು ಬಿಡದೆ, ಒಂದು ಕೂಡಿಸದೆ, ತಮ್ಮ ಮಕ್ಕಳಿಗೂ ಮೊಮ್ಮಕ್ಕಳಿಗೂ ಮರಿಮಕ್ಕಳಿಗೂ ಹೇಳಿ ತಿಳಿಸಿದ್ದಕ್ಕೆ, ಅವರಿಂದ ಆ ದಿವ್ಯಕಾರ್ಯಗಳನ್ನು ವಿವರಿಸುವ ಸಂಪ್ರದಾಯವು ನೆಟ್ಟಗೆ ನಡೆದು ಬರುತ್ತಿತ್ತು. ಆದರೆ ಕಾಲಾಂತರದಲ್ಲಿ ಅದು ಮನುಷ್ಯರ ಮರವಿನಿಂದಾಗಲಿ, ಅವರ ಅಲಕ್ಷ್ಯದಿಂದಾಗಲಿ, ಬೇರೆ ಬೇರೆಯಾಗಿ ಕೆಡುವ ಹಾಗಿತ್ತು. ಅದು ಕಾರಣ ದೇವರು ಅದನ್ನು ತನ್ನ ಭಕ್ತರ ಕೈಲಿ ಬರೆಸಿದನು. ಇದಕ್ಕೆ ಅವರು ಶಕ್ತರಾಗುವ ಹಾಗೆ, ದೇವರು ತನ್ನ ಪರಿಶುದ್ಧಾತ್ಮನನ್ನು ಕೊಟ್ಟು ಅವರನ್ನು ಪ್ರೇರಿಸಿದನು—ಆದ ಮೂಲ ಅವರು ಬರೆದದ್ದು ದೈವ ಪ್ರೇರಿತವಾದದ್ದು. ಈ ಪ್ರಕಾರದಿಂದ ಹಳೆ ಒಡಂಬಡಿಕೆಯ ಗ್ರಂಥಗಳ ಸಂಗ್ರಹ ಉತ್ಪನ್ನವಾಯಿತು. ಇದು ಇಸ್ರಾಯೇಲನವರಿಗೆ ಮಾನ್ಯವಾದ ದೇವವಾಕ್ಯವಾಗಿತ್ತೆಂಬದನ್ನು ಯೂದರಲ್ಲಿ ನಡೆಕೊಂಡು ಬಂದ ಸಂಪ್ರದಾಯದಿಂದಲೂ ಕ್ರಿಸ್ತನು ಈ ವಿಷಯಕ್ಕೆ ಕೊಟ್ಟ ಸಾಕ್ಷಿಯಿಂದಲೂ ಗೊತ್ತು ಮಾಡ ಬಹುದು. ಯೂದರು ಬಾಬೆಲದ ಶೆರೆಯಿಂದ

ಬಿಡುಗಡೆಯಾಗಿ ತಿರಿಗಿ ತಮ್ಮ ದೇಶಕ್ಕೆ ಬಂದ ಇತ್ತಲಾಗಿ ದೊಡ್ಡ ಪಂಡಿತನಾದ ಎಸ್ರನು ಹಗ್ಗಾಯ ಜಕರಿಯ ಮಲಕೀಯ ಎಂಬೀ ಪ್ರವಾದಿಗಳನ್ನು ಕೂಡಿಕೊಂಡು ಕ್ರಿಸ್ತನ ಅತ್ತಣ ೪೪೦ನೆ ವರುಷದಲ್ಲಿ ಹಳೆ ಒಡಂಬಡಿಕೆಯ ಗ್ರಂಥಗಳನ್ನು ಕೂಡಿಸಿ ಕ್ರಮದಿಂದ ಇಡ ಆರಂಭ ಮಾಡಿದನು. ತದನಂತರ ೧೨೦ ಮಂದಿ ಪಂಡಿತರು ದೊಡ್ಡ ಸಭೆಯಾಗಿ ಕೂಡಿ ಈ ಸಂಗ್ರಹಕಾರ್ಯವನ್ನು ೧೫೦ ವರುಷ ನಡಿಸಿದರು. ಕಡೆಗೆ ಪ್ರಧಾನಯಾಜಕನಾದ ನೀತಿಯುಳ್ಳ ಸೀಮೋನನು ಸಭಾಪತಿಯಾಗಿರುವಾಗ್ಯೆ, ಸಂಗ್ರಹ ಮಾಡುವದು ಮುಗೀತು. ಹೀಗೆ ಸಂಪ್ರದಾಯ ಉಂಟು.

ಹಳೆ ಒಡಂಬಡಿಕೆಯ ಗ್ರಂಥಗಳು ದೈವ ಪ್ರೇರಿತವಾದಂಥಾವು ಎಂದು ಆ ಸಂಗ್ರಹ ಮಾಡಿದವರಿಗೆ ಹ್ಯಾಗೆ ಗೊತ್ತಾಯಿತು? ಇವು ದೇವರೇ ನುಡಿಸಿದಂಥಾವು ಎಂಬಂತೆ ಅನೇಕ ಗ್ರಂಥಗಳ ವಿಷಯವಾಗಿ ಸಂಪ್ರದಾಯವಿತ್ತು. ಇದಲ್ಲದೆ ದೈವ ಪ್ರೇರಣೆಯಿಂದ ಆದ ಹೊರ್ತು, ಮನುಷ್ಯಕಲ್ಪನೆಯಿಂದ ರಚನೆ ಆಗಲರಿಯವು ಎಂದು, ಕೆಲವು ಗ್ರಂಥಗಳ ವಿಷಯಕ್ಕೆ ಅನುಭವದಿಂದ ತಿಳಿಯ ಬಂತು. ಹೀಗೆ ಸಂಪ್ರದಾಯ ಅನುಭವಗಳ ಮೇಲೆ ನಿರ್ಣಯ ಮಾಡಲಿಕ್ಕೆ ವೈನಾಯಿತು.

ಈ ರೀತಿಯಿಂದ ಕೂಡಿದ ಹಳೆ ಒಡಂಬಡಿಕೆ ಗ್ರಂಥ ಸಂಗ್ರಹವನ್ನು ಮಿಜ್ರದ ಅರಸ ಪ್ತೊಲೆಮಾಯ ಫಿಲಾದೆಲ್ಫನು ಕ್ರಿಸ್ತನ ಆಚೆಯ ೨೮೦ನೆ ವರುಷದಲ್ಲಿ ೭೨ ಮಂದಿ ಪಂಡಿತರಿಂದ ಗ್ರೀಕ ಭಾಷೆಯಲ್ಲಿ ಭಾಷಾಂತರ ಮಾಡಿಸಿ, ತನ್ನ ಪುಸ್ತಕ ಶಾಲಾಸಂಗ್ರಹದಲ್ಲಿ ಶೇರಿಸಿದನು. ಈ ಭಾಷಾಂತರಕ್ಕೆ ಲಾತಿನ ಭಾಷೆಯಲ್ಲಿ ಸೆಪ್ತುವಗಿಂತ ಅಂದರೆ ಎಪ್ಪತ್ತು (ಎಪ್ಪತ್ತು ಮಂದಿಯಿಂದ ಆದದ್ದು) ಎಂದು ಅನ್ನುತ್ತಾರೆ. ಇದಕ್ಕೂ ಈಗ ನಮ್ಮ ಕೈಗೆ ಬಂದಿರುವ ಹೆಬ್ರಿ ಭಾಷೆಯ ಹಳೆ ಒಡಂಬಡಿಕೆಯ ಗ್ರಂಥಸಂಗ್ರಹಕ್ಕೂ ಏನೇನೂ ಹೆಚ್ಚು ಕಡಿಮೆ ಇಲ್ಲ.

೧೩೦ನೇ ವರುಷ ಯೇಸು ಕ್ರಿಸ್ತನ ಆಚೆ ಇದ್ದ ಸೀರಕನು ತನ್ನ ವಚನಗಳ ಪೀಠಿಕೆಯಲ್ಲಿ ಈಗಲೇ ವರ್ತಿಸುವ ಹಳೆ ಒಡಂಬಡಿಕೆಯ ಗ್ರಂಥಗಳನ್ನು ಎಣಿಸಿ ಹೇಳುತ್ತಾನೆ.

ಚರಿತ್ರಾ ಗ್ರಂಥಕರ್ತನಾದ ಯೊಸೇಫನು ಯೆರೂಸಲೇಮ ಹಾಳಾದ ಕಾಲದಲ್ಲಿ ಯೂದರೊಳಗೆ ಪ್ರಸಿದ್ಧನಾಗಿದ್ದನಲ್ಲ. ಅವನೂ ಈಗ ಇರುವ ಅದೆ ಹಳೆ ಒಡಂಬಡಿಕೆಯ ಗ್ರಂಥಗಳನ್ನು ಬಳಸಿದನು.

ಹಳೆ ಒಡಂಬಡಿಕೆಯ ವಿಷಯವಾದ ಸಂಪ್ರದಾಯದ ಸಾಕ್ಷಿ ಇನ್ನೂ ಪೂರ್ಣ ನಿರ್ಣಯಕ್ಕೆ ಸಾಲುತ್ತಿದ್ದಿಲ್ಲ. ಕ್ರಿಸ್ತನಿಂದ, ಅನುಮಾನ ಉಳಿಯದಂತೆ, ಹಳೆ ಒಡಂಬಡಿಕೆಯ ಕುರಿತು ನಿಶ್ಚಯ ವರ್ತಮಾನ ಬಂತು. ಹ್ಯಾಗಂದರೆ ನಾವು ಈಗ ಬಳಿಸುವ ಹಳೆ ಒಡಂಬಡಿಕೆಯ ಗ್ರಂಥಗಳನ್ನು ದೈವಪ್ರೇರಿತವಾದಂಥಾವು ಎಂದು ಆತನು ಬಳಸಿದನು. ರಕ್ಷಣಾ ಕಾರ್ಯಕ್ಕೆ ತಾನು ದೇವರಿಂದ ಬಂದಾತನೆಂದು ಅವನ್ನ ಆಧಾರ ಮಾಡಿ ಕೊಂಡು ಸಾಧಿಸುತ್ತಿದ್ದನು. ಅವನ್ನ ಬಿಟ್ಟು ಮಾತಾಡಲಿಲ್ಲ. ಹೀಗಿರಲಿಕ್ಕೆ ಇದು ದೇವವಾಕ್ಯವೊ ಅಲ್ಲವೋ ಎಂಬ ಸಂಶಯಕ್ಕೆ ಕಿಂಚಿತ್ತಾದರೂ ಆಸ್ಪದವಿಲ್ಲದ ಮೇಲೆ ಅದನ್ನ ಮಾನ್ಯ ಮಾಡಿ ನಂಬಿಕೊಳ್ಳುವ ಹಂಗು ನಮಗೆ ಉಂಟು.

ಮೋಸೆ ಬರೆದ ೫ ಗ್ರಂಥಗಳು ನೇಮಗ್ರಂಥವೆಂದೂ, ಯೋಶುವನ ಗ್ರಂಥ, ನ್ಯಾಯಾಧೀಶರ ಗ್ರಂಥ, ರೂಥಳ ಗ್ರಂಥ, ಸಮುವೇಲನ ೨ ಗ್ರಂಥಗಳು, ಅರಸರ ೨ ಮತ್ತು ದಿನಚರ್ಯಗಳ ೨ ಗ್ರಂಥಗಳು, ಎಸ್ರನ ಗ್ರಂಥ, ನೆಹೆಮಿಯನ ಗ್ರಂಥ, ಎಸ್ತೆರಳ ಗ್ರಂಥ ಇವು ಚರಿತ್ರಾ ಗ್ರಂಥವೆಂದೂ, ಯೋಬನ ಗ್ರಂಥ, ಕೀರ್ತನಾ ಗ್ರಂಥ, ಸಾಮತಿಗಳು, ಪ್ರಸಂಗಿ, ಗೀತ ಎಂಬ ಸೊಲೊಮೋನನ ಗ್ರಂಥಗಳು ಇವು ಬೋಧನಾ ಗ್ರಂಥವೆಂದೂ, ಎಶಾಯ, ಯೆರೆಮಿಾಯನು, ಎಜೆಕೀಯೇಲನು, ದಾನಿಯೇಲನು, ಹೊಸೇಯನು, ಯೋವೇಲನು, ಆಮೋಸನು, ಒಬದೀಯನು, ಯೋನನು, ಮಿಾಕನು, ನಹುಮನು, ಹಬಕೂಕನು, ಜೆಫನೀಯನು, ಹಗ್ಗಾಯನು, ಜಕರೀಯನು, ಮಲಕೀಯನು ಎಂಬೀ ೧೬ ಮಂದಿ ಪ್ರವಾದಿಗಳ ಗ್ರಂಥಗಳು ಪ್ರವಾದನಾ ಗ್ರಂಥ ಎಂದೂ ಹೀಗೆ ಹಳೆ ಒಡಂಬಡಿಕೆಯ ಗ್ರಂಥಗಳನ್ನೆಲ್ಲ ೪ ಭಾಗ ಮಾಡಿದರು. ನೇಮ ಗ್ರಂಥ

ಗಳಿಂದ ಇಸ್ರಾಯೇಲನವರಲ್ಲಿ ನಿತ್ಯ ಶಿಕ್ಷಾಕಾರ್ಯ ನಡಿಯುತ್ತಿತ್ತು. ಚರಿತ್ರಾ ಗ್ರಂಥಗಳು ದೇವರು ನಡಿಸಿದ ದೊಡ್ಡ ಕಾರ್ಯಗಳನ್ನು ನಿತ್ಯ ಅವರಿಗೆ ತಿಳಿಸುತ್ತಿದ್ದವು; ಬೋಧನಾ ಗ್ರಂಥಗಳು ಭಯಭಕ್ತಿಯಿಂದ ನಡೆಯುವದನ್ನು ಅವರಿಗೆ ಕಲಿಸಿ ಕೊಡುತ್ತಿದ್ದವು; ಪ್ರವಾದನಾ ಗ್ರಂಥಗಳು ಮುಸುಕನ್ನು ತೆಗೆದು ಭವಿಷ್ಯತ್ಕಾಲದಲ್ಲಿ ದೇವರ ರಾಜ್ಯಕ್ಕೆ ಆಗುವ ಸ್ಥಿತಿಗತಿಗಳನ್ನು ತೋರಿಸಿ, ನೆನಪನ್ನೂ ಆದರಣೆಯನ್ನೂ ಎಚ್ಚರಿಕೆಯನ್ನೂ ಕೊಡುತ್ತಿದ್ದವು. ಯೋಹ. ೫, ೩೯. ಹೇಳಿರುವ ಆಜ್ಞೆಯನ್ನು ಕೈಕೊಂಡು ಹಳೆ ಒಡಂಬಡಿಕೆಯ ವಾಕ್ಯ ನಮಗೆ ಆತ್ಮಜೀವವಾಗಗೊಟ್ಟರೆ, ನಮಗೂ ಈ ನಾಲ್ಕು ಪ್ರಕಾರವಾದ ಆಶೀರ್ವಾದ ಬರುವದು. ಆದರೆ ದೇವವಾಕ್ಯ ಗ್ರಂಥಕರ್ತರಲ್ಲಿ ದೈವ ಯತ್ನವು ಮನುಷ್ಯ ಯತ್ನವು ಗ್ರಂಥದ ಉತ್ಪತ್ತಿಗೆ ಈ ಎರಡು ಕೂಡಿದಂತೆ, ಅವನ್ನ ಗ್ರಹಿಸಲಿಕ್ಕೆ ನಮಗೂ (೨ ಪೇತ್ರ. ೧, ೧೯—೨೧) ಪರಿಶುದ್ಧಾತ್ಮನ ಬೆಳಕು ಹಾಂಗೂ ಮನುಷ್ಯರ ಉಪದೇಶ ಅಗತ್ಯವಾಗೆದೆ. ಅದು ಪ್ರಾರ್ಥನೆಯಿಂದ ಇದು ನಾವು ಮುಂದೆ ಬರೆಯುವ ವ್ಯಾಖ್ಯಾನದಿಂದ ಸಾಧ್ಯವಾಗುವದು.

ಹಳೆ ಒಡಂಬಡಿಕೆ.

ಮೋಸೆಯ ಐದು ಗ್ರಂಥಗಳು

ಪೀಠಿಕೆ

ಹಳೆ ಹೊಸ ಒಡಂಬಡಿಕೆಯ ಪುಸ್ತಕವು ದೇವರ ಚಿತ್ತವನ್ನೂ ಅದು ನಡೆದ ಕಾರ್ಯಗಳನ್ನೂ ತಿಳಿಸುವಂಥಾ ಪರಿಶುದ್ಧ ದೈವಪ್ರೇರಿತ ಪುರುಷರಿಂದ ಲಿಖಿತವಾದಂಥಾ ಪರಿಶುದ್ಧ ಗ್ರಂಥಗಳ ಸಂಗ್ರಹವಾಗೆದೆ. ಮೊದಲು ಬೀಜ ಆ ಮೇಲೆ ಗಿಡ ಎಂಬ ನೀತಿಯ ಪ್ರಕಾರ ಹಳೆ ಒಡಂಬಡಿಕೆಯ ಮೇಲೆ ಹೊಸ ಒಡಂಬಡಿಕೆ ಬಂತು. ವಾಗ್ದತ್ತ ನುಡಿದದ್ದು ಮೊದಲು, ಆ ಮೇಲೆ ಅದು ಒದಗಿ ಬಂದದ್ದು. ನೇಮ ಕೊಟ್ಟದ್ದು ಮೊದಲು, ಆ ಮೇಲೆ ಸುವಾರ್ತೆ ಬಂದದ್ದು. ದೇವರ ರಾಜ್ಯಕ್ಕೆ ಎಲ್ಲಾ ಮೊದಲು ಸಿದ್ಧವಾಗ ಬೇಕು, ಆ ಮೇಲೆ ಅದು ಸ್ಥಾಪನೆಯಾಗಿ ವಿಸ್ತಾರವಾಗ ಬಹುದು.—ಹಳೆ ಒಡಂಬಡಿಕೆ ತಿಳಿಯದ ವಿನಹ, ನಾವು ಹೊಸ ಒಡಂಬಡಿಕೆಯನ್ನು ನೆಟ್ಟಗೆ ತಿಳಿಯಲಾರೆವು ಹ್ಯಾಗೋ, ಹಾಗೆ ಮೋಸೆಯ ಐದು ಗ್ರಂಥಗಳನ್ನು ಗ್ರಹಿಸದ ಹೊರ್ತು, ಹಳೆ ಒಡಂಬಡಿಕೆ ಪೂರ್ಣವಾಗಿ ಅರಿಯ ಕೂಡದು. ಯಾಕಂದರೆ ಅವು ಹಳೆ ಒಡಂಬಡಿಕೆಗೆ ಮೂಲವೇ. ಹಳೆ ಒಡಂಬಡಿಕೆಯಲ್ಲಿ ಹೊಸ ಒಡಂಬಡಿಕೆ ಊರುವಂತೆ, ಹಳೆ ಒಡಂಬಡಿಕೆಯಲ್ಲಿಯ ದೇವರಾಜ್ಯದ ಸಮಸ್ತ ಚರಿತ್ರೆ ಇವುಗಳಲ್ಲಿ ಊರಿ ಅದೆ. ಮೋಸೆ ತೀರಿದಂದಿನಿಂದ ಪ್ರವಾದಿಯಾದ ಮಲಕೀಯನ ತನಕ ರಚನೆಯಾದ ಎಲ್ಲಾ ಪರಿಶುದ್ಧ ಗ್ರಂಥಗಳು ಅವನ್ನ ಆತು ಕೊಳ್ಳುತ್ತವೆ. ಆದ ಕಾರಣ ಮೋಸೆಯ ಗ್ರಂಥಗಳು ಹಳೆ ಒಡಂಬಡಿಕೆಯ ಮತ್ತು ಸಮಸ್ತ ದೇವವಾಕ್ಯದ ಪುಸ್ತಕಕ್ಕೆ ಆದಿಯಾದ ಮುಖ್ಯ ಭಾಗವು. ಅದಿಲ್ಲದಿದ್ದರೆ, ದೇವವಾಕ್ಯವು ಅಸ್ತಿವಾರವಿಲ್ಲದ ಅಂತರದಲ್ಲಿ ತೂಗ್ಯಾಡುವ ದೇವಾಲಯದಂತೆ ಇರುವದು. ಅದಕ್ಕೆ ಅವಿಶ್ವಾಸಿಗಳು ಈ ಆದಿ ಗ್ರಂಥಗಳ ಮೇಲೆ ಬೇರೆ ಬೇರೆ ಸಂಶಯಗಳನ್ನು ಹುಟ್ಟಸಲಿಕ್ಕೆ ಬಹಳ ಪ್ರಯತ್ನ ಮಾಡುತ್ತಾರೆ. ಆದರೆ ಯೇಸು ಕ್ರಿಸ್ತನೂ ಆತನ ಆದಿ ಶಿಷ್ಯರೂ ಅವು ದೇವವಾಕ್ಯವೆಂದು ಒಪ್ಪಿ ಕೊಂಡದ್ದು, ವಿದ್ವಾಂಸರು ಮಾಡಿದ ಶೋಧನೆಯಿಂದ ಅವು ಸತ್ಯವೆಂದು ತೋರ ಬಂದದ್ದು, ಅವು ತಾವೆ ತಮ್ಮಲ್ಲಿರುವ ಸಾರಾಂಶದಿಂದ ದಿವ್ಯ ಗ್ರಂಥವೆಂದು ತೋರಿಸಿ ಕೊಂಡದ್ದು ಆದ ಮೇಲೆ, ನಾವು ಅನುಮಾನ ಮಾಡ ಬಾರದು. ಅವು ಇಲ್ಲದ ಪಕ್ಷಕ್ಕೆ, ದಿವ್ಯ ರಕ್ಷಣಾಕಾರ್ಯ ಎಂಬ ಸರಪಳಿಯಲ್ಲಿ ಮೊದಲನೆ ಕೀಲು ಇಲ್ಲದ ಹಾಗಾಗುತ್ತಿತ್ತಲ್ಲ.

ಯೇಸು ಇದ್ದಂದು ಹಳೆ ಒಡಂಬಡಿಕೆಯನ್ನು ಹೀಗೆ ಭಾಗ ಮಾಡಿದರು: ೧. ನೇಮ (ಹಿಬ್ರಿಯರ ಭಾಷೆಯಲ್ಲಿ ಥೋರಾ=ಉಪದೇಶ) ಮೋಸೆಯ ಐದು ಗ್ರಂಥಗಳು; ೨. ಪ್ರವಾದಿಗಳು (ನೆಫಿಯಿಮ್) ಯೆಹೋಶುವನ, ನ್ಯಾಯಾಧಿಪತಿಗಳ, ಸಮುವೇಲನ, ಅರಸರ, ಎಶಾಯನ, ಎರೆಮಿಾಯನ, ಎಜೇಕಿಯೇಲನ ಗ್ರಂಥಗಳು ಮತ್ತು ದಾನಿಯೇಲನ ಗ್ರಂಥ ಮಾತ್ರ ಬಿಟ್ಟು ಉಳಿದ ೧೨ ಪ್ರವಾದಿಗಳ ಗ್ರಂಥಗಳು; ೩. ಪರಿಶುದ್ಧ ಬರಹಗಳು, (hagiographa) ಕೀರ್ತನೆಗಳು, ಸಾಮತಿಗಳು, ಯೋಬನ ಗ್ರಂಥ, ಸೊಲೊಮೋನನ ಗೀತ, ರೂಥಳ ಗ್ರಂಥ, ಎರೆಮಿಾಯನ ಗೋಳಾಟಗಳು, ಪ್ರಸಂಗಿ, ಎಸ್ತೆರಳ ಗ್ರಂಥ, ದಾನಿಯೇಲನ ಗ್ರಂಥ, ಎಸ್ರನ ಗ್ರಂಥ, ನೆಹೇಮಿಯನ ಗ್ರಂಥ, ದಿನಚರ್ಯಗಳು ಇವು ಪರಿಶುದ್ಧ ಬರಹಗಳು ಅನ್ನಿಸಿಕೊಂಡವು. ಹಿಬ್ರಿಯರ ಭಾಷೆಯಲ್ಲಿ ಬರೆದಿರುವ ಹಳೆ ಒಡಂಬಡಿಕೆಯ ಪುಸ್ತಕದಲ್ಲಿ ಗ್ರಂಥಗಳು ಈ ಕ್ರಮ

ದಿಂದ ಬರುತ್ತವೆ. ಆದರೆ ಈಗಿನ ಹಳೆ ಒಡಂಬಡಿಕೆಯ ಪುಸ್ತಕಗಳಲ್ಲಿ ನಾವು ಮೇಲೆ ವಿವರಿಸಿದಂತೆ, ಮೊದಲು ಮೋಸೆಯ ೫ ಗ್ರಂಥಗಳು, ತರುವಾಯ ಚರಿತ್ರಾಗ್ರಂಥಗಳು, ಆ ಮೇಲೆ ಬೋಧನಾ ಗ್ರಂಥಗಳು, ಕಡೆಗೆ ಪ್ರವಾದನಾ ಗ್ರಂಥಗಳು ಬರುತ್ತವೆ. ಈ ಕ್ರಮವಾಗಲಿ ಆ ಕ್ರಮವಾಗಲಿ ಮೋಸೆಯ ಗ್ರಂಥಗಳು ಯಾವಾಗಲು ಆದಿಯಲ್ಲಿ ಅವೆ.

ಪೂರ್ವದಲ್ಲಿ ಈ ಗ್ರಂಥಗಳ ಒಂದೊಂದಕ್ಕೆ ಅದರದರ ಮೊದಲನೆ ಶಬ್ದವೆ ಅಥವಾ ಮೊದಲಿನ ವಾಕ್ಯದ ಯಾವದೊಂದು ಶಬ್ದವೆ ಹೆಸರು ಆಯಿತು. ಹ್ಯಾಗಂದರೆ ಹಿಬ್ರು ಭಾಷೆಯಲ್ಲಿ ಪ್ರಥಮ ಗ್ರಂಥದ ಮೊದಲನೆ ಶಬ್ದವು ಬೆರೇಶೀತ್ ಎಂಬದು (ಆದಿಯಲ್ಲಿ), ಅದರಿಂದ ಈ ಗ್ರಂಥಕ್ಕೆ ಬೆರೇಶೀತ್ ಎಂಬ ಹೆಸರಾಯಿತು. ಈ ಪ್ರಕಾರವಾಗಿ ಎರಡನೆ ಗ್ರಂಥಕ್ಕೆ ವೆಏಲ್ಲೆ ಶೆಮೊತ್ ಎಂದೂ (ಇವೆ ಹೆಸರುಗಳು), ಮೂರನೆ ಗ್ರಂಥಕ್ಕೆ ವಯಿಕ್ರಾ ಎಂದೂ (ಕರೆದನು), ನಾಲ್ಕನೇದಕ್ಕೆ ಬಮಿದ್ಬರ್ ಎಂದೂ (ಅರಣ್ಯದಲ್ಲಿ), ಐದನೇದಕ್ಕೆ ಎಲ್ಲೆ ಹದ್ದೆಬಾರೀಮ್ ಎಂದೂ (ಈ ಮಾತುಗಳು) ಹೆಸರಾಯಿತು. ತದನಂತರದಲ್ಲಿ ಹಳೆ ಒಡಂಬಡಿಕೆ ಗ್ರೀಕ ಭಾಷಾಂತರವಾದ ಇತ್ತಲಾಗಿ ಐದು ಗ್ರಂಥಗಳ ಸಂಗ್ರಹವು ಪೆಂತಾತ್ಯೆಕ್ (ಪಂಚಕ=ಪಂಚ ಗ್ರಂಥ) ಎಂಬಂತೆ ಅನ್ನಿಸಿ ಕೊಳ್ಳುವಂಥಾದಾಯಿತು. ಇದಲ್ಲದೆ ಒಂದೊಂದು ಗ್ರಂಥಕ್ಕೆ ಅದರದರ ಮುಖ್ಯ ಸಾರಾಂಶ ಸೂಚಿಸುವ ನಾಮ ಬಂತು. ಒಂದನೇದಕ್ಕೆ ಉತ್ಪತ್ತಿ ಎಂದೂ, ಎರಡನೇದಕ್ಕೆ ಹೊರಡೋಣವೆಂದೂ, (ಇಸ್ರಾಯೇಲನವರು ಮಿಜ್ರದಿಂದ ಹೊರಟದ್ದನ್ನು ಹೇಳುತ್ತದೆ); ಮೂರನೇದಕ್ಕೆ ಲೇವಿಕವೆಂದೂ (ಅದರಲ್ಲಿ ವಿಶೇಷವಾಗಿ ಲೇವಿ ಗೋತ್ರದವರಾದ ಯಾಜಕರ ವಿಷಯವಾದ ನೇಮಗಳು ಅವೆ); ನಾಲ್ಕನೇದಕ್ಕೆ ಅಂಕೆಗಳು ಎಂದೂ (ಅದರಲ್ಲಿ ಜನರ ಯಾಜಕರ ಮುಂತಾದವರ ಲೆಖ್ಖಗಳು ಹೇಳಿಯವೆ); ಐದನೇದಕ್ಕೆ ದ್ವಿತಿಯ ನೇಮವೆಂದೂ (ಅದರಲ್ಲಿ ಮೋಸೆ ನೇಮವನ್ನು ಎರಡನೇ ಸರ್ತಿ ಹೇಳಿದ್ದು ಅದೆ) ಅಂದರು.

ದ್ವಿತೀಯ ನೇಮದ ೩೪ ನೇ ಸಂಧಿಯ ಹೊರ್ತು ಮೋಸೆಯು ಈ ೫ ಕೃತಿಗಳ ಗ್ರಂಥಕರ್ತನು ಎಂಬುವದಕ್ಕೆ ಏನೇನೂ ಅನುಮಾನವಿಲ್ಲ.—ಯಾಕಂದರೆ ಐದನೆ ಗ್ರಂಥದ ೩೨ನೆ ಸಂಧಿಯಲ್ಲಿಯ ತನ್ನ ಕಡೆ ಗೀತವನ್ನು ೩೩ನೆ ಸಂಧಿಯಲ್ಲಿಯ ತಾನು ನುಡಿದ ಅಂತ್ಯಾಶೀರ್ವಾದವನ್ನು ಪ್ರವಾದನೆಯನ್ನು ಸುಧಾ ತಾನು ಮುಂದಾಗಿ ಬರೆದಿದ್ದನು ಅಥವಾ ಬರೆಸಿದನು ಎಂಬಂತೆ ಸಿದ್ಧವಾಗೆದೆ. ೩೪ನೆ ಸಂಧಿಯಲ್ಲಿಯ ಅವನ ಮರಣದ ವೃತ್ತಾಂತವನ್ನು ಅವನ ಸ್ಥಳಕ್ಕೆ ಬಂದ ಯೆಹೋಶುವನು ಬರೆದಿದ್ದಾನು. ಮೋಸೆ ಹುಟ್ಟಿದ ಆಚೆ ಆದದ್ದನ್ನು ವರ್ಣಿಸುವ ಪ್ರಥಮ ಪುಸ್ತಕವಾದರೂ ಅವನಿಂದಲೆ ರಚಿತವಾಯಿತೆಂದು ಪುರಾತನರೆಲ್ಲರು ಹೇಳುತ್ತಾ ಬಂದರು. ಮೋಸೆಯ ಈಚೆಯ ಹಳೆ ಒಡಂಬಡಿಕೆಯ ಗ್ರಂಥಕರ್ತರೂ, ಯೇಸುವೂ, ಆತನ ಅಪೊಸ್ತಲರೂ, ಅವನೇ ಐದು ಗ್ರಂಥಗಳನ್ನು ರಚಿಸಿದನು ಎಂದು ಹಿಡಿದು ಮಾತಾಡಿದದರಿಂದ ಆ ಪುರಾತನರ ಸಾಕ್ಷಿಗೆ ಬಲ ಬರುತ್ತದೆ.—೨ನೆ, ೩ನೆ, ೪ನೆ, ೫ನೆ ಗ್ರಂಥಗಳಲ್ಲಿ ಕಂಡದ್ದನ್ನು ಬರೆದನು. ಆದರೆ ೨ ಮೋಸೆ. ೨, ೧೧ನೆ ವಚನದ ಆತ್ತ ಸಂಭವಿಸಿದ್ದನ್ನು ಅವನು ಕಂಡವನಲ್ಲ. ಹೀಗಿರಲಿಕ್ಕೆ ಲೋಕೋತ್ಪತ್ತಿಯಿಂದ ಹಿಡಿದು ತಾನು ಹುಟ್ಟುವ ತನಕ ೨೪೩೩ ವರುಷಗಳಲ್ಲಿ ನಡೆದದ್ದು ಅವನಿಗೆ ಹ್ಯಾಗೆ ಗೊತ್ತಾಯಿತು? ಎರಡು ಮಾರ್ಗಗಳಿಂದ ವರ್ತಮಾನ ಬಂತು. ಒಂದುವರೆ ಸಂಪ್ರದಾಯದಿಂದ ತಿಳಿಯಲಾಯಿತು. ಆದಿ ಮನುಷ್ಯರು ಬಹಳ ದೀರ್ಘಾಯುಷ್ಯದವರಾಗಿದ್ದರು. ಪಾಪದಿಂದ ಇನ್ನು ಅಷ್ಟು ಕೆಟ್ಟು ಬಲಹೀನರಾಗಿದ್ದಿಲ್ಲ. ಸ್ಮೃತಿಶಕ್ತಿ ಅವರಲ್ಲಿ ಇನ್ನು ಕುಂದಿದ್ದಿಲ್ಲ. ಆದ ಕಾರಣ ಸಂಪ್ರದಾಯ ಅವರಲ್ಲಿ ಇನ್ನು ಕೆಟ್ಟಿದ್ದಿಲ್ಲ.—ಒಂದುವರೆ ಬರಹದಿಂದ ತಿಳಿಯುವ ಹಾಗಾಯಿತು. ಹ್ಯಾಗೆಂದರೆ: ಆದಿ ಕಾರ್ಯಗಳನ್ನು ಬಣ್ಣಿಸುವ ಪದಗಳೂ ಗೀತಗಳೂ ಚರಿತ್ರೆಗಳೂ ರಚನೆಯಾಗಿ ಬರೆದಿದ್ದವು. ಯಾಕಂದರೆ ಮೋಸೆಗಿಂತ ಬಹಳ ದಿವಸ ಮುಂಚೆ, ಇಸ್ರಾಯೇಲನವರು ಮಿಜ್ರಕ್ಕೆ ಹೋಗುವ ಮೊದಲು, ಅಕ್ಷರದ ವಿದ್ಯ ರೂಢಿ ಆಗಿತ್ತು ಎಂದು ವಿದ್ವಾಂಸರು ಮಾಡಿದ ಶೋಧನೆಗಳಿಂದ ತೋಚುತ್ತದೆ. ಇದಲ್ಲದೆ ಪೂರ್ವ ವೃತ್ತಾಂತದ ವಿಷಯಕ್ಕೆ ನೆನಪು ಕೊಡುವ ಶಾಸನ ಪೀಠ ಲಿಪಿಕಲ್ಲುಗಳು ಮುಂತಾದವು ಪುರಾತನರ ಚರಿತ್ರೆಯ ತಿಳಿಸಲಿಕ್ಕೆ ಸಹ

ಕಾರಿಯಾದವು. ಮೋಸೆ ಮಿಜ್ರದ ಅರಸನ ಅರಮನೆಯಲ್ಲಿ ಬೆಳದು ಬಾಲಶಿಕ್ಷೆ ವಿದ್ಯಾಭ್ಯಾಸ ಅವನಿಗೆ ಸಂಪೂರ್ಣವಾದ ಕಾರಣ, ಗ್ರಂಥ ರಚಿಸಲಿಕ್ಕೆ ತಕ್ಕಷ್ಟು ಸಾಹಿತ್ಯ ಅವನಿಗೆ ಉಂಟಾಯಿತು. ಆ ಕಾಲದಲ್ಲಿ ಮಿಜ್ರ ದೇಶದಲ್ಲಿ ಮುಖ್ಯವಾಗಿ ನಾನಾ ವಿಧವಾದ ವಿದ್ಯ ನಡೆಯುತ್ತಿತ್ತಲ್ಲ. ಆದರೂ ಇದು ಸಾಲುತ್ತಿದ್ದಿಲ್ಲ. ದೇವರು ಅವನಿಗೆ ದಿವ್ಯ ಗ್ನಾನವನ್ನು ಕೊಟ್ಟು, ಮೇಲೆ ಹೇಳಿದ ಸಾಹಿತ್ಯಗಳಿಂದ ತಿಳಿಯ ಬಂದದ್ದನ್ನು ನೆಟ್ಟಗೆ ಶೋಧಿಸಿ ನೋಡಲಿಕ್ಕೆ ಆಗುವ ಹಾಗೆ ಮಾಡಿದನು. ಭವಿಷ್ಯತ್ಕಾಲದ ಕಡೆಗೆ ದೇವರು ಪ್ರವಾದಿಗಳ ದೃಷ್ಟಿ ಹ್ಯಾಗೆ ತಿರಿಗಿಸಿದನೋ, ಹಾಗೆ ಮೋಸೆಯ ಕಣ್ಣಿಗೆ ಭೂತ ಕಾಲದ್ದು ತೋರಿಸಿದನು.—ಹೀಗಿರಲಿಕ್ಕಾಗಿ ಈ ಪ್ರಥಮ ಗ್ರಂಥವು ಸಹ ಸತ್ಯವಾದದ್ದು, ದೈವಪ್ರೇರಿತವಾದದ್ದು ಎಂದು ನಂಬುವದಕ್ಕೆ ನಮಗೆ ಸಾಕಷ್ಟು ಆಧಾರ ಉಂಟು.

ತನ್ನ ಹಿರಿಯರ ಬಾಯಿಯಿಂದ ಕೇಳಿದ್ದು ಒಂದು, ಲಿಪಿಕಲ್ಲು ಇತ್ಯಾದಿಗಳಿಂದ ತಿಳಕೊಂಡದ್ದೊಂದು, ಬರೆದಿದ್ದ ವಂಶಾನುಚರಿತ್ರೆಗಳಿಂದ ಕಾಣ ಬಂದದ್ದು ಒಂದು, ತಾನು ಅನುಭವಿಸಿ ಆಗಿನ ಪೂರ್ತಿಗೆ ಬರೆದಿಟ್ಟದ್ದು ಒಂದು, ಈ ನಾಲ್ಕು ತರದ ಸಾಹಿತ್ಯವನ್ನು ಶೋಧಿಸಿ ಮೋಸೆ ಈ ೫ ಗ್ರಂಥಗಳನ್ನು ಈಗ ಇದ್ದಂತೆ ರಚಿಸಿದನು. ಅವನು ಇಸ್ರಾಯೇಲನವರ ಸಂಗಾತ ಅರಣ್ಯದಲ್ಲಿ ಸಂಚಾರ ಮಾಡುತ್ತಿರುವಾಗ, ಈ ದೊಡ್ಡ ಕೆಲಸಕ್ಕೆ ಒಳ್ಳೇ ಅವಕಾಶವಾಯಿತು. ತಾನು ಬರೆದಿಟ್ಟದ್ದು ಒಂದು ಸಾಹಿತ್ಯವೆಂದು ಹೇಳಿದೆವಲ್ಲ. ಆದದ್ದನ್ನು ಬರೆದಿಡ ಬೇಕೆಂದು ಕರ್ತನು ತಾನೆ ಅಪ್ಪಣೆ ಕೊಟ್ಟಿದ್ದನು (೨ ಮೋಸೆ. ೧೭, ೧೪). ಇದಲ್ಲದೆ ೨ ಮೋಸೆ. ೨೪, ೭ನೆ ವಚನದ ಪ್ರಕಾರ ಸಭೆಗೆ ಒಡಂಬಡಿಕೆಯ ಗ್ರಂಥವನ್ನು ಓದಿ ಹೇಳಿದನು. ಈ ಒಡಂಬಡಿಕೆಯ ಪುಸ್ತಕವನ್ನು ತರುವಾಯ ದಶಾಜ್ಞೆಗಳ ಸಂಗಡ ಸಾಕ್ಷಿಪೆಟ್ಟಿಗೆಯಲ್ಲಿ ಇಡೋಣವಾಯಿತು.—ಹಾಗಾದರೆ ಈ ೫ ಗ್ರಂಥಗಳು ರಚನೆಯಾಗಿ ೩೩೩೦ ವರುಷ ಆಗಿ ಹೋದವು. ಇವುಗಳಂತೆ ಪೃಥ್ವಿಯ ಮೇಲೆ ಪೂರ್ವ ಗ್ರಂಥ ಯಾವದೂ ಇಲ್ಲ. ನಾಲ್ಕು ವೇದಗಳಾದರೂ ಆವಾಗ ಇನ್ನು ಹುಟ್ಟಿದ್ದಿಲ್ಲ.

ಈ ೫ ಗ್ರಂಥಗಳಲ್ಲಿ ಮೊದಲನೇದು ಮತ್ತು ಎರಡನೇದು ಸೃಷ್ಟಿಯಿಂದ ಹಿಡಿದು ದೇವರು ಸೀನಾಯಿ ಪರ್ವತದ ಮೇಲೆ ನೇಮ ಕೊಟ್ಟಂದಿನ ತನಕ ಆದದ್ದನ್ನು ಹೇಳುತ್ತವೆ. ಮೂರನೆ ಗ್ರಂಥ ಮತ್ತು ನಾಲ್ಕನೆ ಗ್ರಂಥದ ಮೊದಲನೆ ೧೦ ಸಂಧಿಗಳಲ್ಲಿ ಸಮಸ್ತ ನೇಮ ಕೊಟ್ಟ ವಿವರವದೆ. ನಾಲ್ಕನೆ ಗ್ರಂಥದ ಪ್ರಥಮ ಸಂಧಿಯಲ್ಲಿ ಮಾತ್ರ ಇಸ್ರಾಯೇಲನವರ ಲೆಖ್ಖ ಹೇಳಿ ಅದೆ. ೪ ಮೋಸೆ. ೭—೧೦. ಬರೆದದ್ದು ೨ ಮೋಸೆ. ೪೦ನೆ ಸಂಧಿಯ ಮೇಲೆ ಅನುಕ್ರಮವಾಗಿ ಬರುವದು. ಇಲ್ಲಿಂದ ಮುಂದೆ ನಡೆದ ವೃತ್ತಾಂತ ೪ ಮೋಸೆ. ೧೧—೧೯ನೆ ಸಂಧಿಗಳಲ್ಲಿ ವಿವರಿಸಿ ಅದೆ. ಆದರೆ ಅವಿಧೇಯತ್ವದ ಶಿಕ್ಷೆಗೆ ದೇವರು ನೇಮಿಸಿದ ೩೮ ವರುಷದ ಅರಣ್ಯಸಂಚಾರದ ವಿಷಯಕ್ಕೆ ಬಹಳ ಮಾತು ಇಲ್ಲ. ೪ ಮೋಸೆ. ೨೦—೩೬. ಹೇಳಿದ್ದು ಆ ಸಂಚಾರದ ಕಡೆ ವರುಷದಲ್ಲಿ ನಡೆಯಿತು. ಸೀನಾಯಿ ಪರ್ವತದ ಹತ್ತರ ಆದ ಒಡಂಬಡಿಕೆಯ ನೇಮವನ್ನು ಇಷ್ಟರೊಳಗೆ ಹುಟ್ಟಿದ ಹೊಸ ತಲೆಗೆ ಮೋಸೆ ತಿಳಿಸಿ ಅನೇಕ ವ್ಯಾಖ್ಯಾನಗಳಿಂದ ಅದನ್ನು ವಿವರಿಸಿ ಬೋಧಿಸಿದ್ದನ್ನು ೫ನೆ ಗ್ರಂಥ ಹೇಳುತ್ತದೆ. ಇದು ನಿಶ್ಚಯವಾಗಿ ಆ ಸಂಚಾರದ ಕಡೆ ವರ್ಷದಲ್ಲಿ ಆಯಿತು.

ಮೋಸೆಯ ಪ್ರಥಮ ಗ್ರಂಥ

ಮೊದಲನೆ ಖಂಡ

ಆದಿ ಚರಿತ್ರೆಯು ಜಲಪ್ರಳಯದ ತನಕ ೧೬೫೬ ವರ್ಷ

ಸಂಧಿ ೧—೮.

ಕ್ರಿಸ್ತನ ಅತ್ತಣ ೪೦೦೦ನೆ ವರ್ಷದಿಂದ ೨೩೪೪ನೆ ವರ್ಷದ ತನಕ

A) ದೇವರು ಭೂಪರಲೋಕ ಸೃಷ್ಟಿಸಿದ್ದು. ಸಂಧಿ. ೧—೨.

1) ಆದಿ ಸೃಷ್ಟಿ. ೧, ೧. ೨.

೧. ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಸೃಷ್ಟಿಸಿದನು.

೨. ಭೂಮಿಯು ಹಾಳಾಗಿಯೂ ಬರಿದಾಗಿಯೂ ಇತ್ತು; ಅಗಾಧದ ಮೇಲೆ ಕತ್ತಲು ಇತ್ತು.

೧ ವ. ಇದು ದೇವವಾಕ್ಯಕ್ಕೆ ತಕ್ಕ ಆರಂಭ. ನಾವು ನೋಡುವ ಆಶ್ಚರ್ಯ ಪಡುವ ಈ ಸೃಷ್ಟಿ ಎಲ್ಲಿಂದ ಬಂತೆಂಬ ಗುಟ್ಟು ಇಲ್ಲಿ ನಮಗೆ ಸಂಪೂರ್ಣವಾಗಿ ಒಡೆದು ಹೇಳಿ ಅದೆ. ವೇದಗಳಿಗಿಂತಲೂ ಪುರಾಣಗಳಿಗಿಂತಲೂ ದೂರ ವಿಚಾರ ಮಾಡುವ ದರ್ಶನಗಳಾದರೂ ಈ ಗುಟ್ಟನ್ನು ಒಡೆಯಲಾರವು. ಹ್ಯಾಗಂದರೆ ಮೂಲಪ್ರಕೃತಿಯೂ ಪುರುಷನೂ ಈ ಎರಡು ಅನಾದಿಯಿಂದ ಇದ್ದಂಥಾವು; ಒಂದಕ್ಕೊಂದು ವಿರುದ್ಧವಾದಂಥಾವು. ಈ ಪ್ರಕೃತಿಗೂ ಪುರುಷನಿಗೂ ಯೋಗವಾದದರಿಂದ ದೃಶ್ಯಲೋಕ ಉತ್ಪತ್ತಿ ಆಯಿತು. ಆ ಯೋಗವೇ ಪಾಪ. ಆದರೆ ಆ ಯೋಗ ಪ್ರತಿ ಸಂಚರದಲ್ಲಿ ಲಯವಾಗುತ್ತಲೆ, ಈ ದೃಶ್ಯವಾದ ಲೋಕ ಕಾಣದೆ ಹೋಗುತ್ತದೆ ಅಂತ ಸಾಂಖ್ಯದರ್ಶನ ಹೇಳುತ್ತದೆ. ಹೀಗಾದರೆ ಈ ಕಾಣುವ ಲೋಕ ಪಾಪದಿಂದ ಹುಟ್ಟಿದ ಹಾಗಾಯಿತು.—ನ್ಯಾಯದರ್ಶನ ಹೇಳುವದೇನಂದರೆ: ಪರಮಾಣುರೂಪವಾಗಿದ್ದದ್ದು ನಿತ್ಯ, ಕಾರ್ಯರೂಪವಾಗಿದ್ದದ್ದು ಅನಿತ್ಯ. ಪರಮಾತ್ಮನು ಪರಮಾಣುರೂಪವಾಗಿದ್ದದ್ದನ್ನು ರೂಪಿಸಿದನು. ಪರಮಾತ್ಮನೂ ಜೀವಾತ್ಮನೂ ಈ ಎರಡು ನಿತ್ಯ. ಪಂಚಾಲರು ಭಂಗಾರ ಬೆಳ್ಳಿ ಕಬ್ಬಿಣ ಕಲ್ಲು ಮಣ್ಣು ಎಂಬೀ ಸಾಹಿತ್ಯಗಳಿಂದ ಬೇರೆ ಬೇರೆ ವಸ್ತುಗಳನ್ನು ಮಾಡುವಂತೆ ದೇವರು ಈ ದರ್ಶನದ ಪ್ರಕಾರ ಲೋಕ ನಿರ್ಮಿಸಿದ ಹಾಗಾಯಿತು.—ಈ ಎರಡು ದರ್ಶನಗಳು ದ್ವೈತ ಮಾರ್ಗ ಹೇಳುತ್ತವೆ.—ಅದ್ವೈತ ಹೇಳುವ ವೇದಾಂತವನ್ನು ಈ ವಿಷಯಕ್ಕೆ ವಿಚಾರಿಸಿ ನೋಡಿದರೆ, ಲೋಕ ಮಾಯಾಕೃತ, ಆ ಮಾಯೆ ಎಂದಿಗೂ ಪರಮಾತ್ಮನಲ್ಲಿ ಇದ್ದ ಮೂಲ, ಲೋಕವೂ ನಿತ್ಯ. ಆದರೆ ಅದು ನಿಜವಲ್ಲ, ಕಂಡ

ಕನಸಿನ ಹಾಗೆ ಅದೆ. ಈ ಮೇರೆಗೆ ಈ ದೇಶದ ಶಾಸ್ತ್ರಗಳಲ್ಲಿ ಲೋಕೋತ್ಪತ್ತಿಯ ಪ್ರಮೇಯ ಹೊರಟರೂ, ಲೋಕ ನಿತ್ಯವೆಂದು, ಬೋಧಿಸಿದ ಮೇಲೆ, ಅದು ಹುಟ್ಟಿದ ಸಾಹಿತ್ಯ ಎಲ್ಲಿಂದ ಬಂತೆಂದು ಏನೂ ಹೇಳಿದ ಹಾಗೆ ಆಗಲಿಲ್ಲ. ಒಂದು ಚೆಲೋ ಮನೆ ನೋಡಿ ಇದನ್ನು ಕಟ್ಟಿದವರು ಯಾರು ಎಂದು ಕೇಳಿದವನಿಗೆ ಅದು ಯಾವಾಗಲೂ ಹಾಗಿತ್ತು ಅಂದ ಹಾಗೆ ಸರಿ. ಪುರಾಣದ ಮಾತು ಅದಂತು ಈ ಸಂಗತಿಯಲ್ಲಿ ಕೇವಲ ವಿಪರೀತ.

ಆದಿಯಲ್ಲಿ) ಆದಿಯಿಂದ ಹಿಡಿದು ಇಂದಿನ ತನಕ ಎಷ್ಟು ಕಾಲವಾಯಿತೆಂದು ಮನುಷ್ಯರು ನಿರ್ಣಯಿಸಲಾರರು. ಆದರೂ ಲೋಕ ಅಂದರೆ ಅದು ಹುಟ್ಟಿದ ಸಾಹಿತ್ಯ ಅನಾದಿ ಅಲ್ಲ ಎಂದು ಆದಿಯಲ್ಲಿ ಎಂಬ ಪದದಿಂದ ನೋಡುತ್ತೇವೆ. ಸೃಷ್ಟಿಕರ್ತನಾದ ದೇವರೇ ಮಾತ್ರ ಅನಾದಿ. ಲೋಕಕ್ಕೆ ಆದ್ಯಂತ್ಯ ಉಂಟು. ಕೀರ್ತ. ೧೦೨, ೨೫—೨೮. ಮತ್ಥ. ೨೪, ೩೫. ೨ ಪೇತ್ರ. ೩, ೧೦. ದೇವರು) ಹಿಬ್ರು ಭಾಷೆಯಲ್ಲಿ ದೇವರಿಗೆ ಎಲೋಹೀಂ ಎಂಬ ನಾಮ ಉಂಟು. ಅದು (ದೇವನು, ದೇವರು ಎಂಬಂತೆ) ಎಲೋಹ ಎಂಬ ಶಬ್ದದ ಬಹುವಚನವಾಗಿ ಆತನು ಬಲವುಳ್ಳಾತ, ಸರ್ವ ಬಲಗಳ ಸಂಗ್ರಹ ಎಂದು ಸೂಚಿಸುವದು. ಈ ಬಹುವಚನವನ್ನು ಕ್ರಿಯಾಪದದ ಏಕವಚನದ ಸಂಗಡ ಅನ್ವಯಿಸುವರು; (ದೇವರು ಮಾಡಿದೆನು ಎಂಬಂತೆ). ಆತನು ಒಬ್ಬನೇ. ಆದರೆ ನಾನಾ ವಿಧವಾಗಿ ಪ್ರಕಟವಾಗುವ ಸರ್ವ ಬಲಸಂಗ್ರಹವಾದ ಆತನ ಏಕತ್ವವನ್ನು ಗ್ರಹಿಸಲಾರದಕ್ಕೆ, ಅಜ್ಞಾನಕ್ಕೆ ಒಳಗಾದ ಮನುಷ್ಯರು ಅನೇಕ ದೇವರುಗಳನ್ನು ಕಲ್ಪಿಸಿ ಕೊಂಡರು. ದೇವರೆ ಎಲ್ಲನ್ನು ಸೃಷ್ಟಿಸಿದ್ದರಿಂದ, ಆತನ ಸೃಷ್ಟಿಗಳಿಗೆ ದೇವರೆಂದು ಆರಾಧಿಸುವದು ಕೇವಲ ಅನುಚಿತ. ಹ್ಯಾಗಂದರೆ ಅರಸನ ಸೇವಕನಿಗೆ ಅರಸೆಂದು ನಮಸ್ಕಾರ ಮಾಡಿದ ಹಾಗಾಯಿತು; ಅಥವಾ ನೇದ ಅರಿವಿಗೆ ನೇಕಾರನೆಂದು ಮನ್ನಿಸಿದ ಹಾಗಾಯಿತು. ಆಕಾಶವನ್ನೂ ಭೂಮಿಯನ್ನೂ) ಈ ನಾಮಪದಗಳನ್ನು ಹಿಬ್ರು ಭಾಷೆಯಲ್ಲಿ ಹೇಳುವ ಶಬ್ದಗಳಿಗೆ ಮೇಲಿನದು, ಊರ್ಧ್ವಲೋಕ, ಕೆಳಗಿನದು, ಅಧೋಲೋಕ ಎಂದು ಮೂಲಾಭಿಪ್ರಾಯ ಉಂಟು. ಆಕಾಶವನ್ನು ಎಂಬ ಪದವು ಹಿಬ್ರು ಭಾಷೆಯಲ್ಲಿ ಆಕಾಶಗಳನ್ನು ಎಂದು ಬಹುವಚನದಲ್ಲಿ ಬಂದದೆ. ಯಾಕಂದರೆ ಆಕಾಶ ಎಂಬ ಶಬ್ದದಲ್ಲಿ ಮೊದಲು ನಮಗೆ ಮೇಲೆ ಕಾಣುವ ಮೋಡ ಸೂರ್ಯ ಚಂದ್ರ ನಕ್ಷತ್ರಗಳು ತುಂಬಿರುವಂಥಾ ಆಕಾಶವು, ಆ ಮೇಲೆ ದೂತರೂ, ತೀರಿದ ದೇವಭಕ್ತರೂ ಸೇರಿರುವಂಥಾ ದೇವರು ವಾಸ ಮಾಡುವಂಥಾ ಪರಲೋಕಗಳು ಬಂದವೆ. ೨ ಕೊರಿ. ೧೨, ೨—೪. ಎಫೆಸ. ೪, ೧೦. ಹೀಗಾಗಿ ಈ ಎರಡು ಶಬ್ದಗಳು ಪಂಚಭೂತಗಳಲ್ಲಿ ಎರಡು ಮಾತ್ರವಲ್ಲ, ಅದೃಶ್ಯವಾದ ಮತ್ತು ದೃಶ್ಯವಾದ ಸರ್ವ ಲೋಕವನ್ನು, ದೇವರು ಸೃಷ್ಟಿಸಿದ್ದನ್ನೆಲ್ಲಾ ಸೂಚಿಸುವವು. ಈ ಆದಿ ಸೃಷ್ಟಿ ಆಗುವಾಗ್ಯೆ, ದೇವದೂತರು ನಿರ್ಮಾಣವಾದರು ಎಂಬ ಹಾಗೆ ತೋರುತ್ತದೆ. ಯೋಬ. ೩೮, ೭. ಯಾಕಂದರೆ ಮನುಷ್ಯರು ಪಾಪದಲ್ಲಿ (೧ ಮೋಸೆ. ೩.) ಬಿದ್ದಾಗ್ಯೆ, ಅವರೊಳಗೆ ಒಂದು ಭಾಗದವರು ಒಬ್ಬ ಪ್ರಧಾನದೂತನ ಸಂಗಾತ ದೇವರಿಗೆ ತಿರಿಗಿ ಬಿದ್ದು ಆಗಲೇ ದೆವ್ವಗಳಾಗಿದ್ದರು.—ಸೃಷ್ಟಿಸಿದನು) ಆಗಲೇ ದೃಶ್ಯವಾದ ಸಾಹಿತ್ಯ ಇನ್ನು ಇದ್ದಿಲ್ಲ. ಅದೂ ಲೋಕವೂ (ಇಬ್ರಿ. ೧೧, ೩.) ಈಗ ನಿರ್ಮಾಣವಾದವು. ದೇವರು ಲೋಕಸೃಷ್ಟಿಕರ್ತನು, ಲೋಕವನ್ನು ರೂಪಿಸಿದ ಸೋಪಸ್ಕರ ಬೇಕಾಗಿರುವ ಶಿಲ್ಪಕಾರನಲ್ಲ. ದೃಶ್ಯವಾದ ಸಾಹಿತ್ಯವು ಸೃಷ್ಟಿಯಾಗಿ ಕಾಲಕ್ಕೆ ಒಳಗಾಯಿತು. ಸೃಷ್ಟಿಕರ್ತನು ಮಾತ್ರ ಜನನರಹಿತನು, ಸ್ವಯಂಭೂ, ಕಾಲಾತೀತನು. ಆದರೆ ದೇವರು ತನ್ನ ಸಂಗಡ ಅನಾದಿಯಿಂದ ಏಕವಾಗಿದ್ದ ಮಗನೆನಿಸುವ ತನ್ನ ನಿತ್ಯ ವಾಕ್ಯದಿಂದ ವಿಶ್ವವನ್ನು ಸೃಷ್ಟಿಸಿದನು. (ಯೋಹ. ೧, ೧—೩). ಹೀಗಾದ ಮೇಲೆ, ಲೋಕ ಸ್ವಯಂಕೃತವಲ್ಲ, ದೇವರಲ್ಲಿ, ಮಾಯಾಕೃತವಲ್ಲ, ದೇವರ ಅಂಶವಲ್ಲ.

೨ ವ. ದೇವರು (ನೋ. ೧ನೆ ವಚನ) ಆಕಾಶವನ್ನೂ ಭೂಮಿಯನ್ನೂ ಸೃಷ್ಟಿಸಿ ಹೀಗೆ ಅವುಗಳ ಮೂಲಸಾಹಿತ್ಯ ಉಂಟು ಮಾಡಿ ಹಲವು ಕಾಲ ಹೋದ ತರುವಾಯ, ೨ನೆ ಮುಂತಾದ ವಚನಗಳಲ್ಲಿ ಹೇಳಿದ್ದು ಆಯಿತು.

ಭೂಮಿಯೂ) ಆಕಾಶದ ಮೇಲೆ (ಪರಲೋಕ) ಇನ್ನು ಮುಂದೆ ಬಹಳ ಮಾತು ಇಲ್ಲ. ಈ ವಚನದಿಂದ ದೇವರು ನಮ್ಮ ದೃಷ್ಟಿಯನ್ನು ವಿಶೇಷವಾಗಿ ಭೂಮಿಯ ಕಡಿಗೆ ತಿರಿಗಿಸಿ ಅದು ಮೆಲ್ಲ ಮೆಲ್ಲಗೆ ಮನುಷ್ಯರಿಗೆ ತಕ್ಕ ವಾಸಸ್ಥಲವಾದದ್ದನ್ನು ನಮಗೆ ತೋರಿಸುತ್ತಾನೆ. ಯಾಕಂದರೆ ಈ ಭೂಮಿಯೇ ದಿವ್ಯ ರಕ್ಷಣಾಕಾರ್ಯಗಳು ನಡೆದ ಕ್ಷೇತ್ರ.

ಹಾಳು ಬೀಳು ಆಗಿತ್ತು) ಈ ಮಾತುಗಳನ್ನು ಎರಡು ಪ್ರಕಾರ ತಿಳಿಯ ಬಹುದು: ೧.) ಬೀಳ ಹೊಲದಂತೆ ಇತ್ತು, ಇನ್ನು ಆಕಾರಕ್ಕೆ ಬಂದಿದ್ದಿಲ್ಲ. ದೇವರು ಬೆಳಕು ಮೊದಲಾದದ್ದನ್ನು ಸೃಷ್ಟಿಸಿ ಈ ಭೂಮಿ ಎಂಬ ಬೀಳ ಹೊಲ ಆಕಾರ ಮಾಡಿದ ಹಾಗಾಯಿತು. ೨.) ದೇವರು ಆದಿಯಲ್ಲಿ ಭೂಮಿಯನ್ನು ಸಂಪೂರ್ಣವಾಗಿ ನೆಟ್ಟಗಾಗಿ ಸೃಷ್ಟಿಸಿದ್ದನು. ಆದರೆ ಮನುಷ್ಯರ ಪಾಪದಿಂದ ಭೂಲೋಕವು ಶಾಪಕ್ಕೊಳಗಾದಂತೆ, ದೇವರ ಮೇಲೆ ದ್ರೋಹ ಮಾಡಿದ ಪಿಶಾಚನಿಂದಲೂ ಅವನನ್ನು ಕೂಡಿ ಕೊಂಡ ಕೆಟ್ಟ ದೂತರಿಂದಲೂ ಅದು ಹಾಳಾಯಿತು. ಯಾಕಂದರೆ ಅದು ಆ ದೂತರಿಗೆ ಅಧೀನವಾಗಿತ್ತು. ಲೂಕ. ೪, ೫—೬. ೨ಕೊರಿ. ೪, ೪. ಎಫೆಸ. ೨, ೨. ೬, ೧೨. ಅಗಾಧದ ಮೇಲೆ) ನೆಲೆ ಇಲ್ಲದಷ್ಟು ಉದ್ದವಾದ ನೀರು ಭೂಮಿಯನ್ನು ಸುತ್ತಮುತ್ತಲು ಮುಚ್ಚಿತು. ೨ಪೇತ್ರ. ೩, ೫. ಅದು ನೀರಲ್ಲಿ ಇತ್ತು. ನಮ್ಮ ಭೂಮಿಯನ್ನು ರೂಪಿಸಲಿಕ್ಕೆ ಮುಖ್ಯವಾಗಿ ಬೆಂಕೆಯೂ ನೀರೂ ಈ ಎರಡು ಸಾಹಿತ್ಯಗಳಾದವು. ನಮ್ಮ ದೇಹಕ್ಕೆ ಎಲುವುಗಳು ಹ್ಯಾಗೋ, ಹಾಗೆ ಕಲ್ಲುಗಳು ಭೂಮಿಗೆ ಆಧಾರವಾಗಿದ್ದಾವೆ. ಕೆಲವು ಕಲ್ಲುಗಳು ಒಡಬಾನಲದಿಂದಲೂ ಕೆಲವು ಕಲ್ಲುಗಳು ನೀರಿನಿಂದಲೂ ಬೆಂಕೆಯಿಂದಲೂ ಹುಟ್ಟಿದವು. ಪೂರ್ವದಲ್ಲಿ ನೀರು ಭೂಮಿಯ ನೆಲ ಮುಚ್ಚಿತ್ತೆಂದು ಇನ್ನಾದರೂ ಕಾಣುತ್ತದೆ.

ಚಲಿಸುತ್ತಿತ್ತು) ದೇವರ ಆತ್ಮವು ವಿಶ್ವವನ್ನು ವ್ಯಾಪಿಸಿ ಎಲ್ಲಕ್ಕೆ ಜೀವ ಕೊಡುವ ಬಲವಾಗೆದೆ. ಪಕ್ಷಿ ತನ್ನ ಮರಿಗಳನ್ನು ರೆಕ್ಕೆಗಳಲ್ಲಿ ಹುದಿಗಿಸಿಟ್ಟು ಬೆಚ್ಚಗೆ ಮಾಡಿ ಬದುಕಿಸುವಂತೆ, ಅಥವಾ ತತ್ತಿಯ ಮೇಲೆ ಪಕ್ಷಿ ಕಾವಿಗೆ ಕೂತು ಮರಿ ಮಾಡುವಂತೆ, ಆತನು ನೀರಿನ ಮೇಲೆ ಚಲಿಸಿ ಅದನ್ನು ಜೀವಭರಿತ ಮಾಡಿದನು. ಬರೆ ನೀರಿನಿಂದ ಅಥವಾ ಭೂಮಿಯಿಂದ ಏನೂ ಉತ್ಪನ್ನವಾಗುತ್ತಿದ್ದಿಲ್ಲ. ದೇವರ ಆತ್ಮದಿಂದ ಸೃಷ್ಟಿಗೆ ಚೈತನ್ಯ ಬಂತು. ಈ ದಿವ್ಯ ಬಲದ ಮುಖಾಂತರ ಭೂಮಿಯಿಂದ ಸಸ್ಯಾದಿಗಳು ಬೆಳೆಯುವವು. ಪ್ರಾಣಿಗಳು ಬದುಕುವವು. ವಾಕ್ಯದ ಮುಖದಿಂದ ದೇವರು ಸೃಷ್ಟಿಸುವನು. ಸೃಷ್ಟಿಸಿದ್ದನ್ನು ಆತ್ಮನ ಮುಖಾಂತರ ಬದುಕಿಸಿ ಸಲಹುವನು.

2) ದೇವರು ಆರು ದಿನಗಳಲ್ಲಿ ಮನುಷ್ಯರಿಗಾಗಿ ಭೂಮಿಯನ್ನು ವಾಸಸ್ಥಲವನ್ನು ಮಾಡಿದ್ದು, ಮನುಷ್ಯರನ್ನು ಸೃಷ್ಟಿಸಿದ್ದು. ೧, ೩—೩೧.

a) ೧ನೆ ದಿನ—ದೇವರು ಬೆಳಕನ್ನು ಸೃಷ್ಟಿಸಿದ್ದು. ೩ —೫.

೩ ವ. ಆಗ=ಆತ್ಮ ನೀರಿನ ಮೇಲೆ ಚಲಿಸುತ್ತಿರುವಾಗ.—ದೇವರು ಲೋಕವನ್ನು ಮಗನಿಂದ ಪರಿಶುದ್ಧಾತ್ಮನಲ್ಲಿ ಸೃಷ್ಟಿಸಿದನು. ಬೆಳಕು) ಇದು ಎಲ್ಲಾ ಪದಾರ್ಥಗಳಲ್ಲಿ ಸೂಕ್ಷ್ಮವಾದಂಥಾದು, ಆತ್ಮಕ್ಕೆ ಸ್ವಲ್ಪ ಸಂಬಂಧವಾದಂಥಾದು; ಇದು ಭಾಸ, ಒಂದು ದ್ರವ್ಯ, (ತೇಜೋದ್ರವ್ಯ); ಇನ್ನು ಸೂರ್ಯನ ಬೆಳಕಲ್ಲ (ವ.೧೪). ಈ ತೇಜೋದ್ರವ್ಯ ವಿಶ್ವದಲ್ಲಿ ವ್ಯಾಪಿಸಿ ಅದೆ; ಆದರೆ ಸೂರ್ಯ ನಕ್ಷತ್ರಗಳಲ್ಲಿ ವಿಶೇಷವಾಗಿ ಅದು ಒಟ್ಟುಗೂಡಿ ನೆಲೆಗೊಂಡದೆ. ಜ್ಯೋತಿಷ್ಯವಿದ್ಯದಿಂದ ಈಗ ತಿಳಿಯ ಬಂದದ್ದೇನಂದರೆ: ಸೂರ್ಯನು ತನ್ನೊಳಗೆ ಭಾಸವಿಲ್ಲದ ಮಂಡಲ. ಅದೂ ಮಿಕ್ಕಾದ ಸ್ಥಿರ ನಕ್ಷತ್ರಗಳೂ ಈ ಆದಿ ತೇಜಸ್ಸಿನಿಂದ ಹಿಂದುಗಡೆ ಉತ್ಪತ್ತಿಯಾದವು. ಸೂರ್ಯವು ಒಳಗೆ ಕರಗೆ ಅದೆ. ಸೂರ್ಯಮಂಡಲದೊಳಗಣ ತಿರುಳು ಗಟ್ಟಿ. ಹೊರಗೆ ಅದರ ಸುತ್ತಮುತ್ತಲು ದೊಡ್ಡ ಭಾಸವುಳ್ಳ ಚಲಿತವಾದ ಒಂದು ಪರಿವೇಷಣ ಉಂಟು. ಅನ್ನಲು) ನಾವು ನುಡಿದರೆ ಬರೆ ಒಂದು ಶಬ್ದ, ವಾಕ್ಯ ಆಯಿತು; ದೇವರು ನುಡಿದರೆ, ಒಂದು ವಸ್ತುವಾಯಿತು. ಯಾಕಂದರೆ ಆತನು ಸರ್ವ ಬಲವುಳ್ಳಾತ. ಅಗೋಚರವಾದ ಮನಸ್ಸು ಮನುಷ್ಯರ ನುಡಿಯಿಂದ ಶಬ್ದವಾಕ್ಯವಾಗಿ ಆಕಾರಕ್ಕೆ

ಬಂದಲ್ಲಿ, ಗೋಚರವಾಯಿತು ಹ್ಯಾಗೋ, ಹಾಗೆ ಅದೃಶ್ಯವಾದ ದೇವರು ತನ್ನ ನಿತ್ಯವಾಕ್ಯದಿಂದ ಲೋಕವನ್ನು ಉಂಟು ಮಾಡಿ ಶಕ್ತಿಯುಳ್ಳ ತನ್ನ ಪ್ರೀತಿಯ ಚಿತ್ರವನ್ನು ಪ್ರಕಟ ಮಾಡಿದನು. ಈ ಸೃಷ್ಟಿಯು ದೇವರ ಮಹಿಮೆಯುಳ್ಳ ಭಾವವನ್ನು ಹೇಳುವ ಒಂದು ಮಹಾ ಗ್ರಂಥ. ದೇವರು ಮೊದಲು ಉಂಟು ಮಾಡಿದ ಆದಿ ಬಲಸಾಹಿತ್ಯಗಳು ಅಕ್ಷರಗಳೆ, ಅವುಗಳಿಂದ ಹುಟ್ಟಿದ ವಸ್ತುಗಳು ಶಬ್ದಗಳೆ, ವಸ್ತುಗಳ ಸಂಗ್ರಹದಿಂದ ಆದ ಲೋಕಗಳೆ ವಾಕ್ಯಗಳು. ಇದನ್ನು ಬರೆಸಿದಾತ ತಂದೆಯಾದ ದೇವರೆ, ಬರೆದಾತ ಆತನ ನಿತ್ಯವಾಕ್ಯವಾದ ಯೇಸು ಕ್ರಿಸ್ತನೆ. (ಯೋಹ. ೧, ೧—೩). ಈ ಮಹಾ ಗ್ರಂಥದ ಅಭಿಪ್ರಾಯವನ್ನು ನಮಗೆ ತಿಳಿಸಿ ಅದರ ಮುಖದಿಂದ ನಮ್ಮನ್ನು ಮಾತಾಡಿಸುವಾತ ಪರಿಶುದ್ಧಾತ್ಮನೆ.

೪ ವ. ದೇವರು ಅದು ಒಳ್ಳೇದೆಂದು ಆ ಬೆಳಕನ್ನು ನೋಡಿದನು. ಈ ವಾಕ್ಯದ ವಿಷಯ ನೋಡು ೩೧ ವ. ದೇವರು ಪ್ರೀತಿಯೇ. ತನ್ನ ಭಾವ ಪ್ರಕಟ ಮಾಡಿ ಕೊಟ್ಟು ಅದರಲ್ಲಿ ತನ್ನ ಪರಿಶುದ್ಧ ಪ್ರೀತಿ ತುಂಬಿಡಲಿಕ್ಕೆ ಲೋಕವನ್ನು ಸೃಷ್ಟಿಸಿದನು. ಸೃಷ್ಟಿ ಆದ ಬಳಿಕ, ಕೆಲಸ ಮಾಡಿ ದಣಕೊಂಡು ಬೇಸತ್ತವನಂತೆ, ಅದರ ಗೊಡವೆ ಬಿಡಲಿಲ್ಲ. ಲೋಕ ಒತ್ತಟ್ಟಿಗೆ, ದೇವರು ಒತ್ತಟ್ಟಿಗೆ ಹೀಗೆಂದಲ್ಲ; ಅದು ಆತನ ಪ್ರೇಮಾಸ್ಪದವೆಂತ ತಿಳಿಯ ಬೇಕು. ಬೇರೆ ಬೇರೆ ಮಾಡಿದನು) ದೇವರು ಸೃಷ್ಟಿಸಿದ ಆದಿ ಸಾಹಿತ್ಯಗಳಲ್ಲಿ ಕತ್ತಲೆ ಮೊದಲು ಇತ್ತು. ಅದು ಒಂದು ಗುಣ, ಒಂದು ಪದಾರ್ಥ. ಕತ್ತಲೆಯೊಳಗಿಂದ (೨ ಕೊರಿ. ೪, ೬). ದೇವರು ಬೆಳಕನ್ನು ಪ್ರಕಾಶಿಸ ಹೇಳಿದನು. ಆ ಮೇಲೆ ಆತನು ಇದಕ್ಕೂ ಅದಕ್ಕೂ ನಡುವಿನಲ್ಲಿ ಒಂದು ಮೇರೆ ಇಟ್ಟು ಆದಿ ಭಾಸದ ಸಮೂಹ ಒಂದು ಜಾಗದಲ್ಲಿ ಅನಕ ಕೂಡಿರುವಂತೆ ಮಾಡಿದನು.

೫ ವ. ಮತ್ತು ದೇವರು ಆ ಬೆಳಕಿಗೆ ಹಗಲೆಂದು ಕರೆದನು. ಆ ಕತ್ತಲೆಗೆ ರಾತ್ರಿ ಎಂದು ಕರೆದನು. ಹೀಗೆ ಸಾಯಂಕಾಲವಾಯಿತು, ಮತ್ತು ಪ್ರಾತಃಕಾಲವಾಯಿತು, ಒಂದು ದಿವಸ. ಸೂರ್ಯ ಇನ್ನು ಇರಲಿಲ್ಲದ ಕಾರಣ, ರಾತ್ರಿ ಹಗಲು ಹ್ಯಾಗೆ ಆದವು? ಆದಿ ಭಾಸದ ಸಮೂಹ ವಿಶ್ವದ ಒಂದು ಕಡೆಯಲ್ಲಿ ಇರಲಾಗಿ, ಭೂಮಿ ತನ್ನ ಅಚ್ಚಿನ ಸುತ್ತ ತಿರುಗುವದು ಪ್ರಾರಂಭವಾಯಿತು. ಕತ್ತಲು ಮೊದಲು ಇದ್ದದರಿಂದ, ಈ ಮೊದಲನೆ ದಿವಸ ರಾತ್ರಿಯಿಂದ ಉಪಕ್ರಮಿಸಿತು. ದೇವರಿಂದ ಉತ್ಪತ್ತಿಯಾದ ಆದಿ ಭಾಸವು ತಿರುಗುವ ಭೂಮುಖದ ಮೇಲೆ ಬಿದ್ದದ್ದೇ ಹಗಲು. ಈ ರೀತಿಯಿಂದ ೨೪ ತಾಸುಗಳುಳ್ಳ ದಿವಸಗಳು ಹುಟ್ಟಿದವು. ಮೊದಲು ಕತ್ತಲು, ಆ ಮೇಲೆ ಬೆಳಕು, ಹೀಗಾದ್ದರಿಂದ, ದೇವರ ವಾಕ್ಯವನ್ನು ಮೊದಲು ಹೊಂದಿದ ಇಸ್ರಾಯೇಲನವರು ಸೂರ್ಯಾಸ್ತಮಯ ಮೊದಲುಗೊಂಡು ತಿರಿಗಿ ಆ ಹೊತ್ತಿನವರಿಗೆ ೨೪ ತಾಸುಗಳನ್ನು ಎಣಿಸಿ ಒಂದು ದಿವಸ ಪೂರ್ಣ ಮಾಡಿ ಕೊಳ್ಳುತ್ತಾ ಬಂದರು. ಕರೆದನು) ದೇವರು ನಾಮ ಕೊಟ್ಟು ಅವುಗಳಲ್ಲಿ ಗುಣ ಭಾವಾದಿಗಳನ್ನು ಇಟ್ಟು ಅವಕ್ಕೆ ಸರಿಯಾದ ಕಾರ್ಯಕ್ಕೆ ನೇಮಿಸಿದನು.

b) ೨ನೆ ದಿನ, ದೇವರು ವಾಯುಮಂಡಲವನ್ನು ಸೃಷ್ಟಿಸಿದ್ದು. ೬—೮.

೬ ವ. ಆಗ ದೇವರು ನೀರಿನ ನಡುವೆ ಒಂದು ವಿಶಾಲ ಆಗಲಿ, ಅದು ನಡುವೆ ನಿಂತು ನೀರಿನಿಂದ ನೀರನ್ನು ಬೇರೆ ಮಾಡಲಿ ಅಂದನು.—೮ ವ.—ಮತ್ತು ದೇವರು ಆ ವಿಶಾಲಕ್ಕೆ ಆಕಾಶವೆಂದು ಕರೆದನು. ಹೀಗೆ ಸಾಯಂಕಾಲವಾಯಿತು ಮತ್ತು ಪ್ರಾತಃಕಾಲವಾಯಿತು, ಎರಡನೆ ದಿವಸ.—ವಿಶಾಲ) ವಿಸ್ತಾರವಾದದ್ದು; ಇದು ನಮ್ಮ ಪೃಥ್ವಿಯನ್ನು ಸುತ್ತುವ ವಾಯುಮಂಡಲ. ಅದಿಲ್ಲದಿದ್ದರೆ, ಸಸ್ಯಾದಿಗಳು ಬೆಳೆಯಲಾರವು; ಪ್ರಾಣಿಗಳು ಬದುಕಲಾರವು; ಬೆಂಕೆ ಉರಿಯಲಿಕ್ಕಿಲ್ಲ; ಶಬ್ದ ಕೇಳಿಸಲಿಕ್ಕಿಲ್ಲ. ವಾಯು ಆಕಾಶವು ಈ ಎರಡು ಒಂದೆ. ಅದರಿಂದ ಐದಲ್ಲ, ನಾಲ್ಕು ಭೂತಗಳು ಮಾತ್ರ ಅವೆ. ಈ ವಾಯುಮಂಡಲ ಒಂದು ಸಮುದ್ರವಿದ್ದ ಹಾಗದೆ. ಅದು ಒಂದು ವೇಳೆಯಲ್ಲಿ ತೆರೆಗಳು ಎದ್ದು ಬಹಳ ಚಲನೆ ಆಗುವದು, ಮತ್ತೊಂದು ವೇಳೆಯಲ್ಲಿ ತಿರಿಗಿ ಶಾಂತವಾಗುವದು. ವಸ್ತು ಒಂದೆ. ಆದರೆ ಕಾರ್ಯಗಳಿಂದ ಎರಡಾಗೆದೆ. ಚಲನೆ

ಆದದ್ದಕ್ಕೆ ವಾಯುವೆಂದು, ಶಾಂತವಾದದ್ದಕ್ಕೆ ಆಕಾಶವೆಂದು ಅನ್ನುತ್ತಾರೆ. ಈ ವಾಯುಮಂಡಲ ಆದಿಯಲ್ಲಿ ಇದ್ದ ನೀರಿನ ಸಮೂಹದ ನಡುವಿನಲ್ಲಿ ನಿಂತು, ಇದರಲ್ಲಿ ಒಂದು ಪಾಲು ಭೂಮಿಯ ಮೇಲೆ ಉಳಿಯುವಂತೆ, ಒಂದು ಪಾಲು ಮೇಲೆ ಏರಿ ನಿಲ್ಲುವಂತೆ ವಿಂಗಡಿಸಿತು. ಕೆಳಗಣ ಭಾಗದಿಂದ ಆ ಮೇಲೆ ಸೃಷ್ಟಿಯ ೩ನೆ ದಿನದಲ್ಲಿ ಸಮುದ್ರ ನದಿ ಸರೋವರಗಳಾಗಿರುವದಲ್ಲದೆ, ವಾಪಿ ಕೂಪ ತೋಡಿದರೆ, ಭೂಮಿಯ ಅಂತರಾಳದಿಂದ ಹೊರಟು ಬರುವ ಶಲೆಗಳೂ ಆದವು. ಮೇಲಣ ಭಾಗ ಮೋಡಗಳಾಗಿ ಮೇಘಮಂಡಲವಾಯಿತು. ಇದು ಒಂದು ಸಣ್ಣ ಕಾರ್ಯ ಅಂತ ನೆನಿಸ ಬೇಡಿರಿ! ಮೇಘಮಂಡಲದಲ್ಲಿ ಬಹಳ ನೀರು ಅದೆ. ಅದನ್ನು ಹೊತ್ತು ನಿಂತಿರಲಿಕ್ಕೆ ವಾಯುವಿಗೆ ಅತ್ಯಂತ ಬಲ ಅವಶ್ಯವಾಗೆದೆ. ಮೇಗಣ ನೀರನ್ನೆಲ್ಲಾ ಮನುಷ್ಯರು ಕೆಳಗಿನಿಂದ ಮೇಲಕ್ಕೆ ಎತ್ತಿ ಹಾಕ ಬೇಕಾದರೆ, ಪೃಥ್ವಿಯ ಮೇಲೆ ಬದುಕುವವರೆಲ್ಲರು ಕೂಡಿ ಮಾಡಿದಾಗ್ಯೂ, ಈ ಕೆಲಸವನ್ನು ಮುಗಿಸಲಿಕ್ಕೆ ೨೦೦೦೦೦ ವರುಷಗಳು ಬೇಕು ಅಂತ ವಿದ್ವಾಂಸರು ಲೆಖ್ಖ ಮಾಡಿದರು. ದೇವರು ಈ ವಾಯುಮಂಡಲವನ್ನು ಒಂದು ಅರಿವಿಯಂತೆ ಹಾಸಿ ಮೇಘದಿಂದ ಬೀಳುವ ಮಳೆ ಅದಕ್ಕೆ ತಟ್ಟಿ ಹನಿಹನಿಗಳಾಗಿ ಉದುರುವಂತೆ ಮಾಡಿದನು. ಇಲ್ಲದಿದ್ದರೆ ಮಳೆ ಆಗುವಾಗ, ಕೊಡದಿಂದ ಸುರಿವಿದ ಹಾಗಾಗಿ ಎಲ್ಲಾ ನಾಶವಾಗುತ್ತಿತ್ತು. ಈ ಮೇರೆಗೆ ಮಿಂಚು ಗುಡುಗು ಮಳೆ ಹಿಮ ಮಂಜು ಇಬ್ಬನಿ ಮುಂತಾದ ಎಲ್ಲಾ ವಿಚಿತ್ರಗಳಿಗೆ ಎರಡನೆ ದಿನದ ಸೃಷ್ಟಿಯು ಸಾಹಿತ್ಯವಾಯಿತು ಆಕಾಶ) ಮೊದಲು ವಾಯುಮಂಡಲಕ್ಕೆ, ಆ ಮೇಲೆ ಮೇಘಮಂಡಲಕ್ಕೆ, ಆ ಹಿಂದೆ ಸೂರ್ಯ ಚಂದ್ರ ನಕ್ಷತ್ರಗಳಿರುವ ಮಹಾ ಮಂಡಲಕ್ಕೆ ಕಡೆಗೆ ಅದೃಶ್ಯವಾದ ಪರಲೋಕಕ್ಕೆ ಆಕಾಶವೆಂದು ಹೆಸರು ಅದೆ. ಆದ್ದರಿಂದ ದೇವರ ವಾಕ್ಯದಲ್ಲಿ ಯಾವಾಗಲು ಆಕಾಶಗಳೆಂದು ಬಹುವಚನ ವರ್ತಿಸುವದು. ನಾವು ನೋಡುವ ಆಕಾಶವು ತನ್ನ ಸೌಂದರ್ಯ ಕ್ರಮಗಳಿಂದ ನಮ್ಮ ಎದೆಯಲ್ಲಿ ಹೆಚ್ಚಿನ ಅದೃಶ್ಯ ಲೋಕದ ಕಡೆಗೆ ಆಶೆ ಎಬ್ಬಿಸುವಲ್ಲಿ, ನಮಗೆ ಪರಲೋಕದ ಸುಳುವು ಕಂಡ ಹಾಗೆ ಆಗುವದು. ಅದಕ್ಕೆ ನಮಗೆ ಕಾಣುವ ಆಕಾಶಕ್ಕೂ, ಕಾಣದ ಪರಲೋಕಕ್ಕೂ ಆಕಾಶವೆಂದು ಒಂದೇ ಹೆಸರು.

c) ೩ನೆ ದಿನ, ದೇವರು ಒಣನೆಲವನ್ನೂ ಸಮುದ್ರವನ್ನೂ ಸಸ್ಯಾದಿಗಳನ್ನೂ ಸೃಷ್ಟಿಸಿದ್ದು. ೯—೧೩.

೯ ವ. ಒಂದೇ ಸ್ಥಲದಲ್ಲಿ ಒಟ್ಟುಗೂಡಲಿ!) ಸಮುದ್ರ ಒಂದೇ. ಭೂಮಿಯ ರೂಪದಿಂದ ಅದು ಬೇರೆ ಬೇರೆ ಭಾಗಗಳಾದರೂ, ಅವು ಒಂದಕ್ಕೊಂದು ಹತ್ತಿ ಅವೆ.

೧೦ ವ. ನೀರಿನ ಒಟ್ಟಿಲಕ್ಕೆ ಸಮುದ್ರಗಳೆಂದು ಕರೆದನು). ಆದಿಯಲ್ಲಿ ಎಲ್ಲಾ ಜಲಮಯವಾಗಿತ್ತು. ಆದರೆ ಹೊಸ ಭೂಲೋಕದ ಮೇಲೆ ಸಮುದ್ರ (ಜಲ) ಇರುವದಿಲ್ಲ. ಪ್ರಕಟ. ೨೧, ೧.

೧೧ ವ.—ಹುಲ್ಲನ್ನೂ, ಬೀಜ ಕೊಡುವ ಗಿಡಗಳನ್ನೂ, ಭೂಮಿಯ ಮೇಲೆ ತಮ್ಮ ಜಾತಿಯ ಪ್ರಕಾರ ಫಲಫಲಿಸುವಂಥಾ ತಮ್ಮೊಳಗೆ ತಮ್ಮ ಬೀಜ ಇದ್ದಂಥಾ ಫಲದ ಮರಗಳನ್ನೂ ಭೂಮಿಯು ಮೊಳೆಯ ಮಾಡಲಿ!—೧೨. ವ. ಆಗ ಭೂಮಿಯು ಹುಲ್ಲನ್ನೂ ತಮ್ಮ ಜಾತಿಯ ಪ್ರಕಾರ ಬೀಜ ಕೊಡುವ ಗಿಡಗಳನ್ನೂ ತಮ್ಮ ಜಾತಿಯ ಪ್ರಕಾರ ತಮ್ಮೊಳಗೆ ತಮ್ಮ ಬೀಜ ಇದ್ದಂಥಾ ಫಲಫಲಿಸುವಂಥಾ ಮರಗಳನ್ನೂ ಹೊರ ಬೀಳ ಮಾಡಿತು.

ಟಿಪ್ಪಣಿ: ಸೃಷ್ಟಿಯ ಈ ಮೂರನೆ ದಿನದಲ್ಲಿ ದೇವರು ಎರಡು ಸರ್ತಿ ನುಡಿದು ಎರಡು ದೊಡ್ಡ ಅದ್ಭುತಗಳನ್ನು ನಡಿಸಿದನು. ಒಣನೆಲವನ್ನೂ ಸಮುದ್ರವನ್ನೂ ನಿರ್ಮಿಸಿದ್ದೊಂದು, ತೃಣ ಸಸಿ ತರುಗಳನ್ನು ಸೃಷ್ಟಿಸಿದ್ದೊಂದು. ಘಟ್ಟಿ ನೆಲ ಅಗಾಧದೊಳಗೆ ಇತ್ತು. ಆದರೆ ದೇವರ ಅಪ್ಪಣೆಯಿಂದ ಅದು ನೀರಿನೊಳ

ಗಿಂದ ಎದ್ದು ಕಾಣ ಬಂತು ಅಷ್ಟೆ. ಅದರಿಂದ ತಗ್ಗು ಬಿದ್ದಲ್ಲಿ ನೀರು ನಿಂತು ಸಮುದ್ರವಾಯಿತು. ಘಟ್ಟಿ ನೆಲ ಎದ್ದಲ್ಲಿ ಗುಡ್ಡ ತಗ್ಗು ಬೈಲುಗಳು ಆದವು. ಸಮುದ್ರಕ್ಕೆ ದಾಟಲಾಗದ ಮೇರೆ ಆಯಿತು. ಸಮುದ್ರ ಇನ್ನಾದರೂ, ಭೂಮಿಯಲ್ಲಿ ಇಂಗದ ನೀರು ನದಿರೂಪವಾಗಿ ಕೂಡುವ ಸ್ಥಲವಾಗೆದೆ. — ಭೂಮುಖದ ಮೇಲೆ ನೀರು ಮೂರು ಪಾಲು, ಘಟ್ಟಿ ನೆಲ ಒಂದು ಪಾಲು. ಮಳೆಯಿಂದಾಗಲಿ, ಭೂಮಿಯ ಅಂತರಾಳದಿಂದ ಹೊರಡುವ ಶಲೆಗಳಿಂದಾಗಲಿ, ಘಟ್ಟಿನೆಲಕ್ಕೆ ಸಾಕಷ್ಟು ನೀರು ತೇವ ಬರಲಿಕ್ಕೆ ಈ ಸಮುದ್ರ ಹಾಳತದೆ. ಹೀಗಾಗಿ ಸಸ್ಯಾದಿಗಳು ಬೆಳೆಯುವದಕ್ಕೆ ಭೂಮಿ ಹಸನಾಯಿತು. ಆ ತರುವಾಯ ದೇವರು ಸಸ್ಯಾದಿಗಳನ್ನು ಸೃಷ್ಟಿಸಿದನು. ಹೀಗೆ ಆತ ತನ್ನ ಕಾರ್ಯವನ್ನು ವಿವೇಕ ಬುದ್ಧಿಯುಳ್ಳ ಕ್ರಮದಿಂದ ಮುಂದಕ್ಕೆ ಸಾಗಿಸಿದನು. ಸಸ್ಯಾದಿಗಳು ಉತ್ಪತ್ತಿಯಾದದ್ದು ದೊಡ್ಡ ಆಶ್ಚರ್ಯ. ರಸಾಯನ ವಿದ್ಯ ಬಲ್ಲವರು ಬೇರೆ ಬೇರೆ ತರದ ಕಲ್ಲು ಮಿಂಚು ಗುಡುಗು ಮಳೆ ತಕ್ಕ ತಕ್ಕ ಸಾಹಿತ್ಯಗಳಿಂದ ಸ್ವಲ್ಪ ಮಾಡಿ ತೋರಿಸ ಬಹುದು. ಆದರೆ ಒಂದು ಹುಲ್ಲಿನ ಕಡ್ಡಿಯನ್ನಾದರೂ ಉತ್ಪನ್ನ ಮಾಡುವದು ಅವರಿಗೆ ಅಶಕ್ಯ. ಯಾಕಂದರೆ ಇದು ಜೀವವೇ. ಈ ವರೆಗೆ ದೇವರು ನಿರ್ಜೀವ ಪದಾರ್ಥಗಳನ್ನು ಸೃಷ್ಟಿಸಿದ್ದನ್ನು ನೋಡಿದೆವು. ಈಗ ಆತನಿಂದ ಸಜೀವಿಗಳು ಉದ್ಭವಿಸಿದ್ದನ್ನು ನೋಡುತ್ತೇವೆ. ಸಸ್ಯಾದಿಗಳ ಒಂದೊಂದು ತನ್ನ ತನ್ನ ಬೀಜದಿಂದ ಲೋಕಾಂತ್ಯದ ಪರಿಯಂತರ ಉತ್ಪತ್ತಿಯಾಗುತ್ತಾ ಹೋಗ ಬೇಕು ಎಂದು ದೇವರು ನೇಮಿಸಿ ಪರಿಪಾಲನೆ ಮಾಡಿದನು. ಈ ಸಸ್ಯಾದಿಗಳಲ್ಲಿ ಮೂರು ಆಶ್ಚರ್ಯವಾಗಿ ಕಾಣುತ್ತವೆ. ಮೊದಲು ಅವುಗಳ ದೊಡ್ಡ ಸಮೂಹ. ಈಗ ತೃಣ ಸಸಿ ತರುಗಳಲ್ಲಿ ೧೦೦೦೦೦ ಜಾತಿಗಳನ್ನು ವಿದ್ವಾಂಸರು ಪ್ರತ್ಯೇಕಿಸಿದ್ದಾರೆ. ಇಷ್ಟು ದೊಡ್ಡ ಸಮೂಹವಾದರೂ, ಒಂದಕ್ಕೊಂದು ಆಶ್ಚರ್ಯ ಭೇದಗಳು ಅವೆ. ಒಂದರಿಂದ ಇತರ ಜಾತಿಯದು ಹುಟ್ಟಲಿಕ್ಕಿಲ್ಲ. — ಆ ಮೇಲೆ ಅವುಗಳಲ್ಲಿರುವ ಜೀವ ಬಲ ಎಷ್ಟು ಚೋದ್ಯವಾದದ್ದು! ಬಣ್ಣಿಸಲಿಕ್ಕೆ ಬರುವದೇ ಇಲ್ಲ. ಬೀಜಗಳು ಕೆಡದಿದ್ದರೆ, ಎಷ್ಟು ಕಾಲವಿದ್ದರೂ, ಮೊಳಕೆ ಆಗುವ ಬಲ ಅವನ್ನು ಬಿಟ್ಟು ಹೋಗದು. ಕೆಲವು ವರುಷಗಳ ಹಿಂದೆ ಒಬ್ಬ ಧೊರೆ ಮಿಸ್ರ ದೇಶಕ್ಕೆ ಹೋಗಿ ಒಂದು ಪೂರ್ವದ ಸಮಾಧಿಯನ್ನು ವಿಚಾರಿಸುವಾಗ, ಅದರಲ್ಲಿ ಅಪೂಟವಾಗಿ ಮುಚ್ಚಿದ್ದ ಒಂದು ಭರಣಿಯನ್ನು ಕಂಡನು. ಅದರಲ್ಲಿ ಏನಾದರೂ ಅಪರೂಪವಾದದ್ದು ಇದ್ದೀತೆಂದು ಅದನ್ನು ತನ್ನ ದೇಶಕ್ಕೆ ತೆಗದು ಕೊಂಡು ಹೋದನು. ಆದರೆ ಒಬ್ಬ ಆಳು ಅದನ್ನು ಹೊತ್ತು ಕೊಂಡು ಹೋಗುತ್ತಿರಲಿಕ್ಕೆ, ಕೈತಪ್ಪಿ ಅದು ಬಿದ್ದು ಒಡೆದಾಗ, ಕೆಲವು ಗೋಧಿಕಾಳುಗಳು ಕೆಲವು ಕಡ್ಲೆಕಾಳುಗಳು ಹೊರಹೊಮ್ಮಿದವು. ಆಗ ಅವನ್ನು ಬಹಳ ಜೋಪಾನದಿಂದ ಬಿತ್ತಿದರು. ೩೦ ದಿವಸಗಳಾದ ಮೇಲೆ ಅವು ಹುಟ್ಟಿ ತಮ್ಮ ಕ್ಲುಪ್ತ ದಿವಸಕ್ಕೆ ಎರಡನೇ ಬೀಜಗಳಂತೆ, ಅವು ಕಾಳಾದವು. ಅವನ್ನು ಆ ಭರಣಿಯಲ್ಲಿ ಇಟ್ಟಿದ್ದು ಮೊದಲುಗೊಂಡು ದೊರೆದ ವರೆಗೆ ದಿನಗಳನ್ನು ಎಣಿಸಿ ನೋಡಿದರೆ, ೩೦೦೦ ವರುಷ ಆಗಿತ್ತು. — ಕಡೆಗೆ ಅವುಗಳ ಫಲ ಭರಿತತ್ವ ಎಷ್ಟೋ ದೊಡ್ಡದು? ಕೆಲವರು ಒಂದು ಕಸಕಸಿಯ ಕಾಯಿಯಲ್ಲಿ ೩೨೦೦೦, ಒಂದು ತಂಬಾಕದ ಗಿಡದಲ್ಲಿ ೩೬೦೦೦ ಬೀಜದ ಕಾಳುಗಳನ್ನು ಎಣಿಸಿದರು. ಒಂದೊಂದು ಬೀಜದಿಂದ ಮತ್ತು ಇಷ್ಟು ಕಾಳುಗಳು ಉದ್ಭವಿಸುವ ಒಂದು ಕಸಕಸಿ ಗಿಡ, ಒಂದು ತಂಬಾಕದ ಗಿಡ ಹುಟ್ಟುವದು. — ಸಸಿಗಳು ಸೂರ್ಯನ ಬೆಳಕು ಇಲ್ಲದಲೆ ಹ್ಯಾಗೆ ಬೆಳೆದವು? ದೇವರು ೧ನೆ ದಿನ ಸೃಷ್ಟಿಸಿದ ಆದಿಭಾಸದಿಂದ. — ಇದು ಸೂರ್ಯನ ಬಿಸಲಿಗೆ ಅತಿ ಬಲದಿಂದ ಎಲ್ಲಾ ಭೂಮುಖದ ಮೇಲೆ ಸಮವಾಗಿ ಹರಿವಿ ಬಿದ್ದಿತ್ತಾದ ಕಾರಣ, ಈಗ ಉಷ್ಣಪ್ರದೇಶದಲ್ಲಿ ಮಾತ್ರ ಬೆಳೆಯುವ ತೆಂಗಿನ ಮಾವಿನ ಮೊದಲಾದ ಗಿಡಗಳು ಆಗ ಎಲ್ಲಿ ಆದರೂ ಬೆಳೆಯುತ್ತಿದ್ದವು. ಮತ್ತು ಆಗ್ಯೆ ಬೆಳೆದ ಮರಗಳು ಅತ್ಯಂತ ದೊಡ್ಡವಾಗಿದ್ದವು. ಇಂದು ಹುಲ್ಲಿನ ಕಡ್ಡಿಯಾಗಿದ್ದದ್ದು ಅಂದಿಗೆ ದೊಡ್ಡ ಮರವಾಗಿ ಬೆಳೆದಿತ್ತು. ೩ನೆ ದಿನದ ಸೃಷ್ಟಿ ಒಮ್ಮಿಂದೊಮ್ಮೆ ತೀರಲಿಲ್ಲ. ಅದು ದೇವರ ಅತಿ ಬಲವುಳ್ಳ ವಾಕ್ಯದಿಂದ ಆರಂಭವಾದ ತರುವಾಯ, ೪ನೆ ೫ನೆ ಮತ್ತು ೬ನೆ ದಿನದ ಆರಂಭದ ವರೆಗೆ ನಡೆಯುತ್ತಿತ್ತು. ನೀರು ಮೆಲ್ಲ ಮೆ

ಲ್ಲಿಗೆ ದೇವರು ನೇಮಿಸಿದ ಮೇರೆಗಳಲ್ಲಿ ಒಟ್ಟುಗೂಡುತ್ತ ಸಮುದ್ರವಾಯಿತು. ಆಗ ಭೂಕಂಪಗಳಿಂದ ವೇಳೆ ವೇಳೆಗೆ ಆಗುತ್ತಿದ್ದ ಪ್ರಳಯದ ರಾಶಿ ನೀರು ಆ ಆದಿ ಕಾನನಗಳ ಮೇಲೆ ಹರಿದು ಹೋಗಿ ರೇವೆ ಕುಳಿತು ಮುಚ್ಚಿ ಬಿಟ್ಟಿತು. ಅದು ಹೆಪ್ಪುಗೊಂಡು ಕಲ್ಲಾಗುವ ಸಮದಯಲ್ಲಿ ಅವೂ ಅದರ ಸಂಗಡ ಕಲ್ಲಾದವು. ಬೇರೆ ಬೇರೆ ದೇಶಗಳಲ್ಲಿ ಮನುಷ್ಯರು ಈಗ ಅಗಿದು ಕೊಂಡು ತೆಗೆಯುವ ಕಲ್ಲಿದ್ದಲಿ ಇವೆ. ಅವು ಕೆಡದೆ ಇದ್ದಂತೆ ಕಲ್ಲಾದ್ದರಿಂದ, ಇನ್ನಾದರೂ ಎಲೆ ಕೊಂಗೆ ಕೊರಡು ಬೇರು ಪ್ರತ್ಯೇಕಿಸಿ ನೋಡ ಬಹುದು. ಸೃಷ್ಟಿಯ ೩ನೆ ದಿನದಲ್ಲಿ ಹುಟ್ಟಿದ ಸಸ್ಯಾದಿಗಳು ಇವೆ.

d) ೪ನೆ ದಿನ, ದೇವರು ಸೂರ್ಯ ಚಂದ್ರ ನಕ್ಷತ್ರಗಳನ್ನು ನಿರ್ಮಿಸಿದ್ದು. ೧೪ — ೧೯.

ಬೆಳಕುಗಳು) ಸ್ವಂತ ಬೆಳಕುಳ್ಳ ಸ್ಥಿರನಕ್ಷತ್ರಗಳೂ, (ಅವುಗಳಲ್ಲಿ ಸೂರ್ಯ ಒಂದು), ಸೂರ್ಯನಿಂದ ಬೆಳಗಿಸಿ ಕೊಳ್ಳುವ ಗ್ರಹಗಳೂ, ಧೂಮಕೇತುಗಳೂ (ಬಾಲನಕ್ಷತ್ರಗಳು), ನಮ್ಮ ಭೂಮಿಯ ಸಹಚರನಾದ ಚಂದ್ರನೂ ಎಂಬಿವುಗಳ ತಿರುಳುಗಳು ಆದಿ ಸೃಷ್ಟಿಯಲ್ಲಿ (ವ. ೧.) ಉತ್ಪತ್ತಿಯಾಗಿದ್ದವು. ಆದರೆ ಭಾಸ ಅವಕ್ಕೆ ಇನ್ನು ಬಂದಿದ್ದಿಲ್ಲದರಿಂದ, ಅವು ಬರೆ ದೀಪಸ್ತಂಭಗಳಂತೆ ಇದ್ದವು. ಈ ನಾಲ್ಕನೆ ದಿನದಲ್ಲಿ ದೇವರು ೧ನೆ ದಿವಸದಲ್ಲಿ ಸೃಷ್ಟಿಸಿದ್ದ ಆದಿಭಾಸದಿಂದ ತಕ್ಕಷ್ಟು ಬೆಳಕನ್ನು ಅವಕ್ಕೆ ಕೊಟ್ಟು ದೀಪ ಹಚ್ಚಿದನು. ಅವು ಈ ದಿನದಲ್ಲಿ ಮೊದಲು ಉರಿಯ ಹತ್ತಿ ಕಾಣ ಬಂದ ದೀಪಗಳು. ದೇವರು ಎಂಥಾ ದಿವ್ಯ ಬಾಣ ಸುಡ ಪ್ರಾರಂಭಿಸಿದನು! ಬೆಳಕು ಬಹಳ ಚಮತ್ಕಾರವಾದದ್ದು. ಅದರ ವೇಗ ಬಾಹುಳ್ಯ ವರ್ಣಗಳ ವಿಷಯವಾಗಿ ಎಷ್ಟಂತ ಹೇಳಲಿ! ಬೆಳಕು ಒಂದು ಸೆಕುಂದದಲ್ಲಿ ೭೦೦೦೦ ಹರುದಾರಿ ಹೋಗುವದು. ಸೂರ್ಯವು ನಮ್ಮ ಭೂಮಿಗೆ ೩೫೦೦೦೦೦೦ ಹರುದಾರಿ ದೂರವಾಗಿರುವದರಿಂದ, ಅಲ್ಲಿಂದ ಅದರ ಬೆಳಕು ಇಲ್ಲಿಗೆ ಬರುವಷ್ಟರಲ್ಲಿ ೮ ಮಿನಿತ ೧೩ ಸೆಕುಂದಗಳು ಆಗಿ ಹೋಗುವವು. ಒಬ್ಬ ಮನುಷ್ಯನು ಅದೇ ದಾರಿ ಬರಬೇಕಾದರೆ, ದಿನದಿನಕ್ಕೆ ೩೫ ಹರುದಾರಿ ಮಾರ್ಗ ಸಾಗಿದಾಗ್ಯೂ, ೧೦೦೦೦೦೦ ದಿವಸ ಅಂದರೆ ೩೦೦೦ ವರುಷ ಬೇಕಾಗುವದು. ಸೂರ್ಯ ಚಂದ್ರ ನಕ್ಷತ್ರಗಳು ಪೃಥ್ವಿಗೂ ಅದರ ನಿವಾಸಿಗಳಿಗೂ ಬಹಳ ಉಪಯೋಗ ಬೀಳುವದರಿಂದ, ದೇವರನ್ನು ಅರಿಯದವರು ಅವು ದೇವರುಗಳೆಂದು ಕಲ್ಪಿಸಿ ಅವುಗಳಿಗೆ ಆರಾಧನೆ ಮಾಡುವವರಾದರು. (ಯೆರೆ. ೧೯, ೧೩. ಜೆಫ. ೧, ೫. ಅಪೊಸ್ತ. ಕ್ರಿಯೆ. ೭, ೪೨.) ಸೂರ್ಯ ಚಂದ್ರಗಳಿಂದಲೂ, ಮಂಗಳ (Mars), ಬುಧ (Mercury), ಬೃಹಸ್ಪತಿ (Jupiter), ಶುಕ್ರ (Venus), ಶನಿ (Saturn), ಎಂಬೀ ೫ ಮುಖ್ಯ ಗ್ರಹಗಳಿಂದಲೂ ನಮ್ಮ ವಾರಗಳಿಗೆ ಹೆಸರು ಬಂದದೆ. — ಆಕಾಶದ ವಿಶಾಲದಲ್ಲಿ) ೭ನೆ ವಚನದಲ್ಲಿ ಹೇಳಿದ ವಿಶಾಲದಲ್ಲಿ ಸೂರ್ಯ ಚಂದ್ರ ನಕ್ಷತ್ರಗಳು ತುಂಬಿ ತಾರಕ ಮಂಡಲವಾಯಿತು. ಹಗಲನ್ನೂ ರಾತ್ರಿಯನ್ನೂ) ಈಗಿನಿಂದ ಹಗಲು ರಾತ್ರಿ ಸೂರ್ಯನಿಂದ ಗೊತ್ತಾಗುತ್ತಿತ್ತು. (ನೋಡು. ವ. ೫.) ಈ ದಿನದಲ್ಲಿ ಉಷ್ಣಪ್ರದೇಶ ಶೀತಪ್ರದೇಶ ಎಂಬೀ ಭೇದಗಳು ಹುಟ್ಟಿದ್ದಾವು. — ಗುರುತುಗಳಿಗೋಸ್ಕರ) ಅವು ಸಮುದ್ರಮಾರ್ಗದಿಂದಲೂ ಭೂಮಾರ್ಗದಿಂದಲೂ ಸಂಚಾರ ಮಾಡುವವರಿಗೆ ದಿಕ್ಕು ದಾರಿ ತೋರಿಸುವವು; ಮಳೆಯನ್ನೂ ಹೊಳಪನ್ನೂ ಮುಂತಿಳಿಸುವವು. ಚಂದ್ರ ಗುಡಿ ಕಟ್ಟಿದರೆ, ಮಳೆ ಬಂದೀತೆಂದು ಊಹಿಸುವರು. ಆದರೆ ಅವು ವಿಶೇಷವಾಗಿ ಸೃಷ್ಟಿಕರ್ತನಾದ ದೇವರ ಮಹಿಮಾಬಲಗಳನ್ನು ಪ್ರಸಿದ್ಧ ಮಾಡುವ ಗುರುತುಗಳು. ಲೂಕ. ೨೩, ೪೫. ೨೧, ೨೫. ಪ್ರಕಟ. ೬, ೧೨ ಮುಂ. — ಸಮಯಗಳಿಗೋಸ್ಕರ) ರುತುಗಳು ವಾರಗಳು ಮಾಸಗಳು ವರುಷಗಳು ಇವುಗಳ ಲೆಖ್ಖ, ನಕ್ಷತ್ರಗಳು ತಿರುಗುವದನ್ನು ನೋಡಿದಲ್ಲದೆ, ನೆಟ್ಟಗೆ ಗೊತ್ತು ಮಾಡಲಾಗದು. ಕೆಲವರು ಸೂರ್ಯ ಸಂಕ್ರಮಣ ನೋಡಿ ಸೌರಮಾನ ಲೆಖ್ಖ ಹಿಡಿದಿರುತ್ತಾರೆ. ಕೆಲವರು ಚಂದ್ರನ ವೃದ್ಧಿ ಕ್ಷಯ ನೋಡಿ ತಿಂಗಳು ಗೊತ್ತು ಮಾಡಿ ಚಾಂದ್ರಮಾನವನ್ನು ಅನುಸರಿಸುತ್ತಾರೆ. — ಎರಡು ದೊಡ್ಡ ಬೆಳಕುಗಳನ್ನು) ಚಂದ್ರನೂ

ದೊಡ್ಡ ಬೆಳಕು ಎನಿಸುತ್ತಾನೆ. ಯಾಕಂದರೆ ಅದು ನಮ್ಮ ಭೂಮಿಗೆ ಸೂರ್ಯನಷ್ಟು ದೂರವಿಲ್ಲದಕ್ಕೆ ಸೂರ್ಯನಷ್ಟು ದೊಡ್ಡದಾಗಿ ಕಾಣಿಸುತ್ತದೆ. ಆದರೆ ಅದು ಭೂಮಿಗಿಂತ ೫೦ ಪಾಲಷ್ಟು ಸಣ್ಣದು. — ಸೃಷ್ಟಿಯ ಮೊದಲನೆ ಮೂರು ದಿನಗಳಲ್ಲಿ ಸೂರ್ಯವಿಲ್ಲದಲೆ, ಬೆಳಕು ಇದ್ದ್ಹೋಪಾಧಿಯಲ್ಲಿ ಕಡೆಗೆ ಹೊಸ ಭೂಲೋಕಕ್ಕೆ ಆಗುವದು. ಎಶಾ. ೬೦, ೧೯. ಪ್ರಕಟ. ೨೧, ೨೩.

ಟಿಪ್ಪಣಿ: ವಿಶ್ವಾಂತರದಲ್ಲಿ ನಿಂತಿರುವ ಒಂದೊಂದು ಸ್ಥಿರನಕ್ಷತ್ರ ಒಂದು ದೊಡ್ಡ ಸೂಜಿಯ ಕಲ್ಲು ಇದ್ದ ಹಾಗಾಗಿ, ತನ್ನಿಂದ ಬೆಳಗಿಸಿ ಕೊಳ್ಳುವ ತನಗಿಂತ ಸಣ್ಣ ನಕ್ಷತ್ರಗಳನ್ನು ಆಕರ್ಷಿಸಿ, ತನ್ನ ಸುತ್ತ ಅವು ತಿರುಗುವ ಹಾಗೆ ಮಾಡಿ, ಒಂದು ನಕ್ಷತ್ರಸಂಗ್ರಹವಾಗಿರುವದು. ಒಂದೊಂದು ಸ್ಥಿರನಕ್ಷತ್ರವು ಸೂರ್ಯನಂತೆ, ತನ್ನ ಸುತ್ತ ತಿರುಗುವ ಸಣ್ಣ ನಕ್ಷತ್ರಗಳು ಗ್ರಹಗಳಂತೆ, ಇರುವವು. ಹೀಗೆ ನಮ್ಮ ಸೂರ್ಯ ಸಂಗ್ರಹದಂಥಾ ಕೋಟ್ಯಾನುಕೋಟಿ ಸೂರ್ಯ ಸಂಗ್ರಹಗಳು ವಿಶ್ವಾಂತರದಲ್ಲಿ ಅವೆ. ಅವುಗಳಲ್ಲಿ ಕೆಲವು ನಮಗೆ ಎಷ್ಟು ದೂರವೆಂದರೆ, ಅವುಗಳ ಬೆಳಕು ನಮ್ಮ ತನಕ ಬಂದು ತೋರ ಬೇಕಾದರೆ, ೫೦೦೦ ವರುಷ ಬೇಕು. ದೇವರ ಜ್ಞಾನ ಬಲಗಳು ಅಶೋಧ್ಯವೇ ಸರಿ.

e) ೫ನೆ ದಿನ, ದೇವರು ಮೀನುಗಳನ್ನೂ ಪಕ್ಷಿಗಳನ್ನೂ ಸೃಷ್ಟಿಸಿದ್ದು. ೨೦ — ೨೩.

೨೦ ವ.—ಹಾರ್‍ಯಾಡಲಿ.) ಮೋಡಗಳಿಗೂ ಭೂಮಿಗೂ ನಡುವಣ ಆಕಾಶವೆಂದು ಇಲ್ಲಿ ತಿಳಿಯ ಬೇಕು.
೨೧ ವ.—ನೀರಿನಲ್ಲಿ ತುಂಬಿದ್ದು ಹರಿದಾಡುವಂಥಾ ಎಲ್ಲಾ ಜೀವಜಂತುಗಳನ್ನೂ, ಅವುಗಳ ಜಾತಿಯ ಪ್ರಕಾರ, ಎಲ್ಲಾ ಪಕ್ಷಿಗಳನ್ನೂ ಅವುಗಳ ಜಾತಿಯ ಪ್ರಕಾರ, ಸೃಷ್ಟಿಸಿದನು. ಮುಂ.

ಟಿಪ್ಪಣಿ: ಈಗ ಸೃಷ್ಟಿಕರ್ತನು ಬೇರೆ ಬೇರೆ ಪ್ರಾಣಿಗಳನ್ನು ಸೃಷ್ಟಿಸಲಿಕ್ಕೆ ಉಪಕ್ರಮಿಸುತ್ತಾನೆ. ನೀರಿನಲ್ಲಿ ಬದುಕುವ ನಾನಾ ವಿಧವಾದ ಮೀನುಗಳನ್ನು ಅಂದರೆ ಎಲ್ಲಾ ಜಲಚರಗಳನ್ನು (ಮೊಸಳೆ ಮುಂ.) ಉಂಟು ಮಾಡಿದ ಮೇಲೆ, ದೇವರು ಪಕ್ಷಿಗಳನ್ನು ಅಂದರೆ ಹಾರ್‍ಯಾಡುವಂಥಾ ಪ್ರಾಣಿಗಳನ್ನೆಲ್ಲಾ, ಹಾಗೂ ಹಾರ್‍ಯಾಡುವ ಹುಳ ಮೊದಲಾದವನ್ನೆಲ್ಲಾ ಸೃಷ್ಟಿಸಿದನು. ಜಲಚರಗಳಿಗೂ ಖಚರಗಳಿಗೂ ಸ್ವಭಾವದಲ್ಲಿ ಬಹಳ ಸಂಬಂಧ. ಹ್ಯಾಗಂದರೆ ಎರಡು ತರದವು ಅಂಡಜಗಳೇ, ಇವು ಜಲಸಮುದ್ರದಲ್ಲಿ, ಅವು ಆಕಾಶಸಮುದ್ರದಲ್ಲಿ ಚರಿಸುವವು. ಇವಕ್ಕೂ ಅವಕ್ಕೂ ಇರುವ ರಕ್ತ ಒಂದೇ ತರ. ಇವು ಹೆಚ್ಚಿನ ಸೃಷ್ಟಿಗಳೆಂದು ದೇವರು ಅವನ್ನ ಆಶೀರ್ವದಿಸುತ್ತಾನೆ. ಆತನ ಆಶೀರ್ವಾದದಲ್ಲಿ ಸಲಹುವ ಬಲ ಇರುವದರಿಂದ, ಅವಕ್ಕೆ ತಮ್ಮಿಂದ ಹೆಚ್ಚಲಿಕ್ಕೆ ಶಕ್ತಿಯಾಯಿತು. ಸತ್ಯ ದೇವರು ಉತ್ಪತ್ತಿಗೂ ಸ್ಥಿತಿಗೂ ಲಯಕ್ಕೂ ಕರ್ತನು.

f) ೬ನೆ ದಿನ, ದೇವರು ಸೃಷ್ಟಿಯ ಮುಗಿಸಿದ್ದು. ೨೪ — ೩೧.

aa) ಸ್ಥಲಚರ ಪ್ರಾಣಿಗಳನ್ನು ಸೃಷ್ಟಿಸಿದ್ದು. ೨೪ — ೨೫.

೨೪ ವ. ಮತ್ತು ದೇವರು, ಜೀವಜಂತುಗಳನ್ನು ಅವುಗಳ ಜಾತಿಯ ಪ್ರಕಾರ, ಪಶುಗಳನ್ನೂ, ಕ್ರಿಮಿಗಳನ್ನೂ, ಭೂಮಿಯ ಮೃಗಗಳನ್ನೂ ಅವುಗಳ ಜಾತಿಯ ಪ್ರಕಾರ ಭೂಮಿಯು ಹೊರಗೆ ಬರ ಮಾಡಲಿ ಅಂದನು. ಮುಂ.

ಟಿಪ್ಪಣಿ: ಇಲ್ಲಿ ಮೂರು ತರದ ಪ್ರಾಣಿಗಳು ತೋರುತ್ತಾವೆ: ೧.) ಭೂಮಿಯ ಮೃಗಗಳು. ಸಿಂಹ ಆನೆ ಹುಲಿ ಮೊದಲಾದ ಮನುಷ್ಯರ ಅವಂಕಿಗೆ ಬಾರದ ಎಲ್ಲಾ ವನಚರಗಳು; ೨.) ದನಗಳು. ಮನುಷ್ಯರ ಅಂಕೆಯಲ್ಲಿ ಇದ್ದು ಅವರಿಂದ ಪೋಷಿಸಿ ಕೊಳ್ಳುವ ಕುದುರೆ ಎತ್ತು ಆಕಳ ಮುಂತಾದವು; ೩.) ನೆಲದ ಮೇಲೆ ಹರಿದಾಡುವ ನಾನಾ ವಿಧದ ಹುಳಗಳು. ಈ ಮೂರು ತರದ ಪ್ರಾಣಿಗಳಿಗೆ ಒಟ್ಟಿಗೆ

ಉತ್ಪತ್ತಿ. ೧, ೨೪. ೨೫.

ಜೀವಜಂತುಗಳು ಎಂದು ಅನ್ನುತ್ತಾನೆ. ಯಾಕಂದರೆ ಅವುಗಳಿಗೆ ತಕ್ಕಷ್ಟು ಗ್ರಹಿಕೆ, ಸ್ವಲ್ಪ ಚಿತ್ತವೃತ್ತಿ ಉಂ
ಟು. ಸಸ್ಯಾದಿಗಳು ಚೈತನ್ಯ ಮಾತ್ರದವು. ಈ ಸ್ಥಲಚರ ಪ್ರಾಣಿಗಳಲ್ಲಿ ಮುಖ್ಯವಾಗಿ ಪಶುಗಳ, ಹಾಗೂ
ಮೃಗಗಳ ಪ್ರಕೃತಿಗೂ ಮನುಷ್ಯರ ಪ್ರಕೃತಿಗೂ ಬಹಳ ಹೆಚ್ಚು ಕಡಿಮೆ ಇಲ್ಲ. ಅವೂ ಜರಾಯುಜಗಳೆ,
ಚತುಷ್ಪಾದಿಗಳೆ; ಎಲ್ಲಾ ಜೀವರಾಶಿಗಳಲ್ಲಿ ಮುಖ್ಯವೆ. ಸಿಂಹ ಮೃಗರಾಜ ಎನಿಸುವದು. —ಈ ಸಂಬಂ
ಧದ ದೆಶೆಯಿಂದ ಅವೂ ಮನುಷ್ಯರೂ ಒಂದೇ ದಿವಸದಲ್ಲಿ ಉತ್ಪತ್ತಿ ಆದವು. —ಫಾರ್ಸಿಯರು ಈಗ ಇ
ರುವ ದೇಶದಲ್ಲಿ ಅಸ್ಸೂರ್ಯರದೊಂದು ರಾಜ್ಯವಿತ್ತು. ಅವರ ಅರಸರು ನಿನವೆ ಪಟ್ಟಣ ಸಂಸ್ಥಾನ ಮಾಡಿ
ಕೊಂಡು ರಾಜ್ಯ ಮಾಡಿದಾಗಿನ ಚರಿತ್ರೆ ಎರಡು ತರದಿಂದ ತಿಳಿಯ ಬಹುದು. ಹ್ಯಾಗಂದರೆ: ಅಂದಿಗೆ
ಕಂಡು ಬಲ್ಲಂಥಾ ವಿದ್ವಾಂಸರು ಗ್ರಂಥ ಮೊದಲಾದದ್ದನ್ನು ರಚನೆ ಮಾಡಿ ಅದರಲ್ಲಿ ಆ ದೇಶದ ಹಾಗೂ
ಆ ದೇಶಾಧಿಪನ ನಡುವಳಿ ಮುಂತಾಗಿ ವರ್ಣನೆ ಮಾಡಿದ್ದರ ಮೇಲಿಂದ ತಿಳಿಯ ತಕ್ಕದ್ದೊಂದು. ಮತ್ತು
ಅಂದಿಗೆ ಆದ ವರ್ತಮಾನವನ್ನು ಇದ್ದ ಸ್ಥಿತಿಯನ್ನು ಕಲ್ಲ ಮೇಲೆ ಲಿಪಿ ಬರಸಿದ್ದು, ಇದಲ್ಲದೆ ಗೋಡೆಗಳ
ಲ್ಲಿ ಚಿತ್ರ ತೆಗಿಸಿದ್ದು, ಅಥವಾ ಶಿಲ್ಪವಿದ್ಯದವರಿಂದ ಕಟಿಸಿದ್ದು, ಹುಗಿದಿರುವವು. ಆ ಭೂಮಿ ಅಗೆಯೋ
ಣವರಿಂದ ಹೊರಟವನ್ನ ನೋಡೋಣದರಲ್ಲಿ ತೋರಿ ಬರುವದರ ಮೇಲಿಂದ ಗ್ರಹಿಸ ತಕ್ಕದ್ದೊಂದು. ಹೀ
ಗೆ ಎರಡು ಪ್ರಕಾರ ಆ ರಾಜ್ಯದ ಸ್ಥಿತಿಗತಿ ಹ್ಯಾಗೆ ತಿಳಿಯ ಬಹುದೋ, ಹಾಗೆ ಈ ಸೃಷ್ಟಿ ಆದ ಸಂಗತಿಯ
ನ್ನು ಎರಡು ಪ್ರಕಾರವಾಗಿ ತಿಳಿಯ ಬಹುದು. ಈ ವಿಷಯವಾಗಿ ದೇವರ ವಾಕ್ಯದಲ್ಲಿ ಹೇಳಿದ್ದರ ಮೇಲಿಂ
ದ ಗ್ರಹಿಸುವದು ಒಂದು. ಇದು ಉತ್ತಮ. ಯಾಕಂದರೆ ದೇವವಾಕ್ಯದಲ್ಲಿ ಏನು ಹೇಳಿ ಅದೊ, ಅದಂ
ತು ಸತ್ಯವಾದದ್ದು, ನಿಜವು. ಇದಲ್ಲದೆ ಭೂಮ್ಯಂತರಾಳದೊಳಗಣ ಕಲ್ಲುಗಳಲ್ಲಿ ತೋರಿ ಬರುವದರ ಮೇ
ಲಿಂದ ತಿಳಿಯುವದು ಒಂದು. ಇದು ಕಣ್ಣಿಗೆ ಕಾಣುವಂಥಾದು. —ಈ ಪೃಥ್ವಿಯಲ್ಲಿಯ ಕಲ್ಲುಗಳೆಲ್ಲಾ,
ಮೊದಲು ಸ್ಫಟಿಕದಂತೆ ಉದ್ಭವಿಸಿದ ಆದಿಶಿಲೆಗಳು, ಆ ಮೇಲೆ ಸೃಷ್ಟಿಯ ದಿನಗಳಲ್ಲಿ ಆಗುತ್ತಿದ್ದ ಜಲಪ್ರ
ಳಯಗಳಿಂದ ಆದ ಪ್ರಳಯಶಿಲೆಗಳು ಎಂದು ಎರಡು ವಿಧ. ಇದರ ವಿವರ ಭೂವ್ಯುತ್ಪತ್ತಿವಿದ್ಯ ಬಲ್ಲ
ವರಿಂದ ಸಿದ್ಧವಾಗಿರುತ್ತದೆ. ಹ್ಯಾಗಂದರೆ: ಬೆಂಚಿಗಲ್ಲು ಕರೆಕಲ್ಲು ಇವು ಆದಿಶಿಲೆಗಳೊಳಗೆ. ಸುಣ್ಣದ
ಕಲ್ಲು ಸಿಕತೋಪಲ ಮುಂತಾದವು ಇವು ಪ್ರಳಯಶಿಲೆಗಳೊಳಗೆ. ಈ ಕಡೇ ತರದವು ಭೂಮಿಯಲ್ಲಿ ಒಂ
ದರ ಮೇಲೆ ಒಂದು ತರ ಹಿಡಿದು ಮೇಲೆ ತನಕ ಇರುವವು. ಅದರಲ್ಲಿ ಮೂರು ವಿಧ: ಆದಿಶಿಲೆಯ
ಹೊಂದಿಕೆ ಆಗಿರುವ ಬುಡದವು ಒಂದು ತರ, ಇದು ಕೀಳ್ತರ. ಇದರಲ್ಲಿ ಕಲ್ಲಿದ್ಲಿಯಾದ ಅತ್ಯುನ್ನತ ವೃಕ್ಷಗ
ಳು ತೋರ ಬಂದವು. ಸಸ್ಯಾದಿಗಳಲ್ಲದೆ ಮೀನ ಪಕ್ಷಿ ಮುಂತಾದ ಪ್ರಾಣಿಗಳು ಶಿಲಾರೂಪಾಂತರವಾದ
ದ್ದು ಇಲ್ಲಿ ಏನೇನೂ ಕಾಣುವದಿಲ್ಲ. ಈ ಕೀಳ್ತರದ ಕೆಳಗಣ ಆದಿಶಿಲೆಯೊಳಗೆ ಗಿಡ ಪ್ರಾಣಿಗಳು ಶಿಲಾ
ರೂಪಾಂತರವಾದದ್ದು ಕಿಂಚಿತ್ತಾದರೂ ಸಿಕ್ಕುವದಿಲ್ಲ. ಈ ಕೀಳ್ತರದ ಮೇಲಿನ ಕಲ್ಲುಹಾಸಿಗೆಯೇ ಮಧ್ಯ
ಮ ತರ. ಇದರಲ್ಲಿ ವಿಶೇಷವಾಗಿ ಅತ್ಯಂತ ದೊಡ್ಡ ಮೀನು ಮೊಸಳೆ ಮೊದಲಾದ ಜಲಚರಗಳೂ, ಖಚ
ರವಾದ ಪಕ್ಷಿಜಾತಿಗಳೂ ಶಿಲಾರೂಪಾಂತರವಾದದ್ದು ತೋರುವದು. ಅದರಲ್ಲಿ ಶಿಕ್ಕಿದ ಮೊಸಳೆ ನಮ್ಮ
ಆನೆಗೆ ದೊಡ್ಡದು. ಕಡೆಗೆ ಈ ಮಧ್ಯಮ ಹಾಸಿಗೆಯ ಮೇಲಣ ಮೇಲ್ತರ ವಿಚಾರಿಸಿ ನೋಡುವಾಗ್ಯೆ,
ಅದರಲ್ಲಿ ಮಮ್ಮೂಥ ಮಸ್ತೋದೊಂತ ಎಂಬೀ ಮೊದಲಾದ ಕಂಡಾಬಟ್ಟೆ ದೊಡ್ಡ ಚತುಷ್ಪಾದಿಗಳೂ,
ಈಗ ಇರುವ ಸಿಂಹ ಶಾರ್ದೂಲಾದಿ ಮೃಗಜಾತಿಗಳೂ, ಗೋ ಮಹಿಷ್ಯಾದಿ ಪಶುಜಾತಿಗಳೂ ಕಲ್ಲಾದ
ದ್ದಾಗಿ ಕಾಣ ಬಂದವು. —ಆದರೆ ಶಿಲಾರೂಪಾಂತರವಾದ ಮನುಷ್ಯರ ದೇಹ ಯಾವ ಕಲ್ಲಿನಲ್ಲ್ಯಾದರೂ
ಶಿಕ್ಕಲಿಲ್ಲ. ಹೀಗೆ ಆಗಿರುವದರ ಮೇಲಿಂದ ತಿಳಿಯ ಬರುವದೇನಂದರೆ: ಆಗಿ ಹೋದ ಮೂರು ಕಾಲಾಂತ
ರಗಳ ಮೊದಲನೇದರಲ್ಲಿ ಸಸ್ಯಾದಿಗಳು, ಎರಡನೇದರಲ್ಲಿ ಜಲಚರ ಖಚರಾದಿಗಳು, ತದನಂತರ ಮೂರನೇ
ದರಲ್ಲಿ ಮೃಗ ಪಶ್ವಾದಿ ಸ್ಥಲಚರಗಳು ಉತ್ಪತ್ತಿ ಆದವು. ಈ ಸ್ಥಾವರ ಜಂಗಮಾದಿಗಳೆಲ್ಲಾ ಈ ಮೇರೆ

ಉತ್ಪತ್ತಿ. ೧, ೨೪. ೨೫.

ಗೆ ಉದ್ಭವಿಸಿದ ಬಳಿಕ ಮನುಷ್ಯನು ನಿರ್ಮಾಣವಾದನು. ಸಸಿ ಪ್ರಾಣಿಗಳು ಹುಟ್ಟದ ಮೊದಲು, ಈ ಪೃಥ್ವಿಯ ಮೇಲೆ ಜೀವವಿದ್ದಿಲ್ಲ. ಇದು ದೇವರ ಅದ್ಭುತ ಬಲದಿಂದ ಪೃಥ್ವಿಗೆ ಬಂತು. —ಮೊದಲು ಸ್ಥೂಲ ಸೃಷ್ಟಿಗಳು ಆದವು; ಆ ಬಳಿ ಸೃಷ್ಟಿಗಳು ಹೆಚ್ಚು ಹೆಚ್ಚಾಗಿ ಸೂಕ್ಷ್ಮವಾಗುತ್ತ ಬಂದವು. ಹ್ಯಾಗಂದರೆ ಮಣ್ಣು ನೀರು ತೇಜಸ್ಸು ಆಕಾಶವೆಂಬೀ ಮಹಾ ಭೂತಗಳು ಇವು ಮೊದಲಾದವು. ಆ ಮೇಲೆ ಹುಟ್ಟಿದ ಸಸ್ಯಾದಿಗಳು ಇವಕ್ಕಿಂತ ಸೂಕ್ಷ್ಮ; ಯಾಕಂದರೆ ಇವಕ್ಕೆ ಒಂದು ಶರೀರ; ಬೆಳೆಯುವದೆ ಅವುಗಳ ಧರ್ಮ. ಸಸ್ಯಾದಿಗಳಿಗಿಂತ ಬುದ್ಧಿ ಇಲ್ಲದ ಪ್ರಾಣಿಗಳು ಸೂಕ್ಷ್ಮ; ಅವುಗಳಲ್ಲಿ ಜೀವಾತ್ಮವಿರುವದರಿಂದ, ಬೆಳೆಯುವ ಧರ್ಮದ ಹೊರ್ತು, ಪಂಚೇಂದ್ರಿಯವಿಷಯವನ್ನು ಗ್ರಹಿಸಿ ಸುಖ ದುಃಖ ಅನುಭವಿಸುವ ಧರ್ಮ ಸಹ ಅವಕ್ಕೆ ಉಂಟು. ಅವುಗಳಿಗಿಂತ ಬುದ್ಧಿಯುಳ್ಳ ಮನುಷ್ಯನ ದೇಹವೂ ಅವನಲ್ಲಿ ಇರುವ ಜೀವಾತ್ಮವೂ ಸೂಕ್ಷ್ಮ. ಸಸ್ಯಾದಿಗಳ ಹಾಗೂ ಬುದ್ಧಿ ಇಲ್ಲದ ಪ್ರಾಣಿಗಳ ಧರ್ಮಗಳಲ್ಲದೆ ಅವನಿಗೆ ಪಂಚೇಂದ್ರಿಯಗಳಿಂದ ಗ್ರಹಿಸಿದ ವಿಷಯಗಳನ್ನು ವಿಶೇಷಿಸಿ ತಿಳಿಯುವ ಧರ್ಮ ಸುಧಾ ಅದೆ. —ಭೂಮ್ಯಂತರಾಳದಲ್ಲಿ ಕಲ್ಲಾದ ಆ ಸಸ್ಯಾದಿಗಳು ಪ್ರಾಣಿಗಳು ಯಾವವು? ಯಾಕೆ ನಾಶವಾದವು? ಸೃಷ್ಟಿ ಸ್ಥಿರವಾಗದೆ ಹೋದ ಕಾರಣವೇನು? ಪಾಪವಿಲ್ಲದಂದು ರೋಗ ಮರಣವಿದ್ದದ್ದು ಯಾಕೆ? ಎಂಬುವ ಪ್ರಶ್ನೆಗಳು ಉಂಟಾಗುತ್ತವೆ. ಅವುಗಳಿಗೆ ಮೂರು ಉತ್ತರ ಉಂಟು.

೧) ಕಲ್ಲಾದ ಸಸ್ಯಾದಿಗಳ ಹಾಗೂ ಪ್ರಾಣಿಗಳ ಜಾತಿಗಳು ಇಂದಾದರೂ ಅವೆ, ಅವುಗಳ ತರ ಮಾತ್ರ ಇಲ್ಲ. ಅವು ದೇವರು ೩ನೆ, ೫ನೆ, ೬ನೆ ದಿನದಲ್ಲಿ ಸೃಷ್ಟಿಸಿದ ಸಸ್ಯಾದಿಗಳು ಪ್ರಾಣಿಗಳು ಅಲ್ಲ. ೩ನೆ ದಿನದ ಆರಂಭದಲ್ಲಿ ಗುಡ್ಡ ಕಲ್ಲುಗಳ ಕೂಡಾ, ಇರಲಿಕ್ಕೆ ಅಲ್ಲ, ಆಗಿನ ಪೂರ್ತಿಗೆ ಇವು ಉದ್ಭವಿಸಿದನಂತರ, ತಿರಿಗಿ ನಾಶವಾಗಿ ಹೋದವು. ಆದರೆ ಇವನ್ನು ಸೃಷ್ಟಿಸಿದ್ದರ ವಿಷಯವಾಗಿ ದೇವರ ವಾಕ್ಯದಲ್ಲಿ ಏನು ಹೇಳಿರುವದಿಲ್ಲದರಿಂದ, ಈ ಉತ್ತರ ಕುಂದುತ್ತದೆ.

೨) ಶಿಲಾರೂಪಾಂತರವಾದ ಸಸ್ಯಾದಿಗಳು ಪ್ರಾಣಿಗಳು ದೇವರು ೩ನೆ, ೫ನೆ, ೬ನೆ ದಿನದಲ್ಲಿ ಸೃಷ್ಟಿಸಿದಂಥಾವೆ. ಅವು ದೇವರ ಅಪ್ಪಣೆಯಿಂದ ನೀರಿನಿಂದ ಮಣ್ಣಿನಿಂದ ಹೊರಟವು. ಬಹಳ ದಿವಸ ಬೀಳ ಬಿದ್ದ ಹೊಲ ಆಕಾರ ಮಾಡಿದರೆ, ಮೊದಲು ಭೂಮಿ ಬಲ ಹೆಚ್ಚಾಗಿ ಬಹಳ ಬೆಳೆಯುತ್ತದೆ; ಚೊಚ್ಚಲ ಮಕ್ಕಳು ಬಹಳವಾಗಿ ಹಿಂದುಗಡೆ ಹುಟ್ಟಿದವರಿಗೆ ಬಲಿಷ್ಠರು. ಅದರಂತೆ ಆದಿಯಲ್ಲಿ ಇನ್ನು ಅತಿ ಬಲಭರಿತವಾದ ಜಲ ಭೂಮಿಗಳಿಂದ ಹೊರಟ ಸಸ್ಯಾದಿಗಳು ಪ್ರಾಣಿಗಳು ಈಗಿನವಕ್ಕಿಂತ ಅತ್ಯಂತ ದೊಡ್ಡವು, ಬಲವುಳ್ಳವು ಆಗಿದ್ದವು. ಆದಿ ಮನುಷ್ಯರೂ ಈಗಿನವರಿಗಿಂತ ದೀರ್ಘಾಯುಷ್ಯದವರು, ಬಲಿಷ್ಠರು ಆಗಿದ್ದರಲ್ಲ. ಕ್ರಮೇಣವಾಗಿ ಕಾಲಾಂತರದಲ್ಲಿ ಅವು ಈಗಿನ ಹಾಳತಕ್ಕೆ ನಿಂತವು. ಅವು ನೀರು ಮಣ್ಣು ಮುಂತಾದ ಮಹಾ ಭೂತಗಳಂತೆ ನಿತ್ಯವಲ್ಲ, ಅವಕ್ಕೆ ಅಮರತ್ವವಿಲ್ಲ. ಆದ ಕಾರಣ ಅವು ತಮ ಪ್ರಮಾಣ ತುಂಬುತ್ತಲೆ, ಒಣಗಿ ಹೋಗುವವು, ಸತ್ತು ಹೋಗುವವು.

೩) ಆದರೆ ನಮ್ಮ ಭೂಮ್ಯಂತರಾಳ ಒಂದು ದೊಡ್ಡ ಸಮಾಧಿಯಂತೆ ಕಾಣಿಸುತ್ತದೆ. ಅದರಲ್ಲಿ ಹುಗಿದಿರುವ ಪ್ರಾಣಿಗಳು ತಮ್ಮ ಪ್ರಮಾಣ ತುಂಬಿ ಸಾಯಲಿಲ್ಲ, ಪ್ರಳಯದ ನೀರಿನಲ್ಲಿ ಮುಣಿಗಿ ರಾಡಿಯೊಳಗೆ ಶಿಕ್ಕೊಂಡು ಬಲಾತ್ಕಾರ ಮರಣದಿಂದ ಹೋದವಲ್ಲ. ಇದೆಲ್ಲ ಪಾಪ ಶಾಪದ ಫಲದ ಹಾಗೆ ತೋರುತ್ತದೆ ಅಂತ ಇನ್ನು ಅನುಮಾನ ಮಾಡುವವರಿಗೆ ಉತ್ತರ ಯಾವದೆಂದರೆ: ಭೂಮಿಯಲ್ಲಿ ಕಲ್ಲಾದ ಸಸ್ಯಾದಿಗಳು ಪ್ರಾಣಿಗಳು ೩ನೆ, ೫ನೆ, ೬ನೆ ದಿನದಲ್ಲಿ ಉತ್ಪನ್ನವಾದಂಥಾವಲ್ಲ, ಆದಿ ಸೃಷ್ಟಿ (ವ. ೧.) ಆಗುವಾಗ್ಯೆ, ಉದ್ಭವಿಸಿದಂಥಾವು. ಆದರೆ ಮೇಲೆ ಹೇಳಿದಂತೆ, ದೂತರಲ್ಲಿ ಒಂದು ಭಾಗದವರು ಒಬ್ಬ ಪ್ರಧಾನ ದೂತನನ್ನು ಕೂಡಿ ಕೊಂಡು, ಅವನ ಸಂಗಡ ದೇವರಿಗೆ ತಿರಿಗಿ ಬಿದ್ದು, ಪಿಶಾಚಿಗಳು ದೆವ್ವಗಳು ಆದರು. ಅವರು ವಾಯುಮಂಡಲದಲ್ಲಿ ಚರಿಸುವವರಾದ ಕಾರಣ, ಅವರಿಗೂ ಭೂಮಿಗೂ ಸಂಸರ್ಗವಿತ್ತೆಂ

ದು ಸಾಧಿಸಲಿಕ್ಕೆ ಏನೂ ಅಡ್ಡಿ ಇಲ್ಲ. ಇವರ ಸಂಸರ್ಗದೋಷ ಭೂಮಿಗೆ ಲೇಪವಾಗಿ ಅದರಲ್ಲಿ ಉತ್ಪತ್ತಿಯಾಗಿದ್ದ ಸಸ್ಯಾದಿಗಳು ಪ್ರಾಣಿಗಳು ಸ್ವಥಾ ಪಾಪಾರ್ಜಿತಗಳಾಗದೆ ಇದ್ದಾಗ್ಯೂ, ನಾಶವಾದಂತೆ ಕಲ್ಪನಕ್ಕೆ ಬರುತ್ತದೆ. ಅದೇ ಪ್ರಕಾರ ಈಗ ಮನುಷ್ಯರ ಪಾಪದಿಂದ ಭೂಮಿಯೂ ಶಾಪಕ್ಕೆ ಒಳಗಾಗಿ ಆದಿಸ್ಥಿತಿಯಲ್ಲಿ ಇರುವದಿಲ್ಲ. ದೇವರ ವಾಕ್ಯದಲ್ಲಿ ಭೂಮಿ ಹಾಳಾಗಿತ್ತು ಅಂತ ಹೇಳುವದು ನೋಡಿದರೆ, ಮೊದಲು ನೆಟ್ಟಗಿತ್ತು; ಆ ಮೇಲೆ ಕೆಟ್ಟಿತು ಎಂಬಂತೆ ಅರ್ಥ ಮಾಡ ಬಹುದು, ಹೀಗೆ ಹಾಳ ಎಂಬ ಶಬ್ದ ವಿಶೇಷವಾಗಿ ಸಾರ್ಥಕವಾಗುತ್ತದೆ. ಪಿಶಾಚನ ಪಾಪಪತನದಿಂದ ಶಾಪಕ್ಕೆ ಒಳಗಾಗಿ ಹಾಳಾಗಿದ್ದ ಭೂಮಿಯನ್ನು ದೇವರು ಆ ೬ ದಿನಗಳಲ್ಲಿ ತಿರಿಗಿ ನೆಟ್ಟಗೆ ಮಾಡಿದನು,

bb) ದೇವರು ಮನುಷ್ಯರನ್ನು ಸೃಷ್ಟಿಸಿದ್ದು. ೨೬—೩೧.

aaa) ಸೃಷ್ಟಿಸಿದ ರೀತಿ. ೨೬—೨೭.

೨೬ ವ. ನಮ್ಮ ಛಾಯೆಯಾಗಿ ನಮ್ಮ ಹೋಲ್ವಿಕೆಯ ಪ್ರಕಾರ) ತಂದೆ ತಾಯಿಗಳ ಛಾಯೆ ಮಕ್ಕಳಿಗೆ ಹ್ಯಾಗೋ, ಹಾಗೆ ದೇವರ ಛಾಯೆ ಮನುಷ್ಯರಿಗೆ ಅದೆ. ಛಾಯೆ ಎಂಬ ಶಬ್ದ ಮನುಷ್ಯರಿಗೂ ದೇವರಿಗೂ ಇರುವ ಸಂಬಂಧ ಭೇದಗಳನ್ನು ಸೂಚಿಸುವದು. ೧) ಎಲ್ಲಾ ವಿಷಯಕ್ಕೂ ಮನುಷ್ಯರಿಗೆ ದೇವರ ಹಂಗು ಉಂಟು. ಆತನಿಲ್ಲದಲೆ, ಅವರು ಹುಟ್ಟಲಾರರು, ಇರಲಾರರು. ಅವರೊಳಗಣ ಭಾವ ಲಕ್ಷಣಗಳು ಆತನಿಂದ ಬಂದಲ್ಲದೆ, ಬೇರೊಂದು ಕಡೆಯಿಂದ ಉಂಟಾಗಲರಿಯವಾಗಿ, ಆತನ ಸ್ವಭಾವವನ್ನು ತೋರಿಸುವವು ಎಂಬಂತೆ ಸಂಬಂಧಾರ್ಥವಾಗುತ್ತದೆ. ೨) ಮನುಷ್ಯರು ತಾವೆ ದೇವರಲ್ಲ, ಆತನು ಕಾರಣಸ್ವರೂಪ, ಅವರು ಕಾರ್ಯಸ್ವರೂಪ. ಒಬ್ಬನಿಂದ ಬಿದ್ದ ನೆರಳಿಗೆ ಯಾರು ಮನುಷ್ಯನು ಅಂದಾರು? ಆತನಿಗೂ ಅವರಿಗೂ ಭಿನ್ನರೂಪ. ದೇವರು ಕೊಟ್ಟರೆ ವಿನಹ, ಮನುಷ್ಯರಲ್ಲಿ ತ್ರಾಣ ಜ್ಞಾನಗಳು ಇಲ್ಲ. ಆದಾಗ್ಯೂ ಅವರು ಮಾಯವಲ್ಲ. ದೇವರು ಅನಂತ ಜೀವವುಳ್ಳಾತನಾಗಿರುವದರಿಂದ, ಆತನಿಂದ ಬಿದ್ದ ಛಾಯೆಗೂ ಸತ್ವ ಉಂಟು, ದೇವರಲ್ಲಿ ಅಮಿತ ಸತ್ವ, ಮನುಷ್ಯರಲ್ಲಿ ಮಿತ ಸತ್ವ ಉಂಟು, ಎಂಬೀ ಪ್ರಕಾರವಾಗಿ ಭೇದಾರ್ಥವಾಗುತ್ತದೆ.—ಛಾಯೆ = ಮನುಷ್ಯರ ಮೂಲಸ್ವಭಾವ. ಹೋಲ್ವಿಕೆ = ಆ ಮೂಲದಿಂದ ಬೆಳೆದ ಗುಣಾದಿಗಳು. ಮನುಷ್ಯರು ದೇವರ ಛಾಯೆಯಾಗಿದ್ದದರ ದೆಶೆಯಿಂದ, ಆತನನ್ನು ಹೋಲುತ್ತಾರೆ. ದೇವರೇ ಕಾರಣ, ಛಾಯೇ ಕರಣ, ಹೋಲ್ವಿಕೆಯೇ ಕಾರ್ಯ. ಆದರೆ ಈ ದೇವರ ಛಾಯೆ ಈ ಹೋಲ್ವಿಕೆಯಾವದು? ಅವರು ಸಮುದ್ರದ ಮೀನುಗಳನ್ನೂ— ಆಳಲಿ ಎಂಬ ಮಾತಿನಲ್ಲಿ ಹೋಲ್ವಿಕೆಯ ವರ್ಣನೆ ಬಂದದೆ. ದೇವರೇ ಸರ್ವ ಸೃಷ್ಟಿ ಸ್ಥಿತಿ ಲಯಗಳನ್ನು ನಡಿಸುವದರಲ್ಲಿ ಆತನ ದೈವ ಲಕ್ಷಣಗಳು ಕಾಣಬರುತ್ತವೆ, (ರೋಮ. ೧, ೨೦.) ಆತನು ಮಹಾರಾಜನೇ, ಮನುಷ್ಯನು ವಿಶ್ವದಲ್ಲಿ ಒಂದು ಸೀಮೆಯಂತಿರುವ ಈ ಭೂಮಿಗೆ ಆತನಿಂದ ನೇಮಿಸಿ ಕೊಂಡ ಮಂಡಲೇಶ್ವರನೇ. ಮಂಡಲೇಶ್ವರನು ಮಹಾರಾಜನ ಪ್ರತಿನಿಧಿ. ಮನುಷ್ಯರು ದೇವರ ಪ್ರತಿನಿಧಿಗಳಾಗಿ ಈ ಪೃಥ್ವಿಯ ಮೇಲಣ ಸ್ಥಾವರ ಜಂಗಮಾದಿಗಳನ್ನೆಲ್ಲಾ ತಮ್ಮ ಉಪಯೋಗಕ್ಕಾಗಿ ಪ್ರಯೋಗಿಸಿ, ಅವು ತಮ್ಮ ಸೇವೆಗಾಗಿರುವಂತೆ ಮಾಡಿ, ಅಧಿಕಾರ ನಡಿಸುವವರು. ಅವರೇ ಸೃಷ್ಟಿಗಳಲ್ಲಿ ಶಿಖಾಮಣಿಯೂ ಆಗಿದ್ಧಾರೆ. ದೇವರು ವಿಶ್ವೇಶ್ವರ, ಮನುಷ್ಯನು ಭೂಮೇಶ್ವರ. ಈ ವಿಷಯದಲ್ಲಿ ದೇವರನ್ನ ಹೋಲುತ್ತಾನೆ. ಆದರೆ ಮಹಾರಾಜನು ತನ್ನ ಕಾರ್ಯ ನಿತ್ತರಿಸಿಕೊಳ್ಳ ಬಲ್ಲವನನ್ನು ಮಂಡಲೇಶ್ವರನಾಗಿ ನೇಮಿಸುತ್ತಾನಲ್ಲದೆ, ಕೈಲಾಗದವನನ್ನು ಕೆಲಸದಲ್ಲಿ ಇಡೋಣಿಲ್ಲ. ಹಾಗೆ ದೇವರು ಮನುಷ್ಯನನ್ನು ಭೂಮೇಶ್ವರನನ್ನು ಮಾಡಿದಲ್ಲಿ, ಈ ದೊಡ್ಡ ಭಾರ ವಹಿಸುವದಕ್ಕೆ ತಕ್ಕಷ್ಟು ಶಕ್ತಿ ಅವನಲ್ಲಿ ಇಟ್ಟನೆಂಬುದು ಸಿದ್ಧಿಗೆ ಬಂತು. ಈ ಆದಿ ಮನುಷ್ಯನ ಸ್ಥಿತಿ ಹ್ಯಾಗಿತ್ತೆಂದರೆ: ದೇಹ ಪ್ರಾಣ ಆತ್ಮಗಳು ಅವನಲ್ಲಿ ನೆಟ್ಟಗಾಗಿದ್ದವು. ಪ್ರಾಣವು ಅಹಂಕಾರ ಸ್ವರೂಪವಾದದ್ದು, ಅದು

ನಾನು ಎಂದು ಅನ್ನುತ್ತದೆ. ಅದೇ ನಾನು. ನಾನೆಂಬ ಗ್ರಹಿಕೆ ಬುದ್ಧಿ ಇಲ್ಲದ ಪ್ರಾಣಿಗಳಲ್ಲಿ ಇರುವದಿಲ್ಲ. ದೃಶ್ಯವಾದ ಲೋಕದ ಕಡೆಗೆ ತಿರಿಗಿದ್ದೊಂದು, ಅದೃಶ್ಯವಾದ ಲೋಕದ ಕಡೆಗೆ ತಿರಿಗಿದ್ದೊಂದು, ಹೀಗೆ ಪ್ರಾಣಕ್ಕೆ ಎರಡು ಮುಖಗಳು ಅವೆ. ಕಾಣುವಂಥಾ ಲೋಕದ ಸಂಗಡ ವ್ಯವಹಾರ ಮಾಡುವದಕ್ಕೆ ದೇಹವು, ಕಾಣದಂಥಾ ಲೋಕದ ಸಂಗಡ ವ್ಯವಹಾರ ಮಾಡಲಿಕ್ಕೆ ಆತ್ಮವು ಪ್ರಾಣಕ್ಕೆ ಕರಣಗಳು ಆಗಿವೆ. ಈ ಎರಡು ಕರಣಗಳು ಎರಡು ಬಾಹುಗಳು ಇದ್ದ ಹಾಗಾಯಿತು. ಪ್ರಾಣವು ಒಂದರಿಂದ ದೃಶ್ಯವಾದದ್ದನ್ನು, ಒಂದರಿಂದ ಅದೃಶ್ಯವಾದದ್ದನ್ನು ಹಿಡಕೊಳ್ಳುವದು. ಹೀಗೆ ಭೂಪರಲೋಕದ ಅನುಭವ ಮನುಷ್ಯನಲ್ಲಿ ಕೂಡುವದು. ಆದರೆ ದೇವರಿಂದ ಬಂದ ಆತ್ಮವೇ ನರಭಾವದ ಮೂಲ. ಮನುಷ್ಯರು ಆತ್ಮಭಾವದವರು ಆಗಿರುವದರಿಂದ, ನಿತ್ಯ ಆತ್ಮನಾಗಿರುವ ದೇವರ ಛಾಯೆ ಆಗಿದ್ದಾರೆ. ಆತ್ಮ ಪ್ರಾಣವನ್ನೆಲ್ಲಾ ಮತ್ತು ಅದರ ಮುಖದಿಂದ ದೇಹವನ್ನೆಲ್ಲಾ ವ್ಯಾಪಿಸಿ ತೀಕ್ಷ್ಣ ಮಾಡಿದರೆ, ಬುದ್ಧಿಯಿಂದಲೂ ಪಂಚಜ್ಞಾನೇಂದ್ರಿಯಗಳಿಂದಲೂ ಆಗ ತಕ್ಕಂಥ ಗ್ರಹಿಸುವ ವ್ಯವಹಾರವೂ, ಮನಸಿನಿಂದಲೂ ಪಂಚಕರ್ಮೇಂದ್ರಿಯಗಳಿಂದಲೂ ಆಗ ತಕ್ಕ ಕ್ರಿಯೆ ನಡಿಸುವ ವ್ಯವಹಾರವೂ, ದೇಹದಲ್ಲಿ ಆಗ ತಕ್ಕ ಪ್ರಾಣ (respiration) ಸಮಾನ (assimilation) ಉದಾನ (pulsation) ವ್ಯಾನ (circulation) ವ್ಯವಹಾರಗಳು ನೆಟ್ಟಗಾಗಿರುವವು. ಆದ ಕಾರಣ ಆದಿ ಮನುಷ್ಯನಿಗೆ ಬೇನೆ ರೋಗ ಮರಣ ಆಗುತ್ತಿದ್ದಿಲ್ಲ; ಅರುವು ನಿರ್ಮಲವು ಕ್ರಿಯೆ ಶುದ್ಧವು ಆಗಿತ್ತು. ಅವರಲ್ಲಿ ದೇವರು ಇಟ್ಟ ತೂಕದ ಮೇಲೆ ಎಲ್ಲಾ ನಡೆಯುತ್ತಿದ್ದದರಿಂದ, ಆತನನ್ನು ಅರಿತು ಪ್ರೀತಿ ಮಾಡಲಿಕ್ಕೆ ವೈನವಾಗಿತ್ತು. ಆದಿ ಮನುಷ್ಯರ ಸ್ವಭಾವ ಹೀಗೆ ಇದ್ದ ಕಾರಣ, ಅವರಿಗೆ ಎರಡು ಬೇಕಾಗಿತ್ತು; ಎರಡು ತರದ ಪ್ರೇರಣೆಗಳು ಅವರಲ್ಲಿ ಆಗುತ್ತಿದ್ದವು. ಮೊದಲು ದೇವರ ಪ್ರೀತಿಯ ಅನುಭವ, ಆತನ ಸಂಗತಿ ಬೇಕಾಗಿತ್ತು. ಆತನ ಮೇಲೆ ಪ್ರೀತಿ ಮಾಡಿ ಆತನನ್ನು ಅರಿತು ಹೊಂದಿ ಕೊಳ್ಳ ಬೇಕೆಂದು ತಮ್ಮ ಆತ್ಮಸ್ವಭಾವದಿಂದಲೇ ಪ್ರೇರಣೆ ಆಗುತ್ತಿತ್ತು. ದೇವರ ಪ್ರೀತಿಯ ಅನುಭವವೆ ತಮ್ಮ ಜೀವದ ದೀಪಕ್ಕೆ ಎಣ್ಣೆ.—ದೇಹದ ಮುಖಾಂತರ ಪ್ರಾಣವು ದೃಶ್ಯವಾದ ಲೋಕದಲ್ಲಿ ಇದ್ದದರಿಂದ, ಲೋಕದ ವಸ್ತುಗಳು ಬೇಕಾಗಿದ್ದವು. ಲೋಕವನ್ನು ಅನುಭವಿಸಿ ಅನುಭೋಗಿಸಿ ತನ್ನ ಸ್ವಾಧೀನದಲ್ಲಿ ಸೇರಿಸ ಬೇಕೆಂದು ದೇಹ ಪ್ರಾಣಗಳು ವಿಶೇಷವಾಗಿ ಪ್ರೇರಿಸುತ್ತಿದ್ದವು. ಈ ಪ್ರೇರಣೆಗಳಿಗೆ ತಕ್ಕ ವಿಷಯಗಳು ಇದ್ದವು. ದೇವರ ಕಡೆಗಾದ ಪ್ರೇರಣೆಗೆ ದೇವರೇ ಪರಲೋಕದ್ದೇ ವಿಷಯ; ಲೋಕದ ಕಡೆಗಾದದ್ದಕ್ಕೆ ಲೋಕದಲ್ಲಿ ಪರಲೋಕದನ್ನು ಹೋಲುವ ಆಹಾರ ಮದಿವೆ ಮನೆತನ ಸಭೆ ರಾಜ್ಯ ವಿದ್ಯ ಮುಂತಾದವೇ ವಿಷಯ. ದೇವರು ಅವರಿಗೆ ಪ್ರತ್ಯಕ್ಷವಾಗಿ ತಂದೆಯಂತೆ ಅವರ ಕೂಡ ಮಾತಾಡಿ ತನ್ನ ಪ್ರೀತಿ ಅವರಿಗೆ ತೋರಿಸಿದಲ್ಲಿ, ಅವರ ಆತ್ಮಭಾವದ ಪ್ರೇರಣೆ ತೀರಿಸಿದನು. ಆತನು ಅವರನ್ನು ಗಂಡು ಹೆಣ್ಣಾಗಿ ಸೃಷ್ಟಿಸಿ ಒಂದು ರಮ್ಯವಾದ ತೋಟದಲ್ಲಿ ಅವರನ್ನು ಇಟ್ಟು ಎಚ್ಚರಿಸಿ ದೇಹಕ್ಕೆ ಬೇಕಾದ ಆಧಾರ ಅವರಿಗೆ ಕೊಟ್ಟು ಅವರ ದೇಹಭಾವದ ಅಭಿಲಾಷೆ ತೀರಿಸಿದನು. ದೇವರನ್ನು ಅರಿತು ಪ್ರೀತಿ ಮಾಡಿ ಆತನ ಸಂಗತಿಯಲ್ಲಿ ಇದ್ದು ಪರಿಶುದ್ಧ ದೂತರ ಸಂಗಡ ನಿತ್ಯಾನಂದಲ್ಲಿರುವದು ಮನುಷ್ಯನ ಮುಖ್ಯ ಧರ್ಮ. ಆದರೆ ಗಂಡ ಹೆಂಡರಾಗಿ ಮನೆತನ ನಡಿಸುವದು, ರಾಜ್ಯ ಮಾಡುವದು, ವಿದ್ಯ ಕಲಿಯುವದು ಉಣ್ಣುವದು ಮೊದಲಾದವುಗಳು ಉಪಧರ್ಮಗಳೇ ಸರಿ. ಒಂದೇ ಅವಶ್ಯವಾದದ್ದು; ಅದೇ ಮೊದಲಾಗ ಬೇಕು. ಆ ಮೇಲೆ ಉಳಿದದ್ದು ಸಹ ಆಗ ಬಹುದು. ಮನುಷ್ಯರು ಬಯಿಸ ತಕ್ಕ ವಿಷಯಗಳು ಉತ್ತಮ (ಪರಮಾರ್ಥ, ದೇವರು) ಮಧ್ಯಮ (ಸಂಸಾರ, ಪ್ರಪಂಚ) ಕನಿಷ್ಟವೆಂದು ಹೀಗೆ ಮೂರು ಪ್ರಕಾರವಾಗಿವೆ. ಮೊದಲು ಉತ್ತಮವಾದದ್ದನ್ನು ಆದು ಕೊಂಡು ಹಿಂದುಗಡೆ ಮಧ್ಯಮ ಕನಿಷ್ಟವಾದದ್ದನ್ನು ಆದು ಕೊಂಡರೆ, ಅದು ಧರ್ಮವೆ ಸರಿ. ಆದರೆ ಈ ಕ್ರಮ ತಪ್ಪಿ ಉತ್ತಮವಾದದ್ದನ್ನು ಬಿಟ್ಟು ಮಧ್ಯಮ ಕನಿಷ್ಟವಾದದ್ದನ್ನು ಆದು ಕೊಂಡರೆ, ಅಧರ್ಮವಾಯಿತು. ಒಂದು ಉತ್ತಮ ಪ್ರೇರಣೆ ಒಂದು ಮಧ್ಯಮ ಪ್ರೇರಣೆ ತಮ್ಮಲ್ಲಿ ಕೂ

ಡಾ ಆದಲ್ಲಿ, ಮಧ್ಯಮ ಪ್ರೇರಣೆಗೆ ಕಿವಿ ಕೊಡದೆ ಆ ಉತ್ತಮ ಪ್ರೇರಣೆ ತೀರಿಸುವ ಸ್ವತಂತ್ರ ಆದಿ ಮನುಷ್ಯರಲ್ಲಿ ಇತ್ತು. ಒಳ್ಳೆದಕ್ಕೆ ಒಡಂಬಡಿಸುವಂಥಾ ಕೆಟ್ಟದ್ದಕ್ಕೆ ನಾಚಿಸುವಂಥಾ ಮನೋಸಾಕ್ಷಿ ಅಂಥಾ ಒಳ್ಳೆ ನಿರ್ಣಯಕ್ಕೆ ಅನುಕೂಲವಾಯಿತು. ಹೀಗೆ ಪಾಪದಲ್ಲಿ ಬೀಳದೆ ಯಾವಾಗಲೂ ಉತ್ತಮವಾದ ವಿಷಯವನ್ನು ಮೊದಲು ಮಾಡಿ ಕೊಂಡು ತಮ್ಮ ವಿಶ್ವಾಸವನ್ನೂ ವಿಧೇಯತ್ವವನ್ನೂ ಸಾಧಿಸುತ್ತಾ ಹೋಗಿ ಸಂಪೂರ್ಣರು ಆಗ ತಕ್ಕದ್ದಾಗಿತ್ತು. ಈ ದಿವ್ಯ ಛಾಯೆ ಮೊದಲು ಮನುಷ್ಯರಲ್ಲಿ ಮೊಳಿಕೆಯಂತೆ ಇತ್ತು. ಅದು ಬೆಳೆದು ಸಂಪೂರ್ಣವಾಗ ಬೇಕಾಗಿತ್ತು.—ಉಂಟು ಮಾಡುವ) ದೇವರು ಇಲ್ಲಿಯ ತನಕ ಸಸ್ಯಾದಿಗಳನ್ನು ಜೀವಜಂತುಗಳನ್ನು ಭೂಮಿಯಿಂದ ಸಮೂಹವಾಗಿ ಹೊರಟಿಸಿ ಸೃಷ್ಟಿಸಿದನು: ಶಿಲೆ ಇತ್ಯಾದಿ ಎಲ್ಲಾ ಸ್ಥಾವರಗಳಲ್ಲಿ ಒಂದೊಂದು ಕಲ್ಲೂ ಒಂದೊಂದು ಗಿಡವೂ ಜಂಗಮಾದಿಗಳಲ್ಲಿ ಒಂದೊಂದು ಪ್ರಾಣಿಯೂ ದೇವರ ಮಹಿಮಾ ಸಮುದ್ರದ ಒಂದು ತಟಕು. ಈ ತಟಕುಗಳೆಲ್ಲಾ ಮನುಷ್ಯನಲ್ಲಿ ಒಟ್ಟುಗೂಡಿ ಒಂದು ಸರೋವರವಾದ ಹಾಗಾಯಿತು. ಸೃಷ್ಟಿಗಳಲ್ಲಿ ಉತ್ತಮ ಸೃಷ್ಟಿಯಾದ ಮನುಷ್ಯರನ್ನು ಮಾಡಲಿಕ್ಕೆ ದೇವರು ಉಪಕ್ರಮಿಸುವಾಗ, ತನ್ನ ಸಂಗಡ ಆಲೋಚನೆ ಮಾಡಿ ಕೊಳ್ಳುತ್ತಾನೆ. ಆತನು ನಾವು ಮಾಡುವ ಅಂದಲ್ಲಿ, ತನ್ನಲ್ಲಿ ಒಂದು ಬಹುತ್ವ ತೋರಿಸಿ ಇದರಿಂದ ತನ್ನ ಸತ್ಯ ಪ್ರತಿರೂಪವಾದಂಥಾ ತನ್ನ ಮಹಿಮೆಯ ಪ್ರತಿಕಾಂತಿಯಾದಂಥಾ ನಿತ್ಯ ವಾಕ್ಯವನ್ನು ಸೂಚಿಸುತ್ತಾನೆ. (ಯೋಹ. ೧, ೧. ೩. ಕೊಲ. ೧, ೧೫. ಇಬ್ರಿ. ೧, ೩.) ಈ ನಿತ್ಯ ವಾಕ್ಯ (ಉತ್ಪ. ೧೬, ೭ ಮುಂ.) ದೇವರಿಂದ ಪ್ರತ್ಯೇಕವಾದಂಥಾ ಆದರೂ ಕರ್ತನ ಸಂಗಾತ ಏಕವಾದಂಥಾ ಕರ್ತನ ದೂತನು ಎಂದು ಎನಿಸುತ್ತದೆ. ದೇವರು ಅನಾದಿಯಿಂದ ಪ್ರೀತಿಯೇ; ಲೋಕೋತ್ಪತ್ತಿಗಿಂತ ಮುಂಚೆ ಆತನು ತನ್ನ ಪ್ರತಿರೂಪವಾದ ಒಬ್ಬನೆ ಹುಟ್ಟಿದ ಮಗನಲ್ಲಿ ತನ್ನನ್ನು ಪ್ರತಿ ದೃಷ್ಟಿಸಿ ಅರಿತು ತನ್ನ ಮೇಲೆ ಪ್ರೀತಿ ಮಾಡಿದನು. ಮನುಷ್ಯನನ್ನು ಸೃಷ್ಟಿಸಿದಲ್ಲಿ, ವಿಶೇಷವಾಗಿ ದೇವರ ಪ್ರೀತಿಯ ಚಿತ್ತ ಕಾಣಬಂತು. ತ್ರಿಯೇಕತ್ವ ಇಲ್ಲಿ ಸೂಚಿಸಿ ಅದೆ.

೨೭ ವ. ಈ ವಚನದಲ್ಲಿ ಮೊದಲು ಹೇಳಿದ್ದು ಇನ್ನೊಂದು ಸರ್ತಿ ಹೇಳುತ್ತಾನೆ. ಯಾಕಂದರೆ ದೇವರು ಮನುಷ್ಯರನ್ನು ತನ್ನ ಛಾಯೆಯಾಗಿ ಸೃಷ್ಟಿಸಿದ ಮಾತು ಬಹಳ ದೊಡ್ಡದಾಗಿ ಕಂಡಿತು. ಇದಕ್ಕೆ ರಚಿಸಿದವನು ಆಶ್ಚರ್ಯ ಸಂತೋಷ ಪಡುತ್ತಾನೆ.

ಗಂಡು ಹೆಣ್ಣಾಗಿ) ಉತ್ಪ. ೨, ೭. ೨೧ ಮುಂ. ವಿಸ್ತಾರವಾಗಿ ಹೇಳಿದಂತೆ, ಮೊದಲು ಆದಮನನ್ನು ಆ ಮೇಲೆ ಹವ್ವಳನ್ನು ನಿರ್ಮಿಸಿದನು. ಅದಕ್ಕೆ ಮದಿವೆಯ ಸ್ಥಿತಿ ದೇವರ ನೇಮಕ. ಆದಮನು ಹವ್ವಳು ಎಂಬ ಈ ಆದಿ ಮನುಷ್ಯರಿಂದ ಎಲ್ಲಾ ಮನುಷ್ಯರು ಹುಟ್ಟಿದ್ದಕ್ಕೋಸ್ಕರ, ಅವರೆಲ್ಲರು ಒಂದೆ ದೊಡ್ಡ ಕುಟುಂಬವಾಗಿದ್ಧಾರೆ. ಚರ್ಮದ ಬಣ್ಣ, ಕಪಾಲದ ಆಕೃತಿ, ದೇಹದ ಪ್ರಮಾಣ ಬೇರೆ ಬೇರೆ ದೇಶದವರಿಗೆ ಬೇರೆ ಬೇರೆ ಇದ್ದರೂ, ಮನುಷ್ಯರ ಏಕತ್ವಕ್ಕೆ ಏನು ಅನುಮಾನವಿಲ್ಲ. (ಅಪೊ. ಕ್ರಿ. ೧೭, ೨೬.) ಯಾಕಂದರೆ: ೧) ದೇಹ ಒಂದೇ. ಪಂಚಜ್ಞಾನೇಂದ್ರಿಯಗಳಿಂದಲೂ ಪಂಚಕರ್ಮೇಂದ್ರಿಯಗಳಿಂದಲೂ ಆಗುವ ವ್ಯವಹಾರಗಳೂ, ಮಾತಾಡುವದೂ ಒಂದೇ. ೨) ಎಲ್ಲರಲ್ಲಿ ಪಾಪ ಪುಣ್ಯದ ಅರುವು ಉಂಟು. ಎಲ್ಲರು ಏನಾದರೂ ಒಂದು ವಿಧದ ಆರಾಧನೆ ನಡಿಸುತ್ತಿದ್ಧಾರೆ. ಎಲ್ಲರು ವಿದ್ಯ ಕಲಿಯ ಬಹುದು. ಆದ್ದರಿಂದ ಬ್ರಾಹ್ಮಣರು ಬ್ರಹ್ಮನ ತಲೆಯಿಂದ, ಕ್ಷತ್ರಿಯರು ಅವನ ಭುಜದಿಂದ, ವೈಶ್ಯರು ಅವನ ತೊಡೆಯಿಂದ, ಶೂದ್ರರು ಪಾಪದಿಂದ ಹುಟ್ಟಿದರೆಂದು ಈ ದೇಶದಲ್ಲಿ ರೂಢಿಯಾಗಿರುವ ಮಾತು ದೇವರ ವಾಕ್ಯಕ್ಕೂ ಸತ್ಯವಿದ್ಯಕ್ಕೂ ವಿರುದ್ಧವಾಗಿದೆ.

bbb) ದೇವರು ಮನುಷ್ಯರನ್ನು ಆಶೀರ್ವದಿಸಿದ್ದು. ೨೮.

ಅಭಿವೃದ್ಧಿಯಾಗಿ ಹೆಚ್ಚಿ ಭೂಮಿಯನ್ನು ತುಂಬಿರಿ! ಅದನ್ನು ವಶ ಮಾಡಿ ಕೊಂಡು ಸಮುದ್ರದ ಮೀನುಗಳನ್ನೂ —ಜಂತುಗಳನ್ನೂ ಆಳಿರಿ!) ಮೊದಲನೆ ವಾಕ್ಯದಿಂದ ಸಂಸಾರವನ್ನು ಎರಡನೆ ವಾಕ್ಯದಿಂದ ಪ್ರ

ಪಂಚವನ್ನು ನೇಮಿಸಿ ಎರಡನ್ನು ಆಶೀರ್ವದಿಸಿ ಪರಿಶುದ್ಧ ಮಾಡಿದ್ದಾನೆ. ಮಕ್ಕಳು ಕರ್ತನ ದಾನ. (ಕೀರ್ತ. ೧೨೭, ೩.) ಉದ್ಯೋಗ ವ್ಯಾಪಾರ ನೆಟ್ಟಗೆ ಸಾಗುವದು ಆತನ ಆಶೀರ್ವಾದ. ಮನುಷ್ಯರು ಭೂಮಿಯನ್ನು ಕಾಲಾಂತರದಲ್ಲಿ ಹೆಚ್ಚು ಹೆಚ್ಚಾಗಿ ವಶ ಮಾಡಿ ಕೊಂಡು ಎಲ್ಲನ್ನು ಆಳುವವರು ಆಗ ಬೇಕು. ಅದು ಇನ್ನು ಆಗಿದ್ದಿಲ್ಲ. ಆದಿ ಮನುಷ್ಯರು ಬುದ್ಧಿಯಲ್ಲಿ ಇನ್ನು ಹುಡುಗರಂತೆ ಇದ್ದರು. ಚಂದಾಗಿ ಹೊಲ ಮಾಡಿ ಭೂಮಿಯಿಂದ ಫಲಗಳನ್ನು ತಕ್ಕೊಳ್ಳುವದೂ; ಸೃಷ್ಟಿಯ ಬಲಗಳನ್ನು ವಿಚಾರಿಸಿ ತಿಳಿದು ಉಪಯೋಗಕ್ಕೆ ತಂದು ಕೊಳ್ಳುವದೂ (ವಿದ್ಯುಲ್ಲತಾಯಂತ್ರ, ಅಗ್ನಿರಥ, ಅಗ್ನಿಹಡಗ); ಕಲ್ಲು ಮಣ್ಣು ಕಟ್ಟಿಗೆ ಲೋಹ ಮುಂತಾದ ಸಾಹಿತ್ಯಗಳಿಂದ ಬೇರೆ ಬೇರೆ ಸಾಮಾನುಗಳನ್ನು ಮಾಡುವದೂ; ಪಂಚಭೂತಗಳಿಂದ ಗಂಡಾಂತರ ಬಾರದಂತೆ, ಜೀವ ಕ್ಷೇಮ ಸ್ಥಿತಿ ಕಾಯಿ ಕೊಳ್ಳುವದೂ; ಸೃಷ್ಟಿಯ ಭಯಂಕರಕ್ಕೂ ರಮ್ಯಕ್ಕೂ ಒಳಗಾಗದೆ, ದೇವರ ಕಡೆಗೆ ತಿರಿಗಿದ್ದೂ, ನಿನ್ನ ಹೊರ್ತು ನನಗೆ ಭೂಪರಲೋಕದಲ್ಲಿ ಸಂತೋಷವಿಲ್ಲವೆಂದು (ಕೀರ್ತ. ೭೩, ೨೫. ೨೬.) ಏಕಭಾವದಿಂದ ಇರುವದೂ: ಇದೆಲ್ಲಾ ವಶ ಮಾಡಿ ಕೊಂಡು ಎಂಬ ಶಬ್ದದಲ್ಲಿ ಬಂದದೆ. ಈ ಪ್ರಕಾರವಾದರೆ, ಸಂಸಾರ ಪ್ರಪಂಚಗಳು ಮನುಷ್ಯರಿಗೆ ವಿಶ್ವಾಸ ವಿಧೇಯತ್ವ ಕಲಿಯುವಂಥಾ ತಮ್ಮ ಬಲ ಸಾಧಿಸುವಂಥಾ ಸಾಲೆಗಳಲ್ಲದೆ, ಆತ್ಮ ಹಿಡಕೊಂಡಿರುವ ಶೆರೆಯಲ್ಲ. ಆದರೆ ಬಹಳ ಸರ್ತಿ ಮನುಷ್ಯರು ದೃಶ್ಯವಾದ ಲೋಕಕ್ಕೆ ಅಂಜಿ ಅಥವಾ ಮರುಳುಗೊಂಡು ಸೇವೆ ಮಾಡುವ ದಾಸರು ಆಗುತ್ತಾರೆ. ಪಾಪದಲ್ಲಿ ಬಿದ್ದಂದಿನಿಂದ ಸೃಷ್ಟಿಯು ಮನುಷ್ಯರನ್ನು ಸಹಸ್ರ ಬಾಹುಗಳಿಂದ ಹಿಡಕೊಳ್ಳುವಂಥಾದ್ದಾಯಿತು. ಇದಕ್ಕೆ ಈ ಸೃಷ್ಟಿಯ ದೃಶ್ಯವಾದ ವಸ್ತುಗಳಿಗೆ ದೇವರೆಂದು ನಡೆದು ಕೊಳ್ಳುವ ಅನ್ಯ ಜನರೂ, ಅವು ಪರಮ ಪದವಿ ಎಂದು ಅವುಗಳಲ್ಲಿ ಶಿಕ್ಕೊಂಡ ಪಾಪಿಷ್ಟರೂ ದೃಷ್ಟಾಂತ. ಮನುಷ್ಯರು ಸೃಷ್ಟಿಯನ್ನು ಸೇವಿಸುವವರಲ್ಲ, ದೇವರ ಚಿತ್ತಕ್ಕೆ ಅನುಸಾರವಾಗಿ ಆಳುವವರು ಆಗ ಬೇಕು. ಅಗ್ನಾನಿಗಳು ದೃಶ್ಯವಾದದ್ದೇ ಕೆಟ್ಟದ್ದು, ಆತ್ಮವು ಅದನ್ನು ಧರಿಸಿ ಕೊಂಡದ್ದೇ ಪಾಪವೆಂದು ಸಂಸಾರ ಪ್ರಪಂಚಗಳನ್ನು ತಿರಸ್ಕರಿಸಿ ಬಿಟ್ಟು ಸನ್ನ್ಯಾಸಿಗಳಾಗ ಬೇಕೆಂದು ನೆನಿಸುತ್ತಾರೆ. ಆದರೆ ಅವು ತಮ್ಮಷ್ಟಕ್ಕೆ ಕೆಟ್ಟಂಥಾವಲ್ಲ, ಅವು ಈಗಿನ ಪೂರ್ತಿಯವು ಎಂದು ನಾವು ಯಾವಾಗಲು ನೆನಪು ಮಾಡಿ ಕೊಂಡು ತಕ್ಕ ಹಾಗೆ ಅವನ್ನ ಪ್ರಯೋಗಿಸಿದರೆ, ದೇವರ ಸನ್ನಿಧಾನದಲ್ಲಿ ಶೇರಲಿಕ್ಕೆ ನಮ್ಮನ್ನು ಯೋಗ್ಯ ಮಾಡುವ ಸಾಧಕಗಳೆ. ಪ್ರಪಂಚ ಸಂಸಾರಕ್ಕೆ ಅಂಜಿ ಗುಡ್ಡಕ್ಕೆ ಓಡಿ ಹೋಗುವದು ಪುಕ್ಕತನವೆ ಸರಿ. ಹೋದಲ್ಲಿಗೂ ಅವು ಬೆನ್ನು ಹತ್ತಿ ಬರುವವು. ಅವನ್ನ ನೆಟ್ಟಗೆ ನಡಿಸಿ ಜಯಿಸಿ ಪಾರಾಗ ಬೇಕು.

ccc) ದೇವರು ಅವರಿಗೆ ಆಹಾರ ನೇಮಿಸಿದ್ದು. ೨೯.

ಅವು ನಿಮಗೆ ಆಹಾರಕ್ಕಾಗಿ ಇರಲಿ!) ಕೂಸುಗಳಿಗೆ ಹಾಲು ತಕ್ಕ ಆಹಾರ ಹ್ಯಾಗೋ, ಹಾಗೆ ಇನ್ನು ಬಾಲ್ಯದಲ್ಲಿದ್ದ ಮನುಷ್ಯರಿಗೆ ಫಲಾಹಾರ ಹಿತವಾಗಿತ್ತು. ಜಲಪ್ರಳಯವಾದ ಬಳಿಕ ದೇವರು ಮನುಷ್ಯರಿಗೆ ಮಾಂಸವನ್ನು ಸಹ, ತಿನ್ನಲಿಕ್ಕೆ ಅಧಿಕಾರ ಕೊಟ್ಟನು. ಸಂಧಿ. ೯, ೧. ಮುಂ.

ddd) ಉಳಿದ ಪ್ರಾಣಿಗಳಿಗೆ ಆಹಾರ ನೇಮಿಸಿದ್ದು. ೩೦.

ಎಲ್ಲಾ ಮೃಗಗಳಿಗೂ) ಇದರಲ್ಲಿ ಪಶುಗಳು ಸುಧಾ ಬಂದವೆ. ಅವಕ್ಕೂ ಆದಿಯಲ್ಲಿ ತೃಣಾಹಾರ ನೇಮಿಸಿದ್ದಾಯಿತು. (ಎಶ. ೧೧, ೭.)

eee) ಸೃಷ್ಟಿಕಾರ್ಯ ಮುಗಿದದ್ದು. ೩೧.

ಬಹು ಒಳ್ಳೇದಾಗಿತ್ತು) ಈ ಆರು ದಿನಗಳಲ್ಲಿ ಉಂಟಾದ ಒಂದೊಂದು ಸೃಷ್ಟಿಗೆ ದೇವರು ಮೆಚ್ಚಿ ಒಳ್ಳೇದೆಂದು ನೋಡಿದನು. ಯಾಕಂದರೆ ಒಂದೊಂದು ತನ್ನಲ್ಲಿ ತನ್ನಷ್ಟಕ್ಕೆ ಉತ್ತಮವೂ ಸಂಪೂರ್ಣವೂ

ಆಗಿತ್ತು. ಆದರೆ ಸೃಷ್ಟಿಗಲ್ಲಿ ಶಿಖಾಮಣಿಯಾದ ಮನುಷ್ಯರು ನಿರ್ಮಾಣವಾದನಂತರ ಬಹು ಒಳ್ಳೆದಾಗಿ ತೋರಿತು. ಕಣ್ಣು ತನ್ನಷ್ಟಕ್ಕೆ ಬಹು ಚಂದ. ಆದರೆ ದೇಹದೊಳಗೆ ತನಗೆ ತಕ್ಕ ಸ್ಥಲದಲ್ಲಿದ್ದು ನೋಡುವ ತನ್ನ ಧರ್ಮ ನಡಿಸಿದರೆ, ಇನ್ನು ಹೆಚ್ಚು ಚಂದವಾಗಿ ತೋರುತ್ತದೆ. ಈ ಪ್ರಕಾರವಾಗಿ ಆ ಬೇರೆ ಬೇರೆ ಸೃಷ್ಟಿಗಳು ಅವಯವಗಳೇ, ಅವು ಕೂಡಿ ಒಂದಕ್ಕೊಂದು ಅನುಕೂಲವಾಗಿ ಒಂದು ಶರೀರವಾದ ಹಾಗಾಯಿತು. ಈ ಭೂಲೋಕ ಎಂಬ ಶರೀರದಲ್ಲಿ ಮನುಷ್ಯರೇ ಜೀವಾತ್ಮ. ಅವರೇ ಸೃಷ್ಟಿಯ ಬಾಯಿ (ಕ್ರಿಸ್ತನು ಮನುಷ್ಯರ ಬಾಯಿ ಇದ್ದಂತೆ). ಇದು ಬಹು ಒಳ್ಳೇದು ಸರಿ. — ಒಳ್ಳೇದು ಎಂಬ ಶಬ್ದದಲ್ಲಿ ಮೂರು ಅಭಿಪ್ರಾಯಗಳು: ೧) ನೋಡು. ೪ ವ. ೨) ದೇವರು ಉತ್ತಮೋತ್ತಮನು, ಪರಿಶುದ್ಧನು. ಆತನಿಂದಲೆ ಒಳ್ಳೇದಲ್ಲದೆ ಕೆಟ್ಟದ್ದು ಬರುವದಿಲ್ಲಾದ ಕಾರಣ, ಆತನ ಸೃಷ್ಟಿಯಲ್ಲಿ ಪಾಪಾಗ್ನಿ ತಗಲಿಸುವ ಸಾಹಿತ್ಯ ಒಂದಾದರೂ ಇಲ್ಲ. ೩) ದೇವರು ಅಳತೆ ತೂಕ ನೋಡಿ ಬಹಳ ನೆಟ್ಟಗೆ ಹಾಳತ ಮಾಡಿದನು. ಇದಕ್ಕೆ ಕೆಲವು ಉದಾಹರಣಗಳನ್ನು ಹೇಳುತ್ತೇವೆ: ವಾಯುಮಂಡಲವು ಭೂಮಿಯ ನೆಲದಿಂದ ಮೇಲಕ್ಕೆ ೧೫ ಹರುದಾರಿ ಎತ್ತರವಾಗೆದೆ. ಅದರ ಎತ್ತರ ಒಂದು ಹರುದಾರಿ ಮಾತ್ರ ಕಡಿಮೆ ಆಗಿದ್ದರೆ, ತಾಳಲಾರದ ಛಳಿ ಆಗಿ ಭೂಮಿಯ ಫಲಗಳು ಬೆಳೆಯಲಾರದಿದ್ದವು. ಆದರೆ ಆ ವಾಯುಮಂಡಲದ ಎತ್ತರ ಒಂದು ಹರುದಾರಿ ಹೆಚ್ಚಾಗಿದ್ದರೆ, ಬಿಸಲು ಬಹಳ ಹೆಚ್ಚಾಗಿ, ವಾಯುವಿನ ಭಾರಕ್ಕೆ ಮನುಷ್ಯರಲ್ಲಿ ಉಸಲಾಡಲಿಕ್ಕೆ ಬಹಳ ಕಷ್ಟವಾಗುತ್ತಿತ್ತು. ಇದಕ್ಕಿಂತ ಇನ್ನು ಹೆಚ್ಚು ಎತ್ತರವಾಗಿದ್ದರೆ, ವಾಯು ಅತಿ ಭಾರವಾಗಿ ಬಿರುಘಾಳಿಯಂತೆ ಬೀಸಿ ನಮ್ಮನ್ನು ನೆಲಕ್ಕೆ ಒತ್ತಿ ಮನೆಗಳನ್ನು ಕೆಡಹಿ ಗಿಡಗಳನ್ನು ಕಿತ್ತು ಹಾಕುತ್ತಿತ್ತು. ಬದುಕಲಿಕ್ಕೆ ಆಗುತ್ತಿದ್ದಿಲ್ಲ. ನಮ್ಮ ಭೂಮಿಯು ಚಂದ್ರನಷ್ಟು ಮಾತ್ರ ದೊಡ್ಡದಾಗಿದ್ದ ಪಕ್ಷದಲ್ಲಿ, ಆಕರ್ಷಣ ಐದು ಪಾಲಷ್ಟು ಕಡಿಮೆ ಆದದ್ದಕ್ಕೆ, ನಮ್ಮ ಭಾರ ಐದು ಪಾಲಷ್ಟು ಕಡಿಮೆ ಆಗಿ, ನಾವು ಮಿಡಿತೆಗಳಂತೆ ಹಾರ್ರ್ಯಾಡಲಿಕ್ಕೆ ಬರುತ್ತಿತ್ತು. ಘಾಳಿ ಸ್ವಲ್ಪ ಬೀಸಿ ನಮ್ಮನ್ನು ನೆಲಕ್ಕೆ ಕೆಡಹುತ್ತಿತ್ತು. ನಮ್ಮ ಭೂಮಿ ಬೃಹಸ್ಪತಿಯಷ್ಟು ದೊಡ್ಡದಾಗಿದ್ದರೆ, ಆಕರ್ಷಣ ೧೧ ಪಾಲಷ್ಟು ಹೆಚ್ಚಿದ್ದಕ್ಕೆ, ನಮ್ಮ ಭಾರ ೧೧ ಪಾಲಷ್ಟು ಹೆಚ್ಚಾಗಿ ನಮ್ಮನ್ನು ಒತ್ತಿ, ನಿಲ್ಲ ಅಥವಾ ನಡೆಯ ಗೊಡುತ್ತಿದ್ದಿಲ್ಲ. — ಇದ್ದಲಿ ನೀರು ಈ ಎರಡು ಪದಾರ್ಥಗಳಿಂದ ಧಾನ್ಯ ಆಗೆದೆ ಎಂದು ರಸಾಯನ ವಿದ್ಯದಿಂದ ಬಲ್ಲೆವು. ಇದ್ದಲಿ ಹಾಗೆ ತಿಂದರೆ, ಪೋಷಣವಾದೀತೋ? ಆ ಪದಾರ್ಥಗಳು ದೇವರು ನೇಮಿಸಿದ ತೂಕ ಅಳತೆಯ ಮೇಲೆ ಮಿಶ್ರವಾಗೋಣದರಿಂದ, ಪೋಷಿಸುವ ಧಾನ್ಯವಾಗುವದು. ಉಪ್ಪು ದೇಹಪೋಷಣೆಗೆ ಎಷ್ಟು ಉಪಯೋಗ? ಆದರೆ ಎರಡು ವಿಷದ ಜೀನಸುಗಳು ಕೂಡಿ ಅದು ಆಗೆದೆ. ಅವುಗಳನ್ನು ಹಾಗೆ ತಿನ್ನುವದಾದರೆ, ಉದರ ಸುಟ್ಟು ತೂತು ಬೀಳುತ್ತಿತ್ತು. ಅಥವಾ ಕೈಯಲ್ಲಿ ಹಾಕಿದ್ದಾದರೆ, ಅದು ಸುಡುತ್ತಿತ್ತು. — ಆರನೆ ದಿವಸ) ಶುಕ್ರವಾರ; ಅದರಲ್ಲಿ ಮನುಷ್ಯನು ಸೃಷ್ಟಿಸಲ್ಪಟ್ಟನು. ಮತ್ತು ರಕ್ಷಿಸಲ್ಪಟ್ಟನು.

3) ಸಬ್ಬತ್ ಅಥವಾ ವಿಶ್ರಾಂತಿಯ ದಿವಸ. ೨, ೧—೩.

೧—೩. ವ. ಹೀಗೆ ಆಕಾಶವೂ ಭೂಮಿಯೂ ಅವುಗಳ ಸೈನ್ಯವೆಲ್ಲವು ೧) ತೀರಿದವು. ದೇವರು ಏಳನೆ ದಿವಸದಲ್ಲಿ ತಾನು ಮಾಡಿದ ತನ್ನ ಕೆಲಸವನ್ನು ತೀರಿಸಿ ಏಳನೆ ದಿವಸದಲ್ಲಿ ತಾನು ಮಾಡಿದ ತನ್ನ ಕೆಲಸದಿಂದ ತೀರುಗಡೆಯಾದನು. ೨) ಮತ್ತು ದೇವರು ಆ ಏಳನೆ ದಿವಸವನ್ನು ಆಶೀರ್ವದಿಸಿ ಅದನ್ನು ಪರಿಶುದ್ಧ ಮಾಡಿದನು ೩); ಯಾಕಂದರೆ ತಾನು ಸೃಷ್ಟಿಸಿ ಮಾಡಿದ ತನ್ನ ಎಲ್ಲಾ ಕೆಲಸದಿಂದ ಅದರಲ್ಲಿ ತೀರುಗಡೆಯಾದನು.

ಉತ್ಪತ್ತಿ. ೨, ೧—೩.

೧) ಪರಲೋಕದ ದೇವದೂತರೂ, ಆಕಾಶದ ನಕ್ಷತ್ರಗಳೂ ಇವಲ್ಲದೆ, ಭೂಮಿಯ ಮೇಲೆ ದೇವರಿಂದ ನಿರ್ಮಾಣವಾದದ್ದೆಲ್ಲಾ ಸಹ ಎಂಬರ್ಥ ಈ ಶಬ್ದದಲ್ಲಿ ಅದೆ. ದೇವರು ತನ್ನ ವಾಕ್ಯದ ಬೇರೆ ಬೇರೆ ಸ್ಥಳಗಳಲ್ಲಿ ಯೆಹೋವ ಜೇಬಾವೊತ = ಸೈನ್ಯಗಳ ಕರ್ತನು = ದೂತರ ಹಾಗೂ ನಕ್ಷತ್ರಗಳ ಕರ್ತನು ಎನಿಸುತ್ತಾನೆ. ದೂತರೂ ನಕ್ಷತ್ರಗಳೂ ಆತನ ಸೈನ್ಯ. (ಎಶ. ೪೦, ೨೬. ಎರೆ. ೧೯, ೧೩. ಜೆಫ. ೧, ೫. ಲೂಕ. ೨, ೧೩.) ದೂತರು ವಿಶೇಷವಾಗಿ ದೇವರ ಸೇವಕರು, ಆತನ ಮಹಿಮೆಗಾಗಿ ಕಾದಾಡಿ ಆತನ ಚಿತ್ತವನ್ನು ನಡಿಸುವ ದಂಡು.—೨) ದೇವರು ತೂಕಡಿಸುವವನೂ, ನಿದ್ರೆ ಮಾಡುವವನೂ, ಸುಮ್ಮನೆ ಇರುವವನೂ, ಅಲ್ಲ. ಆತನು ಲೋಕವನ್ನು ಸೃಷ್ಟಿಸಿದಂದಿನಿಂದ ಅದನ್ನು ಸಲಹಿ ತನ್ನ ಸೃಷ್ಟಿಗಳಿಗೆ ಎಡೆಬಿಡದೆ ಪರಿಪಾಲನೆ ಮಾಡಿ ಕಾರ್ಯವನ್ನು ನಡಿಸುತ್ತಾ ಇದ್ದಾನೆ. (ಯೋಹ. ೫, ೧೭). ಸೃಷ್ಟಿಸುವದನ್ನು ಮಾತ್ರ ಬಿಟ್ಟು, ಸೃಷ್ಟಿಸಿದ್ದಕ್ಕೆ ಮೆಚ್ಚಿ ಆನಂದವಾದನು. (ಹೊರ. ೩೧, ೧೭.) ಒಂದು ಕ್ಷಣದಲ್ಲಿ ಲೋಕವನ್ನೆಲ್ಲಾ ನಿರ್ಮಿಸುವದು ದೇವರಿಗೆ ಶಕ್ಯವಾಗಿತ್ತು. ಆದರೆ ಪ್ರಪಂಚವನ್ನು ಪಾರಮಾರ್ಥವನ್ನೂ ನಡಿಸ ತಕ್ಕ ಕ್ರಮಮಾರ್ಗ ನಮಗೆ ತೋರಿಸಲಿಕ್ಕೆ ಹೀಗೆ ಮಾಡಿದ್ದಾನೆ. ಆತನು ನಮಗೆ ಈ ಮೇರೆಗೆ ಮಾರ್ಗ ತೋರಿಸಿದ್ದಲ್ಲಿ, ಆರು ದಿವಸ ಪ್ರಪಂಚದ ಕಾರ್ಯವನ್ನು ನಡಿಸಿ ಏಳನೆ ದಿವಸದಲ್ಲಿ ತೀರುಗಡೆ ಆಗ ಬೇಕು ಎಂದು, ಸೀನಾಯಿಪರ್ವತದ ಮೇಲೆ ನೇಮ ಕೊಡದ ಮುಂಚೆ, ಮನುಷ್ಯರಿಗೆ ಆಗ್ನಾಪಿಸಿದ ಹಾಗಾಯಿತು.—೩) ಈ ತೀರುಗಡೆಯ ದಿವಸದಲ್ಲಿ ಒಂದು ವಿಶೇಷ ಆಶೀರ್ವಾದ ಅದನ್ನು ಆಚರಿಸುವವರಿಗೆ ಆಗ ಬೇಕು ಎಂದು ಅದನ್ನು ವಾರದ ಉಳಿಕೆಯ ದಿವಸಗಳಿಂದ ಪ್ರತ್ಯೇಕ ಮಾಡಿದನು. ಈ ದಿವಸದಲ್ಲಿ ಮುಖ್ಯವಾಗಿ ಪರದ ಸಾಧನೆ ಮಾಡ ತಕ್ಕದ್ದು. ಇಂಥಾ ಪರಿಶುದ್ಧ ಕಾರ್ಯ ಅದರಲ್ಲಿ ನಡಿಸಿದರೆ ಒಂದು ವಿಶೇಷ ಆಶೀರ್ವಾದ ಬರುವದು. ಆದರೆ ಆರು ದಿವಸ, ತನ್ನ ಪ್ರಾಣ ಇದ್ದಷ್ಟು, ಕೆಲಸ ಮಾಡಿದ ಬಳಿಕ, ವಿಶ್ರಾಂತಿಯಾಗುವಂತೆ, ಈ ದಿವಸ ದೇಹಕ್ಕೂ ಅವಶ್ಯವಾಗಿದೆ. ಮನುಷ್ಯರ ಪ್ರಕೃತಿಗೆ ಯಾವದು ಹಿತವೆಂದು ಸೃಷ್ಟಿಕರ್ತನು ಚಂದಾಗಿ ಬಲ್ಲನು. ದಣಿಕೊಂಡು ತಕ್ಕಷ್ಟು ಕಾಲ ಕೆಲಸ ಮಾಡಿದ ಮೇಲೆ, ತಿರಿಗಿ ವಿಶ್ರಮಿಸಿ ಕೊಳ್ಳುವದು; ಕೆಲವು ದಿವಸ ಇಹಕ್ಕೆ ಸಾಧನ ಮಾಡಿದ ಮೇಲೆ, ತಿರಿಗಿ ಪರಕ್ಕೆ ಸಾಧನ ಮಾಡುವದು ಇದು ಮನುಷ್ಯರ ಪ್ರಕೃತಿಗೆ ಹಿತವಾದದ್ದು. ಹೀಗೆ ಮಾಡದೆ ಯಾವಾಗಲೂ ಒಂದರಲ್ಲಿಯೇ ಇದ್ದರೆ, ಬೇಗ ಬೇಸರಗೊಂಡು ಬಿಟ್ಟು ಬಿಡುವ ಹಾಗೆ ಆಗುವದು. ಈ ಕ್ರಮ ಕೈಕೊಳ್ಳದೆ, ಈ ದೇಶದವರು ಒಂದು ವೇಳೆ ಪ್ರಪಂಚದಲ್ಲಿ ತೀರ ಮಗ್ನರಾಗಿ ಹಗಲು ರಾತ್ರಿ ಇಹದ ಚಿಂತೆಗಳನ್ನು ಹಲವು ಕಾಲ ಮಾಡುವವರಾದ ಮೇಲೆ, ಬಹಳ ಸಾಕಾಗಿ, ಹೆಂಡತಿ ಮನೆ ಕೆಲಸ ಬಿಟ್ಟು ಬಿಟ್ಟು ಗುಡ್ಡದಲ್ಲಿ ಶೇರುವರು. ಆದರೆ ಇದಕ್ಕೂ ಕಡೆಗೆ ಬೇಸತ್ತು, ಮತ್ತು ಲೋಕದ ಭೋಗಕ್ಕೆ ಬೀಳುವರು. ಪಾರಮಾರ್ಥವು ಪ್ರಪಂಚಕ್ಕೆ, ಪ್ರಪಂಚವು ಪಾರಮಾರ್ಥಕ್ಕೆ ರುಚಿ ಕೊಡುವದು. ಈ ಲೋಕದಲ್ಲಿರುವನಕ, ನೀತಿಯಿಂದ ನಡೆದು, ದೃಶ್ಯವಾದ ಪ್ರಪಂಚದಲ್ಲಿ, ಅದೃಶ್ಯವಾದ ಪಾರಮಾರ್ಥದ ಫಲ ತೋರಿಸ ಬೇಕು. ಪಾರಮಾರ್ಥದಿಂದಲೇ ಪ್ರಪಂಚ ಸಿದ್ಧಿಗೆ ಬರುವದು. ಪಾರಮಾರ್ಥವೆ ಲೆಖ್ಖ, ಪ್ರಪಂಚವೇ ಆ ಲೆಖ್ಖ ನೆಟ್ಟಗೋ ಇಲ್ಲವೋ ಎಂದು ತೋರಿಸುವ ತಾಳೆ.—ಕ್ರಿಸ್ತನು ಆದಿತ್ಯವಾರದಲ್ಲಿ ಸತ್ತವರೊಳಗಿಂದ ಎದ್ದು ರಕ್ಷಣಾಕಾರ್ಯವನ್ನು ತೀರಿಸಿದ್ದಕ್ಕೆ ಕ್ರೈಸ್ತರು ಶನಿವಾರವನ್ನು ಅಲ್ಲ ವಾರದ ಮೊದಲನೆ ದಿನವಾದ ಆದಿತ್ಯವಾರವನ್ನೆ ಸಬ್ಬತ್ ದಿವಸ ಮಾಡಿ ಕೊಂಡಿದ್ದಾರೆ. ಸೃಷ್ಟಿಕಾರ್ಯದಿಂದ ಲೋಕ ಉತ್ಪತ್ತಿಯಾಯಿತು; ಕೆಟ್ಟು ಹೋದ ಲೋಕ ರಕ್ಷಣಾಕಾರ್ಯದಿಂದ ಹೊಸತಾಗಿ ನಿರ್ಮಿಸೋಣವಾಯಿತು.—ಮೂರು ಎಂಬ ಅಂಕಿ ದೇವರನ್ನು ಸೂಚಿಸುವ ಸಂಗ್ನಾ ಸಂಖ್ಯೆ, ನಾಲ್ಕು ಎಂಬದು ಲೋಕವನ್ನು ಸೂಚಿಸುವದು. ೩ + ೪ = ೭ = ದೇವರನ್ನು ಹೊಂದಿ ಕೊಂಡಿರುವ ಲೋಕವೇ. ಏಳು ದಿವಸಕ್ಕೆ ಆಗುವ ಸಬ್ಬತ್ ದಿವಸವೂ, ಏಳು ವರ್ಷಕ್ಕೆ

ಆಗುವ ಸಬ್ಬತು ವರ್ಷವೂ, ಏಳು ಸಬ್ಬತು ವರ್ಷಕ್ಕೆ ಆಗುವ ಉಲ್ಲಾಸ ವರ್ಷವೂ ಎಂಬೀ ಸಮಯಗಳು ಕ್ರಿಸ್ತನವರಿಗೆ ಪರಲೋಕದಲ್ಲಿ ಆಗಲಿರುವ ನಿತ್ಯ ವಿಶ್ರಾಂತಿಯನ್ನು ನೆನಪಿಗೆ ತರುವವು.

4) ಮನುಷ್ಯನನ್ನು ಸೃಷ್ಟಿಸಿದ ವಿಷಯಕ್ಕೆ ವಿಸ್ತಾರ ವರ್ತಮಾನ. ೨, ೪—೨೫.

a) ಮನುಷ್ಯನನ್ನು ಮಣ್ಣಿನಿಂದ ಸೃಷ್ಟಿಸಿದ್ದು. ೪—೭.

೪—೬. ಅವು ಸೃಷ್ಟಿಯಾಗುವಾಗ್ಯೆ ಕರ್ತನಾದ ದೇವರು೧) ಭೂಪರಲೋಕಗಳನ್ನು ಉಂಟು ಮಾಡಿದಾಗ, ಪರಲೋಕ ಭೂಲೋಕಗಳ ಉತ್ಪತ್ತಿಗಳು ಇವೇ೨). ಆದರೆ ಹೊಲದ ಎಲ್ಲಾ ಗಿಡಗಳು ಭೂಮಿಯ ಮೇಲೆ ಇನ್ನು ಇದ್ದಿಲ್ಲ; ಹೊಲದ ಎಲ್ಲಾ ಪಲ್ಯವು ಇನ್ನು ಮೊಳೆಯಲಿಲ್ಲ೩). ಯಾಕಂದರೆ ಮುಂ.

೧) ಹಿಬ್ರು ಭಾಷೆಯಲ್ಲಿ ಎಹೋವ ಎಲೋಹೀಮ್. ವಿಶ್ವದಲ್ಲಿ ತೋರ ಬರುವ ದೇವರ ಮಹಿಮಾಬಲಗಳನ್ನೂ, ಲೋಕಕ್ಕೆ ಮಿಕ್ಕಿರುವಾತನೆಂಬರ್ಥವನ್ನೂ ಎಲೋಹೀಮ್ ಎಂಬದು ಸೂಚಿಸುತ್ತದೆ. ಎಹೋವ ಎಂಬುದಕ್ಕೆ ದೇವರು ಮನುಷ್ಯರ ಸಂಗಡ ಒಡಂಬಡಿಕೆ ಮಾಡಿ, ತನ್ನ ಕರುಣಾ ಪ್ರೀತಿಗಳಿಂದ ಅವರನ್ನು ರಕ್ಷಿಸುವಾತನು ಎಂಬರ್ಥ ಉಂಟು. ಇಲ್ಲಿ ಎರಡು ಹೆಸರುಗಳು ಇರುವದ್ಯಾಕಂದರೆ: ಅತ್ಯುನ್ನತ ಸೃಷ್ಟಿಕರ್ತನಾದ ದೇವರು ಮನುಷ್ಯರನ್ನು ತನ್ನ ಛಾಯೆಯಾಗಿ ನಿರ್ಮಿಸಿದ್ದನ್ನು ಇಲ್ಲಿ ವರ್ಣಿಸುತ್ತಾನೆ. ತನ್ನನ್ನು ಹೋಲುವವರಾಗಿ ಅವರನ್ನು ಸೃಷ್ಟಿಸಿದ್ದಲ್ಲಿ, ಸೃಷ್ಟಿಕರ್ತನು ಅವರನ್ನು ತನ್ನ ಸಂಗತಿಯಲ್ಲಿ ಇರ ನೇಮಿಸಿ ಅವರಿಗೆ ಎಹೋವ=ವಿಶೇಷ ಕೃಪೆ ಪ್ರೀತಿಯಿಂದ ಅವರನ್ನು ನಡಿಸುವ ನಿತ್ಯ ತಂದೆ ಆದನು. ೨) ದೇವರು ಭೂಪರಲೋಕವನ್ನು ಸೃಷ್ಟಿಸಿದ್ದು ದೊಡ್ಡ ಮೂಲವಾಕ್ಯ. ಮುಂದಿನ ಮಾತು ಗ್ರಹಿಕೆಯಾಗುವಂತೆ, ಇದನ್ನು ಚನ್ನಾಗಿ ಜ್ಞಾಪಕಕ್ಕೆ ತರ ಬೇಕು. ಅದಕ್ಕೋಸ್ಕರ ಇದನ್ನು ಇನ್ನೊಂದು ಸರ್ತಿ ಇಲ್ಲಿ ಇಟ್ಟನು. ೩) ಸೃಷ್ಟಿಯ ಮೂರನೆ ದಿನದಲ್ಲಿ ಬೇರೆ ಬೇರೆ ಸಸ್ಯಾದಿಗಳು ಹುಟ್ಟಿದ್ದವು. ಆದರೆ ಮುಖ್ಯವಾಗಿ ಮನುಷ್ಯರ ವ್ಯವಸಾಯದಿಂದ ಬೆಳೆಯುವ ಸಸಿಗಳು ಇನ್ನು ಉತ್ಪತ್ತಿ ಆಗಿದ್ದಿಲ್ಲ. ಅವು ಈಗ ಬೆಳೆಯ ಬೇಕಾದರೆ, ಮಳೆ ಮನುಷ್ಯರ ವ್ಯವಸಾಯ ಎಂಬೀ ಎರಡು ಸಾಧನೆಗಳು ಬೇಕು. ಆದರೆ ಸೃಷ್ಟಿಯ ಆರನೆ ದಿನದಲ್ಲಿ ಮಂಜೂ, ದೇವರ ಸೃಷ್ಟಿಬಲವೂ, ಈ ಎರಡು ಸಾಧನಗಳು ಕೂಡಿ ಮನುಷ್ಯರಿಗೆ ಉಪಕರಣವಾದ ಸಸ್ಯಾದಿಗಳು ಉತ್ಪನ್ನವಾಗುವ ಹಾಗಾಯಿತು. (ಧಾನ್ಯಾದಿಗಳು). ದೇವರು ಅದೇ ದಿನದಲ್ಲಿ ಪರದೇಶದ ಸಸ್ಯಾದಿಗಳನ್ನು ಬೆಳಿಸಿ ತೋಟ ಮಾಡಿದನಲ್ಲ (ವ. ೮).

೭ ವ. ಜೀವದ ಉಸುರು) ದೇಹ ಮಣ್ಣಿನದು; ಕುಂಬಾರನು ಮಣ್ಣಿನಿಂದ ಗಡಿಗೆ ಮಾಡುವಂತೆ, ದೇವರು ಮಣ್ಣಿನಿಂದ ದೇಹವನ್ನು ರೂಪಿಸಿದನು. ಆ ಮೇಲೆ ಈ ದೇಹದೊಳಗೆ ಜೀವದ ಉಸುರನ್ನು ಊದಿದನು. ಆದ್ದರಿಂದ ಅವನು ಭೂಲೋಕದವನು ಪರಲೋಕದವನು. ಅವನು ದೃಶ್ಯವಾದ ಸೃಷ್ಟಿಯ ಸಾರವೇ. ಭೂಲೋಕಕ್ಕೂ ಪರಲೋಕಕ್ಕೂ ನಡುವಿನಲ್ಲಿ ನಿಂತಿರುವ ಮಧ್ಯಸ್ಥನು. ಅವನ ಮುಖಾಂತರ ಭೂಲೋಕ ಮಹಿಮೆ ಪಟ್ಟು ಪರಲೋಕಕ್ಕೆ ಸಮಾನವಾಗ ಬೇಕಾಗಿತ್ತು.— ಜೀವಿಸುವ ಪ್ರಾಣವಾದನು) ಜೀವಜಂತುಗಳಿಗೂ ಪ್ರಾಣ ಉಂಟು. ಅವೂ ಪ್ರಾಣಿಗಳು (೧, ೨೦. ೨೧). ಆದರೂ ಮನುಷ್ಯರಲ್ಲಿ ದೇವರು ತಾನೆ ಜೀವದ ಉಸುರನ್ನು ಊದಿದ ಕಾರಣ, ಮಿಕ್ಕಾದ ಪ್ರಾಣಿಗಳಿಗಿಂತ ಹೆಚ್ಚಿನವನಾದನು. ದೇವರು ಮನುಷ್ಯನನ್ನು ಮಣ್ಣಿನಿಂದ ರೂಪಿಸಿದದರಿಂದ, ಅವನ ದೇಹ ತನ್ನಷ್ಟಕ್ಕೆ ಮರ್ತ್ಯವಾಗಿತ್ತು. ಆದಾಗ್ಯೂ ದೇವರು ಅವನಲ್ಲಿ ಊದಿದ ಜೀವದ ಉಸುರು ಮಣ್ಣಿನ ದೇಹವನ್ನು ವ್ಯಾಪಿಸಿ, ಚುರುಕು ಮಾಡಿ, ತನಗೆ ಅನುರೂಪ ಮಾಡಿ ಅಮರತ್ವವನ್ನು ಹೊಂದಿಸುತ್ತಿತ್ತು. ಈ ಕಾರ್ಯ ಪಾಪದಿಂದ ಕೆಟ್ಟಿತು.

ಉತ್ಪತ್ತಿ. ೨, ೮—೧೪.

b) ದೇವರು ಮನುಷ್ಯನನ್ನು ಪರದೇಶದಲ್ಲಿ (ಪರದೈಸ) ಇಟ್ಟದ್ದು. ೮—೧೭.

aa) ದೇವರು ಪರದೇಶವನ್ನು ಮಾಡಿದ್ದು. ೮. ೯.

೮ ವ. ಏದೆನ್ = ಸೌಖ್ಯ) ಇದು ಆ ತೋಟ ಇದ್ದ ಶೀಮೆ. ಬಹಳ ಸೌಕರ್ಯವಾಗಿದ್ದದರಿಂದ, ಅದಕ್ಕೆ ಏದೆನ್ ಎಂಬ ಹೆಸರು ಆಯಿತು. ಕಾನಾನ್ ದೇಶಕ್ಕೆ ಪೂರ್ವದಲ್ಲಿ ಇತ್ತು. ಹಳೆ ಒಡಂಬಡಿಕೆಯನ್ನು ಹಿಬ್ರು ಭಾಷೆಯಿಂದ ಗ್ರೀಕ ಭಾಷೆಯಲ್ಲಿ ಮಾಡಿದವರು ತೋಟ ಎಂಬ ಶಬ್ದಕ್ಕೆ ಪರದೇಶ ಎಂಬದನ್ನು ಇಟ್ಟರು. ಗಿಡಗಳೂ ಮೃಗಗಳೂ ಹರಿಯುವ ನೀರೂ ಇದ್ದು, ಅರಸರು ವಿನೋದಕ್ಕಾಗಿ ಬೇಟೆ ಆಡುವ ತೋಟಕ್ಕೆ ಫಾರ್ಸಿಯರು ಪರದೇಶವೆನ್ನುತ್ತಿದ್ದರು.—ಮನುಷ್ಯನನ್ನು) ಅವನು ಸೃಷ್ಟಿಗಳಲ್ಲಿ ಶೇಖರವಾಗಿದ್ದದ್ದಕ್ಕೆ, ದೇವರು ಅವನಿಗೆ ಎಲ್ಲಾ ಸ್ಥಳಗಳಲ್ಲಿ ಬಹಳ ಮನೋಹರ ವಾಸಸ್ಥಳವನ್ನು ನೇಮಿಸಿ ಕೊಟ್ಟನು. ಪೃಥ್ವಿಯೇ ಪ್ರಾಕಾರ, ಏದೆನೆಂಬ ಶೀಮೆಯೇ ಮಧ್ಯರಂಗ, ಆದಿ ಮನುಷ್ಯನು ಇದ್ದ ತೋಟವೇ ಗರ್ಭಗೃಹ.

೯ ವ. ಜೀವದ ಗಿಡ) ವಿಶೇಷ ಸ್ಥಳದಲ್ಲಿ ಇದ್ದದರಿಂದ, ಬೇಗ ಮನುಷ್ಯರ ದೃಷ್ಟಿಗೆ ಬೀಳುತ್ತಿತ್ತು. ಈ ಮರದ ಫಲಕ್ಕೆ ಎಲ್ಲಾ ಬಲಹೀನತ್ವವನ್ನು ದೇವರ ಆಶೀರ್ವಾದದಿಂದ ಹಿಂದೆಗಳೆಯುವ ತ್ರಾಣವಿತ್ತು. ಅದನ್ನು ತಿಂದವರಲ್ಲಿ ಅಮರತ್ವಾಭಿವೃದ್ಧಿ ಆಗುತ್ತಿತ್ತು. ಈಗ ಯೇಸು ಕ್ರಿಸ್ತನೇ ಈ ಜೀವವೃಕ್ಷ; ಆತನಿಂದ ಹೊರಡುವ ಜೀವಬಲವೇ ಅಮರತ್ವದ ಫಲ. ಮುಖ್ಯವಾಗಿ ರಾತ್ರಿಭೋಜನದಲ್ಲಿ ಈ ಫಲವನ್ನು ತಿಂದು ದೇಹಪ್ರಾಣಾತ್ಮಗಳನ್ನು ನಿತ್ಯಜೀವಕ್ಕಾಗಿ ಪೋಷಿಸಿ ಅಮರತ್ವದ ಬೀಜವನ್ನು ನಮ್ಮಲ್ಲಿ ಬಿತ್ತಿ ಕೊಳ್ಳುತ್ತೇವೆ. ಮೇಲು ಕೀಳುಗಳ ಅರುವಿನ ಗಿಡ) ಸಣ್ಣ ಹುಡುಗರು ಮೊದಲು ಪಾಪಪುಣ್ಯದ ಅರುವಿಲ್ಲದವರು. ಇದಕ್ಕೆ ಅದಕ್ಕೆ ಬೇಡ ಬೇಡವೆಂದರೆ, ಈ ಅರುವು ಅವರಲ್ಲಿ ಹುಟ್ಟುವದು. ಹೀಗೆ ಆದಿ ಮನುಷ್ಯರಲ್ಲಿ ಇತ್ತು. ಈ ಅರುವಿನ ಗಿಡ ತನ್ನಷ್ಟಕ್ಕೆ ಕೆಟ್ಟದ್ದಲ್ಲ, ಒಳ್ಳೇದೇ ಸರಿ. ಆದರೆ ದೇವರು, ಇದರ ಫಲವನ್ನು ತಿನ್ನ ಬಾರದು ಎಂದು ನಿಷೇಧ ಮಾಡಿ, ಅವರ ಅನುಭೋಗಕ್ಕೆ ಒಂದು ಮೇರೆ ಇಟ್ಟನು. ಈ ಮೇರೆ ವಿೂರಿ ಅನುಭೋಗ ಮಾಡುವದೇ ಕೆಟ್ಟದ್ದು; ದೇವರು ಇಟ್ಟ ಮೇರೆಯೊಳಗೆ ಅನುಭೋಗ ಮಾಡುವದೇ ಒಳ್ಳೇದು ಎಂದು ಅರಿತು ದೇವರ ಆಜ್ಞೆ ಅಸಾಧಾರಣ, ತಮ್ಮ ಅನುಭೋಗ ಸಾಧಾರಣ; ಆದದರಿಂದ ತಮ್ಮ ಅನುಭೋಗ ಆತನ ಆಜ್ಞೆಗೆ ಅನುಸಾರವಾಗಿ ಮಾಡ ತಕ್ಕದ್ದೆಂದು ಮನುಷ್ಯರು ನಿರ್ಣಯ ಮಾಡಿ, ಹೀಗೆ ಮೇಲು ಕೀಳು ಈ ಗಿಡದಿಂದ ತಿಳಿಯ ಬೇಕಾಗಿತ್ತು. ಅದರ ಉದ್ದಿಶ್ಯ ಅದು ಮೇಲು ಕೀಳುಗಳ ಅರುವಿನ ಗಿಡವೆಂತ ಹೆಸರುಗೊಂಡಿತು. ಪರಿಶುದ್ಧ ದೂತರು ಪರೀಕ್ಷೆಯಲ್ಲಿ ಇಳಿದು ತಮ್ಮ ಪರಿಶುದ್ಧತ್ವ ಉಳಿಸಿ ಕೊಂಡರು. ಮತ್ತು ಯೇಸು ಕ್ರಿಸ್ತನು ತನಗೆ ಆದ ಶೋಧನೆಗಳಲ್ಲಿ ತನ್ನ ಅನಘತ್ವ ಕಾದು ಕೊಂಡು, ಪಾಪಕ್ಕೆ ಎಳಸದ ನೀತಿವಂತನಾಗಿಯೂ, ಪರಿಶುದ್ಧನಾಗಿಯೂ ಒಪ್ಪಿದನು. ದೇವರು, ದೂತರು, ಕ್ರಿಸ್ತನು ಪಾಪವನ್ನು ಸ್ವಂತ ಅನುಭವದಿಂದ ಅರಿಯದೆ ಇದ್ದರೂ, ಕೆಟ್ಟದ್ದು ಯಾವದು ಒಳ್ಳೇದು ಯಾವದು ಎಂದು ತಿಳಿಯುತ್ತಾರೆ.

bb) ಪರದೇಶದ ವರ್ಣನೆ. ೧೦—೧೪.

ಪರದೇಶದ ನದಿಯ ಶಲೆಗಳು ಏದೆನ್ ಎಂಬ ಶೀಮೆಯೊಳಗೆ ಇದ್ದವು. ಅದು ಮೊದಲು ಒಂದು ನದಿಯಾಗಿ ತೋಟದೊಳಗೆ ಹಾದು ಅದನ್ನು ತೋಯಿಸಿ ದಾಟಿ ಮುಂದಕ್ಕೆ ಹರಿಯುವಲ್ಲಿ, ಅದರಿಂದ ನಾಲ್ಕು ಮುಖ್ಯ ನದಿಗಳು ಆದವು. ಅವು ಯಾವವಂದರೆ: ೧) ಫ್ರಾತ್ = ಐಫ್ರಾತ್ ಎಂಬ ಹೊಳೆ. ಅದು ಈಗಾದರೂ ಅದೇ ಹೆಸರಿಂದ ಪ್ರಸಿದ್ಧವಾಗೆದೆ. ೨) ಹಿದ್ದೆಕೆಲ = ತಿಗ್ರಿಸ್ ಎಂಬ ಹೊಳೆ (ದಾನಿ. ೧೦, ೪.) ಇವು ದಕ್ಷಿಣದ ಕಡೆಗೆ ಹರಿಯುತ್ತಿದ್ದವು. ಈ ಕಡೆ ಹೊಳೆಗೆ ಇಂದಾದರೂ ಅರಮಾನಿ ಭಾಷೆಯಲ್ಲಿ ದಿಗ್ಲಾತ್ ಎಂದು ಅರಬಿ ಭಾಷೆಯಲ್ಲಿ ದಿಜ್ಲಾತ್ ಎಂದು ಹೆಸರುಂಟು. ಮುಂದೆ ಐಫ್ರಾತ್

ನದಿಗೂ ತಿಗ್ರಿಸ ನದಿಗೂ ನಡುವಣ ಮೇಸೊಪೊತಾಮಿಯ ಎಂಬ ಸೀಮೆಯೂ ಅಸ್ಸೂರ್ಯ ದೇಶದೊಳಗೆ ಇದ್ದದರಿಂದ, ತಿಗ್ರಿಸ ಹೊಳೆ ಅಸ್ಸೂರ್ಯಕ್ಕೆ ಪೂರ್ವದಲ್ಲಿ ಹರಿದಂಥಾದಾಗಿತ್ತು. ೩) ಪಶ್ಚಿಮಕ್ಕೆ ಹರಿಯುವ ಪೀಶೋನ್ ಹೊಳೆ. ಪೂರ್ವಜರು ಅದಕ್ಕೆ ಫಾಸಿಸ್ ಅಂದರು. ಈಗ ಅದಕ್ಕೆ ಫಾಶ ಎಂಬ ಹೆಸರು ಅದೆ. ಅದು ಕಪ್ಪು ಸಮುದ್ರದೊಳಗೆ ಕೂಡುತ್ತದೆ. ಅದರೊಳಗೆ ಪೂರ್ವದಲ್ಲಿ ಬಂಗಾರದ ಉಸುಬು ದೊರೆಯುತ್ತಿತ್ತು. ಈ ಹೊಳೆ ಹವಿಲ=ಕೊಲ್ಕಿಶ ದೇಶದೊಳಗೆ ಹಾದು ಹೋಗುತ್ತದೆ. ಬೆದೋಲಹ=ಸುವಾಸನೆ ಆಗುವಂತೆ ಅದನ್ನ ಸುಡುತ್ತಿದ್ದರು. ೪) ಗೀಹೋನ್ (ಶೀಹೋನ್)=ಅರ್ಮೇನಿಯದ ಪರ್ವತಗಳಿಂದ ಹುಟ್ಟಿ ಪೂರ್ವಕ್ಕೆ ಹರಿದು ಕಸ್ಪಿ ಸಮುದ್ರದಲ್ಲಿ ಬೆರೆಯುವ ಅರಸ್ ಎಂಬ ಹೊಳೆ. ಪೂರ್ವದಲ್ಲಿ ಅದಕ್ಕೆ ಅರಕ್ಸೆಸ್ ಎಂಬ ಹೆಸರು ಇತ್ತು. ಇಂದಾದರೂ ಫಾರ್ಸಿಯರಲ್ಲಿ ಅದು ಜೀಹುನ್‌ರಾಸ್ ಎಂದೆನಿಸುವದು. ಕೂಶ್=ಕೊಸ್ಸೆಯರ ದೇಶ. ಇವರು ಹಬ್ಬಸಿಯರು. ಕಾಲಾಂತರದಲ್ಲಿ ಅವರು ಅಲ್ಲಿಂದ ದಕ್ಷಿಣಕ್ಕೆ ಹೋಗಿ ನೀಲನದಿ ಹರಿಯುವ ದೇಶದಲ್ಲಿ ವಾಸ ಮಾಡುವವರು ಆದರು.—ಇದೆಲ್ಲಾ ತೂಗಿ ನೋಡಿದರೆ, ಏದೆನ್ ಎಂಬ ಸೀಮೆಯೂ, ಅದರೊಳಗಣ ತೋಟವೂ, ಈಗಿನ ಅರ್ಮೇನಿಯ ದೇಶದಲ್ಲಿ ಇದ್ದ ಹಾಗೆ, ಕಾಣುತ್ತದೆ. ಆವಾಗ, ಮೇಲೆ ವಿವರಿಸಿದ ಈ ನಾಲ್ಕು ನದಿಗಳ ಶಲೆಗಳು ಏದೆನ್ ಸೀಮೆಯ ತೋಟದಲ್ಲಿ ಕೂಡಿದ್ದು ಆ ಸೀಮೆಯನ್ನು ನೀರಿನಿಂದ ತಣಿಸಿದವು. ಜಲಪ್ರಳಯ ಭೂಕಂಪ ಮುಂತಾದವುಗಳಾಗಿ, ಕಾಲಗತಿಯಿಂದ ಆ ಸೀಮೆಯಲ್ಲಿಯ ಭೂಮುಖವು ಬದಲಾಯಿತು. ಆದಾಗ್ಯೂ ಇಂದೂ ಆ ಹೊಳೆಗಳ ಶಲೆಗಳು ಒಂದಕ್ಕೊಂದು ದೂರವಿಲ್ಲದೆ ಸಮೀಪವಾಗಿವೆ.

cc) ದೇವರು ಮನುಷ್ಯನನ್ನು ಪರದೇಶದಲ್ಲಿ ಇಟ್ಟದ್ದು. ೧೫—೧೭.

೧೫ ವ. ಇಟ್ಟನು) ದೇವರು ಅವನನ್ನು ನಿರ್ಮಾಣ ಮಾಡಿ ಅದರಲ್ಲಿ ಇಟ್ಟನು. ಅವನು ಮೊದಲು ಬೇರೊಂದು ಸ್ಥಲದಲ್ಲಿ ಇದ್ದನಂತಲ್ಲ. ೧, ೨೬. ೨೭ ಸಂಕ್ಷೇಪವಾಗಿ ಹೇಳಿದ್ದನ್ನು ಇಲ್ಲಿ ವಿಸ್ತರಿಸುತ್ತಾನೆ.—ವ್ಯವಸಾಯ ಮಾಡುವದಕ್ಕೂ ಕಾಯುವದಕ್ಕೂ) ಪರದೇಶದಲ್ಲಿಯಾದರೂ ಆದಿಯಿಂದಲೇ ಕೆಲಸ ಮಾಡುವದೇ ಮನುಷ್ಯನ ಧರ್ಮವಾಗಿತ್ತು. ಅಂದು ಕೆಲಸದಲ್ಲಿ ಸಂತೋಷ ಕಂಡಿತು; ಇಂದು ಅದರಲ್ಲಿ ಕಷ್ಟ ಬೇಸರ ಕಾಣುತ್ತದೆ. ಮನುಷ್ಯರು ಆಳುಗಳಂತೆ ದುಡಿಯುವವರು ಆದರು.—ಕೆಲಸ ಒಳ್ಳೇದು, ಯಾಕಂದರೆ ಅದು ಮನುಷ್ಯರ ಬುದ್ಧಿ ಅರಳಿಸಿ ಬಲ ಎಬ್ಬಿಸಿ ಕೊಡುವದು. ಮತ್ತುಕೆಲಸಗಳಲ್ಲಿ ಕೃಷ್ಯಾರಂಬ ಮೊದಲನೇದು; ಯಾಕಂದರೆ ಅದು ಮಿಕ್ಕಾದವುಗಳಿಗೆ ಆಧಾರವಾಗಿದೆ. ಇದಲ್ಲದೆ ಕೃಷ್ಯಾರಂಬದಲ್ಲಿ ತೋಟದ ಕೆಲಸ ಉತ್ತಮ. ಸುಮ್ಮನೆ ಕೂತಿರುವದು ಮೈಗಳ್ಳತನ ಮಾಡುವದು ಪಾರಮಾರ್ಥಕ್ಕೂ ಪ್ರಪಂಚಕ್ಕೂ, ಪ್ರಾಣಾತ್ಮಕ್ಕೂ ದೇಹಕ್ಕೂ ಕೆಡಕಲ್ಲದೆ ಹಿತವಲ್ಲ.—ಕಾಯುವದಕ್ಕೆ ಇಟ್ಟನು ಅಂದಲ್ಲಿ ಕೆಡಕು ಆಗುವ ಹಾಗಿತ್ತು ಎಂಬಂತೆ ತೋರುತ್ತದೆ. ನೆಲ ತಡ ಕೊಳ್ಳದಷ್ಟು ನೀರು ಒತ್ತರಿಸಿ ಬರುವದು. ಅಥವಾ ಮೃಗಗಳು ಬಂದು ತುಳಿದಾಡುವದು, ಮುಂತಾದ ಇಂಥಾ ಕಾರಣಗಳಿಂದ ತೋಟ ಕೆಡುವ ಹಾಗಿತ್ತು. ಇದಲ್ಲದೆ ಬಂದು ಮನುಷ್ಯನ ಕೆಲಸ ಕೆಡಿಸ ಬೇಕೆಂದಿರುವ ವೈರಿಯಾದ ಪಿಶಾಚನಿಂದ ಸಹ ತೋಟಕ್ಕೆ ನಷ್ಟವಾಗುವ ಹಾಗಿತ್ತು. ತನ್ನ ಕೆಲಸ ತೀರಿತೆಂದು ಮನುಷ್ಯನು ಅಲಕ್ಷ್ಯ ಮಾಡದೆ ತಾನು ವಶ ಮಾಡಿ ಕೊಂಡದ್ದನ್ನು ಕಾಯ ಬೇಕಾಗಿತ್ತು.

೧೬. ೧೭ ವ. ಹೇಳಿದ್ದೇನಂದರೆ) ದೇವರು ಮನುಷ್ಯರ ಸಂಗಡ ಮಾತಾಡಿದ್ದು ಆಶ್ಚರ್ಯವೇ ಸರಿ. ಆದರೆ ನಿತ್ಯ ವಾಕ್ಯ ಎಂಬಾತನು ದೇವರ ಮುಖ. ಆದಿಯಿಂದಲೆ ದೇವರು ತನ್ನ ಚಿತ್ತವನ್ನು ಮನುಷ್ಯರಿಗೆ ಆತನ ಮುಖಾಂತರ ತಿಳಿಸಿದನು (ಯೋಹ. ೧). ತೋಟದ—ತಿಂದೇ ತಿನ್ನ ಬಹುದು; ಆದರೆ—ಮರದಿಂದಲೇ ತಿನ್ನ ಬಾರದು.—ಸತ್ತೇ ಸಾಯುವಿ) ದೇವರಿಂದಾಗುವ ಅಧಿದೈವಕವೂ ತನ್ನಿಂದ ಬರುವ ಅಧ್ಯಾತ್ಮಕವೂ ಕೆಟ್ಟ ಲೋಕದಿಂದ ಹುಟ್ಟುವ ಅಧಿಭೌತಿಕ

ಎಂಬೀ ತಾಪತ್ರಯವೆಲ್ಲಾ ಪಾಪದ ಫಲ. ಎಲ್ಲಾ ಕೇಡುಗಳು ಮರಣ ಎಂಬ ಮಹಾರಾಜನನ್ನು ಸೇವಿಸುವ ದಂಡು. ಇವನ್ನು ಕೂಡಿ ಕೊಂಡು, ಅವನು ಮನುಷ್ಯರಿಗೆ ಮುತ್ತಿಗೆ ಹಾಕಿ, ಅವರ ಜೀವ ಎಂಬ ಕೋಟೆಯನ್ನು ತಕ್ಕೊಂಡು ಕೆಡವಿ ಬಿಡುವನು. ಮರಣ ಎಲ್ಲಾ ಕೇಡಿನ ಸಂಗ್ರಹವೇ. ಮೊದಲು ನೆಟ್ಟಗಿದ್ದ ಮಾವಿನ ಕಾಯಿ ಹುಳುಕು ಹಾಯುವದು; ಆ ಹುಳ ಮೇದು ಕೊಂಡು ಬಂದು ಅದನ್ನು ಪೊಳ್ಳು ಮಾಡಿದ ಮೇಲೆ, ತುಂಬು ಕಳೆಚಿ ಉದರಿ ಬೀಳುವದು. ನೆಲದಲ್ಲಿ ಇದ್ದು ಕೊಳೆತು ಪೂರ್ಣ ನಾಶವಾಗಿ ಹೋಗುವದು. ಅದರಂತೆ ಮನುಷ್ಯರಿಗೆ ಪಾಪವೆಂಬ ಹುಳ ಹತ್ತಿದಾಕ್ಷಣ, ಮರಣ ಆರಂಭವಾಯಿತು. ಆ ಮೇಲೆ ಅದು ಅವರ ಪ್ರಕೃತಿಯನ್ನೆಲ್ಲಾ ವ್ಯಾಪಿಸುತ್ತಾ ಬರುವದು. ಹುಳಿತ ಮಾವಿನ ಕಾಯಿ ಉದರಿ ಬೀಳುವದೇ ಈ ದೇಹದ ಮರಣ. ಆದಮನು ಪಾಪದಲ್ಲಿ ಬಿದ್ದಾಗಲೆ, ಮರಣ ಅವನಲ್ಲಿ ಆರಂಭವಾಯಿತು. ಅಂದಿನಿಂದ ಸತ್ತೇ ಸಾಯುವವನಾದನು.

c) ಸ್ತ್ರೀಯನ್ನ ಉಂಟು ಮಾಡಿ ಮದಿವೆಯನ್ನು ನೇಮಿಸಿದ್ದು. ೧೮—೨೫.

೧೮ ವ. ಒಳ್ಳೇದಲ್ಲ) ಯಾಕಂದರೆ ದೇವರು ತನ್ನ ಸೃಷ್ಟಿಕಾರ್ಯವನ್ನು ಇನ್ನು ಮುಗಿಸಿದ್ದಿಲ್ಲ; ಮನುಷ್ಯನಿಗೆ ಇನ್ನು ಒಂದು ತಕ್ಕ ಸಹಾಯ ಆಗಿದ್ದಿಲ್ಲ. ಸ್ತ್ರೀಯನ್ನು ಸಹ ಉಂಟು ಮಾಡಿ ಎಲ್ಲಾ ತೀರಿಸಿದ ಮೇಲೆ, ದೇವರು ತಾನು ಮಾಡಿದ್ದನ್ನೆಲ್ಲ ನೋಡಲಾಗಿ, ಅದು ಬಹು ಒಳ್ಳೇದಾಗಿತ್ತು (೧, ೩೧.) ಇದು ಸೃಷ್ಟಿಯ ಆರನೆ ದಿನದಲ್ಲಿ ಆಯಿತು. ದೇವರು ಸ್ತ್ರೀಯನ್ನು ಮಾಡುವ ವಿಷಯಕ್ಕೆ ತನ್ನಲ್ಲಿ (೧, ೨೬.) ಆಲೋಚನೆ ಮಾಡಿ ಕೊಳ್ಳುವದರಿಂದ, ಇದು ದೊಡ್ಡದೂ ಹೊಸತೂ ಎಂಬದು ಸ್ಪಷ್ಟವಾಗಿದೆ. ಮದಿವೆ ಮನುಷ್ಯಕಲ್ಪನೆ ಅಲ್ಲ, ಅವರ ಸ್ವಭಾವ ಗುಣಗಳಿಗೆ ಸರಿಯಾದಂಥಾ ಅವರ ಕೆಲಸಕ್ಕೆ ಹಿತಕಾರಿಯಾದಂಥಾ ದೇವರ ನೇಮಕ. ಗಂಡನು ಮೊದಲು ನಿರ್ಮಾಣವಾದನು. ಆ ಮೇಲೆ ಅವನಿಗಾಗಿ ದೇವರು ಸ್ತ್ರೀಯನ್ನು ಮಾಡಿದನು. ಆದ್ದರಿಂದ ಗಂಡನು ಸ್ತ್ರೀಗೆ ತಲೆ, ಮುಖ್ಯಸ್ಥನು (೧ ತಿಮೊ. ೨, ೧೩). ಆಕೆ ಪುರುಷನಿಗೆ ಸಹಾಯವಾಗುವದು ಹ್ಯಾಗಂದರೆ: ೧) ಮನೆ ಕೆಲಸ ಮಾಡಿ ದೇಹಕ್ಕೆ ಸಂಬಂಧವಾದ ಆರೈಕೆ ಮಾಡುವಳು. ೨) ಪುರುಷನ ಮನಸು ಸ್ವಭಾವ ಬಿರಸು, ಆಕೆಯದು ಮೃದು; ಆದ ಕಾರಣ ಒಬ್ಬರಿಂದೊಬ್ಬರು ಕಲಿತು ಕೊಂಡು ಒಬ್ಬರನ್ನೊಬ್ಬರು ತಿದ್ದಿಕೊಂಡು ಸುದಾರಿಸಿ ಕೊಂಡು ಹೋದರೆ, ಅವನ ಬಿರಸು ಆಕೆಯ ಮೃದುತ್ವ ತಕ್ಕ ಅಳತೆಗೆ ಬರುವವು. ಹೆಂಡರಿಲ್ಲದ ಮನೆ ದಂಡು ಎಂಬ ಗಾದೆಯಂತೆ.

೧೯. ೨೦ ವ. ರೂಪಿಸಿ ಇದ್ದನು) ಸೃಷ್ಟಿಯ ಐದನೆ ಮತ್ತು ಆರನೆ ದಿನದಲ್ಲಿ ಅವನ್ನ ಭೂಮಿಯಿಂದ ಹೊರಟಿಸಿ ರೂಪಿಸಿದ್ದನು. ಅವುಗಳಿಗೆ—ನೋಡಲಿಕ್ಕೆ ಅವನ್ನ ಆದಮನ ಬಳಿಗೆ ತಂದನು.—ತಕ್ಕ ಸಹಾಯ ಸಿಕ್ಕಲಿಲ್ಲ.) ಮನುಷ್ಯನು ಒಂಟಿಯಾಗಿರುವದು ಒಳ್ಳೇದಲ್ಲವೆಂದು, ಮನುಷ್ಯನು ತಾನೆ ಗ್ರಹಿಸುವ ಹಾಗೆ, ಅವನ ಬುದ್ಧಿ ಹೆಚ್ಚು ಅರಳ ಬೇಕಾಗಿತ್ತು. ಇದಕ್ಕಾಗಿ ದೇವರು ಬೇರೆ ಬೇರೆ ಪ್ರಾಣಿಗಳನ್ನು ಅವನ ಬಳಿಗೆ ತಂದು ತೋರಿಸಿ ವಿದ್ಯ ಕಲಿಸುವವನಾದನು. ಆವಾಗ್ಯೆ ಎಲ್ಲಾ ಪ್ರಾಣಿಗಳು, ಮೃಗಗಳಾದರೂ, ಮನುಷ್ಯನಿಗೆ ಅಂಜದೆ, ಅನುಮಾನ ಮಾಡದೆ, ಅವನ ಹಿರೆತನಕ್ಕೆ ಸಂತೋಷದಿಂದ ಒಳಗಾಗಿದ್ದವು. ಪಾಪಪತನದ ಈಚೆ, ಅವು ಮನುಷ್ಯನ ಮೇಲೆ ವೈರ ಮಾಡಿ, ಅವನನ್ನು ಕಂಡರೆ, ಮೈ ಮೇಲೆ ಬರುವವು, ಅಥವಾ ಓಡಿ ಹೋಗುವವು ಆದವು. ಪಾಪದಿಂದ ಮನುಷ್ಯರ ಮೇಲೆ ಬಂದ ಶಾಪವು ಸರ್ವಸೃಷ್ಟಿ ವ್ಯಾಪಿಸಿತು (ರೋಮ. ೮, ೧೯. ೨೦).—ದೇವರು ತಂದ ಪ್ರಾಣಿಗಳನ್ನು ಮನುಷ್ಯನು ನೋಡಿ, ಅವುಗಳೊಳಗಣ ಸ್ವಭಾವವನ್ನು ಪೂರ್ಣವಾಗಿ ತಿಳಿದು, ಅದನ್ನು ಸೂಚಿಸುವ ಒಂದು ಹೆಸರನ್ನು ಒಂದೊಂದಕ್ಕೆ ಕೊಟ್ಟು, ಈ ಪ್ರಕಾರ ಭಾಷಾಭ್ಯಾಸ ಮಾಡಿದನು. ಮಾತಾಡಿದಲ್ಲದೆ ಮನುಷ್ಯರು ಆಲೋಚನೆ ಮಾಡಲಾಗದು. ಭಾಷೆ ಇದು ಮನುಷ್ಯರಲ್ಲಿ ದೇವರ ಹೋಲ್ವಿಕೆಯ ಒಂದು ಲಕ್ಷಣ. ಪಂಚೇಂದ್ರಿಯಗಳಿಂದ

ಉತ್ಪತ್ತಿ. ೨, ೧೮—೨೫.

ಪ್ರಾಣಿಗಳು ಗ್ರಹಿಸುವ ವಿಷಯಗಳು ಅವುಗಳಲ್ಲಿ ಸುಖದ ಅಥವಾ ದುಖ್ಖದ ಭಾವವನ್ನು ಎಬ್ಬಿಸುವವು. ಆದ ಮೇಲೆ, ಪ್ರಾಣಿಗಳು ತಮ್ಮಲ್ಲಿ ಹುಟ್ಟಿದ ಆ ಭಾವವನ್ನು ಒದರೋಣದರಿಂದ ಸೂಚಿಸುವವು. ಸುಖದುಖ್ಖದ ಭಾವದ ಹೊರ್ತು, ಆ ವಿಷಯಗಳು ಇಂಥಾವು ಅಂಥಾವು ಅಂತ ಗ್ರಹಿಕೆ ಆಗುವದಿಲ್ಲ. ಆದರೆ ಮನುಷ್ಯರು ಪಂಚೇಂದ್ರಿಯಗಳಿಂದ ವಿಷಯಗಳನ್ನು ಗ್ರಹಿಸಿ, ಅವುಗಳ ಗುಣಲಕ್ಷಣಾದಿಗಳನ್ನು ತಿಳಿದು, ಹೀಗೆ ತಮ್ಮಲ್ಲಿ ಹುಟ್ಟಿದ ಭಾವಾಲೋಚನೆಗಳನ್ನು ಮಾತಿನಿಂದ ತಿಳಿಸುವರು. ಅದರಿಂದ ಆ ಭಾವಾಲೋಚನೆಗಳು ರೂಪಗೊಂಡು ದೇಹ ಧರಿಸಿಕೊಂಡ ಹಾಗಾಯಿತು. ಭಾಷೆ ಆಲೋಚನೆಗಳಿಗೆ ದೇಹ.—ಈ ಮೇರೆಗೆ ಮನುಷ್ಯನು ಪ್ರಾಣಿಗಳನ್ನು ಪರೀಕ್ಷಿಸುವಾಗ, ಅವು ತಮ್ಮ ತಮ್ಮ ಜಾತಿಯ ಪ್ರಕಾರ ಕೂಡಿದ್ದು, ಒಂದಕ್ಕೊಂದು ಅನುಕೂಲವಾಗುತ್ತವೆ ಎಂದು ನೋಡಿ, ತಾನೊಬ್ಬನೆ ಎಲ್ಲಾ ಪ್ರಾಣಿಗಳಲ್ಲಿ ಒಂಟಿಗನು; ಹೀಗಿರುವದು ಒಳ್ಳೇದಲ್ಲವೆಂದು ತಾನೆ ತಿಳಕೊಂಡನು. ಈಗ ಸ್ತ್ರೀಯನ್ನು ಮಾಡಲಿಕ್ಕೆ ಸಮಯವಾಯಿತು. ಮನುಷ್ಯನು ತಾನೆ ಮದಿವೆಯ ಸ್ಥಿತಿಗೆ ಒಪ್ಪಿ ಕೊಂಡನು. ದೇವರು ವಿವಾಹಪ್ರಮೇಯವನ್ನು ಮನುಷ್ಯನ ಸ್ವತಂತ್ರಕ್ಕೆ ಒಪ್ಪಿಸಿ ಬಿಟ್ಟನು.

೨೧ ವ. ಗಾಢನಿದ್ರೆ) ಅದರಿಂದ ದೇವರು ಸ್ತ್ರೀಯನ್ನು ಮಾಡಲಿಕ್ಕೆ ಪಕ್ಕೇ ಎಲುವನ್ನು ಆದಮನಿಂದ ತೆಗೆದಾಗ, ನೋವು ಆಗಲಿಲ್ಲ—ಅದರ ಸ್ಥಳದಲ್ಲಿ ಮಾಂಸವನ್ನು ಹಾಕಿ ಮುಚ್ಚಿದನು. ಸಾಧಾರಣ ನಿದ್ದೆ ದೇಹದ ಧರ್ಮ.

೨೨ ವ. ದೇವರು ಹೀಗೆ ಸ್ತ್ರೀಯನ್ನು ಮಾಡಿದ್ದು ಒಂದು ದೊಡ್ಡ ಮರ್ಮ. ಇದರಿಂದ ಯಾರೂ ಅಗಲಿಸ ಬಾರದ ಭಾರ್ಯಭರ್ತೃಗಳ ಏಕತ್ವವನ್ನು ಸೂಚಿಸುತ್ತಾನೆ. ಪಕ್ಕೇ ಎಲುವುಗಳು ಹೃದಯವಿರುವ ಎದೆಯನ್ನು ಮುಚ್ಚುವವು. ಆದ್ದರಿಂದ ಸ್ತ್ರೀಯು ಆದಮನ ದೇಹದ ಮುಖ್ಯ ಭಾಗದಿಂದ ಉಂಟಾಗಿ, ಅವನಿಗೆ ಮುಖ್ಯ ಪ್ರೇಮಾಸ್ಪದವಾದಳು. ಇದರಿಂದ ದೇವರು ತಿಳಿಸಿದ್ದೇನಂದರೆ: ೧) ಒಬ್ಬಳೆ ಸ್ತ್ರೀಯನ್ನು ಅಲ್ಲದೆ ಅನೇಕರನ್ನು ಮದಿವೆ ಮಾಡಿ ಕೊಳ್ಳ ಬಾರದು. ೨) ಹೆಂಡತಿಯನ್ನು ಅಲಕ್ಷ್ಯ ಮಾಡಿ ತೊತ್ತಿನಂತೆ ನಡಿಸುವದು ತಕ್ಕದ್ದಲ್ಲ. ಆಕೆ ಗಂಡನಿಗೆ ಒಂದು ಪ್ರಕಾರ ಸರೀಕಳೇ.

೨೩ ವ. ಮನುಷ್ಯಳು) ಆಕೆ ರೂಪದಲ್ಲಿಯೂ, ಸ್ವಭಾವದಲ್ಲಿಯೂ, ತನಗೆ ಸರಿಸಮಾನವೆ ಎಂದು ತಿಳಿದನು. ನಾನು ಇಷ್ಟು ಪ್ರಾಣಿಗಳನ್ನು ಶೋಧಿಸಿದೆ, ಆದಾಗ್ಯೂ ನನ್ನ ಸಂಪೂರ್ಣ ಪ್ರೀತಿಗೆ ಯೋಗ್ಯವಾದದ್ದು, ನನ್ನ ಭಾವ ಅರಿತು ನನ್ನ ಸಂಗಾತ ಸಂತೋಷ ಪಡುವಂಥಾದ್ದು ನಾನು ಒಂದನ್ನಾದರೂ ಇಲ್ಲಿ ತನಕ ನೋಡಲಿಲ್ಲ. ಈಗ ಮಾತ್ರ ನನಗೆ ಒಂದು ಪ್ರತಿರೂಪ ಶಿಕ್ಕಿತೆಂದು ಆಶ್ಚರ್ಯ ಪಟ್ಟು ಹಿಗ್ಗುತ್ತಾನೆ.—ದೇವರು ಸ್ತ್ರೀಯನ್ನು ಆದಮನಿಂದ ತೆಗದು, ಅವನಿಗಾಗಿ ಉಂಟು ಮಾಡಿದ್ದರಿಂದ, ಪರಿಶುದ್ಧ ವಿವಾಹಸ್ಥಿತಿಯನ್ನ ನೇಮಿಸಿದ್ದಾನೆ.

೨೪ ವ. ಈ ವಚನವನ್ನು ದೇವರು ಆದಮನಿಂದಲ್ಲಿ ಮೋಸೆಯ ಮುಖದಿಂದ ನುಡಿಸಿದ್ದಾನು. ಅದು ದೇವರ ವಾಕ್ಯವೇ (ಮತ್ಥ. ೧೯, ೫).—ತಂದೆತಾಯಿಗಳಿಗೂ, ಮಕ್ಕಳಿಗೂ, ಇರುವ ಐಕ್ಯಕ್ಕಿಂತ ಗಂಡಹೆಂಡರದು ವಿಶೇಷ.

೨೫ ವ. ತಮ್ಮಲ್ಲಿ ದುರಾಸೆ ಇಲ್ಲದ ಕಾರಣ, ನಾಚಲಿಲ್ಲ. ಅವರು ದೇವರ ಐಕ್ಯದಲ್ಲಿ ಇದ್ದು ನಿರ್ಮಲರಾಗಿದ್ದರು. ಪಾಪದಿಂದ ಎಲ್ಲಾ ಬೇರೆಯಾಯಿತು. ಬತ್ತಲಾಗಿರುವದರಿಂದ, ನಾಚಿಕೆ ಹುಟ್ಟುವದು, ಪಾಪಕ್ಕೆ ಮಾರ್ಗವಾಗುವದು, ಪಾಪಪತನವೂ ನೆನಪಿಗೆ ಬರುವದು; ನಾಚಿಕೆ ಒಂದು ಸುಗುಣ.—ತಾವು ಪಾಪಕ್ಕೆ ಎಳಸದವರು ಆದ್ದರಿಂದ, ನಾಚದವರು ಎಂಬ ಭಾವದಿಂದ ಅವಧೂತಮಾರ್ಗದವರು ದಿಗಂಬರರಾಗುತ್ತಾರೆ. ಈ ವಿಷಯದಲ್ಲಿ ಪೊಬ್ಬರಿ ಒಕ್ಕೊಟ್ಟು ಚಿಪ್ಪು ಹಿಡ ಕೊಂಡಂತಾಯಿತು.

B) ಪಾಪಪತನ. ಸಂಧಿ. ೩.

1) ಸರ್ಪ ಮನುಷ್ಯರನ್ನು ಮೋಸಗೊಳಿಸಿ ಪಾಪದಲ್ಲಿ ಬೀಳಿಸಿದ್ದು. ೩, ೧—೬.

೧ ವ. ಸರ್ಪವು) ಇದು ಮಾಯಾಕೃತವಲ್ಲ, ನಿಜ ಸರ್ಪವೇ. ಆದರೆ ಪಿಶಾಚನು ತನ್ನ ನಿಜರೂಪ ಅಡಿಗಿಸಿ ಅದರಲ್ಲಿ ಹೊಕ್ಕೊಂಡಿದ್ದನು (ಪ್ರಕಟ. ೧೨, ೯. ಯೋಹ. ೮, ೪೪). ಯಾಕಂದರೆ ತನ್ನ ನಿಜ ರೂಪ ತೋರಿಸಿದ್ದರೆ, ಮನುಷ್ಯರಿಗೆ ಅವನು ಮೋಸಗಾರನೆಂದು ತಿಳಿಯ ಬರುತ್ತಿತ್ತಾದ ಕಾರಣ, ಅವನ ಮಾತನ್ನು ಬೇಗ ನಂಬುತ್ತಿದ್ದಿಲ್ಲ. ಹವ್ವಳು ಸರ್ಪಮಾತ್ರವನ್ನು ನೋಡಿದಳು. ಮೆಲ್ಲ ಮೆಲ್ಲನೆ ಈ ಶೋಧಕನ ಸ್ವಭಾವ ಗುಣಗಳು ಹಳೆ ಮತ್ತು ಹೊಸ ಒಡಂಬಡಿಕೆಯ ಚರಿತ್ರದಲ್ಲಿ ಹೆಚ್ಚು ಹೆಚ್ಚಾಗಿ ಪ್ರಕಟವಾಗುತ್ತಾ ಬಂದವು. ಪಾಪಪತನವಾದ ಬಳಿಕ, ದೇವರು ಸರ್ಪದ ಮುಸಕನ್ನು ತೆಗದು ಅದರಲ್ಲಿ ಹೊಂಚಿ ಕೊಂಡಿದ್ದ ಪಿಶಾಚನನ್ನು ಮನುಷ್ಯರಿಗೆ ಯಾಕೆ ತೋರಿಸಲಿಲ್ಲವೆಂದರೆ, ಅವನ ದುಷ್ಟತ್ವದ ಬಲವನ್ನು ಮನುಷ್ಯರು ನೋಡಿ, ಅವನನ್ನು ನಮ್ಮಿಂದ ಜಯಿಸಲಾಗದು ಎಂದು ಮನಸೋತು, ಅಪಧೈರ್ಯವಾಗುತ್ತಿದ್ದರು. ಪಿಶಾಚನ ಕೆಲಸಗಳ ಹಾಳು ಮಾಡುವಾತನನ್ನು ಎಷ್ಟು ಹೆಚ್ಚಾಗಿ ತಿಳಿದರೊ, ಅಷ್ಟು ಹೆಚ್ಚಾಗಿ ಅವನ ವಿಷಯಕ್ಕೆ ತಿಳಿಸಲಿಕ್ಕೆ ಅನುವಾಯಿತು (ಪ್ರಕಟ. ೨೦, ೨. ೧೦).—ಪಿಶಾಚನು ಯಾರು? ದೇವರು ದೂತರನ್ನು ನಿರ್ಮಿಸಿದನಲ್ಲ. ಅವರು ಆತ್ಮಸ್ವರೂಪಿಗಳು. ಆದ ಕಾರಣ ಸ್ವತಂತ್ರಿಗಳು. ಸ್ವಭಾವಿಕವಾಗಿ ದೇವರನ್ನು ಹೋಲುವವರಾಗಿದ್ದರು. ಆದರೆ ದೇವರನ್ನು ಹೋಲುವ ಈ ಸ್ವಭಾವವನ್ನು ಸ್ವಂತ ನಿರ್ಣಯದಿಂದ ಬೆಳಿಸಿ ಕೊಂಡು ವರ್ತಿಸ ತಕ್ಕದ್ದಾಗಿತ್ತು. ಆ ದೂತರಲ್ಲಿ ಅನೇಕರು ಹೀಗೆ ಮಾಡಿ, ಸಂತೋಷದಿಂದ ದೇವರ ಸೇವೆಗೆ ಒಪ್ಪಿ ಕೊಂಡು, ಪಾಪಕ್ಕೆ ಮೀರಿದವರಾದರು. ಆದರೆ ಒಬ್ಬ ಪ್ರಧಾನ ದೂತನೂ, ಅವನನ್ನು ಕೂಡಿ ಕೊಂಡ ಕೆಲವರೂ, ದೇವರ ಮೇಲೆ ಮಾಡ ತಕ್ಕ ಪ್ರೀತಿಗಿಂತ ತಮ್ಮ ಮೇಲೆ ಹೆಚ್ಚು ಪ್ರೀತಿ ಮಾಡಿ, ಅಹಂಭಾವಕ್ಕೆ ಬಿದ್ದು, ದೇವರಿಂದ ತಮಗೆ ಉಂಟಾಗಿದ್ದ ಸ್ವಭಾವಬಲವನ್ನು ದುರ್ಪ್ರಯೋಗಕ್ಕೆ ಹಾಕಿ ಕೆಟ್ಟರು. ಅವನು ಪಿಶಾಚನು, ಇವರು ದೆವ್ವಗಳು ಆದರು. ಅವನು ಹಾಳ ಬಿದ್ದ ದೊಡ್ಡ ಒಳ್ಳೇ ಅರಮನೆಯಂತೆ. ಬೆಂಕೆ ಉರಿಯ ಬೇಕಾದರೆ, ಅದಕ್ಕೆ ಆಹುತಿ ಕಾಷ್ಟವೇ. ಅವನೇ ಬೆಂಕೆ, ಇನ್ನು ತನ್ನಲ್ಲಿರುವ ದೇವರ ಹೋಲ್ವಿಕೆಯೇ ಆಹುತಿ; ಆದರೆ ಈ ಬೆಂಕೆಗೆ ಈ ಆಹುತಿ ಸಾಲದಕ್ಕೆ, ಉಳಿದ ಸೃಷ್ಟಿಗೆ ಸಹಾ ಹಬ್ಬಿ, ಯಾವಾಗಲು ತನಗೆ ಆಹಾರವನ್ನು ಹುಡಿಕಿ ಕೊಳ್ಳುವದು. ಹೀಗಾಗಿ ಅವನು ಲೋಕವನ್ನು ಹಾಳ ಮಾಡಲಿಕ್ಕೆ ತನ್ನ ನಾಲಿಗೆ ಚಾಚಿ ಯಾವಾಗಲೂ ಎಲ್ಲ ಹಿಡಿಯ ಬರುವ ಕಾಡಗಿಚ್ಚೇ. ಇದರ ದೆಸೆಯಿಂದ ಲೋಕದಲ್ಲಿ ರಾಜ್ಯ ಮಾಡಿ ಕೊಳ್ಳ ಬೇಕೆಂದು ಸಂಚು ಮಾಡಿ, ಮನುಷ್ಯರನ್ನು ಹಿಡಿಯುತ್ತಾ ಇದ್ಧಾನೆ. ಅದಕ್ಕೆ ಲೋಕಾಧಿಪತಿ ಎಂದು ಅವನಿಗೆ ಹೆಸರುಂಟು. ಹಬ್ಬಿ ಎಲ್ಲಾ ಸುಡುವದು ಬೆಂಕೆಯ ಧರ್ಮ; ಅದರಂತೆ ಕೆಡಿಸುವದು ಅವನಿಗೆ ಸ್ವಭಾವಧರ್ಮ. ಆಹುತಿ ಇಲ್ಲದ ಮೇಲೆ, ಬೆಂಕೆಯ ಆಟ ನಿಂತಿತು ಹ್ಯಾಗೋ, ಹಾಗೆ ಪಿಶಾಚನಿಗೆ ಮನುಷ್ಯರಲ್ಲಿ ಕೆಡಕು ಮಾಡಲಿಕ್ಕಾಗದೆ ಹೋದ ಮೇಲೆ ತಾನೆ ಇಲ್ಲವಾಗುವನಷ್ಟೆ. ದುರಾಶೆ ಹೊರಗಿನಿಂದ ಅವನಲ್ಲಿ ಶೇರಲಿಲ್ಲ. ತನ್ನಲ್ಲಿ ಅದನ್ನು ಹುಟ್ಟಿಸಿ ಕೊಂಡನು. ಕಾರಣ ಸುಳ್ಳಿನ ತಂದೆ ಎನಿಸಿ ಕೊಂಬನು. ಅವನು ತಾನೆ ಎಲ್ಲಾ ನಾಶ ಮಾಡುವ ಬೆಂಕೆ ಆದನು. ಅದರ ಸಲುವಾಗಿ ಅವನಿಗೆ ರಕ್ಷಣೆ ಆಗದ ಹಾಗೆ ಕಾಣುತ್ತದೆ. ಮನುಷ್ಯರು ಕಾಷ್ಟವೇ; ಬೆಂಕೆ ಅದಕ್ಕೆ ಹತ್ತಿ ಸುಡುವಾಗ್ಯೆ, ಅದು ಬೆಂಕೆಯಂತೆ ತೋರುವದು; ಆದರೆ ಇನ್ನು ಸಮಯ ಇರಲಿಕ್ಕೆ ಬೆಂಕೆ ನೊಂದಿಸಿದರೆ, ಕಾಷ್ಟ ಉಳಿಯುವದು. ಹೀಗಿರಲಿಕ್ಕೆ ಮನುಷ್ಯರು ಪಾಪದಲ್ಲಿ ಬಿದ್ದಾಗ್ಯೂ, ಅವರಿಗೆ ರಕ್ಷಣೆ ಆಗುವದು ಅಶಕ್ಯವಲ್ಲ.—ಕೆಡಿಸ ಬೇಕೆಂದು ಪಿಶಾಚನು ಮನುಷ್ಯರ ಹತ್ತರ ಬಂದನು. ದೇವರು ಅವನನ್ನು

ಯಾಕೆ ತಡೆಯಲಿಲ್ಲ? ಇದಕ್ಕೆ ಉತ್ತರ: ೧) ಹೋರಾಟವಿಲ್ಲದಲೆ ಜಯವಿಲ್ಲ, ಪುಣ್ಯವಿಲ್ಲ. ಮೂಕನು ಬಂದು ಮಾತನ್ನಾಡದೆ ಇದ್ದರೆ, ತ್ರಾಣವಿಲ್ಲದ ಮುದಕನು ಸಾಧುವಾಗಿದ್ದರೆ, ಅದು ಯಾತರ ಪುಣ್ಯ? ಮನುಷ್ಯರಿಗೆ ಆಜ್ಞೆ ಕೊಟ್ಟಲ್ಲಿ, ದೇವರು ತನ್ನ ಮೇಲೆ ಪ್ರೀತಿ ಭರವಸವನ್ನು ಅವರಲ್ಲಿ ಎಬ್ಬಿಸಿ, ಅವರ ಸ್ವಭಾವ ಬಲ ಸಾಧಕ ಮಾಡಿಸಿ ಹೆಚ್ಚಿಸ ಬೇಕೆಂದು ಅವರನ್ನು ಒಳ್ಳೇದಕ್ಕಾಗಿ ಶೋಧಿಸಿದನು. ಬೇರೊಂದು ಕಡೆಯಿಂದ ಮೋಸಗೊಳ್ಳದೆ, ತಮ್ಮೊಳಗೆ ತಾವೆ ದೇವರ ಆಜ್ಞೆ ಕೇಳ ಬಾರದೆಂದು ನಿರ್ಣಯ ಮಾಡಿದ್ದರೆ, ಅವರು ಪಿಶಾಚನ ಹಾಗೆ ಆಗಿ, ರಕ್ಷಣೆ ಹೊಂದ ಅಶಕ್ಯವಾಗುತ್ತಿತ್ತು. ದೇವರು ಹೀಗೆ ಶೋಧಿಸಿದ್ದೊಂದಲ್ಲದೆ ಪಿಶಾಚನು ಸುಧಾ ತನ್ನ ಕಡೆಗೆ ತಿರುಗುವಂತೆ ಅವರನ್ನು ಶೋಧಿಸಿದರಿಂದ, ನಿರ್ಣಯ ಮಾಡಿ ಕೊಳ್ಳುವದು ಹೆಚ್ಚು ಭಾರ ಕಠಿಣವಾಯಿತು. ಆದಾಗ್ಯೂ ಈ ಹೋರಾಟದಲ್ಲಿ ಗೆಲ್ಲುವದು ಅಸಾಧ್ಯವಾಗಿದ್ದಿಲ್ಲ. ಯಾಕಂದರೆ ದೇವರು ಮನುಷ್ಯನನ್ನು ತೋಟ ಕಾಯಲಿಕ್ಕೆ ಇಟ್ಟಲ್ಲಿ, ಒಂದು ಕಡೆಯಿಂದ ಕೆಡಕನು ಬಂದಾನು ಎಂಬಂತೆ ಸುಳುವು ತೋರಿಸಿದ್ದಾಯಿತು. ಮತ್ತು ಪಿಶಾಚನು ಅವರಲ್ಲಿ ಎಬ್ಬಿಸಿದ ಆಶೆಯನ್ನು ಜಯಿಸುವದಕ್ಕೆ ಸಾಕಷ್ಟು ತ್ರಾಣವಿತ್ತು. ಜಯಿಸಿದ ಪಕ್ಷದಲ್ಲಿ, ಈ ಹೋರಾಟ ಎಷ್ಟು ಹೆಚ್ಚು ಕಠಿಣವಿತ್ತೋ, ಅಷ್ಟು ಹೆಚ್ಚಾಗಿ ಅವರ ಭಯಭಕ್ತಿ ಒಪ್ಪುತ್ತಿತ್ತು; ಅಷ್ಟು ಹೆಚ್ಚು ಬೇಗ ದೇವರಿಗೆ ಸಾರೂಪ್ಯವಾಗುತ್ತಿದ್ದರು. ಈ ಮೇರೆಗೆ ಪಿಶಾಚನ ಶೋಧನೆಯಿಂದ ಅವರಿಗೆ ಹಿತವಾಗುತ್ತಿತ್ತು.—೨) ಮನುಷ್ಯರು ಈ ಹೋರಾಟದಲ್ಲಿ ಸೋತ ಪಕ್ಷಕ್ಕೂ, ದೇವರು ಒಂದು ಉಪಾಯ ನೋಡಿ ಕೊಂಡಿದ್ದನು. ಹ್ಯಾಗಂದರೆ ಈ ಪಕ್ಷದಲ್ಲಿ ತನ್ನ ಮಗನಾದ ಯೇಸು ಕ್ರಿಸ್ತನ ಮುಖದಿಂದ ಅವರನ್ನು ರಕ್ಷಿಸ ಬೇಕೆಂದು ನಿರ್ಣಯ ಮಾಡಿದ್ದನು.—ಮತ್ತು ಪಿಶಾಚನಿಂದ ಶೋಧನೆ ಆಗದ ಪಕ್ಷದಲ್ಲಿಯಾದರೂ, ಒಂದು ವೇಳೆ ಪಾಪದಲ್ಲಿ ಬೀಳುತ್ತಿದ್ದರು. ೩) ಪಾಪ ಮಾಡಲಿಕ್ಕಾದರೂ ದೂತರಿಗೂ ಮನುಷ್ಯರಿಗೂ ಸ್ವತಂತ್ರ ಇದ್ದ ಮೇಲೆ, ಅವರಲ್ಲಿ ಯಾರಾದರೂ ದೇವರ ಎಚ್ಚರಿಕೆ ಮರೆತು, ನಾವೆ ಕರ್ತರು ಎಂದು ಆತನಿಗೆ ತಿರಿಗಿ ಬೀಳ ಬೇಕೆಂದಿದ್ದರೆ, ಹಾಗೆ ಆಗಲಿ ಎಂದು ಆತನ ಚಿತ್ತ ಉಂಟು. ಆತನ ಹಂಚಿಕೆ ಅದರಿಂದ ಏನೂ ಕೆಡುವದಿಲ್ಲ. ಆತನಿಗೆ ಏನೂ ಕುಂದು ಬರುವದಿಲ್ಲ. ಆಗಲೆ ಪಿಶಾಚನನ್ನು ನಿರ್ಮೂಲ ಮಾಡಿದ್ದರೆ, ಇವನಿಂದ ನನ್ನ ಕಾರ್ಯ ಕೆಟ್ಟೀತೆಂದು ಒಂದಿಷ್ಟು ಅಂಜಿದವನಂತೆ ತೋರಿ ಮನುಷ್ಯರ ಲೆಖ್ಖದಲ್ಲಿ ಆತನ ಮಹಿಮೆಗೆ ಕುಂದು ಹತ್ತುತ್ತಿತ್ತು. ದೇವರು ಪಿಶಾಚಿಗಳನ್ನೂ ಕೆಟ್ಟ ಮನುಷ್ಯರನ್ನೂ ಅವರವರ ಇಚ್ಛೆಯ ಪ್ರಕಾರ ನಡೆಯಗೊಡೋಣ, ಅವರು ತಮ್ಮಿಂದ ತಾವೆ ಕೆಡೋಣ, ಹೀಗೆ ಈ ಲೋಕದಲ್ಲಿ ಆತನ ದಿವ್ಯ ಪಾರುಪತ್ಯ ಕಂಡು ಬಂದಲ್ಲಿ, ಆತನ ಅತ್ಯಂತ ನೀತಿ ಮಹಿಮಾ ಬಲಗಳು ಸೂರ್ಯನಂತೆ ಒಪ್ಪುತ್ತವೆ.

ಸರ್ಪ ಪಿಶಾಚಿಗೆ ತಕ್ಕ ಸಾದೃಶ್ಯ, ತಕ್ಕ ವೇಷ. ಯಾಕಂದರೆ ಅದು ೧) ವಿಷಪ್ರಾಣಿ; ೨) ತನ್ನ ಕಣ್ಣುಗಳಿಂದ ಬೇರೆ ಪ್ರಾಣಿಗಳಿಗೆ ಮೋಹನ ಹಾಕಿ, ತನ್ನ ಕಡೆಗೆ ಎಳಕೊಂಡು ನುಂಗುವದು. ಅದು ಯುಕ್ತಿಯುಳ್ಳದು. ೩) ಸಪ್ಪಳವಿಲ್ಲದಲೆ ಹರಿದು ಬರುವದರಿಂದ, ತಪ್ಪಿಸಿ ಕೊಳ್ಳ ನೋಡಿ ಕೊಳ್ಳುವದು ಕಠಿಣ.—ನಿನ್ನ ಹೃದಯವನ್ನು ಮೋಸಗೊಳಿಸಲಿಕ್ಕೆ ನಿನ್ನ ಸಮೀಪಕ್ಕೆ ಗುಪ್ತವಾಗಿ ಹರಿದು ಬರುವ ಪಾಪ ಎಂಬ ಹಾವಿಗೆ ದೂರವಾಗಿರು!— ಹೇಳಿದ್ದುಂಟೇ) "ನೀನು ನೆಟ್ಟಗೆ ಕೇಳಲಿಲ್ಲ, ಅಥವಾ ನೆಪ್ಪು ಹಾರಿದೀತು. ತೋಟದಲ್ಲಿ ಎಲ್ಲಾ ಅಧಿಕಾರ ನಿಮಗೆ ಕೊಟ್ಟಾತನು ಇಂಥಾ ಮಾತು ಹೇಳಿರಲಿಕ್ಕಿಲ್ಲ". — ಆಕೆಯ ಮನಸಿನಲ್ಲಿ ದೇವರ ವಾಕ್ಯದ ಮೇಲೆ ಸಂಶಯ ಹುಟ್ಟಿಸಲಿಕ್ಕೆ ಮೊದಲು ಯತ್ನ ಮಾಡುತ್ತಾನೆ. ಯತ್ನ ಸಾಗುವಂತೆ, ದೇವರ ವಾಕ್ಯವನ್ನು ವಿಪರ್ಯಾಸ ಮಾಡಿ ಹೇಳುತ್ತಾನೆ. ಹ್ಯಾಗಂದರೆ: ದೇವರು ಒಂದೇ ಗಿಡದ ಫಲವನ್ನು ಮಾತ್ರ ನಿಷೇಧಿಸಿ ಉಳಿದ ಎಲ್ಲಾ ಗಿಡಗಳ ಫಲಗಳು ಅಂಗೀಕೃತವೆಂದು ಹೇಳಿದನು. ಎಲ್ಲಾ ಗಿಡಗಳ ಫಲವನ್ನು ಆತನು ನಿಷೇಧಿಸಿದನೆಂದು ಸರ್ಪವು ಹೇಳಿ ಅಂಗೀಕೃತವಾದಂಥಾದರ ಸುದ್ದಿ ತೆಗೆಯುವದಿಲ್ಲ.— ದೇವರ ಎಚ್ಚರಿಕೆ ಭಯ ಅವು ಒಂದು ಬಲವಾದ ಕೋಟೆ; ಮನುಷ್ಯರು ಅದರಲ್ಲಿ ಇರು

ಉತ್ಪತ್ತಿ. ೩, ೧—೬.

ವ ತನಕ, ಪಿಶಾಚಿ ಎಂಬ ವೈರಿ ಮುತ್ತಿಗೆ ಹಾಕಿದರೂ, ಅದನ್ನು ತೆಗೆಯಲಾರನು. ಅವನ್ನ ಹಾರಿಸಿದ ಮಾತ್ರದಲ್ಲಿ, ಮನುಷ್ಯರು ಅನಾಥರಾಗಿ, ಆ ಮಹಾ ವೈರಿಯ ಕೈಯಲ್ಲಿ ಬೀಳುವರು. ಅದಕ್ಕೆ ಅವನು ಮೊದಲು ಆ ಕೋಟೆಯನ್ನ ಕೆಡಹ ತೊಡಗುವನು. ದೇವರ ಎಚ್ಚರಿಕೆ ಭಯ ಹೇಳದೆ, ಹೀಗೆ ಬರೆ ನೀತ್ಯೋಪದೇಶ ಮಾಡುವದು ಹ್ಯಾಗಂದರೆ: ದುರ್ಗಬಲ ಮುಂತಾದ ಯುದ್ಧಸನ್ನಾಹ ಮಾಡಿ ಕೊಡದೆ, ಬಂಟನಿಗೆ ಕಾಳಗಕ್ಕೆ ಹೋಗಿ ಪೌರಾಗಿ ಬಾ ಅಂದ ಹಾಗಾಯಿತು.

೨. ೩ ವ. ಸ್ತ್ರೀ ಸರ್ಪಕ್ಕೆ ಹೇಳಿದ ಉತ್ತರ.—ತಿನ್ನುತ್ತೇವೆ) ಅಂಗೀಕೃತವಾದದ್ದನ್ನು ಸೇವಿಸುತ್ತೇವೆ.—ತಿನ್ನಲೂ ಮುಟ್ಟಲೂ ಬಾರದು) ಹವ್ವಳಿಗೆ ದೇವರು ನಿಷೇಧಿಸಿದ್ದು ಚಂದಾಗಿ ಗೊತ್ತಿತ್ತು. ಒಂದು ವೇಳೆಯಲ್ಲಿ ತಿನ್ನದೆ ಇದ್ದರೂ, ತನ್ನಲ್ಲಿಯ ದುರಾಶೆಯಿಂದ ಫಲ ಮುಟ್ಟಿದ ಮಾತ್ರವೇ ಪಾಪವೆಂದು ಸ್ಪಷ್ಟವಾಗಿ ತಿಳುಕೊಂಡಳು. ಆದಮನು ಆಕೆಗೆ ಇದನ್ನು ತಿಳಿಸಿದ್ದಾನು. ಆಕೆ ಸರ್ಪದ ಮಾತಿಗೆ ಅನುಮಾನಗೊಳ್ಳದೆ, ಅದರ ಸಂಗಡ ಸಂಭಾಷಣೆ ಮಾಡಿದ್ದೊಂದು, ತಿಂದರೆ, ಸತ್ತೇ ಸಾಯುವಿ ಎಂಬ ದೇವರ ಶಿಕ್ಷಾವಾಕ್ಯವನ್ನು ಅಷ್ಟು ಸ್ಪಷ್ಟವಾಗಿ ಹೇಳದೆ ಇದ್ದದ್ದೊಂದು ಈ ಎರಡರಿಂದ ಮನುಷ್ಯರಲ್ಲಿ ಎಚ್ಚರಿಕೆ ಸ್ವಲ್ಪ ಕಡಿಮೆಯಾದಂತೆ ಕಂಡು ಬರುತ್ತದೆ.—ಈ ಸಂಭಾಷಣೆಯಲ್ಲಿ ಸರ್ಪವು ಕರ್ತನಾದ ದೇವರು ಎಂದು ಅಲ್ಲ, ದೇವರೆಂದು ಮಾತ್ರ ಅನ್ನುತ್ತದೆ. ಯಾಕಂದರೆ ಆತನು ಪಿಶಾಚಿಯನ್ನು ನಡಗಿಸುವ ಭಯಂಕರನಾದ ದೇವರಲ್ಲದೆ, ಅವನಿಗೆ ಕೃಪೆಯುಳ್ಳ ಕರ್ತನಲ್ಲ. ಆದರೆ ಹವ್ವಳು ಸುಧಾ ಆತನಿಗೆ ಕರ್ತನೆಂದು ಅನ್ನುವದಿಲ್ಲ. ಈ ನಾಮೋಚ್ಚಾರದಿಂದ ಆತನ ಅನಂತ ದಯ ಕರುಣಗಳು ನೆನಪಿಗೆ ಬರುತ್ತಿದ್ದವು. ಈ ನಾಮೋಚ್ಚಾರ ಮರೆತಲ್ಲಿ, ಪಿಶಾಚಿಯ ಮಾತು ಎಂಬ ಉರಿಬಾಣ ನಿವಾರಿಸುವ ಒಂದು ಆವರಣೆ ಕಡಿಮೆ ಆಯಿತು.

೪. ೫ ವ. ಸರ್ಪವು ಸ್ತ್ರೀಗೆ ಪ್ರತ್ಯುತ್ತರ ಹೇಳಿ ಆಕೆಯಲ್ಲಿ ಅಹಂಕಾರ ಎಬ್ಬಿಸಿದ್ದು.—ಆಕೆಯಲ್ಲಿ ಭಯಭಕ್ತಿ ಗುಂದುವದು ನೋಡಿ, ಸರ್ಪ ಧೈರ್ಯಗೊಳ್ಳುತ್ತದೆ. ಈಗ ಮುಚ್ಚುಮರೆ ಇಲ್ಲದೆ, ದೇವರ ವಾಕ್ಯಕ್ಕೆ ಸುಳ್ಳು ಅನ್ನುತ್ತದೆ.—ಸರ್ಪದ ಮಾತಿನಲ್ಲಿ ಎರಡು ಪ್ರಕರಣಗಳು ಅವೆ: ೧) ನೀವು ಸಾಯಲಿಕ್ಕೇ ಇಲ್ಲ, ದೇವರು ಹೇಳಿದ ಶಿಕ್ಷೆ ಆಗಲಿಕ್ಕೇ ಇಲ್ಲ ಎಂಬುದು.

ದೇವರ ವಾಕ್ಯ:	ಸರ್ಪದ ಮಾತು.
ನೀವು ಸತ್ತೇ ಸಾಯುವಿರಿ;	ನೀವು ಸಾಯಲಿಕ್ಕೇ ಇಲ್ಲ.

೨) ದೇವರ ಆಜ್ಞೆ ಮೀರೋಣದರಿಂದ ನಿಮಗೆ ಬಹಳ ಉಪಯೋಗವಾಗುವದು ಎಂಬುದು. ಇದು ಎರಡನೆ ಪ್ರಕರಣ.—ನಿಮ್ಮ ಕಣ್ಣುಗಳು ತೆರೆಯುವವು) "ನಿಮ್ಮ ಕುರುಡತನ ಹೋಗಿ, ನೀವು ಎಲ್ಲಾ ತಿಳಿದವರಾಗುವಿರಿ. ಆವಾಗ ಮೇಲು ಕೀಳು ಅರಿತವರಾಗಿ, ದೇವರ ಹಾಗಿರುವಿರಿ. ದೇವರಿಗೆ ಸಾರೂಪ್ಯವಾಗುವದು ನಿಮ್ಮ ಕೆಲಸವಲ್ಲವೋ? ಇದು ಈ ಪರಿ ಒಂದು ಕ್ಷಣದಲ್ಲಿ ತೀರುವದು. ದೇವರು ಮಾಡಿದ್ದೇ ಆತನು ಅರಿಯನೇ? ಆತನು ಎಲ್ಲಾ ಬಲ್ಲನು. ನಿಮಗೆ ಹೇಳಲಿಲ್ಲ ಯಾಕೋ? ನೀವು ತನ್ನಂತೆ ಆದೀರೆಂದು ಹೊಟ್ಟೆಕಿಚ್ಚು ಪಡುತ್ತಾನೇನೋ?"—ಮೇಲು ಕೀಳು ಅರಿಯದೆ ಇರುವದು ಬಾಲ್ಯದ ಲಕ್ಷಣ (ದ್ವಿತಿ. ೧, ೩೯). ಮೇಲು ಕೀಳು ಅರಿತಿರುವದು ದೂತರ ಮತ್ತು ದೇವರ ಲಕ್ಷಣ (೨ಸಮು. ೧೪, ೧೭. ಉತ್ಪ. ೩, ೫. ೨೨). ಅರಿತಿರುವದು = ತಿಳಿದು ನಿರ್ಣಯಿಸುವದು. ದೇವರು ಮೇಲು ಕೀಳು ಅರಿತಿರುವದು ಹ್ಯಾಗಂದರೆ: ಆತನು ಉತ್ತಮೋತ್ತಮನು. ಆತನ ಸ್ವಭಾವವೇ ಮೇಲು. ಆದ್ದರಿಂದ ಆತನು ಅದರ ಮೂಲ ಬಲ್ಲನು; ಅದನ್ನು ಲೋಕದಲ್ಲಿ ತುಂಬ ಬಲ್ಲನು; ಅದನ್ನ ಬೆಳಿಸ ಬಲ್ಲನು. ಕೀಳು ಆತನ ಸ್ವಭಾವಕ್ಕೆ ಶುದ್ಧ ವಿರುದ್ಧವಾಗಿ ಆತನ ಮೇಲು ಎಂಬ ಬೆಂಕೆಯ ಮುಂದೆ ನಿಲ್ಲಲಾರದೆ ಸುಟ್ಟು ಹೋಗುವದು. ಆತನ ಮೇಲು ಎಂಬ ಬೆಳಕಿನಿಂದ ಕೀಳು ಎಂಬ ಕತ್ತಲು ಇಲ್ಲವಾಗುವದು. ದೂತರು ಮನುಷ್ಯರು ದೇವರಿಗೆ ವಿಮುಖರಾದಲ್ಲಿ, ಕೀಳು ಉದ್ಭವಿಸುವದು. ಇದು ದೇವರ ನೇಮಕ. ಕೀಳು ಆಗದಂತೆ, ಆತನು ನಿವಾರಿಸ ಬಲ್ಲನು. ಅದರ ಉತ್ಪತ್ತಿ ಬಲ್ಲನು. ಅದನ್ನು ತಿರಿಗಿ

ಉತ್ಪತ್ತಿ. ೩. ೧—೬.

ಪರಿಹರಿಸ ಬಲ್ಲನು. ಅದರ ನಿಮಿತ್ತವಾಗಿ ಆತನು ವಿಶ್ವದಲ್ಲಿ ಎಲ್ಲೆಲ್ಲಿಯೂ ಕೀಳು ಅಹಿತವಾಗದೆ, ಮೇಲು ಮಾತ್ರ ಆಗುವಂತೆ, ಪಾರುಪತ್ಯ ಮಾಡುವಲ್ಲಿ ಆತನ ದಿವ್ಯ ಸರ್ವಾಧಿಪತ್ಯ ಒಪ್ಪುವದು. ಮೇಲು ಕೀಳು, ಪಾಪ ಪುಣ್ಯ, ಸುಖ ದುಖ್ಖ, ಹಿತ ಅಹಿತ ಎಂಬಿವನ್ನ ದೇವರ ಹಾಗೆ ಪೂರ್ಣವಾಗಿ ಅರಿತವನು ಪರಾಧೀನನಾಗುವದಿಲ್ಲ. ಅವನೇ ದೇವರಿಗೆ ಸಾರೂಪ್ಯವಾದನು. ಅದಕ್ಕೆ ಸರ್ಪದ ಮಾತಿನ ಅಭಿಪ್ರಾಯವೇನಂದರೆ: "ನೋಡಿರಿ! ದೇವರು ಮೇಲು ಕೀಳು ಅರಿತವನಾಗಿ, ಒಂದರ ಹಂಗು ಇಲ್ಲದಲೆ, ಸರ್ವಾಧಿಪತ್ಯ ನಡಿಸುತ್ತಿದ್ದಾನೆ. ನೀವು ಆತನನ್ನು ಹೋಲಬೇಕಲ್ಲ! ಆದರೆ ಆತನು ಈಗ ನಿಮಗೆ ನಿಷೇಧಿಸಿದ್ದನ್ನು ನೀವು ಮುಟ್ಟದೆ ಇದ್ದರೆ, ಆತನಂತೆ ಸಂಪೂರ್ಣ ಸ್ವತಂತ್ರಿಗಳಾದೇವೆಂದು ನೆನಿಸುತ್ತೀರೇನು? ಹೀಗಾಗುವದಿಲ್ಲ. ನೀವು ಇನ್ನು ದೈವಾಧೀನರೇ. ಆದ ಕಾರಣ ಸ್ವತಂತ್ರಿಗಳಲ್ಲ; ನೀವು ತಂದೆಯ ಅಧೀನದಲ್ಲಿ ಇರುವ ಬಾಲಕರು. ಇದು ಯಾತರ ಸ್ವತಂತ್ರ! ತಂದೆ ಹೇಳಿದಂತೆ, ಕೇಳುತ್ತಾ ಹೋದರೆ, ನೀನು ಒಂದು ಬೊಂಬೆಯಂತೆ ಆದಿ, ಅವನೇ ಸೂತ್ರಧಾರ; ಅವನು ಎಳೆದಂತೆ ನೀನು ಕುಣಿಯುತ್ತಿ. ನಿನಗೆ ಇಚ್ಛಾವಿಹಾರ ಆಗಲಿಲ್ಲ. ಆತನ ಹಂಗನ್ನು ಹರಿದು, ನಿಮ್ಮ ಚಿತ್ತಕ್ಕೆ ಬಂದದ್ದನ್ನು ಮಾಡಿದ್ದೇ ಸ್ವತಂತ್ರ. ಹೀಗೆ ಮಾಡಿದರೆ, ಮೇಲು ಕೀಳು ತಿಳಿದೀತು. ಸರ್ವಾಧಿಪತ್ಯ ನಡದೀತು".—ಇದು ಎಂಥಾ ಮೋಸದ ಮಾತು! ಸತ್ಯ ಮಿಥ್ಯ ಎರಡು ಇದರಲ್ಲಿ ಬೆರಕೆ ಆಗೆವೆ. ತಂದೆಯ ಮಾತನ್ನು ಕೇಳದೆ, ಬಾಲಕನು ಅವನ ಮನೆ ಬಿಟ್ಟರೆ, ಮಾತಾಪಿತಾಧೀನ ತಪ್ಪಿತು, ಸ್ವತಂತ್ರವಾಯಿತು ಖರೆ. ಆದರೆ ಇದು ಎಂಥಾ ಸ್ವತಂತ್ರ? ತನಗೆ ಅವಶ್ಯವಾದ ತಂದೆಯ ಆಶ್ರಯ ಕಳಕೊಂಡು ಅತಂತ್ರವಾಗಿ ಪರಾಧೀನನಾದನು. ಮನುಷ್ಯರ ವಿಚಾರ ಹೀಗೆ ಆಯಿತು. ಸರ್ಪದ ಮಾತು ಒಂದು ಪ್ರಕಾರ ಒದಗಿ ಬಂತು. ಹ್ಯಾಗಂದರೆ: ಅವರು ದೇವರ ಹಾಗೆ ಇಚ್ಛಾವಿಹಾರಿಗಳು, ಯಾರ ಹಂಗಿಲ್ಲದವರು ಆದರು. ದೇವರ ಆಗ್ನ್ಯೆಯೊಳಗಿದ್ದದ್ದೇ ಒಳ್ಳೇದು ಎಂದು, ಆತನ ಆಗ್ನ್ಯೆ ಮೀರಿದ್ದೇ ಪಾಪ, ಕೆಡಕು ಎಂದು ಅನುಭವಿಸಿ ತಿಳುಕೊಂಡರು. ಕ್ಷೇಮ ರೋಗ ತಿಳಿಯ ಬೇಕಾದರೆ, ರೋಗದಲ್ಲಿ ಬೀಳ ಬೇಕು ಎಂಬಂತೆ ಆಯಿತು. ರೋಗದಲ್ಲಿ ಬಿದ್ದರೆ, ಕಳ ಕೊಂಡ ಕ್ಷೇಮ ಬಹಳ ಚಲೋದು, ರೋಗ ಬಹಳ ಕೆಟ್ಟದ್ದು ಎಂದು ಅನುಭವದಿಂದ ತಿಳುಕೊಳ್ಳುವದು, ಖರೆ.

೬ ವ. ಮನುಷ್ಯರು ನಿಷೇಧಿಸಿದ ಫಲದ ಮೇಲೆ ಆಶೆ ಮಾಡಿ ಪಾಪದಲ್ಲಿ ಬಿದ್ದದ್ದು ನೋಡಿ) ಇದು ದೇಹಕ್ಕೆ ಹಿತಾಹಾರ, ಪ್ರಾಣಕ್ಕೆ ಸಂತೋಷ ಇಷ್ಟಫಲ ಕೊಡುವಂಥಾದ್ದು, ಪ್ರಾಣಾತ್ಮಕ್ಕೆ ಗ್ನ್ಯಾನ ಹುಟ್ಟಿಸುವಂಥಾದ್ದು ಎಂದು ಈ ಮೂರು ನೋಡಿದಳು. ಈ ಗಿಡ ಆಕೆಯನ್ನು ಪೂರ್ಣವಾಗಿ ಮರುಳುಗೊಳ್ಳಿಸಿತು. ಅದರ ಮರಳು ದೇಹ ಪ್ರಾಣಾತ್ಮಗಳನ್ನು ಹಿಡುಕೊಂಡಿತು. ದೇವರು ನಿಷೇಧಿಸಿದ ಫಲವಿದು, ಇದನ್ನು ಸೇವಿಸೋಣದರಿಂದ ಕೆಡಕಲ್ಲದೆ, ಪ್ರಯೋಜನ ಬರಲಿಕ್ಕೆ ಇಲ್ಲ, ಎಂಬ ವಿವೇಕ ಹೋಯಿತು. ದೇವರು ಸೃಷ್ಟಿಕರ್ತನು, ಕಾರಣಸ್ವರೂಪವಾದಾತ. ಲೋಕ ಸೃಷ್ಟಿಯಾದದ್ದು, ಕಾರ್ಯರೂಪವಾದದ್ದು. ದೇವರಲ್ಲಿ ಕರ್ತೃತ್ವ ಉಂಟು, ಲೋಕದಲ್ಲಿಲ್ಲ; ಲೋಕ ದೈವಾಧೀನವಾದದ್ದು, ಎಂಬ ಲೋಕದ ವಿಷಯವಾದ ಅರವು ಮಾಜಿ ಲೋಕವೆ ಅವರಿಗೆ ದೇವರಂತೆ ಆಗಿ ಮನಗೊಳಿಸುವಂಥಾದಾಯಿತು.—ನಾವು ದೇವರ ಕೈಕೆಳಗಿರತಕ್ಕದ್ದು ಎಂಬ ದೀನತ್ವ ಪಾಪಕ್ಕೆ ಅಡ್ಡ ಕಟ್ಟುವ ಒಂದು ಆವರಣೆ. ನಾವು ದೇವರಿಗೆ ಸಮಾನವಾಗ ಬೇಕೆಂಬ ಗರ್ವದಿಂದ ಈ ಆವರಣೆ ಹೋದ ಮೇಲೆ, ನಿಶೇಧಿಸಿದ ಗಿಡದ ಕಡೆಗೆ ಮನಸು ಎಳಿಸಿತು. ಸ್ತ್ರೀ ಅದನ್ನು ನೋಡಿ ಹಿತ ಅಹಿತ, ಯೋಗ್ಯ ಅಯೋಗ್ಯ ನೆಟ್ಟಗೆ ತೂಗಿ ನೋಡಲಾರದ ಹಾಗೆ, ಮೋಹನ ಮೂರ್ತಿಯಂತಾದ ಇಚ್ಛೆಯಿಂದ ಮರುಳುಗೊಂಡಳು. ಈ ಇಚ್ಛೆಗೆ ಒಪ್ಪಿ ಕೊಂಡು ಚಿತ್ತ ಕೊಟ್ಟಲ್ಲಿ, ಅದು ಗರ್ಭ ಧರಿಸಿ ಕೊಂಡಂತಾಯಿತು. ಪಾಪ ಒಳಗೆ ಹುಟ್ಟಿತು. ತಿನ್ನ ಬೇಕೆಂಬ ನಿರ್ಣಯ ಒಳಗೆ ಆಯಿತು.—ಸ್ತ್ರೀ ಕೈ ಚಾಚಿ ಆ ಗಿಡದ ಫಲದಲ್ಲಿ ತಕ್ಕೊಂಡು ತಿಂದಲ್ಲಿ, ಆ ಗರ್ಭದೊಳಗಣ ಪಿಂಡ ಪೂರ್ಣ ಬೆಳದ ಮೇಲೆ, ಇಚ್ಛೆ ಎಂಬಾಕೆ ಪಾಪ ಎಂಬ ಮಗಳನ್ನು ಹೆತ್ತಳು. ಈ ಮಗಳು ಮೃತ್ಯುವೆಂಬ ಮಗಳನ್ನು

ಉತ್ಪತ್ತಿ. ೩, ೭.

ಹಡಿಯುತ್ತಾಳೆ. ಆ ಇಚ್ಛೆ ಪಾಪಕ್ಕೆ ತಾಯಿ, ಮರಣಕ್ಕೆ ಅಜ್ಜಿ (ಯಾಕೊ. ೧, ೧೫). ಕೊಟ್ಟಳು) ಸ್ತ್ರೀಯು ಪುರುಷನಿಗಿಂತ ಬಲಹೀನಳಾಗಿ ಬೇಗ ಮೋಸಕ್ಕೆ ಒಳಗಾದಳು (೧ ತಿಮೊ. ೨, ೧೪). ಸ್ತ್ರೀಯರು ಇದನ್ನು ನೆನಪಿಗೆ ತಂದು ವಿಶೇಷವಾಗಿ ಎಚ್ಚರಿಕೆಯಿಂದ ಇರ ತಕ್ಕದ್ದು. ಮೋಸಗೊಂಡಾಕೆ ಆದಮನನ್ನು ಮೋಸಗೊಳಿಸುವವಳಾದಳು. ಆದರೂ ಅವನು ಹತ್ತರ ನಿಂತು ಸರ್ಪದ ಸಂಗಡ ಆದ ಸಂಭಾಷಣೆ ಎಲ್ಲಾ ಕೇಳಿ, ಏನೂ ಹೇಳದೆ, ಸುಮ್ಮನೆ ಇದ್ದದರಿಂದ, ಅವನಲ್ಲಿಯೂ, ತನ್ನ ಹೆಂಡತಿಯಲ್ಲಿ ಆದಂತೆ, ಪಾಪ ಹುಟ್ಟಿತು ಎಂಬುದು ಸರಿ. ಮತ್ತು ನಿಷೇಧಿಸಿದ ಫಲವನ್ನು ಹವ್ವಳು ತಿಂದಾಕ್ಷಣ, ಅವನು ತಿನ್ನಲಿಕ್ಕೆ ಏನೂ ಅನುಮಾನ ಮಾಡಲಿಲ್ಲ.—ಇದು ಪಾಪದ ಉತ್ಪತ್ತಿ. ಇದನ್ನು ಇನ್ನೊಂದು ಸರ್ತಿ ಸಂಕ್ಷೇಪವಾಗಿ ಹೇಳುತ್ತೇವೆ: ಮನುಷ್ಯನಲ್ಲಿ ಇರುವ ಅರುವಿಗೆ ದೇವರು, ತಾನು, ಲೋಕ, ಎಂಬೀ ಮೂರು ವಿಷಯಗಳು ಅವೆ. ಹಾಗೂ ಅವನಿಗೆ ಆತ್ಮ ಪ್ರಾಣ ದೇಹ ಎಂಬೀ ತ್ರಿವಿದ ಸ್ವರೂಪ ಉಂಟು. ಪಿಶಾಚಿ ಶಂಕಾಮಲ ಹಚ್ಚಿದದರಿಂದ, ದೇವರ ವಿಷಯವಾದ ನಿರ್ಮಲ ಅರುವು ಮಾಸಿತು. ಆತ್ಮವು ದೇವರಿಂದ ಅಗಲಿ ಬಳಗುಂದಿತು. ಅದರಿಂದ ಅವಿಶ್ವಾಸ ಹುಟ್ಟಿತು. ಇದು ಪಾಪದಲ್ಲಿ ಮೊದಲನೇದು. ಆ ಮೇಲೆ ಶೋಧಕನು ಮನುಷ್ಯರನ್ನು ತಾವು ಯಾರು ಎಂದು ತಮ್ಮ ಯೋಗ್ಯತೆ ಏನೆಂದು ಮರಿಸಿ ಅಹಂಕಾರಗಿರಿಯನ್ನು ಏರಿಸಿದನು. ಅಹಂಭಾವ ಸ್ವರೂಪವಾದ ಅವರ ಪ್ರಾಣವು ಮಿತಿ ಮೀರಿ ಉಬ್ಬಿ ಕೊಂಡು ಬಾತ ಹಾಗಾಯಿತು. ಶರೀರ ಪುಷ್ಟಿಯಾಗುವದು ಕ್ಷೇಮದ ಲಕ್ಷಣ. ಬಾಯುವದು ರೋಗದ ಲಕ್ಷಣ. ಅಹಂಕಾರ ಪಾಪದಲ್ಲಿ ಎರಡನೇದು. ಕಡೆಗೆ ಪಿಶಾಚಿಯು ಮೋಹನಾಸ್ತ್ರ ಹೊಡೆದು, ಲೋಕದ ವಿಷಯವಾದ ಅರುವನ್ನು ವೇಧಿಸಿ, ಲೋಕ ಬರೆ ಮೋಹನಾಸ್ಪದದೋಪಾದಿಯಲ್ಲಿ ತೋರುವಂತೆ ಮಾಡಿ, ಮನುಷ್ಯರನ್ನು ಭೋಗಸಮುದ್ರದಲ್ಲಿ ಮುಳಿಗಿಸಿದನು. ಲೋಕ ಭೋಗ್ಯ, ದೇಹ ಭೋಕ್ತೃ ಎಂಬಂತೆ ಆಯಿತು.

ಪಾಪದ ಉತ್ಪತ್ತಿ.

ದೇವರ ವಿಷಯವಾದ ಅರುವು	—	ಆತ್ಮ	—	ಅವಿಶ್ವಾಸ	—	ವಿಶ್ವಾಸ.
ತನ್ನ ವಿಷಯವಾದ ಅರುವು	—	ಪ್ರಾಣ	—	ಅಹಂಕಾರ	—	ದೀನತ್ವ.
ಲೋಕದ ವಿಷಯವಾದ ಅರುವು	—	ದೇಹ	—	ಭೋಗ	—	ಮಿತಾನುಭೋಗ.
ವ್ಯವಹಾರ	—	ಮನುಷ್ಯ	—	ಪಾಪ	—	ಪುಣ್ಯ

ಅವಿಶ್ವಾಸ ಪಾಪದ ಬೇರು. ದೇವರನ್ನು ಹೊಂದಿ ಕೊಂಡಿರುವಂಥಾ ವಿಶ್ವಾಸ ಇರುವ ವರೆಗೆ, ಮೋಸಗೊಳಿಸುವದು ಅಸಾಧ್ಯ. ಅವಿಶ್ವಾಸ ಮನುಷ್ಯರಲ್ಲಿ ಬೇರೂರಿದ ಕೂಡಲೆ, ದೇವರು ಯಾರು ನಾವು ಯಾರು ಎಂದು ಅಲಕ್ಷ್ಯ ಹುಟ್ಟಿ, ತಮ್ಮ ಸುಖ ಸ್ವಾರ್ಥ ಹುಡುಕುವ ಅಹಂಕಾರಿಗಳಾಗುವರು. ಈ ಅಹಂಕಾರವೇ ಪಾಪದ ಜೀವ. ಮನುಷ್ಯರು ತಮ್ಮ ಅಹಂಕಾರ ತೃಪ್ತಿ ಪಡಿಸಲಿಕ್ಕೆ ಲೋಕಭೋಗ ಮಾಡುವಲ್ಲಿ, ಆ ಅಹಂಕಾರ ತೋರಿ ಬಂದು ರೂಪಗೊಂಡಂತಾಯಿತು. ಭೋಗವೆ ಪಾಪದ ಶರೀರ.

2) ಪಾಪದ ಫಲಗಳು. ೩, ೭—೨೪.

a) ಜನ್ಯಫಲ. ೭. ೮.

aa) ನಾಚಿಕೆ. ೭.

ತೆರೆಯಲ್ಪಟ್ಟು) ಸರ್ಪ ಹೇಳಿದಂತೆ ಆಯಿತು. ಆದರೆ ಮನುಷ್ಯರು ಹೀಗಾದೀತೆಂದು ನೆನಿಸಲಿಲ್ಲ. ತಮ್ಮ ಅರಿಷ್ಟವನ್ನು ನೋಡಲಿಕ್ಕೆ ಕಣ್ಣು ತೆರೆದವು. ತಮ್ಮ ದೃಷ್ಟಿ ತಮ್ಮ ನಗ್ನಾಂಗದ ಮೇಲೆ ಬೀಳುತ್ತಲೆ,

ಉತ್ಪತ್ತಿ. ೩, ೮.

ಅವರು ನಾಚಿ ಅದನ್ನು ಮುಚ್ಚಲಿಕ್ಕೆ ಉಪಾಯ ಮಾಡಿದರು. ಈಗ ನಾಚಿದ್ದು ಯಾಕೆ? ಅವರ ನಗ್ನತ್ವ ಮುಂಚೆ ಅವರಿಗೆ ಮಾನವಿತ್ತು. ಯಾಕಂದರೆ ಅವರ ಪ್ರಾಣಾತ್ಮಕ್ಕೆ ವಾಹನವಾದ ದೇಹವು ಅವರ ಆಟೋಪದಲ್ಲಿದ್ದು ಸಾಧುವಾಗಿತ್ತು ಎಂಬುದಕ್ಕೆ ಆ ನಗ್ನತ್ವ ಒಂದು ಸಾಕ್ಷಿ. ಪಾಪದಲ್ಲಿ ಬಿದ್ದ ಮೇಲೆ, ದೇಹ ತನ್ನ ಸುಖಾನುಭೋಗ ಹುಡುಕುವ ಅಹಂಕಾರಕ್ಕೆ ಕರಣವಾಗಲಾಗಿ, ಪಾಪದ ಇಚ್ಛೆಗಳು ಅದರಲ್ಲಿ ವ್ಯಾಪಿಸಿ ಅದರ ಎಲ್ಲಾ ಅವಯವಗಳನ್ನ ಹಿಡಕೊಳ್ಳುವವು. ತರುವಾಯ ಈ ಅವಯವಗಳಿಂದ ತಿರಿಗಿ ಪಾಪ ಮಾಡಲಿಕ್ಕೆ ಪ್ರೇರಣೆಗಳು ಆಗುವವು. — ಇವೆ ವ್ಯಸನಗಳು ಎನಿಸುವವು. ನೋಡ ಬಾರದ್ದನ್ನಾದರೂ ಕಣ್ಣು ನೋಡ್ವೇನು ಅನ್ನುತ್ತದೆ. ಹೀಗೆ ದೇಹವು ಪಾಪದಿಂದ ನಮ್ಮ ವಶಕ್ಕೆ ಮಾರಿ ಹೋಗಿ, ಕೆಟ್ಟು, (ವಿಶೇಷವಾಗಿ ಪಾಪಕ್ಕೆ ಪ್ರೇರಿಸುವ ಮಾನಸ್ಥಾನಗಳು) ಅದು ನಮ್ಮ ಕೆಟ್ಟತನಕ್ಕೆ ಒಂದು ಸಾಕ್ಷಿ ಆಯಿತು. ಮತ್ತು ಹೀಗಾದ ಬಳಿಕ, ಅದರ ರೂಪ ಸಹ ವಿಕಾರವಾಗಿದ್ದೀತು. ಆದ ಕಾರಣ ಅದನ್ನು ಮುಚ್ಚ ಬೇಕೆಂಬ ಹಾಗಾಗುವದು. ದೇಹವು ಅವರ ಪಾಪದ ವಿಷಯ ನೆನಪು ಕೊಡುವಂಥಾ ರೂಪಗೊಂಡ ಮನೋಸಾಕ್ಷಿ ಆಯಿತು. ಎಂಥಾ ಘಾತ! ಸ್ವತಂತ್ರ ಹೋಗಿ ಅತಂತ್ರ ದಾಸತ್ವ ಬಂತು. ಮಾನ ಹೋಗಿ ಅವಮಾನವಾಯಿತು. ದೇವರ ಹಾಗಾಗದೆ, ಮೊದಲು ಇದ್ದ ಹೋಲ್ವಿಕೆ ಕಳಕೊಂಡರು. ಪಾಪದ ಸಂಬಳ ಇಂಥಾದ್ದೇ.

bb) ಅಂಜಿಕೆ. ೮.

ಯಾವದು ಒಂದು ಸಪ್ಪಳದಿಂದ ಕರ್ತನು ಬರುತ್ತಾನೆಂದು ತಿಳಕೊಂಡು ಭಯಗೊಂಡರು. ಪಾಪದಲ್ಲಿ ಬಿದ್ದವರು ಪರಿಶುದ್ಧ ನ್ಯಾಯಾಧೀಶನಾದ ದೇವರಿಗೆ ದೂರ ಹೋಗ ಬೇಕೆಂದು ಯತ್ನ ಮಾಡುತ್ತಾರೆ. ಆದರೆ ಈ ಯತ್ನ ಸಾಗದು. ಒಸ್ತ್ರಿಚೆಂಬ ಪಕ್ಷಿ (ಕುದುರೆಯಷ್ಟು ಎತ್ತರವಾದ ಒಂದು ಪಕ್ಷಿ) ಬೇಟೆಗಾರರು ತನ್ನನ್ನು ಹಿಡಿಯಲಿಕ್ಕೆ ಬರುವದನ್ನು ಕಂಡರೆ, ಅದು ತನ್ನ ತಲೆ ಪೂರ್ತಿ ಒಂದು ಪೊದೆಯಲ್ಲಿ ಅಡಿಗಿಸಿದ ಹಾಗಾಯಿತು. ದೇವರು ನೆನಪಿನಲ್ಲಿ ಬರುವದರಿಂದ, ಮನೋಸಾಕ್ಷಿ ಬಹಳ ಎಚ್ಚರಿಕೆ ಆಗುವದು. ಪಾಪಿಷ್ಟರಲ್ಲಿ ಪಾಪಕ್ಕೆ ಅಂಜಿಕೆ ಆಗುವದೇ ಮುಯ್ಯಿಗೆ ಮುಯ್ಯಿ ತೀರಿಸುವ ಜೀವವುಳ್ಳ ದೇವರು ಇದ್ದಾನೆಂಬುವದಕ್ಕೆ ಒಂದು ದೃಷ್ಟಾಂತ. ನಾಚಿಕೆ ಅಂಜಿಕೆ ಅವರಲ್ಲಿ ಹುಟ್ಟಿದ್ದು ತಾವು ಪಾಪ ತಮ್ಮಲ್ಲಿ ಹುಟ್ಟಿಸಿಕೊಳ್ಳಲಿಲ್ಲ, ಅದು ಇರ ತಕ್ಕದ್ದಲ್ಲ ಎಂಬ ಭಾವದ ಲಕ್ಷಣ. ಪಿಶಾಚಿಯಲ್ಲಿ ನಾಚಿಕೆ ಅಂಜಿಕೆ ಇಲ್ಲ, ಆದ್ದರಿಂದ ಅವನಿಗೆ ರಕ್ಷಣಾಸಮಯ ದಾಟಿತು. ಮನುಷ್ಯರು ಪಾಪಕ್ಕೆ ನಾಚಿಕೆ ಅಂಜಿಕೆ ಪಡುವವರಾಗಿರುವದರಿಂದ, ಇನ್ನು ರಕ್ಷಣೆ ಅವರಿಗೆ ಆಗುವ ಹಾಗೆ ಅದೆ. ಒಬ್ಬನು ಎಷ್ಟು ಅಂಜಿಕೆ ನಾಚಿಗೇಡಿ ಆಗುತ್ತಾನೋ ಅಷ್ಟು ದೂರ ಅವನಿಗೆ ರಕ್ಷಣೆ ಆಗುವದು.

b) ದೇವರು ನ್ಯಾಯ ತೀರಿಸಿ ಶಿಕ್ಷೆ ಮಾಡಿದ್ದು. ೯—೨೪.

ಮನುಷ್ಯರು ಪಾಪದಲ್ಲಿ ಬಿದ್ದು ಅರಿಷ್ಟರಾದರು. ಈ ಸ್ಥಿತಿಯಲ್ಲಿ ಅವರನ್ನ ನಿಲ್ಲಗೊಡದೆ, ಅವರಲ್ಲಿ ಹೊಕ್ಕೊಂಡ ಪಾಪವನ್ನು ತಿರಿಗಿ ಹೊರಡಿಸ ಬೇಕೆಂದು ದೇವರು ಮನಸ್ಸು ಮಾಡಿದನು. ಇದಕ್ಕೆ ಅವರು ತಮ್ಮ ಅಪರಾಧ ಅರಿಯುವ ಹಾಗೆ, ಆತನು ನ್ಯಾಯಾಧೀಶನಂತೆ ಅವರನ್ನ ವಿಚಾರಿಸಿ, ಅವರ ಪಾಪ ಅವರ ಮೇಲೆ ಸಾಧಿಸಿ, ಹೌದೆನ್ನಿಸಿ, ಪಶ್ಚಾತ್ತಾಪಕ್ಕೆ ಅನುವು ಮಾಡಿದನು. ಇದಲ್ಲದೆ ಅವರನ್ನು ಕೆಡಿಸಿದ ಸರ್ಪವನ್ನು ಶಪಿಸಿ, ಅದನ್ನು ಜಯಿಸುವ ಉಪಾಯ ತೋರಿಸಿದ್ದಲ್ಲಿ, ಧೈರ್ಯವನ್ನೂ ರಕ್ಷಣಾಶೆಯನ್ನೂ ಅವರಲ್ಲಿ ಎಬ್ಬಿಸಿದನು. ಹೀಗೆ ಅವರನ್ನು ತಗ್ಗಿಸಿದನು ಹಿಗ್ಗಿಸಿದನು. ಆದರೆ ಈ ಹಿಗ್ಗಿಗೆ ಅವರು ಸಿದ್ಧವಾಗುವ ಹಾಗೆ, ಆತನು ಅವರನ್ನು ತೋಟದಿಂದ ಹೊರಗೆ ಹಾಕಿ, ಹೀಗೆ ಅವರಿಗೆ ಬುದ್ಧಿ ಕಲಿಸುವ ಶಿಕ್ಷೆ ನಡಿಸಲಿಕ್ಕೆ ಉಪಕ್ರಮಿಸಿದನು.

ಉತ್ಪತ್ತಿ. ೩, ೯—೧೩.

aa) ದೇವರು ಅವರನ್ನು ವಿಚಾರಿಸಿದ್ದು. ೯—೧೩.

೯ ವ. ದೇವರು ನ್ಯಾಯವಿಚಾರಕ್ಕೆ ಕರೆಯುತ್ತಾನೆ. ಆತನಿಗೆ ಸರ್ವಾಧಿಪತ್ಯ ಇರುವದರಿಂದ, ಆತನು ಸರ್ವರಿಗೆ ನ್ಯಾಯಾಧೀಶನು. ಮನುಷ್ಯರು ತಮ್ಮ ಪಾಪ ತಾವೆ ತಿಳಿದು ಅರಿಕೆ ಮಾಡಿ ಹೇಳಿ ಕೊಳ್ಳುವ ಹಾಗೆ, ಸರ್ವಜ್ಞನಾದ ದೇವರು ಪ್ರಶ್ನೋತ್ತರಗಳಿಂದ ವಿಚಾರ ನಡಿಸುತ್ತಾನೆ.—ನೀನು ಎಲ್ಲಿ?) ಮೊದಲು ಆದಮನನ್ನು ವಿಚಾರಿಸುತ್ತಾನೆ. ಯಾಕಂದರೆ ಅವನು ಮುಖ್ಯಸ್ಥನು. ಅವನು ಹೆಂಡತಿಗಿಂತ ಮುಂಚೆ ಬುದ್ಧಿ ತಂದು ಕೊಳ್ಳ ಬೇಕಾಗಿತ್ತು. ಯಾವನಿಗೆ ಹೆಚ್ಚಿಗೆ ಕೊಟ್ಟದೋ, ಅವನಿಂದ ಹೆಚ್ಚು ಕೇಳ ಯೋಗ್ಯವದೆ.—"ನೀನು ಮುಂಚೆ ನನ್ನ ದಾರಿ ಸಂತೋಷದಿಂದ ನೋಡುತ್ತಿದ್ದಿ; ಈಗ ನನ್ನ ಇದಿರಿಗೆ ಬರಲೊಲ್ಲಿ; ಇದರ ಕಾರಣವೇನು? ನಿನಗೆ ನಾಚಿಕೆ ಅಂಜಿಕೆ ಆಯಿತೇನು?—ಮನುಷ್ಯರು ಅಲ್ಲಗಳೆಯಲಾರದಂಥಾ ಕಣ್ಣಿಗೆ ಕಾಣುವಂಥಾ ಪಾಪದ ಫಲವನ್ನೂ, ಆದ ಕಾರ್ಯವನ್ನೂ, ಹೀಗೆ ದೇವರು ಹಿಡಿದು ಹೇಳಿ ತೋರಿಸಿ ಸಾಧ್ಯ ಸಿದ್ಧಿ ಮಾಡುತ್ತಾನೆ.

೧೦ ವ. ಆದಮನ ಉತ್ತರ. ಕರ್ತನು ಅವನ ಮೇಲೆ ಸಾಧಿಸಿದ ತಪ್ಪಿಗೆ ಆದಮನು ಹೌದನ್ನುತ್ತಾನೆ. ಆದರೆ ನಿರ್ವಾಹವಿಲ್ಲದ್ದನ್ನಲ್ಲದೆ ಹೆಚ್ಚು ಹೇಳುವದಿಲ್ಲ.

೧೧ ವ. ನಿಷೇಧಿಸಿದ ಫಲ ತಿಂದ ಪಾಪವನ್ನು ದೇವರು ಅವನ ಮೇಲೆ ಸಾಧಿಸಿದ್ದು. ನಿನಗೆ ಯಾವನು ಹೇಳಿದನು? "ಮುಂಚೆ ನೀನು ನಗ್ನನಾಗಿದ್ದಾಗ್ಯೂ, ನಾಚಲಿಲ್ಲಲ್ಲ. ನೀನು ನಗ್ನನು ಎಂದು ನಿನಗೆ ನಾಚಿಕೆ ಯಾರು ಕಲಿಸಿದರು? ನೀನು ನನ್ನ ಆಜ್ಞೆ ಮಿಾರಿದ ಪಾಪವಲ್ಲವೋ? ಅದೇ ಕಲಿಸಿತು" ಎಂಬಂತೆ ದೇವರು ಅವನಿಗೆ ನಾಚಿಕೆ ಅಂಜಿಕೆ ಎಂಬೀ ಫಲಗಳು ಬೆಳದ ಬೇರನ್ನೂ ಕಾರಣವನ್ನೂ ಹೇಳಿ ತೋರಿಸುತ್ತಾನೆ. ನೀನು ತಿಂದಿ ಎಂದು ದೇವರು ಅನ್ನದೆ, ನೀನು ತಿಂದಿಯಾ ಎಂದು ಪ್ರಶ್ನೆ ಹಾಕುತ್ತಾನೆ. ಯಾಕಂದರೆ ನಾನು ತಿಂದೆ ಎಂಬದು ಆದಮನ ಬಾಯಿಲಿ ಬರತಕ್ಕದ್ದಾಗಿತ್ತು.

೧೨ ವ. ತಪ್ಪಿಸಿ ಕೊಳ್ಳ ದಾರಿ ಕಾಣದಕ್ಕೆ, ಆದಮನು ತನ್ನ ಪಾಪ ಅರಿಕೆ ಮಾಡುತ್ತಾನೆ. ಆದರೂ ತಿಂದ ಅಪರಾಧ ತನ್ನ ಹೆಂಡತಿಯ ಮೇಲೆ, ಆಕೆಯನ್ನು ತನಗೆ ಕೊಟ್ಟ ದೇವರ ಮೇಲೆ ಹೊರಿಸಿ ನೆವನ ಹೇಳುತ್ತಾನೆ. ಹೀಗೆ ಪಾಪಿಷ್ಟರು ಮೊದಲು ತಮ್ಮ ಬುದ್ಧಿ ಕೆಡಿಸಿದವರ ಮೇಲೆ, ಆ ಬಳಿ ಪಾಪ ಮಾಡಲಿಕ್ಕೆ ಅನುಕೂಲವಾದದ್ದರ ಮೇಲೆ (ದೇವರ ಮೇಲೆ) ತಪ್ಪು ಹೊರಿಸುವರು.

೧೩ ವ. ದೇವರಿಗೂ ಆದಮನಿಗೂ ಆದ ಪ್ರಶ್ನೋತ್ತರವನ್ನು ಸ್ತ್ರೀ ಕೇಳಿ, ತನ್ನ ಪಾಪ ದೇವರ ಮುಂದೆ ಮುಚ್ಚಿ ಕೊಳ್ಳಲಿಕ್ಕೆ ಆಗದೆಂದು ನೋಡಿ, ಸರ್ಪದ ಮೇಲೆ ಹಾಕಿ, ಒಡಂಬಟ್ಟಳು. ಆಕೆಯ ಮಾತಿನಲ್ಲಿ ಸತ್ಯ ಮಿಥ್ಯ ಎರಡು ಬೆರೆಸಿ ಅವೆ. ಆದರೂ ಸರ್ಪ ನನ್ನನ್ನು ವಂಚಿಸಿತೆಂದಲ್ಲಿ, ಆಗ ಬಾರದ್ದಾಯಿತು, ಮೋಸವಾಯಿತು ಎಂದು ಆಕೆ ತಿಳುಕೊಂಡ ಹಾಗೆ, ತೋರುತ್ತದೆ. ನಾಚಿಕೆ ಅಂಜಿಕೆ ಇವಲ್ಲದೆ, ತನ್ನ ಪಾಪದ ಅರುವು ಸಹ ಆಕೆಯಲ್ಲಿ ಇದ್ದದರಿಂದ, ದೇವರು ಕೃಪೆಯಿಂದ ಕೊಟ್ಟ ವಾಗ್ದತ್ತವನ್ನು ತಿಳುಕೊಳ್ಳಲಿಕ್ಕೆ ಅನುಕೂಲವಾಯಿತು (ಸಾಮತಿ. ೨೮, ೧೩). ನಾನು ಮೋಸಗೊಂಡು ತಪ್ಪು ಮಾಡಿದೆ ಎಂಬುವ ನೆವನ ದೇವರ ಮುಂದೆ ಸಾಗುವದಿಲ್ಲ. ಪಾಪವು ನಮ್ಮನ್ನು ದೇವರಿಂದ ಅಗಲಿಸಿ, ಪ್ರಾರ್ಥನೆಯಿಂದ ಆತನ ಸಮಿಾಪಕ್ಕೆ ನಮ್ಮನ್ನ ಹೋಗ ಗೊಡುವದಿಲ್ಲ, ನಾವು ನಮ್ಮ ಸ್ಥಿತಿಯನ್ನು ತಿಳುಕೊಂಡು ಅರಿಕೆ ಮಾಡದ ಹಾಗೆ, ನಮ್ಮನ್ನು ಕಠಿಣರನ್ನು ಮಾಡುವದು.

bb) ದೇವರು ನ್ಯಾಯ ನಿವಡಿಸಿದ್ದು. ೧೪—೧೯.

ಮೋಸಗೊಳಿಸಿ ಪಾಪದ ಬೀಜ ಬಿತ್ತಿದ ಮುಖ್ಯ ದೋಷ ಸರ್ಪದ ಕಡೆಗೆ ಬಂತು. ಅದು ಪಾಪದ ನೆಲೆ, ಶಲೆ. ಆ ಮೇಲೆ ಸರ್ಪದ ಮಾತು ಕೇಳಿ ಮೋಸಗೊಂಡು ತಿಂದ ಪಾಪವು ಹವ್ವಳ ಮೇಲೆ ಒಪ್ಪಿತು. ಕಡೆಗೆ ಆಕೆ ಕೊಟ್ಟದ್ದನ್ನು ತಿಂದ ಅಪರಾಧದೊಳಗೆ ಆದಮನು ಬಂದನು. ಪಾಪ ಬಂದ ಈ ಕ್ರಮದಿಂದ ದೇವರು ತೀರ್ಪು ಮಾಡಿದ್ದನ್ನು ತಿಳಿಸುತ್ತಾನೆ.

ಉತ್ಪತ್ತಿ. ೩, ೧೪. ೧೫.

aaa) ಸರ್ಪವನ್ನು ಶಪಿಸಿದ್ದು. ೧೪. ೧೫.

ಮನುಷ್ಯರಿಗೆ ಮೋಸಗೊಳ್ಳಿಸಿದ ಪಿಶಾಚಿ ಸರ್ಪವಾಗಿ ತೋರಿದನು. ಆದ್ದರಿಂದ ಅದಕ್ಕೆ ಕೊಟ್ಟ ಶಾಪ ಅವರನ್ನು ಕೆಡಿಸಿದ ಪಿಶಾಚಿಗೆ ಕೊಟ್ಟಂತೆ ಆಯಿತು. ಈ ಶಾಪದ ಮಾತು ಎಂಬ ಶುಕ್ತಿಯಲ್ಲಿ ರಕ್ಷಣಾವಾಗ್ದತ್ತ ಎಂಬ ಅಮೂಲ್ಯವಾದ ಮುಕ್ತಾಫಲ ಮಿಂಚುತ್ತದೆ. — ನಾವು ಈ ಶಾಪದ ಮಾತಿನಲ್ಲಿ ಪಿಶಾಚಿಗೆ ವಾಹನವಾಗಿದ್ದ ಸರ್ಪಕ್ಕೆ ಆದ ಶಾಪವನ್ನು, ಇದರಿಂದ ದೇವರು ಪಿಶಾಚಿಗೆ ಸೂಚಿಸಿ ಕೊಟ್ಟ ಶಾಪವನ್ನು, ಈ ಎರಡನ್ನು ವಿಶೇಷಿಸ ಬೇಕು. ೧) ಸರ್ಪಕ್ಕೆ ಆದದ್ದು: ಮನುಷ್ಯರ ಪಾಪಪತನದಿಂದ ವ್ಯರ್ಥತ್ವಕ್ಕೆ ಒಳಗಾದ (ರೋಮ. ೮, ೧೯.) ಉಳಿಕೆ ಪ್ರಾಣಿಗಳಿಗಿಂತ ಸರ್ಪಜಾತಿಯು ಹೆಚ್ಚು ವಿಕಾರವಾಯಿತು. ಅದು ಕಾಲಿಲ್ಲದ್ದಾಯಿತು. ಇನ್ನು ಗೂಢಪಾದ ಅದಕ್ಕೆ ಇರುವದರಿಂದ, ಅವಕ್ಕೆ ಗೂಢಪಾತ್ತು ಇತ್ಯಾದಿ ನಾಮಗಳು ವರ್ತಿಸುವವು. ಆ ಗೂಢಪಾದಗಳು ಶಾಪ ಆಗುವ ಮೊದಲಿದ್ದ ಕಾಲುಗಳ ಚಿನ್ಹೆ. ಸರ್ಪ ಮಣ್ಣು ತಿನ್ನುವಂಥಾದ್ದಾಯಿತು. ಹೀಗೆ ಅದು ಎಲ್ಲಾ ಪ್ರಾಣಿಗಳಿಗಿಂತ ಕಡೆ (ವ. ೧೪.) — ಆ ಮೇಲೆ ಅದು ಮನುಷ್ಯರನ್ನೂ ಪ್ರಾಣಿಗಳನ್ನೂ ಕಡಿದು ತನ್ನ ವಿಷವನ್ನು ಘಾಯದಲ್ಲಿ ಬಿಟ್ಟು ಕೊಲ್ಲುವಂಥಾದ್ದಾಗಿ ಎಲ್ಲಾ ಪ್ರಾಣಿಗಳಿಗೆ ವೈರಿ ಆಯಿತು. ಮೊದಲು ಪ್ರಾಣಿಗಳು ಮನುಷ್ಯರ ಅಂಕಿಯಲ್ಲಿ ಇದ್ದವು. ಆದರೆ ಅವರು ಪಾಪದಲ್ಲಿ ಬಿದ್ದ ಮೇಲೆ, ಅವು ಅವರ ವಶ ಮೀರಿ ಹೋದವು. ಮನುಷ್ಯರಿಗೆ ಬಹಳ ಭಯಂಕರ ಪ್ರಾಣಿಗಳಾದವುಗಳಲ್ಲಿ ಸರ್ಪ ಮುಖ್ಯ. ಆದರೆ ಮನುಷ್ಯರು ವಿಷದ ಸ್ಥಾನವಾಗಿರುವ ತಲೆಯನ್ನು ಬಡಿದು ತಮಗೆ ಕೆಡಕಾಗದಂತೆ ಮಾಡುವರು. ಮನುಷ್ಯರು ಸರ್ಪ ಬಡಿಯುವಾಗ, ಅದು ಹಿಂದಿನಿಂದ ಬಂದು, ಹಿಮ್ಮಡ ಕಡಿಯುವದು. ಆದರೆ ಹಿಮ್ಮಡ ಘಟ್ಟಿ. ಅದರಲ್ಲಿ ಹಲ್ಲು ಬೇಗ ದೂರ ನಡುವದಿಲ್ಲ. ಆದ ಕಾರಣ ಬಹಳವಾಗಿ ಕೊಲ್ಲಲಾಗಲಿಕ್ಕಿಲ್ಲ. ಒಟ್ಟಿಗೆ ಮನುಷ್ಯರಿಗೂ ಸರ್ಪಜಾತಿಗೂ ಆಗುವ ಕಡಿದಾಟದಲ್ಲಿ ಅವರು ಗೆದಿಯುವರು. ಅದು ಸೋತು ಹೋಗುವದು (ವ. ೧೫.) ೨) ಪಿಶಾಚಿಗೆ ಶಾಪ ಸೂಚಿಸಿ ಕೊಟ್ಟದ್ದು: ಮೊದಲು ೧೪ನೆ ವಚನದಲ್ಲಿ ಹೇಳಿದ್ದು: ಅವನು ಎಲ್ಲಾ ದುಷ್ಟರಲ್ಲಿ ಮುಖ್ಯಸ್ಥನು; ದೇವರ ಶಾಪಕ್ಕೆ ವಿಶೇಷವಾಗಿ ಒಳಗಾದವನು; ಎಲ್ಲರಿಗಿಂತ ನೀಚನು; ನೆಲಕ್ಕೆ ಬಿದ್ದು, ಮಣ್ಣು ಕಚ್ಚಿ, ತಾವು ಸೋತೆವೆಂದು ಯುದ್ಧದಲ್ಲಿ ಅಪಜಯವಾದ ವೈರಿಗಳು ಅರಿಕೆ ಮಾಡುವಂತೆ, ಅವನು ಕಡಿಗೆ ಅಪಜಯವಾಗಿ ಹೋಗುವನು. — ಆ ಮೇಲೆ ೧೫ನೆ ವಚನದಲ್ಲಿ ಹೇಳಿದ್ದು: ಹಗೆ ಇಡುವೆನು) ಸ್ತ್ರೀಯು ಬುದ್ಧಿ ತಪ್ಪಿ, ಸರ್ಪದ ಸಂಗಡ ಸಲಿಗೆ ಹಚ್ಚಿ ಕೊಂಡು, ಅದು ತೋರಿಸಿದ ಆಶೆಗೆ ಭ್ರಮೆಗೊಂಡಿದ್ದಳು. ಕೆಡಿಸಿದವನಂತೆ, ಮನುಷ್ಯನು ನಿತ್ಯ ನಾಶನಕ್ಕೆ ಗುರಿಯಾಗದ ಹಾಗೆ, ಆ ಸಲಿಗೆ ಕಡಿಯ ಬೇಕಾಗಿತ್ತು. ಆದರೆ ಪಾಪದಿಂದ ಬಲಹೀನರಾದ ಮನುಷ್ಯರಿಗೆ ಆ ಸಲಿಗೆ ಮೀರೋಣಾಗಲಿಲ್ಲ. ಆದ ಕಾರಣ ದೇವರೇ ಆ ಸಲಿಗೆಯನ್ನು ಬಿಡಿಸುವದು ಅವಶ್ಯವಾಯಿತು. ದೇವರೆ ಸ್ತ್ರೀಗೂ ಸರ್ಪಕ್ಕೂ ಹಗೆ ಇಟ್ಟಲ್ಲಿ, ಅಂಥಾ ಸಲಿಗೆ ಬಿಡ ಬೇಕೆಂಬ ಭಾರವನ್ನು ಆತನು ಮನುಷ್ಯರ ಮೇಲೆ ಹಾಕಿ, ಈ ಭಾರ ಹೊತ್ತು ಕೊಳ್ಳಲಿಕ್ಕೆ ಮನಸಿನಲ್ಲಿ ಸಾಕಷ್ಟು ಬುದ್ಧಿ ಬಲವನ್ನೂ ಹೊರಗೆ ಅನುಕೂಲವನ್ನೂ ಕೊಟ್ಟಿದ್ದಾನೆ. ಪಾಪದ ಮೇಲೆ, ಕೆಟ್ಟವನ ಮೇಲೆ, ಪ್ರೀತಿ ಮಾಡುವದು ಪಾಪವೇ ಸರಿ. ಕೆಟ್ಟದ್ದನ್ನು ಹಗೆ ಮಾಡುವದು ದೇವರ ನೇಮಕ. — ಆಕೆಯ ಬೀಜಕ್ಕೂ) ಬೀಜ = ವಂಶದವರು. ಸರ್ಪದ ವಂಶದವರು (ಮಕ್ಕಳು) ಯಾರಂದರೆ: ಪಿಶಾಚಿಯ ಉಪದೇಶ ಕೇಳಿ, ಅವನಿಗೆ ಶಿಷ್ಯರಾಗಿ, ಅವನ ಬುದ್ಧಿ ಕಲಿತು ಕೊಂಡು, ಅವನ ಸ್ವಾಧೀನದಲ್ಲಿ ಬಿದ್ದು, ಅವನಿಂದ ಪ್ರೇರಿಸಿ ಕೊಂಡು, ಅವನ ಚಿತ್ತಕ್ಕೆ ಬಂದದ್ದನ್ನು ನಡಿಸುವವರು, ತಂದೆಯನ್ನು ಮಗನು ಹೋಲುವಂತೆ, ಪಿಶಾಚಿಯನ್ನು ಹೋಲುವವರು. ಇವರಲ್ಲಿ ಕೆಟ್ಟ ದೂತರು, ದುಷ್ಟ ಮನುಷ್ಯರು ಇದ್ದಾರೆ. ಅವರೆಲ್ಲರು ಕೂಡಿ ಒಂದು ದೊಡ್ಡ ರಾಜ್ಯವಾಗಿದ್ದಾರೆ. ಇದರಲ್ಲಿ ಆಳುಗಳು ಧಣಿಯರು ಧೊರೆಗಳು ರಾಜರು; ಪಿಶಾಚಿಯೇ ಮಹಾರಾಜನು. — ಸ್ತ್ರೀಯ ವಂಶದವರಾರೆಂದರೆ: ದೇವರು ಆಕೆಗೂ ಸ

ಉತ್ಪತ್ತಿ. ೩, ೧೬.

ರ್ಪಕ್ಕೂ ಇಟ್ಟ ಹಗೆ ಕೈಕೊಂಡು, ಅವನ ಸಲಿಗೆ ದೂರ ಮಾಡಿ, ದೇವರು ತಮ್ಮಲ್ಲಿ ಇಟ್ಟಿರುವ ಸತ್ಯದ ಸಾಕ್ಷಿಗೆ ಕಿವಿ ಕೊಟ್ಟು, ಆತನ ಪರಿಶುದ್ಧಾತ್ಮಕ್ಕೆ ಮನಸಿನಲ್ಲಿ ಅನುವು ಮಾಡಿ, ಆತನಿಂದ ಬುದ್ಧಿ ಶಿಕ್ಷೆ ಹೇಳಿಸಿಕೊಳ್ಳುವ ಮನುಷ್ಯರೇ (ಯೋಹ. ೮, ೩೭. ೧೮, ೨೭). ಪಾಪಕ್ಕೆ ನಾಚುವಂಥಾ ದೇವರ ಶಿಕ್ಷೆಗೆ ಅಂಜುವಂಥಾ ತಮ್ಮ ನರಚಾವ ಉಳಿಸಿ ಕೊಳ್ಳುತ್ತಾ ಇರುವದರಿಂದ, ಇವರಿಗೆ ಮನುಷ್ಯರು, ಹವ್ವಳ ವಂಶದವರು ಅನ್ನ ತಕ್ಕದ್ದು. ಆದರೆ ಸರ್ಪದ ವಂಶದವರಾದ ಮನುಷ್ಯರು ಹವ್ವಳಿಂದ ಹುಟ್ಟಿದಾಗ್ಯೂ, ಕಡೆಗೆ ಮನುಷ್ಯರಲ್ಲ ದೆವ್ವಗಳೇ ಎಂದು ನೆನಿಸಲಾದೀತು. ಯಾಕಂದರೆ ನಾಚಿಕೆ ಅಂಜಿಕೆಲ್ಲಾ ಹಾರಿಸಿ ತಮ್ಮ ನರಚಾವ ಕಳಕೊಳ್ಳುತ್ತಾ ಹೋಗುತ್ತಾರೆ. — ಆ ಸ್ತ್ರೀಯ ವಂಶದವರು ಕೂಡಿ ದೇವರ ರಾಜ್ಯವಾಗಿದ್ದಾರೆ. ಅವರಲ್ಲಿ ಮುಖ್ಯಸ್ಥನೂ ಅರಸನೂ ಆಗಿರುವಾತನು, ಕಾಲ ಒದಗಿದ ಮೇಲೆ, ಬಂದ ಕ್ರಿಸ್ತನೇ. ಆತನ ಮುಖದಿಂದ ಪಿಶಾಚಿಯ ಕೆಲಸಗಳು ಹಾಳಾಗಿ (೧ ಯೋಹ. ೩, ೮. ಇಬ್ರಿ. ೨, ೧೪.) ಅವನ ಅಧಿಕಾರ ಮುರಿಯುತ್ತಾ ಹೋಗುವದು. — ಕಚ್ಚುವಿ) ಪಾಪಪತನವಾದಂದಿನಿಂದ ಸ್ತ್ರೀ ವಂಶದವರಿಗೂ, ಸರ್ಪದ ವಂಶದವರಿಗೂ ಒಂದು ದೊಡ್ಡ ಹೋರಾಟ ಉಂಟು. ಕ್ರಿಸ್ತನು ಬಂದು, ಪರಿಶುದ್ಧನಾಗಿ ನಡೆದು, ಪಾಪ ತನಗೆ ಹತ್ತ ಗೊಡದೆ, ಅದನ್ನು ದೂರ ಮಾಡಿ, ಅದರ ಬಲ ಮುರಿದ್ದೊಂದು, ಆತನು ಶ್ರಮೆ ಪಟ್ಟು ಸತ್ತು ಎದ್ದದರಿಂದ, ಪಾಪದ ಶಿಕ್ಷೆ ಉಂಡು, ದೇವರ ಕೋಪಾಗ್ನಿಗೆ ತನ್ನನ್ನು ಬಲಿಯಾಗಿ ಕೊಟ್ಟು, ಶಾಂತಪಡಿಸಿ, ಮನುಷ್ಯರನ್ನು ದೇವರಿಗೆ ಅನ್ಯೋನ್ಯ ಮಾಡಿ, ಹೊಸತಾಗಿ ಬದುಕಿಸಿದ್ದೊಂದು, ಈ ಎರಡರಿಂದ ಆತನು ಪ್ರಾಣಸ್ಥಾನವಾದ ಸರ್ಪದ ತಲೆಯನ್ನು ಬಡಿದು ಅದರ ಜೀವ ತೆಗೆದ ಹಾಗಾಯಿತು. ಕ್ರಿಸ್ತನು ಮರಣಸಂಕಟದಲ್ಲಿರುವಾಗ, ಅದು ಹಿಮ್ಮಡ ಕಚ್ಚಿದ್ದನ್ನು ಆತನು ಅನುಭವಿಸಿದನು. — ಪಿಶಾಚಿಯ ಸಂಗಡ ಕಡಿದಾಡಿ, ಅವನನ್ನು ಜಯಿಸುವ ಹಾಗೆ, ಆತನು ತನ್ನ ಪ್ರಾಣ ಬಿಡ ಬೇಕಾಗಿತ್ತು. ಅಂದಿನಿಂದ ಅದು ನಿತ್ರಾಣಿ ಆಯಿತು. ಆದಾಗ್ಯೂ ಹೋರಾಟ ಇನ್ನು ಮುಗಿಯಲಿಲ್ಲ. ಆತನ ವೈರಿಗಳೆಲ್ಲ ಆತನಿಗೆ ಪಾದಪೀಠವಾಗಿ ಬೀಳುವ ಮಟ್ಟಿಗೂ, ಅದು ನಡೆಯುವದು. ಆತನ ಬೆನ್ನು ಹತ್ತಿದವರೆಲ್ಲರು ಆತನಂತೆ ಸರ್ಪದ ತಲೆ ಬಡಿಯ ಬೇಕು; ಬಡಿಯುವಾಗ, ಸರ್ಪ ತಿರಿಗಿ ಅವರ ಹಿಮ್ಮಡ ಕಚ್ಚುವದನ್ನು ಕಷ್ಟ ಮರಣ ಪಟ್ಟು ಅನುಭವಿಸುವರು. ಈ ದೊಡ್ಡ ವಾಗ್ದತ್ತವನ್ನು ಆದಿ ಮನುಷ್ಯರು ತಮ್ಮ ಬುದ್ಧಿ ಇದ್ದಷ್ಟು ಗ್ರಹಿಸಿ ತಮಗೆ ಆಧಾರ ಮಾಡಿ ಕೊಂಡರು (೪, ೧.) — ಒಬ್ಬ ತಂದೆ ತನ್ನ ಪ್ರಿಯ ಮಗನನ್ನು ಕೊಂದವನಿಗೆ ಶಿಕ್ಷೆ ಮಾಡುವಾಗ್ಯೆ, ಮಗನನ್ನು ಕಡಿದ ಕತ್ತಿಯನ್ನು ಸುಧಾ ಅವನು ತಕ್ಕೊಂಡು ಮುರಿಯುವಂತೆ, ದೇವರು ಪಿಶಾಚಿಯ ಕೈಯಲ್ಲಿ ಕತ್ತಿಯಂತಿದ್ದ ಸರ್ಪಕ್ಕೆ ಸುಧಾ ಶಾಪ ಕೊಟ್ಟನು. ಕಣ್ಣಿಗೆ ಕಾಣುವ ಈ ಶಪಿತ ಸರ್ಪವನ್ನು ನಾವು ನೋಡಿ ಅದೃಶ್ಯವಾದ ಪಿಶಾಚಿಗೆ ಆದ ಶಾಪವನ್ನೂ ಅವನಿಗೆ ಅನುಮಾನವಿಲ್ಲದೆ ಆಗುವ ಅಪಜಯವನ್ನೂ ನೆನಪು ಮಾಡಿ ಧೈರ್ಯ ತಂದು ಕೊಳ್ಳುವದು.

bbb) ಸ್ತ್ರೀಗೆ ತೀರ್ಪನ್ನು ತಿಳಿಸಿದ್ದು. ೧೬.

ಹೆಂಡತಿಯ ಸ್ಥಿತಿಗೆ ಸಂಬಂಧವಾದ ಈ ಶಿಕ್ಷೆಗಲ್ಲದೆ, ಗಂಡನಿಗಾದ ಶಿಕ್ಷೆಗೂ ಸ್ತ್ರೀ ಗುರಿಯಾದಳು. ಇಲ್ಲಿ ಹೇಳಿದ ಶಿಕ್ಷೆ ಮೂರು ವಿಧವಾಗೆದೆ. ಹ್ಯಾಗಂದರೆ: ೧) ನಿನ್ನ ಬೇನೆಯನ್ನು — ಹೆರುವಿ) ಮಕ್ಕಳನ್ನು ಹಡಿಯುವದು ಸಾಕುವದು ಇದು ಹೆಂಡರಿಗೆ ಒಂದು ದೊಡ್ಡ ಕುತ್ತ. ಇದರಿಂದ ಅನೇಕರು ಬಲಗುಂದಿ ರೋಗಕ್ಕೆ ಮರಣಕ್ಕೆ ಬೇಗ ಒಳಗಾಗುವರು. ಸ್ತ್ರೀಯು ಫಲವನ್ನು ತಿಂದು ಇಚ್ಛಾತೃಪ್ತಿ ಮಾಡ ಬೇಕೆಂದು ಭೋಗಕ್ಕೆ ಬಿದ್ದಳಲ್ಲ. ಆ ಕುತ್ತವೆ ಈ ಸುಖಭೋಗ ಎಂಬ ಬೇನೆಯನ್ನು ಹಿಮ್ಮೆಟ್ಟಿಸುವ ಕಹಿಯಾದ ಔಷಧ. ೨) ಮತ್ತು — ಇರುವದು) ಹೆಂಡತಿ ಗಂಡನ ಮೇಲೆ ಮಾಡುವ ಮೋಹದಿಂದ ಪೂರ್ಣವಾಗಿ ಅವನ ವಶದಲ್ಲಿ ಬೀಳುವಳು. ಇಚ್ಛಾವಿಹಾರ ಆಕೆಗೆ ಏನು ಉಳಿಯಲಿಲ್ಲ. ಮತ್ತು ಅವನ ಸಂಗಡ ಇರುವದು

ಕಷ್ಟವೆಂದು ಶೆರೆ ಎಂದು ತೋರಿದರೂ, ಬಿಡುಗಡೆ ಇಲ್ಲ. ದೇವರ ಹಾಗೆ ಆಗ ಬೇಕೆಂದು ಆಕೆ ಅಂದು ತೋರಿಸಿದ ಅಹಂಕಾರ ಇಳಿಸಲಿಕ್ಕೆ ಇದೇ ತಕ್ಕ ಶಿಕ್ಷೆ. ೩) ಆಳುವನು) ಅವನು ಧಣಿ, ಆಕೆ ತೊತ್ತು, ಅವನು ಹೇಳುವವನು, ಆಕೆ ಹೇಳಿಸಿ ಕೊಳ್ಳುವಾಕೆ, ಅವನು ನಡಿಸುವವನು, ಆಕೆ ನಡಿಯುವಾಕೆ. ಆಕೆಯ ಹಿರಿಯತನ ಒಪ್ಪುವದಿಲ್ಲ. ಸ್ತ್ರೀಯು ಸರ್ಪದ ಮಾತು ಕೇಳಿ, ಬೇಗ ದೇವರ ವಾಕ್ಯದ ಮೇಲೆ ಸಂಶಯ ಮಾಡಿ ಯಾರನ್ನು ನಂಬಲಿ! ದೇವರನ್ನೋ? ಸರ್ಪವನ್ನೋ? ಎಂದು ಹೊಯಿದಾಡುವವಳಾದಳಲ್ಲ! ಅದಕ್ಕೆ ಮತ್ತು ಮೋಸಗೊಂಡು ಕೆಡಕಿಗೆ ಒಳಗಾಗದಂತೆ, ಆಕೆಗೆ ಒಬ್ಬ ಧಣಿ ಬೇಕಾಯಿತು. ಹೀಗೆ ಈ ಶಿಕ್ಷೆಗಳು ಆಕೆಯಲ್ಲಿ ವಿಶೇಷವಾಗಿ ತೋರಿದ ದುರ್ಗುಣ ಭಾವಗಳನ್ನು ಕಳೆಯುವ ಸಾಹಿತ್ಯಗಳು ಆಗಿವೆ.—ದೇವರು ಈ ಮೂರು ತರದ ಶಿಕ್ಷೆಯನ್ನು ನೇಮಿಸಿದ್ದಲ್ಲಿ, ಹೆಂಡತಿ ಇರ ತಕ್ಕ ಸ್ಥಿತಿಯನ್ನು ಸಹಾ ಸೂಚಿಸಿದ್ದಾನೆ. ಹ್ಯಾಗಂದರೆ: ೧) ಆಕೆ ಮಕ್ಕಳನ್ನು ಹಡೆದು ಆರೈಕೆ ಮಾಡುವ ತಾಯಿ. ೨) ಆಕೆ ಪತಿಯನ್ನ ಅಗಲದೆ ಕೆಟ್ಟ ಕೆಲಸಕ್ಕೆ ಹೋಗದೆ (ಲೇವಿಕ. ೧೮, ೨೩. ರೋಮ. ೧, ೨೪. ೨೬.) ಪತಿವ್ರತ ಧರ್ಮದಿಂದ ನಡೆಯ ತಕ್ಕ ಸತಿ. ಆಕೆ ಚಂಡಿಯಾಗಿರದೆ, ಭರ್ತೃವಿನ ಆಜ್ಞೆಯೊಳಗಿದ್ದು, ಸೇವಾವೃತ್ತಿಯಿಂದ ನಡೆದು ಮನೇ ಕೆಲಸ ಸಾಗಿಸಿ ಕೊಂಡು ಹೋಗುವವಳಾಗ ತಕ್ಕದ್ದಾಗಿತ್ತು. ಪಾಪದಲ್ಲಿ ಬೀಳುವ ಮುಂಚೆ, ಹವ್ವಳು ಆದಮನಿಗೆ ಒಳಗಾಗಿದ್ದಳು. ಆದರೆ ಅಂದು ಅವರಿಬ್ಬರ ಮನಸ್ಸು ದೇವರ ಕಡೆಗೆ ತಿರಿಗಿದ್ದು ಒಂದಾಗಿತ್ತು. ಅಂದು ಭಾರ್ಯಳು ಸತ್ಯವಾಗಿ ವಾಮಾಂಗಿಯೂ ಅರ್ಧಾಂಗಿಯೂ ಎನಿಸಿದಳು. ಯಾಕಂದರೆ ತಾನು ಬೇರೆ ಅಲ್ಲ, ತನ್ನ ಗಂಡನು ಬೇರೆ ಅಲ್ಲ ಎಂಬ ಭಾವವಿತ್ತು. ಅವರು ಸ್ವಭಾವಿಕವಾಗಿ ಒಂದೇ ಶರೀರವಾಗಿದ್ದರು. ಆದರೆ ಪಾಪಿಷ್ಟರಾದ ಮೇಲೆ, ಪತಿ ಮಿತಿಯಿಂದಲ್ಲ, ಕಠಿಣವಾಗಿ ಆಳುವವನು ಆದನು. ಸತಿ ಇಚ್ಛೆಗೆ ಬಂದಂತೆ, ನಡೆಯ ಪ್ರಾರಂಭಿಸಿ, ಹಟಮಾರಿ ಆದಳು. ಹೀಗಾಗಿ ಒಬ್ಬರನ್ನೊಬ್ಬರು ದಣಿಸುವವರಾದರು. ಈ ಪರಿ ಸತಿಗೂ ಪತಿಗೂ ಭೇದವಾದ ಮೇಲೆ, ದೇವರು ಶಿಕ್ಷೆನೇಮಕಗಳಿಂದ ಅವರನ್ನು ತಿರಿಗಿ ಕೂಡಿಸ ಬೇಕು. ಅನ್ಯ ಜನರು ಈ ಶಿಕ್ಷೆಯನ್ನು ಹೆಚ್ಚಿಸಿ, ತಮ್ಮ ಹೆಂಡರನ್ನು ದಾಸರಂತೆ ಮಾಡಿ ಕೊಂಡರು. ಪಾಪದಿಂದ ಹೀಗೆ ಕೆಟ್ಟದ್ದು ಕ್ರಿಸ್ತನಿಂದ ತಿರಿಗಿ ನೆಟ್ಟಗೆ ಆಗುತ್ತದೆ. ಹ್ಯಾಗಂದರೆ: ಆತನನ್ನು ನಂಬಿದ ಗಂಡ ಹೆಂಡರು ತಿರಿಗಿ ಪ್ರೀತಿಯಿಂದ ಒಬ್ಬರನ್ನೊಬ್ಬರು ಸಂಬಾಳಿಸಿ ಕೊಂಡು ಹೋಗುವವರಾಗುತ್ತಾರೆ. ಕ್ರಿಸ್ತನಲ್ಲಿ ಎಲ್ಲರು, ಪುರುಷರಾಗಲಿ, ಸ್ತ್ರೀಯರಾಗಲಿ, ಒಂದಾಗುತ್ತಾರೆ (ಗಲ. ೩, ೨೮). ಆದರೂ ವಿಶ್ವಾಸಿಗಳಲ್ಲಾದರೂ ಇನ್ನೂ ಪಾಪ ಉಳಿದಿರುವದರಿಂದ, ಹೆಂಡರು ಇನ್ನು ಈ ಶಿಕ್ಷೆಯ ಸ್ಥಿತಿಯಲ್ಲಿ ತಕ್ಕಷ್ಟು ಇರಬೇಕಾಗುವದು (ಎಫೆ. ೫, ೨೨).

ccc) ದೇವರು ಆದಮನಿಗೆ ತೀರ್ಪನ್ನು ತಿಳಿಸಿದ್ದು. ೧೭—೧೯.

೧೭ ವ. ಅದರ ಫಲ = ಭೂಮಿಯ ಫಲ.— ೧೯ ವ. ಮುಖದ ಬೆವರಿನಿಂದ = ಹಣೆಯ ಬೆವರನ್ನು ಬಿಡಿಸಿ.) + ನೀನು ಸ್ತ್ರೀ ಮಾತಿಗೆ ಕಿವಿ ಕೊಡದೆ, ಆಕೆಗೆ ಇನ್ನು ಬುದ್ಧಿ ಹೇಳಿ, ನನ್ನಿಂದ ನೀನು ಕೇಳಿದ ಆಜ್ಞೆಯನ್ನು ಕೈ ಕೊಂಡು ಕಾಯ ತಕ್ಕದ್ದಾಗಿತ್ತು ಎಂಬದಾಗಿ ದೇವರು ಆದಮನಿಗೆ ಅವನ ಅಪರಾಧ ಸಂಕ್ಷೇಪವಾಗಿ ಇನ್ನೊಂದು ಸರ್ತಿ ಹೇಳಿ ತೋರಿಸಿದ ಬಳಿಕ, ಅವನ ಶಿಕ್ಷೆಯನ್ನು ಅವನಿಗೆ ತಿಳಿಸುತ್ತಾನೆ. ಅದರಲ್ಲಿ ಎರಡು ಪ್ರಕರಣಗಳು ಅವೆ: ೧) ಫಲಭರಿತವಾದ ಭೂಮಿ ಶಾಪಕ್ಕೆ ಒಳಗಾಗಿ, ತನ್ನ ಫಲ ಮನುಷ್ಯನಿಗೆ ನೆಟ್ಟಗೆ ಕೊಡದೆ ಇರುವದು. ಕೆಲಸಕ್ಕೆ ಬಾರದ ಕಳೆ ಮುಳ್ಳು ಮುಂತಾದದ್ದು ಅದರಿಂದ ಪ್ರಾಪ್ತಿ ಆಗುವದು; ಮನುಷ್ಯರು ಅದರಲ್ಲಿ ಬಹಳ ಬದುಕು ಮಾಡಿ ದಣಿದು ಕೊಳ್ಳ ಬೇಕು; ಭೂಮಿಯ ಸಂಗಡ ಹೋರಾಡ ಬೇಕು. ಹೊಲ ಬೆಳೆಯ ಬೇಕಾದರೆ, ಶ್ಯಾವ ಆಗುವದೂ, ಬಿಸಲು ಕಾಯುವದೂ, ಎರಡು ಬೇಕು. ಆದರೆ ಅನೇಕಾವರ್ತಿ ಹೀಗಾಗದೆ, ಒಳ್ಳೇ ತತಿಗೆ ಮಳೆ ಹೋಗ ಬೇಕು; ತತಿ ತಪ್ಪಿದ

ಮೇಲೆ, ಬರ ಬೇಕು. ಒಟ್ಟಿಗೆ ಭೂಮಿಯೂ ಜೀವರಾಶಿಗಳೂ ಶಾಪದ ಸಲುವಾಗಿ ಮನುಷ್ಯರ ವಶದಿಂದ ಕೊಸರಿ ಕೊಂಡು, ಅವರಿಗೆ ವಿರೋಧ ಮಾಡುವಂಥಾವಾದವು. ಅವರು ಶ್ರಮೆ ಪಟ್ಟು ಅವನ್ನ ಸಾಧು ಮಾಡಿದ್ದಲ್ಲದೆ, ಅವು ಉಪಯೋಗಕ್ಕೆ ಬರುವದೇ ಇಲ್ಲ. ಕೃಷ್ಯ ಕರ್ಮ ಹೀಗಾದ ತರುವಾಯ, ಅದನ್ನು ಹೊಂದಿ ಕೊಂಡಿರುವ ಉಳಿದ ಉದ್ಯೋಗಗಳಿಗೆ ನಾನಾ ವಿಘ್ನಗಳು ಬರುವದು ಏನು ಅಗಾಧ? ತನಗೆ ಬೇಕಾದ ಅನ್ನ ವಸ್ತ್ರ ಸಂಪಾದಿಸಿ ಕೊಳ್ಳಲಿಕ್ಕೆ ಬಹಳ ದುಡಿಯ ಬೇಕು. ಹಣೆಯ ಬರಹವಲ್ಲ, ಪಾಪದ ಶಾಪವೇ ಎಲ್ಲಾ ಕಷ್ಟ ಕೇಡಿಗೆ ಸಾಧಾರಣ ಮೂಲ. ಧಣಿ ಭ್ರಷ್ಟನಾದರೆ, ಅವನ ಸಂಪತ್ತು ನಾಶವಾಗಿ, ಮನೆ ಹಾಳು ಬೀಳುವಂತೆ, ಪ್ರಕೃತಿಗೆ ಧಣಿಯಾದ ಮನುಷ್ಯನು ಪಾಪದಿಂದ ಕೆಟ್ಟ ಮೇಲೆ, ಅದೂ ಕೆಡುವದೇ ಸರಿ. ಅದು ವ್ಯರ್ಥತ್ವಕ್ಕೆ ಒಳಗಾಯಿತು. ಆದರೆ ಮನುಷ್ಯಜಾತಿ ತಿರಿಗಿ ನೆಟ್ಟಗಾಗಿ ದೇವರನ್ನ ಹೋಲುವದಾದ ಮೇಲೆ, ಒಂದು ಹೊಸ ಭೂಪರಲೋಕವು ಆಗುವದು.—ಈ ಶಿಕ್ಷೆಯಿಂದ ಎರಡು ಹಿತವಾಗುತ್ತವೆ: ಮನುಷ್ಯರಲ್ಲಿ ಪಾಪದ ಮದ ಇಳಿದು ಅದರ ಬಲಿ ಮುರಿಯುವದೊಂದು ಹಿತ; ಪಾಪ ಬಹಳ ಹಬ್ಬಿ ಎಲ್ಲಾ ನಾಶ ಮಾಡದ ಹಾಗೆ, ಅದಕ್ಕೆ ಶಿಕ್ಷೆಯಿಂದ ತಡೆ ಆಗುವದೊಂದು ಹಿತ. ಈ ಶಿಕ್ಷೆಯೆ ಪಾಪಿಷ್ಟರ ಬಾಯಿಯಲ್ಲಿ ದೇವರು ಹಾಕಿದ ಕಡಿವಾಣ: ಅದರಿಂದ ಅವರನ್ನು ಸಾಧು ಮಾಡುವನು. ಪಾಪದ ಶಿಕ್ಷೆಯೇ ಪಾಪಾಗ್ನಿಯನ್ನು ಆರಿಸಲಿಕ್ಕೆ ದೇವರು ಹಾಕಿದ ನೀರು. ಅದು ಸಾಕನ್ನುತ್ತಿದ್ದಿಲ್ಲ; ಎಲ್ಲಾ ಸುಟ್ಟು ಬೂದಿಯಾಗುವ ತನಕ, ಸುಡುತ್ತಿತ್ತು.—ಪಾಪದ ಶಿಕ್ಷೆಯೇ ಭಕ್ತರನ್ನು ಪಾಪಕ್ಕೆ ದೂರ ಮಾಡಿ ಬುದ್ಧಿಗಲಿಸುವ ಭಕ್ತಿಸಾಧಕ (೨ಪೇತ್ರ. ೪, ೧. ೨). ಕೇಡಿನಿಂದ ಒಳ್ಳೇದನ್ನು ಬರಿಸುವ ದೇವರ ದಯಜ್ಞಾನಗಳನ್ನು ಇದರಲ್ಲಿ ನೋಡಿ ತಿಳುಕೋ! ೨) ದೇಹದ ಮರಣ; ಈ ಜೀವದಲ್ಲಿ ಮನುಷ್ಯರಿಗೆ ಆಗುವ ಎಲ್ಲಾ ಸಂಕಟ ರೋಗ ಬೇನೆಗಳು ಹುಳಗಳಂತೆ ದೇಹವನ್ನು ಮೇದು ನಿಸ್ಸಾರ ಮಾಡಿ ಮರಣಕ್ಕೆ ಒಪ್ಪಿಸುವವು. ದೇಹ ಸತ್ತು ಬೀಳುತ್ತಲೇ, ಅವುಗಳ ಮೇಳ ಮುರಿದ ಹಾಗಾಯಿತು. ಹೀಗೆ ಮರಣಾ ಅವುಗಳ ಫಲ, ಮತ್ತು ಅವುಗಳ ಅಂತ್ಯ. ಭಕ್ತರು ಈ ಕೀಳು ಲೋಕವನ್ನು ಬಿಟ್ಟು, ಮರಣವೆಂಬ ಬಾಗಲಿಂದ ನಿತ್ಯಜೀವ ಆಗುವ ಪರಲೋಕದಲ್ಲಿ ಶೇರುವರು. ಅವರಿಗೆ ಮರಣ ಎಲ್ಲಾ ಕೇಡಿನಿಂದ ವಿಮೋಚಿಸುವ ಉಪಕಾರವೇ. ಆದರೆ ಪಾಪಿಷ್ಟರು, ತಾತ್ಕಾಲಿಕ ಸಂಕಟಗಳು ಮಾತ್ರ ಆಗುತ್ತಿದ್ದ ಈ ಲೋಕವನ್ನು ಬಿಟ್ಟು, ಮರಣಾ ಎಂಬ ಬಾಗಲಿಂದ ಹಾದು, ನಿತ್ಯ ಸಂಕಟ ನಿತ್ಯ ಮರಣ ಆಗುವ ನರಕಲೋಕದಲ್ಲಿ ಶೇರುವರು. ಅವರಿಗೆ ಮರಣವು ಸಂಕಟವನ್ನು ಅನಂತ ಪಾಲಷ್ಟು ಹೆಚ್ಚಿಸುವ ಕೇಡೇ. ದೇವರು ಕರುಣಿಸುವ ತಂದೆಯೇ, ನೀತಿಯುಳ್ಳ ನ್ಯಾಯಾಧೀಶನೇ ಸರಿ!

cc) ದೇವರು ಮನುಷ್ಯರನ್ನು ಪರದೇಶದಿಂದ ಹೊರಗೆ ಹಾಕಿದ್ದು. ೨೦—೨೪.

೨೦. ೨೧ ವ. ತೀರ್ಪು ತಿಳಿಸಿದ್ದು ಆಯಿತು. ಸೂರ್ಯನು ಮುಣಿಗಿ ಕಾರ್ಗತ್ತಲೆ ಕವಿದು ದಿಕ್ಕು ತಪ್ಪಿ ಮಾರ್ಗ ಕಾಣದ ಹಾಗಾಯಿತು. ಆದರೆ ದೇವರು ಸರ್ಪವನ್ನು ಶಪಿಸಿದ ಮಾತಿನಲ್ಲಿ ನಿಮ್ಮಿಂದ ಹುಟ್ಟುವ ವಂಶವು ಆ ಸರ್ಪವನ್ನೂ ಅದರಿಂದ ಬಂದ ಕೇಡನ್ನೂ ಪರಿಹರಿಸುವದು ಎಂಬೀ ಆಧಾರದ ವಾಕ್ಯ ಇತ್ತು. ಆದಮನು ಅದನ್ನು ನೆನಪಿಗೆ ತಂದನು. ಅದು ರಾತ್ರಿಯಲ್ಲಿ ದಿಕ್ಕು ತೋರಿಸಿ ಬೆಳಕನ್ನು ಕೊಡುವ ಧ್ರುವನಕ್ಷತ್ರದ ಹಾಗೆ ಇತ್ತು. ದೇವರು ಅವರನ್ನು ಬಹಿಷ್ಕಾರ ಮಾಡುವದೊಂದು ಶಿಕ್ಷೆ ಇನ್ನು ಉಳಿಯಿತು. ಅವರನ್ನು ಅನಾಥರಾಗಿ ಕಳುಹಿಸಿ ಬಿಡಲೊಲ್ಲದಕ್ಕೆ, ದಾರಿಗೆ ಆ ವಾಗ್ದತ್ತ ಎಂಬ ಬುತ್ತಿಯನ್ನು ಮತ್ತು ತಾಳುವ ವಸ್ತ್ರವನ್ನು ಕೊಟ್ಟನು. ಆ ಬುತ್ತಿಯನ್ನು ಅವರು ತಿಂದು, ತಮ್ಮ ಆತ್ಮದ ಜೀವವನ್ನು ಪೋಷಿಸ ಬೇಕು. ಆ ವಸ್ತ್ರವನ್ನು ಧರಿಸಿ ಕೊಂಡು, ಅವರು ತಮ್ಮ ನಾಚಿಕೆ ಉಳಿಸಿ ಕೊಳ್ಳ ಬೇಕು. ಈ ಪ್ರಕಾರ ದೇವರು ಹೊರಗಾದವರಿಗೆ ಉಳಿಯುವ ಹಂಚಿಕೆ ತೋರಿಸಿ ಕೊಟ್ಟನು.—ಹವ್ವಳು) ಜೀವ.

ಜೀವವ್ವ. ಆಕೆಯಿಂದ ಸರ್ಪದ ತಲೆಯನ್ನು ಒಡಿದು ಮರಣವನ್ನು ಪರಿಹರಿಸಿ ರಕ್ಷಿಸುವವರು ಹುಟ್ಟಿ ಬರ ಬೇಕಾಯಿತು. ಆ ವಾಗ್ದತ್ತದ ನೆನಪು ಹಾರದ ಹಾಗೆ, ಈ ಹೆಸರನ್ನು ಗುರ್ತಿಗಾಗಿ ಕೊಟ್ಟನು. ಅದು ಅವನಲ್ಲಿದ್ದ ವಿಶ್ವಾಸಕ್ಕೆ ಸಾಕ್ಷಿ.—ತೊಗಲಿನ ಅಂಗಿಗಳನ್ನು) ದೇವರು ಪ್ರಾಣಿಗಳನ್ನು ಕೊಯಿದು, ಬಲಿ ಅರ್ಪಿಸುವದನ್ನು ಮನುಷ್ಯರಿಗೆ ಕಲಿಸಿ ಕೊಟ್ಟನು. ಉಳಿದ ಚರ್ಮ ಅವರಿಗೆ ವಸ್ತ್ರ ಮಾಡಿ ಕೊಟ್ಟನು. ಇಲ್ಲಿ ಬಲಿ ಅರ್ಪಿಸುವದು ಆರಂಭವಾಯಿತು. ೨೧ನೆ ವಚನದಲ್ಲಿ ಬಲಿಗಳ ಆರಂಭ. ಈ ಹೊದಿಕೆ ಅವರ ಸ್ಥಿತಿಗತಿಯನ್ನು ಅವರಿಗೆ ತೋರಿಸುವ ಕನ್ನಡಿ. ಇದು ಅನಕ ಅವರಿಗೆ ನೇಮದ ಹಾಗಿತ್ತು. ಹ್ಯಾಗಂದರೆ ಅದು ತಾವು ಪಾಪದಲ್ಲಿ ಬಿದ್ದದ್ದನ್ನು, ಮರಣಕ್ಕೆ ಒಳಗಾದದ್ದನ್ನು ಯಾವಾಗಲು ನೆನಪಿಗೆ ತಂದು ಕೊಡುತ್ತಿತ್ತು.

೨೨ ವ. ಒಬ್ಬನ ಹಾಗೆ ಆಗಿದ್ದಾನೆ) ನೋಡು ೪. ೫ ವ. ದೇವರು ಹಾಸ್ಯ ಮಾಡುವದಿಲ್ಲ. ಆತನು ಮೇಲು ಕೀಳು ಅರಿತಿರುವಾತ, ಅವರು ಮೇಲು ಕೀಳು ಅರಿತವರಾದರು. ಆತನು ಅರಿತಿರುವ ರೀತಿ ಬೇರೆ. ಅವರು ಅರಿತಿರುವ ರೀತಿ ಬೇರೆ.—ಅರಿತಿರುವದನ್ನು ಮಾತ್ರ ನೋಡಿದರೆ, ದೇವರ ಹಾಗೆ ಆದರು ಅನ್ನ ಬೇಕು. ಅರಿತಿರುವ ರೀತಿಯನ್ನು ನೋಡಿದರೆ, ಪಿಶಾಚಿಯ ಹಾಗೆ ಆದರು ಸರಿ.—ಜೀವವೃಕ್ಷ) ಇದರ ಫಲ ಅಮರತ್ವದ ಆಹಾರ. ಮನುಷ್ಯರು ದೇವರ ಆಜ್ಞೆಯನ್ನು ಕೈಕೊಂಡಿದರೆ, ಅವರು ಈ ಅಮರತ್ವದ ಫಲ ತಿಂದು, ತಮ್ಮ ದೇಹ ಪ್ರಾಣವನ್ನು ಪೋಷಿಸಿ ಕೊಂಡು, ತಮ್ಮಲ್ಲಿ ಸ್ಥೂಲವಾದದ್ದನ್ನು ಸೂಕ್ಷ್ಮ ಮಾಡಿ, ಮೆಲ್ಲಮೆಲ್ಲಗೆ ನಿತ್ಯ ಬದುಕುವವರಾಗುತ್ತಿದ್ದರು. ಆದ ಕಾರಣ ಪಾಪದಲ್ಲಿ ಬಿದ್ದು, ನಾನಾ ಕಷ್ಟಕ್ಕೆ ಒಳಗಾದ ಮೇಲೆ, ಮನುಷ್ಯರು ಆ ಫಲ ತಿಂದಿದ್ದರೆ, ಅವರಿಗೆ ದೊಡ್ಡ ಕೆಡಕು ಆಗುತ್ತಿತ್ತು. ಹ್ಯಾಗಂದರೆ: ಅವರು ನಿತ್ಯ ಬದುಕಿ ನಿತ್ಯ ಪಾಪ ಮಾಡುವವರೂ, ನಿತ್ಯ ಕಷ್ಟ ಪಡುವವರೂ, ನಿತ್ಯ ಹೆಚ್ಚು ಹೆಚ್ಚಾಗಿ ಕೆಡುವವರೂ ಆಗುತ್ತಿದ್ದರು. ಹೀಗಾಗಿ ಈ ಅಮರತ್ವದ ಫಲವು ಪಾಪವನ್ನು ಕಷ್ಟವನ್ನು ಅನಂತ ಪಾಲಷ್ಟು ಅಭಿವೃದ್ಧಿ ಮಾಡುತ್ತಿತ್ತು. ದೇವರು ಮನುಷ್ಯರನ್ನು ತೋಟದಿಂದ ಹೊರಗೆ ಹಾಕಿದ ಶಿಕ್ಷೆ ಅವರಿಗೆ ದೊಡ್ಡ ಉಪಕಾರವಾಯಿತು. ದೇವರ ಜ್ಞಾನ ಕರುಣಗಳು ಎಷ್ಟೋ!—

೨೩ ವ. ನಿತ್ಯ ಬದಕ ಬಾರದು ಅಂದನು.

೨೪ ವ. ಮನುಷ್ಯರು ತೋಟವನ್ನು ಕಾಯುವವರಾಗ ಬೇಕಾಯಿತು. ನೆಟ್ಟಗೆ ಕಾಯದೆ, ಸರ್ಪವನ್ನು ಬರಗೊಟ್ಟು, ತಾವೆ ಕೆಟ್ಟ ಮೇಲೆ, ಅದನ್ನೂ ಕೆಡಿಸುವವರಾಗುತ್ತಿದ್ದರು. ದೇವರು ಅವರಿಗೆ ಒಪ್ಪಿಸಿ ಬಿಟ್ಟಿದ್ದನ್ನು ತಿರಿಗಿ ಅವರ ಕೈಯಿಂದ ಕಸಕೊಳ್ಳ ಅವಶ್ಯವಾಯಿತು. ಆದರೆ ಅಂಥಾ ರಮ್ಯವಾಸಸ್ಥಲವನ್ನು ಬಿಟ್ಟು ಹೋಗಲಿಕ್ಕೆ ಅವರಿಗೆ ಮನಸಿಲ್ಲದ ಕಾರಣ, ದೇವರು ಅವರನ್ನು ಬಲತ್ಕಾರದಿಂದ ಹೊರಡಿಸಿದನು. ಹೀಗೆ ತಾವು ಪಾಪದಿಂದ ಕಳಕೊಂಡ ಮುಂಚಿನ ಆಶ್ರಯ ಎಷ್ಟೋ ಒಳ್ಳೆದಾಗಿತ್ತೆಂದು ನೆನಿಸಿ ಕೊಂಡು ಚಿಂತೆ ಮಾಡಿ, ತಿರಿಗಿ ಅದನ್ನು ತಮಗೆ ತಾವೆ ತಕ್ಕೊಳ್ಳ ಬೇಕೆಂದು, ತೋಟದಲ್ಲಿ ಮತ್ತೂ ಬರಲಿಕ್ಕೆ ಪ್ರಯತ್ನ ಮಾಡುತ್ತಿದ್ದರು. ಅದನ್ನು ಕಂಡು ದೇವರು ಅವರನ್ನು ಬರಗೊಡಿಸದ ಖೆರುಬಿಗಳನ್ನು ಇರಿಸಿದನು. ಖೆರುಬಿಗಳ ವಿಷಯ ದೇವರ ವಾಕ್ಯದಲ್ಲಿ ಹೇಳಿರುವದೇನಂದರೆ: ಸಾಕ್ಷಿಪೆಟ್ಟಿಗೆಯ ಮೇಲೆ ಭಂಗಾರದ ಎರಡು ಖೆರುಬಿಗಳ ರೂಪಗಳು ಇದ್ದವು. ಅವುಗಳ ರೆಕ್ಕೆಗಳ ಮಧ್ಯದಲ್ಲಿ ದೇವರ ಮಹಿಮೆ ವಾಸ ಮಾಡಿತು (ಹೊರ. ೩೭, ೭—೯). ದೇವರು ಖೆರುಬಿಗಳ ಮೇಲೆ ಕೂತಿದ್ದಾನೆ. ಅವರು ಆತನು ಕೂತು ಕೊಳ್ಳುವ ರಥ (ಕೀರ್ತ. ೧೮, ೧೦. ೯೯, ೧). ಅವರ ರೂಪ ಹ್ಯಾಗಂದರೆ: ಒಬ್ಬನಿಗೆ ಒಂದು ಮುಖ ಮಾತ್ರ ಉಂಟು (ಹೊರ. ೨೫, ೧೮—೨೦). ಒಬ್ಬನಿಗೆ ಎರಡು ಮುಖ ಉಂಟು (ಎಜೇಕಿ. ೪೧, ೧೮—೨೦). ಎಜೇಕಿ. ೧. ೧೦. ಸಂಧಿಗಳಲ್ಲಿ ಅವರ ಸಂಪೂರ್ಣ ವರ್ಣನೆ ಅದೆ. ಒಬ್ಬೊಬ್ಬನ ತಲೆಗೆ ಮನುಷ್ಯನದೊಂದು, ಹದ್ದಿನದೊಂದು, ಎತ್ತಿನದೊಂದು, ಸಿಂಹದೊಂದು, ಹೀಗೆ ನಾಲ್ಕು ಮುಖಗಳು ಅವೆ. ಹಾಗಾದರೆ ಪ್ರಕಟ. ೪, ೭. ಹೇಳಿದ ನಾಲ್ಕು ಜೀವಿಗಳು ಕೂಡಿ ಒಬ್ಬನ ರೂಪವಾಗೆದೆ. ಮನುಷ್ಯನು ಪ್ರಾಣಿರಾಜ, ಹದ್ದು ಪಕ್ಷಿರಾಜ, ಎತ್ತು ಪಶುರಾಜ, ಸಿಂಹ ಮೃಗ

ರಾಜ. ಮನುಷ್ಯನು ಬುದ್ಧಿಯಲ್ಲಿ, ಹದ್ದು ವೇಗದಲ್ಲಿ, ಎತ್ತು ಸಾಮರ್ಥ್ಯದಲ್ಲಿ, ಸಿಂಹ ಧೈರ್ಯದಲ್ಲಿ ವಿಶೇಷ. ಆದ್ದರಿಂದ ಅವು ಈ ವಿಶ್ವದಲ್ಲಿ ವ್ಯಾಪಿಸಿರುವ ಎಲ್ಲಾ ಸೃಷ್ಟಿಯ ಬಲ ಜೀವ ಸಂಗ್ರಹವನ್ನು ಸೂಚಿಸುವ ಸಾದೃಶ್ಯಗಳು. ಕಾರಣ ಖೆರುಬಿಗಳು ಎಲ್ಲಾ ಜೀವ ಬಲ ಸಂಗ್ರಹವಾಗಿ, ಸೃಷ್ಟಿಕರ್ತನಾದ ದೇವರ ಮಹಿಮೆ ಮಾರ್ಪೊಳೆಯುವ ಕನ್ನಡಿಗಳು, ದೇವರ ಬಲಿಷ್ಟರು, ಸಹಸಿಗಳು, ದೂತರಾಜರು (ಕೀರ್ತ. ೧೦೩, ೨೦. ೨೧. ೧೦೪, ೪).—ಅವರ ಕೈಯಲ್ಲಿ ಮಿಂಚುವ ಒಂದು ಕತ್ತಿ ಇದ್ದ ಹಾಗೆ ಕಂಡಿತು. ಇಂಥಾ ಕಾಯುವವರನ್ನು ನೋಡಿ, ಮನುಷ್ಯರು ಭಯಗೊಂಡು, ತೋಟದ ಸಮಿಾಪಕ್ಕೆ ಬಾರದ ಹಾಗಾಯಿತು.— ಸರ್ಪದ ಮಾತು ಕೇಳಿ, ಮನುಷ್ಯರಿಗೆ ಇಚ್ಛಾಪೂರ್ತಿ ಹ್ಯಾಗೆ ಆಯಿತು? ಸರ್ಪ ಹೇಳಿದ್ದರ ವಿಪರ್ಯಾಸವಾಯಿತು.— ಆದಿ ಮನುಷ್ಯರು ಹೊರಗಾದ ಬಳಿಕ, ಆ ತೋಟವು ಪೃಥ್ವಿಯ ಮೇಲೆ ಇನ್ನು ಎಷ್ಟು ದಿವಸ ಇತ್ತೋ ತಿಳಿಯುವದಿಲ್ಲ. ಹ್ಯಾಗಾದರೂ ಕಾಲಾಂತರದಲ್ಲಿ ಅದು ಭೂಮಿಯಿಂದ ಕಾಣದೆ ಹೋಗಿದ್ದೀತು. ಅದಕ್ಕೆ ಮೊದಲು ಎಲ್ಲಾ ನೆಟ್ಟಗಿತ್ತು, ಆದರೆ ಕೆಡುತ್ತಾ ಬಂದು ಬಂದು ಎಲ್ಲಾ ಹಾಳಾಯಿತೆಂಬ ಭಾವ ಪೃಥ್ವೀ ಮೇಲಣ ಎಲ್ಲಾ ಮನುಷ್ಯರೊಳಗೆ ಉಂಟು. ಆ ಪರದೇಶದ ನೆನಪು ಸ್ವಲ್ಪ ಉಳೀತು. ಅದು ಈಗ ಪರಲೋಕದಲ್ಲಿ ಅದೆ. ಕ್ರಿಸ್ತನು ಅದಕ್ಕೆ ಹೋಗುವ ಹಾದಿಯನ್ನು ನಮಗೆ ತಿರಿಗಿ ತೋರಿಸಿ ಬಾಗಲನ್ನು ತೆರೆದಿದ್ದಾನೆ (ಪ್ರಕಟ. ೨೨, ೨). ದೇವರ ವಾಕ್ಯದ ಮೊದಲಿನ ಈ ಮೂರು ಸಂಧಿಗಳಿಗೂ ಅದರ ಕಡೆ ಮೂರು ಸಂಧಿಗಳಿಗೂ ಸರಿ ನೋಡಿದರೆ, ದೇವರ ಪ್ರೀತಿಯ ನಿರ್ಣಯದ ಆರಂಭವೂ ಅಂತ್ಯವೂ ಸ್ಪಷ್ಟವಾಗಿ ತೋರುವದು. ಇಲ್ಲಿ ಮೊದಲನೇ ಆಕಾಶವೂ, ಪಾಪಪತನದಿಂದ ಕೆಟ್ಟ ಭೂಮಿಯೂ; ಅಲ್ಲಿ ಹೊಸ ಭೂ ಪರಲೋಕವೂ, ದೇವರು ಮನುಷ್ಯರೊಳಗೆ ವಾಸ ಮಾಡುವ ಗುಡಾರವೂ; ಇಲ್ಲಿ ಸರ್ಪದ ಜಯ ಸಂತೋಷವೂ, ಅಲ್ಲಿ ಸರ್ಪದ ಶಿಕ್ಷೆಯೂ ಪ್ರತಿಫಲವೂ; ಇಲ್ಲಿ ಕಳಕೊಂಡ ಪರದೇಶವೂ, ಅಲ್ಲಿ ತಿರಿಗಿ ಶಿಕ್ಕಿದ ಪರದೇಶವೂ; ಇಲ್ಲಿ ಆಶೆಯುಳ್ಳ ತನ್ನ ಹೆಂಡತಿಯ ಸಂಗಡದ ಮೊದಲನೆ ಆದಮನೂ, ಅಲ್ಲಿ ಪರಿಶುದ್ಧವಾದ ಭಾಗ್ಯವುಳ್ಳ ತನ್ನ ಸಭಾಕನ್ಯದ ಸಂಗಡ ಎರಡನೇ ಆದಮನು; ಇಲ್ಲಿ ಮರಣವೂ ಸಂಕಟವೂ, ಅಲ್ಲಿ ಪುನರುತ್ಥಾನವೂ ಜೀವವೂ ನಷ್ಟವಿಮೋಚನೆಯೂ; ಇಲ್ಲಿ ಯುಗಾದಿಯೂ, ಅಲ್ಲಿ ಯುಗಾಂತ್ಯವೂ.

C) ಪಾಪ ಬೆಳೆದದ್ದು. ೪, ೧.—೬, ೪.

a) ಮೊದಲಿನ ಭ್ರಾತೃಹತ್ಯ. ೪, ೧—೧೬.

aa) ಕಾಯಿನನೂ ಹಾಬೆಲನೂ ಹುಟ್ಟಿದ್ದು. ೧. ೨.

೧ ವ. ಕರ್ತನಾದ ಗಂಡಸನ್ನು ಪಡಕೊಂಡಿದ್ಧೇನೆ) ಹವ್ವಳು ದೇವರು (೩, ೧೫.) ಕೊಟ್ಟ ವಾಗ್ದತ್ತವನ್ನು ತನ್ನ ಮನಸಿನಲ್ಲಿ ಇಟ್ಟು ಕೊಂಡಿದ್ದಳು. ಆ ವಾಕ್ಯ ಅವರಿಗೆ ಈಸುಗಾಯಿಯ ಹಾಗೆ ಇದ್ದು, ಪಾಪದ ಸಮುದ್ರದಲ್ಲಿ ಮುಣುಗಗೊಡಲಿಲ್ಲ. ಕರ್ತನು ಹೇಳಿದ ಶಿಕ್ಷಾವಾಕ್ಯ (೨, ೧೭.) ಇಷ್ಟು ಬೇಗ ಒದಗಿ ಬಂದ ಮೇಲೆ ತಾನು ಕೊಟ್ಟ ರಕ್ಷಣಾವಚನ ತೀವ್ರದಿಂದ ಈಡೇರಿಸ್ಯಾನು ಎಂದು ಭರವಸ ಮಾಡಲಾಯಿತು. ಈ ಭರವಸ ಹಿಡಿದು ಹವ್ವಳು ತಾನು ಹಡೆದ ಗಂಡುಗೂಸನ್ನು ನೋಡಿ ಹಿಗ್ಗಿ, ಇವನೆ ಸರ್ಪದ ತಲೆಯನ್ನು ಬಡಿದು ನಮ್ಮನ್ನು ಉದ್ಧಾರ ಮಾಡುವ ಕರ್ತನು ಅಂದಳು. ೪೦೦೦ ವರುಷದ ಮೇಲೆ ಮರಿಯಳು ಕರ್ತನಾದ ಪುರುಷನನ್ನು ಪಡಕೊಂಡಳು. ಆ ವಾಗ್ದತ್ತ ಈಡೇರುವ ಸಮಯ ಇನ್ನು ಬಂದಿದ್ದಿಲ್ಲ. ಇಷ್ಟೇ ಕಾಲಕ್ಕೆ ರಕ್ಷಕನು ಬಂದಾನು ಎಂಬ ಲೆಖ್ಖದಲ್ಲಿ ತಪ್ಪಿದಳು. ಆದರೆ ನಮ್ಮಿಂದ ಉದ್ಭವಿಸಿ ಸರ್ಪದ ತಲೆಯನ್ನು ಬಡಿಯುವ ರಕ್ಷಕನು ಕರ್ತನೇ, ದೇವರೇ, ದಿವ್ಯಸ್ವಭಾವದಾತನೇ ಎಂದು ಆಕೆ ತಿಳಕೊಂಡದ್ದು.

ಶುದ್ಧ ಸತ್ಯ, ಅಗಾಧ ಗ್ಞಾನವೇ ಸರಿ.—ಕಾಯಿನ್ = ಈಟಿ, ಕೈದು, ಕಮ್ಮಾರ. ಅವನು ಕಚ್ಚಿದ ಸರ್ಪವನ್ನು ಬಡಿಯುವ ಭರ್ಚಿ ಎಂದು ಆಕೆ ಕೊಟ್ಟ ನಾಮ ಆಕೆಯ ಹಾರೈಕೆಯನ್ನು ಸೂಚಿಸುತ್ತದೆ.—ಹಿಬ್ರು ಭಾಷೆಯಲ್ಲಿ—ಕೈದು ಎಂಬವನನ್ನು ಹೆತ್ತು ನಾನು—ಗಂಡಸನ್ನು ಐದಿದ್ದೇನೆ ಎಂಬಂತೆ ಯಮಕವದೆ.—ಕರ್ತನಿಂದ ಎಂದು ಅನ್ವಯಿಸುವದು ಹೊಂದಿಕೆ ಆಗುವದಿಲ್ಲ.

೨ ವ. ಹಾಬೆಲನು = ಘಾಳಿ, ವಾಯು, ಮಾಯ. ಆ ವಾಗ್ದತ್ತ ಈಗ ಈಡೇರುವದಿಲ್ಲ. ತಮ್ಮ ಮಕ್ಕಳು ಇನ್ನು ಹಲವು ಕಾಲ ವ್ಯರ್ಥತ್ವಕ್ಕೆ, ಮರಣಕ್ಕೆ, ಒಳಗಾಗಿದ್ದು, ತಮ್ಮ ಪಾಪದ ಫಲ ಉಣ್ಣ ಬೇಕಾದೀತೆಂದು ಈಗ ತಿಳಕೊಂಡು, ಈ ಹೆಸರನ್ನು ಅವರು ಕೊಟ್ಟರು. ಕಾಯಿನನು ಎಂಬ ಹೆಸರು ಅವರ ಹಾರೈಕೆಯನ್ನು, ಹಾಬೆಲ ಎಂಬದು ಅವರ ಅನುಭಾವವನ್ನು ಸೂಚಿಸುತ್ತದೆ. ಈ ಅಣ್ಣತಮ್ಮಂದಿರಲ್ಲಿ ಒಬ್ಬೊಬ್ಬನು ಆರಿಸಿ ಕೊಂಡ ಕೆಲಸ ಅವನವನ ಭಾವವನ್ನ ತೋರಿಸುತ್ತದೆ. ಕಾಯಿನನು ಹೊಲದ ಕೆಲಸ ಮಾಡಿ, ಹೊಟ್ಟೆಗೆ ವಿಶೇಷವಾಗಿ ಬದುಕು ಮಾಡುವವನು. ಅವನಲ್ಲಿ ಉದರಪೋಷಣಾ ಚಿಂತೆ ಬಹಳವಿತ್ತು. ಅವನು ಭೋಗಿ. ಹಾಬೆಲನು ಕುರುಬನಾಗಿದ್ದು, ಮುಖ್ಯವಾಗಿ ನಾಚಿಕೆ ಉಳಿಸಿ ಕೊಳ್ಳುವ ಹೊದಿಕೆಗಾಗಿ ಸಾಧನ ಮಾಡುವವನು. ಅವನು ನಾಚಿಕೆಗೇಡಿ ಅಲ್ಲ, ಲಜ್ಜಾಳು, ಸಾಧು ವೃತ್ತಿಯವನು.

bb) ಅವರು ಬಲಿ ಅರ್ಪಿಸಿದ್ದು. ೩—೫.

೪ ವ. ತನ್ನ ಹಿಂಡಿನ ಚೊಚ್ಚಲಾದವುಗಳಲ್ಲಿ ಕೆಲವನ್ನು ಮತ್ತು ಅವುಗಳ ಕೊಬ್ಬಿನಲ್ಲಿ ಕೆಲವನ್ನು) ಚೊಚ್ಚಲ ಕುರಿಗಳ ಕೊಬ್ಬನ್ನು ಅರ್ಪಿಸಿದನು. ಹಾಬೆಲನು ಉತ್ತಮವಾದದ್ದನ್ನು ತೆಗದು ಅರ್ಪಿಸಿದ್ದಲ್ಲಿ, ಈ ಕೆಲಸ ಪೂರ್ಣ ಚಿತ್ತವಿಟ್ಟು ಮಾಡಿದನೆಂದು ಕಾಣುತ್ತದೆ. ಕಾಯಿನನು ಕೈಗೆ ಶಿಕ್ಕಿದ್ದನ್ನು ಕೊಟ್ಟು, ಅಲಕ್ಷ್ಯದ ಮನಸ್ಸನ್ನು ತೋರಿಸಿದನು. ದೇವರಿಗೆ ಬಲಿ ಅರ್ಪಿಸ ಬೇಕೆಂಬ ಭಾವ ಅವರಲ್ಲಿ ಹ್ಯಾಗೆ ಹುಟ್ಟಿತು? ತಾವು ದೇವರಿಗೆ ಹಂಗಾಳುಗಳು, ತಮ್ಮದೆಲ್ಲಾ ಆತನದು ಎಂಬದನ್ನು ಕಳೆಯಲಾರದೆ, ತಮ್ಮಿಂದ ಆತನಿಗೆ ತಿರಿಗಿ ಏನಾದರೂ ಮುಟ್ಟಲಿ ಅಂತ ಮನುಷ್ಯರಲ್ಲಿ ಬಲಿ ಅರ್ಪಿಸುವ ಭಾವ ಹುಟ್ಟಿತು. ಆದ್ದರಿಂದ ಅವರು ಬಲಿ ಅರ್ಪಿಸುವಾಗ, ಸಾಯ ತಕ್ಕವರಾದ ತಮ್ಮನ್ನು ದೇವರು ಉಳಿಸಿದಂಥಾ ಉಪಕಾರ ನೆನಿಸಿಕೊಂಡು, ಆತನಿಗೆ ಸ್ತೋತ್ರ ಮಾಡಿ, ತಮ್ಮ ಹೃದಯ ಆತನಿಗೆ ಒಪ್ಪಿಸಿ ಕೊಟ್ಟೆವೆಂದು ಅರಿಕೆ ಮಾಡಿದ ಹಾಗಾಯಿತು. ಇದಕ್ಕೆ ದೇವರೇ ದಾರಿ ತೋರಿಸಿದನು (೩, ೨೧). ಈ ದೇವಾರಾಧನೆ ತಾವು ಕಲ್ಪಿಸಿದಂಥಾದ್ದಲ್ಲ. ಆಹಾರ ತಕ್ಕೊಳ್ಳುವದು ಜನ್ಯಧರ್ಮ ಹ್ಯಾಗೋ, ಹಾಗೆ ಇದು. ತಮ್ಮ ಚಿಂತೋಪಶಮನಾರ್ಥವಾಗಿ ಹಂಗನ್ನು ನಿಗೀಚ ಬೇಕಾಗಿ ಬಲಿ ಕೊಡುವವರಾದರು.

೫ ವ. ಲಕ್ಷ್ಯ ಮಾಡಲಿಲ್ಲ) ಅವನು ಹಾಬೆಲನಂತೆ ವಿಶ್ವಾಸದಿಂದ ಬಲಿ ತರಲಿಲ್ಲ. ದೇವರು ಹೊರಗಣ ಆಚಾರ ಮಾತ್ರವಲ್ಲ, ಒಳಗಣ ವಿಶ್ವಾಸವನ್ನೂ ಮನಸನ್ನೂ ನೋಡುತ್ತಾನೆ. ಆಚಾರವೇ ದೇಹ, ವಿಶ್ವಾಸವೇ ಜೀವ. ಜೀವವೆಂಬ ವಿಶ್ವಾಸ ಇಲ್ಲದ ಮೇಲೆ, ಆಚಾರವೆಂಬ ದೇಹ ಸಾರುವ ಹೆಣವಾದದ್ದೇ ಸರಿ. ಅದು ದೇವರಿಗೆ ಹ್ಯಾಗೆ ಸಮರ್ಪಕವಾದೀತು? (ಇಬ್ರಿ. ೧೧, ೪). ಕಾಯಿನನು ಕಪಟಸ್ತನು. ದೇವರು ಮೆಚ್ಚಿದ್ದು ಮೆಚ್ಚದೆ ಇದ್ದದ್ದು ಆಕಾಶದಿಂದ ಬಿದ್ದ ಬೆಂಕೆಯಿಂದ (೧ ಅರಸ. ೧೮, ೩೮. ಲೇವಿಕ. ೯, ೨೪.) ತಿಳಕೊಂಡರೋ ಏನೋ. ಹ್ಯಾಗಾದರೂ ತಮ್ಮ ಮನಸಿನಲ್ಲಿಯೂ, ಏನಾದರೂ ಒಂದು ಗುರುತಿನಿಂದ ಹೊರಗೂ ತಿಳಿದರು. ಅನ್ಯ ಜನರು ಸತ್ಯ ಜೀವವುಳ್ಳ ದೇವರನ್ನು ನಂಬದೆ ಇರುವದರಿಂದ, ಅವರು ಅರ್ಪಿಸುವ ಬಲಿಗಳೆಲ್ಲಾ ಆತನಿಗೆ ಮುಟ್ಟುವದಿಲ್ಲ, ಅವು ಅನರ್ಥ.—ಮೋರೆ ತಗ್ಗಿತು) ಕಾಯಿನನು ಮೋರೆ ತಗ್ಗಿಸಿದ್ದಲ್ಲಿ, ತನ್ನಲ್ಲಿ ಹುಟ್ಟಿದ ನಾಚಿಕೆ ಶಿಟ್ಟು ಹೊಟ್ಟೆಕಿಚ್ಚು ಬೇಸರ ಬೈಲಿಗೆ ಬಿತ್ತು. ದೇವರ ಮೇಲೆ ಶಿಟ್ಟನ್ನು ತೀರಿಸಲಾರದ್ದಕ್ಕೆ ತಮ್ಮನ ಮೇಲೆ ಆಕ್ರೋಶ ಮಾಡುತ್ತಾನೆ.

೫೨ ದೇವರು ಕಾಯಿನನ್ನು ಎಚ್ಚರಿಸಿದ್ದು; ಕಾಯಿನನು ತಮ್ಮನನ್ನು ಕೊಂದದ್ದು.

ಉತ್ಪತ್ತಿ. ೪, ೬—೮.

cc) ದೇವರು ಕಾಯಿನನನ್ನು ಎಚ್ಚರಿಸಿದ್ದು. ೬. ೭.

"ನೀನು ಯಾಕೆ ಸಿಟ್ಟಾಗಿ ಮೋರೆ ಕೆಳಗೆ ಮಾಡಿದಿ? ನಾನು ನಿನ್ನ ಬಲಿಗೆ ಮೆಚ್ಚದಕ್ಕೋ? ಇದಕ್ಕೆ ಸೊಕ್ಕಿರುವ ಶಟ ಕೊಳ್ಳುವ ನಿನ್ನ ಮನಸೇ ಹೊರ್ತು ಬೇರೊಂದು ಮೂಲವಿಲ್ಲ".

೭ವ. ಮೋರೆ ಎತ್ತೋಣವಲ್ಲವೋ?) ಮೋರೆ ಎತ್ತುವದು ಒಳ್ಳೇ ಮನೋಸಾಕ್ಷಿಯ ಲಕ್ಷಣ; ಮೋರೆ ತಗ್ಗುವದು ತಪ್ಪು ಹೊರಿಸುವ ಮನೋಸಾಕ್ಷಿಯ ಲಕ್ಷಣ.—ಪಾಪವು ಜಪ್ಪಿಸಿ ಕೊಂಡು ಕೂತದೆ; ಮತ್ತು ನಿನ್ನ ಮೇಲೆ ಅದರ ಇಷ್ಟೆ ಇರುವದು; ಆದರೆ ನೀನು ಅದನ್ನ ಆಳ ಬೇಕು) ಪಾಪವನ್ನೂ ಪಾಪದ ಆಶೆಯನ್ನೂ ಒಂದು ಸಿಂಹಕ್ಕೆ ಸರಿ ಮಾಡುತ್ತಾನೆ (೧ ಪೇತ್ರ. ೫, ೮). ದೇವರ ಮಾರ್ಗದಲ್ಲಿ ನಡೆದರೆ, ಸಂತೋಷ ಧೈರ್ಯ ಇರುವದು, ಸಿಂಹದ ಭಯವಿಲ್ಲ; ಆತನ ದಾರಿ ತಪ್ಪಿ ನಡೆದರೆ, ಕೆಟ್ಟ ಮೃಗಗಳು ಸಂಚಾರ ಮಾಡುವ ಅಡಿವಿಯಲ್ಲಿ ಸೇರಿ, ಮನೆ ಮಾಡಿ ಕೊಂಡ ಹಾಗಾಗುವದು. ದೇವರನ್ನ ಅಗಲಿರುವ ಮನಸು ಘೋರಾರಣ್ಯದಲ್ಲಿರುವ ಮನೆಯಂತೆ ಅದೆ. ಚಿತ್ತವು ಆ ಮನೆಯಲ್ಲಿ ವಾಸ ಮಾಡುವ ಯಜಮಾನ. ದುರಾಶೆಗೆ ಚಿತ್ತವಿಟ್ಟು, ಮನಸಿನ ಬಾಗಲನ್ನು ತೆರೆದು, ಹೊರಗೆ ಹೆಜ್ಜೆ ಇಟ್ಟವನನ್ನು ಆ ಪಾಪವೆಂಬ ಮೃಗವು ತಿಂದು ಬಿಡುವದು.—ನೀನು ಆಳ ಬೇಕು ಎಂಬ ಮಾತಿನಿಂದ ಪಾಪವನ್ನು ಪುರುಷನ ಮೇಲೆ ಇಚ್ಛಾಸಕ್ತಳಾದ ಸ್ತ್ರೀಗೆ ಹೋಲಿಸುತ್ತಾನೆ. ಹ್ಯಾಗೆ ಹವ್ವಳ ಇಚ್ಛೆ ಗಂಡನ ಮೇಲೆ ಇರುವದೊ (೩, ೧೬), ಹಾಗೆ ಪಾಪದ ಇಷ್ಟೆ ಮನುಷ್ಯನ ಮೇಲೆ ಹೋಗುವದು. ಆದರೆ ಆದಮನು ಆಕೆಯನ್ನು ಆಳ ಬೇಕಾದಂತೆ, ಕಾಯಿನನೂ (ಮನುಷ್ಯರೂ) ಪಾಪದ ಆಶೆಯನ್ನು ತಮ್ಮ ಆವಂಕಿ ಮೀರಗೊಡ ಬಾರದು; ತಮ್ಮ ಕೈಲಾದಷ್ಟು ಸರ್ಪದ ತಲೆಯನ್ನು ಬಡಿಯ ಬೇಕು. ಆಳ ಬೇಕೆಂಬ ಆಜ್ಞೆ ಕಠಿಣವೇ ಸರಿ! ಆದರೆ ದೇವರು ಆಜ್ಞೆ ಕೊಟ್ಟಲ್ಲಿ, ಆತನು ಅದನ್ನು ಅನುಸರಿಸುವ ಬಲವನ್ನು ಸಹ, ಕೊಡು ಅಂತ ವಿಶ್ವಾಸವೆಂಬ ಕೈ ಒಡ್ಡಿದವರಿಗೆ ನೀಡುತ್ತಾನೆ. ಹೆಳವನು ಬರಲಿಕ್ಕೆ ಅನುಕೂಲ ಮಾಡಿ ಕೊಡದಲೇ, ತನ್ನ ಸಭೆಗೆ ಬರಲಿಲ್ಲದ ತಪ್ಪನ್ನು ಅರಸನು ಅವನಲ್ಲಿ ಹಿಡಿದರೆ, ಆ ಅನ್ಯಾಯ ಅರಸನದೇ. ದೇವರು ಹೀಗೆ ಅನ್ಯಾಯ ಮಾಡುವಾತನಲ್ಲ. ದೇವರು ಕೊಡುವ ಶಕ್ತಿಗೆ ಒಲ್ಲೆವು ಎಂದು ಹೇಳಿ ಸಮೀಪಕ್ಕೆ ಬಾರದವರ ಮೇಲೆ ಪಾಪಾಳಿ ಆಳದ ತಪ್ಪನ್ನು ಹೊರಿಸ ತಕ್ಕದ್ದು. ಅಂದು ದೇವರು ತಾನೆ ಕಾಯಿನನನ್ನು ಎಚ್ಚರಿಸಿದಂತೆ, ಇಂದು ಆತನು ನಮ್ಮಲ್ಲಿ ಇಟ್ಟಿರುವ ಮನೋಸಾಕ್ಷಿಯ ಮುಖಾಂತರ, ಎಚ್ಚರಿಸುತ್ತಾ ಬರುತ್ತಾನೆ. ಶೋಧನೆ ಆಗುವ ಸಮಯದಲ್ಲಿ ಅದು, ವಶವಾಗ ಬಾರದು! ಬೇಡ ಬೇಡ! ಎಂದು ನಮಗೆ ಬುದ್ಧಿ ಹೇಳಿ ಜಬ್ಬರಿಸುವದು.

dd) ತಮ್ಮನನ್ನು ಕೊಂದದ್ದು. ೮.

ಹೊಡೆಯ ಬಂದ ಪಾಪವೆಂಬ ವೈರಿಯನ್ನೂ ಜೈಸುವ ವೈಪನ್ನೂ ದೇವರು ಕಾಯಿನನಿಗೆ ತಿಳಿಸಿ ಎಚ್ಚರಿಸಿದನು. ಆದರೆ ಅವನು ಕಿವಿ ಕೊಡಲಿಲ್ಲದ ಕಾರಣ, ಅವನ ಮನಸು ಕಠಿಣವಾಯಿತು. —ಹೇಳಿದನು) ಹಾಬೆಲನಿಗೆ ಮುಖಸ್ತುತಿ ಮಾಡಿ ಅವನು ತನ್ನನ್ನು ನಂಬಿ ತನ್ನ ಸಂಗಡ ಹೊಲಕ್ಕೆ ಬರುವ ಹಾಗೆ, ಪ್ರಯತ್ನ ಮಾಡಿದ್ದಾನು. ಕಾಯಿನನು ಹೇಳಿದ ಮಾತು ಬರೆದಿರುವದಿಲ್ಲ. —ಕಾಯಿನನು ಸರ್ಪ ಬಡಿಯುವವನಲ್ಲ, ಸರ್ಪದ ವಂಶದವನು ಭ್ರಾತೃಹತ್ಯ ಮಾಡುವವನು ಆದನು. ಆದಿ ತಂದೆ ತಾಯಿಗಳು ಪಾಪದಲ್ಲಿ ಬಿದ್ದದರಿಂದಲೂ, ಕಾಯಿನನು ಸೊಕ್ಕಿ ಶಟ ಕೊಂಡು ಹೊಟ್ಟೆಕಿಚ್ಚು ಪಟ್ಟು ಕಪಟ ಮಾಡಿದ್ದರಿಂದಲೂ, ಎಂಥಾ ದುಃಖಕರವಾದ ಫಲ ಹುಟ್ಟಿತು!

ee) ದೇವರು ಕಾಯಿನನನ್ನು ವಿಚಾರಿಸಿದ್ದು. ೯. ೧೦.

೯ ವ. ಸುಳ್ಳು ಕಠಿಣತ್ವ ಇವಲ್ಲದೆ, ಪಶ್ಚಾತ್ತಾಪ ದುಃಖ ಪಟ್ಟು ಅರಿಕೆ ಮಾಡುವ ಮನಸು ಕಾಯಿನನಲ್ಲಿ ಕಾಣುವದಿಲ್ಲ. ಆದಮನು ಪಾಪದಲ್ಲಿ ಬಿದ್ದಂದಿನಿಂದ ಪಾಪ ಹೆಚ್ಚುತ್ತಾ ಬಂತು. ಕಾಯಿನನ ಕೆಟ್ಟತನ ಆದಿ ಮನುಷ್ಯರದಕ್ಕಿಂತ ದೊಡ್ಡದು (೩, ೯).

೧೦ ವ. ನನ್ನ ಕಡೆಗೆ ಕೂಗುತ್ತದೆ.) ರಕ್ತದಲ್ಲಿ ಜೀವ ಇರುವದರಿಂದ (ಲೇವಿಕ. ೧೭, ೧೧.), ರಕ್ತ ಎಂಬ ಶಬ್ದಕ್ಕೆ ಜೀವ ಕೊಂದ ಅಪರಾಧ ಎಂಬರ್ಥ ಉಂಟು. ನಿನ್ನ ತಮ್ಮನನ್ನು ಕೊಂದ ಅಪರಾಧವು, ನಿನಗೆ ಶಿಕ್ಷೆ ಆಗ ಬೇಕೆಂದು ನನಗೆ ಕೂಗುವ ವಾದಿ. ಮನುಷ್ಯರು ಮಾಡುವ ಒಂದೊಂದು ಪಾಪವು ನೀತಿಯುಳ್ಳ ನ್ಯಾಯಾಧೀಶನಾದ ದೇವರ ಮುಂದೆ ಅವರ ಮೇಲೆ ಸಾಕ್ಷಿ ನುಡಿಯುವ ವಾದಿ. ಪ್ರತಿವಾದಿಗೆ ಸಾಕ್ಷಿ ಇಲ್ಲ. ಮನೆಯ ಗೋಡೆಯಲ್ಲಿ ಬಿರುಕು ಬಿಟ್ಟರೆ, ನೆಟ್ಟಗೆ ಮಾಡ ಬೇಕೆಂದು ಮನುಷ್ಯರಿಗೆ ಕೂಗಿದ ಹಾಗಾಗುವದು. ಅದರಂತೆ ಕೆಟ್ಟ ಮನುಷ್ಯರು ಮಾಡುವ ಅನ್ಯಾಯಗಳು, ಹಾಗಿರ ಬಾರದು, ಶಿಕ್ಷೆ ಆಗ ಬೇಕೆಂದು ಒಳ್ಳೆಯವರಲ್ಲಿಯೂ, ಪರಲೋಕದಲ್ಲಿರುವ ದೇವರಲ್ಲಿಯೂ, ಕೂಗಿ, ಮನಸನ್ನು ಎಬ್ಬಿಸುವವು. ಹತವಾದ ಒಬ್ಬ ಮನುಷ್ಯನ ರಕ್ತ ಕಂಡಲ್ಲಿ, ಆ ರಕ್ತ, ಒಬ್ಬ ಮನುಷ್ಯನನ್ನು ಕೊಂದರು ಎಂಬ ಹಾಗೆ, ಕೂಗುವ ಸಾಕ್ಷಿಯಾಯಿತು (ಇಬ್ರಿ. ೧೨, ೨೪). ಮನುಷ್ಯರ ನಡಾವಳಿಯೇ, ಅವರು ಶಿಕ್ಷೆ ಹೊಂದ ತಕ್ಕ ಪಾಪಿಷ್ಟರು ಎಂದು ಹೇಳಿ ಕೊಡುವದು. ಹಾಗಾದರೆ ಅಲ್ಲಗಳೆಯುವದು ಹ್ಯಾಗೆ?

ff) ದೇವರು ನ್ಯಾಯ ತೀರಿಸಿದ್ದು. ೧೧—೧೬.

೧೧ ವ. ಭೂಮಿಯಿಂದ) ತನ್ನ ಮೇಲೆ ಬಿದ್ದ ಶಾಪದಿಂದ ತನ್ನ ಜನ್ಮದೇಶದಲ್ಲಿ ನಿಂತಿರಲಿಕ್ಕೆ ಸಾವಧಾನವಾಗಲಿಲ್ಲ. ಹಾಬೆಲನ ರಕ್ತ ಕುಡಿದದರಿಂದ, ಆ ಭೂಮಿ ಮಾಸಿದಂತೆ ಆಗಿ, ಕೊಂದವನಿಗೆ ಹೇಸಿ ಅವನನ್ನ ಕಾರಿ ಬಿಡುವ ಹಾಗಾಯಿತು. ಅದಕ್ಕೂ ಕಾಯಿನನಿಗೂ ಕೆಟ್ಟಿತು. ಸೃಷ್ಟಿಯು ದೇವರ ಕಡೆಗೆ ನಿಲ್ಲುತ್ತದೆ; ಕೆಟ್ಟವರ ಪಕ್ಷ ಹಿಡಿಯುವದಿಲ್ಲ, ತನಗೆ ಅವರಿಂದ ಮಾನಭಂಗವಾಯಿತೆಂದು ಮುನಿಯುವದು.— ಈ ರೀತಿಯಿಂದ ಕಾಯಿನನು ತನ್ನ ಜನ್ಮದೇಶವನ್ನ ಬಿಟ್ಟು, ಪರದೇಶಿಯಾಗಿ ಸಮಾಧಾನವಿಲ್ಲದೆ, ನಿಲ್ಲುಗಡೆ ಕಾಣದೆ, ತಿರುಗುವವನಾದದ್ದು ಒಂದು ಶಿಕ್ಷೆ.

೧೨ ವ. ತಾನು ಆರಂಬ ಮಾಡುವ ಭೂಮಿಯಿಂದ ಹುಟ್ಟಾವಳಿ ಬಹಳ ಕಡಿಮೆ ಆಗುವದೊಂದು ಶಿಕ್ಷೆ.

೧೩. ೧೪ ವ. ತೀರ್ಪಿನ ಮಾತು ಕೇಳಿದ ಬಳಿಕ, ಕಾಯಿನನು ಈ ವಿಷಯಕ್ಕೆ ತನ್ನಲ್ಲಿ ಹುಟ್ಟಿದ ಚಿಂತೆಯನ್ನ ದೇವರಿಗೆ ಹೇಳಿ ಕೊಳ್ಳುತ್ತಾನೆ. ನನ್ನ ಅಪರಾಧ) ಪಾಪ ಮಾಡದ ಮುಂಚೆ, ಪಾಪಿಷ್ಟರಿಗೆ ಸೊಕ್ಕು ಧೈರ್ಯ ಬಹಳ ಉಂಟು, ಪಾಪ ಮಾಡಿದ ಮೇಲೆ ಪುಕ್ಕರು ಹೇಡಿಗಳು ಆಗಿ, ಕಡ್ಡಿ ಮಿಸಿಕಾಡಿದರೆ, ನಡುಗುವರು. ಕಾಯಿನನು ತನ್ನ ಪಾಪಕ್ಕೆ ಅಲ್ಲ, ತನಗಾದ ಶಿಕ್ಷಾಭಾರಕ್ಕೆ ಚಿಂತೆ ಮಾಡುತ್ತಾನೆ. ಇದು ಲೌಕಿಕ ದುಃಖ.—ಅಲೆದಾಡುವವನೂ ತಿರುಗುವವನೂ ಆಗಿರ ಬೇಕು—ನನ್ನನ್ನು ಕೊಂದಾರು.) ಕಾಯಿನನಲ್ಲಿ ಇದ್ದ ಚಿಂತೆ ಯಾವದಂದರೆ: ಪರದೇಶಕ್ಕೆ ಸಮೀಪವಾದ ಒಳ್ಳೆ ಶೀಮೆಯನ್ನು ನಾನು ಬಿಟ್ಟು ದೇವರ ಆಶ್ರಯವನ್ನು ಕಳಕೊಂಡು, ಅನಾಥನಾಗಿ ತಿರಿಗಿದರೆ, ಇನ್ನು ಮುಂದೆ ಹುಟ್ಟುವ ಆದಮನ ಮಕ್ಕಳಲ್ಲಿ ಯಾರಾದರೂ, ಹಾಬೆಲನನ್ನು ಕೊಂದದ್ದಕ್ಕೆ, ನನ್ನನ್ನು ಹೊಡೆದು ಮುಯ್ಯಿಗೆ ಮುಯ್ಯಿ ತೀರಿಸ್ಯಾರು, ಅಥವಾ ನನಗೆ ಮುನುಸುಗುಟ್ಟುವ ಭೂಮಿಯ ಮೇಲೆ ಯಾವದೊಂದು ನನಗೆ ಕೇಡಾದೀತು. ದುರ್ಮಾರ್ಗದಲ್ಲಿ ನಡೆಯುವವನು ಉದರುವ ತರಗೆಲೆಗೆ ಅಂಜುವನು.

೧೫ ವ. ದೇವರೇ (ಆತನ ಪ್ರತಿನಿಧಿಯಾದ ಅಧಿಪತಿಯೇ) ನ್ಯಾಯ ತೀರಿಸುವಾತನು. ಆತನು ಕಾಯಿನನಿಗೆ ಶಿಕ್ಷೆ ನೇಮಿಸಿ ಕೊಟ್ಟ ಮೇಲೆ, ಯಾರೂ ಅವನ ಮೇಲೆ ಕೈ ಹಾಕ ಬಾರದು; ಹಾಕಿದರೆ, ದೇವರು ನರಹತ್ಯಕ್ಕೆ ಮಾಡಿದ ಶಿಕ್ಷೆಯನ್ನು ಅಂಥವನು ನೋಡಿದಾಗ್ಯೂ, ಅಂಜದೆ ಕೊಂದ ಹಾಗಾದದರಿಂದ, ಅವ

ನ ಅಪರಾಧವೂ ಅವನ ಶಿಕ್ಷೆಯೂ ಏಳು ಪಾಲಷ್ಟು ಹೆಚ್ಚಾಗುವದು. ದೇವರು ಮುಯ್ಯಿಗೆ ಮುಯ್ಯಿ ತೀರಿಸಗೊಡದೆ ಮನುಷ್ಯರಿಗೆ ಕಡಿವಾಣ ಬಿಗಿಸ ಬೇಕಾಯಿತು. ಇಲ್ಲದಿದ್ದರೆ ಒಬ್ಬರನ್ನೊಬ್ಬರು ನಿರ್ಮೂಲ ಮಾಡಿ ಬಿಡುತ್ತಿದ್ದರು. ಯಾಕಂದರೆ ಕೊಟ್ಟಿ ಕುದುರೆಯಂತೆ ಇರುವ ಮನುಷ್ಯರ ಮನಸು ಅವರ ಸ್ವಾಧೀನ ತಪ್ಪಿರುತ್ತದೆ.—ಕಾಯಿನನು ಈ ಅಭಯದ ಮಾತು ನಂಬುವ ಹಾಗೆ, ದೇವರು ಅವನಿಗೆ ಕಾಣುವ ಯಾವದೊಂದು ಗುರುತನ್ನು ಮಾಡಿ ಕೊಟ್ಟನು.

೧೬ ವ. ನೋದು = ಓಡಿ ಹೋಗೋಣ; ಯಾಕಂದರೆ ಕಾಯಿನನು ಅಲ್ಲಿಗೆ ಓಡಿ ಹೋಗಿ, ಮೆಟ್ಟು ಮಾಡಿದನು. ತೋಟದಿಂದ ಹೊರಗಾದ ತರುವಾಯ, ಆದಿ ಮನುಷ್ಯರು ಅದರ ಪೂರ್ವದಲ್ಲಿ ನಿಂತರು. ಅಲ್ಲಿ ದೇವರು ಅವರ ಸಂಗಡ ಇರುತ್ತಾ ಮಾತಾಡುತ್ತಾ ಇದ್ದನು. ಅದು ಆತನ ಸನ್ನಿಧಿಯ ಸ್ಥಳವಾಗಿತ್ತು. ಕಾಯಿನನು ಅಲ್ಲಿಂದ ಇನ್ನು ಹೆಚ್ಚು ಪೂರ್ವಕ್ಕೆ ಈ ದೇಶದ ಕಡೆಗೆ ಬಂದನು. ಕೆಲವರು ವಿದ್ವಾಂಸರು ನೋದು ಎಂಬ ದೇಶ ಹಿಂದುಸ್ಥಾನ ಅಂತೆ ನೆನಿಸುತ್ತಾರೆ. ಹ ಎಂಬ ಹಿಬ್ರು ಭಾಷೆಯ ಒಂದು ಉಪಸರ್ಗ ನೋದು ಎಂಬ ಶಬ್ದಕ್ಕೆ ಕೂಡಿಸಿದರೆ, ಹನೊದು, ಹಿಂದು ಎಂದು ಆಗುವದು.

b) ಕಾಯಿನನ ವಂಶಾವಳಿ (ಜಲಪ್ರಳಯದ ತನಕ) ೪, ೧೭—೨೪.

೧೭ ವ. ಹೆಂಡತಿಯನ್ನು) ಹಾಬೆಲನನ್ನು ಕೊಲ್ಲದ ಮುಂದೆ, ಆಕೆಯನ್ನ ಮದಿವೆ ಮಾಡಿ ಕೊಂಡಿದ್ದಾನು. ಆಕೆ ಅವನಿಗೆ ಸಹೋದರಿ ಆಗ ಬೇಕು. ಅಥವಾ ಆಗಲೇ ಕಾಯಿನನಿಗೆ ಬೇರೆ ಸಹೋದರರು ಇದ್ದ ಪಕ್ಷದಲ್ಲಿ ಆಕೆ ಅವರ ಮಗಳಾಗಿರ ಬಹುದು. ಆದಿ ತಂದೆ ತಾಯಿಗಳಿಂದ ಹುಟ್ಟಿದ ಮಕ್ಕಳು ಇನ್ನು ಒಂದೇ ಕುಟುಂಬದವರಂತೆ, ಒಂದೇ ತರ ಭಾವದವರಾಗಿರಲಿಲ್ಲ. ಅದು ಕಾರಣ ಇಂಥಾ ಮದಿವೆಗೆ ಅಂದು ದೋಷ ಇನ್ನು ಹತ್ತುತ್ತಿದ್ದಿಲ್ಲ. ಅವರಲ್ಲಿ ಕುಟುಂಬದ ತರ ಇನ್ನು ಕೂಡಿದ್ದಿಲ್ಲ. ಒಬ್ಬೊಬ್ಬನಿಗೆ ಒಂದು ಕುಟುಂಬದ ತರವಿತ್ತು. ಅವರು ಬೇರೆ ಬೇರೆ ತರದವರಾಗಿದ್ದರು. ತನ್ನ ಭಾವರೂಪದಲ್ಲಿ ಇಲ್ಲದ್ದು, ಅಥವಾ ಕಡಿಮೆ ಅದದ್ದು ದೊರಕಿಸಿ ಕೊಂಡು, ತನ್ನನ್ನು ಪೂರ್ತಿ ಮಾಡಿ ಕೊಳ್ಳ ಬೇಕೆಂಬ ಭಾವದಿಂದ ಮನುಷ್ಯನಲ್ಲಿ ವಿವಾಹದ ಇಚ್ಛೆ ಉದ್ಭವಿಸುವದು. ಬೇರೆ ಬೇರೆ ಕುಟುಂಬಗಳು ಆದ ಕೂಡಲೇ, ಮದಿವೆಯ ಸಂಗತಿ ಬೇರೆ ಆಯಿತು. ಇತ್ತಕಡೆ ಒಂದೊಂದು ಕುಟುಂಬದವರಿಗೆ ಒಂದೇ ತರ ಒಂದೇ ಭಾವವಾಯಿತು. ಒಂದೇ ಕುಟುಂಬದವರಿಗೆ ತಮ್ಮೊಳಗೆ ಮದಿವೆ ಮಾಡಿ ಕೊಳ್ಳುವದು ತರವಲ್ಲ, ಯಾಕಂದರೆ ಆ ಪಕ್ಷದಲ್ಲಿ ಗಂಡನಿಗೂ ಹೆಂಡತಿಗೂ ಅಷ್ಟು ಗಂಟು ಬೀಳುವದಿಲ್ಲ; ಬರೆ ಸುಖಭೋಗಕ್ಕಾಗಿ ಮಾಡಿದ ಹಾಗಾಗುತ್ತದೆ. ಸಂತತಿ ಸುಧಾ ನೆಟ್ಟಗಾಗುವದಿಲ್ಲ. ಮನುಷ್ಯನ ಮನಸು ತನಗೆ ಇಲ್ಲದರ ಕಡೆಗೆ ಹರಿಯುವದು. ಸಹೋದರಿಗಳ ಸ್ವಭಾವ ತಮ್ಮದು, ಒಂದೇ. ಅದರಿಂದ ಅವರನ್ನು ಮದಿವೆ ಮಾಡಿ ಕೊಳ್ಳಲಿಕ್ಕೆ ಮನುಷ್ಯರ ಭಾವ ಹಿಂಜರಿಯುವದು. ಅದು ನಿಮಿತ್ತವಾಗಿ ಕಾಲಾಂತರದಲ್ಲಿ ಪಾಪಿ ತಪ್ಪಿ ವಿವಾಹವಾಗ ಬಾರದೆಂಬ ನಿಷೇಧವು, ಅಂಥಾ ಮದಿವೆಗೆ ಹೇಸುವ ಮನುಷ್ಯರ ಭಾವಕ್ಕೆ ಅನುಸಾರವಾದ, ಉತ್ಪತ್ತಿ ಆಯಿತು.— ಹನೋಕನು = ದಿಕ್ಷೆ ಹೊಂದಿದವನು, ಶಿಕ್ಷಿತನು; ಯಾಕಂದರೆ ತಂದೆ ಅವನಿಗೆ ನಗರವಾಸವನ್ನೂ ನಗರಿಕತನವನ್ನೂ ಕಲಿಸಿದನು. ಆ ಆದಿಕಾಲದಲ್ಲಿ ಮನುಷ್ಯರು ಬಹಳ ಬೇಗ ಹೆಚ್ಚುತ್ತಿದ್ದರು. ಈ ಪೃಥ್ವಿಯ ಮೇಲೆ ಮೊದಲಿನ ಪಟ್ಣವನ್ನು ಒಬ್ಬ ಭ್ರಾತೃಹತ್ಯಗಾರನು ಕಟ್ಟಿದನು. ಭಯದಿಂದ ತನ್ನ ಗುಡಸಲುಗಳ ಸುತ್ತ ಮುತ್ತ ಗೋಡೆ ಹಾಕಿದನು. ಇದು ಬೇಗ ಮಕ್ಕಳಿಂದ, ಮೊಮ್ಮಕ್ಕಳಿಂದ, ಮರಿಮಕ್ಕಳಿಂದ ತುಂಬಿತು.—ಆದರೆ ಈ ರೀತಿಯಿಂದ ಭಯ ಪರಿಹಾರವಾಗುವದಿಲ್ಲ. ದೇವರೇ ಗೋಡೆ, ಕೋಟೆ ಆದರೆ, ಭಯಕ್ಕೆ ಕಾರಣವಿಲ್ಲ.

೧೮ ವ. ಮೆಹೂಯಯೇಲನು = ದೇವರಿಂದ ಹೊಡಿಸಿ ಕೊಂಡವನು. ಮೆಥೂಶಯೇಲನು = ದೇವರ ಮನುಷ್ಯನು. ಲೇಮೆಕನು = ಯೌವನಸ್ಥನು.

ಉತ್ಪತ್ತಿ. ೪, ೧೭—೨೪.

೧೯ ವ. ಲೇಮೆಕನು ದೇವರ ನೇಮಕಕ್ಕೆ ವಿರೋಧವಾಗಿ (೨, ೨೪.) ಇಬ್ಬರು ಹೆಂಡರನ್ನು ಮಾಡಿ ಕೊಂಡನು. ಅದಾ = ಆಭರಣವುಳ್ಳಾಕೆ. ಚಿಲ್ಲಾ = ಸ್ವರ ಅಥವಾ ನೆರಳು. ಮದಿವೆಯ ಸ್ಥಿತಿ ಬರೆ ಸುಖಭೋಗಕ್ಕೆ ಸಾಹಿತ್ಯವಾಯಿತು. ಇದಲ್ಲದೆ ತಮ್ಮಲ್ಲಿ ಇದ್ದ ಬುದ್ಧಿ ಜಾಣತನ ಸಹಾ ಎಲ್ಲಾ ಸುಖಭೋಗಕ್ಕೆ ಅನುಕೂಲವಾಗ ಬೇಕು ಎಂಬ ಲೌಕಿಕ ಭಾವ ಇವರಲ್ಲಿ ಬಹಳ ಅಭಿವೃದ್ಧಿ ಆಗಿತ್ತು.

೨೦ ವ. ಯಾಬಲನು = ಹೊಳೆ, ಇವನು ದನ ಕಾಯುವವನು.—ಗುಡಾರಗಳಲ್ಲಿ ಮತ್ತು ಪಶುವಿನ ಹತ್ತರ ವಾಸಿಸುವವರಿಗೆ ತಂದೆಯಾದನು.) ಇವರು ಗೊಲ್ಲರು. ತಮ್ಮ ದನಕ್ಕೆ ಸಾಕಷ್ಟು ಮೇವು ಸಿಕ್ಕುವ ಸ್ಥಳದಲ್ಲಿ ಇಳಿದು, ಕೆಲವು ಕಾಲ ಇರುವರು. ಅದಿವಿ ಮೇಯಿಸಿ ಬಿಟ್ಟ ತರುವಾಯ, ಮತ್ತೊಂದು ಆಶ್ರಯ ಹುಡಿಕಿ ಕೊಂಡು ಹೋಗುವರು. ಈಗ್ಯೂ ಅರಬಿಯರು ಹೀಗೆ ಮಾಡುವರು.

೨೧ ವ. ಯೂಬಲನು = ಕೇಕೆ ಹೊಡೆಯುವವನು, ಬಾರಿಸುವವನು. ಇವನು ವಾದ್ಯವನ್ನು ಕಲಿಸಿದವನು.

೨೨ ವ. ತುಬಲ್ ಕಾಯಿನನು = ಕಮ್ಮಾರನು.—ಹಿತ್ತಾಳಿಯ ಮತ್ತು ಕಬ್ಬಿಣದ ಎಲ್ಲಾ ಸಾಮಾನುಗಳನ್ನು ಬಡಿಯುವವನು.—ನಾಮಾ = ಚೆಲ್ವೆ.—ಒಂದು ವೇಳೆ ಇವರ ಸುದ್ದಿಯನ್ನ ಕೇಳಿ, ಅನ್ಯ ಜನರು ಇವರು ದೇವರುಗಳೆಂದು ಭಾವಿಸಿ ಕೊಂಡು, ದೇವತೆಗಳ ಬಡಿಗೆಯನಾದ ವಿಶ್ವಕರ್ಮ, ಛಂದಸ್ಸು ಕಲಿಸಿದ ನಾಗವರ್ಮ, ವಾದ್ಯ ಬಲ್ಲವರಾದ ಗಂಧರ್ವರು ಎಂಬೀ ಮೊದಲಾದವರ ಕಥೆಗಳನ್ನು ಹುಟ್ಟಿಸಿ ಕೊಂಡಿರ ಬಹುದು.

೨೩. ೨೪ ವ. ಇಲ್ಲಿ ಲೇಮೆಕನು ತನ್ನ ಹೆಂಡರಿಗೆ ಹೇಳಿದ ಒಂದು ಸಣ್ಣ ಗೀತ ಅದೆ. ಇದಕ್ಕೆ ಆರು ಚರಣಗಳು ಅವೆ:

"ನನ್ನ ಶಬ್ದ ಕೇಳಿರಿ! ಲೇಮೆಕನ ಹೆಂಡರೇ!
ನನ್ನ ನುಡಿಗೆ ಕಿವಿ ಕೊಡಿರಿ!
ನನ್ನ ಘಾಯಕ್ಕೆ ಒಬ್ಬ ಪುರುಷನನ್ನು,
ನನ್ನ ಕಕ್ಕಿಗೆ ಒಬ್ಬ ಬಾಲನನ್ನು ಕೊಂದೆನು.
ಕಾಯಿನನಿಗೋಸ್ಕರ ಏಳಷ್ಟು ಮುಯ್ಯಿ ಹೊಂದಿದರೆ,
ಲೇಮೆಕನಿಗೋಸ್ಕರ ಎಪ್ಪತ್ತೇಳಷ್ಟು ಹೊಂದ ತಕ್ಕದ್ದು."

ಈ ಗೀತದ ಅರ್ಥವೇನಂದರೆ: ಒಬ್ಬ ಗೃಹಸ್ಥನು ಮತ್ತು ಒಬ್ಬ ಯೌವನಸ್ಥನು ನನ್ನನ್ನು ಘಾಯ ಮಾಡಿದ್ದಕ್ಕೆ, ನಾನು ಅವರಿಬ್ಬರನ್ನ ಕೊಂದು, ಮುಯ್ಯಿಗೆ ತೀರಿಸಿ, ನರಹತ್ಯದ ದೋಷಕ್ಕೆ ಗುರಿಯಾಗಿದ್ದೇನೆ. ಅದಕ್ಕೆ ಅವರ ಕಡೆಯವರು ನಮ್ಮ ಗಂಡನನ್ನು ಸರಿಗೆ ಸರಿ ತೀರಿಸ್ಯಾರು ಎಂದು ನೀವು ಅನುಮಾನ ಮಾಡ ಬೇಡಿರಿ! ನೀವು ಏನೇನೂ ಅಂಜ ಬೇಡಿರಿ! ನಾನು ಯಾವನಿಗಾದರೂ ಈಡು. ಅಂದು ಕಾಯಿನನ್ನು ಕೊಂದವನು ಏಳಷ್ಟು ಮುಯ್ಯಿ ಹೊಂದ ಬೇಕೆಂದು ದೇವರು ಹೇಳಿ, ಅವನ ಮೇಲೆ ಯಾರಾದರೂ ಕೈ ಹಾಕದಂತೆ ಅವನನ್ನು ಭದ್ರ ಮಾಡಿದ ಬಳಿಕ, ಅವನಿಗಿಂತ ಏಳು ಪಾಲಷ್ಟು ಹೆಚ್ಚು ಜಾಣನಾದ ನನ್ನನ್ನು ಕೊಂದವನು ಎಪ್ಪತ್ತೇಳಷ್ಟು ಮುಯ್ಯಿ ಹೊಂದ್ಯಾನು. ತನ್ನ ಮಕ್ಕಳು ಮಾಡುತ್ತಿದ್ದ ಆಯುಧಗಳನ್ನೂ, ಅವರ ಕುಶಲತ್ವವನ್ನೂ ನೋಡಿ, ಲೇಮೆಕನು ಬಹಳ ಸೊಕ್ಕಿನವನೂ, ಬಡಾಯಿಗಾರನೂ ಆಗಿದ್ದನು. ತನ್ನ ಪೌರುಷ ಹೇಳಿ, ಹೆಂಡರಿಗೆ ಸಮಾಧಾನ ಪಡಿಸುತ್ತಾನೆ.—ಕಾಯಿನನು ಶಾಪಗ್ರಸ್ತನಾಗಿ ದೇಶಾಂತರ ಪಾಲಾಗಿ ಹೋದದ್ದನ್ನ ಸ್ಮೃತಿಗೆ ತಂದು ಕೊಂಡು, ತಾನು ನರಹತ್ಯಕ್ಕೆ ಅಂಜಿ ಪಶ್ಚಾತ್ತಾಪ ಹೊಂದ ತಕ್ಕದ್ದಾಗಿತ್ತು. ಕಾಯಿನನ ಅನ್ವಯದವರಲ್ಲಿ ಕಡೆದಾಟ ಬಡೆದಾಟ ಪಾಪ ಬಹಳ ನಡೆಯುತ್ತಿತ್ತೆಂದು ಲೇಮೆಕನ ಈ ಮಾತಿನ ಮೇಲೆ ತಿಳಿಯ ಬರುತ್ತದೆ.—ಅವರಲ್ಲಿ ರಾಜನೀತಿಯೂ (ಕಾಯಿನನು ಪಟ್ಟಣ ಕಟ್ಟಿದ್ದು) ಧನುರ್ವಿದ್ಯ

ವೂ, ಶಿಲ್ಪವಿದ್ಯವೂ, ಕಮ್ಮಾರಿಕೆ ಮುಂತಾದ ಪಂಚಾಳರ ಕೆಲಸ ವಿವರಿಸುವ ಅರ್ಥ ಶಾಸ್ತ್ರವೂ (ತುಬಲ್ ಕಾಯಿನನು ಆಯುಧಗಳನ್ನು ಮಾಡಿದ್ದು), ಗೀತವಾದ್ಯವನ್ನು ಕಲಿಸುವ ಗಂಧರ್ವವಿದ್ಯವೂ (ಯೂಬಲನು), ಅಕ್ಷರಗಣನೆಯನ್ನ ಮಾಡುವ ಛಂದಸ್ಸೂ (ಲೇಮೆಕನು ಹೇಳಿದ ಗೀತ) ಉತ್ಪತ್ತಿಯಾಗ ಪ್ರಾರಂಭವಾಯಿತು. ಈ ವಿದ್ಯಚಮತ್ಕಾರಗಳು ಮನುಷ್ಯರನ್ನ ಮೃಗಗಳಿಂದ ವಿಶೇಷಿಸುವ ದೇವರ ದಾನಗಳು. ಆದರೆ ಅವರು ಕೆಟ್ಟವರಾಗಿ, ತಮ್ಮ ಸುಖಭೋಗದ ಉತ್ತರೋತ್ತರಕ್ಕಲ್ಲದೆ, ದೇವರ ಸ್ತೋತ್ರ ಸ್ತುತಿಗಾಗಿ, ಆತನ ಸೇವೆಗಾಗಿ, ಅವನ್ನ ಬಳಿಸಿ ಕೊಳ್ಳಲಿಲ್ಲ. ವಿದ್ಯಚಮತ್ಕಾರ ಅಧಿಕವಾಯಿತು. ಭಯಭಕ್ತಿ ಊನವಾಯಿತು. ಈ ವಂಶಾವಳಿಯಲ್ಲಿ ಮೊದಲಿನವನೂ ಕಡೆಯವನೂ ನರಹತ್ಯಗಾರನು.— ಕಾಯಿನನ ವಂಶಾವಳಿಯ ಈ ಏಳು ತಲೆಗಳ ಹೊರ್ತು, ಜಲಪ್ರಳಯದವರಿಗೆ ಇನ್ನು ಕೆಲವು ಆಗಿರ ಬೇಕು. ಪ್ರಸಿದ್ಧ ತಲೆಗಳು ಮಾತ್ರ ಬರದವೆಂದು ನೆನಸ ಬಹುದು.

c) ಸೇಥನ ಜನನ. ೪, ೨೫. ೨೬.

ಕಾಯಿನನ ಸಂತತಿಯವರು ಸರ್ಪದ ಬೀಜದವರು. — ಸೇಥನ ವಂಶದವರು ಸ್ತ್ರೀ ಬೀಜದವರು. — ಹಾಬೆಲನು ಸಂಹಾರವಾದನು, ಕಾಯಿನನು ಕೊಲೆಗಾರನಾಗಿ ಕೆಟ್ಟನು. ಹೀಗೆ ದೀಪ ಆರಿ ಹೋದ ಹಾಗಾದ್ದರಿಂದ, ಚರವಸಗೆಟ್ಟು ಆದಿ ಮನುಷ್ಯರಲ್ಲಿ ರಕ್ಷಣಾಭಿಲಾಷೆ ಮುಣುಗಿತ್ತು. ಆದರೆ ಸೇಥನು ಹುಟ್ಟಿದ್ದರಿಂದ, ಅವರಲ್ಲಿ ಆ ರಕ್ಷಣಾಭಿಲಾಷೆ ತಿರಿಗಿ ತಲೆ ದೋರಿತು. ಸೇಥನು = ಯುದ್ಧಾರ್ಥಟ, ಅಥವಾ ಮುಯ್ಯಿಯಾಳು ಹಾಬೆಲನಿಂದ ಆಗ ತಕ್ಕದ್ದು ಇವನಿಂದ ಆದೀತು ಅಂತ ಈ ಹೆಸರನ್ನು ಇಟ್ಟರು. ಹಿಬ್ರು ಭಾಷೆಯಲ್ಲಿ ಮುಯ್ಯಿಯಾಳನ್ನು ಬಾಳಿಸಿ ಕೊಟ್ಟನು ಎಂಬ ಹಾಗೆ ಯಮಕವದೆ. — ಆದಮನಿಗೆ ಹುಟ್ಟಿದ ಹೆಣ್ಣುಮಕ್ಕಳು ಹೇಳಿರುವದಿಲ್ಲ.

೨೬ ವ. ಎನೋಷ = ಮರ್ತ್ಯನು, ಮನುಷ್ಯನು. ಮನುಷ್ಯರಲ್ಲಿ ಸೇಥನ ಸಂತತಿಯವರು ಯಾವಾಗಲೂ, ಸ್ತ್ರೀ ಬೀಜವು ಸರ್ಪದ ತಲೆ ಬಡಿಯುವದು ಎಂಬ ವಾಗ್ದತ್ತವನ್ನು ಮನಸಿನಲ್ಲಿ ಇಟ್ಟು ಕೊಂಡು, ಇವನಿಂದ ಆದೀತೇನೋ ಎಂದು ಹುಟ್ಟಿದ ಒಬ್ಬೊಬ್ಬ ಮಗನ ವಿಷಯಕ್ಕೆ ಹಂಬಲಿಸಿದರು. ಸೇಥನು ತನ್ನ ಮಗನನ್ನು ನೋಡಿ ಇವನೇ ಮರ್ತ್ಯನು, ಬಲಹೀನ ಮನುಷ್ಯನು, ನಾವು ಹಾರೈಸಿ ಕೊಂಡದ್ದು ಇವನಿಂದ ತೀರಲಿಕ್ಕಿಲ್ಲವೆಂದು ಹೇಳಿ ಹೀಗೆ ನಾಮಕರಣ ಮಾಡಿದನು. ಸೇಥನ ಅನ್ವಯದವರು ಮಣಿದ ಮನಸುಳ್ಳವರು,— ಪಾರಮಾರ್ಥಿಕರು. — ಅವರು ನಿಜ ದೇವಾರಾಧನೆ ಮಾಡ ತೊಡಗಿದರು. ಕರ್ತನ ಹೆಸರನ್ನು) ಸಾಕ್ಷಾತ್ದೇವರು. ಆತನ ಹೆಸರು, ಕಾಣ ಬರುವ ಆತನ ದಿವ್ಯ ಲಕ್ಷಣಗಳ ಸಂಗ್ರಹವಾಗೆದೆ. ಸೃಷ್ಟಿ ಸ್ಥಿತಿ ಲಯಕ್ಕೆ ಕರ್ತನಾಗಿರುವ ಒಬ್ಬನೇ ದೇವರು ಇದ್ದಾನೆಂಬದು ಸರ್ವರಿಗೂ ಗೊತ್ತು ಇತ್ತು. ಆದರೆ ಆ ದೇವರು ನಮ್ಮ ಪಾಪ ಕ್ಷಮಿಸಿ ತಂದೆಯಂತೆ ನಮ್ಮನ್ನು ಪ್ರೀತಿಯಿಂದ ನಡಿಸುವಂಥಾ ಸಮೀಪವಾಗಿರುವಂಥಾ ಕರ್ತನು ಎಂಬುವ ಜ್ಞಾನ ಮನುಷ್ಯರಲ್ಲಿ ಮರೆತು ಹೋಗಿತ್ತು. ಸಾಕ್ಷಾತ್ಕರ್ತನಾದ ದೇವರನ್ನ ಸಾರಿ ಹೇಳುವದು ಅವಶ್ಯವಾಯಿತು. ಕರೆಯುವದಕ್ಕೆ) ೧) ಮಾಡಿದ ಉಪಕಾರಕ್ಕೆ ದೇವರನ್ನ ಸ್ತುತಿಸುವದು; ೨) ತಮಗೆ ಇಲ್ಲದ್ದು ಕೊಡುವ ಹಾಗೆ, ಆತನಿಗೆ ಬೇಡಿ ಕೊಳ್ಳುವದು. ೩) ಆತನನ್ನು ಅರಿಕೆ ಮಾಡಿ ಸಾರಿ ತಿಳಿಸುವದು.—ಈ ದೇಶದಲ್ಲಿಯು ಗುರು ಶಿಷ್ಯರ ಮಾತಿನ ಹಾಗೆ, ಸತ್ಯಮಾರ್ಗವು ಗುಟ್ಟಿನದಲ್ಲ, ಎಲ್ಲರಿಗೆ ಸಾರ ತಕ್ಕಂಥಾದ್ದೇ. ಪಾಪ ಬಲಿತಲ್ಲಿ, ಅದನ್ನ ಹಿಮ್ಮೆಟ್ಟಿಸಲಿಕ್ಕೆ ಹೆಚ್ಚು ಯತ್ನ ನಡೆಯ ಬೇಕು. ಕಾಯಿನನ ವಂಶದವರು ಲೌಕಿಕ ವಿದ್ಯಚಮತ್ಕಾರಗಳಲ್ಲಿ ಪ್ರವೀಣರಾದರು. ಅವರ ಮನಸು ಈ ದೃಶ್ಯವಾದ ಲೋಕದಲ್ಲಿ ಶಿಕ್ಕೊಂಡಿತ್ತು. ಅವರು ಸುಖವೇ ಸ್ವರ್ಗ, ದುಃಖವೇ ನರಕ, ಹೀಗಲ್ಲದೆ ಬೇರೆ ಸ್ವರ್ಗ ನರಕಾದಿಗಳಿಲ್ಲ ಎಂದು ಹೇಳುತ್ತಿದ್ದರು. ಸೇಥನ ಅನ್ವಯದವರು ಈ ಲೋಕದ ಮಾಯೆಗೆ ಬೇಸತ್ತು, ದುಃಖಿಸಿ, ಪರಮ ಗತಿ ಚಿಂತಿಸುತ್ತಿದ್ದರು.

ಉತ್ಪತ್ತಿ. ೫.

d) ಜಲಪ್ರಳಯ ಆಗುವ ವರೆಗೆ ಸೇಥನ ವಂಶದಲ್ಲಿ ಹುಟ್ಟಿದ ಮೂಲಪಿತೃಗಳ ವಂಶಾವಳಿ, ಸಂಧಿ ೫.

೧. ೨ ವ. ಆದಮನ ವಂಶಾವಳಿಯ ಗ್ರಂಥವು ಇದೇ: ಮನುಷ್ಯರೆಂದು) ಆದಮನು (=ಮಣ್ಣಿನವನು, ಹೊಲ) ಎಂಬ ಶಬ್ದಕ್ಕೆ ಹಿಬ್ರುಭಾಷೆಯಲ್ಲಿ ಮನುಷ್ಯನೆಂಬರ್ಥ ಉಂಟು. ಈ ವಂಶಾವಳಿಯ ಬುಡದಲ್ಲಿ ದೇವರ ಹೆಸರು ಅದೆ. ಯಾಕಂದರೆ ಆತನು ವಿಶ್ವವನ್ನು ನಿರ್ಮಿಸಿದ ಸೃಷ್ಟಿಕರ್ತನೂ ತನ್ನ ಮಾರ್ಗದಲ್ಲಿ ನಡೆದ ಈ ಮೂಲಪಿತೃಗಳ ತಂದೆಯೂ ಆಗಿದ್ದಾನೆ (ಲೂಕ. ೩, ೩೮). ಇವರು ಆತನ ಕುಮಾರರು ಎನಿಸುತ್ತಾರೆ. ೬, ೨.

ಮೂಲಪಿತೃಗಳ ಹೆಸರು.	ಅವರ ಕುಮಾರರು.	ಕುಮಾರನು ಹುಟ್ಟಿದಾಗ		ಆಯುಷ್ಯದ ವರ್ಷಗಳು.	ಸೃಷ್ಟಿಯ ಎಷ್ಟನೆ ವರ್ಷದಿಂದ ಎಷ್ಟನೆದರ ವರೆಗೆ ಬದುಕಿದ್ದು.
		ತಂದೆ ಇದ್ದ ಆಯುಷ್ಯ.	ಸೃಷ್ಟಿ ವರ್ಷ.		
೧) ಆದಮನು.	ಸೇಥನು.	೧೩೦	೧೩೦	೯೩೦	೧ — ೯೩೦
೨) ಸೇಥನು.	ಏನೋಷ.	೧೦೫	೨೩೫	೯೧೨	೧೩೦ — ೧೦೪೨
೩) ಏನೋಷನು. . .	ಕೇನಾನನು.	೯೦	೩೨೫	೯೦೫	೨೩೫ — ೧೧೪೦
೪) ಕೇನಾನನು. . . .	ಮಹಲಲೇಲನು.	೭೦	೩೯೫	೯೧೦	೩೨೫ — ೧೨೩೫
೫) ಮಹಲಲೇಲನು. .	ಏರೆದನು.	೬೫	೪೬೦	೮೯೫	೩೯೫ — ೧೨೯೦
೬) ಏರೆದನು	ಹನೋಕನು.	೧೬೨	೬೨೨	೯೬೨	೪೬೦ — ೧೪೨೨
೭) ಹನೋಕನು . . .	ಮೆಥೂಶಲಹನು.	೬೫	೬೮೭	೩೬೫	೬೨೨ — ೯೮೭
೮) ಮೆಥೂಶಲಹನು .	ಲೇಮಕನು.	೧೮೭	೮೭೪	೯೬೯	೬೮೭ — ೧೬೫೬
೯) ಲೇಮಕನು	ನೋಹನು.	೧೮೨	೧೦೫೬	೭೭೭	೮೭೪ — ೧೬೫೧

೧೦) ನೋಹನು. ೧೦೫೬ನೆ ವರ್ಷ ಹುಟ್ಟಿದ್ದು.

ಹಳೆ ಒಡಂಬಡಿಕೇ ಗ್ರಂಥಗಳಲ್ಲಿ ಇಲ್ಲಿ ಅಲ್ಲಿ ಬರುವ ವಂಶಾವಳಿಗಳು ಅಲ್ಪವೆಂದು ಎಣಿಸ ಬೇಡಿರಿ. ಮತ್ತಾಯನು ಲೂಕನು ಸಹ ಒಬ್ಬೊಬ್ಬನು ಅವುಗಳಲ್ಲಿ ಒಂದನ್ನು ತಾವು ಬರೆದ ಸುವಾರ್ತೆಗಳಲ್ಲಿ ಸೇರಿಸಿಕೊಂಡಿದ್ದಾರೆ. ಅವೇ ದಾರ, ಅದರಲ್ಲಿ ಚರಿತ್ರೆಗಳು ಎಂಬ ಮಣಿಗಳು ಪೋಣಿಸಿ ಅವೆ. ಮನುಷ್ಯರು ಹುಟ್ಟಿ ಎಷ್ಟು ವರ್ಷವಾಯಿತೆಂಬದು ಅವುಗಳಿಂದ ನಮಗೆ ತಿಳಿಯ ಬರುತ್ತದೆ. ಹಳೆ ಒಡಂಬಡಿಕೆಯ ಗ್ರಂಥಗಳಲ್ಲಿ ಹೇಳಿರುವ ಚರಿತ್ರೆಯ ವಿಷಯಕ್ಕೂ, ಸರ್ವ ಮನುಷ್ಯರ ಆದಿ ಚರಿತ್ರೆಯ ವಿಷಯಕ್ಕೂ, ಕಾಲಗಣಿತ ಮಾಡಲಿಕ್ಕೆ ಅವು ಬಹಳ ಅನುಕೂಲವಾಗುತ್ತವೆ. ಪಾಪ ಬಹಳ ಹೆಚ್ಚುತ್ತಾ ಹೋದಾಗ್ಯೂ, ಕರ್ತನು ತನ್ನ ವಾಕ್ಯವನ್ನು ನಂಬಿ ಕೊಂಡು ತನ್ನ ಪ್ರಕಟಣೆಗಳನ್ನು ತಿಳಿಯಲಿಕ್ಕೆ ಅರಳಿದ ಬುದ್ಧಿಯುಳ್ಳ ಒಂದು ಬೀಜವನ್ನು ಯಾವಾಗಲೂ ಮನುಷ್ಯರೊಳಗೆ ಉಳಿಸಿದ್ದನ್ನು ಅವು ನಮಗೆ ತೋರಿಸುವವು. ಸರ್ಪದ ತಲೆಯನ್ನು ಜಡಿಯುವ ಆ ಸ್ತ್ರೀ ಬೀಜದ ಕಡೆಗೆ ಅವು ಮನುಷ್ಯರ ಲಕ್ಷ್ಯ ಹರಿಸುವವು. ಈ ವಂಶಾವಳಿಗಳು ಹೆಚ್ಚು ಕಡಿಮೆ ಇಲ್ಲದೆ, ಒಂದಕ್ಕೊಂದು ಸರಿಬೀಳುವದು ಹಳೆ ಮತ್ತು ಹೊಸ ಒಡಂಬಡಿಕೆ ಸತ್ಯ ಎಂಬುದಕ್ಕೆ ಒಂದು ಸ್ಪಷ್ಟವಾದ ದೃಷ್ಟಾಂತ. ಯಾಕಂದರೆ ಸ್ತ್ರೀ ವಂಶಾವಳೀ ವೃಕ್ಷದಲ್ಲಿ ಆದಮನು ಬೇರು, ಕ್ರಿಸ್ತನು ತುದಿ. ಕ್ರಿಸ್ತನು ಬಂದ ಬಳಿಕ, ಹೊಸ ಒಡಂಬಡಿಕೆಯಲ್ಲಿ ಇನ್ನು ವಂಶಾವಳಿಯನ್ನು ಬರಿಯು

ವದು ಅವಶ್ಯವಿರಲಿಲ್ಲ. ಸ್ತ್ರೀ ವಂಶದಲ್ಲಿ ಹುಟ್ಟಿದ ಮೊದಲಿನ ಹತ್ತು ತಲೆಗಳು ಮೇಲೆ ಬರೆದ ವಂಶಾವಳಿಯಲ್ಲಿ ಬಂದವೆ. ಅವು ಆಗುವಷ್ಟರಲ್ಲಿ ೧೬೫೬ ವರ್ಷಗಳು ಗತವಾದವು. ಸೃಷ್ಟಿಗೂ ಜಲಪ್ರಳಯಕ್ಕೂ ನಡುವಿನಲ್ಲಿ ಆದ ವೃತ್ತಾಂತ ವಿಸ್ತಾರವಾಗಿ ತಿಳಿಯದಕ್ಕೆ, ಒಂದು ಸಮುದ್ರ ಅಡ್ಡ ಬಿದ್ದ ಹಾಗಿರುತ್ತದೆ. ಅದನ್ನ ನಮ್ಮನ್ನು ದಾಟಿಸಲಿಕ್ಕೆ ಆ ವಂಶಾವಳಿಯಲ್ಲಿಯ ಹತ್ತು ತಲೆಗಳು ಭೈತ್ರರೂಪವಾಗೆವೆ. ೧೦ ಮಂದಿ ಈ ಮೂಲಪಿತೃಗಳ ದೀರ್ಘಾಯುಷ್ಯ, ನರವಂಶ ಬೇಗ ಕುಡಿ ಇಟ್ಟು ಹಬ್ಬುವಂತೆ, ದೇವರು ನೇಮಿಸಿದ್ದು. ಮತ್ತು ಅದು ಆ ಆದಿಕಾಲಕ್ಕೆ ಸರಿ ಬರುವಂಥಾದ್ದು. ಯಾಕಂದರೆ ಆವಾಗ ಮನುಷ್ಯರು ಪಾಪದಿಂದ ಈಗಿನಷ್ಟು ಬಲ ಕುಂದಿದ್ದಿಲ್ಲ.—ಅಕ್ಷರದವಿದ್ಯ ಇನ್ನು ಗೊತ್ತಿಲ್ಲದಿದ್ದರೂ, ಸೃಷ್ಟಿ ಮೊದಲಾದದ್ದನ್ನ ನಮಗೆ ವಿವರಿಸಿ ಹೇಳುವ ಆದಿ ಸಂಪ್ರದಾಯವು ತಪ್ಪದೆ ನಡೆಯುತ್ತಾ ಬಂತೆಂದು ಘಟ್ಟಿ ಭರವಸ ಹಿಡಿಯಲಿಕ್ಕೆ ಆ ದೀರ್ಘಾಯುಷ್ಯವೇ ನಮಗೆ ಆಧಾರ. ಹ್ಯಾಗಂದರೆ ಆದಮನಿಂದ ಹಿಡಿದು ಅಬ್ರಹಾಮನ ವರೆಗೆ ಕಳೆದು ಹೋದ ೨೦೦೦ ವರ್ಷಗಳಲ್ಲಿ ಆದಿ ಸಂಪ್ರದಾಯ ಇಬ್ಬರ ಬಾಯ್ಯಲ್ಲಿ ಮಾತ್ರ ಬಂದಿರ ಬಹುದು. ಒಬ್ಬರಿಗೊಬ್ಬರು ಸಮಕ್ಷ ಹೇಳಿರ ಬಹುದಾಗಿ ತೋರುತ್ತದೆ. ಆದಮನನ್ನು ಮೊದಲುಗೊಂಡು ಎಂಟನೆ ತಲೆಯವನಾದ ಮೆಥೂಶಯೇಲನ ಸಂಗಡ ಅವನು ಇನ್ನು ೧೦೦ ವರುಷ ಇದ್ದನು; ನೋಹನ ಸಂಗಡ ಆದಮನ ಮರಿಮಗನಾದ ಏನೋಷನು ಇನ್ನು ೮೪ ವರುಷ ಇದ್ದನು. ಮತ್ತು ನೋಹನು ಅಬ್ರಹಾಮನ ತಂದೆಯಾದ ತೇರಹನ ಕೂಡ ೧೨೮ ವರ್ಷ ಇದ್ದನು. ಹೀಗಾದ ಮೇಲೆ, ನೋಹನು ತನಗಿಂತ ಹಿಂದಿನ ಏಳು ತಲೆಯವರಿಂದ ಆದ ವೃತ್ತಾಂತ ಕೇಳಿರ ಬಹುದು. ಇದಲ್ಲದೆ ತನ್ನ ಮುಂದಿನ ಒಂಭತ್ತು ತಲೆಯವರ ಸಂಗಡ ಮಾತಾಡಿ, ಹಿರಿಯರಿಂದ ತನಗೆ ತಿಳಿಯ ಬಂದ ಸಂಪ್ರದಾಯ ತಿಳಿಸಿರ ಬಹುದು.—ಆ ಮೂಲಪಿತೃಗಳು ಬಹಳ ದಿವಸ ಬಾಳಿದಾಗ್ಯೂ, ಈ ಲೋಕದಲ್ಲಿ ತಾವು ಹೂವಿನಂತೆ ಬಾಡಿ ಹೋಗುವದನ್ನು ಕಂಡು, ತಮಗೆ ಮೆಟ್ಟು ಆಗುವದಿಲ್ಲವೆಂದು ತಿಳಿದು ಪರದೇಶಿಗಳಂತೆ ಇದ್ದರು. ಅದರಿಂದ ಅವರು ಆ ನಿತ್ಯ ಬದುಕನ್ನು ಹಾರೈಸುವವರಾದರು; ಆ ನಿತ್ಯ ಮನೆಯ ಕಡೆಗೆ ಅವರ ಮನಸು ತಿರುಗುವಂಥಾದಾಯಿತು.

೩ ವ. ತನ್ನ ಹೋಲ್ವಿಕೆಯಾಗಿ ತನ್ನ ಛಾಯೆಯಾಗಿ) ಆದಮನು ಪಾಪಿಷ್ಟನಾದ್ದರಿಂದ, ಅವನ ಮಗನು ಸುಧಾ ಪಾಪಿಯಾದ ಮನುಷ್ಯನಾಗಿದ್ದನು. ದೇವರು ಆದಮನಿಗೆ ಕೊಟ್ಟ ಭಾಗ್ಯದಲ್ಲಿ ಬಹಳ ಕಳೆದು ಹೋಗಿತ್ತು; ಬಾಕಿ ಸ್ವಲ್ಪ ಉಳಿದಿತ್ತು. ತಂದೆ ತಾಯಿಗಳ ಬದಕು ಮಕ್ಕಳಿಗೆ ಬರುವದು ಹ್ಯಾಗೋ ಹಾಗೆ ಅವರ ಕೆಟ್ಟ ಭಾವ ಗುಣಾದಿಗಳು ಮಕ್ಕಳಿಗೆ ಹತ್ತುವವು. ಮರಣವು ಎಲ್ಲರಲ್ಲಿ ವ್ಯಾಪಿಸಿ ಅದೆ (ರೋಮಾ. ೫, ೧೨).

೨೧—೨೪ ವ. ದೇವರ ಸಂಗಡ) ಹನೋಕನು ದೇವರ ಐಕ್ಯದಲ್ಲಿ ಬಹಳ ನೆಲೆಗೊಂಡಿದ್ದನು. ಅವನು ಅಕ್ಷರದ ವಿದ್ಯ ಗಣಿತವಿದ್ಯ ಜೋತಿಷ್ಯವಿದ್ಯ ಮೊದಲು ತಿಳಿಸಿದನಂತೆ ಸಂಪ್ರದಾಯ ಉಂಟು. ಅವನು ಪ್ರವಾದಿಸಿದನು (ಯೂದ. ೧೪, ೧೫). ದೀಕ್ಷಿತನೂ ಪರಿಶುದ್ಧನೂ ಆದವನು. ಅವನು ಈ ಮೂಲಪಿತೃಗಳಲ್ಲಿ ದೀಪವೇ.—ಪಡೆದನು) ಮದಿವೆಯ ಸ್ಥಿತಿ ಪರಿಶುದ್ಧವಾದದ್ದು; ಸಂಸಾರಕ್ಕೆ ಅಂಜಿ ಓಡಿ ಹೋಗಿ, ತಪಸ್ಸು ವಿರಕ್ತಿ ನಡಿಸುವದರಲ್ಲಿ ಏನೂ ಪುಣ್ಯವಿಲ್ಲ.—ಅವನನ್ನು ತಕ್ಕೊಂಡನು) ತನ್ನ ಹತ್ತರ ಶೇರಿಸಿ ಕೊಂಡನು. ಮರಣದ ಭಯ ಅವನ ಮೇಲೆ ಒತ್ತರಿಸಿ ಬರಲಿಲ್ಲ; ಅವನು ಪ್ರಾಣ ದಣ ಕೊಂಡು, ದೇಹವನ್ನು ಅಗಲಿ ಹೋಗಲಿಲ್ಲ; ಈ ಜೀವ ಎಂಬ ಬಿಡಾರವನ್ನು ಬಿಟ್ಟು ಒಂದು ಭಾಗ್ಯವುಳ್ಳ ಸ್ಥಿತಿಯಲ್ಲಿ ಶೇರಿದನು. ಅವನು ಅಪೊಸ್ತಲನಾದ ಪಾಲನು ಅಪೇಕ್ಷಿಸಿದಂತೆ (೨ ಕೊರಿ. ೫, ೪. ೧ ಕೊರಿ. ೧೫, ೫೧. ೧ ಥೆಸ್ಸ. ೪, ೧೭.) ಈ ಶರೀರ ಎಂಬ ಅಂಗಿಯನ್ನ ತೆಗೆಯದೆ, ಅದರ ಮೇಲೆ ಅಮರತ್ವವೆಂಬ ಶಲ್ಲೆ ಹೊದ್ದು ಕೊಂಡನು. ಹೊದ್ದು ಕೊಳ್ಳುವಷ್ಟರಲ್ಲಿ ಆ ಶರೀರ ಎಂಬ ಅಂಗಿ ರೂಪಾಂತರವಾಯಿತು. ಮನುಷ್ಯರು ಪಾಪದಲ್ಲಿ ಬೀಳದೆ ಇದ್ದರೆ, ಈ ಪ್ರಕಾರವಾಗಿ ಮೃತಿ ಹೊಂದದಲೇ, ಪರಲೋಕದಲ್ಲಿ ಶೇರುತ್ತಿದ್ದರು.—ಸಾವು ಸ

ತ್ತು ಎದ್ದು ಪರಲೋಕದಲ್ಲಿ ನಿತ್ಯಜೀವ ಹೊಂದುತ್ತೇವೆಂಬ ಗ್ಞಾನ ಈ ಮೂಲಪಿತೃಗಳಲ್ಲಿ ಒಂದು ಚಿಕ್ಕೆಯಂತೆ ಹೊಳೆದು, ಅವರ ಕಷ್ಟ ಎಂಬ ಕತ್ತಲೆ ಸ್ವಲ್ಪ ಹರಿಸುತ್ತಿತ್ತು. ಆದರೆ ಯೇಸು ಕ್ರಿಸ್ತನ ಉತ್ಥಾನದಿಂದ ಆ ಗ್ಞಾನವು ವಿಶ್ವಾಸಿಗಳಲ್ಲಿ ಸೂರ್ಯನಂತೆ ಮೂಡಿ, ಎಲ್ಲಾ ಸಂಶಯ ಎಂಬ ಅಂಧಕಾರವನ್ನು ಓಡಿಸುವದು.

೨೮. ೨೯ ವ. ಪಾಪ ತುಂಬಿದ ಈ ಲೋಕದಲ್ಲಿ ಭಕ್ತರು ಇದ್ದು ಬಹಳ ದಣಿಕೊಳ್ಳುವರು. ನಡೆಯುವ ಕೆಡಕನ್ನ ಕಂಡು ಬಹಳ ನೊಂದು ಕೊಳ್ಳುತ್ತಾ, ಪಾಪವನ್ನು ತೆಗೆದು ಹಾಕಿ ರಕ್ಷಿಸ ಬರುವ ದೇವರ ದಾರಿಯನ್ನು ನೋಡುವರು.—ಅಷ್ಟರೊಳಗೆ ಹೆಚ್ಚಿದ್ದ ಪಾಪ ಕೆಡಕು ಲೇಮಕನನ್ನು ಬಹಳ ನೋಯಿಸುತ್ತಿತ್ತು. ದೇವರು ಇಂಥಾ ಕೆಟ್ಟತನ ಇನ್ನು ಎಷ್ಟು ದಿವಸ ಸೈರಿಸ್ಯಾನು? ಅಳತೆ ತುಂಬಿತು, ಶಿಕ್ಷೆ ಮಾಡುವ ಸಮಯ ಬಂತೆಂದು ಲೇಮೆಕನು ತನಗೆ ಹುಟ್ಟಿದ ಮಗನೇ ಆ ಸರ್ಪದ ತಲೆ ಬಡಿಯುವವನು ಆಗಿದ್ಧಾನೆ ಎಂದು ನೆನಿಸಿ ಕೊಂಡನು. ನೋಹನು=ಶಾಂತಿ; ಶಾಂತಿಯವನು ನಮ್ಮನ್ನು ಶಾಂತ ಪಡಿಸುವನು ಎಂಬಂತೆ ಯಮಕವದೆ. ಕೆಲಸಕ್ಕ್ಯೋಸ್ಕರ,—ಕಷ್ಟಕ್ಕ್ಯೋಸ್ಕರ) ಕೆಟ್ಟ ಜನರೊಳಗೆ ಇದ್ದು, ಅವರಿಂದ ಅಪಹಾಸ್ಯ ಉಪದ್ರ ಮಾಡಿಸಿ ಕೊಂಡು, ಅವರ ಕೆಡಕಿನ ಸಂಚುಗಳನ್ನು ಮುರಿಯುವದೊಂದು; ದೇವರು ಭೂಮಿಯ ಮೇಲೆ ಶಾಪ ಇಟ್ಟದರಿಂದ, ಪ್ರಪಂಚ ಸಂಸಾರಗಳ ಭಾರ ತಾಪಗಳು ನೆಲಕ್ಕೆ ಒತ್ತುವದೊಂದು, ಹೀಗೆ ಎರಡು ಕಡೆಯಿಂದ ಭಕ್ತರಿಗೆ ಕಷ್ಟ ಬರುತ್ತಿತ್ತು. ಅದು ಕಾರಣ ಪಾರಗಾಣುವದು ಬಹಳ ಘೋರವಾಗಿತ್ತು. ನೋಹನು ಈ ತಾಪತ್ರಯಗಳನ್ನೆಲ್ಲಾ ಪರಿಹರಿಸಿ ಶಾಂತಿ ಮಾಡುವನು ಅಂತ ಲೇಮಕನು ನೆನಿಸಿದನು. ತಾಳಿ ಕೊಳ್ಳುವದಕ್ಕೆ, ಮೇರೆ ಬಂತು. ದೇವರ ಶಿಕ್ಷೆ ಆಗುವ ದಿವಸ ತುಂಬಿದವು. ದೇವರು ಜಲಪ್ರಳಯ ಕಳುಹಿಸಿ, ಪಾಪಿಷ್ಟರನ್ನು ನಾಶನ ಮಾಡ ಬೇಕಾಯಿತು. ಆದರೆ ರಕ್ಷಣೆಗೆ ಕಾಲ ಇನ್ನು ಬಂದಿದ್ದಿಲ್ಲ. ಲೇಮೆಕನೂ, ಅವನ ತಂದೆಯಾದ ಮೆಥೂಶಲಹನೂ, ಜಲಪ್ರಳಯ ಬಾರದಕ್ಕಿಂತ ಸ್ವಲ್ಪ ದಿವಸ ಮುಂಚೆ ತೀರಿ ಹೋದರು (ಯೆಶ. ೫೭, ೧).

D) ಜಲಪ್ರಳಯ. ೬—೯.

a) ಅದರ ಕಾರಣ. ೬, ೧—೪.

೧. ೨ ವ. ಅವರು ಚೆಲ್ವೆಯರೆಂದು ತಾವು—ಮನುಷ್ಯರ ಕುಮಾರ್ತೆಗಳನ್ನು) ಇವರು ಮುಖ್ಯವಾಗಿ ಕಾಯಿನನ ವಂಶದವರು. ಅವರು ಪಾಪದಲ್ಲಿ ಬಿದ್ದ ಆದಮನನ್ನು ವಿಶೇಷವಾಗಿ ಹೋಲುತ್ತಿದ್ದರು. ಅವರಲ್ಲಿ ಬಹಳ ಮಂದಿ ಚೆಲ್ವೆಯರು ಇದ್ದರೆಂದು ಕಾಣುತ್ತದೆ (೪, ೨೨). ದೇವರ ಕುಮಾರರು) ಇವರು ಸೇಥನ ಸಂತತಿಯವರು.—ಈ ಹೆಸರು ಅವರಿಗೆ ಬಂದದ್ದು ಯಾಕಂದರೆ: ಅವರು ದೇವರ ವಾಕ್ಯವನ್ನು ನಂಬಿ ಕೊಂಡು, ಆದಮನಿಂದ ತಮಗೆ ಪರಂಪರೆಯಾಗಿ ಬಂದ ಪಾಪದ ಭಾವವನ್ನ ಕಳೆಯುತ್ತಾ ಇದ್ದು, ದೇವರನ್ನು ತಿರಿಗಿ ಹೆಚ್ಚಾಗಿ ಹೋಲುವವರಾಗಿ, ಆತನ ಮಕ್ಕಳು, ಆತನ ಸಂತತಿ ಆದರು. ಇದರ ದೆಶೆಯಿಂದ ಅವರ ವಂಶಾವಳೀ ವೃಕ್ಷದ ಮೂಲ ದೇವರೇ (೫, ೧—೨). ಆದರೆ ಕಾಯಿನನ ಅನ್ವಯದವರು ಪಾಪದ ಭಾವವನ್ನ ಬೆಳೆಯಗೊಟ್ಟು, ದೇವರನ್ನ ಅಗಲುತ್ತಾ ಹೋದಂತೆ, ದೇವರ ಛಾಯೆ ಸುಧಾ ಕಡಿಮೆ ಆಗುತ್ತಾ ಹೋಯಿತು. ಮಾಂಸವಾದ ಖರೆ ನರಭಾವ ಮಾತ್ರ ಅವರಲ್ಲಿ ಉಳಿಯಿತು. ಈ ಕಾಯಿನನವರೂ ಸತ್ಯವಾದ ದೇವರನ್ನ ಅರಿತರು ಸರಿ! ಆದಾಗ್ಯೂ ಆತನಿಗೆ ನಡಕೊಳ್ಳದೆ, ಆತನ ವಾಕ್ಯವನ್ನ ಮನಸಿಗೆ ತಂದು ಕೊಳ್ಳದೆ ಇದ್ದರು. ಆ ಸೇಥನವರು ದೇವರಿಂದ ಗುರುಪಟ್ಟಾಭಿಷೇಕ ಮಾಡಿಸಿಕೊಂಡದ್ದನ್ನು(೧ಯೋಹ. ೨, ೨೦.) ಅಲಕ್ಷ್ಯ ಮಾಡಿ, ತಮ್ಮ ಮಾನ ಕಾಯದೆ, ಆ ಕೆಟ್ಟ ಮನುಷ್ಯರ ಸಂಗಡ ಸಲಿಗೆ ಹಚ್ಚಿಕೊಂಡು, ತಮಗೂ ಅವರಿಗೂ ಮದಿವೆ ಆಗುವ ಹಾಗೆ ಮಾಡಿದರು. ದುಷ್ಟ ಹೆಂಡರಿಂದ ತಮ್ಮ ಬುದ್ಧಿ, ಮೆಲ್ಲ ಮೆಲ್ಲಗೆ ಕೆಟ್ಟು ಹೋಗಿ, ತಾವು ಅವರ ಸಂಗಡ ಜಲಪ್ರಳಯದ ಶಿಕ್ಷೆಗೆ ಗುರಿಯಾದರು. ಲುಥರನು:

ಉತ್ಪತ್ತಿ. ೬, ೫—೮.

"ಕಾಯಿನನ ವಂಶದವರು ದುಷ್ಟರಾದದಕ್ಕೂ ನೀತಿವಂತರ ಸಂತತಿಯವರು ದೇವರ ಶಿಕ್ಷೆಗೆ ಬೊಗ್ಗಿ ಕೊಳ್ಳದೆ ಸುಖಭೋಗಿಗಳು ಆದದಕ್ಕೂ ಜಲಪ್ರಳಯ ಬಂತು. ಸತ್ಯ ಸಭೆಯವರು ಕೆಟ್ಟು ಹೋದರೆ, ದೇವರ ಶಿಕ್ಷೆ ತಡೆಯದೆ ಬರುವದು". ಮೊದಲೇ ಕತ್ತಲು, ಸತ್ಯ ಭಕ್ತರು ಎಂಬ ದೀಪ ಆರಿ ಹೋದರೆ, ಕತ್ತಲೆ ಎಷ್ಟೋ! ಭಯ ಭಕ್ತಿಯುಳ್ಳವರು ಮನಸು ಬಂದ ಹಾಗೆ, ಕಣ್ಣಿನ ಇಚ್ಛೆಗೆ ಬರೆ ಚೆಲ್ವಿಕೆ ನೋಡಿ ಮದಿವೆ ಮಾಡಿದರೆ, ನಷ್ಟ ಪಡುವವರಾಗುತ್ತಾರೆ. ಬುದ್ಧಿ ಇಲ್ಲದ ಚೆಲ್ವಿ ಭಂಗಾರದ ಮೂಗತಿ ಇಟ್ಟ ಹಂದಿಯಂತೆ.—ದುಷ್ಟ ಬುದ್ಧಿಯುಳ್ಳಾಕೆಗೆ ಚೆಲ್ವಿಕೆ ಒಪ್ಪುವದಿಲ್ಲ.

೩ ವ. ನನ್ನ ಆತ್ಮವು ಮನುಷ್ಯನೊಳಗೆ ಯಾವಾಗಲು ವಿವಾದ ಮಾಡುವದಿಲ್ಲ, ನ್ಯಾಯತೀರಿಸುವದಿಲ್ಲಿ, ಶಿಕ್ಷಿಸುವದಿಲ್ಲ.—ಯಾಕಂದರೆ ಅವನೂ ಮಾಂಸವೇ) ದೇವರನ್ನು ಹೋಲುವ ಮನುಷ್ಯರು ಪಶುಗಳಂತೆ ಆತನನ್ನು ಅರಿಯಲಾರದಂಥಾ, ಪರಮಾರ್ಥವನ್ನು ಹುಡುಕಲಾರದಂಥಾ, ದೃಷ್ಯವಾದ ಲೋಕದಲ್ಲಿ ಮುಣುಗಿದಂಥಾ ಜೀವಿಗಳಾದರು. ಅದು ಕಾರಣ (ಯೋಹಾ. ೧೬, ೮.) ಮನುಷ್ಯರೊಳಗೆ ಮನೋಸಾಕ್ಷಿಯ ಮುಖಾಂತರ ಶಿಕ್ಷಾಕಾರ್ಯ ನಡಿಸುತ್ತಿದ್ದ ಕರ್ತನ ಆತ್ಮನು ನೊಂದು ಕೊಂಡು, ಅವರನ್ನ ಬಿಟ್ಟು ಹೋಗಿ, ಮನಸು ಕಠಿಣವಾಗುವದು ಶಿಕ್ಷೆಯ ಆರಂಭ. ಪರಿಶುದ್ಧಾತ್ಮನನ್ನು ದುಖ್ಖ ಪಡಿಸ ಬೇಡಿರಿ! (ಎಫೆಸ. ೪, ೩೦). ಆದರೆ ದೇವರು ದೀರ್ಘಶಾಂತಿಯುಳ್ಳಾತನಾಗಿರುವದರಿಂದ, ಪಶ್ಚಾತ್ತಾಪ ಪಡಲಿಕ್ಕೆ ೧೨೦ ವರುಷ ಸಾವಕಾಶವಾಗಲೆಂದು ಆಯಕಟ್ಟು ಮಾಡಿದನು.

೪ ವ. ಆ ದಿವಸಗಳಲ್ಲಿ ಭೂಮಿಯ ಮೇಲೆ ರಾಕ್ಷಸರು ಇದ್ದರು; ಮತ್ತು ದೇವರ ಕುಮಾರರು ಮನುಷ್ಯರ ಕುಮಾರ್ತೆಗಳಲ್ಲಿ ಹೋಗುವವರಾದ ಬಳಿಕ, ಇವರು ಅವರಿಗೆ (ಕುಮಾರರನ್ನು) ಹೆತ್ತರು. ಇವರೇ ಪೂರ್ವ ಕಾಲದಿಂದ ಹೆಸರುಗೊಂಡ ಪರಾಕ್ರಮಶಾಲಿಗಳು.—) ದೇವರ ಶಿಕ್ಷೆ ಬೇಗ ಬರುವದಕ್ಕೆ ರಾಕ್ಷಸರು ಹೆಚ್ಚಿದ್ದು ಮತ್ತೊಂದು ಕಾರಣ. ಕಾಯಿನನ ಸಂತತಿಯವರಲ್ಲಿ ಅಂಥವರು ಹಲವು ಕಾಲದಿಂದ ಇದ್ದದ್ದು ಅಪರೂಪವಲ್ಲ. ಆದರೆ ಅವರು ಬೇರೊಂದು ಕಡೆಯಿಂದ ಸಹ ಹುಟ್ಟಿ ಬಂದು ಹೆಚ್ಚಾದರು. ಹ್ಯಾಗಂದರೆ: ದೇವರ ಭಕ್ತರು ಕೆಟ್ಟವರ ಹೆಣ್ಣು ಮಕ್ಕಳನ್ನು ಮದಿವೆ ಮಾಡಿ ಕೊಂಡು, ಬೀಗತನ ಮಾಡಿದರು. ಇವರಿಂದ ಹುಟ್ಟಿದವರೂ ರಾಕ್ಷಸರಾದರು. ರಾಕ್ಷಸರು ಅಂದರೆ ಅತ್ಯಧಿಕ ಬಲವುಳ್ಳಂಥಾ, ದೀರ್ಘದೇಹಿಗಳಾದಂಥಾ ಪುರುಷರು. ಅವರು ಉಳಿದ ಜನರನ್ನು ಸುಲು ಕೊಳ್ಳುತ್ತಾ ಸಂಹರಿಸುತ್ತಾ ಇದ್ದದರಿಂದ, ಅವರ ಭಯ ಬಹಳ ಇತ್ತು. ಈ ಪರಿ ಹೆಸರುಗೊಂಡರು. ಇದು ಆಗಿ ೧೦೦೦ ವರ್ಷ ಆದನಂತರ, ಮೋಸೆಯ ಕಾಲಕ್ಕೆ ಅವರ ಸುದ್ದಿ ಇನ್ನು ಇತ್ತು. ಈಗ ಅವರ ಹೆಸರು ಮರೆತು ಹೋಗಿದೆ. ಇವರು ಪೂರ್ವದ ಶ್ರೀಮಂತರು. ದೇವರನ್ನ ಅರಿಯದ ಅನ್ಯ ಜನರು ಅವರ ಸುದ್ದಿ ಕೇಳಿ, ಕಾವ್ಯ ಪುರಾಣ ಮುಂತಾದ ಕೃತಿಗಳಲ್ಲಿ ಹೇಳಿರುವ ರಾಕ್ಷಸರ ಕಟ್ಟುಕಥೆಗಳನ್ನು ಕಲ್ಪಿಸಿ ಕೊಂಡರು. ಅವರು ಕೆಟ್ಟತನದಲ್ಲಿ ಶೂರರು; ತಮ್ಮ ದೇಹದ ಅತಿ ಬಲವ ಕೇಡಿಗೆ ಬಳಸಿದವರು; ಆದ್ದರಿಂದ ಸದ್ಭಕ್ತರು ಅವರು ಮಾಡಿದ್ದಕ್ಕೆ ಮೆಚ್ಚಿ ಕೊಳ್ಳದೆ, ಹೇಸ ತಕ್ಕದ್ದು. ದೇವವಾಕ್ಯ ಅವರ ಸುದ್ದಿ ವಿಸ್ತರಿಸಿ ಹೇಳುವದಿಲ್ಲ. ಮಹಾಭಾರತ ರಾಮಾಯಣ ಮೊದಲಾದ ಕಾವ್ಯಗಳಲ್ಲಿ ಪ್ರಖ್ಯಾತ ಕವೀಶ್ವರರು ನವರಸ ಬೀರುತ್ತಾ ಆ ರಾಕ್ಷಸರ ಹಾಗೂ ದೇವತೆಗಳ ಕಥೆಗಳನ್ನ ಮನೋರಂಜಕವಾಗಿ ಹೇಳಿದ್ದಾದರೂ ನಾವು ಅದರಲ್ಲಿ ಸಂತೋಷ ಕಾಣುವದು ಯುಕ್ತವಲ್ಲ.

b) ಜಲಪ್ರಳಯ ನಿರ್ಣಯಿಸಿದ್ದು. ೬, ೫—೮.

೫ ವ. ಮನುಷ್ಯನ ಕೆಟ್ಟತನ) ಕರ್ಮೇಂದ್ರಿಯಗಳಿಂದ ಅವನು ನಡಿಸುವ ಹೊರಗಣ ದುಷ್ಟ ಕ್ರಿಯೆಗಳು; ಇವು ಕೆಟ್ಟು ಹೋದ ಹೃದಯದಿಂದ ಬರುತ್ತವೆ. ಅಲ್ಲಿಯೇ ಪಾಪದ ಶಲೆ.—ಕುಲಿಮೆಯೇ ಹೃದಯವು, ಕಬ್ಬಿಣ ಮೊದಲಾದ ಸಾಹಿತ್ಯಗಳೇ ಅದರಲ್ಲಿ ಹುಟ್ಟುವ ಆಲೋಚನೆಗಳು, ಬಾತಿಮುಟ್ಟುಗ

ಉತ್ಪತ್ತಿ. ೬, ೯—೨೨.

ಳ್ಳೇ ಮನುಷ್ಯರು ಆಲೋಚನೆಗಳನ್ನು ತೂಗಿ ನೋಡಿ ಪೋಣಿಸಿ ಮಾಡುವ ನಿರ್ಣಯವು.—ಮೊದಲು ಪಾಪಪ್ರಳಯವಾದದ್ದಕ್ಕೆ ಜಲಪ್ರಳಯ ಬಂತು. ಈ ಕೆಟ್ಟ ಸ್ಥಿತಿಯೇ ಮನುಷ್ಯರು ಪಾಪದಲ್ಲಿ ಬಿದ್ದು ಬಯಿಸಿದ ಸ್ವತಂತ್ರದ ದುಃಖಕರವಾದ ಫಲ; ಮನುಷ್ಯರು ಪಾಪಿಷ್ಟರಾಗಿ ಹುಟ್ಟುತ್ತಾರೆಂಬುವದಕ್ಕೆ ದುಃಖಕರವಾದ ದೃಷ್ಟಾಂತ; ನಿರ್ಣಯಿಸಿದ ಶಿಕ್ಷೆ ತಡೆಯದೆ ಬರುವದಕ್ಕೆ ಸಾಕಷ್ಟು ಕಾರಣ. ಆದರೂ ಕರ್ತನು ಕನಿಕರ ಪಡದಲೇ, ಶಿಕ್ಷೆ ಮಾಡಲಿಕ್ಕೆ ಕೈ ಹಾಕಲಾರನು.

೬ ವ. ದೇವರು ತನ್ನಲ್ಲಿ ತನ್ನಷ್ಟಕ್ಕೆ ನಿತ್ಯಭಾಗ್ಯವುಳ್ಳಾತನೂ, ಸರ್ವಜ್ಞನೂ ಆಗಿದ್ದಾನೆ. ಆದ್ದರಿಂದ ಆತನು ಪಶ್ಚಾತ್ತಾಪ ಪಡುವ ಮನುಷ್ಯನಲ್ಲ (ಅಂಕೆ. ೨೩, ೧೯), ನೊಂದು ಕೊಳ್ಳುವವನಲ್ಲ. ಆದರೂ ಆತನು ಮನುಷ್ಯರನ್ನು ತನ್ನ ಪ್ರೇಮಾಸ್ಪದವಾಗಿ ನಿರ್ಮಿಸಿ, ತನ್ನನ್ನು ಅವರಿಗೆ ಪ್ರಕಟ ಮಾಡಿದ್ದಲ್ಲಿ, ಅವರ ಸಂಗಡ ಸಮರಸವಾದಷ್ಟು ಅವರ ಹಾಗೆ ಅನುಭವ ಮಾಡುವವನು ಆದನು. ಕ್ರಿಸ್ತನು ಅವತಾರ ಎತ್ತಿದಲ್ಲಿ ಪೂರ್ಣವಾಗಿ ಮನುಷ್ಯರಿಗೂ ಆತನಿಗೂ ಸಮರಸವಾಯಿತು. ಮನುಷ್ಯರಲ್ಲಿ ಆಗುವ ಕೋಪ ಪಶ್ಚಾತ್ತಾಪ ದುಃಖ ಮುಂತಾದವು ಮೊದಲು ಒಳ್ಳೇಯವು. ಅವು ಕೇಡನ್ನ ನಿವಾರಿಸುವಂಥಾ ದೇವರು ನರಭಾವದಲ್ಲಿ ಇಟ್ಟಂಥಾ ಆವರಣಗಳು. ಹ್ಯಾಗಂದರೆ: ಕೆಡಕು ಆಗದ ಹಾಗೆ ಇಲ್ಲವೆ ಆದ ಕೆಡಕು ತಿರಿಗಿ ಪರಿಹಾರವಾಗುವ ಹಾಗೆ ನರಭಾವದಲ್ಲಿ ಎಚ್ಚರಿಕೆ ಹುಟ್ಟಿ, ಪ್ರಯತ್ನ ಮಾಡಲಿಕ್ಕೆ ಏಳುವಂಥಾದ್ದೇ ಕೋಪ. ಆಗ ಬಾರದ್ದು ಆಯಿತು, ಮತ್ತು ನೆಟ್ಟಗಾಗುವ ಹಂಚಿಕೆ ನೋಡ ಬೇಕು ಎಂದು ಭಾವಿಸುವದೇ ಪಶ್ಚಾತ್ತಾಪ. ಆದರೆ ಮನುಷ್ಯರು ಪಾಪಿಷ್ಟರೂ, ತಮ್ಮನ್ನ ಆಳಿ ಕೊಳ್ಳಲಾರದ ಬಲಹೀನರೂ, ಆದ ದುಸಕೆ, ಮೊದಲು ಒಳ್ಳೇಯವು ಆಗಿದ್ದಂಥಾವು ದೋಷದೊಳಗೆ ಬಂದ ವ್ಯಸನಗಳು ಆದವು. ಅವು ಕಲಕಾದ ನೀರಿನಂತೆ ಅವೆ. ಅದನ್ನ ಸೋಸಿ ಮಣ್ಣು ಕಸ ವಿಂಗಡಿಸಿದರೆ, ತಿಳಿ ನೀರು ಆಗುವದು. ಬರಹದಲ್ಲಿ ದೇವರು ಕೋಪ ಮಾಡಿದನು, ಪಶ್ಚಾತ್ತಾಪ ಪಟ್ಟನು ಎಂಬ ವಾಕ್ಯಗಳು ಬಂದರೆ, ಹೀಗೆ ತಿಳಿಯ ತಕ್ಕದ್ದು. ಮತ್ತು ದೇವರು ಕೆಟ್ಟವರಾದ ನಮ್ಮಿಂದ ತನ್ನ ಆಶ್ರಯ ಹಿಂದೆಗೆಯುವದೂ, ನಮ್ಮ ಕೆಲಸ ಸಾಗದ ಹಾಗೆ, ಅಡ್ಡ ಕಟ್ಟುವದೂ, ನಮಗೆ ಸಿಟ್ಟೆಂದು ಕಾಣುತ್ತದೆ. ಆದರೆ ಆತನು ಪ್ರೀತಿಯಿಂದಲೇ ನಮಗೆ ಬುದ್ಧಿ ಬರಲೆಂದು ಹೀಗೆ ಮಾಡುವನು. ಆತನು ಯಾವದೊಂದನ್ನು ಹಲವು ಕಾಲ ನಡೆಯಗೊಟ್ಟ ಬಳಿಕ, ತನ್ನ ಆಧಾರ ತೆಗೆದು ನಾಶನ ಮಾಡಿ ಶಿಕ್ಷಿಸಿದರೆ, ಪಶ್ಚಾತ್ತಾಪ ಪಡುತ್ತಾನೆಂದು ನಮಗೆ ಭಾವನೆ ಆಗುವದು.

೭ ವ. ಮನುಷ್ಯನನ್ನು ಹಿಡಿದು ಪಶುವಿನ ತನಕ, ಕ್ರಿಮಿಯ ತನಕ, ಆಕಾಶದ ಪಕ್ಷಿಗಳ ತನಕ ಮುಂ.) ಇವು ಮನುಷ್ಯರಿಗಾಗಿರುವದರಿಂದ, ಅವನ ಸುಖ ದುಃಖಗಳಲ್ಲಿ ಪಾಲು ಹೊಂದುವವು.

೮ ವ. ನೋಹನು ದೇವರ ದೃಷ್ಟಿಯಲ್ಲಿ ಕೃಪೆ ಕಂಡು ಕೊಂಡನು.—ಯಾಕೆ? ಅದನ್ನ ಹುಡುಕಿ ಕೊಂಡನು. ಹುಡುಕುವವನಿಗೆ ಶಿಕ್ಕುವದು.

c) ದೇವರು ಜಲಪ್ರಳಯದ ಶಿಕ್ಷೆ ತಿಳಿಸಿ ನೋಹನಿಗೆ ನಾವೆ ಕಟ್ಟ ಹೇಳಿದ್ದು. ೬, ೯—೨೨.

೯ ವ. ನೀತಿವಂತನು = ದೇವರ ಚಿತ್ತಕ್ಕೆ ಸರಿಯಾಗಿರುವವನು; ಸಂಪೂರ್ಣನು = ಒಂದರಲ್ಲಿ ತಪ್ಪದೆ ಎಲ್ಲಾ ಸಂಗತಿಗಳಲ್ಲಿ ದೇವರ ಚಿತ್ತವನ್ನು ಅನುಸರಿಸಿ ನಡೆಯುವವನು. ಈ ಎರಡು ಪದಗಳು ಮನೆಯಲ್ಲಿಯೂ ನೆರೆಯವರಲ್ಲಿಯೂ ಲೋಕದವರಲ್ಲಿಯೂ ಅವನು ತೋರಿಸಿದ ಹೊರಗಣ ನಡಾವಳಿ ಸೂಚಿಸುತ್ತವೆ. ನಡಕೊಳ್ಳುತ್ತಿದ್ದನೆಂಬದು ಲೋಕಕ್ಕೆ ಅಗೋಚರವಾದ ಅವನ ಆತ್ಮ ಜೀವ ತೋರಿಸುತ್ತದೆ. ಕರ್ತನ ಕಣ್ಣು ತನಗೆ ಅಂಜುವವರ ಮೇಲೆ ನೋಡುವದು. ಕೆಟ್ಟು ಹೋದ ಲೋಕದಲ್ಲಿ ಅವರು ಒಬ್ಬರೆ ಇದ್ದರೂ, ಕರ್ತನು ಅವರನ್ನ ರಕ್ಷಿಸ ಬಲ್ಲನು.

೧೧. ೧೨ ವ. ದೃಷ್ಟಿಗೆ) ಲೌಕಿಕರಿಗೆ ಹೀಗೆ ಕಾಣುತ್ತಿದ್ದಿಲ್ಲ. ಅವರು ಸಂಭ್ರಮದಿಂದ ಇರುತ್ತಿದ್ದು ದೇವರ ದೀರ್ಘಶಾಂತಿಯನ್ನ ಲಕ್ಷ್ಯಕ್ಕೆ ತರುತ್ತಿದ್ದಿಲ್ಲ

೬೨ ನೋಹನಿಗೆ ಜಲಪ್ರಳಯದ ಶಿಕ್ಷೆ ತಿಳಿಸಿ ನಾವೆ ಕಟ್ಟ ಹೇಳಿದ್ದು.

ಉತ್ಪತ್ತಿ. ೬, ೯—೨೨.

(೧ ಪೇತ್ರ. ೩, ೧೯—೨೦. ಮತ್ಥ. ೨೪, ೩೭—೩೯). ತಮ್ಮ ಅರಿಷ್ಟ ಸ್ಥಿತಿಯನ್ನ ಅರಿಯಲಾರದ ಕುರುಡರಾಗಿದ್ದರು. ಪಾಪಿಷ್ಟರಲ್ಲಿ ಭಯ ಲಜ್ಜೆ ಹೋಗುವದು ದೇವರ ನ್ಯಾಯತೀರ್ಪ ಸಮೀಪಕ್ಕೆ ಬಂದದ್ದರ ಲಕ್ಷಣ.—ಭೂಮಿ) ಭೂಮಿಯವರು. ಇದು ಜಹಲ್ಲಕ್ಷಣೆ. ಮತ್ತು ಭೂಮಿ ತಾನೆ; ಏನಂದರೆ ಮನುಷ್ಯರು ಅದರ ಹುಟ್ಟುವಳಿ ಪಾಪಕ್ಕಾಗಿ ಪ್ರಯೋಗಿಸಿದರು. ಬಲಾತ್ಕಾರ) ಕೆರೆ ಕಟ್ಟಿ ಕಡಿದರೆ, ನೀರು ಹ್ಯಾಗೆ ಒತ್ತರಿಸಿ ಬರುವದೋ, ಹಾಗೆ ಮನಸನ್ನು ಬಿಗಿ ಹಿಡಿಯದೆ, ಸಡ್ಲ ಬಿಟ್ಟ ಮೇಲೆ, ತಮಗೆ ಇಷ್ಟ ಬಂದಂತೆ, ಮಾಡಿ ಬಲಾತ್ಕಾರ ನಡಿಸುವರು. ತನ್ನ ಮಾರ್ಗ) ದೇವರು ತನಗೆ ನೇಮಿಸಿ ಇಟ್ಟ ಸ್ಥಿತಿ.

೧೩ ವ. ಬಂತು) ಎಲ್ಲಾ ಮಾಂಸವನ್ನ ಸಂಹರಿಸ ಬೇಕೆಂಬದಾಗಿ ನಾನು ಆಲೋಚನೆ ಮಾಡಿ ನಿರ್ಣಯಿಸಿದ್ದೇನೆ. ಮಾಂಸ ಎಂಬ ಶಬ್ದಕ್ಕೆ ಮನುಷ್ಯರೂ ಉಳಿದ ಪ್ರಾಣಿಗಳೂ ಎಂಬರ್ಥ. ದೃಶ್ಯವಾದ ಲೋಕಕ್ಕೆ ಸಂಬಂಧವಾದದ್ದೇ ಮಾಂಸ. ಯದ್ದೃಷ್ಟಂ ತನ್ನಷ್ಟಂ ಎಂಬಂತೆ, ಮಾಂಸವು ನಾಶವಾಗುವಂಥಾದು. ಮನುಷ್ಯರು ಮೊದಲು ಅಮರರಾಗಿದ್ದರು. ಪಾಪದಲ್ಲಿ ಬಿದ್ದು, ಮರ್ತ್ಯರು ಆದದ್ದಕ್ಕೆ, ಮಾಂಸವೆಂದೆನಿಸಿ ಕೊಳ್ಳುವರು. ಪ್ರಾಣಿಗಳು ಮನುಷ್ಯರ ದೆಸೆಯಿಂದ ಇರುತ್ತವೆ. ಆದ ಕಾರಣ ಅವರ ಸಂಗಡ ಅವಕ್ಕೂ ನಾಶನ ಬರುವದು. ಭೂಮಿಯ ಸಂಗಡ) ಮನುಷ್ಯರಿಗೆ ವಾಸಸ್ಥಳವಾಗಿರುವ ಭೂಮಿ ಜಲಪ್ರಳಯದಿಂದ ವಿಕಾರವಾಯಿತು. ಜಲಪ್ರಳಯವಾಗಿತ್ತೆಂಬುವದಕ್ಕೆ ಎರಡು ತರದ ದೃಷ್ಟಾಂತಗಳು ಅವೆ; ಅವು ಯಾವವೆಂದರೆ: ೧) ಭೂಮುಖ ವಿಚಾರಿಸಿ ನೋಡುವಾಗ್ಯೆ, ನೀರು ಭೂಮಿಯ ನೆಲವನ್ನು ಪ್ರಾಚೀನದಲ್ಲಿ ಮುಚ್ಚಿತ್ತೆಂದು ತೋರ ಬರುತ್ತದೆ. ಈಗ ಹೊಲ ತೋಟವಾಗಿರುವ ಭೂಮಿ ಬಂಡೇ. ೨) ಬೇರೆ ಬೇರೆ ಜನಾಂಗಗಳಲ್ಲಿ ಜಲಪ್ರಳಯ ಸಂಬಂಧಿಸುವ ಸಂಪ್ರದಾಯಗಳು. ಈ ದೇಶದಲ್ಲಿ ಈ ಸಂಗತಿಯ ಸಂಪ್ರದಾಯ ಯಾವದೆಂದರೆ: ಬ್ರಹ್ಮನು ನಿದ್ರೆ ಮಾಡುವ ಸಮಯದಲ್ಲಿ ಹಯಗ್ರೀವ ಎಂಬ ರಾಕ್ಷಸನು ವೇದಗಳನ್ನು ಕದ್ದು ಕೊಂಡು ಹೋದನು. ಅವನ್ನ ತಿರಿಗಿ ತಕ್ಕೊಂಡು, ನರರಕ್ಷಣಾರ್ಥವಾಗಿ ವಿಷ್ಣು ಮತ್ಸ್ಯಾವತಾರ ಎತ್ತಿ ಕೊಂಡು ಮರ್ತ್ಯಲೋಕಕ್ಕೆ ಬಂದನು. ಆ ಕಾಲದಲ್ಲಿ ಸತ್ಯವ್ರತ ಎಂಬ ಮನು ಇದ್ದನು. ಸರ್ವೇಶ್ವರನು ಇವನ ಮೇಲೆ ಪ್ರೀತಿ ಮಾಡಿ, ಅವನ ಬಳಿಗೆ ಬಂದು ಹೇಳಿದ್ದೇನಂದರೆ: ಏಳು ದಿವಸಗಳಾದ ಬಳಿಕ, ಮೂರು ಲೋಕಗಳು ಮರಣಸಾಗರದಲ್ಲಿ ಮುಣುಗಿ ಹೋಗುವವು. ಆ ವೇಳೆಯಲ್ಲಿ ನಾನು ನಿನ್ನ ಕಡೆಗೆ ಒಂದು ಹಡಗವನ್ನು ಕಳುಹಿಸುವೆನು. ಅದರಲ್ಲಿ ನೀನು ಹಿತವಾದ ಎಲ್ಲಾ ಸಸ್ಯಾದಿಗಳನ್ನೂ, ಬೇರೆ ಬೇರೆ ಬೀಜಗಳನ್ನೂ, ಪ್ರಾಣಿಗಳಲ್ಲಿ ಒಂದೊಂದು ಜೋಡನ್ನೂ, ಸಪ್ತರಿಷಿಗಳನ್ನೂ ನಿನ್ನ ಸಂಗಾತ ಸೇರಿಸಿ ಕೊಂಡು ಜಲಪ್ರಳಯದ ನಾಶನಕ್ಕೆ ತಪ್ಪಿಸಿ ಕೊಳ್ಳ ಬೇಕು. ದೊಡ್ಡ ಬಿರುಘಾಳಿ ಹಡಗಕ್ಕೆ ಬಡಿದರೆ, ಅದನ್ನು ಒಂದು ಸಮುದ್ರಸರ್ಪದಿಂದ ನನ್ನ ಸಿಂಗಕ್ಕೆ ಕಟ್ಟಿಕೊ. ನಾನು ನಿನ್ನ ಹತ್ತರ ಇದ್ದು, ಸಮುದ್ರದಲ್ಲಿ ಹಡಗ ಎಳೆಯುತ್ತೇನೆ. ಹೀಗೆ ಅಂದ ತರುವಾಯ, ಮತ್ಸ್ಯ ಅದೃಶ್ಯವಾಯಿತು. ಅಷ್ಟರೊಳಗೆ ಸಮುದ್ರ ತನ್ನ ದಂಡೆ ದಾಟಿ, ಎಲ್ಲಾ ಭೂಮುಖದ ಮೇಲೆ ಸೂಸಿ ಬರುವಂಥಾದ್ದು ಆಯಿತು. ಇದಲ್ಲದೆ ಅಘೋರ ಮೇಘಗಳಿಂದ ದೊಡ್ಡ ಮಳೆ ಸುರಿದದ್ದಕ್ಕೆ, ಜಲ ಬಹಳ ಅಭಿವೃದ್ಧಿ ಆಯಿತು. ಆವಾಗ ಅರಸನು ಹಡಗ ಸಮೀಪಕ್ಕೆ ಬರುವದನ್ನು ಕಂಡು, ಸಪ್ತರಿಷಿಗಳ ಸಂಗಡ ಅದನ್ನು ಏರಿ, ಸಸ್ಯಾದಿಗಳನ್ನು ಅದರೊಳಗೆ ಇಡಿಸಿ, ವಿಷ್ಣು ತನಗೆ ಆಜ್ಞಾ ಕೊಟ್ಟ ಪ್ರಕಾರಕ್ಕೆ, ಎಲ್ಲಾ ನಡಿಸಿದನು. ತದನಂತರ ವಿಷ್ಣು ಮತ್ಸ್ಯರೂಪವಾಗಿ ಬಂದಾಗ, ಆ ಮೀನಿನ ಕೊಂಬಿಗೆ ಮನು ಹಡಗ ಕಟ್ಟಿದನು. ಜಲಪ್ರಳಯದ ನೀರು ಇಳಿದು ಹೋದ ಮೇಲೆ, ವಿಷ್ಣು ಹಯಗ್ರೀವನನ್ನು ಹೊಡೆದು ವೇದಗಳನ್ನು ತಕ್ಕೊಂಡನು. ಜಲಪ್ರಳಯ ತೀರಿದಾಗ್ಯೆ, ಆ ಎಂಟು ಮಂದಿ ಹಡಗದಿಂದ ಇಳಿದು ವಿಷ್ಣುವನ್ನು ಆರಾಧಿಸಿದರು. — ಅಮೇರಿಕ ಖಂಡದ ಮೂಲನಿವಾಸಿಗಳಲ್ಲಿ ಈ ವಿಷಯಕ್ಕೆ ಇರುವ ಸಂಪ್ರದಾಯ ಏನಂದರೆ: ನಮ್ಮ ಆದಿ ತಂದೆ ಸಮುದ್ರದಲ್ಲಿ ಮೀನ ಹಿಡಿಯಲಿಕ್ಕೆ ಒಂದು ಒಡ್ಡು ಕಟ್ಟಿದನು. ಆದರಿಂದ ಆ ಸ್ಥಳದಲ್ಲಿ ಮೀನುಗಳು

ಉತ್ಪತ್ತಿ. ೬, ೯—೨೨.

ಬಹಳ ಕೂಡಿ ತುಂಬಿದ್ದಕ್ಕೆ, ನೀರು ಧಡದ ಮೇಲೆ ಸೂಸಿ ಹೋಗಿ ಜಲಪ್ರಳಯವಾಯಿತು. ನಮ್ಮ ತಂದೆ ತನ್ನ ಕುಟುಂಬದವರ ಕೂಡಾ ಒಂದು ನಾವೆಯನ್ನು ಹತ್ತಿ ಪ್ರಾಣಿಗಳಲ್ಲಿಯೂ, ಪಕ್ಷಿಗಳಲ್ಲಿಯೂ, ನಾನಾ ವಿಧವಾದವುಗಳನ್ನು ಅದರಲ್ಲಿ ಇಟ್ಟನು. ನೀರು ಬಹಳ ದಿವಸ ಭೂಮಿಯ ಮೇಲೆ ಇದ್ದನಂತರದಲ್ಲಿ ಒಂದು ಮಂಟಬೆಕ್ಕನ್ನು ಒಣನೆಲ ಹುಡುಕಲಿಕ್ಕೆ ಹೊರಗೆ ಬಿಟ್ಟನು. ಆದರೆ ಅದು ನೀರಲ್ಲಿ ಮುಣುಗಿ ಸತ್ತು ಹೋಯಿತು. ಆ ಮೇಲೆ ನೀರು ಬತ್ತಿ ಹೋಯಿತೇನೊ ನೋಡಲಿಕ್ಕೆ ಒಂದು ಇಲಿ ಹೊರಗೆ ಬಿಟ್ಟನು. ಕೆಲವು ದಿವಸ ಕಳೆದು ಹೋದ ತರುವಾಯ, ಅದು ಬಹಳ ದಣಕೊಂಡದ್ದಾಗಿ ತನ್ನ ಉಗುರುಗಳಲ್ಲಿ ಸ್ವಲ್ಪ ಮಣ್ಣು ಹಿಡಕೊಂಡು ಬಂತು. ಅದನ್ನ ಕಂಡು, ನಮ್ಮ ತಂದೆ ಸಂತೋಷವಾಗಿ ಆ ಮಣ್ಣು ತಕ್ಕೊಂಡು ಒಂದು ಉಂಡೆ ಮಾಡಿ, ನೀರಿನ ಮೇಲೆ ಇಡಲಾಗಿ, ಅದು ಬೆಳದು ಬೆಳೆದು ಕಡೆಗೆ ಸಮುದ್ರದಲ್ಲಿ ಒಂದು ದ್ವೀಪವಾಯಿತು.—ಅಮೇರಿಕಖಂಡದೊಳಗಣ ಮೆಕ್ಸಿಕೋ ಎಂಬ ಸೀಮೆಯಲ್ಲಿ ಖೊಲುಲ ಎಂದು ಒಂದು ಊರು ಉಂಟು. ಅಲ್ಲಿ ಒಂದು ಹಳೆ ದೇವಸ್ಥಾನ ಉಂಟು. ಪುರಾತನರು ಅದನ್ನು ಸಂಬಂಧಿಸುವ ಸಂಪ್ರದಾಯ ಹೇಳಿದ್ದು ಏನಂದರೆ: ಮಹಾ ಜಲಪ್ರಳಯದ ಆಚೆ, ಲೋಕ ಸೃಷ್ಟ್ಯಾರಭ್ಯ ೪೦೦೮ ವರ್ಷ ಆದನಂತರದಲ್ಲಿ ಮೆಕ್ಸಿಕೋ ದೇಶದಲ್ಲಿ ರಾಕ್ಷಸರು ವಾಸ ಮಾಡಿದರು. ಜಲಪ್ರಳಯವಾಗುವ ದಿವಸಗಳಲ್ಲಿ ಗವಿಗಳನ್ನ ಹೊಕ್ಕಂಡಂಥಾ ಏಳ್ವರನ್ನ ಹೊರ್ತಾಗಿ ಅವರೆಲ್ಲರು ವಿನಾಶಗಳಾದರು. ಪ್ರಳಯದ ನೀರು ಇಂಗಿದಾಗ, ಆ ಏಳು ಜನರಲ್ಲಿ ಶಿಲ್ಪವಿದ್ಯೆ ಬಲ್ಲಂಥಾ ಒಬ್ಬನು ಆ ಗುಡಿಯನ್ನು ಕಟ್ಟಿದನು. ಅದರ ತುದಿ ಮುಗಿಲನ್ನು ಮುಟ್ಟುವಷ್ಟು ಎತ್ತರವಾಗ ಬೇಕೆಂದು ಅವನು ಪ್ರಯತ್ನ ಮಾಡಿ ಕಟ್ಟಿದ್ದಕ್ಕೆ, ದೇವತೆಗಳು ಕೋಪಿಸಿ ಬೆಂಕೆ ಮಳೆ ಗರಿಸಿದರು. ಅದರಿಂದ ಆಳುಗಳಲ್ಲಿ ಅನೇಕರು ಸತ್ತರು. ಇದರ ದೆಸೆಯಿಂದ ಕೆಲಸ ಮುಗಿಯದೆ ನಿಂತು ಹೋಯಿತು.—ಈ ಸಂಪ್ರದಾಯಗಳಿಗೂ, ದೇವರ ವಾಕ್ಯದ ಆದಿ ಚರಿತ್ರೆಗೂ, ಚಂದಾಗಿ ಸರಿ ನೋಡೋಣದರಿಂದ, ದೇವರ ವಾಕ್ಯವು ಸತ್ಯವೆಂಬ ಬೆಳಕಿನ ಸ್ಥಾನವಾದ ಸೂರ್ಯವೇ. ಈ ಸಂಪ್ರದಾಯ ಆ ಸೂರ್ಯದಿಂದ ಹೊರಟು ನರಕಲ್ಪನೆ ಎಂಬ ಮಂಜನ್ನು ದಾಟುವಷ್ಟರಲ್ಲಿ ಮಸಕಿದ ಕಿರಣಗಳೇ.

೧೪. ೧೬ ವ. ಗೋಫೆರಮರದ) ಅಂಟು ಇದ್ದಂಥಾ ಕಟ್ಟಿಗೆ, ದೇವದಾರಿನದೇನೋ? ಗೂಡುಗಳನ್ನು) ಪ್ರಾಣಿಗಳನ್ನು ಪ್ರತ್ಯೇಕವಾಗಿ ಇಡಲಿಕ್ಕೆ ಇವು ಬೇಕಾಗಿದ್ದವು.—ಕಿಟಿಕಿ) ಬೆಳಕು ಘಾಳಿ ಬರುವಂತೆ ಬೇಕಾಗಿತ್ತು. ಅದು ನಾವೆಯ ಮೇಲ್ಭಾಗದಲ್ಲಿ ಸುತ್ತುಮುತ್ತಲು ಒಂದು ಮೊಳದಷ್ಟು ಅಡ್ಡಗಲವಾದ ಒಂದು ಕಂಡಿ ಆಗಿರ ಬಹುದು.—ಜಲಪ್ರಳಯವನ್ನು) ಮೊದಲಿನ ನ್ಯಾಯ ತೀರ್ಪು ನೀರಿನಿಂದ, ಕಡೇದು ಬೆಂಕೆಯಿಂದ (೨ ಪೇತ್ರ. ೩, ೬.) ಸುಡಿದು ಹೋಗುವದು) ಈ ಪರಿ ಪೂರ್ವದ ಲೋಕ ಮುಣುಗುವದು. ಅಂದಿನವರ ಸ್ಥಿತಿ (ಮತ್ಥ. ೨೪, ೩೭—೩೯. ೧ ಪೇತ್ರ. ೩, ೧೮—೨೦.) ವರ್ಣಿಸಿ ಅದೆ. ಎಲ್ಲರು ದೇವರಿಗೆ ತಿರಿಗಿ ಬಿದ್ದಿರಲಾಗಿ, ನೋಹನು ಒಬ್ಬನೆ ಕರ್ತನನ್ನು ಘಟ್ಟಿಯಾಗಿ ಹಿಡಕೊಂಡಿದ್ದನು.—ದುಷ್ಟರು ಯಾಕೆ ಕಟ್ಟುತ್ತಿ ಏನಾದೀತು ಎಂದು ಹಾಸ್ಯ ಮಾಡಿದಾಗ್ಯೂ, ಮನಸಿನಲ್ಲಿ ಹೊಯಿದಾಡದೆ ದೇವರು ತನಗೆ ಆಜ್ಞಾಪಿಸಿದಂತೆಯೇ ಆ ಮಹಾ ನಾವೆ ಕಟ್ಟಿದನು. ಅವನಲ್ಲಿ ದೇವರ ಮೇಲೆ ದೊಡ್ಡ ವಿಶ್ವಾಸವಿತ್ತು. ಅವನು ವಿಶ್ವಾಸಮಾರ್ಗದಲ್ಲಿ ನಡೆಯುವವರಿಗೆ ಚಂದಾಗಿ ದಾರಿ ತೋರಿಸುವವನು (ಇಬ್ರಿ. ೧೧, ೭).

೧೮ ವ. ಒಡಂಬಡಿಕೆಯನ್ನ) ಆದಿ ಮನುಷ್ಯರ ಸಂಗಾತ ಒಡಂಬಡಿಕೆ ಆಗಿತ್ತು. ಆದರೆ ಪಾಪದಿಂದ ಬಿದ್ದದ್ದನ್ನು ದೇವರು ಮತ್ತು ಸ್ಥಾಪಿಸುತ್ತಾನೆ. ನಾನು ನಿನ್ನನ್ನು ರಕ್ಷಿಸಿ ಆಶೀರ್ವದಿಸಿ ಕರುಣಿಸುವೆನು ಎಂಬದಾಗಿ ದೇವರು ನೋಹನಿಗೆ ವಚನ ಕೊಡುವದೂ, ನೀನು ನಾವೆಯೊಳಗೆ ಸೇರ ಬೇಕು ಎಂದು ದೇವರು ಅವನಿಂದ ವಿಶ್ವಾಸ ವಿಧೇಯತ್ವ ಕೇಳುವದೂ, ಈ ಎರಡು ಆದದ್ದೇ ಒಡಂಬಡಿಕೆ. ತನ್ನ ಕರುಣಾವಾದ ಕಾರ್ಯವನ್ನು ನೆಟ್ಟಗೆ ತೀರಿಸಲಿಕ್ಕೆ ಈ ಒಡಂಬಡಿಕೆಯ ಆಧಾರ ಬೇಕಾಗಿತ್ತು. ನೋಹನೇ ಎಳೆ ಬಳ್ಳಿ, ದೇವರೇ ತೋಟಗಾರ, ಒಡಂಬಡಿಕೆಯೇ ಹಬ್ಬಲಿಕ್ಕೆ ದೇವ

೭೪ ನೋಹನು ನಾವೆ ಶೇರಿದ್ದೂ ಜಲಪ್ರಳಯ ಪ್ರಾರಂಭವಾದದ್ದೂ.

ಉತ್ಪತ್ತಿ. ೭, ೧—೧೬.

ರು ಅದರ ಬುಡಕ್ಕೆ ನಡಿಸಿದ ಕೋಲು.— ನೀನೂ ನಿನ್ನ ಸಂಗಡ ನಿನ್ನ ಕುಮಾರರು.

೧೯ ವ. ಎಲ್ಲಾ ಮಾಂಸದಲ್ಲಿ) ಮೀನು ಮೊಸಳೆ ಮುಂತಾದ ಜಲಚರಗಳನ್ನೂ, ಭೂಮಿಯೊಳಗೆ ಬದಕಲಾಗುವ ಕ್ರಿಮಿಗಳನ್ನೂ, ಕಾಲಾಂತರದಲ್ಲಿ ಹುಟ್ಟಿದ ಅಡ್ಡ ಜಾತಿಯ ಪ್ರಾಣಿಗಳನ್ನೂ ಕಳೆಯಲಾಗಿ, ಮಿಕ್ಕಾದ ಜೀವಿಗಳು ನೋಹನ ಕೂಡ ನಾವೆಯೊಳಗೆ ಶೇರಿದ್ದು, ಉಳಿಯ ಬೇಕಾಯಿತು. ನಾವೆಯ ಒಳಾಂತರವ ಘನ (ಕುಬಿಕ) ಮೊಳ ವಿಸ್ತಾರವಾಗಿದ್ದ ಮೂಲ, ಅಷ್ಟು ಪ್ರಾಣಿಗಳಿಗೂ, ಅವಕ್ಕೆ ಹಲವು ಕಾಲಕ್ಕೆ ಬೇಕಾದ ಆಹಾರ ಇಡಲಿಕ್ಕೂ, ಸಾಕಷ್ಟು ಸ್ಥಳವಿತ್ತು ಎಂಬದು ವಿದ್ವಾಂಸರು ಗಣನೆ ಮಾಡಿದ್ದರಿಂದ ಸಿದ್ಧಾಂತವಾಯಿತು.

೨೦ ವ. ಜಾತ್ಯನುಸಾರವಾಗಿ ಪಕ್ಷಿಗಳಲ್ಲಿಯು, ಜಾತ್ಯನುಸಾರವಾಗಿ ಮೃಗಗಳಲ್ಲಿಯು— ನಿನ್ನ ಬಳಿಗೆ ಬರ ಬೇಕು) ಅಷ್ಟು ಪ್ರಾಣಿಗಳನ್ನ ನಾವೆಯೊಳಗೆ ಶೇರಿಸುವದು ಬಹು ಕಠಿಣವಾಗಿತ್ತು. ನೋಹನು ಕೆಲವನ್ನ ಅದರೊಳಗೆ ತಂದಿಟ್ಟಿದ್ದಾನು, ಕೆಲವು ತಾವೆ ಬಂದಿದ್ದಾವು.— ಮಿಂಚು ಗುಡುಗು ಆಗಿ, ದೊಡ್ಡ ಮಳೆ ಬರುವ ಹಾಗೆ ಕಂಡರೆ, ಪ್ರಾಣಿಗಳು, ತಮ್ಮ ಜೀವ ಉಳಿಸಿ ಕೊಳ್ಳ ಬೇಕೆಂಬ ಸ್ವಭಾವಪ್ರೇರಣೆಯಿಂದ, ಯಾವದೊಂದೂ ಆಶ್ರಯ ಹುಡಿಕ್ಯಾಡುವವು; ಯಾವಾಗಲೂ ಅಡಿವಿಯಲ್ಲಿ ಇದ್ದಂಥಾವು ತಮ್ಮ ಜೀವಕ್ಕೆ ಅಂಜಿ ಊರುಗಳ ಸಮೀಪಕ್ಕೆ ಬರುವವು; ದನಗಳು ಮನೆಗೆ ಓಡಿ ಬರುವವು: ಇದೊಂದು; ಮೊದಲು ಮನುಷ್ಯರಿಗೆ ಜೀವಿಗಳ ಮೇಲೆ ಇದ್ದಂಥಾ ಜನ್ಯ ಅಧಿಕಾರ ಭಯಭಕ್ತಿಯುಳ್ಳ ನೋಹನಲ್ಲಿ ಹೆಚ್ಚಾಗಿದ್ದೀತು. ಭಯಭಕ್ತಿ ಎಂಬ ಬಿಸಲು ನರಭಾವ ಎಂಬ ಹೂವನ್ನ ಅರಳಿಸುತ್ತದೆ ಅಲ್ಲಿ: ಇದೊಂದು; ಈ ಎರಡರಿಂದ ಈ ಕೆಲಸ ನೋಹನಿಗೆ ಹೌರವಾಯಿತು.

೨೧ ವ. ನೀನು ತಕ್ಕೊಂಡು ನಿನ್ನ ಬಳಿಗೆ ಕೂಡಿಟ್ಟು ಕೊಳ್ಳ ಬೇಕು.

d) ನೋಹನು ನಾವೆಯಲ್ಲಿ ಶೇರಿದ್ದು; ಜಲಪ್ರಳಯ ಪ್ರಾರಂಭವಾದದ್ದು. ೭, ೧—೧೬.

೧ ವ. ಕರ್ತನು) ಹಿಂದಿನ ಸಂಧಿಯಲ್ಲಿ ದೇವರು ಸೃಷ್ಟಿಕರ್ತನಾಗಿಯೂ ಸರ್ವ ಪರಿಪಾಲಕನಾಗಿಯೂ ವಿಶೇಷವಾಗಿ ಮಾತಾಡುವದರಿಂದ, ಅಲ್ಲಿ ಕರ್ತನೆಂಬ ಹೆಸರು ವರ್ತಿಸುವದಿಲ್ಲ. ಇಲ್ಲಿ ತನ್ನ ಮಕ್ಕಳಾದ ನೋಹನ ಕುಟುಂಬದವರನ್ನು ರಕ್ಷಿಸುವ ವಿಷಯಕ್ಕೆ ತಂದೆಯಂತೆ ನುಡಿಯುತ್ತಾನಾದ ಕಾರಣ, ಕರ್ತನೆಂಬ ಹೆಸರು ವ್ಯವಹರಿಸುವದು. ಸೃಷ್ಟಿಯೇ ಮನೆ, ಮನುಷ್ಯರೇ ಮನೇ ಮಕ್ಕಳು. ದೇವರೇ ಮನೆಗೆ ಯಜಮಾನ, ಮಕ್ಕಳಿಗೆ ತಂದೆ. ಮನೆಗೆ ಬೆಂಕೆ ಹತ್ತಿದರೆ, ಮಕ್ಕಳನ್ನು ರಕ್ಷಿಸುವದು ಮೊದಲನೇದು, ಮನೆಯನ್ನು ರಕ್ಷಿಸುವದು ಎರಡನೇದು.—ಈ ಪ್ರಕಾರ ಮನುಷ್ಯರನ್ನು ರಕ್ಷಿಸ ಬೇಕೆಂಬದು ದೇವರಿಗೆ ಮುಖ್ಯ ಚಿಂತೆ ಆಗಿತ್ತು.

೨ ವ. ಶುದ್ಧವಾದ ಎಲ್ಲಾ ಪಶುಗಳಲ್ಲಿ ನಿನಗೆ ಗಂಡು ಹೆಣ್ಣು ಏಳೇಳೂ—ಶುದ್ಧವಲ್ಲದ ಮೃಗಗಳಲ್ಲಿ ಗಂಡು ಹೆಣ್ಣು ಎರಡೆರಡೂ ತಕ್ಕೋ; ಆಕಾಶದ ಪಕ್ಷಿಗಳಲ್ಲಿಯೂ ಗಂಡು ಹೆಣ್ಣು ಏಳೇಳನ್ನು—ತಕ್ಕೊಳ್ಳ ಬೇಕು.

ಶುದ್ಧವಾದ) ಮನುಷ್ಯರು ಪ್ರಾಣಿಗಳ ಚಾವ ಲಕ್ಷಣಾದಿಗಳನ್ನು ನೋಡ ನೋಡುತ್ತ ಇರುವಾಗ್ಯೆ, ಕೆಲವಗಳಿಂದ ತಮಗೆ ಅಸಹ್ಯ ಭಾವ, ಕೆಲವಿಂದ ಸಂತೋಷ ಭಾವ ಆಯಿತು. ಅವು ಮಲಿನವಾದಂಥಾದಕ್ಕೆ, ಇವು ಶುಚಿಯಾದಂಥಾದ್ದಕ್ಕೆ ಸಾದೃಶ್ಯಗಳಾಗಿ, ಎಲ್ಲಾ ಜೀವರಾಶಿಗಳು ಶುದ್ಧವೆಂದು ಅಶುದ್ಧವೆಂದು ಎರಡು ಭೇದವಾದವು. ಈ ಭೇದ ಜಲಪ್ರಳಯದ ಮುಂಚೆ ಆಗಿತ್ತು. ಶುದ್ಧವಾದವುಗಳನ್ನು ಮಾತ್ರ ಕರ್ತನಿಗೆ ಅರ್ಪಿಸ ತಕ್ಕದ್ದಾಗಿತ್ತು. ಅವನ್ನ ಮಾತ್ರ ಭೋಜಿಸ ಬಹುದಾಗಿತ್ತು. ಯಾಕಂದರೆ ಅಶುದ್ಧವೆಂದು ತಮಗೆ ಕಂಡಂಥಾದ್ದನ್ನು ಆತನಿಗೆ ಅರ್ಪಿಸಿದ್ದಾದರೆ, ಆತನನ್ನು ಅಲಕ್ಷ್ಯ ಮಾಡಿದ ಹಾಗಾಗುತ್ತಿತ್ತು.

ಉತ್ಪತ್ತಿ. ೭, ೧—೧೬.

ಒಬ್ಬನ ಮೇಲೆ ಪ್ರೀತಿ, ಬಹಳ ಮಾನ ತೋರಿಸ ಬೇಕೆಂದಿದ್ದರೆ, ಅವನಿಗೆ ಹೀನವಾದದ್ದನ್ನು ಅಲ್ಲ, ಹೆಚ್ಚಿನದನ್ನೇ ಕೊಡುವರು. —ಶುದ್ಧವಾದ ಪ್ರಾಣಿಗಳಲ್ಲಿ ನೋಹನು ಗಂಡು ಹೆಣ್ಣು ಏಳೇಳು ಜೋಡುಗಳನ್ನು ಅಥವಾ ಮೂರು ಜೋಡುಗಳನ್ನು ಮೇಲೆ ಒಂದನ್ನು, ಅಶುದ್ಧವಾದವುಗಳಲ್ಲಿ ಗಂಡು ಹೆಣ್ಣು ಒಂದೊಂದು ಜೋಡನ್ನು ಆರಿಸಿ ಕೊಂಡು ನಾವೆಯಲ್ಲಿ ಶೇರಿಸ ಬೇಕು. ಯಾಕಂದರೆ ಬಲಿ ಅರ್ಪಿಸುವದಕ್ಕೂ, ಭೋಜನಕ್ಕೂ, ಶುದ್ಧವಾದವುಗಳು ಹೆಚ್ಚು ಬೇಕಾಗಿದ್ದವು. ಅಶುದ್ಧವಾದವುಗಳಲ್ಲಿ ಜಾತಿ ಉಳಿಸುವ ಪೂರ್ತಿಗೆ ಮಾತ್ರ ಒಂದೊಂದು ಜೋಡು ಸಾಕಾಗಿತ್ತು. —೬, ೧೯. ೨೦. ವಚನಗಳಲ್ಲಿ ಒಟ್ಟಿಗೆ ಪ್ರಾಣಿಗಳನ್ನು ಜೋಡು ಜೋಡಾಗಿ ನಾವೆಯಲ್ಲಿ ಶೇರಿಸ ಬೇಕು ಎಂದು ಹೇಳಿ ಅದೆ. —ಇಲ್ಲಿ ಶುದ್ಧವಾದವುಗಳಲ್ಲಿ ಎಷ್ಟು ಜೋಡುಗಳನ್ನು, ಅಶುದ್ಧವಾದವುಗಳಲ್ಲಿ ಎಷ್ಟು ಜೋಡುಗಳನ್ನು ತಕ್ಕೊಳ್ಳ ಬೇಕು ಎಂದು ಹೆಚ್ಚು ವಿವರಿಸಿ ಅದೆ. —ಶುದ್ಧ ಅಶುದ್ಧ ಎಂಬ ಭೇದ ಮನಸಿಗೆ ಬಂದಂತೆ ಅಲ್ಲ, ಒಂದೊಂದು ಪ್ರಾಣಿಯ ಭಾವ ಲಕ್ಷಣಗಳಿಗೆ ಅನುಸಾರವಾಗಿ ಮನುಷ್ಯರು ಭಾವಿಸಿದರು. ಅದನ್ನ ದೇವರು ಅಂಗೀಕರಿಸಿದನು.

೭ ವ. ಆಗ ನೋಹನೂ, ಅವನ ಕುಮಾರರೂ, ಅವನ ಹೆಂಡತಿಯೂ, ಅವನ ಕುಮಾರರ ಹೆಂಡರೂ ಸಹಿತವಾಗಿ ಜಲಪ್ರಳಯಕ್ಕೋಸ್ಕರ ನಾವೆಯಲ್ಲಿ ಶೇರಿದರು.

೮. ೯ ವ. ಶುದ್ಧ ಮೃಗಗಳಲ್ಲಿಯೂ, ಅಶುದ್ಧ ಮೃಗಗಳಲ್ಲಿಯೂ, ಪಕ್ಷಿಗಳಲ್ಲಿಯೂ, ಭೂಮಿಯ ಮೇಲೆ ಹರಿದಾಡುವ ಎಲ್ಲವುಗಳಲ್ಲಿಯೂ, ಗಂಡು ಹೆಣ್ಣು ಎರಡೆರಡು, ದೇವರು ನೋಹನಿಗೆ ಆಜ್ಞಾಪಿಸಿದ ಪ್ರಕಾರ, ನೋಹನ ಬಳೀಲಿ ನಾವೆಯಲ್ಲಿ ಶೇರಿದವು.

ಮೃಗಗಳಲ್ಲಿಯೂ) ಅವುಗಳಲ್ಲಿ ಪಶುಗಳು ಬಂದವೆ.

೧೦. ೧೧ ವ. ದೇವರು ಹೇಳಿದ ಆ ಏಳು ದಿವಸ, ಹೊತ್ತು ಮುಣಿಗಿದಾಗ, ಮುಗಿದು, ಎಂಟನೇ ದಿವಸ ಪ್ರಾರಂಭವಾದಾಗಲೆ, ಜಲಪ್ರಳಯ ಬರ ಹತ್ತಿತು. ಇಸ್ರಾಯೇಲನವರಲ್ಲಿ ಯುಗಾದಿ, ದಕ್ಷಿಣಾಯನ ವಿಷುವತ್ತು ಆಗುವ ಕಾಲಕ್ಕೆ, ಆಗುತ್ತಿತ್ತು. ಆದ್ದರಿಂದ ಎರಡನೆ ತಿಂಗಳಿನ ಹದಿನೇಳನೇ ದಿವಸದಲ್ಲಿ = ನವಂಬರ ತಿಂಗಳಿನ ಏಳನೇ ದಿವಸದಲ್ಲಿ ಜಲಪ್ರಳಯ ಬರಲಿಕ್ಕೆ ಆರಂಭವಾಯಿತು. ಅಗಾಧದ) ಭೂಮಿಯ ಅಂತರಾಳದಲ್ಲಿ ನೀರು ಅದೆ. ಭೂಕಂಪ ಮುಂತಾದ್ದರಿಂದ ಆ ನೀರಿಗೆ ಮೇಲೆ ಬರಲಿಕ್ಕೆ ದಾರಿ ಆಯಿತು. ಕೆಳಗಿನಿಂದ ಮೇಲಿನಿಂದ ನೀರು ಬರುತ್ತಿತ್ತು. ಭೂಮಿಯೊಳಗಣ ನೀರಿಗೂ ಆಕಾಶದಲ್ಲಿಯ ನೀರಿಗೂ ಸಂಬಂಧ ಉಂಟು. ಒಂದರಿಂದೊಂದು ಈ ಜಲಗಳು ಏರುವವು, ಅಥವಾ ಇಳಿಯುವವು.

೧೩ ವ. ಅದೇ ದಿವಸದಲ್ಲಿ ನೋಹನೂ ನೋಹನ ಕುಮಾರರಾದ ಶೇಮನೂ, ಹಾಮನೂ, ಯಾಫೇತನೂ, ನೋಹನ ಹೆಂಡತಿಯೂ, ಅವನ ಕುಮಾರರ ಮೂವ್ವರು ಹೆಂಡರೂ ಸಹಿತವಾಗಿ ನಾವೆಯಲ್ಲಿ ಶೇರಿದರು.

೧೪. ೧೫ ವ. ಅವರೂ ತಮ್ಮ ಜಾತ್ಯನುಸಾರವಾಗಿ ಎಲ್ಲಾ ಮೃಗಗಳೂ, ತಮ್ಮ ಜಾತ್ಯನುಸಾರವಾಗಿ ಎಲ್ಲಾ ಪಶುಗಳೂ, ತಮ್ಮ ಜಾತ್ಯನುಸಾರವಾಗಿ ಎಲ್ಲಾ ಪಕ್ಷಿಗಳೂ, ಎಲ್ಲಾ ರೆಕ್ಕೆಯುಳ್ಳಂಥಾವು, ಜೀವದ ಶ್ವಾಸ ಇದ್ದಂಥಾ ಎಲ್ಲಾ ಮಾಂಸದಲ್ಲಿ ಎರಡೆರಡು ನೋಹನ ಬಳೀಲಿ ನಾವೆಯಲ್ಲಿ ಶೇರಿದವು.

೧೬ ವ. ಆಗ ಕರ್ತನು ಅವನ ಹಿಂದೆ ಬಾಗಲನ್ನ ಮುಚ್ಚಿದನು.) ಕರ್ತನು ನಂಬಿಕೆಯುಳ್ಳಾತನು. ಪ್ರಳಯದ ನೀರಿನಿಂದಲೂ, ಶಿಟ್ಟಾದ ಕೆಟ್ಟ ಮನುಷ್ಯರಿಂದಲೂ, ತನಗೆ ನಷ್ಟ ಬಾರದಂತೆ, ನೋಹನು ನಾ

ಉತ್ಪತ್ತಿ. ೭, ೧೭—೨೪. ೮, ೧—೧೪.

ವೆಯಲ್ಲಿ ಭದ್ರವಾಗಿದ್ದನು. ಈ ಮಾತನ್ನು ನಾವು ಒಂದೊಂದು ಸಾಯಂಕಾಲಕ್ಕೆ ನೆನಪಿಗೆ ತಂದು, ಸಮಾಧಾನ ಮಾಡಿ ಕೊಳ್ಳ ತಕ್ಕದ್ದು. ಆತನು ನಮ್ಮ ಜೀವದ ನಾವೆಯ ಬಾಗಲನ್ನ ನಮ್ಮ ಹಿಂದೆ ಮುಚ್ಚಿ, ನಿದ್ರೆ ಮಾಡದೆ ತೂಕಡಿಸದೆ, ನಮ್ಮ ಮೇಲೆ ಕಣ್ಣು ತೆರೆದಿದ್ದಾನೆ. ಪಾಪದ ಮೈಲಿಗೆ ತೆಗೆದು ಹಾಕುವ ಸ್ನಾನದ ನೀರೇ ಜಲಪ್ರಳಯದ ನೀರು; ನಮ್ಮ ಮೇಲೆ ತಪ್ಪು ಹೊರಿಸದಂತೆ, ಮನಸಾಕ್ಷಿಯನ್ನ ಶಾಂತಿ ಪಡಿಸುವ ದೇವರ ಕೃಪಾವಚನವೇ ನಮ್ಮನ್ನು ದಾಟಿಸುವ ನಾವೆ (೧ ಪೇತ್ರ. ೩, ೨೦. ೨೧).

e) ಜಲಪ್ರಳಯ ಪ್ರಬಲವಾದದ್ದು. ೭, ೧೭—೨೪.

೧೭ ವ. ಜಲ ಹೆಚ್ಚಿ ನಾವೆಯನ್ನು ಎಬ್ಬಿಸಿತು; ಅದು ಭೂಮಿಯ ಮೇಲಿಂದ ಏರುವಂಥಾದಾಯಿತು.— ೧೮ ವ. ಆ ನಾವೆ ನೀರಿನ ಮೇಲೆ ತೇಲುತ್ತಿತ್ತು. ೧೯ ವ. ಆಕಾಶಕ್ಕೆಲ್ಲಾ ಕೆಳಗಿರುವ ಉನ್ನತವಾದ ಎಲ್ಲಾ ಬೆಟ್ಟಗಳು ಮುಚ್ಚಿ ಹೋದವು.—೨೦ ವ. ಅದರ ಮೇಲೆ ನೀರು ಇನ್ನು ಹದಿನೈದು ಮೊಳ ಏರಿತು. ಗುಡ್ಡಗಳು ಮುಚ್ಚಿ ಹೋದವು.

೨೧ ವ. ಆಗ ಪಕ್ಷಿಗಳಲ್ಲಿಯೂ, ಪಶುಗಳಲ್ಲಿಯೂ, ಮೃಗಗಳಲ್ಲಿಯೂ, ಭೂಮಿಯ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಗಳಲ್ಲಿಯೂ, ಭೂಮಿಯ ಮೇಲೆ ಸಂಚರಿಸುವ ಎಲ್ಲಾ ಮಾಂಸ ಮನುಷ್ಯರ ಸಹಿತ ಮಡಿದು ಹೋಯಿತು.

೨೩ ವ. ಹೀಗೆ ಮನುಷ್ಯರನ್ನು ಹಿಡಿದು, ಪಶುವೂ, ಕ್ರಿಮಿಯೂ, ಆಕಾಶದ ಪಕ್ಷಿಗಳೂ ಇವುಗಳ ತನಕ, ಭೂಮುಖದ ಮೇಲೆ ಇದ್ದ ಎಲ್ಲಾ ಜೀವರಾಶಿಗಳನ್ನು ಒರಸಿದ್ದು ಆಯಿತು. ಭೂಮಿಯಿಂದ ಅವನ್ನ ಒರಸುವದು ಆಯಿತು.—ನೋಹನೂ—ಉಳಿದರು.

ಟಿಪ್ಪಣಿ: ಮೋಸೆ, ಪ್ರಳಯದ ನೀರು ಉಬ್ಬುತ್ತಾ ಉಬ್ಬುತ್ತಾ ಬಂದದ್ದನ್ನೂ ಒಣ ನೆಲದ ಮೇಲೆ ಬದುಕುವ ಎಲ್ಲಾ ಪ್ರಾಣಿಗಳು ನಾಶವಾದದ್ದನ್ನೂ ಕಣ್ಣಿಗೆ ಕಂಡ ಹಾಗೆ ನೆಟ್ಟಗೆ ವರ್ಣಿಸುತ್ತಾನೆ. ಇಷ್ಟು ನೀರು ಮುಖ್ಯವಾಗಿ ಆ ನಾಲ್ವತ್ತು ದಿವಸದ ದೊಡ್ಡ ಮಳೆಯಿಂದ ಕೂಡಿತು. ಆದರೆ ಆ ೧೫೦ ದಿವಸಗಳ ಅಂತ್ಯದ ಪರ್ಯಂತರ (೮, ೨.) ಸಣ್ಣ ಮಳೆ ಬರುತ್ತಾ ಬರುತ್ತಾ ಇದ್ದ ಮೂಲ, ಅಲ್ಲಿ ತನಕ ನೀರು ಏರುತ್ತಾ ಏರುತ್ತಾ ಬಂತು.

f) ಜಲಪ್ರಳಯದ ಅಂತ್ಯ. ೮, ೧—೧೪.

೧ ವ. ಜ್ಞಾಪಕ ಮಾಡಿ ಕೊಂಡನು) ನಾವೆ ಕಟ್ಟುತ್ತಿರಲಿಕ್ಕೆ ದೇವರು ಹೇಳಿದ ಜಲಪ್ರಳಯ ಬಂದೀತೇನೋ ಎಂಬ ಅನುಮಾನಕ್ಕೆ ನೋಹನು ಕಿವಿ ಕೊಡದೆ, ತನ್ನ ವಿಶ್ವಾಸ ಕಾದು ಕೊಂಡು ಇದ್ದನು. ಆದರೆ ನಾವೆಯಲ್ಲಿ ಸೇರಿದನಂತರ, ಯಥಾ ಪ್ರಕಾರ ದಿನದಿನಕ್ಕೆ ಮೋಡ ಕವಿದು ಮಳೆ ಸುರಿಯುತ್ತಿರ ಬೇಕು, ಭೂಮಿಯಿಂದ ಊಟೇಳುತ್ತಿರ ಬೇಕು, ಹೀಗೆ ನೀರು ಅಳತೆ ಇಲ್ಲದೆ ಹೆಚ್ಚುತ್ತಿರ ಬೇಕು. ನೋಹನು ೧೫೦ ದಿವಸಗಳು ನಾವೆಯಲ್ಲಿ ಇದ್ದು ಮೇರೆ ಇಲ್ಲದ ಈ ಮಹಾ ಸಾಗರದಲ್ಲಿ ತೇಲಾಡುತ್ತಿರಲಾಗಿ, ಮಳೆ ಯಾವಾಗ ತೆರಪು ಆದೀತೋ? ದೇವರು ನನ್ನನ್ನು ನನಗೆ ಕೊಟ್ಟ ವಚನವನ್ನು (೬, ೧೮. ೭, ೧) ಮರೆತನೇನೋ? ಎಂಬದಾಗಿ ಸಂಶಯ ಮಾಡಿದ್ದಾನು. ದಿವ್ಯ ಕೃಪಾಸೂರ್ಯವು ಶ್ರಮಾಮೇಘದಿಂದ ಮರೆಯಾಗಿತ್ತು. ದೇವರು ನಮ್ಮನ್ನು ಎಂದಿಗೂ ಮರೆಯುವದಿಲ್ಲ. ಯಾವಾಗಲೂ ನಮ್ಮನ್ನು ನೆನಿಸಿ ಕೊಳ್ಳುತ್ತಾನೆ. ಆದರೆ ಕಷ್ಟವಾಗುವ ಸಮಯದಲ್ಲಿ ಆತನು ಮರೆತ ಹಾಗೆ ನಮಗೆ ಕಾಣುವದು. ಕಷ್ಟ ಪರಿಹರಿಸಲಿಕ್ಕೆ ಆರಂಭ ಮಾಡುತ್ತಲೇ, ಆತನು ತಿರಿಗಿ ನಮ್ಮನ್ನು ನೆನಿಸಿ ಕೊಂಡ ಹಾಗೆ ಕಾಣುವದು. ಆತನು ಬುದ್ಧಿ ಇಲ್ಲದ ಜೀವರಾಶಿಗಳನ್ನಾದರೂ ನೆನಿಸಿ ಕೊಳ್ಳುವದ ಕಂಡು, ನಾವು ಹೊಯಿದಾಡುವ ನಮ್ಮ ಮನಸನ್ನ ನಿಲ್ಲಿಸಲಾಗುವದು. ಯಾಕಂದರೆ ಆತನು ಅವನ್ನ ನೆನಿಸಿ ಕೊಳ್ಳುವವನಾದ ಬಳಿಕ, ಅವಕ್ಕಿಂತ ಹೆಚ್ಚಿನವರಾದ ನಮ್ಮನ್ನು ನೆನಪು ಮಾಡಿ ಕೊಳ್ಳದೆ ಬಿಟ್ಟಾನೇ? (ಮತ್ತ. ೬, ೩೦).—ಘಾಳಿಯು ಮೋಡಗಳನ್ನು ಹರಿ

ಉತ್ಪತ್ತಿ. ೮, ೧—೧೪.

ದು ನೀರನ್ನು ಆರಿಸಿದ್ದೊಂದು; ಆಕಾಶದಲ್ಲಿ ಮಳೆ ತೆರಪಾದದ್ದೊಂದು; ಭೂಮಿಯೊಳಗಣ ಜಲೆಗಳು ಮುಚ್ಚಿದ್ದೊಂದು: ಈ ಮೂರರಿಂದ ಜಲಪ್ರಳಯ ನಿಂತಿತು.

೩ ವ. ಜಲವು ಭೂಮಿಯ ಮೇಲಿನಿಂದ ತಗ್ಗುತ್ತಾ ಹೋಯಿತು.

೪ ವ. ಇದು ನಮ್ಮ ಲೆಖ್ಖದ ಪ್ರಕಾರ ಸುಮಾರು ೧೬ನೆ ಏಪ್ರಿಲಿನಲ್ಲಿ ಆಯಿತು. ಅರರಾತ್ ಬೆಟ್ಟಗಳು ಅರ್ಮೇನಿಯ ದೇಶದಲ್ಲಿ ಅವೆ. ಅಲ್ಲಿ ನಾವೆ ತಳ ಹತ್ತಿತಂತೆ ಅನ್ಯಜನರಲ್ಲಿಯ ಸಂಪ್ರದಾಯಗಳು ಸುಧಾ ಹೇಳುತ್ತವೆ. ಆ ಪರ್ವತದ ಸಾಲಿನಲ್ಲಿ ೧೬೨೫೪ ಅಡಿ ಎತ್ತರವಾದ ಒಂದು ಶಿಖರವದೆ. ಅದರ ಮೇಲೆಯೇ ನಾವೆ ನೆಲೆಗೊಂಡಿತಂತ ಹೇಳುತ್ತಾರೆ. ಜಲಪ್ರಳಯದ ಇತ್ತಲಾಗಿ ಆ ಸ್ಥಳದಿಂದಲೇ ನರವಂಶಬಳ್ಳಿ ನಾಲ್ಕು ದಿಕ್ಕಿಗೆ ಹಬ್ಬಿತು.

೫ ವ. ೧೯ನೆ ಜೂನಿನಲ್ಲಿ ಆ ಎತ್ತರವಾದ ಸ್ಥಳದಿಂದ ಸುತ್ತಮುತ್ತಲಿರುವ ಗುಡ್ಡಗಳ ತುದಿಗಳು ನೋಹನಿಗೆ ಕಾಣ ಬಂದವು.

೬. ೭ ವ. ಕಾಗೆಯನ್ನು ಹೊರಗೆ ಬಿಟ್ಟನು.) ಈ ಪಕ್ಷಿ ನೀರಿನ ಮೇಲೆ ತೇಲುತ್ತಿದ್ದ ಶವದ ಮಾಂಸ ತಿಂದು ಬದುಕ ಬಹುದಾಗಿತ್ತು. ಹಾಗೂ ಕಾಣ ಬಂದ ಬೆಟ್ಟಗಳ ತುದಿಗಳ ಮೇಲೆಯೂ ನಾವೆಯ ಮಾಳಿಗೆಯ ಮೇಲೆಯೂ ಕೂತು ಕೊಳ್ಳಲಾಯಿತು. ಆದ ಕಾರಣ ತಿರಿಗಿ ನಾವೆಯೊಳಗೆ ಸೇರಲಿಕ್ಕೆ ಅವಶ್ಯವಾಗಲಿಲ್ಲ.

೮—೧೨ ವ. ಪಾರಿವಾಳವನ್ನು ಹೊರಗೆ ಬಿಟ್ಟನು) ಕಾಗೆಯನ್ನು ಬಿಟ್ಟು ಏಳು ದಿವಸ ಆದ ತರುವಾಯ, ಏಳೇಳು ದಿವಸಕ್ಕೆ ಮೂರು ಸರ್ತಿ ಬಿಟ್ಟನು. ಮೊದಲು ಬಿಡುವಾಗ, ಕೂಡ್ರಲಿಕ್ಕೆ ಜಾಗ ಸಿಗಲಿಲ್ಲ. ಎರಡನೆ ಸರ್ತಿ ಬಿಡುವಾಗ, ನೀರಿನಲ್ಲಿಯೂ ಚಿಗುರುವ ಇಪ್ಪೇ ಗಿಡದ ಒಂದು ಹಸಿ ಇಪ್ಪೇ ಎಲೆ ಹರ ತಂದಿತು. ಮೂರನೆ ಸರ್ತಿ ಬಿಟ್ಟ ಬಳಿಕ, ಅದು ತಿರಿಗಿ ಬರಲಿಲ್ಲ. ಅಂದಿನಿಂದ ಇಪ್ಪೇ ಎಲೆ ಸಮಾಧಾನಕ್ಕೆ ಸಾದೃಶ್ಯವಾಗೆದೆ.

೧೩. ೧೪ ವ. ಭೂಮಿಯು ಆರಿತ್ತು.) ನೋಹನ ವಯಸ್ಸಿನ ೬೦೧ನೇ ವರ್ಷದಲ್ಲಿ ೨೨ನೆ ಸಪ್ತಂಬರದಲ್ಲಿ ನೀರು ಆರಿ ಹೋಗಿತ್ತು. ಆದರೂ ಇನ್ನು ಹುದಲು ಇತ್ತು. ಆ ತರುವಾಯ (೧೪. ವ.) ಎರಡನೆ ತಿಂಗಳಿನ ೨೭ನೆ ದಿವಸದಲ್ಲಿ = ೧೭ನೆ ನವಂಬರದಲ್ಲಿ ಭೂಮಿಯೂ ಆರಿತ್ತು. ಹೀಗಿರಲಿಕ್ಕಾಗಿ ನೋಹನು ಎಲ್ಲಾ ಕೂಡಿ ೧ ವರ್ಷ ೧೦ ದಿವಸ ನಾವೆಯಲ್ಲಿ ಇದ್ದನು. ಆ ಆದಿ ಪಿತೃಗಳ ದಿನಗಳಲ್ಲಿ ಚಾಂದ್ರಮಾನ ಕಾಲ ಗಣಿತ ನಡೆಯುತ್ತಿತ್ತೆಂದು ಈ ಸ್ಥಳದಿಂದ ಕಂಡು ಬರುತ್ತದೆ. ಅವರ ವರ್ಷ ನಮ್ಮ ವರ್ಷದಷ್ಟು ಆಗಿತ್ತು.

ಜಲಪ್ರಳಯದ ಕಾಲಗಣನೆ.

೧) ೭ನೆ ನವಂಬರದಿಂದ = ೨ನೆ ತಿಂಗಳಿನ ೧೭ನೆ ದಿವಸದಿಂದ ದೊಡ್ಡ ಮಳೆ ಬಂದದ್ದು ೭, ೧೨. ೧೭.	೪೦ ದಿವಸ
೨) ಒಟ್ಟಿಗೆ ಮಳೆ ಆದದ್ದು ೧೫೦ ದಿವಸ, (೭, ೨೪.) ಸಣ್ಣ ಮಳೆ ಆದದ್ದು	೧೧೦ —
೩) ೫ ತಿಂಗಳಿನ ಮೇಲೆ (೧೫೦ ದಿವಸ) ನೀರು ಇಳಿಯಲಿಕ್ಕೆ ಆರಂಭವಾದದ್ದು ೮, ೩. ನಾವೆ. ೭ನೆ ತಿಂಗಳಿನ ೧೭ನೆ ದಿವಸದಲ್ಲಿ (೬ನೆ ಏಪ್ರಿಲಿನಲ್ಲಿ) ತಳ ಹತ್ತಿದ್ದು ೮, ೪. (೧೫೦ ದಿವಸದ ಮೇಲೆ) ೧೦ನೆ ತಿಂಗಳಿನ ಪರಿಯಂತರ ನೀರು ಇಳಿಯುತ್ತ ಹೋದದ್ದು ೮, ೫. (೧೯ನೆ ಜೂಲೈ)	೧೦೩ —
೪) ನೋಹನು ೪೦ ದಿವಸಗಳ ಮೇಲೆ ಕಾಗೆ ಹೊರಗೆ ಬಿಟ್ಟದ್ದು ೮, ೬. (೧ನೆ ಸಪ್ತಂಬರ) . .	೪೦ —
೫) ಮೂರು ಸರ್ತಿ, ಏಳೇಳು ದಿವಸಕ್ಕೆ ಒಮ್ಮೆ, ಪಾರಿವಾಳ ಬಿಟ್ಟದ್ದು ೮, ೮—೧೨. (೨೧ನೆ ಸಪ್ತಂಬರ)	೨೧ —
೬) ೬೦೧ ವರ್ಷ, ೧ನೆ ತಿಂಗಳಿನ ೧ನೆ ದಿವಸ (೧೩ ವ.)	೪ —
೭) ೨ನೆ ತಿಂಗಳಿನ ೨೭ನೆ ದಿವಸದಲ್ಲಿ (೮, ೧೪.) ಭೂಮಿ ಪೂರ್ಣವಾಗಿ ಆರಿದ್ದು	೫೭ —
	೩೭೫

ತಿಂಗಳೊಂದಕ್ಕೆ ೩೦ ದಿವಸ ಹಿಡಿದು ಲೆಖ್ಖ ಮಾಡಿದರೆ ೧ ವರ್ಷ ೧೦ ದಿವಸ ಬರುವವು.

೭೮ ನೋಹನು ನಾವೆಯಿಂದ ಹೊರಟು, ಬಲಿಯರ್ಪಿಸಿ ವಾಗ್ದತ್ತ ಹೊಂದಿದ್ದು.

ಉತ್ಪತ್ತಿ. ೮, ೧೫—೨೨.

g) ನಾವೆಯಿಂದ ಹೊರಟದ್ದು. ೮, ೧೫—೧೯.

೧೭ ವ. ಅವು ಭೂಮಿಯ ಮೇಲೆ ಹರಿದಾಡಿ ಅಭಿವೃದ್ಧಿಯಾಗಿ) ಕರ್ತನ ಆಜ್ಞೆಯ ಮೇಲೆ ನೋಹನು ನಾವೆಯಲ್ಲಿ ಕೇರಿದ್ದನು; ಆತನ ನಿರೂಪ ಕಾದುಕೊಂಡು ಅದರಿಂದ ಹೊರಟನು. ವಿಶ್ವಾಸಿಗಳು ತಮ್ಮ ಮನಸಿಗೆ ಬಂದಂತಲ್ಲ, ಕರ್ತನ ಚಿತ್ತಕ್ಕೆ ವಿಧೇಯರಾಗಿ ನಡಿಯುವರು. ಈ ಜಲಪ್ರಳಯದಲ್ಲಿ ಉಳಿದೇವೇನೊ ಎಂಬ ಸಂಶಯಕತ್ತಲೆ ಕವಿದಾಗ್ಯೂ, ನೋಹನು ಕರ್ತನ ರಕ್ಷಣಾವಚನ ಅಲಕ್ಷ್ಯ ಮಾಡಿಬಿಡಲಿಲ್ಲ (೬, ೮—೨೦). ನಾವು ದೇವರ ನಂಬಿಗೆ ಕೈಕೊಂಡ ಮೇಲೆ, ಆತ ನಮ್ಮನ್ನು ಉದ್ಧಾರ ಮಾಡದೆ ಬಿಡನು.

h) ನೋಹನು ಬಲಿ ಅರ್ಪಿಸಿದ್ದು, ದೇವರು ವಾಗ್ದತ್ತ ಮಾಡಿದ್ದು. ೮, ೨೦—೨೨.

೨೦ ವ. ದೇವರು ಸಂಕಟ ಎಂಬ ಸಾಗರದಿಂದ ನಿನ್ನನ್ನು ಪಾರು ಮಾಡಿದ ಬಳಿಕ, ನೀನು ಮೊದಲೆ ಆತನಿಗೆ ಸ್ತೋತ್ರದ ಬಲಿಗಳನ್ನು ಅರ್ಪಿಸ ತಕ್ಕದ್ದು. ದಹನಬಲಿಗಳನ್ನು) ಬಲಿಪಶುವನ್ನು ಏನೇನು ಊಟಕ್ಕೆ ತಕ್ಕೊಳ್ಳದೆ ಅಪೂಟ ಸುಡುತ್ತಿದ್ದರಾದ ಕಾರಣ, ದಹನಬಲಿ ಎಂದೆನಿಸುವದು. ಅದು ಹೊಗೆಯಾಗಿ ಆಕಾಶಕ್ಕೆ ಏರುತ್ತಿದ್ದದರಿಂದ, ಹಿಬ್ರುಭಾಷೆಯಲ್ಲಿ ಅದಕ್ಕೆ ಒಲಾ = ಏರುವಂಥಾದು ಎಂದು ಹೆಸರು ಅದೆ. ಈ ದಹನಬಲಿ ಎಲ್ಲಾ ಬಲಿಗಳಲ್ಲಿ ಮುಖ್ಯವಾದದು. ಅದರಲ್ಲಿ ಮಿಕ್ಕಾದವು ಬಂದ ಹಾಗೆ ಆಯಿತು. ಅದನ್ನ ಅರ್ಪಿಸೋಣಾದರಿಂದ, ತಾವು ಸಾಯ ತಕ್ಕ ಪಾಪಿಷ್ಟರು, ದೇವರ ಹಂಗಿನಲ್ಲಿ ಪೂರ್ಣವಾಗಿ ಬಿದ್ದವರು ಎಂದು ಅರಿಕೆ ಮಾಡುತ್ತಿದ್ದರು; ತಮಗೂ ದೇವರಿಗೂ ತಿರಿಗಿ ಅನ್ಯೋನ್ಯಭಾವವಾಗುವ ಉದ್ದಿಶ್ಯ, ಅದನ್ನ ಅರ್ಪಿಸುತ್ತಿದ್ದರು.—ನೋಹನು ತನ್ನ ಮನೆಯವರ ಸಂಗಾತ ದಹನಬಲಿಗಳನ್ನು ಅರ್ಪಿಸಿದಲ್ಲಿ, ಅರಿಕೆ ಮಾಡಿದ್ದೇನಂದರೆ: ನಾವು ನಮ್ಮ ನೀತಿಯಿಂದಲ್ಲ, ಕರ್ತನ ವಿಶೇಷ ಕೃಪೆಯಿಂದ ರಕ್ಷಣೆ ಹೊಂದಿದ್ದೇವೆ; ನಮ್ಮಂಥಾ ಅಯೋಗ್ಯ ಪಾಪಿಷ್ಟರನ್ನು ಆತನು ಹೀಗೆ ಉಚಿತವಾಗಿ ಪರಿಪಾಲಿಸಿದ ಮೇಲೆ, ನಾವು ಆತನಿಗೆ ಕೃತಜ್ಞರಾಗಿ ನಡಕೊಳ್ಳುವದು ಯುಕ್ತವಾದದ್ದು.—ನೋಹನು ದಿವ್ಯ ವಾಗ್ದತ್ತವನ್ನು ಹಿಡಕೊಂಡು, ತನ್ನ ಅಯೋಗ್ಯತೆ ನೆನಪಿನಲ್ಲಿಟ್ಟು, ದೇವರನ್ನ ನಂಬಿದ್ದರಿಂದ, ಅವನ ಬಲಿ ದೇವರಿಗೆ ಸಮರ್ಪಿತವಾಯಿತು.

೨೧ ವ. ಸುವಾಸನೆಯನ್ನು ಆಘ್ರಾಣಿಸಿದನು) ಇದು ದೇವರು ಮೆಚ್ಚಿ ಕೊಂಡನೆಂಬದನ್ನು ಸೂಚಿಸುವದು (ಫಿಲಿ. ೪, ೧೮). ಕರ್ತನು ಅಂದು ಕೊಂಡದ್ದೇನಂದರೆ: ಮನುಷ್ಯರು ಪಾಪಿಷ್ಟರಾಗಿ ಈ ಲೋಕದಲ್ಲಿ ಹುಟ್ಟಿ ಬರುತ್ತಾರೆ; ಪಾಪ ಅವರನ್ನೆಲ್ಲ ವ್ಯಾಪಿಸಿ ಅದೆ. ಅದಕ್ಕೆ ಬರೆ ಶಿಕ್ಷೆಯಿಂದ ನಾಶವಾಗಿ ಹೋಗುತ್ತಾರಲ್ಲದೆ, ವಾಸಿಯಾಗುವದಿಲ್ಲಾದ ಕಾರಣ, ಅವರಿಗೆ ಬುದ್ಧಿ ಕಲಿಸುತ್ತಾ ಸೈರಿಸಿ ಕೊಂಡು ಹೋಗಬೇಕು.—ಲೋಕ ಹುಲ್ಲು ಬಿದ್ದ ಹೊಲದ ಸಮಾನ (ಮತ್ಥ. ೧೩, ೨೪—೩೦). ಹುಲ್ಲು ಬಹಳ ಬಿದ್ದದರಿಂದ, ಹೊಲ ಈಗಲೇ ಹಸನ ಮಾಡಲಿಕ್ಕೆ ಬರುವದಿಲ್ಲ. ಸುಗ್ಗಿಯ ತನಕ ಹೀಗೆ ಇಡ ಬೇಕಾಯಿತು.

೨೨ ವ. ಬಿತ್ತುವದೂ ಕೊಯ್ಯುವದೂ) ಜಲಪ್ರಳಯವು ಒಂದು ಸಂಪೂರ್ಣ ಸಂವತ್ಸರ ಇದ್ದ ಮೂಲದಿಂದ, ರುತುಚರ್ಯ ನಡೆಯಲಿಕ್ಕೆ ಅನುಕೂಲವಾಗಲಿಲ್ಲ. ಈಗಿನ ಲೋಕಕ್ಕೆ ಕಾಲ ತುಂಬಿದ ತರುವಾಯ, ೨ ಪೇತ್ರ. ೩, ೫—೭. ೧೦. ಪ್ರಕಟ. ೨೦, ೧೧. ೨೧, ೧. ಬರೆದದ್ದು ಆಗುವದು.

ಎರಡನೆ ಖಂಡ

ಜಲಪ್ರಳಯ ತೀರಿದಂದಿನಿಂದ ದೇವರು ಅಬ್ರಹಾಮನನ್ನು ಕರೆದ ದಿನ ವರೆಗೆ ನಡೆದ ಮನುಷ್ಯಚರಿತ್ರೆ.

ಲೋಕಸೃಷ್ಟಿಯ ಇತ್ತಣ ೧೬೫೬—೨೦೮೩ನೆ ವರ್ಷ. ಕ್ರಿಸ್ತನ ಅತ್ತಣ ೨೩೪೪—೧೯೨೧ನೇ ವರ್ಷ. ೪೨೭ ವರ್ಷ.

A) ಒಡಂಬಡಿಕೆಯ ಪುನಸ್ಥಾಪನೆ. ೯, ೧—೧೭.

a) ಒಡಂಬಡಿಕೆಯ ಸ್ಥಾಪನಾವಾಕ್ಯ. ೧—೭.

೧ ವ. ಆಶೀರ್ವಾದವಾಕ್ಯ. ಆದಿ ಮನುಷ್ಯರಿಗೆ ಆದ ಅದೇ ಆಶೀರ್ವಾದವು (೧, ೨೮.) ನರವಂಶಕ್ಕೆ ದೇವರು ಸಂಸಾರಸ್ಥಿತಿ ತಿರಿಗಿ ನೇಮಿಸಿ ಅಗವುನಾದಿ ದೋಷಗಳನ್ನು ನಿಷೇಧಿಸಿದ ಹಾಗೆ ಆಯಿತು.

೨ ವ. ಭಯವೂ—ಇರುವದು) ಆದಿಯಲ್ಲಿ ಜೀವರಾಶಿಗಳ ಮೇಲೆ ಮನುಷ್ಯರ ಅಧಿಕಾರ ಅಭ್ಯಂತರವಿಲ್ಲದೆ ನಡೆಯುತ್ತಿತ್ತು. ಅವು ಹಟ ಮಾಡದೆ ಅವರ ವಶಕ್ಕೆ ಬರುತ್ತಿದ್ದವು. ಆದರೆ ಮನುಷ್ಯರು ಪಾಪದಿಂದ ದೇವರ ಹೋಲ್ವಿಕೆ ಕಳಕೊಂಡ ಮೇಲೆ, ಅವರು ನಮಗೆ ಏನಾದರೂ ಕೇಡು ಮಾಡಿಯಾರು ಎಂಬ ಹಾಗೆ ಅವು ಅವರಿಗೆ ಅಂಜಿ, ಹೆದರುವಂಥಾವಾಗಿ, ನಿರ್ವಾಹವಿಲ್ಲದಕ್ಕೆ ಬಲತ್ಕಾರ ಪಟ್ಟು, ಅವರ ಸ್ವಾಧೀನದಲ್ಲಿ ಬಿದ್ದು ಸೇವಿಸುವವು. ಭಯಕ್ಕೆ ಇನ್ನೊಂದು ಕಾರಣವಾವದಂದರೆ: ಮನುಷ್ಯರು ಮಾಂಸಾಹಾರಿಗಳು ಆದದ್ದು (ವ. ೩).

೩ ವ. ಪಾಪಪತನವಾದ ಬಳಿಕ ಪ್ರಾಣಿಗಳು ವಸ್ತ್ರಕ್ಕಾಗಿಯೂ ಬಲಿಗಾಗಿಯೂ ಹತವಾಗುತ್ತಿದ್ದವು. ಜಲಪ್ರಳಯದ ಇತ್ತಲಾಗಿ ಅವನ್ನ ಆಹಾರಕ್ಕಾಗಿಯೂ ಹತ ಮಾಡ ಬಹುದಾಗಿ ದೇವರು ಅಪ್ಪಣೆ ಮಾಡಿದನು. ನರದೇಹವು ಪಾಪದಿಂದ ಬಲಹೀನವಾದ ಮೇಲೆ, ಧಾನ್ಯಫಲಾದಿ ಆಹಾರದಿಂದ ಅದು ತಕ್ಕಷ್ಟು ಪುಷ್ಟಿ ಆಗುವದಿಲ್ಲ ಎಂಬುದೊಂದು; ಜಲಪ್ರಳಯದಿಂದ ಭೂಮುಖವು ಬೇರೆಯಾಗಿ, ಮುಂಚಿನಷ್ಟು ಫಲಭರಿತವಾದದ್ದಲ್ಲದರಿಂದ, ಈಗ ಬೆಳೆಯುವ ಧಾನ್ಯಫಲಾದಿಗಳು ಮನುಷ್ಯರಿಗೆ ಆಹಾರಕ್ಕಾಗಿ ಸಾಲುತ್ತಿದ್ದಿಲ್ಲ ಎಂಬುದೊಂದು: ಈ ಎರಡು ಕಾರಣಗಳಿಂದ ದೇವರು ಈ ಅಪ್ಪಣೆ ಕೊಟ್ಟಿದ್ದಾನು. ಧಾನ್ಯಫಲಾಹಾರ ಸಾಲದ್ದಕ್ಕೆ ಒಂದು ದೃಷ್ಟಾಂತ: ಶೀತಪ್ರದೇಶಗಳಲ್ಲಿ ಧಾನ್ಯಫಲಾದಿಗಳು ಸ್ವಲ್ಪವಾಗಿ ಬೆಳೆಯುತ್ತವೆ. ಅದಕ್ಕೆ ಅಲ್ಲಿಯ ಪಶುಗಳನ್ನೂ ಬೇಟೆಯ ಮೃಗಗಳನ್ನೂ ಜನರು ಮಾಂಸಾಹಾರಕ್ಕೆ ಹತ ಮಾಡಿದರೆ ಹೊರ್ತು, ಬದುಕುವ ಹಾಗಿಲ್ಲ. ಅಮೆರಿಕಾ ಖಂಡದ ಉತ್ತರ ಭಾಗದಲ್ಲಿ ಎಸ್ಕಿಮೊ ಎಂಬ ಜನರು ಇದ್ದಾರಲ್ಲ. ಅಲ್ಲಿ ತುಸ ಕಾಯಪಲ್ಯವಲ್ಲದೆ, ಧಾನ್ಯಫಲಾದಿಗಳು ಬೆಳೆಯುವದೇ ಇಲ್ಲ. ಆದ್ದರಿಂದ ಆ ಜನರು ಸಮುದ್ರನಾಯಿ ಮುಂತಾದ ಜಲಚರಗಳನ್ನು ಹಿಡಿದು ತಿಂದು ಬದುಕ ಬೇಕಾಯಿತು, ಉಪಾಯವಿಲ್ಲ. ಈ ದೇಶದಲ್ಲಿ ಬ್ರಾಹ್ಮಣರ ಪೂರ್ವಜರು ಮಾಂಸಾಹಾರ ತಕ್ಕೊಳ್ಳುತ್ತಿದ್ದರು. ಆದರೆ ಆ ಬಳಿ ಪ್ರಸಿದ್ಧವಾದ ಭೌದ್ಧರು ಮಾಂಸಾಹಾರ ನಿಷೇಧಿಸಿದರು. ಅದು ಇಲ್ಲಿ ನಡೆಯ ಬಹುದು. ಆದರೆ ಹಿಮಾಚಲದ ಆಚೆಯ ಶೀತ ಪ್ರದೇಶದಲ್ಲಿಯ ತಿಬೆತ್ ಮೊದಲಾದ ಶೀಮೆಯ ಜನರು ಅವರ ಮತ ವಹಿಸಿದ ಮೇಲೆ, ಈ ನಿಷೇಧ ತೆಗದು ಹಾಕಿ ತಿನ್ನ ಬಹುದೆಂಬದಾಗಿ ಕಲ್ಪಿಸಿದರು.

೪ ವ. ದ್ವಿತಿ. ೧೨, ೨೩. ರಕ್ತ ಪ್ರಾಣಧಾರಣಾ

ಶಕ್ತಿಯುಳ್ಳದ್ದು. ಮನುಷ್ಯರು ಬಲಿ ಅರ್ಪಿಸುವಾಗ, ಆ ಪ್ರಾಣ ಮನುಷ್ಯರಿಗೆ ಪ್ರತಿನಿಧಿ ಆಯಿತು. ಈ ಸಂಬಂಧದ ದೆಶೆಯಿಂದ ರಕ್ತಪಾನ ಮಾಡ ಬಾರದು. ಅಥವಾ ಇನ್ನು ಜೀವ ಇರುವಾಗಲೇ, ಮೃಗಗಳಂತೆ ಹರಕೊಂಡು ತಿನ್ನ ಬಾರದು. ಇದು ಮಾಂಸಾಹಾರ ಮಾಡ ಬಹುದೆಂಬದಕ್ಕೆ ಬಂದು ಅಪವಾದ.

೩ ವ. ದೇವರು ಮಾಂಸಾಹಾರ ಮಾಡಗೊಟ್ಟ ಕಾರಣದಿಂದ ಎಲ್ಲಾ ಜೀವ, ಮನುಷ್ಯರದು ಸಹ ಅಲ್ಪವೆಂದು ನೆನಸಲಿಕ್ಕೆ ಸ್ವಲ್ಪ ಆಸ್ಪದವಾದೀತು. ಅದರಿಂದ ಆ ಮಾಂಸಾಹಾರದ ಮಾತಿಗೆ ಇನ್ನೊಂದು ಅಪವಾದ ಹೇಳುತ್ತಾನೆ: ಎಲ್ಲಾ ಜೀವರಾಶಿಗಳ ಪ್ರಾಣ ಆಹಾರಕ್ಕಾಗಿ ತೆಗೆಯ ಬಹುದು. ಮನುಷ್ಯರದನ್ನು ಮಾತ್ರ ಯಾವದಕ್ಕಾದರೂ ತೆಗೆಯಲಾಗದು. “ನನ್ನನ್ನು ಹೋಲುವ ನಿಮ್ಮ ಪ್ರಾಣಗಳಿಗೋಸ್ಕರ (ನಿಮಗಾಗಿ) ನಿಮ್ಮ ರಕ್ತ ಕೇಳುವೆನು”. ಮೃಗಗಳ) ಮನುಷ್ಯರ ಪ್ರಾಣ ಹೆಚ್ಚಿನದು (ಹೊರ. ೨೧, ೨೮. ೨೯). ಅದಕ್ಕೆ ಹುಲಿಯು ಮನುಷ್ಯನನ್ನು ಕೊಂದ ಬಳಿಕ, ಮಾಂದ್ಯವಾಗಿ, ಕೆಲವು ಹೊತ್ತು ನಿಂತಿರುವದು. ಮನುಷ್ಯನನ್ನು ಕಚ್ಚಿದ ಮೇಲೆ, ಸರ್ಪವೂ ಸ್ತಿಮಿತವಾಗುವದು.

೬ ವ. ನರಹತ್ಯಗಾರನಿಗೆ ಮರಣಶಿಕ್ಷೆ ನೇಮಿಸಿದ್ದು. ಇಲ್ಲಿ ದೇವರು ದುಷ್ಟರನ್ನು ಶಿಕ್ಷಿಸುವ ರಾಜ್ಯಾಧಿಕಾರ ನೇಮಿಸೋಣ ಆಯಿತು (ರೋಮ. ೧೩, ೪). ಜಲಪ್ರಳಯದ ಮುಂಚೆ ದೇವರು ಲೇಮಕನನ್ನು ಕಾಯಿನನ್ನು ಸೈರಿಸಿದನು. ಅವ್ವರೊಳಗೆ ಪಾಪ ಬೆಳೆದ ಮೂಲದಿಂದ, ಇನ್ನು ಮುಂದೆ ನರಹತ್ಯ ಮಾಡಿದವರನ್ನ ಸೈರಿಸಲಾಗಲಿಲ್ಲ. ಇಲ್ಲದಿದ್ದರೆ, ಇರುವ ಹಾಗೆ, ಆಗುತ್ತಿದ್ದಿಲ್ಲ.

೭ ವ. ಭೂಮಿಯಲ್ಲಿ ತುಂಬಿ ಇರ್ರಿ, ಅದರಲ್ಲಿ ಹೆಚ್ಚಿರಿ! ಈ ಆಶೀರ್ವಾದವಾಕ್ಯ ಇನ್ನೊಂದು ಸರ್ತಿ ಹೇಳಿ, ಹಿಂದಿನ ಶಿಕ್ಷಾವಾಕ್ಯದಿಂದ ಭಯಗೊಂಡ ಮನುಷ್ಯರನ್ನ ತಿರಿಗಿ ಧೈರ್ಯ ಪಡಿಸುತ್ತಾನೆ.

b) ಒಡಂಬಡಿಕೆಯ ಗುರುತು. ೮—೧೭.

೮—೧೦ ವ. ದೇವರು ೬, ೧೮. ನೋಹನ ಸಂಗಾತ ಮಾತ್ರ ಮಾಡಿದ ಒಡಂಬಡಿಕೆಯಲ್ಲಿ ಈಗ ಅವನ ಮನೆತನದವರನ್ನೂ ಅವನ ವಂಶದವರನ್ನೂ ಎಲ್ಲಾ ಪ್ರಾಣಿಗಳನ್ನೂ ಕೂಡಿಸುತ್ತಾನೆ.

೧೧ ವ. ಮಾಂಸವೆಲ್ಲಾ ನಿರ್ಮೂಲವಾದದ್ದು) ಒಡಂಬಡಿಕೆಯ ವಿವರ ಇಲ್ಲಿ ಹೇಳಿ ಅದೆ.

೧೨—೧೭ ವ. ಮಳೆಬಿಲ್ಲು ಸೂರ್ಯ ಮೇಘಾಂಧಕಾರ ಜಯಿಸಿ ಹೊರಡಲಾಗುವ ಲಕ್ಷಣವಾಗೆದೆ. ವಿಶ್ವಾಸಗುಂದಿದ ಮನುಷ್ಯರಿಗೆ ಈ ಗುರುತು ನಂಬಲಿಕ್ಕೆ ಆಧಾರವಾಯಿತು. ದೇವರಿಗೆ ಬೇಕಾಗಿದ್ದಿಲ್ಲ. ಆದರೂ ಮನುಷ್ಯರನ್ನು ನಂಬಿಸುವ ನಿಮಿತ್ತ ಮನುಷ್ಯರೀತಿಯಿಂದ, ತನಗೆ ಬೇಕಾದ ಹಾಗೆ, ಮಾತಾಡುತ್ತಾನೆ. ನೋಹನ ಮನೆತನದವರು ಜಲಪ್ರಳಯದಲ್ಲಿ ಇಷ್ಟು ಕಷ್ಟ ಸೋಸಿದ ಬಳಿಕ, ಸಾಧಾರಣ ವೃಷ್ಟಿಯ ಲಕ್ಷಣ ಮಾತ್ರ ಕಂಡಾಗ್ಯೂ, ಮತ್ತು ಅದೇ ಬಂದೀತೆಂಬ ಭಯ ಆಗ ಬಹುದಾಗಿತ್ತು.— ಆ ವರೆಗೆ ಮಳೆಬಿಲ್ಲು ಮೇಘಮಂಡಲದಲ್ಲಿ ಕಂಡಿದ್ದಿಲ್ಲ. ಯಾಕಂದರೆ ಜಲಪ್ರಳಯದ ಆಚೆ ಮಳೆಗರೆಯುತ್ತಿದ್ದಿಲ್ಲ; ಹಾಗೆ ಮಂಜಿನಿಂದ ಭೂಮಿ ತೇವವಾಗುತ್ತಿತ್ತು.

B) ಮನುಷ್ಯರು ಮತ್ತು ಕೆಟ್ಟದ್ದೂ, ಅಭಿವೃದ್ಧಿಯಾದದ್ದೂ, ಹರೆ ಬಿದ್ದದ್ದೂ. ೯, ೧೮.—೧೧, ೩೨.

a) ನೋಹನ ಕುಮಾರರು. ೯, ೧೮—೨೯.

೧೯ ವ. ಇವರಿಂದ ಭೂಮಿ ಎಲ್ಲಾ ತುಂಬಿತು.)— ನೋಹನ ಈ ಮೂರು ಮಂದಿ ಕುಮಾರರೇ ಹೊಸ ನರವಂಶದ ಬಳ್ಳಿಗೆ ಬೇರು. ಅದು ಅರ್ಮೇನಿಯ ದೇಶದಲ್ಲಿ ಊರಿ, ಅಲ್ಲಿಂದ ಸಮಸ್ತ ಪೃಥ್ವಿಯ ಮೇ

ಲೆ ಹಬ್ಬಿ ಹೋಯಿತು. ಕಾಲಾಂತರದಲ್ಲಿ ಶೇಮನವರು ಏಶಿಯ ಖಂಡದ ಪಶ್ಚಿಮ ಭಾಗವನ್ನು, ಹಾಮನವರು ಅಫ್ರಿಕ ಖಂಡವನ್ನು, ಯಾಫೇತನವರು ಯೂರೋಪ ಖಂಡವನ್ನೂ, ಉಳಿಕೆ ಖಂಡಗಳಲ್ಲಿ ಕೆಲವು ಭಾಗಗಳನ್ನೂ ತುಂಬಿದರು.

೨೦. ೨೧ ವ. ನೋಹನಿಗೆ ಅಮಲೇರಿಸುವ ದ್ರಾಕ್ಷೇ ರಸದ ಬಲ ಇನ್ನು ತಿಳಿದಿದ್ದಿಲ್ಲ. ಕುಡಿದ ದ್ರಾಕ್ಷೇ ರಸದ ಬಲದಿಂದ ಮೈ ಕಾವಾಗಿ, ಅವನು ವಸ್ತ್ರ ಕಳೆದು, ಗುಡಾರದಲ್ಲಿ ಹಾಗೆ ಮಲಗಿ ಕೊಂಡಿದ್ದನು. ಮಿತಿಯಿಂದ ದ್ರಾಕ್ಷಾರಸ ಪಾನ ಮಾಡ ಬೇಕಾಯಿತು. ಅವನು ಹೀಗೆ ಮಿತಿ ಮೀರಿ ಕುಡಿದು ಮತ್ತನಾದದ್ದು ಒಂದು ದೋಷ. ಆದರೆ ಅರಿಯದಲೆ ಮಾಡಿದನು. ಶರೀರ ಬಲಹೀನತ್ವ ರೋಗಾದಿಗಳನ್ನು ಕಳೆಯಲಿಕ್ಕೆ ಅಲ್ಲದೆ, (ಔಷಧಗಳಂತೆ) ಹಾಗೆ ಮದವೇರುವ ಪಾನ ಮಾಡದೆ ಇರುವದು ಒಳ್ಳೇದು. ಈ ದೇಶದವರು ತಮ್ಮನ್ನು ಇಂಥಾ ವಿಷಯದಲ್ಲಿ ಆಳಿ ಕೊಳ್ಳಲಾರದಕ್ಕೆ, ಮದಿರಾಪಾನ ಪೂರ್ಣವಾಗಿ ನಿಷೇಧ ಮಾಡಿದರು.

೨೨ ವ. ನಗ್ನತ್ವವನ್ನು ನೋಡಿ) ತಂದೆಯ ತಪ್ಪಿಗೆ ಹಾಸ್ಯ ಮಾಡಿದ ಹಾಗಾಯಿತು. ನಿನ್ನ ತಂದೆಯ ಬಲಹೀನತ್ವಕ್ಕೆ ಹಾಸ್ಯ ಮಾಡ ಬೇಡ! ಅಬ್ಸಲೋಮನನ್ನು, ಏಲಿಯ ಕುಮಾರರನ್ನು, ಏಲೀಸನಿಗೆ ಹಾಸ್ಯ ಮಾಡಿದ ಹುಡಗರನ್ನು ನೆನಿಸು! ಕನಾನನು ತನ್ನ ತಂದೆಯ ಪಾಪದಲ್ಲಿ ಕೂಡಿದನೆಂಬಂತೆ ತೋರುತ್ತದೆ (೨೫ ವ).

೨೩ ವ. ಅವರು ವಿಮುಖರಾಗಿದ್ದದರಿಂದ, ತಮ್ಮ ತಂದೆಯ ನಗ್ನತ್ವ ನೋಡಲಿಲ್ಲ.

೨೪ ವ. ಲಹರಿ ಇಳಿದು ನಿದ್ರೆ ತಿಳಿದನು.

೨೫—೨೭ ವ. ೧) ಕನಾನನನ್ನು ಶಪಿಸಿದ್ದು. ಇವನಲ್ಲಿ ತನ್ನ ತಂದೆಯಾದ ಹಾಮನಲ್ಲಿ ವಿಶೇಷವಾಗಿ ತಲೆದೋರಿದ ಜಾರತ್ವಾದಿ ಅಸಹ್ಯ ಪಾಪಗಳು ಹೆಚ್ಚಾದದರಿಂದ (ಲೇವಿಕ. ೧೮.), ಇವನ ಮೇಲೆ ಮುಖ್ಯವಾಗಿ ಈ ಶಾಪ ಬಿತ್ತು. ಹಾಮನ ಅನ್ವಯದವರು ಎಲ್ಲ ಜನಾಂಗಗಳೊಳಗೆ ನೀತಿಯಲ್ಲಿ ಆಗಲಿ, ಜಾಣತನದಲ್ಲಿ ಆಗಲಿ, ವಿದ್ಯಾಭ್ಯಾಸದಲ್ಲಿ ಆಗಲಿ, ಕಡೆಯವರು. ನೋಹನು ಕಾಲಜ್ಞನಾಗಿ, ಹಾಮನು ತನ್ನ ಮಗ ಕನಾನನ ಸಹಿತವಾಗಿ ಮಾಡಿದ ದುಷ್ಕೃತ್ಯವನ್ನು, ಶೇಮನು ಯಾಫೇತನು ಇವರಿಬ್ಬರು ಮಾಡಿದ ಸುಕೃತ್ಯವನ್ನು ಮಾತ್ರವಲ್ಲ, ಅವರ ದುಷ್ಕೃತ್ಯದಲ್ಲಿ ಬೈಲಿಗೆ ಬಂದ ದುರ್ಭಾವವನ್ನು, ಇವರ ಸುಕೃತ್ಯದಿಂದ ಕಾಣ ಬಂದ ಸುಭಾವವನ್ನು ನೋಡಿ, ಅವರಿವರ ವಂಶಾನು ಚರಿತ್ರೆಯನ್ನು ತಿಳಿದು, ಅವರಿಗೆ ಶಾಪ, ಇವರಿಗೆ ಆಶೀರ್ವಾದ, ಕೊಟ್ಟನು. ಇಸ್ರಾಯೇಲನವರು ಕನಾನ ದೇಶ ವಶ ಮಾಡಿ ಕೊಳ್ಳುವಾಗ, ಕನಾನನಿಗೆ ಹತ್ತಿದ ಶಾಪವು ಈಡೇರಿತು. ಹ್ಯಾಗಂದರೆ: ಅವರು ನಿರ್ಮೂಲವಾದರು. ಅಥವಾ ದಾಸರಾದರು. ಈಗ ಅವರ ಹೆಸರಾದರೂ ಮರೆತು ಹೋಯಿತು.—ಇಂದೂ ಹಾಮನ ವಂಶದವರಾದ ಅಫ್ರಿಕ ಖಂಡದ ನಿವಾಸಿಗಳಾದ ಹಬ್ಬಸೀಯರ ಸ್ಥಿತಿಗತಿ ಇಲ್ಲಿ ನೋಹನು ಹೇಳಿದಂತೆ ಅದೆ. ಅವರಲ್ಲಿ ಒಬ್ಬರಿಗೊಬ್ಬರು ದಾಸರಾಗಿದ್ದಾರೆ. ಅವರು ಬಹಳ ಅರಿಷ್ಟರು. ಕೀರ್ತ. ೬೮, ೩೨. ಹೇಳಿದ್ದು ಈಗ ಅವರಲ್ಲಿ ಸಾರಲಿಕ್ಕೆ ಹೋದ ಸುವಾರ್ತಾಬೋಧಕರಿಂದ ಒದಗಿ ಬರಲಾಯಿತು. ೨) ಶೇಮನನ್ನು ಆಶೀರ್ವದಿಸಿದ್ದು. ಅವನಿಂದ ಮುಖ್ಯವಾಗಿ ಪೃಥ್ವಿಯ ಮೇಲೆ ಭಯಭಕ್ತಿ ದಿವ್ಯಜ್ಞಾನ ಉಳಿಯ ಬೇಕು. ಅವನ ವಂಶದಿಂದ ದೇವರ ರಾಜ್ಯ ವಿಸ್ತರಿಸ ಬೇಕು. ಅವನು ಸತ್ಯಮತ ದೀಪ. ಅದನ್ನು ನೋಹನು, ಆದ ಹಾಗೆ, ಕಂಡು, ಕರ್ತನು ಶೇಮನ ದೇವರು ಎಂದು ಹೇಳಿ, ಆತನನ್ನು ಕೊಂಡಾಡುತ್ತಾನೆ. ೩) ಯಾಫೇತನನ್ನು ಆಶೀರ್ವದಿಸಿದ್ದು. ಯಾಫೇತನು = ವಿಸ್ತರಿತನು, ಶೇಮನು = ಹೆಸರುಗೊಂಡವನು, ಹಾಮನು = ಶಖೆ, ಕಠ್ರನವನು. "ಯಾಫೇತನನ್ನು—ವಿಸ್ತರಿಸಲಿ! ವಿಸ್ತರಿತನನ್ನು ದೇವರು ವಿಸ್ತರಿಸಲಿ"! ಎಂಬ ಹಾಗೆ ಯಮಕವದೆ. ಯಾಫೇತನವರು ಯೂರೋಪ ಖಂಡವನ್ನಲ್ಲದೆ ಉಳಿದ ಖಂಡಗಳಲ್ಲಿ ಸುಧಾ ಭಾಗಗಳನ್ನು ತಕ್ಕೊಂಡದರಿಂದ, ಈ ವಾಕ್ಯ ಕೂಡಿ ಬಂತು. ಅವನು (ಯಾಫೇತನು) ಶೇಮನ ಗುಡಾರಗಳಲ್ಲಿ ವಾಸ ಮಾಡಲಿ!) ಯಾಫೇತನ ವಂಶದವರು, ದೇವರನ್ನು ಅಲಕ್ಷ್ಯ ಮಾಡಿದ ಶೇಮನವರ ಸ್ಥಳಕ್ಕೆ ಬಂದು, ರೋಮ. ೧೧ ಹೇಳಿ

ದ್ದು ಈಡೇರುವ ಪರಿಯಂತರ, ಸತ್ಯಮತ ದೀಪವಾಗಿದ್ಧಾರೆ. ಯುರೋಪ ಖಂಡದ ಅನ್ಯ ಜನರು ಕ್ರಿಸ್ತನ ಸಭೆಯಲ್ಲಿ ಸೇರಿ, ಆತ್ಮದ ಪ್ರಕಾರವಾಗಿ ಸತ್ಯದ ಇಸ್ರಾಯೇಲನವರಾದರು. ಇದಲ್ಲದೆ ಯಾಫೇತನವರು, ಶೇಮನವರಿಗೆ ಆದ ರಕ್ಷಣಾಜ್ಞಾನಾದಿಗಳಲ್ಲಿ ಪಾಲು ಹೊಂದಿದರು: ಕಡೆಗೆ (ಯೋಹ. ೧೦, ೧೬) ನಾಲ್ಕು ದಿಕ್ಕಿನಿಂದ ಕೂಡಿ ಬಂದ ಒಂದೇ ಹಿಂಡು ಇರುವದು. ಅದಕ್ಕೆ ಒಬ್ಬನೇ ಕುರುಬನು ಇರುವನು. ಹೀಗೆ ನೋಹನು ಹೇಳಿದ ಕಾಲಜ್ಞಾನ ಜನಾಂಗಗಳ ಹಾಗೂ ದೇವರ ರಾಜ್ಯದ ಚರಿತ್ರೆಯನ್ನು ಸಂಕ್ಷೇಪವಾಗಿ ಸೂಚಿಸುವದು.

೨೮. ೨೯ ವ. ನೋಹನು ೨೦೦೬ನೇ ಸಂವತ್ಸರದ ತನಕ ಬದುಕಿ ಅಬ್ರಹಾಮನು ಹುಟ್ಟದ ಎರಡು ವರ್ಷಕ್ಕಿಂತ ಮುಂಚೆ ಸತ್ತನು. ಪೂರ್ವದ ಚರಿತ್ರೆ ಪ್ರಕಟಣೆಗಳನ್ನು ಜಲಪ್ರಳಯದ ಈಚೆಯ ತಲೆಯವರಿಗೆ ತಿಳಿಸಲಿಕ್ಕೆ, ದೇವರು ಅವನನ್ನು ಇಷ್ಟು ಕಾಲ ಉಳಿಸಿದ್ದಾನು. ಅವನ ತರುವಾಯ ಒಬ್ಬನಿಗೂ ಅಂಥಾ ದೀರ್ಘಾಯುಷ್ಯ ಆಗಲಿಲ್ಲ. ಜಲಪ್ರಳಯದಿಂದ ಹಿಡಿದು ಅಬ್ರಹಾಮನ ಜನ್ಮದಿವಸದ ಪರಿಯಂತರಕ್ಕೆ ಗತಿಸಿ ಹೋದ ೩೫೨ ಸಂವತ್ಸರಗಳಲ್ಲಿ ನಡೆದ ವೃತ್ತಾಂತದ ವಿಷಯಕ್ಕೆ ಜನಾಂಗಗಳ ಪಟ್ಟಿ (ಸಂಧಿ ೧೦.), ಬಾಬೆಲದಲ್ಲಿ ಗೋಪುರ ಕಟ್ಟಿದ್ದು, ಜನಾಂಗಗಳು ಹರೆ ಬಿದ್ದದ್ದು (ಸಂಧಿ. ೧೧). ಈ ಸಂಗತಿಗಳನ್ನು ಅಲ್ಲದೆ, ಪರಿಶುದ್ಧ ಬರಹವು ಬೇರೊಂದು ಹೇಳುವದಿಲ್ಲ.

b) ಜನಾಂಗಗಳ ಪಟ್ಟಿ. ಸಂಧಿ ೧೦.

೧ ವ. ನೋಹನು ೬೦೦ ವರ್ಷದವನಾಗಿದ್ದಾಗ, ಶೇಮನು ೧೧, ೧೦. ವಚನದ ಪ್ರಕಾರ ೧೦೦ ವರ್ಷದವನಾಗಿದ್ದನು. ಆವಾಗ ಜಲಪ್ರಳಯವಾಗಿ ಎರಡು ವರ್ಷಗಳು ಆಗಿ ಹೋಗಿದ್ದವು. ಹಾಗಾದರೆ ಜಲಪ್ರಳಯ ಬರುವಾಗ್ಯೆ, ಅವನು ೯೮ ವರ್ಷದವನಾಗಿದ್ದನು. ಆದರೆ ೫, ೩೨. ನೋಡಿದರೆ, ಆಗ ಆ ಮೂವರಲ್ಲಿ ಹಿರಿ ಮಗನಿಗೆ ೧೦೦ ವರ್ಷ ಆಗಿರ ಬೇಕು ಎಂಬದು ತೋರುತ್ತದೆ. ಹಾಮನು ಹಿರಿ ಮಗನು ಅಲ್ಲ, ಮಧ್ಯಸ್ತನೂ ಅಲ್ಲ, ತೀರ ಚಿಕ್ಕ ಮಗನೇ (೯, ೨೪). ಹೀಗಿರಲಾಗಿ, ಯಾಫೇತನು ಹಿರಿಮಗನು (೧೦, ೨೧.), ಶೇಮನು ಮಧ್ಯ ಮಗನು, ಹಾಮನು ತೀರ ಚಿಕ್ಕ ಮಗನು. ಜಲಪ್ರಳಯ ಬರುವಾಗ್ಯೆ, ಹಿರಿಯನಿಗೆ ೧೦೦, ನಡುವಿನವನಿಗೆ ೯೮ ವರ್ಷವಾಗಿತ್ತು. ಶೇಮನ ಹೆಸರು ಪಟ್ಟಿಯಲ್ಲಿ ಮೊದಲು ಬರುವದು ಯಾಕಂದರೆ, ಅವನು ಭಯಭಕ್ತಿಯ ವಾಹನ, ಸತ್ಯಮತ ದೀಪವಾಗಿದ್ದದರಿಂದ, ಅವನು ಜನ್ಮದ ಪ್ರಕಾರ ನಡುವಿನವನಾದಾಗ್ಯೂ, ಗುಣಭಾವಾದಿಗಳನ್ನು ನೋಡಿದರೆ, ಚೊಚ್ಚಲ ಮಗನಂತೆ ಶ್ರೇಷ್ಠನಾದ ಹಾಗೆ ಸರಿ. ಈ ಜನಾಂಗಗಳ ಪಟ್ಟಿಯಲ್ಲಿ ಬರುವ ಹೆಸರುಗಳು ಮನುಷ್ಯರನ್ನೂ, ನೋಹನ ಮರಿಮಕ್ಕಳಿಂದ ಹಿಡಿದು ಅವರು ಇದ್ದ ದೇಶಗಳನ್ನೂ ಸಹ ಜ್ಞಾಪಕ ಮಾಡಿ ಕೊಡುತ್ತವೆ. ಮೋಸೆಯು ಈ ಪುಸ್ತಕ ರಚಿಸಿದ ಕ್ರಿಸ್ತನ ಅತ್ತಣ ೧೫೦೦ನೆ ವರ್ಷದ ಪರಿಯಂತರಕ್ಕೆ ಮನುಷ್ಯರು ತಮ್ಮ ಆದಿ ಸ್ಥಳದಿಂದ ಗುಳೆ ತೆಗೆದು ಪೃಥ್ವಿಯ ಮೇಲೆ ನಾಲ್ಕು ದಿಕ್ಕಿಗೆ ವಿಸ್ತಾರವಾದದ್ದನ್ನು ಇದರಿಂದ ತಿಳಿಯ ಬಹುದು. ಹೀಗೆ ಕುಟುಂಬಗಳು ಜನಾಂಗಗಳಾದದ್ದು, ಅವು ಪೃಥ್ವಿಯ ಮೇಲೆ ಹರೆ ಬಿದ್ದದ್ದು, ಇದೆಲ್ಲ ದೇವರು ಇಟ್ಟ ಮರ್ಯಾದಿಗೆ ಅನುಕೂಲಿಸಿತು (ಅಪೊ. ಕ್ರಿ. ೧೭, ೨೬).

ಉತ್ಪತ್ತಿ. ೧೦.

ನೋಹನು.

I. ಯಾಫೇತನು. II. ಹಾಮನು. III. ಶೇಮನು.

I. ಯಾಫೇತನು.

1. ಗೋಮೆರ್.
   1) ಅಷ್ಕೆನಸ್
   2) ರೀಫತ್
   3) ತೊಗರ್ಮಾ
2. ಮಾಗೋಗ್.
3. ಮಾದಯಿ.
4. ಯಾವಾನ್.
   1) ಎಲೀಷ್
   2) ತರ್ಷೀಷ್
   3) ಕಿತ್ತೀಮ್
   4) ದೊದನೀಮ್
5. ತುಬಲ್.
6. ಮೇಷಕ.
7. ತೀರಸ.

II. ಹಾಮನು.

1. ಕೂಷ.
   1) ಸೇಬನು
   2) ಹವೀಲನು
   3) ಸಬ್ತನು
   4) ರಾಘ್ಮ
      a) ಶೇಬನು
      b) ದೇದನು
   5) ಸಬ್ತೆಕಾ
   6) ನಿಮ್ರೋದನು
2. ಮಿಚ್ರಾಯಿಮ್.
   1) ಲೂದ್ಯರು
   2) ಅನಾಮ್ಯರು
   3) ಲೆಹಾಬ್ಯರು
   4) ನಫ್ತುಹ್ಯರು
   5) ಪತ್ರೂಸರು
   6) ಕಸ್ಲೂಹ್ಯರು
      a) ಪಿಲಿಷ್ಟ್ಯರು
      b) ಕಫ್ತೋರ್ಯರು
3. ಪೂತ್.
4. ಕನಾನ್.
   1) ಚೀದೋನನು
   2) ಹೇತನು
   3) ಯೆಬೂಸಿ
   4) ಅಮೋರಿ
   5) ಗಿರ್ಗಾಸಿ
   6) ಹಿವ್ವಿ
   7) ಅರ್ಕಿ
   8) ಸೀನಿ
   9) ಅರ್ವಾದಿ
   10) ಚೆಮಾರಿ
   11) ಹಮಾತಿ

III. ಶೇಮನು.

1. ಏಲಾಮ್.
2. ಅಷೂರ್.
3. ಅರ್ಪಕ್ಷದ್.
   - ಶೇಲಹನು
     - ಏಬೆರನು
       - ಪೇಲೆಗ್
         - ರೇಗು
           - ಸೆರೂಗನು
             - ನಾಹೋರನು
               - ತೇರಹನು
                 - ಅಬ್ರಹಾಮನು, ನಹೋರನು, ಹಾರಾನ್
                   - (ಹಾರಾನ್) ಲೋಟನು
       - ಯೊಕ್ತಾನನು
         a) ಅಲ್ಮೋದಾದನು
         b) ಶೇಲೆಪನು
         c) ಹಚರ್ಮಾವೇತನು
         d) ಯೇರಹನು
         e) ಹದೋರಮನು
         f) ಊಜಲನು
         g) ದಿಕ್ಲನು
         h) ಓಬಲನು
         i) ಅಬಿಮಯೇಲನು
         k) ಶೇಬನು
         l) ಓಫಿರನು
         m) ಹವೀಲನು
         n) ಯೊಬಬನು
4. ಲೂದ್.
5. ಅರಮ್
   1) ಊಜ್
   2) ಹೂಲ್
   3) ಗೇತೆರ್
   4) ಮಾಷ್

ಉತ್ಪತ್ತಿ. ೧೦, ೨—೫.

ನೋಹನ ಕುಮಾರರ ಸಂತತಿಯವರು ಜಲಪ್ರಳಯದ ಈಚೆಗೆ (೧೦, ೨೫.) ಸುಮಾರು ಇನ್ನು ೧೦೦ ವರುಷ ಅರ್ಮೇನಿಯದ ಮೇಲು ಶೀಮೆಗಳಲ್ಲಿಯೂ ಕಲ್ದೀಯ ದೇಶದ ತಗ್ಗುಗಳಲ್ಲಿಯೂ ಕೂಡಿದ್ದರು. ನೋಹನು ಅವರಿಗೆ ಹಿರಿಯನು ಯಾಜಕನು ಆಗಿದ್ದನು. ನೋಹನು ತಮ್ಮ ಮೇಲೆ ನುಡಿದ ಶಾಪ ಒದಗಿ ಬಂದೀತೆಂದು ಹಾಮುನವರು ಕರಕರೆ ಪಟ್ಟು, ಮೊದಲು ಗುಳೆ ತೆಗೆದು ಸೀನೆಯರ್ ಬೈಲಿನಲ್ಲಿ ಊರುಗಳನ್ನು ಮಾಡಿ ಕೊಂಡರು.

I. ಯಾಫೇತನು. ೧೦, ೨—೫.

ಇವನ ವಂಶ ಬಹಳ ವಿಸ್ತಾರವಾದದ್ದು. ಗ್ರೀಕರ ಸಂಪ್ರದಾಯದಲ್ಲಿ ಅವನ ಹೆಸರು ಯಾಪೆತನು. ಅವನು ಗ್ರೀಕರಿಗೆ ಮೂಲಪಿತೃವಂತೆ. ಹಿಂದು ಜನರ ಶಾಸ್ತ್ರಗಳಲ್ಲಿ ನೋಹನಿಗೆ ಸತ್ಯವ್ರತಮನುವೆಂದು ಹೆಸರು ಅದೆ. ಅವನ ಮೂರು ಮಂದಿ ಕುಮಾರರು—ಶರ್ಮ (ಶೇಮನು), ಹರ್ಮ (ಹಾಮನು), ಜಯಪತಿ (ಯಾಫೇತನು). ತಂದೆಗೆ ಮರ್ಯಾದೆ ತೋರಿಸದೆ ಇದ್ದದರಿಂದ ಹರ್ಮನಿಗೆ ತಂದೆಯಿಂದ ಶಾಪ ಬಂತು ಅಂತೆ.

1. ಗೋಮೆರ್ (ಎಜೇ. ೩೮, ೬). ಕಾನಾನ್ ದೇಶಕ್ಕೆ ಉತ್ತರದಲ್ಲಿದ್ದ ಜನರು. ಯುರೋಪ ಖಂಡದ ಉತ್ತರ ಭಾಗದಲ್ಲಿಯ ಕಿಮ್ಮೇರಿಯರೂ, ಕಿಂಬರರು ಮೊದಲಾದ ಗೆರ್ಮಾನರೂ (ಜೆರ್ಮನ್), ಇಂಗ್ಲಂಡದ ವೇಲ್ಸ ಎಂಬ ಶೀಮೆಯಲ್ಲಿ ಪೂರ್ವದಲ್ಲಿದ್ದ ಕ್ಮರರೂ, ಇವನ ಅನ್ವಯದವರಾಗಿದ್ದಾರು. ಕ್ರಿಮ್ ಎಂಬ ಅರ್ಧ ದ್ವೀಪಕ್ಕೆ ಇವರಿಂದ ಹೆಸರಾಗಿರ ಬಹುದು.—ಈ ಗೋಮೆರನ ಮಕ್ಕಳು ಯಾರಂದರೆ:

೧) ಅಷ್ಕೆನಸ್ (ಯೆರೆ. ೫೧, ೨೭). ಯವನರ ಕವೀಶ್ವರನಾದ ಹೊಮೇರನು ಇದ್ದಾಗ, ಇವನ ವಂಶದವರು ಸಣ್ಣ ಏಸಿಯದ ಫ್ರೀಗಿಯ ಶೀಮೆಯಲ್ಲಿ ಇದ್ದು ಅಸ್ಕಾನಿಯರೆಂದೆನಿಸಿದರು. ಆ ಮೇಲೆ ಅವರು ಅಲ್ಲಿಂದ ಹೋಗಿ, ಯುರೋಪ ಖಂಡದ ಪಶ್ಚಿಮ ಭಾಗವನ್ನು ತುಂಬಿ, ಇಬೇರಿಯರು, ಬಸ್ಕರು, ಕೆಲ್ತರು, ಗಲ್ಲಿಯರು, ಕೆಲ್ತಬೇರಿಯರು, ಸಕ್ಸರು ಎಂದು ಹೆಸರುಗೊಂಡರು.

೨) ರೀಫತ್. ಇವನ ವಂಶದವರು ಪೂರ್ವದಲ್ಲಿ ರಾ ಎಂದು ಈಗ ವೊಲ್ಗಾ ಎಂದೆನಿಸುವ ನದಿಯ ಉತ್ಪತ್ತಿಯಲ್ಲಿ, ಊರಲ್ (ರೀಫತ್ ಪರ್ವತ) ಪರ್ವತದ ಶೀಮೆಯಿಂದ ಕರ್ಪಾಥ ಪರ್ವತಗಳ ತನಕ ವಾಸ ಮಾಡುತ್ತಿದ್ದರು. ಥೊಗರ್ಮನವರು ಇವರನ್ನು ಇವರ ಸ್ಥಳದಲ್ಲಿ ಇರಗೊಡದಲ್ಲಿದಕ್ಕೆ, ಇವರು ಯುರೋಪ ಮತ್ತು ಏಸಿಯ ಖಂಡಗಳ ಉತ್ತರ ಭಾಗಗಳನ್ನು ಮಹಾ ಸಾಗರದ ತನಕ ತಕ್ಕೊಂಡರು. ಅವರೊಳಗೆ ಕೆಲವರು ಊರಲ್ ಪರ್ವತದ ಹತ್ತರದಲ್ಲಿ ಕಾಮ ವೊಲ್ಗಾ ನದಿಯ ತಗ್ಗಿನಲ್ಲಿ ಉಳಿದರು. ಇವರಿಂದ ಹುನ್ನರು ಹುಟ್ಟಿದರು. ಹುನ್ನರಿಂದ ಅವಾರರೂ, ಖಜಾರರೂ, ಉಂಗಾರರೂ ಅಥವಾ ಮಗ್ಯಾರರೂ ಭಿನ್ನರೂ ಉತ್ಪತ್ತಿ ಆದರು. ಮಗ್ಯಾರರ ಮೂಲಪಿತೃ ಅರ್ಪಾತನಂತೆ (ರೀಪತ).

೩) ಥೊಗರ್ಮನು (ಎಜೇ. ೨೭, ೧೪. ೩೮, ೬). ಕಾನಾನ ದೇಶಕ್ಕೆ ಉತ್ತರದಲ್ಲಿದ್ದ ಸ್ಕೀಥರೂ, ಸರ್ಮಾತರೂ ಇವನ ಸಂತತಿಯವರು. ಇವರಲ್ಲಿ ಕೆಲವರು ಸಣ್ಣ ಏಸಿಯದಲ್ಲಿಯೂ, ಅರ್ಮೇನಿಯದಲ್ಲಿಯೂ, ಉಳಿದರು. ಅದಕ್ಕೆ ಅರ್ಮೇನಿಯರು ಥೊರ್ಗೋಮ್ (ಥೊಗರ್ಮ) ಮನೆಯವರು ಎಂದೆನಿಸುವರು. ಒಟ್ಟಿಗೆ ಕೌಕಾಸ ಪರ್ವತದ ನಿವಾಸಿಗಳು ಥರ್ಗಮೊಸ್ ಎಂಬ ಮೂಲಪಿತೃವಿನಿಂದ ಉತ್ಪತ್ತಿಯಾದರಂತೆ. ತಮ್ಮ ಆದಿ ಸ್ಥಳವು ಕೂರ್ ಮತ್ತು ಅರಕ್ಸೆಸ್ ಎಂಬ ಹೊಳೆಗಳ ಹತ್ತರದಲ್ಲಿ ಇತ್ತೆಂದು ಸ್ಕೀಥರು ಅನ್ನುತ್ತಾರೆ. ಆ ಬಳಿ ಮಸ್ಸಗೇತರು ಬಂದು, ಅವರನ್ನು ಮುಂದಕ್ಕೆ ಸರಿಸಿದದರಿಂದ, ಅವರು ದೋನ್

ಹೊಳೆಯ ಪಶ್ಚಿಮ ಶೀಮೆಯಲ್ಲಿ ಈಗ ರುಸ್ಸಿಯ ಎನಿಸುವ ದೇಶದಲ್ಲಿ ವಾಸ ಮಾಡುವವರಾದರು. ಅವರಿಗೆ ನೆಂಟರಾದ ಸರ್ಮಾತರೂ, ಸೌರೊಮಾತರೂ, ದೋನ್ ಹೊಳೆಯ ಪೂರ್ವದಲ್ಲಿ ನಿಂತರು.

2. ಮಾಗೋಗನು. ಇವನಿಂದ (ಎಜೇ. ೩೮—೩೯. ಪ್ರಕಟ. ೨೦, ೮.) ಕಾನಾನ್ ದೇಶಕ್ಕೆ ಉತ್ತರದಲ್ಲಿರುವ ಜನಾಂಗದವರು ಹುಟ್ಟಿದರು. ಇವರು ಕಡೇ ಕಾಲದಲ್ಲಿ ತಮ್ಮ ಅಧಿಪತಿಯಾದ ಗೋಗನ ಸಂಗಡ ಇಸ್ರಾಯೇಲನವರ ಮೇಲೆ ಬಿದ್ದು ಯುದ್ಧ ಮಾಡಿ ಪೂರ್ವಕ್ಕೆ ಓಡಿ ಹೋಗುವರು. ಇವರು ಸ್ಕೀಥರೂ, ಏಸಿಯ ಖಂಡದ ಉತ್ತರ ಭಾಗದೊಳಗೆ ಗೋಬಿ ಎಂಬ ಅರಣ್ಯದಲ್ಲಿಯೂ ಮಂಚೂರ ದೇಶದಲ್ಲಿಯೂ ವಾಸ ಮಾಡುವ ಮೊಂಗೋಲರೂ (ಮೊಗ್ಲಾಯಿ), ತುಂಗೂಸರೂ. ಕ್ರಿಸ್ತನ ಶಕದ ೫ನೆ ಶತಮಾನದಲ್ಲಿ ಅವರು ಚೀನ ದೇಶದವರಿಗೆ ಬಹಳ ಉಪದ್ರ ಕೊಡುತ್ತಿದ್ದರು. ಕಡೆಗೆ ೧೭ನೆ ಶತಮಾನದಲ್ಲಿ ಅವರು ಮಂಚುಗಳೆಂದೆನಿಸಿ ಚೀನ ದೇಶವನ್ನು ತಕ್ಕೊಂಡರು. ದಿಲ್ಲಿ ಸಂಸ್ಥಾನದಲ್ಲಿ ಇದ್ದು ಹಿಂದು ದೇಶವನ್ನು ಮಹಾರಾಜರಾಗಿ ಆಳಿದ ಪಾಥರೂ ಇವರ ಅನ್ವಯದವರು.

3. ಮಾದಯಿ ಎಂಬ ಯಾಫೇತನ ಮೂರನೇ ಮಗನಿಂದ ವಿಶೇಷವಾಗಿ ಮೇದರು ಮತ್ತು ಫಾರ್ಸಿ, ಜಂದ ಸಂಸ್ಕೃತ ಭಾಷೆಗಳನ್ನು ಆಡುವವರೆಲ್ಲರು ಉತ್ಪತ್ತಿಯಾದರು. ಇವರು ಮೊದಲು ಇರಾನ್ ಎಂಬ ಮೇಲುಶೀಮೆಯಲ್ಲಿ ಆರಲ್ ಸರೋವರದ ಹತ್ತೀಲಿ ಇದ್ದರು. ಆವಾಗ ಫಾರ್ಸಿ ಭಾಷೆಗೂ ಸಂಸ್ಕೃತ ಭಾಷೆಗೂ ಮೂಲವಾಗಿರುವ ಒಂದೇ ಭಾಷೆ ಇತ್ತು. ಕಾಲಗತಿಯಲ್ಲಿ ಪಶ್ಚಿಮೋತ್ತರಕ್ಕೂ, ಪೂರ್ವದಕ್ಷಿಣಕ್ಕೂ, ಮುಖ್ಯವಾಗಿ ವಿಸ್ತಾರವಾಗಿ ಹೋದರು. ಇತ್ತಲಾಗಿ ಪೂರ್ವ ದಕ್ಷಿಣಕ್ಕೆ ಬಂದವರು ಕಾಬುಲ ದೇಶದಲ್ಲಿ ಹಾದು, ಪೇಶಾವರ ಪಟ್ಟಣದ ಬಳಿಯಲ್ಲಿ ಕಣಿವೆ ದಾಟಿ, ಹಿಮಾಚಲ ಇಳಿದು, ಪಂಚಾಬ ದೇಶಕ್ಕೂ ಗಂಗಾನದಿಯ ತಗ್ಗಿಗೂ ಬಂದು, ಅಲ್ಲಿಗೆ ಮೊದಲು ಬಂದಿದ್ದ ಕೂಷನ ವಂಶದವರನ್ನು ವಶ ಮಾಡಿಕೊಂಡು, ಹಿಂದುಸ್ಥಾನವನ್ನು ತುಂಬಿದರು. ಇವರೇ ಆರ್ಯರು. ಆರಂಭದಲ್ಲಿ ಒಂದೇ ಆಗಿ ಕೂಡಿದ್ದವರು ಕಾಲಾಂತರದಲ್ಲಿ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಎಂದು ಮೂರು ಭೇದವಾದರು. ಆ ಕೂಷನ ಅನ್ವಯದವರಿಗೆ ಶೂದ್ರರು (ಸೇವಾವೃತ್ತಿಯಿಂದ ನಡೆಯ ತಕ್ಕವರು) ಎಂದರು. ಆದರೆ ಆ ಕೂಷನವರಲ್ಲಿ ಇದ್ದ ಮೂಲ, ಮೆಲ್ಲ ಮೆಲ್ಲಗೆ ತಮ್ಮ ಆದಿ ಭಾಷೆಯಾದ ಸಂಸ್ಕೃತವನ್ನು ಮರೆತು ತಮ್ಮಿಂದ ಶೂದ್ರರೆಂದು ಅನ್ನಿಸಿ ಕೊಂಡವರಿಂದ ಕಲಿಕಲಿತು, ಅವರ ಹಾಗೆ ಒಂದುವರೆ ಆದರು. ಹೀಗೆ ಹಾಮನವರ ತರ ಬುದ್ಧಿ ಸಂಸ್ಕೃತದಲ್ಲಿ ಬರೆದಿರುವ ಅವರ ಮತಶಾಸ್ತ್ರಗಳಲ್ಲಿ ಕೂಡಿ ಮಿಸ್ರವಾಗಿ, ಅವರ ಮತಗಳು ಬಹಳ ಅಸಹ್ಯವಾದಂಥಾವು ಆದವು. — ಪಶ್ಚಿಮೋತ್ತರಕ್ಕೆ ಹೋದವರಲ್ಲಿ ಫಾರ್ಸಿ ದೇಶದೊಳಗಣ ಕೆರ್ಮಾನ ಶೀಮೆಯಿಂದ ಒಂದು ಗೋತ್ರದವರು ಹೊರಟು, ಒಕ್ಸುಸ್ ಹೊಳೆ ದಾಟಿ, ಕಸ್ಪಿ ಸಮುದ್ರದ ಥಡ ಹಿಡಕೊಂಡು, ಥೊಗರ್ಮನವರೊಳಗೆ ಸ್ಲಾವರ ಗೋತ್ರದವರಲ್ಲಿ ಹಾದು, ಯೂರೋಪಕ್ಕೆ ಹೋಗಿ, ಅಲ್ಲಿ ನಿಂತು ಗೆರ್ಮಾನರು ಎಂಬ ನಾಮದಿಂದ ಪ್ರಸಿದ್ಧವಾದರು. ಆರ್ಯರ ಹಾಗೂ ಫಾರ್ಸಿಯರ ಭಾಷೆಗಳಿಗೂ, ಗೆರ್ಮಾನರ ಭಾಷೆಗಳಿಗೂ, ಬಹಳ ಸಂಬಂಧವಿರುವದರಿಂದ ಮಾದಯಿ ಅವರ ಮೂಲ ಒಂದೇ ಎಂದು ಕಂಡು ಬರುತ್ತದೆ.

4. ಯಾವಾನನು ಗ್ರೀಕರಿಗೂ ರೋಮಯರಿಗೂ ಮುಖ್ಯವಾಗಿ ಮೂಲಪಿತೃವಾದನು. ಪೂರ್ವದಲ್ಲಿ ಗ್ರೀಕರಿಗೆ ಯಾವೋನರು ಎಂದು ಹೆಸರಿತ್ತು. ಅವರು ತಾವೆ ತಮ್ಮ ಮೂಲಪಿತೃ ಯಾವೊನ್ ಎಂದು ಹೇಳುತ್ತಾರೆ. ಪುರಾತನ ಹೆಸರು ಕಾಲಗತಿಯಿಂದ ಸಣ್ಣ ಏಸಿಯದಲ್ಲಿ ಇದ್ದ ಗ್ರೀಕರ ಜನಾಂಗದ ಒಂದು ಭಾಗಕ್ಕೆ ಮಾತ್ರ ಉಳಿಯಿತು. ಅದರಿಂದ ಇಂದಾದರೂ ಗ್ರೀಕ ದೇಶವನ್ನು ಪಶ್ಚಿಮ ಪಾರ್ಶ್ವದಲ್ಲಿ ಸು

ತ್ತುವ ಸಮುದ್ರಕ್ಕೂ, ಅದರಲ್ಲಿಯ ದ್ವೀಪಗಳಿಗೂ, ಯೋನಿಯ ಸಮುದ್ರವೆಂದು ಯೋನಿಯ ದ್ವೀಪಗಳೆಂದು ಹೆಸರು ಅದೆ. ಯಾವಾನನ ವಂಶದವರು ಮಕೆದೋನಿಯದಲ್ಲಿಯೂ, ಥೆಸ್ಸಾಲಿಯದಲ್ಲಿಯೂ, ಗ್ರೀಕ ದೇಶದಲ್ಲಿಯೂ, ಇದ್ದು ಅಲ್ಲಿಗೆ ಬಂದಿದ್ದ ಗೋಮೆರನವರನ್ನು ಉತ್ತರದ ಹಾಗೂ ಪಶ್ಚಿಮದ ಕಡೆಗೆ ದೂಡಿದರು. ಯಾವಾನನ ಮಕ್ಕಳು ಯಾರಂದರೆ:

a) ಎಲೀಷನು=ಹೆಲೀಷ=ಹೆಲ್ಲಸ್ (ಗ್ರೀಕ ದೇಶ). ಹೆಲ್ಲೆನ್. ಇವನ ಮಗನು ಎವೊಲನು. ಇವನಿಂದ ಎವೊಲಿಯರ ಗೋತ್ರ ಹುಟ್ಟಿತು. ಎಲಿಸ್=ಗ್ರೀಕ ದೇಶದ ಒಂದು ಶೀಮೆ (ಎಜೇ. ೨೭, ೭).

b) ಥರ್ಶೀಷ್. ಇವನಿಂದ ದೋರಿಯರು ಎಂಬ ಗ್ರೀಕರ ಒಂದು ಗೋತ್ರ ಉದ್ಭವಿಸಿತು. ಇವರು ಇದ್ದ ಶೀಮೆಗೆ ದೋರಿಯ ಎಂಬ ನಾಮ ಬಂತು. ಈ ದೋರಿಯರು ಹಿಸ್ಪನಿಯ ದೇಶಕ್ಕೆ ಹೋಗಿ, ಅದರ ದಕ್ಷಿಣ ತುದಿಯಲ್ಲಿ ಒಂದು ಊರು ಮಾಡಿ ಕೊಂಡರು. ಅದಕ್ಕೆ ಥರ್ಶೀಷ್=ತರ್ತೆಸ್ಸುಸ್ ಎಂಬ ಹೆಸರಾಯಿತು. ಫೊನಿಕಿಯದವರು ವ್ಯಾಪಾರಕ್ಕಾಗಿ ಅಲ್ಲಿಗೆ ಹೋಗುತ್ತಾ ಇದ್ದರು.

c) ಕಿತ್ತೀಮ್, ಗ್ರೀಕ ಭಾಷೆಯಲ್ಲಿ ಕೂಥೊಸ್. ಇವನು ಹೆಲ್ಲೇನನ ಮಗನು. ಅವನು ಗ್ರೀಕ ದೇಶದ ಒಂದು ಶೀಮೆಯವರಾದ ಅಖಾಯರಿಗೂ, ಸಣ್ಣ ಏಸಿಯದಲ್ಲಿ ಇದ್ದ ಯೋನಿಯರಿಗೂ ಮೂಲಪಿತೃ. ಮಕೆದೋನಿಯದಲ್ಲಿ ಕಿತಿಯ ಎಂದೆನಿಸುವ ಒಂದು ಊರು, ಮತ್ತು ಒಂದು ಪರ್ವತ ಇರುವದರಿಂದ, ಮಕೆದೋನಿಯದ ನಿವಾಸಿಗಳು ಸಹಾ ಅವನ ವಂಶದವರು ಎಂದು ಊಹಿಸ ಬಹುದು. ದಾನಿ. ೧೧, ೩೦ನೆ ವಚನದಿಂದ ಈ ಗೋತ್ರದವರಲ್ಲಿ ಕೆಲವರು ರೋಮಕ್ಕೂ ಹೋದರು ಎಂಬದಾಗಿ ಊಹೆ ತೋರುತ್ತದೆ.

d) ದೊದನೀಮ್ ಎಂಬವನಿಂದ ಗ್ರೀಕ ದೇಶದೊಳಗಣ ಎಪೀರ ಶೀಮೆಯಲ್ಲಿದ್ದ ದೊದನೇಯರು ಹುಟ್ಟಿದರು. ದೊದೊನ್ ಎಂಬ ಸ್ಥಳದಲ್ಲಿ ಗ್ರೀಕರ ಪುರಾತನರಲ್ಲಿ ಬಹಳ ಪ್ರಸಿದ್ಧಿಗೆ ಬಂದ ಒಂದು ಕ್ಷೇತ್ರವಿತ್ತು. ಈ ದೊದೋನೇಯರಲ್ಲಿ ಕೆಲವರು ಪೋ ಎಂಬ ಹೊಳೆ ಹರಿಯುವ ಶೀಮೆಗೆ ಹೋದರು.

5. ಥುಬಲನ ಅನ್ವಯದವರು (ಎಶ. ೬೬, ೧೯.) ಧನುರ್ವಿದ್ಯೆಯಲ್ಲಿ ಜಾಣರಾದ ಥಿಬರೇನರು (ಎಜೇ. ೨೭, ೧೩. ೩೨, ೩—೬. ೩೯, ೧). ಇವರು ಮೇಷೆಕನ ಸಮೀಪದಲ್ಲಿ ಇದ್ದರು. ಇವರ ವಾಸಸ್ಥಳವು ಕಾನಾನ್ ದೇಶಕ್ಕೆ ಪೂರ್ವೋತ್ತರದಲ್ಲಿ ಮಾಗೋಗನ ವಾಸಸ್ಥಳಕ್ಕೂ ಮೇಷೆಕನ ವಾಸಸ್ಥಳಕ್ಕೂ ನಡುವಿನಲ್ಲಿ ಆರಲ್ ಸರೋವರದಿಂದ ಹಿಡಿದು ಅಲ್ತಾಯಿ ಪರ್ವತದ ಪರಿಯಂತರ ಇತ್ತು. ಅವರಿಂದ ತೊಬಲ್ ಹೊಳೆಗೆ ಹೆಸರು ಬಂತು. ಅವರು ತುರಕರು ತರ್ತಾರರು ಎನಿಸುತ್ತಿದ್ದರು. ಅವರು ಈಗ ಬಹಳ ಹರೆಬಿದ್ದಿದ್ದಾರೆ, ಕಾಡುಜನರಾಗಿದ್ದಾರೆ.

6. ಮೇಷೆಕ (ಕೀರ್ತ. ೧೨೦, ೫). ಕಪ್ಪು ಸಮುದ್ರಕ್ಕೂ ಕಸ್ಪಿ ಸಮುದ್ರಕ್ಕೂ ನಡುವಣ ಮೋಸ್ಕದ ಗುಡ್ಡಗಳಲ್ಲಿ ವಾಸಿಸುತ್ತಿದ್ದ ಮೋಸ್ಕರು, ಕಸ್ಪಿ ಸಮುದ್ರದ ಇಕ್ಕಡೆಯಲ್ಲಿ ಇದ್ದ ಮಸ್ಸಗೇತರು. ಮಸ್ಸಗೇತರು ಅವರನ್ನ ಬಿಟ್ಟು ಹೋದ ಬಳಿಕ, ಅವರು ಕಡೆಮೆ ಆಗಿ ಸರ್ಮಾತರಲ್ಲಿಯೂ, ತುರಕರಲ್ಲಿಯೂ, ತರ್ತಾರರಲ್ಲಿಯೂ, ಕೂಡಿ ಹೋದರು.

7. ಥೀರಸನ ಸಂತತಿಯವರು ಪಶ್ಚಿಮಕ್ಕೆ ದೋನೌ ಎಂಬ ಹೊಳೆಯ ಶೀಮೆಗೆ ಹೋದರೆಂದು ಊಹೆ ಕಟ್ಟಲಾದೀತು. ಪೂರ್ವದ ಥ್ರಾಕಿಯರು, ಇಲ್ಲೀರಿಯರು, ಪನೋನಿಯರು, ಗೇತರು, ಈಗಿನ ಅಲ್ಬನೇಸರು, ಬುಲ್ಗಾರರು, ವಲ್ಲಕರು ಅವರೊಳಗಿನವರು.—ಈ ಯಾಫೇತನ ವಂಶದಲ್ಲಿ ಹುಟ್ಟಿದ ಜನಾಂಗಗಳೆಲ್ಲಾ, ವಿಶೇಷವಾಗಿ ಗೋಮೆರನು, ಮಾದಯಿ, ಯಾವಾನನು ಎಂಬೀ ಕುಮಾರರಿಂದ ಜನಿಸಿದ ಜನಾಂಗ

ಗಳು ಒಂದಕ್ಕೆ ಒಂದು ಸಂಬಂಧವಾದ ಭಾಷೆಗಳನ್ನು ಆಡುತ್ತಾವೆ. ಹಾಗೂ ಗುಣಭಾವಗಳಲ್ಲಿ ಒಂದಕ್ಕೊಂದು ಸಮಾನವಾಗಿದ್ದಾವೆ. ಅಷ್ಟು ಬಹಳ ಹೆಚ್ಚು ಕಡಿಮೆ ಇಲ್ಲ. ಇದರಿಂದ ಅವರೆಲ್ಲರು ಒಬ್ಬನೇ ಮೂಲಪಿತೃವಿನಿಂದ (ಯಾಫೇತನಿಂದ) ಹುಟ್ಟಿದರೆಂದು ಸಿದ್ಧಾಂತವಾಯಿತು.

೫ ವ. ಇವರಿಂದ (ಯಾಫೇತನ ಸಂತತಿಯವರಿಂದ) ಜನಾಂಗಗಳ ದ್ವೀಪಗಳು (ಕನಾನ ದೇಶಕ್ಕೆ ಮುಖ್ಯವಾಗಿ ಪಶ್ಚಿಮ ಶೀಮೆಗಳು, ಅಲ್ಲಿ ಬಹಳ ದ್ವೀಪಗಳು ಇದ್ದವು) ಅವರವರ ದೇಶಗಳಲ್ಲಿ, ಒಂದೊಂದು ಜನಾಂಗ ಅದರದರ ಭಾಷೆಯ ಹಾಗೆ, ಅವರವರ ಗೋತ್ರಗಳ ಪ್ರಕಾರ, ಅವರವರ ಜನಾಂಗಗಳಲ್ಲಿ ವಿಸ್ತಾರವಾದವು (ತುಂಬಿದವು).

II. ಹಾಮನು. ೧೦, ೬—೨೦.

ನೋಹನ ಚಿಕ್ಕ ಮಗನಾದ ಇವನು ಮೊದಲು ಉಷ್ಣವಾದ ದಕ್ಷಿಣ ದಿಕ್ಕಿಗೆ ಹೋದನು. ಮಿಜ್ರ ದೇಶದ ಪುರಾತನರು ತಮ್ಮ ದೇಶಕ್ಕೆ ಹಾಮನ ದೇಶವೆಂದು ಅನ್ನುತ್ತಿದ್ದರು. ಮಿಜ್ರದಲ್ಲಿಯ ಹೆರ್ಮೊಪೊಲಿಸ್ ಎಂಬ ಊರಲ್ಲಿ ಹಮೋ ಎಂಬುವ ಒಂದು ವಿಗ್ರಹವನ್ನು ಆರಾಧಿಸುತ್ತಿದ್ದರು (ಲೇವಿಕ. ೨೬, ೩೦). ೨ ದಿನಚರ್ಯ. ೩೪, ೪. ಹೇಳಿರುವ ಹಮ್ಮೋನೀಮ್ ಎಂಬವೇ ಆ ದೇವರ ಮೂರ್ತಿಗಳು. ಆ ಹಾಮನವರು ಅಜ್ಞಾನಿಗಳಾಗಿ, ಹೀಗೆ ತಮ್ಮ ಮೂಲಪಿತೃವಾದ ಹಾಮನು ದೇವರೆಂದು ಸಂಕಲ್ಪಿಸಿದರು. ಕೂಷನು, ಮಿಜ್ರನು, ಪೂತನು ಎಂಬೀ ಮೂರು ಗೋತ್ರಗಳಾಗಿ, ಅವರು ಸೀನೆಯರ್ ಎಂಬ ಬೈಲಿನಿಂದ ಹೊರಟು, ಯುಫ್ರಾತ ತಿಗ್ರಿಸ್ ಹೊಳೆಗಳು ಫಾರ್ಸಿ ಸಮುದ್ರದಲ್ಲಿ ಕೂಡುವ ಕಡೆಗೆ ಮುಂದೆ ಸಾಗಿಕೊಂಡು ಹೋದರು. ಹಾಮನ ನಾಲ್ಕನೆ ಮಗನಾದ ಕನಾನನ ವಂಶದವರು ಮಾತ್ರ ಏಸಿಯ ಖಂಡದ ಮುಂಭಾಗವನ್ನು ತುಂಬಿದರು.

1. ಕೂಷ. ಇವನಿಂದ ದಕ್ಷಿಣದಲ್ಲಿಯೂ, ಪೂರ್ವದಕ್ಷಿಣದಲ್ಲಿಯೂ, ವಾಸ ಮಾಡುವ ಕಪ್ಪು ವರ್ಣದ ಜನಾಂಗಗಳು ಉತ್ಪತ್ತಿ ಆದವು. ಚರಿತ್ರಾಗ್ರಂಥಕಾರನಾದ ಯೋಸೇಫನ ದಿನಗಳಲ್ಲಿ ಮಿಜ್ರ ದೇಶದ ದಕ್ಷಿಣದಲ್ಲಿ ಇದ್ದ ಎಥಿಯೊಪಿಯರು ಕೂಷನವರು ಎಂದು ಅನ್ನಿಸಿ ಕೊಳ್ಳುತ್ತಿದ್ದರು. ಕೂಷ ಎಂಬ ಶಬ್ದದೊಳಗೆ ಮಿಜ್ರ ದೇಶದ ದಕ್ಷಿಣ ಭಾಗವೂ, ಹಬ್ಬೆಶಿಯರ ದೇಶವೂ ಇವಲ್ಲದೆ, (ಉತ್ಪ. ೨, ೧೩. ಲೇವಿಕ. ೧೨, ೧. ಕೀರ್ತ. ೮೭. ೨ ದಿನಚರ್ಯ. ೧೪.) ಪೃಥ್ವಿಯ ದಕ್ಷಿಣ ಮತ್ತು ಪೂರ್ವದಕ್ಷಿಣ ಭಾಗವೆಲ್ಲಾ ಬಂದ ಹಾಗಾಯಿತು. ಕೂಷನ ವಂಶಬಳ್ಳಿ ಹಿಂದು ಕುಷ ಪರ್ವತದ ಮೇಲೆ ಹಾದು, ಚೀನ ದೇಶಕ್ಕೂ, ಹಿಂದುಸ್ಥಾನಕ್ಕೂ, ಹಿಂದಿನ ಇಂದಿಯ ದೇಶಗಳಿಗೂ, ಮಹಾ ಸಾಗರದ ದ್ವೀಪಗಳಿಗೂ, ಅರಾಬಿಯದ ದಕ್ಷಿಣದ ಭಾಗದ ಮೇಲೆ ಹಾದು, ಅಫ್ರಿಕ ಖಂಡದ ದಕ್ಷಿಣದ ಕಡೆಗೂ, ಹಬ್ಬಿ ಹೋಯಿತು. ಕೂಷನವರು ಹಾಮನ ವಂಶದವರಲ್ಲಿ ಉತ್ತಮರು, ಬಹಳ ಭಯಭಕ್ತರೆಂದು ಪ್ರಸಿದ್ಧಿಗೆ ಬಂದವರು. ಕನಾನನ ಸಂತತಿಯವರು ಮಾತ್ರ ಕೆಟ್ಟವರು. ಇವನ ೫ ಮಂದಿ ಕುಮಾರರು ಯಾರಂದರೆ:

a) ಸೇಬ=ಮೇರೊವೆ ಎಂಬ ದೇಶವೂ ಅದರ ನಿವಾಸಿಗಳೂ. ಕೂಷನವರೊಳಗೆ ಇವರೇ ಮಾತ್ರ ಅಫ್ರಿಕ ಖಂಡಕ್ಕೆ ಹೋದವರು.

b) ಹವೀಲ (ಉತ್ಪ. ೨, ೧೧). ಪೀಶೋನ ಹೊಳೆ ಸುತ್ತಿ ಹರಿಯುತ್ತಿದ್ದ ಬಂಗಾರದ ದೇಶಕ್ಕೆ ಈ ಹೆಸರು ಇತ್ತು. ಹವೀಲನ ಗೋತ್ರದವರು ಮೊದಲು ಹಿಂದು ಕುಷ ಪರ್ವತಕ್ಕೂ ಉತ್ತರದಲ್ಲಿ ಅಲ್ತಾಯಿ ಪರ್ವತಕ್ಕೂ ಹೋದರು. ತರುವಾಯ ಯಾಫೇತನವರೂ ಬಂದು ಅವರನ್ನ ಮುಂದಕ್ಕೆ ದೊಬ್ಬಿದಕ್ಕೆ ಅವರು ಚೀನ ದೇಶಕ್ಕೆ ಬಂದರು.

c) ಸಬ್ತಾ ಎಂಬವನ ಗೋತ್ರದವರು ಶೀಬೆತ ದೇಶಕ್ಕೂ ಹಿಂದಿನ ಇಂದಿಯದ ಬೈಲುಗಳಿಗೂ ಹೋದರು.

d) ರಾಷ್ಮ ಎಂಬವನಿಗೆ ಇದ್ದ ಶೇಬನು ದೇದನು ಎಂಬೀ ಇಬ್ಬರು ಕುಮಾರರಿಂದ ಗಂಗಾನದಿಯ, ಹಾಗೂ ಸಿಂಧುನದಿಯ ಗುಡ್ಡದ ಶೀಮೆಗಳ ಮೂಲನಿವಾಸಿಗಳು ಹುಟ್ಟಿದರು. ಮಾದಯಿ ಎಂಬವನ ಅನ್ವಯದವರೂ ಈ ಶೀಮೆಗಳಿಗೆ ಬಂದು ಈ ಮೂಲನಿವಾಸಿಗಳನ್ನೂ, ಸಬ್ತೆಖನ ಸಂತತಿಯವರನ್ನೂ, ವಶಮಾಡಿ ಕೊಂಡು ತಮ್ಮ ಸಂಗಡ ಮಿಸ್ರವಾಗಿ ಹುಟ್ಟಿದವರಿಗೆ ಶೂದ್ರರು, ಮಿಸ್ರವಾಗದವರಿಗೆ ಹೊಲೆಯರು ಅಂದರು.

e) ಸಬ್ತೆಖನಿಂದ ದಕ್ಷಿಣಾಪಥದ, ಹಾಗೂ ಲಂಕಾದ್ವೀಪದ, ಹಾಗೂ ಗುರ್ಜರ ದೇಶದ ಮೂಲನಿವಾಸಿಗಳೂ, ಕೇರಳ ತೌಳವ ಕರ್ಣಾಟಕ ಆಂಧ್ರ ದ್ರಮಿಡ ಎಂಬೀ ಪಂಚದ್ರಾವಿಡ ಭಾಷೆಗಳನ್ನು ಆಡುವ ಮೂಲನಿವಾಸಿಗಳೂ, ಜನಿಸಿದರು. ಇವರೆಲ್ಲರು ಆಡುವ ಭಾಷೆಗಳಿಗೂ ಸಬ್ತನಿಂದಲೂ ಹವೀಲನಿಂದಲೂ ಹುಟ್ಟಿ ಬಂದ ಗೋತ್ರದವರು ಆಡುವ (ಇಂದೊಚೀನಕ) ಭಾಷೆಗಳಿಗೂ ಬಹಳ ಸಂಬಂಧ ಉಂಟು.

f) ನಿಮ್ರೋದನು = ನಾವು ತಿರಿಗಿ ಬೀಳುವ. ಈ ಹೆಸರು ಅವನ ಭಾವವನ್ನು ತೋರಿಸಿ ಕೊಡುತ್ತದೆ.

೮ ವ. ಕರ್ತನ ಮುಂದೆ) ಆತನ ಎಣಿಕೆಯಲ್ಲಿ ಸಹ ಶೂರನಾಗಿದ್ದನು. ಶೂರನಾಗಿದ್ದದ್ದು ಅಲ್ಲ, ತನ್ನ ಶೂರತ್ವವನ್ನು ಕೇಡಿಗಾಗಿ ಪ್ರಯೋಗಿಸಿದ್ದೇ ಪಾಪ.—ಹಾಳೆ ಬಿದ್ದ ಬಾಬಲಕ್ಕೆ ಇಂದೂ ಅಲ್ಲಿಯವರು ನಿಮ್ರೋದನ ಕೋಟಿ ಅನ್ನುತ್ತಾರೆ.

೧೦—೧೨. ವಚನಗಳಲ್ಲಿ ಹೇಳಿರುವ ಊರುಗಳ ಗುರುತುಗಳು ಬಾಬಿಲೋನಿಯದ ಹತ್ತರ ಇನ್ನು ಹೆಚ್ಚು ಕಡಿಮೆ ತೋರುತ್ತವೆ. ಆ ಮೇಲೆ ನಿನೆವೆ ಎಂಬದು ಅಷೂರದ ಮಹಾರಾಜ್ಯಕ್ಕೆ ಸಂಸ್ಥಾನವಾಯಿತು. ಕೆಲವು ಜನಾಂಗಗಳಲ್ಲಿ ಇವನ ಕುರಿತಾದ ಸಂಪ್ರದಾಯ ಏನಂದರೆ: ದೇವರಿಗೆ ತಿರಿಗಿ ಬಿದ್ದು, ಪರಲೋಕವನ್ನು ಸ್ವಾಧೀನ ಮಾಡಿ ಕೊಳ್ಳ ಬೇಕೆಂದು, ಅವನು ಒಳಸಂಚು ಮಾಡಿದನು. ತರುವಾಯ ಅವನು ನಕ್ಷತ್ರಮಂಡಲದಲ್ಲಿ ಒರೀಯೊನ್ ಎಂಬ ನಕ್ಷತ್ರರಾಶಿಯಾಗಿ ತಿರುಗುವವನಾದನು. ಅದರ ಹಿಂದಿನ ನಕ್ಷತ್ರರಾಶಿಯಾದ ದೊಡ್ಡ ನಾಯಿ ಅವನ ಬೆನ್ನು ಹತ್ತಿ ಬರುವದು. ಈ ರಾಶಿಯಲ್ಲಿ ಶೀರಿಯ ಎಂಬ ನಾಮದಿಂದ ಮೆರೆಯುವ ಒಂದು ದೊಡ್ಡ ನಕ್ಷತ್ರವದೆ.

2. ಮಿಜ್ರಾಯಿಮನು ಪೂತನ ಸಹಿತವಾಗಿ ನೀಲನದಿಯ ಶೀಮೆಗೆ ಹೋದನು. ಅದರಿಂದ ಆ ದೇಶಕ್ಕೆ ಇಂದೂ ಮಿಜ್ರ ದೇಶವೆಂದು ಹೆಸರು ಅದೆ. ಅವನಿಂದ ಉತ್ಪತ್ತಿಯಾದ ಜನಾಂಗಗಳು ಯಾವವೆಂದರೆ:

a) ಲೂದ್ಯರು (ಯೆರೆ. ೪೬, ೯. ಎಜೇ. ೨೭, ೧೦. ೩೦, ೫. ಯೆಶ. ೬೬, ೧೯.) ಸಹರ ಎಂಬ ಅರಣ್ಯದಲ್ಲಿ ಲೂದಯ ಎಂಬ ಒಂದು ಜನಾಂಗವು ಮೌರಿತಾನಿಯದಲ್ಲಿ ಲೌದ ಎಂಬುವ ಒಂದು ಹೊಳೆಯು ಇರುವದರಿಂದ, ಇವರು ಅಫ್ರಿಕ ಖಂಡದ ಪಶ್ಚಿಮ ಘಡದ ಶೀಮೆಯನ್ನು ತುಂಬಿದರು ಎಂದು ಊಹೆ ಕಟ್ಟಲಾಯಿತು.

b) ಅನಾಮ್ಯರು ನೀಲನದಿಯ ದಕ್ಷಿಣ ಪಶ್ಚಿಮ ದಿಕ್ಕಿಗೆ ಹೋಗಿದ್ದಾರಾದೀತು.

c) ಲೆಹಾಬ್ಯರು ಮಿಜ್ರಕ್ಕೆ ಪಶ್ಚಿಮದಲ್ಲಿ ಇದ್ದ ಲೀಬಿಯರೇ (೨ ದಿನಚರ್ಯ. ೧೨, ೩).

d) ನಫ್ತೂಹ್ಯರು ಮಿಜ್ರದ ಉತ್ತರ ಭಾಗದಲ್ಲಿ ಇದ್ದರು. ಯಾಕಂದರೆ ಆ ಭಾಗಕ್ಕೆ ಪ್ರಾಚೀನದಲ್ಲಿ ನಫ್ತೂಸ್ ಎಂದು ಹೆಸರು ಇತ್ತು.

e) ಪಥ್ರೂಸರು ಪಾಥ್ರೊಸದ ನಿವಾಸಿಗಳು (ಯೆಶ. ೧೧, ೧೧. ಯೆರೆ. ೪೪, ೧. ಎಜೇ. ೨೯, ೧೪. ೩೦, ೧೪). ಮಿಜ್ರದ ದಕ್ಷಿಣ ಭಾಗದಲ್ಲಿಯವರು.

f) ಕಸ್ಲೂಹ್ಯರು ಮಿಜ್ರದ ಉತ್ತರ ಭಾಗದಲ್ಲಿಯ ಒಂದು ಗೋತ್ರ. ಈ ಗೋತ್ರದ ಒಂದು ಪ್ರವರದವರಾದ ಫಿಲಿಷ್ಟ್ಯರು ಕಾನಾನ್ ದೇಶಕ್ಕೆ ಸಾಗಿ ಕೊಂಡು ಹೋದರು. ಅದರ ಸಲುವಾಗಿ ಆ ದೇಶಕ್ಕೆ ಫಲೆಷ್ಟೀನ (ಫಿಲಿಷ್ಟ್ಯರ ದೇಶ) ಎಂಬ ಹೆಸರು ಬಂತು. ಈ ಗೋತ್ರದ ಮತ್ತೊಂದು ಪ್ರವರದವರಾದ ಕಫ್ತೋರ್ಯರು ಮಧ್ಯ ಸಮುದ್ರದ ದ್ವೀಪಗಳಾದ ಕ್ರೇತಕ್ಕೂ, ಕುಪ್ರಕ್ಕೂ, (ಕಫ್ತೋರ್) (ಅಮೋಸ. ೯, ೭. ಯೆರೆ. ೪೭, ೪. ೧ ಸಮು. ೩೦. ೧೪. ಎಜೇ. ೨೫, ೧೬. ಜೆಫ. ೨, ೫.) ಕೌಕಸ ಪರ್ವತದ ಹತ್ತಿರದಲ್ಲಿ ಇದ್ದ ಕೊಲ್ಕಿಸ ಎಂಬ ಶೀಮೆಯ ತನಕ ಸಣ್ಣ ಏಸಿಯಕ್ಕೂ, ಹೋಗಿ ವಿಸ್ತಾರವಾದರು. ಕಸ್ಲೂಹ್ಯ ಗೋತ್ರದ ಈ ಎರಡು ಪ್ರವರದವರು ಚೂಣಿಯಲ್ಲಿ ಕಫ್ತೋರ್ ದ್ವೀಪಕ್ಕೆ ಹೋಗಿದ್ದಾರು. ವಿಸ್ತಾರವಾದ ಮೇಲೆ, ಅಲ್ಲಿಂದ ಹೊರಟು, ಅವರಲ್ಲಿ ಫಿಲಿಷ್ಟ್ಯರು ಕಾನಾನ್ ದೇಶದಲ್ಲಿ ನಿಂತಿರಲಾಗಿ, ಕಫ್ತೋರ್ಯರು ಮೇಲೆ ಹೇಳಿದ ಮೇರೆಗಳ ತನಕ ವಿಸ್ತಾರವಾಗಿದ್ದಾರಾದೀತು. ಅದರ ದೆಶೆಯಿಂದ ಫಿಲಿಷ್ಟ್ಯರು ಕಫ್ತೋರದಿಂದ ಬಂದರಂತೆ; ಮಿಜ್ರದವರು ವಿದ್ಯದಲ್ಲಿ ಬಹಳ ಖ್ಯಾತಿ ಹೊಂದಿದರು. ಅದನ್ನ ತಮ್ಮ ಮೇಲೆ ಬಂದ ಕೂಷನವರಿಂದ (ಸೇಬನ ಗೋತ್ರದವರಿಂದ) ಕಲಿತು ಕೊಂಡರು.

೧೪ ವ. ಕಸ್ಲೂಹ್ಯರನ್ನೂ ಪಡೆದನು. ಇವರಿಂದ ಫಿಲಿಷ್ಟ್ಯರೂ ಕಫ್ತೋರ್ಯರೂ ಹೊರಟರು (ಬಂದರು).

3. ಫೂತ್ ಎಂಬವನಿಂದ ಮುಖ್ಯವಾಗಿ ಅಫ್ರಿಕ ಖಂಡದ ತೆಂಕಣ ದಿಕ್ಕಿಗೆ ವಿಸ್ತಾರವಾದ ಒಂದು ಜನಾಂಗ ಹುಟ್ಟಿತು. ಅವರು ಬರಬರರು, (ವರ್ಬರರು).

4. ಕನಾನನು ಎಂಬ ಹಾಮನ ಕಿರ ಚಿಕ್ಕ ಮಗನು ಕಾನಾನ್ಯರಿಗೆಲ್ಲ ಮೂಲಪಿತೃವಾದನು. ಇವರು ಪೂರ್ವದಕ್ಷಿಣದಿಂದ ಫಾರ್ಸಿಸಮುದ್ರದಿಂದ ಹೊರಟು ಕಾನಾನ್ ದೇಶಕ್ಕೆ ಬಂದರು. ಅಷ್ಟರಲ್ಲೇ ಅಲ್ಲಿ ಬಂದಿದ್ದ ಶೇಮನ ಅನ್ವಯದವರನ್ನು ಮುಂದಕ್ಕೆ ಓಡಿಸಿದರು; ಅಥವಾ ತಮ್ಮ ಕೂಡ ಅಲ್ಲಿ ಇರಗೊಟ್ಟರು. ಈ ಎರಡು ಅನ್ವಯದವರು ಒಬ್ಬರ ಸಂಗಡಲೊಬ್ಬರು ಬಳಿಕೆ ಮಾಡಿ ಮಿಸ್ರವಾದ್ದರಿಂದ, ಏಮಿಮ್ ಸಂಸೂಮಿಮ್ ಏನಕೀಮ್ ಮೊದಲಾದ ರಾಕ್ಷಸಾಖ್ಯರು ಹುಟ್ಟಿದ್ದಾರಾದೀತು. ಯೆಹೋಶುವನು ಕಾನಾನವನ್ನು ಆಕ್ರಮಿಸಿ ಕೊಂಡ ತರುವಾಯ, ಕಾನಾನ್ಯರಲ್ಲಿ ಉಳಿದವರು ಕೆಲವರು ಉತ್ತರದ ಕಡೆಗೆ ಲಿಬಿನೋನ ಪರ್ವತದ ಬುಡದ ತನಕ, ಕೆಲವರು ಸೀರ್ಯದ ಕಿರಶೀಮೆಗೆ, ಕೆಲವರು ಮಧ್ಯಸಮುದ್ರವನ್ನು ದಾಟಿ ಅಫ್ರಿಕ ಖಂಡಕ್ಕೂ ಕರ್ಥಾಗೊ ಎಂಬ ದೇಶಕ್ಕೂ ಗ್ರೀಕ ದೇಶಕ್ಕೂ ಹೋಗಿ ವಸ್ತಿ ಮಾಡಿದರು. ಕನಾನನಿಂದ ಉದಯಿಸಿದ ಕುಮಾರರ ಗೋತ್ರಗಳು ಯಾವವೆಂದರೆ:

a) ಚೀದೋನ್ಯರು, ಫೊಯಿನಿಕೆ ಎಂಬ ಸೀರಿಯ ದೇಶದ ಕಿರಶೀಮೆಯಲ್ಲಿ ವಸ್ತಿ ಇಟ್ಟದರಿಂದ, ಫೊಯಿನಿಕ್ಯರೆಂಬ ಹೆಸರು ಅವರಿಗೆ ಬಂತು. ಕಿರ ಮತ್ತು ಚೀದೋನ ಎಂಬವು ಅವರ ಮುಖ್ಯ ಸಂಸ್ಥಾನಗಳು.

b) ಹೇಥರು, ಹೆಬ್ರೋನ್ ಮತ್ತು ಬೆಥೆಲ್ ಎಂಬ ಊರುಗಳ ಪ್ರಾಂತ್ಯದಲ್ಲಿ ಇದ್ದರು.

c) ಯೆಬೂಸಿಯರು ಯೆರೂಸಲೇಮದ ಪ್ರಾಂತ್ಯ ಹಿಡಕೊಂಡು ಇದ್ದರು. ಅರಸನಾದ ದಾವೀದನು ಅವರನ್ನು ಜಯಿಸಿದನು.

d) ಅಮೊರಿಯರು ಯೊರ್ದಾನ್ ಹೊಳೆಯ ಇತ್ತಡದಲ್ಲಿ ದೇಶದ ಮಧ್ಯದೊಳಗೆ ಇದ್ದು, ಬಹಳ ಬಲಿಷ್ಟರಾಗಿದ್ದರು. ಅರಸನಾದ ಸೊಲೊಮೋನನು ಅವರನ್ನು ವಶ ಮಾಡಿ ಕೊಂಡನು.

e) ಗಿರ್ಗಾಸಿಯರು ಅಮೋರಿಯರಿಗೆ ಉತ್ತರದಲ್ಲಿ ವಾಸ ಮಾಡಿದರು.

f) ಹಿವ್ವಿಯರು ಹೆರ್ಮೋನ ಲಿಬನೋನ ಪರ್ವತಗಳ ಬುಡದಲ್ಲಿ ವಸ್ತಿ ಇಟ್ಟರು.

g) ಅರ್ಕಿಯರು, h) ಸೀನಿಯರು, i) ಅರ್ವಾದಿಯರು, k) ಚೆಮಾರಿಯರು, l) ಹಮಾಥಿಯರು ಎಂಬಿವರೆಲ್ಲರು ಫೊಯಿನಿಕೆ ಸೀಮೆಯಲ್ಲಿ ಇದ್ದರು.

೧೮ ವ. ಇಲ್ಲಿ ಹೇಳಿದ್ದು ಬಾಬೆಲದ ಗೋಪುರ ಕಟ್ಟುವಾಗ ಆಯಿತು (೧೧, ೮—೯).

III. ಶೇಮನು. ೨೧—೩೨.

ಶೇಮನು ದೇವರಿಗೂ ಮನುಷ್ಯರಿಗೂ ಮಧ್ಯಸ್ತಿಕೆ ಮಾಡುವವನು. ಪ್ರಪಿತಾಮಹನಾದ ಶೇಮನಿಂದ ಈ ಕೆಲಸ ಮರಿಮಗನಾದ ಏಬರನಿಗೆ ಬಂತು. ಶೇಮನ ವಂಶ ಅಷ್ಟು ಹಬ್ಬಲಿಲ್ಲ. ಆದರೆ ದೇವರ ಅರವು ಅವರಲ್ಲಿ ನಿರ್ಮಲವಾಗಿತ್ತು. ಶೇಮನ ಶಾಖೆಯಿಂದ ೫ ಗೋತ್ರಗಳು ಹುಟ್ಟಿದವು.

1. ಏಲಾಮು. ಇವನಿಂದ ಏಲಾಮಿಯರು (ಅಪೊ. ಕ್ರಿ. ೨, ೯.) ಹುಟ್ಟಿದರು. ಇವರು ಬಾಬೆಲದಿಂದ ಮೂಡಣ ದಿಕ್ಕಿಗೆ ಹೋಗಿ ಇರಾನ ದೇಶದ ಪಶ್ಚಿಮ ಭಾಗದಲ್ಲಿ ನಿಂತರು. ತದನಂತರ ಮಾದಯಿ ಗೋತ್ರದವರಾದ ಮೇದರು ಫಾರ್ಸಿಯರು ಬಂದು ಅವರನ್ನು ವಶ ಮಾಡಿ ಕೊಂಡರು. ಅದರ ಸಲುವಾಗಿ ಏಲಾಮು ಎಂಬ ಶಬ್ದಕ್ಕೆ ಫಾರ್ಸಿ ದೇಶ, ಫಾರ್ಸಿ ಜನಾಂಗ ಎಂಬರ್ಥವಾಯಿತು. ಯೆಶ. ೨೨, ೬. ಯೆರೆ. ೪೯, ೩೫. ಎಂಬೀ ವಚನಗಳ ಪ್ರಕಾರ ಅವರು ಧನುರ್ವಿದ್ಯದಲ್ಲಿ ಪ್ರವೀಣರು ಆಗಿದ್ದರು. ಫಾರ್ಸಿಯರೂ, ಆರ್ಯರೂ, ಏಥಿಯೊಪಿಯರೂ, ಮಿಜ್ರದವರೂ ಎಂಬಿವರಲ್ಲಿದ್ದ ವೈದಿಕ ಜ್ಞಾನವು ಮುಖ್ಯವಾಗಿ ಈ ಏಲಾಮಿಯರಿಂದ ಬಂದಿತ್ತು.

2. ಅಷೂರ ಗೋತ್ರದವರು ನಿಮ್ರೋದನನ್ನು ಅಗಲಿ, ಬಾಬೆಲದಿಂದ ಹೊರಟು, ತಿಗ್ರಿಸ ಹೊಳೆಯ ಹತ್ತೀಲಿ ಈಗಿನ ಮೋಸುಲ ಎಂಬ ಪಟ್ಟಣದ ಪ್ರಾಂತ್ಯದಲ್ಲಿ ಅಸ್ಸೀರಿಯ ಮಹಾ ರಾಜ್ಯಕ್ಕೆ ರಾಜಧಾನಿಯಾದ ನಿನಿವೆ ನಗರವನ್ನು ಕಟ್ಟಿದರು. ತರುವಾಯ ಅವರು ಬಾಬೆಲೆಂಬ ಹಾಮನವರ ರಾಜ್ಯವನ್ನು ಸಾಧಿಸಿ ಕೊಂಡರು. ಆದರೂ ಕಾಲಗತಿಯಲ್ಲಿ ಏಲಾಮಿಯರಿಗೆ ಆದ ಗತಿ ಅವರಿಗೆ ಆಯಿತು. ಹ್ಯಾಗಂದರೆ ಬಾಬೆಲದಲ್ಲಿ ರಾಜ್ಯಾಧಿಕಾರ ಹೊಂದಿದ ಕಲ್ದೀಯರು ಮೇದರನ್ನು ಕೂಡಿ ಕೊಂಡು ನಿನಿವೆ ತಕ್ಕೊಂಡು ನೆಲಗತ ಮಾಡಿದರು. ಈ ಪರಿ ಏಲಾಮು ಮತ್ತು ಅಷೂರ ಎಂಬ ಗೋತ್ರಗಳು ಬೇಗ ನಿರ್ಮೂಲವಾಗಿ ಹೋದವು.

3. ಅರ್ಪಕ್ಷದ ಗೋತ್ರವು, ಅರ್ಮೇನಿಯದ ಮೇಲ್ಸೀಮೆಯ ದಕ್ಷಿಣದ ಭಾಗವಾದಂಥಾ, ಪೂರ್ವಜರಲ್ಲಿ ಕಲ್ದೀಯ ಎನಿಸುತ್ತಿದಂಥಾ, ಈಗಿನವರಲ್ಲಿ ಕುರ್ದಿಸ್ಥಾನವೆಂಬ ಅಭಿಧಾನದಿಂದ ಮೆರೆಯುವಂಥಾ, ದೇಶದಲ್ಲಿ ಇತ್ತು. ಅಲ್ಲಿರುವ ಕುರ್ದರು ಈಗ್ಯೂ ಯಾರಿಗೂ ವಶವಾಗದೆ, ಸ್ವತಂತ್ರಿಗಳಾಗಿದ್ದಾರೆ. ಈ ಅರ್ಪಕ್ಷದನಿಂದ ಹುಟ್ಟಿದ ಕಲ್ದೀಯರು ಕಾಲಾಂತರದಲ್ಲಿ ಬಾಬೆಲವನ್ನು ಆಕ್ರಮಿಸಿ ಕೊಂಡು, ಬಾಬಿಲೋನಿಯದ ಮಹಾ ರಾಜ್ಯವನ್ನು ಸ್ಥಾಪಿಸಿದರು. ಅವನ ಮೊಂಮಗನಾದ ಏಬೆರನಿಂದ ಪೇಲೆಗನ ಮುಖಾಂತರವಾಗಿ ಅಬ್ರಹಾಮನ ವಂಶದರೂ, ಯೊಕ್ತಾನನ ಮುಖಾಂತರವಾಗಿ ಅರಾಬಿಯ ಎಂಬ ಅರ್ಧ ದ್ವೀಪವನ್ನು ತುಂಬಿದ ಅರಬಿಯರೂ ಜನಿಸಿದರು. ಬೇದುವೀನರು ಎಂಬ ನಾಮದಿಂದ ಪ್ರಸಿದ್ಧವಾದ ಅರಬಿಯರಿಗೆ ಅಬ್ರಹಾಮನ ಮಗನಾದ ಇಸ್ಮಾಯೇಲನು ವಂಶಕರ್ತನು. ಅರಾಬಿಯದ ದಕ್ಷಿಣ ಪಾರ್ಶ್ವದಲ್ಲಿಯ ಏಮೆನ್ ಪ್ರಾಂತ್ಯದ ನಿವಾಸಿಗಳು ಇಂದೂ ತಾವು ಕಹ್ತಾನನ (ಯೊಕ್ತಾನನ) ವಂಶೋತ್ಪನ್ನರು ಎಂದು

ಹೇಳುತ್ತಾರೆ. ಅವನ ೧೩ ಮಂದಿ ಕುಮಾರರ ಹೆಸರುಗಳು ಅರಾಬಿಯದಲ್ಲಿ ಅನೇಕಾವರ್ತಿ ಬರುತ್ತವೆ. ಅರಾಬಿಯದ ತೆಂಕಣ ಪ್ರಾಂತ್ಯದಲ್ಲಿಯ ಸಬೇಯರು=ಶೇಬ, ಹದ್ರಮೌತ್=ಹಜರ್ಮಾವೇಥ, ಶೇಲಫನು=ಸಲಪೇನರು, ಯೆರಹ=ಚಂದ್ರ (ಇವರು ಚಂದ್ರತೀರದ ನಿವಾಸಿಗಳು), ಉಜಲ=ಸಾನಾ (ಇದು ಯಿಮೆನ್ ಸೀಮೆಯ ಮುಖ್ಯ ಪಟ್ಟಣದ ಪುರಾತನ ಹೆಸರು), ಓಫಿರ=ಅರಾಬಿಯದ ದಕ್ಷಿಣ ತೀರದಲ್ಲಿರುವ ಎಲೋಫಿರ, ಅಥವಾ ಹಿಂದುಸ್ಥಾನದಲ್ಲಿದ್ದ ಪೂರ್ವಕಾಲದ ಅಭೀರರ ಜನಾಂಗ (೧ ಅರಸ. ೯, ೨೮. ೧೦, ೧೧. ೨ ದಿನಚರ್ಯ. ೯, ೧೦—೧೧.) ಅವರು ಅರಾಬಿಯದಿಂದ ಪೂರ್ವಕ್ಕೆ ಹೊರಟು, ಈ ದೇಶದ ಪಶ್ಚಿಮ ತೀರಕ್ಕೆ ಬಂದಿರ ಬಹುದು.—ಹವೀಲ=ಅರಾಬಿಯದಲ್ಲಿಯ ಹೌಲೊನ. ಯೊಬಬನಿಂದ ಸಖಾಲಿಯ ಸೀಮೆಯಲ್ಲಿರುವ ಯೊಬರೀದರ ವಂಶ ಉತ್ಪನ್ನವಾಯಿತು. ಯೊಕ್ತಾನನ ಈ ಸಂತತಿಯವರು ಮೇಸದಿಂದ=ಅರಾಬಿಯದ ವಾಯವ್ಯ ಭಾಗದಲ್ಲಿಯ ಮೆಸೇನೆಯಿಂದ ಪೂರ್ವದ ಕಡೆಯ ಗುಡ್ಡವಾದ ಸೇಫರದ ಪರಿಯಂತರ ಇದ್ದರು. ಈ ಗುಡ್ಡ ಅರಾಬಿಯದ ನೈರುತ್ಯ ಪಾರ್ಶ್ವದಲ್ಲಿ ಇತ್ತು.

4. ಲೂದನು ಸಣ್ಣ ಏಸಿಯದಲ್ಲಿಯ ಲೀದಿಯರು ಮುಂತಾದ ಗೋತ್ರಗಳಿಗೆ ವಂಶಕರ್ತನಾದನು.

5. ಅರಮಗೋತ್ರದವರು ಸೀರಿಯ ದೇಶದಲ್ಲಿಯೂ, ಮೇಸೊಪೊತಾಮಿಯದಲ್ಲಿಯೂ ವಾಸ ಮಾಡುತ್ತಿದ್ದರು. ಅವನ ನಾಲ್ಕು ಮಂದಿ ಕುಮಾರರ ವಿಷಯಕ್ಕೆ ನಿಶ್ಚಯ ವರ್ತಮಾನವಿಲ್ಲ.

೩೨ ವ. ನೋಡು. ೧೧ನೆ ಸಂಧಿ. ವ ೩೨. ಇವು ನೋಹನ ಕುಮಾರರ ಗೋತ್ರಗಳು ಅವರ ಪ್ರವರಗಳ ಪ್ರಕಾರ ಅವರ ಜನಾಂಗಗಳಲ್ಲಿ. ಇವರಿಂದ ಭೂಮಿಯ ಜನಾಂಗಗಳು ಜಲಪ್ರಳಯದ ಮೇಲೆ ವಿಸ್ತರಿಸಿದವು.

ಟಿಪ್ಪಣಿ: ಹೀಗಿರಲಾಗಿ ಎಲ್ಲಾ ಮನುಷ್ಯರು, ಆದಿಯಲ್ಲಿ ಒಂದೇ ಯುಗಳದಿಂದ ಉತ್ಪನ್ನವಾದಂತೆ, ಜಲಪ್ರಳಯದ ಈಚೆ ನೋಹನಿಂದ ಅವನ ಮೂರು ಮಂದಿ ಕುಮಾರರಿಂದ ಉದಯಿಸಿದರು. ಇವರಿಂದ ಮನುಷ್ಯರಲ್ಲಿ ಮೂರು ಮುಖ್ಯ ತರಗಳು ಬಿದ್ದವು. ಶೇಮನು ಪಾರಮಾರ್ಥಿಕನು ವೈಧಿಕಜ್ಞಾನವುಳ್ಳವನು, ಯಾಫೇತನು ಲೌಕಿಕ ವಿದ್ಯ ಚಮತ್ಕಾರಗಳಲ್ಲಿ ಪ್ರವೀಣನು, ಹಾಮನು ಸೇವಾವೃತ್ತಿಯಿಂದ ನಡೆಯುವವನು. ಶೇಮನಿಂದ ಹಳದಿ ವರ್ಣದವರು, ಯಾಫೇತನಿಂದ ಕೆಂಪು ವರ್ಣದವರು, ಹಾಮನಿಂದ ಕಪ್ಪು ವರ್ಣದವರು ಉತ್ಪನ್ನವಾದರು.—ಮೊದಲು ಈ ವರ್ಣ ರೂಪ ಗುಣಭೇದಗಳು ಸ್ವಲ್ಪವಾಗಿದ್ದವು. ಕಾಲಾಂತರದಲ್ಲಿ ಮನುಷ್ಯರು ಬೇರೆ ಬೇರೆ ಆಗಿ ಬೇರೆ ಬೇರೆ ದೇಶಗಳಿಗೆ ಹೋಗಿ, ಒಂದೊಂದು ಗೋತ್ರದವರು ತಮ್ಮ ಪೂರ್ತಿಗೆ ಇದ್ದವರಾದ ಕಾರಣ, ಆ ಭೇದಗಳು ಹೆಚ್ಚು ನೆಲೆಗೊಂಡವು. ಮತ್ತು ಒಂದೊಂದು ದೇಶದ ಪ್ರಕೃತಿಯಿಂದ ಅದರ ನಿವಾಸಿಗಳು ಅದಕ್ಕೆ ಅನುಸಾರವಾಗಿ ಒಂದು ತರವಾದರು. ಆದಾಗ್ಯೂ ಮನುಷ್ಯರು ಒಬ್ಬರಿಗೊಬ್ಬರು ವಿಶೇಷವಾಗಿ ಪಾಪದಿಂದ ಬಹಳ ಭೇದವಾದರು.—ಮನುಷ್ಯರು ಮೊದಲು ಆದಾಮನ ಆ ಬಳಿ ನೋಹನ ಕುಲದವರು. ನೋಹನ ಮೂರು ಮಂದಿ ಪುತ್ರರು ಮೂರು ದೊಡ್ಡ ಶಾಖೆಗಳು. ಈ ಮೂರು ಶಾಖೆಗಳಲ್ಲಿ ಒಂದೊಂದರಿಂದ ಬೇರೆ ಬೇರೆ ಗೋತ್ರಗಳು ಉದಯಿಸಿದವು. ಒಂದೊಂದು ಗೋತ್ರದಲ್ಲಿ ಬೇರೆ ಬೇರೆ ಪ್ರವರಗಳು, ಒಂದೊಂದು ಪ್ರವರದಲ್ಲಿ ಬೇರೆ ಬೇರೆ ಕುಟುಂಬಗಳು ಇದ್ದವು. ಈ ಜನಾಂಗಗಳ ಪಟ್ಟಿಯಿಂದ ಮೂರು ತೋರುತ್ತದೆ: ೧) ದೇವರು ನರವಂಶಗಳಲ್ಲಿ ಒಂದನ್ನಾದರೂ ಮರೆತು ಬಿಡದೆ, ಎಲ್ಲಾದಕ್ಕೂ ರಕ್ಷಣೆಯ ಮಾರ್ಗವನ್ನು ಸಿದ್ಧ ಮಾಡಲಿಕ್ಕೆ ಮನಸಾಗಿದ್ದಾನೆಂ

ಬುದೊಂದು; ಅನ್ಯ ಜನರು ಅಜ್ಞಾನದಿಂದ ಕಲ್ಪಿಸಿದ ಅನಂತ ವಂಶಾವಳಿಗಳು ಕೋಟ್ಯಾನುಕೋಟಿ ವರುಷ ದಾರಭ್ಯ ಲೋಕದಲ್ಲಿ ನಡೆದವೆಂದು ಅವರು ಹೇಳುವ ಪುರಾಣಕಥೆಗಳು ಸುಳ್ಳು ಎಂಬುವದೊಂದು; ಜನಾಂಗಗಳು ಆದಿಯಲ್ಲಿ ಉತ್ಪತ್ತಿಯಾದದ್ದೊಂದು.

c) ಬಾಬೆಲದ ಗೋಪುರ ಕಟ್ಟಿದ್ದು. ೧೧, ೧—೯.

೧ ವ. ಇದಲ್ಲದೆ ಎಲ್ಲಾ ಲೋಕಕ್ಕೆ ಒಂದೇ ಭಾಷೆಯೂ ಒಂದೇ ಮಾತೂ ಇತ್ತು. ಮುಂ.

ಟಿಪ್ಪಣಿ: ಹಿಬ್ರುಭಾಷೆ ಆ ಆದಿ ಭಾಷೆ ಆಗಿರ ಬಹುದು. ಅದನ್ನು ಏಬೆರನ ಸಂತಾನದವರು ಬಳಸುತ್ತಾ ಇದ್ದರು. ಆದಾಮನಿಂದ ಹಿಡಿದು ಎಲ್ಲಾ ಹೆಸರುಗಳು ಹಿಬ್ರು ಭಾಷೆಯವೆ.—ಭೂಮಿ ವಿಭಾಗಿಸಲ್ಪಟ್ಟದ್ದೂ ಜನಾಂಗಗಳು ವಿಸ್ತರಿಸಿದ್ದೂ (೧೦, ೩೨. ೩೫.) ಈ ಭಾಗದಲ್ಲಿ ವಿವರಿಸಿ ಅದೆ.

೨ ವ. ನೋಹನ ಸಂತಾನದವರು ಅರ್ಮೇನ್ಯದಿಂದ ಆಗ್ನೇಯ ದಿಕ್ಕಿಗೆ ಹೋಗಿ ಐಫ್ರತ್ ತೀಗ್ರಿಸ್ ನದಿಗಳ ನಡುವಣ ಶಿನೆಯರ್ ಎಂಬ ಬಹಳ ಫಲಭರಿತವಾದ ಬೈಲುಶೀಮೆಯಲ್ಲಿ ವಾಸಿಸುವವರಾದರು.

೩ ವ. ಅಂದು ಕೊಂಡದ್ದೇನಂದರೆ:—ಇಟ್ಟಿಗೆ ಅವರಿಗೆ ಕಲ್ಲಿಗೆ ಬದಲಾಗಿ, ಜೇಡು ಅವರಿಗೆ ಸುಣ್ಣಕ್ಕೆ ಬದಲಾಗಿ ಇತ್ತು.) ಆ ಬೈಲಿನಲ್ಲಿ ಇಂದಾದರೂ ಕಲ್ಲು ಬಹಳ ಅಪರೂಪವಾಗಿ ಶಿಕ್ಕುವವು. ಅದರ ಸಲುವಾಗಿ ಇಟ್ಟಿಗೆಗಳಿಂದ ಜೇಡುಮಣ್ಣಿನಿಂದ ಗೋಡೆ ಕಟ್ಟುವರು. ಆ ಜೇಡು ಬಹಳ ಜಿಗಟು ಆಗಿರುತ್ತದೆ. ಬಾಬಿಲೋನ್ಯದಲ್ಲಿ ಹಾಳ ಬಿದ್ದ ಗೋಡೆಗಳಲ್ಲಿ ಅಂಥಾ ಇಟ್ಟಿಗೆಗಳು ಇಂದಿನ ವರೆಗೆ ಶಿಕ್ಕುತ್ತವೆ. ಆ ಜೇಡುಮಣ್ಣು ಕಲ್ಲಿನಷ್ಟು ಗಟ್ಟಿ ಆಗೆದೆ. ಈ ಬಾಬಿಲೋನ್ಯದಲ್ಲಿ ಒಂದು ಮಹಾ ಗೋಪುರವಿತ್ತು. ಅದರಲ್ಲಿ ಬೇಲು ಎಂಬ ವಿಗ್ರಹವನ್ನು ಇಟ್ಟು, ಅದನ್ನು ದೇವಸ್ಥಾನ ಮಾಡಿ ಕೊಂಡರು. ಗ್ರೀಕರ ಗ್ರಂಥಕರ್ತನಾದ ಹೆರೊದೋತನು ಅಂದು ನೋಡಿ, ಅದರ ವಿಷಯ ಹೇಳಿದ್ದು ಈಗಿನ ಮಾರ್ಗಸ್ತರು ನೋಡಿ ವಿಚಾರ ಮಾಡಿದ್ದರಿಂದ ಖರೆ ಕಾಣುತ್ತದೆ. ಆ ಗೋಪುರ ೬೦೦ ಅಡಿ ಎತ್ತರವಾಗಿತ್ತು. ಅದಕ್ಕೆ ೮ ಅಂತಸ್ತುಗಳು ಇದ್ದವು. ಅವನ್ನ ಒಂದರ ಮೇಲೆ ಒಂದನ್ನ ತಕ್ಕಷ್ಟು ಗಗ್ಗರಿ ಬಿಟ್ಟು ಕಟ್ಟಿದ್ದರು. ಮೇಲಿನ ಅಂತಸ್ತಿನಲ್ಲಿ ಒಂದು ಭಂಗಾರದ ಮೇಜು ಇತ್ತು. ಕೆಳಗಣ ಅಂತಸ್ತಿನಲ್ಲಿ ೪೦ ಅಡಿ ಎತ್ತರವಾದ ಭಂಗಾರದ ಬೇಲಿನ ವಿಗ್ರಹವಿತ್ತು. ಈಗ ಆ ೮ ಅಂತಸ್ತುಗಳಲ್ಲಿ ಇನ್ನು ಎರಡು ಕಾಣುತ್ತವೆ. ಕೆಳಗಿನದು ೬೦ ಅಡಿ ಎತ್ತರವಾಗೆದೆ. ಗೋಪುರದ ಕಟ್ಟೆ ೨೦೦ ಅಡಿ ಎತ್ತರವಾಗಿತ್ತು. ಅದರ ಸುತ್ತಳತೆ ೨೦೦೦ ಅಡಿ. ಅರಾಬ್ಯರು ಅದಕ್ಕೆ ಬಿರ್ಸ ನಿಮ್ರೋದ=ನಿಮ್ರೋದನ ಹೂಡೇವು ಎಂದು ಹೆಸರಿಟ್ಟರು. ನಿಮ್ರೋದನು ವಿಶೇಷವಾಗಿ ಬಾಬಲಪಟ್ಟಣವನ್ನು ಅದರಲ್ಲಿಯ ಈ ಗೋಪುರವನ್ನು ಕಟ್ಟುವದಕ್ಕೆ ಮನಸು ಕೊಟ್ಟನು. ಬಾಬೆಲವು ಹಾಳ ಬಿದ್ದಲ್ಲಿ, ಸ್ವಲ್ಪ ದಿವಸದ ಹಿಂದೆ ಮಹಾರಾಜನಾದ ನೆಬುಕದ್ನೇಚರನು ಬರೆಸಿದ ಒಂದು ಲಿಪಿಕಲ್ಲು ಶಿಕ್ಕಿತು. ಆ ಲಿಪಿಯ ಭಾಷಾಂತರ ಮಾಡಿದರು. ಅದು ಏನಂದರೆ: ಪೂರ್ವದ ಒಬ್ಬ ಅರಸನು ಗ್ರಹಗಳ ಗುಡಿಯನ್ನು ಕಟ್ಟಿದನು. ಅಂದಿನಿಂದ ೪೨ ತಲೆಗಳು ಹೋದವು. ಆದರೂ ಮುಗಿಸಲಾಗಲಿಲ್ಲ. ಯಾಕಂದರೆ ಮನುಷ್ಯರ ಭಾಷೆ ಗಲಿಬಿಲಿ ಆಗಿ, ಒಬ್ಬರ ಮಾತು ಒಬ್ಬರಿಗೆ ತಿಳಿಯದ ಹಾಗೆ ಆಯಿತು. ಭೂಕಂಪ ಗುಡುಗು ಆದದರಿಂದ, ಗೋಪುರ ಅದರಿ, ಗೋಡೆಗಳು ಬಿದ್ದವು. ಅದನ್ನ ತಿರಿಗಿ ಕಟ್ಟ ಬೇಕೆಂದು ದೇವರು ನನಗೆ ಹೇಳಿದನು. ಅದೇ ಸ್ಥಳದಲ್ಲಿಯೇ ನಾನು ಅದನ್ನು ತಿರಿಗಿ ಕಟ್ಟಿಸಿದೆನು. ಮಹಾರಾಜನಾದ ನೆಬುಕದ್ನೇಜರನು ೬೦೪—೫೬೧ ಕ್ರಿಸ್ತನ ಅತ್ತಲಾಗಿ ಆಳಿದನು. ಗೋಪುರ ಮೊದಲು ಕಟ್ಟಿದ್ದು (ಉತ್ಪ. ೧೦, ೨೫. ೧೧, ೧೬.) ಕ್ರಿಸ್ತನ ಅತ್ತಣ ೨೩ನೆ ವರ್ಷ ಶತಮಾನದಲ್ಲಿ. ಹೀಗಿರಲಾಗಿ ನೆಬುಕದ್ನೇಜರನಿಗೂ ಗೋಪುರ ಮೊದಲು ಕಟ್ಟಿದ ಕಾಲಕ್ಕೂ ನಡುವಿನಲ್ಲಿ ೧೬೦೦ ವರ್ಷಗಳು ಆಗಿ ಹೋದವು. ಒಂದು

ಉತ್ಪತ್ತಿ. ೧೧, ೧—೯.

ತಲೆಗೆ ೩೫—೪೦ ಸಂವತ್ಸರ ಎಣಿಸುತ್ತಾರೆ. ಆದ ಕಾರಣ ಆ ೧೬೦೦ ವರುಷಗಳು ೪೨ ತಲೆಗಳು ಆಗುತ್ತವೆ. ಇದನ್ನು ವಿಚಾರಿಸಿ ನೋಡಿದರೆ, ಆ ನಿಮ್ರೋದನ ಹೂಡೇವೇ ಬಾಬೆಲದ ಗೋಪುರದ ಉಳುಹು ಎಂದು ಸಂಶಯವಿಲ್ಲದೆ ತೋಚುತ್ತದೆ.

೪ ವ. ಅದರ ತುದಿ ಆಕಾಶಕ್ಕೆ ಮುಟ್ಟಲಿ!) ಅವರ ಮಾತಿನಲ್ಲಿ ಮೂರು ಅಪೇಕ್ಷೆಗಳು ತೋರುತ್ತವೆ. ೧) ದೊಡ್ಡವರಾಗ ಬೇಕು, ಗರ್ವ, ಯಶಾಭಿಲಾಷೆ; ೨) ದೇವರ ಮೇಲೆ ಮಲತು ಸ್ವತಂತ್ರಿಗಳಾಗ ಬೇಕು; ೩) ಒಂದು ಸರ್ವಾಧಿಪತ್ಯವನ್ನು ಸ್ಥಾಪಿಸಿ, ದೇವರ ಕಾರ್ಯಕ್ಕೆ ಅಡ್ಡಿ ಮಾಡಿ, ತಮ್ಮ ಲೌಕಿಕ ಆಶೆಗಳನ್ನು ತೀರಿಸಲಿಕ್ಕೆ ಕೂಡಿ ಏಕಸ್ಥರಾಗ ಬೇಕು.—ಜಲಪ್ರಳಯವಾಗಿ ೧೦೦ ವರ್ಷದ ಮೇಲೆ ಇದಾಯಿತು. ನೋಹನು ಹೇಳಿದ ಕಾಲಜ್ಞಾನದಲ್ಲಿಯೂ (೯, ೨೫. ಮುಂ.) ದೇವರು ಕೊಟ್ಟ ಆಶೀರ್ವಾದದಲ್ಲಿಯೂ (೯, ೧. ೭.) ಹಾಮನವರು ಸೇವಾವೃತ್ತಿಯಿಂದ ನಡೆಯ ಬೇಕು, ಮನುಷ್ಯರು ವಿಸ್ತರಿಸಿ ಹೋಗ ಬೇಕು ಎಂಬದಾಗಿ ಸೂಚಿಸಿತ್ತು. ಇದು ಆಗದಂತೆ, ದೇವರ ಆಧೀನದಲ್ಲಿ ಬೀಳದೆ, ತಮ್ಮ ಮನಸಿಗೆ ಬಂದದ್ದನ್ನು ನಡಿಸ ತೊಡಗಿದರು.

೫ ವ. ಇಳಿದು ಬಂದನು) ದೇವರ ಶಿಕ್ಷೆ ದೂರ ಎಂದು ಪಾಪಿಷ್ಟರು ನೆನಿಸಿ ಮೋಸಗೊಳ್ಳುತ್ತಾರೆ. ಶಿಕ್ಷೆ ಮಾಡುವ ಸಮಯ ಬರುತ್ತಲೆ, ದೇವರು ಮಿಂಚಿನಷ್ಟು ಬೇಗ ಬಂದು ಅವರ ಕೆಲಸ ನಿಲ್ಲಿಸುವನು.

೬. ೭ ವ. ಮಾಡುವ) (೧, ೨೬.) ದೇವರು ದೊಡ್ಡ ಕಾರ್ಯಕ್ಕೆ ಕೈ ಹಾಕುತ್ತಾನೆ. ಇದು ಒಂದು ದೊಡ್ಡ ನಿರ್ಣಯ. ಮನುಷ್ಯರು ದೇವರ ಚಿತ್ತ ಅನುಸರಿಸಿ ಒಳ್ಳೇದಕ್ಕೆ ಕೂಡುವದಾದರೆ, ಬಹಳ ಹಿತವಾಗುವದು. ಆದರೆ ಅವರು ದೇವರ ಚಿತ್ತ ಉದಾಸೀನ ಮಾಡಿ, ಕೇಡಿಗೆ ಕೂಡುವದಾದರೆ, ಬಹಳ ಕೇಡಕಾಗುವದು. ನರಕಕ್ಕೆ ಸಂಬಂಧವಾದ ಐಕ್ಯವಿದು. ಆದ ಕಾರಣ ದೇವರು ಮನುಷ್ಯರ ಭಾಷೆಯನ್ನು ಗಲಿಬಿಲಿ ಮಾಡಿ, ಅವರನ್ನು ಬೇರೆ ಬೇರೆ ಮಾತುಗಳನ್ನಾಡುವ ಜನಾಂಗಗಳನ್ನು ಮಾಡಿ, ಅಗಲಿಸಿದ್ದಲ್ಲಿ, ಪಾಪ ಅಷ್ಟು ವಿಸ್ತಾರವಾಗದಂತೆ, ಒಂದು ಕಟ್ಟೆ ಕಟ್ಟಿದ ಹಾಗೆ ಆಯಿತು. ಅದಕ್ಕೆ ಈ ಶಿಕ್ಷೆ ಮನುಷ್ಯರಿಗೆ ಬಹಳ ಹಿತಕರವಾದದ್ದಾಯಿತು. ದೇವರು ಹೀಗೆ ಮಾಡದೆ ಇದ್ದರೆ, ಪಾಪವು ಸೂಸಿ ಬಂದ ಹೊಳೆಯ ಹಾಗೆ ಎಲ್ಲಾ ಮೇರೆ ತಪ್ಪಿ ಎಲ್ಲಾ ಕೆಡಿಸಿ ಬಿಡುತ್ತಿತ್ತು. ಮನುಷ್ಯರು ಉಳಿಯುತ್ತಿದ್ದಿಲ್ಲ. ದೇವರು ನೋಹನ ಕೂಡ ಒಡಂಬಡಿಕೆ ಮಾಡಿದ್ದು ಸಾರ್ಥಕವಾಗುತ್ತಿದ್ದಿಲ್ಲ.

೯ ವ. ಎಲ್ಲಾ ಲೋಕದ ಮಾತು ಗಲಿಬಿಲಿ ಮಾಡಿದನು) ಭಾಷಾಭೇದವು ದೇವರು ಮಾಡಿದ ಆಶ್ಚರ್ಯವಾದ ಶಿಕ್ಷೆಯೇ. ಇದರಿಂದ ಒಬ್ಬರ ಸಂಗಡಲೊಬ್ಬರು ಇರಲಿಕ್ಕೆ ವೈಪು ಆಗದ್ದಕ್ಕೆ, ನಾಲ್ಕು ದಿಕ್ಕಿಗೆ ಹೋಗಿ ಹರೆ ಬಿದ್ದರು. ಪಾಪದಲ್ಲಿ ಕೂಡಿಸುವಂಥಾ ಬಲವಲ್ಲ, ಅಗಲಿಸುವಂಥಾದ್ದೇ ಅದೆ. ಪಾಪದ ಮನಸಿನಿಂದ ಗೋಪುರ ಕಟ್ಟಲಿಕ್ಕೆ ಕೂಡಿದ್ದರಲ್ಲ. ಕಟ್ಟುತ್ತಿರಲಾಗಿ, ಅವರಲ್ಲಿ ಬೇರೆ ಬೇರೆ ಭೇದಗಳು ಹುಟ್ಟಿದ್ದಾವು. ಒಬ್ಬರಿಗೊಬ್ಬರು ಸೇರದೆ ಇರುತ್ತಿದ್ದಾರು. ಒಬ್ಬರಿಗೊಬ್ಬರು ಬೇಸತ್ತಿದ್ದಾರು. ಹೀಗೆ ಒಳಗೆ ಮನಸಿನಲ್ಲಿ ಭಿನ್ನ ಭೇದವಾದದ್ದು ಹೊರಗೆ ಸುಧಾ ಭಾಷೆಯಲ್ಲಿ ದೇವರ ಶಿಕ್ಷೆಯಿಂದ ಬೈಲಿಗೆ ಬಿತ್ತು. ಇಲ್ಲಿ ಅನ್ಯ ಜನರ ಅಬದ್ಧಮತಗಳು ಹುಟ್ಟಲಾರಂಭವಾಯಿತು. ಈ ಪೃಥ್ವಿಯ ಮೇಲೆ ಮನುಷ್ಯರಲ್ಲಿ ಬಳಸಿರುವ ಎಲ್ಲಾ ಭಾಷೆಗಳು ಒಂದೇ ಆದಿ ಭಾಷೆಯಿಂದ ಬೆಳೆದ ಕೊಂಬೆಗಳು ಎಂಬದು ಈಗ ವಿದ್ವಾಂಸರು ಮಾಡಿದ ಭಾಷಾವಿಚಾರಗಳಿಂದ ಸಿದ್ಧಾಂತವಾಯಿತು. ಈ ಭಾಷಾಭೇದದ ವಿಪರ್ಯಾಸ ಅಪೊ. ಕ್ರಿ. ೨ನೆ ಸಂಧಿಯಲ್ಲಿ ಹೇಳಿ ಅದೆ. ಗರ್ವದಿಂದ ಅಗಲಿದ್ದು ಪ್ರೀತಿ ದೀನತ್ವದಿಂದ ತಿರಿಗಿ ಕೂಡುವದು. ದೇವರ ರಾಜ್ಯದಲ್ಲಿ ಮನುಷ್ಯರೆಲ್ಲರು ತಿರಿಗಿ ಒಬ್ಬನೇ ಕುರುಬನಿಂದ ಆರೈಕೆ ಮಾಡಿಸಿ ಕೊಳ್ಳುವ ಒಂದೇ ಹಿಂಡು ಆಗಿ, ಐಕ್ಯವಾಗ ಬೇಕು. ಆದರೆ ಇದು ಬಲಾತ್ಕಾರದಿಂದ ಆಗದು. ಬಾಬೆಲ=ಗಲಿಬಿಲಿ. ಭಾಷಾಭೇದವಾದದ್ದು, ಜನಾಂಗಗಳು ಹರೆ ಬಿದ್ದದ್ದು ದೇವರ ಕೃತ್ಯ. ಪರದೇಶದ ತೋಟದಲ್ಲಿ ಆದ ಪಾಪಕ್ಕೆ ಕಷ್ಟದಿಂದ ದುಡಿಯುವದೇ ತಕ್ಕ ಶಿಕ್ಷೆ ಆದಂತೆ ಗರ್ವದಿಂದ ಉಬ್ಬಿ ಕೊಂಡ ಈ ಪಾಪಕ್ಕೆ ಅಗಲಿದ್ದೇ ಶಿಕ್ಷೆ. ಆದರೆ ಇಲ್ಲಿ ಅಲ್ಲಿ ಶಿಕ್ಷೆಯು ಕೇಡು ಮಾತ್ರವಲ್ಲ ಹಿತಕರವಾದಂಥಾದ್ದು ಸಹ ಆಗಿದೆ.

೮೪ ನೋಹನಿಂದ ಅಬ್ರಹಾಮನ ತನಕ ಶೇಮನವರ ವಂಶಾವಳಿ.

ಉತ್ಪತ್ತಿ. ೧೧, ೧೦—೨೬.

d) ನೋಹನನ್ನು ಹಿಡಿದು ಅಬ್ರಹಾಮನ ತನಕ ಶೇಮನವರ ವಂಶಾವಳೀ ವೃಕ್ಷ. ೧೧, ೧೦—೨೬.

ಟಿಪ್ಪಣಿ: ಹಿಂದಿನ ಸಂಧಿಯಲ್ಲಿಯ ಜನಾಂಗಗಳ ಪಟ್ಟಿಯಲ್ಲಿ ಶೇಮನ ಸಂತಾನ ಪೇಲೆಗನ ವರೆಗೆ ಮಾತ್ರ ವಿವರಿಸಿ ಅದೆ. ಪೇಲೆಗನ ಕಾಲದಲ್ಲಿ ಭೂಮಿ ವಿಭಾಗಿಸಲ್ಪಟ್ಟಿತೆಂದು ೧೦, ೨೫ನೆ ವಚನದಲ್ಲಿ ಹೇಳಿರುವದರಿಂದ, ಬಾಬೆಲದಲ್ಲಿ ಭಾಷಾಭೇಧವು ಆಗುವಾಗ್ಯೆ, ಅವನು ಇದ್ದನೆಂದು ನಿಶ್ಚೈಸಲಾಯಿತು. ಪೇಲೆಗನು ಜಲಪ್ರಳಯವಾಗಿ ೧೦೧ ವರುಷದ ಮೇಲೆ ಜನಿಸಿದನೆಂಬುದು ಇಲ್ಲಿ ಬರೆದಿರುವ ಶೇಮನ ವಂಶಾವಳಿಯಲ್ಲಿಂದ ತಿಳಿಯ ಬರುತ್ತದೆ. ಹೀಗಿರಲಿಕ್ಕಾಗಿ ಬಾಬೆಲ ಕಟ್ಟಿದ್ದು ನಿಮ್ರೋದನು ಏಕಾಧಿಪತ್ಯ ಸ್ಥಾಪಿಸಿದ್ದು ಅದೇ ಕಾಲದಲ್ಲಿ ಅಂದರೆ, ಜಲಪ್ರಳಯವಾಗಿ ೧೦೧ ವರ್ಷವಾದ ತರುವಾಯ ಆಯಿತೆಂದು ಗಣಿಸ ಬಹುದು.

	ಕುಮಾರನು ಹುಟ್ಟಿದಾಗ		ಆಯುಷ್ಯದ ವರ್ಷಗಳು.	ಸೃಷ್ಟಿಯ ಎಷ್ಟನೆ ವರ್ಷದಿಂದ ಎಷ್ಟನೆದರ ವರೆಗೆ ಬದುಕಿದ್ದು.
	ತಂದೆಗಿದ್ದ ಆಯುಷ್ಯ.	ಸೃಷ್ಟಿ ವರ್ಷ.		
ನೋಹನು ಯಾಫೇತನನ್ನು ಪಡೆದದ್ದು...	೫೦೦	೧೫೫೬	೯೫೦	೧೦೫೬—೨೦೦೬
— ಶೇಮನನ್ನು ಪಡೆದದ್ದು	೫೦೨	೧೫೫೮		
ನೋಹನು ಸ್ವಲ್ಪ ದಿವಸದ ಮೇಲೆ ಹಾಮನನ್ನು ಪಡೆದದ್ದು				
ಜಲಪ್ರಳಯದ ಆರಂಭದಲ್ಲಿಯ ನೋಹನ ಆಯುಷ್ಯ............	೬೦೦	೧೬೫೬		
ಶೇಮನು ಅರ್ಫಕ್ಷದನನ್ನು ಪಡೆದದ್ದು ...	೧೦೦	೧೬೫೮	೬೦೦	೧೫೫೮—೨೧೫೮
ಅರ್ಫಕ್ಷದನು ಶೇಲಹನನ್ನು ಪಡೆದದ್ದು...	೩೫	೧೬೯೩	೪೩೮	೧೬೫೮—೨೦೯೬
ಶೇಲಹನು ಏಬೆರನನ್ನು ಪಡೆದದ್ದು	೩೦	೧೭೨೩	೪೩೩	೧೬೯೩—೨೧೨೬
ಏಬೆರನು ಪೇಲೆಗನನ್ನು ಪಡೆದದ್ದು	೩೪	೧೭೫೭	೪೬೪	೧೭೨೩—೨೧೮೭
ಪೇಲೆಗನು ರೇಯುವನ್ನು ಪಡೆದದ್ದು	೩೦	೧೭೮೭	೨೩೯	೧೭೫೭—೧೯೯೬
ರೇಯು ಸೆರೂಗನನ್ನು ಪಡೆದದ್ದು	೩೨	೧೮೧೯	೨೩೯	೧೭೮೭—೨೦೨೬
ಸೆರೂಗನು ನಾಹೊರನನ್ನು ಪಡೆದದ್ದು ...	೩೦	೧೮೪೯	೨೩೦	೧೮೧೯—೨೦೪೯
ನಾಹೊರನು ತೇರಹನನ್ನು ಪಡೆದದ್ದು ...	೨೯	೧೮೭೮	೧೪೮	೧೮೪೯—೧೯೯೭
ತೇರಹನು ಹಾರಾನನನ್ನು ಪಡೆದದ್ದು....	೭೦	೧೯೪೮	೨೦೫	೧೮೭೮—೨೦೮೩
— ಅಬ್ರಹಾಮನನ್ನು ಪಡೆದದ್ದು..	೧೩೦	೨೦೦೮	—	— —
ಅಬ್ರಹಾಮನು	—	—	೧೭೫	೨೦೦೮—೨೧೮೩
ಸಾರಾ	—	೨೦೧೮	—	— —

ಉತ್ಪತ್ತಿ. ೧೧, ೧೦—೨೬.

ಜಲಪ್ರಳಯದ ಈಚೆ ಹುಟ್ಟಿದ ಮನುಷ್ಯರೊಳಗೆ ಏಬೆರನು ಬಹಳ ದೀರ್ಘಾಯುಷ್ಯ ಹೊಂದಿ ಅಬ್ರಹಾಮನು ಸತ್ತ ಇತ್ತಲಾಗಿ, ಇನ್ನು ನಾಲ್ಕು ವರುಷ ಬದುಕಿದನು ಎಂಬುದೂ, ಅಬ್ರಹಾಮನು ಶೇಮನ ಕೂಡ ಇನ್ನು ೧೫೦ ವರ್ಷ ಇದ್ದನೆಂಬುದೂ, ಮೇಲೆ ಬರೆದಿರುವ ಪಟ್ಟಿಯಿಂದ ತಿಳಿದು ಬರುತ್ತದೆ. ತೇರಹನು ಎಪ್ಪತ್ತು ವರ್ಷ ಬದುಕಿ, ಅಬ್ರಾಮನನ್ನೂ ನಹೋರನನ್ನೂ ಹಾರಾನನನ್ನೂ ಪಡೆದನು (೨೬ ವ.). ತೇರಹನು ತನ್ನ ಎಪ್ಪತ್ತಿನ ವರ್ಷದಲ್ಲಿ ಮೂರು ಮಂದಿ ಮಕ್ಕಳನ್ನು ಪಡೆದದ್ದಾದರೆ, ಅವರು ಅವಳಿ ಜವಳಿ ಮಕ್ಕಳಾಗಿರ ಬೇಕು; ಆದರೆ ಹೀಗೆ ತೋರುವದಿಲ್ಲ. ಯಾಕಂದರೆ ತೇರಹನ ಮಗನಾದ ಹಾರಾನನು ತಂದೆಗಿಂತ ಮುಂಚೆ ತೀರಿದನು. ಆವಾಗ ಹಾರಾನನಿಗೆ ಆಗಲೇ ಬೆಳದಿದ್ದ ದೊಡ್ಡ ಮಗನು ಇದ್ದನು; ಅವನು ಯಾವನಂದರೆ ತೇರಹನಿಗೆ ಮೊಮ್ಮಗನಾದ ಲೋತನು. ಹಾಗಾದರೆ ತೇರಹನು ಎಪ್ಪತ್ತು ವರ್ಷ ಬದುಕಿ (ತನ್ನ ಚೊಚ್ಚಲ ಮಗನಾದ) ಹಾರಾನನನ್ನು ಪಡೆದನೆಂದು ವ್ಯಾಖ್ಯಾನ ಮಾಡ ತಕ್ಕದ್ದು. ಅಬ್ರಹಾಮನು ಜನಿಸಿದ ಸಂವತ್ಸರವನ್ನು ಸ. ೧೨, ೪ನೆ ವಚನದಿಂದ ಗೊತ್ತು ಮಾಡ ಬಹುದು. ಹ್ಯಾಗಂದರೆ: ಹಾರಾನ ದೇಶವನ್ನು ಬಿಟ್ಟು ಹೋಗುವಾಗ ೭೫ ವರ್ಷದವನಾಗಿದ್ದನು. ಅವನ ತಂದೆಯಾದ ತೇರಹನು ೨೦೫ ವರ್ಷದವನಾಗಿ, ಇನ್ನು ಹಾರಾನದಲ್ಲಿರುವಾಗಲೇ, ತೀರಿ ಹೋದನು. ತಂದೆಯ ಮರಣಕಾಲದಲ್ಲಿ ಅಬ್ರಹಾಮನು ೭೫ ವರ್ಷದವನಾದರೆ, ಅವನು ತಂದೆ ೧೩೦ ವರ್ಷದವನಾಗಿರುವಾಗ್ಯೆ ೨೦೦೮ನೆ ಸೃಷ್ಟಿವರ್ಷದಲ್ಲಿ ಜನಿಸಿರ ಬೇಕು.—ವಾಗ್ದತ್ತದ ಬಾಧ್ಯಸ್ತನಾದದರಿಂದ, ಅವನ ಹೆಸರು ಅಣ್ಣ ತಮ್ಮಂದಿರ ಹೆಸರುಗಳಲ್ಲಿ ಮೊದಲು ಬರುತ್ತದೆ.

ಶೇಮನು ಆರ್ಪಕ್ಷದನು ಎಂಬಿವರನ್ನ ಕುರಿತಾದ ಮಾತು ಹಿಂದಿನ ಸಂಧಿಯಲ್ಲಿ ಮುಗಿಯಿತು. ಹಳೆ ಒಡಂಬಡಿಕೆಯ ಗ್ರೀಕ ಭಾಷಾಂತರ ಮಾಡಿದವರೂ, ಅವರನ್ನ ಅನುಸರಿಸುವ ಲೂಕನೂ ತಾನು ಬರೆದ ಸುವಾರ್ತೆಯಲ್ಲಿ (೩, ೩೬.) ಆರ್ಪಕ್ಷದನು ಕಾಯಿನಾನನನ್ನು, ಇವನು ಶೇಲಹನನ್ನು ಪಡೆದನೆಂದು ಹೇಳುತ್ತಾರೆ. ಆದರೆ ಮೂಲಭಾಷೆಯಾದ ಹಿಬ್ರುವಿನಲ್ಲಿ ಇವನ ಹೆಸರು ಈ ಸ್ಥಳದಲ್ಲಿಯೂ ೧ ದಿನಚರ್ಯ. ೧, ೧೮ನೆ ವಚನದಲ್ಲಿಯೂ ಇಲ್ಲ. ಕಾಯಿನಾನನು ಜೋತಿಷ್ಯವಿದ್ಯ ಮೊದಲು ಕಲ್ಪಿಸಿದನಂತ ಆ ದೇಶಗಳಲ್ಲಿ ವರ್ತಿಸುತ್ತಿದ್ದ ಸಂಪ್ರದಾಯವು ಹೇಳುತ್ತದೆ. ಅವನು ಶೇಲಹನ ಸಹೋದರನಾಗಿರ ಬಹುದು. ಏಬೆರ=ಆಚೆಯವನು, ಯಾಕಂದರೆ ಕಾನಾನ್ ದೇಶಕ್ಕೆ ಐಫ್ರತ ನದಿಯ ಆಚೆಯಲ್ಲಿ ಇದ್ದನು. ಇವನಿಂದ ಅಬ್ರಹಾಮನ ಸಂತಾನದವರಿಗೂ ಅವರಾಡುತ್ತಿದ್ದ ಭಾಷೆಗೂ ಇಬ್ರಿಯರು ಇಬ್ರಿಯ (ಹಿಬ್ರು) ಎಂದು ಹೆಸರು ಆಯಿತು. ಈ ವಂಶಾವಳಿವೃಕ್ಷಗಳನ್ನು ವಿಚಾರಿಸಿ ನೋಡಲಾಗಿ, ನೋಹನು ಮುಂದೆ ಬರೆದಿರುವ ಪಿತೃಗಳಿಗೆ ಸಹಕಾಲದವನು ಆದನು. ಹ್ಯಾಗಂದರೆ:

ಏನೋಷನ	ಸಂಗಡ	೮೪	ವರ್ಷ	ಬದುಕಿದನು.
ಕೇನಾನನ	”	೧೭೯	”	”
ಮಹಲಲೇಲನ	”	೨೬೪	”	”
ಯೇರೆದನ	”	೩೩೬	”	”
ಮೆಥೂಸಲಹನ	”	೬೦೦	”	”
ಲೇಮಕನ	”	೫೯೫	”	”
ಶೇಮನ	”	೪೪೮	”	”
ಆರ್ಪಕ್ಷದನ	”	೩೪೮	”	”

೮೭ ತೇರಹನ ವಂಶವೂ, ಅವನು ದೇಶಾಂತರಕ್ಕೆ ಹೋದದ್ದೂ.

ಉತ್ಪತ್ತಿ. ೧೧, ೨೭—೩೨.

ಶೇಲಹನ	ಸಂಗಡ	೩೧೩	ವರ್ಷ	ಬದುಕಿದನು.
ಏಬೆರನ	„	೨೮೩	„	„
ಪೇಲೆಗನ	„	೨೩೯	„	„
ರೇಯುವನ	„	೨೧೯	„	„
ಸೆರೂಗನ	„	೧೮೭	„	„
ನಾಹೊರನ	„	೧೪೮	„	„
ತೇರಹನ	„	೧೨೮	„	„
ಹಾರಾನನ	„	೫೮	„	„

ಇವರೆಲ್ಲರು ಸ್ತ್ರೀಬೀಜದವರು, ದೇವರಿಗೆ ಜಯಶಕ್ತಿಯಿಂದ ನಡಕೊಂಡು ಆತನ ವಾಕ್ಯ ಕೈಕೊಂಡಿದ್ದವರು. ಆದ ಕಾರಣ ನೋಹನು ಚಂದಾಗಿ, ಮೇಲೆ ಬರೆದ ಆರು ಮಂದಿ ಅತ್ತಲಾಗಿನವರಿಂದ ಸೃಷ್ಟಿ ಇತ್ಯಾದಿ ವಿವರ ಹೇಳುವ ದಿವ್ಯ ಸಂಪ್ರದಾಯವ ಕೇಳಿ ತಿಳಿದಿರ ಬಹುದು. ಹಾಗೂ ಮೇಲಣ ಪಟ್ಟಿಯಲ್ಲಿಯ ೧೦ ಮಂದಿ ಇತ್ತಲಾಗಿನವರಿಗೆ ಅದನ್ನ ಹೇಳಿ, ತಿಳಿಸಿರ ಬಹುದು. ಅಬ್ರಹಾಮನ ತಂದೆಯಾದ ತೇರಹನು ನೋಹನ ಬಾಯಿಲಿ ಜಲಪ್ರಳಯದ ಆಚೆ, ಹಾಗೂ ಜಲಪ್ರಳಯದ ಈಚೆ, ನಡೆದ ಎಲ್ಲಾ ಪೂರ್ವೋತ್ತರ ಕೇಳಿ, ತಿಳಿದಿರ ಬಹುದು. ನೋಹನು ಜಲಪ್ರಳಯದ ಆಚೆ ಆರು ತಲೆ ಕಂಡನು. ಜಲಪ್ರಳಯದ ಈಚೆ ೧೦ ತಲೆ ಕಂಡನು.

e) ತೇರಹನ ವಂಶಾವಳಿ ವೃಕ್ಷವೂ, ಅವನು ದೇಶಾಂತರಕ್ಕೆ ಹೋದದ್ದೂ. ೧೧, ೨೭—೩೨.

೨೮ ವ. ಊರ್=ಬೆಳಕು ಎಂಬ ಊರು ಮೇಸೊಪೊತಾಮಿಯದ ಉತ್ತರ ಭಾಗದಲ್ಲಿ ಇತ್ತು. ಆ ಶೀಮೆಯು ಕುರಿ ದನ ಮೇಯಲಿಕ್ಕೆ ಬಹಳ ಚಲೋದು ಆಗಿತ್ತು. ಅಲ್ಲಿ ಆ ಮೇಲೆ ಕಲ್ದಿಯರು (ಕಸ್ದಿಯರು) ವಾಸ ಮಾಡುವವರಾದ್ದರಿಂದ ಅದು ಕಸ್ದಿಯರ ಊರ್ ಎಂದೆನಿಸುವಂಥಾದಾಯಿತು. ಅಲ್ಲಿ ಅಗ್ನ್ಯೋಪಾಸನೆ ಮೊದಲು ಹುಟ್ಟಿ ಬಹಳ ನಡೆಯುತ್ತಿತ್ತು.

೩೧ ವ. ವಿಗ್ರಹಾರಾಧನೆ ನಡೆಯಲಿಕ್ಕೆ ಆರಂಭವಾಗಿತ್ತು. ಅದನ್ನ ನೋಡಿ, ನಮ್ಮವರು ಕಲಿಶಾರೆಂಬ ಭಯದಿಂದ ಈ ಕುಟುಂಬದವರು ತಮ್ಮಷ್ಟಕ್ಕೆ ಏಕಸ್ತರಾಗಿದ್ದು, ಹೆಣ್ಣು ತಕ್ಕೊಳ್ಳಲಿಕ್ಕೆ ಬಹಳವಾಗಿ ಹೊರಗೆ ಹೋಗದೆ, ತಮ್ಮೊಳ ತಾವೆ ಮದಿವೆ ಮಾಡಿಕೊಂಡರು. ಸಾರೈ=ನನ್ನ ರಾಣಿ. ಅಬ್ರಹಾಮನಿಗೆ ಮಲಸಹೋದರಿ ಆಗ ಬೇಕು (೨೦, ೧೨). ಮಿಲ್ಕಳು ತನ್ನ ಗಂಡನಿಗೆ ಸೋದರ ಮಗಳು. ಈ ಊರ್ ಎಂಬ ಸ್ಥಳವನ್ನು ಬಿಟ್ಟು ಕಾನಾನಕ್ಕೆ ಹೋಗ ಬೇಕೆಂಬ ಯಾವದೊಂದು ಸೂಚನೆ ದೇವರಿಂದ ತೇರಹನಿಗೂ ಅಬ್ರಹಾಮನಿಗೂ ಆಗಿದ್ದೀತು. ಅಬ್ರಹಾಮನು ತಂದೆಯನ್ನು ದೇಶಾಂತರಕ್ಕೆ ಹೋಗ ಒಡಂಬಡಿಸಿದ್ದಾನು (ಅಪೊ. ಕ್ರಿ. ೭, ೨). ಒಟ್ಟಿಗೆ ಅವರಿಗೆ ಅಲ್ಲಿ ಪಾಡಾಗಲಿಲ್ಲ. ಅದರಿಂದ ಅಲ್ಲಿಂದ ಹೊರಟರು. ಮೇಸೊಪೊತಾಮಿಯದಲ್ಲಿಯ ಹಾರಾನ ಎಂಬ ಸ್ಥಳದಲ್ಲಿ ವಸ್ತಿ ಮಾಡಿದರು. ಅದಕ್ಕೆ ಆ ಮೇಲೆ ಖರ್ರೆ ಎಂಬ ಹೆಸರಾಯಿತು. ಒಂದು ವೇಳೆ ತೇರಹನು ತೀರಿದ ತನ್ನ ಮಗನ ಹೆಸರನ್ನು ಈ ಸ್ಥಳಕ್ಕೆ ಕೊಟ್ಟಿದ್ದಾನು. ತೇರಹನು ವಿಗ್ರಹಾರಾಧನೆ ನಡಿಸಿದನೆಂದು ಯೆಹೋಶು. ೨೪, ೨ನೆ ವಚನದಿಂದ ದ್ಯೋತಕವಾಗುತ್ತದೆ. ಅವನಲ್ಲಿ ದೇವರ ಅರವು ಆಗಲೆ ಮಾಸಿತ್ತು. ಸತ್ಯ ದೇವರ ತಿಳುವಳಿಕೆ ಎಂಬ ಬೆಳಕು ಇತ್ತು. ಆದರೆ ಅಜ್ಞಾನ ಎಂಬ ಕತ್ತಲೆ ಹೆಚ್ಚು ಇತ್ತು. ಅದು ಇದನ್ನು ಅವನಲ್ಲಿ ಗೆದಿಯಲಾಗಲಿಲ್ಲ. ಅಬ್ರಹಾಮನು ಅವರನ್ನು ಬಿಟ್ಟು ಹೋಗುವದು ಬಹಳ ಅವಶ್ಯವಾಯಿತು. ಅವರಲ್ಲಿ ನಿಂತ ಪಕ್ಷದಲ್ಲಿ ಅವನೂ ವಿಗ್ರಹಾರಾಧಕನಾಗುತ್ತಿದ್ದನು. ಸಂಗತಿಫಲ ಕೇಡಿಗೂ ಒಳ್ಳೇದಕ್ಕೂ ದೊಡ್ಡದು.

ಮೂರನೆ ಖಂಡ

ಮೂಲಪಿತೃಗಳ ಕಾಲ. ಉತ್ಪತ್ತಿ. ಸಂಧಿ ೧೨—೫೦.

ಲೋಕಸೃಷ್ಟಿಯ ಇತ್ತಣ ವರ್ಷ ೨೦೮೩—೨೩೬೯.
ಕ್ರಿಸ್ತನ ಅತ್ತಣ ವರ್ಷ ೧೯೧೭—೧೬೩೧. ೨೮೬ ವರ್ಷಗಳು.

ಟಿಪ್ಪಣಿ: ಈ ಮೂಲಪಿತೃಕಾಲವು ಅಬ್ರಹಾಮನು ದೇಶಾಂತರಕ್ಕೆ ಹೋದಂದು ಪ್ರಾರಂಭಿಸಿ, ಯೋಸೇಫನು ಸತ್ತಾಗ್ಯೆ, ಮುಗಿಯಿತು.

A) ಅಬ್ರಹಾಮನ ಚರಿತ್ರೆ. ಉತ್ಪತ್ತಿ. ೧೨, ೧—೨೫, ೧೦.

ಲೋಕಸೃಷ್ಟಿಯ ಇತ್ತಣ ವರ್ಷ ೨೦೮೩—೨೧೮೩.
ಕ್ರಿಸ್ತನ ಅತ್ತಣ ವರ್ಷ ೧೯೧೭—೧೮೧೭. ೧೦೦ ವರ್ಷ.

ಜಲಪ್ರಳಯವಾದಂದಿನಿಂದ ಗತಿಸಿ ಹೋದ ೪೨೭ ವರ್ಷಗಳಲ್ಲಿ ಮನುಷ್ಯರು ಸೃಷ್ಟಿಯ ಚಂದಕ್ಕೆ ಭ್ರಮೆಗೊಂಡು ಸೃಷ್ಟಿಕರ್ತನನ್ನು ಮರೆತು ಸೃಷ್ಟಿಯೇ ದೇವರೆಂದು ಸೇವಿಸುವವರಾದ ಬಳಿಕ, ಶೇಮನವರ ಮನಸ್ಸು ಸಹಾ ಕೆಟ್ಟು ಅಡಿವಿ ಪಾಲಾದದರಿಂದ, ಬೆಳೆಯ ಅನುವಾಗದಕ್ಕೆ ಭಯಭಕ್ತಿಯ ಗಿಡವು ಒಣಗಿ ಹೋಗುವ ಹಾಗಾಯಿತು. ಭಯಭಕ್ತಿ ಮನುಷ್ಯರಿಗೆ ಮನೋಶಾಂತಿ ಎಂಬುವ ಇಷ್ಟಾರ್ಥವನ್ನು ಕೊಡುವ ಕಲ್ಪವೃಕ್ಷ. ಇದರ ಫಲವನ್ನು ತಿಂದು ಮನುಷ್ಯರು ಬದುಕಿ ಕೊಳ್ಳುವರು. — ಈ ಸತ್ಯ ಜೀವವೃಕ್ಷ ಒಣಗಿ ಹೋದದ್ದಾದರೆ, ಮನುಷ್ಯರು ದೇವರ ಪಾಲಿಗೆ ಸತ್ತ ಹಾಗೆ ಸರಿ! ಇದರ ನಿಮಿತ್ತ ದೇವರು ಮೂಲಪಿತೃಗಳನ್ನು ಆದು ಕೊಂಡು, ವಿಶೇಷ ಅನುಗ್ರಹದಿಂದ ನಡಿಸಿ, ಬೇರೆ ಮಾಡಿ, ಕೇಡಿಗೆ ತಪ್ಪಿಸಿ, ಅವರ ಹೃದಯ ಎಂಬ ಹೊಲವನ್ನು ಹಸನ ಮಾಡಿ, ಆ ಭಯಭಕ್ತಿವೃಕ್ಷ ಉಳಿಸಿ ಬೆಳೆಯಲಿಕ್ಕೆ ಅನುಕೂಲ ಮಾಡಿದನು.

ಮೊದಲು ಆದಾಮನ ಸಂಗಾತ, ಆ ಬಳಿ ನೋಹನ ಸಂಗಾತ ಆದಂತೆ, ದೇವರು ಕಡೆಗೆ ಅಬ್ರಹಾಮನೊಡನೆ ಒಡಂಬಡಿಕೆ ಮಾಡಿದ್ದಲ್ಲಿ, ಹಳೆ ಒಡಂಬಡಿಕೆ ಎಂಬುದು ಆರಂಭವಾಯಿತು. ಹಳೆ ಒಡಂಬಡಿಕೆ ಪಾಠಶಾಲೆಯೇ, ಹೊಸ ಒಡಂಬಡಿಕೆ ವಿದ್ಯಶಾಲೆಯೇ. ದೇವರನ್ನು ಅರಿಯುವ ದಿವ್ಯ ವಿದ್ಯಾಭ್ಯಾಸ ಲೋಕದಲ್ಲಿ ಮರೆತು ಹೋಗಿತ್ತು. ಕಲಿಸುವ ಉಪಾಧ್ಯಾಯರು ಯಾರೂ ಶಿಕ್ಕಲಿಲ್ಲ; ಇದರ ದುಸಕೆ ದೇವರು ತಾನೆ ಉಪಾಧ್ಯಾಯನಾಗಿ ಸಾಲೆ ಹಾಕ ಬೇಕಾಗಿತ್ತು. ಈ ಹಳೆ ಒಡಂಬಡಿಕೆ ಎಂಬ ಪಾಠಶಾಲೆಯಲ್ಲಿ ಮೂರು ವರ್ಗಗಳು ಅವೆ. ಹ್ಯಾಗಂದರೆ: ಅಕ್ಷರ ಕಲಿಯುವವರದೊಂದು, ಅಕ್ಷರ ಕೂಡಿಸಿ ಶಬ್ದ ಓದಿ ಹೇಳುವವರದೊಂದು, ಶಬ್ದ ಜೋಡಿಸಿ ವಾಕ್ಯಗಳನ್ನು ಓದಿ ಅರ್ಥ ಹೇಳುವವರದೊಂದು. ದೇವರು


ಕೊಟ್ಟ ವಾಗ್ದತ್ತವೇ ಅಕ್ಷರ, ಅದನ್ನು ನಂಬುವ ವಿಶ್ವಾಸವೇ ಅಕ್ಷರಾಭ್ಯಾಸ; ಆತನು ನಿರೂಪಿಸಿದ ನೇಮವೇ ಶಬ್ದ; ಅದನ್ನು ವಿಚಾರಿಸಿ, ತಾವು ಯಾತರಿಂದಲಾದರೂ ಶುಚಿಯಾಗಲಾರದ ಪಾಪಿಷ್ಟರು ಎಂದು ಗ್ರಹಿಸಿ, ನೇಮವು ಸೂಚಿಸುವ ಶುದ್ಧ ಮಾಡುವಾತನನ್ನು ಹಾರೈಸುವದೇ ಶಬ್ದಾಭ್ಯಾಸ. ದೇವರು ಪ್ರವಾದಿಗಳ ಮುಖದಿಂದ ನುಡಿಸಿದ ಪ್ರವಾದನೆಯೇ ವಾಕ್ಯ. ಪ್ರವಾದನಾವಾಕ್ಯವನ್ನು ಕೇಳಿ, ನಾವು ಮೊದಲು ಅನುಭವಿಸ ತಕ್ಕಂಥಾ, ಆ ಮೇಲೆ ನಡಿಸ ತಕ್ಕಂಥಾ ದಿವ್ಯ ಪ್ರೀತಿಯೇ ಎಲ್ಲಾ ದೇವವಾಕ್ಯದ ಸಾರಾಂಶವೆಂದು ತಿಳಿಯುವದೇ ವಾಕ್ಯಪ್ರಯೋಗ. ಈ ಪರಿ ಪ್ರಥಮ ವಿದ್ಯಾರ್ಥಿಗಳಾದ ಈ ಮೂಲಪಿತೃಗಳಿಗೆ ದೇವರು ವಿಶ್ವಾಸದಲ್ಲಿ ಮೋಸೆಯಿಂದ ಹಿಡಿದು ಪ್ರವಾದಿಗಳ ತನಕ ಇದ್ದವರಿಗೆ ಹಾರೈಕೆಯಲ್ಲಿ, ಪ್ರವಾದಿಗಳ ಸಹಕಾಲದವರಿಗೆ ಪ್ರೀತಿಯಲ್ಲಿ ಅಭ್ಯಾಸ ಮಾಡಿಸಿದನು. ಇದರಿಂದ ಇಸ್ರಾಯೇಲನವರು ಕ್ರಿಸ್ತನಿಂದ ಸ್ಥಾಪನೆ ಆದ ವಿದ್ಯಾಶಾಲೆಯಲ್ಲಿ ಸೇರಲಿಕ್ಕೆ ಸಿದ್ಧವಾಗಿ, ನಿತ್ಯ ರಕ್ಷಣಾಭ್ಯಾಸ ಮಾಡಿ, ಲೋಕಕ್ಕೆ ಉಪಾಧ್ಯಾಯರಾದರು. ಮೂಲಪಿತೃಗಳು ವಿಶ್ವಾಸಾಭ್ಯಾಸ ಚಂದಾಗಿ ಮಾಡಿದರು. ಅಬ್ರಹಾಮನಲ್ಲಿ ಸಂತೋಷದಿಂದ ದೇವರು ಹೇಳಿದ್ದನ್ನೇ ಮಾಡುವಂಥಾ, ಇಸಾಕನಲ್ಲಿ ಉಪದ್ರವನ್ನು ಮನೋಶಾಂತಿಯಿಂದ ತಾಳಿ ಕೊಳ್ಳುವಂಥಾ, ಯಾಕೋಬನಲ್ಲಿ ವಿಘ್ನಗಳನ್ನು ಹೋರಾಡಿ ಜೈಸುವಂಥಾ ವಿಶ್ವಾಸ ತೋರುತ್ತದೆ.

a) ದೇವರು ಅಬ್ರಹಾಮನನ್ನು ಕರೆದದ್ದು.

ಅವನು ಹಾರಾನದಿಂದ ಹೊರಟು ಕನಾನ್ ದೇಶಕ್ಕೆ ಸೇರಿದ್ದು. ೧೨, ೧—೯.

೧ ವ. ಮನಸಿನೊಳಗೆ ದೇವರು ಅವನಿಗೆ ಹೀಗೆ ತಿಳಿಸಿದನು. ಬಂಧು ಬಳಗದವರನ್ನ ಬಿಟ್ಟು ಹೋಗುವದೊಂದು, ಹೋಗುವ ಸ್ಥಳ ಗೊತ್ತಿಲ್ಲದೊಂದು: ಹೀಗೆ ಎರಡು ಕಷ್ಟಗಳು ಅವನ ಮೇಲೆ ಬಿದ್ದವು. ತನ್ನನ್ನು ಅಲ್ಲಗಳೆಯುವದೂ; ಪಾರಗಾಣದ ಹಾಗೆ ಕಂಡರೂ, ದೇವರ ವಾಕ್ಯಕ್ಕೆ ವಿಧೇಯನಾಗಿ ನಿಧಾನದಿಂದ ನಡೆಯುವದೂ: ಇವು ಸದ್ವಿಶ್ವಾಸದ ಲಕ್ಷಣಗಳು.— ದೇವರು ಈ ಆಜ್ಞೆ ಯಾಕೆ ಕೊಟ್ಟನಂದರೆ: ವಿಗ್ರಹಾರಾಧನೆಗೆ ಬಿದ್ದವರಲ್ಲಿ ಅಬ್ರಹಾಮನು ಇದ್ದದ್ದಾದರೆ, ಬೇಗ ಕೆಡುವ ಗಂಡಾಂತರವಾಗುತ್ತಿತ್ತು. ಹಾಗೂ ಸತ್ಯದೇವಾರಾಧನೆ ನಡಿಸಗೊಡುತ್ತಿದ್ದಿಲ್ಲ.

೨. ೩ ವ. ಕಠಿಣವಾದ ಆಜ್ಞೆಗೆ ಧೈರ್ಯ ಪಡಿಸುವ ಒಂದು ಸವಿ ವಾಗ್ದತ್ತ ಕೂಡಿಸುತ್ತಾನೆ. ಈ ವಾಗ್ದತ್ತದಲ್ಲಿ ೬ ವಾಕ್ಯಗಳು: ೧) ಅವನ ವಂಶದವರಾದ ಇಸ್ರಾಯೇಲನವರು ಪೂರ್ವದಲ್ಲಿ, ದಾವೀದನು ಸೊಲೊಮೋನನು ಆಳಿದಾಗ, ದೊಡ್ಡ ಜನಾಂಗವಾಗಿದ್ದರು. ಹಾಗೂ ಈ ವರೆಗೂ ಅವರು ತಮ್ಮ ಮತಾಚರಣೆಯಿಂದ ಲೋಕಪ್ರಖ್ಯಾತಿ ಪಡ ಕೊಂಡವರು. ಇದಲ್ಲದೆ ತನ್ನಂತೆ ನಂಬುವವರೆಲ್ಲರು ಆತ್ಮದ ಪ್ರಕಾರವಾಗಿ ಅವನ ವಂಶಜರು. ಇವರ ಲೆಖ್ಖ ಅಗಣ್ಯವೇ ಸರಿ! ೨) ಆಶೀರ್ವದಿಸಿ) ನಿನಗೆ ಸಂಪತ್ತನ್ನು ಕೊಟ್ಟು ರಕ್ಷಿಸುವೆನು. ೩) ದೊಡ್ಡ ಹೆಸರು.) ತನ್ನ ವಿಶ್ವಾಸದಿಂದ ಬಹಳ ಪ್ರಖ್ಯಾತಿ ಪಟ್ಟವನಾದನು. ಲೋಕಕ್ಕೆ ವಿಶ್ವಾಸವನ್ನು ಕಲಿಸುವ ಉಪಧ್ಯಾಯನಾದನು. ಖುರಾನದಲ್ಲಿ ದೇವರ ಸ್ನೇಹಿತನೆಂದು ಅನ್ನಿಸಿ ಕೊಳ್ಳುತ್ತಾನೆ. ೪) ಅಬ್ರಹಾಮನ ಮುಖದಿಂದ ಲೋಕಕ್ಕೆ ಆಶೀರ್ವಾದ ಬಂದದೆ. ಅವನು ಲೋಕದಲ್ಲಿ ಇದ್ದದ್ದು, ನಡೆದದ್ದು ಒಂದು ಆಶೀರ್ವಾದ. ಯಾಕಂದರೆ ಅವನ ಸಂಗತಿಯಿಂದ ಅವನ ಸಹಕಾಲದವರಲ್ಲಿ ಅನೇಕರಿಗೆ ಬಹಳ ಉಪಯೋಗವಾಯಿತು. ಮತ್ತು ಅವನ ಚರಿತ್ರೆಯನ್ನು ಕೇಳುವವರಲ್ಲಿ ಅನೇಕರು ವಿಶ್ವಾಸ ಕಲಿತು ಕೊಳ್ಳುತ್ತಾರೆ. ೫) ಆಗ್ಯೆ ದೇವರಿಗೂ ಕೆಟ್ಟ ಲೋಕಕ್ಕೂ ಅವನು ಮಧ್ಯಸ್ತನಾಗಿದ್ದದರಿಂದ, ಅವನನ್ನು ಹರಿಸಿದವರ ಮೇಲೆ, ದೇವರ ಆಶೀರ್ವಾದ, ಅವನನ್ನು ಶಪಿಸಿದವರ ಮೇಲೆ ದೇವರ ಶಾಪ. ೬) ಭೂಮಿಯ ಗೋತ್ರಗಳೆಲ್ಲಾ ನಿನ್ನಲ್ಲಿ ನಿನ್ನ ವಂಶಜನಾದ ಕ್ರಿಸ್ತನಲ್ಲಿ ನಿತ್ಯ ಆಶೀರ್ವಾದ ಹೊಂದುವವು. ಆದರೆ ಆವಾಗ ಈ ವಾಕ್ಯದ ವಿಪರಿಯಾಸ ಕಂಡಲ್ಲದೆ, ಅದು ಒದಗುವಂತೆ ತೋರ


ತೇರಹ
ಹಾರಾನ್
ನಹೋರ=ಮಿಲ್ಕ
ಸಾರ = ಅಬ್ರಹಾಮ = ಕೆಟೂರ = ಹಾಗರ್
ಬೆತುವೇಲ್
ಇಸಾಕ್ = ರೆಬೆಕ್ಕ
ಇಷ್ಮಯೇಲ್
ಲೋಟನು
ಇಸ್ಕ
ಮಿಲ್ಕ
ಮಿದ್ಯಾನರು
ಇಷ್ಮಯೇಲ್ಯರು
ಲಾಬಾನ್
ರೆಬೆಕ್ಕ
ಎಸಾವನು
ಬೆನಮ್ಮಿ
ಮೋವಬ್
ಎದೋಮ್ಯರು
ಅವೋನ್ಯರು
ಮೋವಾಬ್ಯರು
ಲೇಯ = ರಾಹೇಲ್ = ಯಾಕೋಬ್ = ಜಿಲ್ಫ = ಬಿಲ್ಹ
ಲೇಯಳ ಮಕ್ಕಳು
ಬಿಲ್ಹಳ ಮಕ್ಕಳು
ಜಿಲ್ಫಳ ಮಕ್ಕಳು
ಲೇಯಳ ಮಕ್ಕಳು
ರಾಹೇಲಳ ಮಕ್ಕಳು
ರೂಬೆನ್ ಸಿಮೆಯೋನ್ ಲೇವಿ ಯೆಹೂದ
ದಾನ್ ನೆಪ್ತಲಿ
ಗಾಡ್ ಅಶೇರ್
ಇಸ್ಸಕಾರ್ ಜೆಬುಲೋನ್ ದೀನ
ಯೋಸೆಫ್ ಬೆನ್ಯಮೀನ್
ಎಫ್ರಾಯಿಮ್ ಮನಾಸ್ಸೆ

ಲಿಲ್ಲ. ಹ್ಯಾಗಂದರೆ ಅಬ್ರಹಾಮನ ಹೆಂಡತಿ ಬಂಜೆಯಾಗಿದ್ದಳು; ತಾನು ಸ್ವಾಸ್ಥಿ ಇಲ್ಲದೆ, ಪರದೇಶಿಯಾಗಿ ತಿರುಗುತ್ತಿದ್ದನು. ಸಾಲೆಹುಡುಗರು ಯಾಕೆ ಹೀಗೆ ಬರಿಯ ಬೇಕು, ಯಾಕೆ ಹೀಗೆ ನುಡಿಯ ಬೇಕು ಎಂದು ತಿಳಿಯದೆ ಓನಾಮ ಹ್ಯಾಗೆ ಕಲಿಯ ಬೇಕೋ, ಹಾಗೆ ಅವನು ವಿಶ್ವಾಸ ಕಲಿಯ ಬೇಕಾಯಿತು.

೪ ವ. ಅಬ್ರಹಾಮನು ೧೦೦ ವರ್ಷ ಕಾನಾನದಲ್ಲಿ ಪರದೇಶಿಯಾಗಿ ಸಂಚರಿಸಿದನು.

೫ ವ. ಸಂಪಾದಿಸಿ ಕೊಂಡ ಪ್ರಾಣಿಗಳು ಯಾರಂದರೆ: ತಾವು ಕೊಂಡು ಕೊಂಡ ದಾಸ ದಾಸಿಯರು. ಇವರು ತಮ್ಮ ಬದಕಿನಲ್ಲಿ ಬಂದ ಹಾಗಾಯಿತು.

೬ ವ. ಶಿಕೆಮ) ಮೋಸೆ ಈ ಗ್ರಂಥ ರಚಿಸುವಾಗ, ಈ ಹೆಸರು ವರ್ತಿಸುತ್ತಿತ್ತು. ಅದು ಕಾನಾನದ ಮಧ್ಯದಲ್ಲಿ ಎಬಲ ಗುಡ್ಡಕ್ಕೂ ಗರಿಜಿಮ ಗುಡ್ಡಕ್ಕೂ ನಡುವೆ ಬಹಳ ಫಲಭರಿತವಾದ ಸ್ಥಳವಾಗಿದೆ. ಅದು ಯೆರೂಸಲೇಮಿಗೆ ೧೮ ಹರುದಾರಿ, ನಜರೇಥಿಗೆ ೧೬ ಹರುದಾರಿ ದೂರವಾಗಿದೆ. ಮೋರೆ) ಇದು ಆ ತೋಪು ಹಾಕಿದವನ ಹೆಸರು. ಈ ತೋಪಿನಲ್ಲಿ ವೃಕ್ಷರಾಜ ಎಂಬ ಮರಗಳು (oak) ಇದ್ದವು. ಕಾನಾನ್ಯರ ಕೂಡ ಸಂಗತಿ ಆಗದಂತೆ, ಊರುಗಳಲ್ಲಿ ಸೇರಲಿಲ್ಲ.

೭ ವ. ಕರ್ತನು ಅಬ್ರಹಾಮನಿಗೆ ತೋರಿಸಿದ ದೇಶ ಕಾನಾನವೇ. ತಾನು ಮೊದಲು ಕೊಟ್ಟ ವಾಗ್ದತ್ತಕ್ಕೆ (೨ವ.) ದೇವರು ಇಲ್ಲಿ ಒಂದು ವ್ಯಾಖ್ಯಾನ ಮಾಡುತ್ತಾನೆ. ಏನಂದರೆ: ನಿನ್ನನ್ನು ದೊಡ್ಡ ಜನಾಂಗವಾಗ ಮಾಡುವೆನು; ಆ ಜನಾಂಗವು ಈ ದೇಶದಲ್ಲಿ ವಾಸ ಮಾಡುವದು. ಕರ್ತನು ಈ ವಾಗ್ದತ್ತ ಕೊಟ್ಟದ್ದಕ್ಕೆ, ಅಬ್ರಹಾಮನು ಆತನಿಗೆ ಬಲಿಪೀಠ ಕಟ್ಟಿ ಬಲಿ ಅರ್ಪಿಸಿದ್ದಾನಾದೀತು. ಹೀಗೆ ಕರ್ತನಿಗೆ ತನ್ನ ಕೃತಜ್ಞತೆಯನ್ನ ತೋರಿಸಿ ಆತನೇ ನಿಜ ದೇವರು, ನೀವು ನಡಿಸುವ ವಿಗ್ರಹಾರಾಧನೆ ಸುಳ್ಳೆಂದು ಆ ಪ್ರಾಂತ್ಯದ ವಿಗ್ರಹಾರಾಧಕರಿಗೆ ಒಂದು ಲಿಖಿತ ಸಾಕ್ಷಿ ಕೊಟ್ಟ ಹಾಗಾಯಿತು.

೮ ವ. ಅಲ್ಲಿಂದ ಅವನು ಬೇಥೇಲಿಗೆ ಪೂರ್ವದಲ್ಲಿಯ ಬೆಟ್ಟಕ್ಕಾಗಿ).—ಬೇಥೇಲಿಗೆ ಮುಂಚೆ ಲೂಸ ಎಂಬ ಹೆಸರಿತ್ತು (೨೮, ೧೯). ಅದಕ್ಕೆ ಈಗ ಬೈತಿನ ಅನ್ನುತ್ತಾರೆ. ಅಬ್ರಹಾಮನು ಪಾರಮಾರ್ಥಿಕನು. ಆದ ಮೂಲ ಅವನು ಯಾವಾಗಲೂ ದೇವರಿಗೆ ಮಾಡತಕ್ಕ ಬಲಿ ಪ್ರಾರ್ಥನೆಗಳಿಗೆ ಅನುಕೂಲವಾಗಲೆಂತ ಬಲಿಪೀಠಗಳನ್ನು ಕಟ್ಟುತ್ತಿದ್ದನು.

೯ ವ. ಮತ್ತು ಅಬ್ರಹಾಮನು ಹೊರಟ್ಹೊರಟು ಕೊಳ್ಳುತ್ತಾ ದಕ್ಷಿಣ ಕಡೆಗೆ ಹೋಗುತ್ತಿದ್ದನು.

b) ಅಬ್ರಹಾಮನಿಗೆ ಮಿಜ್ರದಲ್ಲಿ ಆದ ಪರೀಕ್ಷೆಯೂ ಸಹಾಯವೂ. ೧೦—೨೦.

೧೦ ವ. ಬರ ಬಿತ್ತು.) ವಾಗ್ದತ್ತದ ದೇಶದಲ್ಲಿ ಅಂಥಾ ಕಷ್ಟ ಬಂತು. ಅದಕ್ಕೆ ಕುಂದು ಹತ್ತಿತು. ಅದು ಅಗ್ಗವಾಯಿತು. ಮಿಜ್ರದಲ್ಲಿ ನೀಲ ನದಿಯ ಕಾಲಿವೆಗಳಿಂದ ಬಹಳ ಮಾಗಾಣಿ ಭೂಮಿ ಇದ್ದದರಿಂದ, ಅಲ್ಲಿ ಧಾನ್ಯ ಪುಷ್ಕಳವಾಗಿತ್ತು. ಬರವಾದ್ದರಿಂದ, ನಾನು ಕೊಟ್ಟ ದೇಶ ಅಲಕ್ಷ ಮಾಡುತ್ತಾನೋ ಇಲ್ಲೋ ಎಂದು ದೇವರು ಅವನ ವಿಶ್ವಾಸ ಪರೀಕ್ಷಿಸಿದನು. ಮಿಜ್ರಕ್ಕೆ ಹೋಗಿ, ಹಲವು ಕಾಲ ಉಪಜೀವನ ಮಾಡಿ, ತಿರಿಗಿ ಬರ ಬೇಕೆಂದು ನಿರ್ಣಯ ಮಾಡಿದನು. ಕಾನಾನದಲ್ಲಿಯೇ ಅವನ ಮನಸು ಇತ್ತು. ಆದರೆ ಈ ಅವಸರದ ನಿಮಿತ್ತವಾಗಿ ಅಲ್ಲಿಗೆ ಹೋಗುವದು ಅಗತ್ಯ ಕಂಡಿತು.

೧೧—೧೩ ವ. ನನ್ನನ್ನು ಕೊಂದು ಹಾಕಿ ನಿನ್ನನ್ನು ಉಳಿಸ್ಯಾರು) ದೇವರನ್ನಲ್ಲ, ತನ್ನ ಹೆಂಡತಿಯನ್ನು, ತನ್ನ ಬಲಹೀನತ್ವವನ್ನು, ಮಿಜ್ರದವರ ಬಲ ಕೆಟ್ಟತನಗಳನ್ನು ನೋಡಿ ಹೊಯಿದಾಡುತ್ತಾನೆ. ಮಿಜ್ರದವರಿಗೆ ಅಂಜುವವನಾಗಿ, ಒಂದು ಸುಳ್ಳಾಡುತ್ತಾನೆ. ಅಕ್ಷರ ತೀಡುವವನ ಕೈ ನಡಿಗಿ ಬರಹ ಸೊಟ್ಟಾಯಿತು. ತನ್ನ ಯುಕ್ತಿಗೆ ಬೇಕಾದ ಮಾತು ಹೇಳುತ್ತಾನೆ, ಬೇಕಿಲ್ಲದ್ದು ಬಿಡುತ್ತಾನೆ. ಸಾರೈ ಅವನ ತಂಗಿ ಹೌದು (೨೦, ೧೨). ಆದರೆ ಆಕೆ ಅವನ ಹೆಂಡತಿ ಸಹ. ವಿಶ್ವಾಸದ ದೀಪ ನಮ್ಮಲ್ಲಿ ಆರುತ್ತಲೇ, ಕತ್ತಲೆ ಆಗಿ, ನಾವು ಎಡವಿ ಬೀಳುವವರಾಗಿ, ದೇವರಿಗೆ ಸರಿ ಕಾಣದಂಥಾ, ನಮಗೆ ಅಯೋಗ್ಯವಾದಂಥಾ ಯುಕ್ತಿಗಳಿಂದ ಪಾರಗಾಣುವ ಹಂಚಿಕೆ ನೋಡುತ್ತೇವೆ. ಅದಕ್ಕೆ ವಿಶ್ವಾಸದ ದೀಪ ಉರಿಯಲಿ! ನೆಟ್ಟಗೆ ಉರಿಯುವ

ಹಾಗೆ, ಅದನ್ನ ತಿದ್ದಿ, ಎಣ್ಣೆ ಹಾಕಿರಿ! ಎಷ್ಟೋ ಸರ್ತಿ ಲೋಕದ ಅಂಜಿಕೆ ಎಂಬ ಘಾಳಿ ಬೀಸಿ ಈ ದೀಪ ಆರಿಸುತ್ತದೆ! ವಿಗ್ರಹಾರಾಧಕರಾದ ಅನ್ಯ ಜನರೊಳಗೆ ಹೆಣ್ಣು ತಕ್ಕೊಂಡು ಬೀಗತನ ಮಾಡ ಬಾರದೆಂದು ತಿಳಿದು, ದೇವರ ಭಕ್ತರು ತಮ್ಮೊಳಗೆ ಮದಿವೆ ಮಾಡಿ ಕೊಳ್ಳ ಅಗತ್ಯವಾದ್ದರಿಂದ, ದೇವರು ಅಂದು ಅದರಲ್ಲಿ ತಪ್ಪು ಹಿಡಿಯಲಿಲ್ಲ. ಆದರೆ ದೇವರ ಜನಾಂಗವು ತಕ್ಕಷ್ಟು ಹೆಚ್ಚಿದ ಬಳಿಕ, ಆತನು ಇಂಥಾ ಮದಿವೆಯನ್ನು ನಿಷೇಧಿಸಿದನು (ಲೇವಿಕ. ೧೮, ೯. ೧೧. ೨೦, ೧೭).— ದೇವರವಾಕ್ಯ ಭಕ್ತರ ತಪ್ಪುಗಳನ್ನು ಮುಚ್ಚುವದಿಲ್ಲ, ಬೈಲಿಗೆ ತಂದು, ಅವಕ್ಕೆ ಶಿಕ್ಷೆ ಆದದ್ದನ್ನು ತೋರಿಸುತ್ತದೆ. ಅಬ್ರಹಾಮನಿಗೆ ಶಿಕ್ಷೆ ಆದದ್ದೇನಂದರೆ: ಅಜ್ಞಾನಿಯಾದ ಫರೋನನು, ನೀನು ಇದನ್ನು ಯಾಕೆ ಮಾಡಿದಿ ಎಂದು (೧೮.) ಹಂಗಿಸಿ ನಾಚಿಸಿದ್ದೊಂದು ಶಿಕ್ಷೆ; ದೇವರು ಅವನ ಯುಕ್ತಿಸಿದ್ಧಿಗೆ ಹೋಗಗೊಡದ್ದು ಒಂದು ಶಿಕ್ಷೆ.

೧೬ ವ. ಉಂಟಾದವು) ಅರಸನು ತಾನು ಅವನಿಗೆ ಮಾಡಿದ ಅನ್ಯಾಯ ಮರೆಸಲಿಕ್ಕೆ ಅವನ್ನ ಉಚಿತವಾಗಿ ಕೊಟ್ಟನು.

೧೭—೨೦ ವ.) ಅಬ್ರಹಾಮನು ತನ್ನ ಹೆಂಡತಿಯನ್ನು ಒಪ್ಪಿಸಿ ಕೊಟ್ಟಾಗ್ಯೂ, ದೇವರು ಆಕೆಯು ಒಪ್ಪಿಸಿ ಕೊಡಲಿಲ್ಲ. ಆಕೆಯನ್ನು ಮುಟ್ಟದಂತೆ, ಆತನು ಅರಸನನ್ನು ಅವನ ಮನೆಯವರನ್ನು ರೋಗದಲ್ಲಿ ಬೀಳಿಸಿ ಕಾಡಿದನು. ಇದರ ಸಲುವಾಗಿ ಫರೋನನು ಭಯಸ್ಥನಾಗಿ ಅಬ್ರಹಾಮನ ಪೂರ್ವೋತ್ತರ ವಿಚಾರಿಸಿ ತಿಳಿದನು. ಕರಕೊಂಡು ಹೋಗು)—ದೇವರು ಅರಸನ್ನು ತಿರಿಗಿಸಿ ಸಾರೈಗೂ ಅಬ್ರಹಾಮನಿಗೂ ಅವನು ಕೇಡು ಬಗೆಯದೆ, ಅವರನ್ನು ಮಾನದಿಂದ ಕಳುಹಿಸುವ ಹಾಗೆ, ಮಾಡಿದನು. ನಿನ್ನ ಲೌಕಿಕ ಯುಕ್ತಿಗಳು ನಿನ್ನನ್ನು ಈ ಸಂಸಾರಸಮುದ್ರದಲ್ಲಿ ಮುಣಿಗಿಸುತ್ತಾವಲ್ಲದೆ, ದಾಟಿಸಲಾರವು. ನಿನ್ನನ್ನು ಪಾರು ಮಾಡುವಂಥಾದ್ದು ವಿಶ್ವಾಸವೇ. ಸೂರ್ಯ ಚಂದ್ರ ನಕ್ಷತ್ರಾದಿಗಳಿಗೆ ಆಕಾಶದಲ್ಲಿ ದಾರಿ ನೇಮಿಸಿದಾತನು ನಿನ್ನ ಪಾದಕ್ಕೆ ಈ ಲೋಕದಲ್ಲಿ ದಾರಿ ಮಾಡಲಾರನೇ? ಫರೋನನು ಎಂಬ ಹೆಸರು ಮಿಜ್ರದಲ್ಲಿ ಒಬ್ಬೊಬ್ಬ ಅರಸನಿಗೆ ಬರುತ್ತಿತ್ತು. ಅದು ಉದ್ಯೋಗದ ಹೆಸರು, ಸ್ವಂತ ಹೆಸರಲ್ಲ.

c) ಲೋಟನು ಅಬ್ರಹಾಮನನ್ನು ಅಗಲಿದ್ದು. ೧೩, ೧—೧೩.

೨—೪ ವ. ಇದಲ್ಲದೆ—ದನಗಳಲ್ಲಿಯೂ ಬೆಳ್ಳಿ ಭಂಗಾರಗಳಲ್ಲಿಯೂ ಬಹು ಸಂಪನ್ನನಾಗಿದ್ದನು. ಮತ್ತು ಅವನು ಪಯಣವಾಗಿ ಹೊರಟ್ಹೊರಟು ಕೊಳ್ಳುತ್ತಾ, ದಕ್ಷಿಣದಿಂದ ಬೇಥೇಲಿನ ತನಕ, ಅಂದರೆ ಬೇಥೇಲಿಗೂ ಆಯಿಗೂ ನಡುವಿನಲ್ಲಿರುವಂಥಾ, ಚಾವಣಿಯಲ್ಲಿ ತನ್ನ ಗುಡಾರವಿದ್ದಂಥಾ, ತಾನು ಪ್ರಥಮದಲ್ಲಿ ಮಾಡಿದ ಬಲಿಪೀಠವಿದ್ದಂಥಾ ಸ್ಥಳದ ತನಕ ಬಂದನು.—) ಮಿಜ್ರದಲ್ಲಿ ಅಬ್ರಹಾಮನ ಸಂಪತ್ತು ಹೆಚ್ಚಿತ್ತು. ಅಲ್ಲಿಂದ ಹಾಗರಳನ್ನು ತಂದಿದ್ದಾನು. ಅಲ್ಲಿ ತನ್ನನ್ನು ಕಾದಿದ್ದ, ತನ್ನನ್ನು ದಾರಿಯಲ್ಲಿ ಸಂರಕ್ಷಿಸಿದ ಕರ್ತನಿಗೆ ಪ್ರಾರ್ಥನೆ ಮಾಡಿ, ಸ್ತೋತ್ರದ ಬಲಿಗಳನ್ನು ಅರ್ಪಿಸುತ್ತಾನೆ. ಸಂಪತ್ತು ಹೆಚ್ಚಿದ್ದಕ್ಕೆ ಅವನು ಸೊಕ್ಕಿ ದೇವರಿಗೆ ದೂರವಾಗಲಿಲ್ಲ.

೬ ವ. ದೇಶವು ಅವರನ್ನ ಹಿಡಿಸದೆ ಹೋಯಿತು) ಅದು ಇನ್ನು ಅವರದಾಗಿದ್ದಿಲ್ಲ. ಅದರ ಮೂಲನಿವಾಸಿಗಳು ಅದರಲ್ಲಿ ಸುಧಾ ಬೇರೆ ಬೇರೆ ಸ್ಥಳಗಳನ್ನು ಹಿಡಕೊಂಡಿದ್ದರು.

೭ ವ. ಪೆರಿಜ್ಜ್ಯರ ಹೆಸರು ಜನಾಂಗಪಟ್ಟಿಯಲ್ಲಿ (೧೦, ೧೫ ಮುಂ.) ಹೇಳಿರುವದಿಲ್ಲ. ಇವರು ಕನಾನ್ಯರಲ್ಲಿ ಒಂದು ಶಾಖೆ ಎಂದು ತೋರುತ್ತದೆ. ಹೊಲ ಮಾಡಿ ದನ ಸಾಕುತ್ತಿದ್ದರಾದ ಕಾರಣ, ಅಬ್ರಹಾಮನಿಗೂ ಲೋಟನಿಗೂ ಬಹಳ ಅಡಚಣಿ ಆಯಿತು.

೮. ೯ ವ. ಜಗಳವಿರ ಬಾರದು. ಯಾಕಂದರೆ ನಾವು ಸಹೋದರರು. ದೇಶವೆಲ್ಲಾ ನಿನ್ನ ಮುಂದೆ ಇರುತ್ತದಷ್ಟೆ?—) ಸಮಾಧಾನ ಕೆಡದಂತೆ, ಅಗಲಿ ಹೋಗುವದು ಅವಶ್ಯವಾಯಿತು. ಅಬ್ರಹಾಮನಿಗೆ ಆ ದೇಶ ವಾಗ್ದತ್ತವಾಗಿ ಕೊಟ್ಟಿತ್ತು; ಹಾಗೂ ಅವನು ಕುಟುಂಬದ ಹಿರಿಯನಾಗಿ, ತನ್ನ ಮನಸಿಗೆ ಸರಿ ಕಂಡದ್ದನ್ನು

ಆದು ಕೊಳ್ಳಲಿಕ್ಕೆ ಅಧಿಕಾರಿಯಾಗಿದ್ದನು. ಆದಾಗ್ಯೂ ಸ್ವಾರ್ಥ ನೋಡದೆ, ಲೋಟನಿಗೆ, ನೀನು ನಿನಗೆ ಬೇಕಾದ್ದನ್ನು ಆದುಕೊ, ನೀನು ಬಿಟ್ಟದ್ದನ್ನು ನಾನು ತಕ್ಕೊಳ್ಳುತ್ತೇನೆ ಎಂದು ಹೇಳಿದನು. ಅವನಲ್ಲಿ ಎಂಥಾ ದೊಡ್ಡ ಮನಸ್ಸು ಇತ್ತು!

೧೦—೧೩ ವ. ಲೋಟನು ತನ್ನ ಕಂಣುಗಳನ್ನು ಎತ್ತಿ, ಯೊರ್ದನಿನ ಚಕ್ರವನ್ನೆಲ್ಲಾ, (ಕರ್ತನು ಸೊದೋಮನ್ನ ಗಮೋರನ್ನ ನಾಶ ಮಾಡುವದಕ್ಕಿಂತ ಮುಂಚೆ) ಅದೆಲ್ಲಾ ಚೋವರಿನ ಪರಿಯಂತರ ಜಲಮಯಶೀಮೆಯೆಂದು ಕರ್ತನ ತೋಟದ ಹಾಗೆ ಎಂದು ಮಿಜ್ರದ ಹಾಗೆ ಎಂದು, ನೋಡಿದನು. ಆತನು (ಲೋಟನು) ಯೊರ್ದನಿನ ಚಕ್ರವನ್ನೆಲ್ಲಾ ಆರಿಸಿ ಕೊಂಡನು. ಲೋಟನು ಮೂಡಣಕ್ಕೆ ಹೊರಟನು; ಹೀಗೆ ಅವರು ಒಬ್ಬರನ್ನೊಬ್ಬರು ಅಗಲಿ ಹೋದರು. ಅಬ್ರಾಮನು ಕಾನಾನದಲ್ಲಿ ವಾಸ ಮಾಡಿದನು.— ಲೋಟನು ಸೊದೋಮಿನ ಬಳಿಯು ಗುಡಾರ ಹೊಡೆದು ಚಕ್ರದ ಪಟ್ಟಣಗಳಲ್ಲಿ ವಾಸ ಮಾಡಿದನು. ಆದರೆ ಸೊದೋಮಿನ ಮನುಷ್ಯರು ದುಷ್ಟರೂ, ಕರ್ತನಿಗೆ ವಿರೋಧವಾಗಿ ಬಹು ಪಾಪಿಷ್ಠರೂ ಆಗಿದ್ದರು.

ಯೊರ್ದನ ಹೊಳೆ ಹರಿಯುವ ತಗ್ಗು, ವಿಶೇಷವಾಗಿ ಈಗ ಉಪ್ಪಿನ ಸಮುದ್ರ ಇರುವ ಸ್ಥಳವು, ಯೊರ್ದನಿನ ಚಕ್ರವೆಂದಿನಿಸುತ್ತಿತ್ತು. ಅಬ್ರಹಾಮನಿಗೆ ಇದ್ದಷ್ಟು ವಿಶ್ವಾಸ ಲೋಟನಿಗೆ ಇರಲಿಲ್ಲಾದ ಕಾರಣ ತನ್ನ ಸ್ವಾರ್ಥ ಹುಡುಕುವವನಾಗಿ, ಎಲ್ಲಾದರಲ್ಲಿ ಚಲೋ ಶೀಮೆಯನ್ನು ಆದು ಕೊಳ್ಳುತ್ತಾನೆ. ಹೀಗೆ ಮಾಡಿದಲ್ಲಿ, ತಾನು ವಾಗ್ದತ್ತದ ಸ್ವಾಸ್ಥ್ಯವಾದ ಕಾನಾನಕ್ಕೆ ಬಾಧ್ಯನಲ್ಲವೆಂದು, ಅದನ್ನು ಬಿಟ್ಟು ಬಿಟ್ಟ ಹಾಗಾಯಿತು. ಯಾಕಂದರೆ ತಾನು ಆದು ಕೊಂಡ ಶೀಮೆ ಕಾನಾನದೊಳಗೆ ಅಲ್ಲ. ತನ್ನ ಮತ್ತು ಲೋಕದ ಎಣಿಕೆಯಲ್ಲಿ ಲೋಟನು ಆರಿಸಿ ಕೊಂಡದ್ದು ಉತ್ತಮ; ಆದರೆ ನೆಟ್ಟಗೆ ತೂಕ ಮಾಡಿದರೆ, ಅವನು ಆದು ಕೊಂಡದ್ದು ಕನಿಷ್ಟ; ಯಾಕಂದರೆ ಆ ಶೀಮೆಯ ನಿವಾಸಿಗಳು ದುಷ್ಟರಾಗಿದ್ದರು. — ದುಷ್ಟರ ಸಹವಾಸಕ್ಕಿಂತ ವನವಾಸವೇ ಲೇಸು.

d) ಅಬ್ರಹಾಮನಿಗೆ ಮತ್ತೂ ವಾಗ್ದತ್ತವಾದದ್ದು. ೧೪—೧೮.

೧೫—೧೭ ವ. ಶಾಶ್ವತವಾಗಿ ಕೊಡುವೆನು—ಎದ್ದು ದೇಶದಲ್ಲಿ ಅದರ ಉದ್ದಕ್ಕೂ ಅದರ ಅಗಲಕ್ಕೂ ಸಂಚಾರ ಮಾಡು! ಯಾಕಂದರೆ ನಿನಗೆ ಅದನ್ನ ಕೊಡುವೆನು) ತನ್ನನ್ನು ಅಲ್ಲಗಳೆದು ತನ್ನ ಸ್ವಾರ್ಥ ನೋಡದ ಅಬ್ರಹಾಮನಿಗೆ ದೇವರು ಪ್ರತಿ ಈಡು ಕೊಟ್ಟನು. ಹ್ಯಾಗಂದರೆ ಕಾನಾನ್ ನಿನಗೆ ಶಾಶ್ವತವಾಗಿ ಕೊಡುವೆನೆಂದು ನಿನ್ನ ಬೀಜವನ್ನು ಯಾರೂ ಎಣಿಸಲಾರದ ಭೂಮಿಯ ಧೂಳಿಯ ಹಾಗೆ ಮಾಡುವೆನೆಂದು ಹೇಳಿದಲ್ಲಿ, ಮುಂಚೆ ಕೊಟ್ಟ ವಾಗ್ದತ್ತವನ್ನು ವಿವರಿಸಿದ್ದಾನೆ. ಈ ಮಾತಿನಲ್ಲಿ ಈ ಪೃಥ್ವಿಯಲ್ಲಿಯ ಕಾನಾನವಲ್ಲದೆ, ಪರಲೋಕವೆಂಬ ಕಾನಾನವು ಸುಧಾ ಬಂದದೆ. ಇದು ಶಾಶ್ವತ (ಇಬ್ರಿ. ೧೧, ೧೦. ೧೬. ಮತ್ಥ. ೫, ೫). ಸದ್ವಿಶ್ವಾಸಿಗಳೆಲ್ಲರು ಅವನ ಮಕ್ಕಳು.

೧೮ ವ. ಗುಡಾರ ಕಿತ್ತು ಕೊಂಡು ಮಮ್ರೆ ತೋಪಿನಲ್ಲಿ ಶೇರಿ ವಾಸವಾಗಿದ್ದನು.) ಅಮೋರಿಯರ ಗೋತ್ರದವನಾದ ಮಮ್ರೆ ಎಂಬವನು ಆ ತೋಪು ಹಾಕಿದನು. ಆ ತೋಪು ಹೆಬ್ರೋನಿನ ಹತ್ತರವಿತ್ತು. ಅದರ ಸಲುವಾಗಿ ಹೆಬ್ರೋನು ಮಮ್ರೆಯ ಪಟ್ಟಣವೆಂದು ಎನಿಸಿತು (೨೩, ೧೭. ೧೯). ಕಾಲಾಂತರದಲ್ಲಿ ಅದಕ್ಕೆ ಕಿರಿಯಥ ಅರ್ಬ ಎಂದು ಹೆಸರಾಯಿತು. ಇಂದು ಅದಕ್ಕೆ ಏಲ್ ಖಲಿಲ್ ಎಂದು ಅನ್ನುತ್ತಾರೆ. ಅದು ಯೆರೂಸಲೇಮದ ದಕ್ಷಿಣದಲ್ಲಿ ಅದೆ.

ಬೇಥ್ಲೆಹೇಮಿಗೆ ೫ ಹರುದಾರಿ ದೂರವಾಗೆದೆ.— ಹೋಗುತ್ತಿದ್ದ ಒಂದೊಂದು ಸ್ಥಳದಲ್ಲಿ ಅಬ್ರಹಾಮನು ದೇವಾರಾಧನೆಗೆ ಅನುಕೂಲ ಮಾಡಿದಂತೆ, ನಾವು ಮಾಡತಕ್ಕದ್ದು.

e) ಅಬ್ರಹಾಮನು ಜನಾಂಗಗಳ ನಾಲ್ಕು ಮಂದಿ ಅರಸರನ್ನು ಜಯಿಸಿದ್ದು. ಸಂಧಿ ೧೪.

aa) ಎಲಾಮು ಜನಾಂಗದ (೧೦, ೨೨.) ಮಹಾರಾಜನಾದ ಕೆದೊರ್ಲವೋಮೆರನು ಬೇರೆ ಮೂರು ಮಂದಿ ಅರಸರ ಕೂಡಿ ಕೊಂಡು, ತನಗೆ ಕಪ್ಪ ಕೊಡುತ್ತಿದ್ದ ಕಾನಾನದ ೫ ಮಂದಿ ಅರಸರ ಮೇಲೆ ಯುದ್ಧ ಮಾಡಿದ್ದಕ್ಕೆ ಕಾರಣ. ೧—೪.

೧—೩ ವ. ಕಾನಾನದ ಆ ೫ ಮಂದಿ ಅರಸರು ಈಗ ಉಪ್ಪಿನ ಸಮುದ್ರವಿರುವ ಸಿದ್ದಿಮ್ ತಗ್ಗಿನಲ್ಲಿ ಸಣ್ಣ ಶೀಮೆಗಳನ್ನ (ಕೆಲವು ಊರುಗಳನ್ನ) ಆಳುತ್ತಿದ್ದರು. — ಶಿನೆಯಾರು = ಬಾಬಿಲೋನಿಯವು. ಎಲ್ಲಸಾರು = ಅಸ್ಸೀರಿಯ.

bb) ಆ ನಾಲ್ಕು ಮಂದಿ ಅರಸರು ಮಲತವರನ್ನು ಶಿಕ್ಷಿಸುವ ಮೊದಲು, ಅವರಿಗೆ ನೆರೆ ಹೊರೆಯವರಾಗಿದ್ದವರನ್ನ ಹೊಡೆದು ತಮ್ಮ ಅಧಿಕ ಬಲ ತೋರಿಸುತ್ತಾರೆ. ೫—೭.

೪—೭ ವ. ಈ ಅರಸರು ಉತ್ತರದಿಂದ ಹೊರಟು, ಯೊರ್ದನ ಹೊಳೆಯ ಪೂರ್ವದಲ್ಲಿಯ ದೇಶದೊಳಗೆ ಹಾದು ಬರುವಾಗ್ಯೆ, ಮೊದಲು ಬಾಸಾನ ಶೀಮೆ ಹತ್ತಿತು. ಅದರಲ್ಲಿದ್ದ ರಾಕ್ಷಸರ ಮೇಲೆ ಬಿದ್ದು, ಅವರನ್ನು ಜಯಿಸಿದರು. ಅಷ್ಟರೋತ್ ಕರ್ನಾಯಿಮ್ ಎಂಬದು ಅವರಿಗೆ ಸಂಸ್ಥಾನವಾಗಿತ್ತು. ಅಲ್ಲಿಂದ ಮುಂಚೆ ದಕ್ಷಿಣಕ್ಕೆ ಹೋಗಿ, ಅರ್ನೋನ ಹೊಳೆಯ ತನಕ ವಾಸ ಮಾಡಿದ ಸೂಸಿಯರನ್ನು ಹೊಡೆದರು. ಏಮಿಯರು = ಭಯಂಕರರು. ಅಮ್ಮೋನಿಯರು ಮೋವಾಬಿಯರು ಇದ್ದ ಶೀಮೆಗಳಲ್ಲಿ ಇವರು ವಾಸ ಮಾಡಿದರು. ಹೋರಿಯರು = ಗವಿಗಳಲ್ಲಿರುವವರು ಪ್ರಾಚೀನದಲ್ಲಿ ಸೇಯಿರ ಗುಡ್ಡದಲ್ಲಿದ್ದವರು. ಎದೋಮಿಯರು ಆ ಮೇಲೆ ಅವರನ್ನ ಅಲ್ಲಿಂದ ಓಡಿಸಿದರು (ದ್ವಿತೀ. ೨, ೧೨). ಎಲ್ಪಾರಾನ ಎಂಬದು ಕಾನಾನದ ದಕ್ಷಿಣದಲ್ಲಿ ಅರಾಬಿಯದ ಅರಣ್ಯಕ್ಕೆ ಹತ್ತಿಯದೆ. ಇಷ್ಟು ದೂರ ಹೋದನಂತರ, ದಕ್ಷಿಣದಿಂದ ಉತ್ತರಕ್ಕೆ ತಿರಿಗಿ ಕೊಂಡು, ಎನ್ಮಿಷ್ಪಾತಿಗೆ (= ನ್ಯಾಯದ ಜಲೆ ಅಂಕೆ. ೧೪, ೨೨—೨೪. ೨೦, ೧೨. ೧೩.) ಬಂದರು. ಅದಕ್ಕೆ ಆ ತರುವಾಯ ಕಾದೆಷ ಎಂದು ಹೆಸರಾಯಿತು. ಅಮೆಲೇಕಿಯರ ಬೈಲು = ಹಿಂದುಗಡೆಯಲ್ಲಿ ಅಮೆಲೇಕಿಯರು ವಾಸ ಮಾಡಿದ ಪ್ರಾಂತ್ಯ. ಹಚಚೋನ್ತಾಮರು = ಎನ್ಗೆದ್ದಿ = ಯೂದದ ಅರಣ್ಯದಲ್ಲಿ ಉಪ್ಪಿನ ಸಮುದ್ರದ ದಂಡೆಯ ಹತ್ತರ ಇದ್ದಂಥಾದ್ದು. ಈ ಪ್ರಕಾರ ಆ ನಾಲ್ಕು ಮಂದಿ ಅರಸರು ಜಯಿಸುತ್ತಾ ದಕ್ಷಿಣಕ್ಕೆ ಹೋಗಿ, ದಕ್ಷಿಣ ಪಶ್ಚಿಮದಿಂದ ಬರುತ್ತಾ ಸಿದ್ದಿಮ ತಗ್ಗನ್ನು ವಶ ಮಾಡಿ ಕೊಳ್ಳಲಿಕ್ಕೆ ಸಿದ್ಧರಾದರು.

cc) ಕಾನಾನದ ೫ ಮಂದಿ ಅರಸರನ್ನು ಹೊಡೆದು ಲೋಟನನ್ನು ಶೆರೆ ಪೈಯುತ್ತಾರೆ. ೮—೧೨.

೮. ೯ ವ. ಆಗ ಸೊದೋಮಿನ ಅರಸನೂ, ಗಮೋರದ ಅರಸನೂ, ಅದ್ಮದ ಅರಸನೂ, ಚೆಬೋಯಿಮಿನ ಅರಸನೂ, ಚೋವಾರೆಂಬ ಬೇಲದ ಅರಸನೂ ಹೊರಟು, ಎಲಾಮಿನ ಅರಸನಾದ ಕೆದೊರ್ಲವೋಮೆರನ ಮೇಲೆಯೂ, ಜನಾಂಗಗಳ ಅರಸನಾದ ಥಿದಾಲನ ಮೇಲೆಯೂ, ಶಿನೆಯಾರಿನ ಅರಸನಾದ ಅಮ್ರಾಪೇಲನ ಮೇಲೆಯೂ, ಎ

ಲ್ಲಸಾರಿನ ಅರಸನಾದ ಅರಿಯೋಕನ ಮೇಲೆಯೂ ಶಿದ್ದಿಮ ತಗ್ಗಿನಲ್ಲಿ ಯುದ್ಧಕ್ಕೆ ಸನ್ನದ್ಧರಾಗಿ ನಿಂತರು. ನಾಲ್ಕು ಮಂದಿ ಅರಸರು ಐವರ ಮೇಲೆ. (ಯುದ್ಧಕ್ಕೆ ನಿಂತರು.)

೧೦ ವ. ಅಲ್ಲಿ ಬಿದ್ದರು) ಜೇಡುಮಣ್ಣಿನ (ಭೂಮಿರಾಳ) ಕುಣಿಗಳಲ್ಲಿ. ತಮ್ಮ ವೈರಿಗಳು ಅವುಗಳಲ್ಲಿ ಬಿದ್ದಾರೆಂದು ನೆನಿಸಿ ಭರವಸ ಮಾಡಿ ಕೊಂಡಿದ್ದರು. ಕೆದೊರ್ಲಗೋಮೆರನು ಸೊದೋಮ ಗಮೊರ ಪಟ್ಟಣಗಳನ್ನು ಸುಲಕೊಂಡು, ಜನರನ್ನು ಶೆರೆ ಹಿಡಕೊಂಡು, ಉತ್ತರದ ಕಡೆಗೆ ದಮಸ್ಕದ ಮೇಲೆ ಹಾದು ತನ್ನ ರಾಜ್ಯಕ್ಕೆ ತಿರಿಗಿ ಹೋಗುತ್ತಿದ್ದನು.

೧೨ ವ. ಸೊದೋಮಿನಲ್ಲಿ ವಾಸವಾಗಿದ್ದಂಥ ಅಬ್ರಹಾಮನ ಸಹೋದರನ ಮಗನಾದಂಥ ಲೋಟನನ್ನೂ ಅವನ ಸಂಪತ್ತನ್ನೂ ಸಹ ತೆಗೆದು ಕೊಂಡು ಹೋದರು.

ಲೋಟನು ದುಷ್ಟರು ಇದ್ದ ಶೀಮೆ ಆರಿಸಿ ಕೊಂಡ ತಪ್ಪಿಗೂ ಅವರ ಊರುಗಳಲ್ಲಿ ಮನೆ ಮಾಡಿ ಕೊಂಡ ತಪ್ಪಿಗೂ ಇದು ಒಂದು ಶಿಕ್ಷೆ ಆಯಿತು. ಅವನ ಬುದ್ಧಿ ಬಹಳ ತಪ್ಪಿತು. ಲಾಭವಲ್ಲ ನಷ್ಟವೇ ಬಂತು. ಆಶೆ ನಿರಾಶೆಯಾಯಿತು.

dd) ಅಬ್ರಹಾಮನು ಜಯಶಾಲಿಯಾಗಿದ್ದು ಲೋಟನನ್ನು ಬಿಡಿಸುತ್ತಾನೆ. ೧೩—೧೬.

೧೩ ವ. ತಪ್ಪಿಸಿ ಕೊಂಡವನೊಬ್ಬನು ಬಂದು) ಕನಾನ್ಯರಲ್ಲಿ ಕೆಲವರು ಓಡಿ ಹೋಗಿ ತಪ್ಪಿಸಿ ಕೊಂಡರು. ಇಬ್ರಿಯನಾದ=ಯುಫ್ರಾತ ನದಿಯ ಅಥವಾ ಯೊರ್ದನ ಹೊಳೆಯ ಆಚೆಯಿಂದ ಬಂದವನು.—

೧೪ ವ. ತನ್ನ ತಮ್ಮನು ಶೆರೆಯಾಗಿ ವೈಯಲ್ಪಟ್ಟನೆಂದು ಕೇಳಿ, ಅಬ್ರಹಾಮನು ತನ್ನ ಮನೆಯಲ್ಲಿ ಹುಟ್ಟಿದ ಶಿಕ್ಷಿತರಾದ ಮುನ್ನೂರ ಹದಿನೆಂಟು ಮಂದಿ ಆಳುಗಳನ್ನು ಯುದ್ಧಕ್ಕೆ ಹೊರಡಿಸಿ ಕೊಂಡು, ದಾನಿನ ಪರ್ಯಂತರಕ್ಕೆ ಹಿಂದಟ್ಟಿದನು.

ತನ್ನ ಮನೆಯಲ್ಲಿ ಹುಟ್ಟಿ, ತನ್ನಿಂದ ಬುದ್ಧಿ ಹೇಳಿಸಿ ಕೊಂಡು ಕಲಿತು ಕೊಂಡದರಿಂದ, ಆ ಆಳುಗಳು ಭರವಸದವರು. ಇಲ್ಲಿ ಹೇಳಿರುವ ದಾನು ದಾನಯಾನ ಎಂದು ಎನಿಸುತ್ತಿತ್ತು (೨ ಸಮು. ೨೪, ೬). ಕಾಲಾಂತರದಲ್ಲಿ ದಾನ ಎಂಬ ನಾಮದಿಂದ ಮೆರೆಯುತ್ತಿದ್ದ ಸ್ಥಳ ಬೇರೆ. ಇದು ಸಹ ಕಾನಾನದ ಉತ್ತರ ಭಾಗದಲ್ಲಿ ಇತ್ತು.

೧೫. ೧೬ ವ. ರಾತ್ರಿಯಲ್ಲಿ ಅವನೂ ಅವನ ಆಳುಗಳೂ ತಂಡತಂಡವಾಗಿ ಅವರ ಮೇಲೆ ಕವಿದು, ಅವರನ್ನ ಹೊಡೆದು, ದಮಸ್ಕದ ಎಡಗಡೆಯಲ್ಲಿರುವ ಹೋಬದ ತನಕ ಅವರನ್ನ ಹಿಂದಟ್ಟಿ, ಸಂಪತ್ತನ್ನೆಲ್ಲಾ ಹಿಂದಕ್ಕೆ ತಕ್ಕೊಂಡು ಬಂದನು. ತನ್ನ ತಮ್ಮನಾದ ಲೋಟನನ್ನೂ ಅವನ ಸಂಪತ್ತನ್ನೂ ಸಹ ಮತ್ತು ಹೆಂಗಸರನ್ನೂ ಜನರನ್ನೂ ತಿರಿಗಿ ತಕ್ಕೊಂಡು ಬಂದನು.

ಯುದ್ಧಯುಕ್ತಿ ನಡಿಸಿ, ಅಬ್ರಹಾಮನು ಕೆಲವು ಕಡೆಯಿಂದ ಒಮ್ಮೆಗೆ ಅವರ ಮೇಲೆ ಬಿದ್ದನು. ಹೋಬ ಎಂಬದು ದಮಸ್ಕಕ್ಕೆ ಉತ್ತರದಲ್ಲಿತ್ತು. ಯಾಕಂದರೆ ದಿಕ್ಕು ಹೇಳುವಾಗ, ಆ ದೇಶದವರು ಪೂರ್ವಕ್ಕೆ ಅಭಿಮುಖರಾಗಿ ಗೊತ್ತು ಮಾಡುತ್ತಿದ್ದರು. —ಕಾನಾನದಲ್ಲಿ ಪರದೇಶಿಯಾಗಿದ್ದಂಥವನು ಜಯಶಾಲಿಯಾ

ದವನನ್ನ ದೇಶದ ಹೊರಗೆ ಅಟ್ಟಿ ಬಿಟ್ಟು, ಅವನು ಸುಲಿ ಕೊಂಡದ್ದನ್ನು ಕಸಕೊಳ್ಳುತ್ತಾನೆ. —ನಿರಾಶೆಯಾದ ಅಬ್ರಹಾಮನು ಆಶೆ ಬಡಕನಾದ ಲೋಟನನ್ನೂ ಅವನ ಬಡಕನ್ನೂ, ಜೀವಕ್ಕೆ ಅಂಜದೆ, ಬಿಡಿಸಲಿಕ್ಕೆ ಯುದ್ಧ ಮಾಡುತ್ತಾನೆ. ದೀನತ್ವ ವಿಶ್ವಾಸವುಳ್ಳವನು ಯುದ್ಧದಲ್ಲಿ ಜಯಶಾಲಿಯಾದ ಶೂರನಾಗುತ್ತಾನೆ. ಕರ್ತನ ಬಲ ಬಲಹೀನರಲ್ಲಿ ಪ್ರಬಲವಾಗೆದೆ. ಭಯ ಭಕ್ತಿ ಇಹಕ್ಕೂ ಪರಕ್ಕೂ ಪ್ರಯೋಜನವಾಗೆದೆ.

ee) ಮೆಲ್ಕೀಚೆದೇಕನು ಅಬ್ರಹಾಮನನ್ನು ಆಶೀರ್ವದಿಸುತ್ತಾನೆ. ೧೭—೨೪.

೧೭ ವ. ಅವನು ಕೆದೊರ್ಲವೋಮೆರನನ್ನೂ, ಅವನ ಸಂಗಡ ಇದ್ದ ಅರಸರನ್ನೂ ಹೊಡೆದು ತಿರಿಗಿ ಬಂದ ಮೇಲೆ, ಸೊದೋಮಿನ ಅರಸನು ಅವನನ್ನು ಎದುರುಗೊಳ್ಳಲಿಕ್ಕೆ ರಾಜತಗ್ಗು ಎಂದೆನಿಸುವ ಶಾವೆ ಎಂಬ ತಗ್ಗಿಗೆ ಹೊರಟನು.

ಸೊದೋಮದ ಅರಸನು ಮಿಕ್ಕಾದ ೪ ಮಂದಿ ಕಾನಾನದ ಅರಸರಿಗೆ ಮುಖ್ಯಸ್ಥನಾಗಿದ್ದನು. ತನಗೆ ಸಹಾಯ ಮಾಡಿದ್ದಕ್ಕೆ, ಅವನು ಅಬ್ರಹಾಮನಿಗೆ ವಂದನೆ ಮಾಡ ಬಂದನು. ಶಾವೆ ಎಂಬ ತಗ್ಗು ಯೆರೂಸಲೇಮದ ಸಮೀಪದಲ್ಲಿ ಇತ್ತು (೨ ಸಮು. ೧೮, ೧೮). ಇಲ್ಲಿ ಹೇಳಿದ ಸಂಗತಿಯಿಂದ ಆ ತಗ್ಗಿಗೆ ರಾಜತಗ್ಗು ಎಂಬ ಹೆಸರು ಬಂದಿರ ಬಹುದು. —ಅರಸರೂ ಪರದೇಶಿಯಾದ ಅಬ್ರಹಾಮನಿಗೆ ವಂದನೆ ಮಾಡ ಬೇಕಾಯಿತು. ಅವನು ದೇಶಕ್ಕೆ ಆಶೀರ್ವಾದವಾಗಿದ್ದನಷ್ಟೆ.

೧೯. ೨೦ ವ. ತರುವಾಯ ಅವನು, ಪರಲೋಕಕ್ಕೂ, ಭೂಲೋಕಕ್ಕೂ ಯಜಮಾನನಾಗಿರುವ ಮಹೋನ್ನತನಾದ ದೇವರಿಂದ ಅಬ್ರಹಾಮನು ಆಶೀರ್ವದಿಸಲ್ಪಡುವನಾಗಲೆಂದೂ, ನಿನ್ನ ಕೈಗೆ ನಿನ್ನ ಶತ್ರುಗಳನ್ನ ಒಪ್ಪಿಸಿದ ಮಹೋನ್ನತನಾದ ದೇವರು ಹರಿಸಲ್ಪಡುವನಾಗಲೆಂದೂ ಹೇಳಿ ಅವನನ್ನು ಆಶೀರ್ವದಿಸಿದನು.

ಈ ಮೆಲ್ಕೀಚೆದೇಕನು (=ನೀತಿ ಅರಸನು) ಒಬ್ಬನೇ ನಿಜವಾದ ದೇವರನ್ನ ತಿಳುಕೊಂಡು, ಆರಾಧಿಸುತ್ತಿದ್ದನು. ಈ ಗ್ನಾನ ಅವನಿಗೆ ಎಲ್ಲಿಂದ ಬಂತು, ಅವನು ಯಾವ ವಂಶದವನು ಎಂಬುದು ನಮಗೆ ಏನೂ ಗೊತ್ತಿರುವದಿಲ್ಲ. ಅವನು ನೀತಿ ಸಮಾಧಾನ ಕೊಡುವ ಯೇಸು ಕ್ರಿಸ್ತನಿಗೆ ಮುಂಗುರುತು (ಇಬ್ರಿ. ೭). ದಣಿ ಕೊಂಡು ಹಸಿದ ಅಬ್ರಹಾಮನಿಗೆ ಉಪಚಾರ ಮಾಡಿದನು. ನಾವು ವೈರಿಗಳ ಸಂಗಡ ಹೋರಾಡಿ ದಣಿ ಕೊಂಡು ಬರುವಾಗ, ಕ್ರಿಸ್ತನು ನಮಗೆ ಪರಿಶುದ್ಧ ರಾತ್ರಿಭೋಜನದಲ್ಲಿ ತನ್ನ ಶರೀರ ರಕ್ತಗಳನ್ನು ಭೋಜಿಸ ಕೊಟ್ಟು ಉಪಶಮನ ಮಾಡುತ್ತಾನೆ. ಶಾಲೆಮ (=ಸಮಾಧಾನ) ಎಂಬ ಸ್ಥಳಕ್ಕೆ ಮೊದಲು ಏಬುಸ್ ಎಂದು ಆ ಮೇಲೆ ಯೆರುಸಾಲೆಮ ಎಂದು ಹೆಸರಾಯಿತು. ಮೆಲ್ಕೀಚೆದೇಕನೆಂಬ ಯಾಜಕರಾಜನು ನೀತಿಯಿಂದಲೂ ಶಾಂತಿಯಿಂದಲೂ ಪ್ರಸಿದ್ಧನಾದದರಿಂದ, ಅವನ ಸಂಸ್ಥಾನಕ್ಕೆ ಶಾಲೆಮ ಎಂದು ಹೆಸರು ಇಟ್ಟಿದ್ದಾರಾದೀತು. ಏನೋನ ಎಂಬ ಸ್ಥಳದ ಸಮೀಪದಲ್ಲಿ ಸಹಾ ಶಾಲೆಮ ಎಂಬ ಒಂದು ಊರು ಇತ್ತು. ಆದರೆ ಅದು ಬೇರೆ. ಅಬ್ರಹಾಮನು ದಮಸ್ಕದಿಂದ ಹೆಬ್ರೋನೆಂಬ ತನ್ನ ಊರಿಗೆ ತಿರಿಗಿ ಬರುವ ದಾರಿಯಲ್ಲಿ ಆ ಮೊದಲನೆ ಶಾಲೆಮ ಎಂಬ ಊರು ಮಾತ್ರ ಹತ್ತಿತು.

೨೦ ವ. ತಾನು ತಕ್ಕೊಂಡ ಕೊಳ್ಳೆಯಲ್ಲಿ ತನಗೆ ಸಹಾಯ ಮಾಡಿದ ದೇವರ ಸ್ತೋತ್ರಕ್ಕಾಗಿ (ಇಬ್ರಿ. ೭, ೪.) ಹತ್ತನೆ ಪಾಲನ್ನು ಕೊಟ್ಟಲ್ಲಿ, ಉಳಿದದ್ದು ಶುದ್ಧವಾಯಿತು. ಮೆಲ್ಕೀಚೆದೇಕನು ಕೊಟ್ಟ ಆಶೀರ್ವಾದ

೪೬ ದೇವರು ಅಬ್ರಹಾಮನ ಸಂಗಡ ಒಡಂಬಡಿಕೆ ದೃಢ ಪಡಿಸಿದ್ದು.

ಉತ್ಪತ್ತಿ. ೧೪.

ದಿಂದ ಅಬ್ರಹಾಮನಿಗೆ ದೇವರಿಂದಾದ ಕೃಪಾವಾಗ್ದತ್ತಗಳು ಮತ್ತು ಹೆಚ್ಚು ನಿಶ್ಚಯವಾದವು.

೨೧ ವ. ಜನವನ್ನು) ವೈರಿಗಳ ಕೈಯಿಂದ ಬಿಡಿಸಿಕೊಂಡವರು. ಈ ಅರಸನು ಲೋಕದ ಬದಕನ್ನು ಅಲ್ಲದೆ, ಆಶೀರ್ವಾದ ಕೊಡಲಾರನು.

೨೨. ೨೩ ವ. ಅಬ್ರಹಾಮನು ಸೊದೋಮಿನ ಅರಸನಿಗೆ ಹೇಳಿದ್ದೇನಂದರೆ— ನಿನ್ನದರಲ್ಲೆಲ್ಲ ಎಳೆ ಮೊದಲುಗೊಂಡು ಕೆರದ ಬಾರಿನ ಮಟ್ಟಿಗೂ ನಾನು ಒಂದನ್ನಾದರೂ ತಕ್ಕೊಳ್ಳುವದಿಲ್ಲವೆಂದು ನನ್ನ ಕೈಯನ್ನು ಪರಲೋಕಕ್ಕೂ ಭೂಲೋಕಕ್ಕೂ ಯಜಮಾನನಾಗಿರುವ ಮಹೋನ್ನತ ದೇವರಾಗಿರುವ ಕರ್ತನ ಕಡೆಗೆ ಎತ್ತಿದ್ದೇನೆ. ನಾನು ಅಬ್ರಹಾಮನನ್ನು ಐಶ್ವರ್ಯವಂತನಾಗ ಮಾಡಿದೆನೆಂದು ನೀನು ಹೇಳಬಾರದು.

ಆಣೆ ಮಾಡಿ ಹೇಳುತ್ತಾನೆ. ಕೈ ಎತ್ತುವದು=ಆಣೆ ಇಡುವದು. ಅಬ್ರಹಾಮನು ಕರ್ತನ ಮೇಲೆ ಆಣೆ ಇಡುತ್ತಾನೆ. ತನ್ನ ಬದಕನ್ನು ಬೆಳಿಸಿ ಕೊಳ್ಳಲಿಕ್ಕೆ ಅಲ್ಲ, ಪರಹಿತಾರ್ಥವಾಗಿ ಈ ಕಾರ್ಯ ಮಾಡಿದ್ದನು.

೨೪ ವ. ಆಳುಗಳು ಉಂಡದ್ದೂ, ನನ್ನ ಸಂಗಡ ಹೋಗಿದ್ದ ಮನುಷ್ಯರಾದ ಅನೇರ, ಎಷ್ಕೋಲ, ಮಮ್ರೆಯರ ಪಾಲು ಮಾತ್ರ ಕೊಡ ಬೇಕು. ಇವರು ತಮ್ಮ ಪಾಲು ತಕ್ಕೊಳ್ಳುವರಾಗಲಿ!

f) ದೇವರು ಅಬ್ರಹಾಮನ ಸಂಗಡ ಒಂದು ದರ್ಶನದಲ್ಲಿ ಒಡಂಬಡಿಕೆ ದೃಢ ಪಡಿಸಿದ್ದು. ಸಂಧಿ ೧೫.

aa) ಸಂತಾನದ ದೆಸೆಯಿಂದ ಅಬ್ರಹಾಮನಲ್ಲಿ ಹುಟ್ಟಿದ ಸಂದೇಹವನ್ನು ದೇವರು ತೀರಿಸಿ ಅವನಿಗೆ ಹೊಸತಾಗಿ ಅಭಯ ಕೊಟ್ಟದ್ದು. ೧೫, ೧—೬.

೧ ವ.—ನಾನೇ ನಿನಗೆ ಡಾಲೂ ಸಂಬಳವೂ) ಇಲ್ಲಿ ಹೇಳಿದ್ದೆಲ್ಲಾ ಅಬ್ರಹಾಮನಿಗೆ ಆದ ಒಂದು ದರ್ಶನದಲ್ಲಿ ಆಯಿತು. ಇದು ದೇವರು ತನ್ನನ್ನು ಪ್ರಕಟ ಮಾಡುವದೊಂದು ವಿಧ. ದರ್ಶನಗಳಲ್ಲಿಯೂ ಸ್ವಪ್ನಗಳಲ್ಲಿಯೂ, ಬೇಕಾದ ಹಾಗೆ, ತನ್ನ ಭಕ್ತರಿಗೆ ತನ್ನನ್ನು ಪ್ರಕಟ ಮಾಡುತ್ತಿದ್ದನು. ಇಂಥಾ ಪ್ರಕಟಣೆ ಹೊಂದಿದವರಲ್ಲಿ ದೃಶ್ಯ ಲೋಕ ಗ್ರಹಿಸುವ ಪಂಚೇಂದ್ರಿಯಗಳು ಸ್ತಬ್ಧವಾಗಿದ್ದವು. ದೇವರನ್ನ ಅರಿಯುವ ಅಂತಃಕರಣವಾದ ಆತ್ಮವು ಪರಲೋಕದ ಕಡೆಗೆ ಎಚ್ಚರವಾಗಿತ್ತು.—ವಾಗ್ದತ್ತ ಈಡೇರುವದು ತಡವಾಯಿತು. ತನ್ನನ್ನೂ, ಸುತ್ತಲಿನ ಅನ್ಯ ಜನರನ್ನೂ ನೋಡಲಾಗಿ, ಅದು ಒದಗಿ ಬರುವದು ಅಸದಳವೆಂದು ಕಂಡಿತು. ಆದ ಕಾರಣ ಅಬ್ರಹಾಮನ ಮನಸಿನಲ್ಲಿ ಸಂಶಯ ಭಯ ತಲೆ ದೋರಿದವು. ವಿಶ್ವಾಸ ಹಿಗ್ಗುವದು ತಗ್ಗುವದು. ಸಂಶಯ ಭಯಗಳು ಭಕ್ತರ ಮೇಲೆ ಮುಕ್ಕರಿ ಬರುವ ಸಮಯದಲ್ಲಿ ದೇವರು ಅವರನ್ನು ಒಂಟಿಗರಾಗಿ ಕಾದಾಡ ಬಿಡುವದಿಲ್ಲ; ನಡುವೆ ಬಂದು ಅವರಿಗೆ ಆಶ್ರಯವಾಗುವನು.—ಅಬ್ರಹಾಮನು ದೇವರು ಇಟ್ಟುಕೊಂಡ ಯುದ್ಧಸ್ತನು. ವೈರಿಗಳ ಬಾಣಗಳು ತಾಗದಂತೆ, ಕತ್ತಿಯ ಕಡತ ಹತ್ತದಂತೆ, ಆಶ್ರಯಕ್ಕಾಗಿ ಡಾಲು ಬೇಕಾಗಿತ್ತು. ಕತ್ತಿ ಯಾಕಿಲ್ಲ ಅವನಿಗೆ? ಅವನು ವಿಶೇಷವಾಗಿ ತಾಳಿ ಕೊಂಡು, ಪ್ರೀತಿ ಮಾಡಿ, ಅವರನ್ನ ಗೆದಿಯ ಬೇಕು. ದೇವರ ಪ್ರೀತಿಯೂ, ಐಕ್ಯವೂ, ಅವನಿಗೆ ಬದುಕುವದಕ್ಕೆ ಬೇಕಾಗಿದ್ದ ಸಂಬಳ. ಇದಕ್ಕಿಂತ ದೊಡ್ಡ ಸಂಬಳ ಉಂಟೇ? ಕರ್ತನು ನಮಗಿದ್ದರೆ, ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ನಮಗೆ ಏನೂ ಬೇಕಿಲ್ಲ, ಸಾಕಾಯಿತು.

ಉತ್ಪತ್ತಿ. ೧೫.

೨ ವ. ಅಬ್ರಹಾಮನು—ನನ್ನ ಕರ್ತನಾದ ಯೆಹೋವನೇ ೧), ನನಗೆ ಏನು ಕೊಡುವಿ ೨)? ನಾನು ಮಕ್ಕಳಿಲ್ಲದವನಾಗಿ ಹೋಗುತ್ತೇನಲ್ಲ! ಹಾಗೂ ದಮುಸ್ಕದವನಾದ ಈ ಎಲಿಯೇಜರನು ನನ್ನ ಮನೆಗೆ ಬಾಧ್ಯನಾಗುವನಲ್ಲ! ಅಂದನು.—೩ ವ. ಇದಲ್ಲದೆ ಅಬ್ರಹಾಮನು—ಇಗೋ, ನನ್ನ ಆಳುಮಗನು ನನಗೆ ಬಾಧ್ಯನಾಗುವನು ಅಂದನು ೩).—೪ ವ. ಆಗ ಇಗೋ ಕರ್ತನ ವಾಕ್ಯವು ಅವನಿಗೆ ಉಂಟಾಯಿತು; ಏನಂದರೆ—ಇವನು ನಿನಗೆ ಬಾಧ್ಯನಾಗುವದಿಲ್ಲ; ಆದರೆ ನಿನ್ನ ಹೊಟ್ಟೇಲಿ ಹುಟ್ಟಿದವನೇ ನಿನಗೆ ಬಾಧ್ಯನಾಗುವನು.—೫ ವ. ತರುವಾಯ ಆತನು ಅವನನ್ನು ಹೊರಗೆ ಕರಕೊಂಡು ಬಂದು, ಎಲಾ, ಆಕಾಶದ ಕಡೆಗೆ ದೃಷ್ಟಿಸು! ನಕ್ಷತ್ರಗಳನ್ನು ಎಣಿಸ ಶಕ್ತನಾದಿ ಅಂದರೆ, ಅವನ್ನ ಎಣಿಸು ೪), ಅಂದನು. ಮತ್ತು ಹೀಗೆಯೇ ನಿನ್ನ ಬೀಜವು ಇರುವದೆಂದು ಅವನಿಗೆ ಹೇಳಿದನು ೫).

೧) ಈ ಹೆಸರು ಅಬ್ರಹಾಮನಿಗೆ ಗೊತ್ತಿತ್ತು. ೨) ದೇವರು ಅಭಯ ಕೊಟ್ಟದ್ದನ್ನು (೧) ಮಕ್ಕಳಿಲ್ಲದ ಚಿಂತೆಯಿಂದ ಮರೆತನು. ೩) ಸಂತಾನ ಆರಿ ಹೋಗದೆ, ವಾಗ್ದತ್ತ ಒದಗಿ ಬರ ಬೇಕಾದರೆ, ಈ ನಂಬಿಗೆಯುಳ್ಳ ಸೇವಕನನ್ನು ಸ್ವೀಕಾರ ಮಾಡ ಅವಶ್ಯವಾಯಿತೆಂದು ಅಬ್ರಹಾಮನು ನೆನಿಸಿದನು. ಯಾಕಂದರೆ ತನಗೆ ಮಕ್ಕಳಾಗುವ ಹಾಗೆ, ಕಾಣಲಿಲ್ಲ. ೪) ದೇವರು ತನ್ನ ವಾಕ್ಯ ಈಡೇರಿಸಲಿಕ್ಕೆ ಶಕ್ತನಾಗುತ್ತಾನೇನೋ ಎಂದು ಅನುಮಾನ ಹುಟ್ಟಿದರೆ, ಆತನು ನಿರ್ಮಿಸಿದ ನಕ್ಷತ್ರಮಂಡಲ ನೋಡಿ ದೇವರ ಅನಂತ ಬಲ ನೆನಪಿಗೆ ತರ ಬೇಕು.

೬ ವ. ನೋಡದೆ ನಂಬಿದನು. ಅದಕ್ಕೆ ಅವನು ದೇವರ ವಾಕ್ಯಕ್ಕೆ ಸರಿಯಾಗುವದು ಇನ್ನು ಬಹಳ ದೂರವಿದ್ದಾಗ್ಯೂ, ಬೇರೆ ಬೇರೆ ಅವಗುಣಗಳು, ಅಂದರೆ, ಅಲ್ಪವಿಶ್ವಾಸ ಮುಂತಾದವು ಇನ್ನು ಇದ್ದರೂ, ಅವನು ನೀತಿವಂತನು, ಅಂದರೆ, ತನ್ನ ಪರಿಶುದ್ಧ ಚಿತ್ತಕ್ಕೆ ಸರಿಯಾದವನು ಎಂದು ದೇವರು ನಿರ್ಣಯಿಸಿದನು. ವಿಶ್ವಾಸವೇ ನೀತಿ ಬೆಳೆಯುವ ಮೂಲ (ರೋಮ. ೪, ೪). ವಿಶ್ವಾಸ ಅಂದರೆ ಊರಿ ಕೊಳ್ಳುವದು, ಘಟ್ಟಿಯಾಗಿ ಹಿಡುಕೊಳ್ಳುವದು.

bb) ದೇವರು ಅಬ್ರಹಾಮನ ಸಂಗಡ ಒಡಂಬಡಿಕೆಯನ್ನು ಬಲಿಯಿಂದ ದೃಢ ಪಡಿಸಿದ್ದು. ೭—೨೧.

೭ ವ. ಮತ್ತು ಈ ದೇಶವನ್ನು ನಿನಗೆ ಸ್ವಾಧೀನವಾಗಿ ಕೊಡುವದಕ್ಕೆ ಕಸ್ದೀಯರ ಊರಿನಿಂದ ನಿನ್ನನ್ನು ಹೊರಗೆ ತಂದ ಕರ್ತನು ನಾನೇ ಎಂದು ಅವನಿಗೆ ಹೇಳಿದನು. ೯ ವ. ಮೂರು ವರ್ಷದ ಮಣಕವನ್ನೂ, ಮೂರು ವರ್ಷದ ಆಡನ್ನೂ, ಮೂರು ವರ್ಷದ ಟಗರನ್ನೂ, ಬೆಳವವನ್ನೂ, ಪಾರಿವಾಳದ ಮರಿಯನ್ನೂ ನನಗೆ ತಕ್ಕೊಂಡು ಬಾ! ಅಂದನು. ಹಾಗೆಯೇ ಅವನು ಇವನ್ನೆಲ್ಲ ತೆಗದುಕೊಂಡು ಬಂದು, ಅವನ್ನ ನಡುವಿಗೆ ಹೋಳು ಮಾಡಿ, ಆ ಹೋಳುಗಳನ್ನ ಬಂದಕ್ಕೊಂದು ಇದುರಾಗಿಟ್ಟನು. ಆದರೆ ಪಕ್ಷಿಗಳನ್ನ ಹೋಳು ಮಾಡಲಿಲ್ಲ.—೧೧ ವ. ಪಕ್ಷಿಗಳು ಆ ಶವಗಳ ಮೇಲೆ ಎರಗಿದಾಗ, ಅಬ್ರಹಾಮನು ಅವನ್ನ ಹಾರಿಸಿದನು. ೧೩ ವ. ನಿನ್ನ ಸಂತತಿಯವರು ತಮ್ಮದಲ್ಲದ ದೇಶದಲ್ಲಿ ಪರದೇಶಿಗಳಾಗಿ ಅವರನ್ನ ಸೇ

ವಿಸುವರು; ಅವರು ಇವರನ್ನ ನಾನೂರು ವರುಷಗಳು ದಣಿಸುವರು ಎಂದು ನೀನು ತಿಳಿಯಲೇ ಬೇಕು.

೧೧ ವ. ಶವಗಳ ಮೇಲೆ ಎರಗಿದ ಪಕ್ಷಿಗಳು ಅಬ್ರಹಾಮನ ಸಂತತಿಯ ವೈರಿಗಳನ್ನ ಸೂಚಿಸುತ್ತವೆ. ಅವರು ದೇವರ ಒಡಂಬಡಿಕೆಯವರನ್ನ ಕೆಡಿಸ ಬರುವರು. ಆದರೆ ಅಬ್ರಹಾಮನಂತೆ ವಿಶ್ವಾಸವುಳ್ಳವರು ಅವರನ್ನ ಜೈಸುವರು.—೧೨ ವ. ತನ್ನ ಸಂತಾನಕ್ಕೆ ಬಹಳ ಕಷ್ಟವಾದೀತು ಎಂಬ ಹಾಗೆ, ಅವನಲ್ಲಿ ಭಾವನೆ ಆದ್ದರಿಂದ, ಭಯದ ಕತ್ತಲು ಅವನ ಮೇಲೆ ಕವಿದು ಬಂತು. ಗಾಢನಿದೆಯಲ್ಲಿ (ಯೋಗನಿದ್ರೆ) ಬಿದ್ದು, ದೃಶ್ಯಲೋಕಕ್ಕೆ ಸತ್ತವನಂತೆ ಆಗಿ, ಅದೃಶ್ಯವಾದ ಪರಲೋಕದ ಕಡಿಗೆ ಎಚ್ಚರವಾಗಿ, ದೇವರ ಪ್ರಕಟನೆಯನ್ನ ಹೊಂದಲಿಕ್ಕೆ ಸಿದ್ಧನಾದನು. ೧೩ ವ. ಕಾನಾನದಲ್ಲಿಯೂ ಮಿಜ್ರದಲ್ಲಿಯೂ ಅಬ್ರಹಾಮನ ವಂಶದವರು ಪರದೇಶಿಗಳಾಗಿದ್ದರು. ಅಬ್ರಹಾಮನು ಮೇಸೊಪೊತಾಮಿಯದಿಂದ ಹೊರಟಂದಿನಿಂದ ಇಸ್ರಾಯೇಲನವರು ಮಿಜ್ರವನ್ನು ಬಿಟ್ಟು ಹೋದಂದಿನ ವರೆಗೆ (ಗಲ. ೩, ೧೭.) ೪೩೦ ವರುಷಗಳು ಗತಿಸಿ ಹೋದವು. ಇಸಾಕನು ಹುಟ್ಟಿದ ದಿನದಿಂದ ಹಿಡಿದು ಇಸ್ರಾಯೇಲನವರು ಮಿಜ್ರದಿಂದ ಹೊರಟ ದಿನದ ವರೆಗೆ ೪೦೫ ವರುಷಗಳು ಆಗಿ ಹೋದವು. ಈ ಕಡೇ ಲೆಖ್ಖ ಹಿಡಿಯ ಬೇಕು. ಯಾಕಂದರೆ ಅಬ್ರಹಾಮನ ಸಂತಾನದ ವಿಷಯವಾಗಿ ಇಲ್ಲಿ ಮಾತು ಉಂಟು.

೧೪ ವ. ಹೊರ. ೭—೧೨. ನೋಡು. ಈ ಮಾತು ಒದಗಿ ಬಂದದ್ದು ಅಲ್ಲಿ ವಿವರವಾಗಿ ಹೇಳಿ ಅದೆ.

೧೫ ವ. ಪಿತೃಗಳ ಬಳಿಗೆ ಶೇರುವಿ; ಒಳ್ಳೆ ವೃದ್ಧಾಪ್ಯದಲ್ಲಿ—) ಅಬ್ರಹಾಮನು ಹುಗಿಸಿ ಕೊಂಡ ಸ್ಥಳ ಬೇರೆ, ಅವನ ಹಿರಿಯರು ಹುಗಿಸಿ ಕೊಂಡ ಸ್ಥಳಗಳು ಬೇರೆ. ಅವರು ಅದೇ ಸಮಾಧಿಗಳಲ್ಲಿ ಅಲ್ಲ, ಪರಲೋಕದಲ್ಲಿ ಕೂಡಿದವರಾದರು.

೧೬ ವ.— ತಿರುಗಿ ಇಲ್ಲಿ ಬರುವರು.) ಒಂದು ತಲೆಗೆ ೧೦೦ ವರುಷ ಎಣಿಸ ಬೇಕು.— ಪೂರ್ತಿಯಾಗಲಿಲ್ಲ) ಅಮೋರ್ಯರ ಎಂಬ ಪದದಲ್ಲಿ ಕನಾನ್ಯರ ಎಲ್ಲಾ ಜನಾಂಗಗಳು ಬಂದವೆ. ಇವರು ಮಹಾ ದುಷ್ಟರು ಆಗಿದ್ದರು. ಆದರೆ ದೇವರು ನೀತಿಯುಳ್ಳಾತನು. ಅದರ ದೆಸೆಯಿಂದ ಮಾನಸಾಂತರ ಪಡಲಿಕ್ಕೆ ತಕ್ಕಷ್ಟು ಅನುವು ಸಮಯ ಅವರಿಗೆ ಇರುವ ಹಾಗೆ, ಆತನು ಅವರನ್ನು ಇನ್ನು ಹಲವು ಕಾಲ ಸೈರಿಸಿ ಕೊಂಡು ಹೋದನು. ಕಡೆಗೆ ಯಾತರಿಂದಾದರೂ ಬುದ್ಧಿ ಬಾರದ ಹಾಗೆ, ಕಂಡ ಬಳಿಕ, ದುಷ್ಟತನದ ಅಳತೆ ತುಂಬಿತು. ಅವರನ್ನ ನಿರ್ಮೂಲ ಮಾಡುವ ಸಮಯ ಬಂತು. ಅವರ ದೇಶವನ್ನ ಅಬ್ರಹಾಮನವರಿಗೆ ಕೊಡಲಾಯಿತು.

೧೭ ವ. ಎರೆ. ೩೪, ೧೮—೧೯. ದ್ವಿತಿ. ೨೯, ೧೨.) ಒಡಂಬಡಿಕೆಯ ಬಲಿ ಅರ್ಪಿಸುವ ಇದೇ ಆಚರಣೆ ನಡಿಸುತ್ತಿದ್ದರು. ಬಲಿಯ ಹೋಳುಗಳ ನಡುವಿನಲ್ಲಿ ಹಾದು ಹೋಗಿ, ತಾವು ವಚನ ಮೀರಿದ ಪಕ್ಷದಲ್ಲಿ, ಈ ಹೋಳುಗಳಂತೆ ತಮ್ಮನ್ನ ಹೋಳು ಮಾಡ ಬೇಕೆಂದು ದೇವರಿಗೆ ಅರಿಕೆ ಮಾಡಿದರು.— ಬಲೆಯೂ ಆ ತುಂಡುಗಳ ನಡುವೆ ಹಾದು ಹೋಗುವ ಉರಿಯೂ.) ಬಲಿಯು ದೇವರಿಗೆ ಅಂಗೀಕೃತವಾದ ಗುರುತು. ಈ ರೀತಿಯಾಗಿ ಕರ್ತನು ಅಬ್ರಹಾಮನೊಡನೆ ಆ ದಿವಸದಲ್ಲಿ ಒಡಂಬಡಿಕೆ ಮಾಡಿದನು.

೧೮—೨೧ ವ. ಇಲ್ಲಿ ಒಡಂಬಡಿಕೆಯ ದೇಶವನ್ನು ಅದರ ನಿವಾಸಿಗಳನ್ನು ಇನ್ನೊಂದು ಸರ್ತಿ ವಿವರಿಸುತ್ತಾನೆ. ಅದರ ಮೇರೆಗಳನ್ನು ಒಟ್ಟಿಗೆ ಹೇಳುತ್ತಾನೆ. ಫ್ರಾತ ನದಿಗೂ ನೀಲ ನದಿಗೂ ಮಧ್ಯದಲ್ಲಿಯ ಫಲಭರಿತವಾದ ಶೀಮೆ ಕಾನಾನವೇ.

ಇ) ಸಾರಳೂ ಹಾಗರಳೂ. ಸಂಧಿ ೧೬.

೧ ವ. ಹೀಗಿರಲಾಗಿ ಸಾರೈ ಅಬ್ರಹಾಮನಿಗೆ, ಇಗೋ, ಹೆರದ ಹಾಗೆ, ಕರ್ತನು ನನ್ನ ಗರ್ಭ ಮುಚ್ಚಿದ್ದಾನೆ. ದಯ ಮಾಡಿ ನನ್ನ ಸೇವಕಳ ಬಳಿಗೆ ಹೋಗು. ಬಂ

ಉತ್ಪತ್ತಿ. ೧೬.

ದು ವೇಳೆ ಅವಳ ಮೂಲವಾಗಿ ನಾನು ಹೆಚ್ಚೇನು, ಅಂದಳು. ಅಬ್ರಹಾಮನು ಸಾರೈಯ ಮಾತಿಗೆ ಕಿವಿ ಕೊಟ್ಟನು.

ಸಾರಳಲ್ಲಿ ಮೊದಲು ವಿಶ್ವಾಸಗುಂದಿ, ಮಕ್ಕಳ ವಿಷಯ ನಿರಾಶೆ ಆಗಿತ್ತು. ಆದ ಕಾರಣ ತನ್ನ ಗಂಡನಿಗೆ ಈ ಲೌಕಿಕ ಉಪಾಯ ಹೇಳಿ ಕೊಟ್ಟಳು. ಅವನಲ್ಲಿ ವಿಶ್ವಾಸ ಕಡಿಮೆ ಆದ್ದರಿಂದ, ಆಕೆಯ ಮಾತಿಗೆ ಸಮ್ಮತಿ ಪಟ್ಟನು. ಇದನ್ನು ಮಾಂಸಭೋಗಕ್ಕಾಗಿ ಮಾಡಲಿಲ್ಲ. ಹ್ಯಾಗೆ ಮಾಡಲಿ ಅಂತ ಅವರ ಮನಸು ಹೊಯಿದಾಡುತ್ತಿತ್ತು. ಆಗ ಒಬ್ಬನನ್ನು ಸ್ವೀಕಾರ ಮಾಡಿ, ಮಗನನ್ನು ಪಡಕೊಳ್ಳ ಬೇಕೆಂದು ನೆನಸಿದರು. ಈಗ ಉಪಪತ್ನಿಯನ್ನ ಮಾಡಿ ಕೊಂಡು ಆಕೆಯಿಂದ ಮಗನನ್ನ ಪಡಕೊಳ್ಳ ಬೇಕೆಂದು ಹಂಚಿಗೆ ಮಾಡಿದರು. ಆದರೆ ಅವಿಶ್ವಾಸದಿಂದ ಮಾಡಿದಂಥಾದು ಪಾಪ. ಉಪಪತ್ನಿ ಮಾಡಿ ಕೊಳ್ಳುವದು ದೇವರ ನೇಮಕಕ್ಕೆ (೨, ೨೧. ಮುಂ.) ವಿರುದ್ಧ. ಲೌಕಿಕ ಉಪಾಯ ಹಂಚಿಗೆಗಳಿಂದ ದೇವರ ಕಾರ್ಯ ಸಾಗಿಸಲಾದೀತೇ? ಮೆಲ್ಲಗೆ ತನ್ನ ಸ್ವಭಾವಕ್ಕೆ ಅನುಸಾರವಾಗಿ ಬೆಳೆಯುತ್ತಿರುವ ಅಗೆಯನ್ನ ಹುಡುಗರು, ಅದು ಬೇಗ ಬೆಳೆಯಲಿ ಅಂತ, ಮೇಲಕ್ಕೆ ಜಗ್ಗಿದ ವಿಚಾರ ಇದು.

೪—೬ ವ. ಆಕೆಯ ದೃಷ್ಟಿಯಲ್ಲಿ ಆಕೆಯ ಯಜಮಾನಿ ಉದಾಸೀನವಾದಳು. ಬಸುರಾದೆನೆಂದು ನೋಡುತ್ತಾಳೆ; ನಾನು— ನಿನಗೆ ಸರಿ ಕಂಡದ್ದನ್ನು ಆಕೆಗೆ ಮಾಡು.—) ಉಪಪತ್ನಿ ಮಾಡಿ ಕೊಂಡದ್ದಕ್ಕೆ ಮನೆಯಲ್ಲಿ ಜಗಳ ಕಲಾಪ ಹುಟ್ಟಿದವು. ನಾನು ಆಕೆಯಿಂದ ಪಡುವ ಅನ್ಯಾಯ ನಿನ್ನ ಮೇಲೆ ಬರಲೆಂದು ಸಾರಳು ಶಿಟ್ಟಿನಿಂದ ತನ್ನ ಗಂಡನ ಮೇಲೆ ತಪ್ಪು ಹೊರಿಸುತ್ತಾಳೆ. ಅಬ್ರಹಾಮನು ಮುಯ್ಯಿಗೆ ಮುಯ್ಯಿ ಕೊಡದೆ, ಕಾಮಾಂಧಕಾರದಿಂದ ಕುರುಡನಾಗದೆ, ನಿಧಾನದಿಂದ ಸಮವಾಗಿ ನಿರ್ಣಯ ಮಾಡುತ್ತಾನೆ.—ತಗ್ಗಿಸಿ ಕೊಳ್ಳುವದು ಸೊಕ್ಕಿನ ಮನುಷ್ಯರಿಗೆ ಬಹಳ ಕಠಿಣ. ಹಾಗರಳು ಶಟಕೊಂಡು ಓಡಿ ಹೋಗುತ್ತಾಳೆ.—ಕರ್ತನ ವಾಕ್ಯವೇ ರಾಜಮಾರ್ಗ, ಮನುಷ್ಯರು ಮಾಡುವ ಹಂಚಿಗೆಗಳೇ ಕಾಲುದಾರಿ. ರಾಜಮಾರ್ಗದಲ್ಲಿ ನಡೆಯುವದು ಸುತ್ತ ಎಂದು ಕಷ್ಟವೆಂದು ತವರು ತಗ್ಗು ಗಿಡಗಂಟಿ ಇರುವ ಕಾಲದಾರಿ ಹಿಡಕೊಂಡು ಹೋದರೆ ಸಮೀಪವೋ? ಕಷ್ಟ ಬಾರದೋ?

೭—೧೬ ವ. ಕರ್ತನ ದೂತನು ಓಡಿ ಹೋದಾಕೆಯನ್ನ ತಿರಿಗಿ ಮನೆಗೆ ಕಳುಹಿಸಿ ಆದ ಬೆಡಸು ತಿರಿಗಿ ನೆಟ್ಟಗೆ ಮಾಡುತ್ತಾನೆ.— ಗರ್ಭವತಿಯಾದಾಕೆಯನ್ನ ಹೀಗೆ ಅಡಿವಿಗೆ ಅಟ್ಟಿಸಿ ಬಿಡ ಬೇಕೆ? ಎಂಬಂತೆ ಅಬ್ರಹಾಮನನ್ನ ಹಳೆಯಲಿಕ್ಕೆ ಬಹಳ ಆಸ್ಪದವಾಗುತ್ತಿತ್ತು. ಅವನ ಮನೆ ಒಡೆದ ಹಾಗಾಗುತ್ತಿತ್ತು. ಲೋಕದಲ್ಲಿ ನೀತಿಯ ಪ್ರಸಂಗಿಯಾಗಿ ನಿಲ್ಲ ಬೇಕಾದರೆ, ಇಂಥಾ ಕುಂದು ಹತ್ತ ಬಾರದು. ಅಬ್ರಹಾಮನೇ ಅಂದಿನ ಪೂರ್ತಿಗೆ ಲೋಕಕ್ಕೆ ಸೂರ್ಯ. ಅದು ಬಲುಗತ್ತಲೆಗೆ ಮುಂಗಾಣದಿರಲಾಗಿ, ಬೆಳಗು ಮಾಡುವವರಾರು? ಅವನೇ ಆಗಿನ ಕಾಲಕ್ಕೆ ಕಷ್ಟ ಎಂಬ ಘರ್ಮೋತ್ತರ ಇಳಿಸುವ ಘಾಳಿ. ಅದು ಕೆಕೆಯಿಂದ ಬಳಲಿ ಬೆವತರೆ, ಬೀಸುವರಾರು?—ಹೀಗಿರಲಿಕ್ಕಾಗಿ ಈ ದೊಡ್ಡ ಕಾರ್ಯಕ್ಕೆ ಅಡ್ಡಿ ಆಗದೆ, ಅದು ಸಿದ್ಧಿಗೆ ಹೋಗುವ ಹಾಗೆ, ಕರ್ತನ ದೂತನು ಅಡ್ಡ ಬರ ಬೇಕಾಯಿತು. ಕರ್ತನ ದೂತನು ದೇವದೂತರಲ್ಲಿ ಒಬ್ಬನಲ್ಲ, ಯೆಹೋವನೇ, ಆತನಿಗೆ ಸಮವಾದಾತನೇ (೧೩). (೩೧, ೧೧. ಹೊರ. ೩, ೨.) ಸ್ವಭಾವದಲ್ಲಿ ಕರ್ತನಿಗೂ ಕರ್ತನ ದೂತನಿಗೂ ಹೆಚ್ಚು ಕಡಿಮೆ ಇಲ್ಲಿ. ಆದರೂ ಇವರಿಬ್ಬರು ಒಂದೇ ಎಂಬಂತಲ್ಲ (ಹೊರ. ೨೩, ೨೦. ಯೆಹೋಶು. ೫, ೧೩—೧೫. ಯೆಶ. ೬೩, ೯). ಕರ್ತನ ದೂತನು ಬೇರೆ, ಕರ್ತನು ಬೇರೆ. ಈ ಮೇರೆಗೆ ಸ್ವಭಾವದಲ್ಲಿ ಏಕವಾಗಿದ್ದಾಗ್ಯೂ, ಅವರು ಬೇರೆ ಬೇರೆ ಇರುವದು ಹ್ಯಾಗೆ? ಆತನು ಅನಾದಿಯಿಂದಿದ್ದ ಒಡಂಬಡಿಕೆಯ ದೂತನು; ಎಲ್ಲಾ ದೂತರಿಗಿಂತ ಅತ್ಯಧಿಕನಾದಂಥಾ, ಅವರಿಗೆ ಅಧಿಪನಾದಂಥಾ (ಯೋಹ. ೧, ೧ ಮುಂ.) ನಿತ್ಯವಾಕ್ಯವಾದಂಥಾ, ಅದೃಶ್ಯವಾದ ದೇವರನ್ನ ಪ್ರಕಟ ಮಾಡುವಂಥಾ, ಸಾಕ್ಷಾತ್ದೇವರು. ಆತನು ಕಾಲ ಬಂದಾಗ, ಮಾಂಸವಾದನು.

ಆತನು ನರಮನುಷ್ಯರಲ್ಲಿ ಪಾಪ ಪುಣ್ಯವನ್ನ ಅರಿಯುವಂಥಾ, ಒಳ್ಳೇವೊ ಕೆಟ್ಟವೊ ಕ್ರಿಯೆಗಳ ಕುರಿತು ನಿರ್ಣಯಿಸುವಂಥಾ, ಸಾಕ್ಷಿ ಸ್ವರೂಪವಾಗಿ, ಉಳಿದ ಸೃಷ್ಟಿಗಳಲ್ಲಿ ಚೈತನ್ಯ ಬಲ ಚಮತ್ಕೃತಿ ಸ್ವರೂಪವಾಗಿ ತೋರುತ್ತಾನೆ. ಆತನೇ ಕರ್ಮಸಾಕ್ಷಿ. ಸೃಷ್ಟಿಗಳೇ ಮಣಿಗಳು; ಲೋಕವೇ ಹಾರ; ಅವು ಒಂದೊಂದು ಸ್ಥಳದಲ್ಲಿರುವ ಹಾಗೆ, ಪೋಣಿಸಿರುವ ಸೂತ್ರವೇ. ವಾಕ್ಯ ಎಂಬಾತ, ಅದೃಶ್ಯ ದೇವರು, ಸೂತ್ರಧಾರಿ. ಆದರೆ ಆ ಸೂತ್ರ ತಾನೆ, ತನ್ನದೇ. ದೇವರೇ ಆಲೋಚಿಸುವಂಥಾ ಅಗೋಚರವಾದ ಮನಸು, ಕರ್ತನ ದೂತನೇ ಅದನ್ನ ತಿಳಿಸುವಂಥಾ ಗೋಚರವಾದ ವಾಕ್ಯ, ಸೃಷ್ಟಿಗಳಲ್ಲಿ ಸಾಕ್ಷಾತ್ಕಾರವಾದಾತ. ಯೇಸು ಕ್ರಿಸ್ತನೆ ದೇವರ ಕಡೆಗೆ ವೈಯ್ಯುವ ಮಾರ್ಗವು (ಸೂತ್ರವು). ಷೂರು = ಮಿಜ್ರದಲ್ಲಿಯ ಪೆಲೂಸಿಯ ಎಂಬ ಸ್ಥಳ. ಕಾನಾನಕ್ಕೂ ಮಿಜ್ರಕ್ಕೂ ನಡುವಣ ಜೋಫರ್ ಎಂಬ ಅರಣ್ಯದಲ್ಲಿ ಹಾದು, ಹಾಗರಳು ತನ್ನ ಜನ್ಮದೇಶವಾದ ಮಿಜ್ರಕ್ಕೆ ಹೋಗಬೇಕೆಂದಿದ್ದಳು.

೯ ವ. ಯಜಮಾನಿಯ ಬಳಿಗೆ ತಿರಿಗಿ ಹೋಗು!) ಓಡಿ ಹೋದದ್ದು ಒಂದು ತಪ್ಪು. ಸೇವಕರು ತಮ್ಮ ಯಜಮಾನರಿಗೆ ಒಳಗಾಗಿರುವದು ದೇವರ ನೇಮಕ. ಈ ನೇಮಕ ಮೊದಲು ಕೈಕೊಳ್ಳ ಬೇಕು. ಅದಾಯಿತಂದರೆ, ದೇವರು ತನ್ನ ಕೃಪೆ ತೋರಿಸಲಾಗುವದು. ೧೦ ವ. ಹೆಚ್ಚಿಸೇ ಹೆಚ್ಚಿಸುವೆನು) ಅಬ್ರಹಾಮನ ನಿಮಿತ್ತ ಹಾಗರಳಿಗೆ ಆದ ಈ ವಾಗ್ದತ್ತ ಈಡೇರಿತು. ಹ್ಯಾಗಂದರೆ ಇಷ್ಮಯೇಲನ (ದೇವರು ಕೇಳುತ್ತಾನೆ ಎಂಬವನ) ವಂಶಜರಾದ ಅರಬಿಯರ ವಂಶಬಳ್ಳಿ ನಾಲ್ಕು ದಿಕ್ಕಿಗೆ ಹಬ್ಬಿತು. ಅಫ್ರಿಕ ಖಂಡದಲ್ಲಿಯೂ ಆಸಿಯ ಖಂಡದಲ್ಲಿಯೂ ಬೇರೆ ಬೇರೆ ದೇಶಗಳನ್ನ ತಮಗೆ ವಶ ಮಾಡಿ ಕೊಂಡಿದ್ದಾರೆ; ಅಥವಾ ತುಂಬಿದ್ದಾರೆ. ಈ ದೇಶವೂ ಹಲವು ಕಾಲ ಅವರ ಆಧೀನವಾಗಿತ್ತು. ಇಂದೂ ಅವರ ಸಂತತಿಯವರು ಹಿಂದುಸ್ಥಾನದಲ್ಲಿ ಒಟ್ಟಿಗೆ ಎಂಟನೆ ಪಾಲು ಆಗಿದ್ದಾರು. ಇಷ್ಮಯೇಲನು ಮುಸಲ ಮತಸ್ಥಾಪಕನಾದ ಮುಹಮ್ಮದನಿಗೆ ಪೂರ್ವಜನು. ಇಷ್ಮಯೇಲನಲ್ಲಿ ಹ್ಯಾಗೋ, ಹಾಗೆ ಈ ಮತದಲ್ಲಿ ಸತ್ಯ ಮಿಥ್ಯ ಬೆರಿಕೆಯಾಗಿವೆ.— ೧೨ ವ. ಕಾಡಗತ್ತೆಯಂಥಾ ಮನುಷ್ಯನಾಗಿರುವನು) (ಯೋಬ. ೩೯, ೮—೧೧.) ಕಾಡ ಮನುಷ್ಯನಾಗಿ, ಯಾರಿಗೂ ಒಳಗಾಗದೆ, ತಿರುಗುವನು. ಅವನ ವಂಶಜರೆಲ್ಲರು, ವಿಶೇಷವಾಗಿ ಬೇದುವೀನರು ಹಾಗೆ ತಿರುಗುತ್ತಾರೆ.— ತಮ್ಮ ಮನಸಿಗೆ ಬಂದಷ್ಟು ದೇಶಗಳನ್ನ ತಕ್ಕೊಳ್ಳುವ ಅಧಿಕಾರ ದೇವರು ತಮಗೆ ಕೊಟ್ಟಿದ್ದಾನೆಂದು ದೇವರ ವಾಕ್ಯದ ಈ ಸ್ಥಳ ಆಧಾರ ಮಾಡಿಕೊಂಡು ಅರಬಿಯರು ಹೇಳುತ್ತಾರೆ. ಎದುರಿನಲ್ಲಿ) ಇಸ್ರಾಯೇಲನವರೂ, ಮಿದಿಯಾನರೂ, ಎದೋಮಿಯರೂ, ಮೋವಬಿಯರೂ, ಅಮ್ಮೋನಿಯರೂ, ಇವರೆಲ್ಲರು ಅವನ ಸಹೋದರರು. ಇವರ ಮೇಲೆ ಯುದ್ಧ ಮಾಡಲಿಕ್ಕೂ, ಹಾವಳಿ ಎಬ್ಬಿಸಲಿಕ್ಕೂ, ಬರುವರು. ೧೩ ವ. ಯೆಹೋವನಿಗೆ ನೀನು ದರ್ಶನದ ದೇವರು ಎಂದು ಕರೆದಳು.) ನೀನು ನನ್ನಂಥಾ ಬಡವಿಯ ಮೇಲೆ ಕಣ್ಣು ತೆರೆಯುವಾತ. ನನ್ನನ್ನು ನೋಡಿ ಪರಾಮ್ಮರಿಸುವಾತನನ್ನು ನಾನು ಕಂಡದ್ದುಂಟೆ? ಎಂದು ದೇವರು ತನಗೆ ಅಡವಿಯಲ್ಲಿ ಸಹಾಯ ಮಾಡಿದ್ದಕ್ಕೆ, ಆಶ್ಚರ್ಯ ಸಂತೋಷ ಪಟ್ಟು, ಹೀಗೆ ಹೇಳುತ್ತಾಳೆ. ೧೪ ವ. ನೆನಪಿಗಾಗಿ ಆ ಭಾವಿಗೆ ಬೆಯೆರ್ ಲಹೈರೊಯಿ = ಜೀವವುಳ್ಳ ದರ್ಶನದ ಭಾವಿ ಎಂದು ಕರೆದಳು. ನಾನು ಇಲ್ಲಿ ಕರ್ತನನ್ನ ಕಂಡು ಬದುಕಿ ಕೊಂಡೆ.

h) ಪರಿಚ್ಛೇದನೆ. ಸಂಧಿ ೧೭.

aa) ದೇವರು ಒಡಂಬಡಿಕೆ ಮಾಡಿದ್ದು. ೧—೮.

೧ ವ. ಇಷ್ಮಯೇಲನು ಜನಿಸಿದನಂತರ, ಅಬ್ರಹಾಮನು ಇನ್ನು ೧೩ ವರುಷ, ಒಟ್ಟಿಗೆ ೨೪ ವರುಷ ಕಾದುಕೊಂಡ ಬಳಿಕ, ದೇವರು ಅವನಿಗೆ (೧೨, ೨—೩.) ಕೊಟ್ಟ ವಾಗ್ದತ್ತ ಒದಗಿ ಬರಲಿಕ್ಕೆ ಆರಂಭವಾಯಿತು. ಈ ಪರಿ ಬಹಳ ತಡವಾದಾಗ್ಯೂ, ದೇವರ ವಾಕ್ಯ ಘಟ್ಟಿಯಾಗಿ ಹಿಡಕೊಂಡನು. ಇದು ಸದ್ವಿಶ್ವಾಸದ ಲ

ಕ್ಷಣ (ಇಬ್ರಿ. ೧೧, ೧). ಇಷ್ಮಯೇಲನು ನನಗೆ ಬಾಧ್ಯನಾದಾನು ಎಂದು (೧೭—೧೮.) ಮೆಲ್ಲಮೆಲ್ಲಗೆ ನೆನಿಸುವವನಾದನು. ಆದರೆ ಸಾರಳು ಹಡಿಯುವ ಮಗನೇ ನಿನ್ನ ಬಾಧ್ಯನು (೧೫—೧೬ ವ.) ಎಂದು ದೇವರು ಅವನಿಗೆ ಹೇಳಿದಲ್ಲಿ, ಅವನು ಮತ್ತು ಒಂದು ಗುಡ್ಡ ಹತ್ತಿ, ದಾಟ ಬೇಕಾಯಿತು.—ಇಲ್ಲಿ ಮಾನವರೂಪದಿಂದ (೧೨ ವ.) ಅಬ್ರಹಾಮನಿಗೆ ಪ್ರತ್ಯಕ್ಷವಾದ ಯೆಹೋವನು ತನಗೆ ಬಲವುಳ್ಳ ದೇವರು ಎಂದು ಹೆಸರಿಡುತ್ತಾನೆ. ಆತನು ತಾನು ಕೊಟ್ಟ ಮಾತನ್ನೂ, ಕಟ್ಟಿದ ಒಡಂಬಡಿಕೆಯನ್ನೂ, ಸಿದ್ಧಿಗೆ ತರ ಬಲ್ಲಾತ. ನನ್ನ ಮುಂದೆ=ನನ್ನ ಸಮ್ಮುಖದಲ್ಲಿ ನನ್ನನ್ನು ಆತು ಕೊಂಡು ನಂಬಿಕೊಂಡು, ನನಗೆ ವಿಧೇಯನಾಗಿ ನಡೆ ಎಂಬಲ್ಲಿ ವಾಗ್ದತ್ತವೂ, ನೇಮವೂ, ವಿಶ್ವಾಸವೂ, ಕ್ರಿಯೆಗಳೂ ಬಂದವೆ. ಸಂಪೂರ್ಣವಾಗಿರು) ಗುಣ ನೀತಿಯಲ್ಲಿ ಒಡಂಬಡಿಕೆ ಹೊಸತಲ್ಲ (ಸಂಧಿ ೧೫). ಆದರೆ ದೇವರ ಕಡೆಯಿಂದ ಆಗ ತಕ್ಕದ್ದನ್ನು ಹೆಚ್ಚು ವಿವರಿಸಿದಲ್ಲದೆ ಅಬ್ರಹಾಮನ ಕಡೆಯಿಂದ ಆಗ ತಕ್ಕದ್ದನ್ನು ಸುಧಾ ಹೇಳುತ್ತಾನೆ.

೫. ೬ ವ. ಅಬ್ರಾಮು=ಉನ್ನತ ಪಿತೃ. ಅಬ್ರಹಾಮನು=ಸಮೂಹದ ತಂದೆ. ಈ ಹೊಸ ಹೆಸರಿನಿಂದ ಅಬ್ರಹಾಮನು ಯಾವಾಗಲೂ ದೇವರ ವಾಗ್ದತ್ತ ನೆನಪು ಮಾಡಿ ಕೊಳ್ಳ ಬೇಕು. ದೇವರ ವಚನವೇ ಪತ್ರ, ಈ ಹೆಸರೇ ಅದಕ್ಕೆ ಹಾಕಿದ ಮುದ್ರೆ. ಇಷ್ಮಯೇಲನಿಂದ ಒಂದು ದೊಡ್ಡ ಜನಾಂಗ ಉದಯಿಸಿತು; ಎದೋಮಿಯರು ವಿಸ್ತಾರವಾದರು. ಕೆಟೂರಳು ಹಡೆದ ಮಕ್ಕಳು ಬಹಳ ಹೆಚ್ಚಿದರು. ಯಾಕೋಬನಿಂದ ಹನ್ನೆರಡು ಗೋತ್ರಗಳಾದ ಇಸ್ರಾಯೇಲನವರ ಜನಾಂಗ ಉತ್ಪತ್ತಿಯಾಯಿತು. ಇದಲ್ಲದೆ ಅನ್ಯ ಜನರೊಳಗಿಂದ ಬಂದು ಕ್ರಿಸ್ತನ ಸಭೆಯಲ್ಲಿ ಸೇರಿದ ಆತ್ಮಕ ಇಸ್ರಾಯೇಲನವರು ಎಷ್ಟೋ ಜನರು! ಅಬ್ರಹಾಮನಿಂದ ಉದ್ಭವಿಸಿದ ಅರಸರಲ್ಲಿ ಕ್ರಿಸ್ತನು ಮುಖ್ಯಸ್ತನು.

೭ ವ. ನಿತ್ಯ ಒಡಂಬಡಿಕೆಯಾಗಿ) ೧) ಆತ್ಮಕ ಇಸ್ರಾಯೇಲನವರು ಸ್ವಭಾವಿಕ ಇಸ್ರಾಯೇಲನವರ ಸ್ಥಳಕ್ಕೆ ಬಂದರು. ಪೃಥ್ವಿಯಲ್ಲಿಯ ಕಾನಾನವು, ಭಕ್ತರು ನಿತ್ಯವಿರುವ ಪರಲೋಕವೆಂಬ ಕಾನಾನಕ್ಕೆ ಮುಂಗುರುತಾಗಿದೆ. ಅದಲ್ಲದೆ ಸ್ವಭಾವಿಕ ಇಸ್ರಾಯೇಲನವರು, ಈ ದೃಶ್ಯವಾದ ಕಾನಾನವನ್ನು ತಮ್ಮ ಪಾಪದಿಂದ ಕಳಕೊಂಡಾಗ್ಯೂ, ದೇವರ ರಾಜ್ಯದಲ್ಲಿ ಸೇರುವಾಗ್ಯೆ, ಅದನ್ನ ತಿರಿಗಿ ಸ್ವತಂತ್ರಿಸಿ ಕೊಳ್ಳುವರು (ರೋಮ. ೧೧).

bb) ಒಡಂಬಡಿಕೆಯ ಗುರುತಾದ ಪರಿಚ್ಛೇದನೆ. ೯—೧೪.

ಬಲಿ ಅರ್ಪಿಸುವದು ಹ್ಯಾಗೋ, ಹಾಗೆ ಪರಿಚ್ಛೇದನೆ ಮಾಡುವದು ಮಿಜ್ರದವರಲ್ಲಿಯೂ, ಬೇರೆ ಜನಾಂಗಗಳಲ್ಲಿಯೂ, ತಮ್ಮ ಅಶುದ್ಧತ್ವ ಕಳೆಯ ಬೇಕೆಂಬ ಭಾವನೆಯಿಂದ ವಾಡಿಕೆ ಆಗಿದ್ದದ್ದು ತೋರುತ್ತದೆ. ಆದರೆ ದೇವರು ಇದನ್ನ ಅಬ್ರಹಾಮನವರಿಗೆ ಒಡಂಬಡಿಕೆಯ ಗುರುತಾಗ ನೇಮಿಸಿದನು. ಮುಂದೊಗಲು ಪಾಪದ ಅಶುದ್ಧತ್ವಕ್ಕೆ ಸಾದೃಶ್ಯ. ಅದನ್ನ ಪರಿಚ್ಛೇದಿಸುವ ಸುನ್ನತಿ ಪರಿಶುದ್ಧತ್ವ ಸೂಚಿಸುತ್ತದೆ. ಮನುಷ್ಯರಿಗೆ ಜನ್ಮಪಾಪ ಉಂಟೆಂಬದೊಂದು, ದೇವರ ಒಡಂಬಡಿಕೆಯಲ್ಲಿ ಸೇರ ಬೇಕಾದರೆ, ಪರಿಶುದ್ಧರಾದರೇ ಹೊರ್ತು, ಸೇರಲಾರೆವು ಎಂಬುವದೊಂದು, ಪರಿಶುದ್ಧನಾದ ದೇವರ ಸಂಗಡ ಒಡಂಬಡಿಕೆ ಆಯಿತೆಂಬುದೊಂದು: ಈ ಮೂರು ಈ ಆಚರಣೆಯಿಂದ ತೋರುತ್ತಿದ್ದವು. ಇದರಿಂದ ತಾವು ದೇವರಿಗೆ ನಡಕೊಳ್ಳುವವರು ಎಂದು ಲೋಕಕ್ಕೆ ಅರಿಕೆ ಮಾಡಿದರು. ಸ್ತ್ರೀಯರು ತಮ್ಮ ಹಿರಿಯರೊಳಗೆ ಬಂದ ಹಾಗೆ ಆಯಿತು. ಅವರು ಸ್ವಂತ ಮನೆತನ ಸ್ಥಾಪಿಸುವವರಲ್ಲದ ಕಾರಣ, ಗಂಡಸರಿಗೆ ಒಡಂಬಡಿಕೆಯ ಗುರುತು ಆಗಿದ್ದದ್ದು ಸಾಕು. ಅವರು ಹಾಗೆಯೇ ಒಡಂಬಡಿಕೆಯಲ್ಲಿ ಪಾಲುಗಾರರು (೩೪, ೧೧ ಮುಂ. ಯೋವೇಲ. ೨, ೧೫—೧೬). ಈ ಆಚರಣೆಯಿಂದ ಹಳೆ ಒಡಂಬಡಿಕೆಯ ಸಭೆಯಲ್ಲಿ ಹ್ಯಾಗೆ ಸೇರುತ್ತಿದ್ದರೋ, ಹಾಗೆ ಸ್ನಾನದಿಂದ ಹೊಸ ಒಡಂಬಡಿಕೆಯ ಸಭೆಯಲ್ಲಿ ಸೇರುತ್ತಾರೆ.

ಉತ್ಪತ್ತಿ. ೧೭, ೧೫—೨೭.

೧೨. ೧೩ ವ. ಎಂಟು ದಿನದ ಪ್ರಾಯದವರಾಗಿ—ಹಣಕ್ಕೆ ಸಂಪಾದಿಸಲ್ಪಟ್ಟವನಾಗಲಿ—) ಕ್ರಿಸ್ತನ ಭಕ್ತರು ತಮ್ಮ ಕೈಕೆಳಗೆ ಇರುವ ಅಜ್ಞಾನಿಗಳನ್ನು ದೇವರ ಕಡೆಗೆ ತಿರಿಗಿಸುವ ನಿಮಿತ್ತ ಪ್ರಯತ್ನ ಮಾಡ ತಕ್ಕದ್ದೆಂದು ಇದರಿಂದ ತಿಳುಕೊಳ್ಳಿರಿ!

೧೪ ವ. ತಿರಸ್ಕಾರದಿಂದ ಈ ಆಚರಣೆ ಮಾಡದವರಿಗೆ ಆಗುವ ಶಿಕ್ಷೆ: ದೇವರ ಜನರಿಂದ ಬಹಿಷ್ಕಾರವಾಗುವದು, ಶಾಪಕ್ಕೆ ಒಳಗಾಗುವದು (ಹೊರ. ೪, ೨೪—೨೬). ಅಕಾಲಿ ಮರಣಕ್ಕೆ ಗುರಿಯಾಗುವದು.—ನಾನು ಅಂತರಂಗದಲ್ಲಿ ಕ್ರಿಸ್ತನ ಭಕ್ತನೆಂದು ಹೇಳುವದು ಸಾಲದು; ಆತನು ಒಡಂಬಡಿಕೆಯ ಗುರುತಾಗಿ ನೇಮಿಸಿದ ಸ್ನಾನ ತಕ್ಕೊಂಡು, ಆತನನ್ನು ಅರಿಕೆ ಮಾಡ ಬೇಕು.

cc) ದೇವರು ಅಬ್ರಹಾಮನ ಸಂಗಡ ಮಾತಾಡಿದ್ದು. ೧೫—೨೭.

ಅ) ಸಾರಳ ಕುರಿತು. ೧೫—೧೭.

೧೭ ವ. ಆಗ ಅಬ್ರಹಾಮನು ಅಡ್ಡ ಬಿದ್ದು, ನಕ್ಕು, ನೂರು ವರುಷದವನಿಗೆ ಮಕ್ಕಳು ಹುಟ್ಟುವದುಂಟೇ? ತೊಂಭತ್ತೊಂಭತ್ತು ವರುಷದವಳಾದ ಸಾರಳು ಹೆರುವದುಂಟೇ? ಎಂದು, ತನ್ನ ಹೃದಯದಲ್ಲಿ ಅಂದು ಕೊಂಡನು.

ಸಾರೈ=ನನ್ನ ಅಧಿಪತ್ಯ, ನನ್ನ ಅರಸಿ. ಈ ಹೆಸರು ಹೋಗಿ ಸಾರ=ಅರಸಿ ಅಂತ ಆಗ ಬೇಕು. ಯಾಕಂದರೆ (೧೭ ವ.) ಆಕೆ ಅಬ್ರಹಾಮನ ಮನೆಯ ಪೂರ್ತಿಗೆ ಗೃಹಸ್ಥಳು ಮಾತ್ರವಲ್ಲ, ಬೇರೆ ಬೇರೆ ಜನಾಂಗಗಳಿಗೂ, ಅರಸರಿಗೂ, ತಾಯಿ ಆಗಿ, ಪೃಥ್ವಿಯ ಮೇಲೆ ಸ್ತ್ರೀಯರೊಳಗೆ ಅರಸಿಶಿಖಾಮಣಿ ಆಗ ಬೇಕು. ಅಬ್ರಹಾಮನ ಮನಸಿನಲ್ಲಿ (ರೋಮ. ೪, ೧೯.) ವಿಶ್ವಾಸ ಎಂಬ ಸೂರ್ಯ ಮೂಡಿರಲಾಗಿ, ಅನುಮಾನ ಎಂಬುವದೊಂದು ಮೋಡ ಏರಿ ಬಂದು, ಅದನ್ನ ಮರೆ ಮಾಡುತ್ತಿತ್ತು. ಆದ ಕಾರಣ ನಕ್ಕನು. ಆದರೆ ತರುವಾಯ ಮೋಡ ತಿರಿಗಿ ಹರಿದು ಹೋಯಿತು.

ಬ) ಇಷ್ಮಯೇಲನನ್ನು ಕುರಿತು. ೧೮—೨೨.

೧೮ ವ. ನಮಗೆ ಅನಕ ಮಕ್ಕಳು ಹುಟ್ಟುವದು ಎಂಥಾ ಮಾತೊ! ಈ ಇಷ್ಮಯೇಲನನ್ನು ಬಾಧ್ಯನನ್ನು ಮಾಡ ಬಾರದೇ? ಅವನಲ್ಲಿ ನೀನು ನನಗೆ ಕೊಟ್ಟ ವಾಗ್ದತ್ತ ಈಡೇರಲಿ!—ಇಷ್ಮಯೇಲನಿಗೆ ಆದ ಆಶೀರ್ವಾದ ಇಹ ಸಂಬಂಧವಾದದ್ದು. ೧೨ ಪ್ರಭುಗಳ ಪಟ್ಟಿ ೨೫, ೧೨—೧೬. ವಚನಗಳಲ್ಲಿ ಅದೆ. ಒಡಂಬಡಿಕೆಯ ಆಶೀರ್ವಾದ ಇಹಕ್ಕೂ ಪರಕ್ಕೂ ಸಂಬಂಧವಾದದ್ದು. ದೇವರ ರಾಜ್ಯದಲ್ಲಿ ದೊಡ್ಡವರಾಗ ಬೇಕಾದರೆ, ಆತನು ನಮ್ಮನ್ನು ಆದು ಕೊಂಡರೆ ಸರಿ! ರಕ್ಷಣೆ ಎಲ್ಲರಿಗೆ ಆಗ ಬೇಕೆಂದು ದೇವರು ನಿರ್ಣಯಿಸಿದ್ದಾನೆಂಬುದಕ್ಕೆ ಕಿಂಚಿತ್ತಾದರೂ ಸಂಶಯವಿಲ್ಲ. ಆದರೆ ತನ್ನ ರಾಜ್ಯದ ಉದ್ಯೋಗಗಳಿಗಾಗಿ ದೇವರು ತನ್ನ ಮನಸಿಗೆ ಸರಿ ಕಂಡವರನ್ನ ಆದು ಕೊಳ್ಳುತ್ತಾನೆ (ಯೋಹ. ೩, ೨೭). ಇಷ್ಮಯೇಲನು ೧೩೭ ವರುಷದವನಾಗಿ ತೀರಿ ಕೊಂಡನು. ಅವನ ವಂಶಜರು ಮಿಜ್ರಕ್ಕೆ ಪೂರ್ವದಲ್ಲಿ ವಾಸ ಮಾಡುವವರು.

dd) ಅಬ್ರಹಾಮನು ಪರಿಚ್ಛೇದನೆ ಮಾಡಿದ್ದು. ೨೩—೨೭.

ಇಷ್ಮಯೇಲನ ಸಂತತಿಯವರಾದ ಅರಬಿಯರು ಇಂದೂ ಹದಿಮೂರನೆ ವರುಷದಲ್ಲಿ ಪರಿಚ್ಛೇದನೆ ಮಾಡಿಸಿ ಕೊಳ್ಳುತ್ತಾರೆ. ಇಂಥಾ ಕಾರ್ಯ ತಡವಿಲ್ಲದೆ ಇಷ್ಟು ಬೇಗ ಮನೆಯವರೆಲ್ಲರಿಗೆ ನಡಿಸ ಬೇಕಾದರೆ,

ಉತ್ಪತ್ತಿ. ೧೮.

ಎಂಥಾ ಕ್ರಮದಿಂದ ಎಲ್ಲಾ ನಡೆಯುತ್ತಿರ ಬೇಕು! ಸೇವಕರೆಲ್ಲರು ಎಂಥಾ ಆಜ್ಞಾಧೀನರಾಗಿರ ಬೇಕು! ಅಬ್ರಹಾಮನು ದೇವರ ವಾಕ್ಯದ ಕಡೆಗೆ ಎಷ್ಟು ಲಕ್ಷ್ಯವಿಟ್ಟಿರ ಬೇಕು! ಕ್ರೈಸ್ತರಾದ ಗೃಹಸ್ಥರೇ ಅಬ್ರಹಾಮನನ್ನು ಅನುಸರಿಸಿ ನಿಮ್ಮ ಗೃಹಕೃತ್ಯ ಸಾಗಿಸಿರಿ!

i) ಕರ್ತನು ಅಬ್ರಹಾಮನ ದರ್ಶನಕ್ಕೆ ಬಂದದ್ದು. ಸಂಧಿ ೧೮.

aa) ನಿನಗೆ ಮಗನು ಹುಟ್ಟುವನೆಂಬ ವಚನ ಮತ್ತೂ ಕೊಡುತ್ತಾನೆ. ೧—೧೫.

ಅ) ಅಬ್ರಹಾಮನು ಅತಿಥಿಯರನ್ನು ಮರ್ಯಾದೆಯಿಂದ ಸತ್ಕರಿಸಿದ್ದು. ೧—೮.

೨—೫ ವ. ಅವನು ತನ್ನ ಕಣ್ಣುಗಳನ್ನೆತ್ತಿ ನೋಡಲು, ಅಗೋ ಮೂವರು ಮನುಷ್ಯರು ಅವನ ಮುಂದೆ ನಿಂತಿದ್ದರು. ಅವನು ನೋಡಿ, ಅವರನ್ನು ಎದುರುಗೊಳ್ಳ ಗುಡಾರದ ಬಾಗಲಿಂದ ಓಡಿ ಬಂದು, ನೆಲಕ್ಕೆ ಎರಗಿ ಹೇಳಿದ್ದೇನಂದರೆ—ನಿನ್ನ ದೃಷ್ಟಿಯಲ್ಲಿ ನನಗೆ ದಯ ದೊರಕಿತಾದರೆ, ನಿನ್ನ ದಾಸನನ್ನು ಬಿಟ್ಟು, ಮುಂದಕ್ಕೆ ಹೋಗ ಬೇಡ! ಸ್ವಲ್ಪ ನೀರು ತಕ್ಕೊಂಡು, ನಿಮ್ಮ ಪಾದಗಳನ್ನು ತೊಳೆದು, ಮರದ ಕೆಳಗೆ ಕೂತು ಕೊಳ್ಳಿರಿ! ನಾನು ಬಂದು ಸ್ವಲ್ಪ ರೊಟ್ಟಿಯನ್ನು ತರುವೆನು; ನಿಮಗೆ ಶಾಂತಿ ಆಗಲಿ! ಆ ಮೇಲೆ ಮುಂದಕ್ಕೆ ಹೋಗ ಬಹುದು. ಅದಕ್ಕೋಸ್ಕರವೇ ನಿಮ್ಮ ದಾಸನ ಬಳಿಗೆ ಹಾದು ಬಂದಿರಲ್ಲ, ಸ್ವಾಮಿಯೇ!

ನನ್ನ ಕರ್ತನೇ! ಅಬ್ರಹಾಮನು ಮೂವರನ್ನ ಕಂಡನು. ಆದರೂ ಅವರಲ್ಲಿ ತನಗೆ ಮುಖ್ಯಸ್ತನಾಗಿ ಕಂಡಂಥಾತನನ್ನು ಮಾತ್ರ ಮಾತಾಡಿಸುತ್ತಾನೆ. ಆತನೆ ಕರ್ತನ ದೂತನು, ಮತ್ತು ಕರ್ತನು (೧೩. ೧೭. ೧೬, ೭). ಬಂದಿರಲ್ಲ) ನಾನು ಈ ಸತ್ಕಾರ ನಿಮಗೆ ಮಾಡಲಾಗುವ ಹಾಗೆ ಬಂದಿರಿ. ಚಕ್ತರು ಆತಿಥ್ಯ ಮಾಡ ಬೇಕು.—(ಇಬ್ರಿ. ೧೩, ೧—೨.) ಇಬ್ಬರು ದೂತರಿಗೂ ಕರ್ತನ ದೂತನಿಗೂ ಆಹಾರ ಬೇಕಾಗಿದ್ದಿಲ್ಲ. ಆದರೆ ಮಾನವರೂಪ ತಾಳಿಕೊಂಡು ಬಂದ ಬಳಿಕ, ಅಷ್ಟರ ಪೂರ್ತಿಗೆ ಮಾನವ ಧರ್ಮದಿಂದ ನಡೆಯುವವರಾದರು. ನಿರಾಕಾರವಾದ ಆತ್ಮರು ಆಕಾರಕ್ಕೆ ಅಧಿಕರ್ತರಾಗಿ, ಬೇಕಾದರೆ, ಧರಿಸಿ ಕೊಳ್ಳಲಿಕ್ಕೂ, ಸಾಕಾದರೆ, ಬಿಡಲಿಕ್ಕೂ ಸ್ವತಂತ್ರಿಗಳಾಗಿದ್ದಾರೆ.

ಬ) ಸಾರಳ ಪ್ರಸ್ತಾಪ ತೆಗೆದದ್ದು. ೯—೧೫.

೧೦ ವ. ದೂತರು ಮೊದಲು (೯ ವ.) ಕೇಳಿದ್ದರು. ಈಗ ಕರ್ತನ ದೂತನು ಮಾತ್ರ ಮಾತಾಡುತ್ತಾನೆ. ಜೀವೋತ್ಪತ್ತಿಯ ಕಾಲದಲ್ಲಿ) ಇಂದಿಗೆ ಒಂದು ವರುಷಕ್ಕೆ. ಇಂದಿಗೆ ಒಂದು ವರುಷ ಬದುಕಿದನಂತರ=ಒಂದು ವರುಷವಾದನಂತರ. ಸಾರಳು ಅಬ್ರಹಾಮನ ಹಿಂದೆ ಇದ್ದ ಗುಡಾರದ ಬಾಗಲಲ್ಲಿ ಹೊಂಚಿ ಕೇಳುತ್ತಿದ್ದಳು.

೧೧. ೧೨ ವ.—ಸಾರಳಿಗೆ ಸ್ತ್ರೀಯರ ರೀತಿಯು ಪ್ರಕಾರ ಆಗುವದು ನಿಂತು ಹೋಗಿತ್ತು.—ನಕ್ಕು—ಹರೆಹಿಂಗಿದ ಬಳಿಕ—ನನಗೆ ರತಿ ಆಗುವದುಂಟೇ? ಮುಂ.

೧೪ ವ. ಉಂಟೋ? ಇಂದಿಗೆ ಒಂದು ವರುಷಕ್ಕೆ ಇದೇ ದಿನದಲ್ಲಿ ನಿನ್ನ ಬಳಿಗೆ—) ಅವಿಶ್ವಾಸ ನಿನ್ನನ್ನು ಕಾಡಿದರೆ, ದೇವರ ಸರ್ವ ಬಲವನ್ನು ಧ್ಯಾನಿಸಿ ನೋಡು! ಇದು ಆ ರೋಗಕ್ಕೆ ತಕ್ಕ ಗಿಡ.

ಉತ್ಪತ್ತಿ. ೧೮.

bb) ಅಬ್ರಹಾಮನು ವಿಜ್ಞಾಪನೆ ಮಾಡಿದ್ದು. ೧೬—೩೩.

ಅ) ಕರ್ತನು ಅಬ್ರಹಾಮನಿಗೆ ತಾವು ಬಂದ ಕಾರ್ಯ ತಿಳಿಸಿದ್ದು. ೧೬—೨೨.

೧೬—೧೯ ವ. ಅಬ್ರಹಾಮನು ದೇವರ ಸ್ನೇಹಿತನು. ಒಡಂಬಡಿಕೆಯ ತನ್ನ ಹಂಗನ್ನು ಅವನು ಸಲ್ಲಿಸಿ ಲೋಕ ಹಿತಾರ್ಥವಾದ ದೊಡ್ಡ ಆಶೀರ್ವಾದ ಅನುಭವಿಸ ಯೋಗ್ಯನಾಗುತ್ತಾನಾದ ಕಾರಣ, ಅವನು ಲೋಕೋಪಾಧ್ಯನೆ, ಮಧ್ಯಸ್ಥನೇ, ದೊಡ್ಡವನೇ. ಇದರ ದೆಶೆಯಿಂದ ದೇವರು ಅವನನ್ನು ರಾಜಕಾರ್ಯಭಾರಕ್ಕೆ ಕೂಡಿಸಿ ಕೊಳ್ಳುತ್ತಾನೆ. ಪರಿಶುದ್ಧರು ಲೋಕಕ್ಕೆ ನ್ಯಾಯಾಧೀಶರಾಗಿರುವರು. ೧೯ ವ. ಯಾಕಂದರೆ ಅಬ್ರಹಾಮನ ವಿಷಯ ನುಡಿದದ್ದನ್ನು ಕರ್ತನು ಅವನ ಮೇಲೆ ಬರ ಮಾಡುವ ಹಾಗೆ, ಅವನು ತನ್ನ ಮಕ್ಕಳಿಗೂ, ತನ್ನ ತರುವಾಯದ ತನ್ನ ಮನೆಯವರಿಗೂ, ನೀತಿ ನ್ಯಾಯವನ್ನು ನಡಿಸಿ ಕರ್ತನ ಮಾರ್ಗ ಕೈಕೊಳ್ಳ ಆಜ್ಞಾಪಿಸಲಿಕ್ಕೆ ಅವನನ್ನು ಅರಿತು ನೇಮಿಸಿದ್ದೇನೆ.) ತಂದೆ ತಾಯಿಗಳು ತಮ್ಮ ಮಕ್ಕಳಿಗೆ ದೇವರ ವಾಕ್ಯವನ್ನು ತಿಳಿಸಿ ಶಿಕ್ಷೆ ದಿಕ್ಷೆ ಮಾಡುವದಾದರೆ, ಆಶೀರ್ವಾದಕ್ಕೆ ಯೋಗ್ಯರಾಗುತ್ತಾರೆ.

೨೦. ೨೧ ವ. ಆ ಶೀಮೆಯಲ್ಲಿ ಸೊದೋಮ ಗಮೋರ ಪಟ್ಟಣಗಳು ದೊಡ್ಡವು ಆಗಿದ್ದರಿಂದ, ಅವನ್ನ ಮಾತ್ರ ಹೇಳುತ್ತಾನೆ. ಅವುಗಳಲ್ಲಿ ಉಳಿದ ಸಣ್ಣ ಸ್ಥಳಗಳು ಬಂದ ಹಾಗಾಯಿತು (ಹೊಶೆ. ೧೧, ೮. ದ್ವಿತಿ. ೨೯, ೨೩). ಆ ಶೀಮೆಯ ನಿವಾಸಿಗಳ ಪಾಪವು ಶಿಕ್ಷೆ ಆಗ ಬೇಕೆಂದು ಕೂಗುತ್ತಿತ್ತು (೪, ೧೦). ಕರ್ತನು ಮಾನವ ಧರ್ಮಕ್ಕೆ ಅನುಸಾರವಾಗಿ ನಿಧಾನವುಳ್ಳ ನ್ಯಾಯಾಧೀಶನಂತೆ ಮೊದಲು ಬಂದು ವಿಚಾರ ಮಾಡುತ್ತಾನೆ. ಮುಂಚೆ ಅವರು ಮಾಡಿದ್ದು ಎಲ್ಲಾ ಗೊತ್ತಿತ್ತು. ಆದರೆ ತಾನೆ ಬಂದರೆ ಹೀಗೆ ಮಾಡ್ಯಾರೊ ಏನೊ ಎಂದು ಪರೀಕ್ಷಿಸಲಿಕ್ಕೆ ಬಂದನು. ಅವರು ಪರೀಕ್ಷೆಯಲ್ಲಿ ಇಳಿಯಲಿಲ್ಲ.

ಬ) ಅಬ್ರಹಾಮನು ಸೊದೋಮ ಗಮೋರ ಪಟ್ಟಣಗಳ ದೆಶೆಯಿಂದ ವಿಜ್ಞಾಪನೆ ಮಾಡಿದ್ದು. ೨೩—೩೩.

ಆ ಇಬ್ಬರು ದೂತರು ಕರ್ತನನ್ನು ಬಿಟ್ಟು ಮುಂದಕ್ಕೆ ಸೊದೋಮದ ಕಡೆಗೆ ಹೋಗುವವರಾದರು. ಹಿಂದುಳಿದ ಕರ್ತನಿಗೆ ಅಬ್ರಹಾಮನು ಬೇಡಿ ಕೊಳ್ಳುತ್ತಾನೆ. ಆರು ಸರ್ತಿ ಅಬ್ರಹಾಮನು ಮಧ್ಯಸ್ಥನಾಗಿ ಆ ಸೊದೋಮ ಮುಂತಾದ ಸ್ಥಳಗಳ ದೆಶೆಯಿಂದ ಪ್ರಾರ್ಥನೆ ಮಾಡ ಗುಂಡೆಗೊಳ್ಳುತ್ತಾನೆ. ಯಾಕಂದರೆ ಲೋಟನು ಅಲ್ಲಿ ಇದ್ದ ಮೂಲದಿಂದ, ಕೆಲವು ಜನ ನೀತಿವಂತರಾದವರು ಇದ್ದಾರೆಂದು ನೆನಿಸಿದನು. ನೀತಿವಂತರು ದೇವರಿಗೆ ಎಲ್ಲಾಕ್ಕಿಂತ ಪ್ರಿಯ ತರವಾಗಿದ್ದಾರೆ. ಅವರ ನಿಮಿತ್ತ ದುಷ್ಟರನ್ನ ಲೋಕದಲ್ಲಿ ದೀರ್ಘಶಾಂತಿಯಿಂದ ಸೈರಿಸಿ ಕೊಂಡು ಹೋಗುತ್ತಾನೆ. ಪ್ರಾರ್ಥನೆ ಮಾಡಿ, ಮರ್ತ್ಯರು ದೇವರ ಸಮ್ಮುಖದಲ್ಲಿ ನಿಲ್ಲ ಬೇಕಾದರೆ, ತಾವು ಏನಿಲ್ಲದವರೂ ಎಂಬಂತೆ ಭಾವನೆ ಹುಟ್ಟುವದು.

೨೪ ವ. ಒಂದು ವೇಳೆ ಐವತ್ತು ಮಂದಿ ನೀತಿವಂತರು ಪಟ್ಟಣದೊಳಗೆ ಇದ್ದಾರು. ಹೀಗಾದರೂ ನಾಶನ ಮಾಡುತ್ತೀಯೋ? ಅದರೊಳಗಿರುವ ಆ ಐವತ್ತು ಮಂದಿ ನೀತಿವಂತರಿಗೋಸ್ಕರ ಆ ಸ್ಥಳಕ್ಕೆ ಕ್ಷಮಿಸಲಿಕ್ಕಿಲ್ಲವೇ?

ಉತ್ಪತ್ತಿ. ೧೯, ೧—೨೩.

k) ಸೊದೋಮ ಗಮೊರ ಪಟ್ಟಣಗಳು ನಾಶವಾದದ್ದು. ಸಂಧಿ ೧೯.

aa) ಲೋಟನಿಗೆ ಆದ ರಕ್ಷಣೆ. ೧೯, ೧—೨೩.

ಅ) ಲೋಟನು ಅಬ್ರಹಾಮನ ಕಡೆಯಿಂದ ಬಂದ ಆ ಇಬ್ಬರು ದೂತರಿಗೆ ಮಾಡಿದ ಸತ್ಕಾರ. ೧—೩.

ಟಿಪ್ಪಣಿ: ದೇವರು ದುಷ್ಟರಿಗೆ ತನ್ನ ದೂತರ ಮುಖದಿಂದ ಶಿಕ್ಷೆ ಮಾಡುತ್ತಾನೆ. ಆದರೆ ತನ್ನ ಭಕ್ತನಾದ ಅಬ್ರಹಾಮನ ಕೂಡಾ ಮುಖಾಮುಖಿಯಾಗಿ ಮಾತಾಡುತ್ತಾನೆ (೧೮ ಸಂಧಿ). ಇವರು ದೂತರೆಂದು ಲೋಟನಿಗೆ ತಿಳಿಯಲಿಲ್ಲ. ಮಾನಸ್ಥರಾದ ಹಾದಿಕಾರರಂತೆ ಕಂಡರು. ಅವರು ಊರಿಗೆ ಬರುವಾಗ್ಗೆ, ಲೋಟನು ಜನರ ಕೂಡಾ ಅಗಸೆ ಬಾಗಲಲ್ಲಿ ಕೂತಿದ್ದನು. ಅವರ ಪಾಪಕ್ಕೆ ಅವನು ಸಮ್ಮತಿ ಪಡಲಿಲ್ಲ. ಆದರೂ ಅವರನ್ನ ಗದರಿಸ ಬೇಕಾಗಿತ್ತು. ಲೋಟನ ವಿನಹ ಆ ಊರಲ್ಲಿ ಯಾರೂ ಆತಿಥ್ಯ ಮಾಡುತ್ತಿದ್ದಿಲ್ಲ. ಲೋಟನ ಮನಸನ್ನು ನೋಡಲಿಕ್ಕೆ ದೂತರು ಮೊದಲು ಅವನ ಮನೆಯಲ್ಲಿ ಶೇರಲಿಕ್ಕೆ ಒಲ್ಲೆವು ಅಂದರು.

೧ ವ.—ಎದ್ದು ನೆಲಕ್ಕೆ ಬಾಗಿ) ವಂದನೆಗಾಗಿ ಹೀಗೆ ಮಾಡುವ ಸಂಪ್ರದಾಯವಿತ್ತು. ೩ ವ. ಹುಳಿ ಹಾಕಿ ಕಣಕ ಉಬ್ಬಿಸಿ ರೊಟ್ಟಿ ಸುಡ ಬೇಕಾದರೆ, ತಡವಾಗುತ್ತಿತ್ತು. ಅದಕ್ಕೆ ಈ ದೇಶದ ರೀತಿಯ ಪ್ರಕಾರ ಮಾಡಿದರು.

ಬ) ಸೊದೋಮುದವರ ದುಷ್ಟತ್ವ. ೪—೧೧.

೫ ವ. ಬಳಿಗೆ ಹೊರಗೆ ಕರಕೊಂಡು ಬಾ!) ಲೇವಿ ಕ. ೨೦, ೧೩. ಬರೆದ ಪಾಪ ಅವರಲ್ಲಿ ನಡೆಯುತ್ತಿತ್ತು. ಈ ಕಾಮಾಂಧಕಾರಿಗಳು ಎಲ್ಲಾ ಲಜ್ಜೆ ದೊರೆದವರಾಗಿದ್ದರು.

೬—೮ ವ. ಆಗ ಲೋಟನು ಬಾಗಲಿಗೆ ಅವರ ಬಳಿಗೆ ಹೊರಗೆ ಬಂದು, ಕದ ತನ್ನ ಹಿಂದೆ ಹಾಕಿ ಹೇಳಿದ್ದೇನಂದರೆ—ಎಲಾ, ನನ್ನ ಸಹೋದರರೇ, ಕೇಡು ಮಾಡ ಬೇಡಿರಿ. ಇಗೋ, ಗಂಡಸನ್ನರಿಯದ ಇಬ್ಬರು ಕುಮಾರ್ತೆಗಳು ನನಗೆ ಉಂಟು; ಅವರನ್ನು ನಿಮ್ಮ ಬಳಿಗೆ ಹೊರಗೆ ಕರತರುವೆನು; ನಿಮಗೆ ಸರಿ ಕಂಡಂತೆ, ಅವರಿಗೆ ಮಾಡಿರಿ! ಈ ಮನುಷ್ಯರಿಗೆ ಮಾತ್ರ ಏನಾದರೂ ಮಾಡ ಬೇಡಿರಿ; ಯಾಕಂದರೆ ಅದಕ್ಕೋಸ್ಕರ ಅವರು ನನ್ನ ಮಾಳಿಗೆಯ ನೆರಳಿಗೆ ಬಂದಿದ್ದಾರೆ.

ಈ ಮನುಷ್ಯರು ಆಶ್ರಯಕ್ಕಾಗಿ ತನ್ನ ಮನೆಯಲ್ಲಿ ಬಂದಿದ್ದಾರಾದ ಕಾರಣ, ಅವರಿಗೆ ಕೇಡು ಆಗದ ಹಾಗೆ, ಲೋಟನು ಬಹಳ ಪ್ರಯತ್ನ ಮಾಡುತ್ತಾನೆ. ಆದರೆ ಅವನು ಬಹಳ ಮೆತ್ತನವನು. ಮಂದಬುದ್ಧಿಯುಳ್ಳವನು. ಇಂಥಾ ದುಷ್ಟರ ಸಹವಾಸದಿಂದ ಅವನಲ್ಲಿಯೂ ನಾಚಿಕೆ ಕಡಿಮೆ ಆಗಿತ್ತು. ನಾತ ಸುಳಿಯುವಲ್ಲಿ, ಬಹಳ ಕಾಲ ಇದ್ದರೆ, ಘ್ರಾಣೇಂದ್ರಿಯ ಮಂದವಾಗುವದು ಹ್ಯಾಗೋ, ಹಾಗೆ ಲೋಟನಿಗೆ ಆಗಿತ್ತು. ಇಲ್ಲದಿದ್ದರೆ, ತನ್ನ ಹೆಣ್ಣು ಮಕ್ಕಳನ್ನ ಆ ದುಷ್ಟರಿಗೆ ಒಪ್ಪಿಸಿ ಬಿಡಲಿಕ್ಕೆ ಸಿದ್ಧವಾಗುತ್ತಿದ್ದಿಲ್ಲ.

೯ ವ. ಅಡ್ಡಾಗು) ಬಾಗಲಿನ ಹತ್ತಿರ ನಿಂತಿದ್ದನು. ಲೋಟನು ಬಂದಿಷ್ಟು ವಾರೆ ಆಗಿ, ಒಳಗೆ ಹೋಗಲಿಕ್ಕೆ ದಾರಿ ಕೊಡ ಬೇಕು.—ನೀವು ಮಾಡುವದು ಕೆಟ್ಟದ್ದು ಎಂದು ಹೇಳಿದಲ್ಲಿ, ಲೋಟನು ಅವರಿಗೆ ನ್ಯಾಯಾಧೀಶನಾದನು. ಹಾಗೂ ಬೇರೆ ಬೇರೆ ಸಮಯಗಳಲ್ಲಿ ನೀವು ಮಾಡುವದು ಕೆಟ್ಟದ್ದು ಎಂದು ಬುದ್ಧಿ

ಹೇಳಿದ್ದನಾದೀತು.—ತಾವು ಮನೆ ಮನೆಗೆ ಮಾನ್ಯರಾಗಿದ್ದರು. ಅರಸನಿದ್ದರೂ, ಅವನ ಅಧಿಕಾರ ಅವರ ಮೇಲೆ ಅಷ್ಟು ನಡೆಯುತ್ತಿದ್ದಿಲ್ಲ.

೧೦. ೧೧ ವ.—ಮನೆಯೊಳಗೆ ಎಳಕೊಂಡು—ಮಟ್ಟಿಗೂ ಕುರುಡಾಗ ಹೊಡೆದರು.) ಇವರು ಶಿಕ್ಷೆಗೆ ಮಣಿಯುವದಿಲ್ಲ ನಾಶನವಾಗ ತಕ್ಕವರು ಎಂಬದು ಸಿದ್ಧಾಂತವಾಯಿತು.

ಚ) ದೂತರು ಲೋಟನನ್ನು ಸೊದೋಮದಿಂದ ಕರಕೊಂಡು ಹೋದದ್ದು (ಹೊರಡಿಸಿದ್ದು). ೧೨—೨೩.

೧೩. ೧೪ ವ. ದೂತರು ತಾವು ಬಂದ ಕಾರ್ಯ ಲೋಟನಿಗೆ ತಿಳಿಸುತ್ತಾರೆ. ತಾವು ಕರ್ತನಿಂದ ಕಳುಹಿಸಿ ಕೊಂಡವರು (೧೪ ವ). ಶಿಕ್ಷೆ ಎಷ್ಟು ಸಮೀಪವೋ, ಅಷ್ಟು ದೂರವೇ ಪಶ್ಚಾತ್ತಾಪ ವಿಶ್ವಾಸ. ದೇವರು ತಿನ್ನಿಸುವ ಪೆಟ್ಟುಗಳಿಂದ ಕಠಿಣ ಪಾಪಿಷ್ಟರ ಹೃದಯ ದಸ್ದು ಬೀಳುವದಲ್ಲದೆ, ಮೆತ್ತಗಾಗುವದಿಲ್ಲ. ಸಂಕಟ ಮರಣ ಬಂದಾಗ, ದೇವರನ್ನ ನೆನಸಿ ಕೊಂಡೇನು ಅನ್ನ ಬೇಡ! ಆಗ್ಯೆ ಹೀಗೆ ಮಾಡಲಿಕ್ಕೆ ನಿನಗೆ ಅನುಕೂಲವಾದೀತೊ ಇಲ್ಲವೊ ತಿಳಿಯದು.—ಕುಮಾರ್ತೆಗಳನ್ನ ಮದಿವೆ ಮಾಡಿ ಕೊಳ್ಳಲಿಕ್ಕಿದ್ದ) ಇಬ್ಬರು ಹೆಣ್ಣು ಮಕ್ಕಳ ಹೊರ್ತು ಬೇರೆ ಮಕ್ಕಳು ಲೋಟನಿಗೆ ಇರಲಿಲ್ಲ. ಅವರನ್ನ ಸೊದೋಮದ ಇಬ್ಬರು ಮನುಷ್ಯರಿಗೆ ನಿಶ್ಚಯ ಮಾಡಿದ್ದರು. ಮದಿವೆ ಇನ್ನು ಆಗಿದ್ದಿಲ್ಲ (೮ ವ).

೧೫ ವ. ಲೋಟನಿಗೆ ಅವಸರ ಮಾಡಿ— ನಿನಗೆ ಶಿಕ್ಕಿದ) ನಿನ್ನ ಬಳಿಯಲ್ಲಿರುವಂಥವರು. ಮದಿವೆಯಾಗಿದ್ದರೆ, ಒಂದು ವೇಳೆ ಬರುತ್ತಿದ್ದಿಲ್ಲ.

೧೬. ೧೭ ವ. ಮೊದಲು ಈ ಶೀಮೆಯ ಚಂದಕ್ಕೆ ಭ್ರಮೆಗೊಂಡದ್ದು ಲೋಟನಲ್ಲಿ ಇನ್ನು ಇಳಿದಿದ್ದಿಲ್ಲ. ಅದು ಈಗ ಅವನಿಗೆ ಅಭ್ಯಂತರವಾಯಿತು. ಅದರಿಂದ ಕರ್ತನು ಸಹಾಯಕ್ಕೆ ಬಂದು, ಬಲಾತ್ಕಾರದಿಂದ ಅವನನ್ನು ಹೊರಡಿಸುತ್ತಾನೆ. ಲೋಟನು ಸುಡುವ ಕೊಳ್ಳಿ. ಕರ್ತನು ಅವನನ್ನು ಬೆಂಕೆಯೊಳಗಿಂದ ತೆಗದು ರಕ್ಷಿಸುತ್ತಾನೆ.—ಚಕ್ರದಲ್ಲೆಲ್ಲಾ ನಿಂತು ಕೊಳ್ಳ ಬೇಡ!) ನೋಡು ೧೩, ೧೦. ೧೧. ಅಂದನು) ಆ ಇಬ್ಬರು ದೂತರಲ್ಲಿ ಒಬ್ಬನು. ಅವನಿಗೆ ಲೋಟನು ತನ್ನ ಬಿನ್ನಹ ಹೇಳಿ ಕೊಳ್ಳುತ್ತಾನೆ.

೧೯. ೨೦ ವ.—ಬದುಕಿಸುವ ಹಾಗೆ, ನೀನು ನನಗೆ ತೋರಿಸಿದ ಕೃಪೆ ದೊಡ್ಡದು ಮಾಡಿದ್ಧಿ.) ನನಗೆ ಇನ್ನೊಂದು ಮಾತು ಉಂಟು. ಅದನ್ನ ಹೇಳಿ ಕೊಳ್ಳುತ್ತೇನೆ. ನೀನು ಕೇಳ ಬೇಕು. ಬೆಟ್ಟಕ್ಕೆ ಹೋಗುವದು ಕಷ್ಟ ಮತ್ತು ದಾರಿ ದೂರ. ಬೆಟ್ಟಿಗೆ ಮುಟ್ಟುವ ತನಕ, ಹಾದಿಯೊಳಗೆ ನನಗೆ ಕಷ್ಟವಾದೀತು ಎಂದು ಭಯ ಪಡುತ್ತೇನೆ. ಆದರೆ ಸಮೀಪದಲ್ಲಿ ಒಂದು ಸಣ್ಣ ಊರು ಉಂಟಲ್ಲ. ಅದರಲ್ಲಿ ಪಾಪ ಅಷ್ಟು ಬೆಳದಿರಲಿಕ್ಕಿಲ್ಲ. ನಾನು ಅದಕ್ಕೆ ತಪ್ಪಿಸಿ ಕೊಂಡು ಹೋಗುವೆನು. ನೀವು ಅದನ್ನ ದಯ ಮಾಡಿ ಉಳಿಸ ಬೇಕು. ಅದು ಸಣ್ಣದಲ್ಲವೋ! ಅದನ್ನ ಉಳಿಸಲಿಕ್ಕೆ ಅಡ್ಡಿ ಇರಲಿಕ್ಕಿಲ್ಲಲ್ಲ.

೨೧. ೨೨ ವ. ದೂತನ ಉತ್ತರ.—ಈ ವಿಷಯದಲ್ಲಿಯೂ ನಿನ್ನನ್ನು ಲಕ್ಷಿಸಿದ್ದೇನೆ—ಪಟ್ಟಣವನ್ನು ಹಾಳು ಮಾಡುವದಿಲ್ಲ.) ದೂತನು ಕರ್ತನ ಹೆಸರಿನಲ್ಲಿ ಆತನ ಪ್ರತಿನಿಧಿಯಾಗಿ ಲೋಟನ ಮಾತಿಗೆ ಕಿವಿ ಕೊಟ್ಟನು. ಚೋವರು=ಸಣ್ಣದು. ಮುಂಚಿನ ಹೆಸರು ಬೇಲ (೧೪, ೨).

bb) ಸೊದೋಮ ನಾಶವಾದದ್ದು. ೨೪—೨೯.

೨೪. ೨೫ ವ. ರೂಪ ಧರಿಸಿ ಭೂಮಿಗೆ ಬಂದ ಮಧ್ಯಸ್ಥನಾದ (ಕರ್ತನ ದೂತನಾದ) ಯೆಹೋವನು, ಪರಲೋಕದಲ್ಲಿರುವಂಥಾ, ಮನುಷ್ಯರಿಗೆ ಅಗಮ್ಯವಾದ ಬೆಳಕಿನಲ್ಲಿ ವಾಸ ಮಾಡುವಂಥಾ, ಯೆಹೋವನಿಂದ ಗಂಧಕವನ್ನು ಬೆಂಕೆಯನ್ನು ಸುರಿಸಿ ಸೊದೋಮ ಹಾಳು ಮಾಡಿದನು. ಸ್ವಭಾವದಲ್ಲಿ ಒಬ್ಬನೆ ಆಗಿರು

ವ ದೇವರಲ್ಲಿ ಬಹುತ್ವ ತೋರುತ್ತದೆ.—ಇದು ದೇವರು ಮಾಡಿದ ಶಿಕ್ಷೆಯೇ. ತಂದೆಯಾದ ದೇವರೇ ಅಂತಃಕರಣದಂತೆ, ಮೂಲಕಾರಣ; ಮಗನಾದ ದೇವರೇ ಜ್ಞಾನೇಂದ್ರಿಯದಂತೆ, ಕರಣ; ಈ ಇಬ್ಬರು ದೂತರೇ ಕರ್ಮೇಂದ್ರಿಯದಂತೆ ಇದ್ದ ಹಾಗಾಯಿತು.—ಆ ಚಕ್ರವೆಲ್ಲಾನ್ನು) ೧೩, ೧೦. ೧೧.—ಸಿದ್ದಿಮ ತಗ್ಗಿನಲ್ಲಿ ಭೂಮಿ ರಾಳದ ಹಾಗೂ ಗಂಧಕದ ಹಾಗೂ ಕಲ್ಲುಪ್ಪಿನ ಹಾಸಿಕೆಗಳು ನೆಲದೊಳಗೆ ಇದ್ದವು. ಆಕಾಶದಿಂದ ಮಿಂಚಿನೋಪಾದಿಯಲ್ಲಿ ಸುಟ್ಟು ಕೊಳ್ಳುತ್ತಾ ಬರುವ ಗಂಧಕವು ನೆಲದೊಳಗಣ ರಾಳಕ್ಕೂ ಗಂಧಕಕ್ಕೂ ತಗಲಿ, ಒಂದು ದೊಡ್ಡ ಕಾಡಗಿಚ್ಚಾಯಿತು. ಸಿಡಿಲು ಬಡಿದರೆ, ಗಂಧಕದ ನಾತ ಆಗುತ್ತದಲ್ಲ! ಈ ಪರಿ ಎಲ್ಲಾ ಸುಡುತ್ತಿರಲಾಗಿ, ಭೂಕಂಪವಾಗಿದ್ದೀತು. ಯಾಕಂದರೆ ಭೂಮಿಯ ಅಂತರಾಳದಲ್ಲಿ ವಾಯು ಬೆಂಕೆ ಉಂಟು. ಅದು ಪೊಳ್ಳಾದ ಜಾಗಗಳನ್ನು ತುಂಬಿದ್ದು, ಮೇಲಣ ನೆಲ ಕುಸಿದು ಬೀಳದ ಹಾಗೆ, ಹೊತ್ತಿರುತ್ತದೆ. ಒಂದು ವೇಳೆಯಲ್ಲಿ ಯಾವದೊಂದು ಕಾರಣದಿಂದ ಅದಕ್ಕೆ ಮತ್ತೊಂದು ಕಡಿಗೆ ಹರಿದು ಹೋಗಲಿಕ್ಕೆ ದಾರಿ ಆದರೆ, ಸಪ್ಪಳವಾಗಿ, ನೆಲ ಅದರಿ, ಭೂಕಂಪ ಉಂಟಾಗುವದು. ಮತ್ತು ಪೊಳ್ಳಾದ ಜಾಗ ಬರಿದಾದ್ದರಿಂದ, ಮೇಗಣ ನೆಲ ಆಧಾರವಿಲ್ಲದ್ದಕ್ಕೆ, ಕುಸಿದು ಬೀಳುವದು. ಹೀಗೆ ಅಲ್ಲಿ ಆಗಿದ್ದೀತು. ಪೂರ್ವದಲ್ಲಿ ಯೊರ್ದನ ಹೊಳೆ ಸಿದ್ದಿಮ ತಗ್ಗಿನಲ್ಲಿ ಹಾದು, ಕೆಂಪು ಸಮುದ್ರದೊಳಗೆ ಹರಿದು ಹೋಗಿದ್ದೀತು. ಈ ಭೂಕಂಪದ ಕಾಲಕ್ಕೆ ಸೀಮೆ ಎಲ್ಲಾ ಬಹಳ ಕುಸಿದು ಬಿದ್ದು, ಅದರ ಊರುಗಳು ಮುಂತಾದದ್ದೆಲ್ಲಾ ಮುಣುಗಿ ಆ ಹೊಳೆಯ ನೀರು ಮುಂದಕ್ಕೆ ಹೋಗ ಹಾದಿ ಇಲ್ಲದ್ದಕ್ಕೆ, ಅಲ್ಲಿ ನಿಂತು, ಕಲ್ಲುಪ್ಪು ರಾಳ ಗಂಧಕ ಇವುಗಳು ಬೆಂಕಿಯಿಂದ ಕರಗಿ, ಒಂದು ತರದ ರಾಡಿಯು ನೀರಿನ ಹಾಗೆ ಆಗಿ, ಸತ್ತ ಸಮುದ್ರ ಅಥವಾ ಉಪ್ಪಿನ ಸಮುದ್ರವೆಂದೆನಿಸುವಂಥಾದಾಯಿತು. ಮಧ್ಯ ಸಮುದ್ರಕ್ಕಿಂತ ಅದು ೧೨೩೫ ಅಡಿ ಕೆಳಗೆ ಇರುತ್ತದೆ. ಮುಂಚೆ ಅದು ಈಗ ಇರುವಲ್ಲಿ, ಒಂದು ಮನೋಹರವಾದ ಸರೋವರ ಒಂದು ವೇಳೆ ಇತ್ತು. ಎಷ್ಟು ನೀರು ಅದರೊಳಗೆ ಹೋಗುತ್ತದೋ ಅಷ್ಟು ತಿರಿಗಿ ಉಗಿಯಾಗಿ ಹೋಗುತ್ತದೆ. ಅದು ೧೮ ಹರುದಾರಿ ಉದ್ದ ೩—೪ ಹರುದಾರಿ ಅಗಲವಾಗಿದೆ. ಅಲ್ಲಿ ಏನೇನೂ ಬೆಳೆಯುವದಿಲ್ಲ. ಹಗಲು ರಾತ್ರಿ ಏನೇನೂ ಸಪ್ಪಳವಾಗುವದಿಲ್ಲ, ಅದರ ನೀರಿನಲ್ಲಿ ಮೀನುಗಳು ಬದುಕಲಾರವು. ಇಲ್ಲಿ ಅಲ್ಲಿ ದಂಡೆಯ ಮೇಲೆ ಗಂಧಕ, ಸೋರುಪ್ಪು, ಉಪ್ಪು, ಭೂಮಿರಾಳ ಗಂಧಕಮಯವಾದ ನೀರಿನ ಜಲೆಗಳು ಪುಟಿಯುವವು. ಈ ಪರಿಯಾಗಿ ಅದು ಇಂದೂ ದೇವರು ದುಷ್ಟರನ್ನ ಶಿಕ್ಷಿಸಿದ್ದಕ್ಕೆ ಒಂದು ಭಯಂಕರ ಸಾಕ್ಷಿ ಆಗಿದೆ. ಅಲ್ಲಿ ಹಾಯುವ ಮಾರ್ಗಸ್ಥರು ಅದನ್ನ ಕಂಡು ಭಯಗೊಳ್ಳುವರು (ಇಬ್ರಿ. ೧೨, ೨೮).—ಅಲ್ಲಿ ಹಾಳಾದ ಪಟ್ಟಣಗಳು (ದ್ವಿತಿ. ೨೯, ೨೩. ಹೊಶೆ. ೧೧, ೮.) ಹೇಳಿ ಅವೆ.—ಈ ನ್ಯಾಯತೀರ್ಪು ಕಡೇ ನ್ಯಾಯತೀರ್ವಿಕೆಗೆ ಮುಂಗುರುತು.—೨೬ ವ. ಬಿಟ್ಟ ಸ್ಥಳದ ಮೇಲೆ ಲೋಟನ ಹೆಂಡತಿಯಲ್ಲಿ ಆಶೆ ಹುಟ್ಟಿತು. ತಡವಾದದರಿಂದ, ಸಿಡಿಲು ಬಡಿದ ಹಾಗೆ ಆಗಿ, ಆಕೆ ನಿಂದಿರಿಕೆಯಲ್ಲಿ ಸತ್ತು, ಕರಿಗಿದ ಕಲ್ಲುಪ್ಪು ಆಕೆಯ ಶರೀರ ಮುಚ್ಚಿ ಹೆಪ್ಪುಗೊಂಡು ಸ್ತಂಭವಾಗಿ ನಿಂತಳು. ನೋಡುವವರಿಗೆ ಆಕೆ ಉಪ್ಪಿನ ಕಂಬದಂತೆ ಕಂಡಳು. ಕಲ್ಲುಪ್ಪಿನ ಬಂಡೆಗಳು ದಿನ್ನೆಗಳು ಇಂದೂ ಅಲ್ಲಿ ತೋರುತ್ತವೆ (ಲೂಕ. ೧೭, ೩೨).

೨೭—೨೯ ವ. ವಿಶೇಷವಾಗಿ ಅಬ್ರಹಾಮನು ದೇವರಿಗೆ ವಿಜ್ಞಾಪನೆ ಮಾಡಿದ ಕಾರಣ, ಲೋಟನಿಗೆ ರಕ್ಷಣೆ ಆಯಿತು.

೮೮) ಲೋಟನೂ ಅವನ ಹೆಣ್ಣು ಮಕ್ಕಳೂ. ೩೦—೩೮.

೩೦ ವ. ಸೊದೋಮ ಭಯಂಕರ ರೀತಿಯಿಂದ ಹಾಳಾದದ್ದನ್ನು ನೋಡಿ, ಅದರ ಸಮೀಪದಲ್ಲಿ ಇರಲಿಕ್ಕೆ ಅಂಜಿದನು. ಹೀಗೆ ದೇವರಲ್ಲಿ ಸ್ಥಿರಗೊಳ್ಳದವರು ಹೊಯಿದಾಡುತ್ತಾರೆ. ಈ ಹೊತ್ತು ಆತುರದಿಂದ ಪಾಪಭೋಗ ಎಂಬ ಶವದ ಮೇಲೆ ಹದ್ದಿನಂತೆ ಎರಗ ಬೇಕು; ನಾಳೆ ಅದರಿಂದ ಹುಟ್ಟುವ ನಷ್ಟ

ಕರವಾದ ಫಲ ಕಂಡಾಗ, ಅದಕ್ಕೆ ಹೇಸಿ, ಬಿಟ್ಟು ಬಿಡಬೇಕು. ಸಂಸಾರ ಪ್ರಪಂಚದೊಳಗೆ ಮೈಮರೆತು ಮುಣುಗುವದಲ್ಲ; ಅದು ಅಗದಿ ಸುಳ್ಳು ಎಂದು ಶೋಸಿಸಿ ಕೊಂಡು, ವನವಾಸಕ್ಕೆ ಹೋಗುವದಲ್ಲ.— ಲೋಟನು ಸೊದೋಮದಲ್ಲಿ ಪಟ್ಟಣವಾಸ ಮಾಡಿದ್ದೊಂದು; ಅದರ ನಿವಾಸಿಗಳ ಕೂಡ ಅಗಸೆಬಾಗಲಲ್ಲಿ ಕೂತು, ಸಲಿಗೆ ಹಚ್ಚಿ ಕೊಂಡದ್ದೊಂದು; ಅವರ ಸಂಗಡ ಬೀಗತನ ಮಾಡಿದ್ದೊಂದು: ಈ ಮೂರರಿಂದ ಎಚ್ಚರ ಮರತನೆಂದು ತಿಳಿಯ ಬರುತ್ತದೆ. ಮರುಳು ಎಷ್ಟು ಇತ್ತೋ, ಅಷ್ಟು ಹೇಸಿಕೆ ಭಯ ಹುಟ್ಟಿ, ದೇವರು ತನಗೆ ನೇಮಿಸಿ ಕೊಟ್ಟ ಆಶ್ರಯಸ್ಥಳವನ್ನೂ ಬಿಟ್ಟು ಹೋಗಿ, ವನವಾಸಿ ಆದನು. ಲೋಟನು ಹೋದ ಗುಡ್ಡ ಸತ್ತ ಸಮುದ್ರದ ಪೂರ್ವದಲ್ಲಿ ಇತ್ತು.

೩೧. ೩೨.—ಎಲ್ಲಾ ಲೋಕದ ಮಾರ್ಗದ ಪ್ರಕಾರ ನಮ್ಮ ಸಹವಾಸ ಮಾಡುವ ಹಾಗೆ, ಭೂಮಿಯ ಮೇಲೆ ಗಂಡಸರು ಇಲ್ಲ) ಚೋವರಿನಲ್ಲಿ ಗಂಡಸರು ಇದ್ದರು. ಆದರೆ ಅವರ ಸಹವಾಸಕ್ಕೆ ಅನುಮಾನ ಮಾಡಿದರು. ತಮಗೆ ಸರಿ ಕಂಡ ಗಂಡಸರು ಇರಲಿಲ್ಲ. ಆದರೂ ತಮ್ಮ ವಂಶ ಆರಿ ಹೋಗ ಬಾರದೆಂಬ ಆಶೆಯಿಂದ (ಮಾಂಸಭೋಗದ ಆಶೆಯಿಂದಲ್ಲ) ಈ ಅಸಹ್ಯ ಪಾಪ ಮಾಡಿದರು.

೩೬—೩೮. ಮೋವಬ್=ತಂದೆಯಿಂದ ಹುಟ್ಟಿದವನು, ಬೆನಮ್ಮಿ=ನನ್ನ ಜನಾಂಗದ ಮಗನು, ಪರಪುಟ್ಟನಲ್ಲ, ಅನ್ಯರಿಂದ ಹುಟ್ಟಿದವನಲ್ಲ ಎಂಬೀ ಹೆಸರುಗಳನ್ನ ಇಟ್ಟು, ತಮ್ಮ ಪಾಪ ಸೂಚಿಸಿ ಕೊಡುವವರು ಆದಲ್ಲಿ, ತಮ್ಮ ಪಾಪ ನೆನಿಸದೆ, ಮಕ್ಕಳನ್ನ ಕಂಡದಕ್ಕೆ ಹರ್ಷಿಸಿದರು ಎಂಬಂತೆ ತೋರುತ್ತದೆ. ಆದರೆ ಬರೆ ಮಕ್ಕಳಾದರೇನು! ಇಂಥಾ ಅಸಹ್ಯ ಸಹವಾಸದಿಂದ ಉದ್ಭವಿಸಿದವರಿಗೆ ಬಹಳವಾಗಿ ತಮ್ಮ ತಂದೆ ತಾಯಿಗಳ ದೋಷ ಹತ್ತುವದು. ಮೋವಬನೂ ಅಮೋನನೂ (=ನೆಂಟ) ಎಂಬಿವರಿಂದ ಜನಿಸಿದ ಜನಾಂಗಗಳಿಗೆ ಅಸಹ್ಯವಾದ ಅಶುದ್ಧತ್ವವು ಒಂದು ಸಹಜ ದೋಷವಾಗಿತ್ತು. ಲೋಟನು ಅವರ ಪೂರ್ವಿಕನಾದ್ದರಿಂದ, ಇಸ್ರಾಯೇಲನವರು ಅವರ ಶೀಮೆಯನ್ನು ತಕ್ಕೊಳ್ಳ ಬಾರದು (ದ್ವಿತಿ. ೨, ೯. ೧೯). ಆದರೆ ಅವರ ವಂಶಕರ್ತರು ಸೂಳೇ ಮಕ್ಕಳಾದ್ದರಿಂದಲೂ, ಅವರಲ್ಲಿ ಅಶುದ್ಧ ಪಾಪಗಳು ನಡೆಯುತ್ತಿದ್ದದರಿಂದಲೂ, ಕರ್ತನ ಸಭೆಯಲ್ಲಿ ಅವರನ್ನ ಕರಕೊಳ್ಳ ಬಾರದಿತ್ತು (ದ್ವಿತಿ. ೨೩, ೩). ಅವರು ಇಸ್ರಾಯೇಲನವರಿಗೆ ನೆರೆಯವರಾಗಿ, ಅವರ ಪ್ರಸ್ತಾಪವು ದೇವರ ಜನಾಂಗದ ಚರಿತ್ರೆಯಲ್ಲಿ ಅನೇಕಾವರ್ತಿ ಬರುವದರಿಂದ, ಅವರು ಉತ್ಪತ್ತಿ ಆದ ವೃತ್ತಾಂತ ಇಲ್ಲಿ ಸಂಕ್ಷೇಪವಾಗಿ ಹೇಳೋಣವಾಯಿತು. ಇಷ್ಮಯೇಲನ ವಂಶಜರಂತೆ ಇವರು ದೇವರ ಜನರಾದ ಇಸ್ರಾಯೇಲನವರಿಗೆ ಹಗೆಯವರು.—ಲೋಟನು ವನವಾಸದಲ್ಲಿಯೂ ಬುದ್ಧಿವಂತನಾಗಲಿಲ್ಲ. ಬರುತ್ತ ಬರುತ್ತಾ ಅವನ ಬುದ್ಧಿ ಕಡಿಮೆ ಆಯಿತು. ಪ್ರಪಂಚಸಂಸಾರಕ್ಕೆ ಅಂಜಿ, ಹೇಡಿಗಳಾಗಿ, ವನವಾಸಕ್ಕೆ ಓಡಿ ಹೋಗುವವರ ವಿಚಾರ ಇದೇ. ಒಂದು ದೆವ್ವ ಹೋಗಿ, ಏಳು ದೆವ್ವಗಳು ಬಂದು ಮನಸಿನೊಳಗೆ ಹೊಕ್ಕಂತೆ ಆಗುವದು.

l) ಅಬ್ರಹಾಮನೂ ಅಬಿಮೇಲೆಕನೂ. ಸಂಧಿ ೨೦.

aa) ಅಬಿಮೇಲೆಕನು ಸಾರಳನ್ನು ಹಿಡಿ ತರಿಸುತ್ತಾನೆ. ೧—೭.

೧ ವ. ಗೆರಾರ ಎಂಬ ಊರು ಫಿಲಿಷ್ಟಿಯರ ದೇಶದಲ್ಲಿ ಕಾನಾನದ ದಕ್ಷಿಣ ಪಶ್ಚಿಮ ಭಾಗದೊಳಗೆ ಇತ್ತು.

೨ ವ. ಕಳುಹಿಸಿ ತರಿಸಿ ಕೊಂಡನು.) ನೋಡು. ೧೨, ೧೩ ಮುಂ. ಅಬ್ರಹಾಮನು ಹೀಗೆ ಮಿಸ್ರದಲ್ಲಿ ಸುಳ್ಳಾಡಿ ೨೦ ವರುಷ ಆಗಿದ್ದವು. ಇಷ್ಟರೊಳಗೆ ವಿಶ್ವಾಸದಲ್ಲಿ ಎಷ್ಟು ಅಭ್ಯಾಸವಾಗಿತ್ತು! ದೇವರ ಬಲವಾದ ಕೃಪೆ ಎಷ್ಟು ಅನುಭವಿಸಿದ್ದನು! ಆದರೂ ಅದೇ ದೋಷಕ್ಕೆ ತಿರಿಗಿ ಗುರಿಯಾಗುತ್ತಾನಲ್ಲ. ಪಾಪದಿಂದ ಕೆಟ್ಟ ಮನುಷ್ಯರ ಹೃದಯ ನೆಲೆ ಇಲ್ಲದಂಥಾದು. ಅದರ ನೆಲೆ ಕಂಡವರಾರು! ಶೋಧನೆ ಎಂಬ ಘಾಳಿ ಅದನ್ನ ಕಲಕ್ಯಾಡಿಸಿದರೆ, ಅದರ ಬುಡದಲ್ಲಿ

ಕೂತಿದ್ದ ಅಸಹ್ಯ ಎಂಬ ಕಸಕಡ್ಡಿ ಮೇಲೆ ಬಂದು ತೇಲಾಡುವವು. ತನ್ನ ಮನಸ್ಸನ್ನು ನೆಚ್ಚಿ ಕೊಳ್ಳುವವನು ಹುಚ್ಚನೇ ಸರಿ! ಅಬ್ರಹಾಮನು ತನ್ನ ಕ್ರಿಯೆಗಳಿಂದಲ್ಲ, ವಿಶ್ವಾಸದಿಂದಲೇ ನೀತಿನಿರ್ಣಯ ಪಟ್ಟದ್ದು ಖರೆ! ಈ ಪಾಪ ಎಂಬ ಹಳ್ಳ ಬಂದು, ಅವನ ಮುಂಚಿನ ಪುಣ್ಯ ಎಂಬ ರಮ್ಯವಾದ ತೋಟ ಹಾದು, ಕೆಡಿಸಿ ಬಿಟ್ಟಿತು. ಅಬಿಮೇಲೆಕನು=ಅರಸನ ತಂದೆ. ಇದು ಆ ಶೀಮೆಯ ಅರಸರಿಗೆ ರೂಢನಾಮವಾಗಿತ್ತು.

೩—೭ವ.—ಅವನು ನನ್ನ ಅಣ್ಣನೆಂದು ಆಕೆಯೂ ಹೇಳಿದ್ದಾಳೆ.) ಆಗ್ಯೆ ಈ ಫಿಲಿಷ್ಟಿಯರು ಇನ್ನು ಸತ್ಯವಾದ ದೇವರಿಗೆ ನಡಕೊಳ್ಳುತ್ತಿದ್ದರು. ಅಬ್ರಹಾಮನು ಸುಳ್ಳಾಡಿದ್ದರಿಂದ, ತೊಡಕು ಬಿದ್ದದ್ದನ್ನು ದೇವರು ತಿರಿಗಿ ಬಿಡಿಸಿ, ಬಗೆ ಹರಿಸ ಬೇಕು.—ತಡೆದೆನು) ನಮ್ಮ ದಾರಿಯಲ್ಲಿ ಮುಳ್ಳು ಬಹಳ. ಆದರೆ ನಾವು ದೇವರಿಗೆ ಯಥಾರ್ಥವಾಗಿ ನಡಕೊಳ್ಳುವದಾದರೆ, ಅವು ನಡದ ಹಾಗೆ, ನಮ್ಮನ್ನು ಕಾಯುತ್ತಾನೆ. ದೇವರು ಈ ಅರಸನನ್ನು ಒಂದು ರೋಗದಲ್ಲಿ ಹಾಕಿ ಸಾರಳನ್ನ ಮುಟ್ಟ ಬಿಡಲಿಲ್ಲ.

bb) ಅಬಿಮೇಲೆಕನು ಸಾರಳನ್ನು ತಿರಿಗಿ ಅಬ್ರಹಾಮನಿಗೆ ಕೊಡುತ್ತಾನೆ. ೮—೧೮.

ಅ) ಅಬಿಮೇಲೆಕನು ಓಲಗಗೊಟ್ಟು ಅಬ್ರಹಾಮನನ್ನು ಹಂಗಿಸುತ್ತಾನೆ. ೮—೧೦.

೯. ೧೦ ವ.—ನೀನು ಏನು ಕಂಡು (ಯಾವ ಕಾರಣದಿಂದ) ಈ ಕೆಲಸ ಮಾಡಿದಿ?) ದೇವರು ನಡುವೆ ಬಾರದಿದ್ದರೆ, ಅಬ್ರಹಾಮನು ಆಡಿದ ಸುಳ್ಳಿನಿಂದ ಈ ಅರಸನು ಹಾದರದ ಅಪರಾಧಕ್ಕೆ ಒಳಗಾಗುತ್ತಿದ್ದನು.

ಬ) ಅಬ್ರಹಾಮನ ಉತ್ತರ. ೧೧—೧೩.

೧೩ ವ. ದೇಶಾಟನೆ ಮಾಡಿಸಿದಾಗ—ಬರುವ ಎಲ್ಲಾ ಸ್ಥಳಗಳಲ್ಲಿ ಇವನು ನನ್ನ ಅಣ್ಣನೆಂದು ಹೇಳು!) ಅಬ್ರಹಾಮನು ತನ್ನ ಭಯ ದೋಷಗಳನ್ನು ಮುಚ್ಚಲಿಕ್ಕೆ ನೆವನ ಹೇಳಿದ ಹಾಗೆ ಸರಿ! ಈ ಅಬಿಮೇಲೆಕನು ಅವನಿಗಿಂತ ಈ ವಿಷಯದಲ್ಲಿ ನೀತಿವಂತನಾಗಿಯೂ ಘನವಂತನಾಗಿಯೂ ತೋರುತ್ತಾನೆ. ಅನ್ಯಜನರೊಳಗೆ ಇಂಥವರು ಅಪರೂಪ.

ಚ) ಅಬಿಮೇಲೆಕನು ಶೀಪ್ತ ಮಾಡಿದ್ದು. ೧೪—೧೮.

೧೫ ವ.—ನಿನಗೆ ಸರಿ ಕಂಡಲ್ಲಿ ವಾಸ ಮಾಡು! ೧೬ ವ.—ಅಂದನು. ಹಾಗೆ ನೀನು ಶುದ್ಧವಾದಿ.) ನಿನ್ನ ಅಣ್ಣನೆಂದು ಹೇಳಿ, ಅಬಿಮೇಲೆಕನು ಹಾಸ್ಯ ಮಾಡುತ್ತಾನೆ. ಈ ದಾನಗಳು ಸಾರಳಿಗೆ ಆದ ಅನ್ಯಾಯ ಮುಚ್ಚಿ, ಮರೆಸಿ, ಆಕೆ ಮಾನವತಿ ಎಂಬುದಕ್ಕೆ ದೃಷ್ಟಾಂತವಾಗಿರ ಬೇಕು. ಅಥವಾ ಅರಸನು ತನಗೆ ಕೊಟ್ಟ ಹಣಕ್ಕೆ ಅಬ್ರಹಾಮನು ಒಂದು ವಸ್ತ್ರ ಕೊಂಡು ಕೊಂಡು, ಸಾರಳಿಗೆ ಕೊಡ ಬೇಕು. ಈಕೆ ಅದನ್ನು ಹೊದ್ದು ಕೊಂಡು, ತನ್ನ ಚಲ್ವಿಕೆಯನ್ನ ಯಾರಾದರೂ ನೋಡಿ, ಆಶೆ ಪಡದ ಹಾಗೆ, ಮಾಡ ಬೇಕು. (೧ ಕೊರಿ. ೧೧, ೧೦.) ಇದು ನಿನ್ನ ಪತಿವ್ರತಕ್ಕೆ ಸಾಕ್ಷಿ ಆಗಿರ ಬೇಕು. ಅಥವಾ ಅಬ್ರಹಾಮನು ಸತ್ಯವನ್ನು ಹೇಳಿ, ಯಾರಾದರೂ ನಿನ್ನನ್ನು ನೋಡಿ, ನಿನಗೆ ಅನ್ಯಾಯ ಮಾಡದ ಹಾಗೆ, ನಿನಗೆ ಆಶ್ರಯವಾಗಿರ ಬೇಕು.

೧೭. ೧೮ ವ. ಆ ರೋಗದ ತರ ಇಲ್ಲಿ ಹೇಳಿ ಅದೆ.—ದೇವರು ಭಕ್ತರಿಗೆ ಪಾಪ ಕ್ಷಮಿಸಿ ಸಹಾಯ ಮಾಡುತ್ತಾನೆ. ಅಬ್ರಹಾಮನು ಪರಿಶುದ್ಧಾತ್ಮನಿಂದ ಪ್ರೇರಿಸಿ ಕೊಂಡು ದೇವರ ವಾಕ್ಯ ನುಡಿಯುವ ಪ್ರವಾದಿ.

೧೧೦ ಇಸಾಕನ ಜನನವೂ ಇಷ್ಮಯೇಲನನ್ನು ಹೊರಗೆ ಹಾಕಿದ್ದೂ.

ಉತ್ಪತ್ತಿ. ೨೧, ೧—೨೧.

m) ಇಸಾಕನ ಜನನ. ೨೧, ೧—೮.

೧ ವ. ಸಾರಳು ಹಡೆದದ್ದು ಪ್ರಕೃತಿ ಬಲದಿಂದಲ್ಲ, ದೇವರ ಕೃಪೆಯಿಂದಲೇ ಆಯಿತು. ಹೇಳುವದೂ ಮಾಡುವದೂ ಆತನಲ್ಲಿ ಕೂಡಾ ನಡೆಯುತ್ತವೆ.

೨ ವ. ಅಬ್ರಹಾಮನಿಗೆ ಅವನ ವಾರ್ಧಿಕ್ಯದಲ್ಲಿ) ಅವನು ೭೫ನೆ ವರುಷದಿಂದ ಹಿಡಿದು ೧೦೦ನೆ ವರುಷದ ತನಕ ದೇವರ ವಾಗ್ದತ್ತವ ಕಾದು ಕೊಳ್ಳ ಬೇಕಾಯಿತು. ದೇವರ ಸಹಾಯಕ್ಕೆ ಎದುರು ನೋಡಲಿಕ್ಕೆ ಬೇಸರ ಬಾರದು. ಆತನು ತನ್ನ ವಚನ ಕೈಕೊಂಡು ನಡಿಸ ನಂಬಿಗೆಯುಳ್ಳಾತನು. ಸಮಯದೊಳಗೆ) (೧೭, ೨೧.)

೩ ವ. ಇಸಾಕನು = ನಗುವನು. ೨೧೦೮ನೆ ವರ್ಷದಲ್ಲಿ ಆದ ಇಸಾಕನ ಜನನದಿಂದ ದೇವರು ಅಬ್ರಹಾಮನನ್ನು ಕರೆದದ್ದು ದೃಢವಾಯಿತು.

೬ ವ.—ಯಾರು ಹೇಳುತ್ತಿದ್ದರು?) ಯಾರೂ ಹೀಗೆ ಹೇಳುತ್ತಿದ್ದಿಲ್ಲ. ಯಾಕಂದರೆ ನಾನು ಮಕ್ಕಳನ್ನು ಹಡಿಯುವ ಹಾಗೆ ಇರಲಿಲ್ಲ. ಆಗದ್ದು ಆಯಿತು. ಮಗನು ಹುಟ್ಟಿದ್ದಕ್ಕೆ, ಆಶ್ಚರ್ಯ ಸಂತೋಷ ಪಟ್ಟು ಹೀಗೆ ಹೇಳುತ್ತಾಳೆ.

೮ ವ. ಎರಡನೆ ಇಲ್ಲವೇ ಮೂರನೆ ವರುಷದಲ್ಲಿ ಮೊಲೆ ಬಿಡಿಸುತ್ತಿದ್ದರು (೧ ಸಮು. ೧, ೨೪). ಈ ಕಾರ್ಯವನ್ನು ಹಬ್ಬದಂತೆ ಆಚರಿಸುತ್ತಿದ್ದರು.

n) ಇಷ್ಮಯೇಲನನ್ನು ಹೊರಗೆ ಹಾಕಿದ್ದು. ೯—೨೧.

೯ ವ. ನಕ್ಕಾಡುವದನ್ನ ನೋಡಿ) ನಕ್ಕಾಡಿ ಇಸಾಕನಿಗೂ ಸಾರಳಿಗೂ ಹಾಸ್ಯ ಮಾಡುತ್ತಿದ್ದನು. ಇಸಾಕನನ್ನು ಬಡಿದು ಹಿಂಸಿಸುತ್ತಿದ್ದನು (ಗಲಾ. ೪, ೨೯). ಇಷ್ಮಯೇಲನು ಸುಮಾರು ೧೫ ವರುಷದವನು ಆದ್ದರಿಂದ, ಬೇಕಾಗಿ ಮಾಡಿದನೆಂದು ಕಂಡು ಬರುತ್ತದೆ. ಇಸಾಕನನ್ನು ಹಿಂಸಿಸಿದಲ್ಲಿ, ದೇವರ ವಾಕ್ಯವನ್ನು ಸುಧಾ ಅಲಕ್ಷ್ಯ ಮಾಡಿದ ಹಾಗೆ ಆಯಿತು. ಇದು ದಿನದಿನಕ್ಕೆ ಹೆಚ್ಚಾಗುತ್ತಾ ಬಂದದರಿಂದ, ಕಡಿಗೆ ತಾಳಲಾಗದ ಹಾಗೆ ಆಯಿತು. ಸಾರಳು ತನ್ನ ಮಗನಾದ ಇಸಾಕನ ಮೇಲೆ ಪ್ರೀತಿ ಮಾಡಿ, ನನ್ನ ಮಗನು ಈ ಇಷ್ಮಯೇಲನಿಂದ ಕೆಟ್ಟಾನೆಂದು ಅಂಜಿ, ಕೆಡಕನನ್ನು ದೂರ ಮಾಡ ಬೇಕೆಂದು ಯೋಚಿಸಿದ್ದು ಸಹಜವೇ. ಆದರೆ ಶಿಟ್ಟಿನಿಂದ ಈ ಮಾತನ್ನ ಅಬ್ರಹಾಮನಿಗೆ ತಿಳಿಸಿದ್ದಾಳಾದೀತು. ಒಳ್ಳೆ ಮಾತು ಎಂಬ ಹಾಲಿನಲ್ಲಿ ಹೊಟ್ಟೆಕಿಚ್ಚು ಶಿಟ್ಟು ಪಕ್ಷಪಾತ ಎಂಬ ಹುಳಿ ಅನೇಕಾವರ್ತಿ ಬಿದ್ದು, ಕೆಡಿಸುವದು. ಈ ಕಾರಣದಿಂದಲೂ, ತನ್ನ ಹೊಟ್ಟೀಲಿ ಹುಟ್ಟಿದ ಮಗನ ಮೇಲೆ ಪ್ರೀತಿ ಮಾಡುವದು ಬಿಡದ ಧರ್ಮವಾದದರಿಂದಲೂ, ಸಾರಳ ಮಾತು ಅಬ್ರಹಾಮನ ಮನಸನ್ನ ನೋಯಿಸಿತು. ಸಾರಳ ಮಾತು ತೆಂಗಿನ ಕಾಯಿಯಂತೆ, ಮಾತಿನ ತರ, ಚಿಪ್ಪಿನಂತೆ, ಕಠಿಣ, ಅದರ ಅಭಿಪ್ರಾಯ, ಕೊಬ್ಬರಿಯಂತೆ, ಚಲೋದು. ಚಿಪ್ಪನ್ನ ಒಡೆದು ಒಳಗಣ ಕೊಬ್ಬರಿ ತಕ್ಕೋ ಎಂಬದಾಗಿ ಆಕೆ ಹೇಳಿಕೊಂಡದ್ದು ಮಾಡೆಂದು ದೇವರು ಕನಸಿನಲ್ಲೇನೋ ಅವನಿಗೆ ನಿರೂಪಿಸಿದನು. ಪ್ರತಿ ಪಕ್ಷಿಯ ಶಿಟ್ಟಿನ ಮಾತಿನಲ್ಲ್ಯಾದರೂ ಸತ್ವವಿದ್ದರೆ, ಕೇಳ ಬೇಕು. ಅಬ್ರಹಾಮನಿಗೆ ಮನೇ ಮಾತು ಅಷ್ಟು ಗೊತ್ತಿದ್ದಿಲ್ಲ. ಹೆಂಡರಿಗೆ ಮಕ್ಕಳಾಟಿಕೆ ಎಲ್ಲಾ ತಿಳಿದದೆ. ಅವರು ವಿಶೇಷವಾಗಿ, ತಮ್ಮ ಮಕ್ಕಳು ಕೆಟ್ಟ ಸಂಗತಿಗೆ ಬೀಳದ ಹಾಗೆ, ನೋಡಿ ಕೊಳ್ಳ ತಕ್ಕದ್ದು ಅದೆ.

೧೪ ವ. ಕಾನಾನದ ದಕ್ಷಿಣದಲ್ಲಿ ಇದ್ದ ಬೇರ್ಷೆಬ ಎಂಬ ಅರಣ್ಯದ ವಿಷಯಕ್ಕೆ ನೋಡು ೩೧ ವ.

೧೫. ೧೬ ವ.—ಅವಳು ಹುಡುಗನನ್ನು ಗಿಡಗಳಲ್ಲಿ ಒಂದರ ಕೆಳಗೆ ಇಟ್ಟು—ಹುಡುಗನು ಸಾಯುವದನ್ನು ನಾನು ನೋಡಲಾರನೆಂದು ಮುಂ.

೧೭ ವ. ಇಷ್ಮಯೇಲನು ತನ್ನ ತಾಯಿಯ ಕೂಡ ಅತ್ತಿದ್ದಾನು, ಪ್ರಾರ್ಥನೆ ಮಾಡಿ ಕೊಂಡಿದ್ದಾನು; ಮನುಷ್ಯಸಂಚಾರವಿಲ್ಲದ ಅರಣ್ಯದಲ್ಲಿ ಒಂದು ಪೊದೆಯ ಕೆಳಗೆ ಇದ್ದರೂ, ದೇವರು ಅವನನ್ನು ನೋಡಿ ಕೇಳಿದ್ದಾನೆ. ಆತನು ಸರ್ವ ವ್ಯಾಪಕನಾಗಿದ್ದಾನೆ.

೧೯ ವ.—ನೀರು ತುಂಬಿ) ಈ ಭಾವಿಯನ್ನು ಯಾರಾದರೂ ಮಾಡಿದ್ದಾರು.

೨೦—೨೧ ವ.—ಫಾರಾನಿನ ಅರಣ್ಯದಲ್ಲಿ—ತಾಯಿ ಅವನಿಗೆ ಮಿಜ್ರ ದೇಶದೊಳಗಿಂದ ಒಬ್ಬಾಕೆಯನ್ನ ಮದಿವೆ ಮಾಡಿ ಕೊಟ್ಟಳು.) ಇದರಿಂದ ಅವನು ಪರಿಶುದ್ಧ ಕುಟುಂಬಕ್ಕೆ ಬಹಿಷ್ಕಾರವಾದನು.

o) ಅಬ್ರಹಾಮನು ಅಬಿಮೇಲೆಕನ ಸಂಗಡ ಒಡಂಬಡಿಕೆ ಮಾಡಿದ್ದು. ೨೧, ೨೨—೩೪.

೨೩ ವ.—ನನ್ನ ಮಕ್ಕಳಿಗೂ ಮೊಮ್ಮಕ್ಕಳಿಗೂ ವಂಚನೆ ಮಾಡುವದಿಲ್ಲವೆಂದು—) ಅಬ್ರಹಾಮನು ದೇವರ ಆಶೀರ್ವಾದದಿಂದ ಸಂಪತ್ತಿನಲ್ಲಿ ಬಲಿಷ್ಟನಾದದ್ದನ್ನು ಅಬಿಮೇಲೆಕನು ನೋಡಿ, ದೇಶವೆಲ್ಲಾ ಅವನಿಗೆ ವಶವಾದೀತು ಎಂದು ಅನುಮಾನ ಮಾಡಿದನು. ಅಬ್ರಹಾಮನು ಅಪಕಾರ ಮಾಡುವವನಲ್ಲ. ಅನುಮಾನ ತೀರಿಸುವ ಉದ್ದಿಶ್ಯ, ಪ್ರಮಾಣ ಮಾಡುತ್ತಾನೆ. ನೀನು ದೇವರಿಗೆ ನಡಕೊಂಡು, ಆತನ ಆಶೀರ್ವಾದ ಅನುಭವಿಸುವದಾದರೆ, ನೀನು ಲೋಕಕ್ಕೆ ಅಂಜುವದಿಲ್ಲ, ಲೋಕವು ನಿನಗೆ ಅಂಜುವದು.

೨೫—೨೬ ವ. ಅಬ್ರಹಾಮನು ಸಮಾಧಾನ ಮಾಡಲಿಕ್ಕೆ ಸಿದ್ಧನು ಆಗಿದ್ದಾಗ್ಯೂ, ಅನ್ಯಾಯಕ್ಕೆ ಸುಮ್ಮನೆ ಇರಲಿಲ್ಲ. ಸಮಾಧಾನವಿರಲೆಂದು, ನಡೆಯುವ ಅನ್ಯಾಯ ತಿಳಿಸದಂಥಾ ಮೂಕನಾಯಿಗಳು ನಾವು ಆಗ ಬಾರದು.

೩೧ ವ. ಬೇರ್ಷೆಬ=ಏಳು ಭಾವಿ. ಆ ಏಳು ಕುರಿಮರಿಗಳ ದೆಶೆಯಿಂದ ಹೀಗೆ ಎನಿಸಿತು. ಇಲ್ಲವೆ ಆಣೇ ಭಾವಿ. ಯಾಕಂದರೆ ಅಲ್ಲಿ ಆಣೆ ಆಯಿತು. ಈ ಭಾವಿಯಿಂದ ಅಬ್ರಹಾಮನಿಗೆ ಬಹಳ ಉಪಯೋಗವಾಯಿತು. ಈ ಸ್ಥಳದಲ್ಲಿ ಇಂದೂ ಮಾರ್ಗಸ್ಥರು ತಿಳಿನೀರಿನ ದೊಡ್ಡ ಜಲೆಯುಳ್ಳ ಎರಡು ಭಾವಿಗಳನ್ನ ಕಂಡಿದ್ದಾರೆ.

೩೩ ವ. ಇಂದಿನಿಂದ ಅಬ್ರಹಾಮನಿಗೆ ಹೆಚ್ಚು ಅವಕಾಶವಾಯಿತು.

p) ದೇವರು ಇಸಾಕನನ್ನು ಬಲಿ ಅರ್ಪಿಸ ಹೇಳಿ, ಅಬ್ರಹಾಮನನ್ನು ಶೋಧಿಸಿದ್ದು. ೨೨, ೧—೧೯.

aa) ಬಲಿ ಅರ್ಪಣೆ. ೨೨, ೧—೧೪.

೧ ವ.—ಅಬ್ರಹಾಮನನ್ನ ಶೋಧಿಸಿ ಅವನಿಗೆ—) ಶೋಧನೆ ಅಂದರೆ ಸುವಾಸನೆ ಅದೆಯೋ ದುರ್ವಾಸನೆ ಅದೋ ಮೂಸಿ ನೋಡಿ ವಿಚಾರಿಸುವದು; ಅಥವಾ ಗಟ್ಟಿಯೋ ಮೆತ್ತಗೋ ಮುಟ್ಟಿ ನೋಡಿ ವಿಚಾರಿಸುವದು; ಇಲ್ಲವೆ ಬೆಳ್ಳಿ ಭಂಗಾರದಂತೆ ಕರಗಿಸಿ ಚೊಕ್ಕವೊ ಕೊಟ್ಟಿಯೊ ಎಂದು ವಿಚಾರಿಸುವದು. ಬಂದದ್ದು ಎಷ್ಟು ಹೋದದ್ದು ಎಷ್ಟು ಎಂದು, ನಾವು ನಮ್ಮ ಮನಸಿನ ಲೆಖ್ಖ ತಿಳುಕೊಳ್ಳುವದೊಂದು; ನಾವು ವಿಶ್ವಾಸದಲ್ಲಿ ಸಾಧಕ ಮಾಡಿ ಬಲಿಯುವದೊಂದು: ಈ ಎರಡು ದೇವರು ನಮ್ಮನ್ನು ಶೋಧಿಸೋಣದರಿಂದ ಆಗ ಬೇಕು. ಹೀಗೆ ದೇವರು ನಮ್ಮನ್ನು ಒಳ್ಳೇದಕ್ಕೆ ಶೋಧಿಸುತ್ತಾನೆ. ಮೈಮರೆತು ಭ್ರಮೆಗೊಂಡು ಆತ್ಮದಲ್ಲಿ ಬಲಗುಂದಿದವರಾಗ ಬೇಕೆಂದು ಪಿಶಾಚನು ನಮ್ಮನ್ನು ಶೋಧಿಸುತ್ತಾನೆ. ನಮ್ಮ ಆತ್ಮಭಾವ ಅಳಿಯಲಿಕ್ಕೆ ಪಿಶಾಚನು ಶೋಧಿಸುತ್ತಾನೆ, ಅದನ್ನ ಬೆಳಸಲಿಕ್ಕೆ ದೇವರು ಶೋಧಿಸುತ್ತಾನೆ. ಅಭ್ಯಾಸ ಸಾಗಿದಷ್ಟು ದೇವರು ಪಾಠ ಹೇಳುತ್ತಾನೆ. ಇಂಥಾ ಕಠಿಣ ಪಾಠ ಓದಿ ಒಪ್ಪಿಸ ಬೇಕಾದರೆ, ಮುಂದಾಗಿ ಅಭ್ಯಾಸ ಬಹಳ ನಡೆದಿರ ಬೇಕು. ಸಮಾಧಾನವಿರುವಾಗಲೇ, ದೇವರಲ್ಲಿ ನೆಚ್ಚಿಕೊಂಡು ಊರಿಕೋ! ಹಾಗಾದರೆ ಶೋಧನೆ ಎಂಬ ಬಿರುಘಾಳಿ ಬೀಸಿದರೆ, ನೀನು ದೇವರಲ್ಲಿ ಹೆಚ್ಚು ಸ್ಥಿರಗೊಳ್ಳುತ್ತಿ ಅಲ್ಲದೆ, ಕಿತ್ತುಕೊಂಡು ಬೀಳೋಣಿಲ್ಲ.

೨ ವ. ಮೋರಿಯ) ಕಾಲಾಂತರದಲ್ಲಿ ಮೋರಿಯ ಎಂದೆನಿಸಿದ ಗುಡ್ಡದ ಸುತ್ತಮುತ್ತಲಿನ ಪ್ರಾಂತ್ಯ. ಈ ಗುಡ್ಡದ ಮೇಲೆ ಅಬ್ರಹಾಮನು ಬಲಿ ಅರ್ಪಿಸಿದನು. ಆ ಮೇಲೆ ಸೊಲೊಮೋನನು ದೇವಾಲಯ ಕಟ್ಟಿಸಿದನು. ಅಬ್ರಹಾಮನು ಇದ್ದ ಬೇರ್ಷೆಬಕ್ಕೂ ಇ

೧೧೨ ಅಬ್ರಹಾಮನು ಇಸಾಕನನ್ನು ಬಲಿ ಅರ್ಪಿಸ ಹೋದದ್ದು.

ಉತ್ಪತ್ತಿ. ೨೨, ೧—೨೧.

ದಕ್ಕೊ ೧೪ ಹರದಾರಿ ದೂರವಿತ್ತು.— ಹೇಳಿದ ಬೆಟ್ಟಗಳೊಂದರ ಮೇಲೆ ದಹನಬಲಿಯಾಗಿ ಅರ್ಪಿಸಿದನು.) ವಾಗ್ದತ್ತದ ಪ್ರಕಾರ ತನಗೆ ಜನಿಸಿದ ಮಗನ ಮೇಲೆ ಅಬ್ರಹಾಮನಲ್ಲಿ ಬಹಳ ಪ್ರೀತಿ ಹುಟ್ಟಿ, ಮೋಹನವಾಗಿ, ದೇವರ ಮೇಲೆ ಇಡ ತಕ್ಕಂಥಾ ಪ್ರೀತಿ ಕುಂದಿ ಹೋಗುವ ಹಾಗೆ ಇದ್ದದ್ದೊಂದು; ಮಗನನ್ನು ಕಂಡ ಬಳಿಕ, ಆಯಿತೆಂದು ಎಚ್ಚರಿಕೆ ವಿಶ್ವಾಸ ತಪ್ಪುವ ಹಾಗೆ ಇದ್ದದ್ದೊಂದು: ಹೀಗೆ ಎರಡು ವಿಧದ ಗಂಡಾಂತರ ಅಬ್ರಹಾಮನಿಗೆ ಇತ್ತು. ಅದಕ್ಕೆ ದೇವರು ಅವನ ಪ್ರೀತಿಯನ್ನೂ ವಿಶ್ವಾಸವನ್ನೂ, ಪರೀಕ್ಷಿಸುತ್ತಾನೆ. ಮಗನ ಮೇಲಣ ಪ್ರೀತಿಗಿಂತ ದೇವರ ಮೇಲೆ ಹೆಚ್ಚು ಪ್ರೀತಿ ಇರ ಬೇಕು; ಮಗನು ಕಣ್ಣಿನ ಮುಂದೆ ಇದ್ದಾಗ್ಯೂ, ದಿನ ದಿನಕ್ಕೆ ದೇವರೇ ಅವನನ್ನ ಉಳಿಸ ಬೇಕೆಂದು, ಮರೆಯದೆ, ಹೊಸತಾಗಿ ಈ ಪುತ್ರದಾನವನ್ನು ಆತನ ಕೈಯಿಂದ ವಿಶ್ವಾಸದಿಂದ ತಕ್ಕೊಳ್ಳುವವನಾಗ ಬೇಕು. ದೇವರು ಪ್ರೀತಿಯಿಂದ ನಮಗೆ ಕೊಟ್ಟ ಪುತ್ರಾದಿ ದಾನಗಳಿಂದ ಬಹುಶಾ ನಾವು ಮೋಹಗೊಂಡು, ದೇವರನ್ನ ಮರೆಯುವೆವು. ನಾವು ಬಯಸಿದ್ದಾಯಿತು, ದೇವರು ಇನ್ನು ಯಾಕೆ ಬೇಕು ಎಂಬಂತೆ, ನಾವು ವಿಶ್ವಾಸ ಕಳಕೊಳ್ಳುವೆವು. ಇದರ ಸಲುವಾಗಿ ಆತನು ಒಂದು ವೇಳೆಯಲ್ಲಿ ತನ್ನ ದಾನವನ್ನು ತಿರಿಗಿ ಕಸಕೊಳ್ಳುವ ಹಾಗೆ ಮಾಡಿ, ನಮ್ಮ ಪ್ರೀತಿ ವಿಶ್ವಾಸ ಪರೀಕ್ಷಿಸುತ್ತಾನೆ. ಅಜ್ಞಾನಿಗಳಲ್ಲಿ ನಡೆಯುವ ನರಬಲಿ ದೇವರಿಗೆ ಅಸಹ್ಯವೇ ಸರಿ. ಆತನು ಅದನ್ನ ನಿಷೇಧಿಸಿದ್ದಾನೆ. ಇಸಾಕನನ್ನು ಪಶುವಿನಂತೆ ಕೊಯಿದು ಅರ್ಪಿಸ ಬೇಕೆಂಬದು ದೇವರ ಮನಸಿನಲ್ಲಿ ಇದ್ದಿಲ್ಲ. ಆದರೂ ಅಬ್ರಹಾಮನಿಗೆ ಆತನ ವಾಕ್ಯದ ಮೇಲಿಂದ ಹೀಗೆ ಕಂಡು ಬಂದಿತ್ತು. ದೇವರನ್ನ ಒಲಿಸುವ ಉಪಾಯ ಕಾಣದಕ್ಕೆ, ನರಬಲಿ ಶ್ರೇಷ್ಠವಾದದ್ದು; ಅದನ್ನ ಅರ್ಪಿಸಿದರೆ, ದೇವರು ಒಲಿದಾನು ಅಂತ, ಕಾನಾನದವರು ಅದನ್ನು ಅರ್ಪಿಸುತ್ತಿದ್ದರು. ಅದರಂತೆ ಅಬ್ರಹಾಮನೂ ತನಗೆ ಉತ್ತಮೋತ್ತಮವಾದದ್ದನ್ನು ಮನಸಿನಿಂದ ಕೊಟ್ಟು, ಅದರ ಆಶೆ ಬಿಟ್ಟು ಬಿಡ ಬೇಕಾಗಿತ್ತು. ಅಬ್ರಹಾಮನು ಪ್ರೀತಿಯಲ್ಲಿಯೂ ವಿಶ್ವಾಸದಲ್ಲಿಯೂ ಪರೀಕ್ಷಿತನಾದನು. ದೇವರು ಮಗನಿಗಿಂತ ನನಗೆ ಪ್ರಿಯನು; ಈ ಮಗನನ್ನು ಕೊಡ ಬೇಕಾದರೂ, ಬೇರೊಬ್ಬನನ್ನು ಕೊಟ್ಟು, ಇಲ್ಲವೇ ಸತ್ತಂಥವನನ್ನ ತಿರಿಗಿ ಬದುಕಿಸಿ, (ಇಬ್ರಿ. ೧೧, ೧೯.) ತನ್ನ ಮಾತನ್ನು ನಡಿಸುವನೆಂಬಂತೆ ಪ್ರೀತಿ ವಿಶ್ವಾಸ ಪ್ರಜ್ವಲಿಸಿ, ಮುಸುಕಿದ ಅನುಮಾನವೆಂಬ ಮಂಜನ್ನು ನೀಗಿ ಬಿಟ್ಟವು.

೫ ವ.—ಹೋಗಿ ಆರಾಧಿಸಿ, ನಿಮ್ಮ ಬಳಿಗೆ ಬರುತ್ತೇವೆ—) ಹೀಗೆ ಅಂದಲ್ಲಿ, ಏನಾದರೂ ಒಂದು ರೀತಿಯಿಂದ ನನ್ನ ಮಗನನ್ನ ಬದಕಿಸಿ ಕೊಟ್ಟಾನು ಎಂದು ಅಬ್ರಹಾಮನು ನಂಬಿದನೆಂದು ತಿಳಿಯ ಬರುತ್ತದೆ. ಸಂಶಯ ಎಂಬ ಮೋಡ ಹರಿದು ಒಂದಿಷ್ಟು ಬೆಳಕು ಬಿದ್ದ ಹಾಗಾಗಿತ್ತು. ಅರ್ಪಣೆ ಆಗ ತಕ್ಕ ಸ್ಥಳ ಯಾವದೊಂದು ದಿವ್ಯ ಸೂಚನೆಯಿಂದ ಗೊತ್ತಾಯಿತು (೪). ಈ ಪರಿಶುದ್ಧ ಕಾರ್ಯ ನಡೆಯುವಾಗ್ಯೆ, ಅರಿಯದವರು ಇರ ಬಾರದೆಂದು ಸೇವಕರನ್ನ ಇಳ್ಲಿ ಬಿಟ್ಟನು.

೭. ೮ ವ. ಇಸಾಕನು ಹೀಗೆ ಹೇಳುತ್ತಿರಲಿಕ್ಕೆ, ತಂದೆಯ ಹೃದಯ ಒಂದು ಕಠಾರಿ ತಿವಿದ ಹಾಗೆ ಆಗಿದ್ದೀತು. ಮಕ್ಕಳು ಅಕಾಲಮರಣದಿಂದ ಸಾಯಲಾದರೆ, ತಂದೆ ತಾಯಿಗಳು ಅಬ್ರಹಾಮನಂತೆ ದುಃಖ ಅನುಭವಿಸುತ್ತಾರೆ. ಅವನಂತೆ ದುಃಖೋಪಶಮನ ಮಾಡಿ ಕೊಳ್ಳ ತಕ್ಕದ್ದು.

೧೧. ೧೨ ವ.—ಹುಡುಗನ ಮೇಲೆ ಕೈ ಹಾಕ ಬೇಡ—ನನಗೆ ಕೊಡದೆ ಇರಲಿಲ್ಲ ಮುಂ.) ಒಡಂಬಡಿಕೆಯ ದೇವರಾದ ಯೆಹೋವನ ದೂತನು ಬಂದನು. ಈ ಸಂಧಿಯಲ್ಲಿ ಇಲ್ಲಿ ತನಕ ಮನುಷ್ಯರಿಗೆ ಮಿಕ್ಕಿರುವ ದೇವರು ಎಂಬ ಭಯಂಕರವಾದ ಶಬ್ದ ವರ್ತಿಸುತ್ತಿತ್ತು. ಶೋಧನೆಯಲ್ಲಿ ಅಬ್ರಹಾಮನು ಪರೀಕ್ಷಿತನಾದನಂತರ, ಕೃಪೆಯುಳ್ಳ ಯೆಹೋವ ಎಂಬ ಶಬ್ದ ವ್ಯವಹರಿಸುವದು. ತನ್ನ ಒಬ್ಬನೆ ಮಗನನ್ನ ಲೋಕರಕ್ಷಣಾರ್ಥವಾಗಿ ಕೊಟ್ಟ ದೇವರಿಗೆ ಅಬ್ರಹಾಮನು ಈ ಪರಿ ಮುಂಗುರುತ್ತಾದನು (ರೋಮ. ೮, ೩೨).

೧೩ ವ. ಒಂದು ಟಗರು ಕೊಂಬುಗಳಿಂದ ಮುಂ.) ದೇವರು ಮಗನನ್ನು ಹೊಸತಾಗಿ ಬದಕಿಸಿ ಕೊಟ್ಟ ಹಾಗೆ ಆಯಿತು. ದೇವರ ಸೇವೆಗಾಗಿ ಅರ್ಪಿಸಿ ಕೊಟ್ಟರೆ, ನರಬಲಿ ಅರ್ಪಿಸಿದಂತಾಗುವದು (೧ ಸಮು.

೧, ೨೫. ನ್ಯಾಯಾಧಿ. ೧೧, ೩೧). ಸತ್ಯ ನರಬಲಿ ಆದ ಕ್ರಿಸ್ತನಿಗೆ ಇಸಾಕನು ಮುಂಗುರುತು. ಆತನು ಬರುವ ತನಕ ಪಶುಬಲಿ ನಡಿಯ ಬೇಕು ಎಂಬ ಸೂಚನೆ ಇಲ್ಲಿ ತೋರುತ್ತದೆ. ತನ್ನ ಮನಸ್ಸನ್ನೆಲ್ಲಾ ದೇವರಿಗೆ ಒಪ್ಪಿಸಿ ಬಿಡುವದು ಇದು ಬಲಿಯ ಮೂಲಾಭಿಪ್ರಾಯ.

೧೪ ವ. ಕರ್ತನು ನೋಡುತ್ತಾನೆ = ನೋಡಿ ಕೊಳ್ಳುತ್ತಾನೆ, ಕಾಯುತ್ತಾನೆ ಎಂಬರ್ಥವುಳ್ಳ ಹೆಸರನ್ನು ಇಟ್ಟನು. ನೋಡಲ್ಪಡುವದು = ಕರ್ತನು ಸಹಾಯಕ್ಕಾಗಿ ಕಾಣಿಸಿ ಕೊಳ್ಳುತ್ತಾನೆ.

bb) ದೇವರು ಅಬ್ರಹಾಮನಿಗೆ ವಾಗ್ದತ್ತವನ್ನು ಮತ್ತೂ ದೃಢ ಪಡಿಸಿದ್ದು. ೧೫—೧೯.

೧೬ ವ. ಮನುಷ್ಯರು ದೇವರ ಮೇಲೆ ಆಣೆ ಇಡುತ್ತಾರೆ. ದೇವರು ತನ್ನ ಮೇಲೆ ಆಣೆ ಇಡುತ್ತಾನೆ. ಯಾಕಂದರೆ ತನಗಿಂತ ದೊಡ್ಡವರು ಇರುವದಿಲ್ಲ. ಮನುಷ್ಯರಿಗೆ ಭರವಸವಾಗುವ ಹಾಗೆ, ಆತನು ಹೀಗೆ ಮಾಡುತ್ತಾನೆ.

೧೭. ೧೮ ವ. ಶತ್ರುಗಳ ಬಾಗಲನ್ನು) ಅಗಸೆ ಬಾಗಲು ತಕ್ಕೊಂಡ ಮೇಲೆ, ಊರನ್ನ ತಕ್ಕೊಂಡ ಹಾಗೆ ಸರಿ! ತಮ್ಮ ವೈರಿಗಳನ್ನ ಜಯಿಸಿ ವಶ ಮಾಡಿ ಕೊಳ್ಳುವರು. ಇದು ವಿಶೇಷವಾಗಿ ಕ್ರಿಸ್ತನಿಂದ ಒದಗಿ ಬಂತು. ನಕ್ಷತ್ರಗಳು = ಅಬ್ರಹಾಮನ ಆತ್ಮಕ ವಂಶಜರಾದ ಭಕ್ತರು. ಮರಳು = ಸ್ವಭಾವಿಕವಾದ ವಂಶಜರು. — ಅಬ್ರಹಾಮನು ತೋರಿಸಿದ ವಿಶ್ವಾಸ ವಿಧೇಯತ್ವಗಳಿಂದ ದೇವರು ಮೊದಲು ಕೊಟ್ಟ ವಾಗ್ದತ್ತವು ಅವನಿಗೆ ಹೆಚ್ಚು ಸ್ಥಿರವಾಯಿತು. ಅದಕ್ಕೆ ಯೋಗ್ಯನಾದನು. ಇದು ದೇವರು ಅಬ್ರಹಾಮನಿಗೆ ಹೇಳಿದ ಕಡೇ ಪ್ರಕಟಣೆ. ಈ ಪರಿ ಇನ್ನು ಉಳಿದಿರುವ ದಾರಿಗೆ ದೇವರು ಅವನಿಗೆ ಬುತ್ತಿ ಕಟ್ಟಿ ಕೊಟ್ಟಂತಾಯಿತು. ಅವನ ವಿಶ್ವಾಸ ಕ್ರಿಯೆಗಳಿಂದ ಸಂಪೂರ್ಣವಾಯಿತು (ಯಾಕೊ. ೨, ೨೨). ಇವು ವಿಶ್ವಾಸ ಎಂಬ ಮೂಲದಿಂದ ಬೆಳೆದ ಫಲಗಳು. ಮಗನನ್ನು ಅರ್ಪಿಸಿದಲ್ಲಿ, ಅವನ ವಿಶ್ವಾಸ ತುದಿ ಮುಟ್ಟಿತು. ಸಾಧಕದಿಂದ ವಿಶ್ವಾಸ ಬಲಿಯುವದು. ವಿಶ್ವಾಸವಿಲ್ಲದೆ ಫಲವಿಲ್ಲ, ಫಲವಿಲ್ಲದೆ ವಿಶ್ವಾಸವಿಲ್ಲ. ದೇವರಿಗೆ ಸಲ್ಲದ ನೀತಿಯನ್ನ ಖಂಡಿಸುವದಕ್ಕಾಗಿ, ಪೌಲನು ದೇವರಿಗೆ ಸಲ್ಲುವ ನೀತಿಯ ಮೂಲವನ್ನ (ವಿಶ್ವಾಸ) ವಿಚಾರಿಸುತ್ತಾನೆ (ರೋಮಾ. ೪, ೨೩). ಅಲ್ಲದ ವಿಶ್ವಾಸ ಖಂಡಿಸುವದಕ್ಕಾಗಿ, ಯಾಕೋಬನು ಸದ್ವಿಶ್ವಾಸ ಎಂಬ ಮೂಲದಿಂದ ಉದ್ಭವಿಸುವ ಕ್ರಿಯೆ ನೀತಿ ಎಂಬ ಫಲವನ್ನ ತೋರಿಸುತ್ತಾನೆ.

q) ರೆಬೆಕ್ಕಳು. ೨೨, ೨೦—೨೪. (ನಾಹೊರನ ಸಂತತಿ).

ಟಿಪ್ಪಣಿ: ೧೧, ೨೭ ಹೇಳಿದ್ದನ್ನ ವಿಸ್ತರಿಸುತ್ತಾನೆ. ೨೪ನೆ ಸಂಧಿ ತಿಳಿಯುವ ಹಾಗೆ, ರೆಬೆಕ್ಕಳ ಜನನ ಹೇಳ ಬೇಕಾಯಿತು. ನಾಹೊರನಿಗೆ ಜನಿಸಿದ ಮಕ್ಕಳು ೧) ಊಜನು. ಇವನು ಯೋಬನ ಪೂರ್ವಜನು. ಇಲ್ಲವೆ ಮೇಸೊಪೊತಾಮಿಯದ ಕಡೆಗೆ ವಾಸ ಮಾಡುತ್ತಿದ್ದ ಅರಬಿಯರ ಪೂರ್ವಜನು. ೨) ಬೂಜನು ಅರಬಿಯದಲ್ಲಿ ಇದ್ದನು. ೩) ಕೆಮುವೇಲನು. ಇವನ ಸಂತಾನದವರು ಶೇಮನ ೫ನೇ ಮಗನಾದ ಆರಮನೂ, (೧೦, ೨೨.) ಅವನ ವಂಶದವರೂ ಹಿಡಕೊಂಡ ಈಗ ಸೂರ್ಯ ಎಂದೆನಿಸುವ ದೇಶದಲ್ಲಿ ವಾಸ ಮಾಡುತ್ತಿದ್ದದರಿಂದ, ಅವರಿಗೆ ಆರಮ (= ಸೂರ್ಯದವರು) ಎಂದು ಹೆಸರಾಗಿ, ಕೆಮುವೇಲನು ಆರಮನ (= ಸೂರ್ಯದವರ) ತಂದೆ ಎಂದು ಅನ್ನಿಸಿ ಕೊಳ್ಳುತ್ತಾನೆ. ಬೆತುವೇಲನೂ (೨೫, ೨೦.) ಲಾಬಾನನೂ (೩೧, ೨೪.) ಅಬ್ರಹಾಮನೂ (ದ್ವಿತಿ. ೨೬, ೫.) ಆರಮದವರು (ಸೂರ್ಯದವರು) ಎಂಬ ನಾಮದಿಂದ ಕರೆಯಲ್ಪಡುತ್ತಾರೆ. ೪) ಕೇಸದನು. ಇವನು ಕಸ್ದಿಯರಿಗೆ (ಕಲ್ದೀಯರಿಗೆ) ವಂಶಕರ್ತನು. ಉಳಿಕೆಯವರ ವಿಷಯಕ್ಕೆ ಹೆಚ್ಚಿಗೆ ವರ್ತಮಾನವಿಲ್ಲ.

ಉತ್ಪತ್ತಿ. ೨೩.

r) ಸಾರಳ ಮರಣ. ಸಂಧಿ ೨೩.

೧ ವ. ಸಾರಳು ವಿಶ್ವಾಸಿಗಳ ತಾಯಿ. ತಾಯಿ
ತೀರಿ ಕೊಳ್ಳುವಾಗ್ಯೆ, ಇಸಾಕನು ೩೭ ವರ್ಷದವನಾ
ಗಿದ್ದನು. ಯಾಕಂದರೆ ಆಕೆ ೯೦ ವರ್ಷದವಳಾಗಿ
ಇಸಾಕನನ್ನು ಹಡೆದಳು. ಹಿಂದಿನ ಸಂಧಿಯಲ್ಲಿ ಹೇ
ಳಿದ್ದಕ್ಕೂ, ಇಲ್ಲಿ ವಿವರಿಸಿದ್ದಕ್ಕೂ, ಹಲವು ವೃತ್ತಾಂ
ತ ನಡೆದಿರ ಬೇಕು. ಕಿರ್ಯತರ್ಬ ಎಂಬದು ಹೆಬ್ರೋ
ನ ಸ್ಥಳದ ಮುಂಚಿನ ಹೆಸರು. ಮುಂಚೆ ವಾಸ ಮಾ
ಡಿದ (೧೩, ೧೮.) ಹೆಬ್ರೋನಿಗೆ ಅಬ್ರಹಾಮನು ಬೇ
ರ್ಷೆಬದಿಂದ ಅಷ್ಟರೊಳಗೆ ತಿರಿಗಿ ಬಂದಿದ್ದನು.—
ಆ ದೇಶದ ಮರ್ಯಾದಿಗೆ ಅನುಸಾರವಾಗಿ, ಹೆಣಕ್ಕೆ ಎ
ದುರಾಗಿ ಕೂತು, ಇಲ್ಲವೆ ನೆಲಕ್ಕೆ ಬಿದ್ದಿದ್ದು, ಅಬ್ರಹಾ
ಮನು ಎದೆ ಬಡಕೊಳ್ಳುತ್ತಾ, ಅಳುತ್ತಾ, ತನ್ನ ದುಃಖ
ತೋರಿಸುತ್ತಿದ್ದನು. ಆದರೆ ದೇವರನ್ನ ಹಾರೈಸಿ ಕೊಂ
ಡ ಭಕ್ತರಿಗೆ ತಕ್ಕಂತೆ ಮಿತಿಯೊಳಗೆ ದುಃಖ ಮಾಡು
ತ್ತಿದ್ದನು. ಹೆಂಡತಿ ಸತ್ತರೆ, ಅನೇಕರ ಮನೆಯೊಳಗೆ
ದೀಪ ಆರಿದ ಹಾಗೆ ಆಗುವದು. ಕತ್ತಲೊಳಗೆ ಎಡ
ವಿ ಬೀಳುವವರಾಗುವರು. ಅಂಥಾ ಸಮಯಕ್ಕೆ ಮುಂ
ಚೆ ಸುಖ ದುಃಖಗಳಲ್ಲಿ ಸಾಧಿತವಾದ ವಿಶ್ವಾಸವಿದ್ದರೆ,
ದುಃಖಸಾಗರದಲ್ಲಿ ಮುಣುಗಗೊಡದೆ ಬಹಳ ಉಪ
ಯೋಗಕ್ಕೆ ಬೀಳುವದು.

೪ ವ.—ನನ್ನ ಬಳಿಯಿಂದ ಹೂಣಿಡುವೆನು) ನನ್ನ
ಬಳಿಯಿಂದ ತಕ್ಕೊಂಡು ಹೋಗಿ ಮುಂ. ಹೇಥನು
ಒಂದು ಸಣ್ಣ ಜನಾಂಗಕ್ಕೆ ಪೂರ್ವಜನಾಗಿದ್ದನು. ಅ
ವರೇ ಕಾನಾನದ ಆ ಶೀಮೆಯ ಧಣಿಯರು. ಅವರು
ಸಭೆ ಕೂಡಿಸಿದರು. ಅವರ ಮುಂದೆ ಈ ಕಾರ್ಯ ನಡೆ
ಯಿತು. ಸಮಾಧಿಯ ಸ್ವಾಸ್ಥ್ಯವನ್ನ) ಸಮಾಧಿ ಮಾ
ಡಲಿಕ್ಕೆ ಬೇಕಾದಷ್ಟು ಭೂಮಿಯನ್ನ ಕೊಡಿರಿ!

೬ ವ.—ತನ್ನ ಸಮಾಧಿಯನ್ನ ಕೊಡದೆ ಇರಲಿಕ್ಕಿ
ಲ್ಲ.) ಅವರು ಅಬ್ರಹಾಮನನ್ನ ಬಹಳ ಸನ್ಮಾನಿಸು
ತ್ತಾರೆ. ತನ್ನ ಒಳ್ಳೇ ನಡಾವಳಿಯಿಂದ ಅವರ ಮನ
ಸನ್ನ ಸೋಲಿಸಿದ್ದನು. ಒಂದು ವೇಳೆಯಲ್ಲಿ ಲೋಕ
ವಾದರೂ, ಭಯಭಕ್ತಿಯಿಂದ ನಡೆಯುವವರಿಗೆ ಮೆ
ಚ್ಚದೆ ಇರಲಾರದು. ಹೀಗೆಯೇ ಕೆಟ್ಟವರ ಬಾಯಿ ಕ
ಟ್ಟು ಮಾಡ ಬೇಕು. ಭಕ್ತರು ದೇವರಿಗೆ ನಡ ಕೊ
ಳ್ಳುವದು ಎಷ್ಟೋ, ಅಷ್ಟು ಲೋಕಕ್ಕೆ ಅಧಿಕಾರಿಗಳಾ
ಗುತ್ತಾರೆ.

೧೦. ೧೧ ವ. ಪ್ರತ್ಯುತ್ತರವಾಗಿ ಹೇಥನ ಮಕ್ಕಳೊ
ಳಗೆ ತನ್ನ ಊರಿನ ಬಾಗಲಲ್ಲಿ ಹಾದಾಡುವಂಥವರೆಲ್ಲ
ರ ಕೇಳುವಿಕೆಯಲ್ಲಿ ಹೇಳಿದ್ದೇನಂದರೆ:—ಜನರ ಸ
ಮಕ್ಷ ನಿನಗೆ) ಎಫ್ರೋನನು ಹಿತ್ತಿಯರಲ್ಲಿ (ಹೇಥನ
ಅನ್ವಯದವರಲ್ಲಿ) ಒಬ್ಬ ಮುಖ್ಯಸ್ಥನು, ಅಬ್ರಹಾಮ
ನು ಬೇಡಿದ ಹೊಲದ ಯಜಮಾನನು. ಅಗಸೆ ಬಾಗ
ಲಲ್ಲಿ ಹಿರಿಯರು ಕೂಡಿ ಸಭೆ ಮಾಡಿ ಕೊಂಡು, ನ್ಯಾ
ಯ ನಿವಡಿಸುತ್ತಿದ್ದರು. ಅದಕ್ಕೆ ಅಗಸೆ ಬಾಗಲಲ್ಲಿ
ಹಾದಾಡುವವರಂದರೆ, ಊರಿನ ಹಿರಿಯರು. ಕೊಡು
ತ್ತೇನೆ) ಉಚಿತವಾಗಿ.

೧೨. ೧೩ ವ.—ಮುಂದೆ ನಮಸ್ಕರಿಸಿ—ಜನರು
ಕೇಳುವಂತೆ— ಹೇಳಿದ್ದೇನಂದರೆ—ನನ್ನನ್ನು ಮಾತ್ರ
ಕೇಳ ಬೇಕು! ಆ ಹೊಲಕ್ಕೆ ಹಣ ಕೊಡುತ್ತೇನೆ
ಮುಂ.) ದೇಶವೆಲ್ಲಾ ಅಬ್ರಹಾಮನಿಗೆ ಕೊಟ್ಟಿತ್ತು. ಆ
ದರೆ ಕೈಗೂಡುವ ವರೆಗೆ, ಇದು ಒಂದು ಸಂಚಕಾರ
ದಂತೆ ಆಗಿತ್ತು.

೧೫ ವ. ನಾನೂರು ಷೇಕೆಲು ಬೆಳ್ಳಿ ಬಾಳುವದು)
ಒಂದು ಷೇಕೆಲು ಸುಮಾರು ಒಂದು ತೊಲೆಯಷ್ಟು
ತೂಕವಾಗಿದೆ.—ಇದು ನನಗೂ ನಿನಗೂ ಏನು?) ಇ
ದು ಬಹಳ ಸ್ವಲ್ಪ ಕ್ರಯ. ನಾನು ಬಿಟ್ಟರೇನಾಯಿ
ತು. ನೀನು ಕೊಟ್ಟರೇನಾಯಿತು. ನಿನ್ನ ಮನಸಿಗೆ
ಸರಿ ಕಂಡಂತೆ ಮಾಡು!

೧೬ ವ. ಎಫ್ರೋನನು ಹೇಥನ ಮಕ್ಕಳ ಕೇಳುವಿ
ಕೆಯಲ್ಲಿ ಹೇಳಿದ ಆ ಹಣವನ್ನು ಅಂದರೆ ವರ್ತಕರ
ಲ್ಲಿ ಸಲ್ಲುವಂಥಾ ನಾನೂರು ಷೇಕೆಲು ಬೆಳ್ಳಿಯನ್ನ
ತೂಗಿ ಕೊಟ್ಟನು.

೧೭. ೧೮ ವ. ಹಾಗೆ ಮಮ್ರೆಗೆ ಎದುರಾಗಿರುವ (ಅ
ದರ ಪೂರ್ವದಲ್ಲಿರುವ) ಮಕ್ಪೇಲದಲ್ಲಿಯ (ಆ ಪ್ರಾಂ
ತ್ಯ ಹೀಗೆ ಎನಿಸಿತು) ಎಫ್ರೋನನ ಹೊಲ ಅಂದರೆ
(ಅದರ ವಿವರ ಹೇಳುತ್ತಾನೆ) ಆ ಹೊಲವೂ,—ಅದ
ರ ಎಲ್ಲಾ ಮೇರೆಯೊಳಗೆ ಸುತ್ತಲಿರುವಂಥ ಗಿಡಗಳೆ
ಲ್ಲವೂ ಹೇಥನ ಮಕ್ಕಳ ಸಮಕ್ಷದಲ್ಲಿ ಅಂದರೆ ಅವ

ನ ಊರಿನ ಅಗಸೆ ಬಾಗಲಲ್ಲಿ ಬರುವವರೆಲ್ಲರ ಸಮಕ್ಷದಲ್ಲಿ ಅಬ್ರಹಾಮುನಿಗೆ ಸ್ವಾಸ್ಥ್ಯವಾಗಿ ಗೊತ್ತಾಯಿತು.—೧೯ ವ.—ಮಕ್ಪೇಲದಲ್ಲಿದ್ದ ಹೊಲದ ಮುಂ.

೨೦ ವ.—ಅಬ್ರಹಾಮುನಿಗೆ ಸಮಾಧಿಯ ಸ್ವಾಸ್ಥ್ಯವಾಗಿ ಗೊತ್ತಾಯಿತು.) ಹೀಗೆ ಹುಗಿಸಿ ಕೊಳ್ಳಲಿಕ್ಕೆ ಭೂಮಿ ಕಂಡು ಕೊಂಡಲ್ಲಿ, ಈ ದೇಶವು ನಮ್ಮದು, ತಕ್ಕ ಕಾಲದಲ್ಲಿ ದೇವರು ಅದನ್ನ ನಮಗೆ ದಕ್ಕಿಸುವನು ಎಂಬದಾಗಿ ಅಬ್ರಹಾಮನ ವಿಶ್ವಾಸ ಗಟ್ಟಿ ಆದದ್ದು ಕಾಣ ಬರುತ್ತದೆ. ಹೂಣಿಡುವ ಈ ಭೂಮಿ ಇಸ್ರಾಯೇಲನವರಿಗೆ ತಮ್ಮ ಪೂರ್ವಜನ ವಿಶ್ವಾಸವನ್ನ ತೋರಿಸಿ ಕೊಡುವಂಥಾ ಈ ದೇಶವನ್ನ ನಿನಗೆ ಕೊಡುತ್ತೇನೆಂಬ ದೇವರ ವಾಗ್ದತ್ತವನ್ನ ನೆನಪಿಗೆ ತರುವಂಥಾ ಒಂದು ಗುರುತು.—ಹೆಣಗಳು ಬೀಜಗಳು, ಅವುಗಳಿಂದ ಸೂಕ್ಷ್ಮ ದೇಹಗಳು ಬೆಳೆದು ಏಳುವವು ಎಂದು ನಾವು ಮಾನ ಮರ್ಯಾದೆಯಿಂದ ಅವನ್ನ ಹೂಳಿಡ ಬೇಕು. ಹೆಣ ನೀರೊಳಗೆ ಹಾಕಿದರೂ, ಸುಟ್ಟರೂ, ಭೂಮಿಯಲ್ಲಿ ಹುಗಿದರೂ, ಕಡೆಗೆ ಎಲ್ಲಾ ಒಂದಾಗುವದು. ಆದಾಗ್ಯೂ ಹುಗಿದರೆ, ಭೂಮಿಯಲ್ಲಿ ಬೀಜ ಹಾಕಿದ ಹಾಗಾದ್ದರಿಂದಲೂ, ಕ್ರಿಸ್ತನು ಹುಗಿಸಿ ಕೊಂಡು ಸಮಾಧಿಯನ್ನ ವಿಶ್ರಾಂತಿಸ್ಥಳ ಮಾಡಿದ್ದರಿಂದಲೂ, ನಿತ್ಯಜೀವ ಹಾರೈಸಿ ಕೊಳ್ಳುವವರಿಗೆ ಈ ಕಡೆ ರೀತಿ ಪ್ರಿಯಕರವಾಗಿದೆ.

s) ಇಸಾಕನ ಮದಿವೆ. ೨೪.

aa) ಎಲಿಯೇಜರನು ಆಣೆ ಇಟ್ಟದ್ದು. ೧—೯.

೨—೪ ವ. ಆಗ ಅಬ್ರಹಾಮುನು ತನಗಿದ್ದದ್ದೆಲ್ಲಾದರ ಮೇಲೆ ಅಧಿಕಾರಿಯಾದ ತನ್ನ ಮನೆಯ ಹಿರಿಯನಿಗೆ ಹೇಳಿದ್ದೇನಂದರೆ—ನಿನ್ನ ಕೈಯನ್ನು ನನ್ನ ಟೊಂಕದಲ್ಲಿ ಇಡು. ಮತ್ತು ನಾನು ವಾಸ ಮಾಡುವ ಕನಾನ್ಯರ ಹೆಣ್ಣು ಮಕ್ಕಳಲ್ಲಿಂದ ನೀನು ನನ್ನ ಮಗನಿಗೆ ಹೆಂಡತಿಯನ್ನು ತಕ್ಕೊಳ್ಳದೆ ನನ್ನ ದೇಶಕ್ಕೂ ಬಂಧುಗಳ ಬಳಿಗೂ ಹೋಗಿ, ನನ್ನ ಮಗನಾದ ಇಸಾಕನಿಗೆ ಹೆಂಡತಿಯನ್ನ ತಕ್ಕೊಳ್ಳುವ ಹಾಗೆ, ಆಕಾಶಕ್ಕೆ ದೇವರೂ, ಭೂಮಿಗೆ ದೇವರೂ ಆಗಿರುವ ಯೆಹೋವನ ಮೇಲೆ ನಿನ್ನನ್ನು ಪ್ರಮಾಣ ಮಾಡಿಸುತ್ತೇನೆ.

ಈ ಸೇವಕನು ೧೫, ೨. ಹೇಳಿದ ಎಲಿಯೇಜರನು ಎಂದು ಕಾಣುತ್ತದೆ. ಅವನು ದಮಸ್ಕದವನಾಗಿದ್ದ ಕಾರಣ, ಮೇಸೊಪೊತಾಮಿಯಕ್ಕೆ ಹೋಗುವ ದಾರಿ ಅವನಿಗೆ ಚಂದಾಗಿ ಗೊತ್ತಿತ್ತು.—ಅವನು ದಿನದಲ್ಲಿಯೂ ಬುದ್ಧಿಯಲ್ಲಿಯೂ ಹಿರಿಯನು ಆಗಿದ್ದನು. ಅವನು ಭಯಭಕ್ತಿಯುಳ್ಳವನೂ, ಬುದ್ಧಿವಂತನೂ, ನಂಬಿಗಸ್ತನೂ. ಅಂಥವರೇ ಅಂಥಾ ಕಾರ್ಯಕ್ಕೆ ಯೋಗ್ಯರು.—ಆಣೆ ಇಡುವಾಗ ಕೈ ಆಕಾಶಕ್ಕೆ ಎತ್ತುತ್ತಿದ್ದರು (೧೪, ೨೨.) ಇಲ್ಲವೆ ಈ ಸ್ಥಳದಲ್ಲಿ ಬರೆದಂತೆ ಮಾಡುತ್ತಿದ್ದರು (೪೭, ೨೯).—ಅಬ್ರಹಾಮನು ಮಗನಿಗೆ ಕನಾನ್ಯರಲ್ಲಿ ಒಬ್ಬ ಹಿರಿಯನಾದವನ ಮಗಳನ್ನ ಮದಿವೆ ಮಾಡಿ ಕೊಟ್ಟಿದ್ದರೆ, ಒಂದು ವೇಳೆ ಕಾನಾನದಲ್ಲಿ ಹೆಚ್ಚು ಸ್ಥಿರವಾಗುತ್ತಿದ್ದನು. ಆದರೆ ಕನಾನ್ಯರು ಶಾಪಕ್ಕೆ ಒಳಗಾಗಿ, ನಿರ್ಮೂಲವಾಗಲಿಕ್ಕೆ ಆಯತ್ತವಾಗುತ್ತ ಹೋದರು. ಕೆಟ್ಟವರ ಸಂಗಡ ನೆಂಟತನ ಮಾಡ ಬೇಡ! ಅವರ ತೊಡಕಿನಲ್ಲಿ ಬೀಳ ಬೇಡ! ತಮ್ಮ ಮಕ್ಕಳಿಗೆ ಒಳ್ಳೆಯವರಲ್ಲಿ ಮದಿವೆ ಆಗುವ ಹಾಗೆ, ನೋಡಿ ಕೊಳ್ಳುವ ಹಂಗು ತಂದೆ ತಾಯಿಗಳಿಗೆ ಉಂಟು.

೫—೭ ವ. ಆ ಸೇವಕನು ಅವನಿಗೆ: ನನ್ನನ್ನು ಹಿಂಬಾಲಿಸಿ ಈ ದೇಶಕ್ಕೆ ಬರುವದಕ್ಕೆ ಒಂದು ವೇಳೆ ಆ ಸ್ತ್ರೀ ಒಲ್ಲದಿದ್ದಾಳು. ಆ ಪಕ್ಷದಲ್ಲಿ ನೀನು ಬಿಟ್ಟು ಬಂದ ದೇಶಕ್ಕೆ ನಿನ್ನ ಮಗನನ್ನು ತಿರಿಗಿ ಕರಕೊಂಡು ಹೋಗಲೋ? ಅಂದನು.) ಒಡಂಬಡಿಕೆ ಮಾಡಿ, ವಚನ ಕೊಟ್ಟ ಯೆಹೋವನನ್ನ ನೆನಿಸಿ ಕೊಂಡು, ನಂಬಿ

ಉತ್ಪತ್ತಿ. ೨೪.

ಕೊಂಡು, ಸ್ವದೇಶದಲ್ಲಿರ ಬಾರದೆಂದು ದೇವರು ತನಗೆ ನಿರೂಪಿಸಿದ ಮೇಲೆ, ತನ್ನ ಮಗನನ್ನು ಅಲ್ಲಿಗೆ ಹೋಗ ಬಾರದೆಂದು ಆಜ್ಞಾಪಿಸುತ್ತಾನೆ. ಯೆಹೋವನು ಸಹಾಯ ಮಾಡಿ ಆ ಕಾರ್ಯ ಕೈಗೂಡಿಸುವನೆಂದು ಗಟ್ಟಿಯಾಗಿ ನಂಬಿ ಕೊಂಡಿದ್ದನು.

೮. ೯ ವ. ಆದರೆ ನಿನ್ನನ್ನು ಹಿಂಬಾಲಿಸಿ ಬರಲಿಕ್ಕೆ ಆ ಸ್ತ್ರೀ ಒಲ್ಲದ ಪಕ್ಷದಲ್ಲಿ, ನಾನು ನಿನ್ನನ್ನು ಮಾಡಿಸಿದ ಆಣೆಗೆ ಬಿಡುಗಡೆ ಆದಿ.—ಅಬ್ರಹಾಮನ ಸೊಂಟದಲ್ಲಿ ಇಟ್ಟು, ಆ ಮಾತಿನ ಮೇಲೆ ಅವನಿಗೆ ಪ್ರಮಾಣ ಮಾಡಿದನು.

bb) ಸೇವಕನು ಹೊರಟು ಪ್ರಾರ್ಥನೆ ಮಾಡಿದ್ದು. ೧೦—೧೪.

೧೦ ವ.—ಒಂಟೆಗಳನ್ನ ತಕ್ಕೊಂಡು, ತನ್ನ ಯಜಮಾನನ ನಾನಾ ವಿಧವಾದ ಬದಕನ್ನ ಕೈಯಲ್ಲಿ ತಕ್ಕೊಂಡು ಹೋದನು. ಎದ್ದು ನದಿಗಳ—) ಯುಫ್ರಾತ ಎಂಬ ಮತ್ತು ತೀಗ್ರಿಸ ಎಂಬ ನದಿಗಳ ಮಧ್ಯದಲ್ಲಿಯ ಶೀಮೆಗೆ ಅರಾಮು ಎಂದು ಹೆಸರಿತ್ತು. ಗ್ರೀಕರು ಅದಕ್ಕೆ ಮೇಸೊಪೊತಾಮಿಯ = ದ್ವಾಬ ಎಂದು ಅನ್ನುತ್ತಿದ್ದರು. ನಾಹೋರನ ಪಟ್ಟಣ ಅಂದರೆ, ಹಾರಾನ (೨೭, ೪೩).—೧೩ ವ. ನೀರು ತುಂಬಿ ಕೊಳ್ಳಲಿಕ್ಕೆ ಮುಂ. ೧೪ ವ.—ಇಸಾಕನಿಗೆ ನೇಮಿಸಿದ್ದಾಗಲಿ!) ತನಗೆ ತಿಳಿದಂತೆ ಯಥಾರ್ಥವಾಗಿ ಬೇಡಿ ಕೊಳ್ಳುತ್ತಾನೆ. ಪ್ರಪಂಚ ಸಂಸಾರಗಳು ಪ್ರಾರ್ಥನೆ ಮಾಡದಿದ್ದರೆ, ತುಪ್ಪ ಉಪ್ಪು ಇಲ್ಲದಂಥಾ ಸಪ್ಪಗಾದ ಊಟದಂತೆ ಸರಿ! ಅವು ಸುಸೂತ್ರವಾಗಿ ಸಾಗ ಬೇಕಾದರೆ, ದೇವರ ಆಶೀರ್ವಾದ ನಿನಗೆ ದೊರಕಿಸಿ ಕೊಡುವ ಪ್ರಾರ್ಥನೆ ಮರೆಯ ಬೇಡ! ದೇವರನ್ನ ಸ್ಮರಿಸದವರಿಗೆ ಅವು ದಕ್ಕದಂಥಾ ಅನ್ನದೋಪಾದಿಯಲ್ಲಿ ಅವೆ.

cc) ಪ್ರಾರ್ಥನೆಯ ಫಲ. ರೆಬೆಕ್ಕಳ ನಡುವಳಿ. ೧೫—೨೫.

೧೬ ವ.—ಬಹು ಚಲುವಿಯಾಗಿಯೂ—ಕನ್ಯೆಯಾಗಿಯೂ ಇದ್ದಳು. ಆಕೆ ಭಾವಿಯೊಳಗೆ ಇಳಿದು—ಏರಿ ಬಂದಳು. ೧೭ ವ. ಅವಳ ಎದುರಿಗೆ ಓಡಿ ಬಂದು—. ೧೮ ವ. ಕೈಯ ಮೇಲೆ ಇಳಿಸಿ ಕೊಂಡು ಮುಂ. ೧೯. ೨೦.—ಒಂಟೆಗಳಿಗೂ, ಅವು ಕುಡಿಯುವದಾಗುವ ಪರ್ಯಂತರ, ತುಂಬಿ ಹಾಕುತ್ತೇನೆ ಎಂದು ಹೇಳಿ—ಮತ್ತು ತುಂಬಿ ಕೊಳ್ಳಲಿಕ್ಕೆ ಭಾವಿಯ ಬಳಿಗೆ ಬೇಗ ಹೋಗಿ ಅವನ ಎಲ್ಲಾ ಒಂಟೆಗಳಿಗೆ ತುಂಬಿ ತಂದು ಹಾಕಿದಳು. ೨೨. ೨೩ ವ.—ಮೂಗತಿಯನ್ನೂ, ಆಕೆಯ ಕೈಗಳಿಗೆ ಹತ್ತು ಷೇಕೆಲು ತೂಕದ ಭಂಗಾರದ—ನೀನು ಯಾರ ಮಗಳು—ನಮಗೆ ಇಳುಕೊಳ್ಳಲಿಕ್ಕೆ ಸ್ಥಳ ಉಂಟೋ? ಅಂದನು.) ಈ ಒಡವೆಗಳನ್ನ ಸೇವಕನು ಕಡೆಗೆ ತೆಗದು ಆಕೆಯನ್ನ ವಿಚಾರಿಸಿದ ಮೇಲೆ, ಆಕೆಗೆ ಕೊಟ್ಟನು.—ಕರ್ತನು ಪ್ರಾರ್ಥನೆಯನ್ನ ಬೇಗ ಕೇಳಿದನು. ೭ನೆ ವಚನದಲ್ಲಿ ಹೇಳಿದ್ದು ಒದಗಿ ಬಂತು.—೨೪ ವ.—ನಾನು ನಾಹೋರನಿಗೆ—ಮಗಳು ಅಂದಳು.) ಈ ಭಾವಿ ಹೊಕ್ಕು ತುಂಬುವದು ಆಗಿತ್ತು. ಅದಕ್ಕೆ ಬುಗ್ಗೆ ಎಂಬದು ಮತ್ತು ಭಾವಿ ಎಂಬದು ಈ ಎರಡು ಪದಗಳು ವರ್ತಿಸುತ್ತಾವೆ.

dd) ಸೇವಕನು ಕರ್ತನನ್ನು ಹರಿಸಿದ್ದು, ಲಾಬಾನನು ಉಪಚರಿಸಿದ್ದು. ೨೬—೩೨.

೨೬. ೨೭ ವ.—ಆ ಮನುಷ್ಯನು ತಲೆ ಬಾಗಿಸಿ ಕರ್ತನಿಗೆ ವಂದಿಸಿ—ಕರ್ತನು ಹರಿಸಿ ಕೊಳ್ಳುವವನಾಗಲಿ!—ಯಜಮಾನನಿಗೆ ತನ್ನ ಕೃಪೆಯನ್ನೂ ತನ್ನ ಸತ್ಯವನ್ನೂ ಮಾಗದೆ ಬಿಡಲಿಲ್ಲ.) ಕೃಪೆಯಿಂದ ವಾಗ್ದತ್ತ ಕೊಟ್ಟದೆ, ಸತ್ಯದಿಂದ ಅದು ನಡೆಯುವದು. ೨೯ ವ. ಲಾಬಾನನು ಭಾವಿಯ ಹತ್ತರ—ಹೊರಗೆ ಓಡಿ ಬಂದನು.) ಅಬ್ರಹಾಮನ ಸಹೋದರರು ಯಾರಂದರೆ: ನಾಹೋರನೂ, ಇವನ ಮಗನಾದ ಬೆತುವೇಲನು. ಲಾಬಾನನು ದ್ರವ್ಯಾಶೆಯುಳ್ಳವನು. ತನ್ನ ತಂಗಿಯು ಸೇವಕನಿಂದ ಇಡಿಸಿ ಕೊಂಡ ಭಂಗಾರದ ಒಡವೆಗಳನ್ನ ಕಂಡು, ಇಷ್ಟು ಅವಸರದಿಂದ ಹೋಗಿದ್ದಾನು.

ಉತ್ಪತ್ತಿ. ೨೪.

೩೧ ವ. ಸೇವಕನು ಕರ್ತನನ್ನು ಸ್ತುತಿಸಿದ್ದನ್ನು ರೆಬೆಕ್ಕಳು ಕೇಳಿ, ಲಾಬಾನನಿಗೆ ತಿಳಿಸಿದ್ದಳಾದ್ದರಿಂದ, ಯೆಹೋವನೆಂಬ ಕರ್ತನ ಹೆಸರು ಅವನಿಗೆ ಗೊತ್ತಾಯಿತು. ಹಾಗೂ ಅಬ್ರಹಾಮನಿಂದ ಕೇಳಿದ್ದಾನು. ಯಾಕಂದರೆ ಕ್ಷೇಮಸಮಾಚಾರ ಒಬ್ಬರಿಗೊಬ್ಬರು ತಿಳಿಸ್ಯಾಡುತ್ತಿದ್ದರು (೨೨, ೨೦). — ೩೨ ವ. — ಅವನು ಒಂಟೆಗಳ ಸಾಮಾನ ಬಿಚ್ಚಿ) ತಡೆ ಮುಂತಾದದ್ದು.

ee) ಸೇವಕನು ಆದ ವೃತ್ತಾಂತವನ್ನೆಲ್ಲಾ ಹೇಳುತ್ತಾನೆ. ೩೩—೪೯.

೩೩ ವ. ಮತ್ತು ಉಣ್ಣ ನೀಡುವಾಗ, ಅವನು ಮುಂ. ೪೧ ವ. ಈ ಪಕ್ಷದಲ್ಲಿ ನಾನು ನಿನ್ನನ್ನು ಇಡಿಸಿದ ಆಣೆಯಿಂದ ಬಿಡುಗಡೆಯಾಗಿರುವಿ: ನೀನು— ಹೋದರೆ ನಾನು ನಿನ್ನನ್ನು ಇಡಿಸಿದ ಆಣೆಯಿಂದ ನೀನು ಬಿಡುಗಡೆಯಾಗಿರುವಿ.

೪೩. ೪೪ ವ.—ಕನ್ನಿಕೆ ನೀರು ತುಂಬಿ ಕೊಳ್ಳಲಿಕ್ಕೆ ಹೊರಗೆ— ನಿನ್ನ ಒಂಟೆಗಳಿಗೂ ತುಂಬಿ ಹಾಕುತ್ತೇನೆ ಎಂದು ಮುಂ. ೪೫ ವ.— ಇಳಿದು ನೀರು ತುಂಬಿ ಕೊಂಡಳು, ನನಗೆ ಮುಂ. ೪೭. ೪೮ ವ.— ತಲೆ ಬಾಗಿಸಿ ಕರ್ತನಿಗೆ ವಂದನೆ ಮಾಡಿ ನನ್ನ ಯಜಮಾನನ ಮುಂ.) ರೆಬೆಕ್ಕಳು ಅಬ್ರಹಾಮನ ಸಹೋದರನಾದ ನಾಹೋರನ ಮೊಮ್ಮಗಳು. ಆದರೂ ಮಗಳು ಅನ್ನಿಸಿ ಕೊಳ್ಳುತ್ತಾಳೆ.

ff) ಎಲಿಯೇಜರನು ರೆಬೆಕ್ಕಳನ್ನ ನಿಶ್ಚಯ ಮಾಡಿ ಕರಕೊಂಡು ಹೋದದ್ದು. ೫೦—೬೧.

೫೦ ವ. ಬೆತುವೇಲನು ಇನ್ನು ಜೀವದಿಂದಿದ್ದಾಗ್ಯೂ, ಲಾಬಾನನು ಮನೆಯಲ್ಲಿ ಹಿರಿತನ ಮಾಡಿದನು. ಹೇಳಲಾರೆವು) ನಾವು ಹೌದನ್ನಲಾರೆವು ಅಲ್ಲನ್ನಲಾರೆವು. ನಮ್ಮ ನಿರ್ಣಯದಿಂದ ಆಗುವಂಥಾದು ಅಲ್ಲ ಎಂಬರ್ಥವುಳ್ಳ ಗಾದೆಮಾತು ಇದು.

೫೨ ವ.—ಕರ್ತನಿಗೆ ನೆಲಕ್ಕೆ ಬಿದ್ದು ವಂದನೆ ಮಾಡಿದನು. ಪ್ರಿಯವಾದ ವಸ್ತುಗಳನ್ನು) ರತ್ನಗಳೇನೊ. ೫೫ ವ.— ಆ ಮೇಲೆ ಹೋಗು! ೫೭ ವ. ಅವಳನ್ನ ಕೇಳುವ!—೫೯ ವ. ದಾದಿಯರಿಗೆ ಬಹಳ ಮಾನವಿತ್ತು. ೬೦ ವ. ತಮ್ಮ ಹಗೆಯವರ—) ನಿನ್ನ ಸಂತಾನ ದೊಡ್ಡದ್ದು ಬಲವುಳ್ಳದ್ದು ಆಗ ಬೇಕು. ಅಬ್ರಹಾಮನವರಲ್ಲಿ ಕರ್ತನ ತಿಳುವಳಿಕೆ ಎಂಬ ದೀಪ ಚಂದಾಗಿ ಉರಿಯುತ್ತಿತ್ತು. ಆದರೆ ಲಾಬಾನನ ಮನೆಯಲ್ಲಿ ಅದು ಆರಿ ಹೋಗಿತ್ತು. ಈ ಎಲಿಯೇಜರನು ಲಾಬಾನನಲ್ಲಿ ಬಂದು ಕರ್ತನು ತನ್ನನ್ನು ಅನುಗ್ರಹಿಸಿದ್ದನ್ನ ವಿವರಿಸಿದಲ್ಲಿ, ಅದನ್ನ ತಿರಿಗಿ ಮುಟ್ಟಿಸಿದಂತೆ ಆಯಿತು. ಅದು ಮತ್ತು ಉರಿಯ ಹತ್ತಿತು.

gg) ಇಸಾಕನು ರೆಬೆಕ್ಕಳನ್ನ ಮನೆಯೊಳಗೆ ಕರಕೊಂಡದ್ದು. ೬೨—೬೭.

೬೨ ವ.—ಎಂಬ ಭಾವಿಯಿಂದ ತಿರಿಗಿ ಬಂದನು) ಕರ್ತನ ದೂತನು ಹಾಗರಳಿಗೆ ಪ್ರತ್ಯಕ್ಷವಾದ ಸ್ಥಳವು ಅವನ ವಾಸಸ್ಥಳಕ್ಕೆ ಸಮೀಪವಾಗಿತ್ತು. (೧೬, ೧೪.) ಹೆಬ್ರೋನಿನಲ್ಲಿ ವಾಸ ಮಾಡಿದ ಅಬ್ರಹಾಮನಿಗೆ ಸ್ವಲ್ಪ ದೂರವಾಗಿದ್ದನು. ೬೫ ವ.— ಅವಳು ಮುಸುಕು ಹಾಕಿ ಕೊಂಡಳು. ೬೭ ವ. ಸಾರಳು ತೀರಿ ಕೊಂಡು ಮೂರು ವರ್ಷ ಆಗಿತ್ತು. ಇಪ್ಪತ್ತು ದಿವಸಗಳು ತನ್ನ ತಾಯಿ ಸತ್ತ ದುಃಖದಲ್ಲಿ ಇದ್ದನು. ಅವನು ಸೂಕ್ಷ್ಮ ಮನಸಿನವನು. ಅದೃಶ್ಯ ಲೋಕದ ಕಡೆಗೆ ದೃಷ್ಟಿ ಇಟ್ಟು ಧ್ಯಾನ ಮಾಡುವವನು.

t) ಅಬ್ರಹಾಮನು ಕೆಟೂರಳನ್ನ ಮದಿವೆ ಮಾಡಿ ಕೊಂಡದ್ದು. ೨೫, ೧—೬.

೧ ವ.—ಅಬ್ರಹಾಮನು ತಿರಿಗಿ ಒಬ್ಬಾಕೆಯನ್ನ ಮದಿವೆ ಮಾಡಿ ಕೊಂಡನು. ಆಕೆಯ ಮುಂ.) ಸಾರಳು ತೀರಿದ ಬಳಿಕ, ಈ ಮದಿವೆ ಆಯಿತು. ಕೆಟೂರಳು ೧ ದಿನಚರ್ಯ. ೧, ೩೨. ಮತ್ತು ಈ ಸಂಧಿಯ

ಉತ್ಪತ್ತಿ. ೨೫, ೭—೧೦.

೬ನೆ ವಚನದಲ್ಲಿ ಉಪಪತ್ನಿ ಅನ್ನಿಸಿ ಕೊಳ್ಳುತ್ತಾಳೆ. ಯಾತಕ್ಕಂದರೆ ಆಕೆ ದಾಸಿ, ಸಾರಳಿಗೆ ಸರೀಕಳಲ್ಲ. ಈಕೆಯ ಗಂಡು ಮಕ್ಕಳು ಅರಬಿಯರ ಬೇರೆ ಬೇರೆ ಗೋತ್ರಗಳಿಗೆ ವಂಶಕರ್ತರಾಗಿದ್ದಾರೆ. ಅವರಿಂದ ಜನಿಸಿದ ಗೋತ್ರಗಳು ಇದ್ದ ಶೀಮೆಗಳಿಗೆ ಸುಧಾ ಅವರ ಹೆಸರು ಬಂತು. ಷೂಹ = ಯೋಬನ ಸ್ನೇಹಿತನಾದ ಬಿಲ್ದಾದನು ಬಂದ ಪ್ರಾಂತ್ಯದ ಹೆಸರು. ಬಿಲ್ದಾದನು ಷೂಹನ ಅನ್ವಯದವನು. ಅವರ ವಿಷಯವಾಗಿ ಈಗ ಬಹಳ ಗೊತ್ತಿರುವದಿಲ್ಲ. ಮಿದ್ಯಾನನ ಅನ್ವಯದವರು ಸೀನಾಯಿ ಪರ್ವತದ ಸಮೀಪದಲ್ಲಿಯೂ ಮೋವಬಿಯರ ಶೀಮೆಗೆ ಪೂರ್ವದಲ್ಲಿಯೂ ಇದ್ದದ್ದು ಮಾತ್ರ ಗೊತ್ತದೆ.

೬ ವ. ಉಪಪತ್ನಿಗಳ) ಹಾಗರಳೂ ಕೆಟೂರಳೂ. ಇಷ್ಮಯೇಲನಿಗೂ ದಾನಗಳನ್ನ ಕೊಟ್ಟನು. ಉಪಪತ್ನಿಗಳ ಈ ಗಂಡು ಮಕ್ಕಳು ಮುಖ್ಯವಾಗಿ ಕಾನಾನಕ್ಕೆ ದಕ್ಷಿಣ ಪೂರ್ವದಲ್ಲಿಯ ಅರಬಿಗೆ ಹೋದರು. ಅವರು ಇಸಾಕನ ಕೂಡ ನಿಂತ ಪಕ್ಷದಲ್ಲಿ, ಅವನ ವಂಶದವರು ಅವರಿಂದ ಕೆಟ್ಟು ಅವಿಶ್ವಾಸಿಗಳಾಗುತ್ತಿದ್ದರು.

u) ಅಬ್ರಹಾಮನ ಮರಣ. ೨೫, ೭—೧೦.

೮ ವ.—ಉಸುರು ಬಿಟ್ಟು ಸತ್ತು ತನ್ನ ಜನರನ್ನ ಕೂಡಿ ಕೊಂಡನು.) ೧೫, ೧೫. ಪರದಲ್ಲಿ. ಇಲ್ಲಿ ನಿತ್ಯಜೀವದ ಸೂಚನೆ ಅದೆ. ತೃಪ್ತನಾಗಿಯೂ) ಎಲ್ಲಾ ಗೊತ್ತಿಗೆ ಹೊಂದಿಸಿ ಮನೆತನದ ಮಾತನ್ನ ಎಲ್ಲಾ ಶೀರಿಸಿ ಎಲ್ಲಾ ಹೇಳಿ ಕೇಳಿ ಹೋಗಲಿಕ್ಕೆ ಹಣ್ಣಾದನು. ಇನ್ನು ಈ ಲೋಕದಲ್ಲಿರುವದು ಸಾಕಾಗಿತ್ತು. ಹೀಗೆ ತೀರಿ ಹೋಗುವದಾದರೆ, ಬಹಳ ಚಲೋದು, ದೇವರ ಕೃಪೆ ಅನ್ನ ಬೇಕು.—ತಂದೆ ಶೀರುವಾಗ, ಇಸಾಕನು ೭೫, ಇಷ್ಮಯೇಲನು ೮೯ ವರುಷದವರಾಗಿದ್ದರು. ಅವರಿಗೆ ಸಮಾಧಿ ಸ್ವಾಸ್ಥ್ಯ ತಕ್ಕೊಂಡದ್ದು ಅರಿಕೆ ಇತ್ತು.

B) ಇಸಾಕನ ಚರಿತ್ರೆ. ಉತ್ಪತ್ತಿ. ೨೫, ೧೧.—೩೫ ಸಂಧಿ.

ಲೋಕಸೃಷ್ಟಿಯ ಇತ್ತಣ ವರ್ಷ. ೨೧೦೮—೨೨೮೮.

ಕ್ರಿಸ್ತನ ಅತ್ತಣ ವರುಷ. ೧೮೯೨—೧೭೧೨.

ಟಿಪ್ಪಣಿ: ಇಸಾಕನು ಜೀವಿಸಿದ ದಿವಸಗಳೆಲ್ಲಾ ಜನ್ಮದಾರಭ್ಯ ಮರಣದ ಪರಿಯಂತರ ಎಣಿಸಿದರೆ, ಮೇಲೆ ಬರೆದಿಟ್ಟಿರುವ ಲೆಖ್ಖ ಹೊರಡುವದು. ಆದರೆ ಇನ್ನೊಂದು ಬೇರೆ ಲೆಖ್ಖ ಉಂಟು. ಅದು ಹ್ಯಾಗಂದರೆ: ಅವನಿಗೆ ಅವಳಿ ಮಕ್ಕಳು ಹುಟ್ಟಿದಂದು (ಅವನ ೬೦ನೆ ವರ್ಷದಲ್ಲಿ ಉತ್ಪ. ೨೫, ೨೬.), ೧೫ ವರುಷ ಅಬ್ರಹಾಮನ ಮರಣದ ಆಚೆ, ಅವನ ಚರಿತ್ರೆ ಮುಖ್ಯವಾಗಿ ನಡೆಯಲಾರಂಭಿಸಿತು. ಮತ್ತು ಉತ್ಪ. ೩೫, ೨೭—೨೯. ಸೂಚಿಸಿದಂತೆ, ಯಾಕೋಬನು ಮೇಸೊಪೊತಾಮಿಯದಿಂದ ತಿರಿಗಿ ಬಂದ ಬಳಿಕ, ೩೭, ೧ ಮುಂ. ಹೇಳಿದ್ದು ಸಂಭವಿಸದ ಮುಂಚೆ, ಸುಮಾರು ೨೦ ವರ್ಷ ಅವನ ಮರಣದ ಆಚೆ, ವಿಶೇಷವಾಗಿ ಇಸಾಕನ ಚರಿತ್ರೆ ಮುಗಿಯಿತು. ಅವನ ಮಾತು ನಿಂತಿತು. ಈ ಲೆಖ್ಖ ಹಿಡಿದ ಪಕ್ಷದಲ್ಲಿ, ಅವನ ಕಾಲ ೨೧೬೮—೨೨೬೮ ಲೋಕಸೃಷ್ಟಿಯ ಇತ್ತಣ ವರ್ಷ ಅಥವಾ ೧೮೩೨—೧೭೩೨ ಕ್ರಿಸ್ತನ ಅತ್ತಣ ವರ್ಷ ಅಂತ ಎಣಿಸ ಬೇಕು. ದೇವರ ವಾಕ್ಯವು ಇಸಾಕನ ಚರಿತ್ರೆ ಎಲ್ಲಾ ಇದ್ದಂತೆ ಹೇಳುತ್ತದೆ. ಅವನ ತಪ್ಪುಗಳನ್ನ ಮುಚ್ಚುವದಿಲ್ಲ. ಅವನ ಸುಗುಣಗಳನ್ನ ಬೇಕಾಗಿ ಮುಂದಿಡುವದಿಲ್ಲ. ನಾವು ಅವನ ಚರಿತ್ರೆಯನ್ನ ನೋಡಿ, ತಾಳಿ ಕೊಂಡು ದೇವರ ರಕ್ಷಣೆ ಹಾರೈಸುವದನ್ನ ಕಲಿತು ಕೊಳ್ಳ ಬಹುದು.

ಇಸಾಕ್ ಆಶೀರ್ವಾದ ಹೊಂದಿದ್ದು, ಇಷ್ಮಯೇಲನ ವಂಶ, ಇಸಾಕನ ಮಕ್ಕಳು.
ಉತ್ಪತ್ತಿ. ೨೫, ೧೧ — ೨೮.

a) ಇಸಾಕನು ಆಶೀರ್ವಾದ ಹೊಂದಿದ್ದು. ೨೫, ೧೧.

೧೧ ವ. ಅವನು ತಂದೆಯ ಆಶೀರ್ವಾದಕ್ಕೆ ಬಾಧ್ಯಸ್ಥನು. ತಂದೆ ತಾಯಿಗಳ ಆಶೀರ್ವಾದವು ಮಕ್ಕಳ ಮೇಲೆ ಬರುವದು. ದೇವರು ತಂದೆಯ ಬಾಧ್ಯವನ್ನ (ಆಶೀರ್ವಾದವನ್ನ) ಮಗನಿಗೆ ಕೊಟ್ಟು, ಮೂಲಪಿತೃಪಟ್ಟಾಭಿಷೇಕ ಮಾಡಿದ ಹಾಗಾಯಿತು. ಭಾವಿಯ) ೧೬, ೧೪. ಕಾನಾನದ ದಕ್ಷಿಣದಲ್ಲಿ ಮನುಷ್ಯಸಂಚಾರ ಬಹಳವಿಲ್ಲದ ಸ್ಥಳಗಳಲ್ಲಿ ಇರಲಿಕ್ಕೆ ಇಸಾಕನಿಗೆ ಮನಸಿತ್ತು.

b) ಇಷ್ಮಯೇಲನ ವಂಶ. ೧೨ — ೧೮. (೧೭, ೨೦.)

೧೩ ವ. — ವಂಶಾವಳಿಗಳ ಪ್ರಕಾರವಾಗಿಯೂ) ಅವರಿಂದ ಉದ್ಭವಿಸಿದ ಗೋತ್ರಗಳಿಗೆ ಸಹ ಅವರ ಹೆಸರು ಬಂತು. ೧೮ ವ. ಗ್ರಾಮಗಳ ಮುಂ.) ಸುತ್ತಲಿನ ಗೋಡೆ ಇಲ್ಲದ ಹಳ್ಳಿಗಳು. ಕೋಟೆಗಳ ಮುಂ.) ಸುತ್ತಲು ಗೋಡೆ ಇದ್ದಂಥಾ ಊರು.

೧೭ ವ. — ಸತ್ತು ತನ್ನ ಜನರಿಗೆ ಕೂಡಿಸಲ್ಪಟ್ಟನು. ೧೮ ವ. ಇಷ್ಮಯೇಲನ ೧೨ ಮಂದಿ ಗಂಡು ಮಕ್ಕಳು ಅರಬಿಯದ ಬೇರೆ ಬೇರೆ ಗೋತ್ರಗಳಿಗೆ ಪೂರ್ವಜರು ತಮ್ಮ ತಮ್ಮ ಕುಟುಂಬ ಗೋತ್ರಗಳಿಗೆ ಪ್ರಭುಗಳಾದರು. ಅವನು (ಇಷ್ಮಯೇಲನು) ತನ್ನ ಸಹೋದರರೆಲ್ಲರಿಗೆ ಪೂರ್ವದ ಶೀಮೆಯಲ್ಲಿ ಬಿದ್ದನು.) ತನ್ನ ಸಹೋದರರು ಇದ್ದ ಶೀಮೆಗಳಿಗೆ ಪೂರ್ವದ ಪ್ರಾಂತ್ಯಗಳನ್ನು ಬಲಾತ್ಕಾರದಿಂದ ತಕ್ಕೊಂಡನು.

c) ಇಸಾಕನ ಇಬ್ಬರು ಗಂಡು ಮಕ್ಕಳು. ೧೯ — ೨೮.

೨೦ ವ. — ರೆಬೆಕ್ಕಳನ್ನ ಮದಿವೆ ಮಾಡಿ ಕೊಂಡನು. ೨೧ ವ. ರೆಬೆಕ್ಕಳು ೨೦ ವರ್ಷ ಬಂಜೆಯಾಗಿದ್ದಳು. ಆಕೆಯಿಂದ ಗರ್ಭ ಫಲವಾದದ್ದು ದೇವರ ವಿಶೇಷ ಆಶೀರ್ವಾದ. ಆದರೆ ಬೇಡಿ ಕೊಂಡದಲ್ಲದೆ ಇದು ಹೀಗೆ ಶಿಕ್ಕಲಿಲ್ಲ. ಅಬ್ರಹಾಮನು, ಈ ಇಬ್ಬರು ಮೊಮ್ಮಕ್ಕಳು ಜನಿಸಿದಾಗ, ಇನ್ನು ಇದ್ದನು. ಅವರ ಜನನದ ಈಚೆ ಇನ್ನು ೧೫ ವರುಷ ಬದಕಿದನು. ಮೇಲೆ ೭. ೮ನೆ ವಚನಗಳಲ್ಲಿ ಅವನ ಚರಿತ್ರೆ ಮುಗಿಸಲಿಕ್ಕೆ ಅವನ ಮರಣ ಹೇಳೋಣವಾಯಿತು. ತನ್ನ ಮಕ್ಕಳಿಗೂ, ಮೊಮ್ಮಕ್ಕಳಿಗೂ, ನಾನಾ ಪ್ರಕಾರವಾಗಿ ಬುದ್ಧಿ ಎಚ್ಚರಿಗೆ ಹೇಳಿದ್ದಾನು. ಯಾಕಂದರೆ ಅವನು ಬಹಳ ಅನುಭಾವ ಮಾಡಿದ್ದನು. ವಿಶ್ವಾಸ ಸಾಧಕವಾಗುವ ಉದ್ದಿಶ್ಯ, ದೇವರು ತನ್ನ ಭಕ್ತರನ್ನ ಅನೇಕಾವರ್ತಿ ಅಪರೂಪ ಮಾರ್ಗಗಳಲ್ಲಿ ನಡಿಸುತ್ತಾನೆ.

೨೨ ವ. — ಗರ್ಭದಲ್ಲಿ ಮಕ್ಕಳು (ಪಿಂಡಗಳು) ಬಡಿದಾಡಿದಾಗ—) ಇದು ಒಂದು ಅವಶಕುನ ಅಂತ ನೆನಿಸಿದಳು. ಗರ್ಭ ಧರಿಸಿದ್ದು ಅನರ್ಥವಾದರೆ, ನಾನು ಗರ್ಭವತಿ ಆದದ್ದು ಯಾಕೆ? ದೇವರು ನಮಗೆ ಕೊಟ್ಟ ಆಶೀರ್ವಾದ ನಿಷ್ಫಲವಾಯಿತಲ್ಲ. — ಕರ್ತನನ್ನು ಕೇಳಿಕೊಳ್ಳಲಿಕ್ಕೆ ಹೋದಳು.) ಪ್ರಾರ್ಥನೆ ಮಾಡಿ.

೨೩ ವ. ರೆಬೆಕ್ಕಳು ಕೇಳಿ ಕೊಂಡದಕ್ಕೆ ಕನಸಿನಲ್ಲಿ ಆಗಲಿ, ದರ್ಶನದಲ್ಲಿ ಆಗಲಿ, ದೇವರು ಉತ್ತರ ಕೊಡುತ್ತಾನೆ. — ಗರ್ಭದೊಳಗಿಂದ ಎರಡು ಪ್ರಜೆಗಳು ಬಂದು ಬೇರೆ ಆಗುವವು. —) ನಿನ್ನ ಗರ್ಭದಲ್ಲಿಯ ಇಬ್ಬರು ಗಂಡು ಮಕ್ಕಳು ಎದೋಮಿಯರು ಇಸ್ರಾಯೇಲನವರು ಎಂಬೀ ಎರಡು ಜನಾಂಗಗಳಿಗೆ ವಂಶಕರ್ತರಾಗುತ್ತಾರೆ. ಗರ್ಭದಲ್ಲಿ ಪಿಂಡಗಳು ಒಂದಕ್ಕೊಂದು ಬಡೆದಾಡಿದ್ದು ಅವರಿಂದ ಜನಿಸುವ ಜನಾಂಗಗಳು ಒಂದಕ್ಕೊಂದು ವಿರುದ್ಧ ನಡಿಸುವವು ಎಂಬದಾಗಿ ಸೂಚಿಸುತ್ತದೆ. ಅವರು, ಅಂದರೆ, ಯಾಕೋಬನು ಏಸಾವನು ಚಿಕ್ಕತನದಲ್ಲಿ ತಮ್ಮೊಳಗೆ ಜಗಳಾಡುತ್ತಿದ್ದರು. ಅವರ ಚರಿತ್ರೆಯಲ್ಲಿಯೂ, ಅವರಿಂದ ಉತ್ಪತ್ತಿಯಾದ ಜನಾಂಗಗಳ ಚರಿತ್ರೆಯಲ್ಲಿಯೂ ಈ ಪ್ರವಾದನೆ ಒದಗಿ ಬಂದದ್ದು ತೋರುತ್ತದೆ. ಅರಸನಾದ ದಾವೀದನ ಕಾಲದಲ್ಲಿ ಎದೋಮಿಯರು ಇಸ್ರಾಯೇಲನವರಿಗೆ ಪೂರ್ಣವಾಗಿ ವಶವಾದರು (೨ ಸಮು.

೮, ೧೪). ಎಸಾವನು ಜನ್ಮದಿಂದ ಚೊಚ್ಚಲ ಮಗನಾಗಿ ಹಿರಿಯನು. ಆದರೂ ಯಾಕೋಬನು ತನ್ನನ್ನು ಆದು ಕೊಂಡ ದೇವರ ಕೃಪೆಯಿಂದಲೇ ಹಿರಿಯನಾದನು. ದೇವರ ರಾಜ್ಯದಲ್ಲಿ ಸ್ವಭಾವದ ಹಿರಿತನಕ್ಕಿಂತ ಕೃಪೆಯಿಂದಾದ ಹಿರಿತನವೇ ಹೆಚ್ಚು. ೨೫ ವ. ಅವನ ಮೈ ತುಂಬ ಕೆಂಪು ಕೂದಲಿದ್ದವು. ಅದರಿಂದ ಮೈ ಎಲ್ಲಾ ರೋಮಮಯವಾದ ಚರ್ಮದ ಅಂಗಿಯಂತೆ ಕಂಡಿತು. ಎಸಾವನು = ರೋಮಮಯವಾದವನು (ರೋಮೇಶ ಅಂದ ಹಾಗೆ). ೨೬ ವ. ಹಿಮ್ಮಡ ಹಿಡಕೊಂಡದರಿಂದ, ಅವನಿಗೆ ಯಾಕೋಬನು = ಹಿಮ್ಮಡ ಹಿಡಿಯುವವನು, ಯುಕ್ತಿಯಿಂದ ಕುಸ್ತಿಯಾಡುವಾಗ, ಹಿಮ್ಮಡ ಹಿಡಿದು ಕೆಡಹುವವನು ಎಂದು ಹೆಸರಿಟ್ಟರು. ಈ ಹೆಸರು ಅವನ ಸ್ವಭಾವ ತೋರಿಸಿ ಕೊಡುತ್ತದೆ. ೨೭ ವ. ಎಸಾವನಲ್ಲಿ ನಿಮ್ರೋದನ ತರವಿತ್ತು. ಯಾಕೋಬನು ಸಾಧು ಸಭ್ಯ ಮನುಷ್ಯನಾಗಿದ್ದನು. ಅದಕ್ಕೆ ತನ್ನ ತಾಯಿಗೆ ಮುದ್ದು ಮಗನಾಗಿದ್ದನು.

d) ಎಸಾವನು ತನ್ನ ಚೊಚ್ಚಲತನ ಮಾರಿದ್ದು. ೨೯ — ೩೪.

೩೦ ವ. — ಈ ಕೆಂಪು, ಈ ಕೆಂಪಾದ ಪದಾರ್ಥವನ್ನ ನನ್ನನ್ನು ನುಂಗಗೊಡು.) ಹಸ ಕೊಂಡಿದ್ದನು. ಬಹಳ ಅವಸರದವನು. ಇಚ್ಛಾತುರದವನು. ಎದೋಮ್ = ಕೆಂಪು.

೩೧ ವ. ದೇವರು ತನಗೆ ಹೇಳಿದ ಪ್ರವಾದನೆಯ ಮಾತನ್ನ ರೆಬೆಕ್ಕಳು ತನ್ನ ಮನಸಿನಲ್ಲಿ ಇಟ್ಟುಕೊಂಡು, ತನ್ನ ಚಿಕ್ಕ ಮಗನಾದ ಯಾಕೋಬನಿಗೆ ತಿಳಿಸಿ, ತನ್ನ ಗಂಡನಾದ ಇಸಾಕನ ಕೂಡ ಅದರ ಮೇಲೆ ಮಾತಾಡಿ ಕೊಂಡಿದ್ದಾಳು. ಆದರೆ ಆ ಪ್ರವಾದನೆಯಂತೆ ಆಗದ ಹಾಗೆ, ಎರಡು ಅಭ್ಯಂತರಗಳು ಇದ್ದವು. ಹ್ಯಾಗಂದರೆ, ಎಸಾವನು ಸ್ವಭಾವಿಕವಾಗಿ ಚೊಚ್ಚಲ ಮಗನೂ, ಹಿರಿಯನೂ ಆಗಿದ್ದನು. ಹಾಗೂ ತಂದೆಯಾದ ಇಸಾಕನ ಮನಸು ಪ್ರೀತಿ ಅವನ ಮೇಲೆ ಕೂತಿತು. ದೇವರು ರೆಬೆಕ್ಕಳಿಗೆ ಹೇಳಿದ್ದನ್ನು ಅವನು ಮನಸಿಗೆ ತಂದು ಕೊಳ್ಳಲಿಲ್ಲೇನೋ ತಿಳಿಯದು. ಯಾಕೋಬನೂ ರೆಬೆಕ್ಕಳೂ ಈ ವಿಘ್ನಗಳನ್ನ ಪರಿಹರಿಸಲಿಕ್ಕೆ ಸಮಯ ನೋಡುತ್ತಿದ್ದರು. ಎಸಾವನು ದಣಕೊಂಡು, ಹಸಿದು, ಹೊಲದಿಂದ ಬಂದು, ಯಾಕೋಬನು ಅಟ್ಟ ಅಡಿಗೆ ನೋಡಿ, ಬಹಳ ಆತುರದಿಂದ ಊಟ ಬೇಡಿದನು. ಇವನು ಇಚ್ಛಾತೃಪ್ತಿ ಆಗುವನಕ, ನಿಧಾನವಾಗುವವನಲ್ಲ, ಒಂದು ಊಟಕ್ಕಾದರೂ ತನ್ನ ಚೊಚ್ಚಲತನ ಮಾರದೆ ಬಿಡುವವನಲ್ಲ; ಈಗ ನನ್ನ ಮನದ ಯೋಚನೆ ಸಿದ್ಧಿಗೆ ತರಲಾದೀತು ಎಂದು ತಿಳಿದು, ಯಾಕೋಬನು ಸಮಯ ಸಾಧಿಸಿ, ನಿನ್ನ ಚೊಚ್ಚಲತನವನ್ನ ನನಗೆ ಮಾರಿ ಬಿಡು ಎಂದು ಎಸಾವನಿಗೆ ಹೇಳಿದನು. ಈ ಪ್ರಕಾರ ಅವನು ಯುಕ್ತಿಯಿಂದ ಅಣ್ಣನ ಹಿಮ್ಮಡ ಹಿಡಕೊಂಡು, ಅವನನ್ನ ಕೆಡಹುವವನಾದನು. ಚೊಚ್ಚಲ ಮಗನಿಗೆ ಅನುಜರ ಮೇಲೆ ಹಿರಿತನವಿತ್ತು (ದ್ವಿತಿ. ೨೧, ೧೭. ಉತ್ಪ. ೪೯, ೩). ಇದಲ್ಲದೆ ಇಸಾಕನ ಮಕ್ಕಳಲ್ಲಿ ಹಿರಿಯನಾದವನು ದೇವರ ವಾಗ್ದತ್ತಕ್ಕೆ ಸಹ ಬಾಧ್ಯಸ್ಥನಾಗಿದ್ದನು. ಇದು ಯಾಕೋಬನಿಗೆ ಗೊತ್ತಿತ್ತು. ಅದರ ಮೇಲೆ ಅವನ ಮನಸು ಬಹಳವಿತ್ತು. ದೇವರ ನಿರ್ಣಯದಂತೆ ನನಗೆ ಚೊಚ್ಚಲತನದ ಅಧಿಕಾರ ಬರ ಬೇಕೆಂಬದರಲ್ಲಿ ದೋಷವಿಲ್ಲ. ಆದರೆ ಅದನ್ನ ಕುಯುಕ್ತಿಯಿಂದ ದೊರಕಿಸಿ ಕೊಳ್ಳುವದು ದೇವರಿಗೆ ವಿರುದ್ಧ, ಪಾಪವೇ ಸರಿ! ಹೀಗಿರಲಿಕ್ಕೆ ಅವನು ಏನು ಮಾಡ ಬೇಕಾಯಿತು? ಸಂದುಗಟ್ಟು ತಪ್ಪಿ ಹೋಗುತ್ತಿತ್ತಲ್ಲ! ಅಭ್ಯಂತರ ತೆಗದು ಹಾಕುವ ದೇವರ ಸಹಾಯ ಎದುರು ನೋಡ ಬೇಕಾಗಿತ್ತು. ಆತನು ತಕ್ಕ ಕಾಲದಲ್ಲಿ ತಕ್ಕ ರೀತಿಯಿಂದ ತನ್ನ ವಚನ ನಡಿಸುತ್ತಿದ್ದನು. — ಈ ಹೊತ್ತು) ನಾಳೆ ಮತ್ತು ಬೇರೆ ಮನಸ್ಸು ಆದೀತು. ಘಾಳಿ ಬೀಸುವಾಗ ತೂರ ಬೇಕು. ಹಾಲು ಇದ್ದಾಗ, ಹಬ್ಬ ಮಾಡ ಬೇಕು ಎಂಬಂತೆ ಅದೆ ಅಲ್ಲ!

೩೨ ವ. ಯಾಕೋಬನ ಲೆಖ್ಖ ಸುಳ್ಳಾಗಲಿಲ್ಲ. ಎಸಾವನು ಭೋಗಿ. ಒಂದಿಷ್ಟಾದರೂ ಹಸಿವೆ ಸೋಸಲಾರನು. ಹಿಂದೆ ಮುಂದೆ ನೋಡುವವನಲ್ಲ. ಮತ್ತು ದೇವರು ಚೊಚ್ಚಲ ಮಕ್ಕಳಿಗೆ ನೇಮಿಸಿ ಕೊಟ್ಟ

ಶ್ರೇಷ್ಠತ್ವ ಅಲಕ್ಷ್ಯ ಮಾಡುವವನು (ಇಬ್ರಿ. ೧೨, ೧೬). ಈ ಮೇರೆಗೆ ತತ್ಕ್ಷಣದ ಭೋಗಕ್ಕೆ ಮನುಷ್ಯರು ನಿತ್ಯ ಪರಿಣಾಮ ಕಳಕೊಳ್ಳುವರು. ದೇವರು ಏಸಾವನನ್ನು ಬಿಟ್ಟದ್ದೂ, ಯಾಕೋಬನನ್ನು ಹಿರಿಯನಾಗಿ ಆದು ಕೊಂಡದ್ದೂ, ಅವರವರ ಸ್ವಭಾವ ಗುಣಗಳಿಗೆ ಸರಿ ಬಿತ್ತು. ಏಸಾವನು ದೇವರ ರಾಜ್ಯದ ಕಾರ್ಯಕ್ಕೆ ಯೋಗ್ಯನಲ್ಲ! ಆದರೆ ತನ್ನ ಪೂರ್ತಿಗೆ ರಕ್ಷಣೆ ಹೊಂದಲಿಕ್ಕೆ ಏನು ಅಡ್ಡಿ ಇರಲಿಲ್ಲ.—ಚೊಚ್ಚಲತನವು ನನಗೆ ಯಾತಕ್ಕೆ—) ಯಾವ ಉಪಯೋಗಕ್ಕೆ ಬಿದ್ದೀತು? ಯಾತಕ್ಕೆ ಬಂದೀತು? ಅದನ್ನ ಅಶ್ರದ್ಧೆ ಮಾಡುತ್ತಾನೆ.

೩೩ ವ.—ನನಗೆ ಪ್ರಮಾಣ ಮಾಡಿ ವಚನ ಕೊಡು!—ಅವನಿಗೆ ಪ್ರಮಾಣ ಮಾಡಿ ವಚನ ಕೊಟ್ಟು! ತನ್ನ—) ಮಾತು ತಿರಗದ ಹಾಗೆ, ಯಾಕೋಬನು ಯುಕ್ತಿಯಿಂದ ಎಲ್ಲಾ ಗಟ್ಟಿ ಮಾಡುತ್ತಾನೆ. ೩೪ ವ. ಹುರಳಿಯ ತೊವೆಯನ್ನೂ—) ಏಸಾವನಿಗೆ ತಾನು ಮಾಡಿದ್ದು ತಪ್ಪೆಂದು ಒಂದಿಷ್ಟಾದರೂ ತಿಳಿಯಲಿಲ್ಲ. ಯಾಕೋಬನಾದರೂ ಶ್ರಮೆಶಾಲೆಯಲ್ಲಿ ತಾನು ವಂಚಿಸಿದ ದೋಷ ತಿಳಿದು, ದುಃಖ ಪಟ್ಟು, ಬುದ್ಧಿಯನ್ನ ವಿಶ್ವಾಸವನ್ನ ಕಲಿತು ಕೊಂಡು, ವಾಗ್ದತ್ತದ ಬಾಧ್ಯಕ್ಕೆ, ತನ್ನ ತಂದೆಯ ಸ್ಥಲದಲ್ಲಿ ಸೇರಲಿಕ್ಕೆ, ಯೋಗ್ಯನಾಗ ಬೇಕಾಯಿತು.

e) ಇಸಾಕನು ಫಿಲಿಷ್ಟ್ಯರ ದೇಶದಲ್ಲಿದ್ದದ್ದು. ೨೬, ೧—೨೨.

aa) ದೇವರು ಇಸಾಕನಿಗೆ ವಾಗ್ದತ್ತ ಕೊಟ್ಟದ್ದು. ೨೬, ೧—೬.

೧ ವ. ಅಬಿಮೇಲೆಕ (ಅರಸಿನ ತಂದೆ ಇಲ್ಲವೆ ರಾಜಪಿತೃ) ಎಂಬದು ಫಿಲಿಷ್ಟ್ಯರ ಅರಸನಿಗೆ ಯೋಗರೂಢನಾಮ. ಯಾಕಂದರೆ ೭೦ ವರ್ಷಗಳ ಅತ್ತಲಾಗಿ ಅಬ್ರಹಾಮನು ಬಂದು ನೋಡಿದ ಅಬಿಮೇಲೆಕನು ಇಷ್ಟರೊಳಗೆ ಸತ್ತು ಹೋಗಿದ್ದಾನು. ಇದೇ ಪ್ರಕಾರ ಮಿಜ್ರದ ಅರಸರಿಗೆ ಫರೋನ ಎಂಬದು ಯೋಗರೂಢನಾಮವಾಗಿತ್ತು.

೨ ವ. ಇಸಾಕನು ಅಬ್ರಹಾಮನಂತೆ ಫಲಭರಿತವಾದ ಮಿಜ್ರಕ್ಕೆ ಹೋಗ ಬೇಕೆಂದಿದ್ದನು. ಅವನು ವಿಶ್ವಾಸ ವಿಧೇಯತ್ವ ಕಲಿಯುವ ಹಾಗೆ, ಕರ್ತನು ಅದಕ್ಕೆ ಬೇಡನ್ನುತ್ತಾನೆ.

೩ ವ.—ಅಬ್ರಹಾಮನಿಗೆ ಪ್ರಮಾಣ ಮಾಡಿ ಕೊಟ್ಟ ವಚನವನ್ನು ಸ್ಥಾಪಿಸುವೆನು) ನಿನಗಾಗಿ ಸ್ಥಾಪಿಸುವೆನು. ಕರ್ತನು ಇಸಾಕನಿಗೆ ಒಡಂಬಡಿಕೆಯ ವಾಗ್ದತ್ತವನ್ನ ಕೊಟ್ಟು, ಅವನನ್ನ ಆತ್ಮಿಕ ಆಶೀರ್ವಾದಕ್ಕೆ ಬಾಧ್ಯಸ್ಥನಾಗ ಮಾಡುತ್ತಾನೆ. ಅಬ್ರಹಾಮನ ಲೌಕಿಕ ಬದಕನ್ನ ಆಗಲೇ ಹೊಂದಿ ಇದ್ದನು. ೫ ವ. ಇಸಾಕನು ತನ್ನ ತಂದೆಯಾದ ಅಬ್ರಹಾಮನ ವಿಶ್ವಾಸದ ಫಲ ಅನುಭವಿಸುತ್ತಾನೆ. ಅವನ ದೆಶೆಯಿಂದ ಇಸಾಕನು ಆಶೀರ್ವಾದ ಹೊಂದುತ್ತಾನೆ. ಅವನು ವಿಶ್ವಾಸದಲ್ಲಿ ನೆಲೆಗೊಳ್ಳದೆ ಹೋಗಿದ್ದರೆ, ಒಡಂಬಡಿಕೆ ಅನರ್ಥವಾಗುತ್ತಿತ್ತು. ಮೋಸೆಯ ಮುಖಾಂತರವಾಗಿ ಪ್ರಕಟವಾದ ನೇಮವನ್ನ ಅಬ್ರಹಾಮನು ಕೈಕೊಂಡದ್ದು ಹ್ಯಾಗೆ? ಅವನಲ್ಲಿ ದೇವರಿಗೆ ಸಲ್ಲುವ ಸದ್ವಿಶ್ವಾಸವಿದ್ದಲ್ಲಿ, ನೇಮವನ್ನು ಪೂರ್ಣವಾಗಿ ಕೈಕೊಳ್ಳುವ ಪ್ರೀತಿ ಸುಧಾ ಮೊಳಕೆಯಂತೆ ಇತ್ತು. ದೇವರನ್ನ ನಂಬಿ ಕೊಂಡವನು ಆತ ಹೇಳಿದಂತೆ ಕೇಳಿ ಆತನ ಚಿತ್ತವನ್ನ ತನಗೆ ತಿಳಿದಷ್ಟು ನಡಿಸುವನು.

bb) ಇಸಾಕನು ಸುಳ್ಳಾಡಿದ್ದು. ೭—೧೧.

೭ ವ.—ವಿಚಾರಿಸಿದಾಗ, ಆಕೆ ನನ್ನ ತಂಗಿ ಅಂದನು. ಯಾಕಂದರೆ ಆ ಸ್ಥಳದ ಜನರು ರೆಬೆಕ್ಕಳಿಗೋಸ್ಕರ ತನ್ನನ್ನು ಕೊಲ್ಲದ ಹಾಗೆ, ಆಕೆ ನನ್ನ ಹೆಂಡತಿ ಎಂದು ಹೇಳಲಿಕ್ಕೆ ಅಂಜಿದನು. ಯಾಕಂದರೆ ನೋಟಕ್ಕೆ ಆಕೆ ರೂಪವತಿ) ೧೨, ೧೩. ೨೦, ೨. ೧೧.—ಇಸಾಕನು ತಂದೆಯ ತಪ್ಪಿನಲ್ಲಿ ಬಿದ್ದನು. ಆದರೆ ದೇವರು ಅವನ ತಪ್ಪು ಕಾದನು. ಲೋಕದ ಅಂಜಿಕೆಯಿಂದ ದೇವರ ಭಕ್ತರಾದರೂ ಎಷ್ಟು ಸರ್ತಿ ಮಾರ್ಗ ತಪ್ಪುತ್ತಾರೆ!

೧೨೨ ಇಸಾಕನ ಮೇಲೆ ಅನುಗ್ರಹವೂ ಅಬಿಮೇಲೆಕನ ಒಡಂಬಡಿಕೆಯೂ.

ಉತ್ಪತ್ತಿ. ೨೬. ೧೨ — ೩೩.

ee) ಫಿಲಿಷ್ಟ್ಯರು ಐಶ್ವರ್ಯವುಳ್ಳ ಇಸಾಕನ ಮೇಲೆ ಹೊಟ್ಟೆಕಿಚ್ಚು ಪಡುತ್ತಾರೆ. ೧೨—೨೨.

೧೫ ವ.— ಅಬ್ರಹಾಮನ ದಿನಗಳಲ್ಲಿ ಅವನ ತಂದೆಯ ಸೇವಕರು ಅಗಿದ ಎಲ್ಲಾ ಭಾವಿಗಳನ್ನ ಫಿಲಿಷ್ಟ್ಯರು ಮಣ್ಣು ಹಾಕಿ ಮುಚ್ಚಿದರು. ೧೮ ವ. ಫಿಲಿಷ್ಟ್ಯರು ಅಬ್ರಹಾಮನ ಮೇಲೆಯೂ ಹೊಟ್ಟೆಕಿಚ್ಚು ಮಾಡಿ, ಅವನು ಗೆರಾರಿನಲ್ಲಿ ತೆಗಿಸಿದ ಭಾವಿಗಳನ್ನ ಹುಗಿದರು. ಅವನ್ನ ಇಸಾಕನು ತಿರಿಗಿ ತೆಗಿಸಿದನು. ೧೯ ವ.— ಜಲೆನೀರಿನ ಭಾವಿ ಅವರಿಗೆ ಶಿಕ್ಕಿತು.

೨೦ ವ. ಗೆರಾರಿನ ಗೊಲ್ಲರು ಇಸಾಕನ ಗೊಲ್ಲರ ಸಂಗಡ— ಜಗಳವಾಡಿದರು. ಅವರು ತನ್ನ ಸಂಗಡ— ಆ ಭಾವಿಗೆ ಏಸಕ (ಜಗಳ) ಎಂದು ಹೆಸರಿಟ್ಟನು.

೨೧ ವ. ಸಿತ್ನಾ = ದೂರಿಡುವದು, ವರ್ಜಮಾಡುವದು. ೨೨ ವ. ಇಸಾಕನು ಉತ್ತರದ ಕಡೆಗೆ ಹೋದಂತೆ ಕಾಣುತ್ತದೆ. ಸಂಪತ್ತಿನವರು ಈ ಮೇರೆಗೆ ತಾಳಿ ಕೊಳ್ಳುವದು ಬಹು ಅಪರೂಪ. ದೇವರ ಆತ್ಮವು ಅವನನ್ನು ಶಿಕ್ಷಿಸಿ ಎಚ್ಚರಿಸುತ್ತಿತ್ತು. ಸ್ವಭಾವ ಗುಣದಿಂದ ಈ ಪರಿ ನಡಿಯಲಿಕ್ಕೆ ಕೂಡದು. ಆದರೆ ತನ್ನನ್ನು ಗೆದಿಯುವದು ಯುದ್ಧದಲ್ಲಿ ಗೆದಿಯುವದಕ್ಕಿಂತ ಹೆಚ್ಚಿನದು. ರೆಹೊಬೋತ = ಇಂಬು, ವಿಶಾಲ.

f) ದೇವರು ಇಸಾಕನ ಮೇಲೆ ಅನುಗ್ರಹ ಮಾಡಿದ್ದು. ೨೬, ೨೩ — ೨೫.

೨೩ ವ. ಬೇರ್ಶೆಬ ತಾನು ಮುಂಚೆ ಇದ್ದ ಸ್ಥಳಕ್ಕಿಂತ ಎತ್ತರವಾಗಿತ್ತು. ಫಿಲಿಷ್ಟ್ಯರು ಮಾಡುತ್ತಿದ್ದ ಉಪದ್ರಕ್ಕೆ ತಪ್ಪಿಸಿ ಕೊಳ್ಳುವ ಹಾಗೆ, ಹೋಗಿದ್ದಾನಾದೀತು. ೨೪ ವ. ನಿನ್ನ ಸಂಗಡವಿದ್ದು ನಿನ್ನನ್ನು ಆಶೀರ್ವದಿಸಿ—) ದೇವರು ಇಸಾಕನಿಗೆ ಅಭಯ ಕೊಡುವದು ಅವಶ್ಯವಾಗಿತ್ತು. ಯಾಕಂದರೆ ಫಿಲಿಷ್ಟ್ಯರ ಉಪದ್ರವೆಂಬ ಘಾಳಿ ಒತ್ತರಾಗಿ ಬೀಸುವದರಿಂದ, ವಿಶ್ವಾಸದ ದೀಪ ನಿಲ್ಲುವ ಹಾಗಿದ್ದಿಲ್ಲ. ಅದರ ದುಸಕ್ಕೆ ದೀಪಕ್ಕೆ ಅಭಯವೆಂಬ ಚಾಟು ಮಾಡ ಬೇಕಾಯಿತು. ಅಬ್ರಹಾಮನ ದೇವರು) ಅವನನ್ನು ಕೃಪೆಯಿಂದ ನಡಿಸಿ, ಎಲ್ಲಾ ಕಷ್ಟಗಳಿಂದ ದಾಟಿಸಿದಾತ ಎಂಬದೊಂದು; ನೀನು ತಂದೆಯ ಜರಿ ಹಿಡಿದು ನಡೆಯುವದರಿಂದ, ನಾನು ಅವನ ಮೇಲೆ ಮಾಡಿದ ಅನುಗ್ರಹ ನಿನ್ನ ಮೇಲೆ ಬರುವದು ಎಂಬದೊಂದು; ಅವನು ತೀರಿ ಕೊಂಡಾಗ್ಯೂ, ಕರ್ತನ ಸನ್ನಿಧಿಯಲ್ಲಿ ಇನ್ನು ಬದುಕುವವನೇ ಎಂಬದೊಂದು (ಲೂಕ. ೨೦, ೩೭— ೩೮.) ಹೀಗೆ ಮೂರು ಮಾತುಗಳು ಇದರೊಳಗೆ ಬಂದ ಹಾಗಾಯಿತು.

೨೫ ವ. ಕರ್ತನಿಗೆ ತನ್ನ ಕೃತಜ್ಞತೆಯನ್ನು ತೋರಿಸುತ್ತಾನೆ. ಕರ್ತನು ತನ್ನನ್ನು ಪ್ರಕಟ ಮಾಡಿ ರಕ್ಷಿಸಿದಲ್ಲಿ ಇರುವದು ಬಹಳ ಮನೋಹರವಾಗೆದೆ.

g) ಅಬಿಮೇಲೆಕನು ಇಸಾಕನ ಕೂಡ ಒಡಂಬಡಿಕೆ ಮಾಡಿದ್ದು. ೨೬, ೨೬ — ೩೩.

೨೬ ವ. ಫಿಕೋಲ = ಎಲ್ಲರ ಬಾಯಿ. ಇದು ಪ್ರಧಾನಿಗೆ ಯೋಗರೂಢನಾಮವಾಗಿದ್ದೀತು. ಇಸಾಕನನ್ನ ಅಟ್ಟಿ ಬಿಟ್ಟವರು ತಾವೆ ತಿರಿಗಿ ಬಂದು, ಸ್ನೇಹ ಹಚ್ಚಿ ಕೊಳ್ಳ ಬೇಕೆಂದು ನೋಡುತ್ತಾರೆ. ೩೨ ವ.— ನೀರ ಕಂಡು ಕೊಂಡವೆಂದು ಅವನಿಗೆ ಹೇಳಿದರು.) ಇಸಾಕನು ಅಬಿಮೇಲೆಕನ ಕೂಡ ಒಡಂಬಡಿಕೆ ಮಾಡಿದ ದಿವಸದಲ್ಲಿ ಭಾವಿ ಅಗಿಯುತ್ತಿದ್ದ ಸೇವಕರು (೨೫.) ಬಂದು, ನಾವು ನೀರನ್ನ ಕಂಡು ಕೊಂಡೆವೆಂದು ಹೇಳಿದರು. ಆದ್ದರಿಂದ ಅಬ್ರಹಾಮನು ಅಲ್ಲಿಯ ಬೇರೊಂದು ಭಾವಿಗೆ ಕೊಟ್ಟಂಥಾ, ಇಷ್ಟರೊಳಗೆ ತಿರಿಗಿ ಮರೆತು ಹೋದಂಥಾ ಷೆಬ (ಷೆಬ = ಏಳು, ಪ್ರಮಾಣ. ಸಂಪೂರ್ಣ ಹೆಸರು ಬೇರ್ಶೆಬ = ಆಣೆಭಾವಿ) ಎಂಬ ಹೆಸರನ್ನ ಈ ಹೊಸ ಭಾವಿಗೆ ಇಟ್ಟನು. ಇಂದೂ ಆ ಸ್ಥಳದಲ್ಲಿ ಎರಡು ಆಳವಾದ ಭಾವಿಗಳನ್ನ ರೋಬಿನ್ಸೋನೆಂಬ ಮಾರ್ಗಸ್ಥನು ಕಂಡು ಕೊಂಡಿದ್ದಾನೆ. ಅವುಗಳಿಗೆ ಇನ್ನು ಅದೇ ಹೆಸರು. ೩೩ ವ.— ಆ ಪಟ್ಟಣಕ್ಕೆ ಆ ಸ್ಥಳದಲ್ಲಿದ್ದಂಥಾ ಊರಿಗೆ.

ಉತ್ಪತ್ತಿ. ೨೭, ೧—೧೭.

h) ಎಸಾವನು ಇಬ್ಬರು ಹೆಂಡರನ್ನ ಮಾಡಿ ಕೊಂಡದ್ದು. ೨೬, ೩೪. ೩೫.

೩೪ ವ.—ಹೆಂಡರನ್ನ ಮಾಡಿ ಕೊಂಡನು.) ಇದಕ್ಕೆ ತಂದೆ ತಾಯಿಗಳು ಸಂಮತಿ ಪಡಲಿಲ್ಲವೆಂದು ತೋರುತ್ತದೆ. ಕಾನಾನದ ಮೂಲ ನಿವಾಸಿಗಳಲ್ಲಿ ಎಸಾವನು ಮದಿವೆ ಮಾಡಿ ಕೊಂಡದರಿಂದ ದೇವರು ಅವನಿಗೆ ವಾಗ್ದತ್ತದ ಬಾಗ್ಯದಲ್ಲಿ ಪಾಲು ಕೊಡದೆ ಹೋದದ್ದು ಅನ್ಯಾಯವಲ್ಲವೆಂದು ಸ್ಪಷ್ಟವಾಗಿ ತಿಳಿಯಲಾಗುವದು. ೩೫ ವ. ಇವರು ಇಸಾಕನ ರೆಬೆಕ್ಕಳ ಆತ್ಮಕ್ಕೆ ಕಹಿಯಾಗಿದ್ದರು.) ಹೊರಗಣ ಉಪದ್ರಕ್ಕೆ ಮನೆಯ ಉಪದ್ರ ಕೂಡಿತು. ಇದನ್ನು ಕಂಡು, ರೆಬೆಕ್ಕಳು ಹ್ಯಾಗಾದರೂ ಎಸಾವನಿಗೆ ಚೊಚ್ಚಲತನದ ಆಶೀರ್ವಾದ ಬಾರದಂತೆ, ಮಾಡ ಬೇಕೆಂಬ ಮನಸು ಗಟ್ಟಿಯಾಗಿ ಹಿಡಿದಿದ್ದಾಳು. ಗುಣ ಭಯಭಕ್ತಿ ನೋಡದೆ, ತಮಗೆ ಇಷ್ಟ ಬಂದಂತೆ, ಮದಿವೆ ಮಾಡಿ ಕೊಂಡು, ಮಕ್ಕಳು ತಮ್ಮ ತಂದೆ ತಾಯಿಗಳನ್ನು ಎಷ್ಟೋ ಸರ್ತಿ ದುಃಖಸಾಗರದಲ್ಲಿ ಮುಣುಗಿಸುವರು.

i) ಯಾಕೋಬನು ಮೋಸ ನಡಿಸಿ ತಂದೆಯಿಂದ ಆಶೀರ್ವಾದ ತಕ್ಕೊಳ್ಳುತ್ತಾನೆ. ಸಂಧಿ ೨೭.

aa) ರೆಬೆಕ್ಕಳು ತನ್ನ ಮಗನಿಗೆ ಕುಯುಕ್ತಿ ಕಲಿಸಿ ಕೊಟ್ಟದ್ದು. ೨೭, ೧—೧೭.

೧. ೪ ವ. ೨೬ನೆ ಸಂಧಿಯಲ್ಲಿ ಹೇಳಿದ್ದಕ್ಕೂ ೨೭ನೆ ಸಂಧಿಯಲ್ಲಿ ಹೇಳಿದ್ದಕ್ಕೂ ನಡುವಿನಲ್ಲಿ ಸುಮಾರು ೨೭ ವರ್ಷ ಆಗಿ ಹೋಗಿರ ಬೇಕು. ಎಸಾವನ ಹೆಂಡರಿಂದ ಆದ ಮನೇ ಉಪದ್ರ ಬಹಳ ದಿವಸದ್ದು ಆಗಿತ್ತು. ಎಸಾವನು ಸ್ವಭಾವಿಕವಾಗಿ ಚೊಚ್ಚಲನು ಹೌದು. ಆದರೂ ಯಾಕೋಬನಿಗೆ ಮುಖ್ಯ ಆಶೀರ್ವಾದ ಆಗ ಬೇಕೆಂದು ದೈವೋತ್ತರವಾದದ್ದು; ಎಸಾವನು ತಾನೆ ಚೊಚ್ಚಲತನ ಯಾಕೋಬನಿಗೆ ಮಾರಿ ಅಲಕ್ಷ್ಯ ಮಾಡಿದ್ದು; ಕಡೆಗೆ ಅನ್ಯ ಜನರಲ್ಲಿ ಹೆಂಡರನ್ನ ಮಾಡಿ ಕೊಂಡದ್ದು: ಈ ಮೂರನ್ನ ನೋಡಿ, ಎಸಾವನು ಈ ಆಶೀರ್ವಾದಕ್ಕೆ ಅಯೋಗ್ಯನೆಂದು ತಿಳಿದು ಇಸಾಕನು ಯಾಕೋಬನಿಗೆ ಆಶೀರ್ವಾದ ಕೊಡ ತಕ್ಕದ್ದಾಗಿತ್ತು. ಅವನು ಸ್ವಭಾವಿಕ ಪ್ರೀತಿಯಿಂದ ದೇವರ ನಿರ್ಣಯ ಅನರ್ಥ ಮಾಡುತ್ತಿದ್ದನು.

೫—೧೦ ವ. ರೆಬೆಕ್ಕಳು ಹೇಳಿ ಕೊಟ್ಟ ಕುಯುಕ್ತಿ ೫ ವ. ಆಕೆ ಸಮೀಪದಲ್ಲಿದ್ದು ಅಥವಾ ಹೊಂಚಿ ಕೊಂಡು ಕೇಳಿರ ಬಹುದು. ೯ ವ.—ಎರಡು ಒಳ್ಳೇ ಹೋತ ಮರಿಗಳನ್ನ ಮುಂ. ೧೦ ವ. ಆಗ ನೀನು ಅದನ್ನ (ಊಟವನ್ನ) ನಿನ್ನ—ಆಶೀರ್ವದಿಸುವ ಹಾಗೆ, ಉಣ್ಣುವನು.

೧೧—೧೩ ವ. ಯಾಕೋಬನ ಮನೋಸಾಕ್ಷಿ ಎಚ್ಚರಿಕೆ ಆಯಿತು. ಆದಾಗ್ಯೂ ತನ್ನ ಮೋಸ ಬೈಲಿಗೆ ಬಿದ್ದೀತೆಂಬ ಭಯ ಮಾತ್ರ ಅವನಲ್ಲಿ ಇತ್ತು. ಅದು ಬೈಲಿಗೆ ಬೀಳದೆ ಇದ್ದರೆ, ಚಿಂತೆಯಿಲ್ಲ. ಅದರಿಂದ ಬರುವ ಕೇಡಿಗೆ ಮಾತ್ರವಲ್ಲ, ಪಾಪಕ್ಕೇ ಅಂಜ ಬೇಕು. ಆದರೆ ತಾಯಿ ಅವನಿಗೆ ಧೈರ್ಯ ಹೇಳುತ್ತಾಳೆ: “ಇದರಿಂದ ನಿನ್ನ ಮೇಲೆ ಶಾಪ ಬಂದದ್ದಾದರೆ, ಅದು ನನ್ನ ಮೇಲೆ ಬೀಳಲಿ! ನನ್ನ ಮಾತಿನ ಮೇಲೆ ಭರವಸ ಮಾಡು! ಈ ಕೆಲಸ ನೆಟ್ಟಗೆ ಸಾಗೀತು. ನನಗೆ ಏನೂ ಅನುಮಾನ ಈ ವಿಷಯದಲ್ಲಿ ಇಲ್ಲ”. ಇಂಥಾ ಧೈರ್ಯ ಆಕೆಗೆ ಯಾತರಿಂದ ಬಂತು? ಆಕೆ ಆ ದೈವೋತ್ತರವನ್ನು ನೆನಪಿಗೆ ತಂದು, ಎಸಾವನ ಅಯೋಗ್ಯತೆಯನ್ನ ನೋಡಿ, ದೇವರು ಅಂಥಾ ಅಯುಕ್ತ ಮನುಷ್ಯನಿಗೆ ಆಶೀರ್ವಾದ ಆಗಲೀಸನು ಎಂದು ನಿಶ್ಚಯವಾಗಿ ತಿಳು ಕೊಂಡಿದ್ದಳು. ಹಾಗೂ ಯಾಕೋಬನಿಗೆ ಆಶೀರ್ವಾದ ಕೊಡ ಬೇಕೆಂದು ಇಸಾಕನಿಗೆ ಹೇಳಿದರೂ, ಅವನು ಕೇಳುತ್ತಿದ್ದಿಲ್ಲ ಎಂಬದು ಗೊತ್ತಿತ್ತು. ಅದಕ್ಕೆ ನಿರ್ವಾಹ ಇಲ್ಲದಕ್ಕೆ, ನಾನು ವಂಚಿಸಿ ಈ ಕಾರ್ಯ ನಡಿಸ ಬೇಕು, ನನ್ನ ಮೋಸದಿಂದ ದೇವರ ಚಿತ್ತವು ಈಡೇರುತ್ತದಲ್ಲ ಎಂಬದಾಗಿ ನೆನಿಸಿ ಧೈರ್ಯಗೊಂಡಳು. ಆದರೆ ಒಳ್ಳೇ ಕೆಲಸಕ್ಕಾದರೂ ವಂಚನೆ ಮಾಡ ಬಾರದು. ನಮ್ಮ ಕಾರ್ಯಕ್ಕೆ ಬ

ಲವಿದ್ದರೆ, ದೇವರು ಅದನ್ನ ಸಾಗಿಸಿ ಕೊಡುವನು.
ಏಸಾವನು ಸಹ ವಂಚಕನೇ ಸರಿ. ಅವನು ಸತ್ಯವಂ
ತನಾಗಿದ್ದರೆ, ತನ್ನ ತಂದೆಯು ಆಶೀರ್ವಾದ ಕೊಡ
ಕರೆದಾಗ, ತಾನು ಅದನ್ನ ಯಾಕೋಬನಿಗೆ ಮಾರಿ
ಕೊಟ್ಟ ಸಂಗತಿಯನ್ನ ತಿಳಿಸುತ್ತಿದ್ದನು. ಆದರೆ ಅದ
ರ ಸುದ್ದಿ ತೆಗಿಯುವದಿಲ್ಲ. ತಾನು ಯಾಕೋಬನಿಗೆ
ಆಣೆ ಇಟ್ಟು ಕೊಂಡು ವಚನ ಕೊಟ್ಟದ್ದು ನಡಿಸ ಬೇ
ಕೆಂದು ನೆನಿಸಲಿಲ್ಲ. ಆದರೂ ಮನುಷ್ಯರ ವಂಚನೆ
ಯಿಂದ ದೇವರ ನಿರ್ಣಯ ವ್ಯರ್ಥವಾಗಲರಿಯದು.

೧೪—೧೭ ವ.—ಉಡಿಸಿ ತೊಡಿಸಿ, ಹೋತಮರಿ
ಗಳ ಚರ್ಮಗಳನ್ನ—ಅವನ ನುಣ್ಣಾಗಾದ ಕೊರಳಿನ
ಮೇಲೆಯೂ ಕಟ್ಟಿ ತಾನು ಸಿದ್ಧ ಮಾಡಿದ ಸವಿ ಊಟ
ವನ್ನೂ ರೊಟ್ಟಿಯನ್ನೂ—) ತಂದೆ ತಾಯಿಗಳು ದೇ
ವರಿಗೆ ವಿರುದ್ಧವಾದದ್ದನ್ನ ಹೇಳಿದಲ್ಲಿ, ನಿನ್ನ ತಂದೆ
ತಾಯಿಗಳನ್ನ ಸನ್ಮಾನಿಸು ಎಂಬ ಆಜ್ಞೆ ನಡಿಸಲಾ
ಗದು. ಯಾಕಂದರೆ ದೇವರು ಅವರಿಗಿಂತ ದೊಡ್ಡ
ತನು.

bb) ಯಾಕೋಬನು ಆಶೀರ್ವಾದ ಹೊಂದಿದ್ದು. ೧೮—೨೯.

೧೮—೨೪ ವ. ಸುಳ್ಳಿನಿಂದ ಸುಳ್ಳು ಹುಟ್ಟುವದು.
ಇಸಾಕನು ಪರೀಕ್ಷೆ ಮಾಡಿದರೂ ಯಾಕೋಬನ ಖೂ
ನ ಹಿಡಿಯಲಿಲ್ಲ. ೨೫—೨೯ ವ. ಆಶೀರ್ವದಿಸಿದ್ದು.
೨೭. ೨೮ ವ. ಏಸಾವನು ಅನೇಕಾವರ್ತಿ ಹೊಲದಲ್ಲಿ
ಇದ್ದದರಿಂದ, ಅವನ ಅರಿವಿಗೂ ಅದರ ವಾಸನೆ ಬಡಿ
ದಿತ್ತು. ಕರ್ತನು ಆಶೀರ್ವದಿಸಿದ ಹೊಲ = ಫಲಭ
ರಿತವಾದದ್ದು. ಈ ಸುವಾಸನೆ ಫಲಭರಿತವಾದದ್ದಕ್ಕೆ
ಸಾದೃಶ್ಯ, ಸೂಚನೆ. ಮಂಜಿನಲ್ಲಿಯೂ—) ದೇವ
ರು ಮಳೆ ಮಂಜನ್ನು ಆಗಿಸಿ ಭೂಮಿಯ ಬಲದಿಂದ
ಬೆಳೆಯುವ ಧಾನ್ಯ ಫಲಾದಿಗಳು ನಿನಗೆ ಪುಷ್ಕಳವಾ
ಗಿ ಆಗಲಿ. ೨೯ ವ. ಅಧಿಕಾರ, ಧೊರೆತನ. ಕರ್ತ
ನು ಆಶೀರ್ವದಿಸಿದ ಜನಾಂಗವು ಜನಾಂಗಗಳಲ್ಲಿ ಮು
ಖ್ಯ. ನಿನ್ನ ತಾಯಿಯ ಮಕ್ಕಳು = ನಿನ್ನ ಸಹೋದರನ
ಸಂತಾನದವರು. ಈ ರೀತಿಯಿಂದ ಯಾಕೋಬನು ಲೌ
ಕಿಕ ಬದಕನ್ನು, ಲೌಕಿಕ ಅಧಿಕಾರವನ್ನು, ಆಶೀರ್ವಾ
ದ ಕೊಡುವ ಯಾಜಕತ್ವವನ್ನು ಹೊಂದಿ ಮೂಲ
ಪಿತೃ ಪಟ್ಟಾಭಿಷೇಕ ಮಾಡಿಸಿ ಕೊಂಡನು.

cc) ಏಸಾವನು ಇಸಾಕನ ಬಳಿಗೆ ಬಂದದ್ದು. ೩೦—೪೦.

೩೧ ವ.—ಮೃಗಮಾಂಸವನ್ನ (ಬೇಟೆಯನ್ನ) ತಿ
ನ್ನಲಿ! ೩೩ ವ. ಆಗ ಇಸಾಕನು ಅತ್ಯಧಿಕವಾದ ಭ
ಯದಿಂದ ನಡಗಿ ಹೇಳಿದ್ದೇನಂದರೆ—) ಯಾಕೋ
ಬನಿಗೆ ಆದ ಆಶೀರ್ವಾದ ತಿರಿಗಿಸಲಾಗದು. (೨೯.)
ಏಸಾವನಿಗಲ್ಲ, ಯಾಕೋಬನಿಗೆ ಆಶೀರ್ವಾದ ಬರು
ವಂತೆ ದೇವರು ಅಡ್ಡ ಬಂದನು. ಇಸಾಕನೂ ಈ
ಕಾರ್ಯದಲ್ಲಿ ದೇವರ ಕೈಗೂಡಿತ್ತೆಂದು ತಿಳುಕೊಳ್ಳು
ತ್ತಾನೆ. ೩೬ ವ.—ನನ್ನ ಹಿಮ್ಮಡ ಹಿಡಿದಿದ್ದಾನೆ.) ಹಿ
ಡಿದು ನನ್ನನ್ನು ಕೆಡವಿದ್ದಾನೆ, ಮೋಸಗೊಳ್ಳಿಸಿದ್ದಾನೆ.
ತಕ್ಕೊಂಡಿದ್ದಾನೆ) ಏಸಾವನು ಮಾರಿದ್ದನು. ತಾನು ಅ
ದನ್ನ ಅಲಕ್ಷ್ಯ ಮಾಡಿದನೆಂದು ತಿಳಿದು, ಪಶ್ಚಾತ್ತಾಪ
ಪಡ ಬೇಕಾಗಿತ್ತು. ಆದ ನಷ್ಟಕ್ಕೆ ಮಾತ್ರ ದುಃಖ ಪ
ಡುತ್ತಾನೆ. ಆ ನಷ್ಟವನ್ನು ತನ್ನ ಮೇಲೆ ತಂದ ಕೆಟ್ಟ
ಮನಸಿಗೆ ದುಃಖ ಪಡುವದಿಲ್ಲ. ೩೯. ೪೦ ವ. ಏಸಾವ
ನಿಗೆ ದೊರೆದ ಆಶೀರ್ವಾದ ಯಂಜಲಿನಂತೆ ಅದೆ. ಅ
ವನ ವಂಶದವರಾದ ಎದೋಮಿಯರು ವಾಸ ಮಾಡಿ
ದ ಪ್ರಾಂತ್ಯವು ಸತ್ತಸಮುದ್ರದ ದಕ್ಷಿಣ ಕಡೆ ಮೊ
ದಲುಗೊಂಡು ಕೆಂಪುಸಮುದ್ರದ ಬಾಹುವಾದ ಎಲಾನಿ
ಯದ ಕೊಲ್ಲಿಯ ತನಕ ಸೇಯಿರ್ ಎಂಬ ಗುಡ್ಡಗಳ
ಲ್ಲಿ ವಿಸ್ತರಿಸಿ ಅದೆ. ಆ ಪ್ರಾಂತ್ಯದ ಪೂರ್ವ ಸಂಸ್ಥಾ
ನವಾಗಿದ್ದಂಥಾ, ಈಗ ಹಾಳು ಬಿದ್ದಂಥಾ ಪೇತ್ರವನ್ನು
(ಬಂಡೆ, ಬಂಡೆಯಲ್ಲಿ ಕಟ್ಟಿದ ಪಟ್ಟಣ, ಹಿಬ್ರು ಭಾ
ಷೆಯಲ್ಲಿ ಅದಕ್ಕೆ ಸೇಲ = ಬಂಡೆ ಎಂದು ಹೆಸರು)
ಈಗಿನ ಮಾರ್ಗಸ್ಥರು ಕಂಡಿದ್ದಾರೆ. ಇಂದೂ ಆ ಗು
ಡ್ಡಗಳ ತಪ್ಪಲು ಭೂಮಿಯಲ್ಲಿ ಧಾನ್ಯ ಬೆಳೆಯುವ
ಹೊಲಗಳೂ, ನಾನಾ ವಿಧವಾದ ಫಲವೃಕ್ಷಗಳ ತೋ

ವುಗಳೂ ಅವೆ. ಆದರೂ ಆ ಶೀಮೆ ಕಾನಾನದಂತೆ ಫಲಭರಿತವಾದದ್ದಲ್ಲ. ಇದು ಇಸಾಕನು ನುಡಿದ ಆಶೀರ್ವಾದದ ಮಾತಿಗೆ ಸರಿ ಬರುವದು. ಹ್ಯಾಗಂದರೆ: ನಿನ್ನ ನಿವಾಸವು ಕಸ ಉಳ್ಳ ಭೂಮಿಯಲ್ಲಿ ಇರುವದು. ಅದು ಫಲಭರಿತವಾಗುವ ಹಾಗೆ, ಅದಕ್ಕೆ ಆಕಾಶದಿಂದ ಮಂಜು ಮಳೆ (ತೇವ) ಆಗುವದು. ಕತ್ತಿಯಿಂದ ಯುದ್ಧ ಮಾಡಿ ಸುಲುಕೊಂಡು ಬದಕುವಿ. ೪೦ ವ.—ನೀನು ಕೊಸರಿ ಕೊಳ್ಳುವಾಗ, ಅವನ ನೊಗವನ್ನ ಮುರಿದು ನಿನ್ನ ಕೊರಳಿನಿಂದ ತೆಗದು ಹಾಕುವಿ.) ಅವನ ಅಧಿಕಾರ ನಿನ್ನ ಮೇಲೆ ನಡೆಯದ ಹಾಗೆ ಮಾಡುವಿ. ಈ ಮಾತು ಎಸಾವನ ವಂಶದವರಾದ ಎದೋಮಿಯರ ಚರಿತ್ರೆಯನ್ನು ಸೂಚಿಸುತ್ತದೆ. ಅವರೊಳಗೆ ಅಮಲೇಕಿಯರು ಸಹ ಬಂದ ಹಾಗಾಯಿತು. ೩೬, ೧೨.—ಹಲವು ಕಾಲ ಎದೋಮಿಯರು ಇಸ್ರಾಯೇಲನವರಿಗೆ ಒಳಗಾಗಿದ್ದಿಲ್ಲ. ಅರಸನಾದ ಸೌಲನು ಅವರ ಮೇಲೆ ಯುದ್ಧ ಮಾಡ ತೊಡಗಿದನು. ದಾವೀದನು ಅವರನ್ನ ವಶ ಮಾಡಿ ಕೊಂಡನು. ಆದರೆ ಯೋರಮನ ಆಳ್ವಿಕೆಯಲ್ಲಿ ತಿರಿಗಿ ಬಿದ್ದರು. ಅಮಜಿಯನು ಅವರನ್ನ ಹೊಡೆದು ಅವರ ಕೋಟೆಯಾದ ಸೇಲವನ್ನ ತಕ್ಕೊಂಡನು. ಈ ಪರಿ ಗೆದಿಯುತ್ತ ಸೋಲುತ್ತಾ ಬಂದರು. ಮಕ್ಕಬಯರ ದಿನಗಳಲ್ಲಿ ಬಲಗೊಂಡು, ಕಾನಾನದ ದಕ್ಷಿಣ ಭಾಗದಲ್ಲಿಯೂ, ಹೆಬ್ರೋನಿನ ತನಕ ಹಬ್ಬಿ ಕೊಂಡರು. ತರುವಾಯ ಯೋಹಾನ ಹಿರ್ಕಾನನು ಅವರನ್ನ ಪೂರ್ಣವಾಗಿ ವಶ ಮಾಡಿ ಕೊಂಡು, ಬಲಾತ್ಕಾರ ನಡಿಸಿ, ಅವರಿಗೆ ಪರಿಚ್ಛೇದನೆ ಮಾಡಿಸಿದನು. ಇದರ ಸಲುವಾಗಿ ಅವರು ಸುಮಾರು ೧೦೦ ವರ್ಷ ಕ್ರಿಸ್ತನ ಅತ್ತಲಾಗಿ ಯೂದರೊಳಗೆ ಕೂಡಿ ಹೋಗಿ, ಅವರ ಕೂಡ ಒಂದೇ ಜನಾಂಗವಾದರು. ರಾಜನಾದ ಅಂತಿಪತರನು ಎದೋಮಿಯರವನೇ. ದೊಡ್ಡ ಹೆರೋದನು ಅವನ ಮಗನು. ಕ್ರಿಸ್ತನ ಇತ್ತಲಾಗಿ ೭೦ನೆ ವರ್ಷ ಯೆರೂಸಲೇಮ ಪಟ್ಟಣ ಹಾಳು ಮಾಡುವದಕ್ಕೆ ಸಹಾಯ ಮಾಡಿದರು. ಅಂದಿನಿಂದ ಅವರ ಗೊತ್ತು ಶಿಕ್ಕದಂತೆ, ಮರೆತು ಹೋದರು.

dd) ಎಸಾವನು ಯಾಕೋಬನ ಮೇಲೆ ಹಗೆ ತಾಳಿದ್ದು. ೪೧—೪೬.

೪೧ ವ. ತಂದೆಗೋಸ್ಕರ) ಸಾಯುತ್ತಾನೆ. ಅನಂತರ ಕುಟುಂಬದವರು ದುಃಖ ಪಡುವರು. ಆವಾಗ ಕೊಲ್ಲುವೆನು. ಅಥವಾ ತಂದೆಗೆ ದುಃಖ ಪಡುವ ದಿನಗಳು ಸಮೀಪವಾಗೆವೆ; ಯಾಕಂದರೆ—ಯಾಕೋಬನನ್ನು ಕೊಲ್ಲುವೆನು. ಯಾಕೋಬನ ಶೇಡು ತಕ್ಕೊಳ್ಳದೆ ಬಿಡ ಬಾರದು ಎಂಬ ಮನಸು ಅವನಲ್ಲಿ ಇತ್ತು. ದೇವರ ಶಿಕ್ಷೆಗೆ ಮಣಿಯದವರೆಲ್ಲರು ತಮಗೆ ಕೇಡು ಮಾಡಿದವರ ಶೇಡು ತಕ್ಕೊಳ್ಳುವ ಪ್ರಯತ್ನದಲ್ಲಿದ್ದಾರೆ. ರೆಬೆಕ್ಕಳೂ ಯಾಕೋಬನೂ ಇವರ ಸುತ್ತು ಕುಯುಕ್ತಿ ನಡಿಸಿದ ಪಾಪ ಬಂತು. ಎಸಾವನು ಕಾಯಿನನ ಮಾರ್ಗ ಹಿಡಕೊಂಡು ಹೋಗುತ್ತಾನೆ. ಆದರೆ ದೇವರು ಬುದ್ಧಿಯುಳ್ಳ ರೆಬೆಕ್ಕಳಿಂದ ಅವನ ಸಂಚು ಕೆಡಿಸುತ್ತಾನೆ.

೪೨ ವ.—ಎಸಾವನು ನಿನ್ನನ್ನು ಕೊಂದು ನಿನ್ನ ಶೇಡು ತಕ್ಕೊಳ್ಳುವನು. ೪೩—೪೫ ವ. ರೆಬೆಕ್ಕಳು ಯಾಕೋಬನನ್ನು ಓಡಿ ಹೋಗಲಿಕ್ಕೆ ಸಮ್ಮತಿ ಪಡಿಸುತ್ತಾಳೆ. ಅವನು ೨೦ ವರ್ಷಗಳ ಮೇಲೆ ತಿರಿಗಿ ತಂದೆಯ ಹತ್ತರ ಬಂದಾಗ, ರೆಬೆಕ್ಕಳು ಇನ್ನು ಇದ್ದಳೇನೊ! ಆಗಲೆ ತೀರಿ ಕೊಂಡಿದ್ದಳೆಂದು ತೋರುತ್ತದೆ. ಈ ಪಕ್ಷದಲ್ಲಿ ಯಾಕೋಬನನ್ನು ತಿರಿಗಿ ನೋಡಲಿಲ್ಲ. ಕಳಕೊಳ್ಳುವದು ಯಾಕೆ?) ಎಸಾವನು ಯಾಕೋಬನನ್ನು ಕೊಂದಿದ್ದರೆ, ಅವನು ಓಡಿ ಹೋಗ ಬೇಕಾಗಿತ್ತು. ಇಲ್ಲವೆ ಅವನು ಪ್ರಾಣಶಿಕ್ಷೆ ಪಡ ಬೇಕಾಗಿತ್ತು (೯, ೬). ೪೬ ವ. ಯಾಕೋಬನು ಲಾಬಾನನಲ್ಲಿ ಹೋಗಲಿಕ್ಕೆ ಅಡ್ಡಿ ಆಗದಂತೆ, ಇಸಾಕನನ್ನು ಸಮ್ಮತಿ ಪಡಿಸುತ್ತಾಳೆ.—ನನ್ನ ಜೀವಕ್ಕೆ ಹೇಸಿಕೆಯಾಗೆದೆ; ಇವರಂತೆ ಹೇಥನ ಕುಮಾರ್ತೆಗಳಲ್ಲಿ, ದೇಶದ ಕುಮಾರ್ತೆಗಳಲ್ಲಿ, ಒಬ್ಬಾಕೆಯನ್ನ ಯಾಕೋಬನು ಮದಿವೆ ಮಾಡಿ ಕೊಳ್ಳುವದಾದರೆ—) ನಮ್ಮ ಮಗನಾದ ಯಾಕೋಬನು ಎಸಾವನಂತೆ ಇವರಲ್ಲಿ ಒಬ್ಬಾಕೆಯನ್ನ ಮದಿವೆ ಮಾಡಿ ಕೊಳ್ಳ ಬಾರದು. ಅದಕ್ಕೆ ಅವನು ಲಾಬಾನನಲ್ಲಿ ಹೋಗಿ ಅಲ್ಲಿ ನಮ್ಮ ನೆಂಟರ

ಲ್ಲಿ ಮದಿವೆ ಮಾಡಿ ಕೊಂಡು ಬರಲಿ! ಎಂದು ಹೇಳಿದ ಹಾಗಾಯಿತು. ಇಸಾಕನು ಈ ಮಾತು ಒಳ್ಳೇದೆಂದು ತಿಳಿದು ಯಾಕೋಬನನ್ನು ಸಂತೋಷದಿಂದ ಕಳುಹಿಸುತ್ತಾನೆ. (೨೮, ೧.)

k) ಯಾಕೋಬನು ಹಾರಾನಕ್ಕೆ ಓಡಿ ಹೋದದ್ದು. ಎಸಾವನು ಇನ್ನೊಂಮೆ ಮದಿವೆ ಮಾಡಿ ಕೊಂಡದ್ದು. ಸಂಧಿ ೨೮.

aa) ಯಾಕೋಬನು ತಂದೆಯಿಂದ ಆಶೀರ್ವಾದ ಹೊಂದಿ ಹೊರಟದ್ದು. ೧—೫.

೧. ೨ ವ. ಆಗ್ನಾವಾಕ್ಯ.—ಎದ್ದು ಪದನಾರಾಮಿಗೆ—ಬೆತುವೇಲನ ಮನೆಗೆ ಹೋಗಿ—ಲಾಬಾನನ ಹೆಣ್ಣು ಮಕ್ಕಳಲ್ಲಿ—) (೨೪, ೩.) ಅನ್ಯರಲ್ಲಿ ಹೆಣ್ಣು ತಕ್ಕೊಳ್ಳುವದು ಒಡಂಬಡಿಕೆಯ ಕ್ರಮಕ್ಕೆ ವಿರೋಧವಾಗಿತ್ತು. ಇದು ಇಸಾಕನು ಯಾಕೋಬನಿಗೆ ಕೊಟ್ಟ ಒಂದು ಆಗ್ನೆ.

೩—೫ ವ. ಆಶೀರ್ವಾದದ ಮಾತು. ಮೊದಲು ಇಸಾಕನು ಅರಿಯದಲೆ ಕೊಟ್ಟ ಆಶೀರ್ವಾದವನ್ನ ಈಗ ಬೇಕಾಗಿ ತಿಳಿದು ಕೊಡುತ್ತಾನೆ. ಯಾಕೋಬ ಎಸಾವ ಇವರ ವಿಷಯಕ್ಕೆ ಈಗ ಬೇರೆ ನೆನಿಸುವವನಾದನು. ಕೈಯಲ್ಲಿ ಏನಿಲ್ಲದಿದ್ದರೂ, ತಂದೆಯ ಆಶೀರ್ವಾದವು ಅವನ ಸಂಗಡ ಪರದೇಶಕ್ಕೆ ಬಂದದರಿಂದ, ಕೊರತೆ ಬೀಳಲಿಲ್ಲ. ನಾವು ತಂದೆ ತಾಯಿಗಳ ಮನೆ ಬಿಟ್ಟು ಹೊರಗೆ ಹೋಗ ಬೇಕಾದರೆ, ದೇವರ ಆಶೀರ್ವಾದವೇ ನಮ್ಮನ್ನ ದಾರಿಯಲ್ಲಿ ಪೋಷಿಸುವ ಬುತ್ತಿ.

bb) ಎಸಾವನು ಮತ್ತು ಮದಿವೆ ಮಾಡಿ ಕೊಂಡದ್ದು. ೬—೯.

೬—೮ ವ. ಕನಾನ್ಯರ ಹೆಣ್ಣು ಮಕ್ಕಳಲ್ಲಿ ಹಿತರಲ್ಲವೆಂದು) ಸರಿ ಬೀಳಲಿಲ್ಲವೆಂದು—. ೯ ವ. ಎಸಾವನ ಮನಸು ಯಾವದೆಂದರೆ: ನಾನು ನೆಂಟರಲ್ಲಿ ಒಬ್ಬಾಕೆಯನ್ನ ಮದಿವೆ ಮಾಡಿ ಕೊಂಡು, ತಂದೆ ತಾಯಿಗಳನ್ನ ಮೆಚ್ಚಿಸಲಾರೆನೇ? ನಾನೂ ಹೀಗೆ ಮಾಡುತ್ತೇನೆ. ನನ್ನ ತಂದೆಯ ಮನಸು ನನ್ನ ಕಡೆಗೆ ಮತ್ತು ತಿರಿಗೀತೊ ಏನೊ ನೋಡೋಣ.

cc) ಯಾಕೋಬನು ಪಯಣದಲ್ಲಿ ಇದ್ದದ್ದು. ಅವನು ಕಂಡ ಕನಸು. ೧೦—೨೨.

೧೦ ವ.—ಹಾರಾನಿಗೆ ಹೋಗುವವನಾದನು. ೧೧ ವ.—ಒಂದು ಸ್ಥಳಕ್ಕೆ ಬಂದು—) ಇದು ಕಾನಾನದ ಮಧ್ಯದಲ್ಲಿಯದು. ಯಾಕಂದರೆ ಬೇಥೆಲು ಸಿಖೆಮಿಗೂ ಯೆರೂಸಲೇಮಿಗೂ ನಡುವಿನಲ್ಲಿ ಇತ್ತು. ಸಮೀಪದಲ್ಲಿದ್ದ ಊರೊಳಗೆ ಹೋಗಲಿಲ್ಲ. ಯಾಕಂದರೆ ಚಿಂತಾಕ್ರಾಂತನಾಗಿದ್ದನು. ೧೨ ವ.—ಅದರ ತುದಿ ಆಕಾಶಕ್ಕೆ ಮುಟ್ಟಿತು.) ದೂತರ ಮುಖಾಂತರವಾಗಿ ದೇವರಿಗೂ ಯಾಕೋಬನಿಗೂ ಸಂಗತಿ ಆಯಿತು. ಭೂಲೋಕಕ್ಕೂ ಪರಲೋಕಕ್ಕೂ ಯಾಕೋಬನ ಮುಖದಿಂದ ವ್ಯವಹಾರ ಆಯಿತು ಎಂಬುದಕ್ಕೆ ಈ ಏಣಿ ಸಾದೃಶ್ಯ (ಯೋಹ. ೧, ೫೧).

೧೩—೧೫ ವ. ವಾಗ್ದತ್ತ. ೧೪ ವ. ನೀನು ಪಶ್ಚಿಮಕ್ಕೂ, ಪೂರ್ವಕ್ಕೂ ಉತ್ತರಕ್ಕೂ, ದಕ್ಷಿಣಕ್ಕೂ ಹಬ್ಬಿ ಹೋಗುವಿ.—ನಿನ್ನ ಬೀಜದಲ್ಲಿಯೂ ಭೂಮಿಯ ನರವಂಶಗಳೆಲ್ಲಾ—) ಇಸಾಕನು ಕೊಟ್ಟ ಆಶೀರ್ವಾದವನ್ನ ದೇವರು ದೃಢ ಪಡಿಸುತ್ತಾನೆ. ಪರದೇಶದಲ್ಲಿ ಅನ್ಯರೊಳಗೆ ಇರುವಾಗ, ಬೇರೆ ಬೇರೆ ಕಷ್ಟಗಳು ತನ್ನ ಮೇಲೆ ಬೀಳುವಾಗ್ಯೆ, ದೇವರನ್ನ ಮರೆಯದ ಹಾಗೆ, ಅಂಥಾ ದೀಕ್ಷೆ ಯಾಕೋಬನಿಗೆ ಅಗತ್ಯವಾಗಿತ್ತು. ದೇವರು ಮೊದಲು ಆಯುಧಗಳನ್ನು ಕೊಡುತ್ತಾನೆ. ತರುವಾಯ ಯುದ್ಧಕ್ಕೆ ಕಳುಹಿಸುತ್ತಾನೆ. ದಿಕ್ಕು ಕಾಣದಿದ್ದರೂ, ದೇವರ ಜಾಡೆ ಹಿಡಕೊಂಡು ಹೋಗು! ಮೆಲ್ಲಮೆಲ್ಲಗೆ ನಿನ್ನ ಮೇಲೆ ಪರಲೋಕ ತೆರೆದು ಅಲ್ಲಿಂದ ಲೋಕ ಗ್ರಹಿಸಲಾರದ ದೇವರ ಸಮಾ

ಥಾನ ಧೈರ್ಯ ಸಂತೋಷಗಳು ನಿನ್ನ ಮೇಲೆ ಬರುವವು. ಅದೃಶ್ಯ ಲೋಕಕ್ಕೂ ನಿನಗೂ ಬಳಿಕೆ ಆಗುವದು. ೧೬ ವ. ಅರಿಯಲಿಲ್ಲವೆಂದು) ದೇವರು ಎಲ್ಲೆಲ್ಲಿಯೂ ಇದ್ದಾನೆಂಬದು ಅವನಿಗೆ ಗೊತ್ತಿತ್ತು. ಆದರೂ ಆತನು ಇಂಥಾ ವಿಶೇಷ ರೀತಿಯಿಂದ ಇಲ್ಲಿ ತನ್ನನ್ನು ಪ್ರಕಟ ಮಾಡುವನೆಂದು ಯಾಕೋಬನು ತಿಳಿಯಲಿಲ್ಲ.

೧೭ ವ. ನಾವು ಇನ್ನು ಪಾಪಿಷ್ಟರಾಗಿರುವದರಿಂದ ದೇವರ ಸಮೀಪದಲ್ಲಿರ ಬೇಕಾದರೆ, ಭಯ ಬರುತ್ತದೆ. ನಾವು ದೇವರ ಪ್ರೀತಿಯನ್ನು ಪೂರ್ಣವಾಗಿ ಅನುಭವಿಸಿ, ಸಂಪೂರ್ಣ ಪ್ರೀತಿಯನ್ನು ಮಾಡುವವರಾಗುತ್ತಲೆ, ಈ ಭಯ ಹೋಗುವದು. ದೇವರ ಕೃಪೆಬಲ ಅನುಭವಿಸುವಲ್ಲಿ, ಪರಲೋಕದ ಸುಳುವು ಕಾಣುತ್ತೇವೆ. ಅಲ್ಲಿ ಪರಲೋಕಕ್ಕೆ ಏರಿ ಹೋಗುವ ಮಾರ್ಗವದೆ. ಪಾಪದ ಬಲ ಅನುಭವಿಸುವಲ್ಲಿ, ನರಕದ ಸುಳುವು ಕಾಣುವದು. ಅಲ್ಲಿ ನರಕದ ಬಾಗಲು, ನರಕಕ್ಕೆ ಇಳಿಯುವ ಮಾರ್ಗ ಅದೆ.

೧೮ ವ.—ಕಲ್ಲು ತೆಗೆದು ಅದನ್ನು ಗುರುತಾಗಿ ನಡಿಸಿ—) ಅವನ್ನು ಅಭಿಷೇಕಿಸಿ ಶುದ್ಧ ಮಾಡಿದನು. ೧೯ ವ. ಬೇಥೆಲು = ದೇವಮನೆ. ೧೨, ೮.— ಲೂಜ = ಬಾದಾಮಿಗಿಡ, ಆ ಸ್ಥಳದ ಸಮೀಪದಲ್ಲಿದ್ದ ಊರಿನ ಮುಂಚಿನ ಹೆಸರು (ಯೆಹೊಶು. ೧೮, ೧೩). ಆದರೆ ಈ ಮುಂಚಿನ ಹೆಸರೂ, ಯಾಕೋಬನು ಇಟ್ಟ ಹೆಸರೂ, ಕೂಡಾ ಹಲವು ಕಾಲ ವ್ಯವಹರಿಸುತ್ತಿದ್ದವು. ೨೦. ೨೧ ವ.— ಹರಿಕೆ ಮಾಡಿ) ಯಾಕೋಬನು ದೇವರಿಗೆ ಪ್ರೀತಿ ವಿಧೇಯತ್ವ ಸಲ್ಲಿಸುವೆನೆಂಬದಾಗಿ ತನಗೆ ನಿಬಂಧನ ಮಾಡಿದ ಹಾಗಾಯಿತು. ಅವನು ಮಾಡಿದ ಹರಿಕೆಯಲ್ಲಿ ಮೂರು ಮಾತುಗಳು: ೧) ಕರ್ತನೇ ನನ್ನ ದೇವರೆಂದು ತಿಳಿದು, ಆತನಿಗೆ ನಡ ಕೊಳ್ಳುವೆನು. ೨) ಆತನಿಗೆ ಬೇಥೆಲಿನಲ್ಲಿ ಪೀಠ ಮನೆ ಕಟ್ಟುವೆನು. ೩) ಹತ್ತರಲ್ಲಿ ಒಂದು ಪಾಲನ್ನು ಕೊಡುವೆನು. ೨೨ ವ. ಮತ್ತು ಗುರುತಾಗಿ ನಾನು ನಡಿಸಿದ ಈ ಕಲ್ಲು ದೇವರ ಮನೆಯಾಗಿರುವದು.) ಈ ಕಲ್ಲಿನಿಂದ ಗೊತ್ತು ಮಾಡಿದ ಸ್ಥಳದಲ್ಲಿ ದೇವರಿಗೆ ಒಂದು ಮನೆಯಾಗುವದು. ೩೫, ೧—೮. ಯಾಕೋಬನು ಹೊತ್ತ ಹರಿಕೆ ಸಲ್ಲಿಸಿದ್ದು ಅಲ್ಲಿ ಹೇಳಿದ್ದಾಯಿತು.— ಹತ್ತರಲ್ಲಿ ಒಂದು ಪಾಲನ್ನು) ದ್ವಿತಿ. ೧೪, ೨೨. ೨೩. ನೇಮಿಸಿದಂತೆ ಮಾಡಿದ್ದಾನು. ಈ ಮರ್ಯಾದೆ ಯಾಕೋಬನ ಸಂತತಿಯವರಲ್ಲಿ ವರ್ತಿಸುತ್ತ ಬಂದದರಿಂದ, ಮೋಸೆಯು ಅದನ್ನು ದೇವರ ಅಪ್ಪಣೆಯ ಪ್ರಕಾರ ಸ್ಥಿರವಾಗಿ ನೇಮಿಸಿದನು.

1) ಯಾಕೋಬನು ಲಾಬಾನನಲ್ಲಿ ಬಂದದ್ದು, ಮದಿವೆ ಮಾಡಿ ಕೊಂಡದ್ದು. ೨೯, ೧ — ೩೦.

aa) ಯಾಕೋಬನು ಹಾರಾನಕ್ಕೆ ಮುಟ್ಟಿದ್ದು. ೨೯, ೧—೧೪.

೧ ವ. ಆ ಮೇಲೆ ಯಾಕೋಬನು ಕಾಲಿಟ್ಟು— ದೇಶಕ್ಕೆ ಹೋದನು.) ಹಾರಾನವು ಕಾನಾನಕ್ಕೆ ಉತ್ತರ ಪೂರ್ವದಲ್ಲಿತ್ತು. ೨ ವ.— ಮಂದೆಗಳಿಗೆ ಕುಡಿಸುವರು. ೩ ವ.—ಬಾಯಿಗೆ ತಿರಿಗಿ ಇಡುವರು.) ಅರಬಿಯದ ದೊಡ್ಡ ಅರಣ್ಯದಲ್ಲಿ ಘಾಳಿ ಬಹಳ ಉಸಗು ಬಡಕೊಂಡು ಬರುತ್ತಿದ್ದದರಿಂದ, ಮುಚ್ಚದ ಪಕ್ಷದಲ್ಲಿ ಬೇಗ ಹುಕ್ಕೊಂಡು ಹೋಗುತ್ತಿತ್ತು. ೪ ವ. ಈ ಭಾವಿ ಹಾರಾನ ಎಂಬ ಊರಿಗೆ ದೂರವಿತ್ತು. ೨೪ನೆ ಸಂಧಿಯಲ್ಲಿ ಹೇಳಿರುವ ಭಾವಿ ಬೇರೆ, ಇದು ಬೇರೆ. ಭಾವಿಯ ಹತ್ತರ ಒರಗಿ ಕೊಂಡ ಕುರಿಗಳು ಇದ್ದವರ ಕೂಡ ಮಾತಾಡುತ್ತಾನೆ.

೫ ವ. ನಾಹೊರನ ಮಗನಾದ) ಲಾಬಾನನು ನಾಹೊರನ ಮೊಮ್ಮಗನು. ಆದರೆ ಹಿಬ್ರು ಭಾಷೆಯಲ್ಲಿ ಮಗನೆಂಬ ಶಬ್ದ ಮೊಮ್ಮಗನು ಮರಿಮಗನು ಒಟ್ಟಿಗೆ ಸಂತತಿಯವನು ಎಂಬರ್ಥದಲ್ಲಿಯೂ ವರ್ತಿಸುವದು. ೮ ವ. ಎಲ್ಲಾ ಹಿಂಡುಗಳು ಕೂಡಿ ಬಂದ ತರುವಾಯ, ಭಾವಿಯ ಬಾಯಿಂದ ಕಲ್ಲನ್ನು ತೆಗೆಯುವರು. ೯ ವ.— ಮಾತಾಡುತ್ತಿರಲಾಗಿ, ರಾಹೆಲಳು ತನ್ನ ತಂದೆಯ ಕುರಿಗಳ ಸಂಗಡ ಬಂದಳು. ಯಾಕಂದರೆ ಆಕೆ ಕುರಿ ಕಾಯುವಾಕೆ.) ರಾಹೆಲ = ಕುರಿ. ೧೦ ವ. ಆಕೆಯನ್ನ ನೋಡಿ ಯಾಕೋಬನು ತನ್ನವರನ್ನು ತಿರಿಗಿ ಕಂಡ ಹಾಗಾದ್ದರಿಂದ, ಬಹಳ ಸಂತೋಷವಾ

೧೨೮ ಯಾಕೋಬನ ಮದಿವೆಯೂ ಅವನಿಗಾದ ಪುತ್ರದಾನವೂ.

ಉತ್ಪತ್ತಿ. ೨೮, ೧೫—೩೦. ೨೯, ೩೧—೩೫. ೩೦, ೧—೨೪.

ಯಿತು. ತಾನು ಪರದೇಶಿ ಎಂಬದು ಮರೆತು ಹೋಯಿತು. ೧೨ ವ. ತಮ್ಮನೆಂದು) ನೆಂಟನು. ನೆಂಟರೂ ಬೀಗರೂ ಹಿಬ್ರುಭಾಷೆಯಲ್ಲಿ ಸಹೋದರರೆಂದೆನಿಸುತ್ತಾರೆ.

೧೩ ವ.—ಓಡಿ ಬಂದು—ಅವನನ್ನು ಅಪ್ಪಿ ಕೊಂಡು ಅವನಿಗೆ ಮುದ್ದಿಟ್ಟು ಅವನನ್ನು ಮನೆಗೆ—. ೧೪ ವ.—ಅವನ ಬಳಿಯಲ್ಲಿ ಒಂದು ತಿಂಗಳ ದಿವಸ ಇದ್ದನು.

bb) ಯಾಕೋಬನು ಲೇಯಳನ್ನೂ ರಾಹೇಲಳನ್ನೂ ಮದಿವೆ ಮಾಡಿ ಕೊಂಡದ್ದು. ೧೫—೩೦.

೧೭ ವ.—ಆದರೆ ರಾಹೇಲಳು ರೂಪದಲ್ಲಿಯೂ ನೋಟದಲ್ಲಿಯೂ ಸುಂದರಿಯಾಗಿದ್ದಳು. ೨೩ ವ.—ಲೇಯಳನ್ನು ಅವನ ಬಳಿಗೆ ಕರಕೊಂಡು ಬಂದನು.) ಮದಲಗಿತ್ತಿಯನ್ನ ಮದಲಿಂಗನಿಗೆ ಒಪ್ಪಿಸಿ ಕೊಡುವಾಗ, ಆಕೆಗೆ ಮುಸುಕು ಹಾಕುತ್ತಿದ್ದರು. ಅದಕ್ಕೆ ಯಾಕೋಬನು ಆಕೆಯ ಗುರುತು ಹಿಡಿಯಲಾಗಲಿಲ್ಲ. ಯಾಕೋಬನು ತನ್ನ ತಂದೆಯನ್ನ ವಂಚಿಸಿದಂತೆ, ಲಾಬಾನನು ಅವನನ್ನು ಮೋಸಗೊಳಿಸುತ್ತಾನೆ. ಹೀಗೆ ಅವನಿಗೆ ಮುಯ್ಯಿಗೆ ಮುಯ್ಯಿ ಆಯಿತು. ಒಬ್ಬನು ಎರಡನೆಯವರಿಗೆ ವಂಚನೆ ಮಾಡಿದರೆ, ವಂಚನೆಯ ಬೀಜ ಬಿತ್ತಿದ ಹಾಗಾಯಿತು. ಅದರಿಂದ ತನಗೆ ವಂಚನೆ ಹುಟ್ಟದೆ ಹೋಗಲಿಕ್ಕಿಲ್ಲ. ಈ ಮೇರಿಗೆ ಪಾಪಿಷ್ಟರಿಗೆ ಶಿಕ್ಷೆ ಆಗುವ ಹಾಗೆ, ದೇವರು ಈ ಲೋಕದಲ್ಲಿ ಕ್ರಮವಿಟ್ಟಿದ್ದಾನೆ. ೨೭ ವ.—ಈಕೆಯ ವಾರ ಪೂರೈಸು) ಮದಿವೆ ಏಳು ದಿವಸ ಆಗುತ್ತಿತ್ತು. ಈಕೆಯ ಮದಿವೆಯ ವಾರವನ್ನು ಪೂರೈಸು = ಎಲ್ಲಾ ಆಚರಿಸಿ ಈಕೆಯ ಮದಿವೆ ಮಾಡಿ ಕೊಂಡಿರು! ಈ ಮದಿವೆವಾರ ತೀರಿದನಂತರ, ರಾಹೇಲಳನ್ನ ನಿನಗೆ ಮದಿವೆ ಮಾಡಿ ಕೊಡುತ್ತೇನೆ. ಆದರೆ ಆಕೆಗೋಸ್ಕರ ನೀನು ನನಗೆ ಇನ್ನು ಏಳು ವರುಷ ದುಡಿಯ ಬೇಕು.

ಪರಿಶಿಷ್ಟ: ಲಾಬಾನನು ಸ್ವಾರ್ಥ ನೋಡುವವನೂ, ಲೋಭಿಯೂ. ರಾಹೇಲಳನ್ನ ಮೊದಲು ಯಾಕೋಬನಿಗೆ ವಿವಾಹ ಮಾಡಿ ಕೊಟ್ಟಿದ್ದರೆ, ಅವನು ಲೇಯಳನ್ನ ಮಾಡಿ ಕೊಳ್ಳುತ್ತಿದ್ದಿಲ್ಲ. ಯಾಕೋಬನು ರಾಹೇಲಳ ಮೇಲೆ ಅತ್ಯಧಿಕ ಪ್ರೀತಿ ಮಾಡಿದ್ದರಿಂದ, ಇಬ್ಬರು ಹೆಂಡರ ತೊಡಕಿಗೆ ಬಿದ್ದನು. ಅಂದು ತೆರವು ಕೊಡುವದು ಲೋಕರೂಢಿಯಾಗಿತ್ತು. ಯಾಕಂದರೆ ಸ್ತ್ರೀಯೂ ಪೂರ್ಣ ಸ್ವತಂತ್ರಿ ಎಂದು ಆಗಿನವರು ಅರಿತಿದ್ದಿಲ್ಲ. ಕ್ರಿಸ್ತನ ಮುಖದಿಂದ ನರಜಾವ ಪೂರ್ಣವಾಗಿ ತಿಳಿಯ ಬಂದ ಬಳಿಕ, ಸ್ತ್ರೀಯೂ ಪುರುಷನಂತೆ ಸ್ವತಂತ್ರಿ ಎಂಬುದು ಗೊತ್ತಾಯಿತು. ಒಟ್ಟಿಗೆ ಕ್ರಿಸ್ತನ ಅತ್ತ ಮನುಷ್ಯರು, ವಿಶೇಷವಾಗಿ ಸ್ತ್ರೀಯರು, ಅಗ್ಗವಾಗಿದ್ದರು. ಇಂದೂ ಅನ್ಯ ಜನರಲ್ಲಿ ಹಾಗೆ ವರ್ತಿಸುವದುಂಟು. ಇತ್ತಲಾಗಿ ಪುರುಷರದಾಗಲಿ, ಸ್ತ್ರೀಯರದಾಗಲಿ, ಮನುಷ್ಯರ ಆತ್ಮ ಅಮೂಲ್ಯವೆಂದು ಗೊತ್ತಾದ ಮೇಲೆ, ತೆರವು ತಕ್ಕೊಂಡು ಮಾರಾಟ ಮಾಡುವದು ಅಗದಿ ಯುಕ್ತವಲ್ಲ.

m) ಯಾಕೋಬನಿಗೆ ಆದ ಪುತ್ರದಾನ. ೨೯, ೩೧—೩೫. ಮತ್ತು ೩೦, ೧—೨೪.

೩೧ ವ. ಯಾಕೋಬನು ಲೇಯಳ ಮೇಲೆ ರಾಹೇಲಳಿಗೆ ಮಾಡಿದಷ್ಟು ಪ್ರೀತಿ ಇಡಲಿಲ್ಲ. ಇದು ಆಕೆಗೆ ಹಗೆ ಎಂದು ತೋರಿತು. ದೇವರು ಬಹಳವಾಗಿ ಮನುಷ್ಯರು ಅಲಕ್ಷ್ಯ ಮಾಡಿದ್ದನ್ನ ಆದು ಕೊಳ್ಳುವನು. ದೀನರ ಮತ್ತು ಅನ್ಯಾಯ ಪಡುವವರ ಪಕ್ಷ ಹಿಡಿಯುತ್ತಾನೆ.

೩೦, ೩ ವ. ಸಾರಳು ಅವಸರದಿಂದ ವಿಶ್ವಾಸವಿಲ್ಲದಕ್ಕೆ ನಡಿಸಿದ ಉಪಾಯ (೧೬, ೨).—ಅವಳು ಹೆತ್ತು ನನ್ನ ಉಡಲಲ್ಲಿ, ಹಾಕಿದರೆ, ನಾನು ಹೆಚ್ಚುವೆನು. ೮ ವ.—ರಾಹೇಲಳು—ಅಧಿಕವಾದ ಹೋರಾಟಗಳಿಂದ ಅಥವಾ ದೇವರ ಹೋರಾಟಗಳಿಂದ—) ದಾಸಿಯ ಮುಖಾಂತರವಾಗಿ ನನಗೆ ಮಕ್ಕಳು ಹುಟ್ಟಿ ನನ್ನ

ಅಕ್ಕ ಸೋತದ್ದು ನನ್ನಿಂದಲ್ಲ, ನನ್ನ ಪ್ರಾರ್ಥನೆ ಕೇಳಿದ ದೇವರ ತ್ರಾಣದಿಂದಲೇ ಆಯಿತು.

೯—೧೩ ವ. ಲೇಯಳು ಹೊಟ್ಟೆಕಿಚ್ಚು ಪಟ್ಟು ರಾಹೆಲಳ ಉಪಾಯ ನಡಿಸುತ್ತಾಳೆ.

೧೧ ವ. — ಲೇಯಳು — ಶುಭಮಸ್ತು (ಶುಭವಾಗಲಿ, ಶುಭವಾಯಿತು) ಎಂದು ಹೇಳಿ ಮುಂ.

೧೩ ವ. ನನ್ನ ಭಾಗ್ಯಕ್ಕೆ ಆಯಿತು; ಯಾಕಂದರೆ ಮುಂ. ೧೪—೨೧ ವ. ರಾಹೆಲಳು ಮರುಳತನದ ಉಪಾಯಕ್ಕೆ ಬಿದ್ದು ಮೋಸ ಹೋಗುತ್ತಾಳೆ. ೧೪ ವ.— ಗೋಧಿ ಕೊಯ್ಯುವ (ಕೀಳುವ) ಕಾಲದಲ್ಲಿ ಹೋಗಿ, ಹೊಲದಲ್ಲಿ ದುದಾಯಗಳನ್ನ ಕಂಡು ಕೊಂಡು, ತಾಯಿಯಾದ—) ದುದಾಯಗಳು = ಮಂದ್ರಗೋರ ಎಂಬಗಿಡ (Mandragora). ಅವನ್ನ ತಿಂದರೆ, ಕಾಮಾತುರ ಏಳುವದಂತೆ. ದೇವರು ಅಂಥಾ ಹಂಚಿಕೆ ನಡಿಸಿದಾಕೆಗೆ ಅಲ್ಲ, ಅವನ್ನ ಸೇವಿಸದ ಲೇಯಳಿಗೆ ಮಕ್ಕಳನ್ನ ಕೊಟ್ಟಲ್ಲಿ, ಇಂಥಾ ಲೌಕಿಕ ಸಾಧನಗಳಿಂದಲ್ಲ, ನನ್ನ ಆಶೀರ್ವಾದದಿಂದಲೇ ಗರ್ಭಫಲವಾಗುವದೆಂದು ತೋರಿಸುತ್ತಾನೆ. ೧೮ ವ. — ನನ್ನ ಮಗನ ದುದಾಯಗಳಿಗೆ ನಿನ್ನನ್ನು ಸಂಪಾದಿಸಿ ಕೊಂಡಿದ್ದೇನೆ ಮುಂ. ೨೦ ವ.— ಆರು ಮಂದಿ ಗಂಡು ಮಕ್ಕಳನ್ನ ಮುಂ. ೨೨—೨೪ ವ. ರಾಹೆಲಳು ಲೌಕಿಕ ಸಾಧನಗಳನ್ನ ನಡಿಸದೆ ಬಿಟ್ಟು, ದೇವರಿಗೆ ತನ್ನ ದುಃಖ ಹೇಳಿ ಕೊಳ್ಳುವವಳಾದ ಬಳಿಕ, ಸಹಾಯವಾಯಿತು.

ಯಾಕೋಬನಿಗೆ ಹುಟ್ಟಿದ ಮಕ್ಕಳ ಪಟ್ಟಿ:

a) ಲೇಯಳಿಂದ

೧) ರೂಬೇನ (ಇಗೋ ಮಗನು, ನೋಡಿರಿ! ಒಬ್ಬ ಮಗನು!)
೨) ಸಿಮೆಯೋನ್ (ಕೇಳ್ವಿಕೆ. ದೇವರು ಪ್ರಾರ್ಥನೆ ಕೇಳಿದ್ದು. ಶ್ರವಣಪ್ಪ.)
೩) ಲೇವಿ (ಹತ್ತಿ ಕೊಳ್ಳುವದು, ಕೂಡಿ ಕೊಳ್ಳುವದು.)
೪) ಯೆಹೂದನು (ದೇವಸ್ತುತಿ.)

b) ರಾಹೆಲಳ ದಾಸಿಯಾದ ಬಿಲ್ಹಳಿಂದ

೫) ದಾನನು (ನ್ಯಾಯ ತೀರಿಸಿದ್ದಾನೆ, ನ್ಯಾಯಾಧೀಶ.)
೬) ನೆಫ್ತಲಿ (ನನ್ನ ಹೋರಾಟ.)

c) ಲೇಯಳ ದಾಸಿಯಾದ ಜಿಲ್ಫಳಿಂದ

೭) ಗಾದ್ (ಶುಭ, ಶುಭಪ್ಪ.)
೮) ಅಶೇರ (ಭಾಗ್ಯವಂತ.)

d) ಮತ್ತು ಲೇಯಳಿಂದ

೯) ಇಸ್ಸಕಾರ (ಕೂಲಿ ಅದೆ.)
೧೦) ಜೆಬುಲೋನ (ವಾಸಸ್ಥಳ, ಮನೆ, ವಾಸಪ್ಪ.)

ಯಾಕೋಬನು ಐಶ್ವರ್ಯವುಳ್ಳವನಾದದ್ದು.

ಉತ್ಪತ್ತಿ. ೩೦, ೨೫—೪೩.

e) ರಾಹೇಲಳಿಂದ

೧೧) ಯೋಸೇಫನು (ಅವನು ಕೂಡಿಸಲಿ, ಹೆಚ್ಚಿಗೆ.)

೧೨) ಬೆನೋನಿ (ನನ್ನ ಕಷ್ಟದ ಮಗನು, ತಾಯಿ ಇಟ್ಟ ಹೆಸರು.)

ಬೆನ್ಯಮೀನನು (ನನ್ನ ಬಲಗಡೆಯ ಮಗನು, ತಂದೆ ಇಟ್ಟ ಹೆಸರು.)

ಉತ್ಪ. ೩೫, ೧೬—೧೮.

ii) ಯಾಕೋಬನು ಐಶ್ವರ್ಯವುಳ್ಳವನಾದದ್ದು. ೩೦, ೨೫—೪೩.

೨೬ ವ. ಆ ೧೪ ಸೇವೇ ವರ್ಷಗಳು ಮುಗಿಯ ಬಂದಾಗ, ಯಾಕೋಬನು ೯೧ ವರ್ಷದವನಾದಾಗ, ಯೋಸೇಫನು ಹುಟ್ಟಿದನು. ಈ ಮಕ್ಕಳೆಲ್ಲಾ ಏಳು ವರ್ಷಗಳೊಳಗೆ ಜನಿಸಿದರು. ರೂಬೇನನು ೫ ವರುಷದ ಹುಡುಗನಾಗಿ ಕುರುಬರ ಕೂಡ ಹೊಲಕ್ಕೆ ಹೋಗಿ, ಆ ದುದಾಯ ಎಂಬ ಗಿಡ ಕಂಡು ಕೊಂಡಿರ ಬಹುದು.—ಲಾಬಾನನ ಮನೆಯಲ್ಲಿ ಇನ್ನು ಇರಲಿಕ್ಕೆ ಯಾಕೋಬನಿಗೆ ಮನಸ್ಸು ಇಲ್ಲ. ಮನೆಯ ಕಡೆಗೆ ತಿರಿಗಿ ಅಪೇಕ್ಷೆ ಆಯಿತು (೨೮, ೧೫.)

೨೭. ೨೮ ವ. ಯಾಕೋಬನ ಮುಖಾಂತರ ಲಾಬಾನನು ದೇವರ ಆಶೀರ್ವಾದ ಹೊಂದಿದನು. ಭಯ ಭಕ್ತಿಯುಳ್ಳ ಸೇವಕರಿಂದ ಎಷ್ಟು ಉಪಯೋಗ! ಭಯಭಕ್ತಿ ನೋಡಿ ಸೇವಕರನ್ನ ಇಟ್ಟು ಕೊಳ್ಳಬೇಕು. ಪ್ರಾರ್ಥನೆ ಮಾಡುವವರು ಒಂದು ಮನೆಯಲ್ಲಿ ಎಷ್ಟು ಹೆಚ್ಚೋ ಅಷ್ಟು ಹೆಚ್ಚು ಕಂಬ ಅದಕ್ಕೆ ಕೊಟ್ಟ ಹಾಗಾಯಿತು.

೩೦ ವ.—ಈಗ ನಾನೂ ಯಾವಾಗ ನನ್ನ ಮನೆಗೋಸ್ಕರ ಕೆಲಸ ಮಾಡ ಬೇಕು?) ಸ್ವಂತ ಬದಕು ಯಾವಾಗ ಮಾಡ ಬೇಕು? ೩೨ ವ.—ಅದರಲ್ಲಿ ಚುಕ್ಕೆಯೂ—ಉಳ್ಳವುಗಳನ್ನೆಲ್ಲಾ ಬೇರೆ ಮಾಡೋಣ! ಮುಂ.) ಯಾಕೋಬನು ಮೊದಲು ಕುರಿಹಿಂಡಿನಲ್ಲಿಯೂ, ಆಡುಹಿಂಡಿನಲ್ಲಿಯೂ, ಇದ್ದಂಥಾ ಚುಕ್ಕೆಯೂ ಮಚ್ಚೆಯೂ ಕಪ್ಪು ವರ್ಣವೂ ಉಳ್ಳವುಗಳನ್ನೆಲ್ಲಾ ಹಿಂಡಿನಿಂದ ತೆಗೆದು ಬೇರೆ ಮಾಡ ಬೇಕು. ಹೀಗೆ ಹಿಂಡಿನಲ್ಲಿ ಬಿಳೇವು ಮಾತ್ರ ಉಳಿದ ಬಳಿಕ, ಅವುಗಳಲ್ಲಿ ಚುಕ್ಕೆ ಮಚ್ಚೆ ಕಪ್ಪು ಆಗಿದ್ದಂಥಾವು ಹುಟ್ಟಿದರೆ, ಅವೇ ತನ್ನವು ಅಂದ ಹಾಗಾಯಿತು. ಹೀಗಾಗುವದು ಬಹಳ ಅಪರೂಪ. ಈ ಮೇರೆಗೆ ತೀರ ಸಣ್ಣಾ ಸಂಬಳ ಕೇಳಿದ ಹಾಗಾಯಿತು. ೩೩ ವ. ನನಗೆ ಸಂಬಳವಾಗಿ ಗೊತ್ತು ಮಾಡಿದ ಕುರಿ ಆಡುಗಳನ್ನ ಮುಂದೆ ನೀನು ನೋಡಲಿಕ್ಕೆ ಬರುವಾಗ, ನನ್ನ ನೀತಿ ನನಗೋಸ್ಕರ ಉತ್ತರ ಕೊಡುವದು.) ನಾನು ನಿನಗೆ ಮೋಸ ಮಾಡುವದಿಲ್ಲ. ದೇವರು ನನಗೆ ಮೆಚ್ಚಿ ತನ್ನ ಆಶೀರ್ವಾದ ಕೊಟ್ಟು ಅದನ್ನ ಪ್ರಕಟ ಮಾಡುವನು.

೩೫ ವ.—ಎಲ್ಲಾ ಆಡುಗಳನ್ನೂ ಸ್ವಲ್ಪ ಬಿಳುಪು ಆಗಿದ್ದವುಗಳನ್ನೂ ಕುರಿಮರಿಗಳಲ್ಲಿ ಮುಂ.) ವಿಚಿತ್ರ ವರ್ಣವುಳ್ಳಂಥಾವನ್ನ ಮಕ್ಕಳ ಕೈಯಲ್ಲಿ ಕೊಟ್ಟು, ಬಿಳೀ ಕುರಿಗಳನ್ನೂ ಅಪೂಟ ಕಪ್ಪು ಆಡು ಹೋತುಗಳನ್ನೂ ಯಾಕೋಬನ ಕೈಯಲ್ಲಿ ಕೊಟ್ಟು, ಇವನ್ನ ಅವನ್ನ ಬೇರೆ ಬೇರೆ ಮೇಯಿಸಿದನು. ಹೀಗಿರಲಾಗಿ ಲಾಬಾನನ ಪಾಲಿನಲ್ಲಿ ಬರೆ ಬಿಳೇ ಕುರಿಗಳೂ, ಬರೆ ಕಪ್ಪು ಆಡು ಹೋತುಗಳೂ ಇದ್ದವು. ಆದರೆ ಯಾಕೋಬನ ಸಣ್ಣಾ ಪಾಲಿನಲ್ಲಿ ಬರೆ ವಿಚಿತ್ರ ವರ್ಣವುಳ್ಳ ಕುರಿ ಆಡು ಹೋತುಗಳು ಇದ್ದವು. ಇವನ್ನ ಲಾಬಾನನ ಗಂಡು ಮಕ್ಕಳು ಮೇಯಿಸುತ್ತಿದ್ದರು. ಈ ಪ್ರಕಾರವಾಗಿ ಲಾಬಾನನು ಯಾಕೋಬನು ಕೂಡಿ ಮಿಸ್ರವಾಗದ ಹಾಗಾಯಿತು. ತನಗೆ ಬಹಳ ಲಾಭವಾಗುವ ಹಾಗೆ, ಮಾಡಿದೆನೆಂದು ಲಾಬಾನನು ಸಂತೋಷದಿಂದ ಯಾಕೋಬನ ಮಾತಿಗೆ ಒಡಂಬಟ್ಟನು. ಆದರೆ ಯುಕ್ತಿಯುಳ್ಳ ಲಾಬಾನನಿಗಿಂತ ಯಾಕೋಬನು ಯುಕ್ತಿವಂತನು. ಹಾಗೂ ಅವನು ಆಶೀರ್ವಾದಕ್ಕೆ ಬಾಧ್ಯನು. ೩೭—೩೯ ವ. ತನ್ನ ಪಾಲಿಗೆ ಬರುವ ವಿಚಿತ್ರ ವರ್ಣವುಳ್ಳಂಥಾವು ಬಹಳ ಹುಟ್ಟುವ ಹಾಗೆ ಯಾಕೋಬನು ನಡಿಸಿದ ಮೊದಲನೆ ಯುಕ್ತಿ.—ಬಿಳೇ

ಕೇಪೆಗಳನ್ನ ಮಾಡ ಸುಲಿದನು. ಹಿಂಡುಗಳು ಕುಡಿಯಲಿಕ್ಕೆ ಬರುವ ದೋಣಿಗಳಲ್ಲಿ—ನೀರಿನ ಕಾಲಿವೆಗಳಲ್ಲಿ—ತಾನು ಸುಲಿದ ಕೋಲುಗಳನ್ನ ಮಂದೆಗಳಿದುರಿಗೆ ಇಟ್ಟನು. ಅವು ಕುಡಿಯಲಿಕ್ಕೆ ಬರುವಾಗ, ಸೂಲಾಗುವವು. ಆ ಮಂದೆಗಳು ಆ ಕೋಲುಗಳ ಮುಂದೆ ಸೂಲಾಗಿ ಮುಂ.

೪೦ ವ. ಯಾಕೋಬನು ತನ್ನ ಬದಕನ್ನ ಹೆಚ್ಚಿಸಲಿಕ್ಕೆ ನಡಿಸಿದ ಎರಡನೆ ಯುಕ್ತಿ: ಮತ್ತು ಯಾಕೋಬನು ಮರಿಗಳನ್ನ ಬೇರೆ ಮಾಡಿದನು. ಇದಲ್ಲದೆ (ಲಾಬಾನನ ಪಾಲಿಗೆ ಬರುವಂಥಾ ಬಿಳೇವುಗಳಾದಂಥಾ) ಮಂದೆಗಳ ಮುಖಗಳನ್ನು (ಯಾಕೋಬನ ಪಾಲಿಗೆ ಬರುವಂಥಾ) ವಿಚಿತ್ರ ವರ್ಣವುಳ್ಳಂಥವುಗಳ ಇದುರಿಗೆ, ಕಪ್ಪಾದವುಗಳನ್ನೆಲ್ಲಾ (ಲಾಬಾನನವು) ಬಿಳೆ ಮಂದೆಗಳ ಇದುರಿಗೆ ಇಟ್ಟು, ತನಗೆ ಬೇರೆ ಹಿಂಡುಗಳನ್ನ ಮಾಡಿ ಕೊಂಡು, ಅವನ್ನ ಲಾಬಾನನ ಮಂದೆಗಳಲ್ಲಿ ಕೂಡಿಸಲಿಲ್ಲ.) ಈ ಯುಕ್ತಿಯನ್ನು, ಕುರಿಗಳು ಸೂಲಾಗಿರುವ ಸಮಯದಲ್ಲಿ, ಮಾಡಿದ್ದರಿಂದ, ವಿಚಿತ್ರ ವರ್ಣವುಳ್ಳಂಥಾವು ಬಹಳ ಹುಟ್ಟಿದವು. ಕುರಿ ಆಡುಗಳು ಸೂಲಾಗುವ ಹೊತ್ತಿನಲ್ಲಿ ಏನು ದೃಷ್ಟಿಗೆ ಬೀಳುತ್ತದೊ, ಅದರ ವರ್ಣ ಮರಿಗಳಿಗೆ ಆಗುವದುಂಟು. ೪೧. ೪೨ ವ. ತನಗೆ ಬಲವುಳ್ಳ ಮರಿಗಳು ಹುಟ್ಟುವ ಹಾಗೆ ಯಾಕೋಬನು ನಡಿಸಿದ ಮೂರನೆ ಯುಕ್ತಿ: ೪೩ ವ. ಯಾಕೋಬನು ಇಲ್ಲಿ ನಡಿಸಿದ್ದನ್ನ ನಾವು ಅನುಸರಿಸ ಬಾರದು. ಅವನಿಗೆ ಇನ್ನು ಹೆಚ್ಚು ತಿಳುವಳಿಕೆ ಇರಲಿಲ್ಲ. ತನಗೆ ತಿಳಿದ ಹಾಗೆ ಮಾಡಿ, ಈ ದೋಷ ಅರಿಯದಲೆ ನಡಿಸಿದ ಹಾಗೆ ಆಯಿತು. ಅವನು ತನ್ನ ಯುಕ್ತಿಗಳಿಂದ ಅಭಿವೃದ್ಧಿಯಾಗುತ್ತಿದ್ದಿಲ್ಲ. ತಾನು ಉಪಾಯ ಮಾಡಿದ್ದಕ್ಕೆ, ದೇವರು ಕೈಗೂಡಿಸಿದಲ್ಲಿ, ಅದು ಸಾರ್ಥಕವಾಯಿತು. ಇದೇ ದೇವರ ಆಶೀರ್ವಾದವೆಂದು ತಾನೆ ತಿಳಕೊಂಡನು.

o) ಯಾಕೋಬನು ಲಾಬಾನನಲ್ಲಿಂದ ಓಡಿ ಹೋದದ್ದು. ಸಂಧಿ ೩೧.

aa) ಯಾಕೋಬನು ತನ್ನ ಕುಟುಂಬದ ಸಂಗಡ ಹೊರಟದ್ದು. ೩೧, ೧—೨೧.

೧—೩ ವ. ಮನೆಗೆ ತಿರಿಗಿ ಹೋಗಲಿಕ್ಕೆ ಮೂರು ಕಾರಣಗಳು ಇದ್ದವು. ಅವು ಯಾವವೆಂದರೆ: ೧) ಲಾಬಾನನ ಗಂಡು ಮಕ್ಕಳು ಯಾಕೋಬನ ಮೇಲೆ ಹೆಚ್ಚು ಕಡಿಮೆ ಮಾತಾಡಿ ಹೊಟ್ಟೆಕಿಚ್ಚು ಪಟ್ಟದ್ದು. ೨) ಲಾಬಾನನು ಸಹಾ ಯಾಕೋಬನು ಐಶ್ವರ್ಯವುಳ್ಳವನಾದದಕ್ಕೆ ಸಣ್ಣ ಮೋರೆ ಮಾಡಿದ್ದು. ೩) ದೇವರು ಅಪ್ಪಣೆ ಕೊಟ್ಟದ್ದು. ಇದೇ ವಿಶೇಷ ಕಾರಣ. ದೇವರು ಹೀಗೆ ಯಾಕೋಬನಿಗೆ ನಿರೂಪಿಸುವ ವರೆಗೆ ಅವರ ಹೊಟ್ಟೆಕಿಚ್ಚನ್ನ ತಾಳಿಕೊಂಡು ಹೋಗುವದು ಯುಕ್ತವಾಗಿತ್ತು. ಇಲ್ಲಿ ಹೇಳಿದ ದೇವರ ದರ್ಶನವನ್ನ ೧೩ನೆ ವಚನದಲ್ಲಿ ಹೆಚ್ಚಾಗಿ ವಿವರಿಸುತ್ತಾನೆ. ೪—೧೩ ವ. ಯಾಕೋಬನು ತನ್ನ ಹೆಂಡರನ್ನ ತನ್ನ ಸಂಗಾತ ಓಡಿ ಹೋಗಲಿಕ್ಕೆ ಗುಪ್ತವಾಗಿ ಸಮ್ಮತಿ ಪಡಿಸುತ್ತಾನೆ. ಲಾಬಾನನು ಅಪ್ಪಣೆ ಕೊಡುವ ಪರಿ ಕಾಣಲಿಲ್ಲ. ೭ ವ. ಹತ್ತು ಸಾರಿ) ಅನೇಕಾವರ್ತಿ, ತನ್ನ ಮನಸಿಗೆ ಬಂದಂತೆ, ಲಾಬಾನನು ಒಡಂಬಡಿಕೆಯನ್ನ ಬದಲಿಸುತ್ತಾ ಬಂದನು. ೮ ವ.—ಕಸಕೊಂಡು ನನಗೆ ಕೊಟ್ಟಿದ್ಧಾನೆ. ೧೦—೧೨ ವ. ಯಾಕೋಬನು ಈ ಕನಸನ್ನ ವೇಳೆವೇಳೆಗೆ ನೋಡುತ್ತಿದ್ದಾನು. ತನ್ನ ಹಂಚಿಗೆ ಸಾಗಿದ್ದು ತನ್ನ ಪುಣ್ಯವಲ್ಲ, ದೇವರ ಆಶೀರ್ವಾದವೇ ಎಂದು ಅದರಿಂದ ಕಂಡು ಬಂತು. ೧೩ ವ. ನೀನು ಗುರುತನ್ನ (ಗುರುತಾದ ಕಲ್ಲನ್ನ) ಅಭಿಷೇಕಿಸಿ ನನಗೆ ಹರಿಕೆ ಹೊತ್ತ ಬೇಥೆಲಿನ ದೇವರು ನಾನೇ—) ಕಡೆ ಸರ್ತಿ ಈ ಕನಸನ್ನ ಕಂಡಾಗ, ದೇವರು ಈ ವಚನದ ಮಾತನ್ನ ಕೂಡಿಸಿದ್ದಾನು. ಅಥವಾ ಈ ಕನಸನ್ನ ಒಂದು ಸರ್ತಿ ಮಾತ್ರ, ಕುರಿಗಳು ಸೂಲಾಗುವ ಕಡೆ ಕಾಲದಲ್ಲಿ, ಕಂಡಿರ ಬಹುದು. ಈ ಪಕ್ಷದಲ್ಲಿ ೪—೧೩ ವ. ಹೇಳಿದ್ದು ೩ನೇ ವಚನದ ವಿವರವಾಗಿದೆ. ಲಾಬಾನನಿಂದ ತನಗೆ ಆದ ಅನ್ಯಾಯಕ್ಕೂ ಅಲಕ್ಷ್ಯಕ್ಕೂ ಯಾಕೋಬನು ಬಹಳ ನೊಂದು ಕೊಂಡು, ಚಿಂತಾಕ್ರಾಂತನಾಗಿದ್ದನು.

೧೪—೧೬ ವ. ಹೆಂಡರು ಯಾಕೋಬನ ಮಾತಿಗೆ ಒಪ್ಪಿ ಕೊಳ್ಳುತ್ತಾರೆ. ಅವರಿಗೂ ಬೇಸರಾಗಿತ್ತು. ಲೋಭಿಯ ಹತ್ತಿರ ಇರುವದು ಮಕ್ಕಳಿಗಾದರೂ ಕಷ್ಟ.

ಲಾಬಾನನು ಯಾಕೋಬನ ಬೆನ್ನು ಹತ್ತಿದ್ದು.

ಉತ್ಪತ್ತಿ. ೩೧, ೨೨—೪೨.

೧೯ ವ. ತಂದೆಯ ವಿಗ್ರಹಗಳನ್ನ) ಲಾಬಾನನ ಮನೆಯಲ್ಲಿ ವಿಗ್ರಹಾರಾಧನೆ ನಡೆಯುತ್ತಿತ್ತು. ಸತ್ಯವಾದ ದೇವರ ವಿಷಯಕ್ಕೆ ಬಹಳ ಗೊತ್ತಿದ್ದಿಲ್ಲ. ಈ ವಿಗ್ರಹಗಳಿಗೆ ಮನುಷ್ಯರೂಪವಿತ್ತು. ಏನಾದರೂ ಒಂದು ಕೆಲಸ ಮಾಡುವಾಗ, ಅವನ್ನ ಕೇಳುತ್ತಿದ್ದರು. ಮನೆಯಲ್ಲಿ ಅವನ್ನ ಇಡುತ್ತಿದ್ದರು. ಇಸ್ರಾಯೇಲನವರು ಅವಕ್ಕೆ ಮತ್ತು ಮತ್ತು ನಡಕೊಳ್ಳುವವರು ಆಗುತ್ತಿದ್ದರು. ಅರಸನಾದ ಯೋಸೀಯನು (೨ ಅರಸು. ೨೩, ೨೪.) ಅವುಗಳ ಸೇವೆ ನಿಷೇಧಿಸಿ ಅವನ್ನ ನಿರ್ಮೂಲ ಮಾಡಿದನು. ರಾಹೇಲಳಿಗೂ ಅವುಗಳ ಮೇಲೆ ವಿಶ್ವಾಸವಿತ್ತು. ಆಕೆ ಚೆಲ್ವಿ ಖರೆ, ಆದರೆ ಗುಣದಲ್ಲಿ ಭಯಭಕ್ತಿಯಲ್ಲಿ ಲೇಯಳಿಗಿಂತ ಕಡೆ.

೨೦ ವ. ಓಡಿ ಹೋಗುತ್ತೇನೆಂದು ಅವನಿಗೆ ಹೇಳದೆ ಹೋದ್ದರಿಂದ, ಯಾಕೋಬನು ಅರಾಮ್ಯನಾದ ಲಾಬಾನನನ್ನು ಮೋಸಗೊಳ್ಳಿಸಿದನು. ದೇವರು ಹೋಗಲಿಕ್ಕೆ ಯಾಕೋಬನನ್ನು ಎಚ್ಚರಿಸಿ ಅಭಯ ಕೊಟ್ಟ ಮೇಲೆ, ಅವನು ಆತನನ್ನು ಆತು ಕೊಂಡು, ಕಳವಿಲಿ ಓಡಿ ಹೋಗ ಬಾರದಿತ್ತು. ದೇವರು ಲಾಬಾನನ ಮನಸನ್ನ ಯಾವದೊಂದು ರೀತಿಯಿಂದ ತಿರಿಗಿಸುತ್ತಿದ್ದನು. ಅಥವಾ ಯಾಕೋಬನು ಅಪ್ಪಣೆ ಕೇಳಿ ಕೊಳ್ಳಲಾಗಿ, ಲಾಬಾನನು ಬೇಡವೆಂದು ಹೇಳಿದ್ದಾದರೆ, ಅವನು ರಿಣಮುಕ್ತನಾಗಿ ತನಗೆ ಸರಿ ಕಂಡಂತೆ, ಮಾಡಲಿಕ್ಕೆ ಅಡ್ಡಿ ಉಳಿಯುತ್ತಿದ್ದಿಲ್ಲ. ಆತನ ದಾರಿಯನ್ನ ನೋಡದೆ, ದೇವರ ವಚನವನ್ನ ಯುಕ್ತಿಗಳಿಂದ ಈಡೇರಿಸ ಬೇಕೆಂಬುದು ಯಾಕೋಬನ ಮುಖ್ಯ ಸ್ವಭಾವದೋಷ.

೨೧ ವ. — ಎದ್ದು ನದಿಯನ್ನ (ಯುಫ್ರಾತ) ದಾಟಿ, ಯೊರ್ದಾನ ಹೊಳೆಯ ಪೂರ್ವದಲ್ಲಿಯ ಗಿಲ್ಯಾದ ಪರ್ವತಕ್ಕೆ ಅಭಿಮುಖವಾಗಿ ಹೋದನು.

bb) ಲಾಬಾನನು ಯಾಕೋಬನ ಬೆನ್ನು ಹತ್ತಿ ಓಡಿ ಬಂದದ್ದು. ೨೨—೪೨.

೨೩ ವ. — ಏಳು ದಿವಸದ ದಾರಿ ಅವನ ಬೆನ್ನು ಹತ್ತಿ) ಅವನ ಸಹೋದರರು = ಅವನ ಅಣ್ಣತಮ್ಮಂದಿರು, ಅವನ ನೆಂಟರು. ೨೪ ವ. ಓಡಿ ಹೋದ ವಿಷಯಕ್ಕೆ ನಿರ್ಣಯ ಮಾಡಿ ನ್ಯಾಯ ತೀರಿಸ ಬೇಡ, ಎಂಬಂತೆ ದೇವರು ಅಂದ ಹಾಗಾಯಿತು. ೨೬ ವ. ಯುದ್ಧದಲ್ಲಿ ಗೆದ್ದವರು ಸೋತವರ ದೇಶವನ್ನ ಸುಲಕೊಂಡು, ಅದರ ನಿವಾಸಿಗಳನ್ನ ಹ್ಯಾಗೆ ಶೆರೆ ಹಿಡಕೊಂಡು ಹೋಗುತ್ತಾರೊ, ಹಾಗೆ ನೀನು ಮಾಡಿದಿ. ೨೭ ವ. — ನನಗೆ ಮೋಸ ಮಾಡಿದಿ? ನನಗೆ ತಿಳಿಸಲಿಲ್ಲ?) ಲಾಬಾನನು ತನ್ನ ಶಿಟ್ಟನ್ನ ಅಡಗಿಸಿದನು. ದೇವರು ಎಚ್ಚರಿಸಿದ್ದಕ್ಕೆ, ಅವನಲ್ಲಿ ದಿಗಿಲು ಆಯಿತು. ಅವನು ಆಡುವದು ಕಪಟದ ಮಾತೇ ಸರಿ! ೨೯ ವ. — ನೀನು ಯಾಕೋಬನ ಕೂಡ ಒಳ್ಳೆದಾಗಲಿ ಕೆಟ್ಟದ್ದಾಗಲಿ ಆಡದ ಹಾಗೆ, ನೋಡಿಕೊ! ಮುಂ. ೩೧ ವ. — ನಿನ್ನ ಕುಮಾರ್ತೆಗಳನ್ನ ನನ್ನಿಂದ ಕಸಕೊಂಡಿಯೇ ಮುಂ. ೩೩ ವ. — ಮುಟ್ಟಿ ನೋಡಿದನು, ಆದರೆ ಆ ವಿಗ್ರಹಗಳನ್ನು ಮುಂ. ೩೬—೩೭ ವ. — ನೀನು ನನ್ನ ಬೆನ್ನು ಅಟ್ಟಿ ಬಂದು, ನನ್ನ ಸಾಮುಗ್ರಿಯನ್ನೆಲ್ಲ ಮುಟ್ಟಿ ನೋಡುವದಕ್ಕೆ, ನನ್ನ ಅಪರಾಧವೇನು? ನನ್ನ ಪಾಪವೇನು? ನಿನ್ನ ಮನೆ ಮುಟ್ಟುಗಳಲ್ಲಿ ಯಾವದೊಂದನ್ನು ಕಂಡು ಕೊಂಡಿಯಾ? ಕಂಡು ಕೊಂಡಿಯಾದರೆ, ನನ್ನ ನಿನ್ನ ಸಹೋದರರ ಮುಂದೆ ಅದನ್ನ ತಂದಿಡು! ಅವರೇ ನಮ್ಮಿಬ್ಬರಿಗೆ ನ್ಯಾಯ ತೀರಿಸುವವರಾಗಲಿ! ೩೮ ವ. — ನಿನ್ನ ಕುರಿಗಳು ಆಡುಗಳು — ನಿನ್ನ ಹಿಂಡಿನ ಟಗರುಗಳನ್ನ ತಿನ್ನಲಿಲ್ಲ. ೩೯ ವ. — ನನ್ನ ಕೈಯಿಂದ ಕೇಳಿದಿ. ೪೦ ವ. — ಥಳಿಯು ನನ್ನನ್ನು ಕ್ಷೀಣಿಸಿದವು. ನನ್ನ ಕಣ್ಣಿನಿಂದ ನಿದ್ದೆ ಓಡಿ ಹೋಯಿತು. ೪೧ ವ. — ನಿನ್ನ ಇಬ್ಬರು ಕುಮಾರ್ತೆಗಳಿಗೋಸ್ಕರ ಹದಿನಾಲ್ಕು — ಹತ್ತು ಸಾರಿ ಬದಲಿಸಿದಿ. ೪೨ ವ. — ಇಸಾಕನ ಭಯವೂ ಆಗಿರುವ — ಬರೆದಾಗಿ ಕಳುಹಿಸುತ್ತಿದ್ದಿ. ನನ್ನ ಸಂಕಟವನ್ನೂ ಮುಂ.) ಇಸಾಕನು ದೇವರಿಗೆ ಭಯಭಕ್ತಿಯಿಂದ ನಡಕೊಳ್ಳುತ್ತಿದ್ದನು. ಯಾಕೋಬನು ಅವನನ್ನು ಅನುಸರಿಸಿ, ದೇವರಿಗೆ ಭಯಭಕ್ತಿಯಿಂದ ನಡಕೊಳ್ಳುತ್ತಿದ್ದ ಕಾರಣ, ಆತನು ತನ್ನ ಆಶ್ರಯ ಆಶೀರ್ವಾದ ಅವನಿಗೆ ಕೊಟ್ಟು, ಲೋಭಿಯಾದ ಲಾಬಾನನಿಂದ ಅವನಿಗೆ ನಷ್ಟ

ವಾಗದಂತೆ, ಕಾದನು. ಯಾಕೋಬನು ಬಹಳ ನಂಬಿಗಸ್ತನಾಗಿ ಸೇವೆ ಮಾಡಿದ್ದರಿಂದ, ಈ ಪರಿ ಲಾಬಾನನನ್ನು ಗದರಿಸಲಿಕ್ಕೆ ಧೈರ್ಯಗೊಂಡವನಾದನು. ಅವನಿಂದ ಲಾಬಾನನಿಗೆ ಆಶೀರ್ವಾದವಲ್ಲದೆ, ಕೇಡು ಬರಲಿಲ್ಲ.

cc) ಯಾಕೋಬನು ಲಾಬಾನನೊಡನೆ ಒಡಂಬಡಿಕೆ ಮಾಡಿದ್ದು. ೪೩—೫೪.

೪೩ ವ. ನೀನು ತಪ್ಪಿನೊಳಗೆ ಬಂದರೂ, ನಿನ್ನ ಹೆಂಡರು ನನ್ನ ಕುಮಾರ್ತೆಗಳು, ನಿನ್ನ ಮಕ್ಕಳು ನನ್ನ ಮೊಮ್ಮಕ್ಕಳು ಆದ್ದರಿಂದ, ನಾನು ಮನ್ನಿಸ ಬೇಕು. ನಿರ್ವಾಹವಿಲ್ಲ. ಯಾಕೋಬನ ಗಟ್ಟಿ ಮನಸನ್ನ ನೋಡಿ, ಅವನ ಒಳ್ಳೇ ಸೇವೆಯನ್ನ ನೆನಪಿಗೆ ತಂದು, ಸಿಟ್ಟು ಧೈರ್ಯ ಇಳಿದು, ಭಯಸ್ಥನಾದನು. ೪೫ ವ.—ಗುರುತಾಗಿ ನಿಲ್ಲಿಸಿದನು. ೪೬ ವ.—ತನ್ನ ಸಹೋದರರಿಗೆ) ತನ್ನ ಹಿತಸ್ಥರು, ಲಾಬಾನನ ಕುಮಾರರು ತನಗೆ ಸಹೋದರರಂತೆ ಇದ್ದರು. ೪೭ ವ. ಲಾಬಾನನು ಕಸ್ದೀಯರ ಭಾಷೆಯಲ್ಲಿ, ಯಾಕೋಬನು ಹಿಬ್ರು ಭಾಷೆಯಲ್ಲಿ ಸಾಕ್ಷಿಕುಪ್ಪೆ ಎಂಬರ್ಥವುಳ್ಳ ನಾಮವನ್ನ ಕೊಟ್ಟರು. ೪೮—೫೦ ವ. ಲಾಬಾನನು ಆ ಕುಪ್ಪೆಗೆ ಹೊಡೇವು ಎಂಬರ್ಥವುಳ್ಳ ಮಿಜ್ಪವೆಂಬ ಹೆಸರನ್ನ ಸಹ ಇಟ್ಟನು.—ಅದೇನಂದರೆ: ನಾವು ಒಬ್ಬರಿಗೊಬ್ಬರು ಅಗಲಿರುವಾಗ, ನೀನು ನನ್ನ ಕುಮಾರ್ತೆಗಳನ್ನ ಉಪದ್ರ ಪಡಿಸಿದರೆ, ನನ್ನ ಕುಮಾರ್ತೆಗಳ ಹೊರ್ತಾಗಿ ಬೇರೆ ಹೆಂಡರನ್ನ ಮಾಡಿ ಕೊಂಡರೆ (ಹೀಗೆ ಅವರನ್ನ ನೋಯಿಸಿದರೆ), ಕರ್ತನು ನನಗೂ ನಿನಗೂ ಮಧ್ಯದಲ್ಲಿ ಕಾದಿರಲಿ! ಯಾವ ಮನುಷ್ಯನಾದರೂ ಮುಂ.) ನೀನು ನನ್ನ ಕುಮಾರ್ತೆಗಳಿಗೆ ಅನ್ಯಾಯ ಮಾಡಿದ್ದಾದರೆ, ದೇವರು ನಿನಗೆ ಶಿಕ್ಷೆ ಮಾಡಲಿ! ಆತನಿಗೆ ಈ ಮಾತನ್ನ ಹೇಳಿ ಕೊಂಡಿದ್ದೇನೆ. ಮನುಷ್ಯರು ಕೇಳದೆ ಇದ್ದರೂ, ಆತನೇ ಕೇಳಿದ್ದಾನೆ. ನಾನು ನಿನ್ನಿಂದ ಈ ಮೇರೆಗೆ ವಚನ ತಕ್ಕೊಂಡದ್ದಕ್ಕೆ ಆತನೇ ಸಾಕ್ಷಿ. ೫೧ ವ.—ಆಗ ಲಾಬಾನನು ಯಾಕೋಬನಿಗೆ: ಇಗೋ ಈ ಕುಪ್ಪೆಯೂ, ನನಗೂ ನಿನಗೂ ನಡುವೆಯಾಗಿ ನಾನು ನಿಲ್ಲಿಸಿದ ಈ ಸ್ತಂಭವೂ!) ಅವನ್ನ ತೋರಿಸುತ್ತಾನೆ. ೫೨ ವ. ನಾನಾಗಲಿ ಈ ಕುಪ್ಪೆಯನ್ನ ದಾಟಿ ನಿನ್ನ ಕಡೆಗೆ ಬರ ಬಾರದು; ನೀನಾಗಲಿ, ಕೇಡಿಗಾಗಿ ಈ ಕುಪ್ಪೆಯನ್ನೂ ಈ ಸ್ತಂಭವನ್ನೂ ದಾಟಿ, ನನ್ನ ಕಡೆಗೆ ಬರ ಬಾರದು ಎಂಬುವದಕ್ಕೆ ಮುಂ.) ಯಾಕೋಬನು ತನ್ನ ಸೀಮೆಯನ್ನ ತಕ್ಕೊಂಡಾನೆಂಬ ಭಯ ಲಾಬಾನನಿಗೆ ಇತ್ತು. ೫೩ ವ.—ಇಸಾಕನ ಭಯವಾಗಿರುವ) ಅಬ್ರಹಾಮನೂ ನಾಹೋರನೂ ಎಂಬೀ ಹಿರಿಯರು ಭಜಿಸುತ್ತಿದ್ದ ದೇವರ ಮೇಲೆ ಲಾಬಾನನು ಆಣೆ ಇಟ್ಟನು. ಇಸಾಕನು ಅಂಜಿ ನಡೆಯುತ್ತಿದ್ದ ದೇವರ ಮೇಲೆ ಯಾಕೋಬನು ಆಣೆ ಇಟ್ಟನು. ೫೪ ವ.—ರೊಟ್ಟಿಯನ್ನ ತಿನ್ನ ಬೇಕೆಂದು—ರೊಟ್ಟಿಯನ್ನ ತಿಂದು ಬೆಟ್ಟದಲ್ಲಿ ಆ ರಾತ್ರಿ ಇಳಕೊಂಡರು.) ಬಲಿಯಿಂದಲೂ, ಎರಡು ಪಕ್ಷದವರು ಸಹ ಭೋಜನ ಮಾಡಿದ್ದರಿಂದಲೂ, ಒಡಂಬಡಿಕೆ ಸ್ಥಿರವಾಯಿತು. ಆ ಕುಪ್ಪೆಯೂ ಆ ಗುರುತಾದ ಕಲ್ಲೂ ಅದಕ್ಕೆ ಸಾಕ್ಷಿ ಆದವು.

p) ಯಾಕೋಬನ ಭಯವೂ ಜಯವೂ. ಸಂಧಿ ೩೨.

aa) ದೇವರು ತನ್ನ ಆಶ್ರಯ ಯಾಕೋಬನಿಗೆ ತೋರಿಸಿದ್ದು. ೩೨, ೧—೨.

೨ ವ.—ದೇವರ ದಂಡು) ಬಹಳ ಮಂದಿ ಇದ್ದರು. ಕಾನಾನವನ್ನು ಬಿಟ್ಟು ಹೋಗುವಾಗಲೂ, ಅದರಲ್ಲಿ ತಿರಿಗಿ ಸೇರುವಾಗಲೂ, ದೇವರು ಯಾಕೋಬನಿಗೆ ತನ್ನ ಪರಿಶುದ್ಧ ದೂತರ ಮುಖಾಂತರ ಆಶ್ರಯ ಕೊಡುವವನಾದನು (೨೮ ಸಂಧಿ. ಕೀರ್ತ. ೩೪, ೭). ಲಾಬಾನನ ಭಯ ಹೋಗಿತ್ತು. ಏಸಾವನ ಭಯ ಬಂದಿತ್ತು. ಅದಕ್ಕೆ ವಿಶ್ವಾಸ ಧೈರ್ಯ ಹುಟ್ಟುವಂತೆ, ದೇವರು ಅವನಿಗೆ ಸಹಾಯ ತೋರಿಸುತ್ತಾನೆ. ಮಹನಾಯಿಮ್=ದ್ವಿದಳ, ಜೋಡುಸೈನ್ಯ. ಇದನ್ನ ಕಂಡ ಸ್ಥಳದಲ್ಲಿ ತರುವಾಯ ಅದೇ ಹೆಸರುಳ್ಳ ಒಂದು ಊ

ರು ಹುಟ್ಟಿತು (ಯೆಹೋಶು. ೧೩, ೨೬). ಯಾಕೋಬನ ದಂಡೂ ದೂತರ ದಂಡೂ; ದೂತರ ದಂಡು ಯಾಕೋಬನದನ್ನ ಕಾಯಲಿಕ್ಕೆ ಕೂಡಿತು. ಇಲ್ಲವೆ ದೂತರ ದಂಡು ಯಾಕೋಬನ ದಂಡಿನ ಎಡದಲ್ಲಿ ಒಂದು ಭಾಗ, ಬಲದಲ್ಲಿ ಒಂದು ಭಾಗ, ಹೀಗೆ ಇತ್ತಂಡವಾಗಿತ್ತು (೨ ಅರಸು. ೬, ೧೭).

bb) ಯಾಕೋಬನು ಏಸಾವನ ಶಿಟ್ಟನ್ನ ಇಳಿಸಲಿಕ್ಕೆ ಹಂಚಿಕೆ ಮಾಡಿದ್ದು. ೩—೮.

೩ ವ. ಏಸಾವನು ಅಥವಾ ಎದೋಮನು ಸೆಯಿರ ಎಂಬ ದೇಶದಲ್ಲಿ ವಾಸ ಮಾಡಿದ ಮೂಲಕವಾಗಿ, ಆ ದೇಶವು ಎದೋಮ ಎಂದಿನಿಸಿತು. ೪. ೫ ವ. ಯಾಕೋಬನು ಯುದ್ಧದಲ್ಲಿ ರೂಢಿಯಿಲ್ಲದ ಕುರುಬನು. ಏಸಾವನು ಕಾದಾಡಲಿಕ್ಕೆ ಸಿದ್ಧವಾದ ಬಲವುಳ್ಳ ಯುದ್ಧಸ್ಥನು, ರಾಜನು. ನೆಟ್ಟಗೆ ನೋಡಿದವರಿಗೆ, ಯಾಕೋಬನು ದಾಸನಾಗಿ, ಏಸಾವನು ಯಜಮಾನನಾಗಿ, ತೋರುತ್ತಾರೆ. ಅದನ್ನ ಕಂಡು, ಯಾಕೋಬನು ಇದ್ದ ಸ್ಥಿತಿಗೆ ಸರಿಯಾಗಿ ದೀನತ್ವದಿಂದ ಮಾತಾಡುತ್ತಾನೆ. ಆದಾಗ್ಯೂ ತನ್ನನ್ನು ಹೊಂದಿದ ಚೊಚ್ಚಲತನದ ಆಶೀರ್ವಾದ ಅಲಕ್ಷ್ಯ ಮಾಡಿ ಬಿಡುವದಿಲ್ಲ. ಅದನ್ನ ಒದಗಿಸುವ ದೇವರಿಗೆ ಎಲ್ಲಾ ಒಪ್ಪಿಸಿ ಬಿಡುತ್ತಾನೆ. ಅವನು ತೋರಿಸಿದ ದೀನತ್ವವು ಪುಕ್ಕತನವಲ್ಲ, ಸದ್ವಿಶ್ವಾಸದ ಲಕ್ಷಣವೇ. ವಿಶ್ವಾಸಿಗಳು ಒಂದು ವೇಳೆಯಲ್ಲಿ ಲೋಕದವರಿಗೆ ಒಳಗಾಗಿರ ಬೇಕು. ತಾವು ದಾಸರಂತೆ, ಅವರು ಯಜಮಾನರಂತೆ,—ಕಾಣುತ್ತಾರೆ. ಈ ಪಕ್ಷದಲ್ಲಿ ವಿಶ್ವಾಸಿಗಳು ನಾವೇ ಯಜಮಾನರು ನಾವು ಒಳಗಾಗಿರುವದಿಲ್ಲವೆಂದು ಇದ್ದ ಸ್ಥಿತಿ ಅಗದಿ ಲಕ್ಷ್ಯಕ್ಕೆ ತಾರದೆ ಹೋಗುವದು ವಿಶ್ವಾಸವಲ್ಲ, ಮರಳೇ ಸರಿ! ದೇವರ ಮಹಿಮೆ ಎಂಬ ಸೂರ್ಯನನ್ನು ಪಾಪ ಎಂಬ ಕಣ್ಣ ಬೇನೆಯಿಂದ ಬಲಹೀನವಾದ ನಮ್ಮ ಕಣ್ಣು ತಾಳಲಾಗದು. ಇದರ ನಿಮಿತ್ತ ದೇವರು ನಮ್ಮನ್ನ ಕಷ್ಟದಲ್ಲಿ ಹಾಕಿ ಮೊಬ್ಬುಗವಿಸ ಬೇಕಾಗುವದು. ನಾವು ಸ್ವತಂತ್ರವನ್ನ ಪ್ರಯೋಗಿಸಲಾರದ ಬಾಲಕರಾಗಿರುವದರಿಂದ, ಆತನು ನಮ್ಮನ್ನು ಪರಾಧೀನರನ್ನ ಮಾಡ ಯುಕ್ತವದೆ.—೬ ವ. ಏಸಾವನು ಯಾಕೋಬನನ್ನು ಅಂಜಿಸಲಿಕ್ಕೆ, ಅಥವಾ ತನ್ನ ಐಶ್ವರ್ಯ ತೋರಿಸಲಿಕ್ಕೆ ಹೀಗೆ ಮಾಡಿದನೊ ಏನೋ, ತಿಳಿಯದು. ಯಾಕೋಬನನ್ನು ಸಂಹರಿಸುವದಕ್ಕೆ ಹೀಗೆ ಮಾಡಿರಲಿಕ್ಕಿಲ್ಲ. ಆದಾಗ್ಯೂ ಏಸಾವನು ಅಂಥಾ ಕೆಟ್ಟ ನಿರ್ಣಯ ಮಾಡಿರ ಬಹುದು. ಶಿಟ್ಟು ಒಂದು ವೇಳೆ ಇನ್ನು ಹಾಗಿತ್ತು. ಯಾಕೋಬನಿಗೆ ಏಸಾವನ ಸ್ಥಿತಿ ಮನಸು ಗೊತ್ತಿದ್ದಿಲ್ಲ. ನನ್ನನ್ನು ನಾಶನ ಮಾಡಲಿಕ್ಕೆ ಬರುತ್ತಾನೆ ಎಂದು ನೆನಸಿದನು. ರೆಬೆಕ್ಕಳು ವಚನ ಕೊಟ್ಟಂತೆ (೨೭, ೪೪—೪೫.) ಮನೆಯ ವರ್ತಮಾನ ಯಾಕೋಬನಿಗೆ ತಿಳಿಸಲಾಗಲಿಲ್ಲ ಏನೋ.

cc) ಯಾಕೋಬನು ಪ್ರಾರ್ಥನೆ ಮಾಡಿದ್ದು. ೯—೧೨.

ಟಿಪ್ಪಣಿ: ಕರ್ತನ ಅಪ್ಪಣೆಯ ಪ್ರಕಾರ ಯಾಕೋಬನು ಹೊರಟಿದ್ದನು (೩೧, ೩. ೩೧). ದೇವರು ತನಗೆ ಮಾಡಿದ ಉಪಕಾರ ದಯ ಬಹಳ ನೆನಿಸುತ್ತಾನೆ. ಅವನು ಊರಿ ಕೊಳ್ಳುವ ಕೋಲು ಯಾವದಂದರೆ: ದೇವರ ಅಪ್ಪಣೆ, ಹಾಗೂ ಆತನ ವಾಗ್ದತ್ತ. ದೇವರು ಪಾರು ಮಾಡದಿದ್ದರೆ, ತನ್ನ ಉಪಾಯ ವ್ಯರ್ಥವೆಂದು ತಿಳಕೊಂಡನು. ಸಂಕಟ ಕಷ್ಟ ಬಂದ ಕಾಲಕ್ಕೆ, ಈ ಪ್ರಾರ್ಥನೆಯನ್ನ ಓದಿ, ನಾವು ಹ್ಯಾಗೆ ಬೇಡಿ ಕೊಳ್ಳ ಬೇಕೆಂದು ಕಲಿತು ಕೊಳ್ಳ ತಕ್ಕದ್ದು.

dd) ಯಾಕೋಬನು ಏಸಾವನಿಗೆ ಕಾಣಿಕೆ ಬೇರೆ ತೆಗದು ಇಟ್ಟದ್ದು. ೧೩—೨೩.

೧೩ ವ.—ಕಾಣಿಕೆ ತೆಗೆದಿಟ್ಟನು. ೧೪. ೧೫ ವ.—ಇನ್ನೂರು ಆಡುಗಳು—ಹಿಂಡುವ ಮೂವತ್ತು ಒಂಟೆಗಳು—ನಾಲ್ವತ್ತು ಆವುಗಳು, ಹತ್ತು ಹೋರಿಗಳು ಮುಂ.

ಉತ್ಪತ್ತಿ. ೩೨, ೨೪—೩೨.

೧೬ ವ.— ಸೇವಕರಿಗೆ: ಮಂದೆ ಮಂದೆಗೂ ಮಧ್ಯದಲ್ಲಿ ಸ್ಥಳ ಬಿಟ್ಟು ನನ್ನ ಮುಂದೆ ನಡೆಯಿರಿ! ೨೧ ವ.— ಆ ರಾತ್ರಿ ದಂಡಿನಲ್ಲಿ ಇಳಕೊಂಡನು. ೨೨ ವ.— ತನ್ನ ಹನ್ನೊಂದು ಮಂದಿ ಕುಮಾರರನ್ನೂ ಮುಂ.) ದೀನಳನ್ನು ಇಲ್ಲಿ ಎಣಿಸಲಿಲ್ಲ. ಯಾಬೊಕು = ಪೂರ್ವದಿಂದ ಹರಿದು ಬಂದು ಯೊರ್ದಾನ ನದಿಯಲ್ಲಿ ಕೂಡುವ ಹೊಳೆ. ಅದು ಕಾಲಾಂತರದಲ್ಲಿ ಅದರ ಉತ್ತರದಲ್ಲಿ ವಾಸ ಮಾಡಿದ ಮನಸ್ಸೆ ಗೋತ್ರಕ್ಕೂ, ದಕ್ಷಿಣದಲ್ಲಿ ವಾಸಿಸಿದ ಗಾದ್ ಗೋತ್ರಕ್ಕೂ, ನಡುವಿನ ಮೇರೆ ಆಯಿತು. ಗಂಡಾಂತರಕ್ಕೆ ತಪ್ಪಿಸಿ ಕೊಳ್ಳುವ ಪ್ರಯತ್ನ ತನ್ನಿಂದ ಸಾಧ್ಯವಾದಷ್ಟು ಮಾಡುವ ತನಕ, ಯಾಕೋಬನ ಕಣ್ಣಿಗೆ ನಿದ್ರೆ ಬರಲಿಲ್ಲ. ದೇವರ ಮೇಲೆ ತನ್ನ ಎಲ್ಲಾ ಭರವಸವಿಟ್ಟು, ಆತನ ಮೊರೆ ಹೊಕ್ಕನು. ಆದರೂ ತಾನು ಪ್ರಯತ್ನ ಬಿಡಲಿಲ್ಲ. ಇದೇ ಸ್ವಸ್ಥ ವಿಶ್ವಾಸ. ಆದರೆ ಕೈ ಕಾಲು ಮಿಸಕ್ಯಾಡಿಸದೆ, ಎಲ್ಲಾ ತಾನೆ ಆಗ ಬೇಕು, ದೇವರು ಮಾಡ ಬೇಕು ಅಂಬುವಂಥಾ ವಿಶ್ವಾಸಕ್ಕೆ ರೋಗ ಉಂಟು. ಅಂಥಾ ರೋಗದ ವಿಶ್ವಾಸ ಎಂದಿಗೂ ಬಲಿಯ ಕೂಡದು, ಫಲ ಫಲಿಸ ಕೂಡದು. ಅದು ಸತ್ತದ್ದೇ ಸರಿ!

ee) ಯೊಕೋಬನು ದೇವರ ಸಂಗಡ ಹೋರಾಡಿ ಜಯಿಸಿದ್ದು. ೨೪—೩೨.

೨೪ ವ. ಯೊಕೋಬನು ಯಾಬೊಕಿನ ಉತ್ತರ ತೀರದಲ್ಲಿ ಪ್ರಾರ್ಥನೆ ಮಾಡಲಿಕ್ಕೆ ಒಬ್ಬನೇ ಉಳಿದನು. ಹೆಣ್ಣು ಮಕ್ಕಳ ಹುಡುಗರ ಸೇವಕರ ಗದ್ದಲದಿಂದ ಇದಕ್ಕೆ ಅಭ್ಯಂತರವಾಗುತ್ತಿತ್ತು.

೩೦ ವ. ಪೆನಿಯೇಲ = ದೇವಮುಖ. ತಪ್ಪಿಸಿ ಕೊಂಡಿತು) ನಾನು ದೇವರನ್ನ ಕಂಡದರಿಂದ, ಸಾಯುವವನಾಗಿದ್ದೆನು. ಆದರೂ ಆತನ ಕೃಪೆಯಿಂದ ಉಳಿದೆನು (ನ್ಯಾಯಾಧಿ. ೬, ೨೨—೨೩. ಹೊರ. ೩೩, ೧೯—೨೦). ಬಲಹೀನ ಕಣ್ಣು ಸೂರ್ಯನ ಬೆಳಕನ್ನ ತಾಳುವದಿಲ್ಲ ಹ್ಯಾಗೋ, ಹಾಗೆ ನಾವು ದೇವರ ಮಹಿಮೆ ನೋಡಲಾರೆವು.

೩೨ ವ.— ಯಾಕೋಬನ ತೊಡೆಯ ಕೀಲನ್ನು ಸೊಂಟದ ನರದಲ್ಲಿ— ಮೇಲಿರುವ ಸೊಂಟದ ನರವನ್ನು— ತಿನ್ನುವದಿಲ್ಲ.) ಮೋಸೆ ತನ್ನ ಸಹಕಾಲದವರಾದ ಇಸ್ರಾಯೇಲನವರಿಗೆ ತನ್ನ ದಿನಗಳಲ್ಲಿ ವರ್ತಿಸುತ್ತಿದ್ದ ಆ ಮರ್ಯಾದೆಯ ಕುರಿತು ವಿವರ ಹೇಳುತ್ತಾನೆ.

ಪರಿಶಿಷ್ಟ: ಯಾಕೋಬನ ಕೂಡಾ ಹೋರಾಡಿದ ಮನುಷ್ಯನು (ಹೋಶೆ. ೧೨, ೪.) ದೇವರಾಗಿರುವ ಒಡಂಬಡಿಕೆಯ ದೂತನು. ಆತನು ವೈರಿಯಂತೆ ಯಾಕೋಬನ ಮೇಲೆ ಬಿದ್ದು, ಅವನನ್ನು ನೆಲಕ್ಕೆ ಕೆಡಹಲಿಕ್ಕೆ ಹೋರಾಡುತ್ತಾನೆ. ಆದರೆ ಯಾಕೋಬನು ನೆಲಕ್ಕೆ ಬೀಳುವದಿಲ್ಲ. ಆದಾಗ್ಯೂ ತಾನು ಯಾಕೋಬನಿಗಿಂತ ಬಲಿಷ್ಟನು ಎಂದು ತೋರಿಸುವ ಗುರುತಿಗಾಗಿ ಅವನನ್ನು ಕುಂಟಿಸಿ ನಡೆಯುವವನನ್ನ ಮಾಡುತ್ತಾನೆ. ಇದು ಕನಸಿನಲ್ಲಿ ಅಲ್ಲ, ದರ್ಶನದಲ್ಲಿ ಅಲ್ಲ, ಪ್ರತ್ಯಕ್ಷವಾಗಿ ನಡದದ್ದೇ ಸರಿ! ಹೋರಾಡುವದರಲ್ಲಿ ಈತನು ದೇವರು ಎಂದು ಯಾಕೋಬನಿಗೆ ತಿಳಿಯ ಬಂತು. ಇದರ ಅಭಿಪ್ರಾಯವೇನು? ಯಾಕೋಬನು ಎಸಾವನ ದೆಶೆಯಿಂದ ಬಹಳ ಭಯ ಪಡುವವನಾಗಿದ್ದನು. ಮಾಡಿದ ಪ್ರಾರ್ಥನೆಯಿಂದಲಾದರೂ ಭಯ ಹೋಗಿದ್ದಿಲ್ಲ. ಹೊರಗೆ ಹ್ಯಾಗೆ ಕತ್ತಲಾಯಿತೋ, ಹಾಗೆ ಒಳಗೆ ಹೃದಯದಲ್ಲಿ ಭಯ ಸಂಶಯಗಳ ಕಾರ್ಗತ್ತಲು ಕವಿದು ಬಂತು. ಈ ಸಮಯದಲ್ಲಿ, ನೀನು ಎಸಾವನನ್ನ ವಂಚಿಸಿದ ಕಳ್ಳನು; ಈಗ ಅವನಿಂದ ನಿನಗೆ ಮುಯ್ಯಿಗೆ ಮುಯ್ಯಿ ಆಗುವ ವೇಳೆ ದೇವರು ತಂದಿದ್ದಾನೆ; ಆತನು ನಿನ್ನ ರಕ್ಷಕನಲ್ಲ, ನಿನಗೆ ಶಿಕ್ಷೆ ಮಾಡಿಸುವ ನ್ಯಾಯಾಧೀಶನು; ನಿನ್ನ ಸ್ನೇಹಿತನಲ್ಲ, ನಿನ್ನನ್ನು ನಾಶನಕ್ಕೆ ಒಪ್ಪಿಸಿ ಬಿಡುವ ವೈರಿ ಎಂಬಂತೆ, ಮನೋಸಾಕ್ಷಿಯಿಂದ ಗದರಿಕೆ ಆಗಿ, ಬಿರುಘಾಳಿ ಬೀಸ ಹತ್ತಿ, ದೇವರೇ ಹ್ಯಾಗಾದರು ನನ್ನ ಆಶ್ರಯ ಎಂಬ ವಿಶ್ವಾಸದ ಸಣ್ಣ ದೀಪ ಆರಿ ಹೋಗುವ ಹಾಗಾಯಿತು. ಕತ್ತಲೆಗೆ ಕತ್ತಲು ಗೂಡಿತು.

ಯಾಕೋಬನು ದೇವರ ಸಂಗಡ ಹೋರಾಡಿದ್ದು.

ಉತ್ಪತ್ತಿ. ೩೨, ೨೪—೩೨.

ಪ್ರತ್ಯಕ್ಷವಾಗಿ ನಡೆದ ಹೋರಾಟದಿಂದ ಈ ಒಳಗಣ ಅನುಭವವು ಕಣ್ಣಿಗೆ ಕಂಡದ್ದು ಆಯಿತು. ಆದರೂ ಯಾಕೋಬನು ಅತ್ತು, ಪ್ರಾರ್ಥನೆ ಮಾಡಿ ಎಣ್ಣೆ ಹಾಕಿ ವಿಶ್ವಾಸದ ದೀಪ ಆರಲೀಸದೆ ಇದ್ದದರಿಂದ, ಗೆದ್ದನು. ಆದರೆ ಆತನು ಅಂತಃಕರಣ ಮಾಡಿ ಪಾಪ ಕ್ಷಮಿಸದೆ ಇದ್ದರೆ, ವೈರಿಯಂತೆ ಬಂದಂಥಾ ದೇವರನ್ನ ಜಯಿಸಲಾಗದಿತ್ತು. ಆತನು ಕೃಪೆಯಿಂದ ತನ್ನನ್ನು ಜಯಿಸಗೊಡುತ್ತಾನೆ. ಯಾಕೋಬನಲ್ಲಿ ಗಟ್ಟಿ ಮನಸನ್ನ ಕಂಡು, ದೇವರು ಬೇಕಾಗಿ ಹಿಂದಕ್ಕೆ ಸರಿದು ಅವನನ್ನ ಜಯಶಾಲಿಯಾಗಗೊಟ್ಟನು. ಒಂದು ಕ್ಷಣಕ್ಕೆ ನನ್ನನ್ನು ನೆಲಕ್ಕೆ ಕೆಡಹ ಶಕ್ತನಾಗಿರುವ ದೇವರು ಕೃಪೆ ಮಾಡಿ, ನನ್ನ ಸಂಗಡ ಹೋರಾಡುವದನ್ನ ಬಿಟ್ಟನೆಂದು ಯಾಕೋಬನು ಮರೆಯದ ಹಾಗೆ, ದೇವರ ಅತಿ ಬಲವನ್ನೂ, ತನ್ನ ಕೇವಲ ಬಲಹೀನತ್ವವನ್ನೂ ನೆನಪಿಗೆ ತರುವ ಗುರುತಿಗಾಗಿ ಕುಂಟಿಸಿ ನಡೆಯುವವನಾದನು. ದೇವರು ಅಂದು ಕೊಟ್ಟ ಆಶೀರ್ವಾದವು ಕಳ ಕೊಂಡು ಹೋಗುವ ಹಾಗೆ ಇತ್ತು. ದೇವರು ಯೋಗ್ಯತೆ ಅಯೋಗ್ಯತೆ ನೋಡ ಬೇಕಾದರೆ, ಅದನ್ನ ಕಸಕೊಳ್ಳ ತಕ್ಕದ್ದಾಗಿತ್ತು. ವೈರಿಯಂತೆ ತನ್ನ ಮೇಲೆ ಬಂದಂಥಾ ದೇವರನ್ನ ಯಾಕೋಬನು ಜಯಿಸಿ ತಿರಿಗಿ ಸ್ನೇಹಿತನನ್ನು ಮಾಡಿದನು. ಹೀಗಿರಲಾಗಿ, ಆ ಆಶೀರ್ವಾದ ನೀನು ನನಗೆ ದೃಢವಾಗಿ ಮತ್ತೂ ಕೊಟ್ಟರೆ ಹೊರ್ತು, ನಿನ್ನನ್ನು ಬಿಡುವದಿಲ್ಲ ಎಂದು ಹೇಳುತ್ತಾನೆ. ಯಾಕೋಬನು ಎಂಬ ಹೆಸರು ಅವನ ಪಾಪ ತೋರಿಸಿ ಕೊಡುವಂಥಾದು. ಪಾಪ ಇದ್ದವನಾಗಿ ಆಶೀರ್ವಾದ ಪಡೆಯಲಾಗದು. ಈ ಹೆಸರು ಹೋಯಿತು. ವಿಶ್ವಾಸ ಪ್ರಾರ್ಥನೆಯಿಂದ ದೇವರ ಕೋಪ ತೆಗೆದು ಹಾಕಿ ಪಾಪ ಪರಿಹಾರವಾಯಿತೆಂಬ ಗುರುತಿಗಾಗಿ ಇಸ್ರಾಯೇಲ = ದೇವರ ಸಂಗಡ ಹೋರಾಡಿದವನು, ಎಂಬ ನಾಮವನ್ನು ಧರಿಸಿ ಕೊಂಡವನಾಗಿ ಆಶೀರ್ವಾದ ಹೊಂದುತ್ತಾನೆ. ದೇವರನ್ನು ಹೀಗೆ ಜಯಿಸಿದ ಬಳಿಕ, ಮನುಷ್ಯರನ್ನ, ಏಸಾವನನ್ನ ಲಾಬಾನನ್ನ ಜಯಿಸಿದ ಹಾಗೆ ಆಯಿತು. ಅವರ ದೆಶೆಯಿಂದ ಅಂಜಲಿಕ್ಕೆ ಕಾರಣವಿಲ್ಲ. ಯಾಕೋಬನು ದೇವರ ಸ್ವಭಾವವನ್ನು ಅರಿಯನು. ದೇವರು ಅದನ್ನ ಅವನಿಗೆ ಈಗ ತಿಳಿಸ ಕೂಡದು. ಯಾಕಂದರೆ ಇದಕ್ಕೆ ಇನ್ನು ತಕ್ಕ ಬಲವಿಲ್ಲ. ಆತನ ಕೃಪೆ ಎಷ್ಟು ಅನುಭವಿಸುತ್ತೇವೋ, ಅಷ್ಟು ಆತನನ್ನು ತಿಳು ಕೊಳ್ಳುತ್ತೇವೆ. ಯಾಕೋಬನ ಹೋರಾಟ ನಮ್ಮ ವಿಶ್ವಾಸದ ಹೋರಾಟಗಳಿಗೆ ಸಾದೃಶ್ಯ. ನಾವು ಸಂಕಟ ಕಷ್ಟಗಳಲ್ಲಿ ಬಿದ್ದಿರುವ ಸಮಯದಲ್ಲಿ ಬಹಳವಾಗಿ ನಮ್ಮ ಮನೋಸಾಕ್ಷಿ ಎಚ್ಚರಿಕೆಯಾಗಿ, ಆ ಕಷ್ಟಗಳು ನಿಮ್ಮ ಪಾಪದ ಫಲವೆಂದು ನಮ್ಮನ್ನು ಶಿಕ್ಷಿಸುವಲ್ಲಿ, ದೇವರು ನಮ್ಮ ಕೈ ಬಿಟ್ಟು ವೈರಿಯಂತೆ ನಮ್ಮನ್ನ ಕೆಡಹಲಿಕ್ಕೆ ಬಂದನೆಂದು ಕಾಣುವದು. ಆದಾಗ್ಯೂ ದೇವರು ನಮ್ಮನ್ನು ನರಕದಲ್ಲಿ ಪಿಶಾಚಿಗಳ ಮಧ್ಯದಲ್ಲಿ ದೊಬ್ಬಿದರೂ, ನಮ್ಮ ಕೈ ಬಿಡಲಾರನು. ನಮ್ಮನ್ನು ರಕ್ಷಿಸುತ್ತಾನೆಂದು ನಾವು ಗಟ್ಟಿ ವಿಶ್ವಾಸ ಹಿಡ ಕೊಂಡರೆ, ಆತನು ಕರುಣ ಮಾಡಿ, ನೀನು ಗೆದ್ದಿ, ನಿನ್ನ ಮಾತು ಖರೆ ಎಂದು ನಮ್ಮಲ್ಲಿ ಸಮಾಧಾನ ಭರವಸ ಹುಟ್ಟುವಂತೆ ಮಾಡಿ, ಜಯಪತ್ರ ಕೊಟ್ಟು ಕಳುಹಿಸುತ್ತಾನೆ. ಆದರೆ ನಾವು ಕುಂಟಿಸಿ ನಡೆಯುವವರಾಗುತ್ತೇವೆ. ಹ್ಯಾಗಂದರೆ ಮುಂಚಿನಂತೆ ನಮ್ಮ ಬಲ ಬುದ್ಧಿ ನೆಚ್ಚಿ ಕೊಂಡಿರುವ ಧೈರ್ಯ ನಮ್ಮಲ್ಲಿ ಹುಟ್ಟಲರಿಯದು. ನಾವು ದಿವಾಳೆ ತೆಗೆದವರಂತೆ ಇದ್ದೇವೆ. ನಾವು ಒಂದನ್ನ ಕಲಿತೆವು. ಅದೇನಂದರೆ: ದೇವರ ಬರೆ ಕಟಾಕ್ಷದಿಂದಲೇ ಉಳಿದೆವು. ನಾವು ಬಡ ಪಾಪಿಷ್ಟರು ಎಂಬ ಭಾವ ನಮ್ಮನ್ನು ಯಾವಾಗಲೂ ತಗ್ಗಿಸುವದು. ಆದರೆ ಯೇಸು ಕ್ರಿಸ್ತನ ಮುಖದಿಂದ ಇಹ ಪರದ ಎಲ್ಲಾ ಕಷ್ಟಗಳನ್ನ ಪರಿಹರಿಸುವ ದಿವ್ಯ ಕೃಪೆಯು ನಮ್ಮನ್ನು ಹಿಗ್ಗಿಸುವದು. ನಾವು ಯಾತಕ್ಕೂ ಅಂಜುವ ಹಾಗಿಲ್ಲ.

ಉತ್ಪತ್ತಿ. ೩೩, ೧—೧೬.

q) ಯಾಕೋಬನೂ ಏಸಾವನೂ ಕೂಡಿ ಬಂದು ಅನ್ಯೋನ್ಯವಾದದ್ದು.

೩೩, ೧—೧೬.

೧ ವ. ಆಗಲವನು ಮಕ್ಕಳನ್ನ ಲೇಯಳಿಗೂ ರಾಹೆಲಳಿಗೂ ಇಬ್ಬರು ದಾಸಿಯರಿಗೂ ವಿಭಜನಾ ಮಾಡಿದನು ಮುಂ. ೩ ವ.—ಏಳು ಸಾರಿ ನೆಲಕ್ಕೆ ಬಾಗಿದನು.) ಅನ್ಯೋನ್ಯವಾಗಲಿಕ್ಕೆ ಯಾಕೋಬನು ಮೊದಲೇ ಹೆಜ್ಜೆ ಇಡುತ್ತಾನೆ. ದೈನ್ಯಭಾವ ತೋರಿಸಿ, ತನ್ನ ಅಣ್ಣಾನ ಮನಸನ್ನ ಕರಿಗಿಸುತ್ತಾನೆ. ಹೀಗೆ ಮಾಡುವಲ್ಲಿ, ತನ್ನ ಸಂಗಡ ಒಡಂಬಡಿಕೆ ಮಾಡಿದ ದೇವರ ಆಜ್ಞಾನುಸಾರವಾಗಿ ನಡೆದ ಹಾಗಾಯಿತು. (ಏಳು ಸಾರಿ) ಏಳರ ಸಂಖ್ಯೆ ಪರಿಶುದ್ಧವಾದದ್ದು. ಅದು ದಿವ್ಯ ಒಡಂಬಡಿಕೆಯ ಚಿನ್ಹೆ. ನಾಲ್ಕು ಲೋಕದ ಚಿನ್ಹೆ, ಮೂರು ದೇವರ ಚಿನ್ಹೆ. ಈ ಎರಡೂ ಕೂಡಿದರೆ, ಒಡಂಬಡಿಕೆ ಆಯಿತು. ಮನುಷ್ಯರ ಹೃದಯಗಳನ್ನ ತಿರಿಗಿಸುವ ದೇವರು ಯಾಕೋಬನ ಪ್ರಾರ್ಥನೆ ಕೇಳಿ, ಆಗಲೇ ಏಸಾವನ ಕೋಪಜ್ವಾಲೆ ತಗ್ಗಿಸಿದ್ದನು. ಆದರೆ ಈಗ ಯಾಕೋಬನು ದೈನ್ಯಭಾವ ಎಂಬ ನೀರನ್ನ ಹಾಕಿ, ಅವನಲ್ಲಿ ಇನ್ನು ಉಳಿದಿದ್ದ ಕೋಪಾಗ್ನಿಯನ್ನ ನೊಂದಿಸುತ್ತಾನೆ. ನಿನ್ನ ವೈರಿಗಳ ಸಂಗಡ ಅನ್ಯೋನ್ಯವಾಗುವ ರೀತಿ ಇದೇ ತಿಳಿ! ಅದು ತ್ರಿವಿಧವಾಗಿದೆ. ಹ್ಯಾಗಂದರೆ: ೧) ಎರಡನೆಯವರ ಕೋಪ ನಿನ್ನ ಮೇಲೆ ತಂದ ನಿನ್ನ ಪಾಪ ದೇವರ ಕೃಪೆಯಿಂದ ಲೋಪವಾಯಿತೆಂದು ವಿಶ್ವಾಸ ಮೂಲದಿಂದ ತಿಳಕೊಂಡು ಸಂತುಷ್ಟನಾಗು! ೨) ಅವರ ಮನಸನ್ನ ದೇವರು ತಿರಿಗಿಸುವ ಹಾಗೆ, ಆತನನ್ನು ಬೇಡಿಕೊಳ್ಳು! ೩) ದೀನಭಾವ ತೋರಿಸಿ ಅವರ ಮನಸನ್ನು ಗೆದಿ!

೬ ವ.—ಹತ್ತರ ಬಂದು ವಂದಿಸಿದರು. ೭ ವ.—ಹತ್ತರ ಬಂದು ವಂದಿಸಿದರು.—ಆ ಮೇಲೆ—ವಂದಿಸಿದರು. ೮ ವ.—ಈ ಗುಂಪೆಲ್ಲಾ ನಿನಗೆ ಯಾಕೆ?) ಏಸಾವನ ಕೋಪಾಗ್ನಿಗೆ ಕಾಣಿಕೆಯ ಬಲಿ ಅರ್ಪಿಸಿ, ಉಪಶಮನ ಮಾಡ ಬೇಕೆಂದು ನೆನಿಸಿದನು. ೯ ವ. ಏಸಾವನಲ್ಲಿ ದ್ರವ್ಯಾಶೆ ಇರಲಿಲ್ಲ. ಅವನಿಗೆ ದೊಡ್ಡ ಮನಸು ಇತ್ತು.

೧೦ ವ.—ಇದಕ್ಕೋಸ್ಕರ) ನಿನಗೆ ಏನಾದರೂ ಕಾಣಿಕೆ ಕೊಟ್ಟು ಸಂತೋಷ ಪಡಿಸಲಿಕ್ಕೆ. ದೇವರ ಮುಖವನ್ನ ಕಂಡು, ಕಾಣಿಕೆ ಕೊಟ್ಟು, ಸಂತುಷ್ಟರಾಗುತ್ತಾರೆ ಹ್ಯಾಗೋ, ಹಾಗೆ ಇದಾಯಿತು. ೧೧ ವ. ನನ್ನ ಆಶೀರ್ವಾದವನ್ನ) ನಿನ್ನನ್ನು ಮೆಚ್ಚಿಸುವಂಥಾ ನನಗೆ ದೇವರ ಆಶೀರ್ವಾದ ತರುವಂಥಾ ಕಾಣಿಕೆಯನ್ನ.—ಇದು ಅನ್ಯೋನ್ಯದ ಕಾಣಿಕೆ. ಏಸಾವನಿಗಿಂತ ತಾನು ಅಧಿಕನೆಂದು ಯಾಕೋಬನು ಈ ಮಾತಿನಿಂದ ತೋರಿಸುತ್ತಾನೆ. ೧೪ ವ.—ಮೆಲ್ಲಗೆ ಬರುವೆನು) ಏಸಾವನು ಯಥಾರ್ಥವಾಗಿ ಮಾತಾಡಿದಾಗ್ಯೂ, ಯಾಕೋಬನಲ್ಲಿ ಇನ್ನು ಸ್ವಲ್ಪ ಭಯ ಉಳಿದಿದ್ದೀತು. ಯಾಕೋಬನು ಕಾನಾನಕ್ಕೆ ಹೋಗುವದು ನಿಶ್ಚಯ. ಆದರೆ ಏಸಾವನ ದರ್ಶನಕ್ಕಾಗಿ ಸೇಯಿರಿನ ಮೇಲೆ ಹಾದು ಕಾನಾನಕ್ಕೆ ಹೋಗ ಬೇಕೆಂದಿದ್ದನೋ, ಅಥವಾ ಕಾನಾನಕ್ಕೆ ಮುಟ್ಟಿದ ಮೇಲೆ, ಸೇಯಿರಿಗೆ ತನಗೆ ಕೂಡಿದ ವೇಳೆಯಲ್ಲಿ ಹೋಗ ಬೇಕೆಂದು ಮಾಡಿದನೋ, ತಿಳಿಯದು. ಈಗ ಮಾತ್ರ ಒಬ್ಬನೇ ಇರಲಿಕ್ಕೆ ಮನಸು ಬಹಳ ಇತ್ತು. ಯಾಕೋಬನು ಏಸಾವನು ಇವರ ಹಾಗೆ, ಒಂದಕ್ಕೊಂದು ಇಷ್ಟು ಭಿನ್ನವಾದ ಪ್ರಕೃತಿಯುಳ್ಳವರ ಸ್ನೇಹ ಬಹಳ ದಿವಸ ಇರ ಬೇಕಾದರೆ, ಅವರು ಒಬ್ಬರಿಗೊಬ್ಬರು ಒಂದಿಷ್ಟು ದೂರವಾಗಿರ ಬೇಕು, ಬಹಳ ದಿನ ಕೂಡಿರ ಬಾರದು.

೧೫ ವ.—ಕೆಲವರನ್ನ ನಿನ್ನ ಬಳಿಯಲ್ಲಿ ಇಡುವೆನು ಅಂದನು.) ಸಹಾಯಕ್ಕಾಗಿ. ಏಸಾವನು ಬಹಳ ಉಪಚಾರಿ. ಯಾಕೋಬನು ದೇವರ ಆಶ್ರಯದ ಮೇಲೆ ಭರವಸವಿಟ್ಟು, ನಿನ್ನ ದಯ ನನಗೆ ಸಾಕು, ಇದು ಬೇಡ ಅಂತ, ಮುಂದೆ ಏನಾದರೂ ಒಂದು ತೊಡಕು ಬಾರದಂತೆ, ಏಸಾವನಿಗೆ ಹೇಳುತ್ತಾನೆ. ಪಾರಿವಾಳಗಳಂತೆ ಯಥಾರ್ಥಿಗಳು, ಸರ್ಪಗಳಂತೆ ಜಾಣರು ಆಗಿರಿ! ೧೬ ವ. ಆ ದಿವಸದಲ್ಲಿ ಏಸಾವನು ತನ್ನ ಮಾರ್ಗ ಹಿಡಿದು, ಸೇಯಿರಿಗೆ ತಿರಿಗಿ ಹೋದನು.

೧೩೮ ಯಾಕೋಬನು ಕಾನಾನಕ್ಕೆ ಬಂದದ್ದೂ ದೀನಳು ಭಂಗ ಪಟ್ಟದ್ದೂ.

ಉತ್ಪತ್ತಿ. ೩೩, ೧೭—೨೦. ೩೪, ೧—೩೧.

r) ಯಾಕೋಬನು ಕಾನಾನಕ್ಕೆ ಬಂದದ್ದು. ೩೩, ೧೭—೨೦.

೧೭ ವ. ಆದರೆ ಯಾಕೋಬನು ಹೊರಟು ಸುಖೋತಿಗೆ ಹೋಗಿ—) ಸುಖೋತ್=ಹಟ್ಟಿಗಳು, ಗುಡಸಲುಗಳು. ಈ ಸ್ಥಳವು ಯೊರ್ದಾನ ಹೊಳೆಯ ಪೂರ್ವದಲ್ಲಿ ಇತ್ತು. ಅಲ್ಲಿ ಕೆಲವು ವರ್ಷ ಕಳೆದಿದ್ದಾನಾದೀತು. ೧೮ ವ.—ಬರಲು, ಕಾನಾನ ದೇಶದಲ್ಲಿರುವ ಶಿಖೇಮ್ ಎಂಬ ಊರಿಗೆ ಬಂದು—) ಈ ಊರು ಕಾನಾನದಲ್ಲಿಯದು. ೧೯ ವ. ದೇವರ ವಾಗ್ದತ್ತ ನೆನಪು ಮಾಡಿ ಕೊಂಡು, ಹೊಲ ಕೊಂಡು ಕೊಂಡನು. ೨೩, ೭. ಮುಂ. ೨೦ ವ. ಮತ್ತು ಅಲ್ಲಿ ಪೀಠವನ್ನು ಕಟ್ಟಿ ಮುಂ.) ತನ್ನನ್ನು ಈ ದೇಶಕ್ಕೆ ಸುರಕ್ಷಿತವಾಗಿ ಕರಕೊಂಡು ಬಂದ ದೇವರ ಸ್ತೋತ್ರಕ್ಕಾಗಿ.—ದೇವರ ಉಪಕಾರ ನೆನಿಸಿ ಕೊಂಡು ಸ್ತೋತ್ರ ಮಾಡುವದು ಒಳಗಣ ಮನುಷ್ಯನು ಬದುಕುವ ಲಕ್ಷಣ. ಒಬ್ಬನು ಸತ್ತ ಹಾಗೆ ಕಂಡರೂ, ದೇಹ ಇನ್ನು ಬೆಚ್ಚಗೆ ಇದ್ದರೆ, ಜೀವ ಇನ್ನು ಹೋಗಲಿಲ್ಲ ಅಂತ ತಿಳಿಯುವದು ಹ್ಯಾಗೋ, ಹಾಗೆ ಇದು.

s) ದೀನಳು ಭಂಗ ಪಟ್ಟ ಸಂಗತಿ. ಸಂಧಿ ೩೪.

೩ ವ.—ಮನಸು ದೀನಳ ಮೇಲೆ ಕೂತಿತ್ತು. ೪ ವ.—ಈ ಹುಡಗಿಯನ್ನು ನನಗೆ ಮದಿವೆ ಮಾಡಿ ಕೊಡು! ಅಂದನು. ೫ ವ.—ಅವನ ಗಂಡು ಮಕ್ಕಳು ಅವನ ದನಗಳ ಸಂಗಡ ಮುಂ. ೭ ವ.—ಆ ಮನುಷ್ಯರು ವ್ಯಥೆ ಪಟ್ಟು ಬಹಳ ಮುಂ. ೮ ವ.—ಅವನಿಗೆ ಹೆಂಡತಿ ಮಾಡಿ ಕೊಡಿರಿ! ೯ ವ. ಹೀಗೆ ನಮಗೆ ಬೀಗರಾಗಿರಿ! ಮುಂ.

೧೨ ವ.—ನನಗೆ ಹೆಂಡತಿ ಮಾಡಿ ಕೊಡಿರಿ! ೧೩ ವ.—ಯಾಕೋಬನ ಗಂಡು ಮಕ್ಕಳು ಮುಂ. ೧೭ ವ.—ತಕ್ಕೊಂಡು ಹೋಗುತ್ತೇವೆಂದು ಹೇಳಿದರು.) ಆಕೆಯನ್ನ ಮದಿವೆ ಮಾಡಿ ಕೊಡಲಿಕ್ಕೆ ಮನಸ್ಸು ಇರಲಿಲ್ಲ. ಅವರನ್ನು ಸಂಹರಿಸಲಾಗುವ ಹಾಗೆ ಈ ಪರಿ ಅವರನ್ನ ನಂಬಿಸಿದರು. ೧೮ ವ. ಅವರ ಮಾತುಗಳು—ಶಿಖೇಮನಿಗೂ ಸರಿ ಕಂಡವು. ೨೧ ವ.—ಈ ಮನುಷ್ಯರು ನಮ್ಮ ಕೂಡಾ ಸಮಾಧಾನವಾಗಿದ್ದಾರೆ ಮುಂ. ೨೩ ವ.—ಅವು ನಮ್ಮವು ಆಗುವದಿಲ್ಲವೋ? ಮುಂ.) ಅವರೂ ಕಪಟಸ್ಥರು. ಯಾಕೋಬನವರಿಗೆ ಅವರಿಂದ ಮೋಸವಾಗುವ ಹಾಗಿತ್ತು.

೨೪ ವ.—ಅಗಸೆ ಬಾಗಲಲ್ಲಿ ಹೋಗಿ ಬರುವವರೆಲ್ಲಾ—ಬಾಗಲಲ್ಲಿ ಹೋಗಿ ಬರುವವರು ಎಲ್ಲಾ ಮುಂ. ೨೫ ವ.—ಧೈರ್ಯವಾಗಿ ಪಟ್ಟಣದ ಮೇಲೆ ಬಿದ್ದು ಮುಂ.) ಪರಿಚ್ಛೇದನೆ ಮಾಡಿಸಿ ಕೊಂಡು ಮೂರನೆ ದಿವಸದಲ್ಲಿ ಇದರ ದೆಸೆಯಿಂದ ನೋವು ಜ್ವರ ಆಗುತ್ತಿದ್ದಾದ ಕಾರಣ, ಏನಾದರೂ ಮಾಡಲಿಕ್ಕೆ ಅಶಕ್ತರಾಗಿದ್ದರು. ೨೬ ವ.—ಖಡ್ಗ ಧಾರೆಯಿಂದ ಕೊಂದು ಹಾಕಿ, ದೀನಳನ್ನು ಶಿಖೇಮನ ಮನೆಯಿಂದ ತಕ್ಕೊಂಡು ಹೋದರು. ೩೧ ವ.—ಮಾಡ ಬೇಕೇ? ಅಂದರು.

ಟಿಪ್ಪಣಿ: ದೀನಳು ಯಾಕೋಬನ ಒಬ್ಬಳೇ ಮಗಳು. ಇದಾದಾಗ, ಆಕೆ ಸುಮಾರು ೧೩ ವರುಷದಾಕೆ. ಬುದ್ಧಿ ತಪ್ಪಿ ಅನ್ಯ ಜನರಲ್ಲಿ ಪರಿಚಿತಿ ಮಾಡ ಹೋದಳು. ಇದರಿಂದ ಯಾಕೋಬನ ಮನೆತನವೆಲ್ಲಾ ಒಂದು ದೊಡ್ಡ ಕೆಡಕಿಗೂ ಅಪಮಾನಕ್ಕೂ ಗುರಿಯಾಯಿತು. ಆಕೆಯ ಸಹೋದರರರು ಕಪಟದಿಂದ ಕುಯುಕ್ತಿ ನಡಿಸಿ, ಕೆಡಿಸಿದವನ ಕಡೆಯವರು ಸಂಶಯ ತಕ್ಕೊಳ್ಳದಂತೆ, ಮಾಡಿ, ಅವರನ್ನ ನಂಬಿಸಿದ ಬಳಿಕ, ಅವರ ಮೇಲೆ ತಮ್ಮ ಶಿಟ್ಟನ್ನ ತೀರಿಸೋಣವಾಯಿತು. ಹೀಗೆ ಮಾಡ ತಕ್ಕದ್ದಲ್ಲ. ತಮ್ಮ ಮನೆ ಶುದ್ಧವಿರ ಬೇಕೆಂಬ ಆಸಕ್ತಿ ಚಲೋದು. ಆದರೆ ಇದಕ್ಕಾಗಿ ನಡಿಸಿದ ಉಪಾಯ ಕೆಟ್ಟದ್ದೇ. ಮಕ್ಕಳು ಇದ್ದ ಗೃಹಸ್ಥರೇ! ನಿಮ್ಮ ಮನೆಗಳಲ್ಲಿ ಬಿಗಿ ತಪ್ಪದಂತೆ, ನೋಡಿ ಕೊಳ್ಳಿರಿ! ರೂಬೇನನು ೩೫, ೨೨ ಹೇಳಿದ ಸಂಗತಿಯ ದೆಸೆಯಿಂದ, ಸಿಮೆಯೋನನೂ ಲೇವಿಯೂ ಶಿಖೇಮ ಊರಿನವರನ್ನ ಕೊಂದ ದೋಷದ ದೆಸೆಯಿಂದ ಕ್ರಿಸ್ತ

ನ ಮೂಲಪಿತೃಗಳಾಗಲಿಕ್ಕೆ ಅಯೋಗ್ಯರಾದ ಕಾರಣ (೪೯), ಚೊಚ್ಚಲತನ ಯೂದನಿಗೆ ಬಂತು. ಮೋಸೆ ಲೇವಿಯ ಗೋತ್ರದವನು. ಆದಾಗ್ಯೂ ಈ ಸಂಗತಿಯನ್ನು ಆವ ಹಾಗೆ, ವಿವರವಾಗಿ ಬರೆದಿದ್ದಾನೆ. ಯಾಕಂದರೆ ತನ್ನ ಗೋತ್ರಕ್ಕೆ ಅಪಮಾನ ಬಂದೀತೆಂದು ಪಕ್ಷಪಾತ ಮಾಡದೆ, ಸತ್ಯವನ್ನು ಮಾತ್ರ ನೋಡಿ ಪರಿಶುದ್ಧಾತ್ಮನಿಂದ ಪ್ರೇರಿತನಾಗಿ ಈ ಗ್ರಂಥಗಳನ್ನು ರಚಿಸಿದ್ದಾನೆ.

t) ಯಾಕೋಬನು ಬೇಥೆಲಿಗೆ ಹೋದದ್ದು. ೩೫, ೧—೧೫.

೧ ವ. ತನ್ನ ಪುತ್ರರಿಂದ ಶಿಖೇಮಿನವರು ನಾಶನವಾದದಕ್ಕೆ ನೆರೆಹೊರೆಯವರು ಮುಯ್ಯಿಗೆ ಮುಯ್ಯಿ ತೀರಿಸ್ಯಾರು ಎಂಬ ಭಯ ಇನ್ನು ಯಾಕೋಬನಲ್ಲಿ ಬಹಳವಿತ್ತು. ಆ ಸ್ಥಳ ಬಿಟ್ಟು ಹೋಗ ಬೇಕೆಂದು ತಾನು ನೆನಿಸಿದ್ದಾನು. ದೇವರು ಹೋಗ ಬೇಕೆಂದು ಅಗ್ನಾಪಿಸಿದ ಬಳಿಕ, ಹೋಗಲಿಕ್ಕೆ ಧೈರ್ಯವೂ ಆಧಾರವೂ ಆದವು. ಇದಲ್ಲದೆ ಯಾಕೋಬನು (೨೮, ೨೦—೨೨.) ಹೊತ್ತ ಹರಿಕೆ ಇನ್ನು ಸಲ್ಲಿಸ ಬೇಕಾಗಿತ್ತು.—ಭಕ್ತರು ಪಡುವ ಚಿಂತೆಗಳು ಹೋಗುವ ಹಾಗೆ, ದೇವರು ಮಾರ್ಗ ತೋರಿಸುತ್ತಾನೆ. ೨. ೩ ವ. ಬೇಥೆಲಿಗೆ ಏರಿ ಹೋಗೋಣ!) ದೇವರ ಒಡಂಬಡಿಕೆಯಲ್ಲಿ ಸೇರ ಬೇಕಾದರೆ ಮೊದಲು ತಮ್ಮನ್ನ ಶುದ್ಧ ಮಾಡಿ ಕೊಳ್ಳ ಬೇಕು. ಹ್ಯಾಗಂದರೆ: ೧) ಅನ್ಯ ದೇವರುಗಳನ್ನ ಬಿಟ್ಟು ಬಿಡುವದು. ಇದು ಭಕ್ತಿಶುದ್ಧಿ. ಇದಿಲ್ಲದಿದ್ದರೆ, ಉಳಿದ ಶುದ್ಧಿಗಳು ಹ್ಯಾಗೆ ಆದಾವು? ಇಸ್ರಾಯೇಲನವರು ಅನ್ಯ ದೇವರುಗಳನ್ನ ಮೇಸೊಪೊತಾಮಿಯದಿಂದ ತಂದಿದ್ದರು. ೨) ಸ್ನಾನ ಮುಂತಾದ್ದರಿಂದ ಶುದ್ಧ ಮಾಡಿ ಕೊಳ್ಳುವದು. ಇದು ಮನಶುದ್ಧಿಗೆ ಸಾದೃಶ್ಯ. ೩) ವಸ್ತ್ರ ಬದಲಿಸುವದು. ಇದು ವೃತ್ತಿ (ನಡಾವಳಿಯ) ಶುದ್ಧಿ ಸೂಚಿಸುವದು. ಹೀಗೆ ಮೂಲ ಗಿಡ ಫಲ ಈ ಮೂರು ನಮ್ಮಲ್ಲಿ ಆದರೆ, ನಾವು ದೇವರಿಗೆ ಸಮರ್ಪಕವಾಗಿ, ಆತನ ಒಡಂಬಡಿಕೆಯಲ್ಲಿ ಸೇರಿರ ಯೋಗ್ಯರಾಗುತ್ತೇವೆ. ೪ ವ. ಮುರುವುಗಳನ್ನ) ವಿಗ್ರಹಗಳ ರೂಪಗಳು ಅವುಗಳ ಮೇಲೆ ಬರೆದಿದ್ದಾವು. ಯಂತ್ರ ಕಟ್ಟಿ ಕೊಳ್ಳುವದಕ್ಕಾಗಿ ಅವನ್ನ ಪ್ರಯೋಗಿಸಿದ್ದಾರು. ೫ ವ.—ಯಾಕೋಬನ ಪುತ್ರರ ಬೆನ್ನ ಹತ್ತಿ ಕೊಂಡು ಹೋಗಲಿಲ್ಲ.) ಸುತ್ತ ಮುತ್ತಲಿನವರಲ್ಲಿ ಶಿಟ್ಟು ಇತ್ತು. ದೇವರಿಂದ ಅವರ ಮೇಲೆ ಭಯ ಬಿದ್ದಲ್ಲಿ, ಅದನ್ನ ತೀರಿಸಲಾಗಲಿಲ್ಲ. ತಮ್ಮನ್ನ ಶುದ್ಧ ಮಾಡಿ ಕೊಂಡು ದೇವರ ಆಜ್ಞೆಯಲ್ಲಿ ಇದ್ದದರಿಂದ, ಯಾಕೋಬನ ಪುತ್ರರ ಪಾಪವನ್ನು ದೇವರು ಕ್ಷಮಿಸಿ, ವೈರಿಗೆ ಅವರನ್ನ ಮುಟ್ಟಲೀಸಲಿಲ್ಲ. ೬ ವ. ಹೀಗೆ ಯಾಕೋಬನು ತನ್ನ ಸಂಗಡ ಮುಂ. ೭ ವ.—ಓಡಿ ಹೋದಾಗ, ಅಲ್ಲಿ ತನಗೆ ದೇವರು ಪ್ರಕಟವಾದದರಿಂದ ಮುಂ.) ಏಲ್‌ಬೇಥೆಲ್ — ಬೇಥೆಲಿನ ದೇವರ ಪೀಠ. ಆ ಪೀಠದ ಸ್ಥಳಕ್ಕೆ ಹೀಗೆ ಹೆಸರಿಟ್ಟನು. ಹೀಗೆ ಮಾಡಿದಲ್ಲಿ, ದೇವರು ತನಗೆ ಅಲ್ಲಿ ಪ್ರಕಟವಾದದಕ್ಕೆ ನೆನಪು ಕೊಡುವ ಒಂದು ಗುರುತು ಆಯಿತು. ೮ ವ. ಅಲ್ಲೋನ್ ಬಖುಥ್) ಅಲ್ಲಿ ದೆಬೋರಳ ಮರಣದ ದೆಸೆಯಿಂದ ಅತ್ತ ಕಾರಣ, ಆ ಗಿಡಕ್ಕೆ ಅಳುವ ಅಲ್ಲೋನ್ ಮರ ಎಂದು ಹೆಸರಾಯಿತು. ಈ ಸೇವಕಳು ಭಯಭಕ್ತಿಯುಳ್ಳಾಕೆ. ಆದ್ದರಿಂದ ಆಕೆಗೆ ಯಾಕೋಬನ ಮನೆಯಲ್ಲಿ ಬಹಳ ಮಾನವಿತ್ತು. ಸೇವಕರು ಧಣಿಯ ಮನೆಯಲ್ಲಿ ಬಹಳ ಕೆಡಕು ಅಥವಾ ಬಹಳ ಸಹಾಯ ಮಾಡ ಬಹುದು. ಅದರ ಸಲುವಾಗಿ ನಂಬಿಗೆಯುಳ್ಳಂಥಾ ಭಯಭಕ್ತಿಯುಳ್ಳಂಥಾ ಸೇವಕರಿಗೆ ಬಹಳ ಮಾನ ಪ್ರೀತಿ ತೋರಿಸ ಯುಕ್ತವೇ ಸರಿ. ಅವರು ಸಣ್ಣವರಾದರೂ, ದೇವರಿಗೆ ಪ್ರಿಯರು ಆಗಿದ್ದಾರೆ.

೯—೧೫ ವ. ದೇವರು ಯಾಕೋಬನಿಗೆ ಇನ್ನೊಂದು ಸಾರಿ ಬೇಥೆಲಿನಲ್ಲಿ ಪ್ರತ್ಯಕ್ಷವಾದದ್ದು. ದೇವರು ಯಾಕೋಬನನ್ನು ಆಶೀರ್ವದಿಸಿದಲ್ಲಿ, ಅವನು ಮೂಲಪಿತೃದೀಕ್ಷೆ ಹೊಂದಿದವನಾಗಿ, ತಂದೆಯ ಮನೆಗೆ ತಿರಿಗಿ ಬರುತ್ತಾನೆ. ಅಂದು ಮೋಸದಿಂದ ತಕ್ಕೊಂಡದ್ದು ಈಗ ನ್ಯಾಯದಿಂದ ದೇವರ ಚಿತ್ತದ ಪ್ರಕಾರ ಅವನಿಗೆ ಸಿಕ್ಕಿದ ಹಾಗಾಯಿತು. ೧೦ ವ.—ಯಾಕೋಬನೆಂದು ನಿನಗೆ ಹೆಸರು ಇರ ಬೇಡ ಮುಂ.) ತನ್ನ

ಉತ್ಪತ್ತಿ. ೩೫, ೧೬—೨೯.

ಮನೆಯ ಸಹಿತವಾಗಿ ತನ್ನನ್ನು ಶುದ್ಧ ಮಾಡಿ ಕೊಂಡು ದೇವರಿಗೆ ವಿಧೇಯನಾದದರಿಂದ, ಈ ಹೊಸ ಹೆಸರಿಗೆ ಮತ್ತು ಪಾತ್ರನಾದನು. ವೇಳೆ ವೇಳೆಗೆ ಪಾಪದಲ್ಲಿ ಬೀಳುತ್ತಿರುವದರಿಂದ, ನಾವು ಯಾವಾಗಲು ಪಶ್ಚಾತ್ತಾಪ ವಿಶ್ವಾಸ ತೋರಿಸಿ, ದೇವರ ಮಕ್ಕಳೆಂಬ ನಾಮಕ್ಕೆ ಮತ್ತು ಮತ್ತು ಯೋಗ್ಯರಾಗುತ್ತಿರ ಬೇಕು.

೧೧ ವ.— ಅರಸರು ನಿನ್ನ ಟೊಂಕಗಳೊಳಗಿಂದ ಬರುವರು.) ಇದು ಕಾಲಾಂತರದಲ್ಲಿ ಆಯಿತು. ೩೬, ೩೧.

u) ರಾಹೆಲಳ ಮರಣ. ೩೫, ೧೬—೨೦.

೧೭ ವ. ನೀನು ಗಂಡು ಮಗನನ್ನು ಹಡದಿ ಎಂದು ಸೂಲಗಿತ್ತಿ ರಾಹೆಲಳಿಗೆ ಧೈರ್ಯ ಹೇಳುತ್ತಾಳೆ. ೧೮ ವ. ಮತ್ತು ಆಕೆ ಪ್ರಾಣ ಹೋಗಿ ಸಾಯುವಾಗ್ಯೆ, ಅವನಿಗೆ ಬೆನೋನಿ = ನನ್ನ ನಷ್ಟದ ಮಗನು ಎಂದು ಹೆಸರಿಟ್ಟಳು. ಬೆನ್ಯಾಮೀನನು = ಬಲದ ಮಗನು, ಶುಭದ ಮಗನು. ಇವನು ಹುಟ್ಟಿದಲ್ಲಿ, ವಾಗ್ದತ್ತ ಒದಗಿ ಬರುತ್ತದೆ ಎಂದು ಯಾಕೋಬನು ದೂರ ನೋಡಿ ದುಃಖ ಕಳೆದು ಶಾಂತಿಗೊಳ್ಳುತ್ತಾನೆ. ೨೦ ವ. ಮತ್ತು ಯಾಕೋಬನು ಆಕೆಯ ಸಮಾಧಿಯ ಮೇಲೆ ಒಂದು ಸ್ತಂಭವನ್ನ ನಿಲ್ಲಿಸಿದನು.) ಎಫ್ರಾಥು = ಬೇಥ್ಲೆಹೆಮು, ಅದು ಯೆರೂಸಲೇಮಕ್ಕೆ ದಕ್ಷಿಣದಲ್ಲಿ ಎರಡು ಹರದಾರಿ ದೂರವಾಗೆದೆ. ಇಂದೂ ಅಲ್ಲಿ ರಾಹೆಲಳ ಸಮಾಧಿ ತೋರಿಸುತ್ತಾರೆ.

v) ಯಾಕೋಬನು ಮುಂದಕ್ಕೆ ಹೋದದ್ದು. ರೂಬೆನನ ದುಷ್ಕೃತ್ಯ. ೩೫, ೨೧. ೨೨.

೨೧ ವ. ಬೇಥ್ಲೆಹೆಮದ ಸಮೀಪದಲ್ಲಿ ಈ ಹಿಂಡಿನ ಗೋಪುರ (ಹಿಂಡುಗಳು ನಿಲ್ಲುವ, ಗೊಲ್ಲರು ಕಾಯುವ ಗೋಪುರ) ಇತ್ತಂತೆ. ಇಲ್ಲಿ ರೂಬೆನನು ಕೆಟ್ಟದ್ದನ್ನು ಮಾಡಿ, ತನ್ನ ಚೊಚ್ಚಲತನದ ಅಧಿಕಾರ ಆಶೀರ್ವಾದಗಳನ್ನ ಕಳಕೊಳ್ಳುತ್ತಾನೆ. (೪೯ ಸಂಧಿ.)

w) ಯಾಕೋಬನ ಕುಮಾರರು. ೩೫, ೨೩—೨೬.

೨೩ ವ. ಇದಲ್ಲದೆ ಯಾಕೋಬನ ಕುಮಾರರು ಹನ್ನೆರಡು ಮಂದಿ.

೨೬ ವ.— ಬೆನ್ಯಾಮೀನನು ಮಾತ್ರ ಕಾನಾನದಲ್ಲಿ ಹುಟ್ಟಿದನು.

x) ಯಾಕೋಬನು ತನ್ನ ತಂದೆಯಾದ ಇಸಾಕನ ಬಳಿಗೆ ಹೆಬ್ರೋನಿಗೆ ಬಂದದ್ದೂ ಇಸಾಕನ ಮರಣವೂ. ೩೫, ೨೭—೨೯.

೨೮ ವ. ಇಸಾಕನು ಮೂರು ಮಂದಿ ಮೂಲಪಿತೃಗಳಲ್ಲಿ ದೀರ್ಘಾಯುಷ್ಯ ಹೊಂದಿ, ಲೋಕದ ೨೨೮೮ನೇ ವರುಷದಲ್ಲಿ, ಯಾಕೋಬನು ಏಸಾವನು ಇವರು ೧೨೦ ವರ್ಷದವರಾಗಿದ್ದಾಗ್ಯೆ, ಯೋಸೆಫನು ಪ್ರಧಾನಿ ಆಗುವದಕ್ಕಿಂತ ಒಂದು ವರುಷ ಮುಂಚೆ, ತೀರಿ ಕೊಂಡನು. ಇಸಾಕನ ವಿಷಯ ವಿಶೇಷ ವೃತ್ತಾಂತ ಸಂಭವಿಸಲಿಲ್ಲದಕ್ಕೆ, ಅವನ ಮರಣದ ವೃತ್ತಾಂತ ಹೇಳಿ ಅವನ ಚರಿತ್ರೆ ಇಲ್ಲಿ ಮುಗಿಸಿ ಬಿಟ್ಟಿದ್ದಾನೆ. ೨೯ ವ. ಏಸಾವನು ಸೇಯಿರಿಂದ ಬಂದು ಯಾಕೋಬನೊಡನೆ ತಂದೆಗೆ ಉತ್ತರ ಕ್ರಿಯೆಗಳನ್ನು ಮಾಡಿದಲ್ಲಿ, ಯಾಕೋಬನಿಗೂ ಏಸಾವನಿಗೂ ಆದ ಅನ್ಯೋನ್ಯ ಕೆಟ್ಟಿದ್ದಿಲ್ಲವೆಂದು ತೋರುತ್ತದೆ.

y) ಎಸಾವನ ವಂಶಾವಳಿ. ಸಂಧಿ ೩೬.

aa) ಎಸಾವನ ಹೆಂಡರೂ ಕುಮಾರರೂ. ೧—೫.

೨೬, ೩೪. ೨೮, ೯. ಹೇಳಿರುವ ಎಸಾವನ ಹೆಂಡರ ಹೆಸರುಗಳು ಬೇರೆ. ಯಾಕಂದರೆ ಆ ದೇಶದವರು ಬೇರೆ ಬೇರೆ ಕಾರ್ಯಗಳ ದೆಶೆಯಿಂದ ತಮ್ಮ ಹೆಸರುಗಳನ್ನ ಬದಲಿಸುವದುಂಟು. ಹಾಗೂ ಒಬ್ಬನಿಗೆ ಕೆಲವು ಹೆಸರುಗಳನ್ನ ಇಡುವದುಂಟು.

ಎಸಾವನ ಹೆಂಡರ ಹೆಸರು.	ಹೆಂಡರ ತಂದೆಗಳ ಹೆಸರು.
ಮೊದಲಿನದು. ಎರಡನೆದು.	
೧) ಬಾಸ್ಮಥಳು — ಆದಳು.	ಹಿತ್ತಿಯನಾದ (ಕನಾನ್ಯರದೊಂದು ಗೋತ್ರ) ಏಲೋನನು.
೨) ಯೆಹೂದೀಥಳು — ಅಹೊಲಿಬಾಮಳು.	ಹಿವ್ವಿಯನಾದ (ಕನಾನ್ಯರದೊಂದು ಗೋತ್ರ) ಬೇರಿ ಅಥವಾ ಆನನು.—ಇವನ ತಂದೆ ಚಿಬೋನನು ಆದ ಮೇಲೆ, ಅಹೊಲಿಬಾಮಳು ಅವನಿಗೆ ಮೊಮ್ಮಗಳು. ಒಟ್ಟಿಗೆ ಕನಾನ್ಯರು ಸಹ ಹಿತ್ತಿಯರೆಂದೆನಿಸುವದರಿಂದ, ಬೇರಿ, ಅಥವಾ ಆನನು ಸುಧಾ ಹಿತ್ತಿಯನೆಂದು ಎನಿಸುತ್ತಾನೆ.
೩) ಮಹಲತ್ತಳು — ಬಾಸ್ಮಥಳು.	ಇಷ್ಮಯೇಲನು.

೨ ವ. ಹಿವ್ವಿಯನಾದ ಚಿಬೋನನ ಮೊಮ್ಮಗಳೂ, ಆನನ ಮಗಳೂ ಆದಂಥಾ ಅಹೊಲಿಬಾಮಳನ್ನೂ—ತನಗೆ ಹೆಂಡರಾಗಿ ತಕ್ಕೊಂಡನು.

bb) ಎಸಾವನು ಸೇಯಿರ ಪರ್ವತದ ಮೇಲೆ ವಾಸ ಮಾಡಿದ್ದು. ೬—೮.

೬ ವ.—ಸಹೋದರನಾದ ಯಾಕೋಬನ ದೆಶೆಯಿಂದ ಬೇರೊಂದು ದೇಶಕ್ಕೆ ಹೋದನು.) ಯಾಕೋಬನು ನಮ್ಮ ತಂದೆಯ ಬದಕಿಗೆ ಬಾಧ್ಯಸ್ಥನು; ಅವನು ತಿರಿಗಿ ಬಂದ ಮೇಲೆ, ನಾವು ಹ್ಯಾಗಾದರೂ ಕೂಡಿರಲಾರೆವು ಎಂದು ಎಸಾವನು ತಿಳಿದು, ಹಾಗೂ ಅಲ್ಲಿಗೆ ಹೋದರೆ, ಇಚ್ಛಾನುಸಾರವಾಗಿ ತಿರಗಲಿಕ್ಕೂ, ಬದಕಲಿಕ್ಕೂ, ನನಗೆ ಹೆಚ್ಚು ವೈನಾದೀತೆಂದು ನೋಡಿ, ಆಗಲೇ ಸೇಯಿರ್ ಪರ್ವತಕ್ಕೆ ಹೋಗಿದ್ದನು (೩೨, ೪). ೭ ವ.—ದೇಶವು ಅವರನ್ನ ಹಿಡಿಸಲಾರದಿತ್ತು.

cc) ಎಸಾವನ ಕುಮಾರರೂ, ಮೊಮ್ಮಕ್ಕಳೂ. ೯—೧೪.

೧೦ ವ.—ಎಸಾವನ ಹೆಂಡತಿಯಾದ ಆದಳ ಮಗನಾಗಿರುವ ಮುಂ.

೧೪ ವ.—ಚಿಬೋನನ ಮೊಮ್ಮಗಳಾದಂಥಾ ಆನನ ಮಗಳಾದಂಥಾ ಮುಂ.

ಉತ್ಪತ್ತಿ. ೩೬, ೧೫—೪೩.

dd) ಎಸಾವನ ಕುಮಾರರಿಂದಲೂ, ಮೊಮ್ಮಕ್ಕಳಿಂದಲೂ, ಹುಟ್ಟಿದ ಪ್ರಭುಗಳು. ೧೫—೧೯.

ಇವರು ತಮ್ಮ ಜನರಲ್ಲಿ ಹಿರಿಯರಾದವರು.

೧೫. ೧೬ ವ. ಕೋರಹನು ಎಸಾವನಿಗೆ ಆದಳು ಹಡೆದ ಎಲಿಫಾಜನ ವಂಶದಲ್ಲಿ ಹುಟ್ಟಿ, ಎಸಾವನಿಗೆ ಮರಿ ಮಗನಾಗಿದ್ದು, ಪ್ರಭುವಾಗಿದ್ದಾನು. ಹಾಗೂ ೧ ದಿನಚರ್ಯ. ೧, ೩೬. ಹೇಳಿರುವ ಥಿಮ್ನನು ಕಾಲಾಂತರದಲ್ಲಿ ಎಸಾವನ ಮರಿಮಕ್ಕಳಲ್ಲಿ ಪ್ರಸಿದ್ಧಿಗೆ ಬಂದು ಪ್ರಭುವಾಗಿದ್ದಾನು. ೧೮ ವ.— ಹೆಂಡತಿಯಾದಂಥ, ಅನನ ಮಗಳಾದಂಥ ಮುಂ.

ee) ಸೇಯಿರನ ಮಕ್ಕಳೂ ಅವರ ಪ್ರಭುಗಳೂ.

ಎಸಾವನ ವಂಶದವರು ಬಂದ ಪೂರ್ವದಿಂದ ಇವರೇ ಸೇಯಿರ ಎಂಬ ಗುಡ್ಡದ ಶೀಮೆಯಲ್ಲಿ ಇದ್ದರು. ೨೦—೩೦.

೨೦ ವ. ದೇಶದಲ್ಲಿ ನಿವಾಸಿಸುತ್ತಿದ್ದ ಹೋರಿಯರವನಾದ ಸೇಯಿರನ ಕುಮಾರರು ಯಾರಂದರೆ: ಮುಂ.) ಹೋರಿಯನು = ಗವಿಗಳಲ್ಲಿ ವಾಸ ಮಾಡುವವನು. ಸೇಯಿರೆಂಬುವನು ಆ ಗುಡ್ಡದ ಶೀಮೆಯಲ್ಲಿ ಇದ್ದದರಿಂದ, ಅದು ಸೇಯಿರೆಂದೆನಿಸಿತು. ಈ ಸೇಯಿರನ ವಂಶದವರು ತಮ್ಮ ತಂದೆಯ ಹಾಗೆ ಹೋರಿಯರೆಂದೆನಿಸಿದರು. ಅವರು ಕನಾನ್ಯರೊಳಗೆ ಒಂದು ಗೋತ್ರ. ೨೨ ವ.— ತಿಮ್ನಳು) ಎಲಿಫಾಜನ ಉಪಪತ್ನಿ (೧೨ ವ.). ಎಸಾವನ ವಂಶದವರು ಆ ಪ್ರಾಂತ್ಯದ ಮೂಲನಿವಾಸಿಗಳಾದ ಆ ಹೋರಿಯರನ್ನ ತಮಗೆ ವಶ ಮಾಡಿ ಕೊಂಡಿದ್ದರು. ೨೪ ವ. ಉಪ್ಪಿನ ಸಮುದ್ರದ ದಕ್ಷಿಣದಲ್ಲಿ ಕಲ್ಲಿರೊ ಎಂಬ ಸ್ಥಳದಲ್ಲಿ ಬಿಸಿನೀರಿನ ಬುಗ್ಗೆಗಳನ್ನ ಕೆಲವರು ಮಾರ್ಗಸ್ಥರು ಈಗ ತಿರಿಗಿ ಕಂಡಿದ್ದಾರೆ. ೨೫ ವ. ಅಹೊಲಿಬಾಮಳು ಎಸಾವನ ಹೆಂಡತಿ. (೨ ವ.)

ff) ಎದೋಮ ದೇಶದಲ್ಲಿ ಆಳಿದ ಅರಸರು. ೩೧—೩೯.

ಟಿಪ್ಪಣಿ: ಅರಸನು ಸತ್ತ ಬಳಿಕ, ಮಗನಿಗೆ ಪಟ್ಟ ಆಗುತ್ತಿದ್ದಿಲ್ಲಾದ ಕಾರಣ, ಆ ಅರಸರು ಹಿಂದೆ ಹೇಳಿದ ಆ ಪ್ರಭುಗಳಿಂದ ಆರಿಸಿ ಕೊಂಡವರೇ, ಅವರ ಸಹಕಾಲದವರೇ.

೩೧ ವ. ೩೫, ೧೧. ಹೇಳಿದ ಹಾಗೆ, ಇಸ್ರಾಯೇಲನವರನ್ನು ಅರಸರು ಆಳುವ ಮುಂಚೆ, ಎಸಾವನ ವಂಶದಲ್ಲಿ ಅರಸರು ಹುಟ್ಟಿ ಬಂದರು. ಎಸಾವನ ವಂಶದವರು ಬೇಗ ಅರಳಿ ಬಾಡಿದ ಹೂವಿನಂತೆ. ಮಾಳಿಗೆಯ ಮೇಲೆ ಬೆಳೆದ ಹುಲ್ಲಿನಂತೆ. ಲೋಕದ ಮಹಿಮೆ ಎಲ್ಲಾ ಹಾಗೆ ಅದೆ. ಇಸ್ರಾಯೇಲನವರು ಮೊದಲು ಕಷ್ಟ ಶ್ರಮೆ ಪಟ್ಟು, ಸತ್ಯ ಮಹಿಮೆಗೆ ಯೋಗ್ಯರಾಗ ಬೇಕಾಯಿತು. ಆರಂಭ ಸಂಣದು, ಅಂತ್ಯ ದೊಡ್ಡದು ಎಂಬೀ ಕ್ರಮ ದೇವರ ರಾಜ್ಯದಲ್ಲಿ ನಡೆಯುವದು. ೩೪ ವ.— ಬದಲಾಗಿ ಥೆಮಾನ್ಯರ ದೇಶದವನಾದ ಹುಷಾಮನು ಆಳಿದನು. ೩೯ ವ.— ಮೆಹೆತಬೇಲಳು, ಈಕೆ ಮಾತ್ರೆದನ ಮಗಳು, ಮೇಸಹಬನ ಮೊಮ್ಮಗಳು.) ಈ ಅರಸನ ಮರಣವನ್ನ ಮೋಸೆ ಹೇಳಲಿಲ್ಲಾದ್ದರಿಂದ, ಅವನು ಮೋಸೆಯ ಕಾಲದಲ್ಲಿ ಆಳಿದನೆಂಬದಾಗಿ ಊಹಿಸಲಾಗುವದು.

gg) ಮುಂಚೆ ಹೇಳಿದ ಎದೋಮ ದೇಶದ ಪ್ರಭುಗಳ ಸಂಸ್ಥಾನಗಳು. ೪೦—೪೩.

೪೦ ವ. ಕುಟುಂಬ ಸ್ಥಳ ನಾಮಗಳ ಪ್ರಕಾರವಾಗಿ ಮುಂ.) ಹಿಂದೆ ೧೫—೧೯ ವ. ಆ ಪ್ರಭುಗಳ ವಂಶದ ಹೆಸರನ್ನ ಮಾತ್ರ ಹೇಳಿದನು. ಇಲ್ಲಿ ಅವರ ಸಂಸ್ಥಾನಗಳ ಹೆಸರುಗಳನ್ನು ಹೇಳುತ್ತಾನೆ. ಸಂಸ್ಥಾನ

ದ ಹೆಸರು ಪ್ರಭುವಿಗೂ, ಅವನ ಕುಟುಂಬಕ್ಕೂ, ನಾಮಾಂಕಿತವಾಯಿತು. ಹ್ಯಾಗಂದರೆ: ತಿಮ್ನ ಪ್ರಭು ಅಂದಲ್ಲಿ, ತಿಮ್ನ ಎಂಬ ಸಂಸ್ಥಾನದಲ್ಲಿಯ ಪ್ರಭು. ಈ ಸಂಸ್ಥಾನದ ಪ್ರಭುವಿಗೆ ತಿಮ್ನ ಪ್ರಭು ಎಂದು, ಅವನ ಕುಟುಂಬ ಗೋತ್ರಗಳಿಗೆ ತಿಮ್ನಗೋತ್ರ ಎಂದು ಸಹಾ ಅನ್ನುತ್ತಿದ್ದರು. ೪೩ ವ.—ಇವರೇ. ಎದೋಮಿಯರ ತಂದೆಯಾದ ಏಸಾವನು ಇವನೇ.) ಇಲ್ಲಿ ೧೧ ಸಂಸ್ಥಾನಗಳು ಮಾತ್ರ ಹೇಳಿ ಅವೆ. ಆದರೆ ೧೫—೧೯ ಮುಂ. ೧೪ ಪ್ರಭುಗಳನ್ನ ಹೇಳಿರುತ್ತಾನೆ. ಅದು ಯಾಕಂದರೆ ಕೆಲವು ಮಂದಿ ಪ್ರಭುಗಳಿಗೆ ಒಂದೇ ಸಂಸ್ಥಾನವಾಗಿದ್ದೀತು.

C) ಯಾಕೋಬನೂ ಅವನ ಕುಮಾರರೂ ಇವರ ಚರಿತ್ರೆಯು.

ಉತ್ಪತ್ತಿ. ೩೭—೫೦ ಸಂಧಿ.

ಲೋಕಸೃಷ್ಟಿಯ ಇತ್ತಣ ವರ್ಷ ೨೨೭೬—೨೩೬೯.

ಕ್ರಿಸ್ತನ ಅತ್ತಣ ವರ್ಷ ೧೭೨೪—೧೬೩೧.

ಯೋಸೇಫನು ೧೭ ವರ್ಷದವನು, ಯಾಕೋಬನು ೧೦೮ ವರ್ಷದವನು ಆಗಿದ್ದ ಕಾಲ ಹಿಡಿದು (೧ ಮೋಸೆ. ೩೫, ೨.) ಯೋಸೇಫನ ಮರಣದ ಪರ್ಯಂತರ ಲೆಖ್ಖ ಮಾಡಿದ್ದೇವೆ. ಯಾಕೋಬನ ಮರಣದ ತನಕ ಮಾತ್ರ ಎಣಿಸಿದರೆ, ೫೪ ವರ್ಷ ಕಡಿಮೆ ಆಗುತ್ತವೆ. ಈ ಮೂರು ಮಂದಿ ಮೂಲಪಿತೃಗಳು ಪರಿಶುದ್ಧ ವಂಶಾವಳಿವೃಕ್ಷದಲ್ಲಿ ಬಡ್ಡಿಯೇ; ಇನ್ನು ಮುಂದೆ ಈ ಬಡ್ಡಿಯಿಂದ ೧೨ ಕೊಂಬೆಗಳು ಬೆಳೆದು ವಿಸ್ತಾರವಾಗುತ್ತವೆ. ಈ ಪರಿ ಪರಿಶುದ್ಧ ಜನಾಂಗವೃಕ್ಷ ಸಂಪೂರ್ಣವಾಗುತ್ತದೆ. ಯೋಸೇಫನ ಮುಖಾಂತರ ಇಸ್ರಾಯೇಲಿನವರು ಮಿಜ್ರದಲ್ಲಿ ವಾಸ ಮಾಡಿದ್ದು ಆದ್ದರಿಂದ, ಅವನ ಚರಿತ್ರೆ ವಿಸ್ತಾರವಾಗಿ ಹೇಳಿರುತ್ತದೆ. ಅವನು ಯೇಸು ಕ್ರಿಸ್ತನಿಗೆ ಮುಂಗುರುತು. ಅವನು ಶ್ರಮೆ ಕಷ್ಟದ ಮಾರ್ಗದಲ್ಲಿ ನಡೆದು, ಮಹಿಮೆ ಹೊಂದಿದವನಾಗಿ, ತನ್ನ ಸಹೋದರರಿಗೆ ರಕ್ಷಕನಾದನು. ಅವನ ಆತ್ಮನೇತ್ರ ಪರದ ಕಡೆಗೆ ತೆರದಿತ್ತು.—ಯೂದನು ಯಾಕೋಬನ ಸಹೋದರರಲ್ಲಿ ಮುಖ್ಯಸ್ತನಾದಾಗ್ಯೂ, ಮೋಸೆಯು ಕುಂದು ಮುಚ್ಚಿ ಅವನನ್ನು ಏರಿಸುವದಿಲ್ಲ. ಆದ್ದರಿಂದ ಗ್ರಂಥಕರ್ತನು ಯಥಾರ್ಥವಾಗಿ ಸತ್ಯದಿಂದ ಈ ಗ್ರಂಥ ರಚಿಸಿದನೆಂದು ತಿಳಿಯ ಬರುತ್ತದೆ. ಅಬ್ರಹಾಮನಲ್ಲಿ ವಿಶ್ವಾಸ, ಇಸಾಕನಲ್ಲಿ ಪ್ರೀತಿ, ಯಾಕೋಬನಲ್ಲಿ ಹಾರೈಕೆ, ವಿಶೇಷವಾಗಿ ಒಪ್ಪುತ್ತವೆ.

a) ಅವನ ಸಹೋದರರು ಯೋಸೇಫನನ್ನು ಮಾರಿದ್ದು. ಸಂಧಿ ೩೭.

aa) ಯೋಸೇಫನು ತನ್ನ ಸಹೋದರರಿಂದ ಹಗೆ ಪಟ್ಟದ್ದು. ೩೭, ೧—೧೧.

೨ ವ. ವಂಶಚರಿತ್ರೆ = ವಂಶಾವಳಿ, ಯಾಕಂದರೆ ಅಂದು ವಂಶಾವಳಿ ಪಟ್ಟಿಗಳಲ್ಲಿ ವಿಶೇಷವಾಗಿ ಚರಿತ್ರೆ ಸೂಚನೆ ಅಡಗಿತ್ತು. ಯಾಕೋಬನ ಚರಿತ್ರೆ ಹಿಂದೆ ಬಂದಿತ್ತು. ಆದರೂ ಈಗ ಇಸಾಕನು ಸತ್ತ ಮೇಲೆ, ಯಾಕೋಬನು ತನ್ನ ತಂದೆಯ ಸ್ಥಳಕ್ಕೆ ಬಂದು ಮೂಲಪಿತೃವಾದನು. ಈ ವರೆಗೆ ಅವನ ವೃತ್ತಾಂತ ಇಸಾಕನ ಚರಿತ್ರೆಯೊಳಗಿದ್ದದ್ದು. ಅದೇ ಪ್ರಕಾರ ಮುಂದೆ ವಿಸ್ತಾರವಾಗಿ ಹೇಳಿರುವ ಯೋಸೇಫನ ಚರಿತ್ರೆ ಯಾಕೋಬನ ಚರಿತ್ರೆಯೊಳಗೆ ಇರುವಂಥಾದು. ಯೋಸೇಫನು ೧೭ ವರ್ಷದವನಾಗಿರುವಾಗ್ಯೂ, ಇಸಾಕನು ಇನ್ನು ಇದ್ದನು. ೩ ವ. ಚಿತ್ರವರ್ಣದ ಅಂಗಿಯನ್ನ) ಅಥವಾ ತೋಳು ಇದ್ದ ನಿಲುವಂಗಿಯನ್ನ. ಬಡವರು ಬೋಳು ಅಂಗಿ ಅಥವಾ ಗಿಡ್ಡಂಗಿ ತೊಟ್ಟು ಕೊಳ್ಳುತ್ತಿದ್ದರು. ಅದಕ್ಕೆ ತಂದೆಯು ಯೋ

ಉತ್ಪತ್ತಿ. ೩೭, ೧೨—೩೦.

ಸೆಫನಿಗೆ ಇಂಥಾ ಅಂಗಿ ಹೊಲಿಸಿ ಕೊಟ್ಟಲ್ಲಿ, ಅವನಿಗೆ ಬಹಳ ಮಾನ ತೋರಿಸಿದ ಹಾಗಾಯಿತು. ೪ ವ.—ಅವನ ಸಂಗಡ ಸರಸವಾಗಿ ಮಾತಾಡಲಾರದೆ ಇದ್ದರು. ೭ ವ.—ನಿಮ್ಮ ಸೂಡುಗಳು ಸುತ್ತಲು ನಿಂತು ನನ್ನ ಸೂಡಿಗೆ ಬಾಗಿದವು. ೮ ವ.—ನಮ್ಮ ಮೇಲೆ ಅರಸೆ ಆಗುವಿಯೊ? ಇಲ್ಲವೇ ನಮ್ಮನ್ನ ಆಳುವಿಯೊ? ಎಂದು ಹೇಳಿ ಮುಂ. ೯ ವ.—ಸಹೋದರರಿಗೆ ವಿವರಿಸಿ ಹೇಳಿದ್ದೇನಂದರೆ:—ನಕ್ಷತ್ರಗಳು ನನಗೆ ಬಾಗಿದವು. ೧೦ ವ. ನಿನಗೆ ನೆಲ ಮುಟ್ಟಿ ಬಾಗುವದಕ್ಕೆ ಬರ ಬೇಕೇ? ಅಂದನು. ೧೧ ವ.—ಸಹೋದರರು ಅವನಿಗೆ ಹೊಟ್ಟೆಕಿಚ್ಚು ಪಟ್ಟರು.—) ಈ ಎರಡು ಕನಸುಗಳು ಯೋಸೆಫನ ಮುಂದಿನ ಸ್ಥಿತಿಗತಿ ತೋರಿಸುವಂಥಾ ಅವನಿಗೆ ಅಭಯ ಕೊಡುವಂಥಾ ದಿವ್ಯ ಕಾಲಜ್ಞಾನವೇ (೨೫, ೨೩). ಅವುಗಳ ಅರ್ಥ ಸಹೋದರರಿಗೂ ತಂದೆಗೂ ಸಂಗಡಲೇ ಹೊಳೆಯಿತು. ನಮ್ಮ ತಮ್ಮ ಯೋಸೆಫನು ನಮ್ಮ ತಂದೆಯ ಮುದ್ದುಮಗನೆಂದೂ, ನಮ್ಮ ಮೇಲೆ ಅಧಿಪತಿ ಆದಾನೇನೋ ಎಂದೂ, ಸಹೋದರರು ಹೊಟ್ಟೆಕಿಚ್ಚು ಪಟ್ಟು, ಹಗೆ ಮಾಡುವವರಾದರು. ಹೊಟ್ಟೆಕಿಚ್ಚು ತಾಯಿ, ಹಗೆ ಅದರ ಮಗಳು. ಯೋಸೆಫನು ಹೆಚ್ಚು ಕಡಿಮೆ ಬಗೆಯದೆ, ಯಥಾರ್ಥವಾದ ಬುದ್ಧಿಯಿಂದ ಈ ಕನಸುಗಳನ್ನ ಹೇಳಿದನು. ಯೋಸೆಫನ ತಾಯಿ ರಾಹೆಲಳು ಆಗಲೇ ತೀರಿ ಕೊಂಡಿದ್ದಳು. ಕನಸಿನಲ್ಲಿ ಈ ಸತ್ತಾಕೆ ಕಂಡಲ್ಲಿ, ಯಾಕೋಬನ ಕುಟುಂಬವೆಲ್ಲ ಯೋಸೆಫನಿಗೆ ನಮಸ್ಕರಿಸುವಂಥಾದು ಆಗುವದೆಂಬರ್ಥ ಸೂಚಿತವಾಯಿತು. ಈ ಕನಸುಗಳಲ್ಲಿ ಒಂದು ದಿವ್ಯ ಪ್ರಕಟಣೆ ಅಡಗಿದ್ದೀತೆಂಬದಾಗಿ ಯಾಕೋಬನ ಮನಸಿನಲ್ಲಿ ಹೊಳೆಯಿತು.

bb) ಯಾಕೋಬನ ಕುಮಾರರು ಯೋಸೆಫನನ್ನು ಮಾರಿ ತಮ್ಮ ವರ್ಮ ತೀರಿಸಿದ್ದು. ೧೨—೩೦.

೧೨—೧೪ ವ. ತಂದೆಯ ಆಜ್ಞೆ. ೧೪ ವ.—ತಗ್ಗಿನಿಂದ ಕಳುಹಿಸಿದನು. ಅವನು ಶಿಖೇಮಿಗೆ ಹೋಗುವವನಾದನು.) ಶಿಖೇಮಿನಲ್ಲಿ ಏನಾದರೂ ಒಂದು ಕೆಡಕು ಆದೀತೆಂಬಂತೆ ಬಹಳ ಭಯವಿತ್ತು (೩೪ ಸಂಧಿ ನೋಡು.) ಅಬ್ರಹಾಮನು ಇಸಾಕನು ಇವರಂತೆ ಯಾಕೋಬನು ತನ್ನ ಪ್ರಿಯ ಮಗನನ್ನ ಒಪ್ಪಿಸಿ ಬಿಡ ಬೇಕಾಗಿತ್ತು.

೧೫—೧೭ ವ. ಯೋಸೆಫನ ವಿಧೇಯತ್ವ. ೧೭ ವ.— ದೋಥಾನ ಹೆಬ್ರೋನಿಗೆ ಉತ್ತರದಲ್ಲಿ ಸುಮಾರು ೨೮ ಹರುದಾರಿ ದೂರವಿತ್ತು. ೧೮—೨೦ ವ. ಸಹೋದರರ ದುರ್ಯೋಚನೆ. ೧೮ ವ.—ಅವನು ತಮ್ಮ ಸಮೀಪಕ್ಕೆ ಮುಂ.) ಇದು ಎಂಥಾ ಕೆಟ್ಟ ಆಲೋಚನೆ! ನೋಡಿರಿ! ಮನಸಿನಲ್ಲಿ ಹುಟ್ಟಿದ ಹೊಟ್ಟೆಕಿಚ್ಚನ್ನು ಮೊದಲು, ಅದು ಇನ್ನು ಕಿಡಿಯಾಗಿ ಇರುವಾಗ್ಯೆ, ಆರಿಸದೆ ಇದ್ದರೆ, ಎಂಥಾ ನರಕದ ಬೆಂಕೆ ಅದರಿಂದ ಹುಟ್ಟುವದು! ಈ ಬೆಂಕೆಯ ಮೇಲೆ ತಮ್ಮ ತಮ್ಮನ ರಕ್ತ ಹೊಯಿದು ಆರಿಸ ಬೇಕೆಂದು ಯೋಚಿಸುತ್ತಾರೆ. ಹೊಟ್ಟೆಕಿಚ್ಚು ಹಗೆ ಇವು ನರಹತ್ಯದ ಬೀಜ, ಇವರು ದೇವರನ್ನ ಅರಿಯದವರಲ್ಲ. ಆದರೂ ಇಷ್ಟು ಕೆಟ್ಟು ಹೋದವರು. ಯಾಕಂದರೆ ಆ ನರಹತ್ಯದ ಬೀಜಕ್ಕೆ ತಮ್ಮ ಮನಸನ್ನು ತೆರಪು ಮಾಡಿ, ಬೆಳೆಯಗೊಟ್ಟರು. ೨೦ ವ.—ಆ ಗುಂಡಗಳ ಒಂದರಲ್ಲಿ ಮುಂ.

೨೧—೨೪ ವ. ರೂಬೆನನು ಅವನನ್ನು ರಕ್ಷಿಸಿದ್ದು.

೨೧. ೨೨ ವ. ಆದರೆ ರೂಬೆನನು ಅದನ್ನು ಕೇಳಿ, ಅವನನ್ನು ಅವರ ಕೈಯಿಂದ ತಪ್ಪಿಸಿದನು. ಹ್ಯಾಗಂದರೆ: ಅವನ ಪ್ರಾಣ ಸಂಹಾರ ಮಾಡದೆ ಇರುವ, ಅಂದನು. ಮತ್ತು ರೂಬೆನನು ಅವನನ್ನು ಅವರ ಕೈಗೆ ತಪ್ಪಿಸಿ, ತನ್ನ ತಂದೆಗೆ ತಿರಿಗಿ

ಉತ್ಪತ್ತಿ. ೩೭, ೧೨—೩೦.

ತಂದು ಕೊಡುವ ಹಾಗೆ ಅವರಿಗೆ ರಕ್ತ ಚೆಲ್ಲ ಬೇಡಿರಿ; ಕಾಡಿನಲ್ಲಿರುವ ಈ ಗುಂಡದಲ್ಲಿ ಅವನನ್ನು ಹಾಕಿರಿ; ಆದರೆ ಅವನ ಮೇಲೆ ಕೈ ಹಾಕ ಬೇಡಿರಿ, ಅಂದನು.

ರೂಬೆನನ ಮನಸಿನಲ್ಲಿ ಅಂತಃಕರಣ ಹುಟ್ಟಿತು. ೩೫, ೨೨. ಹೇಳಿದ ಪಾಪದ ದೆಶೆಯಿಂದ ಅವನಲ್ಲಿ ಪಶ್ಚಾತ್ತಾಪ ಹುಟ್ಟಿ ಅವನ ಮನಸು ಮೆತ್ತಗಾಗಿದ್ದೀತು.

೨೩. ೨೪ ವ.—ಯೋಸೆಫನಿಂದ ಅಂಗಿಯನ್ನ—ತಕ್ಕೊಂಡು ಗುಂಡದಲ್ಲಿ ಹಾಕಿದರು. ಆ ಗುಂಡವು ನೀರಿಲ್ಲದೆ ಮುಂ.) ಆ ಅಂಗಿ ಅವರಲ್ಲಿ ಮೊದಲು ಹೊಟ್ಟೆಕಿಚ್ಚನ್ನ ಎಬ್ಬಿಸಿತು. ಅಂಥಾ ಗುಂಡಗಳು ಆ ದೇಶದಲ್ಲಿ ಬಹಳ ಇದ್ದವು. ಅವುಗಳ ಬಾಯಿ ಅಸ್ತು, ಬುಡ ಅಡ್ಡಾಗಲ. ಮಳೆಕಾಲದಲ್ಲಿ ಅವುಗಳಲ್ಲಿ ನೀರು ಹರಿದು ಬಂದು ನಿಲ್ಲುವ ಹಾಗೆ, ಅವನ್ನ ಮಾಡುತ್ತಿದ್ದರು. ಯಾಕಂದರೆ ಆ ಶೀಮೆಗಳಲ್ಲಿ ನೀರಿನದು ಬಹಳ ಅರಬು. ಬಹಳವಾಗಿ ಬೇಸಿಗೆ ಕಾಲದಲ್ಲಿ ಅವುಗಳ ನೀರು ಬತ್ತಿ ಹೋಗೆದೆ. ಅದರ ಸಲುವಾಗಿ ಯೋಸೆಫನು ನೀರೊಳಗೆ ಮುಳುಗಿ ಸಾಯುವ ಹಾಗಿದ್ದಿಲ್ಲ. ಆಹಾರವಿಲ್ಲದ್ದಕ್ಕೆ ನಾಶವಾಗುತ್ತಿದ್ದನು.

೨೫—೩೦ ವ. ಸಹೋದರರು ಯೋಸೆಫನನ್ನು ಮಾರಿದ್ದು.

೨೫ ವ.—ಅಗೋ ಇಷ್ಮಯೇಲ್ಯರ ಬೀಡಿಕೆ ಗಿಲ್ಯಾದಿನಿಂದ—ಅವರು ಅವನ್ನ ಮಿಜ್ರಕ್ಕೆ ತಕ್ಕೊಂಡು ಮುಂ.) ಪಾಪವು ಮನುಷ್ಯರನ್ನು ಎಷ್ಟು ಕಠಿಣರನ್ನು ಮಾಡುತ್ತದೆ. ತಾವು ಊಟಕ್ಕೆ ಕೂತು ಸುಖದಿಂದ ಇರ ಬೇಕು. ತಮ್ಮನು ಗುಂಡದಲ್ಲಿ ಬಿದ್ದು ಹಸಿವೆಯಿಂದ ಸಾಯ ಬೇಕು. ಈ ಇಷ್ಮಯೇಲ್ಯರು ೨೮. ೩೬ನೇ ವಚನಗಳಲ್ಲಿ ಮಿದ್ಯಾನರು ಎಂದು ಅನ್ನಿಸಿ ಕೊಳ್ಳುವದು ಯಾಕಂದರೆ, ಅವರಲ್ಲಿ ಮಿದ್ಯಾನನ ವಂಶದವರು ಸಹ ಇದ್ದರು. ಇಲ್ಲವೆ ಈ ಇಷ್ಮಯೇಲ್ಯರು ಅರಬಿ ದೇಶದೊಳಗಿದ್ದ ಸೀನಾಯಿ ಪರ್ವತದ ಹತ್ತರದ ಮಿದ್ಯಾನ ದೇಶದಲ್ಲಿ ವಾಸ ಮಾಡುತ್ತಿದ್ದರು. ಇವರು ಇಸ್ರಾಯೇಲನವರಿಗೆ ಹತ್ತೊಂದಿಕೆಯವರು. ಸಂಬಾರ ಮುಂ.—) ಇವೆಲ್ಲಾ ಕೆಲವು ಗಿಡಗಳಿಂದ ಸೋರಿ ಬರುವ ಸುವಾಸನೆಯುಳ್ಳ ಅಂಟಿನ ಜೀನಸುಗಳು. ಸುಗಂಧವಾಗುವ ಹಾಗೆ, ಅವನ್ನ ಸುಡುತ್ತಿದ್ದರು, ಅಥವಾ ಮೈಗೆ ಹಚ್ಚುತ್ತಿದ್ದರು. ೨೬ ವ. ಅವನ ರಕ್ತವನ್ನು—ಕೊಂದದ್ದನ್ನ ಮರೆ ಮಾಡುವದರಲ್ಲಿ ಮುಂ. ೨೯. ೩೦ ವ. ರೂಬೆನನು ಎಲ್ಲಿಗಾದರೂ ಹೋಗಿದ್ದನು. ವಸ್ತ್ರ ಹರ ಕೊಳ್ಳುವದು ದೊಡ್ಡ ದುಃಖದ ಲಕ್ಷಣ. ಇದೆಲ್ಲಾ ಆಗುವಾಗ್ಯೆ, ಯೋಸೆಫನು ಬಹಳ ಅತ್ತು, ತನ್ನ ಸಹೋದರರನ್ನ, ನನ್ನನ್ನು ಕರುಣಿಸಿರಿ ಅಂತ, ಬಹಳ ಬೇಡಿ ಕೊಂಡಿದ್ದಾನು. ಆದರೆ ಅವರ ಮನಸು ಕರಗಲಿಲ್ಲ. ಆ ಕನಸುಗಳು ಹುಸಿ ಬೀಳುವಂತೆ, ಮಾಡ ಬೇಕೆಂದಿದ್ದರು. ಆದರೆ ಅವರ ದುಷ್ಕೃತ್ಯದಿಂದ ಅವು ಖರೆ ಆಗುವ ಹಾಗೆ, ಅನುಕೂಲವಾಯಿತು.

cc) ಈ ದುಷ್ಕೃತ್ಯದ ಕೆಟ್ಟ ಫಲ. ೩೧—೩೬.

೩೧ ವ.—ತಕ್ಕೊಂಡು ಹೋತನ್ನ ಕೊಯಿದು—ರಕ್ತದಲ್ಲಿ ಅದ್ದಿದರು. ೩೨ ವ.—ಇದು ನಮಗೆ ಶಿಕ್ಕಿತು.) ದುಷ್ಕೃತ್ಯದ ತರುವಾಯ ಸುಳ್ಳು, ಸುಳ್ಳಿನ ತರುವಾಯ ಕಪಟದಿಂದ ತಂದೆಯನ್ನ ಸಂತೈಸುವದು. ೩೪ ವ. ದುಃಖದಲ್ಲಿರುವವರು ಒಂದು ಜೀಲದೋಪಾದಿಯಲ್ಲಿದ್ದ ಅಂಥಾ ಉರುಟು ವಸ್ತ್ರ ಹಾಕಿ ಕೊಳ್ಳುತ್ತಿದ್ದರು. ೩೫ ವ. ಅವನನ್ನು ಸಂತೈಸಲಿಕ್ಕೆ ಅವನ ಕುಮಾರರೆಲ್ಲರೂ ಕುಮಾರ್ತೆಗಳೆಲ್ಲರೂ ಎದ್ದರು. ಆದರೆ ಅವನು ಸಂತೈಸಿ ಕೊಳ್ಳಲೊಲ್ಲದೆ ಮುಂ.) ಕುಮಾರರಲ್ಲಿ ಕುಮಾರ್ತೆಗಳಲ್ಲಿ ಮೊಮ್ಮಕ್ಕಳು ಸೊಸೆಯರು ಬಂದ ಹಾಗಾಯಿತು. ಪಾತಾಳಕ್ಕೆ) ಸತ್ತವರು ಇರುವ ಲೋಕ. ಅದು ನರಕವಲ್ಲ, ಪರಲೋ

೧೪೬. ಯಾಕೋಬನ ಮಕ್ಕಳ ದುಷ್ಕೃತ್ಯದ ಫಲವೂ ಯೆಹೂದನ ಮದಿವೆಯೂ.

ಉತ್ಪತ್ತಿ. ೩೭, ೩೧—೩೬. ೩೮, ೧—೧೧.

ಕವಲ್ಲಿ. ನ್ಯಾಯತೀರ್ಪು ಆಗುವನಕ, ಅಲ್ಲಿ ತಮ್ಮ ಮನಸಿನ ಸ್ಥಿತಿಯ ಪ್ರಕಾರ ಸುಖ ಅಥವಾ ದುಃಖ ಪಡುವವರಾಗಿದ್ದಾರೆ. ಇದು ನಡುವಿನ ಸ್ಥಿತಿ. ಕೆಟ್ಟವರು ತಮ್ಮ ಕೆಟ್ಟತನದಲ್ಲಿ, ಭಕ್ತರು ಭಯಭಕ್ತಿಯಲ್ಲಿ ಅಲ್ಲಿ ಬೆಳಿಯುತ್ತಾರೆ. ಇಲ್ಲಿ ಬಿತ್ತಿ ತಕ್ಕಷ್ಟು ಬೆಳೆಯುವ ಕಾಲ; ಬಿತ್ತಿ ಬೆಳೆದ್ದು ಅಲ್ಲಿ ಮಾಗಿ ಕೊಯ್ಯಲಿಕ್ಕೆ ಸಿದ್ಧವಾಗುವ ಕಾಲ. ಇಲ್ಲಿ ಈ ಜೀವದಲ್ಲಿರುವಾಗ್ಯೆ, ಸಂತೆ ಗದ್ದಲದೊಳಗೆ ಇದ್ದ ಹಾಗಾದ್ದರಿಂದ, ಅನೇಕರು ನಿಧಾನದಿಂದ ತಮ್ಮನ್ನ ವಿಚಾರಿಸಿ ಕೊಳ್ಳಲಿಕ್ಕೆ ಕೂಡಲಿಲ್ಲ. ದೇವರ ವಾಕ್ಯವನ್ನ ಕೇಳಲಿಕ್ಕೆ ಅನುಕೂಲ ಸಾವಕಾಶವಾಗಲಿಲ್ಲ. ಪಾತಾಳವು ಮೌನದ ಸ್ಥಲ. ಅಲ್ಲಿ ಈ ಸಂತೆ ಗದ್ದಲ ಇಲ್ಲವೇ ಇಲ್ಲ. ಎಲ್ಲಾ ಸುಮ್ಮನಾಗೆದೆ. ಈ ಜೀವದಲ್ಲಿ ಮಾಡಿದ್ದನ್ನು ವಿಚಾರಿಸಲಿಕ್ಕೂ, ಹಿತ ಅಹಿತ, ನಿತ್ಯನಾಶ ನಿತ್ಯಜೀವ ನೆಟ್ಟಗೆ ತೂಗಿ ನೋಡಲಿಕ್ಕೂ, ಅಲ್ಲಿ ಬೇಕಾದಷ್ಟು ಸಮಯುವದೆ. ಇಲ್ಲಿ ಬೇಕಾಗಿ, ತಿಳಿದು, ದೇವರನ್ನ ಅಲಕ್ಷ್ಯ ಮಾಡಿದವರು ತಾವು ಗುರಿಯಾದ ನಿತ್ಯ ನಷ್ಟವನ್ನು ಅಲ್ಲಿ ಪೂರ್ಣವಾಗಿ ತಿಳುಕೊಂಡು, ಗೋಳಾಡುವವರಾಗುವರು. ಅರಿಯದಲೇ, ಬೇರೆ ಬೇರೆ ಆತಂಕಗಳಿಂದ ತಡಿಸಿ ಕೊಂಡವರಾಗಿ ದೇವರನ್ನ ಅರಿಯದವರು ತಮ್ಮ ಯಥಾರ್ಥವಾದ ಮನಸಿಗೆ ಅನುಸಾರವಾಗಿ ದೇವರ ಕಡೆಗೆ ನಿರ್ಣಯ ಮಾಡಿ, ಆಗಲೇ ಉರಿ ಹತ್ತಿದ್ದ ಕೊಳ್ಳಿಯಂತೆ ನಿತ್ಯನಾಶನ ಎಂಬ ಬೆಂಕೆಯೊಳಗಿಂದ ರಕ್ಷಿಸಲ್ಪಡುವರು. ಕಡೇ ತೀರ್ಪು ಆಗುವ ಕಾಲದಲ್ಲಿ ನಿತ್ಯ ಜೀವಕ್ಕೆ ಸಿದ್ಧರಾದವರು ಪರಲೋಕದಲ್ಲಿ, ನಿತ್ಯ ನಾಶನಕ್ಕೆ ಹಣ್ಣಾದವರು ನರಕದಲ್ಲಿ ಶೇರುವರು. ಹಳೆ ಒಡಂಬಡಿಕೆಯ ಕಾಲದಲ್ಲಿ ಈ ಪಾತಾಳದ ತರ ಇನ್ನು ನೆಟ್ಟಗೆ ತಿಳಿಯಲಿಲ್ಲ. ದೂರದಿಂದ ನೋಡುವವನಿಗೆ ಬೇರೆ ಬೇರೆ ಆಗಿರುವ ಸ್ಥಲಗಳು ಒಂದಾಗಿ ಕಾಣಿಸುವ ಮೇರೆಗೆ, ಆ ಕಾಲದವರಿಗೆ ನರಕಲೋಕ ಪರಲೋಕ ಇನ್ನು ಬೇರೆ ಬೇರೆ ಆಗಿ ಅಲ್ಲ, ಒಂದಾಗಿ ಕಂಡಿತು.

೩೬ ವ.—ಮಿಜ್ರಕ್ಕೆ ಫರೋನನ ಪ್ರಧಾನಿಯಾದಂಥಾ ಕಾವಲಿಕಾರರ ಅಧಿಪತಿಯಾದಂಥಾ) ಪ್ರಧಾನಿಗಳಲ್ಲಿ ಅಥವಾ ಅರಮನೆಯಲ್ಲಿ ರಾಜ್ಯಭಾರ ಮಾಡುವವರಲ್ಲಿ ಕೆಲವರು, ವಿಶೇಷವಾಗಿ ರಾಣಿವಾಸದ ಮೇಲೆ ಇರುವಂಥವರು, ನಪುಂಸಕರಾಗಿದ್ದರು. ಅದರ ಸಲುವಾಗಿ ಪ್ರಧಾನಿಗಳೆಲ್ಲರಿಗೆ ನಪುಂಸಕರು ಎಂಬ ಹೆಸರಾಯಿತು. ಅರಸನನ್ನು ಅರಮನೆಯನ್ನು ಕಾಯುತ್ತಿದ್ದ ಕಾವಲಿಕಾರರು ಶಿಕ್ಷೆಯೊಳಗೆ ಬಂದಂಥವರನ್ನ ಬಹಳವಾಗಿ ತಲೆ ಕಡಿದು, ಇಲ್ಲವೇ ಗಲ್ಲಿಗೆ ಹಾಕಿ ಸಂಹಾರ ಮಾಡುವವರಾಗಿದ್ದರು. (ಚಂಡಾಲರು.)

b) ಯೆಹೂದನು ಪಾಪ ಮಾಡಿದ್ದು. ಸಂಧಿ ೩೮.

aa) ಯೆಹೂದನು ಮದಿವೆ ಮಾಡಿದ್ದು. ೩೮, ೧—೧೧.

೧ ವ. ಆ ಕಾಲದಲ್ಲಿ) ಒಟ್ಟಿಗೆ ಯೋಸೆಫನ ಚರಿತ್ರೆ ನಡೆದ ಕಾಲದಲ್ಲಿ. ಈ ಸಂಧಿಯಲ್ಲಿ ಹೇಳಿರುವ ಕೆಲವು ಸಂಗತಿಗಳು ಯೋಸೆಫನ ಚರಿತ್ರೆ ಪ್ರಾರಂಭವಾಗುವದಕ್ಕಿಂತ ಮುಂಚೆ, ಕೆಲವು, ಅದು ನಡೆದಾಗ, ಆದವು. ೨ ವ. ಒಬ್ಬ ಕನಾನ್ಯಳನ್ನ ಮದಿವೆ ಮಾಡಿ ಕೊಂಡದ್ದು ದೇವರ ಆಜ್ಞೆಗೆ ವಿರೋಧವಾಗಿತ್ತು. ೮ ವ. ಸಹೋದರನು ಮಕ್ಕಳಿಲ್ಲದೆ ಸತ್ತರೆ ಅವನ ಉಳಿಕಿ ಸಹೋದರರಲ್ಲಿ ಒಬ್ಬನು ಅವನ ಹೆಂಡತಿ ಮದಿವೆ ಮಾಡಿ ಕೊಳ್ಳ ಬೇಕು. ಅವನಿಗೆ ಆಕೆಯಿಂದ ಮಗನು ಹುಟ್ಟಿದರೆ, ಆ ಮಗನು ತನ್ನ ಮಗನಲ್ಲ, ತೀರಿದ ಸಹೋದರನ ಮಗನು. ಅವನ ಬಾಧ್ಯನು. ಕುಟುಂಬ ಗೋತ್ರಗಳು ಆರಿ ಹೋಗದಂತೆ, ಹೀಗೆ ಮಾಡುತ್ತಿದ್ದರು (ದ್ವಿತಿಯ. ೨೫, ೫—೧೦. ರೂಥ. ೧, ೧೧ ಮುಂ.). ೧೧ ವ. ಶೇಲಹನು ಮದಿವೆ ಮಾಡಿ ಕೊಳ್ಳಲಿಕ್ಕೆ ತಕ್ಕಷ್ಟು ದೊಡ್ಡವನಾಗಿದ್ದನು. ಆದರೆ ಯೆಹೂದನು ಭಯದಿಂದ ಒಂದು ನೆವ ಹೇಳುತ್ತಾನೆ. ಯೆಹೂದನು ಕನಾನ್ಯಳನ್ನ ಮದಿವೆ ಮಾಡಿ ಕೊಂಡದ್ದು ಪಾಡಾಗಲಿಲ್ಲ. ದೇವರು ಮಾಡುವ ಅನುಕೂಲ ನೋಡಿ ಮದಿವೆ ಮಾಡಿ ಕೊಂಡರೆ, ದುಃಖವಾದರೂ, ಒಂದು ಆಧಾರವದೆ. ಆತನ ಆಶೀರ್ವಾದ ಅನುಭವಿಸಲಾಗುವದು.

ಉತ್ಪತ್ತಿ. ೩೮, ೧೨—೩೦. ೩೯, ೧—೬.

bb) ಯೆಹೂದನ ಪಾಪ. ೧೨—೩೦.

೧೪ ವ.—ಮುಸುಕು ಹಾಕಿ ಕೊಂಡು ತಿಮ್ನತಿನ ಮುಂ.) ಮೊದಲು ಯೆಹೂದನು ತನ್ನ ಮಗನಾದ ಶೇಲಹನನ್ನು ತಾಮರಳಿಗೆ ಮದಿವೆ ಮಾಡಿ ಕೊಡ ಬೇಕಾಗಿತ್ತು. ಹೀಗೆ ಮಾಡಲಿಲ್ಲ. ಅದರಿಂದ ತನ್ನ ಹೆಂಡತಿ ಸತ್ತ ಬಳಿಕ, ಅವನೇ ಆಕೆಯನ್ನ ಮದಿವೆ ಮಾಡಿ ಕೊಳ್ಳುವ ಹಂಗಿನಲ್ಲಿ ಇದ್ದನು. ಈ ಹಂಗನ್ನು ಸಲ್ಲಿಸಲಿಕ್ಕೆ ಅವನಿಗೆ ಮನಸು ಇರಲಿಲ್ಲ. ೧೭ ವ.—ನಿನಗೆ ಒಂದು ಹೋತುಮರಿಯನ್ನ—ಪರ್ಯಂತರ ಅಡವು ಇಟ್ಟರೆ ಮುಂ. ೧೮ ವ.—ನಾನು ನಿನಗೆ ಇಡ ತಕ್ಕ ಅಡವು ಏನು? ಮುಂ.) ಆ ದೇಶದಲ್ಲಿ ಶ್ರೀಮಂತರೂ ದೊಡ್ಡವರೂ ತಮ್ಮ ಮುದ್ರೆ ಉಂಗರ ಒಂದು ದಾರದಿಂದ ಕೊರಳಿಗೆ ಕಟ್ಟುತ್ತಿದ್ದರು. ೨೦ ವ.—ಕೈಯಿಂದ ಅಡವು—ಹೋತುಮರಿ ಕಳುಹಿಸಿದನು. ಆದರೆ ಆಕೆ ಶಿಗಲಿಲ್ಲ. ೨೪ ವ. ಎರಡನೆಯವರಿಗೆ ಕಠಿಣವಾಗಿ ನ್ಯಾಯ ತೀರಿಸುತ್ತಾನೆ, ತನ್ನ ದೋಷ ತನಗೆ ಅಲ್ಪವಾಗಿ ತೋರುತ್ತದೆ. ಅವನು ಹಾದರದ ಪಾಪದಲ್ಲಿ ಬಿದ್ದಿದ್ದನು. ೨೭—೩೦ ವ. ತಾಮರಳು ಹೆತ್ತದ್ದು. ೨೮ ವ. ಆಕೆ ಹೆರುವಾಗ, ಒಬ್ಬನು—ವರ್ಣದದಾರ ಮುಂ.) ೨೯ ವ. ಪೇರೆಚ = ಹರಕು. ಸೇರಹ = ಮೂಡುವದು. ಪೇರೆಚನ ವಂಶದಲ್ಲಿ ಕ್ರಿಸ್ತನು ಹುಟ್ಟಿದನು. ಯೆಹೂದನು ಕೆಟ್ಟ ಪಾಪಿಷ್ಟನು. ಅವನಿಗೆ ಪೇರೆಚನನ್ನು ಹಡೆದಾಕೆ ಕಸಾನ್ಯಳು. ಆದಾಗ್ಯೂ ಇವರು ಜಗದ್ರಕ್ಷಕನಾದ ಯೇಸು ಕ್ರಿಸ್ತನಿಗೆ ವಂಶಕರ್ತರಾದರು. ಹೀಗಾದಲ್ಲಿ, ನಾವೂ ಅಬ್ರಹಾಮನ ವಂಶದವರಲ್ಲಿ ಪುಣ್ಯದಿಂದಲ್ಲ, ಕೃಪೆ ಮಾತ್ರದಿಂದ ಶೇರುತ್ತೇವೆಂಬದಾಗಿ ಸಿದ್ಧಾಂತವಾಯಿತು. ಗುಣ ಪುಣ್ಯ ನೋಡ ಬೇಕಾದರೆ, ದೇವರು ಎಂದಿಗೂ ಇಂಥಾ ಕೆಟ್ಟ ನರಜಾತಿಯಲ್ಲಿ ಅವತಾರ ಎತ್ತ ಬಾರದಾಗಿತ್ತು. ಎಷ್ಟು ದೊಡ್ಡ ಪಾಪಿಗಳಾದರೂ, ವಿಶ್ವಾಸ ಒಂದಿದ್ದರೆ, ರಕ್ಷಣೆ ಹೊಂದ ಕೂಡುವದೆಂದು ಎಲ್ಲರೂ ಧೈರ್ಯ ಮಾಡಿ ಕೊಳ್ಳಲಿಕ್ಕೆ ಈ ಸಂಧಿಯಲ್ಲಿ ಹೇಳಿರುವ ಸಂಗತಿಯಿಂದ ಬೇಕಾದಷ್ಟು ಆಧಾರ ಸಿಕ್ಕುತ್ತದೆ. ಪರಿಶುದ್ಧ ವಂಶಾವಳಿಯಲ್ಲಿ ಒಂದು ತಲೆಯಾದರೂ ಕಡಿಮೆ ಬೀಳದಂತೆ, ಈ ಪೇರೆಚನು ಜನಿಸಿದ್ದನ್ನು ಹೇಳಲವಶ್ಯವಾಗಿತ್ತು.—ನೀನು ಹರಿದು ಬರುವದೇನು? ಈ ಹರಕು ನಿನ್ನ ಮೇಲೆ ಇರಲಿ! ಎಂದು ಹೇಳಿದಳು.) "ನೀನು ನಿನ್ನ ಸಹೋದರನನ್ನು ಹಿಂದುಳಿಸಿ, ಮುಂದರಿಯುವದೇನು? ನಾನು ಹಿಂದೆ ಹುಟ್ಟುವ ಹಾಗೆ, ನೀನು ಮಾಡಿದಿ ಎಂದು ಮುಂದೆ ನಿನ್ನ ಸಹೋದರನು ನನ್ನ ಮೇಲೆ ದೋಷ ಹೊರಿಸ್ಯಾನು. ನೀನು ಮುಂದರಿದು ಹೀಗೆ ಚೊಚ್ಚಲನಾಗಿ ಹುಟ್ಟಿದ ಈ ದೋಷ ಆವಾಗ ನಿನ್ನ ಮೇಲೆ ಬರಲಿ!" ೩೦ ವ.—ಲಾಖಿದಾರ ಇದ್ದವನ ಸಹೋದರನು ಮುಂ.

c) ಯೋಸೇಫನು ಪೊತಿಫರನ ಮನೆಯಲ್ಲಿ ಇದ್ದದ್ದು. ೩೯, ೧—೧೮.

aa) ಯೋಸೇಫನು ಪೊತಿಫರನ ಮನೆಯಲ್ಲಿ ಪರಿಣಾಮದಿಂದ ಇದ್ದದ್ದು. ೩೯, ೧—೬.

ಇಸ್ರಾಯೇಲನವರು ಮಿಜ್ರಕ್ಕೆ ಬರಲಾಗುವ ಹಾಗೆ (೧೫, ೧೩.) ಯೋಸೇಫನು ದಾರಿ ತೆಗೆಯ ಬೇಕಾಯಿತು. ಆದ ಕಾರಣ ಅವನ ಚರಿತ್ರೆ ಬಹಳ ವಿಸ್ತರಿಸುತ್ತಾನೆ. ಅವನು ಪರದೇಶದಲ್ಲಿಯಾದರೂ ದೇವರನ್ನ ಮರೆಯದೆ, ಆತನಿಗೆ ಭಯಭಕ್ತಿಯಿಂದ ನಡಕೊಳ್ಳುತ್ತಿದ್ದನು. ದೇವರು ಅಂಥವರ ಕೈ ಬಿಡುವದಿಲ್ಲ. ೬ ವ.—ಮತ್ತೇನು ಅರಿಯಲಿಲ್ಲ.) ಅವನು ಯಾವ ವಿಷಯಕ್ಕಾದರೂ ಚಿಂತೆ ಮಾಡುತ್ತಿದ್ದಿಲ್ಲ. ಯೋಸೇಫನು ಎಲ್ಲಾ ನೆಟ್ಟಗೆ ಮಾಡುತ್ತಾನೆಂಬ ಭರವಸವಿತ್ತು. ಆ ಮಿಜ್ರದವರು ಅಂದು ಕುಲಾಚಾರ ನಡಿಸುತ್ತಿದ್ದದರಿಂದ, ಊಟದ್ದು ಮಾತ್ರ ಯೋಸೇಫನು ನೋಡಲಾಗದಿತ್ತು.

೧೪೮ ಯೋಸೇಫನಿಗೆ ಬಂದ ಶೋಧನೆಯೂ ಅವನು ಶೆರೆಯವನಾದದ್ದೂ.

ಉತ್ಪತ್ತಿ. ೩೯, ೭—೨೩.

bb) ಯೋಸೇಫನಿಗೆ ಯಜಮಾನಿಯಿಂದ ಶೋಧನೆ ಆದದ್ದು. ೭—೧೨.

೮ ವ.—ಮನೆಯಲ್ಲಿರುವದನ್ನ ಅರಿಯದೆ ಮುಂ. ೯ ವ. ನಿನ್ನನ್ನಲ್ಲದೆ, ಅವನು ಮತ್ತೇನೂ ನನಗೆ ಒಪ್ಪಿಸದೆ ಬಿಡಲಿಲ್ಲ ಮುಂ.) ತನ್ನ ಮೇಲೆ ಇಷ್ಟು ಭರವಸ ಮಾಡಿದ ತನ್ನ ಯಜಮಾನನಿಗೆ ಕೃತಜ್ಞತೆ ತೋರಿಸ ಬೇಕೆಂಬದೊಂದು, ದೇವರಿಗೆ ಅಂಜಿ ಅಂಥಾ ಅಪರಾಧ ಮಾಡ ಬಾರದೆಂಬದೊಂದು, ಈ ಎರಡು ಆಯುಧಗಳಿಂದ ಆಕೆಯ ಕಡತ ನಿವಾರಿಸುತ್ತಾನೆ. ೧೦ ವ. ಪಾಪಕ್ಕೆ ಅನುಕೂಲವಾಗುವಲ್ಲಿ ನಿಲ್ಲ ಬಾರದು! ೧೨ ವ.—ಕೈಯಲ್ಲಿ ಬಿಟ್ಟು ಕೊಟ್ಟು ಮುಂ.) ಯೋಸೇಫನು ಭಯಭಕ್ತಿ ನಂಬಿಗೆಯುಳ್ಳವನು, ಸತ್ಯವಂತನು ಆಗಿದ್ದ ಮೂಲದಿಂದ ಬೇಗ ಏರಿದನು. ತರುವಾಯ ಅವನು ಸೊಕ್ಕು ತೋರಿಸದೆ, ದೀನನಾಗಿ ನಡೆದದರಿಂದ, ಪಾಪದಲ್ಲಿ ಬೀಳದಂತೆ, ಕರ್ತನು ಅವನನ್ನು ಕಾದನು. ದೀನತ್ವ ಅದು ಉರಿಬಾಣಗಳನ್ನು ತಡೆಯುವ ಡಾಲು. ನೀತಿಯ ದೆಶೆಯಿಂದ ಹಿಂಸೆ ಪಡುವವರು ಭಾಗ್ಯವಂತರು.—ಅವನು ಹೀಗೆ ಓಡಿ ಹೋದಲ್ಲಿ, ಒಂದು ದೊಡ್ಡ ಜಯ ಹೊಂದಿದಂತಾಯಿತು.

cc) ಪೊತಿಫರನ ಹೆಂಡತಿ ಯೋಸೇಫನ ಮೇಲೆ ದೂರು ಹೇಳಿದ್ದು. ೧೩—೧೮.

೧೩ ವ.—ಕೈಯಲ್ಲಿ ಬಿಟ್ಟು ಕೊಟ್ಟು ಹೊರಗೆ ಓಡಿ ಹೋದದ್ದನ್ನು ಅವಳು ಮುಂ.

೧೪ ವ. ಕಾಮದ ಮರಳು ಹೋಗಿ, ಎಷ್ಟು ಬೇಗ ಹಗೆ ಆಗುವದು! ಒಂದೇ ಪಾಪ ಎಷ್ಟು ಪಾಪಗಳತಾಯಿ! ಮೋಹ ಎಂಬ ತಾಯಿಯಿಂದ ಕುಯುಕ್ತಿ ಸುಳ್ಳು ಹಗೆ ಕ್ರೂರತ್ವ ಹುಟ್ಟುವದು.

d) ಯೋಸೇಫನು ಶೆರೆಮನೆಯಲ್ಲಿದ್ದದ್ದು. ೩೯, ೧೯.—೪೦, ೨೩.

aa) ಶೆರೆಯಲ್ಲಿ ಬಿದ್ದದ್ದು. ೩೯, ೧೯—೨೩.

೨೧ ವ. ಪೊತಿಫರನು ಶೆರೆಮನೆಯ ಮೇಲೆ ಮುಖ್ಯ ಅಧಿಪತಿ. ಇಲ್ಲಿ ಹೇಳಿರುವ ಶೆರೆಮನೆಯ ಯಜಮಾನನು ಅವನ ಕೈಕೆಳಗಿನವನು. ಎಲ್ಲರ ಹೃದಯಗಳು ಕರ್ತನ ವಶದಲ್ಲಿ ಅವೆ. ಆತನು ಇವನ ಹೃದಯ ಯೋಸೇಫನ ಕಡೆಗೆ ತಿರಿಗಿಸಿ, ಈ ದೊಡ್ಡ ಕಷ್ಟವು ಅವನಿಗೆ ಹೌರವಾಗುವ ಹಾಗೆ, ಮಾಡಿದನು. ಕರ್ತನು ತನ್ನ ಭಕ್ತರ ಮೇಲೆ ಭಾರ ಹಾಕುತ್ತಾನೆ. ಆದರೆ ಆತನು ಸಹ ವಿಶ್ರಮ ಸಹಾಯ ಆಗುವಂತೆ, ಮಾಡುತ್ತಾನೆ. ಶ್ರಮೆ ತುದಿಗೆ ಮುಟ್ಟಿದಲ್ಲಿ, ದೇವರ ಸಹಾಯ ಸಮೀಪ. ೨೩ ವ. ಯೆಹೋವನು ಅವನ ಸಂಗಡ ಇದ್ದದರಿಂದ, ಶೆರೆಮನೆಯ ಯಜಮಾನನು ಅವನ ಕೈಯಲ್ಲಿದ್ದ ಯಾವದನ್ನಾದರೂ ನೋಡದೆ ಇದ್ದನು. ಮತ್ತು ಅವನು ಮಾಡುವದನ್ನ ಯೆಹೋವನು ಸಫಲ ಮಾಡುತ್ತಿದ್ದನು.) ನಿಜ ಭಕ್ತರು ಆಗದವರು ಆಗಲಿಕ್ಕಿಲ್ಲ. ಲೋಕ ಅವರನ್ನ ತಿರಸ್ಕರಿಸಿದರೂ, ಅವರು ಮತ್ತು ಲೋಕಕ್ಕೆ ಬೇಕಾಗುತ್ತಾರೆ.

bb) ಶೆರೆಯಲ್ಲಿ ಕನಸುಗಳನ್ನು ಹೇಳಿದ್ದು. ಸಂಧಿ ೪೦.

೧—೪ ವ. ಯೋಸೇಫನು ಶೆರೆಯಲ್ಲಿ ಬಿದ್ದ ಇಬ್ಬರು ಪ್ರಧಾನಿಗಳಿಗೆ ಪರಾಮರಿಸುವವನಾದದ್ದು. ಇವುಗಳಾದ ಮೇಲೆ, ಮಿಜ್ರದ ಅರಸನ ಪಾನ ಕೊಡುವವನೂ ರೊಟ್ಟಿಗಾರನೂ ಮಿಜ್ರದ ಅರಸನಾದ ತಮ್ಮ ಧಣಿಗೆ ವಿರೋಧವಾಗಿ ತಪ್ಪು ಮಾಡಿದರು. ಆಗ ಫರೋನನು ಪಾನ ಕೊಡುವವರಲ್ಲಿ ಮುಖ್ಯಸ್ಥನೂ, ರೊಟ್ಟಿಗಾರರಲ್ಲಿ ಮುಖ್ಯಸ್ಥನೂ ಆಗಿರುವ ತನ್ನ ಇಬ್ಬರು ಪ್ರಧಾನಿಗಳ ಮೇಲೆ ಶಿಟ್ಟು ಮಾಡಿ, ಅವರನ್ನ ಶೆರೆಮನೆಯಾದ ರಾಣುವೆಯರ ಅಧಿಪತಿಯ ಮನೆಯಲ್ಲಿ, ಯೋಸೇಫನು ಕಟ್ಟಿಸಿ ಕೊಂಡಿರುವಲ್ಲಿ, ಕಾವಲಲ್ಲಿಟ್ಟ

ನು. ರಾಣುವೆಯವರ ಅಧಿಪತಿ ಯೋಸೇಫನನ್ನು ಅವರ ಹತ್ತಿರ ಇಟ್ಟದರಿಂದ ಅವನು ಅವರನ್ನು ಪರಾಮರಿಸುತ್ತಿದ್ದನು; ಅವರು ಹಲವು ದಿವಸ ಕಾವಲಲ್ಲಿ ಇದ್ದರು. ಯೋಸೇಫನು ಪೋತೀಫರನ ಮನೆಯ ಒಂದು ಭಾಗದಲ್ಲಿ ಶೆರೆಯವನಾಗಿ ಇದ್ದನು. ಶೆರೆಮನೆ ಈ ಪ್ರಧಾನಿಯ ಮನೆಗೆ ಹತ್ತಿದ್ದರಿಂದ, ಎರಡು ಒಂದೇ ಆಗಿದ್ದ ಹಾಗಾಯಿತು. ತನ್ನ ಹೆಂಡತಿ ಯೋಸೇಫನ ಮೇಲೆ ದೂರು ಹೇಳಿದ ವಿಷಯದಲ್ಲಿ ಅವನಿಗೆ ಸಂಶಯ ಹುಟ್ಟಿದ್ದೀತು. ಯೋಸೇಫನ ಕಡೆಗೆ ಮನಸು ಮತ್ತೂ ತಿರುಗುವಂಥಾದಾಯಿತು. ಇದರ ದೆಸೆಯಿಂದ ಯೋಸೇಫನನ್ನು ಈ ಪ್ರಧಾನಿಗಳ ಮೇಲೆ ಇಟ್ಟನು.

೫—೮ ವ. ಅವರು ಕನಸು ಕಂಡದ್ದು.

೫ ವ. ಆಗ ಶೆರೆಮನೆಯಲ್ಲಿ ಕಟ್ಟಿ ಹಾಕಿರುವಂಥಾ, ಮಿಜ್ರದ ಅರಸನ ಪಾನ ಕೊಡುವವನೂ ರೊಟ್ಟಿಗಾರನೂ ಆಗಿದ್ದಂಥಾ ಅವರಿಬ್ಬರು ಒಂದೇ ರಾತ್ರಿಯಲ್ಲಿ ಅವನವನು ತನ್ನ ತನ್ನ ಕನಸಿನ ಅರ್ಥದ ಪ್ರಕಾರ, ಕನಸು ಕಂಡರು.

ನಾವು ಕಂಡ ಕನಸುಗಳಿಗೆ ವಿಶೇಷ ಅರ್ಥವಿರ ಬೇಕೆಂದು ಅವರಿಗೆ ಹೊಳೆಯಿತು.—ದೇವರ ಸಹಾಯದಿಂದ ಅರ್ಥ ಹೇಳಲಾದೀತೆಂದು ಯೋಸೇಫನು ನೆನಿಸುತ್ತಾನೆ.

೯—೧೫ ವ. ಪಾನ ಕೊಡುವವನ ಕನಸಿನ ಅರ್ಥ ಹೇಳಿದ್ದು.

೧೦ ವ. ಅವು ಚಿಗತು ಮುಗಳು ಒಡೆದು ಹೂವು ಅರಳಿದವು. ಅದರ ಗೊಂಚಲಗಳು ಪಕ್ವವಾಗಿ ದ್ರಾಕ್ಷೆ ಹಣ್ಣಾದವು. ೧೨ ವ.—ಆ ಮೂರು ಬಳ್ಳಿಗಳು ಮೂರು ದಿನಗಳು. ೧೫ ವ.—ಇಲ್ಲಿ ಸಹ ಅವರು ನನ್ನನ್ನು ಶೆರೆಯೊಳಗೆ ಹಾಕುವದಕ್ಕೆ ನಾನು ಮುಂ.

೧೬—೧೯ ವ. ರೊಟ್ಟಿಗಾರನ ಕನಸಿನ ಅರ್ಥ ಹೇಳಿದ್ದು.

೧೯ ವ. ನಿನ್ನನ್ನು ಗಲ್ಲುಮರದ ಮೇಲೆ ತೂಗ ಹಾಕುವನು. ಮತ್ತು ಪಕ್ಷಿಗಳು ನಿನ್ನ ಮಾಂಸವನ್ನು ಹರಕೊಂಡು ತಿನ್ನುವವು ಅಂದನು.) ಯೋಸೇಫನು ನ್ಯಾಯಾಧೀಶನಂತೆ ಎಲ್ಲಾ ಬಿಚ್ಚಿ ಹೇಳುತ್ತಾನೆ.

೨೦—೨೩ ವ. ಯೋಸೇಫನು ಅರ್ಥ ಹೇಳಿದ್ದು ಒದಗಿ ಬಂದದ್ದು.

೨೧. ೨೨ ವ. ಯೋಸೇಫನು ಅವರಿಗೆ ಅರ್ಥ ಹೇಳಿದ ಹಾಗೆಯೇ ಪಾನ ಕೊಡುವವರ ಮುಖ್ಯಸ್ಥನನ್ನು ತಿರಿಗಿ ತನಗೆ ಪಾನ ಕೊಡುವವನನ್ನು ಮಾಡಿದ್ದರಿಂದ, ಅವನು ಫರೋನನ ಕೈಯಲ್ಲಿ ಪಾತ್ರೆ ಕೊಡುವವನಾದನು. ಆದರೆ ರೊಟ್ಟಿಗಾರರ ಮುಖ್ಯಸ್ಥನನ್ನು ತೂಗ ಹಾಕಿಸಿದನು.

೨೩ ವ. ಕೃತಜ್ಞತೆ ಈ ಲೋಕದಲ್ಲಿ ಬಹಳ ಅಪರೂಪ. ಹೊಳೆ ದಾಟಿದ ಮೇಲೆ, ಅಂಬಿಗರ ಮಿಂಡ ಎಂಬಂತೆ. ಈ ಮೇರೆಗೆ ಶೆರೆಮನೆಯಿಂದ ಬಿಡುಗಡೆಯಾಗಲಿಕ್ಕೆ ಯೋಸೇಫನಿಗೆ ಮತ್ತೂ ದಾರಿ ಇಲ್ಲದ ಹಾಗಾಯಿತು. ಮನುಷ್ಯರು ತನ್ನನ್ನು ಮರೆತರೂ, ದೇವರು ಮರೆಯಲಿಲ್ಲ. ಶ್ರಮಾಶಾಲೆಯಲ್ಲಿ ಅಭ್ಯಾಸ ಮಾಡುವ ಕಾಲ ಇನ್ನು ಮುಗಿದಿದ್ದಿಲ್ಲ. ಇನ್ನು ವಿಶ್ವಾಸ ದೀನತ್ವವನ್ನು ಕಲಿಯ ಬೇಕಾಯಿತು. ಇವು ಕಲಿಯದಲೆ, ದೊಡ್ಡವರಾದವರು ಬೇಗ ಉಬ್ಬಿ ಕೊಂಡು ಕೆಡುವ ಕಂಟಕ ಆಗುವದು. ಭಕ್ತಿಯುಳ್ಳ ಯೋ

ಸೆಫನು ಈ ಪರಿ ಶಿಲುಬೆಗೆ ಹಾಕಿಸಿ ಕೊಂಡು ಸತ್ತು ಹುಗಿಸಿ ಕೊಂಡು ಪಾತಾಳಕ್ಕೆ ಇಳಿದ ಹಾಗಾಯಿತು. ಈಗ ಕರ್ತನು ಬಂದು ಅವನನ್ನು ರಕ್ಷಿಸಿ ಮಾನವನ್ನು ಘನವನ್ನು ಅವನಿಗೆ ಕೊಟ್ಟು ಅವನನ್ನು ಎಬ್ಬಿಸಿ ದೊಡ್ಡವನನ್ನು ಮಾಡುತ್ತಾನೆ.

e) ಯೋಸೇಫನು ಫರೋನನ ಮುಂದೆ ನಿಂತದ್ದು. ೪೧, ೧—೪೫.

aa) ಫರೋನನು ಕಂಡ ಎರಡು ಕನಸುಗಳು. ೪೧, ೧—೮.

೨ ವ.—ನದಿಯೊಳಗಿಂದ ರೂಪವುಳ್ಳಂಥಾ ಕೊಬ್ಬಿದಂಥಾ ಏಳು ಹಸಗಳು ಏರಿ ಬಂದು—) ನೀಲನದಿ. ಇದರ ನೀರು ಆಕಾಶದಂತೆ ನೀಲವರ್ಣವುಳ್ಳದ್ದು ಆಗಿರುವದರಿಂದ, ಈ ಹೆಸರು ಅದಕ್ಕೆ ಬಂತು. ವರ್ಷ ವರ್ಷಕ್ಕೆ ಹಬಸಿಯರ ದೇಶದ ಸುಡ್ಡಗಳ ಮೇಲಣ ಹಿಮ ಬೇಸಿಗೆ ಕಾಲದಲ್ಲಿ ಕರಗುವಾಗ್ಯೆ, ಆ ನೀರು ನೀಲ ನದಿಯೊಳಗೆ ಕೂಡುವದರಿಂದ, ಅದು ಮಿಜ್ರ ದೇಶದಲ್ಲಿ ಸೂಸಿ ಬಂದು, ಅದರ ಭೂಮಿ ಬಹಳ ಫಲಭರಿತವಾಗುವಂತೆ, ಮಾಡುವದು. ಆ ಹಿಮ ಕರಗುವದು ನಿಂತ ಮೇಲೆ, ನೀಲನದಿ ತಿರಿಗಿ ಬಹಳ ಇಳಿಯುವದು. ಆವು ಮಿಜ್ರ ದೇಶದಲ್ಲಿ ಬೇಸಾಯಕ್ಕೂ ಆಹಾರಕ್ಕೂ ಸಾಧ್ಯವಾಗ್ಯ. ಅದು ಈಸಿಸ್ ಎಂಬ ದೇವಿ ಎಂದೂ ಆರಾಧಿಸುತ್ತಿದ್ದರು. ನೀಲನದಿ ಒಸೀರಿಸ್ (=ವೃಷಭ) ಎಂಬ ದೇವರೆಂದು ಭಾವಿಸಿ ಅದನ್ನ ಪೂಜಿಸುತ್ತಿದ್ದರು.—೩ ವ. ಮತ್ತು ಅಗೋ ಕುರೂಪವುಳ್ಳಂಥಾ ಸೊರಗಿದಂಥಾ ಬೇರೆ ಏಳು ಹಸಗಳು ಮುಂ. ೪ ವ. ಮತ್ತು ಕುರೂಪವುಳ್ಳಂಥಾ ಸೊರಗಿದಂಥಾ ಹಸಗಳು ರೂಪವುಳ್ಳಂಥಾ ಕೊಬ್ಬಿದಂಥಾ ಏಳು ಹಸಗಳನ್ನು ತಿಂದು ಬಿಟ್ಟವು ಮುಂ. ೬ ವ. ಮತ್ತು ಅಗೋ ಅವುಗಳ ಹಿಂದೆ ಬಡವಾದಂಥಾ ಮೂಡಣ ಘಾಳಿಯಿಂದ ಶೀದು ಹೋದಂಥಾ ಏಳು ತೆನೆಗಳು ಹಾದವು.) ದಕ್ಷಿಣ ಪೂರ್ವದಿಂದ ಅರಬಿಯದ ದೊಡ್ಡ ಅರಣ್ಯದ ಮೇಲೆ ಹಾದು ಬರುವ ಘಾಳಿ ಬಹು ಬಿಸಿ ಆಗಿರುವದರಿಂದ, ಮಿಜ್ರದಲ್ಲಿ ಫಲಗಳನ್ನ ಬಾಡಿಸುತ್ತದೆ. ೭ ವ. ಆ ಬಡ ತೆನೆಗಳು ಮುಂ. ೮ ವ. ಬೆಳಿಗ್ಯೆ ಅವನ ಎದೆ ಹಾರುತ್ತಿತ್ತು ಮುಂ. ಮಂತ್ರಗಾರರನ್ನು) ಇವರು ಅಕ್ಷರ ಬಲ್ಲವರು. ಮತ್ತು ಬೇರೆ ಬೇರೆ ಗುಪ್ತ ವಿದ್ಯ ತಂತ್ರ ಪಾರಂಗತರಾದವರು. ಆದರೂ ಅವರ ಚಮತ್ಕಾರ ಜಾಣತನ ಇಲ್ಲಿ ನಡೆಯಲಿಲ್ಲ. ದೇವರು ಈ ಲೋಕದ ಜ್ಞಾನಿಗಳನ್ನು ಹುಚ್ಚರನ್ನು ಮಾಡುತ್ತಾನೆ.

bb) ಯೋಸೇಫನು ಕನಸುಗಳ ಅರ್ಥ ಹೇಳಿದ್ದು. ೯—೩೨.

೯—೧೩ ವ. ಪಾನ ಕೊಡುವವನು ಅರಸನ ಮುಂದೆ ಯೋಸೇಫನ ಸುದ್ದಿ ತೆಗೆಯುತ್ತಾನೆ. ಅರಸನಿಗೆ ತಿರಿಗಿ ಬಿದ್ದಂಥಾ, ಯೋಸೇಫನ ಉಪಕಾರ ಮರೆತಂಥಾ ಪಾಪಗಳನ್ನು ನೆನಪು ಮಾಡಿ ಕೊಳ್ಳುತ್ತಾನೆ.

೧೪—೧೬ ವ. ಫರೋನನು ಯೋಸೇಫನನ್ನು ಕರೆಯ ಕಳುಹಿಸುತ್ತಾನೆ.

೧೪ ವ. ಮಿಜ್ರದವರು, ಸೂತಕ ಇತ್ಯಾದಿ ಮಾತ್ರ ಆದಾಗ, ಗಡ್ಡ ಕೂದಲು ಬಿಡುತ್ತಿದ್ದರು. ಉಳಿದ ಕಾಲದಲ್ಲಿ ಕ್ಷೌರ ಮಾಡಿಸಿ ಕೊಳ್ಳುತ್ತಿದ್ದರು. ಇಸ್ರಾಯೇಲನವರು ಸೂತಕ ಮುಂತಾದ್ದು ಆದಾಗ ಮಾತ್ರ, ಗಡ್ಡ ಕೂದಲು ಬೋಳಿಸಿ ಕೊಳ್ಳುತ್ತಿದ್ದರು. ಉಳಿದ ಕಾಲದಲ್ಲಿ ಬಿಡುತ್ತಿದ್ದರು. ಯೋಸೇಫನು ದೇಶದ ಮರ್ಯಾದೆಗೆ ಅನುಸಾರವಾಗಿ ಮಾಡುತ್ತಾನೆ. ೧೬ ವ.—ದೇವರು ಫರೋನನಿಗೆ ಪರಿಣಾಮದ ಉತ್ತರ ಕೊಡುವನು ಅಂದನು.) ಅರಸರು ಕಂಡ ಕನಸುಗಳಲ್ಲಿ ವಿಶೇಷ ಅರ್ಥವೆಂದು ಆಗಿನ ಮನುಷ್ಯರು ನೆನಿಸುತ್ತಿದ್ದರು. ಯೋಸೇಫನು ಅರ್ಥ ಹೇಳೋಣದರಿಂದ, ಮಿಜ್ರದ ಮಹಾರಾಜನಿಗೆ ಅವನ ಗೊತ್ತಾ

ಯಿತು. ಕೆರೆಮನೆಯೊಳ್ಗಿಂದ ಅವನಿಗೆ ಬಿಡುಗಡೆ ಆಯಿತು. ಅಲ್ಲಿ ಎರಡು ವರ್ಷದ ಮೇಲೆ ಒಂದು ಗುಂಡದಲ್ಲಿ ಇದ್ದನೆಂದು ತೋರುತ್ತದೆ. ನೀರಿನ ಗುಂಡಗಳೊಳ್ಳಿ ಕೆರೆಯವರನ್ನ ಹಾಕುವದು ರೂಢಿ ಆಗಿತ್ತಾದ ಕಾರಣ, ಗುಂಡ ಎಂಬ ಶಬ್ದ ಕೆರೆಮನೆ ಎಂಬರ್ಥದಲ್ಲಿಯೂ ವ್ಯವಹರಿಸುವದು. ಇಸ್ರಾಯೇಲಿನ ಕುಟುಂಬವು ದೇವರ ಚಿತ್ತಕ್ಕೆ ಅನುಸಾರವಾಗಿ ಮಿಜ್ರಕ್ಕೆ ಬಂದು, ಬೆಳೆದು ವಿಸ್ತಾರವಾಗುವ ಹಾಗೆ, ಅನುಕೂಲವಾಯಿತು. ಸ್ವಪ್ನಾರ್ಥ ಹೇಳುವದು ದೇವರ ವರ; ತನ್ನ ಬುದ್ಧಿಯಿಂದ ಆಗುವಂಥಾದು ಅಲ್ಲ ಎಂದು ಯೋಸೇಫನು ತಿಳಕೊಂಡು, ಸತ್ಯ ಪ್ರವಾದಿಯಾಗಿ ಮಾತಾಡುತ್ತಾನೆ. ತನ್ನಿಂದಾಯಿತು ಎಂಬಂತೆ ಸೊಕ್ಕು ತೋರಿಸುವದು ಅಬದ್ಧ ಪ್ರವಾದಿಯ ಲಕ್ಷಣ.— ಸ್ವಪ್ನಾರ್ಥ ಹೇಳುವಂಥಾ, ಭವಿಷ್ಯತ್ಕಾಲದ್ದು ತಿಳಿದು ಹೇಳುವಂಥಾ ವರದ ವಿಚಾರ ಹ್ಯಾಗಂದರೆ: ಮೊದಲು ಪ್ರಕೃತಿ ಸ್ವಭಾವದಲ್ಲಿ ಅಂಥಾ ವರದ ಬೀಜ ಇರ ಬೇಕು. ಆ ಬಳಿಕ ದೇವರ ಪರಿಶುದ್ಧಾತ್ಮನು ಬಂದು ಅದನ್ನ ಎಬ್ಬಿಸಿ ಅರಳಿಸ ಬೇಕು. ಮೊದಲು ಭೂಮಿಯಲ್ಲಿ ಬೀಜ ಇರ ಬೇಕು. ತದನಂತರ ಮಳೆ ಬಿಸಲು ಆದರೆ, ಅದು ಏಳುವದು ಹ್ಯಾಗೊ, ಹಾಗೆ ಇದು.

೧೭—೨೪ ವ. ಫರೋಹನು ಯೋಸೇಫನಿಗೆ ತನ್ನ ಕನಸುಗಳನ್ನು ವಿವರಿಸುತ್ತಾನೆ.

೧೮ ವ. ಮತ್ತು, ಅಗೋ, ನದಿಯೊಳಗಿಂದ ಕೊಬ್ಬಿದಂಥಾ ರೂಪವುಳ್ಳಂಥಾ ಏಳು ಹಸಗಳು ಏರಿ ಬಂದು, ಹುಲ್ಲಿನಲ್ಲಿ ಮೇಯುತ್ತಿದ್ದವು. ೧೯ ವ. ಮತ್ತು, ಅಗೋ, ಬಹಳ ಕುರೂಪವುಳ್ಳಂಥಾ ಸೊರಗಿದಂಥಾ ಬೇರೆ ಏಳು ಬಡ ಹಸಗಳು ಅವುಗಳ ಹಿಂದೆ ಏರಿ ಬಂದವು. ಕುರೂಪದಲ್ಲಿ ಅವುಗಳಿಗೆ ಸಮಸ್ತ ಮಿಜ್ರ ದೇಶದಲ್ಲಿ ನಾನು ಎಣೆ ಗಾಣಲಿಲ್ಲ. ೨೦ ವ. ಆ ಸೊರಗಿದಂಥಾ, ಕುರೂಪವಾದಂಥಾ ಹಸಗಳು ಮೊದಲನೇ ಏಳು ಕೊಬ್ಬಿದ ಹಸಗಳನ್ನು ತಿಂದು ಬಿಟ್ಟವು. ೨೧ ವ. ಇವು ಅವುಗಳ ಹೊಟ್ಟೆಯಲ್ಲಿ ಶೇರಿದ ಮೇಲೆ, ಅವುಗಳ ಹೊಟ್ಟೆಯಲ್ಲಿ ಶೇರಿದವೆಂದು ಕಾಣಲಿಲ್ಲ. ಅವುಗಳು ಆರಂಭದಲ್ಲಿದ್ದ ಹಾಗೆಯೇ ಕುರೂಪವಾಗಿದ್ದವು. ೨೨—೨೪ ವ. ಮತ್ತು ನಾನು ಕನಸಿನಲ್ಲಿ ಕಂಡದ್ದೇನಂದರೆ: ಅಗೋ, ಒಂದೇ ದಂಟಿನಲ್ಲಿ ಒಳ್ಳೇವಾದ ಏಳು ಮಿಟ್ಟೆ ತೆನೆಗಳು ಎದ್ದವು. ಮತ್ತು, ಅಗೋ, ಬತ್ತಿದಂಥಾ ಬಡವಾದಂಥಾ ಮೂಡಣ ಘಾಳಿಯಿಂದ ಬಾಡಿದಂಥಾ ಏಳು ಹೊಡೆಗಳು ಅವುಗಳ ಹಿಂದೆ ಹಾದವು. ಆ ಬಡ ಹೊಡೆಗಳು ಆ ಏಳು ಒಳ್ಳೇ ತೆನೆಗಳನ್ನ ನುಂಗಿದವು. ಅದನ್ನ ಮಂತ್ರಗಾರರಿಗೆ ಹೇಳಿದೆನು. ಆದರೆ ನನಗೆ ತಿಳಿಸಿದವನು ಯಾವನೂ ಇಲ್ಲ.

೨೫—೩೨ ವ. ಯೋಸೇಫನು ಸ್ವಪ್ನಾರ್ಥ ಹೇಳಿದ್ದು.

೨೭ ವ. ಮತ್ತು ಅವುಗಳ ಹಿಂದೆ ಏರಿ ಬಂದ ಸೊರಗಿದಂಥಾ ಕುರೂಪವಾದಂಥಾ ಏಳು ಹಸಗಳೇ ಏಳು ವರ್ಷಗಳು. ಮತ್ತು ಮೂಡಣ ಘಾಳಿಯಿಂದ ಕಂದಿದಂಥಾ ಏಳು ಜೊಳ್ಳ ತೆನೆಗಳೇ ಬರದ ಏಳು ವರುಷಗಳು. ೨೯ ವ. ಇಗೋ, ಐಗುಪ್ತ ದೇಶದಲ್ಲೆಲ್ಲಾ ಮಹಾ ಸುಭಿಕ್ಷೆಯ ಏಳು ವರುಷಗಳು ಬರುತ್ತವೆ. ೩೧ ವ. ಮತ್ತು ಹಿಂದೆ ಬರುವ ಆ ಬರಕ್ಕೋಸ್ಕರ, ಸುಭಿಕ್ಷೆಯು ದೇಶದಲ್ಲಿ ತಿಳಿಯದೆ ಹೋಗುವದು.

ಉತ್ಪತ್ತಿ. ೪೧, ೩೩—೪೫.

ಯಾಕಂದರೆ ಅದು ಬಹು ಭಾರಿ ಆಗಿರುವದು. ೩೨ ವ. ಇದಲ್ಲದೆ ಆ ಕನಸು ಫರೋನನಿಗೆ ಎರಡು ಸಾರಿ ಬಿದ್ದದರಿಂದ ಆ ಕಾರ್ಯವು ದೇವರಿಂದ ಸ್ಥಿರವಾಗೆದೆ; ದೇವರು ಅದನ್ನ ತ್ವರೆಯಾಗಿ ಮಾಡುವನು.

cc) ಯೋಸೆಫನು ಅರಸನಿಗೆ ಆಲೋಚನೆ ಹೇಳಿ ಕೊಡುತ್ತಾನೆ. ೩೩—೩೬.

೩೩—೩೬ವ.—ಮಿಜ್ರ ದೇಶದ ಮೇಲೆ ಇಡ ಬೇಕು. ಅವನು ವಿಚಾರಕರನ್ನ ದೇಶದ ಮೇಲೆ ಇಟ್ಟು—ಐದರಲ್ಲಿ ಒಂದು ತಕ್ಕೊಳ್ಳುವಂತೆ, ಫರೋನನು ಮಾಡ ಬೇಕು. ಅವರು—ಕೂಡಿಸಿ ಪಟ್ಟಣಗಳಲ್ಲಿ ಆಹಾರಕ್ಕಾಗಿ ಫರೋನನ ಕೈಕೆಳಗೆ ಧಾನ್ಯದ ರಾಶಿ ಹಾಕಿ ಇಡ ಬೇಕು. ದೇಶವು ಬರದಿಂದ ಹಾಳಾಗದ ಹಾಗೆ, ಆಹಾರವು ಮಿಜ್ರದಲ್ಲಿ ಬರಲಿಕ್ಕಿರುವ ಬರದ ಏಳು ವರುಷಗಳಿಗೋಸ್ಕರ ದೇಶಕ್ಕೆ ಸಂಗ್ರಹವಾಗಿರುವದು.) ಭಕ್ತರು ತಾವು ಇರುವ ದೇಶ ಗ್ರಾಮಗಳ ಹಿತವನ್ನು, ತಮ್ಮಿಂದ ಸಾಧ್ಯವಾದಷ್ಟು, ಹುಡುಕ ಬೇಕು.

dd) ಯೋಸೆಫನು ಹೆಚ್ಚಿಸಲ್ಪಟ್ಟದ್ದು. ೩೭—೪೫.

೪೦ ವ.—ನಿನ್ನ ಮಾತಿನ ಮೇಲೆ ನನ್ನ ಪ್ರಜೆಯೆಲ್ಲಾ ನಡೆಯ ಬೇಕು.) ಹೀಗೆ ಯೋಸೆಫನು ಮುಖ್ಯ ಪ್ರಧಾನಿ ಆದನು. ಅವನೇ ರಾಜ್ಯದ ಆಡಳಿತೆ ಎಲ್ಲಾ ಅರಿತು ಅರಸನ ಹೆಸರಿನಲ್ಲಿ ಆಳುತ್ತಿದ್ದನು. ೪೨ ವ. ಎಲ್ಲಾ ಅಧಿಕಾರ ಯೋಸೆಫನಿಗೆ ಒಪ್ಪಿಸಿದ್ದಾಯಿತೆಂಬುದಕ್ಕೆ ಗುರುತು ಯಾವದಂದರೆ: ೧) ಉಂಗರ, ೨) ಬಹಳ ಊಚಾದ ನಾರುಮಡಿ, ೩) ಭಂಗಾರದ ಸರ್ಪಣಿ. ಉಂಗರದ ಮೇಲೆ ಅರಸನ ಹೆಸರು ಬರೆದಿತ್ತು. ಅಂಥ ವಸ್ತ್ರಗಳನ್ನ ಶ್ರೀಮಂತರು ಮಾತ್ರ ಹೊದ್ದುಕೊಳ್ಳುತ್ತಿದ್ದರು. ೪೩ ವ. ಸಂಸ್ಥಾನದಲ್ಲಿ ಮೆರವಣಿಗೆ ಮಾಡಿದರು. ೪೪ ವ. ಕೈಯನ್ನಾಗಲಿ ಕಾಲನ್ನಾಗಲಿ ಮಿಸಕ ಬಾರದು. ಎಲ್ಲರು ಅವನಿಗೆ ಆಜ್ಞಾಧೀನರಾಗಿರ ಬೇಕು. ೪೫ ವ.—ಅಸ್ನಾಥಳನ್ನ ಅವನಿಗೆ ಮದಿವೆ ಮಾಡಿ ಕೊಟ್ಟನು.) ಚಪ್ನತ್ಪನೇಹನು = ಲೋಕದ ರಕ್ಷಕನು. ಇದು ಮಿಜ್ರ ಭಾಷೆಯ ಶಬ್ದ. ಅವನು ಕ್ರಿಸ್ತನಿಗೆ ಮುಂಗುರುತು. ಓನು = ಸೂರ್ಯಪುರ. ಈಗಿನ ಕೇರೊ ಎಂಬ ಪಟ್ಟಣಕ್ಕೆ ಅದು ಉತ್ತರ ಪೂರ್ವದಲ್ಲಿ ಎರಡು ಹರುದಾರಿ ದೂರವಿತ್ತು. ಪೊತಿಫರನು ಸೂರ್ಯದೇವನ ಪೂಜಾರಿ. ಈ ಮೇರೆಗೆ ಯೋಸೆಫನಿಗೆ ಮಿಜ್ರದ ಶ್ರೀಮಂತರಲ್ಲಿ ಬೀಗತನವಾಯಿತು. ಯಾಜಕರಿಗೆ ಮಿಜ್ರದಲ್ಲಿ ಬಹಳ ಮಾನವಿತ್ತು. ಅವರ ಕುಲ ಹೆಚ್ಚಿನದಾಗಿತ್ತು.

f) ಯೋಸೆಫನು ಆ ಏಳು ಫಲಭರಿತವಾದ ವರ್ಷಗಳಲ್ಲಿಯೂ ದುರ್ಭಿಕ್ಷದ ಆರಂಭದಲ್ಲಿಯೂ ಮಾಡಿದ್ದು. ೪೧, ೪೬—೫೭.

೪೬ ವ.—ಮಿಜ್ರ ದೇಶವನ್ನೆಲ್ಲಾ ಸಂಚರಿಸಿದನು.) ಹೀಗಿರಲಿಕ್ಕಾಗಿ ಯೋಸೆಫನು ಸುಮಾರು ೧೩ ವರ್ಷ ಪೊತಿಫರನ ಕೈಕೆಳಗೆ ಸೇವಕನಾಗಿಯೂ ಶೆರೆಯವನಾಗಿಯೂ ಇದ್ದನು.

೪೭—೪೯ ವ. ಯೋಸೆಫನು ಧಾನ್ಯ ಕೂಡಿಟ್ಟದ್ದು.

೪೭ ವ. ಆದರೆ ಆ ದೇಶವು ಸುಭಿಕ್ಷೆಯ ಏಳು ವರುಷಗಳಲ್ಲಿ ಪುಷ್ಕಳ ಫಲ ಕೊಟ್ಟಿತು. ೪೮ ವ. ಹೀಗಿರಲಾಗಿ ಅವನು ಐಗುಪ್ತ ದೇಶದಲ್ಲಿದ್ದ ಆ ಏಳು ವರ್ಷಗಳ ದವಸವನ್ನೆಲ್ಲಾ ಕೂಡಿಸಿ, ಅದನ್ನ ಪಟ್ಟಣಗಳಲ್ಲಿ ಹಾಕಿಸಿದನು. ಒಂದೊಂದು ಪಟ್ಟಣದ ಸುತ್ತಲಿರುವ ಭೂಮಿಯ ಧಾನ್ಯವನ್ನು ಅದರದರಲ್ಲಿ ಇಟ್ಟನು.

ಉತ್ಪತ್ತಿ. ೪೨, ೧—೪.

೫೦—೫೨ ವ. ಯೋಸೆಫನಿಗೆ ಇಬ್ಬರು ಪುತ್ರರು ಹುಟ್ಟಿದ್ದು.

೫೦ ವ.—ಇಬ್ಬರು ಕುಮಾರರು ಹುಟ್ಟಿದರು. ೫೧ ವ. ತಂದೆ ಮನೆಯೆಲ್ಲವನ್ನೂ ಮರಿಸಿದ್ಧಾನೆಂದು ಹೇಳಿ ಚೊಚ್ಚಲನಿಗೆ ಮನಾಸ್ಸೆ ಎಂದು ಹೆಸರಿಟ್ಟನು. ೫೨ ವ.—ನನ್ನ ಕಷ್ಟದ ದೇಶದಲ್ಲಿ ಮುಂ.) ಮಿಜ್ರವು ಯೋಸೆಫನಿಗೆ ಇನ್ನಾದರೂ ಕಷ್ಟದ ದೇಶವೇ ಸರಿ. ಅವನು ಕಾನಾನವನ್ನು ಮರೆತಿದ್ದಿಲ್ಲ. ಸಹೋದರರು ತನಗೆ ಮಾಡಿದ ಕೆಡಕನ್ನೂ ತನಗೆ ಆದ ದುಃಖ ಸಂಕಟವನ್ನೂ ಮಾತ್ರ ಮರೆತನು. ಮುಂಚೆ ಸಹೋದರರ ನೆನಪು ತನಗೆ ಬರುವಾಗ, ಅಸಹ್ಯವು, ತಂದೆಯನ್ನೂ ಮಿಕ್ಕಾದ ಪ್ರಿಯರನ್ನೂ ನೆನಸುವಾಗ, ದುಃಖವು ಆಗುತ್ತಿತ್ತು. ಈಗ ಅವರನ್ನು ನೆನಸುವಾಗ, ತನಗೆ ಸಂತೋಷ ಪ್ರೀತಿ ಹುಟ್ಟುತ್ತಿತ್ತು. ಇನ್ನು ತಂದೆಯನ್ನು ಉಳಿಕೆಯವರನ್ನು ಪ್ರೀತಿಯಿಂದ ನೆನಸುತ್ತಿದ್ದನು. ತುತ್ತು ಹೆತ್ತಾಯಿಯ ಮರಿಸೀತು ಎಂಬಂತೆ, ಸುಖ ಮಾನವಾದರೂ, ಬಡವರಾದ ತನ್ನವರನ್ನ ಮರೆಯ ಬಾರದು.—ಮನಾಸ್ಸೆ = ಮರಿಸುವವನು. ಎಫ್ರಾಯೀಮ್ = ಅಭಿವೃದ್ಧಿ.

೫೩—೫೭ ವ. ಬರದ ಆರಂಭದಲ್ಲಿ ಆದದ್ದು.

೫೩. ೫೪ ವ.—ಯೋಸೆಫನು ಹೇಳಿದ ಹಾಗೆ, ಬರದ ಏಳು ವರುಷಗಳು ಬರಲಿಕ್ಕೆ ಆರಂಭವಾಯಿತು.) ಭಯಭಕ್ತಿ ಎಲ್ಲಕ್ಕೂ ಪ್ರಯೋಜನವಾಗೆದೆ. ಒಬ್ಬ ಭಕ್ತನಿಂದ ಬಹಳ ಜನಕ್ಕೆ ಎಷ್ಟು ಉಪಯೋಗವಾಯಿತು!

g) ಯೋಸೆಫನ ಸಹೋದರರು ಮೊದಲನೇ ಸರ್ತಿ ಮಿಜ್ರಕ್ಕೆ ಹೋದದ್ದು. ಸಂಧಿ ೪೨.

aa) ಯಾಕೋಬನ ಹತ್ತು ಮಂದಿ ಕುಮಾರರು ಧಾನ್ಯ ಕೊಂಡು ಕೊಳ್ಳುವದಕ್ಕೆ ಮಿಜ್ರಕ್ಕೆ ಹೋಗುತ್ತಾರೆ. ೪೨, ೧—೪.

೧ ವ. ಯಾಕೋಬನು ಐಗುಪ್ತದಲ್ಲಿ ಧಾನ್ಯ ಉಂಟೆಂದು ನೋಡಿದಾಗ, ತನ್ನ ಕುಮಾರರಿಗೆ, ನೀವು ಒಬ್ಬರ ಮುಖವನ್ನು ಒಬ್ಬರು ನೋಡಿ ಕೊಳ್ಳುವದೇನೆಂದು ಹೇಳಿ, ೨ ವ. ಇಗೋ, ಐಗುಪ್ತದಲ್ಲಿ ಧಾನ್ಯ ಉಂಟೆಂದು ಕೇಳಿದ್ದೇನೆ; ಅಲ್ಲಿಗೆ ಇಳಿದು ಹೋಗಿ, ನಾವು ಸಾಯದೆ ಬದುಕುವ ಹಾಗೆ, ನಮಗೆ ಅಲ್ಲಿಂದ ಧಾನ್ಯವನ್ನು ಕೊಂಡು ಕೊಂಡು ಬರ್ರಿ! ಅಂದನು. ೪ ವ. ಆದರೆ ಯೋಸೆಫನ ಸಹೋದರನಾದ ಬೆನ್ಯಮೀನನನ್ನು, ಅವನಿಗೆ ಕೆಡಕು ಆದೀತೆಂದು ಹೇಳಿ, ಯಾಕೋಬನು ಅವನ ಸಹೋದರರ ಸಂಗಡ ಕಳುಹಿಸಲಿಲ್ಲ.

ಯಾಕೋಬನು ತನ್ನ ಮಗನನ್ನು, ಸಹೋದರರು ತಮ್ಮ ಸಹೋದರನನ್ನು ಸುಮಾರು ೨೦—೨೨ ವರುಷ ನೋಡಿದ್ದಿಲ್ಲ. ಯೋಸೆಫನು ಮಾರಲ್ಪಟ್ಟಾಗ ೧೭, ಫರೋನನ ಮುಂದೆ ನಿಂತಾಗ ೩೦ ವರ್ಷದವನಾಗಿದ್ದನು. ಏಳು ವರುಷ ಸುಭಿಕ್ಷೆ ಇತ್ತು. ಮತ್ತು ದುರ್ಭಿಕ್ಷ ಬರಲಿಕ್ಕೆ ಹತ್ತಿ ೧—೨ ವರುಷವಾಗಿತ್ತು. ಯೋಸೆಫನನ್ನು ಮಾರಿದವರು ಅವನ ಮುಂದೆ ತಮ್ಮನ್ನು ತಗ್ಗಿಸಿ ಕೊಳ್ಳ ಬೇಕಾಯಿತು. ಮುಯ್ಯಿಗೆ ಮುಯ್ಯಿ ತಟ್ಟದಲೇ ಹೋಗದಂತೆ, ದೇವರು ಪಾರುಪತ್ಯ ಮಾಡುತ್ತಾನೆ. ಬೆನ್ಯಮೀನನು ಯೋಸೆಫನಂತೆ ತಂದೆಗೆ ಮುದ್ದುಮಗನಾಗಿದ್ದನು.

ಉತ್ಪತ್ತಿ. ೪೨, ೯—೨೬.

bb) ಯೋಸೇಫನು ಅವರನ್ನು ವಿಚಾರಿಸಿ ಕಾವಲಲ್ಲಿ ಇಟ್ಟದ್ದು. ೯—೧೭.

೯ ವ.—ಜ್ಞಾಪಕ ಮಾಡಿ ಕೊಂಡು, ನೀವು ಪಾಳತಿಗಾರರು, ದೇಶದಲ್ಲಿ ಸಂದು ನೋಡಲಿಕ್ಕೆ ಬಂದಿರಿ ಅಂದನು.) ಯೋಸೇಫನು ೧೭ ವರ್ಷದವನಾಗಿ ಕಾನಾನವನ್ನು ಬಿಟ್ಟಿದ್ದನು. ಸಹೋದರರನ್ನು ತಿರಿಗಿ ಕಂಡಾಗ, ೩೭ ವರುಷದವನಾಗಿದ್ದನು. ಅನ್ನ ವಸ್ತ್ರದಲ್ಲಿ ಮಿಜ್ರದವರನ್ನ ಅನುಸರಿಸುತ್ತಿದ್ದನು. ಒಬ್ಬ ದ್ವಿಭಾಷೆಯ ಮುಖದಿಂದ ಅವರ ಕೂಡ ಮಾತಾಡಿದನು. ಮಿಜ್ರದಲ್ಲಿ ದೊಡ್ಡ ಶ್ರೀಮಂತನಾಗಿದ್ದನು. ಇದರ ದೆಶೆಯಿಂದ ಸಹೋದರರು ಅವನ ಗುರುತು ಹಿಡಿಯಲಾಗಲಿಲ್ಲ. ಆದರೆ ಅವರು ಕಾನಾನದಿಂದ ಬಂದು, ತಮ್ಮ ಜನ್ಮಭಾಷೆ ಆಡಿದರು; ಯೋಸೇಫನು ಅವರನ್ನು ಬಿಟ್ಟು ಹೋದಾಗ, ಅವರು ಆಗಲೆ ದೊಡ್ಡವರಾಗಿದ್ದರು. ಆದ್ದರಿಂದ ಯೋಸೇಫನು ಅವರ ಗುರುತನ್ನು ಬೇಗ ತಿಳಕೊಳ್ಳುವ ಹಾಗಿತ್ತು.—ನೀವು ಸಂಚು ನಡಿಸಿ ದೇಶದಲ್ಲಿ ಬೀಳಲಿಕ್ಕೆ ದಾರಿ ನೋಡುವ ಕಳ್ಳರು ಎಂಬುದು ಕಠಿಣ ಮಾತು ಸರಿ! ಆದರೆ ಅವರೂ ಕಠಿಣರು. ಅವರು ಮನಸು ಕರಿಗಿ ಪಶ್ಚಾತ್ತಾಪ ಪಡುವ ಹಾಗೆ, ಯೋಸೇಫನು ಬಹಳ ಬುದ್ಧಿ ವಿವೇಕದಿಂದ ಅವರನ್ನ ಪರೀಕ್ಷಿಸುತ್ತಾನೆ. ಅವರ ಭಾವ ನೋಡಿದರೆ, ಅವರು ಯೋಸೇಫನಿಗೆ ಸಹೋದರರಲ್ಲ, ಯಾಕೋಬನಿಗೆ ಮಕ್ಕಳಲ್ಲ, ಕಳ್ಳರೇ ಸರಿ. ಯೋಸೇಫನು ಈ ಪರಿ ಅವರ ಮುಖದ ಮುಂದೆ ಕನ್ನಡಿ ಹಿಡಿದು, ಅವರ ವಿಕಾರರೂಪ ತೋರಿಸಿ ಕೊಟ್ಟಂತಾಯಿತು. ೧೨ ವ.—ದೇಶದಲ್ಲಿ ಸಂದು ನೋಡಲಿಕ್ಕೆ ಬಂದಿರಿ ಅಂದನು. ೧೩ ವ. ಅವರು—ನಿನ್ನ ದಾಸರು ಹನ್ನೆರಡು ಮಂದಿ ಅಣ್ಣಾ ತಮ್ಮಂದ್ಯರು, ಕಾನಾನ ದೇಶದಲ್ಲಿ ಒಬ್ಬನೇ ಮನುಷ್ಯನ ಪುತ್ರರು. ಮುಂ. ಒಬ್ಬನು ಇಲ್ಲ) ಯಾಕೆ? ಸತ್ತನೊ? ಕಳದು ಹೋದನೊ? ಅರಿಕೆ ಮಾಡಿ ಪಶ್ಚಾತ್ತಾಪ ಪಟ್ಟು ಪರಿಹಾರವಾಗುವ ವರೆಗೂ, ಪಾಪ ತನ್ನ ದಾಸರನ್ನ ಪೇಚಿನೊಳಗೆ ತರುವದು. ಅದು ಕಳ್ಳತನದ ಗಂಟು. ಅದು ತನ್ನೊಡನೆ ಇರುವನಕ, ತಪ್ಪಿಸಿ ಕೊಂಡು ಮಾತಾಡ ಬೇಕಾಗುತ್ತದೆ. ೧೪ ವ.—ನೀವು ಚಾರರೆಂದು ನಾನು ನಿಮಗೆ ಹೇಳಿದ್ದೇ ಸರಿ! ೧೫ ವ.—ನೀವು ಇಲ್ಲಿಂದ ಹೊರಡ ಬಾರದು! ೧೬ ವ.—ಆದರೆ ನೀವು ಬಂಧನದಲ್ಲಿರ್ರಿ!—ನಿಮ್ಮ ಮಾತುಗಳು ಪರೀಕ್ಷಿಸಲ್ಪಡುವವು.

cc) ಅವರು ಕಾನಾನದ ಕಡೆಗೆ ತಿರಿಗಿ ಹೊರಟದ್ದು. ೧೮—೨೬.

೧೮—೨೦ ವ. ಅವರು ಯೋಸೇಫನ ಮಾತಿಗೆ ಒಪ್ಪಿ ಕೊಳ್ಳುತ್ತಾರೆ.

೧೯ ವ.—ನೀವು ಇದ್ದ ಕಾವಲಿಮನೆಯೊಳಗೆ ಬಂಧನದಲ್ಲಿರಲಿ! ೨೦ ವ.—ಮಾತುಗಳು ನಿಶ್ಚಯವಾಗುವವು.

೨೧—೨೩ ವ. ಮನೋಸಾಕ್ಷಿ ಎಚ್ಚರಿಕೆಯಾದದ್ದು. ಇದು ಪಾಪಪರಿಹಾರ ಹೊಂದಲಿಕ್ಕೆ ಮೊದಲಿನೆ ಸೋಪಾನ. ಮನುಷ್ಯರು ಒಂದು ವೇಳೆ ಇಲ್ಲದ ಅಪರಾಧ ನಮ್ಮ ಮೇಲೆ ಸಾಧಿಸ್ಯಾರು. ಈ ಪಕ್ಷದಲ್ಲಿ ದೇವರು ನಮ್ಮನ್ನು ಎಚ್ಚರಿಸಲಿಕ್ಕೆ ಅವರ ಪ್ರಯತ್ನ ಒಂದು ವೇಳೆ ಸಾಗಗೊಟ್ಟಾನು. ೨೨ ವ. ದೇವರು ಈ ಸೃಷ್ಟಿಯಲ್ಲಿ ಎಲ್ಲಕ್ಕೂ ಯಜಮಾನನು. ಪಾಪ ಮಾಡಿದರೆ, ಆತನದು ಒಂದು ಬದಕು ಕೆಡಿಸಿದ ಹಾಗಾಯಿತು. ದೇವರು ಅದನ್ನು ಕೊಡಿರಿ ಅಂತ ಕೇಳುತ್ತಾನೆ. ಆದರೆ ಕೆಟ್ಟದ್ದನ್ನು ಮನುಷ್ಯರು ನೆಟ್ಟಗೆ ಮಾಡಿ ಕೊಡ ಕೂಡದು. ಅದಕ್ಕೆ ಅವರು ಯಾವ ಕೆಡಕನ್ನ ಮಾಡಿದರೋ, ಅದನ್ನು ತಾವೇ ಅನುಭವಿಸ ಬೇಕು. ಈ ಪರಿ ಮುಯ್ಯಿಗೆ ಮುಯ್ಯಿ ಆಗುವದು. ಒಬ್ಬನು ಅನ್ಯಾಯದಿಂದ ಒಬ್ಬನನ್ನು ಹಾಳು ಮಾಡಿದನು. ಆದ ಮೇಲೆ, ಅವನು ತಾನೇ ಹಾಳಾಗ ಬೇಕು. ದೇವರ ವಿಚಾರಕ್ಕೆ ಅಂಜು! ಪಾಪ ಪರಿಹಾರವಾದರೆ, ವಿಚಾರ ಇಲ್ಲ.

ಉತ್ಪತ್ತಿ. ೪೨, ೨೭—೩೫. ೪೩, ೧—೧೫.

೨೪—೨೬ ವ. ಅವರು ಪ್ರಯಾಣಕ್ಕೆ ಸಿದ್ಧರಾದದ್ದು.

೨೪ ವ. ಸಿಮೆಯೋನನು ಒಂದು ವೇಳೆ ಉಳಿಕೆಯವರಿಗಿಂತ ಕೆಟ್ಟವನಾಗಿದ್ದಾನು. ೨೫ ವ.—ಅವರ ಗೋಣಿಗಳಲ್ಲಿ—ಒಬ್ಬೊಬ್ಬನ ಗೋಣಿಯಲ್ಲಿ ಮುಂ.

dd) ಅವರು ಮನೆಗೆ ಬಂದದ್ದು. ೨೭—೩೫.

೨೭. ೨೮ ವ. ದಾರಿಯಲ್ಲಿ ಆದ ಭಯ. ಯೋಸೆಫನು ತನ್ನವರ ಸಲುವಾಗಿ ಎಷ್ಟು ಪ್ರೀತಿಯಿಂದ ನೋಡಿ ಕೊಂಡನು! ದೇವರ ಕೈ ಇದರಲ್ಲಿ ಉಂಟೆಂದು ತಿಳುಕೊಳ್ಳುತ್ತಾರೆ.—ತನ್ನ ಪಾಪ ತಿಳಿದವನು ದೇವರನ್ನು ಸಹ ತಿಳಿಯುತ್ತಾನೆ. ತನ್ನ ಅಪರಾಧ ಅರಿಯದವನು ತನಗೆ ತಾನೆ ದೇವರಾಗಿದ್ದಾನೆ. ಅದನ್ನ ತಿಳಿದ ಕೂಡ್ಲೆ ತಾನು ಬೇರೆ, ಪರಿಶುದ್ಧ ದೇವರು ಬೇರೆ ಎಂಬ ಗ್ನಾನ ಮನಸಿನಲ್ಲಿ ಉದಯವಾಗುವದು.

೩೦—೩೪ ವ. ತಮ್ಮ ತಂದೆಗೆ ಆದದ್ದನ್ನು ವಿವರಿಸುತ್ತಾರೆ.

೩೦ ವ. ಏನಂದರೆ, ದೇಶದ ಧನಿಯಾಗಿರುವ ಮನುಷ್ಯನು ನಮ್ಮ ಕೂಡಾ ಕಠಿಣವಾಗಿ ಮಾತಾಡಿ ನಮ್ಮನ್ನ ದೇಶವನ್ನು ಪಾಳತಿ ನೋಡುವವರಾಗಿ ಎಣಿಸಿದನು. ೩೨ ವ. ನಾವು ಹನ್ನೆರಡು ಮಂದಿ ಅಣ್ಣ ತಮ್ಮಂದ್ಯರು, ನಮ್ಮ ತಂದೆಯ ಕುಮಾರರು; ಒಬ್ಬನು ಇಲ್ಲ; ಚಿಕ್ಕವನು ಇಂದು ನಮ್ಮ ತಂದೆಯ ಸಂಗಡ ಕಾನಾನ್ ದೇಶದಲ್ಲಿದ್ದಾನೆ, ಅಂದೆವು. ೩೩ ವ. ಆಗ ದೇಶದ ಧಣಿಯಾಗಿರುವ ಆ ಮನುಷ್ಯನು, ನೀವು ಯಥಾರ್ಥರೋ ಏನೋ ಇದರಲ್ಲಿ ತಿಳು ಕೊಳ್ಳುವೆನು. ನಿಮ್ಮ ಸಹೋದರರಲ್ಲಿ ಒಬ್ಬನನ್ನು ನನ್ನ ಬಳಿಯಲ್ಲಿ ಬಿಟ್ಟು, ನಿಮ್ಮ ಮನೆಗೆ ಅವಶ್ಯವಾದದ್ದನ್ನು ತಕ್ಕೊಂಡು ಹೋಗಿರಿ, ಅಂದನು.

೩೬—೩೮ ವ. ಯಾಕೋಬನು ಬೆನ್ಯಮೀನನನ್ನು ಕಳುಹಿಸಲೊಲ್ಲನು.

೩೬ ವ.—ಇದೆಲ್ಲಾ ನನ್ನ ಮೇಲೆ ಬಂತು, ಅಂದನು. ೩೭ ವ.—ನನ್ನ ಇಬ್ಬರು ಪುತ್ರರನ್ನ ಕೊಲ್ಲು ಏ ಅಂತೆ. ೩೮ ವ.—ಅವನಿಗೆ ಕೇಡಕು ಆದರೆ ಮುಂ.

h) ಯೋಸೆಫನ ಸಹೋದರರು ಎರಡನೇ ಸಾರಿ ಮಿಜ್ರಕ್ಕೆ ಹೋದದ್ದು. ಸಂಧಿ ೪೩—೪೫.

aa) ಅವರು ಬೆನ್ಯಮೀನನನ್ನು ಕರಕೊಂಡು ಹೋದದ್ದು. ೪೩, ೧—೧೫.

ಅ) ಬೆನ್ಯಮೀನನನ್ನು ಕಳುಹಿಸುವ ವಿಷಯದಲ್ಲಿ ಮಾತಾದದ್ದು. ೧—೧೦.

೨ ವ.—ತಂದ ಧಾನ್ಯವನ್ನು ತಿಂದು ತೀರಿಸಿದ ಮೇಲೆ ಮುಂ. ೩ ವ.—ಕೂಡದೆಂದು ಸಾಕ್ಷಿಯೇ ಮಾಡಿ ನಮಗೆ ಹೇಳಿದನು. ೪ ವ.—ಕೊಂಡು ಕೊಳ್ಳುವೆವು. ೭ ವ. ಅವರು—ನಿಮ್ಮ ತಂದೆ ಇನ್ನು ಜೀವದಿಂದ ಇದ್ದಾನೋ? ನಿಮಗೆ ಇನ್ನೊಬ್ಬ ತಮ್ಮನಿರುತ್ತಾನೋ? ಎಂಬದಾಗಿ ನಮ್ಮನ್ನು ಕುರಿತು ನಮ್ಮ ವಂಶವನ್ನು ಕುರಿತು ಆ ಮನುಷ್ಯನು ಕೇಳಿ ಕೇಳಿದನು—ನಿಮ್ಮ ತಮ್ಮನನ್ನು ಕರಕೊಂಡು ಬನ್ನಿರಿ ಎಂದು ಅವನು ನಮ್ಮನ್ನು ಕೇಳ್ಯಾನು ಎಂಬದು ನಮಗೆ ತಿಳಿದಿತ್ತೇನು? ಅಂದರು. ೮ ವ.—ನಮ್ಮ ಚಿಕ್ಕವರು ಸಾಯದೆ ಬದುಕುವೆವು. ೯ ವ.—ನೀನು ಅವನನ್ನು ನನ್ನ ಕೈಯಿಂದ ಕೇಳ ಬಹುದು ಮುಂ. ೧೦ ವ.—ಇದ್ದರೆ, ಇಷ್ಟರಲ್ಲಿ ಎರಡು ಸಾರಿ ಮುಂ.

ಯೋಸೇಫನು ತನ್ನ ಸಹೋದರರನ್ನು ಸತ್ಕರಿಸಿದ್ದು.

ಉತ್ಪತ್ತಿ. ೪೩, ೧೬—೩೪.

ಬ) ಯಾಕೋಬನು ಯೂದನ ಮಾತಿಗೆ ಒಡಂಬಟ್ಟು ಬೆನ್ಯಮೀನನನ್ನು ಕಳುಹಿಸುತ್ತಾನೆ. ೧೧—೧೫.

೧೧ ವ.—ದೇಶದ ಉತ್ತಮವಾದ ಪದಾರ್ಥಗಳನ್ನು ನಿಮ್ಮ ಪಾತ್ರಗಳಲ್ಲಿ ತಕ್ಕೊಳ್ಳಿರಿ!) ಉತ್ತಮವಾದ ಆ ಪದಾರ್ಥಗಳಿಂದ ದೇಶಕ್ಕೆ ಕೀರ್ತಿ ಬರುತ್ತಿತ್ತು. ೧) ತೈಲ=ಒಂದು ಸುಗಂಧದ ಅಂಟು. ಅದನ್ನ ಘಾಯಗಳ ಮೇಲೆ ಹಾಕಿ ಮಾಯಿಸುತ್ತಿದ್ದರು. ಅದು ಒಂದು ಗಿಡದಿಂದ ಸೋರುತ್ತಿತ್ತು. ೨) ಜೇನು ಅಂದರೆ ದ್ರಾಕ್ಷೆ ಹಣ್ಣು ಹಿಂಡಿ ಆ ರಸದಿಂದ ಒಂದು ತರದ ಜೇನು ಮಾಡುತ್ತಿದ್ದರು. ೩) ಧೂಮ್ರಸಾರೆ, ಸಂಬಾರ, ಅಥವಾ ಒಂದು ತರದ ಅಂಟು. ಔಷಧಕ್ಕೆ ತಕ್ಕೊಳ್ಳುತ್ತಿದ್ದರು. ೪) ಲೋಟು= ಗುಲಾಬಿ ಗಿಡದಿಂದ ಬರುವ ಒಂದು ತರದ ಸುವಾಸನೆಯುಳ್ಳ ಅಂಟು. ೫) ಬೊಟ್ನಿ=ಅಡಿಕೆಯಂಥಾ ಕಾಯಿಗಳು. ಸರ್ಪ ಕಡೆದರೆ, ಅವು ನಂಜು ಏರಗೊಡದಂಥಾ ಔಷಧ. ೬) ಬಾದಾಮಿ. ಈ ಪದಾರ್ಥಗಳು ಕಾನಾನದಲ್ಲಿ ಪುಷ್ಕಳವಾಗಿ ಶಿಕ್ಕುತ್ತವೆ. ಇವುಗಳ ದೆಶೆಯಿಂದ ಆ ದೇಶ ಹೆಸರ್ಗೊಂಡದೆ. ೧೨ ವ. ಎರಡಷ್ಟು ಹಣ) ಧಾನ್ಯದ ಧಾರಣೆ ಇಷ್ಟರೊಳಗೆ ಏರಿದ್ದೀತು. ಇಲ್ಲವೇ ನೀವು ನಿಮ್ಮ ಗೋಣಿಗಳಲ್ಲಿ ತಕ್ಕೊಂಡು ಬಂದ ಹಣವಲ್ಲದೆ ಮತ್ತು ಧಾನ್ಯ ಕೊಳ್ಳಲಿಕ್ಕೆ ಬೇರೆ ಹಣ ತಕ್ಕೊಳ್ಳಿರಿ! ಅಂದ ಹಾಗಾಯಿತು. ೧೪ ವ. ಮತ್ತು ನಿಮ್ಮ ಬೇರೆ ಸಹೋದರನನ್ನೂ ಬೆನ್ಯಮೀನನನ್ನೂ ಆ ಮನುಷ್ಯನು ಕಳುಹಿಸಿ ಬಿಡುವ ಹಾಗೆ, ಅವನ ದೃಷ್ಟಿಯಲ್ಲಿ ನಿಮ್ಮ ಮೇಲೆ ದಯ ಹುಟ್ಟುವಂತೆ, ಸರ್ವಶಕ್ತನಾದ ದೇವರು ಮಾಡಲಿ! ಮುಂ.) ಮನುಷ್ಯರ ಎಣಿಕೆಯಲ್ಲಿ ಹಿಂದೆ ಕೆರೆ ಮುಂದೆ ಭಾವಿ ಎಂಬಂತೆ ಆಗಿತ್ತು. ಯಾಕೋಬನು ಬೆನ್ಯಮೀನನನ್ನು ಕಳುಹಿಸಿದಲ್ಲಿ, ಅವನ ಆಶೆ ಬಿಟ್ಟು ಬಹಳ ದುಃಖಕ್ಕೆ ಒಳಗಾದನು. ನಿರ್ವಾಹ ಇದ್ದಿಲ್ಲ. ಇಂಥಾ ಇಕ್ಕಟ್ಟಿನ ವೇಳೆಯಲ್ಲಿ ಭಕ್ತರು ಸರ್ವಶಕ್ತನಾದ ದೇವರ ಮೇಲೆ ತಮ್ಮ ಭರವಸವಿಟ್ಟು ಸಮಾಧಾನ ಮಾಡಿ ಕೊಳ್ಳುವರು. ತಾವು ಮಾಡುವದು ಮಾಡ ಬೇಕು, ಉಳಿದದ್ದೆಲ್ಲಾ ದೇವರಿಗೆ ಒಪ್ಪಿಸ ಬೇಕು.

bb) ಯೋಸೇಫನು ಅವರನ್ನು ಸತ್ಕರಿಸಿದ್ದು. ೪೩, ೧೬—೩೪.

೧೬ ವ.—ಮನೆಗೆ ಕರಕೊಂಡು ಬಂದು ಪಶು ಕೊಯಿದು ಮುಂ. ೧೮ ವ.—ಭಯ ಪಟ್ಟು ಅಂದು ಕೊಂಡದ್ದು ಏನಂದರೆ: ಮುಂಚೆ ನಮ್ಮ ಗೋಣಿಗಳಲ್ಲಿ ತಿರಿಗಿ ಬಂದ ಹಣಕ್ಕೋಸ್ಕರ ನಮ್ಮ ಮೇಲೆ ಎಗರಿ, ನಮ್ಮ ಮೇಲೆ ಬಿದ್ದು, ನಮ್ಮನ್ನು ದಾಸರಾಗ ಮಾಡಿ, ನಮ್ಮ ಕತ್ತೆಗಳನ್ನು ಲೋಟಿಸುವ ಹಾಗೆ, ನಮ್ಮನ್ನು ತಂದರು. ೧೯ ವ.—ಅವನ ಸಂಗಡ ಮಾತಾಡಿದರು. ಏನಂದರೆ: ಮುಂ. ೨೦—೨೧ ವ. ಅಯ್ಯಾ, ಬಿನ್ನಹ, ನಿಶ್ಚಯವಾಗಿ ಆಹಾರವನ್ನು ಕೊಂಡು ಕೊಳ್ಳಲಿಕ್ಕೆ ಮೊದಲು ಇಳಿದು ಬಂದೆವು; ಅನಂತರ ನಾವು ಛತ್ರಕ್ಕೆ ಬಂದು ನಮ್ಮ ಗೋಣಿಗಳನ್ನ ಬಿಚ್ಚಿದಾಗ, ಅಗೋ ಒಬ್ಬೊಬ್ಬನ ಹಣವು, ಅದರದರ ತೂಕದ ಪ್ರಕಾರ ನಮ್ಮ ಹಣವು, ಅವನವನ ಗೋಣಿಯಲ್ಲಿ ಇತ್ತು; ಅದನ್ನ ತಿರಿಗಿ ನಮ್ಮ ಕೈಯಲ್ಲಿ ತಕ್ಕೊಂಡು ಬಂದಿದ್ದೇವೆ. ೨೩ ವ.—ನಿಮ್ಮ ದೇವರೂ ನಿಮ್ಮ ತಂದೆಯ ದೇವರೂ ಆಗಿರುವಾತನು ನಿಮ್ಮ ಗೋಣಿಗಳಲ್ಲಿ ನಿಮಗೆ ನಿಕ್ಷೇಪ ಇಟ್ಟಿದ್ದಾನೆ ಮುಂ.) ಅವರನ್ನ ಸಮಾಧಾನ ಪಡಿಸಿ ದೇವರ ಕಡೆಗೆ ತಿರಿಗಿಸಲಿಕ್ಕೆ ಹೇಳ ಬೇಕೆಂತ ಯೋಸೇಫನು ತನ್ನ ಪಾರುಪತ್ಯಗಾರನಿಗೆ ಈ ಮಾತು ಹೇಳಿ ಕೊಟ್ಟಿದ್ದಾನು. ಇದು ನಿಮಗೆ ದುಡಿಯದಲೆ ಬಂದ ಒಂದು ನಿಕ್ಷೇಪ ಅಂತ ತಿಳುಕೊಳ್ಳಿರಿ. ಹಣ ತನಗೆ ಸಂದದ್ದು ಖರೇ. ಆದರೆ ತರುವಾಯ ಅದನ್ನ ತಿರಿಗಿ ಅವರ ಗೋಣಿಗಳಲ್ಲಿ ಇಟ್ಟದ್ದನ್ನು ಹೇಳುವದಿಲ್ಲ. ೨೪ ವ.—ತಮ್ಮ ಕಾಲು ತೊಳಕೊಳ್ಳುವದಕ್ಕೆ ನೀರು ಕೊಟ್ಟನು. ಮತ್ತು ಅವರ ಕತ್ತೆಗಳಿಗೆ ಮೇವು ಕೊಟ್ಟನು. ೨೫ ವ. ಯೋಸೇಫನು ಮಧ್ಯಾಹ್ನಕ್ಕೆ ಬರುವ ಪರ್ಯಂತರ ಕಾಣಿಕೆ ಸಿದ್ಧ ಮಾಡಿ ಕೊಂಡರು. ಯಾಕಂದರೆ ಅಲ್ಲಿ ತಾವು ಊಟ ಮಾಡ ಬೇಕೆಂದು ಕೇಳಿದ್ದರು. ೨೬ ವ.—ಅವನ ಮುಂದೆ ನೆಲಕ್ಕೆ ಬಾಗಿದರು. ೨೮ ವ.—ಬಾಗಿ ವಂದಿ

ಸಿದರು. ೨೯ ವ.—ತನ್ನ ತಾಯಿಯ ಮಗನಾಗಿದ್ದ ತನ್ನ ಮುಂ.) ಬೆನ್ಯಮೀನನಿಗೆ ಆಗ ಸುಮಾರು ೨೨—೨೩ ವರ್ಷ ಆಗಿದ್ದವು. ೩೦ ವ.—ಅವನ ಕರಳುಗಳು ಅವನ ಸಹೋದರನ ವಿಷಯಕ್ಕೆ ಸೂಸಿದವು. ಮುಂ. ೩೧ ವ.—ಹಿಡಕೊಂಡು ಊಟ ನೀಡಿರಿ! ಅಂದನು. ೩೨ ವ.—ಮಿಜ್ರದವರಿಗೆ ಬೇರೆಯಾಗಿ. ನೀಡಿದರು. ಮುಂ.) ಮಿಜ್ರದಲ್ಲಿ ಕುಲಾಚಾರ ನಡೆಯುತ್ತಿತ್ತು. ಮತ್ತು ಆ ದೇಶದವರು ಆಕಳ ಮೊದಲಾದ ಬೇರೆ ಬೇರೆ ಪ್ರಾಣಿಗಳನ್ನ ದೇವರಂತೆ ಆರಾಧಿಸಿದ್ದರಿಂದ, ಅವುಗಳ ಮಾಂಸ ಭೋಜಿಸುತ್ತಿದ್ದಿಲ್ಲ. ಹೀಗಿರಲಿಕ್ಕೆ ಪಶು ಇತ್ಯಾದಿ ಮಾಂಸಭೋಜನ ಮಾಡುವವರು ಅವರ ಎಣಿಕೆಯಲ್ಲಿ ಅಶುದ್ಧರಾಗಿದ್ದರು. ಯೋಸೇಫನು ಸತ್ಯವಾದ ದೇವರನ್ನು ಆರಾಧಿಸುತ್ತಿದ್ದನು. ಕುಲಾಚಾರದ ವಿಷಯದಲ್ಲಿ ಮಾತ್ರ ತಾನು ಒಬ್ಬನೆ ಆದ್ದರಿಂದಲೂ, ತನ್ನ ಹೆಂಡತಿ ಆ ದೇಶದಾಕೆ ಆಗಿದ್ದರಿಂದಲೂ, ಅಷ್ಟರ ಪೂರ್ತಿಗೆ ಮಿಜ್ರದವರನ್ನು ಅನುಸರಿಸುತ್ತಿದ್ದನು. ಆದರೆ ತನ್ನ ತಂದೆಯೂ ಸಹೋದರರೂ ಮಿಜ್ರಕ್ಕೆ ಬಂದ ಬಳಿಕ, ಅವರ ಕೂಡ ಬಳಿಕೆ ಮಾಡುತ್ತಿದ್ದನು. ಸಮಯ ಬಂದ ಹಾಗೆ, ಮಾಡಬೇಕಾಗಿತ್ತು. ನಿರ್ವಾಹವಿದ್ದಿಲ್ಲ. ಹೀಗಿರಲಾಗಿ ವಿಗ್ರಹಾರಾಧನೆ ಕುಲಾಚಾರ ನಡೆಯುವ ದೇಶದಲ್ಲಿದ್ದು, ಇಸ್ರಾಯೇಲನವರಿಗೆ ಅನ್ಯ ಜನರಂತೆ ಆಗುವ ಕಂಟಕ ಬಹಳವಿತ್ತು. ೩೩ ವ.—ಕಿರಿಯತನದ ಪ್ರಕಾರವೂ (ಹೀಗೆ ತಮ್ಮ ವಯಸ್ಸಿಗೆ ಸರಿಯಾಗಿ ಕ್ರಮದಿಂದ) ಅವನ ಮುಂದೆ ಕೂತಿರಲಾಗಿ ಮುಂ. ೩೪ ವ. ಮತ್ತು ಅವನು ತನ್ನ ಕಡೆಯಿಂದ ಎಡೆಗಳನ್ನು ಮಾಡಿಸಿ, ಅವರಿಗೆ ಬಡಿಸ ಕೊಟ್ಟನು. ಅವರೆಲ್ಲರ ಎಡೆಗಿಂತ ಬೆನ್ಯಮೀನನ ಎಡೆ ಐದಷ್ಟು ದೊಡ್ಡದಾಗಿತ್ತು. ಮುಂ.) ತಾನು ಬೇರೆ ಊಟ ಮಾಡುತ್ತಿದ್ದನು; ಸಹೋದರರು ಬೇರೆ ಊಟ ಮಾಡುತ್ತಿದ್ದರು. ತನ್ನದರಿಂದ ತೆಗಿಸಿ ಎಡೆ ಮಾಡಿಸಿ ಅವರಿಗೆ ಬಡಿಸ ಹೇಳಿದನು. ಈ ಪರಿ ಬೆನ್ಯಮೀನನಿಗೆ ಬಹಳ ಮಾನ ತೋರಿಸಿದನು.

cc) ಯೋಸೇಫನು ತನ್ನ ಸಹೋದರರನ್ನ ಪರೀಕ್ಷಿಸಿದ್ದು. ಸಂಧಿ ೪೪.

ಅ) ಅವರ ಮೇಲೆ ಬಂದ ಅಪರಾಧ. ೪೪, ೧—೧೨.

೧. ೨ ವ. ಬೆನ್ಯಮೀನನು ಯೋಸೇಫನ ಸ್ಥಳಕ್ಕೆ ಬಂದು ಯಾಕೋಬನಿಗೆ ಮುದ್ದು ಮಗನಾಗಿದ್ದನು. ತಾವು ಸುಖರೂಪದಿಂದಿದ್ದರಾಯಿತು, ತಂದೆಗೂ ಬೆನ್ಯಮೀನನಿಗೂ ಬೇಕಾದಷ್ಟು ನಷ್ಟ ಚಿಂತೆ ದುಃಖ ಆಗಲೊಲ್ಲವ್ಯಾಕೆ, ಎಂಬುವ ಕ್ರೂರ ಮನಸ್ಸು ಇನ್ನಾದರೂ ಅವರಲ್ಲಿ ಉಂಟೇನು ಎಂಬಂತೆ ಪರೀಕ್ಷೆ ಆಗುವ ಹಾಗೆ, ಯೋಸೇಫನು ಹೀಗೆ ಮಾಡಿದನು. ಅವರು ಬೆನ್ಯಮೀನನನ್ನು ಯೋಸೇಫನಲ್ಲಿ ಬಿಟ್ಟು ಹೋದ ಪಕ್ಷದಲ್ಲಿ, ಇನ್ನು ಅದೇ ಮನಸ್ಸು ಅವರಲ್ಲಿ ಇತ್ತು ಎಂಬುವದು ಸಿದ್ಧಾಂತವಾಗುತ್ತಿತ್ತು. ಆದರೆ ಅವರು ತಂದೆಯ ದುಃಖ ಬೆನ್ಯಮೀನನ ಸಂಕಟ ನೋಡಲಾರದೆ, ಬೇಕಾದರೆ, ನಮ್ಮನ್ನು ಹಿಡಕೊಳ್ಳಿರಿ! ಇವನನ್ನು ಮಾತ್ರ ಬಿಡಿರಿ! ಅಂದಲ್ಲಿ, ಮುಂಚೆ ದುಷ್ಕೃತ್ಯ ಮಾಡಿದಕ್ಕೆ ಪಶ್ಚಾತ್ತಾಪ ಹುಟ್ಟಿ, ಮನಸ್ಸು ಕರಗಿ ತಿರಿಗಿತು ಎಂಬುದು ಮನಕಂಡದ್ದು ಆಯಿತು. ಹೀಗೆ ಪರೀಕ್ಷಿತರಾದರು. ೩ ವ. ಮುಂಜಾನೆ ಬೆಳಗಿದಾಗ ಮುಂ. ೫ ವ.—ಶಕುನ ನೋಡುತ್ತಾನಲ್ಲವೋ?) ಈ ಪಾತ್ರೆ ಯೋಸೇಫನಿಗೆ ಬಹಳ ಪ್ರಿಯವಾದದ್ದು, ಅಮೂಲ್ಯವಾದದ್ದು. "ಒಂದು ಸಾಧಾರಣ ಸಾಮಾನು ಅಲ್ಲ, ಇಂಥಾ ಉತ್ತಮವಾದದ್ದನ್ನೂ ಉಪಯೋಗಕ್ಕೆ ಬೀಳುವಂಥಾದ್ದನ್ನೂ ಯ್ದಿರಿ!" ಯೋಸೇಫನು ತಾನೆ ಶಕುನ ನೋಡುತ್ತಿದ್ದಿಲ್ಲ. ಪಾರುಪತ್ಯಗಾರನು ಅವರ ಅಪರಾಧ ಹೆಚ್ಚಿಸಿ ಅಂಜಿಸಲಿಕ್ಕೆ ಹೀಗೆ ತನ್ನಷ್ಟಕ್ಕೆ ಹೇಳುತ್ತಿದ್ದನಾದೀತು. ಆ ಮಿಜ್ರದವರು ಪಾತ್ರೆಗಳೊಳಗಣ ನೀರಿನಲ್ಲಿ ಆದ ಸೂರ್ಯನ ಪ್ರತಿಬಿಂಬಗಳಿಂದಲೂ, ಹರಳುಗಳು ಮುಂತಾದ್ದು ನೀರು ತುಂಬಿದ ಪಾತ್ರೆಯಲ್ಲಿ ಹಾಕಿ, ಮಂತ್ರೋಚ್ಚಾರಣೆ ಮಾಡಿ, ಆ ನೀರಿನ ಮೇಲೆ ಆಗುವ ಗುಳ್ಳೆಗಳಿಂದಲೂ, ಶಕುನ ನೋಡುತ್ತಿದ್ದರು. ದೇವರ ಭಕ್ತರು ಶಕುನ ನೋಡಬಾರದು. ದೇವರಿಗೆ ದೂರವಾಗಿ ವಿಶ್ವಾಸವಿಲ್ಲದಕ್ಕೆ ಇವನ್ನೆಲ್ಲಾ ನಡಿಸುವರು. ದೇವರು ತನ್ನ ವಾಕ್ಯದಿಂದಲೂ, ಮನಸಿನಲ್ಲಿ ಆಗುವ ತನ್ನ ಆತ್ಮನ ಶಿಕ್ಷೆಯಿಂ

೧೫೮ ಯೋಸೆಫನು ಸಹೋದರರನ್ನು ಪರೀಕ್ಷಿಸಿ ತನ್ನನ್ನು ತಿಳಿಯ ಮಾಡಿದ್ದು.

ಉತ್ಪತ್ತಿ. ೪೪. ೪೫, ೧—೮.

ದಲ್ಲೂ, ಮನುಷ್ಯರಿಗೆ ಬುದ್ಧಿ ಕೊಟ್ಟು, ಶಕ್ಕ ಹಾಗೆ ನಡಿಸುವದಿಲ್ಲವೆಂಬದೊಂದು, ಈ ಲೋಕದಲ್ಲಿ ಮನುಷ್ಯರು ತಾವೇ ಕ್ಲ್ಲಪ್ತ ಮಾಡಿಕೊಂಡ ಗುರುತಗಳಿಂದ ದೇವರ ಚಿತ್ತ ತಿಳಿಯ ಬರುವದೊಂದು, ಈ ದ್ವಿವಿಧವಾದ ಅಜ್ಞಾನದಿಂದ ಶಕುನ ನೋಡುವದು ಉದ್ಭವಿಸಿತು. ಆದರೆ ನೆಲ ಅಗಿದು ನೋಡಿದರೆ, ದೇವರು ತೃಣ ಕಾಷ್ಟ ಮೊದಲಾದ ಎಲ್ಲಾ ಸಣ್ಣಾ ದೊಡ್ಡ ವಸ್ತುಗಳಲ್ಲಿ ಇದ್ಧಾನೆಂಬ ಅಜ್ಞಾನವೇ ಇದರ ಮುಖ್ಯ ಮೂಲವೆಂದು ಕಾಣ ಬರುತ್ತದೆ. ೮ ವ.—ಕಾನಾನ ದೇಶದಿಂದ ನಿನಗೆ ತಿರಿಗಿ ತಂದು ಕೊಟ್ಟೆವು. ಹೀಗಿರಲಿಕ್ಕೆ ನಿನ್ನ ಧಣಿಯ ಮನೆಯೊಳಗಿಂದ ಮುಂ. ೯ ವ.—ಸಾಯಲಿ; ಹಾಗೂ ನಾವು ಸಹ ಮುಂ. ೧೨ ವ.—ಮಟ್ಟಿಗೂ ಶೋಧಿಸುತ್ತ ಬರಲಾಗಿ, ಆ ಪಂಚಪಾತ್ರೆ ಮುಂ.

ಬ) ಅವರು ಪ್ರತಿವಾದಿಸಿದ್ದು. ೧೩—೩೪.

೧೩ ವ.—ಕತ್ತೆಗಳ ಮೇಲೆ ಹೇರಿ ಕೊಂಡು ಪಟ್ಣಕ್ಕೆ ಮುಂ. ೧೪ ವ.—ಅವನ ಮುಂದೆ ಅಡ್ಡ ಬಿದ್ದರು. ೧೫ ವ. ನನ್ನಂಥಾ ಮನುಷ್ಯನು ನೀವು ಮಾಡಿದ್ದನ್ನು ಊಹಿಸೆ ಊಹಿಸುವನೆಂದು ನಿಮಗೆ ತಿಳಿಯಲಿಲ್ಲ. ೨೦ ವ. ತನ್ನ ತಾಯಿ ಹಡೆದವರಲ್ಲಿ ಒಬ್ಬನೇ ಉಳಿದಿದ್ಧಾನೆ. ೨೨ ವ.—ನಮ್ಮ ತಂದೆಯನ್ನು ಅಗಲ ಕೂಡದು; ತಂದೆಯನ್ನು ಅಗಲಿದರೆ ಮುಂ. ೨೬ ವ. ನಾವು—ಇಳಿದು ಹೋಗ ಕೂಡದು. ನಮ್ಮ ಚಿಕ್ಕ ತಮ್ಮನು ನಮ್ಮ ಸಂಗಡ ಇದ್ದರೆ, ಇಳಿದು ಹೋಗುವೆವು. ಯಾಕಂದರೆ ನಮ್ಮ ಚಿಕ್ಕ ತಮ್ಮನು ನಮ್ಮ ಸಂಗಡ ಇಲ್ಲದಿದ್ದರೆ, ಆ ಮನುಷ್ಯನ ಮುಖ ನೋಡಲಾಗದು, ಅಂದೆವು. ೨೮ ವ.—ಅವನು ಶೀಳ್ಳೇ ಶೀಳಲ್ಪಟ್ಟನೆಂದು ನೆನಸುತ್ತೇನೆ; ಅವನನ್ನು ಇಂದಿನ ಮುಂ. ೨೯ ವ. ಅವನಿಗೆ ಕೇಡು ಆದರೆ, ನನ್ನ ನರೆಕೂದಲನ್ನ ದುಖ್ಖದಲ್ಲಿ ಪಾತಾಳಕ್ಕೆ ಇಳಿಯ ಮಾಡುವಿರಿ ಮುಂ. ೩೦. ೩೧ ವ.—ನನ್ನ ತಂದೆಯ ಬಳಿಗೆ ಬರುವಾಗ್ಯೆ, ಆ ಹುಡುಗನು ನಮ್ಮ ಸಂಗಾತ ಇರುವದಿಲ್ಲ, ಈ ಪಕ್ಷದಲ್ಲಿ ಅವನ ಪ್ರಾಣ ಹುಡುಗನ ಪ್ರಾಣಕ್ಕೆ ಹತ್ತಿಕೊಂಡದರಿಂದ, ಆ ಹುಡುಗನು ಇಲ್ಲವೆಂದು ಕಂಡಾಗಲೇ, ಅವನು ಸಾಯುವನು, ಮುಂ. ೩೨ ವ. ಯಾಕಂದರೆ ಅವನನ್ನು ನಿನ್ನ ಬಳಿಗೆ ತಾರದೆ ಹೋದರೆ, ನಾನು ನನ್ನ ತಂದೆಗೆ ಎಂದೆಂದಿಗೂ ಅಪರಾಧಿಯಾಗಿರುವೆನು ಎಂದು ಹೇಳಿ, ನಿನ್ನ ದಾಸನು ಆ ಹುಡುಗನಿಗೋಸ್ಕರ ನನ್ನ ತಂದೆಗೆ ಹೊಣೆಯಾಗಿದ್ಧಾನೆ.) ನಾನು ಬೆನ್ಯಮೀನನ ದೆಶೆಯಿಂದ ಹೊಣೆಯಾಗಿರುವ ಕಾರಣ, ಇಷ್ಟು ಹೇಳಿ ಕೊಳ್ಳುತ್ತೇನೆ. ೩೩ ವ.—ಸಂಗಡ ಹೋಗಲಿ!) ಯೂದನು ಮಾಡಿದ ಈ ಪ್ರತಿವಾದದಲ್ಲಿ ಸತ್ಯವಾದ ಪಶ್ಚಾತ್ತಾಪದ ಲಕ್ಷಣಗಳು ತೋರುತ್ತವೆ. ಅವು ಯಾವವೆಂದರೆ: ೧) ಪಾಪ ಖಂಡಿತವಾಗಿ ಅರಿಕೆ ಮಾಡುವದು (೧೬ ವ.) ೨) ದೇವರ ಶಿಕ್ಷೆಗೆ ಪೂರ್ಣ ಚಿತ್ತದಿಂದ ಒಪ್ಪಿಕೊಂಡು, ಅದನ್ನು ತನ್ನ ಮೇಲೆ ತಕ್ಕೊಳ್ಳುವದು (೩೩.) ೩) ತಾನು ಎರಡನೆಯವರಿಗೆ ಕೇಡು ಮಾಡಿದ್ದನ್ನು, ತನ್ನ ಕೈಲಾದಷ್ಟು, ಗುಣ ಪಡಿಸುವದು. (೩೪ ವ.)

dd) ಯೋಸೆಫನು ತನ್ನ ಸಹೋದರರಿಗೆ ತನ್ನನ್ನು ತಿಳಿಯ ಮಾಡಿದ್ದು. ೪೫, ೧—೮.

೧ ವ.—ತನ್ನ ಸುತ್ತಲು ನಿಂತವರೆಲ್ಲರ ಮುಂದೆ ಮನಸು—ಅವನ ಸಂಗಡ ನಿಂತಿದ್ದಿಲ್ಲ. ೩ ವ.—ಅವನ ಸಹೋದರರು ಅವನ ಮುಂದೆ ತಲ್ಲಣ ಮುಂ. ೭ ವ.—ದೊಡ್ಡ ರಕ್ಷಣೆಯಿಂದ ನಿಮ್ಮನ್ನು ರಕ್ಷಿಸುವದಕ್ಕೂ ದೇವರು ಮುಂ.) ಕೆಟ್ಟ ಮನುಷ್ಯರಿಂದ ನಮಗೆ ಆಗುವ ಕಷ್ಟ ಶ್ರಮೆಗಳಲ್ಲಿ ನಾವು ಸಮಾಧಾನ ಮಾಡಿ ಕೊಳ್ಳುವದು ಹ್ಯಾಗಂದರೆ:

೧) ದೇವರೇ ಅವರನ್ನು ನಮಗೆ ಕೆಡಕು ಮಾಡಗೊಟ್ಟನು. ೨) ಅವರು ಮಾಡಿದ ಕೆಡಕಿನಿಂದ ನಮಗೆ ಹಿತವಾಯಿತು. ಈ ಹಿತ ಯಾವದೆಂದರೆ:

ಅ) ನಾವು ಶ್ರಮಾಶಾಲೆಯಲ್ಲಿ ವಿಶ್ವಾಸಾಭ್ಯಾಸ ಮಾಡಿ, ಪರಲೋಕದ ರೊಟ್ಟಿ ದೊರಕಿಸಿ ಕೊಂಡದ್ದು. ಬ) ಬರದಿಂದ ಕಷ್ಟ ಪಟ್ಟು ಹಸಿವೆಯಿಂದ ಸಾಯುವ ನಮ್ಮ ನೆರೆಯವರಿಗೆ ಆ ರೊಟ್ಟಿಯಲ್ಲಿ ಕೊಟ್ಟು ಸಹಾ

ಯ ಮಾಡ ಶಕ್ತರಾದದ್ದು. ಈ ಮೇರೆಗೆ ಯೋಸೆಫನು ಹಿಂದಕ್ಕೆ ಅಲ್ಲ, ಮುಂದಕ್ಕೆ ಶ್ರಮೆಗಳಿಂದ ಹುಟ್ಟಿ ಬಂದ ಸುಫಲದ ಕಡೆಗೆ ನೋಡಿ, ನಿಧಾನದಿಂದ ಇದ್ದನು. ಅವನಿಂದ ಇಸ್ರಾಯೇಲನವರು ಉಳಿಯ ಬೇಕಾಯಿತು.

ee) ಯೋಸೆಫನು ತನ್ನ ತಂದೆಯ ಕುಟುಂಬವೆಲ್ಲ ಮಿಜ್ರಕ್ಕೆ ಬರ ಬೇಕೆಂದು ಅಪ್ಪಣೆ ಮಾಡಿದ್ದು. ೪೫, ೯—೧೫.

೯ ವ.—ಅವನಿಗೆ ಹೀಗೆ ಹೇಳ ಬೇಕು: ನಿನ್ನ ಮಗನಾದ ಮುಂ. ೧೧ ವ.—ಯಾಕಂದರೆ ಇನ್ನು ಬರದ ಐದು ವರುಷಗಳವೆ; ನೀನೂ—ನಿನಗಿದ್ದದ್ದೆಲ್ಲವೂ ಬಡತನಕ್ಕೆ ಬೀಳ ಬಾರದು.) ಗೋಷೆನ ಎಂಬ ಶೀಮೆಯು ಮಿಜ್ರದ ಉತ್ತರ ಭಾಗದಲ್ಲಿ (ಕೆಳಗಿನ ಮಿಜ್ರದಲ್ಲಿ) ನೀಲನದಿಯ ಪೂರ್ವದಲ್ಲಿ ಇತ್ತು. ಈ ಶೀಮೆಯ ಹತ್ತರ ಆಗ್ಯೆ ಸಂಸ್ಥಾನವಾಗಿದ್ದ ಚೋವನ ಅಥವಾ ತಾನಿಸ ಎಂಬ ಪಟ್ಟಣವಿತ್ತು. ಅಲ್ಲಿ ಯೋಸೆಫನು ವಾಸ ಮಾಡಿದನು. ಆದ ಕಾರಣ ತನ್ನವರಿಗೆ ಸಮೀಪವಾಗಿದ್ದನು. ೧೨ ವ. ಇಗೋ ನಾನು ನನ್ನ ಬಾಯಿಲಿ ನಿಮ್ಮ ಕೂಡ ಮಾತಾಡಿದೆನೆಂದು ನಿಮ್ಮ ಕಣ್ಣುಗಳೂ ಮುಂ. ೧೪ ವ.—ಬೆನ್ಯಮೀನನು ಅವನ ಕೊರಳಿನ ಮೇಲೆ ಬಿದ್ದು ಅತ್ತನು.

ff) ತನ್ನ ತಂದೆಯನ್ನು ತನ್ನ ಕಡೆಗೆ ಕರಕೊಂಡು ಬರ ಬೇಕೆಂದು ಯೋಸೆಫನು ಅಪ್ಪಣೆ ಕೊಟ್ಟದ್ದಕ್ಕೆ ಫರೋನನು ಸಮ್ಮತಿ ಪಟ್ಟದ್ದು. ೪೫, ೧೬—೨೦.

೧೬ ವ.—ಅದು ಫರೋನನಿಗೂ ಅವನ ಸೇವಕರಿಗೂ ಸರಿ ಕಂಡಿತು. ೧೭. ೧೮ ವ.—ಇದನ್ನು ಮಾಡಿರಿ! ನಿಮ್ಮ ಕತ್ತೆಗಳನ್ನು ಹೇರಿ ಕೊಂಡು ಕಾನಾನ ದೇಶಕ್ಕೆ ಹೋಗಿ ನಿಮ್ಮ ತಂದೆಯನ್ನೂ ನಿಮ್ಮ ಕುಟುಂಬಗಳನ್ನೂ ತಕ್ಕೊಂಡು ಮುಂ. ೧೯ ವ. ನಿನಗೆ ಅಪ್ಪಣೆ ಆಯಿತು.) ನಿನ್ನ ಸಹೋದರರು ಈ ಮಾತಿನಂತೆ ನಡೆಯುವ ಹಾಗೆ, ನೀನು ನೋಡ ಬೇಕೆಂದು ನಿನಗೆ ಅಪ್ಪಣೆ ಮಾಡುತ್ತೇನೆ.—ರಥಗಳನ್ನು ತಕ್ಕೊಂಡು ಹೋಗಿ ನಿಮ್ಮ ತಂದೆಯನ್ನ ಮುಂ. ೨೦ ವ. ನೀವು ನಿಮ್ಮ ದೇಶದಲ್ಲಿ ಒಂದುವರೆ ಸಾಮಾನು ಬಿಟ್ಟು ಬರ ಬೇಕಾದೀತು. ಮತ್ತು ದಾರಿಯಲ್ಲಿ ಒಂದುವರೆ ಕೆಟ್ಟಾವು. ಇದನ್ನು ನೀವು ಲಕ್ಷ್ಯಕ್ಕೆ ತಂದು ಚಿಂತೆ ಮಾಡ ಬೇಡಿರಿ! ಯಾಕಂದರೆ ನಾನು ನಿಮ್ಮನ್ನು ಮಿಜ್ರದ ಉತ್ತಮ ಭಾಗದಲ್ಲಿಟ್ಟು ನಿಮ್ಮ ನಷ್ಟಕ್ಕೆ ಈಡಾಗುವಂತೆ, ಮಾಡುವೆನು.

gg) ಯೋಸೆಫನು ತನ್ನ ಸಹೋದರರಿಗೆ ದಾರಿಗೆ ಬೇಕಾದದ್ದನ್ನು ಕಳುಹಿಸಿದ್ದು. ೪೫, ೨೧—೨೪.

೨೧ ವ. ಇಸ್ರಾಯೇಲನ ಕುಮಾರರು ಹಾಗೆ ಮಾಡಿದರು ಮುಂ. ೨೨ ವ. ಅವರೆಲ್ಲರಿಗೆ ಅವನು ಪ್ರತಿ ದುಸ್ತುಗಳನ್ನೂ, ಬೆನ್ಯಮೀನನಿಗೆ ಮುನ್ನೂರು ಹಣಗಳನ್ನೂ ಐದು ಪ್ರತಿ ದುಸ್ತುಗಳನ್ನೂ ಕೊಟ್ಟನು.) ಒಂದು ದುಸ್ತು ತೆಗೆಯ ಬೇಕಾದ ಬಳಿಕ, ಮತ್ತೊಂದು ಹಾಕಿ ಕೊಳ್ಳಲಿಕ್ಕೆ ಆಗುವ ಹಾಗೆ, ಐಶ್ವರ್ಯವಂತರು ಕೆಲವನ್ನು ತಮಗೆ ಇಟ್ಟು ಕೊಳ್ಳುತ್ತಿದ್ದರು. ಒಂದು ದುಸ್ತು ತೆಗೆಯ ಬೇಕಾದರೆ, ಒಂದು ಪ್ರತಿ ಇರ ಬೇಕು. ೨೩ ವ. ಮತ್ತು ಅವನು ತನ್ನ ತಂದೆಗೆ ಕಳುಹಿಸಿದ್ದೇನಂದರೆ: ಮಿಜ್ರದ ಉತ್ತಮ ಪದಾರ್ಥಗಳಲ್ಲಿ ಕೆಲವನ್ನು ಹೊರುವ ಹತ್ತು ಕತ್ತೆಗಳೂ, ಪ್ರಯಾಣಕ್ಕೋಸ್ಕರ ತನ್ನ ತಂದೆಗೆ ಸಾಹಿತ್ಯವಾದ ಗೋಧಿ ರೊಟ್ಟಿ ಆಹಾರಗಳನ್ನು ಹೊರುವ ಹತ್ತು ಹೆಣ್ಣು ಕತ್ತೆಗಳೂ. ೨೪ ವ. ಜಗಳವಾಡ ಬೇಡಿರೆಂದು) ಅಥವಾ ಭಯಗೊಳ್ಳ ಬೇಡಿರಿ! ಮುಂಚಿನಂತೆ ಆದೀತೆಂಬ ಅನುಮಾನ ಅವರಲ್ಲಿ ಹುಟ್ಟ ಬಹುದಾಗಿತ್ತು. ಅಥವಾ ನೀನು ಮಾಡಿದಿ ಅಂತ ಒಬ್ಬರ ಮೇಲೆ ಒಬ್ಬರು ಅಪರಾಧ ಹೊರಿಸುವವರಾದಾರು ಎಂದು ಯೋಸೆಫನು ನೆನಸಿ ಹೀಗೆ ಹೇಳಿದನು.

ಉತ್ಪತ್ತಿ. ೪೬, ೧—೭.

hh) ಅವರು ಮನೆಗೆ ಬಂದು ಸಮಾಚಾರ ತಿಳಿಸಿದ್ದು. ೪೫, ೨೫—೨೮.

೨೫ ವ. ಅವರು ಮಿಜ್ರದಿಂದ ಏರಿ—ಯಾಕೋಬನ ಬಳಿಗೆ ಬಂದರು. ೨೬ ವ. ಮತ್ತು ಅವರು—ಯೋಸೆಫನು ಇನ್ನು ಜೀವದಿಂದಿದ್ದಾನೆ, ಅವನು ಮಿಜ್ರ ದೇಶವನ್ನೆಲ್ಲಾ ಆಳುತ್ತಾನೆಂದು ಅವನಿಗೆ ತಿಳಿಸಿದಾಗ, ಅವನ ಹೃದಯವು ಅಚೇತನವಾಯಿತು.) ಯಾಕಂದರೆ ಅವನು ಅವರನ್ನು ನಂಬಲಿಲ್ಲ. ಹೃದಯ ಸಂತೋಷ ಪಡಲಾಗಲಿಲ್ಲ. ಸತ್ತ ಹಾಗಿತ್ತು. ೨೭ ವ.— ಹೇಳಿದಾಗಲೂ, ತನ್ನನ್ನು ವೈಯುವದಕ್ಕೆ ಯೋಸೆಫನು ಮುಂ.

i) ಯಾಕೋಬನು ತನ್ನ ಕುಟುಂಬ ಸಹಿತವಾಗಿ ಮಿಜ್ರಕ್ಕೆ ಹೋದದ್ದು. ೪೬, ೧—೩೦.

aa) ಅವನು ಕಾನಾನದಿಂದ ಹೊರಟದ್ದು. ೧—೭.

೧ ವ. ಕಾನಾನ ದೇಶದ ಪ್ರಾಂತ್ಯದಲ್ಲಿದ್ದ ಬೇರ್ಷೆಬದಲ್ಲಿ ಯಾಕೋಬನು ಬಲಿಗಳನ್ನು ಅರ್ಪಿಸಿ ತನ್ನ ಸಂಗಾತ ದೇವರು ಮಾಡಿದ ಒಡಂಬಡಿಕೆಯನ್ನು ಸ್ಥಿರ ಪಡಿಸುತ್ತಾನೆ. ೧೩೦ ವರ್ಷದವನಾದ ಬಳಿಕ, ಯಾಕೋಬನು ತನ್ನ ಜನ್ಮದೇಶವನ್ನು ಬಿಟ್ಟು ಪರದೇಶಕ್ಕೆ ಹೋಗುವದು (ಗುಳೆ ತೆಗೆದು ಹೋಗುವದು) ಬಹಳ ಕಷ್ಟ ಕಂಡಿದ್ದೀತು (೧೫, ೧೩). ದೇವರು ಅಬ್ರಹಾಮನಿಗೆ ಹೇಳಿದ ಮಾತು ಗೊತ್ತಿತ್ತು. ತನ್ನ ವಂಶದವರು ಕಾಲಾಂತರದಲ್ಲಿ ಹೋಗ ಬೇಕಾದೀತು; ಆದರೆ ತಾನು ಪರದೇಶಿಯಾಗಿ ಇಷ್ಟು ತಿರಿಗಿದ ಮೇಲೆ, ತನ್ನ ದೇಶದೊಳಗೆ ಮುಪ್ಪಿನ ಕಾಲದಲ್ಲಿ ತೀರಿ ಕೊಂಡೇನು ಎಂದು ಅಪೇಕ್ಷೆ ಮಾಡಿದನು.— ಆದರೆ ಯೋಸೆಫನು ಅಲ್ಲಿ ಇದ್ದದರಿಂದಲೂ, ಕರ್ತನು ಬೇರ್ಷೆಬದಲ್ಲಿ ಅವನಿಗೆ ಅಭಯ ಹೇಳಿದ್ದರಿಂದಲೂ, ಈ ಪ್ರಯಾಣ ಅವನಿಗೆ ಹೌರವಾಯಿತು. ಇಸ್ರಾಯೇಲನ ಕುಟುಂಬ ಬೆಳೆದು ಜನಾಂಗವಾಗ ಬೇಕು. ೩ ವ. ಇದಕ್ಕೆ ಕಾನಾನದಲ್ಲಿ ಪ್ರತಿಕೂಲವಾಗುತ್ತಿತ್ತು. ಹ್ಯಾಗಂದರೆ: ಅಲ್ಲಿ ಅಮೋರಿಯರ ಪಾಪದ ಅಳತೆ ಇನ್ನು ತುಂಬಿದ್ದಿಲ್ಲ. ಅದರಿಂದ ದೇವರು ಇನ್ನು ಅವರನ್ನು ಅಲ್ಲಿ ಇರಗೊಟ್ಟನು. ಅವರನ್ನ ನಿರ್ಮೂಲ ಮಾಡುವ ಸಮಯ ಇನ್ನು ಬಂದಿದ್ದಿಲ್ಲ. ಕಾನಾನದಲ್ಲಿ ನಿಂತ ಪಕ್ಷದಲ್ಲಿ ಇಸ್ರಾಯೇಲನವರು ಇನ್ನು ೨೧೫ ವರುಷ ಅವರ ಕೂಡಾ ಅಲ್ಲಿ ಇರ ಬೇಕಾಗಿತ್ತು (ಗಲ. ೩, ೧೭. ಹೇಳಿರುವ ಆ ೪೩೦ ವರುಷ, ಅಥವಾ ಉತ್ಪತ್ತಿ. ೧೫, ೧೩. ಹೇಳಿರುವ ೪೦೦ ವರುಷ ಅಬ್ರಹಾಮನು ಮೇಸೊಪೊತಾಮಿಯ ಬಿಟ್ಟಂದಿನಿಂದ ಎಣಿಸ ಬೇಕು). ಇಷ್ಟು ಕಾಲ ಒಂದೇ ಸ್ಥಳದಲ್ಲಿ ಕೂಡಿರಲಿಕ್ಕೆ, ಕಾನಾನ ದೇಶದಲ್ಲಿ ಜಾಗ ಸಾಲುತ್ತಿದ್ದಿಲ್ಲಾದ ಕಾರಣ, ಇಸ್ರಾಯೇಲನವರು ಬೇರೆ ಬೇರೆ ಆಗಿ, ಒಬ್ಬರಿಗೊಬ್ಬರು ಅಗಲ ಬೇಕಾಗಿತ್ತು. ಆದರೆ ಅವರು ಈ ಮೇರೆಗೆ ವಿಭಾಗವಾದ ಬಳಿಕ, ಕನಾನ್ಯರೊಳಗೆ ಕೂಡಿ ಅವರಂತೆ ಆಗಲಿಕ್ಕೆ ಬಹಳ ಗಂಡಾಂತರವಾಗುತ್ತಿತ್ತು. ಮಿಜ್ರದಲ್ಲಿ ಇಂಥಾ ಜನಸಂಕರ ಆಗ ಕೂಡದಿತ್ತು. ಹ್ಯಾಗಂದರೆ: ಅಲ್ಲಿ ಗೋಷೆನ ಶೀಮೆಯಲ್ಲಿ ತಮ್ಮ ದನ ಕುರಿಗಳಿಗೆ ಸಾಕಷ್ಟು ಇಂಬು ಇತ್ತು. ಮಿಜ್ರದವರು ಕುಲಾಚಾರ ನಡಿಸಿ, ಇಸ್ರಾಯೇಲನವರಂಥಾ ಗೊಲ್ಲರನ್ನು ಸಣ್ಣ ಜಾತಿ ಎಂದು ಅಸಹ್ಯಿಸಿದ್ದರಿಂದ, ಇವರಿಗೂ ಅವರಿಗೂ ಬಳಿಕೆ ಆಗಲಿಲ್ಲ. ಇದಲ್ಲದೆ ಮಿಜ್ರದಲ್ಲಿ ವಿದ್ಯಾಭ್ಯಾಸ ಉದ್ಯೋಗ ವ್ಯಾಪಾರ ಮುಂತಾದದ್ದು ನಡೆದದರಿಂದ, ಇಸ್ರಾಯೇಲನವರು ಅವರಿಂದ ಒಂದುವರೆ ಕಲಿತು ಕೊಳ್ಳುವ ಹಾಗಿತ್ತು. ಈ ಪರಿ ಇಸ್ರಾಯೇಲನವರು ದೇವರ ಜನಾಂಗವಾಗುವದಕ್ಕೆ ಮಿಜ್ರದಲ್ಲಿ ನಾನಾ ಪ್ರಕಾರವಾಗಿ ಅನುಕೂಲವಾಯಿತು. ಕನಾನ್ಯರು ಕಾಡ ಜನರು. ಅವರಿಂದ ಒಂದು ರಾಜ್ಯ ಮಾಡಿ ಕೊಳ್ಳಲಾಗಲಿಲ್ಲ. ಅವರಲ್ಲಿ ಅರಸರೆನಿಸುವವರು ಒಂದು ಅಥವಾ ಕೆಲವು ಊರುಗಳ ಮೇಲೆ ಹಿರಿತನ ನಡಿಸಿದ ಗೌಡರು ಅಷ್ಟೇ. ೪ ವ. ನಿನ್ನನ್ನು ಮೇಲೆ ಬರ ಮಾಡುವೆನು) ನಿನ್ನ ಸಂತಾನವನ್ನು ತಿರಿಗಿ ಕಾನಾನಕ್ಕೆ ಕರಕೊಂಡು ಬರುತ್ತೇನೆ. ಕೈ ಇಡುವನು) ಈ ದೇಶದಲ್ಲಿ ತಮ್ಮವರು

ಉತ್ಪತ್ತಿ. ೪೬, ೮—೨೭.

ತೀರುವಾಗ, ಎದೆಯ ಮೇಲೆ ಕೈ ಇಡುವಂತೆ, ಆ ದೇಶದವರು ಕಣ್ಣಿನ ಮೇಲೆ ಕೈ ಇಟ್ಟು ಅದನ್ನ ಮುಚ್ಚುತ್ತಿದ್ದರು. ಇದು ಪ್ರೀತಿಯ ಗುರುತು.

೭ ವ. ತನ್ನ ಕುಮಾರರನ್ನೂ, ತನ್ನ ಕುಮಾರರ ಕುಮಾರರನ್ನೂ, ತನ್ನ ಕುಮಾರ್ತೆಗಳನ್ನೂ, ತನ್ನ ಕುಮಾರರ ಕುಮಾರ್ತೆಗಳನ್ನೂ ಮುಂ.) ಯಾಕೋಬನಿಗೆ ದೀನ ಎಂಬ ಒಬ್ಬಳೇ ಮಗಳು ಮಾತ್ರ ಇದ್ದಳು. ಆದರೆ ಕುಮಾರ್ತೆಗಳಲ್ಲಿ ಸೊಸೆಯರು ಸಹ ಬಂದ ಹಾಗಾಯಿತು. ಸೊಸೆಯೂ ಅವರಲ್ಲಿ ಮಾವನಿಗೆ ಮಗಳು ಅನ್ನಿಸಿ ಕೊಳ್ಳುತ್ತಿದ್ದಳು.

bb) ಯಾಕೋಬನ ಕುಟುಂಬದ ಲೆಖ್ಖ. ೮—೨೭.

೮—೧೫ ವ. ಲೇಯಳಿಗೆ ೬ ಮಂದಿ ಗಂಡು ಮಕ್ಕಳೂ, ಅವರಿಂದ ೨೩ ಪೌತ್ರರೂ, ಯೂದನಿಂದ ಇಬ್ಬರು ಮರಿಮಕ್ಕಳೂ, ದೀನ ಎಂಬ ಒಬ್ಬ ಮಗಳೂ ಹೀಗೆ ಎಲ್ಲಾ ಕೂಡಿ ೩೨ ಮಂದಿ ಮಕ್ಕಳು ಮೊಂಮಕ್ಕಳು ಇದ್ದರು. ಇವರೊಳಗೆ ಯಾಕೋಬನನ್ನು ಎಣಿಸಿದರೆ, ೩೩ ಮಂದಿ ಆಗುತ್ತಾರೆ. ಲೇಯಳೂ, ಆಕೆಯ ಮಕ್ಕಳ ಹಾಗೂ ಮೊಮ್ಮಕ್ಕಳ ಹೆಂಡರೂ, ಈ ಲೆಖ್ಖದೊಳಗೆ ಶೇರಲಿಲ್ಲ. ಲೇಯಳು ಒಂದು ವೇಳೆ ಇಷ್ಟರೊಳಗೆ ಕಾನಾನದಲ್ಲಿ ಸತ್ತಿದ್ದಾಳು. ತರುವಾಯ ದೀನಳು ಮನೆತನ ನೋಡಿ ಕೊಳ್ಳುವಾಕೆ ಆಗಿದ್ದಾಳು. ಅದರಿಂದ ಆಕೆಯ ಹೆಸರು ಈ ಪಟ್ಟಿಯಲ್ಲಿ ಶೇರಿ ಅದೆ.

೬+೨೩+೨+೧+೧=೩೩ ಪ್ರಾಣಗಳು.

೧೦ ವ. ಸೌಲನ ತಾಯಿ ಕನಾನ್ಯಳು. ಸಿಮೆಯೋನನು ಇಂಥಾಕೆಯನ್ನ ಮದಿವೆ ಮಾಡಿ ಕೊಂಡಿದ್ದನು. ಆದರೆ ಯಾಕೋಬನ ಮಿಕ್ಕಾದ ಕುಮಾರರು ಮೇಸೊಪೊತಾಮಿಯದಲ್ಲಿಯ ಲಾಬಾನನ ವಂಶದ ಸ್ತ್ರೀಯರನ್ನು ಮದಿವೆ ಮಾಡಿ ಕೊಂಡಿದ್ದರು ಎಂಬ ಹಾಗೆ ಕಾಣುತ್ತದೆ. ಯೂದನ ವಿಷಯ ನೋಡು ೩೮, ೨.

೧೨ ವ.—ದೇಶದಲ್ಲಿ ಸತ್ತರು. ಪೇರೆಚನ ಕುಮಾರರು ಯಾರಂದರೆ: ಹೆಚ್ರೋನನು ಹಮೂಲನು.

೧೬—೧೮ ವ. ಜಿಲ್ಪಳಿಗೆ ಇಬ್ಬರು ಗಂಡು ಮಕ್ಕಳು, ಅವರಿಂದ ೧೧ ಮಂದಿ ಪೌತ್ರರು, ಅಶೇರನಿಂದ ಇಬ್ಬರು ಮರಿಮಕ್ಕಳು, ಒಬ್ಬ ಮೊಮ್ಮಗಳು, ಹೀಗೆ ಎಲ್ಲಾ ಕೂಡಿ ೧೬ ಮಂದಿ ಮಕ್ಕಳು, ಮೊಮ್ಮಕ್ಕಳು ಮರಿಮಕ್ಕಳು ಇದ್ದರು.

೨+೧೧+೨+೧=೧೬ ಪ್ರಾಣಗಳು.

ಜಿಲ್ಪಳೂ, ಆಕೆಯ ಪುತ್ರ ಪೌತ್ರರ ಹೆಂಡರೂ, ಈ ಲೆಖ್ಖದಲ್ಲಿ ಶೇರಲಿಲ್ಲ. ಸೇರಳು ಎಂಬ ಆಕೆಯ ಮೊಮ್ಮಗಳು ಎಣಿಸಿ ಇದ್ದಾಳೆ. ಯಾತಕ್ಕಂದರೆ ಆಕೆ ದೀನಳಂತೆ ಒಂದು ಮನೆತನಕ್ಕೆ ಹಿರಿಯಳಾಗಿದ್ದಾಳು.

೧೯—೨೨ ವ. ರಾಹೇಲಳಿಗೆ ಇಬ್ಬರು ಗಂಡು ಮಕ್ಕಳು, ೧೨ ಮಂದಿ ಪೌತ್ರರು ಇದ್ದರು.

೨+೧೨=೧೪ ಪ್ರಾಣಗಳು.

ಕಾನಾನದಲ್ಲಿ ಶೀರಿ ಹೋದ ರಾಹೆಲಳೂ, ಯೋಸೆಫನ ಹೆಂಡತಿಯಾದ ಅಸ್ನಾಥಳೂ, ಈ ಲೆಖ್ಖದೊಳಗಿಲ್ಲ. ಯೋಸೆಫನೂ, ಅವನ ಇಬ್ಬರು ಕುಮಾರರೂ, ಮಿಜ್ರದಲ್ಲಿ ಇದ್ದಾಗ್ಯೂ, ಈ ಲೆಖ್ಖದೊಳಗೆ ಶೇರಿದ್ದಾರೆ. ಬೆನ್ಯಮೀನನು ಈ ಕಾಲದಲ್ಲಿ ಸುಮಾರು ೨೪ ವರುಷದವನಾಗಿದ್ದನು. ಹೀಗಿರಲಿಕ್ಕೆ ಅವನಿಗೆ ಇಷ್ಟರೊಳಗೆ ೧೦ ಮಂದಿ ಮಕ್ಕಳು ಹುಟ್ಟಿರ ಬಹುದು. ಅದು ಏನು ದೊಡ್ಡದಲ್ಲ.

ಯಾಕೋಬನ ಕುಟುಂಬದ ಲೆಖ್ಖ.

ಉತ್ಪತ್ತಿ. ೪೬, ೮—೨೭.

೨೩—೨೫ ವ. ಬಿಲ್ಹಳಿಗೆ ಇಬ್ಬರು ಗಂಡು ಮಕ್ಕಳು ೫ ಮಂದಿ ಪೌತ್ರರು ಇದ್ದರು.

೨+೫=೭ ಪ್ರಾಣಗಳು.

ಆಕೆಯೂ, ಆಕೆಯ ಕುಮಾರರ ಹೆಂಡರೂ, ಈ ಲೆಖ್ಖದೊಳಗಿಲ್ಲ.

೩೩+೧೬+೧೪+೭=೭೦ ಪ್ರಾಣಗಳು.

ಪುತ್ರ ಪೌತ್ರರ ಹೆಂಡರನ್ನು ವಂಶಾವಳಿಯ ಲೆಖ್ಖದಲ್ಲಿ ಎಣಿಸದೆ ಬಿಡುವದು ವಾಡಿಕೆ ಆಗಿತ್ತು.

೨೬. ೨೭ ವ. ಇಲ್ಲಿ ಬೇರೊಂದು ಲೆಖ್ಖ ಹೇಳಿ ಅದೆ. ಮೋಸೆಯು ಮೊದಲು (೨೬ ವ.) ಯಾಕೋಬನನ್ನು ಬಿಟ್ಟು ಅವನ ಕೂಡ ಮಿಜ್ರಕ್ಕೆ ಬಂದವರನ್ನ ಮಾತ್ರ ಎಣಿಸುತ್ತಾನೆ. ಆ ಬಳಿ (೨೭ ವ.) ಆಗಲೇ ಮಿಜ್ರದಲ್ಲಿದ್ದ ಯೋಸೆಫನನ್ನೂ, ಅವನ ಇಬ್ಬರು ಕುಮಾರರನ್ನೂ, ಯಾಕೋಬನನ್ನೂ ಬೇರೆ ಎಣಿಸಿ, ಮೇಲಿನ ಲೆಖ್ಖಕ್ಕೆ ಕೂಡಿಸಿ, ಒಟ್ಟು ಲೆಖ್ಖ ಹೇಳುತ್ತಾನೆ.

ಹ್ಯಾಗಂದರೆ:

ಲೇಯಳಿಂದ ದೀನಳ ಕೂಡಾ........	೩೨
ಜಿಲ್ಪಳಿಂದ..................	೧೬
ರಾಹೇಲಳಿಂದ ಬೆನ್ಯಮೀನನ ಮುಖಾಂತರ..	೧೧
ಬಿಲ್ಹಳಿಂದ..................	೭
	೬೬
ಯೋಸೆಫನೂ ಅವನ ಇಬ್ಬರು ಕುಮಾರರೂ ಯಾಕೋಬನೂ.............	೪
ಒಟ್ಟು	೭೦

ಅಪೊಸ್ತಲ ಕ್ರಿ. ೭, ೧೪. ಹೇಳಿರುವ ಲೆಖ್ಖ ಬೇರೆ. ಹ್ಯಾಗಂದರೆ ಅಲ್ಲಿ ಯಾಕೋಬನ ಕುಟುಂಬ ೭೫ ಮಂದಿ ಆಗಿತ್ತು ಅಂತೆ. ಮನಾಸ್ಸೆ ಎಫ್ರಾಯಿಮ ಇವರಿಬ್ಬರಿಗೆ ಹುಟ್ಟಿದ ೫ ಮಂದಿ ಗಂಡು ಮಕ್ಕಳನ್ನ (ದಿನಚರ್ಯ. ೧, ೭, ೧೪ ಮುಂ.) ಈ ಲೆಖ್ಖದಲ್ಲಿ ಕೂಡಿಸಿದ್ದಾನೆ. ಹಳೆ ಒಡಂಬಡಿಕೆಯ ಜನಾಂಗವು ಆದಿಯಲ್ಲಿ ೧೨ ಮಂದಿ ಕುಮಾರರಿಂದಲೂ, ೭೦ ಪ್ರಾಣಗಳಿಂದಲೂ, ವಿಸ್ತಾರವಾಯಿತು. ಹೊಸ ಒಡಂಬಡಿಕೆಯ ಜನಾಂಗವು ೧೨ ಮಂದಿ ಅಪೊಸ್ತಲರಿಂದಲೂ, ಎಪ್ಪತ್ತು ಮಂದಿ ಶಿಷ್ಯರಿಂದಲೂ, ವಿಸ್ತಾರವಾಯಿತು.

cc) ಯಾಕೋಬನು ಗೋಷೆನ ಶೀಮೆಗೆ ಬಂದದ್ದು. ೨೮—೩೦.

೨೯ ವ.—ತನ್ನ ರಥವನ್ನು ಹೂಡಿ—ಹೋಗಿ ಅವನ ದರ್ಶನ ತಕ್ಕೊಂಡು ಅವನ ಕೊರಳಿನ ಮೇಲೆ ಮುಂ. ೩೦ ವ.—ಈಗ ನನಗೆ ಮರಣ ಬರಲಿ! ಮುಂ.

k) ಗೋಷೆನ ಪ್ರಾಂತ್ಯವು ಇಸ್ರಾಯೇಲನವರಿಗೆ ವಾಸಸ್ಥಳವಾಗಿ ನೇಮಕವಾದದ್ದು. ೪೬, ೩೧.—೪೭, ೧೨.

aa) ಫರೋನನಿಗೆ ಹೇಳ ತಕ್ಕ ಮಾತನ್ನು ಯೋಸೆಫನು ತನ್ನ ಸಹೋದರರಿಗೆ ಹೇಳಿ ಕೊಟ್ಟದ್ದು. ೪೬, ೩೧—೩೪.

೩೩. ೩೪ ವ.—ಕೇಳುವದಾದರೆ, ಚಿಕ್ಕ ಪ್ರಾಯದಾರಭ್ಯ—ಎಂದನ್ನ ಬೇಕು. ಹೀಗಂದರೆ ಗೋಷೆನ ಪ್ರಾಂತ್ಯದಲ್ಲಿ ನೀವು ವಾಸಿಸಲಾದೀತು. ಯಾಕಂದರೆ ಕುರಿ ಮುಂ.) ನೀವು ಹೀಗೆ ಹೇಳಿದರೆ, ಮುಂದೆ

ಉತ್ಪತ್ತಿ. ೪೭, ೧—೧೨.

ಮೇಯಿಸಲಿಕ್ಕೆ ನಿಮಗೆ ಬೈಲು ಸ್ಥಳ ಬೇಕು, ಮತ್ತು ನಿಮ್ಮನ್ನು ಮಿಜ್ರದವರೊಳಗೆ ಇಡ ಕೂಡದು ಎಂಬದನ್ನ ಅರಸನು ತಿಳಿದು, ಪ್ರತ್ಯೇಕವಾಗಿರುವ ಗೋಷೆನ ಶೀಮೆಯಲ್ಲಿ ಇರಲಿಕ್ಕೆ ಅಪ್ಪಣೆ ಕೊಟ್ಟಾನು. ಅರಸು ಗೋಷೆನ ಪ್ರಾಂತ್ಯವನ್ನು ಅವರಿಗೆ ವಾಸಸ್ಥಳವಾಗಿ ನೇಮಿಸಿದ ಬಳಿಕ, ಯಾರೂ ಅವರನ್ನ ಹಿಂದುಗಡೆ ಹೊರಡಿಸಲಾರದಂತೆ ಆಯಿತು. ಅಲ್ಲಿ ಇರುವದು ಸ್ಥಿರವಾಯಿತು.

bb) ಯೋಸೇಫನು ತನ್ನ ಸಹೋದರರಲ್ಲಿ ಐದು ಮಂದಿಯನ್ನು ಫರೋನನ ಬಳಿಗೆ ಕರಕೊಂಡು ಹೋಗಿ ದರ್ಶನ ಮಾಡಿಸಿದ್ದು. ೪೭, ೧—೬.

೧ ವ. — ಬಂದು, ಫರೋನನಿಗೆ: ನನ್ನ ತಂದೆಯು—ದೇಶದಲ್ಲಿದ್ದಾರೆಂದು ತಿಳಿಸಿದನು. ೪ ವ. — ದೇಶದಲ್ಲಿ ಪರವಾಸ ಮಾಡ ಬಂದಿದ್ದೇವೆ) ಇದು ತಾವು ನಿತ್ಯ ಇರುವ ದೇಶವಲ್ಲ. ೧೫, ೧೪. ಹೇಳಿರುವ ವಾಕ್ಯವು ಅವರ ನೆನಪಿನಲ್ಲಿತ್ತು. ೫. ೬ ವ. ಫರೋನನ ಉತ್ತರ. ಗಟ್ಟಿಗರು) ಕುರಿ ದನ ಸಾಕುವ ಕೆಲಸದಲ್ಲಿ. ಫರೋನನಿಗೂ ಗೋಷೆನ ಪ್ರಾಂತ್ಯದಲ್ಲಿ ಮಂದೆಗಳು ಇದ್ದವೆಂದು ಊಹಿಸಲಾಯಿತು. ಮಿಜ್ರದಲ್ಲಿಯೂ ಗೊಲ್ಲರದೊಂದು ಜಾತಿ ಇತ್ತು.

cc) ಯಾಕೋಬನು ಫರೋನನ ದರ್ಶನಗೊಂಡದ್ದು. ೪೭, ೭—೧೨.

೭ ವ. — ಯಾಕೋಬನನ್ನು ಕರಕೊಂಡು ಹೋಗಿ ಫರೋನನ ಮುಂ.) ಬರುವಾಗ್ಯೆ, ಮತ್ತು ಹೋಗುವಾಗ್ಯೆ, ಯಾಕೋಬನು ಫರೋನನನ್ನು ಆಶೀರ್ವದಿಸುತ್ತಾನೆ. ಅದು ಅವನಿಗೆ ಯುಕ್ತವಾಗಿತ್ತು. ಯಾಕಂದರೆ ಅವನು ಸತ್ಯ ದೇವರ ಯಾಜಕನಾಗಿದ್ದನು. ದೇವರ ಭಕ್ತರೆಲ್ಲರು ಲೋಕಕ್ಕೆ ಆಶೀರ್ವಾದ ಕೊಡತಕ್ಕ ಯಾಜಕರು ಆಗಿದ್ದಾರೆ. ೯ ವ. ಪರವಾಸದ) ಯಾಕಂದರೆ ಯಾಕೋಬನು ಪರದೇಶಿಯಂತೆ ಬಹಳ ತಿರುಗಿದ್ದನು. ಮತ್ತು (ಇಬ್ರಿ. ೧೧, ೧೩—೧೬. ಒಂದು ನಿತ್ಯ ವಾಸಸ್ಥಳವನ್ನು ಹುಡುಕುತ್ತಿದ್ದನು.—ನನ್ನ ತಂದೆಗಳು ಪರವಾಸವಾಗಿದ್ದ ಜೀವದ ವರುಷಗಳ ದಿನಗಳಷ್ಟು ಆಗಮಿಲ್ಲ ಅಂದನು.) ಅಬ್ರಹಾಮನು ೧೭೫ ವರುಷ, ಇಸಾಕನು ೧೮೦ ವರುಷ, ಯಾಕೋಬನು ೧೪೭ ವರುಷ ಬದಕಿದರು. ೧೧ ವ. ರಾಮಸೆಸ್) ಇದು ಕಾಲಾಂತರದಲ್ಲಿ ಗೋಷೆನ್ ಪ್ರಾಂತ್ಯಕ್ಕೆ ಸಂಸ್ಥಾನವಾಯಿತು. ಇದು ಪೆಲೂಸಿಯ ಎಂಬ ನೀಲ ನದಿಯ ಒಂದು ಬಾಹುವಿಗೂ, ಕಹಿ ಸರೋವರಗಳಿಗೂ ನಡುವಿನಲ್ಲಿ ಅದೆ. ಅದರಲ್ಲಿ ಬಲವಾದ ಒಂದು ಕೋಟೆ ಇತ್ತು. ಅಲ್ಲಿ ಇಸ್ರಾಯೇಲನವರು ದನ ಸಾಕುವದಲ್ಲದೆ, ಕೃಷ್ಯ ಸಹ ನಡಿಸಲಿಕ್ಕೆ ಅನುವು ಆಯಿತು.

l) ಯೋಸೇಫನು ಬರದ ಕಾಲದಲ್ಲಿ ಪಾರುಪತ್ಯ ಮಾಡಿದ್ದು. ೪೭, ೧೩—೨೬.

೧೩. ೧೪ ವ. ಯೋಸೇಫನು ಅರಸನಿಗಾಗಿ ಹಣವನ್ನೆಲ್ಲಾ ಸಂಪಾದಿಸಿದ್ದು. ೧೪ ವ. ಆಗ ಕಾನಾನ ದೇಶದಲ್ಲಿಯೂ ಮಿಜ್ರ ದೇಶದಲ್ಲಿಯೂ ಇದ್ದ ಹಣವನ್ನೆಲ್ಲಾ ಅವರು ಕೊಟ್ಟು ಧಾನ್ಯ ಕೊಂಡು ಕೊಂಡರು. ಯೋಸೇಫನು ಆ ಹಣವನ್ನ ಕೂಡಿಸಿ ಫರೋನನ ಮನೆಗೆ ತರಿಸಿದನು.

೧೫—೧೭ ವ. ಯೋಸೇಫನು ಮಿಜ್ರದವರ ದನಗಳನ್ನೆಲ್ಲಾ ಫರೋನನಿಗಾಗಿ ಸಂಪಾದಿಸಿದ್ದು.

೧೫ ವ. — ಕಾನಾನ ದೇಶದಲ್ಲಿಯೂ ಹಣ ತೀರಿದಾಗ ಮುಂ. ೧೭ ವ. — ರೊಟ್ಟಿಯಿಂದ ಸಲಹಿದನು.

ಉತ್ಪತ್ತಿ. ೪೭, ೧೩—೨೬.

೧೪—೨೧ ವ. ಯೋಸೆಫನು ಫರೋನನಿಗಾಗಿ ಮಿಜ್ರದವರ ಭೂಮಿಯನ್ನು ಸಂಪಾದಿಸಿ, ಅವರನ್ನ ಅರಸನಿಗೆ ದಾಸರನ್ನ ಮಾಡಿದ್ದು.

೧೮. ೧೯ ವ. ಆ ವರುಷವಾದ ಮೇಲೆ, ಎರಡನೆ ವರುಷದಲ್ಲಿ ಅವರು ಅವನ ಕಡೆಗೆ ಬಂದು ಹೀಗೆ ಅವನಿಗೆ ಹೇಳಿ ಕೊಂಡರು: ನಾವು ನಮ್ಮ ಸ್ವಾಮಿಗೆ ಕಳ್ಳ ಮಾತಾಡುವದಿಲ್ಲ. ಹಣವೂ ಪಶುಗಳೂ ನಮ್ಮ ಸ್ವಾಮಿಯ ವಶದಲ್ಲಿ ಬಿದ್ದು ತೀರಿ ಅವೆ; ನಮ್ಮ ಶರೀರಗಳೂ ಭೂಮಿಯೂ ಇವುಗಳ ಹೊರ್ತು ನಮ್ಮ ಸ್ವಾಮಿಯ ಮುಂದೆ ಏನೂ ಉಳಿದಿರುವದಿಲ್ಲ. ನಾವೂ ನಮ್ಮ ಭೂಮಿಯೂ ನಿನ್ನ ಕಣ್ಣುಗಳ ಮುಂದೆ ಹಾಳಾಗುವದು ಯಾಕೆ? ನಮ್ಮನ್ನೂ ನಮ್ಮ ಭೂಮಿಯನ್ನೂ ರೊಟ್ಟಿಗೆ ಕೊಂಡುಕೋ! ಆಗ ನಾವು ನಮ್ಮ ಭೂಮಿಯ ಸಹಿತವಾಗಿ ಫರೋನನಿಗೆ ವಶವಾಗಿರುವೆವು. ಮತ್ತು ಬೀಜವನ್ನು ಕೊಡು. ಆಗ ನಾವು ಸಾಯದೆ ಬದುಕುವೆವು. ಮತ್ತು ಭೂಮಿಯು ಹಾಳಾಗದೆ ಇರುವದು, ಅಂದರು.

ಬಿತ್ತಲಿಕ್ಕೆ ಬೀಜವಿಲ್ಲದ್ದರಿಂದ, ಭೂಮಿಯೂ ಬೀಳ ಬೀಳುತ್ತಿತ್ತು.

೨೧ ವ. ಯೋಸೆಫನು ಧಾನ್ಯಕ್ಕೆ ಮಿಜ್ರದವರಿಂದ ಕೊಂಡು ಕೊಂಡ ಭೂಮಿಯನ್ನು ತಿರಿಗಿ ಅವರಿಗೆ ಹಂಚಿ ಕೊಟ್ಟು ಆರಂಬ ನೆಟ್ಟಗೆ ಸಾಗುವಂತೆ, ಅವರನ್ನ ದೇಶದ ಮೇಲೆ ಹಂಚಿ ಇಟ್ಟನು. ಒಂದೊಂದು ಪಟ್ಟಣದಲ್ಲಿ ಅದರ ಶೀಮೆ ಸಾಲುವಷ್ಟು ಮಂದಿ ಇಟ್ಟನು. ಮುಂಚೆ ಭೂಮಿ ಅವರದಾಗಿತ್ತು. ಯೋಸೆಫನ ಮುಖಾಂತರ ಅವರು ಅದನ್ನ ಅರಸನ ಕಡೆಯಿಂದ ಹಿಡಿದು ಅವನಿಗೆ ರೈತರಾದರು. ಇದಕ್ಕೆ ಅವರು ಸರಕಾರಕ್ಕೆ ಹುಟ್ಟುವಳಿಯಲ್ಲಿ ಐದನೆ ಪಾಲನ್ನು ಕೊಡ ಬೇಕಾಯಿತು. ಆ ದೇಶವು ಬಹಳ ಫಲಭರಿತವಾದದ್ದು. ಆದ್ದರಿಂದ ಐದನೇ ಪಾಲು ಕೊಡುವದು ಭಾರವಲ್ಲ. ಮತ್ತು ಭೂಮಿ ಎಲ್ಲಾ ನೆಟ್ಟಗೆ ಸಾಗುವಳಿ ಆಗಲೆಂದು ಅರಸನಿಗೆ ಚಿಂತೆ ಹತ್ತಿತು. ಕಾಡಾರಂಬ ನೀರಾರಂಬ ಎಲ್ಲಾ ಚಂದಾಗಿ ನಡೆಯುವ ಹಾಗೆ, ಅವನೇ ನೋಡುವವನಾದನು. ಇದು ದೇಶಕ್ಕೆ ಬಹಳ ಉಪಯೋಗವಾಯಿತು. ಯೋಸೆಫನಿಂದ ತಮಗೆ ದೊಡ್ಡ ಉಪಕಾರವಾಯಿತೆಂದು ಮಿಜ್ರದವರು ತಿಳಿಕೊಂಡರು. ಈ ಮೇರೆಗೆ ಯೋಸೆಫನು ತನ್ನ ಧನಿಯ ಹಾಗೂ ಅವನ ಪ್ರಜೆಯ ಉಪಯೋಗ ನೋಡಿಕೊಂಡು, ಪ್ರಧಾನತ್ವ ನಡಿಸುತ್ತಿದ್ದನು. ೨೨ ವ.— ಯಾಕಂದರೆ ಯಾಜಕರಿಗೆ ಫರೋನನ ದೆಶೆಯಿಂದ ವರ್ಷಾಶನವಿತ್ತು ಮುಂ.) ಯಾಜಕರಿಗೆ ಮಾನ್ಯವಿದ್ದದ್ದಲ್ಲದೆ, ಅರಸನ ಕಡೆಯಿಂದ ಕಾಳು ಮುಂತಾದ ಆಯವು ಬರುತ್ತಿತ್ತು. ಕ್ಷತ್ರಿಯರೂ ಅರಸನಿಗೆ ರೈತರಾಗಿದ್ದರು. ಆದರೆ ಅರಸನ ಸೇವೆಯಲ್ಲಿ ಇದ್ದದರಿಂದ, ಅವರಿಗೆ ಮಾನ್ಯವಿತ್ತು.

m) ತನ್ನ ಹಿರಿಯರ ಕೂಡ ಕಾನಾನದಲ್ಲಿ ತನ್ನನ್ನು ಹೂಣಿಡ ಬೇಕೆಂದು ಯಾಕೋಬನು ಯೋಸೆಫನನ್ನು ಪ್ರಮಾಣ ಮಾಡಿಸುತ್ತಾನೆ. ೪೭, ೨೭—೩೧.

೨೯ ವ.— ನಿನ್ನ ಕೈಯನ್ನು ನನ್ನ ನಡುವಿನ ಕೆಳಗೆ ಇಡು! ಮುಂ.) ಯೋಸೆಫನು ದೊಡ್ಡವನಾಗಿದ್ದಾನೆ. ಯಾಕೋಬನು ಅವನನ್ನು ಬಹಳ ಬೇಡಿ ಕೊಳ್ಳುತ್ತಾನೆ. ಕಾನಾನವು ವಾಗ್ದತ್ತದ ದೇಶ. ಅದರಿಂದ ಕಾನಾನವು ಪರಲೋಕಕ್ಕೆ, ಮಿಜ್ರವು ಕತ್ತಲಿರುವ ಪಾತಾಳಕ್ಕೆ ಸಾದೃಶ್ಯ. ಅದರ ಸಲುವಾಗಿ ಕಾನಾನದ ಕಡೆಗೆ ಬಹಳ ಮನಸಿತ್ತು. ೩೧ ವ.— ಮಂಚದ ತಲೆಗಡೆಯಿಂದ ವಂದಿಸಿದನು.) ತಾನು ಹಾರೈಸಿದ್ದು ಕೈಗೂಡಿತೆಂದು ಹಿಗ್ಗಿಕೊಂಡು, ಯಾಕೋಬನು ತನ್ನ ತಲೆಯನ್ನ ಮಂಚದ ತಲೆಗಡೆಯಿಂದ ಎತ್ತಿ ಬಾ

ಉತ್ಪತ್ತಿ. ೪೮, ೧—೭.

ಗಿ ದೇವರಿಗೆ ನಮಸ್ಕಾರ ಮಾಡಿದನು. ಯಾಕೋಬನು ಅವನ (ಯೋಸೆಫನ) ದಂಡಕೋಲಿನ ತುದಿಗೆ ವಂದಿಸಿದನು ಎಂಬಂತೆ ಗ್ರೀಕ ಭಾಷಾಂತರದಲ್ಲಿ ಮತ್ತು ಇಬ್ರಿ. ೧೧, ೨೧ನೆಯಲ್ಲಿ ಅದೆ. ಹೀಗೆ ಸುಧಾ ಭಾಷಾಂತರ ಮಾಡ ಬಹುದು. ಇದರ ಅಭಿಪ್ರಾಯವೇನಂದರೆ: ಯಾಕೋಬನು ತನ್ನ ಮಗನಾದ ಯೋಸೆಫನು ತನ್ನ ಮಾತಿಗೆ ಒಪ್ಪಿಕೊಂಡು ಪ್ರಮಾಣ ಮಾಡಿ ವಚನ ಕೊಟ್ಟದ್ದಕ್ಕೆ, ಸಂತೋಷ ಪಟ್ಟು ಯೋಸೆಫನಿಗೆ ತನ್ನ ಕೃತಜ್ಞತೆ ತೋರಿಸಲಿಕ್ಕೆ ಹೀಗೆ ವಂದಿಸಿದನು. ನೀನೇ ದೊಡ್ಡವನು, ನಾನು ಬೇಡಿಕೊಂಡದ್ದು ನೀನು ಮಾಡಿದರೆ, ಆಗುವದು; ಇಲ್ಲದಿದ್ದರೆ, ಇಲ್ಲ ಎಂಬದಾಗಿ ಯೋಸೆಫನಿಗೆ ಹೇಳಿದ ಹಾಗಾಯಿತು.

n) ಯಾಕೋಬನು ಯೋಸೆಫನ ಕುಮಾರರನ್ನು ಆಶೀರ್ವದಿಸಿದ್ದು. ಸಂಧಿ ೪೮.

aa) ಯಾಕೋಬನು ಯೋಸೆಫನ ಕುಮಾರರನ್ನು ಸ್ವೀಕರಿಸಿದ್ದು. ೪೮, ೧—೭.

೧ ವ.—ಮನಾಸ್ಸೆಯನ್ನು ಮುಂ. ೨ ವ. ಯಾಕೋಬನೆಂಬ ಹೆಸರು ಬಂದರೆ, ಅವನು ಮನುಷ್ಯ ಮಾತ್ರದವನೆಂಬರ್ಥ ಆಗುವದು. ಅವನು ಮೂಲಪಿತೃವೂ, ವಾಗ್ದತ್ತ ಹೊಂದಿದವನೂ, ಯಾಜಕ, ರಾಜ, ಪ್ರವಾದಿ ಎಂಬ ಮೂರು ವಿಧವಾದ ಉದ್ಯೋಗದವನೂ ಎಂಬರ್ಥದಲ್ಲಿ ಇಸ್ರಾಯೇಲನೆಂಬ ನಾಮಾಂಕಿತ ಪ್ರಯೋಗಿಸೋಣವಾಗುವದು. ಬಲಗೊಂಡು) ಆತ್ಮ ಬಲಗೊಂಡರೆ, ಬಲಗುಂದಿದ ದೇಹಕ್ಕೆ ಸುಧಾ ಹೊಸ ತ್ರಾಣ ತಾತ್ಕಾಲಕ್ಕೆ ಬರುವದು. ೪ ವ.—ಹೆಚ್ಚಿಸಿ ಜನಾಂಗಗಳ ಸಮೂಹ ಮಾಡಿ ಮುಂ.) ಈ ವಾಗ್ದತ್ತವು ಯೋಸೆಫನ ಘನತ್ವಕ್ಕೂ, ಮಿಜ್ರದ ಐಶ್ವರ್ಯಕ್ಕೂ, ಮಿಕ್ಕಿರುವಂಥಾದು. ಇದನ್ನ ಮರಿಯ ಬಾರದು. ಇದು ಜೀವದ ಮಾತು. ೫ ವ. ಆದರೆ ನಾನು ನಿನ್ನ ಬಳಿಗೆ ಮಿಜ್ರಕ್ಕೆ ಬರುವ ಮುಂಚೆ, ಮಿಜ್ರದಲ್ಲಿ ನಿನಗೆ ಮುಂ.) ಮನಾಸ್ಸೆಯೇ ಚೊಚ್ಚಲನು. ಆದಾಗ್ಯೂ ಯಾಕೋಬನು ಮೊದಲು ಎಫ್ರಾಯಿಮನ ಹೆಸರನ್ನು ಹೇಳುತ್ತಾನೆ. ಯಾಕಂದರೆ ಅವನೇ (೧೪. ೧೭. ೧೯ ವ.) ಹಿರಿಯನಾಗ ಬೇಕು. ಅವರಿಬ್ಬರು ಯಾಕೋಬನಿಗೆ ಮೊಮ್ಮಕ್ಕಳು. ಆದರೂ ಅವರು ಯಾಕೋಬನಿಗೆ ದತ್ತ ಪುತ್ರರಾಗಿ, ಅವನ ಪುತ್ರರ ಲೆಖ್ಖದಲ್ಲಿ ಕೇರುತ್ತಾರೆ. ಹೀಗಾದಲ್ಲಿ, ಯೋಸೆಫನಿಗೆ ವಾಗ್ದತ್ತದ ದೇಶದಲ್ಲಿ ಇಂಮಡಿ ಸ್ವಾಸ್ಥ್ಯವಾಯಿತು. ಅವನು ಯಾಕೋಬನಿಗೆ ವಂಶೋದ್ಧಾರಕನು ಆದ ಕಾರಣ, ಈ ಫಲ ಅವನಿಗೆ ಆಯಿತು. ಇದಲ್ಲದೆ ಅವನು ರಾಹೆಲಳ (೭ ವ.) ಚೊಚ್ಚಲ ಮಗನಾದ್ದರಿಂದ, ಅವನಿಗೆ ಚೊಚ್ಚಲತನದಲ್ಲಿ ರೂಬೆನನ ಕೂಡ ಪಾಲಿರ ಬೇಕು. ಆದರೂ ಯೂದ ಗೋತ್ರಕ್ಕೆ ಶ್ರೇಷ್ಠತ್ವವೂ ಆಶೀರ್ವಾದವೂ ಆದವು. ೬ ವ. ಯೋಸೆಫನಿಗೆ ಹುಟ್ಟುವ ಉಳಿಕೆ ಕುಮಾರರು ತಮ್ಮ ತಮ್ಮ ಸ್ವಾಸ್ಥ್ಯವನ್ನು ತಮ್ಮ ಅಣ್ಣಂದ್ಯರಾದ ಎಫ್ರಾಯಿಮನಲ್ಲಿಯೂ ಮನಾಸ್ಸೆಯಲ್ಲಿಯೂ ಹೊಂದಿ, ಅವರವರ ಗೋತ್ರಗಳಲ್ಲಿ ಶೇರ ಬೇಕು. ಲೇವಿ ಗೋತ್ರಕ್ಕೆ ಕಾನಾನದಲ್ಲಿ ಸ್ವಾಸ್ಥ್ಯವಿಲ್ಲದ ಕಾರಣ, ಸ್ವಾಸ್ಥ್ಯ ಹೊಂದಲಿಕ್ಕೆ ಹನ್ನೆರಡು ಗೋತ್ರಗಳು ಮಾತ್ರ ಉಳಿದವು.

bb) ಯಾಕೋಬನು ಅವರನ್ನ ಆಶೀರ್ವದಿಸಿದ್ದು. ೮—೧೨.

೮ ವ. ವೃದ್ಧಾಪ್ಯದಿಂದ ಯಾಕೋಬನ ಕಣ್ಣುಗಳು ಮಂದವಾಗಿದ್ದವಾದ ಕಾರಣ, ಈ ಹುಡುಗರ ರೂಪ ಕಂಡಾಗ್ಯೂ, ಅವರ ಗುರುತು ಹಿಡಿಯಲಾಗಲಿಲ್ಲ. ೧೨ ವ. ಆಗ ಯೋಸೆಫನು ಅವರನ್ನು ತನ್ನ ಮೊಣಕಾಲುಗಳ ಸಂದಿನಿಂದ ತೆಗೆದು, ತನ್ನ ಮುಖವನ್ನು ನೆಲಕ್ಕೆ ಮುಟ್ಟಿಸಿ ವಂದಿಸಿದನು.) ಯೋಸೆಫನು ತನ್ನ ಹುಡಗರನ್ನ ಮೊಣಕಾಲಿನ ಸಂದಿನಲ್ಲಿ ಹಿಡ ಕೊಂಡಿದ್ದನು. ಅವರನ್ನ ಮುಂದಕ್ಕೆ ತೆಗೆದು, ತಂದೆಗೆ, ನೀನೇ ಆಶೀರ್ವಾದ ಕೊಡುವಾತನೆಂದು ವಂದನೆ ಮಾಡಿ, ಹೀಗೆ ತನ್ನನ್ನು ತನ್ನ ತಂದೆಯ ಕೈಕೆಳಗೆ ತಗ್ಗಿಸಿ

೧೬೬ ಯಾಕೋಬನು ಯೋಸೆಫನ ಕುಮಾರರನ್ನು ಆಶೀರ್ವದಿಸಿದ್ದು.

ಉತ್ಪತ್ತಿ. ೪೮, ೮—೧೨.

ಕೊಳ್ಳುತ್ತಾನೆ. ಇನ್ನೊಂದು ಭಾಷಾಂತರ ಮಾಡ ಬಹುದು, ಹ್ಯಾಗಂದರೆ: ಆಗ ಯೋಸೆಫನು ಅವರನ್ನ ಅವನ (ಯಾಕೋಬನ) ಮೊಣಕಾಲುಗಳ ಸಂದಿ ನಿಂದ ತೆಗೆದು ಅವನ (ಯಾಕೋಬನ) ಮುಖದ ಕ ಡೆಗೆ ನೆಲ ಮುಟ್ಟಿ ವಂದನೆ ಮಾಡಿದನು.) ಯಾಕೋ ಬನು ಅವರನ್ನ ಮುದ್ದಿಟ್ಟು ಅಪ್ಪಿ ಕೊಂಡಿರಲಾಗಿ, ಈ ಇಬ್ಬರು ಹುಡುಗರು ಅವನ ಮೊಣಕಾಲಿನ ಸಂದಿನಲ್ಲಿ ನಿಂತಿದ್ದರು. ತರುವಾಯ ಯೋಸೆಫನು ಅವರನ್ನ ತೆ ಗದು, ತಂದೆಯ ಕಡೆಗೆ ವಂದನೆ ಮಾಡುತ್ತಾನೆ. ಈ ಕಡೇ ಭಾಷಾಂತರ ಕಥಾಸಂಧಾನಕ್ಕೆ ಹೆಚ್ಚು ಅನುಸಾ ರವಾಗಿದೆ. ೧೪ ವ. ಯಾಕೋಬನು ಕತ್ತರಿಗೈ ಮಾ ಡಿ ಇಡ ಬೇಕಾಯಿತು. ದೇವರ ಯಾಜಕನಾಗಿ ಆತ ನ ಚಿತ್ತದ ಪ್ರಕಾರ ಈ ಕಾರ್ಯ ನಡಿಸುತ್ತಾನೆ. ಹೀ ಗಾದಲ್ಲಿ, ಎಫ್ರಾಯಿಮನು ಹಿರಿಯನು, ಮನಾಸ್ಸೆ ಕಿರಿ ಯನು ಆದನು. ಜನ್ಮಶ್ರೇಷ್ಠತ್ವ ಅಲ್ಲ, ದೇವರ ಆಯುವಿಕೆಯೇ ಗೊತ್ತಿನದು. ೧೫. ೧೬ ವ.—ಇಸಾ ಕನ ಹೆಸರೂ ಅವರಿಗೆ ಕರಿಯಲ್ಪಡಲಿ!) ಅವರ ಹೆಸ ರನ್ನು ತೆಗೆಯುವಾಗ, ಅವರು ನನ್ನ, ನನ್ನ ಹಿರಿಯರ ವಂಶದವರು ಅಂತ ಹೇಳುವರು. ಇಸ್ರಾಯೇಲನವ ರು ಮುಂತಾದ ಹೆಸರನ್ನು ಅಂದಲ್ಲಿ, ಅವರಿಗೆ ಯಾ ಕೋಬನ ಹೆಸರು ಕರದ ಹಾಗಾಯಿತು. ಯೋಸೆಫ ನ ದೆಶೆಯಿಂದ ಈ ಆಶೀರ್ವಾದ ಅವನ ಕುಮಾರರಿ ಗೆ ಬಂತು. ತಂದೆಯ ಆಶೀರ್ವಾದ ಮಕ್ಕಳಿಗೆ ಮನೆ ಕಟ್ಟುವದು. ಆಶೀರ್ವದಿಸುವಾತನನ್ನು ಮೂರು ವಿಧ ವಾಗಿ ವರ್ಣಿಸುತ್ತಾನೆ. ಹ್ಯಾಗಂದರೆ: ೧) ಆತನು ಪಿತೃಗಳನ್ನ ಕೃಪೆಯಿಂದ ಆದು ಕೊಂಡಂಥಾ, ಅವ ರಿಂದ ಸೇವೆ ಮಾಡಿಸಿ ಕೊಂಡಂಥಾ ದೇವರು; (ತಂದೆ ಯಾದ ದೇವರು). ೨) ಆತನು ಯಾಕೋಬನನ್ನು ಒಳ್ಳೆ ಕುರುಬನಂತೆ (ಕೀರ್ತ. ೨೩, ೧.) ಕಾದು ಕೊಂ ಡು ಪರಾಮರಿಸಿದಂಥಾ ದೇವರು, (ಮಗನಾದ ದೇವ ರು.) ೩) ಆತನು ಪ್ರತ್ಯಕ್ಷವಾಗಿ ಆದು ಕೊಂಡವರಿ ಗೆ ಆಶೀರ್ವಾದ ಅನುಭವ ಮಾಡಿಸಿದಂಥಾ ಒಡಂಬಡಿ ಕೆಯ ದೂತನು (ಪರಿಶುದ್ಧಾತ್ಮನು). ಯೋಸೆಫನ ಇಬ್ಬರು ಕುಮಾರರು ಅನ್ಯ ದೇಶದಲ್ಲಿ ಅನ್ಯ ತಾಯಿ ಯಿಂದ ಹುಟ್ಟಿದವರು. ಆದ ಮೂಲ ಅವರು ಕಾಡ ಗಿಡದ ಮೇಲೆ ಬೆಳೆದ ಎರಡು ಅಂಟುಗಳು. ಮೂಲ ಪಿತೃ ಎಂಬ ಸಾಕ ಗಿಡದಲ್ಲಿ ಈ ಆಶೀರ್ವಾದದಿಂದ ಅಂಟಿಕ್ಕೊಣವಾಯಿತು. ೧೯ ವ.—ಮಗನೇ! ತಿಳಿ ಯಿತು; ಅವನು ಸಹ ಜನಾಂಗಗಳ ಸಮೂಹವಾಗು ವನು ಮುಂ.) (ಅಂಕೆ. ೧, ೩೩—೩೫.) ಎಫ್ರಾಯಿ ಮ ಗೋತ್ರದಲ್ಲಿ ೪೦೫೦೦, ಮನಾಸ್ಸೆ ಗೋತ್ರದಲ್ಲಿ ೩೨೦೦೦ ಮಂದಿ ಯುದ್ಧಸ್ಥರು ಇದ್ದರು. ಹತ್ತು ಗೋತ್ರಗಳನ್ನು ಮೊದಲು ಆಳಿದ ಅರಸನಾದ ಯೆ ರೋಬಮನು ಎಫ್ರಾಯಿಮ ಗೋತ್ರದವನಾಗಿದ್ದನು. ೨೦ ವ. ಅವರನ್ನ ಆ ದಿವಸದಲ್ಲಿ ಹೀಗೆ ಹೇಳಿ ಆಶೀ ರ್ವದಿಸಿದನು: ಎಫ್ರಾಯಿಮ ಮನಾಸ್ಸೆ ಎಂಬಿವರಂತೆ ದೇವರು ನಿನ್ನನ್ನು ಮಾಡಲಿ! ಎನ್ನುತ್ತ ಇಸ್ರಾಯೇಲ ನವರು ನಿನ್ನಿಂದ ಆಶೀರ್ವಾದ ಕೊಡುವರು. ಈ ಮೇ ರೆಗೆ ಅವನು ಎಫ್ರಾಯಿಮನನ್ನು ಮನಾಸ್ಸೆಗೆ ಮುಂದೆ ಮಾಡಿದನು.) ಹೀಗೆ ಹೇಳಿ ಆಶೀರ್ವಾದ ಕೊಡುವ ದು ಇಸ್ರಾಯೇಲನವರಲ್ಲಿ ವಾಡಿಕೆ ಆಯಿತು.

೨೧ ವ.—ದೇಶದಲ್ಲಿ ತಿರಿಗಿ ಶೇರಿಸುವನು.) ಅದ ನ್ನ ಬಿಟ್ಟು ಮಿಜ್ರಕ್ಕೆ ಬಂದರು. ೨೨ ವ. ಸಂಧಿ ೩೩. ೩೪. ಹೇಳಿದ ಶಿಖೇಮ (ಶಿಖೇಮ=ಪಾಲು) ಯಾ ಕೋಬನ ಕುಮಾರರು ಕತ್ತಿಯಿಂದ ತಕ್ಕೊಂಡಿದ್ದರು. ಅವರು ಮಾಡಿದ ಯುದ್ಧಕ್ಕೆ ಯಾಕೋಬನು ಸಮ್ಮ ತಿ ಪಡಲಿಲ್ಲ. ಯುದ್ಧದ ಬಲದಿಂದ ಅದು ಯಾಕೋ ಬನದಾಯಿತು. ಆದರೂ ಹಿಂದುಗಡೆ ಅದು ತಿರಿಗಿ ಕನಾನ್ಯರಿಗೆ ಸ್ವಾಧೀನವಾಯಿತು. ಇಸ್ರಾಯೇಲನವ ರು ಕಾನಾನವನ್ನು ಸ್ವತಂತ್ರಿಸಿ ಕೊಳ್ಳುತ್ತಿರಲಾಗಿ, ಎ ಫ್ರಾಯಿಮ ಗೋತ್ರದವರು ಆ ಪ್ರಾಂತ್ಯವನ್ನು ತಮ ಗೆ ವಶ ಮಾಡಿ ಕೊಂಡರು. ಶಿಖೇಮ ಎಂಬದು ಎ ಫ್ರಾಯಿಮ ಗೋತ್ರದ ಶೀಮೆಯಲ್ಲಿ ಒಂದು ಪ್ರಸಿದ್ಧ ಸ್ಥಳ (ಯೋಹ. ೪, ೫). ಯೋಸೆಫನ ಎಲುವುಗಳ ನ್ನ ಅಲ್ಲೇ ಹುಗಿದರು. ಯಾಕೋಬನು ಅಂದು ತ ನ್ನ ಮಗಳಾದ ದೀನಳ ನಿಮಿತ್ತವಾಗಿ ಆದದ್ದನ್ನು ನೆ ನಪು ಮಾಡಿ ಕೊಂಡು, ಮುಂದೆ ಕಾನಾನ ಸ್ವತಂತ್ರಿ ಸಿ ಕೊಳ್ಳುವ ಸಮಯದಲ್ಲಿ ಆಗುವದನ್ನು, ಆಗಲೇ ಆದ ಹಾಗೆ, ನೋಡಿ ಪ್ರವಾದನೆ ಹೇಳುತ್ತಾನೆ.

ಉತ್ಪತ್ತಿ. ೪೯, ೩—೭.

o) ಯಾಕೋಬನು ತನ್ನ ಕುಮಾರರ ವಿಷಯ ಹೇಳಿದ ಪ್ರವಾದನಾಶೀರ್ವಾದಗಳು. ೪೯, ೧—೨೮.

aa) ಪೀಠಿಕೆ.

೧. ೨ ವ. ಆಗ ಯಾಕೋಬನು ತನ್ನ ಕುಮಾರರನ್ನು ಕರಿಸಿ ಅವರಿಗೆ ಹೇಳಿದ್ದೇನಂದರೆ: ಕೂಡಿ ಬರ್ರಿ ಮುಂ. ಯಾಕೋಬನ ಕುಮಾರರೇ ಒಂದುಗೂಡಿ ಕೇಳಿರಿ! ಮುಂ.) ಯಾಕೋಬನು ಯೋಸೇಫನ ಕುಮಾರರನ್ನು ಆಶೀರ್ವದಿಸಿದ್ದನು. ಸಾಯುವ ದಿನ ಹೆಚ್ಚು ಸಮೀಪ ಬಂದಿತ್ತು. ಆ ಕಾಲದಲ್ಲಿ ಈ ಲೋಕದ ವಿಷಯಕ್ಕೆ ಚಿಂತೆ ಮಾಡದೆ, ತನ್ನ ವಂಶದವರ ಸ್ಥಿತಿಗತಿಯ ದೆಶೆಯಿಂದ ಮುಖ್ಯವಾಗಿ ಆಲೋಚನೆ ಮಾಡಿ ಕೊಂಡು, ದೇವರ ಆತ್ಮನಿಂದ ಪ್ರೇರಿಸಿ ಕೊಂಡು ಪ್ರವಾದನೆ ಹೇಳುತ್ತಾನೆ. ಲೋಕಕ್ಕೆ ವಿಮುಖನಾಗಿ ಆಗಲೇ ಪರಲೋಕದ ಹೊಸ್ತಿಲಲ್ಲಿ ಕಾಲಿಟ್ಟಿದ್ದನು. ಇನ್ನೊಂದು ಸರ್ತಿ ಇತ್ತ ಕಡೆಗೆ ಅಭಿಮುಖನಾಗಿ ನುಡಿಯುತ್ತಾನೆ.

bb) ರೂಬೇನನು. ೩. ೪.

೩ ವ.—ಆರಂಭವೂ, ಘನದಲ್ಲಿ ನೀನು ಮುಂದು, ತ್ರಾಣದಲ್ಲಿ ನೀನು ಮುಂದು ಆಗಿದ್ದಿ.) ಅವನ ಶ್ರೇಷ್ಠತ್ವ ವರ್ಣಿಸುತ್ತಾನೆ. ರೂಬೇನನು ಚೊಚ್ಚಲನಾದ್ದರಿಂದ, ಅವನು ಸಮಸ್ತ ಕುಟುಂಬಕ್ಕೆ ಯಾಜಕನೂ (ಘನದಲ್ಲಿ), ರಾಜನೂ (ತ್ರಾಣದಲ್ಲಿ), ಆಗ ಬೇಕಾಗಿತ್ತು. ಕಾನಾನದಲ್ಲಿ ಅವನಿಗೆ ಇಮ್ಮಡಿ ಸ್ವಾಸ್ಥ್ಯ ಬರ ಬೇಕಾಗಿತ್ತು. ೪ ವ. ನೀನು ನೀರಿನಂತೆ ಕಳವು ಆಗಿದ್ದಿ. ನೀನು ಜ್ಯೇಷ್ಠನಾಗ ಬಾರದು!) ಅವನ ಭಾವ ವರ್ಣಿಸುತ್ತಾನೆ. ಅವನು ನೀರಿನ ಕಳೆವಿನಂತೆ ಆತುರನು, ಕಾಮಾತುರನು. ೩೫, ೨೨. ತನ್ನನ್ನು ಆಳಿ ಕೊಳ್ಳಲಾರದವನು. ಆಶೆ ಹುಟ್ಟಿದರೆ, ಹಳ್ಳ ಸೂಸಿ ಬಂದಂತೆ, ಆಗ ಯಾವದಕ್ಕೂ ನಾಚದೆ, ಇಚ್ಛಾತೃಪ್ತಿ ಮಾಡ ಬೇಕು. ಉಳಿದ ವೇಳೆಯಲ್ಲಿ ನಿಧಾನದಿಂದ ಒಳ್ಳೆಯವನಂತೆ ಇರ ಬೇಕು. ಅವನ ಮನಸು ಅವನ ಆಟೋಪದಲ್ಲಿ ಇರಲಿಲ್ಲ. ಅದರಿಂದ ಚೊಚ್ಚಲತನದ ಹಿರಿಯತನಕ್ಕೆ ಅಯೋಗ್ಯನಾದನು. ಈ ಆಶಾತುರವುಳ್ಳ ಭಾವದಿಂದ (೩೫ ಸ.) ಈ ಗೋತ್ರಕ್ಕೆ ಇಸ್ರಾಯೇಲನವರಲ್ಲಿ ಯಾವಾಗಲೂ ಘನತ್ವ ಬಹಳ ಕಡಿಮೆ ಇತ್ತು. ಏರಿದನು.) ರೂಬೇನನು ತನಗೆ ದೂರವಾದವನು ಎಂದು ಯಾಕೋಬನು ಅಸಹ್ಯ ಭಾವದಿಂದ ಅವನ ವಿಷಯ ಪ್ರಥಮ ಪುರುಷದಲ್ಲಿ ಮಾತಾಡುತ್ತಾನೆ.

cc) ಸಿಮೆಯೋನನೂ ಲೇವಿಯೂ. ೫—೭.

೫ ವ. ಅಣ್ಣತಮ್ಮಂದಿರು) ಜನ್ಮದಿಂದಲೂ, ಭಾವದಿಂದಲೂ, ಮನಸಿನಿಂದಲೂ. ಬಲಾತ್ಕಾರದ ಆಯುಧಗಳು) ನೋಡು. ೩೪, ೨೫. ೬ ವ. ನನ್ನ ಪ್ರಾಣವು ಅವರ ಮಂಡಲೆಯಲ್ಲಿ ಸೇರ ಬೇಡ! ನನ್ನ ಘನವು ಅವರ ಸಭೆಯಲ್ಲಿ ಕೂಡ ಬೇಡ!) ಅಂಥಾ ಕೆಡಕಿನ ಕುಯುಕ್ತಿ ನಡಿಸಲಿಕ್ಕೆ ಮಂಡಲೆ ಮಾಡಿ ಕೊಳ್ಳುವದು ನನಗೆ ಅಸಹ್ಯ ಕಾಣುತ್ತದೆ. ಘನವು = ಪ್ರಾಣ. ಒಬ್ಬೊಬ್ಬ ಮನುಷ್ಯನ ಪ್ರಾಣ ಅವನಿಗೆ ಘನ ಭೂಷಣವಾಗೆದೆ. ಅದು ಅಮೂಲ್ಯವಾದದ್ದು. ಅದು ನೀರಿನೊಳಗೆ ತೋರುವ ಸೂರ್ಯ ಪ್ರತಿಬಿಂಬದಂತೆ ದೇವರ ಪ್ರತಿಬಿಂಬ ಮಾತ್ರವಲ್ಲ.—ಎತ್ತಿನ ನರಗಳನ್ನು) ಅವರು ಶಿಖೇಮ ಊರಿನಲ್ಲಿದ್ದ ಮನುಷ್ಯರನ್ನ ಕೊಂದದ್ದಲ್ಲದೆ, ತಕ್ಕೊಂಡು ಹೋಗಲಾರದ ಗಳೇದ ಎತ್ತುಗಳ ಹಿಂಗಾಲಿನ ನರ ಕೊಯಿದು, ಕೆಲಸಕ್ಕೆ ಬಾರದಂತೆ, ಮಾಡಿ ಕೆಡಿಸಿ ಬಿಟ್ಟರು. ಹೀಗೆ ಮಾಡಿ ತಮ್ಮ ದಾವೆ ಪೂರ್ಣವಾಗಿ ತೀರಿಸಿ ಕೊಂಡರು.

೭ ವ. ಶಪಿಸಲ್ಪಡಲಿ!) ಶಿಖೇಮದ ರಾಜಪುತ್ರನು

ತಮ್ಮ ಮನೆಗೆ ಅಪಮಾನ ಮಾಡಿದ್ದಕ್ಕೆ, ಮಿತಿಯಿಂದ ಕೋಪ ಉರಿ ಮಾಡಿದ್ದರೆ, ದೋಷ ಬರುತ್ತಿದ್ದಿಲ್ಲ. ಬೆಂಕೆ ತಕ್ಕಷ್ಟು ಪ್ರಯೋಗಿಸಿದರೆ, ಹಿತವೇ ಸರಿ! ಆದರೆ ಅದನ್ನ ಹಬ್ಬಗೊಟ್ಟರೆ, ಅದು ಎಂಥಾ ನಾಶಕರವಾದದ್ದು! ಚದರ ಮಾಡುವೆನು) ಸಿಮೆಯೋನನವರು ಯೂದ ಗೋತ್ರದ ಮಧ್ಯದಲ್ಲಿ ಕೆಲವು ಪಟ್ಟಣಗಳನ್ನು ಮಾತ್ರ ಸ್ವಾಸ್ಥ್ಯವಾಗಿ ಹೊಂದಿ, ಕಾಲಗತಿಯಿಂದ ಯೂದ ಗೋತ್ರದೊಳಗೆ ಕೂಡಿ ಹೋದರು. ಲೇವಿ ಗೋತ್ರ ಸ್ವಾಸ್ಥ್ಯವನ್ನು ಹೊಂದದೆ, ಎಲ್ಲಾ ಗೋತ್ರಗಳೊಳಗೆ ೪೮ ಪಟ್ಟಣಗಳಲ್ಲಿ ಹಂಚಿಟ್ಟದ್ದಾಯಿತು. ಆದರೂ ಬಹಿಷ್ಕಾರ ಮಾಡಿಸಿ ಕೊಳ್ಳಲಿಲ್ಲ. ಮೋಸೆಯ ಮತ್ತು ಆರೋನನ ಮುಖಾಂತರ ಯಾಜಕತ್ವವು ಲೇವಿ ಗೋತ್ರಕ್ಕೆ ಬಂತು.

dd) ಯೂದನು. ೮—೧೨.

೮ ವ. ಯೂದ ಗೋತ್ರದವರು ಇಸ್ರಾಯೇಲನವರ ವೈರಿಗಳನ್ನ ವಶ ಮಾಡಿ ಕೊಂಡಲ್ಲಿ, ಅವನ ಶ್ರೇಷ್ಠತ್ವ ತೋರ ಬಂತು. ಅದರಿಂದ ಅವನ ಸಹೋದರರು ಅವನನ್ನು ಹೊಗಳುವರು. ಯೂದನಿಂದ ಇಸ್ರಾಯೇಲನವರಿಗೆ ಯೂದರು ಎಂಬ ನಾಮವಾಯಿತು. ಅವರು ಅರಣ್ಯದಲ್ಲಿ ಸಂಚರಿಸುವಾಗ, ಯೂದ ಗೋತ್ರವು ಮುಖ್ಯವಾದದ್ದು ಆಗಿತ್ತು. ಯೂದ ಗೋತ್ರದಿಂದ ದಾವಿದ ಸೊಲೊಮೋನ ಮುಂತಾದ ಪ್ರಖ್ಯಾತ ಅರಸರು ಹುಟ್ಟಿ ಬಂದು, ವೈರಿಗಳನ್ನ ವಶ ಮಾಡಿ ಕೊಂಡರು. ಯೂದ ಗೋತ್ರದವರು ಬಾಬೆಲದ ಸೆರೆಯಿಂದ ತಿರಿಗಿ ತಮ್ಮ ದೇಶದಲ್ಲಿ ಸೇರಿ ಪ್ರಖ್ಯಾತರಾದರು. ಯೂದ ಎಂಬ ಹೆಸರಿನ ವಿಷಯಕ್ಕೆ ನೋಡು. ೨೯, ೩೫. ೯ ವ.—ಅವನ ಶ್ರೇಷ್ಠತ್ವವನ್ನು ಸಿಂಹನ ಅಲಂಕಾರದಿಂದ ವರ್ಣಿಸುತ್ತಾನೆ. ಯೂದನು ಯಾಕೋಬನ ಮುಂದೆ ನಿಂತಾಗ್ಯೆ, ಸಿಂಹದ ಮರಿಯಂತಿದ್ದನು. ಇನ್ನು ಸಾಧಾರಣ ಕುರುಬನಂತೆ ಕಂಡನು. ಆದರೆ ಶ್ರೇಷ್ಠತ್ವದ ಭಾವ ಅವನಲ್ಲಿ ಬೀಜದೋಪಾದಿಯಲ್ಲಿ ಇತ್ತು. ಕಾಲಾಂತರದಲ್ಲಿ ಯೂದ ಗೋತ್ರವು, ಸುಲಕೊಂಡು ಬಂದು, ಯಾರ ಭಯವಿಲ್ಲದೆ, ಮಲಗುವ ಸಿಂಹನಂತೆ, ತನ್ನ ಮರಿಗಳನ್ನು ಯಾರನ್ನ ಮುಟ್ಟಗೊಡದೆ, ಕಾಯುವ ಹೆಣ್ಣು ಸಿಂಹನಂತೆ ಆದನು. ಸಿಂಹನು ಮೃಗರಾಜ. ಯೂದನು ಧೈರ್ಯವು ದೊಡ್ಡ ಮನಸು ಬಲವು ಉಳ್ಳವನು ಆಗುವನಂತೆ (೪೩, ೯. ೪೪, ೨೨. ೩೦—೩೨). ಯೂದ ಎಂಬ ಸಿಂಹನ ಮರಿ ಅಂಥಾ ಗುಣಗಳನ್ನ ತೋರಿಸಿತು. ಕ್ರಿಸ್ತನಲ್ಲಿ ಈ ನುಡಿ ಒದಗಿ ಬಂತು. ಆತನೇ ಯೂದ ಗೋತ್ರದಿಂದ ಹುಟ್ಟಿ ಬಂದ ಸಿಂಹವೇ (ಪ್ರಕಟ. ೫, ೫). ೧೦ ವ. ರಾಜ್ಯಾಧಿಕಾರ ಯಾವಾಗಲೂ ಅವನಲ್ಲಿ ಇರುವದು. ದಂಡ ಮುದ್ರೆಕೋಲು ರಾಜ್ಯಾಧಿಕಾರದ ಗುರುತು. ಅರಸರು ಕೂತು ಕೊಂಡು, ತಮ್ಮ ದಂಡ ಕೋಲನ್ನ ಕಾಲುಗಳ ಸಂದಿನಿಂದ ಹಿಡಕೊಳ್ಳುತ್ತಿದ್ದರು. ಅವನ ಕಾಲುಗಳ ಸಂದಿನಿಂದ) ಅವನ ವಂಶದವರಿಂದ ರಾಜ್ಯಾಧಿಕಾರ ಹೋಗುವದಿಲ್ಲ. ಶೀಲೋ) ಸಮಾಧಾನ, ವಿಶ್ರಾಂತಿ. ಮೆಸ್ಸಿಯನು ಸಮಾಧಾನ ಶಾಂತಿ ಸ್ವರೂಪ. ಈ ಶೀಲೋ ಎಂಬ ಮೆಸ್ಸಿಯನು ಬಂದು, ಬಲವುಳ್ಳ ಸಿಂಹನಂತೆ ಹೊರಗಣ ಒಳಗಣ ವೈರಿಗಳನ್ನೆಲ್ಲಾ ಹೊಡೆದು, ಯಾರ ಭಯವಿಲ್ಲದ ಹಾಗೆ, ಮಾಡಿ, ಸಮಾಧಾನ ವಿಶ್ರಾಂತಿ ಕೊಟ್ಟು, ಸಮಾಧಾನದ ರಾಜನಾಗಿ ಆಳುವನು. ಆವಾಗ ಯೂದ ಗೋತ್ರದ ಶ್ರೇಷ್ಠತ್ವ ಸಮಾಪ್ತಿ ಆಗುವದು. ಯೂದ ಗೋತ್ರಕ್ಕೆ ಯಾವಾಗಲೂ, ಬಾಬೆಲದ ಸೆರೆ ಇತ್ತಲಾಗಿ ಮತ್ತು ಅತ್ತಲಾಗಿ ರಾಜ್ಯಾಧಿಕಾರವಿತ್ತು. ಆದರೆ ಕ್ರಿಸ್ತನು ಬಂದ ಕಾಲದಲ್ಲಿ ರೋಮಯರು ಅವರಿಂದ ಸ್ವಲ್ಪ ಕಡಿಮೆ ಎಲ್ಲಾ ಅಧಿಕಾರ ಕಸಕೊಂಡಿದ್ದರು. ತರುವಾಯ ಯೆರೂಸಲೇಮ ಹಾಳಾಗಿ ಅವರು ಎಲ್ಲಾ ದೇಶಗಳಿಗೆ ಚದರಿ ಹೋದರು. ೧೧. ೧೨ ವ. ಬೇರೆ ಬೇರೆ ಅಲಂಕಾರಗಳಿಂದ ಯೂದ ಗೋತ್ರಕ್ಕೆ ಆಗುವ ಸೌಖ್ಯ ಆಶೀರ್ವಾದಗಳನ್ನು ಬಣ್ಣಿಸುತ್ತಾನೆ. ಹೋರಾಡಿ ವೈರಿಗಳನ್ನ ಜಯಿಸಿ ಸಮಾಧಾನ ಮಾಡಿದ ತರುವಾಯ ಹೀಗೆ ಆಗುವದು. ಆದರೆ ಇಲ್ಲಿ ಹೇಳಿದ್ದು ಆ ಶೀಲೋ ಎಂಬವನಿಗೆ ಸುಧಾ ಸರಿ ಬರುವದು. ಹ್ಯಾಗಂದರೆ ಆತನು

ಉತ್ಪತ್ತಿ. ೪೯, ೧೩—೧೯.

ಸಿಂಹನಂತೆ ಬಲಿಷ್ಟನಾಗಿ ತನ್ನ ವೈರಿಗಳನ್ನು ಹೊಡೆದ ಬಳಿಕ, ಯುದ್ಧದಿಂದ ಬಂದು, ತಾನು ಹತ್ತಿಕೊಂಡಿದ್ದ ಕತ್ತೆಯನ್ನು ರಮ್ಯವಾದ ದ್ರಾಕ್ಷೆ ತೋಟದಲ್ಲಿ ಬಂದು ದ್ರಾಕ್ಷೆ ಗಿಡಕ್ಕೆ ಕಟ್ಟಿ, ಕದನದಲ್ಲಿ ಮಾಸಿದ ತನ್ನ ವಸ್ತ್ರಗಳನ್ನು ದ್ರಾಕ್ಷೆರಸದಲ್ಲಿ ತೊಳೆದು, ಊಟ ಮಾಡಿ ವಿಶ್ರಮಿಸಿ ಕೊಳ್ಳುವನು (ಕೀರ್ತ. ೧೧೦, ೫—೭).

ee) ಜೆಬುಲೋನನು. ೧೩ ವ.

ಇಸ್ಸಕಾರನು ಜೆಬುಲೋನನಿಗಿಂತ ಹಿರಿಯನಾದಾಗ್ಯೂ, ಜೆಬುಲೋನನನ್ನು ಮೊದಲು ಹೇಳುತ್ತಾನೆ. ಯಾಕಂದರೆ ಅವನು ಇಸ್ಸಕಾರನಿಗಿಂತ ಬುದ್ಧಿವಂತನೂ ಚಂದಾಗಿ ಕೆಲಸ ಮಾಡುವವನೂ (ಯೆಹೊಶು. ೧೯, ೧೦. ೧೧). ಯೊಕ್ನೆಯಾಮದ ಸಮೀಪದಲ್ಲಿ ಹರಿಯುವ ಹಳ್ಳದ ತನಕ ಜೆಬುಲೋನನ ಶೀಮಾಂತರವಿತ್ತು. ಈ ಹಳ್ಳ (ಯೆಹೊಶು. ೧೨, ೧೨.) ಕರ್ಮೆಲ ಎಂಬ ಮುಂಪರ್ವತದ ಹತ್ತರವಿತ್ತು. ಇಲ್ಲಿ ಬಹಳ ಹಡಗಗಳನ್ನು ಹಿಡಿಯುವ ಒಂದು ದೊಡ್ಡ ರೇವು ಇತ್ತಂತೆ. ಹೀಗಿರಲಾಗಿ, ವ್ಯಾಪಾರ ಮಾಡಲಿಕ್ಕೆ ಬಹಳ ಅನುಕೂಲವಾಯಿತು. ಪಾರ್ಶ್ವವು.) ಅವನ ಶೀಮಾಂತರವು ಉತ್ತರ ಪಶ್ಚಿಮದಲ್ಲಿ ಚಿದೋನದ ಕಡೆಗೆ ಇತ್ತು. ಒಂದು ವೇಳೆ ಆ ಚಿದೋನಿಯರ ಸಂಗಡ ವ್ಯಾಪಾರ ನಡಿಸುತ್ತಿದ್ದಾರು.

ff) ಇಸ್ಸಕಾರನು. ೧೪. ೧೫.

೧೪ ವ. ಇಸ್ಸಕಾರನು ಹಟ್ಟಿಗಳ ನಡುವೆ) ಅವರು ಗೊಲ್ಲರು, ದನ ಕಾಯುವವರು, ಸಾಕುವವರು. ಎಲುಬುಳ್ಳ ಕತ್ತೆ) ಹೊರುವದರಲ್ಲಿ ಕೆಲಸದಲ್ಲಿ ಗಟ್ಟಿಗನು. ದೇಹದಲ್ಲಿ ಬಲವುಳ್ಳವನು. ಆದರೆ ಕೆಲಸ ಮಾಡಲಿಕ್ಕೆ ಮನಸಿಲ್ಲದ ಮೈಗಳ್ಳನು. ಬುದ್ಧಿ ಕಡಿಮೆ ಇದ್ದವನು. ೧೫ ವ. ವಿಶ್ರಾಂತಿಯೇ, ಬರಗಿ ಕೊಳ್ಳುವದೇ ಅವನಿಗೆ ಪರಮ ಸುಖವಾಗಿ ಅವನು ಹೆಚ್ಚಿಗೆ ಪ್ರಯತ್ನ ಮಾಡದೆ ಹೋದ್ದರಿಂದ, ಎರಡನೆಯವರಿಗೆ ಸೇವೆ ಮಾಡುವವನಾಗುತ್ತಾನೆ. ತನ್ನ ಹೆಗಲನ್ನು ಕೊಟ್ಟು) ಕೆಲಸಕ್ಕೆ ಹಚ್ಚಿದರೆ, ಮಾಡುತ್ತಾನೆ. ಇಲ್ಲದಿದ್ದರೆ ಇಲ್ಲ. ಮೈಗಳ್ಳರು ಎರಡನೆಯವರಿಗೆ ಸೇವೆ ಮಾಡುವವರಾಗುತ್ತಾರೆ. ಈ ಗೋತ್ರದ ಪಾಲಿಗೆ ಫಲಭರಿತವಾದ ಎಸ್ರೆಯೇಲ ಎಂಬ ಬೈಲುಶೀಮೆ ಬಂತು.

gg) ದಾನನು. ೧೬—೧೮.

೧೬ ವ.—ಗೋತ್ರಗಳಲ್ಲಿ ಮುಂ.) ಇವನು ರಾಹೆಲಳ ದಾಸಿಯ ಮಗನು. ಆದರೂ ಪರಾಧೀನನಾಗದೆ, ಹೆಂಡರಿಂದ ಹುಟ್ಟಿದ ಮಿಕ್ಕಾದ ಗೋತ್ರಗಳಂತೆ ತನಗೆ ಸ್ವಂತ ಅಧಿಕಾರವಿರುವದು. ೧೭ ವ. ಹಿಮ್ಮಡಿಗಳನ್ನು ಕಚ್ಚುವವನು ಮುಂ.) ಬಲಾತ್ಕಾರ ನಡೆಯದಲ್ಲಿ, ಯುಕ್ತಿ ನಡಿಸುವನು. ಗರ್ವಿಷ್ಟರಾದ ತನ್ನ ವೈರಿಗಳಿಗೆ ಕೇಡಕು ಮಾಡುವನು. ನ್ಯಾಯಾಧಿಪತಿ ೧೮. ದಾನನ ಗೋತ್ರದವರು ಮೊದಲು ವಿಗ್ರಹಾರಾಧನೆಯನ್ನು ಇಸ್ರಾಯೇಲನವರಲ್ಲಿ ಸ್ಥಾಪಿಸಿದರು. ಪ್ರಕಟಣೆ. ೭, ೪—೮. ದಾನನ ಹೆಸರು ಇಲ್ಲ. ೧೮ ವ. ಯಾಕೋಬನು ನಡುವಿನಲ್ಲಿ ಪ್ರಾರ್ಥನೆ ಮಾಡುತ್ತಾನೆ: ಹ್ಯಾಗಂದರೆ ನಾನು ನನ್ನ ಕುಮಾರರ ಮೇಲೆ ಪ್ರವಾದನೆ ಹೇಳಿ ಆಶೀರ್ವಾದ ನುಡಿಯುತ್ತೇನೆ ಖರೆ, ಆದರೆ ನೀನು ಕೃಪೆ ಮಾಡಿ ಅವರ ಪಾಪ ಕ್ಷಮಿಸಿ ಅವರನ್ನ ರಕ್ಷಿಸಿದರೆ ಹೊರ್ತು, ಅವರಿಗೆ ಆಶೀರ್ವಾದ ಆಗದು.

hh) ಗಾಡನು. ೧೯ ವ.

ಲೇಯಳ ದಾಸಿಯ ಕುಮಾರರಾದ ಗಾಡನು ಮತ್ತು ಅಶೇರನು ಇವರ ಪ್ರಸ್ತಾಪವು ರಾಹೆಲಳ ದಾಸಿಯ ಜೊಚ್ಚಲನ ಪ್ರಸ್ತಾಪಕ್ಕೂ ಆಕೆಯ ದಾಸಿಯ ಎರಡನೆ ಮಗನ ಪ್ರಸ್ತಾಪಕ್ಕೂ ನಡುವಿನಲ್ಲಿ ಬರುತ್ತ

ದೆ. ಗಾದನ ಗೋತ್ರದವರು ಯೊರ್ದಾನ ನದಿಯ ಪೂರ್ವದಲ್ಲಿ ತಮ್ಮ ಸ್ವಾಸ್ಥ್ಯವನ್ನು ಹೊಂದಿದರು. ಅಲ್ಲಿ ವೇಳೆ ವೇಳೆಗೆ ವೈರಿಗಳು ಬಂದು ಅವರ ಮೇಲೆ ಬೀಳುತ್ತಿದ್ದರು. ಆದರೆ ಗಾದನವರು ಅವರನ್ನು ಓಡಿಸಿ ಅವರನ್ನ ಅಟ್ಟಿಕೊಂಡು ಹೋಗಿ ಅವರ ದಳ ಪೃಷ್ಟ (ಹಿಮ್ಮಡ) ಹಿಡಿಯುತ್ತಿದ್ದರು.

ii) ಅಶೇರನು. ೨೦ ವ.

ಅಶೇರನಿಂದ ಪುಷ್ಟಿ ಆಹಾರ ಬರುವದು ಮುಂ.) (ಯೆಹೊಶು. ೧೯, ೨೪ — ೩೧). ಅವರ ಪ್ರಾಂತ್ಯವು ಫಲಭರಿತವಾದದ್ದು. ಅದರಲ್ಲಿ ಬೆಳೆಯುವ ಫಲಗಳಿಂದ ಅರಸರಿಗೆ ತಕ್ಕಂಥಾ ಸವಿ ಊಟಗಳು ಆಗ ಬಹುದು.

kk) ನೆಪ್ತಲಿ. ೨೧ ವ.

ಜಿಂಕೆಯು ಚಮತ್ಕಾರಕ್ಕೂ ಸೌಂದರ್ಯಕ್ಕೂ ಸಾದೃಶ್ಯ. ರಮ್ಯವಾದ ಮಾತುಗಳನ್ನು ಆಡುತ್ತಾನೆ.) ತಾನೆ ವರಕವಿಯಾಗಿದ್ದು ಮನೋಹರವಾದ ಕಾವ್ಯ ಮಾಡುತ್ತಾನೆ. ಇಲ್ಲವೇ (೪೩, ೧೧.) ಬೇರೆ ಕವಿಗಳು ಅವನ ದೇಶದ ಚಂದವನ್ನು ನೋಡಿ ಅದನ್ನು ಬಣ್ಣಿಸುವ ಪದಗಳನ್ನ ಮಾಡುತ್ತಾರೆ. (ಯೆಹೊಶು. ೧೯, ೩೨—೩೯.) ಇನ್ನೊಂದು ಭಾಷಾಂತರ: ನೆಪ್ತಲಿ ಉದ್ದವಾದ ಕರೆಬಿಂಥ ಮರವು ತನ್ನ ಕೊಂಬೆಗಳನ್ನು ವಿಸ್ತರಿಸುತ್ತಾನೆ.

ll) ಯೋಸೇಫನು. ೨೨ — ೨೬.

೨೨ ವ. — ಫಲವೃಕ್ಷದ ಕೊಂಬೆ, ಬುಗ್ಗೆಯ ಸಮೀಪದಲ್ಲಿರುವ ಫಲವೃಕ್ಷದ ಕೊಂಬೆ) ರಾಹೆಲಳು ಫಲವೃಕ್ಷ. ಯೋಸೇಫನು ಆಕೆಯ ಕೊಂಬೆ, ಅಂದರೆ, ಮಗನು. ಒಟ್ಟಿಗೆ ಅವನ ಅಭಿವೃದ್ಧಿ ಸೌಖ್ಯವನ್ನ ವಿಸ್ತಾರವಾಗಿ ಬೆಳೆಯುವ ಗಿಡದ ಸಾದೃಶ್ಯದಿಂದ ವಿವರಿಸುತ್ತಾನೆ. ೨೩ ವ. ಬಿಲ್ಲಿನವರು ಅವನನ್ನು ಕೆಣಕಿ ಎಸೆದು ಮುಂ.) ಯೋಸೇಫನು ತನ್ನ ಮೇಲೆ ಕವಿದು ಬಂದ ವೈರಿಗಳನ್ನು ಜೈಸುವವನು. ಯೋಸೇಫನಿಗೂ ಅವನ ಮಗನಾದ ಎಫ್ರಾಯಿಮನಿಗೂ ಬಹಳ ವೈರಿಗಳು ಇದ್ದರು. ಅವರು ಬಹಳ ಹೋರಾಡಬೇಕಾಯಿತು. ೨೪ ವ. — ಭದ್ರವಾಗಿ ನಿಂತಿತು) ವೈರಿಗಳಿಗೆ ಸೋತು ಹೋಗಲಿಲ್ಲ. ಯಾಕೋಬನ ಪರಾಕ್ರಮಶಾಲಿಯ (ಯಾಕೋಬನಿಗೆ ಪರಾಕ್ರಮಶಾಲಿಯಾಗಿ ಶತ್ರುಗಳನ್ನ ಜಯಿಸಿ ಸಹಾಯ ಮಾಡಿದ ದೇವರ) ಕೈಯಿಂದಲೂ, ಅಲ್ಲಿಂದಲೂ, ಅಂದರೆ, ಇಸ್ರಾಯೇಲನ ಕುರುಬನೂ ಬಂಡೆಯೂ ಆಗಿರುವಾತನಿಂದಲೂ, ಅವನ ಕೈ ತೋಳುಗಳು ಲಘುವಾದವು.) ತನ್ನ ನಿತ್ಯ ಸರ್ವ ಬಲದಿಂದ (ಪರಾಕ್ರಮಶಾಲಿ) ಇಸ್ರಾಯೇಲನನ್ನು ಕಾದು ಪರಾಮರಿಸಿದಂಥಾ (ಕುರುಬನು), ಹೀಗೆ ಇಸ್ರಾಯೇಲನಿಗೆ ಸ್ಥಿರ ಆಧಾರವಾದಂಥಾ (ಬಂಡೆ), ದೇವರಿಂದ ಯೋಸೇಫನು ತನ್ನ ಎಲ್ಲಾ ವೈರಿಗಳನ್ನು ವಿಘ್ನಗಳನ್ನ ಗೆದಿಯಲಿಕ್ಕೆ ಬಲಗೊಳ್ಳಬೇಕು. ೨೫ ವ. — ಆಶೀರ್ವಾದ ಮೂರು ವಿಧ: ೧) ಮೇಲಿನ ಆಕಾಶದ ಆಶೀರ್ವಾದಗಳೂ, ಅಂದರೆ, ಮಳೆ ಮಂಜು ಬಿಸಲು ಎಲ್ಲಾ ಹಾಳತವಾಗಿ ಬರುವವು. ೨) ಕೆಳಗಿರುವ ಅಗಾಧದ ಆಶೀರ್ವಾದಗಳೂ, ಅಂದರೆ, ನೀರು ಸಂಪಾಗಿರುವದು. ಭೂಮಿ ಬಹಳ ಬೆಳೆಯುವದು. ೩) ಮೊಲೆಗಳ ಹಾಗೂ ಗರ್ಭದ ಆಶೀರ್ವಾದಗಳೂ, ಅಂದರೆ, ಮಕ್ಕಳಲ್ಲಿ ದನಗಳಲ್ಲಿ ಬಹಳ ಅಭಿವೃದ್ಧಿ ಆಗುವದು. ೨೬ ವ. — ನಿತ್ಯ ಗುಡ್ಡಗಳ ಭೂಷಣದ ಮಟ್ಟಿಗೂ ಮುಂ.) ಸೃಷ್ಟ್ಯಾರಭ್ಯ ಬದಲಾಗದಂಥಾ ಪರ್ವತಗಳು ತುದಿಯ ತನಕ (ತಗ್ಗುಗಳು ಮಾತ್ರವಲ್ಲ) ಬೆಳೆದು, ಬಹಳ ಫಲಭರಿತವಾದಂಥಾವಾಗುವಲ್ಲಿ, ಯಾಕೋಬನಿಗೆ ಹಿರಿಯರಿಂದ ಆದ ಆಶೀರ್ವಾದಕ್ಕಿಂತ ಯೋಸೇಫನಿಗೆ ದೊಡ್ಡ ಆಶೀರ್ವಾದ ಬರುವದು. ತನ್ನ ಸಹೋದರರಲ್ಲಿ ದೀ

ಕ್ಷಿತನಾದವನ ನೆತ್ತಿಯ ಮೇಲೆಯೂ) ಯೋಸೇಫನು ಶ್ರಮಾಶಾಲೆಯಲ್ಲಿ ಅಭ್ಯಾಸ ಮಾಡಿ, ತನ್ನ ಕುಟುಂಬದವರಿಗೆ ರಕ್ಷಕನಾದಲ್ಲಿ, ಕ್ರಿಸ್ತನಂತೆ ದೀಕ್ಷಿತನೂ, ಮಧ್ಯಸ್ಥನೂ, ಗುರೂ, ಆದನು. ಅವನಿಗೆ ದೊಡ್ಡ ಆಶೀರ್ವಾದ ಬರ ತಕ್ಕದ್ದು. ಯೂದನು ಆತ್ಮಸಂಬಂಧ ಆಶೀರ್ವಾದದಲ್ಲಿ, ಯೋಸೇಫನು ಶರೀರಸಂಬಂಧ ಆಶೀರ್ವಾದದಲ್ಲಿ ಉಳಿದವರಿಗಿಂತ ಮುಂದಾದರು.

mm) ಬೆನ್ಯಮೀನನು. ೨೭ ವ.

ಬೆನ್ಯಮೀನನು ತೋಳ, ಅವನು ಹರ ಕೊಳ್ಳುವನು ಮುಂ.) ಅವನು ಎಡೆಬಿಡದೆ, ದಣಿ ಕೊಳ್ಳದೆ, ಯುದ್ಧ ಮಾಡುವನು. ಅರಸನಾದ ಸೌಲನಲ್ಲಿ ಈ ಆಶೀರ್ವಾದ ಶರೀರಕ್ಕೆ ಸಂಬಂಧವಾಗಿ, ಅಪೊಸ್ತಲನಾದ ಪೌಲನಲ್ಲಿ ಆತ್ಮಕ್ಕೆ ಸಂಬಂಧವಾಗಿ ಈಡೇರಿತು. ೨೮ ವ.—ಹನ್ನೆರಡು ಗೋತ್ರಗಳು ಮುಂ.) ಹೀಗೆ ಒಬ್ಬೊಬ್ಬನಿಗೆ ಯಾಕೋಬನು ಅವನವನ ಭಾವ ಪೂರ್ವೋತ್ತರಕ್ಕೆ ಅನುಸಾರವಾಗಿ ಪ್ರವಾದನೆ ನುಡಿದು ಆಶೀರ್ವಾದ ಕೊಟ್ಟನು.

p) ಯಾಕೋಬನು ತನ್ನನ್ನು ಹೂಣಿಡುವ ವಿಷಯಕ್ಕೆ ಕೊಟ್ಟ ಕಡೆ ಅಪ್ಪಣೆ. ೪೯, ೨೯—೩೨.

ಮುಂಚೆ ಯೋಸೇಫನಿಗೆ ಮಾತ್ರ ಕೊಟ್ಟಿದ್ದ (೪೭, ೨೯—೩೧.) ಈ ನಿರೂಪವನ್ನು ಈಗ ತನ್ನ ಕುಮಾರರೆಲ್ಲರಿಗೆ ಕೊಡುತ್ತಾನೆ. ಸಾಯುವ ಕಾಲಕ್ಕೆ ಯಾಕೋಬನಲ್ಲಿ ದೇವರ ವಾಗ್ದತ್ತ ಒದಗಿ ಬರ ಬೇಕೆಂಬ ಈ ಒಂದೇ ಚಿಂತೆ ಇತ್ತು. ವಾಗ್ದತ್ತದ ದೇಶದ ಕಡೆಗೆ ಮನಸಿತ್ತು. ೨೯. ೩೦ ವ.—ನನ್ನ ಜನರಲ್ಲಿ ಕೂಡಿ ಕೊಳ್ಳುತ್ತೇನೆ. ಹಿತ್ತಿಯನಾದ ಎಫ್ರೋನನ ಹೊಲದಲ್ಲಿರುವ ಗವಿಯಲ್ಲಿ, ಅಂದರೆ, ಕಾನಾನ ದೇಶದಲ್ಲಿ—ಕೊಂಡು ಕೊಂಡಂಥಾ ಗವಿಯಲ್ಲಿ ನನ್ನ ತಂದೆಗಳ ಸಂಗಡ ನನ್ನನ್ನು ಹೂಣಿಡಿರಿ.

q) ಯಾಕೋಬನು ಪ್ರಾಣ ಬಿಟ್ಟದ್ದು. ೪೯, ೩೩.

೩೩ ವ.—ತನ್ನ ಜನರಲ್ಲಿ ಕೂಡಿ ಕೊಂಡನು.) ದೇವರ ಜನಾಂಗಕ್ಕೆ ಬರುವ ವಿಶ್ರಾಂತಿ ಹಾರೈಸಿ ಕೊಂಡು, ನಿದ್ರೆ ಹೋಗುವವರಂತೆ, ಸಮಾಧಾನದಿಂದ ತೀರಿದನು.—ಸಮಾಧಾನದಿಂದ ನೆಮ್ಮಿಂತೆಯಿಂದ ತೀರಿ ಕೊಳ್ಳುವದು ಹ್ಯಾಗಂದರೆ: ೧) ತನ್ನ ಮಕ್ಕಳನ್ನ ಆಶೀರ್ವದಿಸಿ ದೇವರ ಕೃಪೆಗೆ ಒಪ್ಪಿಸ ಬೇಕು. ೨) ತಾನು ಬಿಟ್ಟು ಹೋಗುವ ಲೋಕದಲ್ಲಿ ದೇವರ ವಾಗ್ದತ್ತವು ಈಡೇರುವದೆಂದು ನಂಬಿ ಕೊಂಡಿರ ಬೇಕು. ೩) ನಿತ್ಯ ವಿಶ್ರಾಂತಿಯ ಹಾರೈಸಿ ಕೊಂಡಿರ ಬೇಕು. ೪೯, ೨೮—೩೩.

r) ಯಾಕೋಬನು ಹೂಣಲ್ಪಟ್ಟದ್ದು. ೫೦, ೧—೧೪.

೧ ವ. ಯೋಸೇಫನು ತನ್ನ ತಂದೆಯ ಮೇಲೆ ಬಹಳ ಪ್ರೀತಿ ಮಾಡಿದದರಿಂದ, ಅವನ ದುಃಖವು ದೊಡ್ಡದಾಗಿತ್ತು. ೨ ವ.—ತಂದೆಯನ್ನ ಸುಗಂಧಿತ ಮಾಡ ಬೇಕೆಂದು ತನ್ನ ದಾಸರಾದ ವೈದ್ಯರಿಗೆ ಅಪ್ಪಣೆ ಕೊಟ್ಟನು. ವೈದ್ಯರು ಇಸ್ರಾಯೇಲನನ್ನು ಸುಗಂಧಿತ ಮಾಡಿದರು.) ಮಿಜ್ರದಲ್ಲಿ ವೈದ್ಯರು ಬಹಳ ಮಂದಿ ಇದ್ದರು. ಒಂದೊಂದು ರೋಗಕ್ಕೆ ಒಬ್ಬ ವೈದ್ಯನು ಇದ್ದನು. ಯೋಸೇಫನ ಸೇವೆಯಲ್ಲಿಯೂ ಶವಗಳನ್ನ ಸುಗಂಧಿತ ಮಾಡ ಬಲ್ಲಂಥಾ ವೈದ್ಯರು ಇದ್ದರು. ಶವಗಳನ್ನ ಸುಗಂಧಿತ ಮಾಡುವದರಲ್ಲಿ ಮಿಜ್ರದವರು ಬಹಳ ಜಾಣರು. ಪ್ರಾಚೀನದ ಅರಸರಲ್ಲಿ ಸುಗಂಧಿತ ಮಾಡಲ್ಪಟ್ಟ ಕೆಲವರ ಶವಗಳು ಇನ್ನಾದರೂ ನೆಟ್ಟಗೆ ಅವೆ. ಸತ್ತವರ ದೇಹಗಳು ಅಪೂಟವಿರುವ ಪರ್ಯಂತರ, ಅವನ್ನ ಮರಣ ಕಾಲದಲ್ಲಿ ಬಿಟ್ಟು ಹೋದ ಪ್ರಾಣಗಳು ಅವುಗಳ ಸುತ್ತ ಮುತ್ತಲು ಸುಳಿದಾಡುವವು. ಆದರೆ ಆ ದೇಹಗಳು ಕೊಳತು

ಉತ್ಪತ್ತಿ. ೫೦, ೧—೧೪.

ಹೋಗುವಂಥಾವು ಆದ ಕೂಡಲೇ, ಜನ್ಮಾಂತರದ ಭ್ರಮಣೆ ಆರಂಭವಾಗುವದು ಎಂಬದಾಗಿ ಮಿಜ್ರದವರು ನೆನಿಸಿದ್ದರಿಂದಲೂ, ತೀರಿದ ತಮ್ಮ ಹಿರಿಯರಿಗೆ ಬಹಳ ಮಾನ ಮರ್ಯಾದೆ ಮಾಡಿದ್ದರಿಂದಲೂ, ಶವಗಳನ್ನ ಸುಗಂಧಿತ ಮಾಡುವದು ರೂಢಿ ಬಿತ್ತು. ಇದರಿಂದ ನೂರು ಸಾವಿರ ವರುಷಗಳ ಹಿಂದೆ ತೀರಿದಂಥಾ ತಮ್ಮ ಹಿರಿಯರನ್ನ ಮುಖಾಮುಖಿಯಾಗಿ ನೋಡುವ ಹಾಗಾಯಿತು. ಸುಗಂಧಿತ ಮಾಡುವ ರೀತಿ ಏನಂದರೆ: ಸತ್ತವರ ಹೊಟ್ಟೆ ಸೀಳಿ ಕರುಳುಗಳನ್ನ ಹೊರಗೆ ತೆಗೆಯುತ್ತಿದ್ದರು. ನಾಸಾರಂಧ್ರಗಳ ಮಾರ್ಗದಲ್ಲಿ ಒಂದು ಒಂಕಿಯಿಂದ ತಲೆ ಬುರಡೆಯೊಳಗಿಂದ ಮಿದುಳನ್ನು ತೆಗೆಯುತ್ತಿದ್ದರು. ತದನಂತರ ಹೊಟ್ಟೆಯಲ್ಲಿ ಕಾರೀಕ ಗಿಡದ ಸಾರಾಯ ಹಾಕಿ ತೊಳೆದು, ಸುಗಂಧ ವರ್ಗಗಳನ್ನು ಅದರಲ್ಲಿ ತುಂಬಿ, ಶವವನ್ನು ಅಪೂಟವಾಗಿ ಸೋರುಪ್ಪಿನಲ್ಲಿ ಇಟ್ಟು, ಅರಿವಿ ಸುತ್ತಿ ಬಾರುಗಳಿಂದ ಬಿಗಿ ಕಟ್ಟಿ, ಅದಕ್ಕೆ ಅಂಟು ಸವರುತ್ತಿದ್ದರು. ಈ ಪರಿ ಶವ ಸುಗಂಧಿತ ಮಾಡಲಿಕ್ಕೆ ನಾಲ್ವತ್ತು ದಿವಸ ಬೇಕಾಗಿದ್ದವು. ಇದೆಲ್ಲ ಆದ ಬಳಿಕ, ಶವವನ್ನು ಮರದ ಒಂದು ಪೆಟ್ಟಿಗೆಯಲ್ಲಿ ಇಟ್ಟು, ಅದನ್ನ ಮುಚ್ಚಿ, ಶವಾಲಯದಲ್ಲಿ ಗೋಡೆಯ ಹತ್ತರ ನೆಟ್ಟಗೆ ನಿಲು ನಿಲ್ಲಿಸುತ್ತಿದ್ದರು. ೩ ವ. ಮತ್ತು ಅವನವು ನಾಲ್ವತ್ತು ದಿವಸ ತುಂಬಿದವು. ಯಾಕಂದರೆ ಸುಗಂಧಿತ ಮಾಡಲ್ಪಡುವವರವು ಇಷ್ಟು ದಿವಸಗಳು ಸಂಪೂರ್ಣವಾಗ ಬೇಕು. ಇದಲ್ಲದೆ ಮಿಜ್ರದವರು ಅವನಿಗೋಸ್ಕರ ಎಪ್ಪತ್ತು ದಿವಸಗಳು ಶೋಕ ಮಾಡಿದರು.) ಸುಗಂಧಿತ ಮಾಡುವ ೪೦ ದಿವಸಗಳು ಕೂಡಿ ಎಪ್ಪತ್ತು ದಿವಸ ಪ್ರಲಾಪ ಮಾಡುತ್ತಿದ್ದರು. ಅರಸರು ಸತ್ತರೆ, ೭೨ ದಿವಸ ವಿಲಾಪ ಮಾಡುತ್ತಿದ್ದರು. ಸತ್ತವರ ಮನೆಯ ಸ್ತ್ರೀಯರು ಮೋರೆಗೆ ತಲೆಗೆ ಕೆಸರು ಹಚ್ಚಿ ಕೊಳ್ಳುತ್ತಿದ್ದರು. ಸ್ತ್ರೀಯರೂ ಪುರುಷರೂ ಮೈಲಿಗೆ ವಸ್ತ್ರ ಹಾಕಿ ಕೊಂಡು, ಊರೊಳಗೆ ಎದೆ ಬಡ ಕೊಳ್ಳುತ್ತಾ ಓಡ್ಯಾಡುತ್ತಿದ್ದರು. ಅರಸರು ಸತ್ತರೆ, ಶೋಕದ ಪದಗಳನ್ನ ಹಾಡುತ್ತ ಉಪವಾಸ ಮಾಡುತ್ತ ಇದ್ದರು. ೪ ವ.—ನಾನು ನಿಮ್ಮ ದೃಷ್ಟಿಯಲ್ಲಿ ದಯ ಹೊಂದಿದ್ದಾದರೆ, ಫರೋನನ ಕಿವಿಗೆ ಈ ಮಾತು ಹಾಕ ಬೇಕು.) ಯೋಸೆಫನು ಅರಸನ ದರ್ಶನಕ್ಕೆ ಹೋಗ ಕೂಡದಿತ್ತು. ಯಾಕಂದರೆ ಫರೋನನ ಸನ್ನಿಧಾನದಲ್ಲಿ ಕ್ಷೌರ ಮಾಡಿಸಿ ಕೊಂಡವರು ಮಾತ್ರ ಕಾಣಿಸಿ ಕೊಳ್ಳ ತಕ್ಕದ್ದಾಗಿತ್ತು. ಆದರೆ ಯೋಸೆಫನು ಶೋಕದ ದೆಸೆಯಿಂದ ಮಿಜ್ರದವರ ಮರ್ಯಾದೆಗೆ ಸರಿಯಾಗಿ ತಲೆ ಗಡ್ಡ ಬೋಳಿಸಿ ಕೊಂಡಿದ್ದಿಲ್ಲ. ೭ ವ. ಫರೋನನ ದಾಸರು ಯಾರಂದರೆ: ೧) ಅರಮನೆಯಲ್ಲಿ ಸೇವೆ ಮಾಡುವವರು. ೨) ರಾಜ್ಯದ ಆಡಳಿತ ನೋಡುವವರು. ಯೋಸೆಫನಿಗೆ ಬಹಳ ಮಾನವಿತ್ತು. ೧೦ ವ.—ಅವನು ತನ್ನ ತಂದೆಗೋಸ್ಕರ ಏಳು ದಿವಸ ವಿಲಾಪ ಮಾಡಿದನು.) ಮಿಜ್ರದವರು ಫಿಲಿಷ್ಟ್ಯರ ದೇಶದಲ್ಲಿ ಅಲ್ಲ, ಅರಣ್ಯದಲ್ಲಿ ಹಾದು, ಸೇಯಿರ ಪರ್ವತ ಸುತ್ತಿ, ಹೀಗೆ ಸುತ್ತು ದಾರಿ ಹಿಡ ಕೊಂಡು ಬಂದರು. ಮಿಜ್ರದವರು ಯೊರ್ದಾನ ನದಿಯ ಈಚೆಯಲ್ಲಿ ಉಳಿದರು. ಇಸ್ರಾಯೇಲನವರು ಮಾತ್ರ ಶವವನ್ನ ಇಲ್ಲಿಂದ ಕಾನಾನಕ್ಕೆ ತಕ್ಕೊಂಡು ಹೋಗಿ, ಹೂಳಿಟ್ಟು, ಹಿಂದಕ್ಕೆ ಬಂದರು. ೧೧ ವ.—ಆಗುವ ಪ್ರಲಾಪವನ್ನು ನೋಡಿದಾಗ, ಇದು ಮಿಜ್ರದವರಿಗೆ ಘೋರವಾದ ಪ್ರಲಾಪವೆಂದು ಹೇಳಿದರು. ಮುಂ.) ಆಬೆಲ್ಮಿಜ್ರ=ಮಿಜ್ರದವರ (ಅವರು ನಿಂತ) ಬೈಲು. ೧೩ ವ.—ಅಬ್ರಹಾಮನು ಸ್ವಂತ ಸಮಾಧಿಗೋಸ್ಕರ ಹಿತ್ತಿಯನಾದ ಎಫ್ರೋನನಿಂದ ಹೊಲದ ಸಂಗಡ ಕೊಂಡು ಕೊಂಡಂಥಾ ಮಮ್ರೆಗೆ ಮುಂ. ೧೪ ವ.—ಹೂಣಿಡುವದಕ್ಕೋಸ್ಕರ ತನ್ನ ಕೂಡ ಮೇಲೆ ಬಂದವರೆಲ್ಲರ ಸಂಗಡಲೂ ಮುಂ.

s) ಯೋಸೆಫನ ಕಡೇ ವೃತ್ತಾಂತವು. ೫೦, ೧೫—೨೬.

aa) ಯೋಸೆಫನು ತನ್ನ ಸಹೋದರರಿಗೆ ಅಭಯ ಹೇಳಿದ್ದು. ೧೫—೨೧.

೧೫ ವ.—ಪ್ರತಿ ಮಾಡ್ಯಾನು ಅಂದು ಕೊಂಡರು.) ತಪ್ಪು ಹೊರಿಸುವ ಮನೋಸಾಕ್ಷಿ ತಿರಿಗಿ ಎಚ್ಚರಿಕೆ ಆಯಿತು. ಯೋಸೆಫನು ಅವರಿಗೆ ಭಯ ತೋರಿಸಲಿಲ್ಲ. ವಿಶ್ವಾಸ ಬಲಗುಂದಿದ ಸಮಯದಲ್ಲಿ ಪರಿಹಾ

ಉತ್ಪತ್ತಿ. ೫೦, ೧೫—೨೬.

ರವಾಗಿದ್ದ ಪಾಪಗಳ ದೆಶೆಯಿಂದ ಮನೋಸಾಕ್ಷ್ಮಿ ತಿರಿಗಿ ಶಿಕ್ಷಿಸುವದುಂಟು. ೧೬. ೧೭ ವ. ಅದಕ್ಕೆ ಅವರು ಯೋಸೇಫನಿಗೆ ಹೇಳಿ ಕಳುಹಿಸಿದ್ದೇನಂದರೆ ಮುಂ.) ಯಾಕೋಬನಿಗೆ ಒಂದು ವೇಳೆಯುಲ್ಲಿ ಈ ವಿಷಯದಲ್ಲಿ ಸಂದೇಹವಾಗಿರ ಬಹುದು. ಹೀಗೆ ಹೇಳಿದ್ದಾನಾದೀತು. ಅವರು ಹೀಗೆ ಬೇಡಿ ಕೊಂಡಲ್ಲಿ, ತಮ್ಮ ಪಾಪ ಮತ್ತೂ ಅರಿಕೆ ಮಾಡಿ ಸತ್ಯ ಪಶ್ಚಾತ್ತಾಪದ ಲಕ್ಷಣಗಳನ್ನು ತೋರಿಸುತ್ತಾರೆ. ಅವರು) ತಮ್ಮಲ್ಲಿ ಕೆಲವರನ್ನ ಪ್ರತಿನಿಧಿಗಳಾಗಿ ಕಳುಹಿಸಿದ್ದರು. ೧೮ ವ. ಯೋಸೇಫನ ಮನಸು ಕರುಣಾವುಳ್ಳದ್ದು ಎಂದು ತಿಳಿದ ಮೇಲೆ, ಅವರೆಲ್ಲರು ತಾವೆ ಬರುತ್ತಾರೆ. ೧೯ ವ.—ಆಧೀನನಾಗಿದ್ದೇನಲ್ಲ?) ದೇವರೇ ನ್ಯಾಯಾಧೀಶನು. ನಾನು ಆತನಿಗೆ ಅಂಜಿ ನಡೆಯುವವನು. ಆದ ಮೂಲ ನಾನು ಮನಸಿಗೆ ಬಂದಂತೆ, ಶಿಟ್ಟು ತೀರಿಸುವವನಲ್ಲ.—ಮತ್ತೊಂದು ಭಾಷಾಂತರ ಆಗುವದುಂಟು. ಅದೇನಂದರೆ: ನಾನು ದೇವರ ಸ್ಥಳದಲ್ಲಿರುತ್ತೇನೆ?) ನ್ಯಾಯ ತೀರಿಸಿ ಶಿಕ್ಷೆ ಮಾಡುವದು ನನ್ನದಲ್ಲ. ದೇವರದು. ಆತನು ತಕ್ಕ ಕಾಲದಲ್ಲಿ ಕ್ಷಮಿಸ ಬಲ್ಲನು, ಶಿಕ್ಷಿಸ ಬಲ್ಲನು. ನನ್ನ ದೆಶೆಯಿಂದ ನೀವು ಭಯಗೊಳ್ಳ ಬೇಡ! ನಾನು ನಿಮಗೆ ಎಲ್ಲಾ ದುಷ್ಕೃತ್ಯ ಕ್ಷಮಿಸಿ ಬಿಟ್ಟೆನು. ಅದಂತು ನಿಶ್ಚಯವೇ ಸರಿ. ನಿಮ್ಮ ಪಾಪದಿಂದ ಇನ್ನು ಕೇಡಾದೀತೆಂಬ ಅನುಮಾನ ನಿಮ್ಮಲ್ಲಿ ಇದ್ದರೆ, ನೀವು ದೇವರಿಗೆ ಹೇಳಿ ಕೊಂಡು, ಆತನು ಎಲ್ಲಾ ಕ್ಷಮಿಸುವ ಹಾಗೆ ಮಾಡಿರಿ! ಆತನು ಕ್ಷಮಿಸಿದ ಮೇಲೆ, ತೀರಿತು. ನಿಮಗೆ ನಷ್ಟ ಬರುವ ಹಾಗಿಲ್ಲ. ೨೦ ವ. ಆದರೆ ದೇವರು, ಇಂದಿಗೆ ಆದ ಹಾಗೆ ಬಹು ಜನರನ್ನ ಮುಂ.) ಸರ್ವತ್ರಾಣವುಳ್ಳಂಥಾ ಎಲ್ಲಾ ಹೊಂದಿಕೆ ಮಾಡುವ ಜ್ಞಾನವುಳ್ಳಂಥಾ ದೇವರು ಮನುಷ್ಯರ ದುಷ್ಕೃತ್ಯಗಳಾದರೂ ಒಳ್ಳೇದಕ್ಕೆ ಸಾಹಿತ್ಯವಾಗುವ ಹಾಗೆ, ಮಾಡ ಬಲ್ಲನು. ದೇವರು ತಮ್ಮನ್ನು ನೇಮಿಸಿಟ್ಟಿರುವ ಚಕ್ರದೊಳಗೆ ಮನುಷ್ಯರು ಒಳ್ಳೇದನ್ನು ಅಥವಾ ಕೆಟ್ಟದ್ದನ್ನು ಮಾಡ ಸ್ವತಂತ್ರರು. ಕಟ್ಟಿದ ಸರ್ಪಳಿ ಇದ್ದಷ್ಟು, ಬೇಕಾದ ಹಾಗೆ, ತಿರುಗ ಬಹುದು. ಆದರೆ ಅವರು ಆ ಚಕ್ರದ ಮೇರೆಯನ್ನು ಮಿಾರಲಿಕ್ಕೆ ಕೂಡದು. ದೇವರು ಅವರಿಗಿನ್ನು ಸ್ವತಂತ್ರನಾಗಿರುವ ಮೂಲದಿಂದ, ಅವರ ಕೃತ್ಯಗಳನ್ನ, ಕೆಟ್ಟವಾದರೂ, ತನ್ನ ರಾಜ್ಯಕ್ಕೆ ಹಿತವಾಗ ಮಾಡುವದು ಆತನಿಗೆ ಅಶಕ್ಯವಲ್ಲ. ೨೧ ವ.—ಸಂತೈಸಿ ಅವರ ಕೂಡ ಮನೋರಂಜನವಾದ ಸಂಭಾಷಣೆ ಮಾಡಿದನು.

bb) ಯೋಸೇಫನ ಆಯುಸ್ಸೂ ವಂಶವೂ. ೨೨. ೨೩.

೨೩ ವ.—ಮರಿಮಕ್ಕಳನ್ನು ಕಂಡನು. ಮನಾಸ್ಸೆಯ ಮಗನಾದ ಮಕೀರನ ಮಕ್ಕಳು ಯೋಸೇಫನ ಮೊಣಕಾಲಿನ ಮೇಲೆ ಹುಟ್ಟಿದರು.) ಯೋಸೇಫನು ಮಕೀರನ ಮಕ್ಕಳನ್ನ (ಹುಟ್ಟಿದ ಮೇಲೆ) ಉಡಲಲ್ಲಿ ಹಾಕಿ ಕೊಂಡನು. ಇದಕ್ಕೆ ಕಂಡನೆಂಬರ್ಥ.

cc) ಯೋಸೇಫನ ಮರಣ. ೨೪—೨೬.

ಯೋಸೇಫನು ಮಿಜ್ರದಲ್ಲಿ ಪ್ರಧಾನಿಯಾದಾಗ್ಯೂ, ದೇವರ ವಾಗ್ದತ್ತವನ್ನು ಮರೆಯಲಿಲ್ಲ. ಅವನ ಮನಸ್ಸು ವಾಗ್ದತ್ತದೇಶದ ಕಡೆಗೆ ಇತ್ತು. ೨೬ ವ.—ಅವರು ಅವನನ್ನು ಸುಗಂಧಿತ ಮಾಡಿ ಮಿಜ್ರದಲ್ಲಿ ಪೆಟ್ಟಿಗೆಯೊಳಗೆ ಇಟ್ಟರು.) ಇಂಥಾ ಪೆಟ್ಟಿಗೆಗಳನ್ನ ಮನುಷ್ಯಾಕಾರಕ್ಕೆ ಸರಿಯಾಗಿ ಮಾಡುತ್ತಿದ್ದರು (ಯೆಹೊಶು. ೨೪, ೩೨).

ಉತ್ಪತ್ತಿಗ್ರಂಥವ್ಯಾಖ್ಯಾನಸಮಾಪ್ತಿಃ

ಮೋಶೆಯ ಎರಡನೆ ಗ್ರಂಥ.

(ಪ್ರಯಾಣ, ಹೊರಡೋಣ.)

ನಾಲ್ಕನೆ ಖಂಡ.

ಇಸ್ರಯೇಲನವರು ಮಿಚ್ರದ ಪ್ರವಾಸದಲ್ಲಿಯೂ ಮೋಶೆಯ ಆಳ್ಕೆಯಲ್ಲಿಯೂ ಕಳದ ಕಾಲದ ಚರಿತ್ರವು.

ಹೊರಡೋಣ ೧ ಸಂಧಿ — ದ್ವಿತೀಯನ್ಯಾಯ ೩೪ ಸಂಧಿ.

ಲೋಕನಿರ್ಮಾಣದ ಇತ್ತಣ ವರ್ಷ ೨೩೬೯ — ೨೫೩೩.

ಕ್ರಿಸ್ತನ ಅತ್ತಣ ವರ್ಷ ೧೬೩೧ — ೧೪೪೭.

ಟಿಪ್ಪಣಿ: ಈ ಖಂಡದ ಚರಿತ್ರವು ಮೋಶೆ ಇಸ್ರಯೇಲನವರ ಶಿಪ್ಪಲಿನ ವೇಳೆಯಲ್ಲಿ ಹುಟ್ಟಿದಂದಿನಿಂದ ತೊಡಗಿ, ಮೋಶೆ ಸತ್ತಂದು ಮುಗಿಯುವದು.

ಹೊರಡೋಣವೆಂಬ ಹೆಸರಿನಿಂದಲೇ ಈ ಗ್ರಂಥದ ಮುಖ್ಯ ವೃತ್ತಾಂತ ಸೂಚಿತವಾಗಿದೆ. ಇಪ್ಪತ್ತು ಲಕ್ಷಕ್ಕೆ ಹೆಚ್ಚಾದ ಪ್ರಾಣಿಗಳ ಜನಾಂಗವಾಗಿ ಬೆಳದ ಅಬ್ರಹಾಮನ ಬೀಜವು ಮಿಚ್ರ ದೇಶವನ್ನು ಬಿಟ್ಟು ಹೊರಟದ್ದು ಎಂಬ ಮುಖ್ಯ ಕಾರ್ಯವು ೧೩ — ೧೮ ಸಂಧಿಗಳಲ್ಲಿ, ಪ್ರಯಾಣಕ್ಕೆ ಅತ್ತಣ ಕಾರ್ಯಗಳು ೧ — ೧೨ ಸಂಧಿಗಳಲ್ಲಿ, ಪ್ರಯಾಣದ ಇತ್ತಣ ನೇಮಧಾನವೂ ತದನಂತರ ಸಾಕ್ಷಿಗುಡಾರ ಕಟ್ಟುವನಕ ನಡೆದ ಕಾರ್ಯಗಳೂ ೧೯ — ೪೦ ಸಂಧಿಗಳಲ್ಲಿ ಬರದವೆ. ಹೀಗಿರಲಾಗಿ ಎರಡನೆ ಗ್ರಂಥಕ್ಕೆ ಮೂರು ಭಾಗಗಳವೆ: ೧, ಪ್ರಯಾಣಕ್ಕೆ ಅತ್ತಣ ಚರಿತ್ರವು. ೨, ಪ್ರಯಾಣದ ಚರಿತ್ರವು. ೩, ನೇಮಧಾನವೂ ಸಾಕ್ಷಿಗುಡಾರ ಕಟ್ಟುವ ಮಟ್ಟಿಗೂ ನಡೆದ ಜನಾಂಗದ ಚರಿತ್ರವೂ.

ಯಾಕೋಬನು ಮಿಚ್ರಕ್ಕೆ ಬಂದು ವಸ್ತಿಯಾದಂದಿನಿಂದ (ಉತ್ಪ. ೪೭, ೯) ಅವನ ಪ್ರಜೆ ಆ ದೇಶವನ್ನು ಬಿಟ್ಟು ಹೊರಟಂದಿಗೆ (ಹೊರ. ೧೩ ಸ. ಮುಂ.) ೨೧೫ ವರ್ಷ ಕಳದು ಹೋಯಿತು. (ಗಲ. ಪತ್ರಿಕೆಯಲ್ಲಿ ಬರದಿರುವ ೪೩೦ ವರ್ಷ, ಮತ್ತು ಅಪೊ. ಕ್ರಿ. ೭, ೬ರಲ್ಲಿ ಬರದಿರುವ ೪೦೦ ವರ್ಷ) ಅಬ್ರಹಾಮನು ಮೆಸೊಪೊತಾಮ್ಯವೆಂಬ ಇಪ್ರೋಳೆ ಶೀಮೆಯಿಂದ ಹೊರಟಂದಿನಿಂದ ಎಣಿಕೆಯಾಗಿದೆ. ಮೋಶೆಯ ೧ನೆ ಗ್ರಂಥದ ತುದಿಯಲ್ಲಿ ಇಸ್ರಯೇಲನ ಮಕ್ಕಳು ಮಿಚ್ರ ದೇಶದಲ್ಲಿ ವಾಸಿಸಿದ ಕಾಲದ ಚರಿತ್ರದ ಆರಂಭವು, ೨ನೆ ಗ್ರಂಥದ ಬುಡದಲ್ಲಿ ಅದರ ಅಂತ್ಯವು ಬರದದೆ. ದೇವರು ಮೋಶೆಯನ್ನು ಕರೆದಂದಿನಿಂದ ನಡೆದ ಸಂಗತಿಗಳು ವಿಶೇಷ ವಿವರವಾಗಿ ತಿಳಿಸಲಾಗುತ್ತವೆ. ಯೋಸೆಫನು ಸತ್ತಂದಿನಿಂದ ಮೋಶೆ ಹುಟ್ಟಿ

ದಂದಿನ ವರೆಗೆ ಕಳದ ೬೪ ವರ್ಷದ ಕಥೆಯನ್ನು ಹಿಡಿಯುವ ಒಂದನೆ ಸಂಧಿಯಿಂದ ಕಡೆ ಸಂಧಿಗೆ ೧೪೫ ವರ್ಷದ ಚರಿತ್ರವು ಶೇರಿಯದೆ.

೨ನೆ ಗ್ರಂಥಕ್ಕೂ ೧ನೆ ಗ್ರಂಥಕ್ಕೂ ಇರುವ ಪರಸ್ಪರ ಸಂಬಂಧವೇನಂದರೆ: ಅಬ್ರಹಾಮ ಇಸಾಕ ಯಾಕೋಬರ ವಂಶವು ಮಿಗೆ ಹೆಚ್ಚಿ, ಮಿಸ್ರ ದೇಶದಲ್ಲಿ ಕೈಯಾಳುತನಕ್ಕೊಳಗಾಗಿ (ಉತ್ಪ. ೧೫, ೧೩. ೧೪.) ಬಳಿಕ ಬೆಳದು ಬೆಳದು ಬಲಗೊಂಡು, ಕೈಯಾಳುತನದ ದೇಶದಿಂದ ಅಚ್ಚರಿಯಾದ ರೀತಿಯಿಂದ ಬಿಡುಗಡೆಯಾಗುವದೆಂಬ ವಾಗ್ದತ್ತಗಳು ೧ನೆ ಗ್ರಂಥದಲ್ಲಿ ಹೇಳಿ ಆದ ಮೇಲೆ, ಆ ವಾಗ್ದತ್ತಗಳ ಪೂರ್ಣತೆಯನ್ನೂ, ಅಬ್ರಹಾಮನ ಬೀಜವು ಕಾನಾನ ದೇಶವನ್ನು ಬಾಧ್ಯವಾಗಿ ಹೊಂದುವರೆಂಬ ವಾಗ್ದತ್ತದ ಪೂರ್ಣತೆಯ ಜೋಡಣೆಯನ್ನೂ ೨ನೆ ಗ್ರಂಥವು ಬಣ್ಣಿಸುತ್ತದೆ. ಕಾನಾನ ದೇಶದ ಪಯಣದಲ್ಲಿ ಅರಣ್ಯವಾಸ ಮಾಡಿದ ಕಾಲದಲ್ಲಿ ಇಸ್ರಯೇಲನ ಜನಾಂಗಕ್ಕೆ ಸಂಭವಿಸಿದ ಸಂಗತಿಗಳು ದಿವ್ಯ ಕಾನಾನಕ್ಕೆ ಪಯಣ ಮಾಡುತ್ತಿರುವ ದೇವರ ಮಕ್ಕಳಿಗೆ ಇಹದಲ್ಲಿ ಆಗುವ ಸುಖ ದುಃಖಗಳಿಗೆ ಪ್ರವಾಚನವಾದ ಚೆಲೋ ಮುಂಗುರ್ತುಗಳಾಗಿವೆ.

ಇದಲ್ಲದೆ ಯೆಹೋವನಿಗೂ ಆಯಿಕೆಯಾದ ವಂಶದ ಹಿರಿಯರಾದ ಚಕ್ತ್ರಿಗೂ ಇದ್ದ ಎದುರೆದುರು ಹೊಕ್ಕುಬಳಿಕೆಯ ಧರ್ಮವಾದ ಮೂಲಪಿತೃಗಳ ವಾಗ್ದತ್ತಧರ್ಮವು ಒಂದು ತರದ್ದಾಗಿತ್ತು; ಈ ಗ್ರಂಥದಲ್ಲಿ ಬರದಿರುವ ಮೋಶೆಯ ಮುಖಾಂತರವಾದ ನೇಮಧಾನದಲ್ಲಿ ಕಾಣ ಬರುವ ದೇವರಾಜ್ಯಪದ್ಧತಿಯು ಬೇರೆ ತರದ್ದು. ಯೆಹೋವನು ನಿರ್ಣೈಸಿದ ಪೂರ್ವ ದಿವ್ಯ ಗೃಹನೇಮವೆಂಬ ಧರ್ಮವು ಮೂಲಪಿತೃಗಳ ಮುಖಾಂತರ ಆಯಿಕೆಯ ವಂಶದ ಕುಟುಂಬಗಳಿಗೆ ತಿಳಿಯ ಬಂದಂತೆ, ನಡುವಣ ಕಟ್ಟೆಂದು ಶೇರಿದ ಈ ನೂತನ ದಿವ್ಯಗೃಹನೇಮವು ಮತ್ತೆ ಬಂತು. ಅಬ್ರಹಾಮಾದಿ ಮೂಲಪಿತೃಗಳ ಬೀಜವಾದ ಜನಾಂಗಕ್ಕೆ ನಾಯಕನೂ ಅಧಿಪತಿಯೂ ಆದ ಮೋಶೆಯ ಮುಖಾಂತರ ಅದೇ ಯೆಹೋವನ ಅಪ್ಪಣೆಯಿಂದ ಈ ಧರ್ಮವು ಹ್ಯಾಗೆ ಪ್ರಕಟವಾಯಿತು ಎಂಬುವದು ಈ ಗ್ರಂಥದಲ್ಲಿ ಉಂಟು. ಆದರೆ ನೇಮಧಾನದಲ್ಲಿ ಸಹ ಸ್ತ್ರೀಬೀಜವೆಂಬ ವಾಗ್ದತ್ತ ರಕ್ಷಕನ ನೆನಪು ಮರೆತು ಬಿಟ್ಟಿರುವದಿಲ್ಲ. ಹ್ಯಾಗಂದರೆ ದೇವಾರಾಧನೆಯ ಆಚಾರಗಳಲ್ಲಿಯೂ ರಾಜ್ಯಧರ್ಮಪದ್ಧತಿಗಳಲ್ಲಿಯೂ ಹೊಸ ಒಡಂಬಡಿಕೆಯಲ್ಲಿ ಪ್ರಕಟವಾಗ ತಕ್ಕ ಉತ್ತಮ ರಕ್ಷಣಾಗೃಹನೇಮವೂ ರಕ್ಷಣಾಕರ್ತನ ಭಾವವೂ ನಾನಾ ವಿಧದಿಂದ ಬಿಂಬವಾಗಿ ಸೂಚಿತವಾಗಿವೆ. ಕಣ್ಣಿಗೆ ಕಾಣುವದನ್ನೇ ನೋಡುವ ಹೆಡ್ಡರು ಗುಟ್ಟು ತಿಳಿಯದೆ ಹೋಗುತ್ತಿದ್ದರೂ, ಜಾಣರು ಜಾಡೆಯಾಗಿ ಸೂಚಿತವಾದ ಅಭಿಪ್ರಾಯ ಗ್ರಹಿಸಿ ಕೊಳ್ಳುತ್ತಾ ಇದ್ದರು. ಹೊಸ ಹಾದಿ ಕಟ್ಟುವದಕ್ಕೆ ಅಳವುಳ್ಳ ಮೋಶೆ ಎಂಬ ಈ ಮಗನನ್ನು ಸಹ ದೇವರು ಮಿಸ್ರದಿಂದಲೇ ಕರೆದನು. ಉತ್ತಮನಾದ ಈ ದೇವಕಿಂಕರನ ಸುಖ ದುಃಖ ಸಂಗತಿಗಳೂ ದೇವರಾಜ್ಯ ಜನಾಂಗದ ಚರಿತ್ರವೂ ೧೨೦ ವರ್ಷ ಪರಿಯಂತ ಹುರಿ ಹೊಸೆದ ಎರಡು ನೂಲಂತೆ ಕೂಡಿ ಕೊಂಡಿರುತ್ತವೆ.

ಮಿಸ್ರ ದೇಶದಲ್ಲಿ ಹೇರಳವಾಗಿ ಬೆಳದ ಇಸ್ರಯೇಲನ ಮಕ್ಕಳು ತಿಪ್ಪಲು ಪಟ್ಟದ್ದು. ಸಂಧಿ ೧.

ವ. ೧—೫. ಒಂದನೆ ಗ್ರಂಥದ ಚರಿತ್ರದ ನೂಲಿಗೆ ಗಂಟಿಡುವಂತೆ ಯಾಕೋಬನ ೧೨ ಪುತ್ರರ ಹೆಸರುಗಳೂ ಅವನ ಕೂಡ ಮಿಸ್ರಕ್ಕೆ ಹೋದ ಪ್ರಾಣಗಳ ಲೆಖ್ಖವೂ ಉತ್ಪ. ೪೬, ೮. ಇ. ಬರದ ಹಾಗೆ ಈ ಗ್ರಂಥದ ಆರಂಭದಲ್ಲಿ ಮರಳಿ ಬರದವೆ.

ಹೊರಡೋಣ. ೧, ೬—೧೪.

ಜನಾಂಗದ ಹೆಚ್ಚಿಗೆ.

ವ. ೬. ಯೋಸೆಫನೂ ಅವನ ಸಹೋದರರೆಲ್ಲರೂ ಆ ಸಮಸ್ತ ಸಂತತಿಯವರೂ ಸತ್ತರು. ೭. ಆದರೆ ಇಸ್ರಯೇಲನ ಮಕ್ಕಳು ಅತ್ಯಧಿಕವಾಗಿ ಅಭಿವೃದ್ಧಿಯಾಗಿ, ವಿಸ್ತರಿಸಲ್ಪಟ್ಟು, ಹೆಚ್ಚಿ,೧) ಬಲಗೊಂಡರು. ದೇಶವು ಅವರಿಂದ ತುಂಬಿತು.

೧. ದೇವರ ವಾಗ್ದತ್ತದ ಪ್ರಕಾರ ಹೀಗೆ ಆಯಿತು. (ಉತ್ಪ. ೧೫, ೫. ೩೫, ೧೧.) ಹೆಚ್ಚು ಕಡಿಮೆ ಇನ್ನೂರು ವರ್ಷದೊಳಗೆ ಮೂರು ಮಂದಿಯಾದ ಶ್ರೇಷ್ಠ ಮೂಲಪಿತೃಗಳ ವಂಶವು ೭೦ ಪ್ರಾಣಗಳಾಯಿತು. ಮತ್ತೂ ಇನ್ನೂರು ವರ್ಷದೊಳಗೆ ಈ ೭೦ ಪ್ರಾಣಗಳು ಬಲವಾದ ದೊಡ್ಡ ಜನಾಂಗವಾದವು.

ಹೊಸ ಅರಸನ ಅಂಜಿಕೆ. ತಿಪ್ಪಲುಪಾಟಿನ ಆರಂಭ.

ವ. ೮. ಆಗ ಯೋಸೆಫನನ್ನು ಅರಿಯದ೧) ಹೊಸ ಅರಸನು ಮಿಚ್ರದಲ್ಲಿ ಎದ್ದನು. ೯. ಅವನು ತನ್ನ ಜನರಿಗೆ ಹೇಳಿದ್ದೇನಂದರೆ—ಇಗೋ, ಇಸ್ರಯೇಲನ ಮಕ್ಕಳ ಜನರು ನಮಗಿಂತ ಹೇರಳರೂ ಬಲವುಳ್ಳವರೂ೨) ಆಗಿದ್ಧಾರೆ. ಬನ್ನಿ; ೧೦. ಅವರು ಹೆಚ್ಚದ ಹಾಗೆಯೂ, ನಮಗೆ ಯುದ್ಧ ಉಂಟಾದರೆ ನಮ್ಮ ಶತ್ರುಗಳ ಸಂಗಡ ಕೂಡಿ ಕೊಂಡು ನಮಗೆ ವಿರೋಧವಾಗಿ ಯುದ್ಧ ಮಾಡಿ ದೇಶವನ್ನು ಬಿಟ್ಟು ಹೋಗದ ಹಾಗೆಯೂ೩), ಅವರಿಗೆ ಯುಕ್ತಿಯುಳ್ಳವರಾಗಿರೋಣ. ೧೧. ಆಗ ಅವರನ್ನು ತಮ್ಮ ಬಿಟ್ಟಿಗಳಿಂದ ಶ್ರಮ ಪಡಿಸುವ ಹಾಗೆ ಬಿಟ್ಟಿ ಮಾಡಿಸುವ ಮುಖ್ಯಸ್ಥರನ್ನು ಅವರ ಮೇಲೆ ಇಟ್ಟರು. ಅವರು ಫರೋನನಿಗೆ ಪೀತೋಮ್, ರಾಮೆಸೆಸ್ ಎಂಬ ಉಗ್ರಾಣ ಪಟ್ಣಗಳನ್ನು೪) ಕಟ್ಟಿದರು. ೧೨. ಆದರೆ ಇವರು ಅವರನ್ನು ಎಷ್ಟು ಶ್ರಮೆ ಪಡಿಸಿದರೋ, ಅಷ್ಟಧಿಕವಾಗಿ ಅವರು ಹೆಚ್ಚಿ, ವಿಸ್ತಾರವಾದರು. ಮಿಚ್ರದವರು ಇಸ್ರಯೇಲನ ಮಕ್ಕಳಿಗೆ ಅಸಹ್ಯ ಪಟ್ಟರು೫). ೧೩. ಹೀಗಿರುವದರಿಂದ ಮಿಚ್ರದವರು ಇಸ್ರಯೇಲನ ಮಕ್ಕಳಿಂದ ಕಠಿಣವಾಗಿ ಸೇವೆ ಮಾಡಿಸಿ, ೧೪. ಜೇಡಿ ಮಣ್ಣಿನಲ್ಲಿಯೂ, ಇಟ್ಟಿಗೆಗಳಲ್ಲಿಯೂ, ಹೊಲದ ಎಲ್ಲಾ ಬೇಸಾಯದಲ್ಲಿಯೂ ಕಠಿಣವಾದ ಸೇವೆ ಮಾಡಿಸಿ, ಅವರ ಜೀವವನ್ನು ಬೇಸರ ಪಡಿಸಿದರು. ಅವರು ಅವರಿಂದ ಮಾಡಿಸಿದ ಎಲ್ಲಾ ಸೇವೆಯೂ ಕಠಿಣವಾಗಿತ್ತು೬).

೧. "ಅರಿಯದ" ಯೋಸೆಫನು ಮಿಚ್ರಕ್ಕೆ ಮಾಡಿದ ಮೇಲು ಅಸಡ್ಡೆ ಮಾಡುವ ಬೇರೆ ಕುಲದ ಅರಸನು. ಮುಂಚೆ ಮಿಚ್ರವನ್ನಾಳಿದ ಹಿಕ್ಸೋಸ್ ಎಂಬ ಅರಸರು ಶೇಮನ ಜಾತಿಯವರಾಗಿದ್ದು, ಯಾಕೋಬನ ಕುಟುಂಬಕ್ಕೆ ನೆಂಟರಿಗೆಂದು ದಯಾಳುಗಳಾಗಿದ್ದರೆಂತಲೂ, ಬಳಿಕ ಮಿಚ್ರದವರಾದ ಹಳೆ ಅರಸುಗಳ ವಂಶದವರು ತಿರಿಗಿ ಬಲಗೊಂಡು, ಪರಸಂಸ್ಥಾನದವರನ್ನು ಜೈಸಿದರೆಂತಲೂ, ನೆನಸುವದು ಸರಿಯಾಗಿ ತೋರುವದು.

೨. "ಬಲವುಳ್ಳವರು" ಘಟ್ಟಿ ಮೈಯುಳ್ಳವರು.

೩. ಮೂಲಗ್ರಂಥದಲ್ಲಿ "ಏರಿ ಹೋಗದ ಹಾಗೆ" ಎಂದು ಬರದದೆ. ವಾಗ್ದತ್ತದೇಶಕ್ಕೆ ಹೋಗುವ ಬಯಕೆ ಆ ಕಾಲದ ವರೆಗೆ ಇಸ್ರಯೇಲನವರಲ್ಲಿ ಮರತು ಹೋಗಿದ್ದಿಲ್ಲ. ಅದು ಮಿಚ್ರದವರಿಗೂ ಗೊತ್ತಾಗಿತ್ತು.

೧೭೮ ಹೊಸ ಫರೋನನ ಕ್ರೂರ ಕಟ್ಟಳೆ. ಇಸ್ರಯೇಲನವರ ಹೆಚ್ಚಿಕೆಯು.

ಹೊರಡೋಣ. ೧, ೧೫—೨೨.

ಅರಸನು ಇಸ್ರುಯೇಲನ ಜನಾಂಗವನ್ನು ತನ್ನ ದೇಶದಿಂದ ಹೊರಡಿಸಲೊಲ್ಲದೆ, ಅವರ ಬಲವನ್ನು ಕುಂದಿಸ ಬೇಕೆಂದು ಆಲೋಚಿಸಿದನಷ್ಟೆ.

೪. ಉಗ್ರಾಣಗಳೂ ಬೊಕ್ಕಸಗಳೂ ಇರ ತಕ್ಕ, ಮೇಲೆ ಬರದ, ದೊಡ್ಡ ದೊಡ್ಡ ಗಡಿಕೋಟೆಗಳು, ಕಾಲಿವೆಗಳು, ಶಿಲಾಮಂದಿರಗಳು ಮುಂತಾದದ್ದನ್ನು ಕಟ್ಟಿಸುವದರಲ್ಲಿ ಇಸ್ರುಯೇಲನ ಜನಾಂಗವನ್ನು ಬಿಟ್ಟಿಕೆಲಸದಿಂದ ಕುಗ್ಗಿಸಿ, ಕೈಸೂರೆ ಮಾಡಿ ಕೊಳ್ಳಲಿಕ್ಕೆ ಅನುವು ಕಂಡನು.

೫. ಮೂಲಗ್ರಂಥದಲ್ಲಿ "ಅವರಿಗೆ ಅಳೆರಿದರು" ಎಂದು ಬರದದೆ. ಏನಂದರೆ ಅವರ ಹೆಚ್ಚಿಕೆಗೂ ಬಲಕ್ಕೂ ಹೆದರುತ್ತಿದ್ದರು.

೬. ಆರಂಭಕ್ಕೆ ಬೇಕಾದ ಅಸೆ ಹಾಕೋಣದರಲ್ಲಿಯೂ ಮಹಾ ಮಂದಿರಗಳನ್ನು ಕಟ್ಟುವದಕ್ಕೆ ಬೇಕಾದ ಇಟ್ಟಿಗೆ ಮಾಡೋಣದರಲ್ಲಿಯೂ ಬೇರೆ ಕೈಕೆಲಸಗಳಲ್ಲಿಯೂ ಬೇಸರಗೊಳ್ಳುತ್ತಿದ್ದರು.

ಹೊಸ ಫರೋನನ ಕ್ರೂರ ಕಟ್ಟಳೆ. ಇಸ್ರಯೇಲನವರ ಎಡೆಬಿಡದ ಹೆಚ್ಚಿಕೆಯು. ವ. ೧೫—೨೨.

ವ. ೧೫. ಇದಲ್ಲದೆ ಮಿಚ್ರದ ಅರಸನು ಶಿಪ್ರಳು ಪೂವಳು ಎಂಬ ಹೆಸರುಳ್ಳ ಇಬ್ರಿಯ ಸೂಲಗಿತ್ತಿಯರ[1] ಸಂಗಡ ಮಾತಾಡಿದನು. ೧೬. ಅವನು ಹೇಳಿದ್ದೇನಂದರೆ—ನೀವು ಇಬ್ರಿಯ ಹೆಂಗಸರಿಗೆ ಸಹಾಯ ಮಾಡಿ, ಜನ್ಮಪೀಠದಲ್ಲಿ ಅವರನ್ನು ಪರಾಮರಿಸುವಾಗ, ಗಂಡು ಮಗುವಾದರೆ, ಅವನನ್ನು ಕೊಂದು ಹಾಕಿರಿ; ಹೆಣ್ಣಾದರೆ, ಬದುಕಲಿ[2]. ೧೭. ಆದರೆ ಸೂಲಗಿತ್ತಿಯರು ದೇವರಿಗೆ ಭಯ ಪಟ್ಟು, ಮಿಚ್ರದ ಅರಸನು ತಮಗೆ ಹೇಳಿದ ಹಾಗೆ ಮಾಡದೆ, ಗಂಡು ಮಕ್ಕಳನ್ನು ಬದುಕಿಸಿದರು[3]. ೧೮. ಆಗ ಮಿಚ್ರದ ಅರಸನು ಸೂಲಗಿತ್ತಿಯರನ್ನು ಕರಿಸಿ, ಯಾಕೆ ಇಂಥಾ ಕೆಲಸ ಮಾಡಿ ಗಂಡು ಮಕ್ಕಳನ್ನು ಬದುಕಿಸುತ್ತೀರಿ? ಅಂದನು. ೧೯. ಸೂಲಗಿತ್ತಿಯರು ಫರೋನನಿಗೆ—ಇಬ್ರಿಯರ ಹೆಂಗಸರು ಮಿಚ್ರದವರ ಹೆಂಗಸರ ಹಾಗಲ್ಲ, ಅವರು ಚುರುಕಾಗಿದ್ದಾರೆ; ಸೂಲಗಿತ್ತಿ ಅವರ ಹತ್ತರ ಬರುವದಕ್ಕಿಂತ ಮುಂಚೆ ಹೆರುತ್ತಾರೆ, ಅಂದರು. ೨೦. ಆಗ ದೇವರು ಸೂಲಗಿತ್ತಿಯರಿಗೆ ಒಳ್ಳೇದನ್ನು ಮಾಡಿದನು[4]. ಇದಲ್ಲದೆ ಪ್ರಜೆಯು ಹೆಚ್ಚಿ, ಬಹು ಬಲಗೊಂಡರು. ೨೧. ಸೂಲಗಿತ್ತಿಯರು ದೇವರಿಗೆ ಭಯ ಪಟ್ಟದರಿಂದ ಅವನವರಿಗೆ[5] ಮನೆಗಳನ್ನು ಉಂಟು ಮಾಡಿದನು. ೨೨. ಆದರೆ ಫರೋನನು ತನ್ನ ಜನರಿಗೆಲ್ಲಾ[6]—ಹುಟ್ಟುವ ಗಂಡು ಮಕ್ಕಳನ್ನೆಲ್ಲಾ ನದಿಯಲ್ಲಿ ಹಾಕಬೇಕು, ಹೆಣ್ಣು ಮಕ್ಕಳನ್ನೆಲ್ಲಾ ಬದುಕಿಸ ಬೇಕು ಎಂದು ಅಪ್ಪಣೆ ಕೊಟ್ಟನು.

೧. ಹೆಚ್ಚು ಸೂಲಗಿತ್ತಿಯರು ಇಸ್ರುಯೇಲನವರಲ್ಲಿ ಇದ್ದಿರುವರು. ಆದರೆ ಅರಸನು ಹೆಸರ್ಗೊಂಡ ಹಿರಿಯರಾದ ಇವರಿಬ್ಬರನ್ನೇ ತನ್ನ ಬಳಿಗೆ ಕರಿಸಿದನು. ಇವರಿಬ್ಬರ ಮಾತು ಕೇಳಿ, ಉಳಿದವರೆಲ್ಲರು ಫರೋನನ ಅಪ್ಪಣೆ ಕೈಕೊಳ್ಳ ಬೇಕಾಗಿತ್ತು.

೨. ಫರೋನನು ತಕ್ಕ ವೇಳೆಗಾದರೂ ತನ್ನ ಕ್ರೂರ ಕಟ್ಟಳೆ ನಡಿಸಿ, ಇಸ್ರುಯೇಲರ ಜನಾಂಗವನ್ನು ಅಳಿಸದೆ ಅಣಗಿಸ ಬೇಕೆಂದಿದ್ದನಷ್ಟೆ. ಹೆಣ್ಣು ಮಕ್ಕಳನ್ನು ಗೌಡಿಗಳಾಗಿ ಮಾರುವ, ಇಲ್ಲವೆ ಮಿಚ್ರದವರಿಗೆ ಮದುವೆ ಮಾಡಿ ಕೊಡುವ ಆಲೋಚನೆಯಿಂದ ಇದ್ದನೆಂದು ಕಾಣುತ್ತದೆ.

ಹೊರಡೋಣ. ೨, ೧—೯.

೩. ಮನುಷ್ಯರ ಮಾತಿಗಿಂತ ದೇವರ ಮಾತು ಕೇಳುವದು ಲೇಸು.

೪. "ಒಳ್ಳೇದನ್ನು ಮಾಡಿದನು." ಸೂಲಗಿತ್ತಿಯರು ಅರಸನಿಗೆ ಹೆದರಿ, ದೇವರಿಗೆ ಎಂದೂ ಸರಿಬೀಳದ ಸುಳ್ಳು ನೆವನ ಹೇಳಿದರೂ, ಆತನವರ ಭಕ್ತಿಗೆ ಮೆಚ್ಚಿ, ಮೇಲು ಮಾಡಿದನು. ಅಪೊಸ್ತಲರು (ಅಪೊ. ಕ್ರಿ. ೫, ೨೯. ೪, ೧೯.) ಬೇರೆ ರೀತಿಯಿಂದ ನಡಕೊಂಡರು. ಆದರೆ ಸದ್ಭಕ್ತರ ನಡತೆಯಲ್ಲಿ ತಪ್ಪು ಕಂಡರೂ, ದೇವರು ಅವರನ್ನು ಆಶೀರ್ವದಿಸದೆ ಇರನು.

೫. "ಮನೆಗಳನ್ನು ಉಂಟು ಮಾಡಿದನು" ಅಂದರೆ ವಂಶಾಭಿವೃದ್ಧಿ ಮಾಡಿದನು. ಇದರ ಕಾರಣವೇನಂದರೆ: ದೇವರಿಗೆ ಫರೋನನಿಗಿಂತ ಹೆಚ್ಚು ಭಯಪಟ್ಟು, ಕ್ರೂರ ಅಪ್ಪಣೆ ಕೈಕೊಳ್ಳದೆ ಹೋದ ಸೂಲಗಿತ್ತಿಯರ ಭಕ್ತಿ.

೬. ಫರೋನನು ಸೂಲಗಿತ್ತಿಗಳ ಮುಖದಿಂದ ತನ್ನ ಬಗೆ ಕೈಗೂಡಿಸುವ ಮೊದಲಿನ ಯುಕ್ತಿ ತಪ್ಪಿದ ಬಳಿಕ, ತನ್ನ ಆಲೋಚನೆ ಪ್ರಕಟ ಮಾಡುತ್ತಾನೆ. ಅವನ ಕ್ರೂರತನವು ತಗ್ಗದೆ ಹೆಚ್ಚುವದು. ಆದಾಗ್ಯೂ ಗಂಡು ಮಕ್ಕಳನ್ನೆಲ್ಲಾ ಕೊಲ್ಲ ಬೇಕೆಂಬ ಕಟ್ಟಳೆ ಘಟ್ಟಿಯಾಗಿ ನಡೆಯದೆ, ಇಲ್ಲವೆ ಸ್ವಲ್ಪ ಕಾಲದ ಮೇಲೆ ನಿಂತು ಹೋಯಿತೆಂಬದಕ್ಕೆ ೮೦ ವರ್ಷ ಕಳೆದ ಬಳಿಕ ಯುದ್ಧಸ್ಥರಾದ ಅಷ್ಟು ಮಂದಿ ಇಸ್ರಯೇಲನ ಜನಾಂಗದಲ್ಲಿ ಉಳಿದು ಮೋಶೆಯ ಸಂಗಡ ಮಿಶ್ರದಿಂದ ಹೊರಟು ಹೋದದ್ದು ಸಾಕ್ಷಿ.

ಮೋಶೆ ಹುಟ್ಟಿ, ಬೆಳೆದು, ಮಿಶ್ರದಿಂದ ಓಡಿ ಹೋಗಿ, ಮದುವೆಯಾದದ್ದು. ಸಂಧಿ ೨.

೧. ಆಗ ಲೇವಿಯ ಮನೆಯವನಾದ ಒಬ್ಬ ಮನುಷ್ಯನು[೧] ಹೋಗಿ ಲೇವಿಯ ಮಗಳನ್ನು ತಕ್ಕೊಂಡನು. ೨. ಆ ಸ್ತ್ರೀಯು ಗರ್ಭ ಧರಿಸಿ ಮಗನನ್ನು ಹೆತ್ತು, ಅವನು ಚೆಲ್ವಿಕೆಯುಳ್ಳವನೆಂದು ನೋಡಿ, ಮೂರು ತಿಂಗಳು ಬಚ್ಚಿಟ್ಟಳು[೨]. ೩. ಅವನನ್ನು ಇನ್ನು ಬಚ್ಚಿಡಲಾರದೆ ಇದ್ದಾಗ, ಅವನಿಗೆ ಆಪಿನ ಪೆಟ್ಟಿಗೆಯನ್ನು[೩] ತಕ್ಕೊಂಡು, ಜೇಡಿ ಮಣ್ಣಾನ್ನೂ ರಾಳವನ್ನೂ[೪] ಹಚ್ಚಿ, ಕೂಸನ್ನು ಅದರಲ್ಲಿ ಇಟ್ಟು, ನದಿಯ ಅಂಚಿನಲ್ಲಿ ಇರುವ ಹುಲ್ಲಿನಲ್ಲಿ ಮಡಗಿದಳು. ೪. ಮತ್ತು ಅದಕ್ಕೆ ಏನಾಗುವದೆಂದು ತಿಳುಕೊಳ್ಳಲಿಕ್ಕೆ, ದೂರದಲ್ಲಿ ಅದರ ಅಕ್ಕ ನಿಂತು ಕೊಂಡಳು. ೫. ಆಗ ಫರೋನನ ಮಗಳು[೫] ನದಿಯಲ್ಲಿ ಮಿಯ್ಯುವದಕ್ಕೆ ಇಳಿದು ಬಂದಳು. ಅವಳ ತೊತ್ತಿಯರು ನದಿಯ ಧಡದಲ್ಲಿ ನಡೆಯುತ್ತಿದ್ದರು. ಅವಳು ಪೆಟ್ಟಿಗೆಯನ್ನು ಹುಲ್ಲಿನ ನಡುವೆಯಲ್ಲಿ ನೋಡಿ, ತನ್ನ ತೊತ್ತು ಕಳುಹಿಸಿ ತೆಗಿಸಿದಳು. ೬. ಅದನ್ನು ತೆರೆಯಲಾಗಿ ಆ ಕೂಸನ್ನು ಕಂಡಾಗ, ಅಗೋ, ಅಳುವ ಮಗನು. ಆಗಲವನ ಮೇಲೆ ಕರುಣಾವಿಟ್ಟು, ಇದು ಇಬ್ರಿಯರ ಕೂಸುಗಳಲ್ಲಿ ಒಂದೋ ಏನೋ[೬] ಅಂದಳು. ೭. ಆಗಲದರ ಅಕ್ಕ ಫರೋನನ ಮಗಳಿಗೆ, ನಾನು ಹೋಗಿ, ಈ ಕೂಸಿಗೆ ನಿನಗಾಗಿ ಮೊಲೆ ಕೊಡುವದಕ್ಕೆ ಇಬ್ರಿಯರ ಹೆಂಗಸರಲ್ಲಿ[೭] ಮೊಲೆ ಕೊಡುವವಳನ್ನು ನಿನಗೆ ಕರಕೊಂಡು ಬರಲೋ? ಅಂದಳು. ೮. ಫರೋನನ ಮಗಳು ಅವಳಿಗೆ, ಹೋಗು, ಅಂದಾಗ, ಹುಡುಗಿ ಹೋಗಿ, ಕೂಸಿನ ತಾಯನ್ನು ಕರೆದಳು. ೯. ಫರೋನನ ಮಗಳು ಅವಳಿಗೆ—ಈ ಕೂಸು ತ

ಕ್ಕೊಂಡು ಹೋಗಿ ನನಗಾಗಿ ಸಾಕು! ನಾನು ನಿನ್ನ ಸಂಬಳ ಕೊಡುತ್ತೇನೆ, ಅಂದಳು. ಆಗಲಾ ಹೆಂಗಸು ಆ ಕೂಸು ತಕ್ಕೊಂಡು ಸಾಕಿದಳು೮). ೧೦. ಮತ್ತು ಕೂಸು ದೊಡ್ಡದಾದ೯) ಮೇಲೆ, ಅವನನ್ನು ಫರೋನನ ಮಗಳಿಗೆ ಕೊಂಡು ಹೋದಳು. ಅವನ ವಳಿಗೆ ಮಗನಾದನು. ನೀರೊಳಗಿಂದ ಅವನನ್ನು ಎಳೆದೆನೆಂದು ಹೇಳಿ, ಅವನಿಗೆ ಮೋಶೆ೧೦) ಎಂಬ ಹೆಸರಿಟ್ಟಳು.

೧. ಅವನ ಹೆಸರು ಅಮ್ರಮನು. ಮೋಶೆ ಲೇವಿಯ ಮರಿಮಗನಾಗಿ ಲೇವಿ ಗೋತ್ರದ ನಾಲ್ಕನೆ ತಲಾಂತರದವನಾದದ್ದು ಉತ್ಪ. ೧೫, ೬ನೆ ವಚನದ ಅಭಿಪ್ರಾಯಕ್ಕೆ ಸರಿ ಬೀಳುವದು. ಅಮ್ರಮನ ಹೆಂಡತಿಯಾದ ಯೊಕೆಬೆದಳು ಸಹ ಲೇವಿ ಗೋತ್ರದವಳಾಗಿದ್ದಳು. ಸ. ೬, ೨೦.

೨. ವಿಶ್ವಾಸಧೈರ್ಯದಿಂದ ಹೀಗೆ ಮಾಡಿದರೆಂದು, ಇಬ್ರಿ. ೧೧, ೨೩ರಲ್ಲಿ ಬರೆದದೆ. ಅಪೊ. ಕ್ರಿ. ೭, ೨೦ ಸಹ ನೋಡ ಬೇಕು. ಮೋಶೆಯ ತಂದೆ ತಾಯಿಗಳು ಉತ್ಪ. ೧೫, ೧೬ರಲ್ಲಿ ಬರೆದ ವಾಗ್ದತ್ತವನ್ನು ನಂಬಿ, ಬಿಡುಗಡೆಯ ಕಾಲವು ಹತ್ತರ ಬರುತ್ತದೆಂದು, ತಿಳುಕೊಂಡರು.

೩. ಪಪಿರೆಂಬ ಗಿಡದ ತೊಬಟೆಯಿಂದ ಒಂದು ಪೆಟ್ಟಿಗೆ ಮಾಡಿದರು.

೪. ಜೇಡಿ ಮಣ್ಣಿನಿಂದ ಪೆಟ್ಟಿಗೆಯ ಒಳಗಡೆ ನುಣುಪಾಯಿತು, ಹೊರಗಡೆಯಲ್ಲಿ ಹಚ್ಚಿದ ರಾಳದಿಂದ ಅದು ಸೋರದ ಹಾಗೆ ಬಿಗಿಯಾಯಿತು.

೫. ಅವಳಿಗೆ ಥೆರ್ಮೂತಿಸ್ ಎಂಬ ಹೆಸರು ಇತ್ತೆಂದು ಚರಿತ್ರಕರ್ತನಾದ ಯೋಸೆಫನು ಬರೆದಿದ್ದಾನೆ. "ಇಳಿದು ಬಂದಳು" ದೇವರು ಕಳುಹಿಸಿದವಳಂತೆ ತಕ್ಕ ವೇಳೆಗೆ ಬಂದಳು. ಮೋಶೆ ಉಳಿಸಿ ಕೊಂಡು, ಮಿಚ್ರದ ಜ್ಞಾನ ವಿದ್ಯೆಗಳನ್ನೆಲ್ಲಾ ಕಲಿತು, ರಾಜಪುತ್ರನೋಪಾದಿಯಿಂದ ಕಂದಾಚಾರವನ್ನು ನೆರೆಬಲ್ಲಿದವನಾಗ ಬೇಕೆಂಬ ಆಲೋಚನೆಯನ್ನು ದೇವರು ಅವಳ ಮುಖದಿಂದ ನೆರವೇರಿಸಿದನು.

೬. ಯಾರೊಬ್ಬರು, ಮಗುವನ್ನು, ಕೊಲೆಗೆ ತಪ್ಪಿಸ ಬೇಕೆಂದು, ಇಲ್ಲಿ ಇಟ್ಟು ಬಿಟ್ಟರೆಂದು, ಆ ಪೆಟ್ಟಿಗೆ ಕಂಡ ಕೂಡಲೇ ಊಹಿಸಿ ಕೊಂಡಳು.

೭. ಮಿಚ್ರದವಳಾದ ತಾಯಿ ಮಗುವನ್ನು ಅಕ್ಕರೆಯಿಂದ ಸಾಕದೆ ಇದ್ದಾಳೆಂತಲೂ, ಒಂದು ವೇಳೆ ಗುಟ್ಟು ಸಾರಿ ದ್ರೋಹ ಮಾಡ್ಯಾಳೆಂತಲೂ, ಮೋಸಕ್ಕೆ ಅಂಜಿದಳು.

೮. ಇಸ್ರಯೇಲಿನವರಲ್ಲಿ ಕೂಸು ಮೊಲೆ ಬಿಡಿಸುವ ವಾಡಿಕೆಯಾದ ಮೂರನೆ ವರ್ಷದ ವರೆಗೆ ದೇವರು ಮೋಶೆಯನ್ನು ಹೆತ್ತ ತಾಯಿಗೆ ತಿರಿಗಿ ಕೊಡಿಸಿದನು. ದೇವರನ್ನು ನಂಬಿ ಮಗುವನ್ನು ಉಳಿಸ ಮುಂಗೊಂಡದರಿಂದ ತಾಯಿಗೆ ಈ ಫಲ ಬಂತು.

೯. ಅಂದರೆ—ಮೊಲೆ ಬಿಟ್ಟಾಗ.

೧೦. ಅಂದರೆ — ನೀರಿನಿಂದ ಎಳೆಯಲ್ಪಟ್ಟವನು.

ಅವನು ಶಿಟ್ಟಿನಿಂದ ಅನ್ಯಾಯಿಯನ್ನು ಹೊಡೆದು ಓಡಿ ಹೋದದ್ದು. ವ. ೧೧ — ೧೫.

ವ. ೧೧. ಆ ದಿನಗಳಲ್ಲಿ ಆದದ್ದೇನಂದರೆ—ಮೋಶೆ ದೊಡ್ಡವನಾದ ಮೇಲೆ೧) ತನ್ನ ಸಹೋದರರ ಬಳಿಗೆ ಹೊರಟು, ಅವರ ಬಿಟ್ಟಿಗಳನ್ನು ನೋಡಲು, ಮಿಚ್ರದವನಾದ ಒಬ್ಬನು ತನ್ನ ಸಹೋದರರಲ್ಲಿ ಒಬ್ಬನಾದ ಇಬ್ರಿಯನನ್ನು ಹೊಡೆಯುವದನ್ನು೨) ನೋಡಿದನು. ೧೨. ಈಚೆ ಆಚೆ ದೃಷ್ಟಿಸಿ ಯಾರೂ ಇಲ್ಲವೆಂದು ನೋಡಲು, ಆ ಮಿಚ್ರದವನನ್ನು ಹೊಡೆದು, ಮರಳಿನಲ್ಲಿ ಹುಗಿದನು. ೧೩. ಮರು ದಿವಸದಲ್ಲಿ ಹೊರ

ಟಾಗಲು, ಇಗೋ, ಇಬ್ರಿಯರಾದ ಇಬ್ಬರು ಜನರು ಜಗಳವಾಡಿದರು. ಅವನು
ಕೆಡಕನಿಗೆ, ಯಾಕೆ ನಿನ್ನ ನೆರೆಯವನನ್ನು ಹೊಡಿಯುತ್ತೀ? ಎಂದು ಹೇಳಲು, ೧೪. ಅ
ವನು, ನಿನ್ನನ್ನು ನಮ್ಮ ಮೇಲೆ ಮುಖ್ಯಸ್ಥನಾಗಿಯೂ ನ್ಯಾಯಾಧಿಪತಿಯಾಗಿಯೂ
ಇಟ್ಟವನ್ಯಾರು? ಆ ಮಿಚ್ರದವನನ್ನು ಕೊಂದ ಹಾಗೆ ನನ್ನನ್ನು ಕೊಲ್ಲ ಬೇಕೆಂದಿದ್ಧೀ
ಯೋ? ಎಂದು ಹೇಳಲು, ಮೋಶೆ ಹಾಗಾದರೆ ಈ ಮಾತು ಗೊತ್ತಾಯಿತೆಂದು,
ಹೇಳಿ, ಭಯ ಪಟ್ಟನು. ೧೫. ಫರೋನನು ಆ ಮಾತು ಕೇಳಲಾಗಿ, ಮೋಶೆಯನ್ನು
ಕೊಲ್ಲಲರಸಿದನು. ಆಗ ಮೋಶೆ ಫರೋನನೆದುರಿನಿಂದ ಓಡಿ ಹೋಗಿ, ಮಿದ್ಯಾನ[೩]
ದೇಶದಲ್ಲಿ ಉಳುಕೊಂಡು, ಒಂದು ಭಾವಿಯ[೪] ಬಳಿಯಲ್ಲಿ ಕೂತು ಕೊಂಡನು.

೧. ೪೦ ವರ್ಷ ಪ್ರಾಯ ಬಂದಾಗ, ಮೋಶೆಯು ಇಸ್ರಯೇಲನವರಿಗೆ ಸಿಕ್ಕಿದ ವಾಗ್ದತ್ತಗಳನ್ನು ನೆನಪು ಮಾಡಿ, ತಾನೇ ಅವನ್ನ ಈಡೇರಿಸ ಬೇಕೆಂಬ ಬಯಕೆಯಿಂದ ಮೈ ತುಂಬಿದವನಾಗಿ, ಮಿಚ್ರದ ಅರಮನೆಯ ಭೋಗಾದಿಗಳನ್ನು ಬಿಟ್ಟು, ಸ್ವಜಾತಿಯವರಲ್ಲಿ ಶೇರಿ, ಅವರನ್ನು ಬಿಡುಗಡೆ ಮಾಡಿ ರಕ್ಷಿಸ ಮುಂಗೊಂಡನು. ಜನಾಂಗ ರಕ್ಷಣೋದ್ಯೋಗಕ್ಕೆ ಬೇಕಾದ ರಾಜ್ಯವಿದ್ಯೆಗಳನ್ನು ಕಲಿತು ಕೊಳ್ಳಲಿಕ್ಕೆ ಫರೋನನ ಅರಮನೆಯು ಅವನಿಗೆ ಉತ್ತಮ ಪ್ರಪಂಚ ವಿದ್ಯಾಶಾಲೆಯಾಗಿತ್ತು. ಇದರಲ್ಲಿ ಅಭ್ಯಾಸ ಮಾಡಿದನಂತರ ಮಿದ್ಯಾನದಲ್ಲಿ ದಿವ್ಯ ವಿದ್ಯಾಶಾಲೆಗೆ ಬಂದು, ವಿಶ್ವಾಸ ಜ್ಞಾನ ಭಕ್ತಿ ಮುಂತಾದ ಆತ್ಮಭಾವದ ಪಾಠಗಳನ್ನು ಸಾಧಿಸೋಣವಾಯಿತು.

೨. ಇಬ್ರಿಯದಲ್ಲಿ, ಇಲ್ಲಿ ಪ್ರಯೋಗವಾದ ಹೊಡೆಯೋಣವೆಂಬ ಶಬ್ದಕ್ಕೂ ೧೨ರಲ್ಲಿ ಪ್ರಯೋಗವಾದ ಹೊಡೆಯೋಣವೆಂಬ ಶಬ್ದಕ್ಕೂ ಒಂದೇ ಶಬ್ದ ಬರೆದದೆ. ಆ ದೇಶದವರಲ್ಲಿ ನಡವಡಿಯಾದಂಥಾ ನೆಂಟರವನನ್ನು ಕೊಂದವನನ್ನು ನೆಂಟರವನೊಬ್ಬನು ಕೊಂದು ಹಾಕುವ ಕಟ್ಟಳೆಯನ್ನು ಮೋಶೆ ಕೈಕೊಂಡವನಾಗಿದ್ದರೂ, ಅವನು ಮಾಡಿದ್ದು ದೇವವಾಕ್ಯಪ್ರಮಾಣಕ್ಕೆ ಸರಿಯಾಗಿದ್ದಿಲ್ಲ. “ಮುಯ್ಯಿಗೆ ಮುಯ್ಯಿ ಕೊಡುವದೂ ಪ್ರತಿಫಲ ಕೊಡುವದೂ ನನ್ನದು” ಎಂದು (ದ್ವಿತಿ. ೩೨, ೩೫.) ಹೇಳಿದ ದೇವರು ಮಾಡ ತಕ್ಕ ಕೆಲಸಕ್ಕೆ ಮೋಶೆ ಕೈ ಹಾಕಿದನು. ಆದದರಿಂದ ಅವನ ಸ್ವಭಾವಿಕ ಗುಣವನ್ನು ತಿದ್ದುವ ಶಿಕ್ಷೆ ಬರ ಬೇಕಾಗಿತ್ತು. ದೇವರು ತಾನು ಆದುಕೊಂಡ ಉತ್ತಮ ಸೇವಕರಲ್ಲಿ ಹಲಬರನ್ನು ಮೋಶೆಯೋಪಾದಿಯಿಂದಲೇ ಅವರವರಿಗೆ ನೇಮಕವಾದ ಉದ್ಯೋಗಕ್ಕೆ ಯುಕ್ತವಾದ ಸಿದ್ಧಿ ಹೊಂದಿಸಿದನು. ಹ್ಯಾಗಂದರೆ, ಅವರು ಮಾಡಿದ ತಪ್ಪುಗಳಿಂದ ತಮ್ಮನ್ನು ತಾವೇ ತಿಳುಕೊಂಡು, ತಾವು ಪಾಪಿಗಳೆಂದನುಭವಿಸಿ ಕೊಂಡ ದುಃಖದಿಂದ ಮಹಾ ಪ್ರಕಟಣೆಗಳನ್ನು ಹೊಂದುವ ಯೋಗ್ಯತೆಯು ಪಡಕೊಂಡವರಾಗಿ, ಮುಂಚೆ ಮಾಂಸಭಾವದ ಗಂಡಗಾಯಿತನದಿಂದ ದೇವರ ಚಿತ್ತಕ್ಕೆ ಒಪ್ಪುದಂದದಲ್ಲಿ ನಡಿಸ ಮುಂಕೊಂಡ ಕಾರ್ಯಗಳನ್ನು, ಬಳಿಕ ದೇವರ ಕೃಪೆಯ ಶಿಕ್ಷೆಯಿಂದ ತಾವು ಅಯೋಗ್ಯರಾದ ಪಾಪಿಗಳೆಂಬ ತಿಳಿವಿಕೆಯನ್ನು ಹೊಂದಿದ ಮೇಲೆ, ದೇವರಿಗೆ ಅನುಕೂಲವಾಗಿಯೂ ಹುಟ್ಟಿದ ಸ್ವಭಾವಕ್ಕೆ ಅನನುಕೂಲವಾಗಿಯೂ, ತೀರಿಸ ಬಲ್ಲವರಾದರು.

೩. ಮಿದ್ಯಾನವು ಸೀನಾಯಿ ಬೆಟ್ಟದ ಅರ್ಧದ್ವೀಪದ ನಾಡು. ಅದು ಬೆಟ್ಟದ ಮೂಡಣ ಕಡೆಯ ಅಕಬಾ ಎಂಬ ಕೊಲ್ಲಿಯ ಹತ್ತರವದೆ. ಮಿದ್ಯಾನದವರು ಅಬ್ರಹಾಮನ ಹೆಂಡತಿಯಾದ ಕೆಟೂರಳ ವಂಶದವರಾಗಿದ್ದು (ಉತ್ಪ. ೨೫, ೨.) ಸತ್ಯ ದೇವರನ್ನರಿತವರಾಗಿದ್ದರು.

೪. ಇಬ್ರಿಯದಲ್ಲಿ “ಆ ಭಾವಿ” ಎಂದು ಬರೆದದೆ. ಆ ದೇಶದಲ್ಲಿ ಬಹಳ ಭಾವಿಗಳು ಇರಲಿಲ್ಲವಾದ್ದರಿಂದ, ಇದ್ದ ಭಾವಿಗಳು ಅಲ್ಲಿಯ ಜನರಿಗೆಲ್ಲಾ ನೆರೆಗೊತ್ತಾದ್ದರಿಂದ, ಮೋಶೆ ಉಳು ಕೊಂಡ ಭಾವಿಗೆ ಬೇರೆ ಹೆಸರಿಲ್ಲ; ಭಾವಿ ಎಂದು ಬರೆದದೆ ಅಷ್ಟೆ.

೧೮೨ ಮೋಶೆಯ ಮದುವೆ. ಇಸ್ರಯೇಲನ ಮಕ್ಕಳು ಮಿಚ್ರದಲ್ಲಿ ಪಟ್ಟ ಕಾಟ.

ಹೊರಡೋಣ. ೨, ೧೬—೨೫.

ಮೋಶೆಯ ಮದುವೆ. ಇಸ್ರಯೇಲನ ಮಕ್ಕಳು ಮಿಜ್ರದಲ್ಲಿ ಪಟ್ಟ ಕಾಟ. ವ. ೧೬—೨೫.

ವ. ೧೬. ಇದಲ್ಲದೆ ಮಿದ್ಯಾನದ ಯಾಜಕನಿಗೆ ಏಳು ಮಂದಿ ಹೆಣ್ಣು ಮಕ್ಕಳಿದ್ದರು. ಇವರು ತಮ್ಮ ತಂದೆಯ ಕುರಿಗಳನ್ನು ಕುಡಿಸುವದಕ್ಕಾಗಿ ನೀರು ಶೇದಿ, ದೋಣಿಗಳನ್ನು ತುಂಬಿಸಲು, ೧೭. ಕುರುಬರು[1]) ಬಂದು, ಅವರನ್ನು ಓಡಿಸುವಾಗ, ಮೋಶೆ ಎದ್ದು, ಅವರನ್ನು ರಕ್ಷಿಸಿ, ಅವರ ಕುರಿಗಳನ್ನು ಕುಡಿಸಿದನು. ೧೮. ಅವರು ತಮ್ಮ ತಂದೆಯಾದ ರೆಗುವೇಲನ[2]) ಬಳಿಗೆ ಬಂದಾಗ, ಯಾಕೆ ಇಂದು ಬೇಗ ಬಂದಿರಿ? ಅಂದನು. ೧೯. ಅವರು ಮಿಚ್ರದವನಾದ ಮನುಷ್ಯನು ಕುರುಬರ ಕೈಗೆ ನಮ್ಮನ್ನು ತಪ್ಪಿಸಿದ್ದಲ್ಲದೆ ನಮಗೆ ಶೇದೆ ಶೇದಿ, ಕುರಿಗಳನ್ನು ಕುಡಿಸಿದನು, ಅಂದರು. ೨೦. ಅವನು ತನ್ನ ಹೆಣ್ಣು ಮಕ್ಕಳಿಗೆ—ಅವನು ಎಲ್ಲಿ? ಯಾಕೆ ಆ ಮನುಷ್ಯನನ್ನು ಬಿಟ್ಟು ಬಂದಿರಿ? ಅವನನ್ನು ಕರೆಯಿರಿ; ಅವನು ರೊಟ್ಟಿ ತಿನ್ನಲಿ, ಅಂದನು. ೨೧. ಮೋಶೆ ಆ ಮನುಷ್ಯನ ಕೂಡಾ ವಾಸ ಮಾಡುವದಕ್ಕೆ ಒಪ್ಪಿ ಕೊಂಡನು. ಅವನು ಮೋಶೆಗೆ ತನ್ನ ಮಗಳಾದ ಚಿಪ್ಪೋರಳನ್ನು ಕೊಟ್ಟನು. ೨೨. ಅವಳು ಮಗನನ್ನು ಹೆರಲು, ಅವನು ಪರದೇಶದಲ್ಲಿ ಅನ್ಯನಾಗಿದ್ಧೇನೆಂದು ಹೇಳಿ, ಅವನಿಗೆ ಗೆರ್ಷೋಮೆಂದು[3]) ಹೆಸರಿಟ್ಟನು. ೨೩. ಈ ಮೇರೆಗೆ ಬಹಳ ದಿನಗಳು ಕಳದ ಬಳಿಕ ಮಿಚ್ರದ[4]) ಅರಸನು ಸತ್ತನು. ಇಸ್ರಯೇಲನ ಮಕ್ಕಳು ತಮ್ಮ ಸೇವೆಯ ನಿಮಿತ್ತ ನಿಟ್ಟುಸುರಿಟ್ಟು ಕೂಗುತ್ತಿರಲಾಗಿ[5]), ಸೇವೆಯ ನಿಮಿತ್ತವಾದ ಅವರ ಕೂಗು ದೇವರ ಬಳಿಗೆ ಏರಿ ಬಂತು. ೨೪. ದೇವರು ಅವರ ಗೋಳಾಟವನ್ನು ಕೇಳಿದಾಗ, ದೇವರು ಅಬ್ರಹಾಮನ ಸಂಗಡಲೂ, ಇಸಾಕನ ಸಂಗಡಲೂ, ಯಾಕೋಬನ ಸಂಗಡಲೂ ಮಾಡಿದ ಒಡಂಬಡಿಕೆಯನ್ನು ನೆನಪು ಮಾಡಿ ಕೊಂಡನು[6]). ೨೫. ಮತ್ತು ದೇವರು ಇಸ್ರಯೇಲನ ಮಕ್ಕಳನ್ನು ನೋಡಲು, ದೇವರು ಪರಾಂಬರಿಸಿದನು[7]).

೧. ಈ ಕುರುಬರು ಪರಜನರಾಗಿದ್ದು, ತಮ್ಮ ಮಂದೆಗಳನ್ನು, ಕಾಯುವ ಹೆಣ್ಣುಗಳಿಗೆ ಭಯ ತೋರಿಸಲಾಗಿ ಮೋಶೆ ಅನ್ಯಾಯ ಪಡುವವರಿಗೆ ಸಹಾಯ ಮಾಡುವ ಸ್ವಭಾವಿಕ ಗುಣದ ಪ್ರಕಾರ, ಕೆಡಕರನ್ನು ಎದುರಿಸಿದನು.

೨. ರೆಗುವೇಲನು ಈ ಮಕ್ಕಳಿಗೆ ಅಜ್ಜನಾಗಿದ್ದನು. ಇಬ್ರಿಯರಲ್ಲಿ ತಂದೆಗೂ ತಂದೆಯ ತಂದೆಗೂ ತಂದೆ ಎಂದು ಹೆಸರು ಬರುತ್ತದೆ. (ಉತ್ಪ. ೨೮, ೧೩. ದೇವರು ಯಾಕೋಬನಿಗೆ "ನಾನು ನಿನ್ನ ತಂದೆಯಾದ ಅಬ್ರಹಾಮನ ದೇವರೂ ಇಸಾಕನ ದೇವರೂ ಆಗಿದ್ಧೇನೆ" ಎಂದು ಹೇಳುತ್ತಾನೆ.) ಸ. ೩, ೧. ಮೋಶೆಯ ಮಾವನಿಗೆ ಇತ್ರೋನನೆಂಬ ಹೆಸರಿಟ್ಟದೆ. ಇವನಿಗೆ ಅಂಕೆ. ೧೦, ೨೯ನೆ ವಚನದಲ್ಲಿ ಹೊಬಾಬನೆಂಬ ಹೆಸರು ಬರೆದದೆ. ಈ ಎರಡು ಹೆಸರಿಗೆ ಸರಿಯಾದ ಅಭಿಪ್ರಾಯವದೆ. ಏನಂದರೆ ಅದಕ್ಕೆ ಉತ್ತಮನು ಎಂದು, ಇದಕ್ಕೆ ಪ್ರಿಯನು ಎಂದು ಅರ್ಥವದೆ. ಮೋಶೆ ಮನೆಗೆ ಮೊದಲಾಗಿ ಬಂದ ವೇಳೆಯಲ್ಲಿ ಅಜ್ಜನಾದ ರೆಗುವೇಲನು ದೇವರ ಯಾಜಕನ ಉದ್ಯೋಗವನ್ನು ನಡಿಸುತ್ತಾ ಇದ್ದನೆಂದೂ, ಬಳಿಕ ತಂದೆ ಸತ್ತ ಮೇಲೆ ಮಗ

ನಾದ ಇತ್ರೋನನು ಅವನ ಸ್ಥಳದಲ್ಲಿ ಶೇರಿದನೆಂದೂ, ಊಹಿಸುವದು ಸಹಜವಾಗಿದೆ.

೩. "ಗೆರ್ಷೋಮ" ಅಂದರೆ—ಅಲ್ಲಿ ಪರದೇಶಸ್ಥನು. ೨೨ನೆ ವಚನದ ಮೇಲೆ ಗ್ರೀಕ ಭಾಷಾಂತರದಲ್ಲಿಯೂ ಹಳೆ ಲತೀನ ಭಾಷಾಂತರದಲ್ಲಿಯೂ ಇಬ್ರಿಯ ಗ್ರಂಥದ ಈ ಸ್ಥಳದಲ್ಲಿ ಕಾಣದಂಥ, ಸ. ೧೮, ೩. ೪ರಲ್ಲಿ ಬರದಿರುವಂಥ ಮಾತುಗಳು ಶೇರಿಯವೆ. ಅವು ಯಾವವಂದರೆ—"ಅವಳು ಇನ್ನೊಬ್ಬ ಮಗನನ್ನು ಹೆತ್ತಳು; ಅವನಿಗೆ, ನನ್ನ ತಂದೆಯ ದೇವರು ನನಗೆ ಸಹಾಯಕನಾಗಿದ್ದು, ಫರೋನನ ಕತ್ತಿಗೆ ನನ್ನನ್ನು ತಪ್ಪಿಸಿದನೆಂದು ಹೇಳಿ, ಎಲಿಯೇಜರನೆಂದು ಹೆಸರಿಟ್ಟನು." ಎರಡನೆಯವನಾದ ಈ ಮಗನು ಕೆಲವು ಕಾಲದ ಬಳಿಕ ಹುಟ್ಟಿದನು.

೪. ಮೋಶೆಯನ್ನು ಕೊಂದು ಹಾಕಲರಸಿದ ಅರಸನ ಮೇಲೆ ಬಂದವನು ಮೊದಲಿದ್ದವನಂತೆ ಇಸ್ರಯೇಲನವರನ್ನು ಹಗೆ ಮಾಡುತ್ತಿದ್ದನು.

೫. ಅರ್ಥವೇನಂದರೆ—ಕಾಟದ ವೇಳೆಯಲ್ಲಿ ಪ್ರಾರ್ಥನೆ ಮಾಡುವ ಬುದ್ಧಿ ಬಂತು. ಆ ಪ್ರಾರ್ಥನೆಯನ್ನು ದೇವರು ಆಲೈಸಿದನು.

೬. ಇಸ್ರಯೇಲನವರು ಶ್ರಮಾಕಾಲದಲ್ಲಿ ದೇವರನ್ನು ಮನಃಪೂರ್ವಕವಾಗಿ ಅರಸ ಕಲಿತು ಕೊಂಡ ಮೇಲೆ, ಯೆಹೋವನು ಒಡಂಬಡಿಕೆಯನ್ನು ಬಿಡದೆ ಕೈಕೊಳ್ಳುವ ದೇವರೆಂದು, ಅನುಭವದಿಂದ ತಿಳುಕೊಳ್ಳುವ ಅನುವು ಬಂತು.

೭. ದೇವರು ಅವರ ಕಾಟಗಳನ್ನು ನೋಡಿ, ತನ್ನ ಒಡಂಬಡಿಕೆಯಲ್ಲಿ ಶೇರಿದ ಜನಾಂಗವೆಂದು, ಅವರನ್ನು ಕನಿಕರಿಸಿದನು.

ಮೋಶೆ ಇಸ್ರಯೇಲನ ಜನಾಂಗವನ್ನು ರಕ್ಷಿಸುವ ಉದ್ಯೋಗವನ್ನು ಹೊಂದಿದ ಆರಂಭವು. ಸ. ೩—೪; ೧೩.

ಉರಿಯುವ ಪೊದೆಯು. ಸ. ೩, ೧—೧೦.

ವ. ೧. ಮತ್ತು ಮೋಶೆ ತನ್ನ ಮಾವನಾದ ಇತ್ರೋನನೆಂಬ ಮಿದ್ಯಾನದ ಯಾ
ಜಕನ ಮುಂದೆ ಮೇಯಿಸುತ್ತಿರಲಾಗಿ, ಮುಂದೆಯನ್ನು ಅರಣ್ಯದ ಹಿಂದುಗಡೆಗೆ[೧]
ನಡಿಸಿ ಕೊಂಡು ಹೋಗಿ, ಹೋರೆಬೆಂಬ[೨] ದೇವರ ಬೆಟ್ಟಕ್ಕೆ ಬಂದನು. ೨. ಆಗ ಯೆ
ಹೋವನ ದೂತನು[೩] ಪೊದೆಯ ನಡುವೆ ಉರಿಯುವ ಬೆಂಕಿಯಲ್ಲಿ ಅವನಿಗೆ ಕಾಣಿ
ಸಿ ಕೊಂಡನು. ಅವನು ನೋಡಲು, ಇಗೋ, ಪೊದೆಯು ಬೆಂಕಿಯಿಂದ ಉರಿಯು
ವದು; ಆದರೂ ಪೊದೆಯು ಸುಟ್ಟು ಹೋಗುವದಿಲ್ಲ[೪]; ೩. ಆಗ ಮೋಶೆ, ನಾನು
ಹೋಗಿ, ಈ ದೊಡ್ಡ ನೋಟ ನೋಡುತ್ತೇನೆ. ಯಾಕೆ ಈ ಪೊದೆ ಸುಟ್ಟು ಹೋಗು
ವದಿಲ್ಲ? ೪. ಅವನು ನೋಡುವದಕ್ಕೆ ಹತ್ತರ ಬರುತ್ತಾನೆಂದು, ಯೆಹೋವನು ನೋ
ಡಲು, ದೇವರು ಪೊದೆಯೊಳಗಿಂದ ಅವನಿಗೆ—ಮೋಶೆಯೇ, ಮೋಶೆಯೇ, ಎಂದು, ಕ
ರೆದನು. ಅವನು—ಇಗೋ, ಇಲ್ಲಿದ್ದೇನೆಂದು ಹೇಳಿದನು. ೫. ಆಗಲವನು—ಇಲ್ಲಿ
ಹತ್ತರ ಬರ ಬಾರದು. ನಿನ್ನ ಕಾಲುಗಳಿಂದ ನಿನ್ನ ಮೆಟ್ಟುಗಳನ್ನು ತೆಗದಿಡು. ನೀನು
ನಿಲ್ಲುವ ಸ್ಥಳವು ಪರಿಶುದ್ಧ ಭೂಮಿಯಾಗಿದೆ[೫] ಎಂದು, ಅವನಿಗೆ ಕೂಗಿ ಹೇಳಿದನು.
೬. ಮತ್ತು ಹೇಳಿದ್ದೇನಂದರೆ—ನಾನು ನಿನ್ನ ತಂದೆಯ[೬] ದೇವರು, ಅಬ್ರಹಾಮನ

ದೇವರೂ ಇಸಾಕನ ದೇವರೂ ಯಾಕೋಬನ ದೇವರೂ ಆಗಿದ್ಧೇನೆ. ಆಗ ಮೋಶೆ ಮೋರೆ ಮುಸುಕಿ ಕೊಂಡನು. ಯಾಕಂದರೆ, ದೇವರ ಮೇಲೆ ಕಣ್ಣಿಡುವದಕ್ಕೆ ಹೆದರಿದನು. ೭. ಆಗ ಯೆಹೋವನು—ಮಿಚ್ರದಲ್ಲಿಯಣ ನನ್ನ ಪ್ರಜೆಯ ಕಾಟವನ್ನು ಕಂಡೇ ಕಂಡಿದ್ಧೇನೆ. ತಿಪ್ಪಲು ಪಡಿಸುವವರ ನಿಮಿತ್ತವಾದ ಅವರ ಕೂಗನ್ನು ಕೇಳಿದ್ಧೇನೆ. ಯಾಕಂದರೆ ಅವರ ಬೇಸರವನ್ನು ಒಲ್ಲೆನು. ೮. ಅವರನ್ನು ಮಿಚ್ರದವರ ಕೈಗೆ ತಪ್ಪಿಸುವದಕ್ಕೆ ಇಳಿದು ಬಂದಿದ್ಧೇನೆ.—೧೦. ಈಗ ಹೋಗು! ಫರೋನನ ಬಳಿಗೆ ನಿನ್ನನ್ನು ಕಳುಹಿಸುತ್ತೇನೆ೭). ನನ್ನ ಪ್ರಜೆಯಾದ ಇಸ್ರಯೇಲನ ಮಕ್ಕಳನ್ನು ಮಿಚ್ರದಿಂದ ಹೊರ ಬರ ಮಾಡು.

೧. ಮಿದ್ಯಾನದ ಪಡುವಣ ಅರಣ್ಯದಲ್ಲಿ ಎರಡು ದಿನದ ಪಯಣದ ದೂರಕ್ಕೆ ಹೋದನು.

೨. ಹೋರೆಬ್ ಮತ್ತು ಸೀನಯಿ ಒಂದಕ್ಕೊಂದು ಹತ್ತುವ ಬೆಟ್ಟಗಳಾಗಿ ಅರಬಸ್ಥಾನದ ಪರ್ವತಗಳ ಸಾಲಿನಲ್ಲಿ ಶೇರಿಯುವೆ.

೩. ಈ ದೂತನಿಗೆ ೪ನೆ ವಚನದಲ್ಲಿ ಯೆಹೋವನೆಂಬ ಹೆಸರು ಬರುತ್ತದೆ. ಸಮ ನೋಡು ಉತ್ಪ. ೧೬, ೭. ದೇವರು ಮೋಶೆಗೆ ಕಾಣಿಸಿ ಕೊಂಡದ್ದು ಹ್ಯಾಗೆಂದರೆ: ಉರಿಯುವ ಬೆಂಕಿಯು ಹೊರ್ತಾಗಿ ಮೋಶೆ ಯಾವದೊಂದೂ ರೂಪವನ್ನು ನೋಡದೆ ಪೊದೆಯ ನಡುವೆಯಿಂದ ಬರುವಂಥಾದ್ದಾಗಿ ತೋರುವ ಶಬ್ದವನ್ನು ಕೇಳಿ, ದೇವರ ಅಪ್ಪಣೆಗಳನ್ನು ಆಲಿಸಿದನು.

೪. ಉರಿಯುತ್ತಾ ಇದ್ದರೂ ಸುಟ್ಟು ಹೋಗದ ಪೊದೆಯು, ಅಧಿಕಾಧಿಕವಾಗಿ ಬೇಸರಗೊಳ್ಳುತ್ತಾ ಇದ್ದರೂ ನಾಶವಾಗಲಾಗದಂಥ ದೇವರ ಜನಾಂಗಕ್ಕೂ ಇತ್ತಲಿನ ಕಾಲದ ಕ್ರೈಸ್ತ ಸಭೆಗೂ ಸಾಮ್ಯವಾಗಿದೆ.

೫ ಕರ್ತನು ಕಾಣಿಸಿ ಕೊಳ್ಳುವಲ್ಲಿ ಪರಿಶುದ್ಧ ಸ್ಥಳವದೆ. ಸ್ವಲ್ಪ ಕಾಲದ ಮೇಲೆ ಮಹಾ ಪ್ರಕಟಣೆಗಳು ದೇವರು ಮೊದಲಾಗಿ ಮೋಶೆಗೆ ಪ್ರತ್ಯಕ್ಷವಾದ ಈ ಸ್ಥಳದಲ್ಲಿಯೇ ಆಗಲಿಕ್ಕಿದ್ದವು. ಕರ್ತನ ಬಳಿಯಲ್ಲಿ ಮರ್ತ್ಯನು ದೀನಭಾವದ ಭಯಭಕ್ತಿಯಿಂದಲ್ಲದೆ ಶೇರ ಬಾರದು.

೬. ಅವನ ತಂದೆ ಅಬ್ರಹಾಮನೇ. ಮುಂದಣ ಮಾತುಗಳು ಈ ಹೆಸರಿನ ವಿವರಣೆಯೇ. ಬಹು ಕಾಲದಿಂದ ಯೆಹೋವನು ತಾನು ಮನುಷ್ಯರಿಗೆ ಕಾಣಿಸಿ ಕೊಳ್ಳುವ ಧರ್ಮ ನಿಂತು ಹೋಗಿತ್ತು. ಈಗ ದೇವರು, ಮೂಲಪಿತೃಗಳಿಗೆ ಕಾಣಿಸಿ ಕೊಳ್ಳುತ್ತಾ ಇದ್ದಂತೆ, ತನ್ನ ಜನಾಂಗವನ್ನು ರಕ್ಷಿಸುವ ಉದ್ಯೋಗಕ್ಕೆ ಆದು ಕೊಂಡ ಮೋಶೆಗೆ ಪ್ರತ್ಯಕ್ಷವಾಗಿ, ಅವನೊಡನೆ ಹೊಕ್ಕಬಳಿಕೆಯನ್ನು ನಡಿಸ ತೊಡಗುತ್ತಾನೆ.

೭. ಮೋಶೆ ದೇವರ ಪ್ರಕಟಣೆಗಳನ್ನೂ ಅಪ್ಪಣೆಗಳನ್ನೂ ಮನುಷ್ಯರಿಗೆ ಸಾರುವ ಉದ್ಯೋಗವನ್ನು ಹೊಂದಿದ ದೇವಕಿಂಕರರಲ್ಲಿ ಅಗ್ರನೂ ಅಗ್ರಗಣ್ಯನೂ ಆಗಿದ್ದು ಕ್ರಿಸ್ತನಿಗೆ ಮುಂಗುರ್ತಾಗಿದ್ದನು. ಇಲ್ಲಿ ಆದ ಕಾರ್ಯವು ಪ್ರವಾದನೋದ್ಯೋಗ ಪ್ರಸಂಗೋದ್ಯೋಗಗಳ ನಿರ್ಮಿಸೋಣವೆಂದು ಎಣಿಸ ತಕ್ಕದ್ದು.

ಮೋಶೆ ದೇವರ ಕರೆಯುವಿಕೆಗೆ ಒಲ್ಲೆನೆಂದು ಮೊದಲು ಹಿಮ್ಮೆಟ್ಟಿದ್ದು. ವ. ೧೧—೨೨.

ವ. ೧೧. ಆಗ ಮೋಶೆ ದೇವರಿಗೆ—ಫರೋನನ ಬಳಿಗೆ ಹೋಗುವ ಹಾಗೆಯೂ, ಇಸ್ರಯೇಲನ ಮಕ್ಕಳನ್ನು ಮಿಚ್ರದಿಂದ ಹೊರ ಬರ ಮಾಡುವ ಹಾಗೆಯೂ, ನಾನು ಯಾರು೧)? ಅಂದನು. ೧೨. ಆಗಲವನು—ನಿಶ್ಚಯವಾಗಿ ನಾನು ನಿನ್ನ ಸಂಗಡಲಿರು

ಹೊರಡೋಣ. ೩, ೧೧ — ೨೨.

ವೆನು; ಮತ್ತು ನಾನು ನಿನ್ನನ್ನು ಕಳುಹಿಸಿದೆನೆಂಬದಕ್ಕೆ ಗುರುತೇನಂದರೆ[೨]: ನೀನು
ಪ್ರಜೆಯನ್ನು ಮಿಚ್ರದಿಂದ ಹೊರ ಬರಿಸುವಲ್ಲಿ, ಈ ಬೆಟ್ಟದ ಮೇಲೆ ದೇವರನ್ನು ಸೇವಿ
ಸುವಿರಿ, ಅಂದನು. ೧೩. ಮೋಶೆ ದೇವರಿಗೆ ಹೇಳಿದ್ದೇನಂದರೆ—ಇಗೋ, ನಾನು ಇ
ಸ್ರಯೇಲನ ಮಕ್ಕಳ ಬಳಿಗೆ ಬಂದು, ನಿಮ್ಮ ಪಿತೃಗಳ ದೇವರು ನನ್ನನ್ನು ನಿಮ್ಮ ಬಳಿಗೆ
ಕಳುಹಿಸಿದ್ಧಾನೆಂದು ಹೇಳಲು, ಅವರು, ಅವನ ಹೆಸರೇನೆಂದು ಕೇಳಿದರೆ, ನಾನವರಿಗೇ
ನು ಹೇಳಲಿ? ೧೪. ಆಗ ದೇವರು ಮೋಶೆಗೆ, ಇರುವವನು ಆಗಿರುತ್ತೇನೆ[೩] ಎಂದು,
ಇರುವವನು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ಧಾನೆಂಬದಾಗಿ ಇಸ್ರಯೇಲನ ಮಕ್ಕಳಿ
ಗೆ ಹೇಳ ಬೇಕು, ಅಂದನು. ೧೫. ಮತ್ತು ದೇವರು ಮೋಶೆಗೆ ಹೇಳಿದ್ದೇನಂದರೆ—ಹೀ
ಗೆ ಇಸ್ರಯೇಲನ ಮಕ್ಕಳಿಗೆ ಹೇಳ ಬೇಕು: ನಿಮ್ಮ ಪಿತೃಗಳ ದೇವರೂ ಅಬ್ರಹಾಮನ
ದೇವರೂ ಇಸಾಕನ ದೇವರೂ ಯಾಕೋಬನ ದೇವರೂ ಆದ ಯೆಹೋವನು ನನ್ನ
ನ್ನು ನಿಮ್ಮ ಬಳಿಗೆ ಕಳುಹಿಸಿದ್ಧಾನೆ. ಇದು ಯುಗ ಯುಗಕ್ಕೂ ನನ್ನ ಹೆಸರು; ಇದು
ತಲತಲಾಂತರಕ್ಕೂ ನನ್ನ ಸ್ಮರಣೆ[೪]. ೧೬. ಹೋಗಿ ಇಸ್ರಯೇಲನವರ ಹಿರಿಯರನ್ನು
ಕೂಡಿಸಿ, ಅವರಿಗೆ ಹೇಳ ಬೇಕಾದದ್ದೇನಂದರೆ—ನಿಮ್ಮ ಪಿತೃಗಳ ದೇವರಾದ ಅಬ್ರಹಾ
ಮ ಇಸಾಕ ಯಾಕೋಬರ ದೇವರು ನನಗೆ ಕಾಣಿಸಿ ಕೊಂಡು, ನಿಮ್ಮನ್ನೂ ಮಿಚ್ರದಲ್ಲಿ
ನಿಮಗೆ ಆದದ್ದನ್ನೂ ಪರಾಮರಿಸೇ ಪರಾಮರಿಸಿದ್ಧೇನೆ. ೧೭. ಮತ್ತು ಮಿಚ್ರದ ಕಾಟ
ದಿಂದ ನಿಮ್ಮನ್ನು . . . . . ಹಾಲೂ ಜೇನೂ ಹರಿಯುವ ದೇಶಕ್ಕೆ ಏರಿ ಬರ ಮಾಡುತ್ತೇ
ನೆಂದು, ಹೇಳಿದ್ಧೇನೆ. ೧೮. ಅವರು ನಿನ್ನ ಮಾತು ಕೇಳುವರು[೫]. ಆಗ ನೀನೂ ಇಸ್ರಯೇ
ಲನವರ ಹಿರಿಯರೂ ಮಿಚ್ರದ ಅರಸನ ಬಳಿಗೆ ಹೋಗಿ, ಅವನಿಗೆ ಹೇಳ ಬೇಕಾದದ್ದೇ
ನಂದರೆ—ಇಬ್ರಿಯರ ದೇವರಾದ ಯೆಹೋವನು ನಮ್ಮೆದುರಿಗೆ ಬಂದದರಿಂದ[೬], ಈಗ
ನಾವು ಮೂರು ದಿನದ ಹಾದಿ ಅರಣ್ಯದಲ್ಲಿ ಹೋಗಿ, ನಮ್ಮ ದೇವರಾದ ಯೆಹೋವ
ನಿಗೆ ಬಲಿಯರ್ಪಿಸೋಣ[೭]. ೧೯. ಆದರೆ ಮಿಚ್ರದ ಅರಸನು ಘಟ್ಟಿಯಾದ ಕೈಯಿಂ
ದಲಾದರೂ[೮] ನಿಮ್ಮನ್ನು ಹೋಗಲೀಸನೆಂದು ನಾನು ಬಲ್ಲೆನು. ೨೦. ಆಗ ನನ್ನ ಕೈ
ನೀಡಿ, ನಾನು ಅದರೊಳು ಮಾಡುವ ನನ್ನ ಅದ್ಭುತಗಳಿಂದೆಲ್ಲಾ ಮಿಚ್ರವನ್ನು ಹೊಡಿ
ಯುವೆನು; ಆ ಮೇಲೆ ನಿಮ್ಮನ್ನು ಕಳುಹಿಸುವನು. ೨೧. ಮತ್ತು ಈ ಪ್ರಜೆಗೆ ಮಿಚ್ರ
ದವರ ದೃಷ್ಟಿಯಲ್ಲಿ ದಯೆಯನ್ನು ಕೊಡುವೆನು, ಆದ್ದರಿಂದ ಆಗುವದೇನಂದರೆ: ನೀ
ವು ಹೋಗುವಾಗ ಬರಿದಾಗಿ ಹೋಗದಿರುವಿರಿ. ೨೨. ಒಬ್ಬೊಬ್ಬ ಹೆಂಗಸು ತನ್ನ
ನೆರೆಯವಳಿಂದಲೂ ಮನೆಯಲ್ಲಿ ತಂಗುವವಳಿಂದಲೂ ಬೆಳ್ಳಿ ಭಂಗಾರದ ಒಡವೆಗಳನ್ನೂ
ಉಡಿಗೆಗಳನ್ನೂ ಕೇಳಿ ಕೊಳ್ಳ[೯] ಬೇಕು. ಅವನ್ನು ನಿಮ್ಮ ಗಂಡು ಮಕ್ಕಳ ಮೇಲೆಯೂ
ನಿಮ್ಮ ಹೆಣ್ಣು ಮಕ್ಕಳ ಮೇಲೆಯೂ ಇಟ್ಟು, ಮಿಚ್ರದವರನ್ನು ಕೊಳ್ಳೆ ಇಡ ಬೇಕು[೧೦].

೧೮೬. ಮೋಶೆ ದೇವರ ಕರೆಯುವಿಕೆಗೆ ಒಲ್ಲೆನೆಂದು ಮೊದಲು ಹಿಮ್ಮೆಟ್ಟಿದ್ದು.

ಹೊರಡೋಣ. ೩, ೧೧ — ೨೨.

೧. ಮೋಶೆ ಮುಂಚೆ ಸ್ವಂತ ಮನಸ್ಸಿನಿಂದ ತನ್ನ ಜನಾಂಗಕ್ಕೆ ರಕ್ಷಕನಾಗ ಬೇಕೆಂದು ಯತ್ನಿಸಿದಾಗ, ಅವನ ಆಲೋಚನೆ ವ್ಯರ್ಥವಾಯಿತು. ಆಗ ಸ್ವಾಭಾವಿಕ ಯೌವನ ಧೈರ್ಯದಿಂದ ಬಿಡುಗಡೆ ಮಾಡುವ ಮಹಾ ಕಾರ್ಯವನ್ನು ನಡಿಸಲಿಕ್ಕೆ ತಾನು ಸಾಕಾದವನೆಂದು ನೆನಸಿದನು. ಅಷ್ಟರೊಳಗೆ ಅನುಭವದಿಂದಲೂ ದೇವಾತ್ಮದಿಂದಲೂ ತನ್ನ ಅಯೋಗ್ಯತೆಯನ್ನು ತಿಳಕೊಂಡನು. ಆದರೆ ಇದೇ ದೇವರ ಸಮಯವಾಯಿತು. ತನ್ನ ಅಯೋಗ್ಯತೆ ತಿಳಿದ ಮೇಲೆ, ದೇವರ ಕಿಂಕರನಾಗಿ ದೇವರ ಕಾರ್ಯ ನಡಿಸಲಿಕ್ಕೆ ಯೋಗ್ಯನಾದನು.

೨. ಈ ಮಾತು ಸದ್ಯಕ್ಕೆ ದೇವರು ಮೋಶೆಗೆ ಕೊಟ್ಟ ಅಭಯದ ಹೊಣೆಯಾಗಿತ್ತು; ಆ ಬಳಿಕ ೪೦ ವರ್ಷ ವರೆಗೆ ಬಹಳ ಪ್ರಯಾಸವಾದ ಉದ್ಯೋಗದ ಭಾರವನ್ನು ಹೊತ್ತು ಕೊಳ್ಳುತ್ತಾ ಇರುವವನಿಗೆ ಮನಗುಂದದ ಹಾಗೆ ತ್ರಾಣವನ್ನೂ ಧೈರ್ಯವನ್ನೂ ಹುಟ್ಟಿಸ ತಕ್ಕ ನೆನವರಿಕೆಯ ಗುರ್ತಾಯಿತು.

೩. ಮೂಲಭಾಷೆಯಲ್ಲಿ: ಯಾವನು ಇರುತ್ತೇನೋ, ಇರುತ್ತೇನೆ, ಇರುತ್ತೇನೆಂಬವನು ನನ್ನನ್ನು ಇ. ಈ ಹೆಸರಿನ ಅಭಿಪ್ರಾಯವೇನಂದರೆ: ಅನಾದಿಯಿಂದ ಇದ್ದು, ಸದಾಕಾಲಕ್ಕೂ ಇರುವಂಥ, ಇಹಪರಕ್ಕೆ ಮೂಲ ಕಾರಣವಾದಂಥ, ದೃಶ್ಯಾದೃಶ್ಯ ವಸ್ತುಗಳಿಗೆಲ್ಲಾ ನಿರ್ಮಾಣಿಕನಾದಂಥ, ತನ್ನ ಸ್ವಂತ ಇರೋಣಕ್ಕೆ ತಾನೇ ಆಧಾರವಾಗಿರುವ ಅಹಂಭಾವವೂ ಸ್ವತಂತ್ರವೂ ಉಳ್ಳ ಸರ್ವಕ್ಕೂ ಕರ್ತನೂ ಪಾಲಕನೂ ಆದ ಸತ್ಯ ದೇವರು. ಆತನ ಸ್ವಭಾವವು ನಿರಂತರವಾದದ್ದು. ಆತನ ವಾಕ್ಯವು ನಿತ್ಯವಾದದ್ದು. ಇಸ್ರಯೇಲನವರೊಡನೆ ಆತನು ಮಾಡಿದ ಒಡಂಬಡಿಕೆಯು ಎಂದಿಗೂ ದಿಟವಾದದ್ದು. ಆತನ ವಾಗ್ದತ್ತಗಳ ಧರ್ಮವು ಎಂದಿಗೂ ಮಾರಿ ಹೋಗದಂಥಾದ್ದು. ಈತನೇ ದೇವರು. ಅನ್ಯ ಜನರು ನಂಬುವ ದೇವತೆಗಳೆಲ್ಲಾ ನಿಜ ಇರೋಣವಿಲ್ಲದ ಮಾಯೆಗಳು.

೪. ಇರುವವನೆಂದು ೧೪ರಲ್ಲಿ ಹೇಳಿದ ಹೆಸರೂ, ೧೫ರಲ್ಲಿ ಹೇಳಿದ ಯೆಹೋವನೆಂಬ ಹೆಸರೂ ಮೂಲ ಭಾಷೆಯಲ್ಲಿ ಒಂದೇ. ಈ ಹೆಸರು ಒಳ್ಳೇ ಭರವಸವನ್ನು ಹುಟ್ಟಿಸುವದಕ್ಕೆ ಎಷ್ಟೋ ಯುಕ್ತವಾದದ್ದು! ಆದರೆ ಹೊಸ ಒಡಂಬಡಿಕೆಯಲ್ಲಿ ನಡವಡಿಕೆಯಾದ ಹೆಸರು ಅದಕ್ಕಿಂತ ಎಷ್ಟೋ ಮನೋಹರವಾದದ್ದು! ಅದೇನಂದರೆ, ಯೇಸು ಕ್ರಿಸ್ತನ ತಂದೆಯಾದ ನಮ್ಮ ತಂದೆ. ಈ ಹೆಸರಿನಿಂದಲೇ ಹೊಸ ಒಡಂಬಡಿಕೆಯ ಸುಖಪೂರ್ತಿಯು ಸೂಚಿತವಾಗಿದೆ.

೫. ಈ ಮಾತಿನಿಂದ ದೇವರು ಮೋಶೆಗೆ ಧೈರ್ಯವನ್ನು ಕೊಡುತ್ತಾನೆ.

೬. ಬಹು ಕಾಲದಿಂದ ನಿಂತು ಹೋದಂತೆ ಕಾಣಿಸಿದ ವಾಗ್ದತ್ತಗಳು ನೆರವೇರ ತೊಡಗುತ್ತವೆಂದು, ನಾವು ನಂಬುವ ಹಾಗೆ, ಯೆಹೋವನು ನಮ್ಮ ಒಡಂಬಡಿಕೆಯ ದೇವರಾಗಿ ತಿರಿಗಿ ನಮಗೆ ಪ್ರತ್ಯಕ್ಷವಾದನೆಂತ.

೭. ದೇವರು ಇಸ್ರಯೇಲನವರನ್ನು ಮಿಚ್ರದಿಂದ ಸದಾಕಾಲಕ್ಕೆ ಹೊರ್ರ ಬರಿಸಲಾಲೋಚಿಸುತ್ತಾ ಇದ್ದರೂ, ತತ್ಕಾಲಕ್ಕೆ ಮಾತ್ರ ಹಬ್ಬದ ಆಚರಣೆಗಾಗಿ ಪಯಣ ಮಾಡುವದಕ್ಕೆ ಜನಾಂಗಕ್ಕೆ ಅಪ್ಪಣೆ ಕೊಡಬೇಕೆಂದು, ಅನ್ಯ ಜನರವನಾದ ಮಂದ ಕಿವಿಯುಳ್ಳ ಫರೋನನಿಗೆ ಸಾರಿಸುತ್ತಾನೆ. ಲಘುವಾದ ಈ ಆಜ್ಞೆಗೆ ಒಪ್ಪಲೊಲ್ಲದೆ ಹೋದರೆ, ಅವನಿಗೆ ಕೈಯಾಳುಗಳಾಗಿ ಬಿಟ್ಟಿ ಕೆಲಸ ಮಾಡುವ ಹಂಗಿಕರಲ್ಲದ ಇಸ್ರಯೇಲನವರನ್ನು ಪೂರ್ಣವಾಗಿ ಬಿಡುಗಡೆಯಾಗಲೀಸುವ ಕಠಿಣವಾದ ಕಟ್ಟಳೆಯನ್ನು ಅವನಿಗೆ ತಿಳಿಸುವದೂ, ಇದಕ್ಕೂ ಮಾರ್ಮಲ್ತರೆ, ತನಗಿದ್ದ ಕೊಂಚವಾದ ಅರುವಿಗಾದರೂ ಅನುಸಾರವಾಗಿ ನಡದು ಕೊಳ್ಳದದರಿಂದ, ಅವನಿಗೆ ನ್ಯಾಯತೀರಿಸುವದೂ, ದೇವರಿಗೆ ಉಚಿತವಾಗಿತ್ತು.

೮. ಬಲವಾದ ಕೈಯಿಂದ ದೇವರು ಫರೋನನನ್ನು ದಂಡಿಸಿದ್ದಲ್ಲಿ, ಅವನು ದೇವರ ಕೈ ಎಂದು ತಿಳುಕೊಂಡರೂ, ವಿಧೇಯನಾಗುವ ಕಡೇ ಆಲೋಚನೆಯನ್ನು ಮರಳಿ ಬಿಟ್ಟು ಬಿಟ್ಟು, ಬರಟಾಗಿ ಹಿಂದಕ್ಕೆ ಬಿದ್ದ ಕಾರಣ ಮಡಿದು ಹೋದನು.

೯. ಇಸ್ರಯೇಲನವರು ಆ ಒಡವೆಗಳನ್ನು ಎರವಾಗಿ ಕೇಳಿ, ತಿರಿಗಿ ಕೊಡದೆ, ಮಿಚ್ರದವರಿಗೆ ಮೋಸ ಮಾಡ ಬೇಕೆಂದು, ದೇವರಿಂದ ಅಪ್ಪಣೆ ಹೊಂದಿದರೆಂತ ನೆನಸ ಕೆಲಸವಿಲ್ಲ. ಅವರು ತಮ್ಮ ದೇವರ ಹೆ

ಹೊರಡೋಣ. ೪, ೧—೧೮.

ಸರಿನಲ್ಲಿ ಬೇಡಿದ್ದೆಲ್ಲಾನ್ನು ಮಿಸ್ರದವರು ಬಹಳ ದಿವ
ಸ ನಾನಾ ಕಷ್ಟಗಳನ್ನು ತಾಳಿದ ಬಡವರಿಗೆ ಕರುಣ
ದಿಂದ ಒಲಿದು, ಮತ್ತು ತನ್ನ ಮಹಿಮೆಯನ್ನು ಭಯಂ
ಕರವಾದ ರೀತಿಯಿಂದ ತೋರಿಸಿದ ಯೆಹೋವನಿಗೆ
ಅಂಜಿ, ಏನೂ ಅಡ್ಡಿ ಮಾಡದೆ ಕೊಟ್ಟರು.

೧೦. ಇಸ್ರಯೇಲನವರು ಬೆಳ್ಳಿ ಚಿನ್ನದ ಪಾತ್ರೆ
ಗಳನ್ನೂ ಉಡಿಗೆಗಳನ್ನೂ ಮೋಸದಿಂದ ಕದಿಯದೆ,
ಬಲದಿಂದ ಸುಲು ಕೊಳ್ಳದೆ, ದೇವರ ಹೆಸರಿನಲ್ಲಿ ಬೇ
ಡಿ ಪಡ ಕೊಂಡರೂ, ಈ ದ್ರವ್ಯಾಪಹಾರವು ಮುಂಚೆ
ಇಸ್ರಯೇಲನವರಿಗೆ ಮಾಡಿದ ಅನ್ಯಾಯಕ್ಕೆ ದೇವರಿಂ
ದ ಬಂದ ಶಿಕ್ಷೆಯಾಗಿದ್ದರಿಂದ, ಕೊಳ್ಳೆ ಇಡೋಣ
ವೆಂಬ ಮಾತು ಇಲ್ಲಿ ಪ್ರಯೋಗವಾಗಿದೆ.

ಮೋಶೆ ಇನ್ನೂ ಒಪ್ಪಿ ಕೊಳ್ಳದೆ ತರ ತರವಾಗಿ ಮೂರು ಸಾರಿ ಒಲ್ಲೆನೆಂದು ಎದುರಾಡಿದ್ದು. ಸ. ೪, ೧—೧೮.

ವ. ೧. ಅದಕ್ಕೆ ಮೋಶೆ ಹೇಳಿದ್ದೇನಂದರೆ—ಆದರೆ ಇಗೋ, ನನ್ನನ್ನು ನಂಬರು;
ನನ್ನ ಮಾತು ಕೇಳರು[1]. ಯಾಕಂದರೆ ಯೆಹೋವನು ನಿನಗೆ ಕಾಣಿಸಿ ಕೊಂಡದ್ದಿಲ್ಲ
ವೆಂದು, ಹೇಳುವರು. ೨. ಯೆಹೋವನು ಅವನಿಗೆ, ಇದೇನು ನಿನ್ನ ಕೈಯಲ್ಲಿ? ಅನ್ನ
ಲು, ಅವನು, ಕೋಲು, ಅಂದನು. ೩. ಯೆಹೋವನು, ಅದನ್ನು ನೆಲಕ್ಕೆ ಹಾಕು, ಅಂ
ದಾಗ, ಅದನ್ನು ನೆಲಕ್ಕೆ ಹಾಕಿದನು. ಆಗಲದು ಹಾವಾಯಿತು. ಮೋಶೆ ಅದರೆದು
ರಿನಿಂದ ಓಡಿ ಹೋದನು. ೪. ಯೆಹೋವನು ಮೋಶೆಗೆ, ನಿನ್ನ ಕೈ ನೀಡಿ, ಅದರ ಬಾಲ
ಹಿಡಿ, ಅನ್ನಲು, ಅವನು ಕೈ ನೀಡಿ, ಅದನ್ನು ಹಿಡಿದನು. ಆಗಲದು ಅವನ ಕೈಯಲ್ಲಿ
ಕೋಲಾಯಿತು[2]; ೫. ಅಬ್ರಹಾಮನ ದೇವರೂ ಇಸಾಕನ ದೇವರೂ ಯಾಕೋಬ
ನ ದೇವರೂ ಆಗಿರುವ ಅವರ ಪಿತೃಗಳ ದೇವರಾದ ಯೆಹೋವನು ನಿನಗೆ ಕಾಣಿಸಿ
ಕೊಂಡಿದ್ದಾನೆಂದು, ಅವರು ನಂಬುವ ಹಾಗೆಂತಾ. ೬. ಮತ್ತು ಯೆಹೋವನು ಅವನಿ
ಗೆ, ನಿನ್ನ ಕೈ ಉಡಿಯಲ್ಲಿ ಶೇರಿಸು, ಅಂದನು. ಅವನು ತನ್ನ ಕೈ ಉಡಿಯಲ್ಲಿ ಶೇರಿಸಿ, ಅದ
ನ್ನು ಹೊರಗೆ ತೆಗೆಯಲು, ಅಗೋ, ಅವನ ಕೈ ಹಿಮದಂತೆ ಕುಷ್ಠ ಹಿಡಿದದ್ದಾಗಿತ್ತು[3];
೭. ನಿನ್ನ ಕೈಯನ್ನು ಉಡಿಗೆ ತಿರುಗಿಸು, ಅಂದಾಗ, ತನ್ನ ಕೈ ಉಡಿಗೆ ತಿರುಗಿಸಿ, ಅದನ್ನು
ಉಡಿಯೊಳಗಿಂದ ಹೊರಗೆ ತೆಗೆಯಲು, ಅಗೋ, ಅದು ತಿರಿಗಿ ಅವನ ಮಾಂಸದಂತೆ
ಇತ್ತು. ೮. ಅವರು ನಿನ್ನನ್ನು ನಂಬದೆ, ಮೊದಲಿನ ಗುರುತಿನ ಶಬ್ದವನ್ನು ಕೇಳದೆ ಹೋದ
ರೆ, ಕಡೇ ಗುರುತಿನ ಶಬ್ದವನ್ನು ನಂಬುವರು; ೯. ಅವರು ಆ ಎರಡು ಗುರುತನ್ನೂ ನಂ
ಬದೆ, ನಿನ್ನ ಮಾತು ಕೇಳದೆ ಹೋದರೆ, ನದಿಯಿಂದ ನೀರು ತೆಗದು ಒಣ ಭೂಮಿಯಲ್ಲಿ
ಹೊಯ್ಯ ಬೇಕು; ಆಗ ನೀನು ನದಿಯಿಂದ ತೆಗೆದ ನೀರು ಒಣ ಭೂಮಿಯಲ್ಲಿ ರಕ್ತವಾ
ಗುವದು[4], ಅಂದನು. ೧೦. ಆಗ ಮೋಶೆ ಯೆಹೋವನಿಗೆ, ನನ್ನ ಕರ್ತನೇ, ಅಕಟ! ನಿ
ನ್ನೆಯಿಂದಲೂ ಮೊನ್ನೆಯಿಂದಲೂ ನೀನು ನಿನ್ನ ದಾಸನ ಕಡೆಗೆ ನುಡಿದಂದಿನಿಂದಲೂ
ನಾನು ಮಾತುಗಾರನಲ್ಲ; ನಾನು ಮಂದ ಬಾಯಿಯೂ ಮಂದ ನಾಲಿಗೆಯೂ ಉಳ್ಳವ

ಹೊರಡೋಣ. ೪, ೧೧ – ೧೮.

ನು, ಅಂದನು. ೧೧. ಯೆಹೋವನು ಅವನಿಗೆ ಹೇಳಿದ್ದೇನಂದರೆ– ಮನುಷ್ಯನಿಗೆ ಬಾಯಿ
ಉಂಟು ಮಾಡಿದವನೂ, ಮೂಕರನ್ನೂ ಕಿವಡರನ್ನೂ ಕಣ್ಣುಳ್ಳವರನ್ನೂ ಕುರುಡರನ್ನೂ
ಉಂಟು ಮಾಡಿದವನೂ ಯಾರು? ಯೆಹೋವನಾದ ನಾನಲ್ಲವೋ[5]? ೧೨. ಈಗ
ಹೋಗು; ನಾನು ನಿನ್ನ ಬಾಯಿಯೊಡನೆ ಇದ್ದು, ನೀನು ನುಡಿಯ ಬೇಕಾದದ್ದನ್ನು ನಿ
ನಗೆ ಕಲಿಸುವೆನು. ೧೩. ಅವನು, ಅಕಟ, ಕರ್ತನೇ, ಕಳುಹಿಸ ಬೇಕೆಂಬವನನ್ನು ಕಳುಹಿ
ಸ್ಯೈ[6]! ಅನ್ನಲು, ೧೪. ಯೆಹೋವನ ಶಿಟ್ಟು ಮೋಶೆಯ ಮೇಲೆ ಉರಿಯಿತು, ಮತ್ತು
ಹೇಳಿದ್ದೇನಂದರೆ–ಲೇವಿಯವನಾದ ನಿನ್ನ ಅಣ್ಣ ಆರೋನನು ಇಲ್ಲವೋ? ಅವನು ನುಡಿ
ಯೇ ನುಡಿಯುವವನೆಂದು ಬಲ್ಲೆನು. ಮತ್ತು ಇಗೋ, ಅವನು ನಿನ್ನನ್ನು ಎದುರ್ಗೊ
ಳ್ಳ ಹೊರಟು ಬರುತ್ತಾನೆ. ನಿನ್ನನ್ನು ನೋಡಲು, ತನ್ನ ಹೃದಯದಲ್ಲಿ ಸಂತೋಷ ಪಡು
ವನು[7]. ೧೫. ಅವನ ಸಂಗಡ ನೀನು ಮಾತಾಡಿ, ಅವನ ಬಾಯಿಯಲ್ಲಿ ಮಾತುಗಳ
ನ್ನು ಇಡ ಬೇಕು. ಮತ್ತು ನಾನು ನಿನ್ನ ಬಾಯಿಯ ಸಂಗಡಲೂ ಅವನ ಬಾಯಿಯ
ಸಂಗಡಲೂ ಇದ್ದು, ನೀವು ಮಾಡ ತಕ್ಕದ್ದನ್ನು ನಿಮಗೆ ಕಲಿಸುವೆನು. ೧೬. ಅವನು ನಿ
ನಗಾಗಿ ಜನರಿಗೆ ನುಡಿಯುವನು; ಹ್ಯಾಗಂದರೆ ಅವನು ನಿನಗೆ ಬಾಯಿಯಾಗಿರುವನು,
ನೀನು ಅವನಿಗೆ ದೇವರಾಗಿರುವಿ[8]. ೧೭. ಮತ್ತು ಈ ಕೋಲು ನಿನ್ನ ಕೈಯಲ್ಲಿ ತಕ್ಕೋ,
ಅದರಿಂದ ಆ ಗುರುತುಗಳನ್ನು ಮಾಡುವಿ. ೧೮. ಆಗ ಮೋಶೆ ಹೋಗಿ, ಮಾವನಾ
ದ ಇತ್ರೋನನ ಬಳಿಗೆ ತಿರುಗಿ ಕೊಂಡು, ಅವನಿಗೆ ಮಿಚ್ರದಲ್ಲಿಯಣ ನನ್ನ ಸಹೋದ
ರರ ಬಳಿಗೆ ತಿರುಗಿ ಕೊಂಡು, ಅವರು ಇನ್ನು ಬದುಕುತ್ತಾರೋ ಎಂದು ನೋಡುತ್ತೇ
ನೆ, ಅನ್ನಲು, ಇತ್ರೋನನು ಮೋಶೆಗೆ, ಸಮಾಧಾನವಾಗಿ ಹೋಗು, ಅಂದನು[9].

೧. ಮುಂಚೆ ಅತಿ ಧೈರ್ಯವಂತನೂ ಆತುರನೂ ಆಗಿದ್ದು, ನಾಲ್ವತ್ತು ವರ್ಷದ ಪ್ರಾಯದಲ್ಲಿ ತಾನೇ ಸ್ವಂತ ಯತ್ನದಿಂದ ತನ್ನ ಜನಾಂಗವನ್ನು ಮಿಚ್ರದವರ ಕೈಯಿಂದ ಬಿಡುಗಡೆ ಮಾಡ ಮುಂಕೊಂಡವನಾದ ಮೋಶೆ, ನಾಲ್ವತ್ತು ವರ್ಷ ಕಳೆದ ಬಳಿಕ, ೧. ೧೦. ೧೩ ವಚನಗಳಲ್ಲಿ ದೇವರು ನೇಮಕ ಮಾಡುವ ಉದ್ಯೋಗಕ್ಕೆ ತಪ್ಪಿಸಿ ಕೊಳ್ಳ ಬೇಕೆಂದು, ಮೂರು ಸಾರಿ ನೆವನ ಹೇಳಿದ್ದು ಸಹಜ. ಹ್ಯಾಗಂದರೆ ವೀರರೂ ಮೂಢಭಕ್ತರೂ ಏನೂ ಚಿಂತಿಸದೆ, ಯಾವದಕ್ಕೂ ಹೆದರದೆ, ಉದ್ವೇಗದಿಂದ ಮಹಾಕಾರ್ಯಗಳನ್ನು ತೊಡಗಿಸಿ, ಗಂಡಾಂತರಗಳಲ್ಲಿ ಶೇರುವಂದದಿ ದೇವರ ಸೇವಕರು ನಡಕೊಳ್ಳುವದಿಲ್ಲ. ಇವರು ಅಂಜುತ್ತಾ, ನಡುಗುತ್ತಾ, ಬಲಗುಂದಿದವರಾಗಿ, ತಮಗೆ ನೇಮಕವಾದ ಕಾರ್ಯಗಳನ್ನು ಹಿಡಿಯುವರು. ಅವರು ನಡಿಸಿ ಪೂರೈಸಿದ ಕಾರ್ಯಗಳಿಂದ ಅವರ ಬಲಹೀನತ್ವದಲ್ಲಿ ತನ್ನ ಬಲವನ್ನು ಪ್ರಕಟ ಮಾಡುವ ದೇವರಿಗೆ ಮಹಿಮೆಯುಂಟಾಗುವದು.

೨. ದೇವರು ಮೋಶೆಗೆ ಅದ್ಭುತ ಕ್ರಿಯೆಗಳನ್ನು ನಡಿಸುವ ಶಕ್ತಿಯನ್ನು ದಯೆ ಮಾಡಿದ್ದು, ತಾನು ಅವನನ್ನು ಕಳುಹಿಸಿದನೆಂಬದಕ್ಕೆ, ಯಾರೂ ಅಲ್ಲಗಳೆಯಲಾರದ, ದೃಷ್ಟಾಂತವಾಗಿರುವದಲ್ಲದೆ, ಮಿಚ್ರದವರಲ್ಲಿ ವಾಡಿಕೆಯಾದ ಗಾರಡಿ ವಿದ್ಯೆಯ ಮಂತ್ರ ತಂತ್ರಗಳನ್ನು ಶಿಕ್ಷಿಸಿ ಅಣಗಿಸುವದಕ್ಕೆ ಸಹಾ ಒಳ್ಳೇ ಸಾಧನವಾಗಿತ್ತು.

೩. ಬಿಳಿ ಬಣ್ಣದ ಕುಷ್ಟವು ಹೆಚ್ಚು ಕೆಟ್ಟದ್ದು. ಈ ರೋಗವನ್ನು ಪರಿಹರಿಸುವ ಶಕ್ತಿಯನ್ನು ಸರ್ವ

ಪ್ರಾಣವುಳ್ಳ ದೇವರೇ ಮನುಷ್ಯನಿಗೆ ದಯ ಮಾಡ ಬಲ್ಲವನು. ದೇವವಾಕ್ಯದಲ್ಲಿ ಹೆಸರ್ಗೊಂಡವರಲ್ಲಿ ಮೋಶೆ ಮೊದಲಿಗನಾಗಿ ಅದ್ಭುತ ಕ್ರಿಯೆಗಳನ್ನು ನಡಿಸುವ ಸಾಮರ್ಥ್ಯವನ್ನು ಹೊಂದಿದನು.

೪. ಈ ಅದ್ಭುತವು ಮಿಚ್ರದವರಿಗೆ ಅತಿ ಭಯಂಕರವಾಗಿತ್ತು; ಯಾಕಂದರೆ ಫಲಭರಿತವಾದ ಸಾರವುಳ್ಳ ದೇಶದ ಸೌಖ್ಯಕ್ಕೂ ಐಶ್ವರ್ಯಕ್ಕೂ ಮೂಲವಾದ ನೀಲ್ ನದಿಯು ಮಿಚ್ರದವರಿಗೆ ದಿವ್ಯವಾದ ಪರಿಶುದ್ಧ ಹೊಳೆಯಾಗಿ ಕಾಣಿಸುತ್ತಿತ್ತು. ಗಂಗಾನದಿ ಹಿಂದೂ ದೇಶಸ್ಥರಿಗೆ ಪರಿಶುದ್ಧ ಪ್ರವಾಹವಾಗಿ ತೋರುವ ಪ್ರಕಾರ, ನೀಲೆಂಬ ಹೊಳೆ ಮಿಚ್ರದವರಿಗೆ ದಿವ್ಯ ನದಿ ಎಂದು ತೋರುತ್ತಿತ್ತು. ಆದ್ದರಿಂದ ಪರಿಶುದ್ಧ ನದಿಯ ನೀರು ದೇವರ ಅಪ್ಪಣೆಯಿಂದಲೇ ರಕ್ತಮಯವಾದದ್ದನ್ನು ಅವರು ಕಂಡು, ತಮಗೂ ತಮ್ಮ ದೇಶಕ್ಕೂ ಯೆಹೋವನು ಸರ್ವಶಕ್ತನಾದ ಒಡೆಯನೆಂಬದಾಗಿ ಭಯ ಪಡುವದಕ್ಕೆ ಕಾರಣವಾಯಿತು.

೫. ಇದನ್ನು ಮರೆಯದಿರು, ಭಕ್ತನೇ! ನಿನ್ನನ್ನು ಉಂಟು ಮಾಡಿದವನು ನಿನ್ನ ಭಾವ ಗುಣಗಳು ಯಾವವೆಂದು ತಿಳುಕೊಂಡು, ವೇಳೆ ವೇಳೆಗೆ ಬೇಕಾದದ್ದನ್ನು ನಿನಗೆ ದಯ ಮಾಡ ಬಲ್ಲನೆಂದು, ನೆನಪು ಮಾಡಿ ಕೊಂಡು, ಆತನಲ್ಲಿ ಪೂರ್ಣ ಭರವಸವಿಡ ಬೇಕು.

೬. ಬೇರೆ ಯಾರಾದರೂ ನಿನ್ನ ಅಪ್ಪಣೇ ಅನುಸರಿಸಲಿ; ನಾನೊಲ್ಲೆನೆಂತ ಮೋಶೆ ತನ್ನ ತಪ್ಪುಗಳನ್ನು ಎಷ್ಟೋ ಬಗ್ಗರಿಯಾಗಿ ಅರಿಕೆ ಮಾಡುತ್ತಾನೆ!

೭. ಅಣ್ಣ ತಮ್ಮಂದಿರಾಗಿ ಹುಟ್ಟಿದವರಾದ ಈ ಇಬ್ಬರು ದೇವರ ಸೇವೆಯಲ್ಲಿಯೂ ಜೋಡಾಗ ಬೇಕಾಯಿತು. ತನ್ನ ತನ್ನ ವಿಶೇಷ ಭಾವ ಗುಣಗಳ ಪ್ರಕಾರ ಒಬ್ಬನಿಗೊಬ್ಬನು ಹಿತಸಹಾಯಕನಾದನು. ಆರೋನನು ಮಮತೆಯಿಂದಲೂ ಸಿದ್ಧ ಮನಸ್ಸಿನಿಂದಲೂ ತನಗೆ ಎದುರು ಬರೋಣದರಿಂದ ಇಬ್ಬರಾದ ತಮ್ಮ ವಿಷಯವಾದ ದೇವರ ಆಲೋಚನೆಯನ್ನು ಮೋಶೆ ಊಹಿಸಿ ಧೈರ್ಯಗೊಳ್ಳ ತಕ್ಕದ್ದಾಗಿತ್ತು.

೮. ಅಂದರೆ, ದೇವರ ಪ್ರತಿಯಾಗಿರುವಿ. ನಾನು ನಿನಗೆ ಕಾಣಿಸಿ ಕೊಳ್ಳುವೆನು. ಆರೋನನು ನಿನ್ನ ಸೇವಕನಾಗ ಬೇಕು. ದೇವರಿಗೆ ಪ್ರವಾದಿ ಹ್ಯಾಗೋ ಹಾಗೆ ಮೋಶೆಗೆ ಆರೋನನು ಪ್ರವಾದಿಯಾಗ ಬೇಕಾಯಿತು. ಪ್ರವಾದಿಯು ತನ್ನಿಂದ ಮಾತಾಡದೆ, ದೇವರು ಕೊಟ್ಟ ಮಾತುಗಳನ್ನು ಹೇಳುವ ರೀತಿಯಾಗಿ, ಮೋಶೆಯ ಮಾತುಗಳನ್ನು ಆರೋನನು ನುಡಿಯ ತಕ್ಕದ್ದು. ೭, ೧. ವ್ಯಾಖ್ಯಾನ ನೋಡು. ಮೋಶೆಯ ವಿಶ್ವಾಸ ಕುಂದಿದರಿಂದ, ದೇವರು ಆರೋನನನ್ನು ಅವನ ಸಹಾಯಕ್ಕೆ ಪ್ರಸಂಗಿಯಾಗಿಟ್ಟನು. ಮೆಲ್ಕಿಚೆದೇಕನಂತೆಯೂ ಕ್ರಿಸ್ತನಂತೆಯೂ ಇವನ ಮುಂಗುರುತಾದ ಮೋಶೆ ರಾಜಪ್ರವಾಚಕ ಯಾಜಕೋದ್ಯೋಗತ್ರಯವನ್ನು ಪಡೆದು ಕೊಳ್ಳುವದು ದೇವರ ಆದಿಯಾಲೋಚನೆಯಾಗಿತ್ತು.

೯. ಇತ್ರೋನನು ಸಹ ದೇವರ ಆಲೋಚನೆಯನ್ನರಿತು ಸಮ್ಮತನಾಗಿದ್ದನೆಂದು, ತೋರುತ್ತದೆ.

ಮೋಶೆ ಮಿದ್ಯಾನದಿಂದ ಹೊರಟು ಹೋದದ್ದು. ವ. ೨೦ – ೨೩.

ವ. ೨೦. ಆಗ ಮೋಶೆ ತನ್ನ ಹೆಂಡತಿಯನ್ನೂ ತನ್ನ ಮಕ್ಕಳನ್ನೂ ತಕ್ಕೊಂಡು, ಕತ್ತೆಯ ಮೇಲೆ ಏರಿಸಿ, ಮಿಚ್ರ ದೇಶಕ್ಕೆ ತಿರುಗಿ ಕೊಂಡನು. ಮತ್ತು ಮೋಶೆ ದೇವರ ಕೋಲು ಕೈಯಲ್ಲಿ ತಕ್ಕೊಂಡನು.

ವ. ೨೧ — ೨೩. ದೇವರು ಮೇಲೆ ಬರದಿರುವ ಅದ್ಭುತಗಳನ್ನು ಫರೋನನ ಮುಂದೆ ನಡಿಸ ಬೇಕೆಂಬ ಅಪ್ಪಣೆಯನ್ನು ಮೋಶೆಗೆ ಇನ್ನೊಮ್ಮೆ ಕೊಡುತ್ತಾನೆ. ದೇವರು ಫರೋನನ ಹೃದಯವನ್ನು ಕಠಿಣ ಪಡಿಸಿದ್ದಂದರೆ — ಫರೋನನು ತನಗೆ ಪ್ರಕಟವಾದ ದೇವರ ಶಕ್ತಿಯನ್ನು ಕಣ್ಣಾರೆ ಕಂಡರೂ, ಮಾನಸಾಂತರವಾಗಲೊಲ್ಲದೆ, ಹೆಚ್ಚಾಗಿ ಕೆಟ್ಟು, ಎದುರಾಡಿದದರಿಂದ, ಮುಂಚೆ ಮಾಡಿದ ಪಾಪಗಳ ಫಲವನ್ನು ತಿಂದು, ನ್ಯಾಯವಾದ ಶಿಕ್ಷೆಗೆ ಒಳಗಾಗ ಬೇಕೆಂಬದು ದೇವರ ಚಿತ್ತವೇ ಸರಿ. ಇದಕ್ಕಾಗಿ ದೇವರು ಪಾಪದ ಮೂ

ಲ ಕಾರಣವೆಂದು ಹೇಳಲಾಗದು; ಅವನು ನೀತಿಯುಳ್ಳ ಶಿಕ್ಷಾಕರ್ತನಾಗಿ ಪಾಪವನ್ನು ದಂಡಿಸುತ್ತಾನಷ್ಟೆ. ಇಸ್ರಯೇಲ್ ದೇವರ ಚೊಚ್ಚಲ ಮಗನು ಅಂದರೆ — ದೇವರು ಇಸ್ರಯೇಲೆಂಬ ಜನಾಂಗವನ್ನು ಉಳಿದ ಎಲ್ಲಾ ಜನಾಂಗಗಳಲ್ಲಿ ಆದು ಕೊಂಡು, ಅದಕ್ಕೆ ಸ್ವಂತ ಪ್ರಜೆಯೆಂಬ ಹೆಸರಿಟ್ಟು, ಅದಕ್ಕೆ ತಂದೆಯಾಗಿಯೂ ಒಡಂಬಡಿಕೆಯ ದೇವರಾಗಿಯೂ ಕೃಪಾಪೂರ್ಣತೆಯನ್ನು ತೋರಿಸ ಮನಸ್ಸಾಗಿದ್ದನು. ದೇವರ ಚೊಚ್ಚಲ ಮಗನನ್ನು ತನ್ನ ದೇಶದಿಂದ ಬಿಡುಗಡೆಯಾಗಲೀಸದೆ ಹೋದರೆ, ಫರೋನನು ಚೊಚ್ಚಲ ಮಗನ ಮರಣದ ಶಿಕ್ಷೆಯನ್ನು ಹೊಂದುವನೆಂದು, ಮೋಶೆ ದೇವರ ಅಪ್ಪಣೆಯಿಂದ ಅವನಿಗೆ ಸಾರಿದನು.

ರಕ್ತದ ಮದಲಿಂಗನು. ವ. ೨೪ — ೨೬.

ವ. ೨೪. ಇದಲ್ಲದೆ ದಾರಿಯಲ್ಲಿ ಬೀಡಿನಲ್ಲಿ ಯೆಹೋವನು ಅವನಿಗೆದುರ್ಬಿದ್ದು[೧],
ಅವನನ್ನು ಕೊಲ್ಲಲರಸಿದನು. ೨೫. ಆಗ ಚಿಪ್ಪೋರಳು ಕಲ್ಕತ್ತಿ ತಕ್ಕೊಂಡು[೨], ತನ್ನ
ಮಗನ ಮುಂದೊಗಲು ಕೊಯ್ದು, ಅವನ ಕಾಲುಗಳ ಕಡೆಗೆ ಹಾಕಿ[೩], ನೀನು ನನಗೆ ರಕ್ತ
ದ ಮದಲಿಂಗನು[೪], ಅಂದಳು. ೨೬. ಆಗಲವನನ್ನು ಬಿಟ್ಟು ಬಿಟ್ಟನು[೫]. ಅಂದು ಅವ
ಳು ಪರಿಛೇದನೆಗಾಗಿ ರಕ್ತದ ಮದಲಿಂಗನು ಎಂದು, ಹೇಳಿದಳು[೬].

೧. ಮೋಶೆ ೪೦ ವರ್ಷ ಇತ್ರೋನನ ಬಳಿಯ ವಾಸ ಮಾಡಿ, ಹುಡುಗರಿಗೆ ಹದಿಮೂರನೆ ವರ್ಷದಲ್ಲಿ ಪರಿಛೇದನೆ ಮಾಡುವ ಶೇಮನ ವಂಶದ ಅನ್ಯಜನರ ನಡುವಡಿಯ ಕೈಕೊಂಡು, ಎಂಟು ದಿನದ ಕೂಸುಗಳಿಗೆ ಪರಿಛೇದನೆ ಮಾಡುವ ಇಸ್ರಯೇಲನವರ ಕಟ್ಟು ಹಿಡಿಯದೆ, ತನ್ನ ಎರಡನೆ ಮಗುವಿಗೆ ಪರಿಛೇದನೆ ಮಾಡುವದನ್ನು ಆ ಕಾಲದ ವರೆಗೆ ತಡೆದದರಿಂದ ದೇವರು ಅವನನ್ನು ಶಿಕ್ಷಿಸುವದಕ್ಕೆ ಕಠಿಣವಾದ ರೋಗವನ್ನು ಅವನ ಮೇಲೆ ಬರ ಮಾಡಿದನೆಂದು ನೆನಸಬಹುದು.

೨. ಕಲ್ಕತ್ತಿ. ಆ ಶೀಮೆಯಲ್ಲಿ ಹದನವಾದ ಉರಿಕಲ್ಲುಗಳನ್ನು ಕತ್ತಿಗಳಂತೆ ಪ್ರಯೋಗಿಸುತ್ತಾ ಇದ್ದರು. ತಂದೆಯಾದ ಮೋಶೆ ಪಯಣ ಮಾಡುವದಕ್ಕಿಂತ ಕೊಂಚ ಕಾಲದ ಮುಂಚೆ ಹುಟ್ಟಿದ ಮಗುವಿಗೆ ಪರಿಛೇದನೆ ಮಾಡದೆ ಹೋದದಕ್ಕೆ ಮಿದ್ಯಾನ ದೇಶಸ್ಥಳಾದ ತಾಯಿ ಹೇತುವಾಗಿದ್ದರಿಂದ, ಅವಳು ಗಂಡನು ದೇವರ ಶಿಕ್ಷೆ ಪಡೆದು ಸಾಯುವನೆಂದು ಕಳವಳಗೊಂಡು ಮಾಡಿದ ತಪ್ಪು ದಿಡದಿಡನೆ ತಿದ್ದಿದಳೆಂದು ತೋಚುತ್ತದೆ.

೩. ಚಿಪ್ಪೋರಳು ಶಿಟ್ಟಿನಿಂದಲೂ, ಎಳೆಕೂಸಿಗೆ ಪರಿಛೇದನೆಯನ್ನು ಮಾಡ ಬೇಕಾಯಿತು ಎಂಬ ಕರ್ಕಶೆಯಿಂದಲೂ ತಾನು ಕಡಿದ ಕಡಿಯನ್ನು ಮೋಶೆಯ ಅಡಿಗಳ ಮುಂದೆ ಬಿಸಾಡಿದಳು.

೪. ಅಂದರೆ — ನಿನ್ನ ಜೀವವನ್ನು ಉಳಿಸುವ ಬಗ್ಯೆ ನನ್ನ ಮಗುವಿನ ರಕ್ತವು ಹರಿಯ ಬೇಕು. ಹೆತ್ತ ಮಗುವಿನ ರಕ್ತದಿಂದ ನಿನ್ನನ್ನು ಕೊಂಡು ಕೊಳ್ಳುತ್ತೇನೆ, ಅಕಟ!

೫. ದೇವರು ಅಬ್ರಹಾಮನಿಗೆ ನೇಮಕ ಮಾಡಿದ ಕಟ್ಟಳೆ ಮೀರಿದ ಪಾಪಕ್ಕಾಗಿ ಮೋಶೆಗೆ ಬಂದ ಶಿಕ್ಷೆ ಪರಿಹಾರವಾಯಿತು. ಆದರೆ ತನ್ನ ಒಡಂಬಡಿಕೆಯ ನೇಮವನ್ನು ಘಟ್ಟಿಯಾಗಿ ಕೈಕೊಂಡು ಅವಿಧೇಯರನ್ನು ದಂಡಿಸುವ ಪರಿಶುದ್ಧ ದೇವರ ಭಯವು ಮೋಶೆಯ ಹೃದಯದಲ್ಲಿ ನೆಲೆಗೊಂಡಿತು. ತದನಂತರ ಇಸ್ರಯೇಲನವರಲ್ಲಿ ಪರಿಛೇದನೆ ಹೊಂದದವನು ಜನಾಂಗದಿಂದ ನಿರ್ಮೂಲನಾಗ ಬೇಕೆಂಬ ಪ್ರಮಾಣ ಉಂಟಾಯಿತು.

೬. ಚಿಪ್ಪೋರಳು ಕೆಲವು ಕಾಲದ ಬಳಿಕ ತಿರಿಗಿ ಗಂಡನನ್ನು ಬಿಟ್ಟು, ಮಕ್ಕಳನ್ನು ಕರೆದು ಕೊಂಡು, ತಂದೇ ಬಳಿಯ ವಸ್ತಿಯಾದಳೆಂದು, ಸಂಧಿಯ ೧೮ನೆಯ ಆರಂಭದಲ್ಲಿ ತೋರುತ್ತದೆ.

ಮೋಶೆ ಆರೋನರು ಇಸ್ರಯೇಲನವರ ಮುಂದೆ ಬಂದದ್ದು. ವ. ೨೭ – ೩೧.

ವ. ೨೭. ಇದಲ್ಲದೆ ಯೆಹೋವನು ಆರೋನನಿಗೆ ಮೋಶೆಗೆದುರಾಗಿ ಅರಣ್ಯಕ್ಕೆ ಹೋಗು, ಅಂದನು. ಅವನು ಹೋಗಿ ದೇವರ ಬೆಟ್ಟದಲ್ಲಿ[೧] ಅವನನ್ನು ಎದುರ್ಗೊಂಡು ಮುದ್ದಿಟ್ಟನು. ೨೮. ಆಗ ಮೋಶೆ ತನ್ನನ್ನು ಕಳುಹಿಸಿದ ಯೆಹೋವನ ಎಲ್ಲಾ ಮಾತುಗಳನ್ನೂ, ತನಗೆ ಆಜ್ಞಾಪಿಸಿದ ಎಲ್ಲಾ ಗುರ್ತುಗಳನ್ನೂ ಆರೋನನಿಗೆ ತಿಳಿಸಿದನು. ೨೯. ಮತ್ತು ಮೋಶೆ ಆರೋನರು ಹೋಗಿ, ಇಸ್ರಯೇಲನ ಮಕ್ಕಳ ಹಿರಿಯರನ್ನೆಲ್ಲಾ ಕೂಡಿಸಿದರು. ೩೦. ಆಗ ಯೆಹೋವನು ಮೋಶೆಗೆ ಹೇಳಿದ ಮಾತುಗಳನ್ನೆಲ್ಲಾ ಆರೋನನು ಹೇಳಿದನು; ಮತ್ತು ಅವನು ಆ ಗುರ್ತುಗಳನ್ನು ಪ್ರಜೆಯ ಕಣ್ಣುಗಳ ಮುಂದೆ ಮಾಡಿದನು[೨]. ೩೧. ಪ್ರಜೆಯು ನಂಬಿ, ಯೆಹೋವನು ಇಸ್ರಯೇಲನ ಮಕ್ಕಳನ್ನು ದರ್ಶಿಸಿ, ಅವರ ಕುಗ್ಗಿರೋಣವನ್ನು ನೋಡಿದನೆಂದು ಕೇಳಿ, ಬಾಗಿ ಅಡ್ಡ ಬಿದ್ದರು[೩]!

೧. ಹೋರೆಬ್ ಎಂಬ ಬೆಟ್ಟಕ್ಕೆ ಈ ಹೆಸರದೆ. ನಮಗೆ ಅರಿಯದ ಕಾರಣದಿಂದ ಮೋಶೆ ಹೋರೆಬಿನ ಮಾರ್ಗವಾಗಿ ಮಿಚ್ರಕ್ಕೆ ಹೋಗುತ್ತಿರಲಾಗಿ, ೪೦ ವರ್ಷಕ್ಕಿಂತ ಮುಂಚೆ ತಾನು ಬಿಟ್ಟು ಬಂದ ಅಣ್ಣನನ್ನು ತಿರಿಗಿ ಕಂಡು ಕೊಂಡನು.

೨. ಅದ್ಭುತ ಕ್ರಿಯೆಗಳನ್ನು ಮಾಡಿದವನು ಆರೋನನಲ್ಲ, ಮೋಶೆಯೇ.

೩. ದೇವರು ಮೋಶೆ ಆರೋನರನ್ನು ಕಳುಹಿಸಿದ್ದಾನೆಂದು ನಂಬಿದ ಹಿರಿಯರು ದೇವರು ತಮ್ಮ ಜನಾಂಗಕ್ಕೆ ಕರುಣೆ ತೋರಿಸುತ್ತಾನೆಂಬದಕ್ಕೆ ಕೃತಜ್ಞತೆಯಿಂದ ಅಡ್ಡ ಬಿದ್ದರು. ಈಗ ಕಾಣ ಬರುವ ರಕ್ಷಣೆಗೆ ಕೃತಜ್ಞರಾದ ಇಸ್ರಯೇಲನವರಲ್ಲಿ ಹುಟ್ಟಿದ ವಿಶ್ವಾಸವು ಸದ್ಗುಣದ ಉತ್ತಮ ಲಕ್ಷಣವಾಗಿದೆ. ಆದರೆ ಅವರು ಇಷ್ಟು ಚನ್ನಾಗಿ ತೊಡಗಿದ ಮೇಲೆ, ಕೊಂಚ ಕಾಲದ ಬಳಿಕ ತಮ್ಮ ದೇವರಿಗೆ ವಿರೋಧವಾಗಿ ಗುಣಗುಟ್ಟಿದ ಅಪರಾಧವು ಎಷ್ಟೋ ದೊಡ್ಡದೆಂದು ಕಾಣುತ್ತದೆ!

ಮೋಶೆ ಆರೋನರು ಫರೋನನ ಮುಂದೆ ಬಂದದ್ದು. ಸ. ೫, ೧—೫.

ವ. ೧. ಆ ಮೇಲೆ ಮೋಶೆ ಆರೋನರು ಬಂದು ಫರೋನನಿಗೆ—ಇಸ್ರಯೇಲನ ದೇವರಾದ ಯೆಹೋವನು, ಅರಣ್ಯದಲ್ಲಿ ನನಗೆ ಹಬ್ಬವನ್ನಾಚರಿಸುವ ಹಾಗೆ[೧] ನನ್ನ ಪ್ರಜೆಯನ್ನು ಕಳುಹಿಸು ಎಂದು ಹೇಳಿದ್ದಾನೆ, ಅಂದರು. ೨. ಫರೋನನು ಇಸ್ರಯೇಲನನ್ನು ಕಳುಹಿಸುವದಕ್ಕೆ ನಾನು ಅವನ ಮಾತು ಕೇಳ ತಕ್ಕ ಹಾಗೆ ಯೆಹೋವನು ಯಾರು[೨]? ಯೆಹೋವನನ್ನು ಅರಿಯೆನು[೩]; ಮತ್ತು ಇಸ್ರಯೇಲನನ್ನು ಕಳುಹಿಸೆನು, ೩. — — ೪. ಯಾಕೆ ಪ್ರಜೆಯನ್ನು ತಮ್ಮ ಕೆಲಸಗಳಿಂದ ಬಿಡಿಸುವಿರಿ? ನಿಮ್ಮ ಬಿಟ್ಟಿಗಳಿಗೆ ಹೋಗಿರಿ[೪]! ಅಂದನು. ೫. ಮತ್ತು ಫರೋನನು—ಇಗೋ, ಈಗ ದೇಶದಲ್ಲಿ[೫] ಜನಾಂಗವು ಬಹಳವಾದದ್ದು, ಮತ್ತು ನೀವು ಅವರನ್ನು ಅವರ ಬಿಟ್ಟಿಗಳಿಂದ ನಿಲಗಡೆಯಾಗಿಸುತ್ತೀರಿ!

ಹೊರಡೋಣ. ೫, ೬—೧೪.

೧. ಮೋಶೆ ಆರೋನರೂ ಅವರ ಸಂಗಡ ಬಂದ ಹಿರಿಯರೂ (ಸಮ ನೋಡು ಸ. ೩, ೧೮) ಫರೋನನಿಗೆ ದೇವರ ಅಪ್ಪಣೆಯಿಂದ ತಿಳಿಸುವ ಕಾರ್ಯಕ್ಕಿಂತ ಹೆಚ್ಚಾದದ್ದನ್ನು ಮಾಡಿ, ತನ್ನ ಜನಾಂಗವನ್ನು ಮಿಶ್ರದಿಂದ ಪೂರ್ಣವಾಗಿ ಬಿಡುಗಡೆ ಮಾಡುವ ಆಲೋಚನೆಯು ದೇವರ ಮನಸ್ಸಿನಲ್ಲಿತ್ತು. ಆದರೆ ಫರೋನನ್ನು ಶೋಧಿಸುವದಕ್ಕೂ, ಅವನ ದುಷ್ಟ ಗರ್ವವನ್ನೂ ಅನ್ಯಾಯಕ್ಕೆ ಮೆಚ್ಚುವ ಕ್ರೂರತ್ವವನ್ನೂ ಪೂರ್ಣವಾಗಿ ಪ್ರಕಟ ಮಾಡುವದಕ್ಕೂ, ಮೊದಲು ಸುಲಭವಾದ ಅಪ್ಪಣೆಯನ್ನು, ಬಳಿಕ ದುರ್ಲಭವಾದದ್ದನ್ನು ಅವನಿಗೆ ತಿಳಿಸಿದನು. ಅವನು ದೇವರ ತಾಳ್ಮೆಯನ್ನು ಎಣಿಕೆ ಮಾಡದೆ, ದೇವರ ಆಜ್ಞೆಗಳನ್ನು ತಿರಿಗಿ ತಿರಿಗಿ ಧಿಕ್ಕರಿಸಿ, ದೇವರನ್ನು ಹೆಚ್ಚು ಹೆಚ್ಚಾಗಿ ಎದುರಾಡಿ, ನಿರ್ಮೂಲನಾಗುವ ನ್ಯಾಯತೀರ್ವಿಕೆಗೆ ಪಾತ್ರನಾಗಿ ಕಾಣಿಸಿ ಕೊಳ್ಳುವನೆಂದು, ದೇವರು ಮುಂತಿಳಿದವನಾಗಿ ಹೀಗೆ ಮಾಡಿದನು. ಇದಲ್ಲದೆ ಯೆಹೋವನು, ಇಸ್ರಯೇಲ ಜನಾಂಗವನ್ನು ಪೂರ್ಣವಾಗಿ ಬಿಡುಗಡೆ ಮಾಡುವದಕ್ಕಿಂತ ಮುಂಚೆ, ನಾನಾ ತರದ ಪರೀಕ್ಷೆಗಳಿಂದ ಅವರನ್ನು ಅಣಗಿಸಿ ಸಾಧಿಸ ಮನಸ್ಸಾಗಿದ್ದನು. ಫರೋನನ ಪಾಪವು ತುಂಬಿದ ಬಳಿಕ ಅವನು ನಾಶವಾದನು. ಇಸ್ರಯೇಲನವರ ವಿಶ್ವಾಸವು ದೃಢವಾದ ಬಳಿಕ, ಅವರ ರಕ್ಷಣೆಯ ದಿನ ಬಂತು.

೨. ಫರೋನನು ಯೆಹೋವನು ಸರ್ವಶಕ್ತನಾದ ಕರ್ತನೆಂದು ನಂಬದೆ, ಅವನು ಇಬ್ರಿಯರ ಕುಲದೈವವೆಂದು ನೆನಸುತ್ತಾ ಇದ್ದು, ಅವನನ್ನು ಆಶ್ರೈಸಿ ಕೊಂಡು ಆರಾಧಿಸುವ ಜನರ ದುರವಸ್ಥೆಯನ್ನು ನೋಡಿ, ಅವರ ಪಾಲಕನಾದ ಯೆಹೋವನನ್ನು ಸಹಾ ಬೀಯಹೆಮ್ಮಿನಿಂದ ಮರುಳಾಗಿ, ಹೇಸಿದನು.

೩. ಯೆಹೋವನನ್ನು ಅರಿತರೂ ಅರಿಯದಿದ್ದರೂ, ಅವನಿಗೆ ವಿಧೇಯನಾಗಿರಲೊಲ್ಲದೆ, ಧಿಕ್ಕಾರದಿಂದ ಅರಿಯೆನೆಂದು, ಹೇಳುತ್ತಾನೆ.

೪. ಫರೋನನು ಜನಾಂಗದ ಹೆಸರಿನಲ್ಲಿ ತನ್ನ ಸನ್ನಿಧಾನಕ್ಕೆ ಬಂದ ಮುಂದಾಳುಗಳಾದ ಮೋಶೆ ಆರೋನರೂ, ಇವರನ್ನು ಕೂಡಿದ ಹಿರಿಯರೂ, ಇಸ್ರಯೇಲನವರ ಹೆಸರಿನಲ್ಲಿ ಬಂದವರಾಗಿ, ಹೀಗೆ ಬೆದರಿಸಿ ಮಾತಾಡುತ್ತಾನೆ. ಅಂದರೆ: ನಿಮ್ಮ ಜನರು ಮಾತ್ರವಲ್ಲ, ನೀವು ಸಹಾ ಕೆಲಸಕ್ಕೆ ಹೋಗಿರಿ.

೫. ಇಸ್ರಯೇಲನವರು ದೇಶದ ಅರಸನಾದ ತನಗೆ ಪೂರ್ಣವಾಗಿ ಕೈವಶವಾಗಿರ ತಕ್ಕ ಆಳುಗಳೆಂದು ತೋರಿಸುವದಕ್ಕೆ, ಅವರು ದೇಶದ ಜನರೆಂತ ಹೇಳುತ್ತಾನೆ. ಅವರ ಹಿರಿಯರು ಮೂಡಣ ದಿಕ್ಕಿನಿಂದ ಮಿಶ್ರ ದೇಶಕ್ಕೆ ಬಂದ ಪ್ರವಾಸಿಗಳೆಂದು, ಫರೋನನಿಗೆ ಗೊತ್ತಾಗಿತ್ತು. ಅವನು ನೀತಿಯನ್ನೂ ಭಕ್ತಿಯನ್ನೂ ಮರತು ರಾಜ್ಯಾರ್ಥ ಯುಕ್ತಿಯನ್ನೇ ಕೈಕೊಳ್ಳುತ್ತಾನೆ.

ಜನಾಂಗದ ತಿಪ್ಪಲುಪಾಟಿನ ಹೆಚ್ಚಿಗೆ. ೬—೧೪.

ವ. ೬. ಅಂದು ಫರೋನನು ಜನಾಂಗದಲ್ಲಿಯಣ ಅಟ್ಟಿಗರಿಗೂ[೧] ಅವರ ಪಾರುಪತ್ಯಗಾರರಿಗೂ ಅಪ್ಪಣೆ[೩] ಕೊಟ್ಟದ್ದೇನಂದರೆ—೭.—೮.—೯. ಆಳುತನವು ಈ ಜನರ ಮೇಲೆ ಭಾರವಾಗಲಿ. ಅದರಲ್ಲಿ ಅವರು ಗೇಯಲಿ, ಆಗ ಸುಳ್ಳು ಮಾತುಗಳಿಗೆ[೨] ಎಚ್ಚರುಗೊಳ್ಳರು. ೧೦. ಮತ್ತು ಪ್ರಜೆಯ ಅಟ್ಟಿಗರೂ ಅವರ ಪಾರುಪತ್ಯಗಾರರೂ ಹೊರಟು, ಪ್ರಜೆಗೆ ಹೇಳಿದ್ದೇನಂದರೆ— —ಫರೋನನು ನಾನು ನಿಮಗೆ ಹುಲ್ಲು ಕೊಡುವದಿಲ್ಲ, ಅನ್ನುತ್ತಾನೆ. ೧೧. ನೀವೇ ಹೋಗಿ, ದೊರಕಿ ಕೊಳ್ಳುವಲ್ಲಿಂದ ನಿಮಗೆ ಹುಲ್ಲು ತಕ್ಕೊಳ್ಳಿರಿ. ಆದಾಗ್ಯೂ ನಿಮ್ಮ ಆಳುತನದಿಂದ ಏನೂ ಕಡಿಮೆಯಾಗುವದಿಲ್ಲ. ೧೨. ಆಗ ಪ್ರಜೆಯು ಹುಲ್ಲಿಗೆ ಬದಲಾಗಿ ಕೊಯಿಲು ಆರಿಸುವ ಬಗ್ಯೆ[೩] ಮಿಶ್ರ ದೇಶದಲ್ಲೆಲ್ಲಾ ಚದರಿ ಹೋಯಿತು. ೧೩. ಇದಲ್ಲದೆ ಅಟ್ಟಿಗರು ದುಡುಕಿ ಹೇಳಿದ್ದೇನಂ

ದರೆ—ನಿಮ್ಮ ಕೆಲಸಗಳ ದಿನಕಟ್ಟಳೆಯನ್ನು ಆಯಾ ದಿನದಲ್ಲಿ ಹುಲ್ಲು ಇದ್ದಂದಿನ ಮೇರೆಗೆ ತೀರಿಸಿರಿ. ೧೪. ಆಗ ಮುಂಚಿನಂತೆ ನಿನ್ನೆಯೂ ಇಂದೂ ನಿಮ್ಮ ಇಟ್ಟಿಗೆಗಳ ನೇಮವನ್ನು ಯಾಕೆ ತೀರಿಸಲಿಲ್ಲವೆಂದು, ಫರೋನನ ಅಟ್ಟಿಗರು ಇಸ್ರಯೇಲನ ಮಕ್ಕಳ ಮೇಲೆ ಇಟ್ಟ ಪಾರುಪತ್ಯಗಾರರು ಹೊಡೆಯಲ್ಪಟ್ಟರು೪).

೧. ಅಟ್ಟಿಗರೆಂಬವರು ಇಸ್ರಯೇಲನವರಾದ ಪಾರುಪತ್ಯಗಾರರ ಮೇಲೆ ಫರೋನನು ಇಟ್ಟ ಮಿಚ್ರದೇಶಸ್ಥರಾದ ಉದ್ಯೋಗಸ್ಥರಾಗಿದ್ದರು. ಇಬ್ರಿಯದಲ್ಲಿ ಲೆಕ್ಕಿಗರೆಂದು ಅನ್ನಿಸಿ ಕೊಂಡ ಪಾರುಪತ್ಯಗಾರರಿಗೆ ಬಿಟ್ಟಿಯವರಾದ ಇಸ್ರಯೇಲನವರಲ್ಲಿ ಒಬ್ಬೊಬ್ಬನ ಕೈಯಿಂದ ದಿನಕಟ್ಟಳೆಯ ಪ್ರಕಾರ ಬಿಸಿಲು ಕಾದ ಮಣ್ಣು ಹೆಂಟೆಗಳನ್ನು ಕೇಳುವದು ನೇಮಕವಾಗಿತ್ತು. ತದನಂತರ (ದ್ವಿತೀ. ೨೦, ೫—೮.) ಲೆಕ್ಕಿಗರೆಂಬ ಈ ಉದ್ಯೋಗಸ್ಥರಿಗೆ ಬೇರೆ ಕೆಲಸವಿತ್ತು.

೨. ಮೋಶೆ ಆರೋನರು ಫರೋನನಿಗೆ ಅರಿಕೆ ಮಾಡಿದ್ದೆಲ್ಲಾ ಬರೀ ನೆವನವೆಂಬ ಹಾಗೆ ಮಾತಾಡಿದನು.

೩. ಕೊಚ್ಚಿದ ಕೊಯಿಲು ನೆನದ ಮಣ್ಣಿಗೆ ಬೆರಸಿ, ಮಾಡಿದ ಹೆಂಟೆಗಳನ್ನು ಬಿಸಿಲಿನಲ್ಲಿ ಆರಿಸುತ್ತಿದ್ದರು.

೪. ತಮಗೆ ಒಳಗಾದ ಬಿಟ್ಟಿಯಾಳುಗಳ ಕಷ್ಟವನ್ನು ಸಹ್ಲಿಸಲಾರದ ಹಾಗೆ, ದಿನ ದಿನಕ್ಕೆ ನೇಮಕವಾದ ಮಣ್ಣು ಹೆಂಟೆಗಳ ಲೆಖ್ಖವನ್ನು ಇಸ್ರಯೇಲನವರಾದ ಪಾರುಪತ್ಯಗಾರರು ತಮ್ಮ ಜನರಿಂದ ತಕ್ಕೊಂಡು, ಮಿಚ್ರದವರಾದ ಉದ್ಯೋಗಸ್ಥರಿಗೆ ಒಪ್ಪಿಸುವ ಕಟ್ಟಳೆಯನ್ನು ಇವರು ಕಠಿಣವಾಗಿ ಕೈಕೊಂಡು, ಹೆಂಟೆಗಳಲ್ಲಿ ಏನಾದರೂ ಕಡಿಮೆಯಾದ್ದಲ್ಲಿ, ಅವರನ್ನು ಹೊಡೆದು ದಂಡಿಸಿದರು.

ಇಸ್ರಯೇಲನವರ ಬಿನ್ನಹವು. ವ. ೧೫—೧೯.

ವ. ೧೫. ಆಗ ಇಸ್ರಯೇಲನವರ ಪಾರುಪತ್ಯಗಾರರು ಬಂದು, ಫರೋನನಿಗೆ ಕೂಗಿ ಹೇಳಿದ್ದೇನಂದರೆ—ಯಾಕೆ ನಿನ್ನ ಆಳುಗಳಿಗೆ ಹೀಗೆ ಮಾಡುತ್ತಿ? ೧೬.——೧೭. ಆಗಲವನು ನೀವು ಮೈಗಳ್ಳರು, ಮೈಗಳ್ಳರು; ಅದು ಕಾರಣ ನೀವು ಹೋಗಿ ಯೆಹೋವನಿಗೆ ಬಲಿಯರ್ಪಿಸೋಣವೆಂದು ಹೇಳುತ್ತೀರಿ. ೧೮. ಆದರೆ ಈಗ ಹೋಗಿ, ಗೇಯಿರಿ! ಹುಲ್ಲು ನಿಮಗೆ ಕೊಡೋಣವಿಲ್ಲ; ಆದರೆ ಇಟ್ಟಿಗೆಗಳ ಕಟ್ಟಳೆ ನೀವು ಕೊಡಬೇಕು. ೧೯.——

ವ. ೨೦—೨೩. ಪಾರುಪತ್ಯಗಾರರು ಮೋಶೆ ಆರೋನರನ್ನು ಕಲತು, ಸಹಾಯಕ್ಕೆ ಬಂದವರಾದ ನಿಮ್ಮ ಯತ್ನದಿಂದ ನಮ್ಮ ಕಾಟವು ಹೆಚ್ಚಿತಷ್ಟೆ ಎಂದು, ಅವರ ಮೇಲೆ ತಪ್ಪು ಹೊರಿಸುತ್ತಾರೆ. ದೇವರು ಮುಂಚಿತವಾಗಿ ಮೋಶೆಗೆ, ಫರೋನನು ತನ್ನ ಅಪ್ಪಣೆ ಅಸಡ್ಡೆ ಮಾಡುವನೆಂಬದನ್ನು ತಿಳಿಸಿ ಇದ್ದಾಗ್ಯೂ, ಇವನು ಇಸ್ರಯೇಲನವರು ಬಿಡುಗಡೆಯಾಗುವದಕ್ಕಿಂತ ಮುಂಚೆ ಅವರ ಉಪದ್ರವು ಇನ್ನು ಹೆಚ್ಚಾಗುವದೆಂದು ನೆನಸದೆ ಇದ್ದದರಿಂದಲೂ, ಸ್ವಜನರ ದುರವಸ್ಥೆ ತಿಳಿದು ಮಿಗೆ ಬೇಸರಗೊಂಡದರಿಂದಲೂ, ಮನೋವ್ಯಥೆಯನ್ನು ತಾಳಲಾರದೆ, ದೇವರಿಗೆ ಮೊರೆ ಇಟ್ಟು ಗೋಳಾಡುತ್ತಾನೆ. ಫರೋನನು ನಾಶನಕ್ಕೆ ಸಿದ್ಧವಾಗುವ ವೇಳೆಯಲ್ಲಿ ಮೋಶೆ ಆರೋನರ ಮತ್ತು ಇಸ್ರಯೇಲನವರ ವಿಶ್ವಾಸವೆಂಬ ಚಿನ್ನವು ಇಕ್ಕಟ್ಟಿನ ಉರಿಯಿಂದ ಪರೀಕ್ಷಿತವಾಗ ಬೇಕಾಗಿತ್ತು. ಚಿಕ್ಕರ ಕಷ್ಟವು ಮಿತಿ ಮೀರುವಂತೆ ಕಾಣುವ ಸಮಯದಲ್ಲಿಯೆ ದೇವರ ಸಹಾಯವು ಹತ್ತರ ಇರುತ್ತದೆ.

೧೯೪ ದೇವರು ಮೋಶೆಗೆ ಅಪ್ಪಣೆಗಳನ್ನೂ ವಾಗ್ದತ್ತಗಳನ್ನೂ ದಯ ಮಾಡಿದ್ದು.

ಹೊರಡೋಣ. ೬, ೧—೩೦.

ದೇವರು ಮೋಶೆಗೆ ಹೊಸ ಅಪ್ಪಣೆಗಳನ್ನೂ ವಾಗ್ದತ್ತಗಳನ್ನೂ ದಯ ಮಾಡಿದ್ದು. ಸ. ೬, ೧—೧೩.

ವ. ೧. ಆಗ ಯೆಹೋವನು ಮೋಶೆಗೆ ಹೇಳಿದ್ದೇನಂದರೆ:—೨.———೬. ಆದ್ದರಿಂದ
ಇಸ್ರಯೇಲನ ಮಕ್ಕಳಿಗೆ—ನಾನು ಯೆಹೋವನು[೧]; ನಿಮ್ಮನ್ನು ಮಿಚ್ರದ ಬಿಟ್ಟಿಗಳೊ
ಳಗಿಂದ ಹೊರ ಬರಿಸಿ, ಅವರ ಆಳುತನದಿಂದ ನಿಮ್ಮನ್ನು ಬಿಡಿಸಿ, ನೀಡಿದ[೨] ತೋಳಿನಿಂ
ದಲೂ, ದೊಡ್ಡ ನ್ಯಾಯತೀರ್ಪುಗಳಿಂದಲೂ ವಿಮೋಚಿಸುವೆನು. ೭. ನಿಮ್ಮನ್ನು ನನ
ಗೆ ಪ್ರಜೆಯಾಗಿ ತಕ್ಕೊಂಡು ನಿಮಗೆ ದೇವರಾಗಿರಲು, ನಾನು ಮಿಚ್ರದ ಬಿಟ್ಟಿಗಳೊಳ
ಗಿಂದ ಹೊರ ಬರಿಸಿದ ನಿಮ್ಮ ದೇವರಾದ ಯೆಹೋವನಾಗಿದ್ದೇನೆಂದು ತಿಳುಕೊಳ್ಳುವಿ
ರಿ[೩], ಎಂದು ಹೇಳು.—೮.———೯. ಮೋಶೆ ಇಸ್ರಯೇಲನ ಮಕ್ಕಳಿಗೆ ಹಾಗೆ ನುಡಿದಾ
ಗ, ಅವರು ಆತ್ಮಸಂಕಟಕ್ಕಾಗಿಯೂ, ಕಠಿಣವಾದ ಆಳುತನಕ್ಕಾಗಿಯೂ, ಮೋಶೆಯ
ಮಾತು ಕೇಳಲಿಲ್ಲ. ೧೦. ಆಗ ಯೆಹೋವನು ಮೋಶೆಗೆ ನುಡಿದದ್ದೇನಂದರೆ—೧೧. ಹೋ
ಗಿ, ಮಿಚ್ರದ ಅರಸನಾದ ಫರೋನನಿಗೆ ಅವನು ಇಸ್ರಯೇಲನ ಮಕ್ಕಳನ್ನು ತನ್ನ ದೇಶ
ದಿಂದ ಕಳುಹಿಸುವ ಹಾಗೆ ನುಡಿ! ೧೨. ಮತ್ತು ಮೋಶೆ ಯೆಹೋವನ ಮುಂದೆ ನುಡಿ
ದದ್ದೇನಂದರೆ—ಇಗೋ, ಇಸ್ರಯೇಲನ ಮಕ್ಕಳು ನನ್ನ ಮಾತು ಕೇಳದೆ ಇರಲಾಗಿ,
ಫರೋನನು ಹ್ಯಾಗೆ ಕೇಳ್ಯಾನು? ನಾನು ಪರಿಛೇದನೆ ಇಲ್ಲದ ತುಟಿಯುಳ್ಳವನಲ್ಲವೋ[೪]?

೧. ಯೆಹೋವನೆಂಬ ಹೆಸರುಳ್ಳ ದೇವರು ಇಸ್ರಯೇಲನ ಜನಾಂಗಕ್ಕೆ ಗೊತ್ತಾಗಿದ್ದನು. ಅವನ ಸ್ಮರಣೆಯೂ ಅವರಲ್ಲಿ ವಾಡಿಕೆಯಾಗಿತ್ತು. ಆದರೆ ಅವನು ತನ್ನ ಒಡಂಬಡಿಕೆಯ ವಾಗ್ದತ್ತಗಳನ್ನು ದೃಢವಾಗಿ ಕೈಕೊಳ್ಳುವ ನಿರಂತರ ಭಾವವುಳ್ಳ ದೇವರೆಂಬ ಹೆಸರಿನ ಅರ್ಥವನ್ನು ಅವರು ಅಂದಿನ ವರೆಗೆ ಅವನ ಕೃತ್ಯಗಳಿಂದಲೂ, ತಮಗೆ ದೊರಕಿದ ಕೃಪೆಯ ಅನುಭವದಿಂದಲೂ, ಅರಿತವರಾಗಿರಲಿಲ್ಲ. ಅಂದು ಸರ್ವಶಕ್ತಿಯುಳ್ಳ ದೇವರು (ಉತ್ಪ. ೧೭, ೧ ಮುಂ) ನಂಬಿಕೆಯುಳ್ಳ ಒಡಂಬಡಿಕೆಯ ದೇವರಾಗಿ ಅವರಿಗೆ ಗೊತ್ತಾಗುವ ಕಾಲ ತೊಡಗಿತು.

೨. ಅಂದರೆ: ರಕ್ಷಣೆಯ ವಾಗ್ದತ್ತವನ್ನು ನೆರವೇರಿಸಲೆಸಗುವ ಬಲವುಳ್ಳ ಆಸಕ್ತಿಯಿಂದ.

೩. ಇಸ್ರಯೇಲನವರ ಕಾಟದ ಅಳತೆ ತುಂಬಲು, ಅವರು ಮನಗುಂದದ ಹಾಗೆ ಸರ್ವವಾಗ್ದತ್ತ ಸಾರಾಂಶವನ್ನು ಈ ಮಾತುಗಳಿಂದ ಅವರ ನೆನಪಿಗೆ ತರುತ್ತಾನೆ.

೪. ಅಂದರೆ, ನಾನು ಬಾಯಿ ಕಟ್ಟಿದವನೋಪಾದಿಯಾಗಿ ವಾಕ್ಚಾತುರ್ಯವಿಲ್ಲದವನು.

ವ. ೧೪—೨೭. ಲೇವಿಯಿಂದ ಹುಟ್ಟಿದ ಮೋಶೆ ಆರೋನರ ವಂಶಾವಳಿ. ಲೇವಿ ಯಾಕೋಬನ ಪುತ್ರರಲ್ಲಿ ಮೂರನೆಯವನೆಂದು ಸ್ಪಷ್ಟವಾಗಿ ಕಾಣುವ ಹಾಗೆ, ಚೊಚ್ಚಲವನಾದ ರೂಬೆನನು, ಎರಡನೆಯವನಾದ ಸಿಮೆಯೋನನು, ಇವರ ಗೋತ್ರಗಳ ವಂಶಾವಳಿಯ ಆರಂಭವು ಮೊದಲಾಗಿ ಬರೆದದೆ.

ವ. ೨೮—೩೦. ಮೋಶೆ ಆರೋನರ ವಿಷಯವಾಗಿ ೧೧. ೧೨ನೆ ವಚನಗಳಲ್ಲಿ ಬರೆದ ಮಾತು ಇಲ್ಲಿ ಇನ್ನೊಂದು ಸಾರಿ ಬರುವದ್ಯಾಕೆಂದರೆ: ಇತ್ತಣ ಘನವಾದ ಕಾರ್ಯಗಳ ಚರಿತ್ರದಲ್ಲಿ ಆಯಿಕೆಯ ಜನಾಂಗಕ್ಕಾಗಿ ದೇವರು ಮಾಡಿದ ರಾಜ್ಯಾಲೋಚನೆಗಳನ್ನು ನಡಿಸುವ ಉದ್ಯೋಗದಲ್ಲಿ ಸೇರಿದವರಾದ ಇವರಿಬ್ಬರು ಶ್ರೇಷ್ಠರಾದ ಕಾರಣ ಕರ್ತರೆಂದು, ಓದುವವನು ಚರಿತ್ರದ ಆರಂಭದಲ್ಲಿಯೇ ಚನ್ನಾಗಿ ಗ್ರಹಿಸಿ ಕೊಳ್ಳ ತಕ್ಕದ್ದು.

ಹೊರಡೋಣ. ೭, ೧–೧೩.

ಮೋಶೆಯನ್ನು ತನ್ನ ಬಳಿಗೆ ಕಳುಹಿಸಿದ ದೇವರು ಎಂಥವನೆಂದು ಫರೋಹನಿಗೆ ತೋರಿಸಲನುವಾದ ದೃಷ್ಟಾಂತವಾದ ಮೊದಲನೆ ಅದ್ಭುತ ಕಾರ್ಯವು. ಸ. ೭, ೧–೧೩.

ವ. ೧. ಆಗ ಯೆಹೋವನು ಮೋಶೆಗೆ ಹೇಳಿದ್ದೇನಂದರೆ: ಇಗೋ, ನಿನ್ನನ್ನು ಫರೋಹನಿಗೆ ದೇವರಾಗಿ[೧] ಇಟ್ಟಿದ್ಧೇನೆ; ಮತ್ತು ನಿನ್ನ ಸಹೋದರನಾದ ಆರೋನನು ನಿನ್ನ ಪ್ರವಾದಿಯಾಗಿರುವನು[೨]. ೨. — —. ೩. ಆದರೆ ನಾನು ಫರೋಹನ ಹೃದಯವನ್ನು ಕಠಿಣ ಪಡಿಸಿ, ನನ್ನ ಗುರ್ತುಗಳನ್ನೂ ಲಕ್ಷಣಗಳನ್ನೂ ಮಿಚ್ರ ದೇಶದಲ್ಲಿ ಬಹಳ ಮಾಡುವೆನು[೩]. ೪. — —. ೫. ಮತ್ತು — —, ನಾನು ಯೆಹೋವನೆಂದು, ಮಿಚ್ರದವರು ತಿಳಿದು ಕೊಳ್ಳುವರು[೪]. ೬. — —. ೭. ಅವರು ಫರೋಹನ ಹತ್ತರ ಮಾತಾಡುವಾಗ ಮೋಶೆ ಎಂಭತ್ತು ವರ್ಷದವನು, ಆರೋನನು ಎಂಭತ್ತಮೂರು ವರ್ಷದವನು ಆಗಿದ್ದನು. ೮. ಆಗ ಯೆಹೋವನು ಮೋಶೆ ಆರೋನರಿಗೆ ಹೇಳಿದ್ದೇನಂದರೆ— ೯. ಫರೋಹನು, ನಿಮಗಾಗಿ ಲಕ್ಷಣ ಕೊಡಿರಿ[೫] ಎಂದು, ನಿಮಗೆ ಹೇಳಲಾಗಿ, ನೀನು ಆರೋನನಿಗೆ, ನಿನ್ನ ಕೋಲು ತಕ್ಕೊಂಡು, ಫರೋಹನ ಮುಂದೆ ಬಿಸುಡು ಎಂದು, ಹೇಳಿದರೆ, ಅದು ಹಾವಾಗುವದು. ೧೦. ಆಗ ಮೋಶೆ ಆರೋನರು ಫರೋಹನ ಬಳಿಗೆ ಬಂದು, ಯೆಹೋವನು ಅಪ್ಪಣೆ ಕೊಟ್ಟ ಹಾಗೆಯೇ ಮಾಡಿದರು. ಆರೋನನು ತನ್ನ[೬] ಕೋಲನ್ನು ಫರೋಹನ ಮುಂದೆಯೂ ಅವನ ಸೇವಕರ ಮುಂದೆಯೂ ಬಿಸಾಡಲು, ಅದು ಹಾವಾಯಿತು. ೧೧. ಆಗ ಫರೋಹನು ಜ್ಞಾನಿಗಳನ್ನೂ ಶೂನ್ಯಗಾರರನ್ನೂ ಕರಿಸಲು, ಮಿಚ್ರದ ಮಂತ್ರಗಾರರು[೭] ಸಹಾ ತಮ್ಮ ಮಾಟಗಳಿಂದ ಹಾಗೆಯೇ ಮಾಡಿದರು. ೧೨. ಅವರು ತಮ್ಮ ತಮ್ಮ ಕೋಲುಗಳನ್ನು ಬಿಸಾಡಲು, ಅವು ಹಾವುಗಳಾದವು[೮]. ಆದರೆ ಆರೋನನ ಕೋಲು ಅವರ ಕೋಲುಗಳನ್ನು ನುಂಗಿ ಬಿಟ್ಟಿತು[೯]. ೧೩. ಆಗ ಫರೋಹನ ಹೃದಯವು ಯೆಹೋವನು ಹೇಳಿದ ಹಾಗೆಯೇ, ಕಠಿಣವಾಯಿತು.

೧. ದೇವರ ಹೆಸರಿನಲ್ಲಿ ದೇವರ ಅಪ್ಪಣೆಗಳನ್ನು ಫರೋಹನಿಗೆ ತಿಳಿಸಿ, ಅವಕ್ಕೆ ದೇವರ ಶಕ್ತಿಯ ಅದ್ಭುತಗಳಿಂದಲೂ ಲಕ್ಷಣಗಳಿಂದಲೂ ಪ್ರಮಾಣ ಕೊಡುವದಕ್ಕೆ ಮೋಶೆಯನ್ನು ನೇಮಕ ಮಾಡಿದ್ದರಿಂದ, ಯೆಹೋವನು ತನಗೆ ಪ್ರತಿನಿಧಿಯಾದ ಮನುಷ್ಯನಿಗೆ ನೀನು ಫರೋಹನಿಗೆ ದೇವರಾಗಿದ್ಧಿ ಎಂದು, ಹೇಳುತ್ತಾನೆ.

೨. ಪ್ರವಾದಿಗಳ ಉದ್ಯೋಗವೇನಂದರೆ: ದೇವರ ಹೆಸರಿನಲ್ಲಿ ದೇವರ ವಾಕ್ಯಗಳನ್ನು ಸಾರಿ, ದೇವರು ಹೇಳಿದ ಅದ್ಭುತಗಳನ್ನು ಮಾಡುವದು. ಆರೋನನು ಮೋಶೆಗೆ ಈ ವಿಧದ ಸೇವೆ ಮಾಡುವ ಹಸ್ತಕನಾದನು. ಅಲ್ಪವಿಶ್ವಾಸದ ನಿಮಿತ್ತವಾಗಿಯೇ (ಸ. ೪, ೧೬.) ತನಗೆ ಈ ಸಹಾಯಕನನ್ನು ದೇವರು ಕೊಟ್ಟನೆಂಬ ನೆನಪು ಮೋಶೆಯ ಮನಸ್ಸಿನಲ್ಲಿ ಅಹಂಕಾರದ ಹೆಚ್ಚಿಗೆಯನ್ನು ಸಮೆತಗ್ಗಿಸ ಯುಕ್ತವಾಗಿತ್ತು.

೩. ದೇವರು ಮೋಟಾದ ಮನುಷ್ಯನನ್ನು ಶಿಕ್ಷಿಸಿ, ಅವನ ಹೃದಯವನ್ನು ಕಠಿಣ ಪಡಿಸುತ್ತಾ ಇರುವ ವೇಳೆಯಲ್ಲಿಯೂ, ಪಾಪಿ ಕೆಟ್ಟು ಹೋಗೋಣಕ್ಕೆ ಮೆಚ್ಚದೆ, ಅವನು ಮಾನಸಾಂತರ ಪಟ್ಟು, ಗುಣವಾಗ

ಬೇಕೆಂದು ಅಪೇಕ್ಷಿಸಿ, ಅವನ ಮನಸ್ಸನ್ನು ತಿರುಗಿಸುವದಕ್ಕೆ ಸಾಧ್ಯವಾದ ನಾನಾ ತರದ ಯತ್ನಗಳನ್ನು ಮಾಡುವದರಿಂದ ತನ್ನ ಕರುಣೆಯ ಐಶ್ವರ್ಯವನ್ನು ತೋರಿಸುವವನಾಗಿದ್ದಾನೆ.

೪. ಫರೋನನೂ ಅವನ ಜನರೂ ಯೆಹೋವನು ಮಿಚ್ರ ದೇಶಕ್ಕೂ ಒಡೆಯನಾಗಿದ್ದಾನೆಂಬದಕ್ಕೆ ಒಪ್ಪಲೊಲ್ಲದದರಿಂದ, ಅವರು ಶ್ರಮಾಮಯವಾದ ಶಿಕ್ಷೆಯಿಂದ ಅದನ್ನು ಕಲಿತು ಕೊಳ್ಳ ಬೇಕಾಯಿತು. ಆದರೆ ಆಯಿಕೆಯಾದ ಜನಾಂಗವು ಅದಕ್ಕೆ ದೊರಕಿದ ಯೆಹೋವನೆಂಬ ದೇವರ ಸರ್ವಾಧಿಕಾರದ ಪ್ರಕಟಣೆಯಿಂದ ದೇವರ ವಾಗ್ದತ್ತಗಳೆಲ್ಲಾ ನೆರವೇರುವವೆಂಬ ನಂಬಿಕೆಯಲ್ಲಿ ದೃಢವಾಯಿತು.

೫. ವಿಶ್ವಾಸಹೀನರೇ ನಂಬಿಕೆಯನ್ನು ಹುಟ್ಟಿಸತಕ್ಕ ಗುರ್ತುಗಳು ತಮಗೆ ದೊರಕ ಬೇಕೆಂದು, ಹೆಚ್ಚಾಗಿ ಕೇಳುವದು ವಾಡಿಕೆ.

೬. ಆರೋನನು ಮೋಶೆಯ ಪ್ರವಾದಿಯಾಗಿ ಅವನ ಕೋಲು ಹಿಡು ಕೊಂಡದರಿಂದ, ಅದು ಆರೋನನದೆಂದು ಅನ್ನಿಸಿ ಕೊಳ್ಳುತ್ತದೆ.

೭. ಇಲ್ಲಿ ಪ್ರಯೋಗವಾದ ಹರ್ತುಮಿಮ್ ಎಂಬ ಇಬ್ರಿಯ ಶಬ್ದಕ್ಕೆ ಲೇಖರು ಇಲ್ಲವೆ ಶಾಸ್ತ್ರಿ ಎಂಬ ಅರ್ಥ. ಅವರು ಯಾಜಕ ಜಾತಿಯ ಒಂದು ವರ್ಗದವರೆಂದು, ತೋರುತ್ತದೆ.

೮. ಕೈಚಳಕದಿಂದ ಕಣ್ಣು ಕಟ್ಟೋಣ, ವೈದ್ಯಶಾಸ್ತ್ರಪ್ರಾಜ್ಞರಿಗೆ ಗೊತ್ತಾದ ಮರ್ಮಗಳನ್ನು ಪ್ರಯೋಗಿಸೋಣ ಈ ಮೊದಲಾದ ಚಮತ್ಕೃತಿಗಳಲ್ಲದೆ, ಮಿಚ್ರದವರಾದ ಮಂತ್ರಗಾರರು ದೈವ್ಯಶಕ್ತಿಗಳ ಸಹಾಯದಿಂದ ನಿಜವಾದ ಆಶ್ಚರ್ಯ ಕ್ರಿಯೆಗಳನ್ನು ನಡಿಸುತ್ತಿದ್ದರು. ಇಂದಿನ ವರೆಗೆ ಅನ್ಯ ಜನರಲ್ಲಿಯೂ ಅವಿಶ್ವಾಸಿಗಳಾದ ಕ್ರೈಸ್ತರಲ್ಲಿಯೂ ಅಂಥಕಾರದ ಶಕ್ತಿಗಳಿಂದ ಅಮಾನುಷ ಕಾರ್ಯಗಳನ್ನು ಮಾಡುವವರುಂಟು. ದೇವವಿರೋಧವಾದ ಅಂಧಕಾರದ ಶಕ್ತಿಯ ಮಾಟಗಳು ಬರೇ ವಂಚನೆ ಎಂದು, ದೇವರ ವಾಕ್ಯದಲ್ಲಿ ತೋರುವದಿಲ್ಲ. ಐಂದ್ರಜಾಲಿಕರಲ್ಲಿ ನಾನಾ ತರದ ವಂಚನೆ ಪ್ರಬಲವಾಗಿದೆಂಬುವದು ಸರಿ. ಅವರ ಮೋಸಕ್ಕೆ ದೂರವಾಗಿರುವದು ಲೇಸು. ಈ ವಿಷಯವಾಗಿ ಅಪೊ. ಕ್ರಿ. ಸ. ೧೯, ೧೩ — ೨೦ ಬರೆದಿರುವ ಚರಿತ್ರವನ್ನು ಓದಿ ಚನ್ನಾಗಿ ಧ್ಯಾನಿಸ ತಕ್ಕದ್ದು. (೨ ತಿಮೊ. ೩, ೮ಲ್ಲಿ ಅಂಥಾ ಮಂತ್ರಗಾರರಾದ ಯನ್ನೆ ಯಂಬ್ರೆ ಎಂಬವರ ಹೆಸರುಗಳು ಹೇಳಿಯವೆ.)

೯. ಮಿಚ್ರದ ಮಂತ್ರಗಾರರು ದೈವ್ಯ ಬಲದ ಚೈತನ್ಯದಿಂದ ಮಾಡಿದ್ದನ್ನು ಮೋಶೆ ಆರೋನರು ಸತ್ಯದೇವ ತ್ರಾಣ ಪ್ರಯೋಗದಿಂದ ಎಸಗಿದರು. ಫರೋನನು ಸತ್ಯಗುಣವುಳ್ಳವನಾಗಿರುತ್ತಿದ್ದರೆ, ಸತ್ಯದೇವರ ಅಧಿಕ್ರಮವನ್ನು ತಿಳಿಯದೆ ಹೋಗುತ್ತಿದ್ದಿಲ್ಲ. ಅವನು ಯೆಹೋವನ ಮಹಿಮೆಯನ್ನು ಗ್ರಹಿಸಲೊಲ್ಲದದರಿಂದ, ದೇವರು ಬೆದರಿಸಿ ಹೇಳಿಸಿದ್ದನ್ನು ಪೂರೈಸಿ, ಭಾರವಾದ ನ್ಯಾಯನಿರ್ಣಯದ ಶಿಕ್ಷೆಗಳನ್ನು ಮಿಚ್ರದ ರಾಜನ ಮೇಲೆಯೂ ಅವನ ಜನರ ಮೇಲೆಯೂ ಬೀಳಲೀಸುವದು ಅವಶ್ಯವಾಯಿತು.

ಮಿಚ್ರದ ಕಾಟಗಳು. ಸ. ೭, ೧೪—ಸ. ೧೨, ೩೬.

ದೇಶಕ್ಕೆ ಯಾವ ಕೇಡೂ ಮಾಡದಂಥ, ಮೋಶೆಯ ಕೋಲು ಮಾರ್ಪಟ್ಟು, ಹಾವಾಗಿ, ಮಿಚ್ರದ ಮಂತ್ರಗಾರರ ಹಾವಾದ ಕೋಲುಗಳನ್ನು ನುಂಗಿ ಬಿಟ್ಟ ಕೌತುಕವು ಇಸ್ರಯೇಲನವರ ದೇವರ ಅಧಿಕ್ರಮವನ್ನು ಪ್ರಕಟಿಸುತ್ತದೆಂದು, ಫರೋನನು ತಿಳುಕೊಂಡು, ಎಡಗೊಟ್ಟಾದ ತನ್ನ ಬಿಂಕವನ್ನು ತಗ್ಗಿಸಿ ಬಿಡುವದು ಅನುವಾಗಿರುತ್ತಿತ್ತು. ಆದರೆ ಅವನು ಬಗ್ಗಲೊಲ್ಲದದರಿಂದ, ದೇವರು ತರತರದ ಕಠಿಣವಾದ ಕಾಟಗಳೆಂಬ ಬೆತ್ತಗಳಿಂದ ಅವನನ್ನು ಹೊಡೆದು, ಅವನ ಮೋಟತನವನ್ನು ಮುರಿಯಲವಶ್ಯವಾಯಿತು. ಹತ್ತನೆ ಕಾಟ ಉಳಿದ ಒಂಬತ್ತು ಕಾಟಗಳು ಮಿಚ್ರದೇಶದಲ್ಲಿ ತೀರಾ ಅಪರೂಪವಾದ ಬಾಧೆಗಳಾಗಿರಲಿಲ್ಲ. ಅವು ಆ ದೇಶದ ಚಾಪಕ್ಕೆ ಸಂಬಂಧವಾಗಿದ್ದು, ಆಗ್ಗಾಗ್ಗೆ ಮಿಚ್ರದಲ್ಲಿ ಹುಟ್ಟುತ್ತಾ, ಜನರನ್ನು ಪೀಡಿಸುತ್ತಾ ಇದ್ದಾಗ್ಯೂ, ಮೋಶೆಯ ಅಪ್ಪಣೆಯಿಂದಲೇ ಸಂಚವಿಸಿ, ಹೆಚ್ಚು ಹೆಚ್ಚಾಗಿ ಬೆಳದು, ಆರು ತಿಂಗಳೊಳಗೆ ಎಡೆ

ಬಿಡದೆ ನಡೆದು, ದೇವರಿಂದುಂಟಾದ ಮಹಾ ಕೌತುಕವಾಗಿ ತೋರಿದವು. ಅದರ ಉದ್ದೇಶವೇನಂದರೆ: ಮಿಸ್ರ ದೇಶವನ್ನೂ ಆಳುವ ಬಲವುಳ್ಳ ಒಡೆಯನಾದ ಯೆಹೋವನ ಮಹಿಮೆಗೆ ಫರೋನನೂ ಅವನ ಜನರೂ ಕುಗ್ಗಿದ ಆಳುಗಳಾಗಿ ವಿಧೇಯರಾಗ ಬೇಕೆಂಬದೂ, ಇಸ್ರಯೇಲನವರು ತಮ್ಮ ರಕ್ಷಣೆಯ ದಿವಸ ಹತ್ತರ ಬಂತೆಂದು ತಿಳಿದು, ಯೆಹೋವನು ತಮಗೆ ಭದ್ರವಾದ ಆಶ್ರಯ ಕೊಡುವ ಸ್ವಪ್ರಜಾಸಕ್ತನಾದ ಕರ್ತನೆಂದು, ದಿಟ್ಟವಾಗಿ ನಂಬಿ, ದೇವರ ರಾಯಭಾರಿಯು ಸರ್ವ ಲಕ್ಷಣವುಳ್ಳ ಮೋಶೆಯ ಮೇಲೆ ಪೂರ್ಣ ವಿಶ್ವಾಸವಿಡ ಬೇಕೆಂಬದೂ ಈ ರೀತಿಯಿಂದ ಪ್ರಸಿದ್ಧವಾಯಿತು.

ಮಿಸ್ರದ ನೀರು ರಕ್ತಮಯವಾದದ್ದು. ಸ. ೭, ೧೪—೨೫.

ಮಿಸ್ರದವರು ದೇವಿ ಎಂದು ಆರಾಧಿಸುತ್ತಾ ಬರುವ ನೀಲ್ ನದಿಗೆ ಪೂಜೇ ಮಾಡುವದಕ್ಕಾಗಿ ಏನೋ, ಫರೋನನು ಘಟ್ಟದ ಬಳಿಗೆ ಬರುತ್ತ ಇರುವ ವೇಳೆಯಲ್ಲಿ ಅವನಿಗೆ ಎದುರ್ಗೊಂಡು, ತನ್ನ ಯಜಮಾನನೆಂದು ಅವನು ಅರಿಕೆ ಮಾಡಲೊಲ್ಲದ ಒಡೆಯನಾದ ಯೆಹೋವನು ಮಾಡಿದ ನಿರ್ಣಯವನ್ನು ಅರಸನಿಗೆ ಮಾರಣೆ ದಿವಸದಲ್ಲಿ ಸಾರ ಬೇಕೆಂಬ ಅಪ್ಪಣೆ ಮೋಶೆಗೆ ಬಂತು. ಅವನ ಮಾತಿನ ಪ್ರಕಾರ ಆರೋನನು ನದಿ, ಪ್ರವಾಹ, ಕೆರೆ, ಕುಂಟೆ ಮುಂತಾದ್ದರ ಮೇಲೆ (ಅಂದರೆ ನೀಲ್ ನದಿಯ ಮೇಲೆಯೂ, ಅದರ ಜಬ್ಬುಲು ಸ್ಥಳಗಳ ಮೇಲೆಯೂ, ಹೊಳೆಯ ನೀರು ಸೋರಿ ತಿಳಿಯಾಗುವ ಕೊಳಗಳ ಮೇಲೆಯೂ) ಕೋಲು ಎತ್ತಿದಾಗ, ನೀರೆಲ್ಲಾ ರಕ್ತಮಯವಾಗಿ, ಒಂಡಾಗಿ, ಕೊಳತು, ನಾತ ಹಿಡಿದು, ಮೀನುಗಳು ಸಾಯುವಂತೆ ವಿಷವಾಯಿತು. ವ. ೧೯—೨೧. ಮಿಸ್ರದ ಮಂತ್ರಗಾರರು (ವ. ೨೨.) ಈ ಅದ್ಭುತವನ್ನು ಅನುಕರಿಸಿ, ನೀಲ್ ನದಿಗೆ ಸೇರದೆ ಇದ್ದ ಸರೋವರಗಳ ನೀರು ಹಾಗೆಯೇ ಮಾರಿಸಿ, ಬಾಧೆಯನ್ನು ಹೆಚ್ಚಿಸಿದರು. ಆದರೆ ತಾವೇ ಕೆಡಿಸಿದ ನೀರು ತಿರಿಗಿ ಶುದ್ಧ ಮಾಡುವದಕ್ಕೆ ಅಶಕ್ತರಾಗಿದ್ದರು. ಆದರೂ ಫರೋನನು (ವ. ೨೩.) ಆದದ್ದನ್ನು ನೋಡಿ, ತಿರುಗಿ ಕೊಂಡು, ಮನೆಗೆ ಬಂದು, ಎಲ್ಲಾ ಅಸಡ್ಡೆ ಮಾಡಿದನು. ಮಿಸ್ರದವರು ನದಿಗೆ ಬೇರೆಯಾದ ಸ್ಥಳಗಳಲ್ಲಿ ಬಾವಿಗಳನ್ನಗಿದು, ಕಷ್ಟದಿಂದ ನೀರು ಪಡೆದು ಕೊಳ್ಳ ಬೇಕಾಯಿತು. ಈ ಕಾಟದ ಬಳಿಕ ಏಳು ದಿವಸ ಕಳದ ಮೇಲೆ ಮೋಶೆಗೆ ಹೊಸ ಅಪ್ಪಣೆ ಯೆಹೋವನ ಬಾಯಿಂದ ಬಂತು.

ಕಪ್ಪೆಗಳ ಕಾಟ. ೨ನೆ ಕಾಟ. ಸ. ೮, ೧—೧೫.

ಈ ಕಾಟ ಬರುವದೆಂತ ಮೋಶೆ ಬೆದರಿಸಿ ಹೇಳಿದ ಮಾತನ್ನು ಫರೋನನು ಅಸಡ್ಡೆ ಮಾಡಿದ ಬಳಿಕ, ಮಿಸ್ರದಲ್ಲಿ ಯಾವಾಗಲೂ ಸಲೆ ವಾಡಿಕೆಯಾದ ಕಪ್ಪೆಗಳು, ಮೋಶೆಯ ಅಪ್ಪಣೆಯಿಂದ ಆರೋನನು ಕೋಲು ಹಿಡಿದು ಕೈ ನೀಡಿದ ಕೂಡಲೇ, ಚೋದ್ಯವಾಗಿ ಹೆಚ್ಚಿ ಬಂದು, ದೇಶವನ್ನೆಲ್ಲಾ ಕವಿದು, ಅರಮನೆಯಲ್ಲಿಯೂ, ಜನರ ಮನೆಗಳಲ್ಲಿಯೂ, ಮಲಗುವ ಕೋಣೆಗಳಲ್ಲಿಯೂ, ಹಾಸಿಗೆಗಳಲ್ಲಿಯೂ, ಒಲೆಗಳಲ್ಲಿಯೂ, ಹಿಟ್ಟು ನಾದುವ ಕೊಣಬಿಗೆಗಳಲ್ಲಿಯೂ, ಕಾಡಿ ಕುಣಿದು ಹೊಕ್ಕಿದವು. ಮಂತ್ರಗಾರರು ಈ ಕಾಟವನ್ನು ಸಹಾ ಅನುಕರಿಸಿ, ದೇಶದ ಬಾಧೆ ಹೆಚ್ಚಿಸುವದಲ್ಲದೆ ಸಹಾಯಕ್ಕೆ ಏನೂ ಮಾಡಲಾರದೆ ಹೋದರು. ವ. ೩. ೭. ಫರೋನನು ಈ ಬಾಧೆ ತಾಳಲಾರದೆ, ಮೋಶೆ ಆರೋನರನ್ನು ಕರಿಸಿ, ಅದನ್ನು ಪರಿಹರಿಸ ಬೇಕೆಂತಾ, ದೇವರನ್ನು ಬಿನ್ನೈಸಿರಿ ಎಂದು, ಬೇಡಿ ಕೊಳ್ಳುತ್ತಾನೆ. ಆದರೆ ಅವನು ದೇವರ ಅಧಿಕ್ರಮ ತಿಳುಕೊಂಡರೂ, ಮನಃಪೂರ್ವಕವಾಗಿ ಮಾನಸಾಂತರ ಪಡುವದಿಲ್ಲ. ಇಕ್ಕಟ್ಟು ಬಂದ ವೇಳೆಯಲ್ಲಿ ದುಷ್ಟರು ಬಾಯಿ ತೆರೆದು, ದೇವರಿಗೆ ಮೊರೆ ಇಟ್ಟರೂ, ತಮ್ಮ ಹೃದಯಗಳನ್ನು ದೇವರ ಕಡೆಗೆ ತಿರುಗಿಸಲೊಲ್ಲರಲ್ಲಾ? ಆದಾಗ್ಯೂ ಫರೋನನು ದೇವರ ಮುಂದೆ ತುಸ ಅಣಗಿ ಹೋದ್ದರಿಂದ, ಮೋಶೆ ಅವನನ್ನು ಮನ್ನಣೆ ಮಾಡಿ (ವ. ೯), ಕಪ್ಪೆಗಳು ಅಳಿದು ನೀಲ್ ನದಿಯಲ್ಲಿಯೇ ಉಳಿಯಲಿಕ್ಕಿರುವ ವೇಳೇ ನೇಮಿಸ ಬೇಕೆಂದು ಹೇಳಿ,

ಯೆಹೋವನೆಂಬ ದೇವರಿಗೆ ಸರಿಯಾದವನು ಯಾವನೂ ಇಲ್ಲವೆಂತಾ, ಅವನು ತಿಳಿಯುವ ಹಾಗೆ, ಅವನ ಬಯಕೆಯ ಪ್ರಕಾರ, ನಾಳೆ ಬಾಧೆ ನಿಂತು ಹೋಗುವದೆಂದು, ತನ್ನ ದೇವರಲ್ಲಿ ಇಟ್ಟ ಅಧಿಕ ಭರವಸದಿಂದ ನಿಸ್ಸಂಶಯನಾಗಿ ಮಾತು ಕೊಡುತ್ತಾನೆ. ವ. ೧೦. ತಾನು ಫರೋನನ ಮೇಲೆ ಬರಲೀಸಿದ ಕಷ್ಟಗಳ ವಿಷಯವಾಗಿ (ವ. ೧೨.) ಮೋಶೆ ಆಸಕ್ತಿಯಿಂದ ಮಾಡಿದ ಬಿನ್ನಹವನ್ನು ದೇವರು ಆಲಿಸಲು, ಅವು ಮನೆಗಳಲ್ಲಿಯೂ, ಅಂಗಳಗಳಲ್ಲಿಯೂ, ಹೊಲಗಳಲ್ಲಿಯೂ, ಸತ್ತು, ರಾಶಿ ರಾಶಿಯಾಗಿ ಬಿದ್ದು, ದೇಶದಲ್ಲಿ ನಾತ ಹುಟ್ಟಿಸಿದವು. ವ. ೧೪. ಆದರೆ ಫರೋನನು ಉಪಶಮನವಾಯಿತೆಂದು ನೋಡಿದಾಗ, ಮಾನಸಾಂತರವಾಗದೆ, ತನ್ನ ಹೃದಯವನ್ನು ಘಟ್ಟಿ ಮಾಡಿ ಕೊಂಡನು.

ನುಸಿಗಳ ಕಾಟ. ೩ನೆ ಕಾಟ. ವ. ೧೬—೧೯.

ಆರೋನನು ಯೆಹೋವನ ಮಾತಿನ ಪ್ರಕಾರ ತನ್ನ ಕೋಲಿನಿಂದ ಭೂಮಿಯ ಧೂಳನ್ನು ಬಡಿಯುತ್ತಲೇ ಲೆಖ್ಖವಿಲ್ಲದ ನುಸಿಗಳು ಹುಟ್ಟಿ ಮನುಷ್ಯರನ್ನೂ ದನಗಳನ್ನೂ ಕಾಡಿಸಿದವು. ಮಂತ್ರಗಾರರು ನುಸಿಗಳನ್ನು ಹುಟ್ಟಿಸ ಹೋಗಿ, ಸೋತು ಹೋದರು. ಈ ಕಾಟ ಮೊದಲ್ಗೊಂಡು ಉಳಿದವುಗಳಲ್ಲೆಲ್ಲಾ ಕೆಟ್ಟ ಮಾಟದ ಯತ್ನಗಳು ದುರುಳಿಲ್ಲದೆ ಹೋದ ಕಾರಣ, ಮಂತ್ರಗಾರರು ತಾವು ಫರೋನನಿಗೆ (ವ. ೯.) ಇದು ದೇವರ ಬೆರಳೆಂದು, ಅರಿಕೆ ಮಾಡಿದರು. ಆದಾಗ್ಯೂ ಅವನ ಹೃದಯ ಮೆತ್ತಣವಾಗಲಿಲ್ಲ. ದೂರವಾದ ದಕ್ಷಿಣ ದಿಕ್ಕಿನಿಂದ ಹರಿದು ಬರುವ ನೀಲ್ ನದಿಯು ಆ ದಕ್ಷಿಣ ದೇಶದ ಮಳೆಗಾಲ ತೊಡಗಿದ ಬಳಿಕ ಜ್ಯೇಷ್ಠದಲ್ಲಿ ಏರುತ್ತಾ ಬಂದು, ತಗ್ಗಾದ ಮಿಚ್ರ ದೇಶವನ್ನು ಮುಚ್ಚಿ, ದಕ್ಷಿಣ ದಿಕ್ಕಿನ ಮಳೆಗಾಲ ಕಳೆದಾಗ, ಶಿರಿಗಿ ಇಳಿಯುತ್ತಾ ಇರುವ ಆಶ್ವೀಜದಲ್ಲಿ ವರ್ಷ ವರ್ಷಕ್ಕೆ ಒಂದು ತರದ ಪತಂಗಗಳು ಮಿಚ್ರದಲ್ಲಿ ಹೇರಳವಾಗಿ ಹುಟ್ಟುವದು ವಾಡಿಕೆ. ಈ ಪತಂಗವು ಹೇನಿನ ಹಾಗೆ ಇರುವದಿಲ್ಲ, ಅದು ಶುಮಾರು ನುಸಿಯ ಹಾಗೆ ಮತ್ತು ಜಿಗಟೆಯ ಹಾಗೆ ಇರುತ್ತದೆ, ಮನುಷ್ಯರ ಕಣ್ಣುಗಳಲ್ಲಿಯೂ ಮೂಗುಗಳಲ್ಲಿಯೂ ಹೊಕ್ಕು, ಬಹಳ ಉಪದ್ರವ ಕೊಡುತ್ತವೆ. ಆ ಸಮಯದಲ್ಲಿ ಈ ಕಾಟ ಉಂಟಾಯಿತೆಂದು ಎಣಿಕೆ ಮಾಡ ಬಹುದು, ಆದರೆ ಅದು ವಾಡಿಕೆಯಾದ ಉಪದ್ರಕ್ಕಿಂತ ಮಿತಿ ಮೀರಿ, ಭಯಂಕರ ರೀತಿಯಿಂದ ಹೆಚ್ಚಿತು.

ನೊಣಗಳ ಕಾಟ. ೪ನೆ ಕಾಟ. ವ. ೨೦—೩೨.

ಇಲ್ಲಿ ಬರೆದಿರುವ ಕಾರ್ನೊಣಗಳು ಗುಂಪು ಗುಂಪಾಗಿ ಹಾರಿ, ಎಲ್ಲಾ ಪ್ರಾಣಿಗಳ ಮೈ ಮೇಲೆ ಬಿದ್ದು, ಹೊದಿಕೆ ಇಲ್ಲದಲ್ಲೆಲ್ಲಾ ಕೂತು, ಊರಿ, ಮನುಷ್ಯರಲ್ಲಿಯೂ ದನಗಳಲ್ಲಿಯೂ ಕಡತದಿಂದ ಶಾನೆ ನೋವು ಕೊಡುವ ಗದ್ದೆಗಳನ್ನು ಏರಿಸುತ್ತವೆ. ಈ ಕಾಟವು ಇಸ್ರಯೇಲನವರಿಗೆ ತಗಲಲಿಲ್ಲವೆಂದು, ಪ್ರತ್ಯೇಕವಾಗಿ ಬರೆದಿರುವದರಿಂದ, ದೇಶದ ಬಾಧೆಗಳು ದೇಶಸ್ಥರೆಲ್ಲರ ಮೇಲೆ ಬೀಳುವಂದದಲ್ಲಿ ಮೊದಲಿನ ಮೂರು ಕಾಟಗಳ ಉಪದ್ರವು ಇಸ್ರಯೇಲನವರಿಗೂ ಬಂತೆಂದು, ತಿಳಿಯಲಾಗುವದು, ಹೀಗಿರಲಾಗಿ ಇದು ಮೊದಲಾದ ಕಾಟಗಳಿಂದ ಗೋಶೆನ್ ಶೀಮೆಯಲ್ಲಿ ವಸ್ತಿಯಾದ ಇಸ್ರಯೇಲನವರಿಗೆ ನಷ್ಟವೇನೂ ಬಂದದ್ದಿಲ್ಲವೆಂಬ ಚೋದ್ಯವು ದೇವರು ಮಾಡಿದ ಅದ್ಭುತ ಕಾರ್ಯಗಳ ಹೆಚ್ಚಿಗೆಯಾಗಿತ್ತು. ಹ್ಯಾಗೆಂದರೆ ಮಿಚ್ರದವರ ಮನೆಗಳೂ ಅವರು ವಸ್ತಿಯಾದ ಭೂಮಿಯೂ ಕಾರ್ನೊಣಗಳಿಂದ ತುಂಬಿರಲಾಗಿ, ವ. ೨೧; "ನಾನೇ ಭೂಮಿಯೊಳಗೆ ಯಜಮಾನನೆಂದು, ನೀನು ತಿಳುಕೊಳ್ಳುವ ಹಾಗೆ" ಎಂತ, ದೇವರು ಹೇಳಿದ ಮಾತಿಗೆ ಅನುಸಾರವಾಗಿ, ಕಾರ್ನೊಣಗಳು ಶೇರದ ವ್ಯತ್ಯಾಸವು ಗೋಶೆನ್ ದೇಶಕ್ಕೆ ಉಂಟಾಯಿತು. ಫರೋನನ ಮನೆಯಲ್ಲಿಯೂ ಗೋಶೆನ್ ಶೀಮೆಯ ಹೊರ್ತಾಗಿ ದೇಶದಲ್ಲೆಲ್ಲಿಯೂ ಬಂದ ಕಾರ್ನೊಣಗಳ ಕಾಟವನ್ನು ಅರಸನು ತಾಳಲಾರದೆ, ತಾನೇ ಮೋಶೆ ಆರೋನರನ್ನು ಕರಿಸಿ, "ಹೋಗಿ, ದೇಶದೊಳಗೆ ನಿಮ್ಮ

ದೇವರಿಗೆ ಬಲಿಯರ್ಪಿಸಿರಿ," ಅಂದನು. ವ. ೨೫. ಅವರು ದೇಶದೊಳಿದ್ದು, ಬಲಿಯರ್ಪಿಸೋಣಕ್ಕೆ ಫರೋನನು ಒಪ್ಪಿ ಕೊಂಡದ್ದು ಯೆಹೋವನ ಚಿತ್ತಕ್ಕೆ ಅನುವಾಗಿರಲಿಲ್ಲ. ಅದೇನಂದರೆ: ಇಸ್ರಯೇಲನವರ ಜನಾಂಗವು ಯೆಹೋವನ ಒಡಂಬಡಿಕೆಯ ಜನಾಂಗವಾಗುವ ಹಾಗೆ ಮಿಚ್ರವನ್ನು ಬಿಟ್ಟು ಬಿಟ್ಟು, ಅರಣ್ಯದಲ್ಲಿ ಪಿಂಗಡವಾಗಿದ್ದು, ಬಲಿಯರ್ಪಿಸುವದು ಅವಶ್ಯವಾಗಿತ್ತು. ಮೋಶೆಯ ಬಿನ್ನಹದ ಒತ್ತಾಸೆಯಿಂದ ಕಾಟಕ್ಕೆ ತಪ್ಪಿಸಿ ಕೊಳ್ಳುವ ಬಯಕೆಯಿಂದಲೇ ಫರೋನನು ಅವನ ಮಾತಿಗೆ ಒಡಂಬಟ್ಟು, ಕಾಟವು ನಿಂತ ಕೂಡಲೇ (ವ. ೩೨.) ತನ್ನ ಹೃದಯವನ್ನು ಕಠಿಣ ಮಾಡಿ ಕೊಂಡು ಜನಾಂಗವನ್ನು ಕಳುಹಿಸಿ ಬಿಡಲಿಲ್ಲ.

ವ್ಯಾಧಿಯ ಕಾಟ. ೫ನೆ ಕಾಟ. ಸ. ೯, ೧—೭.

ಮುಂಬೆದರಿಕೆಯ ಮಾತಿಗೆ ಅನುಸಾರವಾಗಿ, ಕುದುರೆ ಕತ್ತೆ ಒಂಟೆ ದನ ಕುರಿ ಮುಂತಾದ್ದದರ ಮೇಲೆ ಅತಿ ಕಠಿಣವಾದ ವ್ಯಾಧಿ ಬಂತು. ಆದರೆ ಇಸ್ರಯೇಲನ ಮಕ್ಕಳ ಪಶುಗಳಲ್ಲಿ ಒಂದೂ ಸಾಯಲಿಲ್ಲ. ಫರೋನನು ಕೇಳಿದ ಸುದ್ದಿ ಹೌದೋ ಏನೋ ನೋಡುವದಕ್ಕೆ ಆಳುಗಳನ್ನು ಕಳುಹಿಸಿ, ಹಾಗೆಯೆ ಆದದ್ದು ಸರಿ ಎಂದು, ತಿಳುಕೊಂಡರೂ, ಅವನ ಹೃದಯವು ಮೆತ್ತಗಾಗದೆ, ಹೆಚ್ಚು ಕಠಿಣವಾಯಿತು. ಪೀಡಿಸುವ ನಾಲ್ಕು ಕಾಟಗಳ ಮೇಲೆ ಮೊದಲು ಪಶುಗಳನ್ನು ಕೊಲ್ಲುವ ಐದನೆ ಮುಂತಾದ ಕಾಟಗಳು ಅಧಿಕ ಭಯಂಕರವಾಗುವಷ್ಟು ಹೆಚ್ಚಾಗಿ ಫರೋನನ ಹಟವಾದ ಬಿಂಕವು ಬೆಳಿಯುತ್ತಾ ಇತ್ತು.

ಕರಿ ಬೊಕ್ಕೆಗಳು ಮಿಚ್ರದ ಮೇಲೆ ಬಿದ್ದದ್ದು. ೬ನೆ ಕಾಟ. ವ. ೮—೧೨.

ಈಗ ಬರುವ ಕಾಟಗಳು ಮನುಷ್ಯರಿಗೂ ಹತ್ತಲೊಡರ್ಚುತ್ತವೆ. ಹ್ಯಾಗೆಂದರೆ ಮೋಶೆ ಆರೋನರು ಆಕಾಶದ ಕಡೆಗೆ ಚೆಲ್ಲಿದಂಥ ದೇಶವನ್ನು ಕವಿದ ಒಲೇ ಇಲ್ಲಣದಿಂದ ಮನುಷ್ಯರ ಮತ್ತು ಪಶುಗಳ ಮೈ ಮೇಲೆ ಬೊಕ್ಕೆಗಳೂ ಹುಣ್ಣುಗಳೂ ಹುಟ್ಟಿದವು. ಮಂತ್ರಗಾರರು ಸಹಾ ಹುಣ್ಣು ಹಿಡಿದವರಾಗಿ, ಮೋಶೆಯ ಎದುರು ನಿಲ್ಲಲಾರದೆ, ದಿಕ್ಕು ಕಾಣದವರಾದರು. ದ್ವಿತಿ. ೨೮, ೨೭ನೆ ವಚನದಲ್ಲಿ ಈ ರೋಗಕ್ಕೆ ಮಿಚ್ರದ ಹುಣ್ಣು ಎಂಬ ಹೆಸರದೆ. ಫರೋನನು ತನ್ನ ಹೃದಯವನ್ನು ಕಠಿಣ ಮಾಡಿ ಕೊಂಡನೆಂದು, ಹಿಂದಿನ ಚರಿತ್ರದಲ್ಲಿ ಕೆಲವು ಸಲ ಬರೆದಿರುವ ಮಾತಿಗೆ ಪ್ರತಿಯಾಗಿ ಇಲ್ಲಿ, ೧೨ನೆ ವಚನದಲ್ಲಿ, ಯೆಹೋವನು ಫರೋನನ ಹೃದಯವನ್ನು ಕಠಿಣ ಮಾಡಿದನೆಂದು ಬರದದೆ, ಯಾಕಂದರೆ ಮುಂಚೆ ಬೇಕೆಂದು ಸತ್ಯವಾದ ದೇವರಿಗೆ ಎದುರಾಡಿದ ಪಾಪದ ಶಿಕ್ಷೆಗಾಗಿ ಅಂದಿನಿಂದ ಅವನ ಹೃದಯವು ಕಠಿಣವಾದದ್ದು ದೇವರ ಆಜ್ಞೇ ನಿರ್ಣಯವೆನ್ನಿಸಿ ಕೊಳ್ಳುತ್ತದೆ.

ಕಲ್ಮಳೆಯು ಮಿಚ್ರದ ಮೇಲೆ ಬಿದ್ದದ್ದು. ೭ನೆ ಕಾಟ. ವ. ೧೩—೩೫.

ವ. ೧೩—೨೧. ಈ ಕಾಟಕ್ಕೆ ಮುಂಚೆ ಯೆಹೋವನು ಫರೋನನ ಎದೆ ಮುಟ್ಟ ತಕ್ಕ ಸುರುಸುರುಪಾದ ಮಾತುಗಳಿಂದ ಅವನನ್ನು ಎಚ್ಚರಿಸಿ ಹೇಳುವದೇನಂದರೆ — ವ. ೧೪—೧೬. "ಸಮಸ್ತ ಭೂಮಿಯಲ್ಲಿ ನನ್ನ ಹಾಗೆ ಯಾವನೂ ಇಲ್ಲವೆಂದು, ನೀನು ತಿಳುಕೊಳ್ಳುವದಕ್ಕೋಸ್ಕರ ಈ ಸಾರಿ ನನ್ನ ಬಾಧೆಗಳನ್ನೆಲ್ಲಾ ನಿನ್ನ ಹೃದಯಕ್ಕೂ (ನಿನ್ನ ಇಷ್ಟರ ಮೇಲೆಯೂ) ನಿನ್ನ ಸೇವಕರ ಮೇಲೆಯೂ ನಿನ್ನ ಜನಾಂಗದ ಮೇಲೆಯೂ ಕಳುಹಿಸುತ್ತೇನೆ. ಯಾಕಂದರೆ — ಈಗ ನನ್ನ ಕೈ ಚಾಚಿ, ನಿನ್ನನ್ನೂ ನಿನ್ನ ಜನಾಂಗವನ್ನೂ, ನೀನು ಭೂಮಿಯೊಳಗಿಂದ ನಿರ್ಮೂಲವಾಗುವ ಹಾಗೆ ವ್ಯಾಧಿಯಿಂದ ಹೊಡಿಯುತ್ತೇನೆ. ಆದರೆ ನಿಶ್ಚಯವಾಗಿ ನಿನ್ನನ್ನು ನನ್ನ ಬಲವ ನೋಡಿಸುವ ಹಾಗೆಯೂ, ನನ್ನ ಹೆಸರು ಸಮಸ್ತ ಭೂಮಿಯಲ್ಲಿ ಹೊಗಳಲಾಗುವದಕ್ಕೋಸ್ಕರವೂ, ಇದಕ್ಕೋಸ್ಕರವೇ ನಿನ್ನನ್ನು ನಿಲ್ಲಿಸಿದ್ದೇನೆ". ಇದರ ಅರ್ಥವೇನಂದರೆ: ಫರೋನನು ಮುಂಚಿತವಾಗಿ ದೇ

ವರಿಂದ ಮಡಿದು ಹೋಗಿದ್ದಾದರೆ, ಅವನಿಗೆ ಈಡಾದ ಶಿಕ್ಷೆಯುಂಟಾಗಿರುತ್ತಿತ್ತು. ಆದರೆ ಮೊದಲು ಉಳಿಸೋಣದರಿಂದ, ಬಳಿಕ ಅಳಿಸೋಣದರಿಂದ ತನ್ನ ಪರಾಕ್ರಮವನ್ನು ಅವನಲ್ಲಿ ಪ್ರತ್ಯಕ್ಷ ಮಾಡಿ, ಯೆಹೋವನೆಂಬ ತನ್ನ ನಾಮವನ್ನು ಜಗತ್ಪ್ರಸಿದ್ಧ ಮಾಡ ಬೇಕೆಂದು, ದೇವರು ಹಿಂದಿನ ಕಾಟಗಳಲ್ಲೆಲ್ಲಾ ಅವನನ್ನು ಬಹು ತಾಳ್ಮೆಯಾಗಿ ಕಾಪಾಡುತ್ತಾ ಬಂದನು. ಮಿಶ್ರದಲ್ಲಿ ಆದಂತೆ ಸತ್ಯ ದೇವರ ಮಹಿಮೆಯು ಅನ್ಯ ಜನರಲ್ಲಿ ವಿಶೇಷವಾಗಿ ಪ್ರಕಟವಾದಲ್ಲೆಲ್ಲಾ ಅವರು ಅದನ್ನು ಅಸಡ್ಡೆ ಮಾಡಿದ ಪಕ್ಷದಲ್ಲಿ ತಮ್ಮ ಪಾಪಕ್ಕೆ ನೆವನ ಹೇಳಲಾರದಿರ ಬೇಕೆಂಬದು ಲೋಕದ ಒಡೆಯನ ಚಿತ್ತವು. ವ. ೧೭—೧೯. ಫರೋನನು ಇನ್ನೂ ಇಸ್ರಯೇಲನವರನ್ನು ಹೋಗಲೀಸದೆ, ಅವರಿಗೆ ಹಗೆ ಮಾಡಿ, ತನ್ನನ್ನು ಹೆಚ್ಚಿಸುತ್ತಾ ಬಂದ ಕಾರಣ, ಯೆಹೋವನು ಅವನನ್ನು ಗದರಿಸಿ, ಮಿಶ್ರವು ಉಂಟಾದಂದಿನಿಂದ ಯಾವಾಗಲೂ ಬೀಳದೆ ಇದ್ದಷ್ಟು ಕಠಿಣವಾದಂಥಾ, ಮನೆಗಳ ಮರೆ ಹೋಗದ ಮನುಷ್ಯರನ್ನೂ ಪಶುಗಳನ್ನೂ ಕೊಲ್ಲುವಂಥಾ, ಕಲ್ಮಳೆಯನ್ನು ಬೀಳಿಸುತ್ತೇನೆಂದು, ಚಯ ತೋರಿಸುತ್ತಾನೆ. ವ. ೨೦. ೨೧ರಲ್ಲಿ ಮಿಶ್ರದವರಿಗೆ ದೇವರ ಕರುಣದಿಂದ ವಿಶ್ವಾಸ ಪರೀಕ್ಷೆಯ ಅನುವು ದೊರಕುವದು. ವ. ೨೨—೨೬. ಗುಡುಗೂ ಸಿಡ್ಲೂ ಬೆರತ ಬಿರುಘಾಳಿಯಿಂದ ಅಪೂರ್ವ ಮಹಾ ಕಠಿಣವಾದ ಕಲ್ಮಳೆ ಬಿದ್ದು, ಹೊಲದಲ್ಲಿದ್ದ ಸಸಿ ಗಿಡ ಮರ ಮನುಷ್ಯ ಪಶು ಮುಂತಾದದ್ದನ್ನೆಲ್ಲಾ ನಾಶ ಮಾಡುತ್ತದೆ. ಬೇಗ ಬೆಳೆಯುವ ಜವೆಗೋಧಿಯ ತೆನೆಗಳೂ ಸಣಬಿನ ಮೊಗ್ಗೆಗಳೂ ಸಹ ಅಳಿದು ಹೋಗುತ್ತವೆ; ಮೆಲ್ಲಗೆ ಬೆಳೆಯುವ ಗೋಧಿಯೂ ಸಾಮೆಯೂ ಮಾತ್ರ ಉಳಿಯುತ್ತವೆ. ಆದರೆ ಇಸ್ರಯೇಲನ ಮಕ್ಕಳು ಉಳು ಕೊಳ್ಳುವ ಗೋಶೆನ್ ಶೀಮೆಗೆ ಮೋಸವೇನೂ ಆಗುವದಿಲ್ಲ. ವ. ೨೭—೩೫. ಫರೋನನು ಮೋಶೆ ಆರೋನರನ್ನು ಕರಿಸಿ, ಅವರ ಮುಂದೆ "ಈ ಸಾರಿ ನಾನು ಪಾಪ ಮಾಡಿದ್ದೇನೆ. ಯೆಹೋವನು ನೀತಿವಂತನು, ನಾನೂ ನನ್ನ ಜನಾಂಗವೂ ದುಷ್ಟರು" ಎಂದು ಅರಿಕೆ ಮಾಡುತ್ತಾನೆ. ಆಗ ಮೋಶೆ ಆರೋನರು ಬೇಡುವವನಿಗಾಗಿ ದೇವರಿಗೆ ಮೊರೆ ಇಟ್ಟದರಿಂದ, ಗುಡುಗೂ ಸಿಡ್ಲೂ ಬೆರತ ಕಲ್ಮಳೆ ನಿಂತು ಹೋಗುತ್ತದೆ. ಆದಾಗ್ಯೂ ತಾನು ಪಾಪಿ ಎಂದು, ಅರಿಕೆ ಮಾಡಿದವನಾದ ಫರೋನನು ಮಾನಸಾಂತರ ಪಡದೆ, ತಲೆ ಕೊಬ್ಬಿದವನಾಗಿ, ಎದುರಾಡುವದನ್ನು ಬಿಡುವದಿಲ್ಲ.

ಮಿಡಿತೆಗಳ ಕಾಟ. ೮ನೆ ಕಾಟ. ಸ. ೧೦, ೧—೨೦.

ಈ ಕಾಟಕ್ಕೆ ಮುಂಚೆ ಮೋಶೆ ಫರೋನನ ಮುಂದೆ ಬಂದು, ನೀನು ದೇವರ ಜನಾಂಗವನ್ನು ಹೊರಟು ಹೋಗಲೀಸದಿದ್ದರೆ, ಅಪಾರವಾದ ಮಿಡಿತೆಗಳ ವ್ಯಥೆ ಬರುವದೆಂದು, ಹೆದರಿಸಲು, ಫರೋನನ ಸೇವಕರು ಸಹ ಅವನಿಗೆ ಬುದ್ಧಿ ಹೇಳಿ, (ವ. ೭.) "ಇವನು (ಇದನ್ನು ಮಾಡುವ ಮೋಶೆ) ಎಷ್ಟು ವರೆಗೂ ನಮಗೆ ನೇಣಾಗಿರ ಬೇಕು? ಆ ಜನರನ್ನು ತಮ್ಮ ದೇವರಾದ ಯೆಹೋವನಿಗೆ ಸೇವೆ ಮಾಡುವ ಹಾಗೆ, ಕಳುಹಿಸು. ಮಿಶ್ರವು ನಾಶವಾಗಿದೆ (ಕೇಡು ಹೆಚ್ಚಿದರೆ ಮಡಿದು ಹೋದವರಾಗಿದ್ದೇವೆ) ಎಂದು, ನೀನಿನ್ನೂ ಅರಿಯಾ?" ಅಂದರು. ವ. ೯—೧೧. ಆದರೆ ಫರೋನನು ನಮ್ಮ ಮರಿಗಳನ್ನೂ ಮುದುಕರನ್ನೂ ಗಂಡು ಹೆಣ್ಣು ಮಕ್ಕಳನ್ನೂ ಕುರಿಗಳನ್ನೂ ದನಗಳನ್ನೂ ಕೊಂಡು ಹೋಗುತ್ತೇವೆಂಬ, ಮೋಶೆಯ ಮಾತಿಗೆ ಸರಿಯಾಗಿ ಒಪ್ಪಿ ಕೊಳ್ಳದೆ, ಗಂಡಸರೇ ಹೋಗ ಬಹುದೆಂದು, ಅಪ್ಪಣೆ ಕೊಟ್ಟು, ಅವರಿಗೆ ಗೇಲಿಟ್ಟು, "ನಾನು ನಿಮ್ಮನ್ನೂ ನಿಮ್ಮ ಮರಿಗಳನ್ನೂ ಕಳುಹಿಸುವ ಪ್ರಕಾರವೇ ಯೆಹೋವನು ನಿಮ್ಮ ಸಂಗಡಲಿರಲಿ! ನಿಮ್ಮ ಮುಖದ ಮುಂದೆ ಮೋಸವದೆ. (ನೀವೆಲ್ಲರು ಒಡಗೂಡಿ ಹೋಗುವ ಮಾತೇ ಆಗದು) ಗಂಡಸರೇ ಹೋಗಿ ಯೆಹೋವನಿಗೆ ಸೇವೆ ಮಾಡ ಬಹುದು. ಇದನ್ನೇ (ಆರಂಭದಲ್ಲಿ) ಅರಸಿದಿರಿ," ಅಂದನು. ಆಗ ಅವರು ಫರೋನನ ಸನ್ನಿಧಿಯಿಂದ ಹೊರಡಿಸಲ್ಪಟ್ಟರು. ಮಾರಣೆ ದಿವಸದಲ್ಲಿ ಮಿಡಿತೆಗಳು ಮುಂಚೆ ಎಂದಿಗೂ ಕಾಣದಂತೆ, ಗುಂಪುಗುಂಪಾಗಿ ಬಂದು, ಭೂಮಿಯನ್ನೆಲ್ಲಾ ಕವಿದು, ಕಲ್ಮಳೆಯಿಂದ ಉಳಿದಂಥ,

ಹೊರಡೋಣ. ೧೦, ೨೧—೨೯; ೧೧, ೧—೩.

ಅದರ ಬಳಿಕ ಬೆಳೆದಂಥ, ಹಸುರಾದದ್ದನ್ನೆಲ್ಲಾ ತಿಂದು ಬಿಟ್ಟವು. ಆಗ ಫರೋನನು ತಿರಿಗಿ ತನ್ನ ಪಾಪವ
ನ್ನು ಅರಿಕೆ ಮಾಡಿ, ತನಗೆ ಮನ್ನಿಸಿ, “ಈ ಮರಣವನ್ನು ಮಾತ್ರ (ನಾಶನಕರವಾದ ಈ ಕಾಟವನ್ನು) ತನ್ನಿಂದ
ತೊಲಗಿಸ ಬೇಕೆಂದು ಮೋಶೆಯನ್ನು ಬೇಡಿ ಕೊಳ್ಳುತ್ತಾನೆ.” ಆದರೆ ಪಡುವಲ ಘಾಳಿ ಎದ್ದು, ಮಿಡಿತೆಗಳನ್ನು
ಮೂಡಣ ಕಡೆಗೆ ವೈದು, ಕೆಂಪು ಸಮುದ್ರದಲ್ಲಿ ಹಾಕಿದ ಬಳಿಕ, ಅವನ ಹೃದಯವು ಮರಳಿ ಕಠಿಣವಾಯಿತು.

ಮೂರು ದಿನದ ಕತ್ತಲೆಯ ಕಾಟ. ೯ನೆ ಕಾಟ. ವ. ೨೧—೨೯.

ಮಿಸ್ರ ಮೊದಲಾದ ಅಫ್ರಿಕ ಖಂಡದ ದೇಶಗಳಲ್ಲಿ ಆಗ್ಯಾಗ್ಯೆ ತೆಂಕಣ ದಿಶೆಯಿಂದ ಸಾಮುಮ್ ಎಂಬ
ಒಂದು ತರದ ಉರಿಗಾಳಿ ಬಂದು, ಪ್ರಾಣಿಗಳಿಗೆ ವಿಷವಾದ ಕಡು ಬಿಸಿಲು ಹುಟ್ಟಿಸಿ, ಸೂರ್ಯನ ಕಾಂತಿ
ಮೊಬ್ಬಾಗಿ, ಅದರ ಹೊಂಬಣ್ಣ ಮಂದವಾಗುವ ಹಾಗೆ, ಅಂತರಿಕ್ಷವನ್ನು ಧೂಳಿನ ಮೋಡಗಳಿಂದ ತುಂ
ಬಿಸಿ, ಮನುಷ್ಯರ ಎದೆಗುಂದಿಸುವ ಕಾರ್ಗತ್ತಲೆಯನ್ನುಂಟು ಮಾಡಿ, ಕೆಲವು ಸಲ ಎರಡು ಮೂರು ದಿನದ
ವರೆಗೂ ಬೀಸುತ್ತಾ ಇರುವದು. ಇಂಥಾ ಗಾಳಿ ಫರೋನನ ಹಟದ ನಿಮಿತ್ತ, ಮುನ್ನೆಚ್ಚರಿಕೆ ಇಲ್ಲದೆ ಒ
ಮ್ಮಿಂದೊಮ್ಮೆ ಮಿಗೆ ಹೆಚ್ಚಿದ ಶಕ್ತಿಯಿಂದ ಮಿಸ್ರ ದೇಶದ ಮೇಲೆ ಬಿತ್ತು. ಮೂರು ದಿವಸದೊಳಗೆ ಯಾರೂ
ತಮ್ಮ ಸ್ಥಳವನ್ನು ಬಿಡ ಏಳದ ಹಾಗೆ, ಕೈಮುಟ್ಟು ಕತ್ತಲಾದ ಗಾಢಾಂಧಕಾರವು ದೇಶವನ್ನೆಲ್ಲಾ ತುಂಬಿ
ಸಿತು. ಆದರೆ ಗೋಶೆನ್ ಶೀಮೆಯಲ್ಲಿರುವ ಇಸ್ರಾಯೇಲನವರ ಮನೆಗಳಲ್ಲಿ ಬೆಳಕು ಇತ್ತು. ಮಿಸ್ರದವರ
ನಡುವೆ ವಸ್ತಿಯಾಗಿದ್ದ ಇಸ್ರಾಯೇಲನವರು (ಸ. ೧೧, ೨.) ಅವರ ಮೇಲೆ ಬಂದ ಕಾಟಗಳ ಉಪದ್ರ ತಾ
ಳುವದರಲ್ಲಿ ತಮ್ಮ ನೆರೆಯವರ ಜೊತೆಗಾರರಾದರು. ಫರೋನನು ಭಯಂಕರವಾದ ಈ ಪೀಡೆಯಿಂದ
ತುಸ ಕರಗಿದ ಹೃದಯವುಳ್ಳವನಾಗಿ, ತನ್ನ ಮುಂಚಿನ ಆಜ್ಞೆಯನ್ನು ಸ್ವಲ್ಪ ಸಡ್ಲಿಸಿ, ಹಿರಿಕಿರಿಯರೆಲ್ಲಾ ಕೂ
ಡಾ ಪಯಣವಾಗಿ ಹೊರಡ ಬಹುದೆಂದು, ಅಪ್ಪಣೆ ಕೊಟ್ಟು, ಕುರಿ ದನಗಳು ಮಾತ್ರ ಹಿಂದೆ ನಿಂತಿರಲಿ,
(ವ. ೨೪.) ಎಂದು ಒಂದೇ ಕಟ್ಟು ಮಾಡಿದನು. ಯಾಕಂದರೆ ಮುಂಚಿನ ವ್ಯಾಧಿಯಿಂದ ಅವನ ಪಶುಗಳಲ್ಲಿ
ಕೆಲವು ಮಾತ್ರ ಉಳಿದದರಿಂದ, ಇಸ್ರಾಯೇಲನವರ ದನ ಕರು ಮುಂತಾದದ್ದನ್ನು ಬಯಸುತ್ತಾ ಇದ್ದನು.
ಮೋಶೆ ಅವನಿಗೆ ನಮ್ಮ ದನಗಳು ಸಹ ನಮ್ಮ ಸಂಗಡ ಹೋಗ ಬೇಕು; ಒಂದು ಗೊರಸೆಯಾದರೂ ಹಿಂ
ದುಳಿಯ ಬಾರದು; ಯಾಕಂದರೆ ನಮ್ಮ ದೇವರಾದ ಯೆಹೋವನಿಗೆ ಆರಾಧನೇ ಮಾಡುವದಕ್ಕೆ ಅದರಿಂದ
ತೆಗೆಯ ಬೇಕು, ಎಂದು ಹೇಳಲಾಗಿ, ಫರೋನನು ಬಿಗಿ ಕಟ್ಟಿದ ಹೃದಯದಿಂದ ಮೋಶೆಯ ಮಾತಿಗೆ
ಸಮ್ಮತಿ ಪಡದೆ, ಕಾರ್ಗತ್ತಲೆ ಕಳೆದ ಮೇಲೆ, “ನನ್ನನ್ನು ಬಿಟ್ಟು ಹೋಗು. ಇನ್ನೂ ನನ್ನ ಮುಖ ನೋಡದ
ಹಾಗೆ ಜಾಗ್ರತೆಯಾಗಿರು. ನೀನು ನನ್ನ ಸನ್ನಿಧಿಗೆ ಬಂದರೆ, ಸಾಯ ಬೇಕು” (ವ. ೨೮.) ಎಂದು ಮೋಶೆಗೆ
ಹೇಳಿದನು. ಇವನು ಈ ಮಾತಿಗೆ ಒಪ್ಪಿ ಕೊಂಡು, ಹೊರಟು ಹೋಗಿ, ಅಂದಿನಿಂದ ಫರೋನನಿಗಾಗಿ ಬಿ
ನ್ನಹ ಮಾಡುವದನ್ನು ಬಿಟ್ಟನು.

ಚೊಚ್ಚಲು ಮಕ್ಕಳ ಮರಿಗಳ ಕೊಲೆಯ ಮುಂಬೆದರಿಕೆ. ಸ. ೧೧.

೧೧ ಸಂಧಿಯ ಆರಂಭದಲ್ಲಿ (ವ. ೧—೩) ಚರಿತ್ರ ಕ್ರಮಾನುಸಾರವಾಗಿ ಸ. ೧೦, ೨೯ನೆ ವಚನದ
ಹಿಂದೆ ಶೇರ ತಕ್ಕ ಪ್ರಸ್ತಾಪವು ನಡುವೆ ಇಟ್ಟದೆ. ಏನಂದರೆ ಮಿಗೆ ಬೇಸರ ತಾಳಿದ ಮೋಶೆಯು ಫ
ರೋನನಲ್ಲಿ ತಿರಿಗಿ ತಿರಿಗಿ ಮಾಡಿದ ಪ್ರಯತ್ನಗಳೆಲ್ಲಾ ನಿರರ್ಥಕವಾದದ್ದಕ್ಕೆ ಚಿಂತಾಕ್ರಾಂತನಾಗದ ಹಾಗೆ,
ದೇವರು ಅವನಿಗೆ ಈಗ ಬರುವ ಕಾಟದಿಂದಲೇ ಫರೋನನ ಗಾಡತನವು ಮುರಿದು ಹೋಗುವದೆಂದೂ,
ಮಿಸ್ರದ ಜನರು ತಮ್ಮ ಅರಸನಂತೆ ಇಸ್ರಾಯೇಲನವರಿಗೆ ಎರಡು ಬಗೆಯದೆ, ಅವರಿಗೆ ಒಲಿದು, ಅವರ ಪ್ರ
ಯಾಣವು ಅತಿ ನ್ಯಾಯವಾದ ಕಾರ್ಯವೆಂದು ಒಪ್ಪಿಕೊಂಡು, ಒಲುಮೆಯ ದೃಷ್ಟಾಂತವಾಗಿ ಬೆಳ್ಳಿ ಹೊ

ನ್ನಿನ ಪಾತ್ರೆಗಳನ್ನು ಬೇಡುವವರಿಗೆ ತ್ಯಾಗದಿಂದ ಕೊಡುವರೆಂದೂ, ಅಚಯ ವಾಕ್ಯವಾಗಿ ಹೇಳಿದ್ದನು. ಮಿಚ್ರದವರು ಯೆಹೋವನಿಗೆ ಚಯ ಪಟ್ಟು, ಅವನ ಮಾತು ನಂಬಿದರೆಂದು, ಮುಂಚೆ (ಸ. ೯, ೨೦. ೧೦, ೭.) ಜಾಡೆಯಾಗಿ ತೋರಿತು. ಈಗಲವರು ಇಸ್ರಯೇಲನವರು ದೇವರ ಆಯಿಕೆಯಾದ ಜನಾಂಗವೂ ತಮಗಾಗಿ ದೇವರಿಗೆ ಸಾರ್ಥಕ ಪ್ರಾರ್ಥನೆ ಮಾಡ ಶಕ್ತ ಯಾಜಕವಂಶವೂ ಎಂದರಿತು, ದೇವದಂಡನಾಪರಿಹಾರದ ಆಶೆಯಿಂದ ಅವರಿಗೆ ಬೇಕಾದದ್ದನ್ನೆಲ್ಲಾ ಉಚಿತವಾಗಿ ಕೊಡ ಮನಸ್ಸಾಗಿದ್ದರು.

ವ. ೪—೯. ಮೋಶೆ ಫರೋನನಿಗೆ ಬರೆದ ಕಡೆ ಮಾತು ಏನಂದರೆ—ಯೆಹೋವನು ಹೀಗೆ ಹೇಳುತ್ತಾನೆ: ಅರ್ಧ ರಾತ್ರಿಯಲ್ಲಿ ನಾನು ಮಿಚ್ರದ ನಡುವೆ ಹೊರಡುತ್ತೇನೆ. ಆಗ ಮಿಚ್ರ ದೇಶದಲ್ಲಿ ಗದ್ದಿಗೆಯ ಮೇಲೆ ಕೂತಿರುವ ಫರೋನನ ಚೊಚ್ಚಲು ಮಗನಿಂದ ಬೀಸುವ ಕಲ್ಲುಗಳ ಹಿಂದಣ ತೊತ್ತಿಯ ಚೊಚ್ಚಲು ಮಗನ ವರೆಗೆ ಚೊಚ್ಚಲು ಮಕ್ಕಳೆಲ್ಲಾ ಪಶುಗಳ ಚೊಚ್ಚಲುವಾದದ್ದೆಲ್ಲಾ ಸಹ ಸಾಯುವದು. ಆಗ ಮಿಚ್ರ ದೇಶದಲ್ಲೆಲ್ಲಾ ದೊಡ್ಡ ಗೋಳು ಹುಟ್ಟುವದು. ಅಂಥಾದ್ದು ಹಿಂದೆ ಇದ್ದಿಲ್ಲ, ಮುಂದೆಯೂ ಬರುವದಿಲ್ಲ. ಯೆಹೋವನು ಮಿಚ್ರದವರಿಗೂ ಇಸ್ರಯೇಲನವರಿಗೂ ಹೆಚ್ಚು ಕಡಿಮೆ ಮಾಡುತ್ತಾನೆಂದು, ನೀವು ತಿಳುಕೊಳ್ಳುವ ಹಾಗೆ, ಇಸ್ರಯೇಲನ ಮಕ್ಕಳೆಲ್ಲರಿಗೆ ಮನುಷ್ಯರು ಮೊದಲ್ಗೊಂಡು ಮೃಗಗಳ ಪರ್ಯಂತರ ನಾಯಿಯಾದರೂ ನಾಲಿಗೆಯನ್ನು ಅಲ್ಲಾಡಿಸುವದಿಲ್ಲ. ಆಗ ನಿನ್ನ ಆಳುಗಳಾದ ಇವರೆಲ್ಲರು ನನ್ನ ಬಳಿಗೆ ಇಳಿದು ಬಂದು, ನನಗೆ ಎರಗಿ, ನೀನೂ ನಿನ್ನ ಅಡಿಯರಾದ ಜನಾಂಗವೆಲ್ಲವೂ ಹೊರ ಹೋಗಿರಿ ಎಂದು, ಅನ್ನುವರು. ತದನಂತರ ನಾನು ಹೊರಡುವೆನು. ಆಗ ಮೋಶೆ ಉರಿಶಿಟ್ಟಿನಿಂದ ಫರೋನನನ್ನು ಬಿಟ್ಟು ಹೋದನು.

ಕಡೆಯಲ್ಲಿ ಬಂದ ಈ ಕಾಟವು ಹಿಂದಿನ ಎಲ್ಲಾದಕ್ಕಿಂತ ಅತಿಶಯವಾದದ್ದಾಗಿ, ಮಿಚ್ರ ದೇಶ ಚಾವ ಸಂಬಂಧವಾಗಿರದೆ, ದೃಷ್ಟಕರಣವಿಲ್ಲದೆ, ಯೆಹೋವನ ಶಕ್ತಿಯಿಂದಲೇ ಉಂಟಾಯಿತು. ಕೆಟ್ಟ ಮೇಲೆ ಬುದ್ಧಿ ಬಂತೆಂಬ ಗಾದೆಯ ಪ್ರಕಾರ, ದೇವವಾಕ್ಯಕ್ಕೆ ಕಿವಿ ಕೊಡಲೊಲ್ಲದ ಫರೋನನು ದೇವರ ಶಿಕ್ಷೆಗೆ ಒಳಗಾಗಿ, ಮಡಿದು ಹೋಗ ಪಾತ್ರನಾದನು.

ಪಸ್ಕ ಹಬ್ಬದ ಸ್ಥಾಪನೆ. ಸ. ೧೨, ೧—೨೮.

ವ. ೧. ಆಗ ಯೆಹೋವನು ಮೋಶೆ ಆರೋನರಿಗೆ ಮಿಚ್ರ ದೇಶದಲ್ಲಿ[೧] ಹೇಳಿದ್ದೇ
ನಂದರೆ: ೨. ಈ ತಿಂಗಳು ನಿಮಗೆ ತಿಂಗಳುಗಳ ಆರಂಭವು[೨]. ಇದು ನಿಮಗೆ ವರ್ಷದ
ತಿಂಗಳುಗಳಲ್ಲಿ ಮೊದಲನೇದು. ೩. ಇಸ್ರಯೇಲನ ಸಭೆಗೆಲ್ಲಾ ನೀವು ನುಡಿಯ ಬೇಕಾ
ದದ್ದೇನಂದರೆ: ಈ ತಿಂಗಳಿನ ಹತ್ತನೆಯಲ್ಲಿ[೩] ಅವರು ಆಳಾಳಾಗಿ ತಮಗೆ ಕುರಿಮರಿಯ
ನ್ನು ತಕ್ಕೊಳ್ಳಲಿ. ೪. ಒಂದು ಕುರಿಮರಿಗಾಗಿ ಮನೆ ಸಾಲದಿದ್ದರೆ, ಅವನೂ ಅವನ
ಮನೆಯ ಬದಿಯ ನೆರೆಯವನೂ, ಪ್ರಾಣಗಳ ಲೆಖ್ಖದ ಪ್ರಕಾರ, ಅದನ್ನು ತಕ್ಕೊಳ್ಳಲಿ.
ಒಬ್ಬೊಬ್ಬನು ತಿನ್ನುವ ಮೇರೆಗೆ ಕುರಿಮರಿಗಾಗಿ ಎಣಿಕೆ ಮಾಡ ಬೇಕು. ೫. ಪೂ
ರ್ಣಾಂಗವಾದ[೪] ಒಂದು ವರ್ಷದ ಗಂಡು ಮರಿ ನಿಮಗಿರಲಿ. ಕುರಿಗಳಿಂದಾಗಲಿ
ಮೇಕೆಗಳಿಂದಾಗಲಿ[೫] ಅದನ್ನು ತಕ್ಕೊಳ್ಳಿರಿ. ೬. ಈ ತಿಂಗಳಿನ ಹದಿನಾಲ್ಕನೆ ದಿನದ ವ
ರೆಗೆ ಅದು ನಿಮಗೆ ಇಟ್ಟಿರಲಿ. ಆ ಮೇಲೆ ಸಾಯಂಕಾಲದಲ್ಲಿ[೬] ಇಸ್ರಯೇಲನವರ ಸಭೆ
ಯ ಓಲಗವೆಲ್ಲಾ ಅದನ್ನು ಕಡಿಯಲಿ[೭]. ೭. ಮತ್ತು ಅದರ ರಕ್ತದಿಂದ ತೆಗದು, ಅದ

ನ್ನು ತಿನ್ನುವ ಮನೆಗಳಿಗೆ ಎರಡು ನಿಲುವಿಗೂ ಮೇಲಣ ಪಟ್ಟಿಗೂ ಹಚ್ಚಲಿ[೮]. ಆ ರಾ
ತ್ರಿಯಲ್ಲೇ ಅವರು ಆ ಬಾಡು ತಿನ್ನಲಿ. ಬೆಂಕಿಯಲ್ಲಿ ಸುಟ್ಟದ್ದನ್ನು ಹುಳಿ ಇಲ್ಲದ ರೊಟ್ಟಿ
ಗಳನ್ನೂ ಕಹಿಯಾದ ಪಲ್ಯಗಳ ಕೂಡಾ ತಿನ್ನಲಿ[೯]. ಅದರಲ್ಲಿ ಏನಾದರೂ ಹಸಿದಾಗಿ
ಯೂ ನೀರಿನಲ್ಲಿ ಬೇಯಿಸಿದ್ದಾಗಿಯೂ ಅಲ್ಲ, ಅದರ ತಲೆ ತೊಡೆ ಕರುಳುಗಳ ಸಹಿತ
ವಾಗಿ[೧೦] ಅದನ್ನು ಬೆಂಕಿಯಲ್ಲಿ ಸುಟ್ಟದ್ದಾಗಿಯೇ ತಿನ್ನಿರಿ. ೧೦. ಅದರಲ್ಲಿ ಏನಾದರೂ
ಹೊತ್ತಾರೆಗೆ ಉಳಿಸ ಬೇಡಿರಿ. ಹೊತ್ತಾರೆ ವರೆಗೆ ಅದರಲ್ಲಿ ಉಳಿದದ್ದನ್ನು ಬೆಂಕಿಯಿಂದ
ಸುಟ್ಟು ಬಿಡಿರಿ[೧೧]. ೧೧. ನೀವು ಅದನ್ನು ತಿನ್ನ ತಕ್ಕ ರೀತಿ ಏನಂದರೆ: ನಡು ಕಟ್ಟಿ ಮೆ
ಟ್ಟು ಮೆಟ್ಟಿ ಕೊಂಡು, ಕೈಯಲ್ಲಿ ಕೋಲು ಹಿಡಿದು, ಗಳಗಳದಿಂದ[೧೨] ಅದನ್ನು ತಿನ್ನ ಬೇ
ಕು. ಅದು ಯೆಹೋವನ ಪಸ್ಕವು[೧೩]. ೧೨. ಈ ರಾತ್ರಿಯಲ್ಲಿ ನಾನು ಮಿಶ್ರ ದೇಶವ
ನ್ನು ಹಾದು ಹೋಗಿ, ಮಿಶ್ರ ದೇಶದಲ್ಲಿ ಮನುಷ್ಯರು ಮೊದಲ್ಗೊಂಡು ಪಶುಗಳ ವರೆ
ಗೆ ಚೊಚ್ಚಲಾದದ್ದನ್ನೆಲ್ಲಾ ಹೊಡೆಯುವೆನು. ಮಿಶ್ರದ ದೇವರುಗಳಿಗೆಲ್ಲಾ[೧೪] ನ್ಯಾ
ಯತೀರಿಸುವೆನು. ನಾನೇ ಯೆಹೋವನು. ೧೩. ಆದರೆ ನೀವಿರುವ ಎಲ್ಲಾ ಮನೆಗಳ
ಮೇಲೆ ರಕ್ತವು ನಿಮಗೆ ಗುರ್ತಾಗಿರುವದು. ಆ ರಕ್ತವನ್ನು ನಾನು ನೋಡಿ, ನಿಮ್ಮನ್ನು
ದಾಟಿ ಹೋಗುವೆನು[೧೫]. ಮಿಶ್ರ ದೇಶವನ್ನು ನಾನು ಹೊಡೆಯುವಲ್ಲಿ ನಶಿಸುವ ಬಾ
ಧೆ ನಿಮ್ಮಲ್ಲಿರದು. ೧೪. ಆ ದಿವಸವು ನಿಮಗೆ ನೆನಪಿಗಾಗಿರ ಬೇಕು. ಅದನ್ನು ಯೆ
ಹೋವನಿಗೆ ಹಬ್ಬವಾಗಿ ಆಚರಿಸ ಬೇಕು. ನಿಮ್ಮ ತಲಾಂತರಗಳಿಗೆ[೧೬] ನಿತ್ಯ[೧೭] ಕಟ್ಟಳೆ
ಯಾಗಿ ಅದನ್ನು ಆಚರಿಸ ಬೇಕು. ೧೫. ಏಳು ದಿವಸ ನೀವು ಹುಳಿ ಇಲ್ಲದ ರೊಟ್ಟಿಗ
ಳನ್ನು ತಿನ್ನ ಬೇಕು. ಮೊದಲನೆ ದಿವಸದಲ್ಲಿಯೇ ಹುಳಿ ಹಿಟ್ಟನ್ನು ನಿಮ್ಮ ಮನೆಗಳೊಳ
ಗಿಂದ ತೆಗದು ಹಾಕ ಬೇಕು. ಯಾಕೆಂದರೆ ಮೊದಲನೆ ದಿವಸದಿಂದ ಏಳನೆ ದಿವಸದ
ವರೆಗೆ ಹುಳಿ ಕಲಿಸಿದ್ದನ್ನು ತಿನ್ನುವವನ್ಯಾವನೋ ಆ ಪ್ರಾಣವು ಇಸ್ರಯೇಲನವರೊಳ
ಗಿಂದ ಕಡಿಯಲ್ಪಡ ಬೇಕು[೧೮]. ೧೬. ಇದಲ್ಲದೆ ಮೊದಲನೆ ದಿವಸದಲ್ಲಿ ಪರಿಶುದ್ಧ ಕೂ
ಟವೂ, ಏಳನೆ ದಿವಸದಲ್ಲಿ ಪರಿಶುದ್ಧ ಕೂಟವೂ ನಿಮಗಿರ ಬೇಕು[೧೯]. ಯಾವ ಕೆಲಸ
ವಾದರೂ ಅವುಗಳಲ್ಲಿ ಆಗ ಬಾರದು. ಪ್ರತಿ ಮನುಷ್ಯನು ತಿನ್ನುವಂಥಾದ್ದನ್ನು ಮಾ
ತ್ರ ನೀವು ಸಿದ್ಧ ಮಾಡಿ ಕೊಳ್ಳ ಬಹುದು. ೧೭. ಈ ಮೇರೆಗೆ ಹುಳಿ ಇಲ್ಲದ ರೊಟ್ಟಿಯ
ಹಬ್ಬವನ್ನು ಆಚರಿಸ ಬೇಕು; ಯಾಕೆಂದರೆ ಆ ದಿವಸದಲ್ಲಿಯೇ ನಾನು ನಿಮ್ಮ ಸೈನ್ಯಗ
ಳನ್ನು ಮಿಶ್ರ ದೇಶದೊಳಗಿಂದ ಹೊರ ಬರಲೀಸಿದ್ದೇನೆ. ಅದು ಕಾರಣ ಆ ದಿವಸವ
ನ್ನು ನಿಮ್ಮ ತಲಾಂತರಗಳಲ್ಲಿ ನಿತ್ಯ ಕಟ್ಟಳೆಯಾಗಿ ಆಚರಿಸ ಬೇಕು. ೧೮. ಮೊದಲನೆ
ತಿಂಗಳಲ್ಲಿ, ತಿಂಗಳಿನ ಹದಿನಾಲ್ಕನೆ ದಿವಸದ ಸಾಯಂಕಾಲದಲ್ಲಿ ನೀವು ತಿಂಗಳಿನ ಇಪ್ಪ
ತ್ತೊಂದನೆ ದಿವಸದ ಸಾಯಂಕಾಲದ ವರೆಗೆ ಹುಳಿ ಇಲ್ಲದ ರೊಟ್ಟಿಗಳನ್ನು ತಿನ್ನ ಬೇಕು.

೧೯. ಏಳು ದಿನದ ವರೆಗೆ ಹುಳಿ ಹಿಟ್ಟು ನಿಮ್ಮ ಮನೆಗಳಲ್ಲಿ ದೊರಕ ಬಾರದು; ಯಾ
ಕಂದರೆ ಹುಳಿ ಕಲಿಸಿದ್ದನ್ನು ಯಾವನು ತಿನ್ನುವನೋ ಆ ಪ್ರಾಣವು, ಪರದೇಶಿಯಾಗ
ಲಿ ದೇಶಸ್ಥನಾಗಲಿ, ಇಸ್ರಯೇಲನ ಸಭೆಯೊಳಗಿಂದ ಕಡಿಯಲ್ಪಡ ಬೇಕು. ೨೦. ಹುಳಿ
ಕಲಿಸಿದ್ದು ಯಾವದಾದರೂ ನೀವು ತಿನ್ನ ಬಾರದು. ನಿಮ್ಮ ನಿವಾಸಗಳಲ್ಲೆಲ್ಲಾ ಹುಳಿ
ಇಲ್ಲದ ರೊಟ್ಟಿಗಳನ್ನು ತಿನ್ನ ಬೇಕು. ೨೧. ಆಗ ಮೋಶೆ ಇಸ್ರಯೇಲನ ಹಿರಿಯರೆಲ್ಲರ
ನ್ನು ಕರೆದು, ಅವರಿಗೆ ಹೇಳಿದ್ದೇನಂದರೆ: ನಿಮ್ಮ ಗೋತ್ರಗಳ ಪ್ರಕಾರ ಕುರಿಗಳನ್ನು ಹಿ
ಡು ಕೊಂಡು ಪಸ್ಕವನ್ನು ಕೊಯ್ಯಿರಿ. ೨೨. ಮತ್ತು ಹಿಸ್ಸೊಪ್ಪಿನ ಕುಚ್ಚು ತಕ್ಕೊಂಡು,
ತಂಬಿಗೆಯೊಳಗಣ ರಕ್ತದಲ್ಲಿ ಅದ್ದಿ, ಕದದ ಮೇಲಣ ಪಟ್ಟಿಗೂ ಎರಡು ನಿಲುವಿಗೂ
ತಂಬಿಗೆಯೊಳಗಣ ರಕ್ತವನ್ನು ಹಚ್ಚಿರಿ. ಮತ್ತು ನಿಮ್ಮಲ್ಲಿ ಯಾರೂ ಬೆಳಗಾಗುವ ಮ
ಟ್ಟಿಗೂ ಮನೆಬಾಗಲು ಬಿಟ್ಟು ಹೋಗದಿರಲಿ. ೨೩. ಯೆಹೋವನು ಮಿಚ್ರದವರನ್ನು
ಹೊಡಿಯುವದಕ್ಕೆ ಹಾದು ಹೋಗುವನು. ಅವನು ಕದದ ಮೇಲಣ ಪಟ್ಟಿಯಲ್ಲಿಯೂ
ಎರಡು ನಿಲುವಿನಲ್ಲಿಯೂ ರಕ್ತವನ್ನು ನೋಡಲು, ನಶಿಸುವವನನ್ನು ಹೊಡಿಯುವದ
ಕ್ಕೋಸ್ಕರ ನಿಮ್ಮ ಮನೆಗಳಲ್ಲಿ ಬರಲೀಸದೆ, ಕದವನ್ನು ದಾಟಿ ಹೋಗುವನು. ೨೪. ಈ
ವಾಕ್ಯವನ್ನು ನಿಮಗೂ ನಿಮ್ಮ ಮಕ್ಕಳಿಗೂ ಕಟ್ಟಳೆಯಾಗಿ ಸದಾಕಾಲಕ್ಕೆ ಕೈಕೊಳ್ಳ ಬೇ
ಕು. ೨೫. ಯೆಹೋವನು ಹೇಳಿದ ಹಾಗೆ ನಿಮಗೆ ಕೊಡಲಾಗಿರುವ ದೇಶಕ್ಕೆ ನೀವು
ಬಂದಾಗ, ಈ ಆಚರಣೆಯನ್ನು ಕೈಕೊಳ್ಳ ಬೇಕು. ೨೬. ಇದಲ್ಲದೆ ನಿಮ್ಮ ಮಕ್ಕಳು,
ಈ ಆಚರಣೆಯು ನಿಮಗೆ ಏನೆಂದು, ನಿಮಗೆ ಹೇಳಿದರೆ, ೨೭. ಮಿಚ್ರದವರನ್ನು ಹೊ
ಡೆದಾಗ, ನಮ್ಮ ಮನೆಗಳನ್ನು ತಪ್ಪಿಸಿ, ಇಸ್ರಯೇಲನ ಮಕ್ಕಳ ಮನೆಗಳನ್ನು ದಾಟಿ
ಹೋದ ಯೆಹೋವನ ಪಸ್ಕ ಹಬ್ಬವು ಇದೇ ಎಂದು, ಹೇಳ ಬೇಕು. ಆಗ ಪ್ರಜೆಯು
ಬಾಗಿ-೨೧), ಅಡ್ಡ ಬಿದ್ದರು. ೨೮. ಮತ್ತು ಇಸ್ರಯೇಲನ ಮಕ್ಕಳು ಹೋಗಿ, ಮಾಡಿ,
ಯೆಹೋವನು ಮೋಶೆ ಆರೋನರಿಗೆ ಅಪ್ಪಣೆ[೩] ಕೊಟ್ಟ ಹಾಗೆಯೇ ಮಾಡಿದರು.

೧. ಪಸ್ಕ ಎಂಬ ಹಬ್ಬದ ವಿಷಯವಾದ ಪ್ರಕಟಣೆಯು ಮೋಶೆಗೆ ಮಿಚ್ರದಲ್ಲಿ ಪ್ರಾಪ್ತವಾಯಿತು; ಮತ್ತೆ ಸಿನಯಿ ಪರ್ವತದ ಬಳಿಯಲ್ಲಿ ಈ ವಿಷಯವಾಗಿ ಹೆಚ್ಚು ಪ್ರಕಟಣೆ ಬಂತು.

೨. ಇಲ್ಲಿ ಹೊಸ್ತಾದ ಕಾಲಗಣನೆ ತೊಡಗುತ್ತದೆ. ಇಸ್ರಯೇಲನವರು ಪೂರ್ವಕಾಲದ ಚರಿತ್ರವನ್ನು ಎಂದಿಗೂ ಮರತು ಬಿಡದ ಹಾಗೆ, ಮಿಚ್ರದಿಂದ ಬಿಡುಗಡೆಯಾದ ಪ್ರಯಾಣದ ತಿಂಗಳು ಹೊಸ ಶಕದ ಆದಿಯಾಗಿ ನೇಮಕವಾಯಿತು (ಬಾಬೆಲದ ಪ್ರವಾಸಕ್ಕೆ ಆಚೆ ಆಬೀಬ್, ಅದಕ್ಕೆ ಈಚೆ ನೀಸಾನ್ ಎಂದು ಅನ್ನಿಸಿಕೊಂಡ ತಿಂಗಳು ಚೈತ್ರಕ್ಕೆ ಸರಿ ಬೀಳುತ್ತದೆ. ಹ್ಯಾಗಂದರೆ ಉತ್ತರಾಯಣ ವಿಷುವಿನ ಬಳಿಕ ಬರುವ ಮೊದಲಿನ ಹುಣ್ಣಿಮೆ ನೀಸಾನ್ ತಿಂಗಳಿನ ೧೪ನೆ ದಿವಸವಾಗಿದೆ. ಇದು ಪಸ್ಕ ಹಬ್ಬಕ್ಕೆ ನೇಮಕವಾದ ದಿವಸವು. ಚೈತ್ರವು ಈ ೧೮೭೦ನೇ ವರ್ಷದ ಏಪ್ರಿಲ್ ತಿಂಗಳಿಗೆ ಒಂದು ದಿವಸ ಕಡಿಮೆಯಾಗಿ ಸರಿಯಾಗಿದೆ. ಚೈತ್ರ ಶುಕ್ಲಪಕ್ಷದ ಪಾಡ್ಯ ೨ನೆ ಏಪ್ರಿಲ್, ಚೈತ್ರದ ಅಮಾವಾಸೆ ೩೦ನೆ ಏಪ್ರಿಲ್.) ಮೋ

ಶೆಯ ಗ್ರಂಥಗಳಲ್ಲಿ ಅವನ ಮರಣದ ವರೆಗೆ ಬರೆದ ಮುಂದಣ ಚರಿತ್ರದ ಕಾಲಾನುಕ್ರಮಣಿಕೆಯು ಈ ಮೆಖ್ಖವನ್ನೇ ಹಿಡಿಯುತ್ತದೆ. ಹೊರ. ೧೩, ೪; ೧೬, ೧; ೧೯, ೧; ೨೩, ೧೫; ೩೪, ೧೮; ೪೦, ೨. ೧೭. ಲೇವಿಕ. ೨೩, ೫. ಅಂಕೆ. ೧, ೧; ೯, ೧. ೩. ೫; ೨೦, ೧; ೨೮, ೧೬. ೧೭; ೨೯, ೧. ೭. ೧೨; ೩೩, ೩. ೩೮; ದ್ವಿತೀ. ೧, ೩; ದ್ವಿತೀ. ೨, ೧೪ ಹೇಳಿರುವ ೩೮ ವರ್ಷಗಳಲ್ಲಿ ನಡೆದ ಚರಿತ್ರವು ಅಂಕೆ. ೧೪, ೨೫. ೪೦—೪೫. (ಸಮ ನೋಡು ೧೩, ೨೭.) ಬರೆದ ಸಂಗತಿಗೂ ಅಂಕೆ. ೨೧, ೨; ೨೨, ೧. ಬರೆದದ್ದಕ್ಕೂ ನಡುವೆಯಲ್ಲಿ ಸೇರಿಸ ತಕ್ಕದ್ದು. ದ್ವಿತೀ. ೧, ೧ ವರ್ಣಿಸಿರುವ ಸ್ಥಳಗಳ ಸಂಚಾರದಲ್ಲಿ ಇಸ್ರಯೇಲನವರು ಆ ೩೮ ವರ್ಷಗಳನ್ನು ಕಳೆದರು. ಅಷ್ಟರೊಳಗೆ ಯೆಹೋವನು ಮಾರ್ಮಲರೆಂದು ತಳ್ಳಿದ ವಂಶವೆಲ್ಲಾ (ಅಂಕೆ. ೧೪, ೨೩) ಯೆಹೋಶುವ ಕಾಲೆಬರುಳಿದು ಸತ್ತು ಹೋಗಿತ್ತು.

ಸಭಾಶಕದ ವರ್ಷವು ಉತ್ತರಾಯಣ ವಿಷುವಿನ ಮೇಲೆ ತೊಡಗಿತು. ಆದರೆ ರಾಜ್ಯಶಕದ ವರ್ಷಕ್ಕೆ ದಕ್ಷಿಣಾಯನ ವಿಷುವಿನ ಈಚೆಯ ಅಮಾವಾಸೆಯು ಆರಂಭವಾಗಿತ್ತು. ಇಲ್ಲಿಯೂ ಮೋಶೆಯ ಗ್ರಂಥಗಳ ಬೇರೆ ಕಡೆಯಲ್ಲಿಯೂ ಬರೆದ ತಿಂಗಳುಗಳು ಚಂದ್ರಮಾಸಗಳೆಂದು ತಿಳಿಯ ಬೇಕು. ಚಾಂದ್ರಮಾನ ವರ್ಷಕ್ಕೆ ೩೫೪ ದಿವಸ, ಸೌರಮಾನ ವರ್ಷಕ್ಕೆ ೩೬೫ ದಿವಸ. ಎರಡು ವಿಧದ ಲೆಖ್ಖಕ್ಕೆ ಇಷ್ಟು ಹೆಚ್ಚು ಕಡಿಮೆ ಇರುವದರಿಂದ, ಇಸ್ರಯೇಲನವರು ಮೂರು ಮೂರು ವರ್ಷದೊಳಗೆ ಒಮ್ಮೆ ಅದರ್ ಎಂಬ ಹನ್ನೆರಡನೆ ತಿಂಗಳಿನ ಮೇಲೆ ಅಧಿಕ ಅದರೆಂಬ ಒಂದು ತಿಂಗಳು ಸೇರಿಸುತ್ತಿದ್ದರು.

೩. ಹಬ್ಬಕ್ಕೆ ಮುಂಚಿನ ನಾಲ್ಕನೆ ದಿವಸದಲ್ಲಿ ಯಜ್ಞಕ್ಕೆ ಯುಕ್ತವಾದ ಕುರಿಮರಿ ಆಯಿಕೆಯಾಗ ಬೇಕೆಂಬ ಕಟ್ಟಳೆಯು, ಮಿಶ್ರವನ್ನು ಬಿಡುವ ಪಯಣಕ್ಕೆ ಜೋಡಣೆಯಾಗುವ ಸಮಯಕ್ಕೆ ಮಾತ್ರ ಉಚಿತವಾಗಿದ್ದು, ತದನಂತರ ನಿಂತು ಹೋಯಿತೆಂದು ತೋರುತ್ತದೆ.

೪. ಇವು ಬಲಿಯರ್ಪಣೆಗೆ ತಕ್ಕ ಪಶುವಿನ ಲಕ್ಷಣ ಗಳು.

೫. ಕುರಿ ಇಲ್ಲದವರು ಆಡು ಬಳಸಿದರೆ, ದೋಷವಿಲ್ಲ. ಆದರೆ ಪೂರ್ಣಾಂಗವಾದ ಒಂದು ವರ್ಷದ ಕುರಿಮರಿಯ ಬಲಿಯರ್ಪಣೆ ಅಧಿಕ ರೂಢಿಯಾಗಿತ್ತು.

೬. ಸೂರ್ಯ ಮುಳುಗುವ ವೇಳೆ ಪೂರ್ವ ಕಾಲದಲ್ಲಿ ನೇಮಕವಾದ ಕುರಿ ಕಡಿಯುವ ಹೊತ್ತು. ಆದರೆ ಬಳಿಕ ಪಸ್ಕದ ಕುರಿಮರಿಗಳನ್ನು ದೇವಾಲಯದ ಮುಂದೆ ಕೊಯ್ಯುವ ಪದ್ಧತಿ ಉಂಟಾದದರಿಂದ, ಈ ಕೆಲಸಕ್ಕೆ ಹೆಚ್ಚು ಹೊತ್ತು ಬೇಕಾದ ಕಾರಣ, ಮಧ್ಯಾಹ್ನದ ಮೇಲಿನ ಮೂರು ಘಂಟೆಯಲ್ಲಿ ಬಲಿಪಶುಗಳನ್ನು ಯಾಜಕರ ಕೈಯಿಂದ ಕಡಿಸಲಾರಂಭಿಸುತ್ತಿದ್ದರು.

೭. ಇಸ್ರಯೇಲನವರು ಯೆಹೋವನಿಗೆ ಯಾಜಕರಾಜ್ಯವೂ ಪರಿಶುದ್ಧ ಜನಾಂಗವೂ ಆದದರಿಂದ, (ಹೊರ. ೧೯, ೬.) ಒಂದೊಂದು ಮನೆಯ ಯಜಮಾನನು ಯಾಜಕೋದ್ಯೋಗವನ್ನು ನಡಿಸ ತಕ್ಕವನಾಗಿದ್ದನು. ಆದರೆ ತದನಂತರ ಇಸ್ರಯೇಲನವರು ಸರ್ವಸಾಮಾನ್ಯವಾದ ಉದ್ಯೋಗವನ್ನು ಮರತು ಬಿಟ್ಟರು. ಅರಸನಾದ ಹಿಸ್ಕೀಯನ ಕಾಲದಲ್ಲಿ ಪಸ್ಕ ಹಬ್ಬವು ಹೊಸ್ತಾಗಿ ಆಚರಿಸಲ್ಪಟ್ಟಾಗ, ಯಾಜಕರು ಪಸ್ಕ ಬಲಿಗಳನ್ನು ದೇವಾಲಯದ ಅಂಗಳದಲ್ಲಿ ಕೊಯಿದು ಅವುಗಳ ರಕ್ತವನ್ನು ಬಲಿಪೀಠಕ್ಕೆ ಚಿಮಿಕಿಸಿದರೆಂದು, ಬರೆದದೆ. ೨ ದಿನಚರ್ಯ. ೩೦, ೧೬. ೧೭.

೮. ಪಸ್ಕಕುರಿಮರಿಯ ರಕ್ತವನ್ನು ಕದಗಳಿಗೆ ಹಚ್ಚ ಬೇಕೆಂಬದು ಇಸ್ರಯೇಲನವರ ವಿಶ್ವಾಸವನ್ನೂ ವಿಧೇಯತ್ವವನ್ನೂ ಪರೀಕ್ಷಿಸುವ ಅಪ್ಪಣೆಯೇ ಎಂದೂ, ರಕ್ತ ಹಚ್ಚೋಣವು ಮರಣದೂತನಿಗೆ ಇಸ್ರಯೇಲನವರ ಮನೆಗಳನ್ನು ತೋರಿಸುವ ಗುರ್ತ ಎಂದೂ, ನೆನಸಿದರೆ ಸಾಲದು. ಈ ಬಲಿಯೂ ಪಾಪಪರಿಹಾರಾರ್ಥವಾದದ್ದು. ಆದರೆ ಪಸ್ಕಕುರಿಮರಿಯ ಯಜ್ಞವು ಕೇವಲ ವಿಶೇಷವಾದದ್ದು. ಏನಂದರೆ ಬೇರೆ ಪಾಪಬಲಿಗಳಲ್ಲಿ ಬಲಿಭೋಜನವು ಆಗದೆ ಇತ್ತು. ಕೃತಜ್ಞತಾಸಮಾಧಾನ ಬಲಿಗಳಲ್ಲಿಯೇ ಭೋಜನವಾಗುತ್ತಿತ್ತು. ಆದರೆ ಪಸ್ಕ ಬಲಿಗೆ ಪಾಪವಿಮೋಚನೆ ದೇವಾನ್ಯೋನ್ಯಗಳೆ ಯುಕ್ತವಾದ ಉದ್ದೇಶವಿತ್ತು.

ಕದಗಳಿಗೆ ಚಿಮಿಕಿಸಿದ ಬಲಿಯ ರಕ್ತದಿಂದ ಮನೆಗಳಿಗೆ ಬಲಿಪೀಠಭಾವವುಂಟಾಯಿತು. ಮನೆಯವರೆಲ್ಲರು ಬಲಿಯರ್ಪಣೆಯಿಂದ ವಿಮೋಚನೆಯ ಪಾಲುಗಾರರಾದರು. (ಇದರ ನಿಮಿತ್ತ ಮರಣದೂತನು ಅವರನ್ನು ಮುಟ್ಟದೆ ಹೋದನು.) ಇದಲ್ಲದೆ ಪಸ್ಕ ಬಲಿಭೋಜನದಲ್ಲಿ ಕೂಡಿದವರು ಪಾಪಬಲಿಯಿಂದುಂಟಾದ ವಿಮೋಚನೆಯ ಮುಖಾಂತ್ರ ದೇವರ ಅನ್ಯೋನ್ಯದಲ್ಲಿ ಶೇರಿದ ಸಂಜ್ಞೆಯ ಪಡಕೊಂಡು, ಯೆಹೋವನ ಮನೆಯಲ್ಲಿಯೂ ಮೇಜಿನಲ್ಲಿಯೂ ಊಟ ಮಾಡಿದ ಕುಟುಂಬದವರಾಗಿ ಪ್ರತಿಷ್ಠಿತರಾದರು. ಆದದರಿಂದ ಪಸ್ಕಭೋಜನದಲ್ಲಿ ಹುಳಿ ಇಲ್ಲದ ರೊಟ್ಟಿಗಳನ್ನು ತಿನ್ನುತ್ತಿದ್ದರು. ಯಾಕಂದರೆ ಹುಳಿಹಿಟ್ಟು ಪಾಪದ ಹೊಲೆಗೂ ಕೊಳೆಗೂ ಉಪಮೆಯಾಗಿತ್ತು. ಪಸ್ಕಕುರಿಮರಿಯ ಬಲಿಯರ್ಪಣೆಯೂ ಅದಕ್ಕೆ ಯುಕ್ತವಾದ ಊಟವೂ ಮುಂದಣ ಮಹಿಮೆಯುಳ್ಳ ರಕ್ಷಣೆಯ ಮುಂಗುರ್ತಾಗಿದ್ದವು. ಪಸ್ಕ ಕುರಿಮರಿಯ ನಿಜವಾದ ಮೂಲಪ್ರತಿಯು ನಮಗಾಗಿ ಬಲಿಯರ್ಪಣೆಯಾದ ಯೇಸು ಕ್ರಿಸ್ತನೇ. ಪಸ್ಕಭೋಜನವು ಹೊಸ ಒಡಂಬಡಿಕೆಯ ಶ್ರೇಷ್ಠ ಆಚರಣೆಯಾದ ರಾತ್ರಿ ಭೋಜನದ ಮುಂಗುರ್ತಾಗಿತ್ತು.

೯. ಕಹಿಸೊಪ್ಪಿನ ಪಲ್ಯವೂ ಹುಳಿ ಇಲ್ಲದ ರೊಟ್ಟಿಯೂ ಕೂಡಿದ ಸವಿಯಿಲ್ಲದ ತಿಂಡಿ ತಿನ್ನುವ ಸಮಯದಲ್ಲಿ ಭಕ್ತರಾದ ಇಸ್ರಯೇಲನವರು ಮಿಚ್ರದೇಶದ ಕಷ್ಟಗಳನ್ನೂ ಪ್ರಯಾಣದ ಅವಸರ ಬೇಸರಗಳನ್ನೂ, ಮಿಚ್ರದ ಬಿಟ್ಟಿಕೆಲಸಕ್ಕಿಂತ ಅಧಿಕ ಕಠಿಣವಾದ ಪಾಪದ ದಾಸತ್ವವನ್ನೂ ನೆನಸಿ ಕೊಳ್ಳುತ್ತಾ, ತಮಗೆ ದೊರಕಿದ ಬಿಡುಗಡೆಯ ಕೃಪೆಗಾಗಿ ದೇವರಿಗೆ ಪರಿಶುದ್ಧ ಸಂತೋಷದಿಂದ ಸ್ತೋತ್ರ ಮಾಡುತ್ತಾ ಇರ ತಕ್ಕದ್ದು.

೧೦. ಅಖಂಡವಾದ ಕುರಿಮರಿಯನ್ನು ಕುಟುಂಬವೆಲ್ಲಾ ಕೂಡಿ ತಿನ್ನುತ್ತಾ ಇರುವ ಸಮಯದಲ್ಲಿ ಇಸ್ರಯೇಲನವರಾದ ಭಕ್ತರು ತಾವು ಸಂಪೂರ್ಣವಾದ ವಿಮೋಚನೆಯನ್ನು ಹೊಂದಿದ ದೇವಜನಾಂಗವೆಂಬ ಶರೀರದ ಅವಯವಗಳಾಗಿದ್ದೇವೆಂಬದನ್ನು ಧ್ಯಾನಿಸಿ, ತಮಗೆ ಮನೆಯವರೆಲ್ಲರ ಸಂಗಡಲೂ ಸಮಸ್ತ ಜನಾಂಗದ ಸಂಗಡಲೂ ಇರುವ ಐಕ್ಯದಲ್ಲಿ ಸಂತೋಷ ಪಡುತ್ತಿದ್ದರು. ಪಸ್ಕ ಭೋಜನ ಮಾಡುವ ಭಕ್ತರ ಮನೋಭಾವನೆಗಳ ಉತ್ತಮ ವರ್ಣನೆಯು ೧೧೩. ೧೧೪--೧೧೮. ೧೩೬ ಕೀರ್ತನೆಗಳಲ್ಲಿ ತೋರುತ್ತದೆ. ಈ ಕೀರ್ತನೆಗಳನ್ನು ಇತ್ತಲಾಗಿನ ಕಾಲಗಳಲ್ಲಿ ಯೆಹೂದ್ಯರು ಪಸ್ಕಭೋಜನ ತೀರಿದ ಮೇಲೆ ಪಠಿಸುತ್ತಿದ್ದರು. ಯೇಸು ಕ್ರಿಸ್ತನು ಸಹ ಹೀಗೆ ಮಾಡಿದನೆಂದು ಮತ್ತಾ. ೨೬, ೩೦ ನೋಡಿ, ತಿಳುಕೊಳ್ಳ ಬಹುದು.

೧೧. ಪಸ್ಕಭೋಜನವು ಅತಿ ಪರಿಶುದ್ಧವಾಗಿದ್ದದರಿಂದ, ಅದರಲ್ಲೇನೂ ಹೊಲೆಯಾಗದ ಹಾಗೆ, ಎಂಜಲೆಲ್ಲಾನ್ನು ಸುಟ್ಟುಬಿಡ ಬೇಕಾಗಿತ್ತು.

೧೨. ಓಡಿ ಹೋಗುವವರಂತೆ ಚಡಪುಡನೆಯಾಗಿ ತಿನ್ನುತ್ತಾ, ಮಿಚ್ರದಿಂದ ಹೊರಟು ಬಂದ ಪಯಣವನ್ನು ನೆನಪು ಮಾಡಿಕೊಳ್ಳ ಬೇಕಾಯಿತು.

೧೩. ಪಸಕ್ ಎಂಬ ಇಬ್ರಿಯ ಶಬ್ದಕ್ಕೆ ತಪ್ಪಿಸಿ ದಾಟುವದೆಂಬ ಅರ್ಥ.

೧೪. ಯೆಹೋವನ ಶಿಕ್ಷೆಯನ್ನು ನಿಲ್ಲಿಸಲೂ, ತಮ್ಮ ಆಶ್ರಿತರನ್ನು ಅದಕ್ಕೆ ತಪ್ಪಿಸಲೂ, ಮಿಚ್ರದ ದೇವತೆಗಳಿಗೆ ಶಕ್ತಿಯಿಲ್ಲವೆಂದು, ಪ್ರಕಟವಾಯಿತು. ಮಿಚ್ರದವರು ಪೂಜಿಸುತ್ತಾ ಬಂದ ಆಪಿಸ್ ಎಂಬ ಬಸವ ಮುಂತಾದ ಮೃಗಗಳು ಸಹ ಸತ್ತು ಹೋದದರಿಂದ, ಅವುಗಳಲ್ಲಿ ದಿವ್ಯ ಬಲವಿಲ್ಲವೆಂದು, ಪ್ರತ್ಯಕ್ಷವಾಯಿತು.

೧೫. ಪಾಪಪರಿಹಾರದ ಈ ಪಸ್ಕ ಬಲಿಯ ರಕ್ತವು ಎಲ್ಲಿ ಕಂಡು ಬಂತೊ, ಅಲ್ಲಿಯ ಜನರಿಗೆ ಈ ಪಾಪಪರಿಹಾರದ ಬಲಿಯ ದೆಶೆಯಿಂದ ಮರಣದ ದೂತನು ಏನೂ ಮಾಡಲಿಲ್ಲಾ. ಇಸ್ರಯೇಲನವನಾಗಿದ್ದರೂ, ಈ ರಕ್ತವನ್ನು ಉಪಯೋಗಿಸಿ ಕೊಳ್ಳದಿರುವಲ್ಲಿ ಮರಣದೂತನ ಖಡ್ಗವು ಸುಮ್ಮನೆ ಬಿಟ್ಟು ಮುಂದೆ ಹೋಗಲಿಲ್ಲಾ.

೧೬. ಈ ಆಜ್ಞೆಯನ್ನು ಮೀರಿದವರಿಗೆ ನೇಮಕವಾದ ಶಿಕ್ಷೆಗೆ ಪರಿಛೇದನೆಯಿಂದ ದೇವರ ಜನಾಂಗದಲ್ಲಿ ಶೇರಿಸಿ ಕೊಂಡ ಪರವಂಶದವರೂ ಕೈಯಾಳುಗಳೂ ಒಳಗಾಗಿದ್ದರು.

೧೭. ಈ ಮಾತಿಗೆ ಎರಡು ವಿಧದ ಅಭಿಪ್ರಾಯ: ೧) ಹಳೆ ಒಡಂಬಡಿಕೆಯ ಜನಾಂಗದ ಧರ್ಮವು ನಡೆ

ಯುವ ವರೆಗೆ ಪಸ್ಕ ಹಬ್ಬದ ಆಚರಣೆಯು ಸಲ್ಲ ಬೇಕಾಗಿತ್ತು. ೨) ಹಳೆ ಒಡಂಬಡಿಕೆಯ ಸಿದ್ಧಿಯಾದ ಹೊಸ ಒಡಂಬಡಿಕೆ ಎಂದಿಗೂ ತೀರದು. ಕ್ರಿಸ್ತನ ರಕ್ತದಿಂದುಂಟಾದ ಪಾಪಪರಿಹಾರದ ಅನುಭವವೂ ಕ್ರಿಸ್ತನ ರಕ್ತ ಮಾಂಸಗಳ ಭೋಜನವಾದ ರಾತ್ರಿಭೋಜನದಿಂದ ಬಲಗೊಳ್ಳುವ ಮನುಷ್ಯದೇವಾನ್ಯೋನ್ಯವೂ ಭಕ್ತರಿಗೆ ಸಂಪೂರ್ಣವಾಗಿ ಪ್ರಾಪ್ತವಾಗುವ ಧರ್ಮವು ಇಹಪರದಲ್ಲಿ ನಿಲ್ಲದು.

೧೮. ಸಮ ನೋಡು. ಉತ್ಪ. ೧೭, ೧೪. ರಕ್ಷಣಾರ್ಥವಾದ ಒಡಂಬಡಿಕೆಯ ಫಲವು ಒಡಂಬಡಿಕೆಯನ್ನು ಕೈಕೊಳ್ಳುವವರಿಗೆಯೇ ದೊರಕುವದು. ಮರಣದೂತನ ಹೊಡತವನ್ನು ನಿವಾರಿಸಿ ಜೀವವನ್ನುಳಿಸುವ ಕಟ್ಟಳೆಯನ್ನು ಮೀರುವವನ ಜೀವವಳಿಯುವದು ನ್ಯಾಯ.

೧೯. ಮೊದಲನೆ ದಿವಸವೂ ಕಡೆ ದಿವಸವೂ ಅಧಿಕ ಪರಿಶುದ್ಧವಾಗಿದ್ದವು. ಅವಲ್ಲಿ ಆಹಾರಕ್ಕೆ ಅವಶ್ಯವಾಗಿರದ ಕೈಕೆಲಸವೆಲ್ಲಾ ನಿಷಿದ್ಧವಾಗಿತ್ತು. ಪ್ರಾರ್ಥನೆ, ಗಾನ, ಬಲಿಯರ್ಪಣೆ ಮುಂತಾದ ನಿಷ್ಠೆಗಳಿಗಾಗಿಯೇ ಅವು ನೇಮಕವಾಗಿದ್ದವು.

೨೦. ಇಸ್ರಯೇಲನ ಜನಾಂಗವೆಲ್ಲಾ ರಕ್ಷಣೆಯ ವಾಗ್ದತ್ತವನ್ನೂ ಅದಕ್ಕೆ ಯುಕ್ತವಾದ ಆಚರಣೆಯ ಕಟ್ಟಳೆಯನ್ನೂ ನಮ್ರವಾದ ಕೃತಜ್ಞತೆಯಿಂದ ಅಂಗೀಕರಿಸಿ, ತನ್ನ ವಿಮೋಚನೆಯ ಸ್ಮರಣಾರ್ಥವಾದ ಪಸ್ಕ ಹಬ್ಬದ ನೇಮವನ್ನು ಕೈಕೊಳ್ಳುವದಕ್ಕೆ ಒಪ್ಪಿ ಕೊಂಡಿತು. ದೇವರ ಆಯುವಿಕೆಗೆ ಪರಿಛೇದನೆಯು, ದೇವರು ಮಾಡಿದ ವಿಮೋಚನೆಗೆ ಪಸ್ಕ ಭೋಜನವು ಸೂಚಕವಾದ ಸಂಪ್ರದಾಯವಾಗಿತ್ತು.

ಚೊಚ್ಚಲವಾದ ಪ್ರಾಣಗಳ ಕೊಲೆ. ಹತ್ತನೆ ಕಾಟ. ಸ. ೧೨, ೨೯ — ೩೬.

ವ. ೨೯. ಮಧ್ಯ ರಾತ್ರಿಯಲ್ಲಿ ಆದದ್ದೇನಂದರೆ[1] — ತನ್ನ ಗದ್ದಿಗೆಯಲ್ಲಿ ಕೂತು
ಕೊಳ್ಳುವ ಫರೋನನ ಚೊಚ್ಚಲು ಮಗನಿಂದ ಶೆರೆಮನೆಯಲ್ಲಿಯಣ ಶೆರೆಯವನ ಚೊ
ಚ್ಚಲು ಮಗನ ವರೆಗೆ ಮಿಚ್ರ ದೇಶದಲ್ಲಿಯಣ ಚೊಚ್ಚಲೆಲ್ಲಾನ್ನು ಪಶುಗಳ ಚೊಚ್ಚಲೆ
ಲ್ಲಾನ್ನು ಸಹ, ಹೊಡೆದನು. ೩೦. ಆಗ ಫರೋನನೂ ಅವನ ಸೇವಕರೆಲ್ಲರೂ ಮಿಚ್ರದ
ವರೆಲ್ಲರೂ ಆ ರಾತ್ರಿಯಲ್ಲಿ ಎದ್ದರು. ಸತ್ತವನಿಲ್ಲದ ಮನೆಯೊಂದೂ ಇರದದರಿಂದ
ಮಿಚ್ರದಲ್ಲಿ ದೊಡ್ಡ ಗೋಳು ಉಂಟಾಯಿತು. ೩೧. ಮತ್ತು ಮೋಶೆ ಆರೋನರನ್ನು
ರಾತ್ರಿಯಲ್ಲಿ ಕರೆದು[2], ಏಳಿರಿ, ನನ್ನ ಪ್ರಜೆಯ ನಡುವೆಯಿಂದ ನೀವೂ ಇಸ್ರಯೇಲನ ಮ
ಕ್ಕಳೂ ಹೊರಟು ಹೋಗಿರಿ. ಹೋಗಿರಿ, ಯೆಹೋವನನ್ನು ನೀವು ಹೇಳಿದ ಹಾಗೆ ಸೇ
ವಿಸಿರಿ! ೩೨. ನಿಮ್ಮ ಕುರಿಗಳನ್ನೂ ದನಗಳನ್ನೂ ನೀವು ಹೇಳಿದ ಹಾಗೆಯೇ[3] ಕೊಂ
ಡು ಹೋಗಿರಿ; ನನ್ನನ್ನೂ ಆಶೀರ್ವದಿಸಿರಿ[4]! ಅಂದನು. ೩೩. ಇದಲ್ಲದೆ ಮಿಚ್ರದವರು
ನಾವೆಲ್ಲರು ಸಾಯುತ್ತೇವೆಂದು ಹೇಳಿ[5], ಅವರನ್ನು ದೇಶದಿಂದ ವೇಗದಿಂದ ಕಳುಹಿಸು
ವಂತೆ ಪ್ರಜೆಗೆ ಬಲವಂತ ಮಾಡಿದರು. ೩೪. ಆಗ ಪ್ರಜೆಯು ಹುಳಿಯಾಗದೆ ಇದ್ದ ತ
ಮ್ಮ ಹಸಿ ಹಿಟ್ಟನ್ನು ತಮ್ಮ ಬಟ್ಟೆಗಳಲ್ಲಿ ತಮ್ಮ ಹೆಗಲುಗಳ ಮೇಲೆ ಕಟ್ಟಿದ ನಾದುವ ಕೊ
ಣಬಿಗೆಗಳಲ್ಲಿ ಎತ್ತಿ ಕೊಂಡು ಹೋದರು. ೩೫. ಮತ್ತು ಇಸ್ರಯೇಲನ ಮಕ್ಕಳು ಮೋ
ಶೆಯ ಮಾತಿನ ಪ್ರಕಾರ ಮಾಡಿ, ಮಿಚ್ರದವರಿಂದ ಬೆಳ್ಳಿ ಪಾತ್ರೆಗಳನ್ನೂ ಚಿನ್ನದ ಪಾತ್ರೆ
ಗಳನ್ನೂ ಬಟ್ಟೆಗಳನ್ನೂ ಕೇಳಿ ಕೊಂಡರು. ೩೬. ಮತ್ತು ಯೆಹೋವನು ಪ್ರಜೆಗೆ ಮಿ

ತ್ರದವರ ದೃಷ್ಟಿಯಲ್ಲಿ ಕೃಪೆಯನ್ನು ಕೊಟ್ಟದರಿಂದ, ಅವರು ಕೇಳಿದ್ದನ್ನು ಕೊಡಲು೬), ಅವರು ಮಿಶ್ರದವರಿಗೆ ಸುಲಿಗೆ ಮಾಡಿದರು.

೧. ಮೋಶೆ ಫರೋನನಿಗೆ (ಸ. ೧೧, ೫) ಮುಂಪೇ ಳಿದ ಮಾತು ಒಟ್ಟಾಗಿ ಈಡೇರಿತು.

೨. ಸ. ೧೦, ೨೮ನೆ ವಚನದ ಪ್ರಕಾರ ಫರೋನನು ಮೋಶೆಯ ಮುಖವನ್ನು ತಿರಿಗಿ ನೋಡಬೊಲ್ಲೆನೆಂದು ಹೇಳಿದಾಗ್ಯೂ, ಮರಣಸಂಕಟದಲ್ಲಿ, ಅವರನ್ನು ಕರಿಸಿ, ಹೋಗ ಹೇಳಿದನು.

೩. ಸಮ ನೋಡು ಸ. ೧೦, ೨೪. ೨೫.

೪. ಫರೋನನ ಹೃದಯ ಈಗ ಕರಗಿ ಹೋದದರಿಂದ, ತನಗಾಗಿ ಬಿನ್ನೈಸ ಬೇಕೆಂದು, ಮೋಶೆ ಆರೋನರನ್ನು ಬೇಡಿ ಕೊಳ್ಳುತ್ತಾನೆ. ಆದರೆ ಅವನ ಹೃದಯವು ಮೆತ್ತಣವಾದಾಗ್ಯೂ, ಅವನು ಮಾನಸಾಂತರ ಪಡಲೇ ಇಲ್ಲ.

೫. ಫಕ್ಕನೆ ತೊಡಗಿದ ಘೋರ ವ್ಯಾಧಿ ಹೆಚ್ಚಾಗುವದೆಂದು, ಭಯಭ್ರಾಂತಿಯಿಂದ ಅಂಜಿ ಕೊಂಡರು.

೬. ಇಲ್ಲಿ ಬರೆದ ಶಬ್ದವನ್ನು ಕಡವಾಗಿ ಕೊಟ್ಟರೆಂದು ಟೀಕಿಸುವದು ಸರಿಯಲ್ಲ. ಅದು ಈ ಸ್ಥಳದ ಹೊರ್ತು ಹಳೆ ಒಡಂಬಡಿಕೆಯ ಗ್ರಂಥಗಳಲ್ಲಿ ಒಮ್ಮೆ ಮಾತ್ರ ಪ್ರಯೋಗವಾದದ್ದು. ೧ ಸಮು. ೧, ೨೮ನೆ ವಚನದಲ್ಲಿ ಸಮುವೇಲನ ತಾಯಿ ಮಗನ ವಿಷಯವಾಗಿ ಅವನನ್ನು ಯೆಹೋವನಿಗೆ ಒಪ್ಪಿಸಿದೆನೆಂದು, ಹೇಳುವಲ್ಲಿ ಇದೇ ಶಬ್ದಕ್ಕೆ ಒಪ್ಪಿಸಿದೆನೆಂಬದು ಭಾಷಾಂತರವಾಗಿ ಬರುತ್ತದೆ. ಇಸ್ರಯೇಲನವರು ಕೇಳಿ ಕೊಂಡದ್ದನ್ನು ಮಿಶ್ರದವರು ಮನಸಮ್ಮತಿಯಾಗಿ ಕೊಟ್ಟರು. ಸಮ ನೋಡು ೩, ೨೧. ೨೨.

ಸೀನಯಿ ಪರ್ವತದ ಪರ್ಯಂತ ನಡೆದ ಪ್ರಯಾಣ. ಸ. ೧೨, ೩೭—ಸ. ೧೯, ೨೭.

ಪ್ರಯಾಣದ ಆರಂಭ. ಸ. ೧೨, ೩೭—೪೨.

ವ. ೩೭. ಮತ್ತು ಇಸ್ರಯೇಲನ ಮಕ್ಕಳು ಚಿಕ್ಕವರಲ್ಲದೆ ಆರು ಲಕ್ಷ ಪಾಯದಳವಾದ೧) ಗಂಡಸರಾಗಿ ರಾಮ್ಸೆಸ್೨) ಕಡೆಯಿಂದ ಸುಕೋಥಿಗೆ ಹೊರಟು ಹೋದರು. ೩೮. ಮತ್ತು ಜನರ ದೊಡ್ಡ ಕದಳಿಯೂ೩), ಕುರಿ ದನಗಳ ಬಹಳ ದೊಡ್ಡ ಹಿಂಡೂ, ಅವರ ಸಂಗಡ ಏರಿ ಬಂತು. ೩೯. ಆಗಲವರು — — ಮಿಶ್ರದಿಂದ ತಂದ ಹಸಿ ಹಿಟ್ಟು ಸುಟ್ಟು, ಹುಳಿ ಇಲ್ಲದ ರೊಟ್ಟಿಗಳಾಗಿ ಸುಟ್ಟರು. ೪೦. ಮಿಶ್ರದಲ್ಲಿ ವಸ್ತಿಯಾದ ಇಸ್ರಯೇಲನವರ ನಿವಾಸಕಾಲವು ನಾನ್ನೂರ ಮೂವತ್ತು ವರ್ಷ೪). ೪೧. ನಾನ್ನೂರ ಮೂವತ್ತು ವರ್ಷದ ಕಡೆಯಲ್ಲಿ ಇದೇ ದಿವಸದಲ್ಲಿ ಆದದ್ದೇನಂದರೆ: ಯೆಹೋವನ ಸೇನೆಗಳೆಲ್ಲಾ ಮಿಶ್ರ ದೇಶದಿಂದ ಹೊರಟವು. ೪೨. ಇದು ಯೆಹೋವನಿಗೆ ಅವರನ್ನು ಮಿಶ್ರ ದೇಶದಿಂದ ಹೊರಬರಲೀಸಿದ್ದಕ್ಕಾಗಿ ಆಚರಿಸ ತಕ್ಕ ರಾತ್ರಿಯಾಗಿದೆ. ಇಸ್ರಯೇಲನ ಮಕ್ಕಳೆಲ್ಲರು ತಮ್ಮ ತಲಾಂತರಗಳಲ್ಲಿ ಯೆಹೋವನಿಗೆ ಆಚರಿಸ ತಕ್ಕ ರಾತ್ರಿ ಇದೇ೫).

೧. ಇಲ್ಲಿ ಹೆಚ್ಚುಕಡಿಮೆ ಲೆಕ್ಕ ಬರೆದದೆ. ಮಟ್ಟಾದ ಲೆಕ್ಕವು ಉತ್ಪ. ೩೮, ೨೬. ಅಂಕೆ. ೧, ೪. ೬ ರಲ್ಲಿ ಕಾಣುತ್ತದೆ. ಏನಂದರೆ ಲೇವಿಯರಲ್ಲದೆ ಇಪ್ಪತ್ತು ವರ್ಷ ಮೇಲಿನ ಪ್ರಾಯದ ಗಂಡಸರಾದ ಇಸ್ರಯೇಲನವರ ಒಟ್ಟು ೬೦೩,೫೫೦. ಹೆಂಗಸರು ಮಕ್ಕಳನ್ನು ಕೂಡಿಸಿದರೆ, ಶುಮಾರು ೨೫ ಲಕ್ಷ ಜನರಾಗಿದ್ದರು. ಅವರು ಮಿಶ್ರದಲ್ಲಿ ಅಧಿಕಾಧಿಕವಾಗಿ ವೃದ್ಧಿಯಾದ ಕಾರಣವೇನಂದರೆ: ಉತ್ಪ. ೧೫, ೫; ೩೫,

೧೧; ೪೬, ೩. ದೇವರು ಮೂರು ಮಂದಿ ಮೂಲಪಿತೃಗಳಿಗೆ ಕೊಟ್ಟ ಆಶೀರ್ವಾದವು. ಆದರೆ ಎಪ್ಪತ್ತು ಮಂದಿಯಿಂದಲೇ ಕೆಲವು ನೂರು ವರ್ಷದೊಳಗೆ ೨೫ ಲಕ್ಷ ಜನರು ಹುಟ್ಟಿದರೆಂದು, ನೆನಸ ಕೆಲಸವಿಲ್ಲ. ಯಾಕೋಬನಿಂದಲೇ ಹುಟ್ಟಿದವರು ಎಪ್ಪತ್ತು ಮಂದಿಯಾಗಿರಲಿ. ಇವರ ಸಂಗಡ ಮಿಚ್ರಕ್ಕೆ ಹೋದ ಆಳುಗಳು ಒಂದು ವೇಳೆ ಕೆಲವು ಸಾವಿರ ಜನರಾಗಿದ್ದರು. ಇವರಲ್ಲಿ ಪರಿಛೇದನೆಯ ಹೊಂದಿದವರೆಲ್ಲರು ನಿಜ ಇಸ್ರಯೇಲನವರಾದರು. ಅಬ್ರಹಾಮನ ಮನೆಯಲ್ಲಿ ೩೦೮ ಮಂದಿ ಬಂಟರಿದ್ದರು. ಉತ್ಪ. ೧೪, ೧೪. ಏಸಾವನು ಯಾಕೋಬನಿಗೆ ಎದುರು ಬಂದಾಗ, ಅವನ ಕೂಡ ನಾನ್ನೂರು ಮಂದಿ ಬಂಟರಿದ್ದರು. ಉತ್ಪ. ೩೨, ೬. ಯಾಕೋಬನು ಅದೇ ವೇಳೆಯಲ್ಲಿ, ನಾನು ಎರಡು ದಂಡು ಆದೆನೆಂದು, ಪ್ರಾರ್ಥಿಸಿ ಹೇಳುತ್ತಾನೆ. ವ. ೧೦.

೨. ಉತ್ಪ. ೪೭, ೧೧. ಹೊರ. ೧, ೧೧. ರಾಮ್ಸೆಸ್ ಬಲವಾದ ಕೋಟೆ ಕಟ್ಟಿದ ಇಸ್ರಯೇಲನವರ ಪ್ರಾಮುಖ್ಯ ಪಟ್ಟಣವಾಗಿತ್ತು.

೩. ಇವರು ಯಾರೆಂದರೆ: ಇಸ್ರಯೇಲನವರೋಪಾದಿಯಾಗಿ ಮಿಚ್ರದವರಿಗೆ ಕೈವಶವಾದ ದುರವಸ್ಥೆಯಲ್ಲಿದ್ದು, ಮಹಾ ಅದ್ಭುತಗಳನ್ನು ಮಿಚ್ರದಲ್ಲಿ ನಡಿಸಿದ ಯೆಹೋವನನ್ನು ನಂಬಿ, ಅವನ ಜನಾಂಗಕ್ಕೆ ಕೂಡಿದ ಜನರು. ಪರಜನರಾಗಿ ಹುಟ್ಟಿದ ಈ ಸಮೂಹದವರೆಲ್ಲರು ಪರಿಛೇದನೆಯಿಂದ ಇಸ್ರಯೇಲನ ಜನಾಂಗದಲ್ಲಿ ಶೇರಿದರೆ ಉಚಿತವಿತ್ತು. ಇವರು ಮುಂದಿನ ಚರಿತ್ರದಲ್ಲಿ ಮುಖ್ಯವಾಗಿ ಗುಣುಗುಟ್ಟಿ, ಮಿಕ್ಕಾದವರನ್ನು ಸಹಾ ಕೆಡಿಸಿದವರು.

೪. ಇಲ್ಲಿ ಬರೆದ ಲೆಖ್ಖವನ್ನೂ ಉತ್ಪ. ೧೫, ೧೩ ಮತ್ತು ಅಪೊ. ಕ್ರಿ. ೭, ೬ರಲ್ಲು ಬರೆದದ್ದನ್ನೂ ಸಮನೋಡಿದರೆ, ಇಸ್ರಯೇಲನವರು ೪೩೦ ವರ್ಷ ಮಿಚ್ರದಲ್ಲಿ ಪ್ರವಾಸವಾಗಿದ್ದರೆಂದು, ತೋರುವದು. ಆದರೆ ಪೌಲನು ಗಲಾ. ಪತ್ರಿ. ೩, ೧೭ರಲ್ಲು ಅಬ್ರಹಾಮನಿಗೆ ದೇವರ ವಾಗ್ದತ್ತ ಸಿಕ್ಕಿದಂದಿನಿಂದ ಇಸ್ರಯೇಲನವರಿಗೆ ನೇಮಧಾನ ಪ್ರಾಪ್ತವಾದಂದಿಗೆ ೪೩೦ ವರ್ಷ ಕಳೆದು ಹೋಯಿತೆಂದು, ಹೇಳುತ್ತಾನೆ. ಹಾಗಾದರೆ ಅಬ್ರಹಾಮನ ಕರೆಯುವಿಕೆಯಿಂದ ಯಾಕೋಬನು ಮಿಚ್ರದಲ್ಲಿ ಪ್ರವಾಸವಾದ ಕಾಲದ ವರೆಗೆ ೨೧೫ ವರ್ಷ, ಆಗನಿಂದ ಇಸ್ರಯೇಲನ ಮಕ್ಕಳು ಮಿಚ್ರದಿಂದ ಹೊರಟು ಬಂದ ಪ್ರಯಾಣದ ವರೆಗೆ ೨೧೫ ವರ್ಷ ಎಣಿಕೆ ಮಾಡ ಬೇಕು. ಈ ಗಣನೆಗೆ ಹೊರ. ೬, ೧೬—೨೦ ವಿವರಿಸಿದಂಥ ಲೇವಿಯ ವಂಶಾವಳಿಯೂ ಉತ್ಪ. ೧೫, ೧೬ ಬರೆದ ನಾಲ್ಕನೆ ತಲಾಂತರದಲ್ಲಿ ಅವರು ತಿರಿಗಿ ಬರುವರೆಂಬದೂ ಒಪ್ಪುತ್ತದೆ. ಎರಡು ವಿಧದ ಈ ಕಾಲಗಣನೆಯ ವಿಷಯವಾದ ತರ್ಕವನ್ನು ತೀರಿಸುವದು ಈ ವರೆಗೆ ದೇವವಾಕ್ಯಜ್ಞರಾದ ಉತ್ತಮ ಪಂಡಿತರಿಗೆ ಕೈಲಾಗದೆ ಹೋಗಿದೆ.

೫. ಇಸ್ರಯೇಲನವರು ಮಿಚ್ರದಿಂದ ಹೊರಟು ಬಂದ ರಾತ್ರಿಯು ದೇವಜನಾಂಗದ ಜನನಕಾಲವಾದದರಿಂದ, ಈ ರಾತ್ರಿಯು ಅತಿ ಘನವಾದದ್ದೂ, ಅದರ ನೆನಪಿಗಾಗಿ ನೇಮಕವಾದ ಹಬ್ಬವು ಹಬ್ಬಗಳಲ್ಲಿ ಶ್ರೇಷ್ಠವಾದದ್ದೂ ಎಂದು, ವಿಶೇಷವಾಗಿ ತೋರುವ ಹಾಗೆ, ಈ ವಚನವು ಪ್ರತ್ಯೇಕ ಪುನರುಕ್ತಿಯಾಗಿ ಎರಡನೆ ಸಾರಿ ಬರೆದದೆ.

ವ. ೪೩—೫೧. ಮೋಶೆ ಆರೋನರಿಗೆ ದೇವರು ಈ ಸಮಯದಲ್ಲಿಯೇ ತಿಳಿಸಿದಂಥ, ಜನರಿಗೆ ತದನಂತರ ಗೊತ್ತಾದಂಥ, ಪಸ್ಕ ಚೋಜನಾಧಿಕಾರಿಗಳ ವಿಷಯವಾದ ಕೆಲವು ಕಟ್ಟಳೆಗಳ ಸಾರಾಂಶವೇನಂದರೆ: ಪಸ್ಕ ಚೋಜನವು ದೇವರಿಗೂ ಆಯಿಕೆಯಾದ ಜನಾಂಗಕ್ಕೂ ಇರುವ ಅನ್ಯೋನ್ಯವನ್ನೂ, ದೇವಜನಾಂಗದ ಅವಯವಗಳಿಗೆ ಇರುವ ಪರಸ್ಪರ ಸಂಬಂಧವನ್ನೂ ಸೂಚಿಸಿ ದೃಢ ಪಡಿಸುವ ಆಚರಣೆಯಾಗಿ ನೇಮಕವಾಯಿತು. ಪರರು ಈ ಆಚರಣೆಯಲ್ಲಿ ಶೇರಲಧಿಕಾರಿಗಳಲ್ಲ. ಆದರೆ ಕ್ರಯಕ್ಕೆ ಕೊಂಡು ಕೊಂಡ ಆಳುಗಳು, ಕೂಲಿಯಾಳುಗಳು, ಆಶ್ರಿತ ಜನರು ಮೊದಲಾದ ಪರವಂಶದವರು ಪರಿಛೇದನೆಯ ಹೊಂದಿದ ಮೇಲೆ, ಇಸ್ರಯೇಲನವರು ಕೈಕೊಳ್ಳುವ ರೀತಿಗಳನ್ನೆಲ್ಲಾ ಕೈಕೊಳ್ಳುತ್ತಾ ಪಸ್ಕ ಚೋಜನದಲ್ಲಿ ಶೇರುವದು ವಿಹಿತವಾಗಿತ್ತು. ಇತರರು ಅನಧಿಕಾರಿಗಳಾಗಿದ್ದರು.

ಚೊಚ್ಚಲ ಪ್ರಾಣಗಳು ದೇವರಿಗೆ ಪವಿತ್ರವಾಗಿರ ಬೇಕೆಂಬ ಕಟ್ಟು. ಸ. ೧೩, ೧—೧೬.

ಈ ಸ್ಥಳದ ತಾತ್ಪರ್ಯವು ಹಿಂದಿನ ಸಂಧಿಯ ಸಂಗತಿಗೆ ಹತ್ತಿ ಕೊಳ್ಳುತ್ತದೆ. ಹ್ಯಾಗಂದರೆ ವ. ೩—೧೦ರಲ್ಲು ಮಿಚ್ರದಿಂದ ಬಿಡುಗಡೆಯಾದ ವಿಮೋಚನೆಯ ಆಚರಣೆಯಾದ ಹುಳಿ ಇಲ್ಲದ ರೊಟ್ಟಿಗಳ ಹಬ್ಬದ ಕಟ್ಟಳೆ ಇನ್ನೂ ವಿವರವಾಗಿ ಬರೆದಿರುವದಲ್ಲದೆ, ವ. ೧೧—೧೬ರಲ್ಲು ಮಿಚ್ರ ದೇಶದ ಮೇಲೆ ಬಿದ್ದ ಹತ್ತನೆ ಕಾಟದಲ್ಲಿ ಇಸ್ರಯೇಲನವರ ಚೊಚ್ಚಲು ಮಕ್ಕಳು ಪಶುಗಳು ಮುಂತಾದದರ ಜೀವ ಉಳಿಸಿ ಕೊಂಡ ಕಾರಣ ಅವರ ಚೊಚ್ಚಲುಗಳೆಲ್ಲಾ ದೇವರಿಗೆ ಮೀಸಲಾಗ ಬೇಕೆಂಬ ಕಟ್ಟಳೆ ಕೊಟ್ಟಿರುತ್ತದೆ. ವರ್ಷ ವರ್ಷಕ್ಕೆ ಪಸ್ಕ ಹಬ್ಬವು, ದಿನ ದಿನಕ್ಕೆ ಈ ಪದ್ಧತಿಯು, ಇಸ್ರಯೇಲನವರಿಗೆ ಮಿಚ್ರದಲ್ಲಿ ಉಂಟಾದ ವಿಮೋಚನೆಯನ್ನು ಅವರ ನೆನಪಿಗೆ ತರುತ್ತಿತ್ತು.

ವ. ೧. ಆಗ ಯೆಹೋವನು ನುಡಿದು ಮೋಶೆಗೆ ಹೇಳಿದ್ದೇನಂದರೆ: ೨. ಇಸ್ರಯೇಲನ ಮಕ್ಕಳಲ್ಲಿ ಮನುಷ್ಯರಲ್ಲಿಯೂ ಪಶುಗಳಲ್ಲಿಯೂ ಬಸುರೊಡೆಯುವ ಚೊಚ್ಚಲೆಲ್ಲಾನ್ನು ನನಗೆ ಪವಿತ್ರ ಮಾಡು; ಅದು ನನ್ನದೇ.

ತಾನು ಮಿಚ್ರದಲ್ಲಿ ಗಂಡು ಚೊಚ್ಚಲೆಲ್ಲಾದರ ಜೀವವನ್ನುಳಿಸಿ, ಅದು ತನ್ನ ಪಾಲೆಂದು ತೋರಿಸಿದ ಮೇಲೆ, ಇನ್ನು ಮುಂದೆ ಮನುಷ್ಯರಲ್ಲಿಯೂ ಪಶುಗಳಲ್ಲಿಯೂ ಹುಟ್ಟುವ ಚೊಚ್ಚಲು ಗಂಡುಗಳೆಲ್ಲಾ ಉಳಿದವಕ್ಕೆ ವಿಂಗಡವಾಗಿಯೂ, ತನ್ನ ಸ್ವಾಸ್ಥ್ಯವೆಂತ, ತನ್ನ ಸೇವೆಗಾಗಿ ಪವಿತ್ರವಾಗಿಯೂ ಇರ ಬೇಕೆಂದು, ದೇವರು ತನ್ನ ಕೃಪೆಯಿಂದ ಇಸ್ರಯೇಲನವರಿಗೆ ಮಿಚ್ರದಲ್ಲಿ ಉಂಟಾದ ಜೀವರಕ್ಷಣೆಯ ನಿತ್ಯ ನೆನಪಿಗಾಗಿ ಮೋಶೆಯ ಮುಖಾಂತರ ಆಜ್ಞಾಪಿಸುತ್ತಾನೆ. ಚೊಚ್ಚಲು ಮೃಗಗಳೆಲ್ಲಾ ದೇವರ ಪಾಲಾದದರಿಂದ, ಅಶುದ್ಧವಾದ ಕತ್ತೆ ಮುಂತಾದ್ದರ ಕುತ್ತಿಗೆ ಮುರಿಯುವದು, ಶುದ್ಧವಾದದ್ದನ್ನು ಬಲಿಯಾಗಿ ಅರ್ಪಿಸುವದು, ಅಶುದ್ಧವಾದದ್ದು ಕೆಲಸಕ್ಕೆ ಬೇಕಾದರೆ, ಅದಕ್ಕೆ ಕುರಿಯನ್ನು ಮಾರಿ ಕೊಡುವದು, ನೇಮಕವಾಯಿತು. (ವ ೧೩. ೧೫.) ಮೂಲ ಪಿತೃಗಳ ಕಾಲದಲ್ಲಿ ಇಪ್ಪಾಲಿನ ಬಾಧ್ಯತೆ, ಮನೇ ಯಜಮಾನತನ, ದೇವವಾಗ್ದತ್ತಧಾರಣ, ಗೃಹಯಾಜಕೋದ್ಯೋಗ ಮೊದಲಾದ ಅಧಿಕಾರಗಳನ್ನು ಪಡೆದು ಕೊಂಡವರಾಗಿದ್ದ ಪ್ರಥಮ ಪುತ್ರರು ನೇಮಧರ್ಮ ಕಾಲದಲ್ಲಿಯೂ ಪ್ರಯಾಣ ರಾತ್ರೀಸ್ಮರಣಾರ್ಥವಾದ ಕೃತಜ್ಞತಾಬಲಿಯಾಗಿ ಅರ್ಪಿಸಲ್ಪಟ್ಟು (ದೇವರಿಗೆ ಸ್ವಾಸ್ಥ್ಯ ಜನರಾಗಿ ಒಪ್ಪಿಸಲ್ಪಟ್ಟು) ಶ್ರೇಷ್ಠರಾದರು. ಅಂಕೆ. ೩, ೧೨; ೮, ೧೬—೧೮ರ ಪ್ರಕಾರ ಲೇವಿಯವರು ಉಳಿದ ಅಗ್ರಜರಿಗೆ ಪ್ರತಿನಿಧಿಗಳಾಗಿದ್ದು, ಅವರ ಕೈಯಿಂದ ಪಗದಿ ತಕ್ಕೊಳ್ಳುತ್ತಿದ್ದರು. ಯಾಕಂದರೆ "ಇಗೋ, ನಾನು ಇಸ್ರಯೇಲನ ಮಕ್ಕಳಲ್ಲಿ ಬಸುರೊಡೆದ ಎಲ್ಲಾ ಅಗ್ರಜರಿಗೆ ಬದಲಾಗಿ ಲೇವಿಯರನ್ನು ಇಸ್ರಯೇಲನವರ ಮಕ್ಕಳೊಳಗಿಂದ ತಕ್ಕೊಂಡಿದ್ದೇನೆ. ಲೇವಿಯವರು ನನ್ನವರಾಗಿರ ಬೇಕು.— — ಅವರು ಇಸ್ರಯೇಲನ ಮಕ್ಕಳೊಳಗಿಂದ ನನಗೆ ಕೊಟ್ಟೇ ಕೊಟ್ಟಿರುವವರೇ." ಇದೆಲ್ಲಾದರಲ್ಲಿ ತನ್ನನ್ನು ತಾನೇ ಅರ್ಪಿಸಿದ ಬಲಿಯಿಂದ ಎಲ್ಲರಿಗೆ ಸಂಪೂರ್ಣ ವಿಮೋಚನೆಯನ್ನುಂಟು ಮಾಡಿದ, (ಇಬ್ರಿ. ೧೦, ೫—೧೨.) ಸರ್ವ ಸೃಷ್ಟಿಯ ಚೊಚ್ಚಲವನಿಗೆ (ಕೊಲೊ. ೧, ೧೫.) ಮುಂಗುರ್ತಾದ ಪ್ರತಿಬಿಂಬವು ತೋರುವದು.

ಪ್ರಯಾಣದ ಗತಿ. ಇಸ್ರಯೇಲನವರು ಕೆಂಪು ಸಮುದ್ರವನ್ನು ದಾಟಿ ಹೋದದ್ದು. ಸ. ೧೩, ೧೭—೧೪, ೩೧.

ಸ. ೧೩, ೧೭—೨೨.

ವ. ೧೭. ಫರೋನನು ಪ್ರಜೆಯನ್ನು ಕಳುಹಿಸಿ ಬಿಟ್ಟಾಗ, ದೇವರು ಅವರನ್ನು ಫಿಲಿಷ್ಟರ ದೇಶದ ಹಾದಿಯಲ್ಲಿ ಅದು ಹತ್ತರವಾದದ್ದೆಂತ ನಡಿಸಲಿಲ್ಲ[೧]; ಯಾಕಂ

ದರೆ ಪ್ರಜೆಯು ಕಾಳಗ ಕಂಡರೆ, ಕರಕರೆಯಾಗಿ ಮಿಚ್ರಕ್ಕೆ ತಿರುಗಿ ಕೊಂಡಾರೆಂದು, ದೇ
ವರು ಹೇಳಿದನು. ೧೮. ಅದಾಗಿ ದೇವರು ಪ್ರಜೆಯನ್ನು ಅರಣ್ಯಮಾರ್ಗವಾಗಿ ಆ
ಪಿನ[೨] ಸಮುದ್ರದ ಕಡೆಗೆ ಸುತ್ತು ಹೋಗಿಸಿದನು. ದಳ ಕಟ್ಟಿದವರಾಗಿ[೩], ಇಸ್ರಯೇ
ಲನ ಮಕ್ಕಳು ಮಿಚ್ರ ದೇಶದಿಂದ ಏರಿ ಹೋದರಲ್ಲ? ೧೯. ಮತ್ತು ಮೋಶೆ ಯೋಸೆ
ಫನ ಎಲುಗಳನ್ನು[೪] ಕೊಂಡು ಹೋದನು.— —೨೦. ಸುಕೋಥಿನಿಂದ ಹೊರಟು, ಏ
ಥಾಮಿನಲ್ಲಿ ಅರಣ್ಯದ ಅಂಚಿನಲ್ಲಿ ದಂಡಿಳಿಸಿದರು[೫]. ೨೧. ಅವರು ಹಗಲಿರುಳು
ಹೋಗುವ ಹಾಗೆ, ಯೆಹೋವನು ಹಗಲಲ್ಲಿ ಅವರಿಗೆ ದಾರಿ ತೋರಿಸುವದಕ್ಕೆ ಮೇಘ
ಸ್ತಂಭದಲ್ಲಿ, ಇರುಳಿನಲ್ಲಿ ಅವರಿಗೆ ಬೆಳಗಾಗಿಸುವದಕ್ಕೆ ಅಗ್ನಿಸ್ತಂಭದಲ್ಲಿ ಅವರ ಮುಂದೆ
ಹೋಗುತ್ತಾ ಇದ್ದನು. ೨೨. ಮೇಘಸ್ತಂಭವನ್ನು[೬] ಹಗಲಲ್ಲಿ, ಅಗ್ನಿಸ್ತಂಭವನ್ನು
ಇರುಳಲ್ಲಿ ಪ್ರಜೆಯ ಬಳಿಯಿಂದ ಹಿಂಜಾರಿಸಲಿಲ್ಲ.

೧. ದೇವರು ತನ್ನ ಪ್ರಜೆಯನ್ನು ಕಹಿರಾ ಪಟ್ಟಣದಿಂದ ಗಾಜದ ಮಟ್ಟಿಗೂ, ಸಮುದ್ರದ ತೀರ ಹಿಡಿದು, ವ್ಯಾಪಾರ ಪರಿಶೆಗಳಿಗೆ ವಾಡಿಕೆಯಾದ, ಹತ್ತಿರವಾಗಿರುವ, ನಾಲ್ಕೈದು ದಿನದ ದಾರಿಯಿಂದ ಹೋಗಲೀಸದೆ, ಅರಾಬ್ಯದ ಅರಣ್ಯದ ಮಾರ್ಗವಾಗಿ ನಡಿಸಿದ್ದು ಯಾಕೆ? ಅಂದರೆ, ಅವರು ಕೆಲವು ನೂರು ವರ್ಷದ ಕೈಯಾಳುತನದಲ್ಲಿ ಗಂಡತನ ಮರತು, ಈಚಿಯ ಕಾಲದಲ್ಲಿಯೂ ಅವರು ತೀರಾ ಗೆಲ್ಲಲಾರದೆ ಹೋದಂಥ, ಗುಂಡಿಗೆಯುಳ್ಳ ಬಂಟರಾದಂಥ, ಫಿಲಿಷ್ಟರಿಗೆ ಆಗಲೇ ಸಮಾನರಾಗಿರಲಿಲ್ಲ. ಆದ್ದರಿಂದ ಆ ಶೂರರಾದ ಜನರ ಸಂಗಡ ಯುದ್ಧ ಮಾಡುವದಕ್ಕಿಂತ ಮುಂಚಿತವಾಗಿ, ಹೇಡಿತನ ಬಿಟ್ಟು, ಶೂರರಾಗ ಬೇಕಾಗಿತ್ತು. ಇದಲ್ಲದೆ ಯೆಹೋವನು ಮುಂಚೆ ಮೋಶೆಯನ್ನು ಕರೆದ ಸೀನಯಿ ಪರ್ವತದ ಬಳಿಯಲ್ಲಿ ಇಸ್ರಯೇಲನವರ ಸಂಗಡ ಒಡಂಬಡಿಕೆ ಮಾಡಿ ಕೊಂಡು, ದೇವರ ಜನಾಂಗವೆಂದು, ಅವರನ್ನು ಪ್ರತ್ಯೇಕಿಸಿ, ನೇಮಧಾನದಿಂದ ಅವರಿಗೆ ಪ್ರತಿಷ್ಠೆ ಮಾಡ ಮನಸ್ಸುಳ್ಳವನಾಗಿದ್ದನು. ಆದಾಗ್ಯೂ ಅವರು ಕೆಲವು ವರ್ಷದೊಳಗೆ ವಾಗ್ದತ್ತ ದೇಶದಲ್ಲಿ ಶೇರುವದು ಸಾಧ್ಯವಾಗಿರುತ್ತಿತ್ತು. ಆದರೆ ಅವಿಧೇಯತ್ವ ಅವಿಶ್ವಾಸಿಗಳ ಶಿಕ್ಷೆಗೂ, ಅವಶ್ಯವಾದ ನಾನಾ ವಿಧದ ಗುಣ ಸಾಧನೆಗೂ, ವಾಗ್ದತ್ತದೇಶ ಸ್ವತಂತ್ರಕ್ಕೆ ತಕ್ಕ ಯೋಗ್ಯತೆಯನ್ನು ಪಡೆದು ಕೊಳ್ಳುವದಕ್ಕೂ, ೩೮ ವರ್ಷದ ತಡವು ಅಗತ್ಯವಾಯಿತು.

೨. ಕೆಂಪು ಸಮುದ್ರವು ಈ ಸಮುದ್ರದ ವಾಡಿಕೆಯಾದ ಹೆಸರು. ಅದರಲ್ಲಿ ಒಂದು ತರದ ಆಪು ಹೇರಳವಾಗಿ ಬೆಳೆದದರಿಂದ ಇಸ್ರಯೇಲನವರು ಅದಕ್ಕೆ ಆಪಿನ ಸಮುದ್ರವೆಂಬ ಅರ್ಥವುಳ್ಳ ಯಮ್ ಸೂಫ್ ಎಂದು ಹೆಸರಿಟ್ಟರು.

೩. ಒಂದು ವೇಳೆ ಹಾದಿ ಕಟ್ಟುವ ಎದುರಾಳಿಗಳ ಸಂಗಡ ಕಾಳಗ ಹುಟ್ಟೀತು ಎಂದು, ಜೋಡಣೆ ಮಾಡಿ ಕೊಂಡರು.

೪. ಹಿರಿಯರು ಯೋಸೆಫನಿಗೆ ಆಣೆ ಇಟ್ಟು ಕೊಟ್ಟ ವಾಕ್ಯವನ್ನು ಮೋಶೆ ಆರೋನರು ನೆರವೇರಿಸಿದರು.

೫. ಮಿಚ್ರ ದೇಶದ ಗಡಿಯೂ ಅರಾಬ್ಯದ ಅರಣ್ಯದ ಉತ್ತರಪಶ್ಚಿಮ ಭಾಗವೂ ಕೆಂಪು ಸಮುದ್ರದ ಬಡಗ ಕಡೆಯ ಕೊನೆಯೂ ಕೂಡುವಲ್ಲಿ ಉಳುಕೊಂಡರು.

೬. ಇಸ್ರಯೇಲನವರಿಗೆ ನಾಲ್ವತ್ತು ವರ್ಷದ ಅರಣ್ಯಪಯಣದಲ್ಲಿ ನಾಯಕನಾಗಿದ್ದವನು ಯೆಹೋವನೇ. ದೇವರ ನಾಮವೆಂಬ ದಿವ್ಯ ಮಹಿಮೆಗೆ ಹಗಲಲ್ಲಿ ಮೇಘಮಯವಾಗಿ, ಇರುಳಲ್ಲಿ ಅಗ್ನಿಮಯವಾಗಿ ಕಾಣುವ ಸ್ತಂಭವು ವಾಹನವಾಗಿತ್ತು. ಸಾಕ್ಷಿಗುಡಾರವು ಸ್ವಂತ ಜನಾಂಗದ ನಡುವೆಯಲ್ಲಿ ವಾಸ ಮಾಡುವ ದೇವರ ಮಹಿಮೆಯ ಆಲಯವಾಗಿತ್ತು.

೨೧೨ ಇಸ್ರಯೇಲನವರು ಕೆಂಪು ಸಮುದ್ರವನ್ನು ದಾಟಿ ಹೋದದ್ದು.

ಹೊರಡೋಣ. ೧೪.

ಆದರೆ ದೇವರನ್ನೇ ಕಂಡವನೊಬ್ಬನಾದರೂ ಇಲ್ಲ. ಯೋಹಾ. ೧, ೧೮. ದೇವರ ಸಲಿಗೆಯಲ್ಲಿದ್ದ ಮೋಶೆಯಾದರೂ ಅವನ ಮುಖವನ್ನು ನೋಡಲೇ ಇಲ್ಲ. ಹೊರ. ೩೩, ೧೮—೨೩. ಆದರೂ ಹಗಲಲ್ಲಿ ಬಿಸಿಲನ್ನೂ ಇರುಳಲ್ಲಿ ಕತ್ತಲೆಯನ್ನೂ ನಿವಾರಿಸುವ ಮೇಘಾಗ್ನಿಸ್ತಂಭದಲ್ಲಿರುವ ದಿವ್ಯ ಮಹಿಮೆಯು ದೇವರ ಸಾಮೀಪ್ಯದ ಪ್ರತ್ಯಕ್ಷವಾದ ದೃಷ್ಟಾಂತವಾಗಿತ್ತು.

ಸ. ೧೪.

ವ. ೧—೪. ದೇವರು ವಿಶೇಷವಾಗಿ ಕೊಟ್ಟ ಅಪ್ಪಣೆಯಿಂದ ಇಸ್ರಯೇಲನವರು ರಾಮ್ಸೆಸಿನಿಂದ ಕೆಂಪು ಸಮುದ್ರದ ಪಡುವ ದೆಶೆಯ ಕೈಯ ತುದಿಗೆ ಹೋಗುವ ಹಾದಿ ಬಿಟ್ಟು, ತೆಂಕಣ ಕಡೆಗೆ ತಿರುಗಿ, ಸೂವೆಜಿಗೆ ಕೆಲವು ಹರದಾರಿ ದೂರವಾದಂಥ, ಎಡಗಡೆಯಲ್ಲಿ ಕೆಂಪು ಸಮುದ್ರವು, ಬಲಗಡೆಯಲ್ಲಿ ಎತ್ತರವಾದ ಬೆಟ್ಟದ ಸಾಲು, ಹಿಂದೆಯೂ ಮುಂದೆಯೂ ಕಾಡಾದ ಸಮುದ್ರತೀರಪ್ರದೇಶವು ಇರುವಂಥ ಸ್ಥಳದಲ್ಲಿ ದಂಡಿಳಿಸಿದರು. ಯೆಹೋವನು ಅವರಿಗೂ ಮಿಶ್ರದವರಿಗೂ ಇನ್ನೂ ಅಧಿಕವಾದ ಅದ್ಭುತ ಕಾರ್ಯವನ್ನು ಮಾಡ ಮನಸ್ಸಾಗಿದ್ದನು.

ವ. ೫. ಪ್ರಜೆಯು ಓಡಿ ಹೋಯಿತೆಂದು, ಮಿಶ್ರದ ಅರಸನಿಗೆ ತಿಳಿಯ ಬಂದಾಗ, ಫರೋನನ ಮತ್ತು ಅವನ ಸೇವಕರ ಹೃದಯವು ಪ್ರಜೆಯ ವಿಷಯವಾಗಿ ಮಾರ್ಗೊಂಡಿತು[೧]. ಇದೇನು ಮಾಡಿದೆವು? ನಮ್ಮನ್ನು ಸೇವಿಸೋಣದರಿಂದ ಇಸ್ರಯೇಲನ್ನು ಕಳುಹಿಸಿದೆವಲ್ಲಾ? ಎಂದಂದು ಕೊಂಡು, ೬. ತನ್ನ ರಥವನ್ನು ಕಟ್ಟಿಸಿ, ತನ್ನ ಜನರನ್ನು ತಕ್ಕೊಂಡು, ಶ್ರೇಷ್ಠವಾದ ಆರುನೂರು ರಥಗಳನ್ನೂ ಮಿಶ್ರದ ಎಲ್ಲಾ ರಥಗಳನ್ನೂ ಎಲ್ಲಾದರ ಮೇಲೆ ಯುದ್ಧಸ್ಥರನ್ನೂ[೨] ತಕ್ಕೊಂಡನು.— — ೯. ಮಿಶ್ರದವರು ಅವರನ್ನು ಹಿಂದಟ್ಟಿದರು; ಅವರು ಸಮುದ್ರತೀರದಲ್ಲಿ ದಂಡಿಳಿಸಿದಾಗ, ಫರೋನನ ಎಲ್ಲಾ ಕುದುರೆ ರಥಗಳೂ, ಅವನ ರಥಿಕರೂ, ಅವನ ಬಲವೂ, ಪೀಹಹೀರೋಥಿನ[೩] ಬಳಿಯಲ್ಲಿಯೂ ಬಳ್ಜೆಫೋನದ[೪] ಮುಂದೆಯೂ ಅವರನ್ನು ಕಲತರು. ೧೦. ಫರೋನನು ಹತ್ತರ ಬಂದಾಗ, ಇಸ್ರಯೇಲನ ಮಕ್ಕಳು ಕಣ್ಣೆತ್ತಿದರು. ಅಗೋ, ಮಿಶ್ರದವರು ಅವರ ಹಿಂದೆ ಹೊರಟು ಬರುವವರು. ಆಗ ಇಸ್ರಯೇಲನ ಮಕ್ಕಳು ಬಹಳ ಭಯ ಪಟ್ಟು, ಯೆಹೋವನಿಗೆ ಕೂಗಿ, ೧೧. ಮೋಶೆಗೆ, ಮಿಶ್ರದಲ್ಲಿ ಸಮಾಧಿಗಳಿಲ್ಲದ ಕಾರಣ ಅರಣ್ಯದಲ್ಲಿ ಸಾಯುವ ಹಾಗೆ[೫], ನಮ್ಮನ್ನು ಕರ ಕೊಂಡು ಬಂದಿಯಾ? ಮಿಶ್ರದಿಂದ ನಮ್ಮನ್ನು ಹೊರಬರಿಸಿ, ನಮಗೆ ಮಾಡಿದ್ದೇನು? ೧೨. — — ಅರಣ್ಯದಲ್ಲಿ ಸಾಯುವದಕ್ಕಿಂತ ಮಿಶ್ರದವರನ್ನು ಸೇವಿಸುವದು ನಮಗೆ ಲೇಸು, ಅಂದರು. ೧೩. ಆಗ ಮೋಶೆ ಪ್ರಜೆಗೆ—ಹೆದರ ಬೇಡಿರಿ; ನಿಂತು ಕೊಂಡು, ಯೆಹೋವನು ನಿಮಗೆ ಇಂದು ಮಾಡುವ ರಕ್ಷಣೆಯನ್ನು ನೋಡಿರಿ. ಯಾಕೆಂದರೆ ನೀವು ಇಂದು ನೋಡುವ ಮಿಶ್ರದವರನ್ನು ಇನ್ನೆಂದಿಗೂ ನೋಡದೆ ಇರುವಿರಿ. ೧೪. ಯೆಹೋವನು ನಿಮಗಾಗಿ ಕಾದುವನು; ನೀವಾದರೆ ಸುಮ್ಮನೆ ಇರ್ರಿ[೬], ಅಂದನು. ೧೫. ಆಗ ಯೆಹೋವನು ಮೋಶೆಗೆ

ಹೊರಡೋಣ. ೧೪.

ಹೇಳಿದ್ದೇನಂದರೆ—ಯಾಕೆ ನನಗೆ ಕೂಗುತ್ತೀ೨)? ಇಸ್ರಯೇಲನ ಮಕ್ಕಳಿಗೆ ಅವರು ಹೊರಡ ಬೇಕೆಂದು, ಹೇಳು. ೧೬. ಮತ್ತು ನೀನು ನಿನ್ನ ಕೋಲು ಎತ್ತಿ, ನಿನ್ನ ಕೈ ಸಮುದ್ರದ ಮೇಲೆ ಚಾಚಿ, ಅದನ್ನು ವಿಂಗಡಿಸು. ಆಗ ಇಸ್ರಯೇಲನ ಮಕ್ಕಳು ಸಮುದ್ರದ ನಡುವೆ ಒಣ ನೆಲದಲ್ಲಿ೩) ಬರುವರು. ೧೭. ಇಗೋ, ನಾನು ಮಿಚ್ರದವರ ಹೃದಯವನ್ನು ಕಠಿಣ ಮಾಡುವವನು. ಅವರು ಅವರ ಹಿಂದೆ ಬರುವದರಿಂದ ನಾನು ಫರೋನನಲ್ಲಿಯೂ ಅವನ ಎಲ್ಲಾ ಬಲದಲ್ಲಿಯೂ ಅವನ ರಥಗಳಲ್ಲಿಯೂ ಅವನ ರಥಿಕರಲ್ಲಿಯೂ ನನ್ನನ್ನು ಘನ ಪಡಿಸಿ ಕೊಳ್ಳುವೆನು೪). ೧೮. — — ನಾನು ಯೆಹೋವನೆಂದು ಮಿಚ್ರದವರು ತಿಳುಕೊಳ್ಳುವರು.

೧. ಫರೋನನೂ ಅವನ ಜನರೂ ದೇವರ ಭಯದಿಂದ ಮುಂಚೆ ದಿಗುಲು ಪಟ್ಟು ಒಪ್ಪಿ ಕೊಂಡ ಆ ಲೋಚನೆಯನ್ನು ನಿರ್ಭಯವಾದಾಗ ಬಿಟ್ಟು, ಇಸ್ರಯೇಲನವರನ್ನು ದಂಡಿಸಿ, ತಿರಿಗಿ ಕೈವಶ ಮಾಡಿಕೊಳ್ಳಲೆಸಗಿ, ಇನ್ನೊಮ್ಮೆ ಮಾರ್ಮಲರಾಗಿ, ಮುಂದರಿಕೆಯುಳ್ಳ ದೇವರು ಮುಂಚಿತವಾಗಿ ಅವರಿಗೆ ನೇಮಕ ಮಾಡಿದ ಶಿಕ್ಷೆಗೆ ಒಳಗಾದರು.

೨. ಇಬ್ರಿಯದಲ್ಲಿ "ಎಲ್ಲಾದರ ಮೇಲೆ ಫಾಲಿಫಿಮ್" ಎಂದು ಬರೆದದೆ. ಫಾಲಿಫಿಮ್ ಎಂಬದಕ್ಕೆ ಮೂವರೆಂಬ ಅರ್ಥವದೆ. ಏನಂದರೆ ಸಾರಥಿಯ ಹೊರ್ತಾಗಿ ಯುದ್ಧಸ್ಥರಾದ ಇಬ್ಬರು ಒಂದೊಂದು ರಥದಲ್ಲಿ ನಿಂತು ಕಾದುತ್ತಿದ್ದರು. ಹೀಗಿರಲಾಗಿ ರಥಕ್ಕೆ ಮೂರು ಮಂದಿ ಬಂಟರಿದ್ದರು. ಮಿಚ್ರದ ಯುದ್ಧಸನ್ನದ್ಧ ಜನರು ಕೆಂಪು ಸಮುದ್ರಕ್ಕೆ ಸಮೀಪವಾದ ಅದಕ್ಕೆ ಪಡುವಲ ಕಡೆಯ ಶೀಮೆಯಲ್ಲಿ ವಸ್ತಿಯಾಗಿದ್ದದರಿಂದ, ರಥಸೇನೆಯನ್ನು ಬೇಗ ಕೂಡಿಸಿ ಇಸ್ರಯೇಲನವರ ಮೇಲೆ ಫಕ್ಕನೆ ಬೀಳುವದು ಫರೋನನಿಗೆ ದುರ್ಲಭವಾಗಿದ್ದಿಲ್ಲ. ಇಸ್ರಯೇಲನವರ ಜನಸಮೂಹವು ಅಧಿಕಾಧಿಕವಾಗಿದ್ದರೂ, ಆರು ಲಕ್ಷ ಪ್ರಾಯದವರಾದ ಗಂಡಸರು ಅವರ ದಂಡಿನಲ್ಲಿದ್ದರೂ, ಅವರು ಕಾಳಗ ವಿದ್ಯೆ ಸಾಧನೆಗಳಿಲ್ಲದವರಾದದರಿಂದ, ಯುದ್ಧಕ್ಕೆ ಸಿದ್ಧ ಶೂರರಾದ ಮಿಚ್ರದವರ ರಥಸೇನೆಗೆ ಎದುರು ಬದುರಾಗಿ ನಿಲ್ಲಲಾರದೆ ಇದ್ದರು.

೩. ಪೀಹಹೀರೊಥ್ ಎಂಬ ಶಬ್ದಕ್ಕೆ ಮಿಚ್ರ ಭಾಷೆಯಲ್ಲಿ ಹುಲ್ಲುಗಾವಲೆಂಬ ಅರ್ಥ. ಇಬ್ರಿಯರು ಅದನ್ನು ತಮ್ಮ ನುಡಿಯಲ್ಲಿ ಶೇರಿಸಿ, ಅದಕ್ಕೆ ಗವಿಗಳ ಬಾಯಿ ಎಂಬ ಅಭಿಪ್ರಾಯ ಮಾಡಿದರು.

೪. ಬಾಳ್ಜೆಫೋನ್ ಎಂಬದಕ್ಕೆ ಬಡಗ ದೆಶೆಯ ಒಡೆಯನೆಂಬ ಅರ್ಥ. ಮಿಚ್ರದವರ ದೈವವಾದ ತುಫಾನನ ಹೆಸರು ಇಬ್ರಿಯ ನುಡಿಯಲ್ಲಿ ಈ ಪ್ರಕಾರ ತದ್ಭವವಾಯಿತೆಂದು, ತೋರುತ್ತದೆ. ತುಫಾನನು ಏನಂದರೆ—ನೀಲ್‌ನದಿಯ ನೀರನ್ನಾರಿಸಿ, ಅದರ ಶಕ್ತಿಯಿಂದ ಹುಟ್ಟಿ ಬೆಳದ ಸಸ್ಯಾದಿಗಳನ್ನು ಒಣಗಿಸಿ ಕೆಡಿಸುವಂಥ, ಅರಣ್ಯದ ಕಡೆಯಿಂದ ಬೀಸುವಂಥ, ಉರಿಗಾಳಿಯು. ಹಿಂದು ಜನರು ಅಜ್ಞಾನದಿಂದ ಗಂಗಾನದಿಯನ್ನು ದೇವಿ ಎಂದು ಪೂಜಿಸುವಂತೆ, ಅಜ್ಞಾನಿಗಳಾಗಿದ್ದ ಮಿಚ್ರದವರು ನೀಲ್‌ನದಿ ಒಸೀರಿಸ್ ದೇವರೆಂದೂ, ಆ ನದಿಯ ನೀರು ವರ್ಷಂಪ್ರತಿಯಲ್ಲಿ ತಗ್ಗುವ ಕಾಲದಲ್ಲಿ ಬೀಸುವ ಉರಿಘಾಳಿಗೆ ತುಫಾನ ದೇವರೆಂದೂ ಹೆಸರಿಟ್ಟು, ಪರಸ್ಪರ ವೈರಿಗಳಾದ ಉಭಯ ದೇವತೆಗಳಿಗೆ ಪೂಜೇ ಮಾಡುತ್ತಾ ಬಂದರು. ಮರಳಿನ ಅರಣ್ಯದ ಕಡೆಯಿಂದ ಬೀಸುವ ಉರಿಗಾಳಿಯಾದ ದೈವದ ನಿವಾಸವು ಕೆಂಪು ಸಮುದ್ರದ ಬದಿಯ ಕಾಡಾದ ತೀರಪ್ರದೇಶದಲ್ಲಿ ಅದೆ ಎಂದು, ಮಿಚ್ರದವರು ನಂಬಿದರು.

೫. ಇಸ್ರಯೇಲನವರ ವಿಶ್ವಾಸವು ಆಗ ಎಷ್ಟೋ ಬಲಹೀನವಾದದ್ದು! ಮೊದಲಿನ ಶೋಧನೆ ಬರುತ್ತಲೇ, ಅವರ ಎದೆ ಕದಲುತ್ತದೆ. ಆದಾಗ್ಯೂ ಯೆಹೋವನು ಅವರನ್ನು ಬಹು ತಾಳ್ಮೆಯಿಂದ ಸೈರಿಸುತ್ತಾನೆ.

೨೧೪ ಇಸ್ರಯೇಲನವರು ಕೆಂಪು ಸಮುದ್ರವನ್ನು ದಾಟಿ ಹೋದದ್ದು.

ಹೊರಡೋಣ. ೧೪.

೬. ದೇವರ ಮೇಲೆ ಒಳ್ಳೆ ನಂಬಿಕೆ ಇಟ್ಟು, ನಿಶ್ಚಿಂತರಾಗಿದ್ದು, ಅವನು ಮಾಡುವ ಸಹಾಯವನ್ನು ಎದುರು ನೋಡಿರಿ ಎಂದು, ಮೋಶೆ ಮನಃಪೂರ್ವಕವಾದ ವಿಶ್ವಾಸದಿಂದ ತನ್ನ ಜನಾಂಗಕ್ಕೆ ಧೈರ್ಯವಾಗಿ ಹೇಳುತ್ತಾನೆ.

೭. ಯೆಹೋವನು ವ. ೪ರಲ್ಲಿ ಕೊಟ್ಟ ವಾಕ್ಯವನ್ನು ಮೋಶೆ ನಂಬಿ, ತನ್ನ ಜನಾಂಗಕ್ಕೆ ದೇವರಿಂದ ಸಹಾಯವಾಗುವದೆಂದು, ನಿಸ್ಸಂಶಯವಾಗಿ ವಿಶ್ವಾಸಿಸಿದರೂ, ಹ್ಯಾಗೆ ರಕ್ಷಣೆ ಬರುವದೆಂದು, ತಿಳಿಯದದರಿಂದ ಕಳವಳಗೊಂಡು, ಬಾಯಿ ತೆರೆಯದೆ, ಹೃದಯದಲ್ಲಿ ಮೊರೆ ಇಡುವದನ್ನು ದೇವರು ಅರಿತು, ಮೋಶೆ ಉಚ್ಚರಿಸದೆ ಇದ್ದರೂ, ಯಾಕೆ ಕೂಗುತ್ತಿ ಎಂದು ಹೇಳಿ ಅವನ ಬಿನ್ನಹ ತಿಳಿದು, ಅದಕ್ಕೆ ಪ್ರತ್ಯುತ್ತರ ಕೊಡುತ್ತಾನೆ.

೮. ಇಸ್ರಯೇಲನವರು ಕೆಂಪು ಸಮುದ್ರವನ್ನು ದಾಟಿದ ಸ್ಥಳ ಯಾವದೆಂದು, ನಿಶ್ಚಯವಾಗಿ ಸ್ಥಾಪಿಸಲಾರೆವು. ಆದರೆ ಸರಿಯಾಗಿ ತೋರುವಂಥಾದ್ದೇನಂದರೆ—ಅವರು ಸೂವೆಜಿಗೆ ತೆಂಕಣ ಕಡೆಯ ಕೆಲವು ಹರದಾರಿ ದೂರವಾಗಿರುವ ಅತ್ತಕವೆಂಬ ಹೆಸರುಳ್ಳ ಮಿಚ್ರದ ಬೆಟ್ಟದ ಬಳಿಯಲ್ಲಿ ದಾಟಿ ಹೋದರು. ಅಲ್ಲಿ ಕೆಂಪು ಸಮುದ್ರವು ಸುಮಾರು ಆರು ಹರದಾರಿ ಅಗಲವಾಗಿದೆ. ಇಸ್ರಯೇಲನವರ ದಂಡು ಆಗಿನ ಪ್ರಾಣಸಂಕಟದಲ್ಲಿ ೧೨ ತಾಸಿನೊಳಗೆ ಅಷ್ಟು ದೂರಕ್ಕೆ ನಡೆಯಲಸಾಧ್ಯವೆಂದು, ನೆನಸಲಾಗದು. ಇಸ್ರಯೇಲನವರಿಗೆ ದಾಟುವ ಬಗ್ಯೆ ಒಣನೆಲದ ಹಾದಿ ದೊರಕುವ ಹಾಗೆ, ಮೇಘಸ್ತಂಭದಲ್ಲಿದ್ದ ಅನಿರ್ಮಿತನಾದ ಒಡಂಬಡಿಕೆಯ ದೂತನಾದ ಯೆಹೋವನೇ ಸಮುದ್ರವನ್ನು ವಿಂಗಡಿಸಿದನು. ಇದಕ್ಕಾಗಿ ದೇವರು ಮೂಡಣ ಘಾಳಿಯನ್ನು ಬಲವಾಗಿ ಬೀಸಲೀಸಿದನೆಂದು, ವ. ೨೧ರಲ್ಲಿ ಓದುವವನು ದೇವರಲ್ಲ, ಮೂಡಣ ಘಾಳಿಯೇ ಸಮುದ್ರದ ನೀರನ್ನು ವಿಭಾಗಿಸಿತೆಂದು, ನೆನಸಿದರೆ, ಅವನು ಕರಣಕ್ಕೂ ಕರ್ತನಿಗೂ ಇರುವ ಭೇದ ತಿಳಿಯದೆ ಇರುವ ತಪ್ಪಿಗೆ ಒಳಗಾಗುವನು.

೯. ಅನ್ಯ ಜನರು ಸಹ ಫರೋನನ ದಂಡಿಗೆ ಆದ್ದನ್ನು ನೋಡಿ ಸತ್ಯ ದೇವರಾದ ತನ್ನನ್ನು ತಿಳುಕೊಳ್ಳುವ ಹಾಗೆ ಯೆಹೋವನು ಅವರಿಗೂ ತನ್ನ ಮಹಿಮೆಯನ್ನು ಪ್ರಕಟ ಮಾಡುತ್ತಾನೆ.

ವ. ೧೯. ಆಗ ಇಸ್ರಯೇಲನವರ ದಂಡಿನ ಮುಂದೆ ಹೋಗುವ ದೇವರ ದೂತ
ನು ಹೊರಟು, ಅವರ ಹಿಂದಕ್ಕೆ ಹೋದನು. ಮೇಘಸ್ತಂಭವು ಅವರ ಮುಂದಿನಿಂದ
ಹೊರಟು, ಅವರ ಹಿಂದೆ ನಿಂತು, ೨೦. ಮಿಚ್ರದವರ ದಂಡಿಗೂ ಇಸ್ರಯೇಲನ ದಂಡಿ
ಗೂ ನಡುವೆ ಬಂತು; ಅದು ಮೇಘವೂ ಕತ್ತಲೂ ಆಗಿದ್ದು, ರಾತ್ರಿಯನ್ನು ಬೆಳಗಿಸಲು,
ಇವರು ಅವರಿಗೆ ಇರುಳೆಲ್ಲಾ ಹತ್ತರ ಬರಲಿಲ್ಲ೧). ೨೧. ಮೋಶೆ ತನ್ನ ಕೈಯ ಸಮು
ದ್ರದ ಮೇಲೆ ಚಾಚಲು, ಯೆಹೋವನು ಸಮುದ್ರವನ್ನು ಇರುಳಲ್ಲೆಲ್ಲಾ ಬಲವಾದ
ಮೂಡಣ ಘಾಳಿಯಿಂದ ಹೋಗಲಾಡಿಸಿ ಸಮುದ್ರವನ್ನು ಒಣನೆಲವಾಗಿಸಲು, ನೀ
ರು ವಿಂಗಡವಾಯಿತು. ೨೨. ಇಸ್ರಯೇಲನ ಮಕ್ಕಳು ಸಮುದ್ರದ ನಡುವೆಯ ಆ
ರಿದ ನೆಲದಲ್ಲಿ ಬಂದರು. ಅವರ ಎಡ ಬಲದಲ್ಲಿ ನೀರು ಅವರಿಗೆ ಗೋಡೆಯಾಗಿತ್ತು.
೨೩. ಆಗ ಮಿಚ್ರದವರು ಹಿಂದಟ್ಟಿದರು. ಫರೋನನ ಎಲ್ಲಾ ಕುದುರೆಯೂ ಅವನ
ರಥಗಳೂ ರಥಿಕರೂ ಅವರ ಹಿಂದೆ ಸಮುದ್ರದ ನಡುವಿಗೆ ಬಂದರು. ೨೪. ಮತ್ತು
ಹೊತ್ತಾರೆಯ ಝಾವಿನಲ್ಲಿ ಆದದ್ದೇನಂದರೆ: ಯೆಹೋವನು ಮೇಘಾಗ್ನಿಸ್ತಂಭದೊಳ
ಗಿಂದ ಮಿಚ್ರದವರ ದಂಡಿಗೆ ದೃಷ್ಟಿ ಇಟ್ಟು, ಮಿಚ್ರದವರ ದಂಡು ಕದಲಿಸಿ, ೨೫. ಅವರ

ರಥಗಳ ಗಾಲಿಗಳನ್ನು ಹಾರಿಸಿದರಿಂದ, ಅವು ಕಷ್ಟದಿಂದ ಎಳಿಸಿ ಕೊಂಡವು೨). ಆ
ಗ ಮಿಚ್ರದವರು “ಇಸ್ರಯೇಲನವರ ಎದುರಿನಿಂದ ಓಡಿ ಹೋಗೋಣ, ಯಾಕೆಂದರೆ
ಯೆಹೋವನು ಅವರಿಗಾಗಿ ಮಿಚ್ರದವರಿಗೆ ಕಾದುತ್ತಾನೆ,” ಅಂದರು. ೨೬. ಆಗ
ಯೆಹೋವನು ಮೋಶೆಗೆ, “ನಿನ್ನ ಕೈಯನ್ನು ಸಮುದ್ರದ ಮೇಲೆ ಚಾಚು,” — — ಅಂ
ದನು. ೨೭. ಮೋಶೆ ತನ್ನ ಕೈ — — ಚಾಚಲಾಗಿ, ಸಮುದ್ರವು ಹರೇಹೊತ್ತಾರೆ
ಯಥಾರೀತಿಯಿಂದ ತಿರಿಗಿ ಬರಲು೩), ಮಿಚ್ರದವರು ಅವರೆದುರಿಗೆ ಓಡಿ ಹೋದಾಗ,೪)
ಯೆಹೋವನು ಮಿಚ್ರದವರನ್ನು ಸಮುದ್ರದ ನಡುವಿನಲ್ಲಿ ಬಡದು ಬಿಟ್ಟನು. ೨೮. ನೀ
ರು ತಿರಿಗಿ ಬಂದು, ಅವರ ಹಿಂದೆ ಸಮುದ್ರದಲ್ಲಿ ಬಂದಂಥ ರಥಗಳನ್ನೂ ರಥಿಕರನ್ನೂ ಫ
ರೋನನ ಸಮಸ್ತ ಸೇನೆಯ ಮಟ್ಟಿಗೂ ಕವಿಯಿತು. ಅವರಲ್ಲಿ ಒಬ್ಬನಾದರೂ ಉಳಿ
ಯಲಿಲ್ಲ. — — ೩೦. ಅಂದಿನಲ್ಲಿ ಯೆಹೋವನು ಇಸ್ರಯೇಲನವರನ್ನು ಮಿಚ್ರದವರ
ಕೈಯೊಳಗಿಂದ ರಕ್ಷಿಸಲಾಗಿ೫), ಇಸ್ರಯೇಲನವರು ಸಮುದ್ರತೀರದಲ್ಲಿ ಸತ್ತವರಾದ
ಮಿಚ್ರದವರನ್ನು ನೋಡಿದರು. ೩೧. ಯೆಹೋವನು ಮಿಚ್ರದವರಲ್ಲಿ ಮಾಡಿದ ಆ
ದೊಡ್ಡ ಕೈಯನ್ನು ಇಸ್ರಯೇಲನವರು ನೋಡಿದಾಗ, ಪ್ರಜೆಯು ಯೆಹೋವನಿಗೆ ಭ
ಯ ಪಟ್ಟು, ಯೆಹೋವನಲ್ಲಿಯೂ ಅವನ ಸೇವಕನಾದ ಮೋಶೆಯಲ್ಲಿಯೂ ನಂಬಿಕೆ
ಇಟ್ಟರು೬).

೧. ನಡೆದ ಕಾರ್ಯವೇನಂದರೆ: ಎರಡು ದಂಡಿನ ನಡುವಿನಲ್ಲಿ ಶೇರಿದ ಮುಗಿಲು ಇಸ್ರಯೇಲನವರ ಕಡೆಯಲ್ಲಿ ಪ್ರಕಾಶಮಯವಾಗಿ, ಮಿಚ್ರದವರ ಕಡೆಯಲ್ಲಿ ಕಾರ್ಗತ್ತಲಾಗಿ ಇದ್ದದರಿಂದ, ಅವರಿಗೆ ರಾತ್ರಿಯು ಹಗಲಾಯಿತು, ಇವರನ್ನು ಕರಾಡವಾದ ಅಂಧಕಾರವು ಸುತ್ತಿತು. ಹೀಗಿರಲಾಗಿ, ಮೋಶೆ ಚಾಚಿದ ಕೋಲಿನಿಂದ ವಿಂಗಡವಾದ ಸಮುದ್ರವನ್ನು ದಾಟುವ ಇಸ್ರಯೇಲನವರಿಗೆ ಹಾದಿ ತೀರ ಬೆಳ್ಳಕಾಗಿ ಕಾಣಿಸಿ ಕೊಳ್ಳುವ ವೇಳೆಯಲ್ಲಿ, ಗಾಢಾಂಧಕಾರವು ಕವಿದ ಫರೋನನ ದಂಡು ಅವರನ್ನು ಹಿಂದಟ್ಟಿ ಮುಟ್ಟಲಾರದೆ ಇತ್ತು.

೨. ಇಸ್ರಯೇಲನವರ ದಂಡು, ಹೆಂಡರು ಮಕ್ಕಳು ದನ ಕರು ಮುಂತಾದದ್ದೆಲ್ಲಾದರ ಕೂಡಾ ಹೊರಟು ಹೋಗುವಾಗ, ಮಿಚ್ರದವರು ನಡೆದಾಡುವ ಜನಸಮೂಹದ ಶಬ್ದವನ್ನು ಕೇಳಿ, ಅದರ ಹಿಂದೆ ಆಗುವಷ್ಟು ಹತ್ತರ ಬಂದು, ಅದು ಮುಂದಾಗಿ ನಡೆದ ಮಾರ್ಗವನ್ನು ಹಿಡಿದು, ಸುತ್ತಲೆಲ್ಲಾ ಕತ್ತಲಾಗಿದ್ದರೂ, ಹಿಂದಿರುಗದೆ, ಮುಂದೆ ಹೋಗುತ್ತಾ ಇದ್ದು, ತಾವು ಸಮುದ್ರದ ನಡುವಿಗೆ ಬಂದಾಗ, ದೇವರು ಅವರನ್ನು ಕಿಡಿಯಾಗಿ ನೋಡಿದನು. ಆಗ್ಯೆ ಮಿಚ್ರದವರು ದಿಗಲು ಪಟ್ಟರು. ಮತ್ತು ಯೆಹೋವನು ಅವರ ರಥಗಳನ್ನು ಕೆಡವಿ ಹಾಕಿ, ಅವರ ದಂಡನ್ನು ಗಲಿಬಿಲಿ ಮಾಡಿ, ತಾನು ತನ್ನ ಜನಾಂಗದ ರಕ್ಷಕನೂ ಅದರ ವೈರಿಗಳ ವೈರಿಯೂ ಆಗಿರುವದನ್ನು ಪ್ರಕಟ ಮಾಡಿ, ಮಿಚ್ರದವರ ಬಲವನ್ನೆಲ್ಲಾ ಒಮ್ಮೆಯೆ ಮಡಿಸಿದನು.

೩. ಇಸ್ರಯೇಲನವರು ಕೆಂಪು ಸಮುದ್ರದ ಆಚೇ ಮೂಡಣ ತೀರವ ಹತ್ತಿದಾಗ, ಮಿಚ್ರದವರ ದಂಡು ಸಮುದ್ರದ ಮಧ್ಯದಲ್ಲಿ ಶಿಕ್ಕಿ ದಿಕ್ಕು ಕಾಣದೆ ಹೋಯಿತು.

೪. ಬಲವಾದ ಮೂಡಣ ಘಾಳಿ ಇಳಿಯಲಾರಂಭಿಸಿದಾಗ, ಸಮುದ್ರದ ನೀರು ಮೊದಲು ಮಿಚ್ರದೇಶದ ಕಡೆಯಲ್ಲಿ ಕೂಡಿ ಕೊಂಡು ತುಂಬಿದರಿಂದ, ಫರೋನನ ದಂಡು ಹಿಂದಿರುಗಿದ ಮೇಲೆ ಪಡುವಲ ದೆಶೆಯಿಂದ ಉಕ್ಕುವ ಸಮುದ್ರದ ಸೆಳೆಯು ಅವರೆದುರಿಗೆ ಭರ್ತಿಯೋಪಾದಿಯಾಗಿ ಹರಿದು ಬಡಿಯಿತು.

ಮೋಶೆಯೂ ಮಿರ್ಯಾಮಳೂ ಹಾಡಿದ ಜಯಗೀತವು.

ಹೊರಡೋಣ. ೧೫, ೧—೨೧.

೫. ಇಸ್ರಾಯೇಲನವರ ರಕ್ಷಣೆಯು ಯೆಹೋವನು ಮಾಡಿದ ಮಹಾ ಅದ್ಭುತ ಕಾರ್ಯವೆಂದು, ಮೋಶೆಯೂ ಇಸ್ರಾಯೇಲನವರೂ ತಿಳುಕೊಂಡರೆಂಬದಕ್ಕೆ ಏನೂ ಸಂಶಯವಿಲ್ಲ. ಈ ಸಂಧಿಯ ಚರಿತ್ರವೂ ಮುಂದಿನ ಸಂಧಿಯ ಜಯಗೀತವೂ ಅದಕ್ಕೆ ದೃಢವಾದ ದೃಷ್ಟಾಂತವಾಗಿವೆ. ಅವಿಶ್ವಾಸಿಗಳಾದ ಪಂಡಿತರಲ್ಲಿ ಕೆಲವರು, ಫರೋನನು ದಂಡಿನ ಸಹಿತವಾಗಿ ಅಕಸ್ಮಾತ್ತಾಗಿ ಬಂದ ಭರ್ತಿಯಿಂದ ಮುಣುಗಿ ಮಡಿದು ಹೋದನೆಂದು ಹೇಳುವದರಲ್ಲಿ ಹುರುಳಿಲ್ಲ. ಯಾಕೆಂದರೆ ತಮ್ಮ ಸೀಮೆಗೆ ತಗಲುವ ಸಮುದ್ರದ ಭರ್ತಿಇಳಿತಗಳ ಗಣನೆಯೂ ಸಮುದ್ರದ ಅಗಲದ ಅಳತೆಯೂ ಮಿಶ್ರದ ಸೇನಾಧಿಪತಿಗಳಿಗೆ ಚನ್ನಾಗಿ ಗೊತ್ತಾಗಿರಲಾಗಿ, ಅವರು ಭರ್ತಿ ಬರುವ ತಾಸು ಮರತು ಇಸ್ರಾಯೇಲನವರನ್ನು ಹಿಡಿದು ಕೊಳ್ಳ ಬೇಕೆಂಬ ಆಶೆಯಿಂದ ಮರುಳರಾಗಿ, ತಮ್ಮ ಸೇನೆಯನ್ನೂ ಪ್ರಾಣವನ್ನೂ ವ್ಯರ್ಥವಾಗಿ ನಾಶ ಮಾಡಿ ಕೊಂಡರೆಂದು, ನೆನಸುವದು ಹ್ಯಾಗೆ?

೬. ತನ್ನ ಜನಾಂಗವು ತನ್ನ ಮಹಿಮೆಗೆ ಭಯಪಟ್ಟು, ತಾನು ಆದು ಕೊಂಡ ನಾಯಕನಾದ ಮೋಶೆಯನ್ನೂ ಅವನ ಯಜಮಾನನಾದ ತನ್ನನ್ನೂ, ಪೂರ್ಣ ಹೃದಯದಿಂದ ನಂಬ ಬೇಕೆಂಬದು ದೇವರು ಮಾಡಿದ ಈ ಮಹಾ ಅದ್ಭುತ ಕಾರ್ಯದ ಮುಖ್ಯೋದ್ದೇಶವಾಗಿತ್ತು.

ಮೋಶೆಯೂ ಮಿರ್ಯಾಮಳೂ ದೇವರಿಗೆ ಹಾಡಿದ ಜಯಗೀತವು. ಸ. ೧೫, ೧—೨೧.

ವ. ೧. ಆಗ ಮೋಶೆಯೂ ಇಸ್ರಾಯೇಲನ ಮಕ್ಕಳೂ ಯೆಹೋವನಿಗೆ ಈ ಹಾಡು
ಹಾಡಿ ಹೇಳಿದ್ದೇನಂದರೆ: ಯೆಹೋವನಿಗೆ ಹಾಡುವೆನು, ಯಾಕಂದರೆ ಹೆಚ್ಚಿಸೇ ಹೆಚ್ಚಿಸಿ
ಕೊಂಡಿದ್ದಾನೆ. ಕುದುರೆಯನ್ನೂ ಅದರ ರಾಹುತನನ್ನೂ ಕಡಲಲ್ಲಿ ದೊಬ್ಬಿದ್ದಾನೆ.
೨. ನನ್ನ ಬಲವೂ ಕೀರ್ತನೆಯೂ ಯೆಹೋವನೇ. ಅವನು ನನಗೆ ರಕ್ಷಣೆಗಾದನು.
ಅವನೇ ನನ್ನ ದೇವರು. ಅವನನ್ನು ಕೊಂಡಾಡುವೆನು. ಅವನು ನನ್ನ ತಂದೆಯ ದೇವ
ರು. ಅವನ ಮೇಲು ಒರೆಯುವೆನು. ೩. ಯೆಹೋವನು ಕಾದಾಳು. ಅವನ ಹೆಸರು
ಯೆಹೋವನೇ.— —. ೬. ನಿನ್ನ ಬಲಗೈ, ಯೆಹೋವನೇ, ಶಕ್ತಿಯಲ್ಲಿ ಘನವುಳ್ಳದ್ದು. ನಿ
ನ್ನ ಬಲಗೈ, ಯೆಹೋವನೇ, ಎದುರಾಳಿಯನ್ನು ಒಡೆದು ಬಿಟ್ಟಿತು.— —. ೧೧. ನಿನ್ನ
ಹಾಗೆ ದೇವರುಗಳಲ್ಲಿ ಯಾರು, ಯೆಹೋವನೇ? ನಿನ್ನ ಹಾಗೆ ಪವಿತ್ರತೆಯಲ್ಲಿ ಘನವು
ಳ್ಳವನೂ, ಕೀರ್ತನೆಗಳಲ್ಲಿ ಭಯಂಕರನೂ ಅದ್ಭುತ ಮಾಡುವವನೂ ಯಾರು?— —.
೧೩. ನೀನು ವಿಮೋಚಿಸಿದ ಪ್ರಜೆಯನ್ನು ನಿನ್ನ ಕೃಪೆಯಿಂದ ನಡಿಸಿ, ನಿನ್ನ ಬಲದಿಂದ ನಿ
ನ್ನ ಪರಿಶುದ್ಧ ಆಲಯಕ್ಕೆ ವೈದಿ.— —, ೧೭. ಯೆಹೋವನಾದ ನೀನು ನಿನ್ನ ವಾಸಕ್ಕಾ
ಗಿ ಗೆಯಿದ ಸ್ಥಾನವೂ, ಕರ್ತನೇ, ನಿನ್ನ ಕೈಗಳು ನಿರ್ಮಿಸಿದ ಪವಿತ್ರ ನಿಲಯವೂ ಆದ
ನಿನ್ನ ಸ್ವಾಸ್ಥ್ಯಗಿರಿಯಲ್ಲಿ ಅವರನ್ನು ಬರಲೀಸಿ ಅವರನ್ನು ನೆಡುವಿ. ೧೮. ಯೆಹೋವ
ನು ಯುಗ ಯುಗಾಂತರಗಳಿಗೂ ರಾಜ್ಯವಾಳುವನು.— —. ೨೧. ಆಗ (ಆರೋನನ

ಹೊರಡೋಣ. ೧೫, ೧—೨೧.

ಅಕ್ಕನೂ ಪ್ರವಾದಿನಿಯೂ ಆದ) ಮಿರ್ಯಾಮಳು ಅವರಿಗೆ ಪ್ರತಿಗಾನ ಮಾಡಿದ್ದೇನಂದರೆ: ಯೆಹೋವನಿಗೆ ಹಾಡಿರಿ, ಯಾಕಂದರೆ ಹೆಚ್ಚಿಸೇ ಹೆಚ್ಚಿಸಿ ಕೊಂಡಿದ್ದಾನೆ; ಕುದುರೆಯನ್ನೂ ಅದರ ರಾಹುತನನ್ನೂ ಕಡಲಲ್ಲಿ ದೊಬ್ಬಿದ್ದಾನೆ.

ಸಾರಾಂಶವಾಗಿಯೇ ಇಲ್ಲಿ ಬರೆದಿರುವಂಥ ಕೃತಜ್ಞತಾವಿಶ್ವಾಸದ ಈ ಮಹಿಮೆಯುಳ್ಳ ಮನೋಹರ ಜಯಗೀತವನ್ನು ದೇವರ ಜನಾಂಗವು ಕೆಂಪು ಸಮುದ್ರವನ್ನು ಹಾದು, ಚೋದ್ಯವಾದ ರಕ್ಷಣೆಯನ್ನು ಹೊಂದಿ, ಹಿಂದಟ್ಟಿದ ಶತ್ರುಗಳ ಸೈನ್ಯವೆಲ್ಲಾ ಮುಣುಗಿ ಹೋದದ್ದನ್ನು ಕಂಡ ದಿನದಲ್ಲಿ, ತಮ್ಮ ಕರ್ತನೂ ರಕ್ಷಕನೂ ಅರಸನೂ ಆದ ಯೆಹೋವನ ಸ್ತೋತ್ರಕ್ಕೆ ಹಾಡಿತು. ವೈರಿಗಳ ಬಲವನ್ನು ಮುಣುಗಿಸಿದ ಸಮುದ್ರದ ತೀರದಲ್ಲಿ ಸುರಕ್ಷಿತರಾದ ಇಸ್ರಯೇಲನವರು ನಿಂತು, ದೇವರ ಸಾಮೀಪ್ಯದ ಗುರ್ತೂ ಸಾಕ್ಷಿಯೂ ಆಗಿರುವ ಮಹಿಮಾಮೇಘವು ದಂಡಿನ ಮೇಲೆ ಹರಡಿರಲಾಗಿ, ಕೃತಜ್ಞತಾಪೂರಿತ ಹೃದಯದಿಂದ ಈ ಸ್ತೋತ್ರಬಲಿಯನ್ನರ್ಪಿಸಿದರು. ಒಂದು ಕಡೆಯಲ್ಲಿ ಮೋಶೆ ಮುಂತಾದ ಗಂಡಸರೂ, ಮತ್ತೊಂದು ಕಡೆಯಲ್ಲಿ ಮಿರ್ಯಾಮಳು ಮುಂತಾದ ಹೆಂಗಸರೂ, ಜೋಡು ಮೇಳಾಗಿದ್ದು, ಅತ್ಯುತ್ತಮವಾದ ಈ ಜಯಗಾನವನ್ನು ನುಡಿದರೆಂದು, ತೋರುತ್ತದೆ. ಇಸ್ರಯೇಲನವರು ಈ ಕೀರ್ತನೆಯನ್ನು ಪೂರ್ವ ಮಹಾ ರಕ್ಷಣೆಯ ಸ್ಮರಣಾರ್ಥಕ್ಕಾಗಿ ತಲತಲಾಂತರಗಳಲ್ಲಿ ಅನುದಿನದ ಉದಯ ಬಲಿಯರ್ಪಣೆಯ ವೇಳೆಯಲ್ಲಿ ಹಾಡುತ್ತಾ ಬಂದರು. ಹೀಗಿರಲಾಗಿ ಅದು ಆಶ್ಚರ್ಯವಾದ ರಕ್ಷಣೆಯ ಚರಿತ್ರಕ್ಕೆ ಯಾರೂ ನಿರಾಕರಿಸಲಾರದ ದೃಷ್ಟಾಂತವಾಗಿದೆ. ಇದಲ್ಲದೆ ಅದು ಪರಿಶುದ್ಧ ಕವಿತ್ವದ ಉತ್ತಮ ಮಾದರಿಯಾಗಿರುವದು. ಮೋಶೆಯ ಹಾಡು ಎಂದನ್ನಿಸಿ ಕೊಳ್ಳುವ ಈ ಕೀರ್ತನೆಯು ದೇವವಾಕ್ಯಗ್ರಂಥದಲ್ಲಿ ದೇವರಿಗೆ ರಾಜನೆಂಬ ಹೆಸರು ಮೊದಲಾಗಿ ಬರುವಂಥ ಸ್ಥಳವಾಗಿದೆ. ಯಾಕಂದರೆ ಇಸ್ರಯೇಲನವರ ಮೂಲಪಿತೃಗಳು, ಯೆಹೋವನೆಂಬ ಸರ್ವಲೋಕಕರ್ತನಾದ ದೇವರು ತಮ್ಮ ಒಡೆಯನೂ ಕುರುಬನೂ ಆಗಿದ್ದಾನೆಂದು, ತಿಳುಕೊಂಡರು. ಅವರ ವಂಶದವರು ಈಗ ದೇವಜನಾಂಗ ಪ್ರತಿಷ್ಠೆಯನ್ನು ಹೊಂದಿದವರಾಗಿದ್ದು, ಅವನನ್ನು ತಮ್ಮ ರಾಜನೆಂದು, ಕೊಂಡಾಡಿದ್ದು ಯುಕ್ತವಾಗಿದೆ. ದೇವಜನಾಂಗ ಜನ್ಮಗಾನವಾದ ಈ ಕೃತಜ್ಞತಾನಿರೀಕ್ಷಣಾಗೀತದ ಸ್ಮರಣೆಯು ಕೀರ್ತನೆಗಳಲ್ಲಿಯೂ ಪ್ರವಾದಿಗಳ ಗ್ರಂಥಗಳಲ್ಲಿಯೂ ಪದೆಪದೆಯಾಗಿ ಸೂಚಿತವಾಗಿದೆ. ಸಮ ನೋಡು ಕೀರ್ತ. ೬೬, ೬; ೭೪, ೧೩; ೭೬, ೬. ೭; ೭೭, ೧೫—೨೧; ೭೮, ೧೩. ೧೪; ೧೦೬, ೯—೧೨; ೧೧೪, ೧—೩; ೧೩೬, ೧೧. ೧೩—೧೫. ಯೆಶಾ. ೧೦, ೨೬; ೧೧, ೧೫. ೧೬; ೪೩, ೧೬. ೧೭; ೪೪, ೨೭; ೫೦, ೨; ೫೧, ೧೦; ೬೪, ೯. ೧೧. ನಹೂ. ೧, ೪.

ಸೀನಯಿ ಪರ್ವತದ ಪರ್ಯಂತರ ಹೋದ ಪಯಣ. ಸ. ೧೫, ೨೨—೧೯, ೧.

ಮೋಶೆ ಕಹಿನೀರು ಶೀಯಾಗ ಮಾಡಿದ್ದು. ಸ. ೧೫, ೨೨—೨೬.

ವ. ೨೨. ಆಗ ಮೋಶೆ ಇಸ್ರಯೇಲನ್ನು ಆಪಿನ ಸಮುದ್ರದ ಕಡೆಯಿಂದ೧) ಏಳಲೀಸಲಾಗಿ, ಅವರು ಶೂರಿನ ಅರಣ್ಯದ೨) ಕಡೆಗೆ ಹೊರಟು, ಮೂರು ದಿವಸ ಅರಣ್ಯದಲ್ಲಿ ನಡೆದು, ನೀರು ಕಾಣದೆ ಹೋದರು೩). ೨೩. ಮತ್ತು ಮಾರಾ೪) ಎಂಬಲ್ಲಿಗೆ ಬಂದು ಮಾರಾವಿನ ನೀರು ಕುಡಿಯಲಾರದಿದ್ದರು. ಯಾಕಂದರೆ ಅದು ಕಹಿ೫). ಆದ್ದರಿಂದ ಅದಕ್ಕೆ ಕಹಿ ಎಂಬರ್ಥವುಳ್ಳ ಮಾರಾ ಎಂಬ ಹೆಸರಿಟ್ಟನು. ೨೪. ಆಗ ಪ್ರಜೆಯು ಏ

ಹೊರಡೋಣ. ೧೫, ೨೨—೨೬.

ನು ಕುಡಿಯುವಾ ಎಂದು, ಮೋಶೆಗೆ ವಿರೋಧವಾಗಿ ಗುಣುಗುಟ್ಟಲಾಗಿ, ೨೫. ಅ
ವನು ಯೆಹೋವನಿಗೆ ಕೂಗಲು, ಯೆಹೋವನು ಅವನಿಗೆ ಮರವನ್ನು ತೋರಿಸಿದನು.
ಅದನ್ನು ಅವನು ನೀರಿನಲ್ಲಿ ಹಾಕಿದಾಗ, ನೀರು ಶೀಯಾಯಿತು[೬]. ಅಲ್ಲಿ ಅವರಿಗೆ ನೇ
ಮವನ್ನೂ ನ್ಯಾಯವನ್ನೂ[೭] ಸ್ಥಾಪಿಸಿ, ಅಲ್ಲಿಯೂ ಅವರನ್ನು ಶೋಧಿಸಿ, ೨೬. ಹೇ
ಳಿದ್ದೇನಂದರೆ—ನಿನ್ನ ದೇವರಾದ ಯೆಹೋವನ ಶಬ್ದವನ್ನು ಕೇಳೇ ಕೇಳಿ, ಅವನ ದೃಷ್ಟಿ
ಯಲ್ಲಿ ಸರಿಯಾದದ್ದನ್ನು ಮಾಡಿ, ಅವನ ಅಪ್ಪಣೆಗಳಿಗೆ ಕಿವಿಗೊಟ್ಟು, ಅವನ ನೇಮ
ಗಳನ್ನೆಲ್ಲಾ ಕೈಕೊಂಡರೆ, ಮಿಚ್ರದ ಮೇಲೆ ನಾನಿಟ್ಟ[೮] ವ್ಯಾಧಿಗಳನ್ನೆಲ್ಲಾ ನಿನ್ನ ಮೇಲೆ
ಇಡೆನು; ಯಾಕಂದರೆ ನಾನೇ ನಿನ್ನನ್ನು ವಾಶಿ ಮಾಡುವ ಯೆಹೋವನು[೯].

೧. ಇಸ್ರಯೇಲನವರು ಕಲ್ಲಿನ ಅರಬಿಸ್ಥಾನದಲ್ಲಿ ಮಾಡಿದ ಬಹು ಕಾಲದ ಸಂಚಾರ ಹೀಗೆ ತೊಡಗಿತು. ಈ ದೇಶಕ್ಕೆ ಮಧ್ಯ ಸಮುದ್ರವೂ ಪಲೆಸ್ತೀನದ ದಕ್ಷಿಣ ಗಡಿಯೂ ಉತ್ತರ ಪ್ರಾಂತ್ಯವಾಗಿವೆ. ಅದರ ದಕ್ಷಿಣ ಭಾಗವು ಸೀನಯಿ ಬೆಟ್ಟದ ಅರ್ಧದ್ವೀಪವೆನ್ನಿಸಿ ಕೊಳ್ಳುವದು. ಕೆಂಪು ಸಮುದ್ರದ ಉತ್ತರ ಭಾಗಗಳಾದ ಅಕಬ ಎಂಬ ಏಲಾನಿಕ ಸಮುದ್ರವೂ ಸೂವೆಜಿನ ಸಮುದ್ರವೂ ಅದನ್ನು ಎರಡು ಕಡೆಯಿಂದ ಮುತ್ತುತ್ತವೆ.

೨. ಅರಣ್ಯಸಂಚಾರವು ತೊಡಗುವಾಗ, ಇಸ್ರಯೇಲನವರಿಗೆ ಬಂದ ಶೋಧನೆಯಲ್ಲಿ ಅವರು ಸೋತು ಹೋದರು. ಪರೀಕ್ಷೆಯಿಂದಲೂ ಶುದ್ಧಿಸಾಧನೆಯಿಂದಲೂ ಸಿದ್ಧಿ ಪಡಕೊಂಡವರಾಗಿದ್ದರೆ, ಅರಣ್ಯಸಂಚಾರವು ಕೆಲವು ವರ್ಷದೊಳಗೆ ಮುಗಿಯಲಾಗುತ್ತಿತ್ತು. ಆದರೆ ಅವರ ಅವಿಧೇಯವಾದ ಹೃದಯದ ಹಟದ ಶಿಕ್ಷೆಗಾಗಿ ಅದು ಮೂವತ್ತೆಂಟು ವರ್ಷದ ಮಟ್ಟಿಗೂ ತೀರದೆ ಹೋಯಿತು.

೩. ಅರಣ್ಯದ ಪಡುವ ದೆಶೆಯಲ್ಲಿದ್ದ ಸೂರ್ ಇಲ್ಲವೆ ಶೂರ್ ಎಂಬ ಪಟ್ಟಣದ ಹೆಸರು ಇಡೀ ಅರಣ್ಯಕ್ಕೆ ಹತ್ತಿತು. ಅದು ಸೂವೆಜಿನ ಮೂಡಣ ದಿಕ್ಕಿನಲ್ಲಿತ್ತು. ಇಸ್ರಯೇಲನವರು ಇಲ್ಲಿಂದ ಹೊರಟು, ಸೀನಯಿ ಬೆಟ್ಟಕ್ಕೆ ಹೋಗುವ ದಕ್ಷಿಣ ದಿಕ್ಕಿನ ಮಾರ್ಗವನ್ನು ಹಿಡಿದರು.

೪. ಕೆಂಪು ಸಮುದ್ರಕ್ಕೆ ೧೫-೧೬ ಹರದಾರಿ ದೂರವಾದ ಮಾರಾ ಎಂಬ ಸ್ಥಳಕ್ಕೆ ಈಗ ಹೊವಾರ ಎಂದು ಹೆಸರದೆ. ಸಂಚಾರದ ಆರಂಭದಲ್ಲಿ ಇಸ್ರಯೇಲನವರು ದಿನದಿನಕ್ಕೆ ಕೊಂಚ ದೂರಕ್ಕೆ ನಡೆದು ಇಳಕೊಳ್ಳುತ್ತಿದ್ದರು. ಅವರ ಉಳುಗಡೆಗಳ ಹೆಸರುಗಳೆಲ್ಲಾ, ದೇವರು ಅವರಿಗೆ ವಿಶೇಷ ಸಹಾಯ ಮಾಡಿದ ಸ್ಥಳಗಳಲ್ಲದೆ, ಇಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಬರೆದಿರುವದಿಲ್ಲಾ. ಅವುಗಳ ಪಟ್ಟಿ ಅಂಕೆ. ೩೩ರಲ್ಲಿ ವಿವರವಾಗಿ ಲಿಖಿತವಾಗಿದೆ.

೫. ಈಗಿನ ಪ್ರಯಾಣಸ್ಥರು, ಈ ಭಾವಿಯ ನೀರು ಮನುಷ್ಯರಾದರೂ ಒಂಟೆಗಳಾದರೂ ಅದನ್ನು ಕುಡಿಯಲಾರದಷ್ಟು ಕಹಿಯಾಗಿದೆಂದು, ಸಾಕ್ಷಿ ಹೇಳುತ್ತಾರೆ. ಅರಭಿಸ್ಥಾನದ ಅರ್ಧದ್ವೀಪದಲ್ಲಿರುವ ಹೆಚ್ಚಾದ ಭಾವಿಗಳ ನೀರು ಉಪ್ಪು ಗಂಧಕಗಳುಳ್ಳದ್ದು.

೬. ಶೀ ನೀರು ದೊರಕದೆ ಇರುವ ಉಪದ್ರವನ್ನು ಪರಿಹರಿಸುವದಕ್ಕಾಗಿ ದೇವರು ವಾಕ್ಯದ ಬಲದಿಂದಲೇ ನೀರಿನ ವಿಷವನ್ನು ಹೋಗಲಾಡಿಸದೆ, ಒಂದು ಮರದ ಕಟ್ಟಿಗೆಯನ್ನು ಕಹಿ ನೀರು ಶೀಯಾಗ ಮಾಡುವ ಔಷಧಿಯಾಗಿ ಮೋಶೆಗೆ ತೋರಿಸುತ್ತಾನೆ. ಈ ಮರ ತಾನೆ ಔಷಧಶಕ್ತಿಯುಳ್ಳದ್ದಾಗಿತ್ತೊ ನಾವರಿಯೆವು. ಹ್ಯಾಗೂ ದೇವರ ವಾಕ್ಯದ ಆಶೀರ್ವಾದದಿಂದ ಆ ಮರಕ್ಕೆ ಅಂಥಾ ಶಕ್ತಿ ಬಂತೆಂತ, ನೆನಸ ತಕ್ಕದ್ದು. ಇದಲ್ಲದೆ ಆ ತರದ ಔಷಧವೃಕ್ಷವು ಈಗಿರುವ ಅಲ್ಲಿಯ ಜನರಿಗೆ ತಿಳಿದು ಬಂದದ್ದಿಲ್ಲ.

೭. ಆ ನೇಮವು ಏನಂದರೆ: ದೇವರು ತನ್ನ ಪ್ರಜೆಯ ವಿಶ್ವಾಸವನ್ನೂ ಭರವಸವನ್ನೂ ಪರೀಕ್ಷಿಸುವ ವೇಳೆಯಲ್ಲಿಯೂ, ಅವನಿಗೆ ಎಲ್ಲಾ ವಿಷಯವಾಗಿ ವಿಧೇಯವಾಗಿರ ಬೇಕೆಂಬದು. ಆ ನ್ಯಾಯವೇನಂ

ದರೆ, ಶಕ್ತಿ ಮೀರುವ ಶೋಧನೆಯಲ್ಲಿ ತಮ್ಮನ್ನು ಸೇರಲೀಸದೆ ಇರುವ ದೇವರ ಸಹಾಯವನ್ನೂ ಕರುಣೆಯನ್ನೂ ಯಾವಾಗಲೂ ನಿರೀಕ್ಷಿಸ ಬಹುದೆಂಬದು.

೮. ಕೇಡಿಗೆ ತಪ್ಪಿಸುವ ಕೃಪೆಯು ವಿಧೇಯತ್ವದ ಫಲವಹುದು.

೯. ನೀರಿನ ದೋಷವನ್ನು ತೆಗದು ಹಾಕಿದ ದೇವರು, ಇಸ್ರಯೇಲನವರ ಆತ್ಮದೇಹ ರೋಗಗಳನ್ನು ಪರಿಹರಿಸುವ ತ್ರಾಣವೂ ಮನಸ್ಸೂ ಉಳ್ಳವನೆಂದು, ತನ್ನ ಜನಾಂಗಕ್ಕೆ ಅಭಯ ಕೊಡುತ್ತಾನೆ.

ಏಲಿಮ್, ಸೀನೆಂಬ ಅರಣ್ಯ; ಲಾವಕ್ಕಿಗಳೂ ಮನ್ನವೂ ದೊರಕಿದ್ದು. ವ. ೨೭ — ಸ. ೧೬, ೩೬.

ವ. ೨೭. ಆಗಲವರು ಏಲೀಮಿಗೆ[1] ಬಂದರು. ಅಲ್ಲಿ ಹನ್ನೆರಡು ನೀರಿನ ಬುಗ್ಗೆಗಳೂ ಎಪ್ಪತ್ತು ಈಚಲು ಮರಗಳೂ[2] ಇದ್ದದರಿಂದ, ನೀರಿನ ಹತ್ತರ ಇಳುಕೊಂಡರು.

೧. ಈಗ ಘುರೆಂದೆಲ್ ಎಂದು ಅನ್ನಿಸಿ ಕೊಳ್ಳುವ ತಗ್ಗಿಗೆ ಆಗ ಏಲಿಮ್ ಎಂಬ ಹೆಸರಿತ್ತೆಂದು, ತೋರುತ್ತದೆ. ಅದು ಸೂವೆಜಿಗೆ ಹೆಚ್ಚುಕಡಿಮೆ ಇಪ್ಪತ್ತು ಹರದಾರಿ ದೂರವಾದ ಮೂಡಣ ದಕ್ಷಿಣ ದೆಶೆಯ ಸ್ಥಳವಾಗಿದೆ. ಅದರಲ್ಲಿ ಬಹಳ ನೀರು ಇರಲಾಗಿ ಮರಗಳು ಪ್ರಬಲವಾಗಿರುವದರಿಂದ, ಅರಣ್ಯದ ನಡುವಿನಲ್ಲಿ ಹುಟ್ಟಿದ ರಮ್ಯವಾದ ತೋಟದಂತೆ ಕಾಣುವದೆಂದು, ಈಗಿನ ಪ್ರಯಾಣಸ್ಥರು ಹೇಳುತ್ತಾರೆ. ಇಂಥಾ ಮಹಾ ಉಸುಬುಬೈಲುಗಳಲ್ಲಿ ಅಲ್ಲಲ್ಲಿ ಫಲಭರಿತವಾದ ಸ್ಥಳಗಳಿಗೆ ಉವಾಸಗಳೆಂಬ ಹೆಸರುಂಟು.

೨. ಬುಗ್ಗೆಗಳ ಮತ್ತು ಮರಗಳ ಲೆಖ್ಖವು ಇಸ್ರಯೇಲನವರ ಕುಲಗಳ ಮತ್ತು ಹಿರಿಯರ ಲೆಖ್ಖಕ್ಕೆ ಚನ್ನಾಗಿ ಒಪ್ಪುತ್ತದೆ. ಅರಣ್ಯಸಂಚಾರದ ಕಥೆಯಲ್ಲಿ ಸರ್ವಲೋಕಕರ್ತನಾದ ದೇವರು ತಾನು ಆದುಕೊಂಡ ಸ್ವಾಸ್ಥ್ಯವಾದ ಜನಾಂಗವನ್ನು ತನ್ನ ಕೈವಶವಾದ ಭೂಮಿಯಲ್ಲಿ ತನ್ನ ಮನಸ್ಸಿನಲ್ಲಿ ನಿರ್ಣೈಸಿದ ಆಲೋಚನೆಯ ಪ್ರಕಾರ ನಡಿಸುವ ಸಂಗತಿ ಆಗ್ಯಾಗ್ಯೆ ಜಾಡೆಯಾಗಿ ಕಾಣ ಬರುವದು. ಇಂಥಾ ಸಂಜ್ಞೆಗಳನ್ನು ಇಸ್ರಯೇಲನವರು ಪರಾಮರಿಸುತ್ತಾ, ತಮ್ಮನ್ನು ಆಯಿಕೆಯಾದ ಮಂದೆಯಂತೆ ಕಾಪಾಡಿ ನಡಿಸುವ ದೇವರ ವಿಶ್ವಾಸದಲ್ಲಿ ಹೆಚ್ಚುಹೆಚ್ಚಾಗಿ ಧೈರ್ಯಗೊಳ್ಳ ಬೇಕಾಯಿತು.

ಸ. ೧೬, ೧—೩. ವ. ೧. ಏಲೀಮಿನಿಂದ ಹೊರಟು, ಇಸ್ರಯೇಲನ ಮಕ್ಕಳ ಸಭೆ ಎಲ್ಲಾ ಏಲೀಮಿಗೂ ಸೀನಯಿಗೂ ನಡುವಣ ಸೀನೆಂಬ[1] ಅರಣ್ಯಕ್ಕೆ ಮಿಚ್ರ ದೇಶದಿಂದ ಹೊರಗಾದ ಎರಡನೆ ತಿಂಗಳಿನ ಹದಿನೈದನೆ ದಿವಸದಲ್ಲಿ ಬರಲು, ೨. ಇಸ್ರಯೇಲನ ಮಕ್ಕಳ ಸಭೆ ಎಲ್ಲಾ ಮೋಶೆ ಆರೋನರಿಗೆ ವಿರೋಧವಾಗಿ ಗುಣುಗುಟ್ಟಿದರು. ೩. ಇಸ್ರಯೇಲನ ಮಕ್ಕಳು ಅವರಿಗೆ ಹೇಳಿದ್ದೇನಂದರೆ: ನಾವು ಬಾಡಿನ ಪಾತ್ರೆಗಳ ಹತ್ತರ ಕೂತು ಕೊಳ್ಳುತ್ತಾ, ಸಾಕಾಗುವಷ್ಟು ರೊಟ್ಟಿ ತಿನ್ನುತ್ತಾ, ಮಿಚ್ರ ದೇಶದಲ್ಲಿ ಯೆಹೋವನ ಕೈಯಿಂದ ಸಾಯುವದು ಲೇಸಾಗಿತ್ತು; ಯಾಕಂದರೆ ಈ ಕೂಟವನ್ನೆಲ್ಲಾ ಬರದಿಂದ ಸಾಯಲೀಸುವ ಬಗ್ಯೆ[2], ನಮ್ಮನ್ನು ಈ ಅರಣ್ಯಕ್ಕೆ ಹೊರ ಬರಿಸಿದ್ಧೀರಿ.

೧. ಅಂಕೆ. ೩೩ರಲ್ಲಿ ಬರೆದಿರುವ ವಿವರವಾದ ಉಳುಗಡೆಗಳ ಪಟ್ಟಿಯ ಪ್ರಕಾರ (೩೩, ೧೦.) ಅವರು ಏಲೀಮಿನಿಂದ ಆಪಿನ ಸಮುದ್ರದ ಬಳಿಗೆ ಬಂದು, ಇಳುಕೊಂಡರು. ಹ್ಯಾಗಂದರೆ ಏಲೀಮಿನಿಂದ ಹೊರಟು, ಘಟ್ಟಗಳ ಹಾದಿಯಿಂದ ಈಗ ತಾಯಿಬೆ ಎಂದು ಹೆಸರ್ಗೊಂಡ ಹಳ್ಳದ ಬಾಯಿಗೆ ಬಂದರು. ಇ

ಹೊರಡೋಣ. ೧೬, ೪ – ೨೧.

ಲ್ಲಿಂದ ಅರ್ಧದ್ವೀಪದ ದಕ್ಷಿಣ ತುದಿ ವರೆಗೆ ಸಮುದ್ರ ತೀರಪ್ರದೇಶವು, ಕೊಂಚ ಕಡೆಯಲ್ಲದೆ, ಅಗಲವಾದ ಬೈಲಾಗಿದೆ. ಅದಕ್ಕೆ ಈಗ ಎಲ್ ಕಾಳಿ ಎಂಬ ಹೆಸರು. ಬಳಿಕ ಎಲ್ ಕಾಳಿ ಎಂಬಲ್ಲಿಂದ ಹೊರಟು, ಘಟ್ಟಗಳನ್ನೇರಿ, ಪೈರನ್ ಎಂಬ ತಗ್ಗನ್ನು ದಾಟಿ, ಎಸ್ ಶೈಖೆಂಬ ತಗ್ಗಿಗೆ ತಲಪಿದರು.

೨. ಮಿಚ್ರದಿಂದ ಅವರು ತಕ್ಕೊಂಡು ಬಂದ ಹಿಟ್ಟು ಕೊರತೆಯಾಗುತ್ತಲೇ, ತಮ್ಮ ರಕ್ಷಣೆಗಾಗಿ ಕೊಂಚ ಕಾಲಕ್ಕೆ ಮುಂಚೆ ನಾನಾ ಅದ್ಭುತಗಳನ್ನು ನಡಿಸಿದ ದೇವರ ಪ್ರೀತಿಯ ದೃಷ್ಟಾಂತಗಳನ್ನು ಮರತು, ಕೃತಘ್ನರಾಗಿಯೂ ಅಸಂತೃಪ್ತರಾಗಿಯೂ ವಿಶ್ವಾಸವನ್ನು ಬಿಟ್ಟು ಬಿಟ್ಟರು.

ವ. ೪—೧೦. ದೇವರು ಮೋಶೆಗೆ ಮನ್ನವನ್ನೂ ಲಾವಕ್ಕಿಗಳನ್ನೂ ಕುರಿತ ವಾಗ್ದತ್ತವನ್ನು ಮಾಡಿ, ಜನರ ವಿಧೇಯತ್ವದ ಪರೀಕ್ಷೆಗಾಗಿ ಅನುದಿನ ಅವಶ್ಯವಾದದ್ದನ್ನು ದಿನಾಲು ಕೂಡಿಸಿ, ಆರನೆ ದಿವಸದಲ್ಲಿ ಎರಡು ಪಾಲು ಫಳಿಸ ಬೇಕೆಂದು, ಅಪ್ಪಣೆ ಕೊಡುತ್ತಾನೆ. ಆರೋನನು ಇದನ್ನು ಜನಾಂಗಕ್ಕೆ ಸಾರುವಾಗ "ಸಭೆಯೆಲ್ಲಾ ಅರಣ್ಯದ ಕಡೆಯಲ್ಲಿ ಪ್ರತ್ಯಕ್ಷವಾದ ದೇವರ ಮಹಿಮೆಯನ್ನು ಕಂಡಿತು." ಅರಣ್ಯ ಸಂಚಾರ ಕಾಲದಲ್ಲೆಲ್ಲಾ ಮಹಿಮಾಮೇಘವು ಇಸ್ರಯೇಲರ ದಂಡಿನ ಕೂಡಾ ಇರುತ್ತಿತ್ತು. ಆದರೆ ಗುಣುಗುಟ್ಟಿದವರು ದೇವರ ಸಾಮಿಪ್ಯವನ್ನು ಮರತು ಬಿಟ್ಟ ಕಾರಣ, ಮೇಘವು ಮಹಾ ಪ್ರಕಾಶಮಯವಾಗಿ ಕಾಣಿಸಿ, ಯೆಹೋವನು ಅಂಥಾ ಅಡವಿಯಲ್ಲಿ ಸಹಾ ಬೇಕಾದ ಆಹಾರವನ್ನು ಕೊಡಲಿಕ್ಕೆ ಶಕ್ತನಾಗಿದ್ದೇನೆಂದು ತೋರಿಸುತ್ತಾನೆ.

ವ. ೧೧. ಆಗ ಯೆಹೋವನು ಮೋಶೆಗೆ ನುಡಿದದ್ದೇನಂದರೆ: ೧೨. ಇಸ್ರಯೇಲನ ಮಕ್ಕಳ ಗುಣುಗುಟ್ಟುಗಳನ್ನು ಕೇಳಿದ್ದೇನೆ. ಅವರಿಗೆ ನುಡಿ ಏನಂದರೆ: ಸಂಜೇ ಹೊತ್ತು ಬಾಡು ತಿನ್ನುವಿರಿ, ಮತ್ತು ಮುಂಜಾನೆ ರೊಟ್ಟಿಯಿಂದ ತುಂಬಿ ಕೊಳ್ಳುವಿರಿ. ಆಗ ನಾನು ನಿಮ್ಮ ದೇವರಾದ ಯೆಹೋವನೆಂದು, ತಿಳುಕೊಳ್ಳುವಿರಿ. ೧೩. ಸಾಯಂಕಾಲದಲ್ಲಿ ಆದದ್ದೇನಂದರೆ: ಲಾವಕ್ಕಿ ಏರಿ[1] ದಂಡು ಕವಿಯಿತು; ಮತ್ತು ಮುಂಜಾನೆ ಮಂಜು ದಂಡಿನ ಸುತ್ತಲು ಇಳಿದಿತ್ತು. ೧೪. ಇಳಿದ ಮಂಜು ಏರಿದಾಗ, ಇಗೋ, ಅರಣ್ಯದ ಮೇಲೆ ತೆಳ್ಳಗಾದ ಗಲ್ಲೆಯು, ಭೂಮಿಯ ಮೇಲಣ ಹಿಮದ ಹನಿಯಂತೆ ತೆಳ್ಳಗಾದದ್ದು. ೧೫. ಇಸ್ರಯೇಲನ ಮಕ್ಕಳು ಅದನ್ನು ಕಂಡು ಒಬ್ಬರಿಗೊಬ್ಬರು ಹೇಳಿದ್ದು ಇದೇನೆಂತ[2]; ಯಾಕೆಂದರೆ ಅದೇನೆಂದರಿಯದಿದ್ದರು. ಮೋಶೆ ಅವರಿಗೆ ಹೇಳಿದ್ದು: ಇದು ಯೆಹೋವನು ನಿಮಗೆ ತಿನ್ನುವದಕ್ಕೆ ಕೊಟ್ಟ ರೊಟ್ಟಿ. ೧೬. ಯೆಹೋವನು ಕಟ್ಟಳೆ ಇಟ್ಟ ಮಾತು ಏನಂದರೆ: ಇದರಲ್ಲಿ ಆಳಾಳು ತಿನ್ನುವಷ್ಟು ಕೂಡಿಸಿರಿ. ಆಳಾಳು ತನ್ನ ಗುಡಾರದಲ್ಲಿರುವವರಿಗಾಗಿ ನಿಮ್ಮ ಪ್ರಾಣಗಳ ಲೆಖ್ಖದ ಪ್ರಕಾರ ತಲೆ ತಲೆಗೊಂದು ಓಮೆರ್ ತಕ್ಕೊಳ್ಳಿರಿ. ೧೭. ಇಸ್ರಯೇಲನ ಮಕ್ಕಳು ಹಾಗೆ ಮಾಡಿ, ಒಬ್ಬರು ಹೆಚ್ಚು ಒಬ್ಬರು ಕಡಿಮೆ ಕೂಡಿಸಿದರು. ೧೮. ಆದರೆ ಓಮೆರದಲ್ಲಿ ಅಳೆದಾಗ ಹೆಚ್ಚು ಕೂಡಿಸಿದವನಿಗೆ ಮಿಗಲಿಲ್ಲ, ಕಡಿಮೆ ಕೂಡಿಸಿದವನಿಗೆ ಕೊರೆಯಲಿಲ್ಲ. ಆಳಾಳು ತಿನ್ನುವಷ್ಟು ಕೂಡಿಸಿದನು[3]. ೧೯. ಆಗ ಮೋಶೆ ಅವರಿಗೆ, ಯಾರೂ ಹೊತ್ತಾರೆ ವರೆಗೆ ಇದರಲ್ಲೇನಾದರೂ ಉಳಿಸ ಬಾರದು. ೨೦. ಆದರೆ ಅವರು ಮೋಶೆಗೆ

ಕಿವಿಗೊಡದೆ, ಕೆಲವರು ಅದರಿಂದ ಹೊತ್ತಾರೆ ವರೆಗೆ ಉಳಿಸಿದಾಗ ಹುಳ ಹುಟ್ಟಿ
ನಾರಿತು. ಮೋಶೆ ಅವರ ಮೇಲೆ ಸಿಟ್ಟು ಮಾಡಿದನು. ೨೧. ಅವರು ಹೊತ್ತಾರೆ
ಹೊತ್ತಾರೆ ಆಳಾಳು ತಿನ್ನುವಷ್ಟು ಕೂಡಿಸುತ್ತಿದ್ದರು. ಆದರೆ ಬಿಸಲು ಹೆಚ್ಚಲು, ಕರ
ಗುತ್ತಿತ್ತು.

೧. ಕಲ್ಲಿನ ಅರಾಬ್ಯದಲ್ಲಿ ಈಗ ಸಹಾ ಒಂದೊಂದು ವೇಳೆ ಲಾವಕ್ಕಿಗಳ ದೊಡ್ಡ ಹಿಂಡುಗಳು ಬಂದು, ನೆಲದ ಹತ್ತಿರ ಹಾರುತ್ತವೆ. ಬೇಕಾದರೆ ಅಂಥಾ ಸಮಯದಲ್ಲಿ ಯಾರಾದರೂ ಕೈಯಿಂದಲೇ ಹಕ್ಕಿಗಳನ್ನು ಹಿಡಿಯ ಬಹುದು. ಆದರೆ ಇಲ್ಲಿ ಬರೆದದ್ದು ಬೇರೆ. ಲೆಖ್ಖವಿಲ್ಲದ ಲಾವಕ್ಕೀ ಹಿಂಡುಗಳು ಯೆಹೋವನು ಹೇಳಿದಾಗಲೇ ಬಂದು, ಇಸ್ರಯೇಲನವರು ಇದ್ದ ಸ್ಥಳವನ್ನು ದಾಟದೆ ನೆಲಕ್ಕೆ ಬಿದ್ದವು. ಇಪ್ಪತ್ತೈದು ಲಕ್ಷ ಜನರು ಅವುಗಳ ಬಾಡು ತಿಂದು ತೃಪ್ತಿಯಾದರು.

೨. ಇದೇನು ಎಂಬದು ಇಬ್ರಿಯದಲ್ಲಿ ಮಾನ್ ಹೂ ಎಂಬದಾಗಿದೆ. ಇದರಿಂದ ಮನ್ನಾ ಎಂಬ ಹೆಸರು ಹುಟ್ಟಿತು. ಇದು ವಿಲಾಯತೀ ಭಾಷೆಗಳಲ್ಲೆಲ್ಲಾ ಪ್ರಯೋಗವಾಗಿದೆ. ಅರಾಬ್ಯದ ಅರ್ಧದ್ವೀಪದಲ್ಲಿ ಬಿಸಿಲು ಕಾಲದಲ್ಲಿ ತಮರಿಸ್ಕ ಎಂಬ ಗಿಡದಿಂದ ಹೆಚ್ಚು ಮಳೆ ಬೀಳುವ ವರ್ಷಗಳಲ್ಲಿ ಒಂದು ವಿಧದ ಮನ್ನಾ ಸೋರಿ ಬಂದು, ನೆಲಕ್ಕೆ ಬಿದ್ದು, ಘಟ್ಟಿಯಾಗುವದು. ಅರಾಬ್ಯರು ವರ್ಷ ವರ್ಷಕ್ಕೆ ಐನೂರು ಆರುನೂರು ರಾತಲು ಮನ್ನಾ ಕೂಡಿಸಿಡುತ್ತಾರೆ. ಆದರೆ ಇಲ್ಲಿ ಬಿದ್ದ ಮನ್ನಾ ಬೇರೆ. ಈಗ ಸೀನಾಯಿಯ ಅರ್ಧದ್ವೀಪದಲ್ಲಿ ಸಿಕ್ಕುವ ಮನ್ನಾ ಅರಾಬ್ಯರು ಅದನ್ನು ಎಷ್ಟು ಕಾಲಕ್ಕೆ ಇಟ್ಟು ಕೊಂಡರೂ, ಕೊಳತು ಹೋಗುವದಿಲ್ಲ. ಇಸ್ರಯೇಲನವರಿಗೆ ಸಿಕ್ಕಿದ ಮನ್ನಾ ಎರಡು ದಿವಸದಲ್ಲಿ ಕೊಳತು ಹೋಗುತ್ತಿತ್ತು. ಆದರೆ ಈ ನೇಮಕ್ಕೂ ಅಪವಾದವಿತ್ತು. ಏನಂದರೆ ಶನಿವಾರ ಶನಿವಾರದಲ್ಲಿ ಹಿಂದಿನ ದಿವಸದ ಮನ್ನಾ ಕೊಳತು ಹೋಗದೆ ಉಳಿಯುತ್ತಿತ್ತು. ಇದಲ್ಲದೆ ಕೂಡಿಸಿದವರಲ್ಲಿ ಯಾರಿಗಾದರೂ ಹೆಚ್ಚೂ ಯಾರಿಗಾದರೂ ಕಡಿಮೆಯೂ ಆಗುತ್ತಿದ್ದಿಲ್ಲ.

೩. ಇದರ ಉದ್ದೇಶವೇನಂದರೆ: ಇಸ್ರಯೇಲನವರು ತಮ್ಮನ್ನು ಸಾಕುವ ದೇವರ ಕೈಯಿಂದಲೇ ಅನುದಿನದ ಆಹಾರವನ್ನು ತೆಗದು ಕೊಂಡು, ಅದನ್ನು ಕೃತಜ್ಞರಾಗಿ ಅನುಭವಿಸಿ, ಆಹಾರದಿಂದಲ್ಲ, ದೇವರು ಕೊಡುವ ಆಶೀರ್ವಾದದಿಂದಲೇ ತಮಗೆ ತೃಪ್ತಿಯಾಗುವದೆಂದು, ತಿಳಿದು ಕೊಳ್ಳುವ ಹಾಗೆ, ಕೊಂಚ ಕೂಡಿಸಿದವರಾದ ಬಲವೂ ಬುದ್ಧಿಯೂ ಇಲ್ಲದವರಿಗೂ, ಬಹಳ ಕೂಡಿಸಿಟ್ಟವರಾದ ವಿಶ್ವಾಸವಿಲ್ಲದ ಲೋಭಿಗಳಿಗೂ, ಹೆಚ್ಚುಕಡಿಮೆ ಇಲ್ಲದ ಹಾಗೆ ಆಯಿತು.

ವ. ೨೨. ಆರನೆ ದಿವಸದಲ್ಲಿ ಆದದ್ದೇನಂದರೆ: ಅವರು, ಒಬ್ಬನಿಗೆ ಎರಡು ಓಮೆ
ರಾಗಿ, ಎರಡಷ್ಟು ತಿಂಡಿಯ ಕೂಡಿಸಿದರು. ಮತ್ತು ಸಭೆಯ ಹೆಗ್ಗಳೀಕರೆಲ್ಲರು ಬಂದು,
ಮೋಶೆಗೆ ತಿಳಿಸಿದರು. ೨೩. ಅವನು ಅವರಿಗೆ ಹೇಳಿದ್ದು: ಯೆಹೋವನು ನುಡಿದದ್ದು
ಇದೇ. ಯೆಹೋವನಿಗೆ ನಾಳೆ ಪರಿಶುದ್ಧ ಶೀರುಗಡೆಯಾದ ಸಬ್ಬಥ್ ದಿವಸ೧). ಸುಡು
ವಂಥಾದ್ದನ್ನು ಸುಡಿರಿ. ಬೇಯಿಸುವಂಥಾದ್ದನ್ನು ಬೇಯಿಸಿರಿ; ಆದರೆ ಮಿಕ್ಕಾದದ್ದನ್ನೆ
ಲ್ಲಾ, ಹೊತ್ತಾರೆ ವರೆಗೆ ಉಳಿಯುವ ಹಾಗೆ, ನಿಮಗೆ ಇಟ್ಟು ಕೊಳ್ಳಿರಿ. ೨೪. ಮೋಶೆ
ಅಪ್ಪಣೆ ಕೊಟ್ಟಂತೆ, ಅವರು ಅದನ್ನು ಹೊತ್ತಾರೆ ವರೆಗೆ ಇಟ್ಟು ಕೊಂಡರು; ಆದರೆ
ಅದು ನಾರಲಿಲ್ಲ, ಮತ್ತು ಹುಳವು ಅದರಲ್ಲಿ ಇದ್ದಿಲ್ಲ. ೨೫. ಆಗ ಮೋಶೆ ಹೇಳಿದ್ದು: ಅ

ಹೊರಡೋಣ. ೧೬, ೨೨—೩೫.

ದನ್ನು ಇಂದು ಉಣ್ಣಿರಿ, ಯಾಕಂದರೆ ಇಂದು ಯೆಹೋವನಿಗೆ ಸಬ್ಬಥ್. ಇಂದು ನೀವು ಅದನ್ನು ಹೊಲದಲ್ಲಿ ಕಂಡು ಕೊಳ್ಳುವದಿಲ್ಲ. ೨೬. ಆರು ದಿವಸ ಅದನ್ನು ಕೂಡಿಸಿರಿ. ಆದರೆ ಏಳನೆ ದಿವಸದಲ್ಲಿ ಸಬ್ಬಥ್. ಅದರಲ್ಲಿ ಅದು ಇರದು. ೨೭. ಏಳನೆ ದಿವಸದಲ್ಲಿ ಆದದ್ದೇನಂದರೆ: ಜನರಲ್ಲಿ ಕೆಲವರು ಕೂಡಿಸುವ ಬಗ್ಯೆ ಹೊರಟು ಹೋಗಲು, ಅದನ್ನು ಕಂಡು ಕೊಳ್ಳಲಿಲ್ಲ.— —. ೩೦. ಹೀಗೆ ಜನಾಂಗವು ಏಳನೆ ದಿವಸದಲ್ಲಿ ತೀರುಗಡೆಯಾಗಿತ್ತು. ೩೧. ಇಸ್ರಯೇಲನ ಮನೆಯವರು ಅದಕ್ಕೆ ಮಾನೆಂದು ಹೆಸರಿಟ್ಟರು. ಅದು ಬಿಳೀ ಕೊತ್ತುಂಬರೀ ಬೀಜದ ಹಾಗಿತ್ತು. ಅದರ ರುಚಿಯು ಜೇನು ಕಲಿಸಿದ ದೋಶೆಯ ಹಾಗಿತ್ತು,— —. ೩೩. ಮತ್ತು ಮೋಶೆ ಆರೋನನಿಗೆ ಹೇಳಿದ್ದು: ಒಂದು ಪಾತ್ರೆಯ ತಕ್ಕೊಂಡು, ಅದರಲ್ಲಿ ತುಂಬಿದ ಓಮೆರ್ ಮಾನ್ ಇಟ್ಟು, ನಿಮ್ಮ ಸಂತತಿಗಳಿಗಾಗಿ ಉಳಿಸುವ ಬಗ್ಯೆ, ಯೆಹೋವನ ಮುಂದೆ ಇಟ್ಟುಕೋ.—೩೫. ಇಸ್ರಯೇಲನ ಮಕ್ಕಳು ವಾಸ ಮಾಡ ತಕ್ಕ ದೇಶಕ್ಕೆ ಬರುವನಕಾ, ನಾಲ್ವತ್ತು ವರ್ಷ, ಮಾನೆಂಬದನ್ನು ಉಣ್ಣುತ್ತಾ ಇದ್ದರು೨).

೧. ಇಸ್ರಯೇಲನವರು ಮಿಚ್ರ ಹಿಂದೂ ಮೊದಲಾದ ದೇಶಗಳ ಜನರಂತೆ ತಿಂಗಳನ್ನು ನಾಲ್ಕು ವಾರವಾಗಿ ವಿಭಾಗಿಸಿ, ಏಳು ದಿನ ಒಂದು ವಾರವೆಂಬದಾಗಿ, ಕಾಲಗಣನೇ ಮಾಡುತ್ತಾ ಬಂದರೆಂದು, ತೋರುತ್ತದೆ. ಇದಲ್ಲದೆ ಉತ್ಪ. ೨ನೆ ಸಂಧಿಯಲ್ಲಿ ಬರೆದಿರುವ ಲೋಕನಿರ್ಮಾಣ ಚರಿತ್ರವನ್ನು ಮೂಲಪಿತೃಗಳ ಉಪದೇಶದಿಂದ ತಿಳುಕೊಂಡು, ವಾರದ ಏಳನೆ ದಿವಸವು ದೇವರ ತೀರುಗಡೆಯ ದಿವಸವಾಗಿ ಪರಿಶುದ್ಧವಾದದ್ದೆಂದು, ಅರಿತಿದ್ದರೆಂದು, ನೆನಸ ತಕ್ಕದ್ದು. ಆದರೂ ಅವರು ಸಬ್ಬಥ್ ದಿವಸವನ್ನು ಈ ವರೆಗೆ ಹಬ್ಬವಾಗಿ ಆಚರಿಸಲಿಲ್ಲವೆಂದು, ಕಾಣುತ್ತದೆ. ಸೀನಯಿ ಬೆಟ್ಟದಲ್ಲಿ ಉಂಟಾದ ನೇಮಧಾನದಲ್ಲಿಯೇ ಸಬ್ಬಥಿನ ಕಟ್ಟಳೆ, ಹತ್ತು ಆಜ್ಞೆಗಳಲ್ಲಿ ಒಂದಾಗಿ, ದೇವರ ಜನಾಂಗಕ್ಕೆ ನೇಮಕವಾಯಿತು. ಇಸ್ರಯೇಲನವರು ಮಿಚ್ರದಿಂದ ಹೊರಟಂದಿನಿಂದ ದೇವರು ಕಾದು, ಸಾಕುತ್ತಾ ಬರುವ ಸ್ವಾಸ್ಥ್ಯದ ಜನಾಂಗವಾಗಿದ್ದು, ವಾರಕ್ಕೆ ಒಂದು ದಿವಸವನ್ನು ಕರ್ತನ ದಿವಸವೆಂದು, ವಾಡಿಕೆಯಾದ ಕೆಲಸವೆಲ್ಲಾ ಬಿಟ್ಟು ಬಿಟ್ಟು, ಪ್ರಾರ್ಥನೆ ಬಲಿಯರ್ಪಣೆ, ದೇವವಾಕ್ಯಪಠಣೆ ಮುಂತಾದ ದೇವಾರಾಧನೆಗಳಿಂದ ಕಳೆಯುವದು ಯುಕ್ತವಾಗಿತ್ತು. ಆದರೆ ಯೆಹೋವನು ಆರನೆ ದಿವಸದಲ್ಲಿ ಎರಡು ದಿನಕ್ಕೆ ಬೇಕಾದ ಆಹಾರವನ್ನು ದಯ ಮಾಡಿ, ಅತಿಶಯ ವಾತ್ಸಲ್ಯದಿಂದ, ಆಜ್ಞೇ ಕೊಡುವದಕ್ಕಿಂತ ಮುಂಚೆ, ಆಶ್ಚರ್ಯವಾದ ಅಕ್ಕರೆಯನ್ನೂ ತ್ಯಾಗಗುಣವನ್ನೂ ತೋರಿಸಿ, ಅವರ ಹೃದಯಗಳನ್ನು ಜೋಡಣೇ ಮಾಡುತ್ತಾನೆ. ದೇವರು ನೇಮಕ ಮಾಡಿದ ಪರಿಶುದ್ಧ ವಿಶ್ರಾಂತಿಯ ದಿವಸವನ್ನು ಕೈಕೊಂಡು, ಲೌಕಿಕ ಕೆಲಸಗಳನ್ನು ಬಿಟ್ಟು ಬಿಟ್ಟು, ದೇವಧ್ಯಾನಾರಾಧನೆಗಳಲ್ಲಿ ನೆಲೆಗೊಳ್ಳುವ ಭಕ್ತರಿಗೆ ಲೌಕಿಕ ಕಾರ್ಯಗಳಲ್ಲಿಯೂ ನಷ್ಟ ಉಂಟಾಗದೆ, ದೇವರ ಆಶೀರ್ವಾದದಿಂದ ಲಾಭವು ಪ್ರಾಪ್ತಿಯಾಗುವದು ವಾಡಿಕೆಯಾಗಿದೆ. ದೇವರ ಚಿತ್ತವನ್ನು ಈ ವಿಷಯವಾಗಿ ಅನುಸರಿಸುವವರು ಇದನ್ನು ಅನುಭವದಿಂದ ತಿಳುಕೊಳ್ಳುತ್ತಾರೆ.

೨. ೩೨ನೆ ಮೊದಲಾದ ವಚನಗಳಲ್ಲಿ ಬರೆದಿರುವ ಪ್ರಸ್ತಾಪವು ಈ ಕಾಲದ್ದಲ್ಲ. ಆದದರಿಂದ ೩೨, ೩೩ನೆ ವಚನಗಳು ನೇಮಧಾನವೂ ಸಾಕ್ಷೀಗುಡಾರದ ರಚನೆಯೂ ಆದ ಬಳಿಕ ಬರೆಯಲ್ಪಟ್ಟವೆಂದು, ತಿಳಿಯಬೇಕು. ೩೫ನೆ ವಚನವನ್ನು ಮೋಶೆ ಅರಣ್ಯಾ ಸಂಚಾರದ ಕಡೆ ಕಾಲದಲ್ಲಿ ಬರೆದನೆಂದು, ನೆನಸ ತಕ್ಕದ್ದು. ಅವನು ಅರಣ್ಯಸಂಚಾರದ ಆರಂಭದಲ್ಲಿ ದೇವಜನಾಂಗದ ಚರಿತ್ರವನ್ನು ದೇವರ ಅಪ್ಪಣೆಯಿಂದ ಗ್ರಂಥದಲ್ಲಿ ಬರೆಯ ತೊಡಗಿದನೆಂದು, ಸ. ೧೭, ೧೪ರಲ್ಲು ಲಿಖಿತವಾಗಿದೆ.

ಬಂಡೆಯಿಂದ ನೀರು ಹರಿದು ಬಂದದ್ದು. ಸ. ೧೭, ೧–೭.

ವ. ೧. ಆಗ ಇಸ್ರಯೇಲನ ಮಕ್ಕಳ ಸಭೆ ಎಲ್ಲಾ, ಅವರವರು ಹೊರಡುವ ಕ್ರಮ
ದ ಪ್ರಕಾರ ಯೆಹೋವನ ಅಪ್ಪಣೆಯಿಂದ ಸೀನ್ ಅರಣ್ಯದಿಂದ ಹೊರಟು, ರಫೀದೀಮಿ
ನಲ್ಲಿ ಇಳುಕೊಂಡರು[೧]. ಆದರೆ ಜನಾಂಗಕ್ಕೆ ಕುಡಿಯುವ ಬಗ್ಯೆ ನೀರು ಇದ್ದಿಲ್ಲ[೨].
೨. ಆಗ ಪ್ರಜೆಯು ಮೋಶೆಯ ಸಂಗಡ ಜಗಳಾಡಿ ಹೇಳಿದ್ದು: ನಾವು ಕುಡಿಯುವ
ಹಾಗೆ ನಮಗೆ ನೀರು ಕೊಡಿರಿ! ಮೋಶೆ ಅವರಿಗೆ ಹೇಳಿದ್ದು: ಯಾಕೆ ನನ್ನ ಸಂಗಡ ಜ
ಗಳಾಡುತ್ತೀರಿ? ಯಾಕೆ ಯೆಹೋವನನ್ನು ಶೋಧಿಸುತ್ತೀರಿ[೩]? ೩. ಆದರೆ ಪ್ರಜೆಯು
ಅಲ್ಲಿ ನೀರಡಿಕೆಯಾಗಿರಲಾಗಿ, ಪ್ರಜೆಯು ಮೋಶೆಯ ಮೇಲೆ ಗುಣುಗುಟ್ಟಿ, ಹೇಳಿದ್ದು:
ನಮ್ಮನ್ನೂ ನಮ್ಮ ಮಕ್ಕಳನ್ನೂ ನಮ್ಮ ದನಗಳನ್ನೂ ದಾಹದಿಂದ ಸಾಯಲೀಸುವ ಬಗ್ಯೆ,
ನಮ್ಮನ್ನು ಮಿಚ್ರದಿಂದ ಏರಿ ಬರ ಮಾಡಿದ್ದು ಯಾಕೆಲಾ? ೪. ಆಗ ಮೋಶೆ ಯೆಹೋ
ವನಿಗೆ ಕೂಗಿದ್ದೇನಂದರೆ: ಈ ಪ್ರಜೆಗೆ ನಾನೇನು ಮಾಡಲಿ? ಕೊಂಚ ಕಡಿಮೆಯಾಗಿ
ನನ್ನನ್ನು ಕಲ್ಲೆಸೆಯುವರು[೪]. ೫. ಆಗ ಯೆಹೋವನು ಮೋಶೆಗೆ ಹೇಳಿದ್ದು: ಪ್ರಜೆಯ
ಮುಂದೆ ಹಾದು[೫], ಇಸ್ರಯೇಲನ ಹಿರಿಯರಲ್ಲಿ ಕೆಲವರನ್ನು ನಿನ್ನ ಸಂಗಡ ಕರಕೊಂಡು,
ನೀನು ನದಿಯನ್ನು ಬಡದ ನಿನ್ನ ಕೋಲನ್ನು ನಿನ್ನ ಕೈಯಲ್ಲಿ ತಕ್ಕೊಂಡು, ನಡಿ. ೬. ಇ
ಗೋ, ನಾನು ಹೋರೆಬಿನಲ್ಲಿಯಣ[೧] ಬಂಡೆಯ ಮೇಲೆ ಅಲ್ಲಿ ನಿನ್ನ ಮುಂದೆ ನಿಲ್ಲುತ್ತಿರ
ಲು[೬], ನೀನು ಬಂಡೆಯನ್ನು ಬಡದರೆ, ಪ್ರಜೆಯು ಕುಡಿಯುವ ಹಾಗೆ[೭] ಅದರಿಂದ ನೀ
ರು ಹೊರಗೆ ಬರುವದು. ಆಗ ಮೋಶೆ ಇಸ್ರಯೇಲನ ಹಿರಿಯರ ದೃಷ್ಟಿಯಲ್ಲಿ ಹಾಗೆ
ಮಾಡಿದನು. ೭. ಮತ್ತು ಇಸ್ರಯೇಲನ ಮಕ್ಕಳ ಜಗಳದ ಸಲವಾಗಿಯೂ, ಅವರು
ಯೆಹೋವನು ನಮ್ಮ ನಡುವಿನಲ್ಲಿದ್ದಾನೋ ಏನೋ ಎಂದು, ಯೆಹೋವನನ್ನು ಶೋ
ಧಿಸಿದ ಸಲವಾಗಿಯೂ, ಆ ಸ್ಥಳವನ್ನು ಮಸ್ಸವೂ ಮೆರೀಬವೂ ಎಂದು, ಕರೆದನು.

೧. ಅಂಕೆ. ೩೩, ೧೨–೧೪ರಲ್ಲು ಬರೆದದ್ದೇನಂದರೆ: "ಸೀನೆಂಬ ಅರಣ್ಯದಿಂದ ಹೊರಟು, ದೊಫ್ಖದಲ್ಲಿ ಇಳುಕೊಂಡರು. ದೊಫ್ಖದಿಂದ ಹೊರಟು, ಆಲೂಷದಲ್ಲಿ ಇಳುಕೊಂಡರು. ಆಲೂಷದಿಂದ ಹೊರಟು, ರಫೀದೀಮಿನಲ್ಲಿ ಇಳುಕೊಂಡರು." ಈ ಎರಡನೆ ಗ್ರಂಥದ (ಸ. ೧೯, ೨ರಲ್ಲು) ಅವರು ರಫೀದೀಮನ್ನು ಬಿಟ್ಟು, ಸೀನಯಿ ಅರಣ್ಯಕ್ಕೆ ಬಂದು, ಅರಣ್ಯದಲ್ಲಿ ಇಳುಕೊಂಡರು ಎಂದು, ಬರೆದದೆ. ಹಾಗಾದರೆ ರಫೀದೀಮ್ ಎಂಬುವದು ಒಂದು ವೇಳೆ ಎಸ್‍ಶೈಖ್ ಎಂಬ ಬೈಲಾದ ತಗ್ಗಿನಲ್ಲಿ, ಒಂದು ವೇಳೆ ಹೋರೆಬಿಗೆ ತಗಲುವ ಗುಡ್ಡಗಳಲ್ಲಿ ಇದ್ದ ಸ್ಥಳದ ಹೆಸರೆಂದು, ಕಾಣುವದು. ಒಂದಕ್ಕೊಂದು ಹೊಂದಿಕೆಯಾದ ಬಹಳ ಬೆಟ್ಟಗಳು ಕೂಡಿದ ವಿಸ್ತಾರವಾದ ಘಟ್ಟಗಳಿಗೆ ಮೋಶೆಯು ಗ್ರಂಥಗಳಲ್ಲಿ ಹೋರೆಬೆಂಬ ಒಟ್ಟುಹೆಸರು ಬರುತ್ತದೆ, ಮತ್ತು ಸೀನಯಿ ಎಂಬ ಹೆಸರು ಆ ಘಟ್ಟಗಳಲ್ಲಿ ವಿಂಗಡವಾಗಿ ಏರುವ ಒಂದು ದೊಡ್ಡ ಬೆಟ್ಟಕ್ಕೆ ಇಟ್ಟಿರುತ್ತದೆ. ಈಗಿನ ಕಾಲದಲ್ಲಿ ಈ ಹೆಸರುಗಳ ಪ್ರಯೋಗವು ಬೇರೆ. ಏನಂದರೆ ಮೋಶೆಯು ಕಾಲದಲ್ಲಿ ಸೀನಯಿ ಅನ್ನಿಸಿ ಕೊಂಡ ಬೆಟ್ಟಕ್ಕೆ ಈಗಿನ ಅರಬಿಸ್ಥಾನದವರೂ ಆ ಶೀಮೆಯ ನಿವಾಸಿಗಳಾದ ಕ್ರೈಸ್ತ

ರೂ ಹೊರೆಬೆಂದು ಹೆಸರಿಟ್ಟು, ವಿಂಗಡವಾದ ಈ ಬೆಟ್ಟದ ಬಡಗ ದೆಶೆಯಲ್ಲಿರುವ ಉನ್ನತಾಗ್ರವನ್ನು ಆ ಕಡೆಯ ಕ್ರೈಸ್ತರು ಸೀನಯಿ ಎಂದು, ಅರಬಿಯರು ಮೋಶೆಯ ಬೆಟ್ಟವೆಂದು ಹೇಳುತ್ತಾರೆ. ಆದರೆ ದೇವರ ವಾಕ್ಯದಲ್ಲಿ (ದೇಗುಲವೆಂಬರ್ಥವುಳ್ಳ) ಹೋರೆಬೆಂಬ ಹೆಸರನ್ನು ಹೊಂದಿದಂಥ, ಸೀನಯಿ ಗಿರಿಯು ಶೇರಿರುವ ಬಂಡೆಬೆಟ್ಟಗಳ ಗುಂಪಿಗೆ ಅರಬಿಯರು ಸೂವೆಜಿನ ಕೊಲ್ಲಿಯ ಥಡದಲ್ಲಿರುವ ತೋರ್ ಪಟ್ಟಣದ ಹೆಸರಿಟ್ಟು, ಅದನ್ನು ಜೆಬೆಲ್ ಎತ್ ತೂರ್ ಎಂದು, ಕರೆಯುತ್ತಾರೆ. ಹೀಗಿರಲಿಕ್ಕಾಗಿ ಇಸ್ರಯೇಲನವರು ಬಂಡೆಯಿಂದ ಒಗೆದ ನೀರು ಕುಡಿದ ರಫೀದೀಮ್ ಎಂಬ ಸ್ಥಳವು ವಿಸ್ತಾರವಾದ ಹೋರೆಬ್ ಘಟ್ಟಗಳಿಗೆ ಶೇರಿದಂಥಾದ್ದಾಗಿದ್ದರೂ, ಅದಕ್ಕೂ, ಮೋಶೆ ಸೀನಯಿ ಎಂದು ಹೆಸರಿಟ್ಟ ಬೆಟ್ಟಕ್ಕೂ, ಒಂದು ದಿನದ ದಾರಿಯ ದೂರವಿತ್ತೆಂದು, ತೋರುವದು ಚೋದ್ಯವಲ್ಲ.

೨. ಇಸ್ರಯೇಲನವರು ನೀರೂ ಸಾರವೂ ಉಳ್ಳವಾದಿ ಫೈರನ್ ಎಂಬ ತಗ್ಗನ್ನು ಬಿಟ್ಟು, ಇಂದಿನ ವರೆಗೆ ಕೆಲವು ಬುಗ್ಗೆಗಳು ಹರಿಯುತ್ತಾ ಇರುವ ರಫೀದೀಮಿಗೆ ಬಂದು, ಇದರಲ್ಲಿ ತುಸ ನೀರು ಸಿಕ್ಕಿದರೂ, ಅದು ಸಾಲದೆಂದು, ಬೇಗ ಗುಣುಗುಟ್ಟಿದರು. ಅರಣ್ಯಸಂಚಾರದ ಉಳುಗಡೆಗಳಲ್ಲೆಲ್ಲಾ ಅಷ್ಟು ದೊಡ್ಡ ಜನಸಮೂಹಕ್ಕೂ ಹೇರಳವಾದ ಮಂದೆಗಳಿಗೂ ಬೇಕಾದ ನೀರು ಯೆಹೋವನ ಆಶೀರ್ವಾದವಲ್ಲದೆ ದೊರಕಲಾರದಿತ್ತು. ಆದರೆ ಸ್ವಜನಪಾಲಕನೂ, ಸರ್ವಶಕ್ತ ಸಹಾಯಕನೂ, ಆದ ಕರ್ತನು ಯಾವಾಗಲೂ ಸಮೀಪದಲ್ಲಿರುತ್ತಾ ಇರಲಾಗಿ, ಅವರು ಗುಣುಗುಟ್ಟದೆ, ನಂಬಿ ಬೇಡ ಬೇಕಾಗಿತ್ತಷ್ಟೆ.

೩. ಯೆಹೋವನು ಈ ವರೆಗೆ ಆಶ್ಚರ್ಯ ರೀತಿಯಿಂದ ಅವರಿಗೆ ನಾನಾ ತರದ ಸಹಾಯ ಮಾಡುತ್ತಾ ಬಂದಿದ್ದರೂ, ಅವರು ದೃಢವಾದ ಧೈರ್ಯದಿಂದ ಅವನಲ್ಲಿ ವಿಶ್ವಾಸವಿಡುವದನ್ನು ಇನ್ನೂ ಕಲಿಯದವರಾಗಿದ್ದು, ಕಷ್ಟವು ಕಾಣಿಸುತ್ತಲೇ ನಿರಾಶೆಯಾಗಿ ಅವಿಶ್ವಾಸದಲ್ಲಿ ಬೀಳುವವರಾಗಿದ್ದರು.

೪. ಮೋಶೆ ಶ್ರಮಾಮಯನಾದ ಮನುಷ್ಯನೇ ಸರಿ.

೫. ಕಲ್ಲೆಸೆಯ ಮನಸ್ಸುಳ್ಳವರಿಗೆ ಎಷ್ಟು ಮಾತ್ರವೂ ಹೆದರದೆ, ಅವರಿಗೆ ಪೂರ್ಣ ಧೈರ್ಯದಿಂದ ಎದುರಾಗಿ ಹೋಗು, ಅಂತ.

೬. ಮಹಿಮಾಮೇಘವು, ಬಂಡೆಯ ಮೇಲೆ ಇಳಿದು, ನಿಂತಿತೆಂದು, ನೆನಸ ತಕ್ಕದ್ದು.

೭. ಯೆಹೋವನು ತನ್ನ ಅಪ್ಪಣೆಯಿಂದ ಅರಣ್ಯವಾಸ ಮಾಡುವ ಇಸ್ರಯೇಲೆಂಬ ತನ್ನ ಮಕ್ಕಳಿಗೆ ಎಣೆ ಇಲ್ಲದ ದಯಾಗುಣಪೂರ್ತಿಯಾದ ತಂದೆಯಾಗಿ ಅನುದಿನವು ಅನ್ನಪಾನವನ್ನಿತ್ತು ಅವರನ್ನು ಆರೈಕೆ ಮಾಡುತ್ತಾ, ಮಾನೆಂಬ ರೊಟ್ಟಿಯನ್ನೂ ಲಾವಕ್ಕೀ ಬಾಡಾದ ಮಾಂಸವನ್ನೂ ಉಣ್ಣುವದಕ್ಕೆ ಕೊಟ್ಟ ಬಳಿಕ, ಈಗ ಕ್ಷೇಮಕರವಾದ ನೀರನ್ನು ಸಹ ಬಂಡೆಯಿಂದಲಾದರೂ ಅವರಿಗಾಗಿ ಹರಿಯ ಮಾಡುತ್ತಾನೆ. ಬಂಡೆಯ ಮೇಲೆ ನಿಂತಿರುವ ಮೇಘದಲ್ಲಿ ಸರ್ವಶಕ್ತನಾದ ತಮ್ಮ ದೇವರ ಮಹಿಮೆಯು ತಮಗೆ ಸಮೀಪವಾಗಿದೆಂದು, ಮನಸ್ಸಿದ್ದವರೆಲ್ಲರೂ ನಂಬಿ ತಿಳುಕೊಳ್ಳ ಬಹುದಾಯಿತು. (ಸಮ ನೋಡು ೧ಕೊರಿ. ೧೦, ೪.)

ಅಮಲೇಕನವರ ಅಪಜಯ. ವ. ೮—೧೬.

ವ. ೮. ಆಗ ಅಮಲೇಕ್[1] ಬಂದು ಇಸ್ರಯೇಲನ ಸಂಗಡ ರಫೀದೀಮಿನಲ್ಲಿ ಕಾದಿದನು. ೯. ಆಗ ಮೋಶೆ ಯೆಹೋಷುವನಿಗೆ[2] ಹೇಳಿದ್ದು: ನಮಗೆ ಮನುಷ್ಯರನ್ನು ಆದು ಕೊಂಡು[3] ಹೊರಟು, ಅಮಲೇಕನೊಡನೆ ಕಾದು; ನಾಳೆ ನಾನು ಗುಡ್ಡದ ತುದಿಯ ಮೇಲೆ ದೇವರ ಕೋಲನ್ನು ನನ್ನ ಕೈಯಲ್ಲಿ ಹಿಡುಕೊಂಡು ನಿಲ್ಲುವೆನು. ೧೦. ಯೆಹೋಷುವನು, ಮೋಶೆ ಅವನಿಗೆ ಅಮಲೇಕನೊಡನೆ ಕಾದ ಹೇಳಿದಂತೆ, ಮಾಡಿದ

ನು. ಮತ್ತು ಮೋಶೆಯೂ ಆರೋನ ಹೂರರೂ[೪] ಗುಡ್ಡದ ತುದಿಗೆ ಏರಿ ಹೋದರು.
೧೧. ಆಗಲಾದದ್ದೇನಂದರೆ: ಮೋಶೆ ತನ್ನ ಕೈ ಎತ್ತಿದಾಗ,[೫] ಇಸ್ರಯೇಲ್ ಬಲಗೊಂ
ಡನು; ಆದರೆ ಅವನು ತನ್ನ ಕೈ ಇಳಿಸಿದಾಗ, ಅಮಲೇಕ್ ಬಲಗೊಂಡನು. ೧೨. ಮೋ
ಶೆಯ ಕೈಗಳು ಭಾರವಾಗಿರಲಾಗಿ, ಅವರು ಕಲ್ಲು ತಕ್ಕೊಂಡು, ಅವನ ಕೆಳಗೆ ಇಡಲು,
ಅವನು ಅದರ ಮೇಲೆ ಕೂತು ಕೊಂಡನು. ಆದರೆ ಆರೋನ ಹೂರರು ಒಬ್ಬನು ಈಚೆ
ಯಿಂದ ಒಬ್ಬನು ಆಚೆಯಿಂದ ಅವನ ಕೈಗಳನ್ನು ಆಧರಿಸಿದರು[೬]. ಹೀಗೆ ಸೂರ್ಯನು
ಮುಣುಗುವನಕಾ ಅವನ ಕೈಗಳು ನೆಲೆಯಾಗಿದ್ದವು. ೧೩. ಆಗ ಯೆಹೋಷುವನು ಅ
ಮಲೇಕನನ್ನೂ ಅವನ ಜನಾಂಗವನ್ನೂ ಕತ್ತಿಯ ಬಾಯಿಂದ ಗೆದ್ದನು. ೧೪. ಮತ್ತು ಯೆ
ಹೋವನು ಮೋಶೆಗೆ ಹೇಳಿದ್ದು: ಇದನ್ನು ನೆನಪಿಗಾಗಿ ಪುಸ್ತಕದಲ್ಲಿ[೭] ಬರೆದು, ಯೆ
ಹೋಷುವನ[೮] ಕಿವಿಗಳಲ್ಲಿರಿಸು. ಯಾಕಂದರೆ ಅಮಲೇಕನ ನೆನವರಿಕೆಯನ್ನು ಆಕಾಶ
ದ ಕೆಳಗಿನಿಂದ ಅಳಿಸೇ ಅಳಿಸುವೆನು[೯]. ೧೫. ಆಗ ಮೋಶೆ ಬಲಿಪೀಠವನ್ನು ಕಟ್ಟಿ, ಅದ
ಕ್ಕೆ ಯೆಹೋವ ನಿಸ್ಸೀ ಎಂದು, ಹೆಸರಿಟ್ಟನು. ೧೬. ಮತ್ತು ಅವನು ಹೇಳಿದ್ದೇನಂದರೆ: ಯೆ
ಹೋವನ ಪಳವಿಕೆಯ ಮೇಲೆ ಕೈ[೧೦] ಇರುವದರಿಂದ, ಅಮಲೇಕನಲ್ಲಿ ಯೆಹೋವನಿಗೆ
ತಲತಲಾಂತರಕ್ಕೆ ಕಾಳಗವಹುದು[೧೧].

೧. ಎಸಾವನ ಮೊಮ್ಮಗನಾದ ಅಮಲೇಕನ ಕುಲದವರು ಸೇಯಿರ್ ಘಟ್ಟಗಳಲ್ಲಿ ವಸ್ತಿಯಾಗಿದ್ದು, ತಮ್ಮ ಶೀಮೆಗೆ ತಗಲುವ ತೆಂಕಣ ಪಲೆಸ್ತೀನದಲ್ಲಿಯೂ, ಕಲ್ಲಿನ ಅರಾಬಿಸ್ಥಾನದಲ್ಲಿಯೂ, ಕಳ್ಳ ಗೊಲ್ಲರಾಗಿ ತಮ್ಮ ಮಂದೆಗಳನ್ನು ಮೇಯಿಸುತ್ತಾ ಅಲೆಯುವವರಾಗಿದ್ದು, ಯೆಹೋವನು ಇಸ್ರಯೇಲನವರ ರಕ್ಷಣೆಗಾಗಿ ಮಾಡಿದ ಅದ್ಭುತ ಕಾರ್ಯಗಳಿಗೆ ಬೆರಗಿ ಹೆದರಿದ ಏದೋಮ್ಯರು ಫಿಲಿಷ್ಟ್ಯರು ಮೊದಲಾದ ನೆರೆನಾಡುಗಳ ನಿವಾಸಿಗಳನ್ನನುಕರಿಸದೆ, ಯೆಹೋವನಿಗೆ ಭಯ ಪಡದೆ, ಅವನ ಮಹತ್ತನ್ನು ಎಷ್ಟು ಮಾತ್ರವೂ ಗಣನೆ ಮಾಡದೆ, ಕಾರಣವಿಲ್ಲದೆ ಬರೀ ಕೊಬ್ಬಿನಿಂದ ದೇವರು ಆದು ಕೊಂಡ ಜನಾಂಗದ ಮೇಲೆ ಬಿದ್ದರು. ಅಂಕೆ. ೨೪. ೨೦ರಲ್ಲಿ, ಜನಾಂಗಗಳಲ್ಲಿ ಪ್ರಥಮನೆಂದು ಹೆಸರ್ಗೊಂಡ ಅಮಲೇಕನ ಬಲವೂ ಗರ್ವವೂ ಈ ಕಾಲದಲ್ಲಿ ಬಹಳವಾಗಿ ಹೆಚ್ಚಿದವೆಂದು ಕಾಣುತ್ತದೆ. ಮೂಲಪಿತನಾದ ಇಸಾಕನ ಹೆಂಡತಿಯಾದ ರೆಬೆಕ್ಕಳು, ಜವಳಿ ಮಕ್ಕಳನ್ನು ಹೆರುವದಕ್ಕಿಂತ ಮುಂಚೆ, ಆದಂಥ "ಹಿರಿಯನು ಕಿರಿಯನಿಗೆ ಸೇವೆ ಮಾಡುವನು" ಎಂಬ ಪ್ರವಾದನೆಯನ್ನು ನೆನಸಿ ಕೊಂಡು, ಕಿರಿಯನಾದ ಯಾಕೋಬನ ವಂಶದವರಾದ ಇಸ್ರಯೇಲನವರು ಹಿರಿಯನಾದ ಎಸಾವನ ವಂಶದವರಾದ ತಮ್ಮ ಮೇಲೆ ದೊರೆತನವನ್ನು ನಡಿಸದ ಹಾಗೆ ಈಗ ಅವರನ್ನು ನಿರ್ಮೂಲ ಮಾಡಲೆಸಗ ತಕ್ಕ ಸಮಯವೆಂತ ಆಲೋಚಿಸಿದರೆಂದು, ತೋರುವದು.

೨. ಯೆಹೋಷುವನು ಮುಂದಣ ಉದ್ಯೋಗಕ್ಕೆ ಸಿದ್ಧನಾಗುವ ಹಾಗೆ, ಕರ್ತನ ಸಹಾಯವನ್ನು ನಿರೀಕ್ಷಿಸುವ ವಿಶ್ವಾಸವನ್ನೂ, ವೈರಿಗಳಿಗೆ ಎಡೆಗೊಡದ ಶೌರ್ಯವನ್ನೂ, ಕಲಿಯಲೀ ವೇಳೆಯಲ್ಲಿ ತೊಡಗಿದನು.

೩. ವಾಗ್ದತ್ತವಾದ ಕನಾನ ದೇಶವನ್ನು ಕತ್ತಿಯಿಂದ ಸ್ವತಂತ್ರಿಸಿ ಕೊಳ್ಳುವದಕ್ಕೆ ನೇಮಕವಾದಂಥ ಮಿಚ್ರದ ಕೈಯಾಳುತನದಲ್ಲಿ ಪೌರುಷ ಗುಣವನ್ನು ಪಡೆದು ಕೊಳ್ಳದೆ ಇದ್ದಂಥ, ಇಸ್ರಯೇಲನ ಜನಾಂಗಕ್ಕೆ ಅರಣ್ಯಸಂಚಾರದ ಆರಂಭದಲ್ಲಿಯೇ ಕಾಳಗಸಾಧನ ಮಾಡುವ ಮೊದಲಿನ ರಣರಂಗವು ಸೀನಯಿ ಬೆಟ್ಟದ ಹತ್ತರ ದೊರಕಿತು. ಆದರೆ ಎಳೆ ಮರಿಗಳನ್ನು ಮೊದಲು ಹಾರ ಕಲಿಸುವ ಹದ್ದಿನೋಪಾದಿಯಾ

ಗಿ, ಸ್ವಜನರು ಮೊದಲಿನ ಯುದ್ಧದಲ್ಲಿ ಸೋತು ಹೋಗದ ಹಾಗೆ, ದೇವರು ಅವಸರವಾದರೆ ಸಹಾಯ ಮಾಡುವದಕ್ಕೆ ಕಾದು ಕೊಳ್ಳುತ್ತಾನೆ.

೪. ಹೂರನು ಮಿರ್ಯಾಮಳ ಗಂಡನೂ ಮೋಶೆಯ ಭಾವಮೈದುನನೂ ಆಗಿದ್ದನೆಂದು, ಚರಿತ್ರಕರ್ತನಾದ ಯೋಸೆಫನು ಬರೆದಿದ್ದಾನೆ. ಹ್ಯಾಗಾದರೂ, ಅವನು ಇಸ್ರಾಯೇಲನವರ ಮುಖ್ಯಸ್ಥರಲ್ಲಿ ಒಬ್ಬನಾಗಿದ್ದನೆಂದು, ಸ. ೨೪. ೧೪ರಲ್ಲಿ ನಿಶ್ಚಯವಾಗಿ ಕಾಣುತ್ತದೆ.

೫. ಮೋಶೆ ಕೈಯನ್ನು ಆಕಾಶಕ್ಕೆ ಎತ್ತೋಣದರಿಂದ, ದಿವಲೋಕದ ಒಡೆಯನಾದ ದೇವರ ಸಹಾಯದಿಂದ ಜಯವುಂಟಾಗುವದೆಂದು, ಸೂಚಿಸಿತು.

೬. ೯ನೆ ವಚನದ ಪ್ರಕಾರ ಮೋಶೆ ಒಂದು ಕೈಯಲ್ಲಿ ದೇವರ ಕೋಲು ಹಿಡುಕೊಂಡನು. ಗುಡ್ಡದ ಅಡಿಯಲ್ಲಿ ಕಾದಾಡುವ ಇಸ್ರಾಯೇಲನವರು ಆ ಕೋಲು ಎತ್ತಿಸಿ ಕೊಂಡದ್ದನ್ನು ನೋಡಿ, ಅದು ಯೆಹೋವನ ಸಹಾಯದ ಸಂಜ್ಞೆಯಾದ ತಮ್ಮ ಸೈನ್ಯದ ಧ್ವಜವೆಂದೆಣಿಸಿ ಕೊಂಡು, ಅಧಿಕ ಧೈರ್ಯಗೊಂಡರು.

೭. "ಪುಸ್ತಕದಲ್ಲಿ" ಎಂಬದರಿಂದ, ಮೋಶೆ ಆಗಲೇ ಸಂಭವಿಸಿದ ವಿಶೇಷವಾದ ಕಾರ್ಯಗಳನ್ನು ಬರೆದಿಡ ತೊಡಗಿ ಇದ್ದನೆಂದು, ತಿಳುಕೊಳ್ಳ ಬೇಕು. ಇಲ್ಲದಿದ್ದರೆ, ಈ ಬರಹವು ಹೊಸ ಕಾರ್ಯವಾದದ್ದಾದರೆ, ಪುಸ್ತಕದಲ್ಲಿ ಎಂಬದಕ್ಕೆ ಪ್ರತಿಯಾಗಿ ಒಂದು ಪುಸ್ತಕದಲ್ಲಿ ಎಂದು, ಬರೆಯಲ್ಪಟ್ಟಿರುತ್ತಿತ್ತು.

೮. ಈ ಮಾತು, ಯೆಹೋಷುವನು ತರುವಾಯ ಮೋಶೆಯ ಹಸ್ತಕನೂ ಪ್ರತಿನಿಧಿಯೂ ಆಗಿದ್ದು, ಇಸ್ರಾಯೇಲನ ನಾಯಕನಾಗ ತಕ್ಕವನೆಂದು, ಜಾಡೆಯಾಗಿ ಮುಂತಿಳಿಸುತ್ತದೆ.

೯. ಇಸ್ರಾಯೇಲನವರ ಸಜಾತೀಯರಾದ ಅಮಲೇಕನವರಿಗೆ ಕನಾನ ದೇಶದವರ ಗತಿ ನಿರ್ಣಯವಾಯಿತು. ಇದೇ ಪ್ರವಾದನೆಯು ದ್ವಿತೀ. ೨೫. ೧೯ರಲ್ಲಿ, ಅದರ ನೆರವೇರಿಕೆಯು ೧ ದಿನಚ. ೪. ೪೩ರಲ್ಲಿ ಬರೆದದೆ.

೧೦. "ಯೆಹೋವ ನಿಸ್ಸೀ" ಅಂದರೆ: "ಯೆಹೋವನು ನನ್ನ ಪಳವಿಕೆ."

೧೧. ಈ ಪದಗಳ ಅಭಿಪ್ರಾಯವೇನಂದರೆ: (ಅಮಲೇಕನ) "ಕೈ ಯೆಹೋವನ ಪಳವಿಕೆಯ ಮೇಲೆ" (ಎತ್ತಿದ್ದಾದದರಿಂದ) ಇಲ್ಲವೆ, "ಯೆಹೋವನ ಪಳವಿಕೆಯ ಮೇಲೆ (ಯೆಹೋವನ) ಕೈ ಎಂಬ ತ್ರಾಣವು" ಇರುವದರಿಂದ, ಅಮಲೇಕನೊಡನೆ ಯೆಹೋವನಿಗೆ ಇತ್ಯಾದಿ. ಅಮಲೇಕನು ಯೆಹೋವನ ರಾಜ್ಯಾಧಿಕಾರಕ್ಕೆ ವಿರೋಧವಾಗಿ ಕಾದಿದದರಿಂದ, ಅವನಿಗೆ ನಾಶಕರವಾದ ಶಾಪ ಬಂತು.

ಯೆಥ್ರೋ ಮೋಶೆಗೆ ಹೇಳಿದ ಬುದ್ಧಿ. ಸ. ೧೮.

ಯೆಥ್ರೋನನು ಒಡಂಬಡಿಕೆಯ ಜನಾಂಗದಲ್ಲಿ ಸೇರದವನಾಗಿದ್ದರೂ, ಸತ್ಯ ದೇವರನ್ನು ಆರಾಧಿಸುವ ಭಕ್ತನಾಗಿದ್ದನು. ಮೂಲಪಿತೃಗಳ ಕಾಲದಲ್ಲಿ ಅನ್ಯ ಜನರವರಾದ ಮನುಷ್ಯರಲ್ಲಿಯೂ ದೇವರನ್ನು ತಿಳುಕೊಂಡು ಆರಾಧಿಸುವವರು ಇದ್ದರು. ಆದರೆ ಕಾಲಕ್ರಮದಿಂದ ಅಂಥವರು ಕಡಿಮೆ ಕಡಿಮೆಯಾದರು. ಇವರಲ್ಲಿ ಒಬ್ಬನಾದ ಯೆಥ್ರೋನನು ದೇವಾರಾಧನೆಯಲ್ಲಿ ಮೋಶೆಗೆ ಕೂಡಿ ಕೊಂಡು, ಅವನಿಗೆ ಯೆಹೋವನ ಮನಸ್ಸಿಗೆ ಅನುಕೂಲವಾದ ಆಲೋಚನೆಯನ್ನು ಹೇಳ ತಕ್ಕವನಾಗಿದ್ದನು.

ಮೋಶೆ ಯೆಹೋವನ ಒಬ್ಬನೇ ಪ್ರತಿನಿಧಿಯಾಗಿದ್ದದರಿಂದ, ಆರಂಭದಲ್ಲಿ ನೇಮಧಾತನಾಗಿಯೂ ನ್ಯಾಯಾಧಿಪತಿಯಾಗಿಯೂ ಇದ್ದು, ಜನಾಂಗವನ್ನು ಒಬ್ಬನಾಗಿ ಆಳಿ ಕೊಳ್ಳುತ್ತಾ ಬಂದನು. ಆದರೆ ಸಮಸ್ತ ರಾಜ್ಯಭಾರವನ್ನು ಹೊತ್ತು ಕೊಳ್ಳುವದು ಮನುಷ್ಯನ ಶಕ್ತಿಯ ಮಿತಿಯ ಮೀರುವದರಿಂದ, ನ್ಯಾಯಾಧಿಪತಿಯ ಉದ್ಯೋಗದ ಕೆಲಸದಲ್ಲಿ ಸಹಾಯಕರನ್ನು ಆರಿಸಿ ತೆಗದು ಕೊಳ್ಳ ಬೇಕೆಂದು, ಮಾವನು ಹೇಳಿದ ಆಲೋಚನೆಯ ಕೇಳಲು, ದೇವರು ಅವನನ್ನು ಈಗಲೇ ತನ್ನ ಬಳಿಗೆ ಕಳುಹಿಸಿ, ಅವನ ಮುಖದಿಂದ ತನ್ನ ಚಿತ್ತವನ್ನು ತನಗೆ ತಿಳಿಸುತ್ತಾನೆಂದರಿದು, ಅವನ ಮಾತಿಗೆ ಬೇಗ ಸಮ್ಮತಿಯಾದನು. ಈ ಸಂಧಿಯ ಸಂಗತಿ ಏನಂದರೆ: ಯೆಹೋವನು ಇಸ್ರಾಯೇಲನವರನ್ನು ಮಿಚ್ರದಿಂದ ಬಿಡುಗಡೆ ಮಾಡಿ, ಕಳೆದ ಎರಡು ತಿಂಗ

ಹೊರಡೋಣ. ೧೮.

ಳೊಳಗೆ ನಡಿಸಿದ ಮಹಾ ಕಾರ್ಯಗಳ ಸುದ್ದಿಯ ಕೇಳಿ, ದೇವರ ಬೆಟ್ಟದ ಹತ್ತರ ತನ್ನ ಜನಾಂಗದ ಕೂಡಾ ಇಳು ಕೊಂಡ ಅಳಿಯನ ದರ್ಶನ ತಕ್ಕೊಳ್ಳುವದಕ್ಕೆ ಎಥ್ರೋನನು ತನ್ನ ಮಗಳನ್ನೂ, ಅವಳ ಗಂಡು ಮಕ್ಕಳಾದ ಇಬ್ಬರನ್ನೂ, ಕರಕೊಂಡು, ಮಿದ್ಯಾನದಿಂದ ಬಂದನು. ಮೋಶೆ ಹೆಂಡತಿಮಕ್ಕಳನ್ನು ಮುಂಚಿತವಾಗಿ ಮಿಚ್ರದಿಂದ ಮಾವನ ಮನೆಗೆ ಕಳುಹಿಸಿ ಬಿಟ್ಟದ್ದು ಇಲ್ಲಿಯೇ ಮೊದಲಾಗಿ ಬರೆದದೆ. ತನ್ನ ಇಷ್ಟ ಜನರು ಬರುತ್ತಾರೆಂಬದನ್ನು ಕೇಳಲು, ಮೋಶೆ ಅವರನ್ನು ಸಂತಸದಿಂದ ಎದುರ್ಗೊಂಡು ಮಮತೆಯಿಂದ ಅಪ್ಪಿ, ಭಾವನನ್ನೂ ಸತಿಸುತರನ್ನೂ ತನ್ನ ಗುಡಾರದಲ್ಲಿ ಶೇರಿಸಿ ಕೊಂಡನು. ಯೆಥ್ರೋನನು ಅನ್ಯ ಜನರ ಎಲ್ಲಾ ದೇವರುಗಳಿಗಿಂತ ದೊಡ್ಡವನಾದ ಯೆಹೋವನನ್ನು ಸ್ತುತಿಸಿ (ವ. ೧೧), ಸತ್ಯ ದೇವರಿಗೆ ಹೋಮವನ್ನರ್ಪಿಸಿ, ಆರೋನನು ಇಸ್ರಯೇಲನವರ ಹಿರಿಯರೆಲ್ಲರು ಇವರ ಸಂಗಡ, ಅವರಿಗೆ ಪ್ರಾಪ್ತವಾದ ರಕ್ಷಣೆಗಾಗಿ, ಕೃತಜ್ಞತಾಬಲಿಗಳನ್ನಿಕ್ಕಿ, ಬಲಿಭೋಜನ ಮಾಡಿದನು (ವ. ೧೨). ಮಾರಣೆ ದಿನದಲ್ಲಿ ಅವನು ಮೋಶೆ ಇಡೀ ದಿನ ಜನರೆಲ್ಲರಲ್ಲಿ ನ್ಯಾಯಾಧಿಪತಿಯ ಉದ್ಯೋಗ ನಡಿಸುವದನ್ನು ನೋಡಿ, ಈ ಪ್ರಕಾರವಾಗಿ ಮೋಶೆ ತಾನೇ ಜನರಿಗೆಲ್ಲಾ ನ್ಯಾಯತೀರಿಸಲೆಸಗಿರೆ, ಇವನಿಗೆ ಬಲವು, ಅವರಿಗೆ ತಾಳ್ಮೆಯು ಸಾಲದೆಂದು, ಗ್ರಹಿಸಿ ಕೊಂಡು, ಅಳಿಯನಿಗೆ ಬುದ್ಧಿ ಹೇಳಿದ್ದೇನಂದರೆ —

ವ. ೧೯.— — ನೀನು ಜನಾಂಗಕ್ಕಾಗಿ ದೇವರ ಎದುರಿನಲ್ಲಿದ್ದು, ಕಾರ್ಯಗಳನ್ನು ದೇವರ ಬಳಿಗೆ ಬರ ಮಾಡು. ೨೦. ಅವರಿಗೆ ಕಟ್ಟಳೆಗಳನ್ನೂ ನೇಮಗಳನ್ನೂ ಕಲಿಸಿ, ಅವರಿಗೆ ಹೋಗ ತಕ್ಕ ಮಾರ್ಗವನ್ನು ತಿಳಿಸಿ, ಅವರು ಮಾಡ ತಕ್ಕ ಕ್ರಿಯೆಗಳನ್ನು ಅವರಿಗೆ ತಿಳಿಸ ಬೇಕು. ೨೧. ಮತ್ತು ನೀನು ಘಟ್ಟಿಗರನ್ನೂ, ದೇವಭಕ್ತರನ್ನೂ, ಲೋಭದ್ವೇಷಿಗಳನ್ನೂ ನೋಡಿ ಕೊಂಡು, ಅವರನ್ನು ಸಹಸ್ರಾಧಿಪತಿಗಳಾಗಿಯೂ, ಶತಾಧಿಪತಿಗಳಾಗಿಯೂ, ಪಂಚಾಶತಧಿಪತಿಗಳಾಗಿಯೂ, ದಶಾಧಿಪತಿಗಳಾಗಿಯೂ, ಅವರ ಮೇಲೆ ಇಡು. ೨೨. ಅವರು ಜನಾಂಗಕ್ಕೆ ಎಲ್ಲಾ ಕಾಲದಲ್ಲಿ ನ್ಯಾಯತೀರಿಸಲಿ, ಹ್ಯಾಗಂದರೆ ದೊಡ್ಡ ಕಾರ್ಯವನ್ನೆಲ್ಲಾ ನಿನ್ನ ಬಳಿಗೆ ಬರ ಮಾಡಲಿ. ಸಣ್ಣ ಕಾರ್ಯವನ್ನೆಲ್ಲಾ ತಾವೇ ತೀರಿಸಲಿ. ಅವರು ನಿನ್ನ ಕೂಡಾ ಹೊತ್ತು ಕೊಳ್ಳುವದರಿಂದ, ನಿನಗೆ ಹಗುರ ಮಾಡು. ೨೩. ಈ ಮಾತನ್ನು ನೀನು ಕೈಕೊಳ್ಳುವಿಯಾದರೆ, ದೇವರು ನಿನಗೆ ಅಪ್ಪಣೆ ಕೊಡಲು, ನೀನು ನಿಲ್ಲಲಾಪೆ, ಮತ್ತು ಈ ಜನಾಂಗವೆಲ್ಲಾ ತನ್ನ ಸ್ಥಳಕ್ಕೆ ಕ್ಷೇಮವಾಗಿ ಬರುವದು.

ಯೆಥ್ರೋನನು ಹೇಳಿದ ಒಳ್ಳೆ ಬುದ್ಧಿಗೆ ಮೋಶೆ ಒಪ್ಪಿ ಕೊಂಡು, ಘನವಾದ ವ್ಯವಹಾರಗಳನ್ನು ತಾನು ತೀರಿಸ ಬೇಕೆಂದೂ, ಅಲ್ಪವಾದ ಕಾರ್ಯಗಳನ್ನು ತಾನು ಇಟ್ಟ ನ್ಯಾಯಪತಿಗಳು ಬಗೆಹರಿಸ ಬೇಕೆಂದೂ, ನಿರ್ಣಯ ಮಾಡಿದನು. ಬಳಿಕ ಯೆಥ್ರೋನನು ತನ್ನ ಶೀಮೆಗೆ ತಿರುಗಿ ಕೊಂಡನು. ಈ ಕಥೆಯಲ್ಲಿ ಒಂದು ವಿಶೇಷವೇನೆಂದರೆ: ದೇವರು ತಾನೆ ತನ್ನ ಪ್ರಜೆಯನ್ನು ನಡಿಸುವವನಾಗಿ ಅವರ ಮಧ್ಯದಲ್ಲಿದ್ದರೂ, ತಾನೆ ಮನುಷ್ಯರಲ್ಲಿ ನೆಟ್ಟ ನ್ಯಾಯವಾದ ಮಾನುಷ ಬುದ್ಧಿಗೆ ಪ್ರಯೋಜನವಿಲ್ಲದ ಹಾಗೆ ಮಾಡುವದಿಲ್ಲ. ಯೆಥ್ರೋನನು ಹೇಳಿದ ಸ್ವಸ್ಥ ಬುದ್ಧಿಯ ಮಾತನ್ನು ನಡಿಸುವದಕ್ಕೆ ಯೆಹೋವನ ಆಶೀರ್ವಾದವು ಶಿಕ್ಕಿತು. ಈ ಪ್ರಕಾರ ದೇವರು ಕೊಟ್ಟ ಬುದ್ಧಿಯಿಂದ ಪವಿತ್ರವಾದ ಕಾರ್ಯಗಳನ್ನು ಶಕ್ತನಾದ ಮನುಷ್ಯನು ಯೆಹೋವನ ಹೆಸರಿನಲ್ಲಿ ನಡಿಸುತ್ತಿರುವಾಗ್ಯೆ, ಯೆಹೋವನು ಆಶೀರ್ವಾದವನ್ನು ಪಡಕೊಳ್ಳುತ್ತಾನೆ.

ಹೊರಡೋಣ. ೧೯, ೧—೮.

ಇಸ್ರಯೇಲನವರು ಸೀನಯಿಯ ಬಳಿಯಲ್ಲಿದ್ದದ್ದು. ಹೊರ. ಸ. ೧೯—ಲೇವಿ. ಸ. ೨೭.

ಅವರು ಸೀನಯಿಗೆ ಬಂದದ್ದು. ನೇಮಧಾನದ ಜೋಡಣೆ. ಸಂಧಿ ೧೯.

ವ. ೧. ಇಸ್ರಯೇಲನ ಮಕ್ಕಳು ಮಿಶ್ರ ದೇಶದಿಂದ ಹೊರಟ ಮೂರನೆ ತಿಂಗಳಲ್ಲಿ,
ಆ ದಿವಸದಲ್ಲಿಯೇ[೧] ಸೀನಯಿ ಅರಣ್ಯಕ್ಕೆ ಬಂದರು. ೨. — — ಇಸ್ರಯೇಲನವರು ಅ
ಲ್ಲಿ ಬೆಟ್ಟಕ್ಕೆದುರಾಗಿ[೨] ಇಳುಕೊಂಡರು. ೩. ಮೋಶೆ ದೇವರ ಬಳಿಗೆ ಏರಿ ಹೋದಾಗ,
ಯೆಹೋವನು ಬೆಟ್ಟದ[೩] ಕಡೆಯಿಂದ ಅವನಿಗೆ ಕೂಗಿ ಹೇಳಿದ್ದು: ಹೀಗೆ ಯಾಕೋಬನ
ಮನೆಗೆ ಹೇಳಿ, ಇಸ್ರಯೇಲನ ಮಕ್ಕಳಿಗೆ ತಿಳಿಸು. ೪. ನಾನು ಮಿಶ್ರದವರಿಗೆ ಮಾಡಿದ್ದ
ನ್ನೂ, ನಿಮ್ಮನ್ನು ಹದ್ದಿನ ರೆಕ್ಕೆಗಳ[೪] ಮೇಲೆ ಎತ್ತಿ, ನನ್ನ ಬಳಿಗೆ ಬರಲೀಸಿದ್ದನ್ನೂ, ನೀ
ವು ನೋಡಿದ್ಧೀರಿ. ೫. ಈಗ, ನೀವು ನನ್ನ ಶಬ್ದವನ್ನು ಕೇಳೇ ಕೇಳಿದರೆ, ನನ್ನ ಒಡಂಬಡಿ
ಕೆಯನ್ನೂ ಕೈಕೊಂಡರೆ, ಎಲ್ಲಾ ಜನಾಂಗಗಳಲ್ಲಿ ನನಗೆ ದುಡುಮೆಯಾಗಿರುವಿರಿ. ಯಾ
ಕೆಂದರೆ ಭೂಮಿ ಎಲ್ಲಾ ನನ್ನದು[೫]. ೬. ನೀವು ನನಗೆ ಯಾಜಕರಾಜ್ಯವೂ[೬] ಪವಿತ್ರ
ಪ್ರಜೆಯೂ ಆಗಿರುವಿರಿ. ಇವೇ ನೀನು ಇಸ್ರಯೇಲನ ಮಕ್ಕಳಿಗೆ ಹೇಳ ಬೇಕಾದ ಮಾ
ತುಗಳು. ೭. ಮತ್ತು ಮೋಶೆ ಬಂದು, ಜನಾಂಗದ ಹಿರಿಯರನ್ನು ಕರೆದು, ಯೆಹೋವ
ನು ತನಗೆ ಬೆಸಸಿದ ಮಾತುಗಳನ್ನೆಲ್ಲಾ ಅವರ ಮುಂದೆ ಇಟ್ಟನು. ೮. ಆಗ ಜನರೆಲ್ಲರು
ಒಟ್ಟಾಗಿ ಮಾರ್ನುಡಿದು, ಯೆಹೋವನು ಹೇಳಿದ್ದನ್ನೆಲ್ಲಾ ಮಾಡುತ್ತೇವೆಂದು[೭], ಹೇಳ
ಲು, ಮೋಶೆ ಜನಾಂಗದ ಮಾತುಗಳನ್ನು ಯೆಹೋವನ ಬಳಿಗೆ ತಿರಿಗಿ ತಂದನು.— —

೧. ಪ್ರಯಾಣದ ಮೂರನೆ ತಿಂಗಳಿನ ಮೊದಲಿನೆ ದಿನದಲ್ಲಿ ಇಲ್ಲಿ ಬರೆದದ್ದು ಸಂಭವಿಸಿತು, ಇಸ್ರಯೇಲನವರು ಸೀನಯಿ ಬೆಟ್ಟದ ಬಳಿಯಲ್ಲಿ ಕಳೆದ ಕಾಲದ ಚರಿತ್ರವು ಇಲ್ಲಿ ತೊಡಗಿ, ಅಂಕೆ. ೧೦, ೧೧ರಲ್ಲಿ ಮುಗಿಯುವದು. ಈ ಕಾಲವು ೧೧ ತಿಂಗಳು ೨೦ ದಿವಸ ಹಿಡಿಯುವದು. ಅರಣ್ಯಸಂಚಾರದ ಮೊದಲನೆ ವರ್ಷದ ಕಥೆಯು ಹೊರ. ೪೦, ೧೭ರಲ್ಲಿ ತೀರುವದು. ಎರಡನೆ ವರ್ಷದ ಆರಂಭದಲ್ಲಿಯೇ ಸಾಕ್ಷಿಗುಡಾರವು ಕಟ್ಟಿಸಿ ಕೊಳ್ಳೋಣವಾಯಿತು.

೨. ನೇಮಧಾನ ಸ್ಥಳದ ವಿವರವೇನಂದರೆ: ಸೀನಯಿ ಘಟ್ಟಗಳ ಒಟ್ಟಿಲದಲ್ಲಿ ಉತ್ತರಪಶ್ಚಿಮದಿಂದ ದಕ್ಷಿಣಪೂರ್ವಕ್ಕೆ ಹೋಗುವ ಬಲವಾದ ಮೂರು ದೊಡ್ಡ ಬೆಟ್ಟಗಳವೆ; ಅವುಗಳ ಹೆಸರುಗಳು ಯಾವವೆಂದರೆ: ಹೋರೆಬ್, ಜೆಬೆಲ್ ಎದ್ ದೈರ್, ಜೆಬೆಲ್ ಎಲ್ ಹೋಮ್). ಇವುಗಳಲ್ಲಿ ಹೋರೆಬ್ ಮಧ್ಯಮವಾದದ್ದು. ಅದಕ್ಕೆ ಪಡುವಲ್ಲಿ ಹೋಮ್ರುಗಿರಿ. ಮೂಡಣದಲ್ಲಿ ದೈರಗಿರಿ ಅದೆ. ಈ ಬೆಟ್ಟಗಳ ಮೊತ್ತಕ್ಕೆ ಬಡಗ ಕಡೆಯಲ್ಲಿ ಸಮುದ್ರದ ಮೇಲೆ ೪೦೦೦ ಅಡಿ ಎತ್ತರವಾದ ಎರ್ ರಾಹಾ ಎಂಬ ವಿಸ್ತಾರವಾದ ಬೈಲು ಉಂಟು. ಬಡಗ ಮೂಡಣ ದೆಶೆಯಲ್ಲಿ ವಾದಿ ಎಸ್ ಶೈಖ್ ಎಂಬ ಅಗಲವಾದ ತಗ್ಗು ಅದಕ್ಕೆ ಶೇರುತ್ತದೆ. ಮೇಲೆ ಬರದ ಮೂರು ಬೆಟ್ಟಗಳನ್ನು ವಿಭಾಗಿಸುವ ಇಕ್ಕಟ್ಟಾದ ಎರಡು ತಗ್ಗುಗಳು ಸಹ ಅದಕ್ಕೆ ಕೂಡುತ್ತವೆ. ವಾದಿ ಎಲ್ ಲೆಜ್ಜಾ ಎಂಬ ಪಡುವಣದು ಅರ್ಧದ್ವೀಪದ ಎಲ್ಲಾ ಬೆಟ್ಟಗಳಲ್ಲಿ ಎತ್ತರವಾದಂಥ (೮೦೦೦ ಅಡಿ) ಹೋಮ್ರುಗಿರಿಯ ತೆಂಕಣ ಭಾಗವಾದಂಥ ಕಥರೀನ ಬೆಟ್ಟಕ್ಕೆ ತಗಲಿ ಮುಗಿಯುತ್ತದೆ. ಮೂಡಣ ಕಡೆಯ ಎರಡನೆ ತಗ್ಗಿಗೆ ವಾದಿ ಶುವೈಬ್ ಎಂಬ ಹೆಸರದೆ. ಇದರಲ್ಲಿ ಆತಿಥ್ಯ ಪ್ರೀತಿಯ ಆಚಾರದಿಂದ ಹೆಸರ್ಗೊಂಡ ಕಥರೀನ ಮಠವುಂಟು. ಈ

ಹೊರಡೋಣ. ೧೯, ೧—೮.

ತಗ್ಗು ಸಹ ತೆಂಕಣ ದೆಶೆಯಲ್ಲಿ ಬೈಲಾಗಿರದೆ, ಹೋರೆಬ್ ಬೆಟ್ಟವನ್ನು ತೆಂಕಣದಲ್ಲಿ ಅರ್ಧಚಂದ್ರಾಕಾರವಾಗಿ ಸುತ್ತುವ ಸೆಬಾಯ್ನೆ ಎಂಬ ವಿಸ್ತಾರವಾದ ದೊಡ್ಡ ಬೈಲಿಗೆ ಗೋಡೆಯೋಪಾದಿಯಾದ ಒಂದು ಗುಡ್ಡದಿಂದ ವಿಂಗಡವಾಗಿದೆ. ಸೆಬಾಯ್ನೆ ಎಂಬ ಬೈಲಿಗೆ ಹೋಗ ಬೇಕಾದರೆ, ವಾದಿ ಎಸ್ ಶೈಖ್ ಎಂಬ ತಗ್ಗಿಗೂ ಎರ್ ರಾಹಾ ಎಂಬ ಬೈಲಿಗೂ ಸಂಬಂಧವಾಗಿದ್ದು, ದೈರ್‌ಗಿರಿಯ ಮೂಡಣ ತೆಂಕಣ ದೆಶೆಗಳನ್ನು ಸುತ್ತಿ, ತೆಂಕಣ ಬೈಲಿಗೆ ಶೇರುವ ವಾದಿ ಎಸ್ ಸೆಬಾಯ್ನೆ ಎಂಬ ತಗ್ಗಿನ ಹೊರ್ತು, ಸರಾಳವಾದ ಹಾದಿ ದೊರಕುವದಿಲ್ಲ.— ಹೋರೆಬ್ ಬೆಟ್ಟವು ಎರ್ ರಾಹಾ ಎಂಬ ಬೈಲಿನ ಬಡಗಿನಲ್ಲಿ ೫೫೦೦ ಅಡಿ ಸಮುದ್ರಕ್ಕೆ ಎತ್ತರವಾದ ರಾಸ್ ಸೆಫ್ಸಾಫೆ ಎಂದನ್ನಿಸುವ ನೆಟ್ಟಗೆ ೧೫೦೦ ಅಡಿಗೆ ಏರುವ, ಉದ್ದ ಗೀಟಿಗೆ ಸರಿಯಾದ ಗೋಡೆಯಂತೆ ಕಾಣಿಸುತ್ತದೆ. ಈ ಸ್ಥಳ ಮೊದಲ್ಗೊಂಡು ಹೋರೆಬ್ ಬೆಟ್ಟದ ಸಾಲು ತೆಂಕಣ ದೆಶೆಗೆ ಹೆಚ್ಚೆಚ್ಚಾಗಿ ಏರುತ್ತಾ ಜೆಬೆಲ್‌ಮೂಸಾ ಎಂಬ ಮೋಶೆಯ ಗಿರಿಯನಿಸುವ ತೆಂಕಣ ಕೊನೆಯಲ್ಲಿ ೭೦೦೦ ಫುಟ ಎತ್ತರಕ್ಕೆ ಮುಟ್ಟಿದ್ದಲ್ಲಿ ೨೦೦೦ ಫುಟ ಪ್ರಪಾತವಾಗಿ ಇಳಿಯುತ್ತದೆ. ಇದರ ಅಡಿಯಲ್ಲಿರುವ ಹರಳು ಗುಡ್ಡಗಳ ಸಾಲಿನ ತೆಂಕಣದಲ್ಲಿ ಸೆಬಾಯ್ನೆ ಎಂಬ ದೊಡ್ಡ ಬೈಲು ಅದೆ.—ಈ ಸ್ಥಳವರ್ಣನೆಯ ಪ್ರಕಾರ ನೇಮಧಾನವು ಹ್ಯಾಗೆ ಆಯಿತೆಂದರೆ: ಇಸ್ರಯೇಲನವರ ದಂಡು ಶೈಖೆಂಬ ತಗ್ಗು ಕೂಡುವ ಎರ್ ರಾಹಾ ಎಂಬ ಬೈಲಿನಲ್ಲಿ ಇಳುಕೊಂಡಿತು. ಇಲ್ಲಿಂದ ಮೋಶೆಯು ಜನರನ್ನು ವಾದಿ ಸೆಬಾಯ್ನೆಯ ಮಾರ್ಗವಾಗಿ ಸೆಬಾಯ್ನೆ ಬೈಲಿಗೆ ಕರಕೊಂಡು ಹೋದನು. ಜೆಬೆಲ್‌ಮೂಸಾ ಎಂಬ ಬೆಟ್ಟದ ಮೇಲೆ ಯೆಹೋವನು ಬೆಂಕಿಯಿಂದ ಇಳಿದು ಬಂದನು. ಅದರ ಅಡಿಯನ್ನು ಅರ್ಧಚಂದ್ರಾಕಾರವಾಗಿ ಸುತ್ತುವ ಬೈಲಿನಲ್ಲಿ ಜನರು ನಿಂತು, ಬೆಟ್ಟವು ಮಹೋನ್ನತನಾದ ದೇವರ ಮಹಿಮೆಯುಳ್ಳ ಪೀಠದಂತೆ ಉರಿಯುತ್ತಾ ಹೊಗೆಯುತ್ತಾ ಇರುವದನ್ನು ಕಂಡಾಗ, ವಿಸ್ಮಿತರಾಗಿ ಓಡಿ ಹೋಗಿ, ಎರ್‌ರಾಹಾ ಎಂಬ ಬೈಲಿಗೆ ತಿರುಗಿ ಕೊಂಡರು. ಅಲ್ಲಿದ್ದು, ನೇಮಧಾನದ ಸ್ಥಳವನ್ನು ನೋಡಲಾರದಿದ್ದರು; ಯಾಕಂದರೆ ಮೋಶೆಯ ಗಿರಿಗೂ ರಾಹಾ ಎಂಬ ಬೈಲಿಗೂ ಹೋರೆಬ್ ಬೆಟ್ಟದ ಉದ್ದವಾದ ಬೆನ್ನು ನಡುವೆ ಶೇರುವದು.

೩. ಹೋರೆಬಿಗಿರುವ ಕೆಲವು ಕೂಟಗಳಲ್ಲಿ ಒಂದರ ಮೇಲೆ ಮೇಘಸ್ತಂಭವು ಇಳುಕೊಂಡಿರಲಾಗಿ, ಯೆಹೋವನು ಬೆಟ್ಟವನ್ನೇರಿ ಬಂದ ಮೋಶೆಗೆ ಕೂಗಿ ಮಾತಾಡಿದನು.

೪. ತನ್ನ ಪ್ರಜೆಯನ್ನು ಅಕ್ಕರೆಯಿಂದ ಆರೈಕೆ ಮಾಡುವ ದೇವರ ತ್ರಾಣವನ್ನು ಸೂಚಿಸುವ ಈ ಉಪಮೆಯು ದ್ವಿತಿ. ೩೨, ೧೧ರಲ್ಲಿಯೂ ಪ್ರಯೋಗವಾಗಿದೆ.

೫. ಸಮಸ್ತ ಲೋಕವು ದೇವರ ಒಡವೆ. ಎಲ್ಲಾ ಜನಾಂಗಗಳಿಗೆ ಒಡೆಯನಾದ ಸ್ವಂತವಾದದ್ದನ್ನು ಮನಸ್ಸು ಬಂದಂತೆ ಬಳಸಿ ಕೊಳ್ಳುವ ಅಧಿಕಾರವುಳ್ಳ ದೇವರು ಎಲ್ಲಾ ಜನಾಂಗಗಳೊಳಗಿಂದ ಇಸ್ರಯೇಲನವರನ್ನು ಸ್ವಪ್ರಜೆಯೆಂದು ಆದು ಕೊಂಡದ್ದು ನ್ಯಾಯವಾಗಿದೆ. ಆದರೆ ಉಳಿದ ಜನಾಂಗಗಳಿಗೆಲ್ಲಾ ಆಶೀರ್ವಾದ ಕರಣವಾಗೋಣ ಇಸ್ರಯೇಲನವರ ಆಯಿಕೆಯ ಉದಿಶ್ಯವಾಗಿತ್ತು.

೬. ಈ ಮಾತಿನಿಂದ ಯೆಹೋವನು ತನ್ನನ್ನು ರಾಜನಾಗಿ ಪ್ರಕಟಿಸಿ ಕೊಂಡು, ದೇವರಾಜ್ಯವನ್ನು ಸ್ಥಾಪಿಸುತ್ತಾನೆ. ಇಸ್ರಯೇಲನವರು ಬೇರೆ ಜನಾಂಗಗಳಿಗೆ ಪ್ರತ್ಯೇಕವಾದಂಥ, ಸತ್ಯ ದೇವರ ಸೇವೆಗಾಗಿ ಆಯಿಕೆಯಾದಂಥ, ಅವನನ್ನು ಆರಾಧಿಸುವಂಥ, ಯಾಜಕಜನಾಂಗವಾಗಿದ್ದು, ಅವನ ಕಟ್ಟುಕಟ್ಟಳೆಗಳು ಮುಂತಾದ ಪ್ರಕಟಣೆಗಳನ್ನು ಕಾಪಾಡಿ, ಲೋಕದಲ್ಲಿ ಸಾರುವ ಉದ್ಯೋಗಕ್ಕೆ ನೇಮಕವಾಗಿದ್ದರು. ೧ ಪೇತ್ರ. ೨, ೯ಲ್ಲಿ ಕ್ರೈಸ್ತ ಪ್ರಜೆಯು ಈ ಪದವಿಯನ್ನು ಹೊಂದುತ್ತದೆ.

೭. ಈ ಮಾತಿನಿಂದ ಇಸ್ರಯೇಲನವರು ದೇವರ ಕೃಪೆಯ ಒಡಂಬಡಿಕೆಯಲ್ಲಿ ಶೇರಿ, ತಮ್ಮ ಹಿರಿಯರಿಗೆ ಇದ್ದ ಒಡಂಬಡಿಕೆಯನ್ನು ನೂತನ ಪಡಿಸಿದರು. ನೇಮಧಾನದ ಆರಂಭದಲ್ಲಿ ಅವರು ಮೊದಲಾಗಿ ಕೊಟ್ಟ ಮಾತನ್ನು ಅಂತ್ಯದಲ್ಲಿ ವಿವರವಾಗಿ ತಿರಿಗಿ ಕೊಟ್ಟರೆಂದು ಸ. ೨೪, ೩ರಲ್ಲಿ ಬರೆದದೆ.

ವ. ೧೦. ಆಗ ಯೆಹೋವನು ಮೋಶೆಗೆ ಹೇಳಿದ್ದು: ಪ್ರಜೆಯ ಬಳಿಗೆ ಹೋಗಿ[೧], ಇಂದೂ ನಾಳೆಯೂ ಅವರನ್ನು ಪರಿಶುದ್ಧ ಮಾಡು. ಅವರು ತಮ್ಮ ಉಡಿಗೆಗಳನ್ನು ಮಡಿ ಮಾಡಿ[೨], ಮೂರನೆ ದಿವಸಕ್ಕೆ ಸಿದ್ಧರಾಗಿರಲಿ. ೧೧. ಯಾಕಂದರೆ ಮೂರನೆ ದಿನದಲ್ಲಿ ಯೆಹೋವನು ಸಮಸ್ತ ಪ್ರಜೆಗೆ ಕಣ್ಣಾರೆ ಬೆಟ್ಟಕ್ಕೆ ಇಳಿದು ಬರುವನು. ೧೨. ಮತ್ತು ನೀನು ಪ್ರಜೆಗೆ ಮೇರೆಯನ್ನು ಸುತ್ತಲಾಗಿ ಕಟ್ಟಿ[೩], ಅವರಿಗೆ ಹೇಳ ಬೇಕಾದದ್ದೇನಂದರೆ: ಬೆಟ್ಟವನ್ನೇರದ ಹಾಗೆಯೂ, ಅದರ ಅಂಚು ಮುಟ್ಟದ ಹಾಗೆಯೂ, ಕಾಪಾಡಿ ಕೊಳ್ಳಿರಿ. ಬೆಟ್ಟವನ್ನು ಮುಟ್ಟುವವರೆಲ್ಲಾ ಸತ್ತೇ ಸಾಯುವರು[೪]. ೧೩. ಯಾವ ಕೈಯಾದರೂ ಅದನ್ನು ಮುಟ್ಟ ಬಾರದು; ಮುಟ್ಟಿದ ಪಶುವಾಗಲಿ ಮನುಷ್ಯನಾಗಲಿ ಬದುಕದೆ ಕಲ್ಲೆಸೆಯಲ್ಪಡ ಬೇಕು, ಇಲ್ಲವೆ ತಿವಿಯಲ್ಪಡ ಬೇಕು. ತುತೂರಿ ಉದ್ದವಾಗಿ ಊದಲವರು[೫] ಬೆಟ್ಟದ ಕಡೆಗೆ ಏರ ಬೇಕು. ೧೪. ಆಗ ಮೋಶೆ ಬೆಟ್ಟದಿಂದ ಪ್ರಜೆಯ ಬಳಿಗೆ ಇಳಿದು ಬಂದು, ಪ್ರಜೆಯನ್ನು ಪರಿಶುದ್ಧ ಮಾಡಿದನು. ಅವರು ತಮ್ಮ ಉಡಿಗೆಗಳನ್ನು ತೊಳ ಕೊಂಡಿರಲಾಗಿ, ೧೫. ಅವನು ಪ್ರಜೆಗೆ ಹೇಳಿದ್ದು: ಮೂರನೆ ದಿನಕ್ಕೆ ಸಿದ್ಧರಾಗಿರ್‍ರಿ; ಹೆಂಡತಿಯ ಹತ್ತರ ಶೇರದಿರ್‍ರಿ. ೧೬. ಮೂರನೆ ದಿನದಲ್ಲಿ ಹೊತ್ತಾರೆ ಬೆಟ್ಟದ ಮೇಲೆ ಗುಡುಗುಗಳೂ ಮಿಂಚುಗಳೂ ಭಾರವಾದ ಮೇಘವೂ ಉಂಟಾಗಿ, ತುತೂರಿಯ ಶಬ್ದವು ಬಹು ಘಟ್ಟಿಯಾಗಲು, ದಂಡಿನಲ್ಲಿದ್ದ ಪ್ರಜೆ ಎಲ್ಲಾ ಹೆದರಿತು. ೧೭. ಆಗ ಮೋಶೆ ಪ್ರಜೆಯನ್ನು ದಂಡಿನೊಳಗಿಂದ ದೇವರೆದುರಿಗೆ ಬರಲೀಸಿ, ಅವರು ಬೆಟ್ಟದ ಅಡಿಯಲ್ಲಿ ನಿಂತು ಕೊಂಡರು. ೧೮. ಸೀನಯಿ ಬೆಟ್ಟವೆಲ್ಲಾ ಯೆಹೋವನು ಅಗ್ನಿಯಲ್ಲಿ ಅದರ ಮೇಲೆ ಇಳಿದದರಿಂದ ಹೊಗೆಯುವದು. ಅದರ ಹೊಗೆ ಒಲೆಯ ಹೊಗೆಯಂತೆ ಏಳುವದು[೬]. ಬೆಟ್ಟವೆಲ್ಲಾ ಉರೆ ಅದರುವದು. ೧೯. ತುತೂರಿಯ ಶಬ್ದವು ಮಿಗೆ ಘಟ್ಟಿಯಾಗುತ್ತಾ ಇರುವದು. ಹೀಗಾಗಿ ಮೋಶೆ ನುಡಿದನು, ಮತ್ತು ದೇವರು ಅವನಿಗೆ ಶಬ್ದದಿಂದ ಉತ್ತರ ಕೊಟ್ಟನು[೭].

೧. ಈ ಸಂಧಿಯ ಪ್ರಸ್ತಾವವು ನೇಮಧಾನದ ಪೀಠಿಕೆಯೋಪಾದಿಯಾಗಿದೆ. ಯೆಹೋವನು ಈ ರೀತಿಯಿಂದ ತನ್ನ ಆಪ್ತ ದಾಸನಾದ ಮೋಶೆಯನ್ನು ತನ್ನ ರಾಯಭಾರಿಯಾಗಿಯೂ ಮಧ್ಯವರ್ತಿಯಾಗಿಯೂ ಜನಾಂಗದ ಮುಂದೆ ಪ್ರಸಿದ್ಧಿ ಮಾಡಿ, ಪರಿಶುದ್ಧ ಉದ್ಯೋಗಕ್ಕಾಗಿ ಪ್ರತಿಷ್ಠಿಸಿದನು. ಇಸ್ರಯೇಲಿನವರೆಲ್ಲರು ದೇವರು ತಮಗೆ ಇಟ್ಟ ನಾಯಕನ ಮಹಿಮೆಯನ್ನು ತಿಳುಕೊಂಡು, ತಮಗೂ ಅವನಿಗೂ ಇರುವ ಹೆಚ್ಚು ಕಡಿಮೆಯನ್ನರಿತು, ಅವನಿಗೆ ಮನಃಪೂರ್ವಕವಾಗಿ ಒಳಗಾಗುವದು ಯುಕ್ತವಾಗಿತ್ತು.

೨. ಹೊರಗಣ ಶುದ್ಧೀಕರಣವು ಒಳಗಣ ಶುದ್ಧೀಕರಣದ ಸಾಮ್ಯವಾಗಿದೆ. ಪ್ರಾಣಶುದ್ಧೀಕರಣವು, ಪಾಪವಿಮೋಚನಾಬಲಿ ಬಲದಿಂದಲ್ಲದೆ, ಪ್ರಾರ್ಥನೆ ಸ್ವಾರ್ಥತ್ಯಾಗ ಇಂದ್ರಿಯನಿಗ್ರಹ ಮುಂತಾದ ಸಾಧನೆಗಳಿಂದ ಉಂಟಾಗುವದರಿಂದ, ದೇವರ ಮುಂದೆ ಪ್ರತಿಷ್ಠಿತನಾಗ ಬೇಕೆಂದಿರುವವನು ದೋಷವಿಲ್ಲದ ವಿಷಯಭೋಗವನ್ನು ಸಹಾ ಬಿಟ್ಟು ಬಿಡುವದು ಆಗ್ಯಾಗ್ಯೆ ಅವಶ್ಯವಾಗುತ್ತದೆ.

೩. ಮೋಶೆ ಬೆಟ್ಟವನ್ನೆಲ್ಲಾ ಸುತ್ತುವ ಬೇಲಿ ಕಟ್ಟಿಸಿದನೆಂದು, ನೆನಸ ಕೆಲಸವಿಲ್ಲ. ದಾಟಲಾಗದ ಗಡಿ

ಹೊರಡೋಣ. ೨೦, ೧—೧೮.

ಗೊತ್ತು ಮಾಡುವ ಯಾವದೊ ಒಂದು ಉಪಾಯವನ್ನು ದೊರಕಿಸಿ ಕೊಂಡನಷ್ಟೆ.

೪. ನೇಮವೂ, ಅದರಿಂದ ಪ್ರಕಟವಾಗುವ ದೇವರ ಪರಿಶುದ್ಧತ್ವವೂ, ಪಾಪಿಗೆ ವಿರೋಧವಾಗಿ ಇಷ್ಟು ಭಯಂಕರವಾಗಿವೆ.

೫. ಅವರು ಯಾರೆಂದರೆ: ಹದಿನೇಳನೆ ವಚನ ನೋಡಿದರೆ, ಈ ಸರ್ವನಾಮವು ಇಸ್ರಯೇಲನವರ ಜನಾಂಗವನ್ನು ಸೂಚಿಸುವಂತೆ ತೋರುವದು. ಕೆಲವು ವ್ಯಾಖ್ಯಾನಿಕರು ಅದು ಆರೋನ ಮುಂತಾದ ಹಿರಿಯರನ್ನು ಸೂಚಿಸುತ್ತದೆಂದೂ, ಇವರು ಯಾಜಕೋದ್ಯೋಗವು ಪ್ರತ್ಯೇಕವಾಗಿ ಸ್ಥಾಪಿತವಾಗುವದಕ್ಕಿಂತ ಮುಂಚಿನ ಕಾಲದಲ್ಲಿ ಒಂದು ಪ್ರಕಾರದ ಜನ್ಮಯಾಜಕರಾಗಿದ್ದರೆಂದೂ ಉಹಿಸ ಶಕ್ಯದ್ದೆಂದು ವಿವರಿಸುತ್ತಾರೆ.

೬. ಇದೀ ಬೆಟ್ಟವು ಉರಿಯುವ ಒಲೆಯಂತೆ ಹೊಗೆಯುತ್ತಿತ್ತು.

೭. ವ. ೨೦—೨೫. ದೇವರು ಇನ್ನೊಂದು ಸಾರಿ ಮೋಶೆ ಆರೋನರ ಹೊರ್ತು ಯಾರೂ ತನ್ನ ಬಳಿಗೆ ಬರ ಬಾರದೆಂದು, ಮೋಶೆಯ ಮುಖದಿಂದ ಅಪ್ಪಣೆ ಕೊಟ್ಟು, ತಾವು ಹೊಲೆಗಳಿಸಿದ ಪಾಪಿಗಳೆಂಬ ಅರುಹನ್ನೂ ತಮ್ಮನ್ನು ಕರೆದ ದೇವರು ಅತಿ ಪರಿಶುದ್ಧನೆಂಬ ತಿಳುವಿಕೆಯನ್ನೂ ಇಸ್ರಯೇಲನವರ ಹೃದಯಗಳಲ್ಲಿ ಹುಟ್ಟಿಸಲೆಸಗುತ್ತಾನೆ.

ಹತ್ತು ಕಟ್ಟಳೆಗಳು. ಸ. ೨೦, ೧—೧೮.

ದಶವಾಕ್ಯವೆಂಬ ಹತ್ತು ಕಟ್ಟಳೆಗಳನ್ನು ಯೆಹೋವನು ತಾನು ಆದು ಕೊಂಡ ಜನಾಂಗಕ್ಕೆ ಸೀನಯಿ ಬೆಟ್ಟದಲ್ಲಿಂದ ಗಂಭೀರ ರೀತಿಯಾಗಿ ತಿಳಿಸಿ, ಮೊದಲು ಬಾಯಿಂದ ಸಾರಿ, ಬಳಿಕ ಎರಡು ಕಲ್ಲಿನ ಹಲಿಗೆಗಳಲ್ಲಿ ಬರಿಸಿದನು. ಇಸ್ರಯೇಲನವರು ಸೀನಯಿ ಬೆಟ್ಟದ ಅಡಿಯಲ್ಲಿ ನಿಂತು, ಅದರಿ, ಕೇಳಿದ ಆಜ್ಞೆಗಳನ್ನು ಮರತು ಬಿಡದ ಹಾಗೆಯೂ, ಅವರಿಗೆ ಪ್ರಕಟವಾದ ನೇಮವು ಲೋಕದಲ್ಲಿ ಯುಗಯುಗಕ್ಕೆ ಭದ್ರವಾಗಿ ಉಳಿಯುವ ಹಾಗೆಯೂ, ದಶವಾಕ್ಯವು ಕಿವಿಗೆ ಕೇಳಿಸುವದಲ್ಲದೆ ಶಿಲಾಶಾಸನದಲ್ಲಿಯೂ ಲಿಖಿತವಾಯಿತು. ಒಂದೊಂದು ಹಲಿಗೆಯಲ್ಲಿ ಎಷ್ಟು ಕಟ್ಟಳೆ ಬರೆಯಲಾಯಿತೆಂದು, ದೇವರ ವಾಕ್ಯದಲ್ಲಿ ಹೇಳಿರುವದಿಲ್ಲ. ದ್ವಿತಿ. ೪, ೧೩ರಲ್ಲಿ, ದೇವರು ಹತ್ತು ವಾಕ್ಯವೆಂಬ ತನ್ನ ಒಡಂಬಡಿಕೆಯನ್ನು — — ಎರಡು ಕಲ್ಲಿನ ಹಲಿಗೆಗಳ ಮೇಲೆ ಬರೆದನೆಂದು, ಓದುತ್ತೇವೆ ಅಷ್ಟೆ. ಹತ್ತು ಕಟ್ಟಳೆಗಳ ಅಭಿಪ್ರಾಯವನ್ನು ವಿಚಾರಿಸಲು, ಅವು ದೇವರ ಕಡೆಯ ಹಂಗು, ನೆರೆಯವನ ಕಡೆಯ ಹಂಗು, ಇವೆರಡನ್ನು ತಿಳಿಸುವಂಥವುಗಳೆಂದು, ಗ್ರಹಿಸುತ್ತೇವೆ. ಲುಥರನು ರಚಿಸಿದ ಎರಡು ಬಾಲಬೋಧನೆಗಳಲ್ಲಿ ಒಂದನೆ ಹಲಿಗೆಯಲ್ಲಿ ಮೂರೇ ಕಟ್ಟಳೆ, ಎರಡನೆಯಲ್ಲಿ ಏಳು ಕಟ್ಟಳೆ ಸೇರಿಯವೆ. ಹ್ಯಾಗಂದರೆ ಲುಥರನು ವಿಗ್ರಹವನ್ನೂ ಯಾವ ರೂಪವನ್ನೂ ನಿನಗೆ ಮಾಡಿ ಕೊಳ್ಳ ಬಾರದೆಂಬದನ್ನು ಒಂದನೆ ಕಟ್ಟಳೆಗೆ ಜೋಡಿಸಿ, ನಿನ್ನ ನೆರೆಯವನ ಮನೆಯನ್ನಾಶಿಸ ಬೇಡವೆಂದು, ತೊಡಗುವ ಹತ್ತನೆ ಕಟ್ಟಳೆಯನ್ನು ಎರಡಾಗಿ ವಿಭಾಗಿಸುತ್ತಾನೆ. ಕಲ್ವಿನೀಯ ಸಭೆಯವರ ಬಾಲಬೋಧನೆಗಳಲ್ಲಿ ಲುಥರೀಯ ಬಾಲಬೋಧನೆಗಳಲ್ಲಿ ವಿಂಗಡವಾದ ಒಂಬತ್ತನೆ ಹತ್ತನೆ ಕಟ್ಟಳೆಗಳು ಒಂದಾಗಿರುವದು. ಒಂದೊಂದು ಹಲಿಗೆಯಲ್ಲಿ ಐದೈದು ಕಟ್ಟಳೆ ಬರೆದಿತ್ತೆಂದು, ನೆನಸ ಸಹಜವಾದದ್ದು. ಒಂದನೆಯಲ್ಲಿ ಒಂದು ವೇಳೆ ದೇವರ ಕಡೆಯ ಹಂಗಿನ ಐದು ಮಾತು, ಎರಡನೆಯಲ್ಲಿ ನೆರೆಯವನ ಕಡೆಯ ಹಂಗಿನ ಐದು ಮಾತು ಲಿಖಿತವಾಗಿತ್ತು. ದೇವರ ಪ್ರತಿನಿಧಿಗಳಾದ ತಂದೆತಾಯಿಗಳನ್ನು ಸನ್ಮಾನಿಸು ಎಂಬ ಕಟ್ಟಳೆಯು ಎರಡನೆ ಹಲಿಗೆಗಲ್ಲ, ಒಂದನೆಗೆ ಯುಕ್ತವಾದದ್ದೆಂದು, ದೇವರ ವಾಕ್ಯದ ಬೋಧನೆಯನ್ನು ಗ್ರಹಿಸಿ ಕೊಂಡವರು ಒಪ್ಪಿ ಕೊಳ್ಳುವರು.

ದೇವರು ತನ್ನ ನೀತಿಯ ನೇಮವನ್ನು ಎಲ್ಲಾ ಮನುಷ್ಯರ ಹೃದಯಗಳಲ್ಲಿ ಬರೆದಿದ್ದಾನೆಂದು, ಪರಿಶುದ್ಧ ಬರಹವು ಸ್ಪಷ್ಟವಾಗಿ ಹೇಳುತ್ತದೆ. (ರೋಮ. ೨, ೧೪.) ಹ್ಯಾಗಂದರೆ: "ನೇಮವಿಲ್ಲದ ಜನಾಂಗಗಳವರು ಸ್ವಭಾವದಿಂದ ನೇಮದವುಗಳನ್ನು ಮಾಡಿದರೆ, ಅವರು ನೇಮವಿಲ್ಲದವರಾಗಿದ್ದು ತಮಗೆ ತಾವೇ

ನೇಮವಾಗಿದ್ದಾರೆ. ಅವರ ಮನಸ್ಸಾಕ್ಷಿ ಕೂಡ ಸಾಕ್ಷಿ ಕೊಟ್ಟು, ಅವರ ಯೋಚನೆಗಳು ಒಂದಕ್ಕೊಂದು ತಪ್ಪು ಹೊರಿಸುತ್ತಾ, ಇಲ್ಲವೆ ಪ್ರತ್ಯುತ್ತರ ಕೊಡುತ್ತಾ ಇರುವದರಿಂದ, ಅವರು ತಮ್ಮ ಹೃದಯಗಳಲ್ಲಿ ಬರೆದಿರುವ ನೇಮದ ಕ್ರಿಯೆಯನ್ನು ತೋರಿಸುತ್ತಾರೆ." ಒಬ್ಬೊಬ್ಬ ಮನುಷ್ಯನಲ್ಲಿ ಒಡಹುಟ್ಟಿದ ಮನಸ್ಸಾಕ್ಷಿಯು ಮನುಷ್ಯನ ಚಿತ್ತಕ್ಕೆ ಸಹ ಎದುರು ನಿಂತು, ಅವನ ಎಲ್ಲಾ ಕ್ರಿಯೆಗಳಿಗೆ ಸಾಕ್ಷಿಯೂ ನ್ಯಾಯಕರ್ತನೂ ಆಗಿ, ಅಂತರ್ಯದಲ್ಲಿ ತನ್ನನ್ನು ಪ್ರತಿಷ್ಠಿಸಿ ಕೊಂಡು, ದಿವ್ಯ ನೇಮದ ಚಿತ್ತಕ್ಕೆ ಒಪ್ಪಿತವಾಗಿ ನುಡಿಯುವದರಿಂದ, ದೇವರ ವಾಕ್ಯದಲ್ಲಿ ಅದು ಸಹಸಾಕ್ಷಿ ಎಂದು ಅನ್ನಿಸಿ ಕೊಳ್ಳುತ್ತದೆ. (ಸುನೈದೆಸಿಸ್=ಸಮವೇದನೆ). ಆದದರಿಂದ ಪಾಪಪುಣ್ಯವೆಂಬ ಭೇದವು ಎಲ್ಲಾ ಜನಾಂಗಗಳಿಗೆ ಗೊತ್ತಾಗಿದ್ದು, ಎಲ್ಲಾ ಧರ್ಮಶಾಸ್ತ್ರಗಳಲ್ಲಿ ಪ್ರಕಟವಾಗಿದೆ. ಇದಲ್ಲದೆ ಅನ್ಯ ಜನಾಂಗಗಳ ಪ್ರವಾದಿಗಳಾದ ಕವಿಗಳು (ತೀತ ಪತ್ರ. ೧, ೧೨) ನಾನಾ ಪದಗಳಲ್ಲಿ ದಶವಾಕ್ಯಕ್ಕೆ ಅನುಕೂಲವಾದ ನೇಮಬೋಧನೆಗಳನ್ನು ಹೇಳುತ್ತಾರೆ. ಇದಕ್ಕೆ ಉದಾಹರಣೆಯಾಗಿ ಪುರಂದರದಾಸನೆಂಬ ಕನ್ನಡ ಕವಿಯ ಕೆಲವು ಪದಗಳನ್ನು ಶೇರಿಸುತ್ತೇವೆ: ತಂದೆತಾಯಿಗಳ ವಂದಿಸಲೊಂದು ಸ್ನಾನ ಎಂಬದು ಐದನೆ ಕಟ್ಟಳೆಗೆ, ಪರಸತಿಯ ಬಯಸದಿರ್ದಡೊಂದು ಸ್ನಾನ ಎಂಬದು ಏಳನೇದಕ್ಕೆ, ಪರರೊಡವೆಯಪಹರಿಸದಡೊಂದು ಸ್ನಾನ ಎಂಬದು ಎಂಟನೇದಕ್ಕೆ, ಹುಸಿಯ ಬೊಗಳುವ ಒಬ್ಬ ಹುಚ್ಚ ಹೊಲೆಯ ಎಂಬದೂ, ಅನ್ಯಾಯ ನುಡಿಯದಿರಲು ಒಂದು ಸ್ನಾನ ಎಂಬದೂ, ಪರರ ನಿಂದಿಸದಿರುವದೊಂದು ಸ್ನಾನ ಎಂಬದೂ ಒಂಬತ್ತನೇದಕ್ಕೆ, ಅಕ್ಷಿದೋಷವ ಛೇದಿಸಲೊಂದು ಸ್ನಾನ ಎಂಬದು ಹತ್ತನೇದಕ್ಕೆ, ಸೂಳೆಯನು ಹೊಗುವವನು ಶುದ್ಧ ಹೊಲೆಯ ಎಂಬದೂ, ಲಂಡತನದಲ್ಲಿ ನಡವನು ಚಂಡಹೊಲೆಯ ಎಂಬದೂ, ಪರಸತಿಗೆ ಅಳುಕದವನು ಪಾಪಿಹೊಲೆಯ ಎಂಬದೂ ಏಳನೇದಕ್ಕೆ, ಮದ್ದಿಕ್ಕಿ ಕೊಲ್ಲುವಾತನೆ ಮಾರಿಹೊಲೆಯ ಎಂಬದೂ ಮೋಸದಲ್ಲಿ ಜೀವಕ್ಕೆ ಮುನಿದು ಕೆಡಿಸುವ ಹೊಲೆಯ ಎಂಬದೂ ಆರನೇದಕ್ಕೆ, ತಾಯಿತಂದೆಗಳನ್ನು ನೋಯಿಸಿದ ಅನ್ಯಾಯಿಗೆ ಮುಕ್ತಿಯು ದೊರಕೀತೇ? ಎಂಬದು ಐದನೇದಕ್ಕೆ, ಸಾಧುಸಜ್ಜನರನು ಬಾಧಿಸಿದ ಪರವಾದಿಗೆ ದೋಷವು ತಪ್ಪೀತೇ? ಎಂಬದು ಒಂಬತ್ತನೇದಕ್ಕೆ, ಕದ್ದು ಒಡಲ ತಾ ಹೊರೆವನ ಮನೆಯೊಳಗಿದುದು ಹೊಗದೇ ಇದ್ದೀತೇ? ಎಂಬದು ಎಂಟನೇದಕ್ಕೆ ಒಪ್ಪುತ್ತದೆಯಲ್ಲ?

ನೀತಿಯ ನೇಮವೆಂಬ ದಶವಾಕ್ಯವು ದೇವಾರಾಧನಾಧರ್ಮಕ್ಕೂ ರಾಜ್ಯಧರ್ಮಕ್ಕೂ ಬುಡವೂ ಬೇರೂ ಆಗಿದೆ. ಹ್ಯಾಗಂದರೆ, ನೀತಿಯ ನೇಮವು ಮೂಲವು, ಉಳಿದ ಕಟ್ಟುಕಟ್ಟಳೆಗಳು ಅದರಿಂದ ಬೆಳದ ಶಾಖೆಗಳು. ಹೀಗಿರಲಾಗಿ ತಾನು ನೇಮವನ್ನು ತೆಗದು ಹಾಕುವದಕ್ಕಲ್ಲ, ಪೂರೈಸುವದಕ್ಕಾಗಿಯೇ ಬಂದೆನೆಂದು, ಕರ್ತನು ಹೇಳುವಲ್ಲಿ ಆತನು ನೀತಿನೇಮವನ್ನು ಮಾತ್ರವಲ್ಲ, ಆಚಾರನೇಮವನ್ನೂ ರಾಜ್ಯನೇಮವನ್ನೂ ಸಹ ನೆರವೇರಿಸಿದ್ದಾನೆಂಬ ಅರ್ಥವಾಗುವದು. ಹ್ಯಾಗಂದರೆ, ಆತನು ಬೋಧಕನಾಗಿದ್ದು, ನೀತಿನೇಮವನ್ನು ಸಂಪೂರ್ಣವಾಗಿ ಕೈಕೊಂಡು ನಡಿಸಿ, ಅದರ ಅಭಿಪ್ರಾಯವನ್ನು ಸಂಪೂರ್ಣವಾಗಿ ತಿಳಿಸಿದ್ದಾನೆ; ಪ್ರಧಾನಯಾಜಕನಾಗಿದ್ದು, ತಾನು ಯಜ್ಞಪಶುವಾಗಿಯೂ ಯಜ್ಞಕರ್ತನಾಗಿಯೂ ತನ್ನನ್ನು ನಿತ್ಯ ಪಾಪಬಲಿಯಾಗಿ ಇತ್ತು, ಆಚಾರನೇಮವನ್ನು ಪೂರೈಸಿದ್ದಾನೆ; ಅರಸನಾಗಿದ್ದು, ತನ್ನ ಸಭೆಯನ್ನು ಸ್ಥಾಪಿಸಿ ಆಳಿ ಕೊಳ್ಳುವದರಿಂದ ರಾಜ್ಯನೇಮವನ್ನು ಈಡೇರಿಸಿದ್ದಾನೆ. ಮೂರು ವಿಧದ ನೇಮವು ಮನುಷ್ಯರನ್ನು ಕ್ರಿಸ್ತನ ಬಳಿಗೆ ಕೊಂಡು ಹೋಗುವ ಉಪಾಧ್ಯಾಯನಾಗಿತ್ತು. ಗಲ. ೩, ೨೪. ಹ್ಯಾಗಂದರೆ ನೇಮದಿಂದ ಮನುಷ್ಯರು ತಮ್ಮ ಪಾಪವನ್ನೂ ಪಾಪಫಲವಾದ ಶಾಪವನ್ನೂ ತಿಳುಕೊಂಡು (ರೋಮ. ೩. ೧೦), ರಕ್ಷಣ್ಯಾಶೆಯ ಹೊಂದಿ, ರಕ್ಷಣೆಗೆ ಆಯತರಾಗ ಬೇಕಾಗಿತ್ತು. ದೇವಾರಾಧನೆಯ ನೇಮವೂ ಮನುಷ್ಯರಲ್ಲಿ ಹುಟ್ಟಿದ ಪಾಪದ ತಿಳುವಿಕೆಯನ್ನು ಹೆಚ್ಚಿಸಿ, ಬರುವ ರಕ್ಷಣೆಯ ನೆರಳಾಗಿಯೂ ಮುಂಗುರ್ತಾಗಿಯೂ ಅದರ ಕ್ರಮವನ್ನು ಜಾಡೆಯಾಗಿ ಸೂಚಿಸಿ, ಅದಕ್ಕೆ ಮಾರ್ಗವನ್ನು ಸಿದ್ಧ ಮಾಡುತ್ತಾ ಇತ್ತು. ಬರುವ ವರಗಳನ್ನಲ್ಲ, ಬರುವ ವರಗಳ ನೆರಳನ್ನೇ ನೇಮವು ಪ್ರಕಟ ಮಾಡಿತು. ಇಬ್ರಿ. ೧೦, ೧. ಇನ್ನು ಯಾವನಾದರೂ ಅನ್ನಪಾನಗಳಲ್ಲಿಯಾ

ದರೂ ಹಬ್ಬ ಪಾಡ್ಯ ಸಬ್ಬತ್ತುಗಳಲ್ಲಿಯಾದರೂ ನಮಗೆ ನ್ಯಾಯ ತೀರಿಸದಿರಲಿ. ಇವು ಮುಂದಿನವುಗಳ ನೆರಳಾಗಿವೆ; ಆದರೆ ಶರೀರವು ಕ್ರಿಸ್ತನದು, (ಕೊಲೊ. ೨, ೧೬. ೧೭.) ನೇಮವು ಯೇಸು ಕ್ರಿಸ್ತನಲ್ಲಿ ಅನಾದಿಯಿಂದ ನೇಮಕವಾದ ಲೋಕರಕ್ಷಣೆಯ ನೆರಳಾಗಿದೆ.

ಮೊದಲನೆ ಕಟ್ಟಳೆಯು ನೇಮವನ್ನೆಲ್ಲಾ ಕೈಕೊಳ್ಳುವ ಸಾಧನವಾದ ದೇವರ ಮೇಲಣ ಪ್ರೀತಿಯನ್ನು, ಹತ್ತನೇದು ನೇಮವನ್ನೆಲ್ಲಾ ಮೀರುವ ಕಾರಣವಾದ ಸ್ವಾರ್ಥವನ್ನು ಸೂಚಿಸುತ್ತದೆ. ದೇವರ ಮೇಲಣ ಭಯಭಕ್ತಿಯೂ ನೆರೆಯವನ ಮೇಲಣ ಪ್ರೀತಿಯೂ ಉಳ್ಳವನು ನೇಮದ ಆಜ್ಞೆಗಳನ್ನೆಲ್ಲಾ ಕೈಕೊಂಡು ನಡಿಸದೆ ಹೋಗಲಾರನು. ಹತ್ತನೆ ಕಟ್ಟಳೆಯನ್ನು ಕೈಕೊಳ್ಳೋಣವಾದರೆ, ಪಾಪದ ಬುಗ್ಗೆ ಆರಿದ ಹಾಗಾಗುವದು. ಮೊದಲನೆ ಹಲಿಗೆಯ ಆಜ್ಞೆಗಳಲ್ಲಿ ಚೂಣಿ ಎರಡು ಆಜ್ಞೆಗಳು ಒಟ್ಟಿಗೆ ಸತ್ಯ ದೇವಾರಾಧನೆಯನ್ನು, ಮೂರನೇದು ನುಡಿಯಿಂದ ಅವನಿಗೆ ಸಲ್ಲಿಸ ತಕ್ಕ ವಿಧೇಯತ್ವವನ್ನು, ನಾಲ್ಕನೇದೂ ಐದನೇದೂ ನಡೆಯಿಂದ ಅವನಿಗೆ ಸಲ್ಲಿಸ ತಕ್ಕ ವಿಧೇಯತ್ವವನ್ನು ಬೋಧಿಸುತ್ತವೆ.

ಎರಡನೆ ಹಲಿಗೆಯ ಕಟ್ಟಳೆಗಳು ದೇವರ ಹೋಲಿಕೆಯಾದ ನೆರೆಯವನ ಕಡೆಯ ಹಂಗಿನ ಧರ್ಮವನ್ನು ಸೂಚಿಸುತ್ತವೆ. ಏನಂದರೆ, ೧. ನೆರೆಯವನ ಜೀವವನ್ನು, ೨. ಅವನ ಹೆಂಡತಿಯನ್ನು, ೩. ಅವನ ಬದುಕನ್ನು, ೪. ಹೆಸರುವಾಸಿಯನ್ನು, ೫. ದುರಾಶೆಯಿಂದಲಾದರೂ ಮುಟ್ಟಿ, ಅನ್ಯಾಯ ಮಾಡ ಸಲ್ಲದು ಎಂಬದು ಈ ಧರ್ಮದ ಸಾರಾಂಶವಾಗಿದೆ. ನೆರೆಯವನು ದೇವರ ಹೋಲಿಕೆಯಾಗಿರುವದರಿಂದ ಅವನಿಗೆ ಮಾಡಿದ ಅನ್ಯಾಯವು ದೇವರಿಗೆ ಮಾಡಿದ ಹಾಗಾಗಿದೆ. ದುಷ್ಕರ್ಮದಿಂದ ತೊಡಗಿ, ದುರಾಶೆಯಲ್ಲಿ ಮುಗಿಯುವ ಎರಡನೆ ಹಲಿಗೆಯ ಕಟ್ಟಳೆಗಳ ಕ್ರಮವನ್ನು ವಿಚಾರಿಸಿದರೆ, ತಿಳಿದು ಬರುವದೇನಂದರೆ: ಹೃದಯದಲ್ಲಿ ಸ್ಥಾನ ಹೊಂದಿರುವ ದುರಿಚ್ಛೆಯೂ ದುರಭಿಲಾಷೆಯೂ ಎಲ್ಲಾ ಪಾಪಕ್ರಿಯೆಯ ಬುಗ್ಗೆಯಾಗಿರುವದಲ್ಲದೆ, ತಾನೇ ಪಾಪವಾಗಿದೆ. ಅಷ್ಟೆಯಲ್ಲ, ಕ್ರಿಯೆಯು ಪಾಪದ ಅಭಿಲಾಷೆಯಿಂದ ಹುಟ್ಟಿ, ಅದಕ್ಕೆ ಯುಕ್ತವಾಗಿರುವದರಿಂದಲೇ ಪಾಪವಾಗಿರುತ್ತದೆ. ದೇವರ ಮುಂದೆ ಕೆಟ್ಟ ಅಭಿಲಾಷೆಯು ಕೆಟ್ಟ ಕ್ರಿಯೆಯ ಹಾಗೆಯೇ ಶಾಪಕ್ಕೂ ವಿನಾಶಕ್ಕೂ ಪಾತ್ರವಾಗಿದೆ. ಹೆಚ್ಚು ಕಡಿಮೆ ಏನಂದರೆ: ಕ್ರಿಯೆಯಾಗಿ ಹೋದ ಅಭಿಲಾಷೆಯು ಕ್ರಿಯೆಯಾಗಿ ಹೋಗದಂಥಾದ್ದಕ್ಕಿಂತ ಹೆಚ್ಚು ಬಲವಾಗಿಯೂ ವಿಪರೀತವಾಗಿಯೂ ತೋರುತ್ತದೆ. ಇದಲ್ಲದೆ ಅದು ದೇವರು ನೇಮಕ ಮಾಡಿದ ಲೋಕಧರ್ಮವನ್ನು ಕ್ರಿಯಾರೂಪವಾಗಿ ಮೀರಿ ಕೆಡಿಸುವದರಿಂದಲೂ, ದೇವರಿಗೆ ಮಾಡಿದ ದ್ರೋಹಕ್ಕೆ ನೆರೆಯವನಿಗೆ ಮಾಡಿದ ದ್ರೋಹವನ್ನು ಕೂಡಿಸುವದರಿಂದಲೂ, ಹೆಚ್ಚಾದ ಶಾಪಕ್ಕೂ ಹೊಣೆಗಾರಿಕೆಗೂ ಒಳಗಾಗಿದೆ. ಪಾಪಗುಣವು ಮನುಷ್ಯರಲ್ಲಿ ಹೆಚ್ಚಿದದರಿಂದ, ದಶವಾಕ್ಯದ ಬೇರೆ ಬೇರೆ ವಿಧಿಗಳು ಹೆಚ್ಚು ಕಡಿಮೆ ಎಲ್ಲಾ ನಿಷೇಧರೂಪವಾಗಿರುತ್ತವೆ.

ಮೊದಲನೆ ಹಲಿಗೆಯು.

೧ನೆ ಕಟ್ಟಳೆಯು. ವ. ೧—೩.

ವ. ೧. ಆಗ ದೇವರು ಈ ವಾಕ್ಯಗಳನ್ನೆಲ್ಲಾ ಹೇಳಿದನು, ಯಾವವಂದರೆ: ೨. ನಿನ್ನನ್ನು ಮಿಶ್ರ ದೇಶದೊಳಗಿಂದ ದಾಸತ್ವದ ಮನೆಯ ಹೊರಗೆ ಬರಲೀಸಿದ[೧] ನಿನ್ನ ದೇವರಾದ ಯೆಹೋವನು ನಾನೇ. ೩. ನನ್ನ ಮುಂದೆ ಬೇರೆ ದೇವರುಗಳು ನಿನಗೆ ಇರಬಾರದು[೨].

೧. ಇಸ್ರಯೇಲನವರು ನಾನಾ ವಿಧದ ಉಪಕಾರಗಳನ್ನೂ ಆಶೀರ್ವಾದಗಳನ್ನೂ ತನ್ನಿಂದ ಪಡಕೊಂಡ ಒಡಂಬಡಿಕೆಯ ಜನಾಂಗವೆಂದು ಕೊಂಡು, ದೇವರು ಅವರ ಕೂಡ ಮಾತಾಡುವಲ್ಲಿ, ತಾನು ಅಬ್ರಹಾಮನೊ

ಆನೆ ಕಟ್ಟಿಕೊಂಡ ಒಡಂಬಡಿಕೆಯನ್ನೂ, ಅಬ್ರಹಾಮನ ಕಾಲ ಮೊದಲ್ಗೊಂಡು ತಾನು ಅವರಿಗೆ ಕೊಟ್ಟ ವರಗಳ ಸರದಲ್ಲಿ ತುದಿಮಣಿಯಾದ ದಾಸಗೃಹ ವಿಮೋಚನೆಯನ್ನೂ, ಮೊದಲಾಗಿ ಅವರ ನೆನಪಿಗೆ ತಂದು, ಬಳಿಕ ಅವರು ತನಗೆ ಮಾಡ ತಕ್ಕ ಸೇವೆಯ ವಿಧಿಗಳನ್ನು ವಿವರಿಸುತ್ತಾನೆ. ಮಿಚ್ರದ ದಾಸಗೃಹದ ವಿಮೋಚನೆಗಿಂತ ಯೇಸು ಕ್ರಿಸ್ತನು ಸ್ವಂತ ರಕ್ತಧಾರೆಯ ಮೂಲವಾಗಿ ತನ್ನ ಸಭೆಯನ್ನು ಪಾಪವೆಂಬ ದಾಸಗೃಹದಿಂದ ಬಿಡುಗಡೆ ಮಾಡಿದ ವಿಮೋಚನೆಯು ಅಧಿಕಾಧಿಕವಾದದ್ದು.

೨. ಸರ್ವಜ್ಞನೂ, ಪರಿಶುದ್ಧನೂ, ಅಧಿಕ ಮಹಿಮೆಯಾಗಿ ನಿನಗೆ ಕಾಣಿಸಿ ಕೊಂಡವನೂ ಆದ ನಾನು ಅನ್ಯ ಜನರು ಪೂಜಿಸುವ ಅಶಕ್ತ ದೇವತೆಗಳಿಗಿಂತೆಲ್ಲಾ ಅಧಿಕಾಧಿಕನಾಗಿದ್ದು, ನಿನ್ನ ಸರ್ವಾರ್ಥ ಸಿದ್ಧಿಯೂ ಪರಮ ಪದವಿಯೂ ಆಗಿರ ಬೇಕು. ನನ್ನಲ್ಲಿಯೇ ಏಲ್ಲಾದರ ಮೇಲೆ ಭಯವನ್ನೂ ಪ್ರೀತಿಯನ್ನೂ ಭರವಸವನ್ನೂ ಇಡ ಬೇಕು. ಸ್ಥೂಲವಾಗಲಿ ಸೂಕ್ಷ್ಮವಾಗಲಿ ಅಪದೈವಾರಾಧನೆ ಯಾವದಾದರೂ ಇಸ್ರಯೇಲನವರಲ್ಲಿ ಪ್ರತ್ಯಕ್ಷವಾದಂಥ ಸತ್ಯದೇವರ ವಾಕ್ಯವು ಇರುವಲ್ಲೆಲ್ಲಾ ತನ್ನನ್ನು ಪ್ರಕಟಿಸಿ ಕೊಳ್ಳುವ ದೇವರ ಧಿಕ್ಕಾರವಾಗಿದೆ. ವಿಗ್ರಹಾರಾಧಕರಾದ ಪಾಪಿಗಳು ಹಟದಿಂದ ಪರಮ ಮಹಿಮೆಯನ್ನು ಅಸಡ್ಡೆ ಮಾಡುವ ದೇವದ್ರೋಹವು ದ್ವಿತೀ. ೧೭, ೨ನೇ ವಚನದ ಪ್ರಕಾರ ಮರಣಕ್ಕೆ ಪಾತ್ರವಾದ ಅಪರಾಧವಾಗಿದೆ.

೨ನೆ ಕಟ್ಟಳೆಯು. ವ. ೪—೬.

ವ. ೪. ಮೇಗಣ ಆಕಾಶದಲ್ಲಾಗಲಿ ಕೆಳಗಣ ಭೂಮಿಯಲ್ಲಾಗಲಿ ಭೂಮಿಯ
ಕೆಳಗಣ ನೀರುಗಳಲ್ಲಾಗಲಿ ಇರುವಂಥವುಗಳಂತೆ ವಿಗ್ರಹವನ್ನಾಗಲಿ ಪ್ರತಿಮೆಯನ್ನಾ
ಗಲಿ ನಿನಗೆ ಮಾಡಿ ಕೊಳ್ಳ ಬಾರದು[೧]. ೫. ಅವಕ್ಕೆ ಅಡ್ಡ ಬೀಳಲೂ ಸೇವೆಯ ಮಾ
ಡಲೂ ಬಾರದು[೨]; ಯಾಕೆಂದರೆ ನಿನ್ನ ದೇವರಾದ ಯೆಹೋವನಾಗಿರುವ ನಾನು
ರೋಷವುಳ್ಳ ದೇವರಾಗಿದ್ದೇನೆ[೩]. ನನ್ನನ್ನು ಹಗೆ ಮಾಡುವವರಲ್ಲಿ ತಂದೆಗಳ ಅಕ್ರಮ
ವನ್ನು ಮಕ್ಕಳ ಮೇಲೆ, ಮೂರನೆ ನಾಲ್ಕನೆ ತಲಾಂತರದ ವರೆಗೂ ವಿಚಾರಿಸುತ್ತೇನೆ;
೬. ಆದರೆ ನನ್ನನ್ನು ಪ್ರೀತಿ ಮಾಡಿ ನನ್ನ ಆಜ್ಞೆಗಳನ್ನು ಕಾಪಾಡುವವರಿಗೆ ಸಾವಿರಗಳ
ಪರ್ಯಂತ ಕೃಪೆಯನ್ನು ತೋರಿಸುತ್ತೇನೆ[೪].

೧. ಈ ಕಟ್ಟಳೆಯು ಮೊದಲನೇದಕ್ಕೆ ಸಂಬಂಧವಾಗಿದೆ ಸರಿ. ಆದರೂ ಅದನ್ನು ಪ್ರತ್ಯೇಕವಾದ ಎರಡನೆ ಕಟ್ಟಳೆಯಾಗಿ ಎಣಿಸುವದು ಲೇಸು. ಮೊದಲನೆ ಕಟ್ಟಳೆ ಅಪದೈವಾರಾಧನೆಯನ್ನೂ ಎರಡನೆ ಕಟ್ಟಳೆಯಾದ ಇದು ವಿಗ್ರಹಾರಾಧನೆಯನ್ನೂ ನಿಷೇಧಿಸುತ್ತದೆ. ಅಪದೈವಾರಾಧನೆಯಂದರೆ: ಸುಳ್ಳು ದೇವತೆಗಳ ಪೂಜೆ. ವಿಗ್ರಹಾರಾಧನೆಯಂದರೆ: ಸತ್ಯ ದೇವರ ಸುಳ್ಳಾದ ಪೂಜೆಯು. ಈ ಪಾಪವನ್ನು ಆರೋನನು (ಹೊರ. ೩೨. ೫.) ಮತ್ತು ಯೆರೋಬೊವಮ್ (೧ ಅರ. ೧೨, ೧೬—೩೦) ಮಾಡಿದರು. ಇಂಥ ವಿಗ್ರಹಾರಾಧಕನು (ಇಸ್ರಯೇಲನವರಂತೆಯೂ ರೋಮಾಯ ಕ್ರೈಸ್ತರಂತೆಯೂ) ದೇವರು ಆತ್ಮವಾಗಿದ್ದಾನೆಂಬದನ್ನೂ, ದೇವರು ಆತ್ಮವಾಗಿರುವ ಕಾರಣ ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸಲ್ಪಡಲಿಚ್ಛೈಸುತ್ತಾನೆಂಬದನ್ನೂ (ಯೋಹಾ. ೪, ೨೪) ಮರತು, ಅದೃಶ್ಯವಾದ ದೇವರಿಗೆ ಯೋಗ್ಯವಾದ ಆರಾಧನೆಯನ್ನು ದೃಶ್ಯರೂಪಕ್ಕೂ ಪ್ರತಿಮೆಗೂ ಮಾಡುವನು. ಈ ಕಟ್ಟಳೆಯಲ್ಲಿ ಕ್ರೈಸ್ತರಾದ ನಮಗೂ ಒಂದು ಚುರುಕಾದ ಗದರಿಕೆಯ ಅಭಿಪ್ರಾಯವು ದೊರಕುವದು. ಏನಂದರೆ, ಕೈಗಳು ರೂಪಿಸುವ ಮರ ಕಲ್ಲು ಲೋಹಾದಿಗಳಿಂದ ಮಾತ್ರವಲ್ಲ, ಹೃದಯದಲ್ಲಿಯೂ ಬುದ್ಧಿಯಲ್ಲಿಯೂ ಆಗುವ ಜ್ಞಾನಕಲ್ಪನೆಗಳಿಂದಲೂ ಅದೈವಿಕ ರೂಪಗಳನ್ನು

ರಚಿಸುವದು ಉಂಟು. ಯೇಸು ಕ್ರಿಸ್ತನಲ್ಲಿ ತನ್ನನ್ನು ತಾನೆ ಪ್ರಕಟ ಮಾಡಿದ ತಂದೆಯಾದ ದೇವರನ್ನು ಸುವಾರ್ತೆ ಎಂಬ ದೇವರ ವಾಕ್ಯದ ಬೋಧನೆಯಿಂದ ತಿಳಿದು ಕೊಳ್ಳಲೊಲ್ಲದೆ, ಸ್ವಜ್ಞಾನದಿಂದಲೇ ದೇವಭಾವ ಗುಣಗಳನ್ನು ಗ್ರಹಿಸಿ ಕೊಳ್ಳ ಬಹುದೆಂದು, ಭಾವಿಸುವ ಜ್ಞಾನಿಗಳೆಲ್ಲರು ಸತ್ಯ ದೇವರನ್ನರಿಯದೆ ಸ್ವಂತ ಬುದ್ಧಿಯ ಕಲ್ಪನೆಗೆ ದೇವರೆಂದು ಹೆಸರಿಟ್ಟು ಕೊಳ್ಳುತ್ತಾರೆ. ಈ ವಿಧವಾಗಿ ತಾವೇ ಕಲ್ಪಿಸಿದ್ದಕ್ಕೆ ತಮ್ಮ ಮನಸ್ಸಿನಲ್ಲಿ ಪ್ರಾರ್ಥನೆಯನ್ನು ಮಾಡುವವರು ಒಂದು ತರದ ಸೂಕ್ಷ್ಮ ವಿಗ್ರಹಾರಾಧನೆ ನಡಿಸುವದಲ್ಲದೆ, ದೇವರನ್ನು ಸತ್ಯದಿಂದಲೂ ಆತ್ಮದಿಂದಲೂ ಆರಾಧಿಸುವದಿಲ್ಲ.

೨. ಮತ್ತೊಬ್ಬರು ರಚಿಸಿದ ವಿಗ್ರಹಗಳನ್ನು ಕಂಡರೆ, ಅವುಗಳಿಗೂ ಕೈ ಮುಗಿಯ ಬಾರದು.

೩. ಭಯವನ್ನೂ ಆಶೆಯನ್ನೂ ಹುಟ್ಟಿಸುವ ಈ ವಾಕ್ಯಗಳು ಎರಡನೆ ಕಟ್ಟಳೆಯ ಮೇಲೆಯೇ ಬಂದರೂ, ಅವು ಎಲ್ಲಾ ಕಟ್ಟಳೆಗಳಿಗೂ ಶೇರುತ್ತವೆಂಬದು ನಿಶ್ಚಯ. ಯಾಕೆಂದರೆ ನೇಮದ ಸಾರಾಂಶವಾದ ಚೂಣಿಯ ಎರಡು ಕಟ್ಟಳೆಗಳಲ್ಲಿ ಉಳಿದವುಗಳೆಲ್ಲಾ ಅಡಕವಾಗಿವೆ. ಮತ್ತು ಬೇರೆ ಕಟ್ಟಳೆಗಳಲ್ಲಿ ಯಾವದನ್ನೂ ಮೀರಿದರೆ, ಮೊದಲಿನ ಎರಡನ್ನು ಮೀರಿದ ಹಾಗಾಗುವದು.

೪. ದೇವಭಕ್ತಿಯ ಆಶೀರ್ವಾದಕ್ಕೂ ದೈವಹೀನತ್ವದ ಶಾಪಕ್ಕೂ ಒಂದು ಪ್ರಕಾರದ ಎಣೆಯುಂಟು. ಏನಂದರೆ ಅವೆರಡು ಸ್ವಾಭಾವಿಕ ಗತಿಯಿಂದ ಮರೆಯಾಗಿದ್ದರೂ, ಅಗತ್ಯವಾದ ಆಂತರ್ಯ ಸಂಬಂಧದ ಪ್ರಕಾರ ಜನ್ಮ ಅನುಕರಣ ಬೋಧನೆ ಮುಂತಾದದರ ಮೂಲವಾಗಿ, ಪೂರ್ಣ ಕುಲಗಳ ಮೇಲೆಯೂ ಸಂತತಿಗಳ ಮೇಲೆಯೂ ಬಂದು, ಈ ಕಡೆಯಲ್ಲಿಯೂ ಆ ಕಡೆಯಲ್ಲಿಯೂ, ಜಾತಿ ಭಾವ ಗುಣ ಲಕ್ಷಣಗಳೂ ಸ್ಥಿತಿಗತಿಗಳೂ ಬೇರೆ ಬೇರೆಯಾಗುವದಕ್ಕೆ ಹೇತುವಾಗುತ್ತವೆ. ಇದಕ್ಕೆ ಅನುಕೂಲವಾಗಿ ತನ್ನನ್ನು ಹಗೆ ಮಾಡುವವರಲ್ಲಿ ತಂದೆಗಳ ಪಾಪವನ್ನು ಮೂರನೆ ನಾಲ್ಕನೆ ತಲಾಂತರ ಪರ್ಯಂತ ವಿಚಾರಿಸುತ್ತೇನೆಂದು, ದೇವರು ಬೆದರಿಸುತ್ತಾನೆ; ಮತ್ತು ತನ್ನನ್ನು ಪ್ರೀತಿ ಮಾಡಿ, ತನ್ನ ಕಟ್ಟಳೆಗಳನ್ನು ಕೈಕೊಳ್ಳುವವರ ದೆಶೆಯಿಂದ ಸಾವಿರ ಸಾವಿರಗಳಿಗೆ ಕೃಪೆಯನ್ನು ಮಾಡುತ್ತೇನೆಂದು, ಮಾತು ಕೊಡುತ್ತಾನೆ. ದೇವರು ನೀತಿಯ ಪ್ರಕಾರ ಪಾಪವನ್ನು ಶಿಕ್ಷಿಸಿದರೂ, ಅವನ ಕರುಣೆಯ ಐಶ್ವರ್ಯವು ಅಧಿಕಾಧಿಕವಾಗಿದೆಂದು, ಈ ಸ್ಥಳದಲ್ಲಿಯೂ ತೋರುತ್ತದೆ.

೩ನೆ ಕಟ್ಟಳೆಯು. ವ. ೭.

ವ. ೭. ನಿನ್ನ ದೇವರಾದ ಯೆಹೋವನ ಹೆಸರನ್ನು ಸುಳ್ಳಾಗಿ ಎತ್ತ ಬಾರದು೧). ಯಾಕಂದರೆ ಯೆಹೋವನು ತನ್ನ ಹೆಸರನ್ನು ಸುಳ್ಳಾಗಿ ಎತ್ತುವವನನ್ನು ನಿರ್ಮಲನೆಂದು ತೀರಿಸುವದಿಲ್ಲ.

೧. ಆಲೋಚನೆ ಇಲ್ಲದೆಯೂ ಪ್ರಯೋಜನವಿಲ್ಲದೆಯೂ, ಅಥವಾ ಮೋಸ ಕಪಟ ದೂಷಣ ಸುಳ್ಳಾಣೆ ಮುಂತಾದ ಕೆಟ್ಟ ಕೆಲಸಗಳಿಗಾಗಿ ದೇವರ ಹೆಸರನ್ನು ಪ್ರಯೋಗಿಸ ಬಾರದು. ಕ್ರಿಸ್ತನು ಪರ್ವತ ಪ್ರಸಂಗದಲ್ಲಿ ಹ್ಯಾಗೂ ಆಣೆ ಇಡುವದನ್ನು ನಿಷೇಧಿಸುತ್ತಾನೆ. ಆ ಪ್ರಸಂಗದ ಟೀಕಿನಲ್ಲಿ ಬರದದ್ದನ್ನು ಓದಿದರೆ ವಿಹಿತ.

೪ನೆ ಕಟ್ಟಳೆಯು. ವ. ೮—೧೧.

ವ. ೮. ಸಬ್ಬತ್ ದಿವಸವನ್ನು೧) ಪವಿತ್ರ ಮಾಡುವ ಹಾಗೆ ನೆನಪು ಮಾಡಿಕೋ.
೯. ಆರು ದಿನ ಗೆಯ್ದು, ನಿನ್ನ ಕೆಲಸವನ್ನೆಲ್ಲಾ ಮಾಡ ಬೇಕು. ೧೦. ಆದರೆ ಏಳನೆ ದಿವ
ಸವು ನಿನ್ನ ದೇವರಾದ ಯೆಹೋವನ ಸಬ್ಬತ್ ದಿವಸವಾಗಿದೆ. ಅದರಲ್ಲಿ ನೀನೂ ನಿನ್ನ

ಮಗನೂ ನಿನ್ನ ಮಗಳೂ ನಿನ್ನ ದಾಸನೂ ನಿನ್ನ ದಾಸಿಯೂ ನಿನ್ನ ದನವೂ ನಿನ್ನ ಬಾಗಲುಗಳಲ್ಲಿರುವ ಪರವಾಸಿಯೂ ಯಾವ ಕೆಲಸವನ್ನಾದರೂ ಮಾಡ ಬಾರದು. ೧೧. ಯಾಕೆಂದರೆ ಆರು ದಿವಸಗಳಲ್ಲಿ ಯೆಹೋವನು ಆಕಾಶವನ್ನೂ ಭೂಮಿಯನ್ನೂ ಸಮುದ್ರವನ್ನೂ ಅವುಗಳಲ್ಲಿರುವ ಎಲ್ಲಾನ್ನೂ ಉಂಟು ಮಾಡಿ, ಏಳನೆ ದಿವಸದಲ್ಲಿ ವಿಶ್ರಮಿಸಿ ಕೊಂಡನು; ಆದದರಿಂದ ಯೆಹೋವನು ಸಬ್ಬತ್ ದಿವಸವನ್ನು ಆಶೀರ್ವದಿಸಿ, ಪವಿತ್ರ ಮಾಡಿದನು[2].

೧. ಈ ಕಟ್ಟಳೆಯು ಅಧಿಕಾತಿಶಯವಾದದ್ದು. ಅದು ದೇವಾರಾಧನೆಯ ನೇಮದ ಮೂಲವಾಗಿದೆ. ಅದು ಹೊಸತಲ್ಲ. ಉತ್ಪ. ೨, ೩ರ ಪ್ರಕಾರ ಆದಿಯಲ್ಲಿ ತೀರುಗಡೆಯ ದಿವಸದ ಆಚರಣೆಯು ನೇಮಿಸೋಣವಾಯಿತು. ಆದರೆ ಅದರ ನಿವರ್ಾಣವು ಪೂರಾ ಮರತು ಹೋಗದೆ ಇದ್ದರೂ, ಅದರ ಆಚರಣೆಯು ಇಸ್ರಯೇಲನವರಲ್ಲಿ ನಿಂತು ಹೋಗಿದ್ದೀತು. ಯೆಹೋವನು ಅದರಲ್ಲಿ ಮನ್ನಾ ಬೀಳುವದನ್ನು ನಿಲ್ಲಿಸಿದ್ದರಿಂದ, ಅದರ ನೆನಪು ಇಸ್ರಯೇಲನವರಲ್ಲಿ ಹುಟ್ಟ ಬೇಕಾಯಿತು. ಇದಲ್ಲದೆ ನಾಲ್ಕನೆ ಕಟ್ಟಳೆಯು ಸಬ್ಬತ್ ದಿನವನ್ನು ಪರಿಶುದ್ಧ ಮಾಡೆಂದು ಹೇಳದೆ, ಪರಿಶುದ್ಧ ಮಾಡ ಬೇಕೆಂಬದನ್ನು ನೆನಪು ಮಾಡಿಕೋ ಎಂದು, ಹೇಳುವದರಿಂದ ಉತ್ಪ. ೨, ೩ರಲ್ಲಿ ಬರದಿರುವ ಸಂಗತಿಯು ಸೂಚಿತವಾಗಿರುವದು.

೨. ಲೋಕನಿರ್ಮಾಣ ಚರಿತ್ರದ ಸ್ಮರಣೆಯಿಂದ ಯೆಹೋವನು, ಬಹಳವಾಗಿ ಬೆಳದ ಜನಾಂಗವನ್ನು ಒಡಂಬಡಿಕೆಯ ಜನಾಂಗವಾಗಿಯೂ ಸ್ವಕೀಯ ಪ್ರಜೆಯಾಗಿಯೂ ಅಂಗೀಕರಿಸಿದವನಾದ ತಾನು ಲೋಕವನ್ನುಂಟು ಮಾಡಿದವನಾಗಿದ್ದು, ಅನ್ಯ ಜನರ ಸ್ವರಚಿತವಾದಂಥ, ಇಲ್ಲವೆ ಸ್ವಕಲ್ಪಿತವಾದಂಥ, ಎಲ್ಲಾ ದೇವತೆಗಳಿಗಿಂತ ಅತ್ಯುನ್ನತನಾದ ಭೂಪರಲೋಕಕರ್ತನಾಗಿರುವ ದೇವರಾಗಿದ್ದೇನೆಂದು, ಬೋಧಿಸುತ್ತಾನೆ.

೫ನೆ ಕಟ್ಟಳೆಯು. ವ. ೧೨.

ವ. ೧೨. ನಿನ್ನ ದೇವರಾದ ಕರ್ತನು ನಿನಗೆ ಕೊಡುವ ಭೂಮಿಯಲ್ಲಿ ನಿನ್ನ ದಿನಗಳು ಹೆಚ್ಚಾಗುವ ಹಾಗೆ[1] ನಿನ್ನ ತಂದೆತಾಯಿಗಳನ್ನು ಸನ್ಮಾನಿಸ ಬೇಕು[2].

೧. ಇಸ್ರಯೇಲನವರು ತಂದೆತಾಯಿಗಳನ್ನು ಮಾತ್ರವಲ್ಲ, ದೇವರು ತಮಗೆ ಅಧಿಪತಿಯಾಗಿ ನೇಮಕ ಮಾಡಿದ ಮೋಶೆಯನ್ನೂ ಸನ್ಮಾನಿಸ ಬೇಕೆಂಬ ಈ ಕಟ್ಟಳೆಯನ್ನೂ, ಚೂಣೆಯಾದ ಮೂರು ಕಟ್ಟಳೆಗಳನ್ನೂ ಮೀರಿದರಿಂದ, ಎರಡು ವರ್ಷಗಳೊಳಗೆ ಸೇರಿ ಸ್ವತಂತ್ರಿಸ ತಕ್ಕ ವಾಗ್ದತ್ತ ದೇಶದ ಹೊರಗಣ ಅರಣ್ಯದಲ್ಲಿ ಮೂವತ್ತೆಂಟು ವರ್ಷ ತಿರುಗಾಡ ಬೇಕಾಯಿತು. ಕನಾನದಲ್ಲಿ ದೀರ್ಘಾಯುಷ್ಯ ಪಡ ಕೊಳ್ಳೋಣವೆಂಬದರ ಅರ್ಥವೇನಂದರೆ: ದೇವರು ದಯಮಾಡುವ ಇಹದ ಆಶೀರ್ವಾದಗಳನ್ನು ಅನುಭವಿಸಿ ಕೊಂಡು, ಸುಕ್ಷೇಮದಿಂದ ಸ್ವಂತ ಭೂಮಿಯಲ್ಲಿ ಬಾಳುವದು. ಇದಲ್ಲದೆ ದೇವರಿತ್ತ ಇಹ ಸಾಖ್ಯವು ಅವನು ತನ್ನ ಜನಾಂಗಕ್ಕೆ ಸಿದ್ಧ ಮಾಡುವ ಪರಮ ಪದವಿಯ ಮುಂಗಡವಾಗುತ್ತಿತ್ತು.

೨. ಇಸ್ರಯೇಲನವರಲ್ಲಿ ಸ್ಥಾಪಿತವಾದ ಸಮಸ್ತ ರಾಜ್ಯ ನೇಮಕ್ಕೆ ಮೂಲಾಧಾರವಾಗಿದ್ದ ಈ ಕಟ್ಟಳೆಯು ಇಂದಿನ ವರೆಗೂ ಎಲ್ಲಾ ಜನಾಂಗಗಳಲ್ಲಿ ವಾಡಿಕೆಯಾದ ಗೃಹನಗರ ರಾಜ್ಯ ನೇಮಗಳಿಗೆಲ್ಲಾ ಅಸ್ತಿವಾರವಾಗಿದೆ. ಸನ್ಮಾನಿಸುವದು ಪ್ರೀತಿ ಮಾಡುವದಕ್ಕಿಂತ ಹೆಚ್ಚು. ನೆರೆಯವನನ್ನು ಪ್ರೀತಿ ಮಾಡ ಬೇಕು. ತಂದೆತಾಯಿಗಳನ್ನು ಕೃತಜ್ಞರಾಗಿ ಪ್ರೀತಿ ಮಾಡುವದಲ್ಲದೆ, ದೇವರು ಮನೆ ಸಭೆ ರಾಜ್ಯವೆಂಬ ಈ ಮೂರು ವಿಧದ ಸಂಬಂಧದಲ್ಲಿ ನಮಗೆ ಅಧಿಕಾರಿಗಳಾಗಿ ನೇಮಿಸಿದ ಅವನ ಪ್ರತಿನಿಧಿಗಳಿಗೆ ತಕ್ಕ ವಿಧೇಯತ್ವ ಮನ್ನಣೆ

ಕಿಂಕರ ಸೇವೆಗಳನ್ನು ಸಲ್ಲಿಸ ಬೇಕು. ಈ ಐದನೆ ಕಟ್ಟಳೆಯು ದೇವರನ್ನು ಭೂಮಿಯಲ್ಲಿಯೂ ಅವನ ಮಾನುಷಪ್ರತಿನಿಧಿಯರಲ್ಲಿ ಸನ್ಮಾನಿಸ ಬೇಕೆಂಬ ಅರ್ಥವುಳ್ಳದ್ದಾಗಿರುವದರಿಂದ ಅದು ಮೊದಲನೆ ಹಲಿಗೆಗೆ ಸೇರ ತಕ್ಕದ್ದು.

ಎರಡನೆ ಹಲಿಗೆಯು.

೬ನೆ ಕಟ್ಟಳೆಯು. ವ. ೧೩.

ವ. ೧೩. ಕೊಲ್ಲ ಬಾರದು೧).

ಕೊಲೆಯು ಮಹಾ ಪಾತಕವೆಂಬದಕ್ಕೆ ಹೇತುವೆ ಎರಡು; ಅವು ಉತ್ಪ. ೯, ೫. ೬ರಲ್ಲಿ ಬರೆದವೆ.

೧. ಮನುಷ್ಯನು ಮನುಷ್ಯನ ಸಹೋದರನು. ೨. ಮನುಷ್ಯನು ದೇವರ ಸ್ವರೂಪವುಳ್ಳವನು. ದೇವೋಕ್ತವೇನಂದರೆ: ಮನುಷ್ಯನ ಪ್ರಾಣವನ್ನು ಅವನ ಸಹೋದರನಾದ ಮನುಷ್ಯನ ಬಳಿಯಿಂದ ವಿಚಾರಿಸುವೆನು. ಮನುಷ್ಯನ ರಕ್ತವನ್ನು ಚೆಲ್ಲುವವನ್ಯಾವನೋ ಅವನ ರಕ್ತವು ಮನುಷ್ಯನ ಕೈಯಿಂದ ಚೆಲ್ಲಲ್ಪಡುವದು. ಯಾಕೆಂದರೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟು ಮಾಡಿದನು. ಜೀವವೆಲ್ಲಾ ದೇವರ ವರವಾಗಿರುವ ಕಾರಣ ದೇವರೊಬ್ಬನೇ ಜೀವ ಮರಣಗಳ ಅಧಿಕಾರವುಳ್ಳವನಾಗಿದ್ದಾನೆ. ಆದರೆ ದೇವರ ಪ್ರತಿನಿಧಿಯಾದ ಸಂಸ್ಥಾನವು ಕೊಲೆಗಾರನಿಗೆ ಜೀವಘಾತದ ಶಿಕ್ಷೇ ಕೊಡಲಿಕ್ಕೆ ದಿವ್ಯ ಅಧಿಕಾರವನ್ನು ಹೊಂದಿರುತ್ತದೆ. ಇದಲ್ಲದೆ ಮನುಷ್ಯನು ದೇವರ ಸ್ವರೂಪವುಳ್ಳವನಾಗಿರುವದರಿಂದ, ಮನುಷ್ಯನನ್ನು ಕೊಲ್ಲುವವನು ಮರಣಪಾತ್ರನಾಗಿರುತ್ತಾನೆ ಎಂಬದಾಗಿ ಹೇಳುವ ಮಾತಿನಲ್ಲಿ ಮನುಷ್ಯನಿಗೂ ಬೇರೆ ಪ್ರಾಣಿಗಳಿಗೂ ಹೆಚ್ಚು ಕಡಿಮೆ ತೋರಿಸಿಯದೆ. ಹೀಗಿರುವದರಿಂದ ಸಮಸ್ತ ಪ್ರಾಣಘಾತವು ಪಾಪಕಾರ್ಯವೆಂದು ಹಿಂದೂ ಜನರು ಹೇಳುವ ಮಾತಿಗೆ ಆಧಾರವಿಲ್ಲ. ದೇವರು ಮೃಗ ಪಶು ಮುಂತಾದಂಥಾ ಮನುಷ್ಯನಲ್ಲದಂಥಾ, ಬೇರೆ ಪ್ರಾಣಿಗಳನ್ನು ಮನುಷ್ಯನಿಗೆ ಆಹಾರವಾಗಿ ಕೊಟ್ಟಿರುವದರಿಂದ, ಇವುಗಳನ್ನು ಕೊಂದು ಪಕ್ವ ಮಾಡಿ ತಿನ್ನುವದಕ್ಕೆ ದೋಷವಿಲ್ಲ,

೭ನೆ ಕಟ್ಟಳೆಯು. ವ. ೧೪.

ವ. ೧೪. ವ್ಯಭಿಚಾರ ಮಾಡ ಬಾರದು.

ದೇವರು ಸ್ಥಾಪಿಸಿದ ಮದಿವೆಯ ಧರ್ಮವನ್ನು ವ್ಯಭಿಚಾರದಿಂದಲಾದರೂ ಹಾದರದಿಂದಲಾದರೂ ಸೂಳೆಗಾರಿಕೆಯಿಂದಲಾದರೂ ಮೀರ ಬಾರದು. ವಿವಾಹವಿಲ್ಲದವರು ಸಹಾ ಹೃದಯದ ಶುದ್ಧತ್ವವನ್ನೂ ನುಡಿಯ ಲಜ್ಜೆಯನ್ನೂ ಸುಶಿಕ್ಷೆಯನ್ನೂ ನಡತೆಯ ನಿರ್ಮಲತ್ವವನ್ನೂ ಮರ್ಯಾದೆಯನ್ನೂ ಜಾಗ್ರತೆಯಿಂದ ಕೈಕೊಳ್ಳ ಬೇಕು. ಯೇಸು ಕ್ರಿಸ್ತನು ಈ ವಿಷಯವಾಗಿ ಮತ್ತ. ೧೯, ೩—೧೨; ೫, ೨೭—೩೩ ಹೇಳಿದ್ದನ್ನು ಚನ್ನಾಗಿ ಧ್ಯಾನಿಸ ಬೇಕು. ವಿವಾಹವು ಸಭೆಯೊಡನೆ ಕ್ರಿಸ್ತನಿಗೆ, ತನ್ನ ಮಕ್ಕಳೊಡನೆ ದೇವರಿಗೆ, ಇರುವ ಅನ್ಯೋನ್ಯದ ತದ್ರೂಪವಾಗಿರುವದರಿಂದ ಪ್ರವಾದಿಗಳು ದೇವದ್ರೋಹಕ್ಕೂ ವಿಗ್ರಹಾರಾಧನೆಗೂ ಹಾದರವೆಂತಲೂ ವ್ಯಭಿಚಾರವೆಂತಲೂ ಹೆಸರಿಡುತ್ತಾರೆ.

೮ನೆ ಕಟ್ಟಳೆಯು. ವ. ೧೫.

ವ. ೧೫. ಕದ್ದುಕೊಳ್ಳ ಬಾರದು.

ಒಬ್ಬೊಬ್ಬನು ತನ್ನದೆಂದೆನಿಸಿ ಕೊಳ್ಳುವ ಮನೆಮಾರು ದನಕರ ಹೊನ್ನುಹಣ ಮುಂತಾದದ್ದು ಅವನವನು ಸರ್ವಸ್ವಾಮಿತ್ವವುಳ್ಳ ದೇವರ ಕಡೆಯಿಂದ ಪಡ ಕೊಂಡ ಕಡವಾಗಿದೆ. ದೇವರು, ಇಸ್ರಾಯೇಲನವರಿಗೆ

ಕನಾನ ದೇಶವನ್ನು ವಾಗ್ದತ್ತ ಮಾಡಿ ಕಡವಾಗಿ ಇತ್ತು, ಆಯಾ ಕುಲಗಳಿಗೆ ವಿಭಾಗಿಸಿದ ಪ್ರಕಾರ, ಇಂದಿನ ವರೆಗೆ ಮನಸ್ಸು ಬಂದ ಹಾಗೆ ಲೋಕದ ಒಡವೆಗಳನ್ನು ಅವರವರಿಗೆ ಹಂಚಿ ಕೊಡುತ್ತಾ ಬರುತ್ತಾನೆಂದು, ಗ್ರಹಿಸಿ ಕೊಂಬ ಭಕ್ತನು ತನಗೆ ಪ್ರಾಪ್ತವಾದದ್ದು ಸಾಕೆಂದು ಕೊಂಡು, ಪರರ ಒಡವೆಗಳನ್ನು ಅಪಹರಿಸುವದು, ನೆರೆಯವನ ಪ್ರೀತಿಯನ್ನೂ ಮನ್ನಣೆಯನ್ನೂ ಮಿಾರುವ ಪಾಪವಾಗಿರುವದಲ್ಲದೆ, ಯಜಮಾನನಾದ ದೇವರ ಅಧಿಕಾರಕ್ಕೆ ಮಾಡಿದ ದ್ರೋಹವೆಂದರಿತು, ಅನ್ಯಾಯ ಮಾಡದೆ ಇರುವನು. ನನ್ನ ಬದುಕು ದೇವರದೆಂದು ಭಾವಿಸುವಿಯಾದರೆ, ನೆರೆಯವನ ಬದುಕಿಗೂ ಎರಡನ್ನು ಬಗೆಯದೆ, ಲೋಭಕ್ಕೂ ದ್ರವ್ಯಾಶೆಗೂ ದೂರವಾಗಿರುವಿ.

೯ನೆ ಕಟ್ಟಳೆಯು. ವ. ೧೬.

ನಿನ್ನ ನೆರೆಯವನ ಮೇಲೆ ಅಬದ್ಧ ಸಾಕ್ಷಿ ನುಡಿಯ ಬಾರದು.

ನುಡಿಯಲ್ಲಿಯೂ ಸತ್ಯವಂತನಾಗಿರ ಬೇಕು. ನೆರೆಯವನೊಡನೆ ಇರುವ ಹೊಕ್ಕುಬಳಕೆಯಲ್ಲೆಲ್ಲಾ ಯಥಾರ್ಥನಾಗಿರ ಬೇಕು. ಹುಸಿಯೂ ಅಸತ್ಯವೂ ಒಟ್ಟಾಗಿ, ನೆರೆಯವನ ಮೇಲೆ ಸುಳ್ಳು ಸಾಕ್ಷಿ ಹೇಳುವದು, ಅಂದರೆ ನ್ಯಾಯಸ್ಥಾನದಲ್ಲಿ ಮಾತ್ರವಲ್ಲ, ಸಾಧಾರಣವಾದ ಸಂಭಾಷಣೆಯಲ್ಲಿಯೂ ಪರರಿಗೆ ಎರಡು ಬಗೆಯುವದು, ಹಗೆಯಿಂದ ಮೋಸವಾಗಿ ತಪ್ಪು ಹೊರಿಸುವದು, ಮುಂತಾದ ಅನ್ಯಾಯವೂ ಅಸತ್ಯವೂ ಎಲ್ಲಾ ನಿಷೇಧಿಸಿ ಅದೆ. ತೊಂದರೆಯ ವೇಳೆಯಲ್ಲಿ ಸುಳ್ಳು ನೆವನ ಹೇಳ ಬಹುದೆಂಬದು ತೊಂದರೆಯ ವೇಳೆಯಲ್ಲಿ ಪಾಪ ಮಾಡ ಬಹುದೆಂಬಂತೆ ಭ್ರಾಂತಿಯ ಮಾತಾಗಿದೆ. ದೇವರ ಸೇವಕರಾದ ಭಕ್ತರಲ್ಲಿ ಕೆಲವರು ಸಹ ಆಪತ್ತಿನ ವೇಳೆಯಲ್ಲಿ ಸುಳ್ಳು ಹೇಳಿದರೆಂದು, ದೇವರ ವಾಕ್ಯದಲ್ಲಿ ಬರೆದದ್ದು ಉಂಟು. ಆದರೆ ಅವರು ಮಾಡಿದ್ದು ದೋಷವೆಂದು ಸ್ಪಷ್ಟವಾಗಿ ತೋರುವದು. ದೇವರ ವಾಕ್ಯವು ಪೂರ್ಣ ಸತ್ಯವಾಗಿರುವದರಿಂದ ಅದು ಭಕ್ತರ ಪಾಪಗಳನ್ನು ಸಹಾ ಮರೆ ಮಾಡಲೊಲ್ಲದು.

೧೦ನೆ ಕಟ್ಟಳೆಯು. ವ. ೧೭.

ನಿನ್ನ ನೆರೆಯವನ ಮನೆಯನ್ನು ಅಭಿಲಾಷಿಸ ಬಾರದು. ನಿನ್ನ ನೆರೆಯವನ ಹೆಂಡತಿಯನ್ನಾದರೂ ವಕ್ಕಲುದಕ್ಕಲನ್ನಾದರೂ ದನಕರುವನ್ನಾದರೂ ನಿನ್ನ ನೆರೆಯವನಿಗೆ ಉಂಟಾದದರಲ್ಲಿ ಯಾವದನ್ನಾದರೂ ಅಭಿಲಾಷಿಸ ಬಾರದು.

ದೇವರ ಮೇಲಣ ಪ್ರೀತಿಯು ಎಲ್ಲಾ ಸದ್ಗುಣ ಸದ್ಧರ್ಮಗಳ ಬುಗ್ಗೆಯಾಗಿದೆಂದು, ಮೊದಲನೆ ಕಟ್ಟಳೆಯು ತಿಳಿಸುವ ಪ್ರಕಾರ ಹತ್ತನೇದು ಲೋಕವಿಷಯಾಭಿಲಾಷೆಯು ಎಲ್ಲಾ ದುರ್ಗುಣ ದುರಾಚಾರಗಳ ಬೇರಾಗಿದೆಂದು, ಸೂಚಿಸುತ್ತದೆ. ಹೃದಯದಲ್ಲಿ ಹುಟ್ಟುವ ದುರಾಶೆಯು ಎಲ್ಲಾ ದುಷ್ಕರ್ಮದ ಮೂಲವಾಗಿರುವದಲ್ಲದೆ, ತಾನೇ ಪಾಪವಾಗಿದೆ. ಇದಲ್ಲದೆ ಪಾಪದ ಅಭಿಲಾಷೆಯಿಂದ ಹುಟ್ಟಿ, ಅದಕ್ಕೆ ಯುಕ್ತವಾಗಿರುವದರಿಂದಲೇ ಕ್ರಿಯೆಯು ಪಾಪವಾಗಿರುವ ಕಾರಣ, ದುರಭಿಲಾಷೆಯು ದೇವರ ದೃಷ್ಟಿಯಲ್ಲಿ ದುಷ್ಕ್ರಿಯೆಯ ಹಾಗೆಯೇ ಶಾಪಕ್ಕೂ ವಿನಾಶಕ್ಕೂ ಪಾತ್ರವಾಗಿದೆ. ಈ ಪ್ರಕಾರ ದಿವ್ಯ ನೇಮದ ಪ್ರಮಾಣದಿಂದ ನಾವು ನಮ್ಮ ಹೃದಯಗಳನ್ನೂ ನಡೆನುಡಿಗಳನ್ನೂ ಯಥಾರ್ಥವಾಗಿ ಶೋಧಿಸಿ, ನೇಮಕರ್ತನೂ ನ್ಯಾಯಾಧಿಪತಿಯೂ ಆದ ದೇವರು ಎಲ್ಲಾ ತೂಗಿಸುವ ಪ್ರಕಾರವಾಗಿಯೂ, ನಾವು ಸಹ ತೂಗಿಸ ಬೇಕೆಂದು, ಚಿತ್ತೈಸುವ ಪ್ರಕಾರವಾಗಿಯೂ, ಸತ್ಯದಿಂದ ತೂಗಿಸಿದರೆ, ನಮಗೆ ಮರೆಯಾಗಿರಲಾರದಂಥಾದ್ದೇನಂದರೆ: ನಾವು ದೇವರ ಕಟ್ಟಳೆಗಳಲ್ಲಿ ಯಾವದನ್ನಾದರೂ, ಮುಖ್ಯವಾಗಿ ಎಲ್ಲಾ ಕಟ್ಟಳೆಗಳ ಸಾರಾಂಶವೂ ಜೀವವೂ

ಹೊರಡೋಣ. ೨೦, ೧೮ — ೨೨.

ಆದ ಮೊದಲನೆ ಕಟ್ಟಳೆಯನ್ನು ಸಂಪೂರ್ಣವಾಗಿ ಕೈಕೊಳ್ಳದವರಾಗಿಯೂ, ಕೈಕೊಳ್ಳಲಶಕ್ತರಾಗಿಯೂ ಇದ್ದೇವೆ. ನೇಮದಿಂದ ಪಾಪದ ಅರುಹೇ ಸರಿ ಎಂದು, ತಿಳು ಕೊಂಡು, ದಾವೀದನು ಕೀರ್ತ. ೫೧, ೧೦ರಲ್ಲಿ ಪ್ರಾರ್ಥಿಸಿದಂತೆ, ಶುದ್ಧ ಹೃದಯವನ್ನು ನನ್ನಲ್ಲಿ ನಿರ್ಮಿಸು, ದೇವರೇ, ದೃಢವಾದ ಆತ್ಮವನ್ನು ನನ್ನ ಅಂತರಂಗದಲ್ಲಿ ನೂತನ ಪಡಿಸು ಎಂತ, ಬೇಡಿ ಕೊಳ್ಳುವದು ನಮ್ಮೆಲ್ಲರಿಗೆ ವಿಹಿತವಾಗಿದೆ.

ಹತ್ತು ಕಟ್ಟಳೆಗಳ ವಿವರವು. ಸ. ೨೦, ೧೮ — ೨೩, ೩೩. ಒಡಂಬಡಿಕೆಯ ಪುಸ್ತಕ.

ಈ ಪ್ರಕರಣದಲ್ಲಿ ದಶವಾಕ್ಯದ ಬೇರೆ ಬೇರೆ ವರ್ಣನೆಗಳು ಬರೆದಿರುವದರಿಂದ, ಅದು ಒಡಂಬಡಿಕೆಯ ಪುಸ್ತಕವು ಎಂಬದರಲ್ಲಿ (೨೪, ೪. ೭.) ಲಿಖಿತವಾದ ಪೂರ್ಣ ನೇಮಧಾನದ ಮೂಲದಲ್ಲಿ ಶೇರುತ್ತದೆ. ಈ ಸಂಗ್ರಹದಲ್ಲಿ ಇಸ್ರಾಯೇಲನವರು ಮಾಡಿದ ಸೀನಯಿ ಅರಣ್ಯವಾಸಕ್ಕೆ ವಿಶೇಷವಾಗಿ ಯುಕ್ತವಾದ ಕಟ್ಟಳೆಗಳಲ್ಲದೆ, ಇತ್ತಲಿನ ಸ್ಥಿತಿಗತಿಗಳ ವಿಷಯವಾಗಿ ನೇಮಕವಾದ ಪ್ರಮಾಣಗಳಲ್ಲಿ ಅನೇಕವು ಸರಿಯಾದ ಅನುಕ್ರಮಣವಿಲ್ಲದೆ ಪೋಣಿಸಿ ಕೊಂಡವೆ. ಅವುಗಳಲ್ಲಿ ಹೆಚ್ಚಾದವುಗಳಿಗೆ ಕೂಡಿದ ಬೇರೆ ಬೇರೆ ಪರಿಶಿಷ್ಟಗಳು ಮುಂದಾಗಿ ಬರುತ್ತವೆ. ಸ. ೨೩, ೨೩ — ೩೩ರಲ್ಲಿ ವಿಶೇಷವಾದ ಕೃಪಾವಾಗ್ದತ್ತಗಳು ಜೋಡಿಸಿಯವೆ.

ದೇವರ ಮುಂದಣ ಪ್ರಕಟಣೆಗಳಲ್ಲಿ ಮೋಶೆಯು ತಮಗೆ ಮಧ್ಯಸ್ಥನಾಗ ಬೇಕೆಂದು, ಇಸ್ರಯೇಲನವರು ಅಪೇಕ್ಷಿಸಿದ್ದು. ಸ. ೨೦, ೧೮ — ೨೧.

ವ. ೧೮. ಪ್ರಜೆ ಎಲ್ಲಾ ಧ್ವನಿಗಳನ್ನೂ ಜ್ವಾಲೆಗಳನ್ನೂ ಕಹಳೆಯ ಶಬ್ದವನ್ನೂ ಹೊಗೆಯುವ ಬೆಟ್ಟವನ್ನೂ ನೋಡುತ್ತಾ ಇರುವದು. ಮತ್ತು ಪ್ರಜೆಯು ನೋಡಿ, ತೊಲಗಿ, ದೂರದಿಂದ ನಿಂತು, ೧೯. ಮೋಶೆಗೆ, ನೀನು ನಮ್ಮ ಸಂಗಡ ಮಾತಾಡು, ಆಗ ಕೇಳುವೆವು. ಆದರೆ ದೇವರು ನಮ್ಮ ಸಂಗಡ ಮಾತಾಡದೆ ಇರಲಿ; ನಾವು ಸಾಯ ಬಾರದಲ್ಲಾ೧)? ೨೦. ಮೋಶೆಯು ಜನಾಂಗಕ್ಕೆ ಹೇಳಿದ್ದು: ಹೆದರ ಬೇಡಿರಿ. ನಿಮ್ಮನ್ನು ಶೋಧಿಸುವದಕ್ಕೋಸ್ಕರವೂ೨), ನೀವು ಪಾಪ ಮಾಡದ ಹಾಗೆ ಅವನ ಹೆದರಿಕೆ ನಿಮ್ಮ ಮುಂದೆ ಇರುವದಕ್ಕೋಸ್ಕರವೂ, ದೇವರು ಬಂದಿದ್ದಾನೆ. ೨೧. ಪ್ರಜೆಯು ದೂರದಿಂದ ನಿಲ್ಲಲಾಗಿ, ಮೋಶೆಯು ದೇವರಿರುವ೩) ಕಾರ್ಗತ್ತಲೆಯಲ್ಲಿ ಶೇರಿದನು.

೧. ಪರಿಶುದ್ಧ ದೇವರ ಸಾಮಿಪ್ಯವು ಪಾಪಿಗಳಾದ ಮನುಷ್ಯರಿಗೆ ಭಯಂಕರವಾದದ್ದಾಗಿ, ಅವರ ಹೃದಯಗಳನ್ನು ಸಂಹಾರ ಭಾವನೆಯಿಂದ ಕರಗಿಸುತ್ತದೆ. ಮೋಶೆಯು ತಮಗೂ ದೇವರಿಗೂ ಮಧ್ಯಸ್ಥನಾಗ ಬೇಕೆಂದು, ಬಯಸುತ್ತಾ ಇರುವ ಇಸ್ರಯೇಲನವರು ದೇವರು ೧೯, ೯ರಲ್ಲಿ ಮೋಶೆಗೆ ಮುಂಚೆ ತಿಳಿಸಿದ ಮಾತಿಗೆ ತಾವೇ ಒಪ್ಪಿ ಕೊಳ್ಳುತ್ತಾರೆ.

೨. ನಿಮ್ಮನ್ನು ಕೆಡಿಸುವದಕ್ಕೂ ಕೊಲ್ಲುವದಕ್ಕೂ ಅಲ್ಲ, ನಿಮ್ಮ ವಿಶ್ವಾಸ ವಿಧೇಯತ್ವಗಳನ್ನು ಪರೀಕ್ಷೆಸಿ, ನಿಮ್ಮ ಭಕ್ತಿಯು ನಿಮ್ಮನ್ನು ಪಾಪದಿಂದ ತೊಲಗಿಸಲಾಪದೋ ಏನೋ ಎಂದು, ನೋಡುವದಕ್ಕೆ ಬಂದಿದ್ದಾನೆ.

೩. ಸ. ೩, ೬ರಲ್ಲಿ ಅವನಲ್ಲಿ ಮುಂಚೆ ಕಾಣದೆ ಇದ್ದ ಭರವಸವು ಕೃಪಾಪ್ರಸಾದವಾದ ದೇವಸಾಮಿಪ್ಯಾನುಭವದಿಂದ ಮೋಶೆಯಲ್ಲಿ ಹುಟ್ಟಿತು.

ಬಲಿಪೀಠಗಳ ವಿಷಯವಾದ ಕಟ್ಟಳೆಯು. ಸ. ೨೦, ೨೨ — ೨೬.

ವ. ೨೨. ಆಗ ಯೆಹೋವನು ಮೋಶೆಗೆ ಹೇಳಿದ್ದು: ನೀನು ಇಸ್ರಯೇಲನ ಮಕ್ಕಳಿಗೆ ಹೇಳ ಬೇಕಾದದ್ದೇನಂದರೆ: ಆಕಾಶದಿಂದ ನಿಮ್ಮ ಸಂಗಡ ಮಾತಾಡಿದ್ದೇನೆಂದು,

ನೋಡಿದಿರಿ೧). ೨೩. ನನ್ನ ಬಳಿಯ ಬೆಳ್ಳಿಯ೨) ದೇವರುಗಳನ್ನು ಮಾಡ ಬಾರದು, ಹೊನ್ನಿನ ದೇವರುಗಳನ್ನೂ ನಿಮಗೆ ಮಾಡ ಬಾರದು. ೨೪. ಮಣ್ಣಿನ ಪೀಠವನ್ನು೩) ನನಗೆ ಮಾಡ ಬೇಕು; ಅದರ ಮೇಲೆ ನಿನ್ನ ಹೋಮಗಳನ್ನೂ, ನಿನ್ನ ಸಮಾಧಾನಬಲಿಗಳನ್ನೂ, ಕುರಿ ದನಗಳನ್ನೂ, ಕಡಿಯ ಬೇಕು. ನಾನು ನನ್ನ ಹೆಸರನ್ನು ನೆನವರಿಕೆ ಮಾಡಿಸುವ೪) ಎಲ್ಲಾ ಸ್ಥಳಗಳಲ್ಲಿ ನಿನ್ನ ಬಳಿಗೆ ಬಂದು, ನಿನ್ನನ್ನು ಆಶೀರ್ವದಿಸುವೆನು. ೨೫. ಆದರೆ ಕಲ್ಲುಗಳ ಪೀಠವನ್ನು ನನಗೆ ಮಾಡಿದರೆ, ಅವನ್ನು ಕೆತ್ತಿದವುಗಳಾಗಿ ಕಟ್ಟ ಬಾರದು; ಯಾಕೆಂದರೆ ನಿನ್ನ ಉಳಿಯನ್ನು ಅದರ ಮೇಲೆ ತಂದರೆ, ಅವನ್ನು ಹೊಲೆಗಳಿಸುವಿ೫). ೨೬. ಮತ್ತು ನನ್ನ ಪೀಠವನ್ನು, ನಿನ್ನ ಬತ್ತಲೆತನ ಅದರ ಮೇಲೆ ಕಾಣದಂತೆ೬), ಪಾವಟಿಗೆಗಳಿಂದ ಏರ ಬಾರದು.

೧. ಜೀವವುಳ್ಳ ಸತ್ಯವಾದ ದೇವರು ನಿಮ್ಮಲ್ಲಿದ್ದಾನೆಂಬದನ್ನು, ಕಣ್ಣಾರೆ ಕಂಡಿರಿ; ಆದದರಿಂದ . . . .

೨. ಅನ್ಯ ಜನರ ನಡವಳಿಯ ಪ್ರಕಾರ ಬೆಳ್ಳಿ ಭಂಗಾರದ ಗೊಂಬೆಗಳನ್ನು ರಚಿಸ ಬಾರದು.

೩. ಈ ಕಟ್ಟಳೆಯ ಅರ್ಥವೇನಂದರೆ: ನನ್ನ ಪೀಠಕ್ಕೆ ಮನುಷ್ಯರ ಚಮತ್ಕೃತಿ ಬೇಡ. ಅದು ಬರೀ ಮಣ್ಣಿನಿಂದ, ಇಲ್ಲವೆ ಉಳಿ ಮುಟ್ಟದ ಕಲ್ಲುಗಳಿಂದುಂಟಾಗ ಬೇಕು. ದೇವರು ಹೋರೆಬೆಂಬ ಸಹಜವಾದ ಬಂಡೆಯ ಮೇಲೆ ನಿಮಗೆ ಪ್ರಕಟವಾದದ್ದನ್ನು ಕಂಡಿರಲ್ಲಾ? ನಿಮ್ಮ ಬಳಿಯಣ ದೇವರು ಬಹು ದೊಡ್ಡವನೂ ಪರಿಶುದ್ಧನೂ ಆಗಿರುವದರಿಂದ, ಅವನ ಪೂಜೆಗೆ ಅಲಂಕರಣ ಶಿಲ್ಪ ಚಮತ್ಕೃತಿಯುಳ್ಳ ಪೀಠಗಳು ಬೇಡ. ಸಾಕ್ಷೀ ಗುಡಾರವೂ ಅದರ ಮುಂದಣ ಹೋಮಪೀಠವೂ ಕಟ್ಟಲ್ಪಡುವದಕ್ಕಿಂತ ಮುಂಚೆ ಈ ಆಜ್ಞೆಯುಂಟಾಯಿತು. ಭೂಮಿಗೂ ಭೌಮವಾದದ್ದಕ್ಕೂ ಸಂಬಂಧವಾದ ಪಾಪದ ಪರಿಹಾರಾರ್ಥಕ್ಕಾಗಿ ಕಟ್ಟಿದ ಹೋಮಪೀಠಗಳು ಮಣ್ಣಿನಿಂದ, ಇಲ್ಲವೆ ಮಣ್ಣಿಗೆ ಸರಿಯಾದಂಥ, ಉಳಿ ತಾಗದಂಥ, ಕಲ್ಲುಗಳಿಂದುಂಟಾಗ ಬೇಕೆಂಬ ವಿಧಿಯು ಯುಕ್ತವಾದದ್ದು. ಸಾಕ್ಷೀ ಗುಡಾರದ ಅಂಗಳಲ್ಲಿಯಣ ಪೀಠವು ಮರದ್ದಾಗಿದ್ದರೂ, ಮಣ್ಣು ತುಂಬಿದ್ದಾಗಿತ್ತು. ಪರಿಶುದ್ಧ ಸ್ಥಳದಲ್ಲಿದ್ದ ಧೂಪಪೀಠದ ರಚನೆಯು ಬೇರೆ ಪ್ರಕಾರವಾಗಿತ್ತು.

೪. ಇದರ ಅರ್ಥವೇನಂದರೆ: ನನ್ನ ಹೆಸರನ್ನು ಪ್ರಕಟಿಸಿ, ನನ್ನ ಭಾವವನ್ನೂ ಇಕ್ಕೆಯನ್ನೂ ಗೋಚರಪಡಿಸಿದ್ದರಿಂದ, ನೀವು ನನಗೆ ಬಲಿಪೀಠವನ್ನು ಕಟ್ಟಿಸಿದ್ದಲ್ಲಿ, ನಿಮ್ಮ ಬಳಿಗೆ ಬಂದು—ಇತ್ಯಾದಿ.

೫. ಪಸುಳೆಯಂತಿದ್ದ ಜನಾಂಗವು, ಕರಣದ ಮೇಲೆ ಕಣ್ಣಿಟ್ಟು, ಉದ್ದೇಶವನ್ನು ಮರತು ಬಿಡದ ಹಾಗೆ, ದೇವರು ಬಹು ಜಾಗ್ರತೆಯಾಗಿದ್ದಾನೆ.

೬. ಈ ವಿಷಯವಾಗಿ ಇಲ್ಲಿ ಬರೆದಿರುವ ಅಪ್ಪಣೆಗೆ ಸ. ೨೮, ೪೨. ೪೩ರಲ್ಲಿ ಬರೆದ ಕಟ್ಟಳೆಯು ಒಪ್ಪುವದು. ಸದ್ಯಕ್ಕೆ ಇಷ್ಟೇ ಸಾಕಾಗಿತ್ತು.

(೨೦ನೆ ಸಂಧಿಯಲ್ಲಿ ತೊಡಗಿದ ಸಂಗತಿಗೆ ೨೪ನೆ ಸಂಧಿಯು ಚರಿತ್ರವು ಕೂಡುವದು.)

ಹುನೆಮಕ್ಕಳೆಂಬ ಕೈಯಾಳುಗಳ ವಿಷಯವಾದ ಕಟ್ಟುಗಳು. ಸ. ೨೧, ೧—೧೧.

ದಾಸ್ಯವು ಮೋಶೆಯ ನ್ಯಾಯದ ಪ್ರಕಾರ ಸಲುವಳಿಯಾಗಿತ್ತೆಂಬದು ಸರಿಯಾಗಿದ್ದರೂ, ಅದು ಅನ್ಯ ಜನರಲ್ಲಿ ವಾಡಿಕೆಯಾದ ದಾಸ್ಯ ಪದ್ಧತಿಗಿಂತ ಅತಿ ಲಘುವಾಗಿತ್ತು. ಇಬ್ರಿಯನಾದ ಕೈಯಾಳು ತಾನೇ ಎಂದಿಗೂ ಹುನೆಮಗನಾಗಿ ಒಡೆಯನೊಡನೆ ಉಳುಕೊಳ್ಳ ಮನಸ್ಸಿಲ್ಲದವನಾದರೆ, ೭ನೆ ವರ್ಷದಲ್ಲಿ ಬಿಡುಗಡೆಯಾಗುತ್ತಿದ್ದನು. ಕೈಯಾಳಾಗಿ ಉಳುಕೊಳ್ಳ ಬೇಕೆಂಬವನು ನ್ಯಾಯ ವಿಚಾರಣೆಯ ಸಭೆಯಲ್ಲಿ ದೇವರ ಮುಂದೆ ಬಂದು, ಬಿಡುಗಡೆಯಾಗಲೊಲ್ಲೆನೆಂಬದನ್ನು ಅರಿಕೆ ಮಾಡ ಬೇಕಾಗಿತ್ತು. ವ. ೫. ೬. ಇಬ್ರಿಯಳಾ

ದ ಗೌಡಿಗಳ ಆಡಳಿತೆಯು ತುಸ ಕಠಿಮೆಯಾಗಿದ್ದರೂ, ಅವರನ್ನ ಪರ ಜನರಿಗೆ ಮಾರಿ ಬಿಡೋಣವು ನಿಷೇಧಿತವಾಗಿದ್ದದ್ದಲ್ಲದೆ, ಅವರಿಗೆ ಒಂದೊಂದು ವೇಳೆಗೆ ಪೂರ್ಣವಾಗಿ ಬಿಡುಗಡೆಯಾಗುವ ಮಾರ್ಗವು ದೊರಕುತ್ತಿತ್ತು.

ಕೊಲೆ ಮುಂತಾದ ಪಾತಕಗಳ ಶಿಕ್ಷೆಯು. ಮುಯಿಗೆ ಮುಯಿ ಕೊಡುವ ನ್ಯಾಯವು. ವ. ೧೨ – ೨೭.

ಬೇಕೆಂದು ಮನುಷ್ಯನನ್ನು ಕೊಂದವನು, ಇಲ್ಲವೆ ಜೀವ ನಷ್ಟವಾಗುವ ಹಾಗೆ ಹೊಡೆದವನು, (೧೨. ೧೪.) ಹೆತ್ತವರನ್ನು ಬಡದವನು, ಇಲ್ಲವೆ ಶಪಿಸಿದವನು (೧೫), ಮನುಷ್ಯವ್ಯಾಪಾರ ಮಾಡಿದವನು (೧೬) ಮೊದಲಾದವರಿಗೆ ಪ್ರಾಣಶಿಕ್ಷೆ ನೇಮಕವಾದದ್ದು. ಗುದ್ದಾಡಿದವರಿಗೂ, ದಾಸರ ಅಂಗಹಿಂಸೆಯುವರಿಗೂ, ಬಸುರಿಯನ್ನು ಹೊಡೆದವರಿಗೂ, ನ್ಯಾಯಾಧಿಪತಿಗಳು, ಮುಯಿಗೆ ಮುಯಿ ಕೊಡುವ ನ್ಯಾಯದ ಪ್ರಕಾರ, ಬೇರೆ ಶಿಕ್ಷೆಗಳನ್ನು ನಿರ್ಣೈಸ ತಕ್ಕದ್ದು, ಇತ್ಯಾದಿ.

ಒಬ್ಬನ ಪಶು ಒಬ್ಬನ ಮೈಗೆ, ಇಲ್ಲವೆ ಸೊತ್ತಿಗೆ, ಮಾಡಿದ ನಷ್ಟಕ್ಕೆ ನೇಮಕವಾದ ಶಿಕ್ಷೆಗಳು; ಇತ್ಯಾದಿ. ವ. ೨೮ — ೩೬. ಸ. ೨೨, ೧ — ೧೭.

ಮನುಷ್ಯನನ್ನು ಕೊಂದ ಎತ್ತೂ, ಅದು ಹಾಯುವಂಥಾದ್ದೆಂದು, ತಿಳುಕೊಂಡು, ಕೊಟ್ಟಿಗೆಯಲ್ಲಿ ಬಿಗಿಯಾಗಿ ಕಟ್ಟದೆ ಬಿಟ್ಟ ಯಜಮಾನನು ಕಲ್ಲೆಸದು ಕೊಂದು ಹಾಕಲ್ಪಡ ಬೇಕು. ರಾತ್ರೆಯಲ್ಲಿ ಮನೆ ಹೊಕ್ಕ ಕಳ್ಳನನ್ನು ಹೊಡೆದು, ಅವನನ್ನು ಕೊಂದವನಿಗೆ ಶಿಕ್ಷೆಯಿಲ್ಲ. ಏನಾದರೂ ನಷ್ಟ ಮಾಡಿದವನು ಬದಲಿಗೆ ಬದಲು ಕೊಡುವದು. ಕನ್ನಿಕೆಯನ್ನು ಕೆಡಿಸಿದವನು ಅವಳ ತಂದೆಗೆ ತೆರವನ್ನು ಕೊಟ್ಟು, ಅವನು ಒಪ್ಪಿಕೊಂಡರೆ, ಅವಳನ್ನು ಮದಿವೆ ಮಾಡಿ ಕೊಳ್ಳುವದು.

ಬೇರೆ ಬೇರೆ ತರದ ನೇಮಕಗಳು. ಸ. ೨೨, ೧೮ — ೩೧.

ಶೂನ್ಯಗಾರ್ತಿಯು ಬದುಕ ಬಾರದು. ಪಶುಸಂಗಮಕ್ಕೆ ಪ್ರಾಣಶಿಕ್ಷೆಯು ನೇಮಕವಾದದ್ದು. (ಅದು ಮಿಚ್ರದವರ ದೇವಪೂಜೆಯಲ್ಲಿಯೂ ಶೇರಿ ಇತ್ತು, ಅಕಟ!) — ಪರದೇಶಸ್ಥರಿಗೂ ವಿಧವೆಗಳಿಗೂ ದಿಕ್ಕಿಲ್ಲದವರಿಗೂ ಉಪಕಾರ ಮಾಡ ಬೇಕು. ಸ್ವಜನಾಂಗದವರ ಕೈಯಿಂದ ಬಡ್ಡಿ ತಕ್ಕೊಳ್ಳ ಬಾರದು, ಪರಜನರ ಕೈಯಿಂದ ತಕ್ಕೊಳ್ಳ ಬಹುದು. ದೇವರನ್ನೂ, ದೇವರ ಪ್ರತಿನಿಧಿಗಳಾದ ಅಧಿಪತಿಗಳನ್ನೂ, ನಿಂದಿಸಲೂ ಶಪಿಸಲೂ ಬಾರದು. ಪಕ್ವಫಲಗಳಲ್ಲಿಯೂ, ರಸವರ್ಗಗಳಲ್ಲಿಯೂ, ತಕ್ಕ ಪಾಲನ್ನು ದೇವರಿಗರ್ಪಿಸುವದನ್ನು ತಡೆಯ ಬಾರದು. ಚೊಚ್ಚಲ ಮಗನನ್ನೂ, ಕುರಿ ದನಗಳಲ್ಲಿ ಚೊಚ್ಚಲವಾದವುಗಳನ್ನೂ ಕರ್ತನಿಗೆ ಕೊಡುವದು.

ಶುದ್ಧವಾದ ನೆರೆಯವನ ಪ್ರೀತಿಯಿಂದ ಹುಟ್ಟ ತಕ್ಕ ದೃಢವಾದ ಸತ್ಯನೀತಿಗಳ ವಿಷಯವಾದ ಕಟ್ಟಳೆಗಳು. ೨೩, ೧ — ೯.

ಸುಳ್ಳು ಸುದ್ದಿ ಎತ್ತ ಬಾರದು. ಸುಳ್ಳು ಸಾಕ್ಷೀ ಕೊಟ್ಟು, ಅನ್ಯಾಯಿಗೆ ಸಹಾಯ ಮಾಡ ಬಾರದು. ಹತ್ತರ ಕೂಡ ಹನ್ನೊಂದೆಂದು ಜನಸಮೂಹದ ಬೆನ್ನು ಹತ್ತಿ, ಸತ್ಯ ನೀತಿಗಳ ಮಾರ್ಗದಿಂದ ತೊಲಗ ಬಾರದು. ಅನ್ಯಾಯ ಮಾಡಿದ ಬಡವನಿಗಾದರೂ ಮುಖದಾಕ್ಷಿಣ್ಯ ಮಾಡ ಬಾರದು. ಶತ್ರುವನ್ನು ಕೃತ್ಯದಿಂದಲೇ ಪ್ರೀತಿ ಮಾಡ ಬೇಕು. ನ್ಯಾಯಸ್ಥಾನದಲ್ಲಿ ಸುಳ್ಳುಗಾರನ ಗೊಡವೆ ಬೇಡ. ನಿರಪರಾಧಿಗೆ ಆಜ್ಞೇನಿರ್ಣಯ ಮಾಡ ಬಾರದು. ಕಾಣಿಕೆ ತಕ್ಕೊಳ್ಳ ಬಾರದು, "ಯಾಕಂದರೆ ಕಾಣಿಕೆಯು ಕಾಂಬವನ ಕಣ್ಣು ಕಟ್ಟುವದು, ನೀತಿವಂತನ ವ್ಯಾಜ್ಯವನ್ನು ಕೆಡಿಸುವದು." ವ. ೮. ಪರದೇಶಸ್ಥರಿಗೂ ನ್ಯಾಯವನ್ನು ಸರಿಯಾಗಿ ತೀರಿಸ ಬೇಕು.

೨೪೨ ಹಬ್ಬಗಳ ಕಟ್ಟುಗಳು. ಕನಾನ ದೇಶದ ವಿಷಯವಾದ ಬೋಧನೆ.

ಹೊರಡೋಣ. ೨೩, ೧೦—೩೩.

ಸಬ್ಬತ್ ವರ್ಷವು. ಹಬ್ಬಗಳ ವಿಷಯವಾದ ಕೆಲವು ಕಟ್ಟುಗಳು. ವ. ೧೦—೧೯.

ಭೂಮಿಯು ಏಳನೆ ವರ್ಷದಲ್ಲಿ ಬಡವರಿಗಾಗಿ ಬೇಸಾಯವಿಲ್ಲದೆ ಶೀರುಗಡೆಯಾಗಿರ ಬೇಕು. ಇಸ್ರಯೇಲನವರಿಗೆ ನೇಮಕವಾದ ದೊಡ್ಡ ಹಬ್ಬಗಳು ಯಾವವಂದರೆ: ೧. ಪಸ್ಕ ಎಂಬ ಹುಳಿ ಇಡದ ರೊಟ್ಟಿಗಳ ಹಬ್ಬವು. ೨. ವ್ಯವಸಾಯ ಪ್ರಥಮಫಲದ ಹಬ್ಬವಾದ ಪಂಚಾಶತ್ ಹಬ್ಬವು. ಅದು ಗೋಧಿ ಸಬ್ಬಕ್ಕಿ ಮುಂತಾದದರ ಕೊಯಿಲಿನ ಮೇಲೆ ಆಚರಣೆಯಾಯಿತು. ೩. ರಾಜ್ಯಗಣನೆಯ ವರ್ಷದ ಕಡೆಯಲ್ಲಿ (ಒಕ್ಟೋಬರ್ ತಿಂಗಳಲ್ಲಿ) ದ್ರಾಕ್ಷೆ ಇಪ್ಪೆ ಮೊದಲಾದ ಗಿಡಗಳ ಫಲವನ್ನು ಕೂಡಿಸಿದ ಬಳಿಕ ಗುಡಾರ ಹಬ್ಬವೆಂಬ ಸುಗ್ಗಿ ಹಬ್ಬವು. ಇವುಗಳಲ್ಲಿ ಮೊದಲನೇದು ಪಾಪಪರಿಹಾರದ ಹಬ್ಬವು, ಎರಡನೇದು ಕೃತಜ್ಞತಾಹಬ್ಬವು, ಮೂರನೇದು ಸಂತೋಷದ ಹಬ್ಬವು. ಈ ದೊಡ್ಡ ಹಬ್ಬಗಳನ್ನಾಚರಿಸುವದಕ್ಕೆ ಇಸ್ರಯೇಲನವರಾದ ಗಂಡಸರೆಲ್ಲಾ ಯೆಹೋವನ ಮುಂದೆ ಕಾಣಿಸಿ ಕೊಳ್ಳ ಬೇಕಾಗಿತ್ತು. ವ. ೧೭.— ಯಾವ ಬಲಿಯಲ್ಲಾದ್ರರೂ ಹುಳಿ ಹಿಟ್ಟನ್ನು ಬಳಸಲಾಗದಿತ್ತು. ವ. ೧೮.—ಮೇಕೆಯ ಮರಿಯನ್ನು ತಾಯಿಯ ಹಾಲಿನಲ್ಲಿ ಬೇಯಿಸಲಾಗದಿತ್ತು. ವ. ೧೯.— ಇದರ ಅಭಿಪ್ರಾಯವೇನಂದರೆ: ಇಸ್ರಯೇಲನವರು ಪಶುಗಳಿಗೂ ದಯಾಳುಗಳಾಗಿದ್ದು, ಎಳೆ ಪ್ರಾಯದ ಮರಿಗಳನ್ನು ಕೊಯಿದು, ತಾಯಿಗಳನ್ನು ನೊಂದಿಸದೆ ಇರ ಬೇಕಾಯಿತು. ಸತ್ತ ಕರುವಿನ ತಾಯ ಹಾಲ ಕರೆವವ ಮೂರ್ಖನೆಂದು ಹೇಳುವ ಪುರಂದರದಾಸನ ಪದವು ಅದೇ ಬುದ್ಧಿಯಿಂದ ಹುಟ್ಟಿತೋ ಏನೋ?

ಕನಾನ ದೇಶಕ್ಕೆ ಪಯಣ ಮಾಡುವವರಿಗೆ ದೇವರು ತಿಳಿಸಿದ ಬೋಧನೆ ಎಚ್ಚರಿಕೆಗಳ ಮಾತುಗಳೂ ವಾಗ್ದತ್ತಗಳೂ. ೨೩, ೨೦—೩೩.

ವ ೨೦. ಇಗೋ, ನಿನ್ನನ್ನು ಹಾದಿಯಲ್ಲಿ ಕಾಯುವ ಬಗ್ಯೆಯೂ, ನಾನು ಹವಣಿಸಿದ ಸ್ಥಳಕ್ಕೆ ನಿನ್ನನ್ನು ಬರಲೀಸುವ ಬಗ್ಯೆಯೂ, ನಾನು ದೂತನನ್ನು[೧] ನಿನ್ನ ಮುಂದೆ ಕಳುಹಿಸುತ್ತೇನೆ. ೨೧. ಅವನ ಮೋರೆಗೆ ಜೋಕೆಯಾಗಿರು; ಅವನ ಶಬ್ದವ ಕೇಳು; ಅವನಿಗೆ ಮಾರ್ಮಲೆಯದಿರು; ಯಾಕೆಂದರೆ ನನ್ನ ಹೆಸರು ಅವನೊಳು ಇರುವದರಿಂದ[೧], ನಿಮ್ಮ ದ್ರೋಹಗಳನ್ನು ಮನ್ನಿಸನು. ೨೨. ಆದರೆ ಅವನ ಶಬ್ದವ ಕೇಳೇ ಕೇಳಿ, ನಾನು ಹೇಳುವದನ್ನೆಲ್ಲಾ ಮಾಡುವಿಯಾದರೆ, ನಿನ್ನ ಹಗೆಯವರನ್ನು ಹಗೆ ಮಾಡಿ, ನಿನ್ನನ್ನು ಕಾದುವವರನ್ನು ಕಾದುವೆನು. ೨೩. — —. ೨೪. ಅವರ (ಕನಾನ ದೇಶಸ್ಥರ) ದೇವರುಗಳಿಗೆ ಅಡ್ಡ ಬೀಳದೆ, ಅವುಗಳನ್ನು ಸೇವಿಸದೆ, ಅವರ ನಡತೆಯ ಪ್ರಕಾರ ನಡೆಯದೆ, ಅವರನ್ನು ನಾಶನ ಮಾಡಿ, ಅವರ ವಿಗ್ರಹಗಳನ್ನು ಒಡೆದು ಬಿಡು[೨]. ೨೫. ಆದರೆ ನಿಮ್ಮ ದೇವರಾದ ಯೆಹೋವನನ್ನು ಸೇವಿಸು; ಆಗ ನಿನ್ನ ರೊಟ್ಟಿಯನ್ನೂ ನಿನ್ನ ನೀರನ್ನೂ ಆಶೀರ್ವದಿಸಿ, ರೋಗವನ್ನು ನಿನ್ನ ನಡುವೆಯೊಳಗಿಂದ ತೊಲಗಿಸುವೆನು. ೨೬. ಹಲವಿಳಿಯುವವಳೂ, ಗೊಡ್ಡು ಹೆಣ್ಣೂ, ನಿನ್ನ ದೇಶದಲ್ಲಿ ಇರಳು. ನಿನ್ನ ದಿವಸಗಳ ಲೆಖ್ಖವನ್ನು ತುಂಬಿಸುವೆನು[೩]. ೨೭. ನನ್ನ ದಿಗುಲನ್ನು ನಿನ್ನ ಮುಂದೆ ಕಳುಹಿಸುವೆನು. ನೀನು ಒಳಪೊಗುವ ಜನಾಂಗಗಳನ್ನೆಲ್ಲಾ ಚದರಿಸುವೆನು. ನಿನ್ನ ಹಗೆಯವರನ್ನೆಲ್ಲಾ ನಿನಗೆ ಬೆಂಬರಿಯಲೀಸುವೆನು. ೨೮. ಹಿವ್ವಿಯರನ್ನೂ, ಕನಾನದವರನ್ನೂ,

ಹಿಥ್ಥಿಯರನ್ನೂ, ನಿನ್ನ ಮುಂದೆ ಹೊರಡಿಸುವ ಕುರುಟಿಗನ ಹುಳವನ್ನು[೪] ನಿನ್ನ ಮುಂ
ದೆ ಕಳುಹಿಸುವೆನು. ೨೯. ಒಂದು ವರ್ಷದಲ್ಲಿ ಅವರನ್ನು ನಿನ್ನ ಮುಂದೆ ಹೊರಡಿಸೆ
ನು— —. ೩೦. ಕೊಂಚ ಕೊಂಚವಾಗಿ[೫] ಅವರನ್ನು ಹೊರಡಿಸುವೆನು— —. ೩೧. ಮ
ತ್ತು ನಿನ್ನ ಗಡಿಯನ್ನು ಆಪಿನ ಸಮುದ್ರದಿಂದ ಪಿಲಿಷ್ಟಿಯರ ಸಮುದ್ರದ ವರೆಗೂ, ಅರ
ಣ್ಯದಿಂದ ನದಿಯ ವರೆಗೂ ಇರಿಸುವೆನು[೬]. ೩೨. ಅವರ ಸಂಗಡಲೂ, ಅವರ ದೇವ
ರುಗಳ ಸಂಗಡಲೂ, ಒಡಂಬಡ ಬಾರದು. ೩೩. ನಿನ್ನನ್ನು ಅವರ ದೇವರುಗಳನ್ನು ಸೇ
ವಿಸಿ ನನಗೆ ಪಾಪ ಮಾಡಿಸದ ಹಾಗೆ, ಅವರು ನಿನ್ನ ದೇಶದಲ್ಲಿ[೭] ವಸ್ತಿಯಾಗ ಬಾರ
ದು; ಯಾಕೆಂದರೆ ಅದು ನಿನಗೆ ಉರ್ಲಾಗುವದು.

೧. ಈ ದೂತನಿಗೂ ಸ. ೩೩, ೨—೪ರಲ್ಲಿ ಸೂಚಿತವಾದ ದೂತನಿಗೂ ಬಹಳ ಹೆಚ್ಚು ಕಡಿಮೆ. ಅಲ್ಲಿ ಯೆಹೋವನು ಮಾರ್ಮಲತಿರುವ ಜನಾಂಗಕ್ಕೆ ಮುನಿದು, ತನ್ನ ಸಾಮಿಪ್ಯವನ್ನು ಅದಕ್ಕೆ ದೂರ ಮಾಡಿ, ತನ್ನ ಸನ್ನಿಧಿಯನ್ನು ಅವರ ದಂಡಿನಿಂದ ತೊಲಗಿಸಿ, ತನಗೆ ಪ್ರತಿಯಾಗಿ ನಿರ್ಮಿತನಾದ ದೂತನನ್ನು ಅದಕ್ಕೆ ನಾಯಕನಾಗಿರಿಸುವ ಆಲೋಚನೆಯಲ್ಲಿದ್ದಾನೆ. ಹಾಗಾದರೆ ಇಸ್ರಯೇಲನವರು ದೇವರ ಸ್ವಕೀಯ ಜನಾಂಗವೆಂಬ ಮಹಿಮೆಯನ್ನು ಕಳಕೊಂಡು, ಉಳಿದ ಅನ್ಯಜನರ ಸ್ಥಿತಿಗತಿಗಳಲ್ಲಿ ಶೇರ ಬೇಕಾಗುತ್ತಿತ್ತು. ಆದರೆ ಇಲ್ಲಿಯುಣ ದೂತನು ದೂತರಲ್ಲಿಯಾಗಲಿ ದೂತಗಣೇಶರಲ್ಲ್ಯಾಗಲಿ ಒಬ್ಬನಲ್ಲ, ಅಣಿಮಾದ್ಯೈಶ್ವರ್ಯವುಳ್ಳ ಅನಾದಿ ತೇಜರೂಪನಾಗಿದ್ದು, ಆಯಿಕೆಯ ಜನಾಂಗದ ನಡುವೆಯಲ್ಲಿ ಪ್ರತ್ಯಕ್ಷನಾಗಿದ್ದ, ಜೀವವುಳ್ಳ ಸತ್ಯ ದೇವರು ತಾನೇ ಅಂಕೆ. ೨೦, ೧೬ರಲ್ಲಿ ಇಸ್ರಯೇಲನವರನ್ನು ಮಿಚ್ರದಿಂದ ಹೊರ ಬರ ಮಾಡಿದ ದೂತನೆಂದು, ಯೆಹೋಷು. ೫, ೧೪ರಲ್ಲಿ ಸೇನೇಶನೆಂದು, ಸ. ೩೩, ೧೪ರಲ್ಲಿ ಯೆಹೋವನ ಮುಖವೆಂದು, ಯೆಶಾ. ೬೩, ೯ರಲ್ಲಿ ದೇವರ ಮುಖದ ದೂತನೆಂದು, ಮಲಕಿ. ೩, ೧ರಲ್ಲಿ ಒಡಂಬಡಿಕೆಯ ದೂತನೆಂದು, ಅವನಿಗೆ ಹೆಸರದೆ.

೨. ಹೊಸ್ತಾಗಿ ಹುಟ್ಟಿದ ಒಡಂಬಡಿಕೆಯ ಜನಾಂಗವಾದ ಇಸ್ರಯೇಲದ ಶಿಶುಪ್ರಾಯದ ಗುಣವೂ, ಈ ಮೂಲದಿಂದ ಅದಕ್ಕೆ ಬರುವಂಥ ಯೆಹೋವನ ಹೊರ್ತಾಗಿ ದೇಶ್ಯ ದೇವತೆಗಳನ್ನು ಲಕ್ಷಿಸುವ ಗಂಡಾಂತರವೂ ನೆರೆಗೊತ್ತಾದ್ದರಿಂದ, ದಿಟವಾದ ಈ ಆಜ್ಞೆಯನ್ನು ಆರಂಭದಲ್ಲಿಯೇ ಕೊಡುವದು ಯುಕ್ತವಾಗಿತ್ತು.

೩. ಭಕ್ತಿಯು ಎಲ್ಲಾಕ್ಕೂ ಪ್ರಯೋಜನವಾಗಿದೆ. ಅದಕ್ಕೆ ಇಹಪರ ಜೀವಗಳ ವಾಗ್ದತ್ತವುಂಟು. ಈ ವಾಕ್ಯವು ನಂಬಿಕೆಯಾಗಿಯೂ ಎಲ್ಲಾ ಅಂಗೀಕಾರಕ್ಕೆ ಯೋಗ್ಯವಾಗಿಯೂ ಇರುತ್ತದೆಂದು, ಪಾಲನು ೧ತಿಮೊ. ೧, ೮. ೯ರಲ್ಲಿ ಬರೆದ ಧರ್ಮವನ್ನು ದೇವರು ಆದಿಯಿಂದ ನಡಿಸುತ್ತಾ ಬಂದದ್ದು ಇಲ್ಲಿ ಕಾಣುತ್ತದೆ.

೪. ಶಾನೆ ಕಾಡುವ ಈ ಹುಳವು ದೇವರ ಭಯಂಕರವಾದ ಶಿಕ್ಷೆಗಳನ್ನು ಸೂಚಿಸುವ ಸಾಮ್ಯಶಬ್ದವೆಂದು, ವ್ಯಾಖ್ಯಾನಿಕರಲ್ಲಿ ಕೆಲವರು ನೆನಸುತ್ತಾರೆ. ಸಮನೋಡು ವ. ೨೭. ಯೆಹೋಷು. ೨೪, ೧೨.

೫. ಇಸ್ರಯೇಲನವರು ಒಮ್ಮೆ ದೇಶವನ್ನು ಎಲ್ಲಾ ಸ್ವತಂತ್ರಿಸಿ ಕೊಂಡು, ಅದನ್ನು ತುಂಬಿಸಿ, ಎಲ್ಲಾ ಕಡೆಯಲ್ಲಿ ವ್ಯವಸಾಯ ಮಾಡುವದು ಅಸಾಧ್ಯವಾಗಿದ್ದದರಿಂದ, ಮುಂಚಿನ ನಿವಾಸಿಗಳು ಒಮ್ಮೆ ಸಂಹಾರವಾದದ್ದಾದರೆ, ಕಾಡು ಹೆಚ್ಚಿ, ಮೃಗಜಾತಿ ಪ್ರಬಲವಾಗುತ್ತಿತ್ತು. ಆದದರಿಂದ ಕನಾನ್ಯರು ಮೆಟ್ಟುಮೆಟ್ಟಾಗಿ ನಾಶನವಾಗ ಬೇಕಾಗಿತ್ತು. ಇದಲ್ಲದೆ ದೇವರು ವಾಗ್ದತ್ತ ಮಾಡಿದ ಸೀಮೆಯ ಪ್ರಾಂತ್ಯಗಳು ಮಧ್ಯಸಮುದ್ರದಿಂದ ಫ್ರಾತು ನದಿಯ ವರೆಗೆ ಹೋಗುವದರಿಂದ, ೩೦ ಲಕ್ಷ ಜನರು ಆ ಸೀಮೆಯನ್ನೆಲ್ಲಾ ಒಂದೆ ಸರ್ತಿ ವಶ ಮಾಡಿ ಕೊಂಡು ತುಂಬಿಸಲಿಕ್ಕೆ ಆಗುತ್ತಿದ್ದಿಲ್ಲ. ಇದಕ್ಕೆ ಹೆಚ್ಚು ಜನಸಂಖ್ಯೆಯು ಬೇಕಾಗುತ್ತದೆ ಎಂಬ

ದಕ್ಕೆ ಆ ಶೀಮೆಯ ಈಗಿನ ಸ್ಥಿತಿಯು ಸಾಕಾದ ದೃಷ್ಟಾಂತವಾಗಿರುತ್ತದೆ.

೬. ಕೆಂಪು ಸಮುದ್ರದಿಂದ ಮಧ್ಯಸಮುದ್ರಕ್ಕೂ, ಅರಣ್ಯದಿಂದ ಫ್ರತ್‌ನದಿಗೂ, ಹೋಗುವ ಗಡಿಯು ದೇವರಿಂದ ಇಸ್ರಯೇಲನವರ ದೇಶಕ್ಕೆ ನೇಮಕವಾಯಿತು. ಆದರೆ ಅವರು ದಾವೀದ ಸಲೊಮೋನರ ಕಾಲದಲ್ಲಿ ಮಾತ್ರ ಈ ಗಡಿಯೊಳ್ಗಣ ವಾಗ್ದತ್ತ ದೇಶವನ್ನು ಪೂರ್ಣವಾಗಿ ಸ್ವತಂತ್ರಿಸಿ ಕೊಂಡರು. ಇಸ್ರಯೇಲನವರ ಅವಿಧೇಯತ್ವದಿಂದ ದೇವರ ವಾಗ್ದತ್ತದ ಸಂಪೂರ್ಣತೆಗೆ ಅಡ್ಡಿಯಾಯಿತು.

೭. ದೇವರ ಆಜ್ಞೆಯನ್ನು ತಿಳುಕೊಂಡು, ಕೈಕೊಳ್ಳದೆ ಹೋದದರಿಂದ ಇಸ್ರಯೇಲನವರು ವಿಗ್ರಹಾರಾಧನೆಯ ಬೋನಿನಲ್ಲಿ ಸಿಕ್ಕಿ ಬಿದ್ದು, ದೇವದ್ರೋಹಕ್ಕೂ ಅದರ ಫಲವಾದ ಶಾಪಕ್ಕೂ ಬಳಗಾದರು.

ನೇಮಧಾನದ ಮೂಲವಾಗಿ ಉಂಟಾದ ಒಡಂಬಡಿಕೆಯ ಸ್ಥಾಪನೆಯ ಪ್ರತಿಷ್ಠೆಯು. ಸ. ೨೪, ೧—೮.

೧ನೆ ೨ನೆ ವಚನಗಳಲ್ಲಿ ೯ನೆ ವಚನಕ್ಕೆ ಯುಕ್ತವಾದ ಪೂರ್ವೋಕ್ತಿಯು ಬರೆದದೆ.

೩. ಆಗ ಮೋಶೆಯು ಬಂದು೧), ಯೆಹೋವನ ಎಲ್ಲಾ ಮಾತುಗಳನ್ನೂ ಎಲ್ಲಾ
ನ್ಯಾಯಗಳನ್ನೂ ಪ್ರಜೆಗೆ ವಿವರಿಸಲು, ಪ್ರಜೆಯೆಲ್ಲಾ ಒಂದೇ ಶಬ್ದದಿಂದ ಮಾರ್ನುಡಿ
ದು, ಯೆಹೋವನು ನುಡಿದ ಎಲ್ಲಾ ನುಡಿಗಳನ್ನು ಮಾಡುತ್ತೇವೆ೨), ಅಂದಿತು. ೪.
ಆಗ ಮೋಶೆಯು ಯೆಹೋವನ ನುಡಿಗಳನ್ನೆಲ್ಲಾ ಬರೆದು೩), ಬೆಳಿಗ್ಯೆ ಎದ್ದು, ಬೆಟ್ಟದ
ಅಡಿಯಲ್ಲಿ ಬಲಿಪೀಠವನ್ನೂ ಇಸ್ರಯೇಲನ ಹನ್ನೆರಡು ಕುಲಗಳಿಗೆ ಹನ್ನೆರಡು ಸ್ತಂಭಗ
ಳನ್ನೂ ಕಟ್ಟಿ೪), ೫. ಇಸ್ರಯೇಲನ ಮಕ್ಕಳ ಯೌವನಸ್ಥರನ್ನು ಕಳುಹಿಸಲು, ಅವರು
ಯೆಹೋವನಿಗೆ ಹೋಮಗಳನ್ನರ್ಪಿಸಿ, ಸಮಾಧಾನಬಲಿಗಳಿಗಾಗಿ ಎತ್ತುಗಳನ್ನು ಕ
ಡಿದರು. ೬. ಮತ್ತು ಮೋಶೆಯು ರಕ್ತದ ಅರೆವಾಶಿಯನ್ನು ತಕ್ಕೊಂಡು ಬಟ್ಲುಗಳ
ಲ್ಲಿಟ್ಟು, ರಕ್ತದ ಅರೆವಾಶಿಯನ್ನು ಬಲಿಪೀಠದ ಮೇಲೆ ಚಿಮುಕಿಸಿದನು. ೭. ಆಗ
ಒಡಂಬಡಿಕೆಯ ಹೊತ್ತಿಗೆ ತಕ್ಕೊಂಡು, ಜನರ ಕಿವಿಗಳಲ್ಲಿ ಓದಿ ಹೇಳಲು, ಅವರು ಯೆ
ಹೋವನು ನುಡಿದದ್ದನ್ನೆಲ್ಲಾ ಮಾಡುತ್ತೇವೆ ಮತ್ತು ಕೇಳುತ್ತೇವೆ, ಅಂದರು. ೮. ಆ
ಗ ಮೋಶೆಯು ರಕ್ತ ತಕ್ಕೊಂಡು, ಪ್ರಜೆಯ ಮೇಲೆ ಚಿಮುಕಿಸಿ೫), ಇಗೋ, ಈ ನುಡಿ
ಗಳೆಲ್ಲಾದರ ಮೇಲೆ ಯೆಹೋವನು ನಿಮ್ಮ ಸಂಗಡ ಕಟ್ಟಿದ ಒಡಂಬಡಿಕೆಯ ರಕ್ತವು೬),
ಅಂದನು.

೧. ಸ. ೨೦, ೨೧ರಲ್ಲಿ ದೇವರು ಇರುವ ಕತ್ತಲೆಯಲ್ಲಿ ಮೋಶೆಯು ಶೇರಿದನೆಂದು, ಬರೆದದೆ. ಈ ವರೆಗೆ ಪ್ರಕಟವಾದ ಒಡಂಬಡಿಕೆಯ ವಾಕ್ಯಗಳನ್ನೂ, ಅವುಗಳಿಗೆ ಸಂಯುಕ್ತವಾದ ವಾಗ್ದತ್ತವನ್ನೂ, ಅವನು ಅಲ್ಲಿ ದೇವರಿಂದ ಹೊಂದಿದನು. ಹೊಂದಿದ ಮೇಲೆ ದೇವರ ಬಳಿಯಿಂದ ಬಂದು, ಜನಾಂಗಕ್ಕೆ ಎಲ್ಲಾನ್ನು ತಿಳಿಸುತ್ತಾನೆ. ೧, ೨ನೆ ವಚನಗಳಲ್ಲಿ ಬರದಿರುವ ಅಪ್ಪಣೆಯನ್ನು ದೇವರು ಮೋಶೆಗೆ ನೇಮ ಪ್ರಕಟಣೆಯ ಕಡೆಯಲ್ಲಿ ಕೊಟ್ಟು, ಅವನು ಇಳಿದು ಹೋಗಿ, ೩ನೆಯಿಂದ ೮ನೆ ವರೆಗೂ ಲಿಖಿತವಾದದ್ದನ್ನು ಮಾಡಿ ತೀರಿಸಿದನಂತರ, ಹಿರಿಯರ ಕೂಡಾ ತಿರಿಗಿ ಏರಿ ಬರಬೇಕೆಂದು, ಬೆಸಸಿದನೆಂದು, ಕಾಣುತ್ತದೆ. ಆಗ ದೇವರಿತ್ತ ಅಪ್ಪಣೆಯ ಮೇರೆಗೆ ಮೋಶೆಯು ಮಾಡಿದ್ದು ೯ನೆ ಮುಂತಾದ ವಚನಗಳಲ್ಲಿ ಬರುತ್ತದೆ.

೨, ಸ. ೨೦, ೧೮ರಲ್ಲಿ ವಿಧೇಯತ್ವದ ಮಾತು ಕೊಟ್ಟ ಜನರು ೨೦—೨೩ಸಂಧಿಗಳಲ್ಲಿ ಬರೆದ ಕಟ್ಟಳೆಗಳನ್ನು ಎಲ್ಲಾ ಕೇಳಿದ ಬಳಿಕ, ಎಲ್ಲಾಕ್ಕೆ ಏಕಮನಸ್ಸಿನಿಂದಲೂ ಸಂತೋಷದಿಂದಲೂ ಒಪ್ಪಿ ಕೊಂಡರು. ಮತ್ತು ಮೋಶೆಯು ಮೊದಲು ಬಾಯಿಂದ ಹೇಳಿದ್ದನ್ನು ಕೈಯಿಂದ ಬರೆದು, ಬರೆದದ್ದನ್ನು ಓದಿ ಹೇಳಿದನಂತರ, ಅವರು ಮರಳಿ ಸಮ್ಮತರಾಗಿದ್ದೇವೆಂದು, ಅರಿಕೆ ಮಾಡಿದರು. ಈ ಪ್ರಕಾರವಾಗಿ ಇಸ್ರಯೇಲನವರು ತಾವು ಒಡಂಬಟ್ಟದೆಲ್ಲಾದರ ಅಭಿಪ್ರಾಯವನ್ನು ಚನ್ನಾಗಿ ತಿಳಿಯದಿರಲಾರದಿದ್ದರು.

೩. ಸ. ೧೭, ೧೪ರ ಪ್ರಕಾರ ಮೋಶೆಯು ಮುಂಚಿತವಾಗಿ ಅಮಲೇಕನವರ ಸಂಗತಿಯನ್ನು ದೇವರ ಅಪ್ಪಣೆಯ ಪ್ರಕಾರ ಬರದಿಟ್ಟನು. ಹೀಗೆ ಬೇರೆ ಬೇರೆಯಾಗಿ ಉಂಟಾದ ಬರಹಗಳಿಂದ ಬಳಿಕ ಅರಣ್ಯಸಂಚಾರಕಾಲದೊಳಗೆ ಮೋಶೆಯ ಪುಸ್ತಕಗಳ ಸಂಗ್ರಹವು ಹುಟ್ಟಿತೆಂದು, ನೆನಸುವದು ಸಹಜವಾಗಿದೆ.

೪. ಸಾಕ್ಷಿಯ ಗುಡಾರವು ಇನ್ನು ರಚಿತವಾಗಲಿಲ್ಲದದರಿಂದಲೂ, ಉಂಟಾದ ಒಡಂಬಡಿಕೆಯು ದಹನಬಲಿಗಳಿಂದಲೂ ಸ್ತೋತ್ರಬಲಿಗಳಿಂದಲೂ ದೃಢವಾಗಬೇಕಾದದರಿಂದಲೂ, ಪ್ರತ್ಯೇಕವಾದ ಒಂದು ಪೀಠವನ್ನು ಕಟ್ಟಿಸಲವಶ್ಯವಾಗಿತ್ತು.

೫. ಬಲಿಪೀಠದ ಮೇಲೆ ಚಿಮುಕಿಸಿದ ರಕ್ತವು ಯೆಹೋವನು ಒಡಂಬಡಿಕೆಯ ಬಾಧ್ಯಸ್ಥನೆಂಬದಕ್ಕೆ, ಜನಾಂಗದ ಮೇಲೆ ತಳಿ ಹಾಕಿದ ರಕ್ತವು ಅವರು ದೇವರ ಕೃಪೆಯನ್ನು ಅಂಗೀಕರಿಸಿ ವಿಧೇಯರಾಗಿರುವ ಹಂಗಿಗೆ ಒಳಗಾದರೆಂಬದಕ್ಕೆ ಗುರುತಾಗಿತ್ತು.

೬. ಇದು ಹೊಸ ಒಡಂಬಡಿಕೆಯ ರಕ್ತಕ್ಕೆ ಜಾಡೆಯಾದ ಸೂಚನೆಯಾಗಿತ್ತು.

ಹಿರಿಯರು ದೇವರ ಮಹಿಮೆಯನ್ನು ಕಣ್ಣಾರೆ ಕಂಡದ್ದು. ಸ. ೨೪, ೯—೧೧.

ವ. ೯. ಆಗ ಮೋಶೆ ಆರೋನ ನಾದಾಬ ಅಬೀಹು ಮೊದಲಾದ ಇಸ್ರಯೇಲನವರ ಹಿರಿಯರಲ್ಲಿ ಎಪ್ಪತ್ತು ಮಂದಿ ಏರಿ ಹೋಗಿ[೧], ೧೦. ಇಸ್ರಯೇಲನ ದೇವರನ್ನು[೨] ಕಂಡರು; ಅವನ ಪಾದಗಳ ಅಡಿಯಲ್ಲಿ ನೀಲ ಕಲ್ಲಿನ ಕೆಲಸದೋಪಾದಿಯಾಗಿಯೂ ನಿರ್ಮಲವಾದ ಆಕಾಶರೂಪದೋಪಾದಿಯಾಗಿಯೂ ಇತ್ತು. ೧೧. ಆದರೆ ಇಸ್ರಯೇಲನ ಮಕ್ಕಳ ಹೆಗ್ಗಳಿಕರ ಮೇಲೆ ಅವನು ಕೈ ಹಾಕಲಿಲ್ಲ[೩]; ಅವರು ದೇವರನ್ನು ದೃಷ್ಟಿಸಿ, ಉಂಡು ಕುಡಿದರು[೪].

೧. ದೇವರ ಮಹಿಮೆಯು ವಾಸವಾದ ತುದಿಯುಳ್ಳ ಬೆಟ್ಟದ ಒಂದು ಮೇಡಿಗೆ ಅವರು ಏರಿದರು.

೨. ಅವರು ದೇವರ ಸಂಗಡ ಒಡಂಬಡಿಕೆಯನ್ನು ಕಟ್ಟಿಕೊಂಡ ಇಸ್ರಯೇಲನವರ ಜನಾಂಗದ ಪ್ರತ್ಯಾಮ್ನಾಯರಾಗಿದ್ದರು. ಅವರೇನು ಕಂಡರೆಂದರೆ: ಮೋಶೆಯು ಕಂಡದ್ದಕ್ಕಿಂತ ಹೆಚ್ಚು ಕಂಡರೆಂದು, ನೆನಸಲಾಗದು. ಮೋಶೆಯು ದೇವರ ಮುಖವನ್ನು ನೋಡಲಿಲ್ಲವೆಂದು, ಸ, ೩೩, ೧೮ನೆ ಮುಂತಾದದರಲ್ಲಿ ಬರೆದದೆ. ಅವರು ದೇವರನ್ನು, ಅಂದರೆ ದೇವರ ಆಕಾರವನ್ನು, ನೋಡಲಿಲ್ಲ. ದ್ವಿತೀ. ೪, ೧೨. ೧೫. ದೇವರ ಮಹಿಮೆಯ ತೇಜಸ್ಸನ್ನು, ಬೆಟ್ಟದ ಅಡಿಗಿಂತ ಸಮೀಪವಾದ ಸ್ಥಳದಲ್ಲಿ ನಿಂತು, ಹೆಚ್ಚು ಚನ್ನಾಗಿ ದೃಷ್ಟಿಸಿದರಷ್ಟೆ.

೩. ಪಾಪಿಗಳಾದ ಮನುಷ್ಯರು ಪ್ರತ್ಯಕ್ಷವಾದ ದೇವರ ಮಹಿಮೆಯನ್ನು ಸಾಮೀಪವಾಗಿ ಕಂಡರೆ ಸಾಯಬೇಕೆಂಬ ಭಯವು ಇಸ್ರಯೇಲನವರಲ್ಲಿಯೂ ಇತ್ತು; ಆದರೆ ಯೆಹೋವನು ಈ ಹಿರಿಯರನ್ನು ತನ್ನ ಬಳಿಗೆ ಬರ ಬೇಕೆಂದು, ಕರೆದದರಿಂದ, ಅವರಿಗೇನೂ ನಷ್ಟವಾಗಲಿಲ್ಲ.

೪. ಅವರು ಬೆಟ್ಟದ ಬುಡಕ್ಕೆ ತಿರಿಗಿ ಇಳಿದು ಹೋಗಿ, ಅರ್ಪಿತವಾದ ಬಲಿಗಳ ಭೋಜನ ಮಾಡಿ, ಸಂತೋಷದಿಂದ ತೃಪ್ತರಾದರು.

೨೪೬. ಮೋಶೆಯು ನಾಲ್ವತ್ತು ದಿವಸ ಬೆಟ್ಟದ ಮೇಲೆ ಉಳುಕೊಂಡದ್ದು.

ಹೊರಡೋಣ. ೨೪, ೧೨ — ೧೮.

ಮೋಶೆಯು ನಾಲ್ವತ್ತು ದಿವಸ ಬೆಟ್ಟದ ಮೇಲೆ ಉಳುಕೊಂಡದ್ದು. ಸಾಕ್ಷಿಗುಡಾರದ ನೇಮಕಗಳು. ಸ. ೨೪, ೧೨ — ಸ. ೩೧.

ವ. ೧೨. ಮತ್ತು ಯೆಹೋವನು ಮೋಶೆಗೆ—ಬೆಟ್ಟವನ್ನೇರಿ ನನ್ನ ಬಳಿಗೆ ಬಾ;
ಅಲ್ಲೇ ಇರು[೧]. ಆಗ ನಿನಗೆ ಕಲ್ಲಿನ ಹಲಿಗೆಗಳನ್ನೂ, ನಾನು ಅವರಿಗೆ ನೇಮಿಸುವ ಬ
ಗ್ಯೆ ಬರೆದ ನೇಮವನ್ನೂ, ಆಜ್ಞೆಯನ್ನೂ, ಕೊಡುವೆನು[೨], ಅಂದನು. ೧೩. ಆಗ ಮೋಶೆ
ಯೂ[೩] ಅವನ ಸೇವಕನಾದ ಯೆಹೋಷುವನೂ ಎದ್ದರು. ಮತ್ತು ಮೋಶೆಯು ದೇವ
ರ ಬೆಟ್ಟವನ್ನೇರಿದನು. ೧೪. ಆದರೆ ಹಿರಿಯರಿಗೆ, ನಾವು ನಿಮ್ಮ ಬಳಿಗೆ ತಿರುಗುವ ಮಟ್ಟಿ
ಗೂ, ಇಲ್ಲಿ ನಮಗಾಗಿ ಕಾದುಕೊಳ್ಳಿರಿ. ಇಗೋ, ಆರೋನ ಹೂರರು ನಿಮ್ಮ ಸಂಗಡ
ಲಿರುತ್ತಾರೆ. ಮಾತು ಉಂಟಾದವನು ಅವರ ಹತ್ತರ ಬರಲಿ, ಅಂದನು. ೧೫. ಆಗ
ಮೋಶೆಯು ಬೆಟ್ಟವನ್ನೇರಲು, ಮೇಘವು ಬೆಟ್ಟವನ್ನು ಕವಿಯಿತು. ೧೬. ಇದಲ್ಲದೆ
ಯೆಹೋವನ ಮಹಿಮೆಯು ಸೀನಯಿ ಬೆಟ್ಟದ ಮೇಲೆ ಇಳಿದು ಕೊಂಡಿರಲು, ಮೇಘ
ವು ಅದನ್ನು ಆರು ದಿವಸ ಕವಿಯಿತು. ಏಳನೆ ದಿವಸದಲ್ಲಿ ಮೋಶೆಗೆ ಮೇಘದೊಳಗಿಂ
ದ ಕರೆದನು. ೧೭. ಆದರೆ ಯೆಹೋವನ ಮಹಿಮೆಯ ದರ್ಶನವು ಇಸ್ರಯೇಲನ ಮ
ಕ್ಕಳ ಕಣ್ಣುಗಳಿಗೆ ಬೆಟ್ಟದ ತುದಿಯಲ್ಲಿ ಉರಿಯುವ ಬೆಂಕಿಯಂತೆ ಇತ್ತು. ೧೮. ಮೋಶೆ
ಯು ಮೇಘದ ನಡುವೆಯಲ್ಲಿ ಶೇರಿ, ಬೆಟ್ಟವನ್ನೇರಿದನು. ಮತ್ತು ಮೋಶೆಯು ನಾಲ್ವ
ತ್ತು ಹಗಲು ನಾಲ್ವತ್ತು ಇರುಳು[೪] ಬೆಟ್ಟದಲ್ಲಿದ್ದನು.

೧. ಮೋಶೆಯು ಬೆಟ್ಟದಲ್ಲಿದ್ದು, ನಾಲ್ವತ್ತು ದಿವಸ ಕಳೆದ ವೇಳೆಯಲ್ಲಿ ದೇವರು ಅವನಿಗೆ ಸಾಕ್ಷಿಗುಡಾರದ ಮಾದ್ರಿಯನ್ನೂ, ಅದರ ಮಾಟವನ್ನೂ, ಸಾಮಗ್ರಿಗಳನ್ನೂ ತೋರಿಸಿ, ಸ. ೨೫—೩೧ ಬರೆದಂಥ ಅದರ ವಿಷಯವಾದ ಅಪ್ಪಣೆಗಳನ್ನು ಕೊಟ್ಟನು.

೨. ಪರಿಶುದ್ಧ ಗುಡಾರದ ವಿಷಯವಾದ ಅಪ್ಪಣೆಗಳು ಮೊದಲು ಪ್ರಕಟವಾದ ಬಳಿಕ, ಮೋಶೆಯು ಬೆಟ್ಟದಿಂದ ಇಳಿದು ಹೋಗುವದಕ್ಕಿಂತ ಮುಂಚೆಯೇ ನೇಮದ ಹಲಿಗೆಗಳನ್ನು ಪಡ ಕೊಂಡನು. ಇವು ಮನುಷ್ಯನ ಕೈಯಿಂದಲ್ಲ, ದೇವರಿಂದಲೇ ಉಂಟಾದವು. ಗಲ. ೩, ೧೮ರಲ್ಲಿ ಮೋಶೆಯ ನೇಮವು ದೂತರ ಮುಖಾಂತ್ರ ನೇಮಿಸಲ್ಪಟ್ಟಿತೆಂದು, ಬರೆದದೆ. ಹಾಗಂದರೆ ದೂತರು ನೇಮಧಾನದಲ್ಲಿ ದೇವರ ಪರಿಚಾರಕರಾಗಿ ಸೇವೆ ಮಾಡಿದರು.

೩. ಯೆಹೋಷುವನನ್ನು ಮೋಶೆಯು ಬೆಟ್ಟದ ಒಂದು ಮೇಡಿನಲ್ಲಿ ಬಿಟ್ಟು, ಮೇಲಕ್ಕೇರಿದನು.

೪. ನಾಲ್ವತ್ತು ದಿವಸ ಮುಗಿದಾಗ, ದೇವರು ಮೋಶೆಗೆ ನೇಮದ ಹಲಿಗೆಗಳನ್ನು ಕೊಟ್ಟನು. ಸ. ೩೧, ೧೮. ನಾಲ್ವತ್ತು ಎಂಬ ಸಂಖ್ಯೆಯು ಪರಿಶುದ್ಧ ಚರಿತ್ರದಲ್ಲಿ ವಿಶೇಷವಾದದ್ದಾಗಿ ತೋರುತ್ತದೆ. ೩೪, ೨೮. ದ್ವಿತೀ. ೮, ೨. ೧ ಅರಸು. ೧೯, ೮. ಮತ್ತಾ. ೪, ೨. ಒಂದೊಂದು ಸಾರಿ ವಿಶ್ವಾಸವನ್ನು ಪರೀಕ್ಷಿಸುವದೂ ಶೋಧಿಸುವದೂ, ದೇವರು ಮಾಡಿದ ಸಹಾಯದಿಂದ ಬಲ ಪಡಿಸುವದೂ, ಮನುಷ್ಯರು ಅಂಥಾ ಸಹಾಯವನ್ನು ಕಾದು ಕೊಳ್ಳುವದೂ ಅದರಲ್ಲಿ ಕಾಣುತ್ತದೆ. ಉತ್ಪ. ೭, ೪. ೮, ೬. ಈ ಪ್ರಯೋಗಕ್ಕೆ ಮೂಲವೆಂದು ತೋರುತ್ತದೆ.

ಹೊರಡೋಣ. ೩೨, ೧—೬.

ಸ. ೩೧, ೧೮. ಮತ್ತು ಅವನೊಡನೆ ಸೀನಯಿ ಬೆಟ್ಟದ ಮೇಲೆ ಮಾತಾಡಿ ಮುಗಿದ ಕೂಡಲೇ, ದೇವರ ಬೆರಳು ಬರೆದ ಕಲ್ಲಿನ ಹಲಿಗೆಗಳಾದ ಎರಡು ಸಾಕ್ಷಿಯ ಹಲಿಗೆಗಳನ್ನು ಮೋಶೆಗೆ ಕೊಟ್ಟನು.

ಈ ಬರಹವು ಮೋಶೆಯ ಕೈಯಿಂದಲಾಪರೂ, ಬೇರೆ ಯಾವ ಮನುಷ್ಯನ ಕೈಯಿಂದಲಾದರೂ ಅಲ್ಲ, ದೇವರ ಬೆರಳಿನಿಂದ ಉಂಟಾಯಿತೆಂಬ ದೇವರ ವಾಕ್ಯದ ಸಾಕ್ಷಿಯನ್ನು ನಿರಾಕರಿಸ ಕೂಡದು. ಈ ಆಜ್ಞೆಗಳು ದೇವರಿಂದಲೇ ಉಂಟಾಗಿ, ದಿವ್ಯ ಸರ್ವಶಕ್ತಿಯ ಕೃತ್ಯವಾದ ಅಮೂಲ್ಯ ವರವೆಂದು, ಎಣಿಸ ತಕ್ಕದ್ದು. ಸ. ೨೦, ೨—೧೭ರಲ್ಲಿ ಬರೆದ ಮಾತುಗಳು ಎರಡು ಕಲ್ಲಿನ ಹಲಿಗೆಗಳ ಮೇಲೆ ಬರೆಯಲ್ಪಟ್ಟಿದ್ದವು.

ಎರಕ ಹೊಯಿದ ಕರುವಿಗೆ ಮಾಡಿದ ಪೂಜೆಯು. ದೇವರ ದಯೆಯ ಅಪಹಾರವು. ಮೋಶೆಯ ಶಿಕ್ಷಾಸಕ್ತಿಯು. ಜನಾಂಗದ ಪಶ್ಚಾತ್ತಾಪವು. ಮೋಶೆಯು ಜನಾಂಗಕ್ಕಾಗಿ ಮಾಡಿದ ಬಿನ್ನಹವು. ದೇವರು ತನ್ನ ದಯೆಯ ಪುನರಾಗಮನದ ವಿಷಯವಾಗಿ ಕೊಟ್ಟ ನೂತನ ವಾಗ್ದತ್ತವು. ಸ. ೩೨—೩೪.

ಸ. ೩೨.

ವ. ೧. ಮೋಶೆಯು ಬೆಟ್ಟದಿಂದ ಇಳಿದು ಬರ ತಡೆಯುತ್ತಾನೆಂದು, ಪ್ರಜೆಯು ನೋಡಲು, ಪ್ರಜೆಯು ಆರೋನನೆದುರು ಕೂಡಿ ಕೊಂಡು, ಅವನಿಗೆ ಹೇಳಿದ್ದೇನಂದರೆ: ಏಳು, ನಮ್ಮ ಮುಂದೆ ನಡೆಯುವ ದೇವರುಗಳನ್ನು೧) ನಮಗೆ ಮಾಡು, ಯಾಕೆಂದರೆ ಮಿಚ್ರದೇಶದಿಂದ ನಮ್ಮನ್ನು ಏರಿ ಬರ ಮಾಡಿದ ಈ ಮೋಶೆಗೆ ಏನಾಯಿತೆಂದರಿಯೆವು೨). ೨. ಆಗ ಆರೋನನು ಅವರಿಗೆ—ನಿಮ್ಮ ಹೆಂಡತಿಯರು ನಿಮ್ಮ ಗಂಡುಮಕ್ಕಳು ನಿಮ್ಮ ಹೆಣ್ಣುಮಕ್ಕಳು ಇವರ ಕಿವಿಗಳಲ್ಲಿರುವ ಚಿನ್ನದ ಮುರುವುಗಳನ್ನು೩) ಕಿತ್ತು, ನನ್ನ ಬಳಿಗೆ ತನ್ನಿರಿ, ಅನ್ನಲು, ೩. ಪ್ರಜೆಯೆಲ್ಲಾ ತಮ್ಮ ಕಿವಿಗಳಲ್ಲಿಯಣ ಚಿನ್ನದ ಮುರುವುಗಳನ್ನು ಕಿತ್ತು, ಆರೋನನ ಬಳಿಗೆ ತಂದರು. ೪. ಅವನು ಅದನ್ನು ತಕ್ಕೊಂಡು ಉಳಿಯಿಂದ೪) ರೂಪಿಸಿ, ಎರಕ ಹೊಯಿದ ಕರುವಾಗ ಮಾಡಿದನು. ಆಗಲವರು—ಇಸ್ರಯೇಲೇ, ನಿನ್ನನ್ನು ಮಿಚ್ರದೇಶದಿಂದ ಏರಿ ಬರಲೀಸಿದ ದೇವರುಗಳಿವರೇ೫), ಅಂದರು. ೫. ಆರೋನನು ನೋಡಿ, ಅದರ ಮುಂದೆ ಬಲಿಪೀಠವನ್ನು ಕಟ್ಟಿದನು. ಮತ್ತು ಆರೋನನು, ನಾಳೆ ಯೆಹೋವನಿಗೆ ಹಬ್ಬವೆಂದು೬), ಸಾರಿದನು. ೬. ಮಾರಣೇ ದಿನದಲ್ಲಿ ಅವರು ಬೆಳಿಗ್ಗೆ ಎದ್ದು, ಹೋಮಗಳನ್ನರ್ಪಿಸಿ, ಸಮಾಧಾನದ ಬಲಿಗಳನ್ನು ತಂದರು. ಮತ್ತು ಪ್ರಜೆಯು ಉಣ್ಣುವದಕ್ಕೂ ಕುಡಿಯುವದಕ್ಕೂ ಕೂತು, ಆಡುವದಕ್ಕೆ೭) ಎದ್ದರು.

೧. ಕಾಳಗಕ್ಕೆ ಹೋಗುವ ದಂಡಿನ ಮುಂದೆಯೂ, ಯಾತ್ರೆಯವರ ಪರಿಶೆಗಳ ಮುಂದೆಯೂ, ಅನ್ಯ ಜನರು ತಮ್ಮ ವಿಗ್ರಹಗಳನ್ನು ಕೊಂಡು ಹೋಗಿ, ತಮ್ಮ ದೇವತೆಗಳು ತಮ್ಮ ನಾಯಕರೂ ಆಸ್ಪದಿಕರೂ ಆಗಿರುವದರಿಂದ, ತಮಗೆ ನಿರ್ಭಯವೂ ಸೌಖ್ಯವೂ ದೊರಕುವದೆಂಬ ನಂಬಿಕೆಯನ್ನು ಅರಿಕೆ ಮಾಡಿದರು. ದಂಡಿನ ಮುಂದೆ ಹೋಗುವ ಮೇಘಸ್ತಂಭವು ಮಿಚ್ರದೇಶದಲ್ಲಿ ವಾಡಿಕೆಯಾದ ವಿಗ್ರಹಾರಾಧನೆಯ ಮರುಳು

ಹೊರಡೋಣ. ೩೨, ೭—೧೪.

ಹಿಡಿದ ಮಾರ್ಮಲವಾದ ಇಸ್ರಯೇಲ ಜನಾಂಗಕ್ಕೆ ಸಾಲದೆಂದು, ತೋಚಿತು. ಈ ಮರುಳು ಹಿಡಿದ ಜನಾಂಗವು ದೇವರ ಕೋಪಕ್ಕೆ ಒಳಗಾಯಿತು.

೨. ಮೋಶೆಯು ಬೆಟ್ಟದ ಮೇಲೆ ಶಾನೆ ದಿನ ತಂಗಿದದರಿಂದ, ಅವರು ತಮ್ಮಶೆಯಯಾಗಿ ಕಾಯುತ್ತಿರಲೊಲ್ಲದೆ, ತಮ್ಮ ಬಯಕೆಯನ್ನು ತೀರಿಸುವದಕ್ಕೆ ತಕ್ಕ ನೆವನ ದೊರಕಿತೆಂದು, ನೆನಸಿದರು.

೩. ವಿಶ್ವಾಸದಲ್ಲಿಯೂ ಭರವಸದ ದೃಢದಲ್ಲಿಯೂ ಮೋಶೆಗಿಂತ ಬಹಳ ಕಡೆಯವನಾಗಿದ್ದ ಆರೋನನು ತನ್ನನ್ನು ಬೇಸರಗೊಳಿಸುವ ಜನಾಂಗಕ್ಕೆ ಏನು ಮಾಡ ಬೇಕೆಂದು, ತಿಳಿಯದೆ, ತತ್ತಳಗೊಂಡನೆಂದು, ತೋರುತ್ತದೆ. ತಾನೊಪ್ಪಲೊಲ್ಲೆನೆಂದು, ನೆಟ್ಟಗೆ ಹೇಳುವದಕ್ಕೆ ಗುಂಡಿಗೆಯಿಲ್ಲದವನಾಗಿದ್ದು, ಜನರ ಮನಸ್ಸನ್ನು ತಿರುಗಿಸುವದಕ್ಕೆ ಅತಿ ಪ್ರಿಯವಾದ ಒಡವೆಗಳನ್ನು ತನಗೆ ತಂದು ಕೊಡ ಬೇಕೆಂದು, ಆರೋನನು ಅಪ್ಪಣೆ ಕೊಡಲಾಗಿ, ಅವರು ಬೇಗ ಸಮ್ಮತರಾಗಿ, ಹೆಂಗಸರು ಗಂಡು ಹೆಣ್ಣು ಮಕ್ಕಳು ಇವರ ಮೈಯಿಂದ ಮುರುವುಗಳನ್ನು ತಕ್ಕೊಂಡು ತಂದು ಕೊಟ್ಟ ಮೇಲೆ, ಅವನು ಹಿಂದೆಗೆಯಲಾರದೆ ಹೋದನು. ಒಂದು ವೇಳೆ ಆರೋನನು ಎರಕ ಹೊಯಿದ ಕರುವು ಅದೃಶ್ಯ ದೇವರ ಮೂರ್ತಿಯಾಗಿದೆಂದೂ, ಅದಕ್ಕಾಗುವ ಪೂಜೆಯು ದೇವದ್ರೋಹವಲ್ಲ, ದೇವಾರಾಧನೆಯೇ ಎಂದೂ, ತನ್ನ ಮನಸ್ಸಿನಲ್ಲಿ ನೆವವಾಗಿ ಹೇಳಿಕೊಳ್ಳುತ್ತಾ ಇದ್ದನು. ಆದರೆ ಅವನ ಕರ್ಮವು ಸ. ೨೦, ೪ರಲ್ಲಿ ಬರದಿರುವ ಮೂಲವಾದ ಒಡಂಬಡಿಕೆಯ ಕಟ್ಟಳೆಗೆ ವಿರೋಧವಾಗಿತ್ತು. ಈ ಪ್ರಕಾರವಾಗಿ ನೇಮವನ್ನು ಮಿೞಾರ ತೊಡಗಿದವರು, ಕರ್ತನು ಚುರುಕಾದ ದಂಡನೆಯಿಂದ ಅವರನ್ನು ಶಿಕ್ಷಿಸದೆ ಇದ್ದರೆ, ಅನ್ಯ ಜನರಲ್ಲಿ ವಾಡಿಕೆಯಾದ ವಿಗ್ರಹಾರಾಧನೆಯ ಮೋಸದಲ್ಲಿ ಮುಣುಗಿ ಹೋಗುವದಕ್ಕೆ ಏನೂ ಅಡ್ಡಿಯಾಗುತ್ತಿದ್ದಿಲ್ಲ.

೪. ಅದನ್ನು ತರಕಲಾಗಿ ಎರಕ ಹೊಯಿದು, ಬಳಿಕ ಉಳಿಯಿಂದ ಮೆರುಗಿಟ್ಟು, ಚೆಲ್ವಾದ ಬಸವರೂಪವನ್ನುಂಟು ಮಾಡಿದನು. ಒನುಫಿಸೆಂಬ ಬಸವನಿಗೂ, ಮೆಂಫಿಸ್ ಪಟ್ಟಣದ ಆಪಿಸ್ ಎಂಬ ಬಸವನಿಗೂ, ಓನ್ ಪಟ್ಟಣದ ಮ್ನೇವಿಸೆಂಬ ಬಸವನಿಗೂ, ಮಿಚ್ರದವರು ಮಾಡುತ್ತಾ ಬಂದ ಪೂಜೆಯನ್ನು ಇಸ್ರಯೇಲನವರು ಈ ವೇಳೆಯಲ್ಲಿ ಅನುಸರಿಸಲಾರಂಭಿಸಿದಂದಿನಿಂದ, ಈ ವಿಧದ ದೇವದ್ರೋಹವು ಅವರಲ್ಲಿ ಕುಲಪಾಪವಾಯಿತು. ಈ ಪಾಪವು ಬಳಿಕ ಇಸ್ರಯೇಲನವರಲ್ಲಿ ಅಧಿಕ ಪ್ರಬಲವಾಯಿತು.

೫. ಆರೋನನು ಪರವಶವಾದ ಅಧೈರ್ಯದಿಂದ ಜನರನ್ನು ಮೆಚ್ಚಿಸಲೆಸಗಿ, ಯೆಹೋವನ ಮೂರ್ತಿ ಎಂದು, ಬಸವರೂಪವನ್ನು ರಚಿಸಿದ ಕೂಡಲೇ ಜನರು ವಿಗ್ರಹಾರಾಧನೆಯ ಮರುಳಿನಿಂದ ಯೆಹೋವನನ್ನು ಮರತು ಬಿಟ್ಟರೆಂದು, ಕಾಣುತ್ತದೆ.

೬. ಆರೋನನು ಚಿನ್ನದ ಕರುವಿಗಾಗಿ ಇಸ್ರಯೇಲನವರು ಯೆಹೋವನಿಗೆ ಮಾರ್ಮಲೆಯ ಬಾರದೆಂಬ ಭಾವನೆಯಿಂದ ಕರ್ತನಾದ ಯೆಹೋವನ ಹೆಸರಿನಲ್ಲಿ ಹಬ್ಬವನ್ನಾಚರಿಸ ಬೇಕೆಂದು, ನಿರ್ಣಯಿಸುತ್ತಾನೆ.

೭. ಆದರೆ ಭಕ್ತರಾದ ಕೊಂಚ ಮಂದಿ ಆರೋನನಿಗೆ ಸಮ್ಮತರಾಗಿದ್ದರೂ, ಗುಂಪಿನವರಾದ ಹೆಚ್ಚು ಮಂದಿ ಯೆಹೋವನ ಭಯಭಕ್ತಿಯನ್ನು ಬಿಟ್ಟು, ಬಸವನೇ ದೇವರೆಂದು, ಅನ್ಯಜನರೋಪಾದಿಯಾಗಿ ನಂಬಿ, ಪೂರ್ವ ಪದ್ಧತಿಯ ಮೇರೆಗೆ ಆರೋನನ ಸಂಗಡ ಬಲಿಗಳನ್ನರ್ಪಿಸಿ, ಬಲಿಭೋಜನ ಮಾಡಿದರೂ, ಬಳಿಕ ಅನ್ಯ ಜನರ ಮರ್ಯಾದೆಯ ಪ್ರಕಾರ ನಾಣ್ಗೆಟ್ಟ ನಾಟ್ಯಗಳು ಮುಂತಾದ ಆಟಗಳನ್ನಾಡಿದರು.

ವ. ೭. ಆಗ ಯೆಹೋವನು ಮೋಶೆಗೆ ನುಡಿದದ್ದು: ಇಳಿದು ಹೋಗು; ಯಾಕಂದರೆ ನೀನು ಮಿಚ್ರ ದೇಶದಿಂದ ಏರಿ ಬರ ಮಾಡಿದ ನಿನ್ನ ಪ್ರಜೆಯು ಕೆಟ್ಟು ಹೋಗಿದೆ೧). ೮. ನಾನು ಅವರಿಗೆ ಆಜ್ಞಾಪಿಸಿದ ಮಾರ್ಗದಿಂದ ಅವರು ಬೇಗ ತಿರುಗಿ ಕೊಂಡು, ತಮಗೆ ಎರಕ ಹೊಯಿದ ಕರು ಮಾಡಿ ಕೊಂಡು, ಅದಕ್ಕೆ ಎರಗಿ, ಅದಕ್ಕೆ ಬಲಿಯ ಕೊಟ್ಟು, ಇಸ್ರಯೇಲೇ, ನಿನ್ನನ್ನು ಮಿಚ್ರ ದೇಶದಿಂದ ಏರಿ ಬರಲೀಸಿದ ದೇವ

ಹೊರಡೋಣ. ೩೨, ೭—೧೪.

ರುಗಳಿವರೇ ಎಂದು, ಹೇಳಿದ್ಧಾರೆ. ೯. ಮತ್ತು ಯೆಹೋವನು ಮೋಶೆಗೆ ಹೇಳಿದ್ದು:
ಈ ಪ್ರಜೆಯನ್ನು ನೋಡಿದ್ಧೇನೆ[೨]. ಅದು ಘಟ್ಟಿ ಕುತ್ತಿಗೆಯ ಪ್ರಜೆಯಾಗಿದೆ. ೧೦. ಈ
ಗ ನನ್ನನ್ನು ಬಿಡು[೩]. ನನ್ನ ಕೋಪವು ಅವರ ಮೇಲೆ ಉರಿಯುವದು. ಅವರನ್ನು ತೀ
ರಿಸಿ ಬಿಟ್ಟು, ನಿನ್ನನ್ನು ದೊಡ್ಡ ಜನಾಂಗವಾಗ ಮಾಡುವೆನು. ೧೧. ಆಗ ಮೋಶೆಯು
ತನ್ನ ದೇವರಾದ ಯೆಹೋವನ ಮುಂದೆ ಬೇಡಿ ಕೊಂಡದ್ದೇನಂದರೆ: ಯೆಹೋವನೇ,
ದೊಡ್ಡ ಶಕ್ತಿಯಿಂದಲೂ, ಬಲವಾದ ಕೈಯಿಂದಲೂ, ನೀನು ಮಿಚ್ರ ದೇಶದೊಳಗಿಂದ
ಹೊರ ಬರಲೀಸಿದ ನಿನ್ನ ಪ್ರಜೆಯ ಮೇಲೆ[೪], ನಿನ್ನ ಕೋಪವು ಉರಿಯುವದ್ಯಾಕೆ?
೧೨. ಅವರನ್ನು ಬೆಟ್ಟಗಳಲ್ಲಿ ಕೊಲ್ಲುವ ಬಗ್ಯೆಯೂ, ಅವರನ್ನು ಭೂಮಿಯ ಮೇಲಿ
ನಿಂದ ತೀರಿಸಿ ಬಿಡುವ ಬಗ್ಯೆಯೂ, ಅವರನ್ನು ಕೇಡಿಗಾಗಿ ಹೊರ ಬರ ಮಾಡಿದ್ಧಾನೆಂ
ದು, ಮಿಚ್ರದವರು ಹೇಳುವದು ಯಾಕೆ? ನಿನ್ನ ಕೋಪದ ಉರಿ ಬಿಟ್ಟು, ತಿರುಗಿಕೋ! ನಿ
ನ್ನ ಪ್ರಜೆಯನ್ನು ಈ ಕೇಡಿನ ವಿಷಯವಾಗಿ ಪಶ್ಚಾತ್ತಾಪ ತಂದುಕೋ! ೧೩. ನಿನ್ನ ಸೇ
ವಕರಾದ ಅಬ್ರಹಾಮು ಇಸಾಕ ಇಸ್ರಾಯೇಲರನ್ನು ನೆನಪು ಮಾಡಿಕೋ; ನಿಮ್ಮ ಬೀಜ
ವನ್ನು ಆಕಾಶದ ನಕ್ಷತ್ರಗಳಂತೆ ಹೇರಳ ಮಾಡುವೆನೆಂತಲೂ, ನಾನು ಹೇಳಿದ ಈ ದೇಶ
ವನ್ನೆಲ್ಲಾ ನಿಮ್ಮ ಬೀಜಕ್ಕೆ ನಿತ್ಯವಾಗಿ ಸ್ವತಂತ್ರಿಸಿ ಕೊಳ್ಳುವ ಹಾಗೆ ಕೊಡುವೆನೆಂತಲೂ,
ಅವರಿಗೆ ನಿನ್ನ ಆಣೆ ಇಟ್ಟು ಕೊಂಡು[೫], ಅವರಿಗೆ ನುಡಿದಿಯಲ್ಲಾ? ೧೪. ಆಗ ಯೆ
ಹೋವನು ತನ್ನ ಪ್ರಜೆಗೆ ಮಾಡುತ್ತೇನೆಂದು, ನುಡಿದ ಕೇಡಿಗಾಗಿ ಪಶ್ಚಾತ್ತಾಪ ತಂದು
ಕೊಂಡನು[೬].

೧. ಹಾಗಂದರೆ ಪಾಪ ಮಾಡಿದದರಿಂದ. ಯಾಕಂದರೆ ಪಾಪವು ಪ್ರಜೆಗಳಿಗೆ ಕುಂದು ಆಗಿದೆ. ಸಾಮ. ೧೪, ೩೪.

೨. ಈ ಸಂಗತಿಯಲ್ಲೆಲ್ಲಾ ಸಹ ಕರ್ತನು ತನ್ನನ್ನು ಮಾನುಷ ಭಾವವುಳ್ಳವನಾಗಿಯೂ, ಕನಿಕರವುಳ್ಳವನಾಗಿಯೂ, ವಿಶೇಷ ರೀತಿಯಿಂದ ಪ್ರಕಟ ಮಾಡಿ ಕೊಳ್ಳುತ್ತಾನೆ. ಆದರೆ ಇಲ್ಲಿಯೂ ದೇವರಿಗೆ ಮಾನುಷ ಗುಣವುಳ್ಳ ಭಾವ ಉಂಟೆಂಬದು ಬರಿ ಹೋಲಿಕೆಯ ಮಾತಾಗಿರುವದಿಲ್ಲ. ಅದು ಕಲ್ಪಿತವಾದ ಸಾಮ್ಯ ಮಾತ್ರವಲ್ಲ; ಅದು ನಿಜವೇ ಸರಿ. ಈಗ ಕಾಣ ಬಂದ ಜನಾಂಗದ ಹಟವು ಸರ್ವಜ್ಞನಾದ ಕರ್ತನಿಗೆ ಮುಂಚೆ ಗೊತ್ತಾಗಿತ್ತೆಂಬುವದು ಖರೆ. ಆದಾಗ್ಯೂ ದೇವರು ಮನುಷ್ಯನನ್ನು ಸ್ವೇಚ್ಛೆಯುಳ್ಳವನಾಗಿ ನಿರ್ಮಿಸಿದ ಕಾರಣ, ಪಾಪವು ಕರ್ಮರೂಪವಾಗಿ ಪ್ರತ್ಯಕ್ಷವಾಗುವ ಮೊದಲಾಗಿ ಅದು ಇಲ್ಲವೆಂತ ಭಾವಿಸುತ್ತಾನೆ. ಪಾಪವನ್ನು ಅತ್ಯಧಿಕವಾಗಿ ಹೇಸಿ, ಹಗೆ ಮಾಡುವಂಥ ಪರಿಶುದ್ಧ ದೇವಭಾವದ ಗುಣವು ದೇವರ ವಾಕ್ಯದಲ್ಲಿ ಕೋಪವೆಂದು ಅನ್ನಿಸಿ ಕೊಳ್ಳುತ್ತದೆ. ಪಾಪಿಗಳನ್ನು ದಂಡಿಸದೆ ಬಿಡಲಾರದ ನೀತಿಗಿಂತ ಅಧಿಕವಾದ ಕೃಪೆಯು ಮಾನಸಾಂತರ ಪಡುವ ಕರುಣವೆಂದು ಅನ್ನಿಸಿ ಕೊಳ್ಳುತ್ತದೆ.

೩. ನನ್ನನ್ನು ಬಿಡು ಎಂಬದರ ಅರ್ಥವೇನಂದರೆ: ನಾನು ಮುಂಕೊಂಡ ಕಾರ್ಯಕ್ಕೆ ನೀನು ಅವರಿಗಾಗಿ ಬಿನ್ನಹ ಮಾಡಿ ಅಡ್ಡಿ ಮಾಡದೆ ಇರು. ನನ್ನ ನೀತ್ಯೋದ್ರೇಕದ ಹೊಳೆಯ ಸೆಳವಿಗೆ, ನನ್ನ ಕೃಪೆಗೆ ಮೊರೆ ಇಟ್ಟು, ತಡೆ ಕಟ್ಟದೆ ಇರು. ಅವರನ್ನು ಮಡಿಸಿ ಬಿಟ್ಟು, ನಿನ್ನನ್ನು ದೊಡ್ಡ ಜನಾಂಗವಾಗ ಮಾಡುವೆನು ಎಂಬ ಮಾತಿನಿಂದ ಕರ್ತನು ಮೋಶೆಯನ್ನು ಪರೀಕ್ಷೆಸುತ್ತಾನೆ. ಅವನು ತನ್ನ ಮಧ್ಯಸ್ಥಗಾರನೆಂಬ ಉದ್ಯೋಗವನ್ನು ಮರತು,

ಗರ್ವಕ್ಕೂ ಸ್ವಾರ್ಥಕ್ಕೂ ಇಂಬು ಕೊಟ್ಟು, ತನ್ನ ಜನಾಂಗದ ಪ್ರಯೋಜನವನ್ನು ಲಕ್ಷಿಸದೆ, ದೇವರ ವಾಗ್ದತ್ತದ ಫಲವನ್ನು ತಾನು ಅನುಭವಿಸ ಬಯಸಲಿಕ್ಕಿಲ್ಲವೆಂತ ದೇವರಿಗೆ ತಿಳಿದರೂ, ಅದು ಮೋಶೆಗೆ ಕಠಿಣವಾದ ಶೋಧನೆಯಾಗಿತ್ತು. ಹ್ಯಾಗಂದರೆ ಮೋಶೆಯು ಯೋಗ್ಯ ದೀನಭಾವದ ಪ್ರೀತಿಭರಿತನಾದ ಮಧ್ಯಸ್ಥನಾಗಿ, ಪ್ರಜೆಗೋಸ್ಕರ ಬೇಡಿಕೊಂಡು, ಅದಕ್ಕೆ ಯೆಹೋವನ ಕರುಣೆಯನ್ನು ಘಳಿಸುವ ಭಕ್ತನಾಗಿದ್ಧಾನೆಂದು, ಈ ಶೋಧನೆಯಿಂದ ಪ್ರತ್ಯಕ್ಷವಾಯಿತು. ಹೀಗೆ ಶೋಧನೆಯಲ್ಲಿ ದೇವರಿಗಿರುವ ತಾತ್ಪರ್ಯ ಈಡೇರಿತು.

೪. ಯೆಹೋವನು ಏಳನೆ ವಚನದಲ್ಲಿ ತನಗೆ ಆಗದಂಥಾದ್ದೆಂದು, ತಳ್ಳಿ, ನಿನ್ನ ಜನಾಂಗವೆಂದು, ಮೋಶೆಗೆ ತಿರುಗಿಸಿದ ಜನಾಂಗವನ್ನು ಇವನು ಯೆಹೋವನ ಕರುಣಾಮಯವಾದ ಹೃದಯಕ್ಕೆ ಮರಳಿ ಒಪ್ಪಿಸಿಕೊಟ್ಟು, ನಂಬಿಕೆಯುಳ್ಳ ಮಧ್ಯಸ್ಥಗಾರನಾಗಿ, ನಂಬಿಕೆಯುಳ್ಳ ಒಡಂಬಡಿಕೆಯ ದೇವರು ಮಾಡಿದ ಪಚ್ಛವಣೆಯಲ್ಲಿ ಗೆಲ್ಲುತ್ತಾನೆ.

೫ ಯೋಗ್ಯತಾಯೋಗ್ಯತೆಗಳನ್ನು ನೋಡದೆ, ದೇವರು ಬರೆ ಕರುಣೆಯಿಂದ ಕೊಟ್ಟ ಉಚಿತ ವರವಾಗಿ, ಪಿತೃಗಳೊಡನೆ ಕರ್ತನು ಕಟ್ಟಿಕೊಂಡ ಕೃಪೆಯ ಒಡಂಬಡಿಕೆಯನ್ನು ಅವನ ನೆನಪಿಗೆ ತರುತ್ತಾನೆ. ಮೋಶೆಯ ಈ ವಿಶ್ವಾಸಕ್ಕೆ ಜಯವಾಗುತ್ತದೆ.

೬. ಈ ಪ್ರಕರಣದ ಸಂಗತಿಯನ್ನು ಮುಗಿಸುವ ಬಗ್ಯೆ, ಮೋಶೆಯು ತನ್ನ ಬಿನ್ನಹವು ಸಾರ್ಥಕವಾಯಿತೆಂದು, ಇಲ್ಲಿ ಮುಂಚಿತವಾಗಿ ಬರೆಯುತ್ತಾನೆ. ಕರ್ತನು ಹೆದರಿಸಿ ಹೇಳಿದಂತೆ ಪಾಪಿಗಳನ್ನು ನಾಶ ಮಾಡದೆ, ಕೀರ್ತ. ೭೮, ೮ನೆಯ ಪ್ರಕಾರ ಅವರಿಗೆ ಕ್ಷಮಿಸಿ, ಎಲ್ಲರಿಗೆ ಭಯವನ್ನು ತೋರಿಸ ಬೇಕೆಂದು, ಅವರ ಕರ್ಮಗಳಿಗಾಗಿ ಮುಯಿಗೆ ಮುಯಿ ಕೊಟ್ಟನು. ಯಾಕೆಂದರೆ ಅವರ ಅಪರಾಧಕ್ಕೆ ಪ್ರಾಯಶ್ಚಿತ್ತವಾಗ ಬೇಕಾಯಿತು. ಆದಾಗ್ಯೂ ಯೆಹೋವನ ಕರುಣೆಯು ಮುಗಿಯುವದಿಲ್ಲ. ದೇವರ ಕೃಪೆ ನೀತಿಗಳ ಪ್ರಕಟಣೆಯು ಮುಂದಣ ಚರಿತ್ರದಲ್ಲಿ ಬರುತ್ತದೆ.

ವ. ೧೫. ಆಗ ಮೋಶೆಯು ತಿರುಗಿಕೊಂಡು, ಬೆಟ್ಟದಿಂದ ಇಳಿದು ಬಂದನು. ಸಾ
ಕ್ಷಿಯ ಎರಡು ಹಲಿಗೆಗಳು ಅವನ ಕೈಯಲ್ಲಿ. ಅವು ಇಕ್ಕಡೆಯಿಂದ ಲಿಖಿತವಾಗಿದ್ದವು.
ಈ ಕಡೆಯಿಂದಲೂ, ಆ ಕಡೆಯಿಂದಲೂ, ಲಿಖಿತವಾಗಿದ್ದವು. ೧೬. ಆ ಹಲಿಗೆಗಳು ದೇ
ವರ ಕೆಲಸವು, ಆ ಬರಹವು ಹಲಿಗೆಗಳ ಮೇಲೆ ಕೆತ್ತಿದ ದೇವರ ಬರಹವು[೧]. ೧೭. ಮ
ತ್ತು ಯೆಹೋಷುವನು ಗದ್ದಲ ಮಾಡುವ ಪ್ರಜೆಯ ಶಬ್ದವನ್ನು ಕೇಳಿ, ಮೋಶೆಗೆ ಕಾದಾ
ಟದ ಶಬ್ದವು ದಂಡಿನಲ್ಲಿದೆ ಅನ್ನಲಾಗಿ[೨], ೧೮. ಅವನು ಅದು ಗೆಲ್ಲುವವರ ಕೂಗು ಅ
ಲ್ಲ, ಸೋಲುವವರ ಶಬ್ದವಲ್ಲ; ಗಾಯನಶಬ್ದ ಕೇಳುತ್ತಾ ಇದ್ಧೇನೆ, ಅಂದನು. ೧೯. ಅ
ವನು ದಂಡಿನ ಹತ್ತರ ಬಂದು, ಆ ಕರುವನ್ನೂ ನಾಟ್ಯಗಳನ್ನೂ ನೋಡಲು, ಮೋಶೆ
ಯು ಕೋಪಗೊಂಡು, ತನ್ನ ಆ ಹಲಿಗೆಗಳನ್ನು ಕೈಯಲ್ಲಿಂದ ಬಿಸಾಡಿ ಬಿಟ್ಟು, ಅವನ್ನು
ಬೆಟ್ಟದ ಅಡಿಯಲ್ಲಿ ಒಡದು ಹಾಕಿ[೩], ೨೦. ಅವರು ರಚಿಸಿದ ಕರುವನ್ನು ತಕ್ಕೊಂಡು
ಬೆಂಕಿಯಲ್ಲಿ ಸುಟ್ಟು, ಹುಡಿಯಾಗುವ ವರೆಗೆ[೪] ಅರಿಸಿ ನೀರಿನ ಮೇಲೆ ಚೆಲ್ಲಿ, ಇಸ್ರಯೇಲ
ನ ಮಕ್ಕಳನ್ನು ಕುಡಿಸಿದನು[೫]. ೨೧. ಆಗ ಮೋಶೆಯು ಆರೋನನಿಗೆ—ನೀನು ಈ ಪ್ರ
ಜೆಯ ಮೇಲೆ ದೊಡ್ಡ ಪಾಪವನ್ನು ಬರಲೀಸುವ ಹಾಗೆ ಅದು ನಿನಗೆ ಏನು ಮಾಡಿತು?
ಅಂದನು. ೨೨. ಆರೋನನು ಹೇಳಿದ್ದು: ನನ್ನ ಒಡೆಯನ ಕೋಪವು ಉರಿಯ ಬಾರ
ದು. ಈ ಜನಾಂಗವು ಕೇಡಿನ ಮೇಲೆ ಇರುವದನ್ನು ಬಲ್ಲೆ. ೨೩. ನಮ್ಮ ಮುಂದೆ ಹೋ

ಗುವ ದೇವರುಗಳನ್ನು ನಮಗೆ ಮಾಡು, ಯಾಕೆಂದರೆ ಮಿಸ್ರ ದೇಶದಿಂದ ನಮ್ಮನ್ನು ಏ
ರಿ ಬರ ಮಾಡಿದ ಈ ಮೋಶೆಗೆ ಏನಾಯಿತೆಂದರಿಯೆವೆಂದು, ನನಗೆ ಹೇಳಲು, ೨೪.
ಯಾರಿಗೆ ಚಿನ್ನವುಂಟೋ ಅವರು ಅದನ್ನು ಕಿತ್ತುಕೊಳ್ಳಲೆಂದು, ಅವರಿಗೆ ಹೇಳಿದೆನು.
ಅವರು ನನಗೆ ಕೊಟ್ಟಾಗ ಅದನ್ನು ಬೆಂಕಿಯಲ್ಲಿ ಹಾಕಿದೆನು. ಆಗಲೀ ಕರುವು ಹೊರಗೆ
ಬಂತು. ೨೫. ಆಗ ಮೋಶೆಯು ಅದರ ಎದುರಾಳಿಗಳ ಗೇಲಿಗಾಗಿ ಆರೋನನು ಪ್ರ
ಜೆಯನ್ನು ಕಟ್ಟು ಬಿಚ್ಚಿದರಿಂದ, ಅದು ಕಟ್ಟು ಬಿಚ್ಚಿದ್ದಾಗಿರುವದನ್ನು ನೋಡಿದನು೬).
೨೬. ಮತ್ತು ಮೋಶೆಯು ದಂಡಿನ ಬಾಗಲಲ್ಲಿ ನಿಂತು—ಯೆಹೋವನವರು೭) ನನ್ನ
ಬಳಿಗೆ ಬರಲಿ, ಅಂದನು. ಆಗ ಲೇವಿಯ ಮಕ್ಕಳೆಲ್ಲಾ ಅವನ ಕಡೆಗೆ ಕೂಡಿದರು. ೨೭.
ಆಗಲವರಿಗೆ, ಇಸ್ರಯೇಲನ ದೇವರಾದ ಯೆಹೋವನು ಹೀಗೆ ಹೇಳುತ್ತಾನೆ: ಆಳಾಳು
ತನ್ನ ಕತ್ತಿ ಸೊಂಟಕ್ಕೆ ಕಟ್ಟಿಕೊಂಡು, ಬಾಗಲಿಂದ ಬಾಗಲಿಗೆ ದಂಡಿನಲ್ಲಿ ಹಾದು, ಆಳಾ
ಳು ತನ್ನ ಸಹೋದರನನ್ನು, ಆಳಾಳು ತನ್ನ ಗೆಳೆಯನನ್ನು, ಆಳಾಳು ತನ್ನ ನೆರೆಯವನ
ನ್ನು ಕೊಂದು ಹಾಕಲಿ೮), ಅನ್ನಲಾಗಿ, ೨೮. ಲೇವಿಯ ಮಕ್ಕಳು ಮೋಶೆಯ ಮಾತಿ
ನ ಪ್ರಕಾರ ಮಾಡಿದರು. ಅಂದು ಪ್ರಜೆಯೊಳಗಿಂದ ಹೆಚ್ಚು ಕಡಿಮೆ ಮೂರು ಸಾವಿರ
ಮಂದಿ೯) ಬಿದ್ದರು. ೨೯. ಆಗ ಮೋಶೆಯು ಹೇಳಿದ್ದು: ಅವನು ನಿಮ್ಮ ಮೇಲೆ ಇಂದು
ಆಶೀರ್ವಾದವನ್ನು ಕೊಡುವ ಹಾಗೆ೧೦), ನಿಮ್ಮ ಕೈಗಳನ್ನು ಇಂದು ಆಳಾಳು ತನ್ನ ಮ
ಗನಿಂದಲೂ ಸಹೋದರನಿಂದಲೂ ತುಂಬಿಸಿರಿ೧೧).

೧. ಮೊದಲಿನ ಹಲಿಗೆಗಳು ಕರ್ತನಿಂದಲೇ ರಚಿತವಾಗಿದ್ದವು. ಎರಡನೆಯವುಗಳು ಮೋಶೆಯ ಕೈಯಿಂದ ರಚಿತವಾಗಿದ್ದು, ಯೆಹೋವನಿಂದ ಲಿಖಿತವಾಗಿದ್ದವು.

೨. ಬೆಟ್ಟದ ತುದಿಯಿಂದ ಇಳಿದು ಬರುವಂಥ ಮೋಶೆಗೆ ಕೆಳಗಣ ಸ್ಥಳದಲ್ಲಿ ನಿಂತಿದ್ದ ಯೆಹೋಷುವನು ಈ ಮಾತುಗಳನ್ನು ಹೇಳಿದನು.

೩. ಮುಂಚೆ ಯಾಕೋಬನಂತೆ ತನ್ನ ಜನಾಂಗಕ್ಕಾಗಿ ದೇವರೊಡನೆ ಹೋರಾಡಿದ ಮನುಷ್ಯನು ನೀತಿಯುಳ್ಳ ಪರಿಶುದ್ಧ ಭಕ್ತ್ಯಾಸಕ್ತಿಯಿಂದ ನೇಮಶಿಲೆಗಳನ್ನು ಒಡದು ಬಿಟ್ಟು, ಇಸ್ರಯೇಲನ ಜನಾಂಗವು ದೇವರೊಡನೆ ಉಂಟಾದ ಒಡಂಬಡಿಕೆಗೆ ಅನಧಿಕಾರಿಯಾಯಿತೆಂಬದಕ್ಕೆ ಸಾಕ್ಷಿ ಕೊಡುತ್ತಾನಕಟ!

೪. ಚಿನ್ನವನ್ನು ಕರಗಿಸಿ, ಪುಡಿ ಮಾಡುವ ಕುಶಲ ಕೃತ್ಯವು ಈಗಿನ ಅಕ್ಕಸಾಲೆಯರಿಗೆ ಗೊತ್ತಿಲ್ಲ. ಪೂರ್ವಕಾಲದ ಚಮತ್ಕೃತಿಗಳಲ್ಲಿ ಕೆಲವು ಕಾಲಗತಿಯಿಂದ ಮರತು ಹೋಗಿವೆಂಬದಕ್ಕೆ ಸಂಶಯವೇನೂ ಇಲ್ಲ.

೫. ತಮ್ಮ ಕೈಕೆಲಸವಾದ ದೇವರು ಎಂಥವನೆಂದು, ಅವರು ತಿಳುಕೊಂಡು ನಾಚಿಕೊಳ್ಳುವ ಹಾಗೆ, ಮೋಶೆಯು ತಾನು ಪುಡಿ ಮಾಡಿದ ಬಸವನ ಚಿನ್ನವನ್ನು ನೀರಿಗೆ ಬೆರಸಿ, ಜನರಿಗೆ ಕುಡಿಸಿದನು. ಮೋಶೆಯ ಅಪ್ಪಣೆಗೆ ವಿಧೇಯರಾದವರು ಈ ರೀತಿಯಿಂದ ವಿಗ್ರಹಾರಾಧನಾಪರಿತ್ಯಾಗ ಮಾಡಿದರು.

೬. ಆರೋನನು ಇಸ್ರಯೇಲನವರನ್ನು ದೇವರ ಅಪ್ಪಣೆಯನ್ನು ಮೀರಿಸಿದರಿಂದಲೂ, ಅವನ ಚಿತ್ತಕ್ಕೆ ತಿರುಗ ಬೀಳ ಮಾಡಿದ್ದರಿಂದಲೂ, ಅವರು ದೇವರ ಸಹಾಯದ ಮೇಲೆ ಭರವಸವಿಡಲಾರದೆ, ಶತ್ರುಗಳಿಂದ ಸೋತು ಹೋಗುವದಕ್ಕೆ ಹೇತುವಾದನು.

೭. ಅಂದರೆ, ಯೆಹೋವನ ಪಕ್ಷದವರಾದ ಭಕ್ತರು.

೮. ಲೇವಿಯ ಮಕ್ಕಳವರೆಲ್ಲರೂ ವಿಗ್ರಹಾರಾಧ

ಹೊರಡೋಣ. ೩೨, ೩೦ — ೩೫.

ನೆಯ ಪಾಪಕ್ಕೆ ತಪ್ಪಿಸಿ ಕೊಂಡರೇನೋ ನಿಶ್ಚಯವಾಗಿರುವದಿಲ್ಲ. ಆದರೆ ಅವರು ತಮ್ಮ ಅಪರಾಧವನ್ನು ಬೇಗ ತಿಳುಕೊಂಡು, ಮಾನಸಾಂತರವಾಗಿ ಯೆಹೋವನ ಭಕ್ತ್ಯಾಸಕ್ತಿಯಿಂದ ತಮಗೂ ಕರ್ತನಿಗೂ ಕೂಡಲೊಲ್ಲದವರನ್ನು, ನೆಂಟರು ಒಡಹುಟ್ಟಿದವರು ಗೆಳೆಯರು ಮುಂತಾದವರನ್ನು ಸಹ ಕನಿಕರಿಸದೆ, ದೇವ ವೈರಿಗಳನ್ನೆಲ್ಲಾ ಸಂಹಾರ ಮಾಡಿದರು.

೯. ಇಸ್ರಯೇಲನವರು ಮಾಡಿದ ಪಾಪಕ್ಕೆ ಯುಕ್ತವಾದಂಥ ಅವರು ಎಂದಿಗೂ ಮರೆತು ಬಿಡದಿರ ತಕ್ಕಂಥ ಭಯಂಕರವಾದ ಶಿಕ್ಷೆಯಕಟ!

೧೦. ಈ ಮಾತು ಘನವಾದದ್ದಾಗಿರುವದರಿಂದ ಅಂತ್ಯೋಕ್ತಿಯಾಗಿ ಈ ಚರಿತ್ರದಲ್ಲಿ ಸೇರಿದ್ದರೂ, ಮೋಶೆಯು ೨೭ನೆಯಲ್ಲಿ ಕೊಟ್ಟ ಅಪ್ಪಣೆಗೆ ಕೂಡಿದಂಥಾದ್ದೆಂದು, ನೆನಸ ತಕ್ಕದ್ದು. ಕೈಗಳನ್ನು ತುಂಬಿಸೋಣವಂದರೆ, ದೇವರಿಗೆ ಬಲಿಯನ್ನರ್ಪಿಸುವದು. ೩೦೦೦ ಮಂದಿಯ ಕೊಲೆಯು ದೇವರು ಈಗಲಾಜ್ಞಾಪಿಸಿದ ಪ್ರಾಯಶ್ಚಿತ್ತದ ಬಲಿಯಾಗಿತ್ತು. ಲೇವಿಯ ಮಕ್ಕಳು ನೆಂಟರಿಷ್ಟರ ಅಕ್ಕರೆಯನ್ನು ಬಿಟ್ಟು, ಯೆಹೋವನ ಅಪ್ಪಣೆಯನ್ನು ಕೈಕೊಂಡರು. ದೇವರ ಚಿತ್ತವನ್ನನುಸರಿಸುವ ಆಶೆಯು ಅವರ ಹೃದಯಗಳಲ್ಲಿ ಪ್ರಬಲವಾಗಿದ್ದದರಿಂದ, ದೇವರು ಅವರಿಗೆ ಸ. ೨೮, ೪೧ರಲ್ಲಿ ನೇಮಕ ಮಾಡಿದ ಯಾಜಕೋದ್ಯೋಗಕ್ಕೆ ಯೋಗ್ಯರಾಗಿ ಕಾಣಿಸಿ ಕೊಂಡರು. ದ್ವಿತೀ. ೩೩, ೯ ಬರದಿರುವ ಮೋಶೆಯ ಆಶೀರ್ವಾದವನ್ನು ಸರಿ ನೋಡು.

೧೧. ದೇವರು ಅವರಿಗಿತ್ತ ಆಶೀರ್ವಾದವು ಏನಂದರೆ: ಇಸ್ರಯೇಲನವರೆಲ್ಲರಿಗಿಂತ ಶ್ರೇಷ್ಠರಾಗಿ ಯಾಜಕಕುಲವಾಗಿ ಆಯಿಕೆಯಾದದ್ದು.

ವ. ೩೦. ಮರು ದಿವಸದಲ್ಲಿ ಆದದ್ದೇನಂದರೆ.—ಮೋಶೆಯು ಪ್ರಜೆಗೆ ಹೇಳಿದ್ದು:
ನೀವು ದೊಡ್ಡ ಪಾಪವನ್ನು ಮಾಡಿದ್ಧೀರಿ. ಆದರೆ ನಿಮ್ಮ ಪಾಪಕ್ಕೆ ವಿಮೋಚನೇ ಮಾ
ಡುವೆನೋ ಏನೋ ಎಂದು, ಯೆಹೋವನ ಬಳಿಗೆ ಏರಿ ಹೋಗುತ್ತೇನೆ. ೩೧. ಮೋಶೆ
ಯು ಯೆಹೋವನ ಬಳಿಗೆ ತಿರಿಗಿ ಬರಲು, ಅಕಟ, ಈ ಪ್ರಜೆಯು ದೊಡ್ಡ ಪಾಪವನ್ನು
ಮಾಡಿ, ತಮಗೆ ಚಿನ್ನದ ದೇವರುಗಳನ್ನು ಮಾಡಿ ಕೊಂಡಿದ್ಧಾರೆ. ೩೨. ಈಗಲವರ
ಪಾಪವನ್ನು ಮನ್ನಿಸಿದರೆ, ಆಗದೆ! ಇಲ್ಲವಾದರೆ, ನೀನು ಬರೆದ ನಿನ್ನ ಪುಸ್ತಕದಿಂದ೧),
ನನ್ನನ್ನು ಅಳಿಸು೨). ೩೩. ಆಗ ಯೆಹೋವನು ಮೋಶೆಗೆ—ನನಗೆ ಪಾಪವನ್ನು ಮಾ
ಡಿದವನನ್ನೇ ನನ್ನ ಪುಸ್ತಕದಿಂದ ಅಳಿಸುತ್ತೇನೆ೩). ೩೪. ಈಗ ಹೋಗಿ, ಪ್ರಜೆಯನ್ನು
ನಾನು ನಿನಗೆ ನುಡಿದದ್ದಲ್ಲಿಗೆ ನಡಿಸು. ಇಗೋ, ನನ್ನ ದೂತರವನು೪) ನಿನ್ನ ಮುಂದೆ
ಹೋಗುವನು. ಆದರೆ ವಿಚಾರಿಸುವ ದಿವಸದಲ್ಲಿ ಅವರ ಪಾಪವನ್ನು ಅವರ ಮೇಲೆ
ವಿಚಾರಿಸುವೆನು೫). ೩೫. ಹೀಗೆ ಯೆಹೋವನು ಪ್ರಜೆಯನ್ನು, ಅವರು ಆರೋನನು
ಉಂಟು ಮಾಡಿದ ಕರುವನ್ನು ಮಾಡಿ ಕೊಂಡ ನಿಮಿತ್ತ, ಬಡದನು೬).

೧. ಇಲ್ಲಿ ಬರದಿರುವ ಪುಸ್ತಕವು ಜೀವದ ಪುಸ್ತಕವೆಂಬುವದು. ಹಳೆ ಒಡಂಬಡಿಕೆಯುವರು, ಜೀವದ ಪುಸ್ತಕದಲ್ಲಿ ಲಿಖಿತವಾಗಿರೋಣವೆಂಬದಕ್ಕೆ ಇಹಜೀವವನ್ನನುಭವಿಸೋಣವೆಂಬರ್ಥವದೆ ಎಂದು, ನೆನಸಿ ಕೊಂಡರು. ಹೊಸ ಒಡಂಬಡಿಕೆಯಲ್ಲಿ, (ಫಿಲಿ. ೪, ೩. ಪ್ರಕ. ೧೩, ೮; ೧೭, ೮; ೨೦, ೧೫; ೨೨, ೧೯.) ನಿತ್ಯಜೀವವನ್ನು ಪರಲೋಕರಾಜ್ಯದಲ್ಲಿ ಪಡ ಕೊಳ್ಳ ತಕ್ಕವರ ಹೆಸರುಗಳು ಜೀವದ ಪುಸ್ತಕದಲ್ಲಿ ಬರೆದವೆಂದು, ಓದುತ್ತೇವೆ. ಯಾಕೆಂದರೆ, ನಿತ್ಯ ಜೀವವು ಯೇಸು ಕ್ರಿಸ್ತನ ಮುಖಾಂತ್ರ ಪ್ರಕಟವಾದ ಮೇಲೆ, ಜೀವ

ಹೊರಡೋಣ. ೩೩, ೧—೬.

ದ ಪುಸ್ತಕವೆಂಬದರ ಅಭಿಪ್ರಾಯವು ಬೇರೆಯಾಯಿತು. ಆದರೆ ಮೋಶೆ ದಾವೀದ ಮುಂತಾದ ಹಳೆ ಒಡಂಬಡಿಕೆಯ ಭಕ್ತರಲ್ಲಿ ಪ್ರಾಮುಖ್ಯರು ಈ ಮರ್ಮವನ್ನು ಜಾಡೆಯಾಗಿ ತಿಳಕೊಂಡರೆಂಬದಕ್ಕೆ ಸಂಶಯವಿಲ್ಲ.

೨. ಈಚೇ ಕಾಲದವನಾದ ಪಾಲನೋಪಾದಿಯಾಗಿ (ರೋಮ. ೯, ೩.) ಮೋಶೆಯು ಪ್ರೀತಿಯ ಆಸಕ್ತಿಯಿಂದ ಬಿನ್ನೈಸಿ, ತನ್ನ ಜನಾಂಗವು ನಾಶನವಾಗುವದನ್ನು ನೋಡುವದಕ್ಕಿಂತ ತಾನು ಸ್ವಜಾತಿಯವರಿಗಾಗಿ ಶಾಪಗ್ರಸ್ತನಾಗುವದು ಲೇಸು, ಅನ್ನುತ್ತಾನೆ. ಯೇಸು ಕ್ರಿಸ್ತನು ನಮಗಾಗಿ ಶಾಪವಾದದರಲ್ಲಿ (ಗಲ. ೩, ೧೩.) ಪ್ರಕಟವಾದ ದೇವರ ಪ್ರೀತಿಯು ಕ್ರಿಸ್ತನ ಪ್ರಾಮುಖ್ಯ ಸೇವಕರಾದ ಮೋಶೆ ಪಾಲರಲ್ಲಿಯೂ ಕಾಣ ಬಂತು.

೩. ದೇವರು ನಿರಪರಾಧಿಗಳನ್ನಲ್ಲ ಅಪರಾಧ ಮಾಡಿದವರನ್ನೇ ಶಿಕ್ಷಿಸುವವನಾಗಿದ್ಧಾನೆ.

೪. ನನ್ನ ದೂತರವನು, ಅಂದರೆ—ಈ ಉದ್ಯೋಗಕ್ಕೆ ನೇಮಕನಾದ ನನ್ನ ದೂತರಲ್ಲಿ ಒಬ್ಬನು ಈ ಮಾತಿನ ಅಭಿಪ್ರಾಯವು ೩೩, ೩ರಲ್ಲಿ ಸ್ಪಷ್ಟವಾಗಿ ತೋರುತ್ತದೆ, ಏನಂದರೆ, ತಾನಲ್ಲ ಒಬ್ಬ ದೂತನು ಜನಾಂಗದ ನಾಯಕನಾಗ ಬೇಕೆಂದು, ನಿರ್ಣೈಸಿದ್ಧೇನೆಂದು ದೇವರು ಹೇಳುತ್ತಾನೆ. ಒಡಂಬಡಿಕೆಯ ನೇಮವನ್ನು ಪೂರ್ಣವಾಗಿ ಮೀರಿದ ಜನಾಂಗಕ್ಕೆ ಒಡಂಬಡಿಕೆಯ ಬಾಧ್ಯತೆಯಾದ, ದೇವಮುಖವು, ಅಥವಾ ಮುಖದೂತನು, ಅಥವಾ (ಕೊಲೊ. ೧, ೧೫) ಅದೃಶ್ಯದೇವಪ್ರತಿರೂಪವು, ಎಂಬ ಪ್ರತ್ಯಕ್ಷ ದೇವರ ಅನ್ಯೋನ್ಯವು ಕಳಿದು ಹೋಗುವದು ನ್ಯಾಯವಾಗಿತ್ತು. ಆದರೆ ದೇವರು ದ್ರೋಹ ಮಾಡಿದ ಜನಾಂಗವನ್ನು ಪೂರ್ಣವಾಗಿ ತಿರಸ್ಕರಿಸದೆ, ದೂತನನ್ನು ಅದಕ್ಕೆ ನಾಯಕನಾಗಿ ನೇಮಿಸಿದನು. ಈ ದಯೆಯು ಮೋಶೆಗೆ ಸಾಲದೆ ಹೋದದರಿಂದ, ಅವನು ಪೂರ್ವ ಒಡಂಬಡಿಕೆಯ ಸಂಬಂಧದ ಪುನಸ್ಥಾಪನೆಯಾಗ ಬೇಕೆಂಬ ಅತ್ಯಾಸಕ್ತಿಯಿಂದ ಬೇಡುವದನ್ನು ಬಿಡಲಿಲ್ಲಾ.

೫. ಇಸ್ರಯೇಲನವರ ಅವಿಧೇಯತ್ವವೂ ಮಾನಸಾಂತರವಿಲ್ಲದ ಹಟವೂ ಹೆಚ್ಚೆಚ್ಚಾಗಿ ಬೆಳೆದು, ಅವರ ಪಾಪಗಳ ಅಳತೆಯನ್ನು ತುಂಬಿಸಿದ ಸಮಯದಲ್ಲಿ, ಅವರು ಈಗ ನಡಿಸುವ ವಿಗ್ರಹಾರಾಧನೆಯ ಪಾಪಕ್ಕೂ ತಕ್ಕ ದಂಡನೆಯನ್ನು ಮಾಡುವೆನು.

೬. ೨೮ನೆ ವಚನದಲ್ಲಿ ಬರೆದ ಶಿಕ್ಷೆಯು ಸದ್ಯಕ್ಕೆ ಅವರ ಮೇಲೆ ಬಿತ್ತು. ಇದರಿಂದಲವರು ಗುಣವಾಗದೆ ಹೋದರೆ, ಅಧಿಕವಾದ ದಂಡನೆಗೆ ಒಳಗಾಗುತ್ತಿದ್ದರು.

ಜನಾಂಗದ ಪಶ್ಚಾತ್ತಾಪವೂ ದೇವರ ಕರುಣೆಯೂ. ಸ. ೩೩. ೧—೬.

ವ. ೧. ಆಗ ಯೆಹೋವನು ಮೋಶೆಗೆ ಹೇಳಿದ್ದು ಏನಂದರೆ೧): ನೀನೂ ಮಿಚ್ರ ದೇಶದಿಂದ ನೀನು ಏರಿ ಬರಲೀಸಿದ ಪ್ರಜೆಯೂ ಇಲ್ಲಿಂದ ಎದ್ದು, ನಾನು ಅಬ್ರಹಾಮ ಇಸಾಕ ಯಾಕೋಬರಿಗೆ, ನಿಮ್ಮ ಬೀಜಕ್ಕೆ ಕೊಡುವೆನೆಂದು, ಆಣೆ ಇಟ್ಟಂಥ, ೨. ನಾನು ನಿನ್ನ ಮುಂದೆ ದೂತನನ್ನು ಕಳುಹಿಸಿ, ಕನಾನ್ಯರನ್ನೂ ಅಮೋರ್ಯರನ್ನೂ ಹಿತ್ತಿಯರನ್ನೂ ಪೆರಿಜೀಯರನ್ನೂ ಹಿವ್ವಿಯರನ್ನೂ ಎಬೂಸಿಯರನ್ನೂ ಹೊರಡಿಸುವಂಥ, ೩. ಹಾಲೂ ಜೇನೂ ಹರಿಯುವ ದೇಶಕ್ಕೆ ಹೋಗು೨). ನೀನು ಕಠಿಣ ಕುತ್ತಿಗೆಯ ಪ್ರಜೆಯಾಗಿದ್ಧಿ. ಆದದರಿಂದ ಮಾರ್ಗದಲ್ಲಿ ನಿನ್ನನ್ನು ಸಂಹಾರ ಮಾಡದ ಹಾಗೆ ನಿನ್ನ ನಡುವೆಯಲ್ಲಿ ಏರಿ ಹೋಗೆನು೩). ೪. ಪ್ರಜೆಯು ಕೆಟ್ಟದ್ದಾದ ಈ ಮಾತು ಕೇಳಲು, ಅವರು ಗೋಳಿಟ್ಟು, ಯಾರೂ ತನ್ನ ಒಡವೆಗಳನ್ನು ಇಟ್ಟು ಕೊಳ್ಳಲಿಲ್ಲ೪). ೫. ಯಾಕೆಂದರೆ ಯೆಹೋವನು ಮೋಶೆಗೆ ಹೇಳಿದ್ದು: ಇಸ್ರಯೇಲನ ಮಕ್ಕಳಿಗೆ ಹೀಗೆ ಹೇಳು: ನೀವು ಕಠಿಣ ಕುತ್ತಿಗೆಯ ಪ್ರಜೆಯು. ನಾನು ಕ್ಷಣದಲ್ಲಿ ನಿಮ್ಮ ನಡುವೆಯಲ್ಲಿ ಏರಿ ನಿಮ್ಮನ್ನು ಸಂಹಾರ ಮಾ

ಡುವೆನು. ಆದದರಿಂದ ಈಗ ನಿಮ್ಮ ಒಡವೆಗಳನ್ನು ತೆಗದಿಡಿರಿ. ಆಗ ನಿಮಗೇನು ಮಾ
ಡ ಬೇಕೆಂದರಿಯುವೆನು. ೬. ಆಗಲಿಸ್ರಯೇಲನ ಮಕ್ಕಳು ತಮ್ಮ ಒಡವೆಗಳನ್ನು ಹೋ
ರೆಬ್ ಬೆಟ್ಟದ ಮುಂದೆ ತಮ್ಮಿಂದ ಸುಲಿದು ಹಾಕಿದರು.

೧. ಈ ಮಾತು ಬೆದರಿಸುವಂಥಾದ್ದೂ ಪ್ರತಿಜ್ಞೆ ಮಾಡುವಂಥಾದ್ದೂ ಆಗಿದೆ.

೨. ೩೨, ೩೪ರಲ್ಲಿ ದೇವರು ಸೂಚಿಸಿ ಹೇಳಿದ ದೇಶವು ಯಾವದೆಂದು, ಇಲ್ಲಿ ವರ್ಣಿಸುತ್ತಾನೆ.

೩. ಪಶ್ಚಾತ್ತಾಪ ಪಡದೆ ಇರುವವರಿಗೆ ನೇಮಕವಾದ ಶಿಕ್ಷೆಯನ್ನು ಹೆದರಿಸಿ ಹೇಳಿ, ಪಶ್ಚಾತ್ತಾಪ ಪಡುವವರನ್ನು ಮನ್ನಿಸಿ, ತಿರಿಗಿ ಕೃಪೆಯಿಂದ ಪರಾಮರಿಸುವದು ದೇವರಿಗೆ ವಾಡಿಕೆಯಾಗಿದೆಂದು, ಮುಂದಿನ ಕಥೆಯಲ್ಲಿ ಕಾಣುತ್ತದೆ.

೪. ಬೂದಿ ಹಾಕಿ ಕೊಳ್ಳುವದು, ವಸ್ತ್ರಗಳನ್ನು ಹರಿದು ಹಾಕುವದು ಆಭರಣವನ್ನು ತೆಗದು ಇಡುವದು ಇತ್ಯಾದಿ ದುಃಖ ಪಶ್ಚಾತ್ತಾಪಗಳ ಗುರ್ತುಗಳಾಗಿದ್ದವು.

ವ. ೭—೧೦. ಈ ವಚನಗಳಲ್ಲಿ ನಡುವೆ ಬಂದ ಸಂಗತಿಯು ಬರೆದದೆ. ಒಡಂಬಡಿಕೆಯ ಗುಡಾರದ ರಚನೆಗೆ ಮುಂಚಿತವಾಗಿ, ಮನುಷ್ಯರು ಹೊತ್ತು ಕೊಂಡು ಹೋಗುವಂಥ, ಮೋಶೆಯ ನ್ಯಾಯಸ್ಥಾನವೂ ದೇವೋಕ್ತಿ ಸ್ಥಳವೂ ಆದಂಥ, ಒಂದು ಗುಡಿಯು ಇತ್ತೆಂದು, ತೋರುತ್ತದೆ. ಇದಕ್ಕೂ ಸಭೆಯ ಗುಡಾರವೆಂಬ ಹೆಸರಿತ್ತು. ಈ ವರೆಗೆ ಅದು ದಂಡಿನ ನಡುವೆಯಲ್ಲಿತ್ತು. ಇಸ್ರಯೇಲನವರ ಮೇಲೆ ಬಿದ್ದ ಶಾಪವು ಇನ್ನೂ ಪರಿಹಾರವಾಗದೆ ಇರುವದರಿಂದ, ದೇವರು ಅವರೊಳಗೆ ವಸ್ತಿಯಾಗಿರಲೊಲ್ಲನೆಂಬದರ ಗುರ್ತಾಗಿ, ಅದನ್ನು ಮೋಶೆಯು ದಂಡಿನ ಹೊರಗೆ ಕಟ್ಟಿದನು. ಮೇಘಸ್ತಂಭವೂ ಅದರ ಕೂಡ ದಂಡಿನ ಹೊರಗೆ ಸರಿಸಿ, ಮೋಶೆಯು ಅದರಲ್ಲಿ ಶೇರುತ್ತಲೇ, ಅದರ ಮೇಲೆ ಇಳು ಕೊಂಡಿತು. “ಮತ್ತು ಯೆಹೋವನನ್ನು ಅರಸುವವರೆಲ್ಲಾ ದಂಡಿನ ಹೊರಗಣ ಕೂಟದ ಗುಡಾರಕ್ಕೆ ಹೊರಟರು.” ವ. ೭. ಯೆಹೋವನು ಮೋಶೆಯ ಸಂಗಡ, ಒಬ್ಬನು ಗೆಳೆಯನ ಸಂಗಡ ಮಾತಾಡುವಂತೆ ಎದುರೆದುರು ಮಾತಾಡಿದನು. ವ. ೧೧. ಜನಾಂಗಕ್ಕೆ ಮುನಿದು ದೂರವಾದ ದೇವರು ತನ್ನ ಸೇವಕನಾದ ಮೋಶೆಯ ಮೇಲೆ ಮಮತೆ ಇಟ್ಟು, ಅವನೊಡನೆ ನೆರೆಬಳಿಕೆಯಾದ ಸಲಿಗೆಯಲ್ಲಿರುತ್ತಾನೆಂಬ ದೃಷ್ಟಾಂತವಾಗಿ, ಇದು ದಂಡಿನವರೆಲ್ಲರಿಗೆ ಕಾಣಬಂತು.

ವ. ೧೨. ಆಗ ಮೋಶೆಯು ಯೆಹೋವನಿಗೆ ಹೇಳಿದ್ದು: ನೋಡು, ಈ ಪ್ರಜೆ
ಯನ್ನು ಏರಿ ಬರ ಮಾಡು ಎಂದು, ನನಗೆ ಹೇಳುತ್ತಾ ಇದ್ದು, ನೀನು ನನ್ನ ಸಂಗಡ ಕ
ಳುಹಿಸುವವನನ್ನು ನನಗೆ ತಿಳಿಸುವದಿಲ್ಲವಲ್ಲಾ? ನಿನ್ನನ್ನು ಹೆಸರಿಂದ[೧] ತಿಳಿದಿದ್ದೇನೆ,
ಮತ್ತು ನನ್ನ ದೃಷ್ಟಿಯಲ್ಲಿ ನಿನಗೆ ದಯ ದೊರಕಿಯದೆ ಎಂದು, ನೀನು ಹೇಳಿದಿಯಲ್ಲಾ?
೧೩. ಈಗಲಾದರೆ, ನಿನ್ನ ದೃಷ್ಟಿಯಲ್ಲಿ ನನಗೆ ದಯ ದೊರಕಿತಾದರೆ, ನಿನ್ನ ದೃಷ್ಟಿಯಲ್ಲಿ
ನನಗೆ ದಯ ದೊರಕುವ ಬಗ್ಗೆ, ನಾನು ನಿನ್ನನ್ನು ತಿಳಿಯುವ ಹಾಗೆ, ನಿನ್ನ ಮಾರ್ಗವ
ನ್ನು ನನಗೆ ತಿಳಿಸೈ[೨]; ಮತ್ತು ಈ ಜನಾಂಗವು ನಿನ್ನ ಪ್ರಜೆಯೆಂದು[೩], ನೋಡು. ೧೪. ಆ
ಗಲವನು—ನನ್ನ ಮುಖವು ಹೋಗಲಾಗಿ[೪], ನಿನ್ನನ್ನು ತೇರುಗಡೆಯಾಗಲೀಸುವೆನು[೫].
೧೫. ಅವನವನಿಗೆ—ನಿನ್ನ ಮುಖವು ಹೋಗದಿದ್ದರೆ, ನಮ್ಮನ್ನು ಇಲ್ಲಿಂದ ಏರಿ ಹೋ
ಗಲೀಸ ಬೇಡ[೬]. ೧೬. ನಿನ್ನ ದೃಷ್ಟಿಯಲ್ಲಿ ನಾನೂ, ನಿನ್ನ ಪ್ರಜೆಯೂ, ದಯ ದೊರಕಿಸಿ

ಹೊರಡೋಣ. ೩೩, ೧೭—೨೩.

ಕೊಂಡೆವೆಂದು, ಯಾತರಿಂದ ಗೊತ್ತಾದೀತು? ನಾನೂ, ನಿನ್ನ ಪ್ರಜೆಯೂ, ಭೂಮಿ
ಯ ಮೇಲಿರುವ ಎಲ್ಲಾ ಪ್ರಜೆಯಲ್ಲಿ[೨] ವಿಶೇಷಿತರಾಗುವ ಹಾಗೆ, ನೀನು ನಮ್ಮ ಸಂಗ
ಡ ಹೋಗುವದರಿಂದಲಲ್ಲವೋ? ೧೭. ಆಗ ಯೆಹೋವನು ಮೋಶೆಗೆ—ನೀನು ಆಡಿ
ದ ಈ ಮಾತನ್ನು ಸಹಾ ಮಾಡುತ್ತೇನೆ; ಯಾಕೆಂದರೆ ನನ್ನ ದೃಷ್ಟಿಯಲ್ಲಿ ದಯ ದೊರಕಿ
ಸಿ ಕೊಂಡಿದ್ದೀ; ನಿನ್ನನ್ನು ಹೆಸರಿಂದ ತಿಳಿದಿದ್ದೇನೆ, ಅಂದನು. ೧೮. ಆಗಲವನು—ನಿನ್ನ
ಮಹಿಮೆಯನ್ನು ನನ್ನನ್ನು ನೋಡಲೀಸ್ಯೆ[೩], ಅನ್ನಲು, ೧೯. ಅವನು—ನನ್ನ ಮೇಲನ್ನೆ
ಲ್ಲಾ[೪] ನಿನ್ನ ಮುಂದೆ ಹಾದು ಹೋಗಲೀಸಿ, ಯೆಹೋವನ ಹೆಸರನ್ನು ನಿನ್ನ ಮುಂದೆ
ಸಾರಿಸುವೆನು[೧೦]. ಯಾವನಿಗೆ ದಯ ಮಾಡುತ್ತೇನೋ ಅವನಿಗೆ ದಯ ಮಾಡುತ್ತೇ
ನೆ; ಯಾವನನ್ನು ಕರುಣಿಸುತ್ತೇನೋ ಅವನನ್ನು ಕರುಣಿಸುತ್ತೇನೆ, ಅಂದನು. ೨೦.
ಮತ್ತು—ನನ್ನ ಮುಖವನ್ನು ನೋಡಲಾರಿ, ಯಾಕೆಂದರೆ ನನ್ನನ್ನು ನೋಡುವ ಮನು
ಷ್ಯನು ಬದುಕನು, ಅಂದನು. ೨೧. ಮತ್ತು ಯೆಹೋವನು—ಇಗೋ, ನನ್ನ ಬದೀಲಿ
ಇಂಬು ಅದೆ. ಬಂಡೆಯ ಮೇಲೆ ನಿಂತುಕೋ. ೨೨. ನನ್ನ ಮಹಿಮೆಯು ಹಾದು ಹೋ
ಗುವಲ್ಲಿ ಆಗುವದೇನಂದರೆ: ನಿನ್ನನ್ನು ಬಂಡೆಯ ಬಿರುಕಿನಲ್ಲಿಟ್ಟು, ನಾನು ಹಾದು ಹೋ
ಗುವ ಮಟ್ಟಿಗೂ ನಿನ್ನ ಮೇಲೆ ನನ್ನ ಕೈ ಕವಿಯುವೆನು. ೨೩. ಮತ್ತು ನನ್ನ ಕೈ ಮರಳಿಸ
ಲು, ನನ್ನ ಹಿಂಗಡೆಯನ್ನು ನೋಡುವಿ; ಆದರೆ ನನ್ನ ಮುಖವನ್ನು ನೋಡಲಾಗದು.

೧. ಈ ಮಾತು ವಿಶೇಷವಾದ ಮಮತೆಯನ್ನೂ ಅಧಿಕವಾದ ಸಲಿಗೆಯನ್ನೂ ಸೂಚಿಸುವದು.

೨. ನಿನ್ನ ಮಾರ್ಗ ಅಂದರೆ—ನಿನ್ನ ಮನಸ್ಸಿನಲ್ಲಿ ನೀನು ನಿಶ್ಚೈಸಿದ ಆಲೋಚನೆಯು. ದೂತರಲ್ಲಿ ಒಬ್ಬನು ಯೆಹೋವನ ಪ್ರತಿನಿಧಿಯಾಗಿ ಇಸ್ರಯೇಲನವರನ್ನು ನಡಿಸಿ ಕಾಪಾಡಿದರೆ, ಸಾಲದೆಂದೂ, ಒಡಂಬಡಿಕೆಯ ಅನ್ಯೋನ್ಯವು ಮುಂಚಿನಂತೆ ಸ್ಥಾಪಿತವಾಗಬೇಕೆಂದೂ, ಮೋಶೆಯು ಭಾವಿಸಿ ಕೊಂಡು, ಈ ಪ್ರಕಾರ ಬಿನ್ನೈಸುತ್ತಾನೆ.

೩. ಮೋಶೆಯು ತಾನೇ ಕೃಪೆಯನ್ನು ಪಡ ಕೊಂಡವನಾಗಿ ಕರ್ತನ ಪೂರ್ಣಾನ್ಯೋನ್ಯದ ಸಲಿಗೆಯಲ್ಲಿದ್ದರೂ, (ವ. ೧೧.) ತನ್ನ ಜನಾಂಗದ ಅನ್ಯೋನ್ಯವಿಲ್ಲದೆ ಏನೂ ಆಗಿರಲೊಲ್ಲದೆ, ದೇವರಿಗೆ ಮೊರೆ ಇಟ್ಟು, ನನ್ನ ಜನಾಂಗವು ನಿನ್ನದೆಂದು, ನೆನಪು ಮಾಡಿ ಕೊಂಡು, ನನ್ನ ಕೂಡ ನಿನ್ನ ಕೃಪೆಯ ಅನುಭವದಲ್ಲಿಯೂ ನಿನ್ನ ಮಮತಾಸಂಬಂಧದಲ್ಲಿಯೂ ಮರಳಿ ಶೇರಿಸೆಂದು, ಬೇಡುತ್ತಾನೆ.

೪. ಒಡಂಬಡಿಕೆಯ ಮಧ್ಯಸ್ಥನಾದ ಕರ್ತನು, ನನ್ನ ಮುಖವು (ಪ್ರತ್ಯಕ್ಷನಾದ ನಾನು) ಹೋಗಲಾಗಿ, ಎಂಬ ಮಾತಿನಿಂದ ಮೋಶೆಯ ಬಿನ್ನಹಕ್ಕೆ ಒಪ್ಪಿ ಕೊಳ್ಳುತ್ತಾನೆ.

೫. ಯೆಹೋವನು ತನ್ನ ಜನಾಂಗವನ್ನು ತಾನೇ ನಡಿಸಿ, ಅದನ್ನು ವಾಗ್ದತ್ತದೇಶದಲ್ಲಿ ಶೇರಿಸಿ, ವಸ್ತಿಯಾಗಲೀಸಿ, ಅದಕ್ಕೆ ಇಷ್ಟಾಪೂರ್ತಿ ಮಾಡುವೆನೆಂದು, ಮಾತು ಕೊಡುತ್ತಾನೆ.

೬. ಮೋಶೆಯು ದೇವರ ವಾಗ್ದತ್ತವನ್ನು ಕೇಳಿ, ಅತಿ ಸಂತುಷ್ಟನಾಗಿ, ಹೀಗೆಯೇ ಆಗಲಿ; ಯಾಕೆಂದರೆ ನೀನು ಸಹಾಯಕನಾಗಿ ನಮ್ಮ ಸಂಗಡ ಇಲ್ಲದಿದ್ದರೆ, ವಾಗ್ದತ್ತದೇಶವನ್ನು ಸ್ವತಂತ್ರಿಸಿ ಕೊಳ್ಳುವದಕ್ಕೆ ನಮಗೆ ಧೈರ್ಯ ಸಾಲದು.

೭. ಆಯಾ ಜನಾಂಗಗಳಿಗೆ ಬೇರೆ ಬೇರೆ ದೂತರು ದೇವರಿಂದ ಅಧಿಪತಿಗಳಾಗಿ ನೇಮಕರಾಗಿದ್ದಾರೆ ಎಂಬದು ದನಿಯೇಲನ ಪುಸ್ತಕದಲ್ಲಿ (ಸ. ೧೦, ೧೩. ೨೧.) ಕಾಣುತ್ತದೆ. ಈ ದೂತರೂ ಅವರಿಗೆ ಒಳಗಣ

೨೫೮. ದೇವರು ತನ್ನ ದಯೆಯ ಪುನರಾಗಮನದ ವಿಷಯ ಕೊಟ್ಟ ವಾಗ್ದತ್ತ.

ಹೊರಡೋಣ. ೩೪, ೧—೯.

ಜನಾಂಗಗಳೂ ಸರ್ವಲೋಕದ ಒಡೆಯನಾದ ದೇವರಿಗೆ ವಶವಾಗಿದ್ದಾರೆ. ಆದರೆ ಆಯಿಕೆಯ ಪ್ರಜೆಯಾದ ಇಸ್ರಯೇಲನವರ ಜನಾಂಗಕ್ಕೆ ಅತಿಶಯವಾದ ಅಧಿಕ್ರಮವಿತ್ತು. ಏನಂದರೆ ಯೆಹೋವನು ತಾನೇ ಅದರ ನಾಯಕನಾಗಿದ್ದು, ತನ್ನ ಮಹಿಮೆಯನ್ನು ಅದರ ನಡುವೆಯಲ್ಲಿ ವಾಸ ಮಾಡಿಸಿ, ಅದರೊಡನೆ ಪೂರ್ಣಾನ್ಯೋನ್ಯನಾಗಿದ್ದನು. ಇದು ಅದರ ಮುಖ್ಯ ಪ್ರಾಭವದ ಕಾರಣವಾಗಿತ್ತು.

೮. ದೇವರ ಅತಿಶಯವಾದ ಒಳ್ಮೆಯ ಅನುಭವದಿಂದ ಮೋಶೆಯು ಹೆಚ್ಚಾಗಿ ಧೈರ್ಯಗೊಂಡು, ತನಗೆ ಪ್ರಾಪ್ತವಾದ ಪ್ರಕಟಣೆಗಿಂತ ಅಧಿಕವಾದ ಪೂರ್ಣದೇವಮಹಿಮಾಪ್ರತ್ಯಕ್ಷತಾಸಿದ್ಧಿಯನ್ನು ದೃಷ್ಟಿಸುವ ಅನುಗ್ರಹವನ್ನು ಬಯಸುತ್ತಾನೆ.

೯. ಮೇಲನ್ನೆಲ್ಲಾ ಅಂದರೆ, ಸಂಪೂರ್ಣವಾದ ಕೃಪೆಯ ಪ್ರಕಟಣೆಯನ್ನು. ಅದು ೩೪, ೬ರಲ್ಲಿ ಮೋಶೆಗೆ ದೊರಕಿತು. ಆದರೆ ಅದು ಅವನಿಗೆ ದೃಷ್ಟಿಯಿಂದ ಗೋಚರವಾಗದೆ, ಶ್ರುತಿಯಿಂದಲೇ ವಾಕ್ಯದ ಮೂಲವಾಗಿ ತಿಳಿಯ ಬಂತು.

೧೦. ಈ ಮಾತಿನ ಅರ್ಥವೇನಂದರೆ: ನಾನು ನನ್ನ ದಿವ್ಯ ಭಾವವಾದ ನನ್ನ ಕರುಣೆಯ ಐಶ್ವರ್ಯವನ್ನು ವಾಕ್ಯದಿಂದಲೇ ನಿನಗೆ ತಿಳಿಸುತ್ತೇನೆ. ಅದು ನಿನಗೆ ಸಾಕಾಗಿರಲಿ. ದೇವರ ಪ್ರಕಟಣೆಯನ್ನು ಹೊಂದುವದಕ್ಕೆ ಮನುಷ್ಯನಿಗೆ ಬಾಧ್ಯಸ್ತಿಕೆಯು ಇಲ್ಲ. ಉಚಿತವಾದ ಅನುಗ್ರಹದಿಂದಲೇ ದಿವ್ಯ ಕೃಪೆಯ ಗ್ರಹಿಕೆಯು ಪಾಪಿಗಳಾದ ಮನುಷ್ಯರಿಗೆ ಪ್ರಾಪ್ತವಹುದು.

೧೧. ಇದು ಹ್ಯಾಗಾಯಿತಂದರೆ: ಯೆಹೋವನ ಮಹಿಮೆಯು ದಾಟಿ ಹೋಗುವ ವೇಳೆಯಲ್ಲಿ ಮೋಶೆಯು ಒಂದು ಗವಿಯೊಳಗೆ ಮೋರೆ ಮುಚ್ಚಿ ಕೊಂಡು ನಿಂತು, ದಾಟೋಣ ತೀರಿದ ಬಳಿಕ ಹೊರಗೆ ಬಂದು, ೩೪, ೬ರಲ್ಲಿ ಬರೆದ ಮಾತುಗಳನ್ನು ಕೇಳಿದನು. ನಮ್ಮನ್ನು ನಡಿಸುವ ದೇವರ ಕೃಪೆಯ ಕೃತ್ಯಗಳ ಗ್ರಹಿಕೆಯು ಈ ತೆರವಾಗಿ ನಮಗೆ ದೊರಕುವದು; ಹ್ಯಾಗಂದರೆ, ದೇವರು ಮಾಡುವ ಕಾರ್ಯವು ಆದ ಬಳಿಕ, ಅದು ದೇವರಿಂದುಂಟಾಯಿತೆಂದು, ನಾವು ತಿಳು ಕೊಳ್ಳುವದು ವಾಡಿಕೆಯಾಗಿದೆ. ಮುಂತಿಳಿಯುವ ಬುದ್ಧಿಯಲ್ಲ, ಹಿಂತಿಳಿಯುವಂಥಾದ್ದೇ ನಮಗೆ ಸಹಜವಾಗಿದೆ. ದೇವರನ್ನು ಯಾವನಾದರೂ ಎಂದೂ ನೋಡಲಿಲ್ಲ, ಯೋಹ. ೧, ೧೮. ದೇವರನ್ನೆದುರೆದುರಾಗಿ ನೋಡಲಧಿಕಾರಿಯಾಗ ಬೇಕಾದರೆ, ಅವನಿಗೆ ಸರಿಯಾಗಿರಲೂ, ಅವನಂತೆ ಪರಿಶುದ್ಧ ಭಾವವಾಗಿರಲೂ, ಅವಶ್ಯವಾಗಿರುವದು· ೧ಯೋಹಾ. ೩, ೨. ಇಹದಲ್ಲಿ ನಾವು ದೃಷ್ಟಿಯಿಂದಲ್ಲ, ವಿಶ್ವಾಸದಿಂದಲೇ ನಡದು ಕೊಳ್ಳುತ್ತೇವೆ.

ಸ. ೩೪. ವ. ೧—೯.

ವ. ೧. ಆಗ ಯೆಹೋವನು ಮೋಶೆಗೆ ಹೇಳಿದ್ದು: ಮೊದಲಿನವುಗಳಂತೆ ಎರಡು ಕ
ಲ್ಲಿನ ಹಲಿಗೆಗಳನ್ನು ನನಗೆ ಕಡಿ; ಬಳಿಕ ನಾನು ಆ ಹಲಿಗೆಗಳ ಮೇಲೆ ನೀನು ಒಡೆದ ಮೊ
ದಲಿನ ಹಲಿಗೆಗಳ ಮೇಲೆ ಇದ್ದ ವಾಕ್ಯಗಳನ್ನು ಬರೆಯುವೆನು. ೨. ಮತ್ತು ಹೊತ್ತಾ
ರೆಗೆ ಸಿದ್ಧನಾಗಿದ್ದು, ಹೊತ್ತಾರೆ ಸೀನಯಿ ಬೆಟ್ಟವನ್ನೇರಿ, ಅಲ್ಲಿ ಬೆಟ್ಟದ ತುದಿಯಲ್ಲಿ ನನ್ನೆ
ದುರು ನಿಂತುಕೋ. ೩. ಯಾರೂ ನಿನ್ನ ಸಂಗಡ ಏರಿ ಬರ ಬಾರದು. ಬೆಟ್ಟದಲ್ಲೆಲ್ಲಾ
ಯಾರೂ ಕಾಣ ಬಾರದು. ಕುರಿದನಗಳೂ ಈ ಬೆಟ್ಟದ ಕಡೆಯಲ್ಲಿ ಮೇಯ ಬಾರದು.
೪. ಆಗ ಮೋಶೆಯು ಎರಡು ಕಲ್ಲಿನ ಹಲಿಗೆಗಳನ್ನು ಮೊದಲಿನವುಗಳಂತೆ ಕಡಿದು, ಹೊ
ತ್ತಾರೆ ಎದ್ದು, ಯೆಹೋವನು ಅವನಿಗೆ ಬೆಸಸಿದ ಪ್ರಕಾರ, ಎರಡು ಕಲ್ಲಿನ ಹಲಿಗೆಗಳ
ನ್ನು ಕೈಯಲ್ಲಿ ಹಿಡುಕೊಂಡು[1], ಸೀನಯಿ ಬೆಟ್ಟವನ್ನೇರಿದನು. ೫. ಆಗ ಯೆಹೋವನು

ಹೊರಡೋಣ. ೩೪, ೧—೯.

ಮೇಘದಲ್ಲಿ ಇಳಿದು ಬಂದು, ಅಲ್ಲಿ ಅವನ ಸಂಗಡ ನಿಂತುಕೊಂಡು, ಯೆಹೋವನ ಹೆಸರನ್ನು ಸಾರಿದನು೨).
೬. ಹ್ಯಾಗಂದರೆ, ಯೆಹೋವನು ಅವನೆದುರು ಹಾದು, ಯೆಹೋವ ದೇವರಾದ ಯೆಹೋವನು೩) ಅಂತಃಕರಣವೂ ದಯೆಯೂ ಉಳ್ಳವನೂ, ದೀರ್ಘಶಾಂತಿಯೂ ಮಿಗೆ ಕೃಪೆಯೂ ಸತ್ಯವೂ ಉಳ್ಳವನೂ,
೭. ಸಾವಿರ ಮಂದಿಗೆ ಕೃಪೆಯನ್ನು ಕಾಪಾಡುವಂಥ, ಅನ್ಯಾಯ ದ್ರೋಹ ಪಾಪಗಳನ್ನು ಮನ್ನಿಸುವಂಥ, ಅಪರಾಧ ಹೊರಿಸದೆ ಬಿಡದಂಥ, ತಂದೆಗಳ ಅನ್ಯಾಯವನ್ನು ಮಕ್ಕಳ ಮೇಲೆಯೂ ಮೊಮ್ಮಕ್ಕಳ ಮೇಲೆಯೂ ಮೂರನೆ ನಾಲ್ಕನೆ ತಲೆಯ ಮಟ್ಟಿಗೆ ಹೊರಿಸುವಂಥವನೂ ಎಂತ, ಸಾರಿದನು೪).
೮. ಮತ್ತು ಮೋಶೆಯು ಬೇಗನೆ ನೆಲಕ್ಕೆ ಬಾಗಿ, ಅಡ್ಡ ಬಿದ್ದು—
೯. ಯೆಹೋವನೇ, ನಿನ್ನ ದೃಷ್ಟಿಯಲ್ಲಿ ದಯ ದೊರಕಿಸಿ ಕೊಂಡೆನಾದರೆ, ಯೆಹೋವನೇ, ನಮ್ಮ ನಡುವೆಯಲ್ಲಿ ಹೋಗಿ, (ಈ ಪ್ರಜೆಯು ಘಟ್ಟಿ ಕುತ್ತಿಗೆಯಲ್ಲವೋ) ನಮ್ಮ ಅನ್ಯಾಯವನ್ನೂ ಪಾಪವನ್ನೂ ಮನ್ನಿಸಿ, ನಮ್ಮನ್ನು ಬಾಧ್ಯವಾಗಿ ತಕ್ಕೋ೫), ಅಂದನು.

೧. ಕರ್ತನಿಂದುಂಟಾದ ಹಲಿಗೆಗಳನ್ನು ಒಡೆದು ಬಿಟ್ಟ ಬಳಿಕ, ಮೋಶೆಯು ಕಡಿದ ಹಲಿಗೆಗಳು, ಇಸ್ರಯೇಲನವರು ಮಾಡಿದ ಬಸವಪೂಜೆಯೆಂಬ ದ್ರೋಹದ ನಿತ್ಯ ಜ್ಞಾಪಕಾರ್ಥಕ್ಕಾಗಿ, ಸಾಕ್ಷೀಗುಡಾರದಲ್ಲಿ ಇಡಲ್ಪಟ್ಟವು.

೨. ಈ ಮಾತು (ಯೆಹೋವನ ಹೆಸರನ್ನು ಸಾರಿದನೆಂಬದು) ಮೋಶೆಗೆ ಯೆಹೋವನ ಮಹಿಮೆಯು ಈಗ ಪ್ರತ್ಯಕ್ಷವಾಗುವದಲ್ಲದೆ, ಅತ್ಯುನ್ನತವಾದಂಥ, ಅಪಾರ ಮಹಿಮಾಮಯವಾದ ದೇವಗುಣಗಳನ್ನು ವರ್ಣಿಸುವಂಥ, ಭಕ್ತರಲ್ಲಿ ದೇವರ ಭಾವದ ಅರುಹನ್ನು ಹುಟ್ಟಿಸುವಂಥ ಹೆಸರುಗಳ ಪ್ರಕಟಣೆಯಾಗುವದೆಂಬದನ್ನು ಮುಂತಿಳಿಸಿತು. ಈ ಮುಹೂರ್ತವು ಮೋಶೆಯ ಜೀವದಲ್ಲೆಲ್ಲಾ ಅತಿ ಘನವಾದ್ದಾಗಿತ್ತು.

೩. ದೇವರ ಕೃಪೆ ಸತ್ಯಗಳ ಐಶ್ವರ್ಯವು, ನಿರಂತರವಾದದ್ದೂ ಅಪಾರವಾದದ್ದೂ ಆಗಿದ್ದರೂ, ಮಾನಸಾಂತರ ಪಡಲೊಲ್ಲದ ತಂದೆಗಳೂ ಮಕ್ಕಳೂ ಆದ ಮನುಷ್ಯರಿಗೆ ನಿರರ್ಥಕವಾಗುವದು. ಆದರೆ ದೇವರು ಅಪರಾಧಿಗಳನ್ನು ಅವಶ್ಯವಾದ್ದಲ್ಲಿ ಶಿಕ್ಷಿಸುತ್ತಾ ಇದ್ದರೂ, ಕೃಪೆಯೂ ನಂಬಿಕೆಯೂ ಉಳ್ಳ ಒಡಂಬಡಿಕೆಯ ದೇವರಾಗಿರ ಮಾಣನು. ಮೋಶೆಗೆ ಸಾರಿಸಿಕೊಂಡ ದೇವಗುಣಗಳು ದೇವಸ್ವಾಭಾವಿಕವಾದ್ದರಿಂದ, ಅವು ನೇಮಧಾನ ಸ್ಥಳವಾದ ಸೀನಯಿ ಬೆಟ್ಟದ ಮೇಲೆ ಪ್ರಸಂಗವಾಗ ತೊಡಗಿ, ಹಳೆ ಒಡಂಬಡಿಕೆಯ ಕಾಲದಲ್ಲೆಲ್ಲಾ ಪ್ರಕಟವಾಗುತ್ತಾ ಬಂದು, ಕ್ರಿಸ್ತನಲ್ಲಿಯೇ ಸಂಪೂರ್ಣ ಪ್ರತ್ಯಕ್ಷವಾದವು.

೪. ಏಳನೆ ವಚನದ ಕಡೆಯ ಮಟ್ಟಿಗೂ ಬರದಿರುವ ಮಾತುಗಳನ್ನು ಸಾರಿದವನು ಮೋಶೆಯಲ್ಲ, ಯೆಹೋವನೆಂಬ ಕರ್ತನು ತಾನೇ. ಒಡಂಬಡಿಕೆಯ ಮಹಾ ದೂತನೆಂಬ ಆದ್ಯಂತರಹಿತನಾದ ಯೆಹೋವನನ್ನು ಪ್ರಕಟಿಸಿ ಮಹಿಮೆ ಪಡಿಸುವ ಅಧಿಕಾರವು ಅವನಿಗಲ್ಲದೆ ಮತ್ತ್ಯಾರಿಗೂ ಇಲ್ಲ.

೫. ಈಗ ತನಗೆ ಪ್ರಸಂಗವಾದ ಕೃಪೆಯ ಐಶ್ವರ್ಯವನ್ನು ತಾನು ತನ್ನ ಜನಾಂಗದೊಡನೆ ಅನುಭವಿಸ ಬೇಕೆಂದು ಬಯಸಿ, ಮೋಶೆಯು ಜನಾಂಗದ ಅಪರಾಧವನ್ನು ಅರಿಕೆ ಮಾಡಿ, ಪಾಪ ಪರಿಹಾರವನ್ನು ಬೇಡಿ ಕೊಂಡು, ಇಸ್ರಯೇಲನವರು ದೇವರ ನಿತ್ಯವಾದ ಬಾಧ್ಯವೂ ಸ್ವಾಸ್ಥ್ಯವೂ ಆಗ ಬೇಕೆಂದು, ಬಿನ್ನೈಸುತ್ತಾನೆ. ಈ ಪ್ರಾರ್ಥನೆಯು, ದೇವರು ತನ್ನ ಜನಾಂಗದ ಪಾಪವನ್ನು ಮನ್ನಿಸದಿದ್ದರೆ, ನೆರೆವೇರ ಕೂಡದಿತ್ತು.

೨೫೮ ದೇವರು ತನ್ನ ದಯೆಯ ಪುನರಾಗಮನದ ವಿಷಯ ಕೊಟ್ಟ ವಾಗ್ದತ್ತ.

ಹೊರಡೋಣ. ೩೪, ೧೦--೨೮.

ವ. ೧೦. ಆಗಲವನು ಹೇಳಿದ್ದು: ಇಗೋ, ನಾನು ಒಡಂಬಡಿಕೆಯನ್ನು ಕಟ್ಟುತ್ತೇ
ನೆ[೧]. ಸಮಸ್ತ ಭೂಮಿಯಲ್ಲಿಯೂ ಎಲ್ಲಾ ಜನಾಂಗಗಳಲ್ಲಿಯೂ ಉಂಟಾಗದ ಅದ್ಭು
ತಗಳನ್ನು ನಿನ್ನ ಪ್ರಜೆಯೆಲ್ಲಾದರ ಮುಂದೆ ಮಾಡುವೆನು. ಆಗ ನೀನು ನಡುವೆಯಲ್ಲಿ
ರುವ ಪ್ರಜೆಯೆಲ್ಲಾ ಯೆಹೋವನು ಮಾಡುವಂಥಾದ್ದನ್ನು, ನಾನು ನಿನ್ನೊಡನೆ ಮಾ
ಡುವಂಥಾದ್ದು ಭಯಂಕರವಾದದ್ದೆಂದು[೨], ನೋಡುವದು. ೧೧. ನಾನು ಇಂದು ನಿನ
ಗೆ ಬೆಸಸುವದನ್ನು ಕೈಕೋ. — — ೧೨. ನೋಡಿಕೋ, ನೀನು ಶೇರುವ ದೇಶದ ನಿ
ವಾಸಿಗಳ ಸಂಗಡ, ಅವರು ನಿನ್ನ ನಡುವೆಯಲ್ಲಿ ಉರ್ಲಾಗದ ಹಾಗೆ, ಒಡಂಬಡಿಕೆಯ
ನ್ನು ಕಟ್ಟ ಬಾರದು. ೧೩. ಅವರ ಬಲಿಪೀಠಗಳನ್ನು ಕೆಡಹಿ, ಅವರ ವಿಗ್ರಹಗಳನ್ನು
ಒಡೆದು, ಅವರ ಅಷೇರಗಳನ್ನು[೩] ಕಡಿದು ಬಿಡು. ೧೪. ಯಾಕೆಂದರೆ ಬೇರೆ ದೇವರಿ
ಗೆ ಅಡ್ಡ ಬೀಳ ಬಾರದು; — — ೧೭. ಎರಕ ಹೊಯಿದ ದೇವರುಗಳನ್ನು ನಿನಗೆ ಮಾ
ಡಿ ಕೊಳ್ಳ ಬಾರದು. (೧೮—೨೬ರಲ್ಲಿ ಹಿಂದಿನ ಸಂಧಿಗಳಲ್ಲಿ ನೇಮಕವಾದ ಬೇರೆ ಬೇರೆ ಆಜ್ಞೆಗ
ಳು ಪುನರುಕ್ತಿಯಾಗಿ ಶೇರಿಯವೆ. ಸಮ ನೋಡು ಸ. ೨೩, ೧೫. ಸ. ೨೨, ೨೯. ೩೦. ಸ. ೨೩,
೧೧. ೧೨. ೧೭. ೧೮. ೧೯.) ೨೭. ಆಗ ಯೆಹೋವನು ಮೋಶೆಗೆ—ಈ ವಾಕ್ಯಗಳನ್ನು
ಬರೆದುಕೋ[೪]; ಯಾಕೆಂದರೆ ಈ ವಾಕ್ಯಗಳ ಮೇಲೆ ನಿನ್ನ ಸಂಗಡಲೂ ಇಸ್ರಯೇಲನ
ಸಂಗಡಲೂ ಒಡಂಬಡಿಕೆಯನ್ನು ಕಟ್ಟಿದ್ದೇನೆ, ಅಂದನು. ೨೮. ಮತ್ತು ಅಲ್ಲಿ ಅವನು
ನಾಲ್ವತ್ತು ಹಗಲೂ ನಾಲ್ವತ್ತು ಇರುಳೂ, ರೊಟ್ಟಿ ತಿನ್ನದೆ, ನೀರು ಕುಡಿಯದೆ, ಯೆ
ಹೋವನ ಸಂಗಡಲಿದ್ದನು. ಆಗಲವನು[೫], ಒಡಂಬಡಿಕೆಯ ವಾಕ್ಯಗಳಾದ ಹತ್ತು ವಾ
ಕ್ಯಗಳನ್ನು ಹಲಿಗೆಗಳ ಮೇಲೆ ಬರೆದನು.

೧. ಇಸ್ರಯೇಲನವರು ಸ. ೩೨ನೆಯಲ್ಲಿ ಉಂಟಾದ ಒಡಂಬಡಿಕೆಯನ್ನು ವಿಗ್ರಹಾರಾಧನೆಯ ದ್ರೋಹದಿಂದ ಮೀರಿದ ಮೇಲೆ, ಒಡಂಬಡಿಕೆಯ ಪುನಃಸ್ಥಾಪನೆಯಾಗಲವಶ್ಯವಾಯಿತು.

೨. ಪುನಃಸ್ಥಾಪಿತವಾದ ಒಡಂಬಡಿಕೆಗೆ ಯೆಹೋವನು ಹೊಸ ಅದ್ಭುತ ಕ್ರಿಯೆಗಳೆಂಬ ಮುದ್ರೆಯನ್ನು ಹಾಕುವದು ಯುಕ್ತವಾಗಿತ್ತು.

೩. ಅಷೇರ ಎಂಬವುಗಳು ಏನೆಂದು ನಿಶ್ಚೈಸಕೂಡದು. ಎಪ್ಪತ್ತು ಮಂದಿಯ ಭಾಷಾಂತರದಲ್ಲಿ ಈ ಶಬ್ದಕ್ಕೆ ಬನ ಎಂಬ ಟೀಕು ಬರೆದದೆ. ಕೆಲವು ಪಂಡಿತರು ಅದರ ಅರ್ಥವು ಶ್ರೀಯೆಂದು, ನೆನಸುತ್ತಾರೆ. ಒಂದು ವೇಳೆ ಅದು ನೀಟಾಗಿ ನೆಲದಲ್ಲಿ ನೆಟ್ಟ ಪ್ರಕೃತಿ ಮೂರ್ತಿಗಳಾದ ಮರದ ಲಿಂಗಗಳಿಗೆ ಹೆಸರಾಗಿತ್ತು. ಹ್ಯಾಗಾದರೂ ಅಷೇರ ಎಂಬವುಗಳು ಅಸಹ್ಯವಾದ ವಿಗ್ರಹಾರಾಧನೆಗೆ ಸಂಬಂಧವಾಗಿದ್ದವು.

೪. ಈ ವಾಕ್ಯಗಳು ಯಾವವೆಂದರೆ, ಯೆಹೋವನು ಕಲ್ಲಿನ ಹಲಿಗೆಗಳಲ್ಲಿ ಬರೆದ ದಶವಾಕ್ಯಕ್ಕೆ ಕೂಡಿದಂಥ, ಸ. ೨೩ನೆಯಲ್ಲಿಯೂ ೨೨ನೆಯಲ್ಲಿಯೂ ಲಿಖಿತವಾದ ಪ್ರಕಾರ, ಈಗಲುಂಟಾದ ಒಡಂಬಡಿಕೆಯ ಪುನಸ್ಥಾಪನೆಯ ಸಮಯದಲ್ಲಿ, ಪರಿಶಿಷ್ಟವಾದ ಕೆಲವು ಕಟ್ಟಳೆಗಳ ಸಂಗಡ, ತಿರಿಗಿ ಶೇರುವಂಥ ಆಜ್ಞೆಗಳು.

೫ ಈ ವಚನದ ಎರಡು ಭಾಗಗಳಲ್ಲಿಯೂ ಆಖ್ಯೆಯು ಸೂಚಿತವಾಗಿರುವದಿಲ್ಲ. ಹಿಂಭಾಗದಲ್ಲಿ ಅವನೆಂಬವನು ಮೋಶೆಯು, ಮುಂಭಾಗದಲ್ಲಿ ಅವನೆಂಬವನು ಯೆಹೋವನು ಎಂದು, ತಿಳು ಕೊಳ್ಳ ತಕ್ಕದ್ದು. ವ. ೧.

ವ. ೨೯. ಮೋಶೆಯು ಸೀನಯಿ ಬೆಟ್ಟದಿಂದ ಇಳಿಯುವಲ್ಲಿ ಆದದ್ದೇನಂದರೆ: ಅ
ವನು ಬೆಟ್ಟದಿಂದ ಇಳಿಯುವದರಲ್ಲಿ ಸಾಕ್ಷಿಯ ಹಲಿಗೆಗಳೆರಡು ಅವನ ಕೈಯಲ್ಲಿದ್ದವು.
ತನ್ನ ಮೋರೆಯ ತೊಗಲು ಅವನ ಸಂಗಡ ಮಾತಾಡಿದರಿಂದ ಮಿಂಚುತ್ತದೆಂದು[1],
ಮೋಶೆಯು ತಿಳಿಯದಿದ್ದನು. ೩೦ ಆದರೆ ಆರೋನನೂ ಇಸ್ರಯೇಲನ ಮಕ್ಕಳೆಲ್ಲರೂ
ಮೋಶೆಯನ್ನು ನೋಡಲು, ಇಗೋ, ಅವನ ಮೋರೆಯ ತೊಗಲು ಮಿಂಚಿತು. ಆಗಲ
ವರು ಅವನನ್ನು ಕಲಿತು ಕೊಳ್ಳ ಹೆದರಿದರು. ೩೧. ಆದರೆ ಮೋಶೆಯು ಅವರಿಗೆ ಕರೆ
ದಾಗಲು, ಆರೋನನೂ ಕೂಟದ ಹೆಗ್ಗಳಿಗರೆಲ್ಲರೂ ಅವನ ಬಳಿಗೆ ತಿರುಗಿ ಕೊಂಡರು.
ಮತ್ತು ಮೋಶೆಯು ಅವರ ಸಂಗಡ ಮಾತಾಡಿದನು. ೩೨. ಆ ಮೇಲೆ ಇಸ್ರಯೇಲನ
ಮಕ್ಕಳೆಲ್ಲರು ಕಲಿತು ಕೊಳ್ಳಲು, ಯೆಹೋವನು ಸೀನಯಿ ಬೆಟ್ಟದಲ್ಲಿ ತನ್ನೊಡನೆ ನುಡಿದ
ದ್ದನ್ನೆಲ್ಲಾ ಅವರಿಗೆ ಬೆಸಸಿದನು. ೩೩. ಮತ್ತು ಮೋಶೆಯು ಅವರೊಡನೆ ನುಡಿಯುವ
ದನ್ನು ಮುಗಿಸಿದಾಗ, ತನ್ನ ಮೋರೆಯ ಮೇಲೆ ಮುಸುಕನ್ನಿಟ್ಟನು[2]. ೩೪. ಆದರೆ
ಮೋಶೆಯು ಅವನ ಸಂಗಡ ನುಡಿಯುವ ಬಗ್ಯೆ ಯೆಹೋವನ ಮುಂದೆ ಬರುವಾ
ಗ,——ಮುಸುಕನ್ನು ತೆಗದು ಹಾಕುವನು——ಮತ್ತು ಹೊರಗೆ ಬರಲು——೩೫.——
ತಿರಿಗಿ ಮುಸುಕನ್ನು ತನ್ನ ಮೋರೆಯ ಮೇಲೆ ಇಡುವನು.

೧. ಕಿರಣಗಳು ಕೊಂಬುಗಳಿಗೆ ಹೋಲುವದರಿಂದ, ಪೂರ್ವ ಕಾಲದ ವ್ಯಾಖ್ಯಾನಿಗಳಲ್ಲಿ ಕೆಲವರು ಮಿಂಚೋಣವೆಂದು ಅರ್ಥವುಳ್ಳ ಕಾರನ್ ಎಂಬ ಇಬ್ರಿಯ ಶಬ್ದವನ್ನು ಕೊಂಬುಳ್ಳದ್ದಾಗಿತ್ತೆಂದು, ಟೀಕಿಸಿದರು. ಬಳಿಕ ಚಿತ್ರಗಾರರು ಚಿತ್ರಗಳಲ್ಲಿ ಮೋಶೆಯ ಹಣೆಯ ಮೇಲೆ ಕೊಂಬುಗಳನ್ನು ಬರೆಯುವದು ರೂಢಿಯಾಯಿತು. ಮೋಶೆಯ ಮೋರೆಯ ಕಾಂತಿಯನ್ನು ತಾಳಲಾರದ ಇಸ್ರಯೇಲನವರು, ಅವನು ನಿಜವಾಗಿ ದೇವರ ಸನ್ನಿಧಿಯಿಂದಲೇ ನೇಮವನ್ನು ತಂದು, ತಮಗೆ ಒಪ್ಪಿಸಿ ಕೊಟ್ಟನೆಂದು, ತಿಳು ಕೊಂಡು, ಭಯ ಪಟ್ಟರು.

೨. ಮೋಶೆಯು ಸೀನಯಿ ಬೆಟ್ಟದಲ್ಲಿ ದೇವಮುಖಕಾಂತಿಯನ್ನು ತಾಳಲಾರದೆ ಇದ್ದ ಹಾಗೆ, ಇಸ್ರಯೇಲನವರು ದಿವ್ಯ ತೇಜದ ಮಾರ್ಪೊಳವಿನಿಂದ ಪ್ರಕಾಶಮಾನವಾದ ನೇಮಧಾನ ಮಧ್ಯಸ್ಥನಾದ ಮೋಶೆಯ ಮೋರೆಯ ಕಳೆಯನ್ನು ದೃಷ್ಟಿಸಿ ನೋಡಲಾರದೆ ಇದ್ದರು. ಅಪೊಸ್ತಲನಾದ ಪೌಲನು ೨ ಕೊರಿ. ೩, ೧೧—೧೮ರಲ್ಲಿ ಮೋಶೆಯ ಮೋರೆಯ ಮೇಲಣ ಮುಸುಕು ಯೇಸು ಕ್ರಿಸ್ತನಲ್ಲಿ ಉಂಟಾದ ಪೂರ್ಣ ರಕ್ಷಣೆಯ ಪ್ರಕಟಣೆಯನ್ನು ಅವಿಶ್ವಾಸಿಗಳಾದ ಇಸ್ರಯೇಲನವರಿಗೆ ಮರೆ ಮಾಡುವ ಅಜ್ಞಾನವನ್ನು ಸೂಚಿಸುತ್ತದೆಂದು, ಬರೆಯುತ್ತಾನೆ.

ಸಾಕ್ಷಿಯ ಗುಡಾರವು. ಸ. ೩೫—೪೦.

ಮೋಶೆಯು ಮೊದಲಾಗಿ ಸೀನಯಿ ಬೆಟ್ಟದಲ್ಲಿ ಕಳೆದ ನಾಲ್ವತ್ತು ದಿವಸಗಳಲ್ಲಿ ಸಾಕ್ಷಿಯ ಗುಡಾರದ ಸ್ವರ್ಗೀಯವಾದ ಮೂಲ ಪ್ರತಿಯನ್ನು ನೋಡಿ (ಸ. ೨೫, ೪೦) ಅದರ ಕಟ್ಟುವಿಕೆಯ ವಿಷಯವಾಗಿಯೂ, ಅದರ ಜಿನಸುಗಳ ಸನ್ನಾಹದ ವಿಷಯವಾಗಿಯೂ, ನಾನಾ ತರದ ಆಜ್ಞೆಗಳನ್ನು ಹೊಂದಿದ್ದು ಸ. ೨೫—೩೧. ಬರೆದದೆ. ಎರಡನೆ ಪುಸ್ತಕದ ಕಡೆಯ ಆರು ಸಂಧಿಗಳಲ್ಲಿ ಸಾಕ್ಷಿಯ ಗುಡಾರದ ರಚನೆಯೂ, ಅದರ ಎಲ್ಲಾ ಸಾಮಗ್ರಿಗಳ ನಿರ್ಮಾಣವೂ, ಕ್ರಮದಿಂದ ಲಿಖಿತವಾಗಿವೆ. ಹ್ಯಾಗಂದರೆ:

ಪರಿಶುದ್ಧ ಗುಡಾರ ಕಟ್ಟುವದಕ್ಕೆ ಇಸ್ರಯೇಲರು ತಂದ ದಾನಗಳು.

ಹೊರಡೋಣ. ೩೫. ೩೬. ೩೭.

ಪರಿಶುದ್ಧ ಗುಡಾರವನ್ನು ಕಟ್ಟುವದಕ್ಕೂ, ಅದಕ್ಕೆ ಬೇಕಾದ ಸಾಮಗ್ರಿಗಳನ್ನುಂಟು ಮಾಡುವದಕ್ಕೂ, ಇಸ್ರಯೇಲನವರು ತಂದು ಕೊಟ್ಟ ದಾನಗಳು. ಶಿಲ್ಪಕಾರರ ಆಯಿಕೆಯು. ಸ. ೩೫. (ಇದಕ್ಕೆ ೨೫ನೆ ಸಂಧಿಯು ಒಪ್ಪುತ್ತದೆ.)

ವ. ೧. ಆಗ ಮೋಶೆಯು ಇಸ್ರಯೇಲನ ಮಕ್ಕಳ ಸಭೆಯನ್ನೆಲ್ಲಾ ಕೂಡಾ ಕರೆ
ದು, ಅವರಿಗೆ ಹೇಳಿದ್ದೇನಂದರೆ: ಯೆಹೋವನು ಮಾಡ ಬೇಕೆಂದು, ಬೆಸಸಿದ ಮಾತುಗ
ಳು ಯಾವವಂದರೆ: — —. ೫. ನಿಮ್ಮ ಬಳಿಯಿಂದ ಯೆಹೋವನಿಗೆ ಉಚ್ಚಾರ್ಪಣೆಯ
ನ್ನು ಕೊಂಡು ಬನ್ನಿರಿ. ಉದಾರ ಹೃದಯದವರೆಲ್ಲರು ಯೆಹೋವನ ಉಚ್ಚಾರ್ಪಣೆ
ಯನ್ನು ತನ್ನಿರಿ. — — ೧೦. ಮತ್ತು ನಿಮ್ಮಲ್ಲಿ ಜ್ಞಾನದ ಹೃದಯವುಳ್ಳವರೆಲ್ಲರು ಬಂದು,
ಯೆಹೋವನು ಬೆಸಸಿದ್ದನ್ನೆಲ್ಲಾ ಮಾಡಲಿ. ೧೧. ಏನಂದರೆ ನಿವಾಸವನ್ನೂ ಅದರ ಗು
ಡಾರವನ್ನೂ ಅದರ ಮುಚ್ಚಳವನ್ನೂ — — ೨೦. ಆಗ ಇಸ್ರಯೇಲನ ಮಕ್ಕಳ ಸಭೆ
ಯೆಲ್ಲಾ ಮೋಶೆಯ ಎದುರಿನಿಂದ ಹೊರಟು ಹೋಯಿತು. ೨೧. ಮತ್ತು ತಮ್ಮ ಹೃದ
ಯದಿಂದ ಪ್ರೇರಿತರೆಲ್ಲರೂ, ತಮ್ಮ ಆತ್ಮದಿಂದ ತ್ಯಾಗಿಗಳಾದವರೆಲ್ಲರೂ, ಸಭೆಯ ಗು
ಡಾರದ ಕೆಲಸಕ್ಕೋಸ್ಕರವೂ, ಅದರ ಎಲ್ಲಾ ಸೇವೆಗೋಸ್ಕರವೂ, ಪವಿತ್ರ ವಸ್ತ್ರಗಳಿಗೋ
ಸ್ಕರವೂ, ಯೆಹೋವನ ಉಚ್ಚಾರ್ಪಣೆಯನ್ನು ಕೊಂಡು ಬಂದರು. — — ೨೫. ಮ
ತ್ತು ಜ್ಞಾನದ ಹೃದಯವುಳ್ಳ ಹೆಂಗಸರೆಲ್ಲಾ ತಮ್ಮ ಕೈಗಳಿಂದ ನೂತು — — ನೂಲನ್ನು
ಕೊಂಡು ಬಂದರು. — — ೨೭. ಮತ್ತು ಹೆಗ್ಗಳಿಗರು ಗೋಮೇಧಿಕಗಳನ್ನೂ ಕೆಡ್ಡೆ ಕ
ಲ್ಲುಗಳನ್ನೂ ಕೊಂಡು ಬಂದರು. — — ೩೦. ಆಗ ಮೋಶೆಯು ಇಸ್ರಯೇಲನ ಮಕ್ಕಳಿ
ಗೆ ಹೇಳಿದ್ದು: ನೋಡಿರಿ, ಯೆಹೋವನು ಹೂರನ ಮಗನಾದ ಊರಿಯ ಮಗನಾದ
ಯೆಹೂದ ಕುಲದ ಬೆಚಲೇಲನನ್ನು ಹೆಸರಿನಿಂದ ಕರೆದಿದ್ದಾನೆ. ೩೧. ದೇವರ ಆತ್ಮವು ಅ
ವನನ್ನು ಜ್ಞಾನದಿಂದಲೂ ವಿವೇಕದಿಂದಲೂ ಅರುವಿನಿಂದಲೂ ಎಲ್ಲಾ ಮಾಟದಿಂದ
ಲೂ ತುಂಬಿಸಿಯದೆ. — — ೩೪. ಮತ್ತು ಕಲಿಸಿ ಕೊಡುವದಕ್ಕೆ ಅವನ ಹೃದಯದಲ್ಲಿಯೂ
ಅಹೀನಾಮಾಕನ ಮಗನಾದ ದಾನ್ ಕುಲದ ಅಹೊಲೀಯಾಬನ ಹೃದಯದಲ್ಲಿಯೂ
(ಬುದ್ಧಿಯನ್ನು) ಕೊಟ್ಟಿದ್ದಾನೆ.

ಸ. ೩೬.

೧—೭. ಇಸ್ರಯೇಲನವರು ಅತಿಶಯವಾದ ತ್ಯಾಗದಿಂದ ಹೇರಳವಾದ ಕಾಣಿಕೆಗಳನ್ನು ತಂದು ಕೊಡುತ್ತಾ ಇರಲಾಗಿ, ಮೋಶೆಯು ಸಾಕೆಂತಲೂ, ಹೆಚ್ಚು ಕೊಡ ಬೇಡೆಂತಲೂ, ತಡಿಸುತ್ತಾನೆ.

ಸಾಕ್ಷಿಯ ಗುಡಾರದ ಒಳಗಣ ಸಾಮಗ್ರಿಯು. ಸ. ೩೭.

೧—೯. ಒಡಂಬಡಿಕೆಯ ಪೆಟ್ಟಿಗೆಯೂ ಅದರ ಮೇಲಣ ವಿಮೋಚನೇ ಮುಚ್ಚಳವೂ. ೧೦—೧೬. ಸಮ್ಮುಖದ ರೊಟ್ಟಿಗಳ ಮೇಜು. ೧೭—೨೪. ಹೊನ್ನಿನ ದೀಪಸ್ತಂಭವು. ೨೫—೨೯. ಧೂಪಪೀಠವೂ, ಪರಿಶುದ್ಧ ಎಣ್ಣೆಯೂ.

ಸಾಕ್ಷಿಯ ಗುಡಾರದ ಹೊರಗಣ ಪ್ರಾಕಾರದ ಸಾಮಗ್ರಿಯು. ಸ. ೩೮.

೧—೮. ಹೋಮಪೀಠವೂ, ತಾಂಬ್ರದ ಹಂಡೆಯೂ; ೯—೨೦. ಪ್ರಾಕಾರವು; ೨೧—೩೧. ಖರ್ಚಾದ ಹೊನ್ನು ಬೆಳ್ಳಿ ತಾಂಬ್ರಗಳ ಒಟ್ಟು ಲೆಖ್ಖವು.

ವ. ೨೪. ಪರಿಶುದ್ಧ ಸ್ಥಳದ ಕೆಲಸದಲ್ಲೆಲ್ಲಾ ಕೆಲಸಕ್ಕೆ ಖರ್ಚಾದ ಉಚಿತ ದಾನದ ಹೊನ್ನಾದ ಹೊನ್ನೆಲ್ಲಾ ಇಪ್ಪತ್ತೊಂಭತ್ತು ಮಣ[1] ಏಳುನೂರಮೂವತ್ತು ಶೇಕೆಲ್[2] ಪರಿಶುದ್ಧ ಸ್ಥಳದ ಶೇಕೆಲಿನ ಪ್ರಕಾರವಾಗಿತ್ತು. ೨೫. ಸಭೆಯಲ್ಲಿ ಎಣಿಕೆಯಾದವರ ಬೆಳ್ಳಿಯು ಪರಿಶುದ್ಧ ಸ್ಥಳದ ಶೇಕೆಲಿನ ಪ್ರಕಾರ ನೂರು ಮಣ ಸಾವಿರದ ಏಳುನೂರ ಇಪ್ಪತ್ತೈದು ಶೇಕೆಲಾಗಿತ್ತು. — — ೨೯. ಉಚಿತವಾಗಿ ಕೊಟ್ಟ ತಾಂಬ್ರವು ಎಪ್ಪತ್ತು ಮಣ ಎರಡು ಸಾವಿರದ ನಾನ್ನೂರು ಶೇಕೆಲಾಗಿತ್ತು. — —

೧. ಇಬ್ರಿಯದಲ್ಲಿ ಈ ತೂಕಕ್ಕೆ ಕಿಕ್ಕರೆಂಬ ಹೆಸರದೆ, ಅದರ ಭಾರವು ೯೩||| ರಾತಲಿಗೆ ಸರಿ ಬೀಳುವದು. ಇಲ್ಲಿ ಬರೆದ ಹೊನ್ನಿನ ಒಟ್ಟಿಲು ೧೦,೫೦,೦೦೦ ರೂಪಾಯಿಗೆ ಹೆಚ್ಚೆಂದು, ಎಣಿಕೆಯಾಗಿದೆ.

೨. ಶೇಕೆಲೆಂಬದು ಒಂದು ರಾತಲಿನ ೩೦ನೆ ಪಾಲು. ಶೇಕೆಲೆಂಬ ಮುದ್ರೆ ಕಟ್ಲೆಯು ಪರಿಶುದ್ಧ ಸ್ಥಳದಲ್ಲಿ ಇಡಲಾಯಿತು. ೩೦೦೦ ಶೇಕೆಲ್ ೧ ಕಿಕ್ಕರಿಗೆ ಸಮ.

ಸ. ೩೯.

೧—೩೧. ಪ್ರಧಾನಯಾಜಕ ಮುಂತಾದ ಯಾಜಕರ ಅಂಗಿ, ಮೇಲಂಗಿ, ಸಣ್ಣ ಅಂಗಿ, ಎದೆಯ ಗುರಾಣಿ, ಮುಂಡಾಸು ಇತ್ಯಾದಿಯ ವಿಷಯವಾದ ಅಪ್ಪಣೆಗಳು. ೩೨—೪೩. ಮಾಡ ಬೇಕಾದ ಕೆಲಸ ತೀರಿದ ಮೇಲೆ, ಎಲ್ಲಾ ಮೋಶೆಗೆ ಒಪ್ಪಿಸಲ್ಪಟ್ಟದ್ದು.

ಸಾಕ್ಷಿಯ ಗುಡಾರದ ಸ್ಥಾಪನೆ ಪ್ರತಿಷ್ಠೆಗಳು. ಸ. ೪೦.

ವ. ೧. ಮತ್ತು ಯೆಹೋವನು ಮೋಶೆಗೆ ನುಡಿದದ್ದೇನಂದರೆ: ೨. ಮೊದಲನೆ ತಿಂಗಳಿನ ಮೊದಲನೆ ದಿವಸದಲ್ಲಿ[1]. ಸಾಕ್ಷಿಯ ಗುಡಾರವೆಂಬ ಬಿಡುದಿಯನ್ನು ನಿಲ್ಲಿಸು. — — ೧೭. ಆದದರಿಂದ ಎರಡನೆ ವರ್ಷದ ಮೊದಲನೆ ತಿಂಗಳಿನ ಮೊದಲನೆ ದಿನದಲ್ಲಿ ಬಿಡುದಿಯು ನಿಲ್ಲಿಸಿ ಕೊಳ್ಳೋಣವಾಯಿತು. (ಈ ಕೆಲಸದಲ್ಲಿ ಮೋಶೆಯು ಎಲ್ಲಾನ್ನು ಯೆಹೋವನ ಬೆಸಗೆಯ ಪ್ರಕಾರ ಮಾಡಿಸಿದನು.) ೩೩. — — ಮೋಶೆಯು ಕೆಲಸವನ್ನು ತೀರಿಸಿದನು. ೩೪. ಆಗ ಮೇಘವು ಸಾಕ್ಷಿಯ ಗುಡಾರವನ್ನು ಮುಚ್ಚಿರಲು, ಯೆಹೋವನ ಮಹಿಮೆಯು ಬಿಡುದಿಯನ್ನು ತುಂಬಿತು[2]. ೩೫. ಮೋಶೆಯು ಸಾಕ್ಷಿಯ ಗುಡಾರದಲ್ಲಿ ಶೇರಲಾರದೆ ಇದ್ದನು, ಯಾಕಂದರೆ ಮೇಘವು ಅದರ ಮೇಲೆ ನಿಂತಿತು, ಮತ್ತು ಯೆಹೋವನ ಮಹಿಮೆಯು ಬಿಡುದಿಯನ್ನು ತುಂಬಿತು. ೩೬. ಮೇಘವು ಬಿಡುದಿಯ ಮೇಲಿನಿಂದ ಏಳುವ ವೇಳೆಯಲ್ಲಿ ಇಸ್ರಯೇಲನ ಮಕ್ಕಳು ತಮ್ಮ ಪಯಣಗಳಲ್ಲೆಲ್ಲಾ ಪ

ಯಣ ಮಾಡುವರು. ೩೭. ಆದರೆ ಮೇಘವು ಏಳದ ವೇಳೆಯಲ್ಲಿ, ಅದು ಏಳುವ ಮಟ್ಟಿಗೂ, ಪಯಣ ಮಾಡದೆ ಇರುವರು. ೩೮. ಯಾಕೆಂದರೆ ಅವರ ಪಯಣಗಳಲ್ಲೆಲ್ಲಾ ಇಸ್ರಯೇಲನ ಮನೆಯೆಲ್ಲಾದರ ಎದುರಿನಲ್ಲಿ ಯೆಹೋವನ ಮೇಘವು ಬಿಡುದಿಯ ಮೇಲೆ ಹಗಲಿನಲ್ಲಿ, ಬೆಂಕಿಯು ಇರುಳಲ್ಲಿ ಅದರಲ್ಲಿ ಇರುವದು.

೧. ಹಾಗಾದರೆ ಇಸ್ರಯೇಲನವರು ಮಿಚ್ರದಿಂದ ಹೊರಟು ಬಂದ ವರ್ಷಕ್ಕೆ ಹದಿನಾಲ್ಕು ದಿನ ಕಡಿಮೆಯಾದಂದು ಸಾಕ್ಷಿಯ ಗುಡಾರವನ್ನು ಕಟ್ಟಿದರು.
೨. ಯೆಹೋವನು ತಾನೇ ಸಾಕ್ಷಿಯ ಗುಡಾರವನ್ನು ಅಂದು ಮೊದಲ್ಗೊಂಡು ಅದರಲ್ಲಿ ತನ್ನ ಮಹಿಮೆಯನ್ನು ಹಗಲು ಮೇಘಮಯವಾಗಿ, ಇರುಳು ಅಗ್ನಿಮಯವಾಗಿ ವಸ್ತಿಯಾಗಲೀಸುವದರಿಂದ ಪ್ರತಿಷ್ಠೆ ಮಾಡಿದನು.

೨೫—೩೧ ಸಂಧಿಗಳಲ್ಲಿಯೂ ೩೫—೪೦ ಸಂಧಿಗಳಲ್ಲಿಯೂ ಬರದಿರುವ ಸಾಕ್ಷಿಯ ಗುಡಾರದ ಸ್ಥಾಪನೆ ಸಾಮಗ್ರಿ ಆಚರಣೆಗಳ ವಿಷಯವಾದ ಪರಿಶಿಷ್ಟಪ್ರಕರಣವು.

ಉಚಿತ ಸಂಗ್ರಹವು.

ಸಾಕ್ಷಿಯ ಗುಡಾರವನ್ನು ಕಟ್ಟಿಸುವದಕ್ಕೆ ಬೇಕಾದದ್ದನ್ನೆಲ್ಲಾ ಇಸ್ರಯೇಲನವರು ಉಚಿತವಾಗಿ ಕೊಡಬೇಕೆಂದು, ಮೋಶೆಯು ಅಪ್ಪಣೆ ಕೊಡುತ್ತಲೇ, ಅವರು ತಮ್ಮ ಕೈಯಲ್ಲಿದ್ದ ಚಿನ್ನ, ಬೆಳ್ಳಿ, ತಾಂಬ್ರ, ನೀಲಿ, ರಕ್ತವರ್ಣ, ಲಾಕಿಬಣ್ಣ, ನಯವಾದ ಹತ್ತಿ, ಮೇಕೇ ಕೂದಲು, ಕೆಂಪು ಟಗರಿನ ತೊಗಲುಗಳು, ತಾಹಷ್ ತೊಗಲುಗಳು, ಷಿಟ್ಟಿಮ್ ಮರಗಳು, ಎಣ್ಣೆ, ಧೂಪ, ಗೋಮೇಧಿಕ, ರತ್ನ ಮುಂತಾದದ್ದನ್ನು ಹೇರಳವಾಗಿತ್ತರು. ಅವರು ಹೆಚ್ಚೆಚ್ಚಾದ ಕಾಣಿಕೆಗಳನ್ನು ತಂದದರಿಂದ, ಮೋಶೆಯು ಸಾಕೆಂದು, ತಡಿಸಲವಶ್ಯವಾಯಿತು. ಕೆಲವು ತಿಂಗಳುಗಳ ಮುಂಚೆ ಮಿಚ್ರ ದೇಶದ ದಾಸತ್ವದಿಂದ ಬಿಡುಗಡೆಯಾಗಿ ಅರಣ್ಯವಾಸ ಮಾಡುತ್ತಾ ಇರುವ ಇಸ್ರಯೇಲನವರ ಜನಾಂಗದ ಔದಾರ್ಯವು ಮಿಗೆ ಚೋದ್ಯವಾಗಿತ್ತು. ಏನಂದರೆ: ಆರು ಲಕ್ಷ ಮಂದಿ ಗಂಡಸರಾದ ಇಸ್ರಯೇಲನವರಲ್ಲಿ ಒಬ್ಬೊಬ್ಬನ ಮೇಲೆ ಹೆಚ್ಚು ಕಡಿಮೆ ಎರಡೆರಡು ರೂಪಾಯಿ ಬೀಳುವಷ್ಟು ಕ್ರಯಕ್ಕೆ ಬರುವ ಚಿನ್ನ ಬೆಳ್ಳಿ ಮುಂತಾದ ಒಡವೆಗಳನ್ನು ಕಾಣಿಕೆಯಾಗಿತ್ತರು.

ಪರಿಶುದ್ಧವಾದ ಗುಡಾರವು.

ಮೋಶೆಯು ಬೆಟ್ಟದಲ್ಲಿ ಕಂಡ ಗುಡಾರದ ಮಾದ್ರಿಗೆ ಪೂರ್ಣಾನುಸಾರವಾಗಿ ಸಮಸ್ತವನ್ನು ಪೂರೈಸುವದಕ್ಕಾಗಿ ಆಯಿಕೆಯಾದ ಕುಶಲ ಕೆಲಸದವರಾದ ಬೆಚಾಲೆಯೇಲ ಒಹೊಲಿಯಾಬರು ದೇವರ ಆತ್ಮದಿಂದ ಸಿದ್ಧಿಯನ್ನು ಹೊಂದಿ, ಕೊಂಚ ಕಡಿಮೆಯಾಗಿ ಒಂದು ವರ್ಷದೊಳಗೆ ಎಲ್ಲಾ ಸನ್ನಾಹ ಮಾಡಿದ ಬಳಿಕ, ಮಿಚ್ರ ದೇಶದಿಂದ ಹೊರಟು ಬಂದ ಪಯಣದ ಎರಡನೆ ವರ್ಷದ ಮೊದಲನೆ ತಿಂಗಳಿನ ಮೊದಲನೆ ದಿವಸದಲ್ಲಿ ಸಾಕ್ಷಿಯ ಗುಡಾರವು ಕಟ್ಟಲ್ಪಟ್ಟಿತು. ಆಗ ಮೇಘವು ಗುಡಾರವನ್ನು ಮುಚ್ಚಲಾಗಿ, ಯೆಹೋವನ ಮಹಿಮೆಯು ಬಿಡುದಿಯನ್ನು ತುಂಬಿತು.

ಯೆಹೋವನ ಮಹಿಮೆಯು ಸ್ಥಾನವು ಪಯಣ ಕಾಲಕ್ಕೆ ತಕ್ಕ ಹಾಗೆ ಗುಡಾರವಾಗಿ ರಚಿತವಾಯಿತು. ಅದರ ಗೋಡೆಗಳು ನೆಟ್ಟಗೆ ನಿಲ್ಲುವ ಶಿಟ್ಟಿಮ್ ಮರದ ಹಲಿಗೆಗಳು. ಅದರ ಮಾಳಿಗೆಯು ಮುಮ್ಮಡಿಯಾದ ಮುಚ್ಚಳವು. ದಂಡು ಹೊರಡುತ್ತಾ ಇರುವ ವೇಳೆಯಲ್ಲಿ ಲೇವಿ ಕುಲದವರು ಎಲ್ಲಾನ್ನು ಬಿಚ್ಚಿ, ಹೊತ್ತು ಕೊಂಡು ಹೋಗುತ್ತಿದ್ದರು. ಖೆರೂಬರ ಚಿತ್ರಗಳು ಜಂಟಿ ಇಕ್ಕಿದ ಬಿಸ್ಸುಸೆಂಬ ನಯ ಹತ್ತಿಯಿಂದ

ಪರಿಶುದ್ಧವಾದ ಗುಡಾರವು.

ಹೊರಡೋಣ. ೨೫—೩೧; ೩೫—೪೦.

ನೇದ ಬೆಲೆಯಾದ ತೆರೆಯಿಂದ ಸಾಕ್ಷಿಯ ಗುಡಾರವು ಎರಡು ಕೋಣೆಯಾಗಿ ವಿಭಾಗವಾಗಿತ್ತು. ಇ
ವುಗಳಲ್ಲಿ ಅತಿ ಪವಿತ್ರ ಸ್ಥಳವೆಂಬ ಗರ್ಭಗೃಹವು ಹತ್ತು ಮೊಳದ ಅಳತೆಯಾದ ಚತುಷ್ಕೋಣಾಕಾರವಾಗಿ
ತ್ತು. ಇದರಲ್ಲಿ ಒಡಂಬಡಿಕೆಯ ಪೆಟ್ಟಿಗೆಯಿತ್ತು. ಈ ಪೆಟ್ಟಿಗೆಯಲ್ಲಿ ನೇಮಶಾಸನಗಳೂ, ಅದರ ಹತ್ತರ
ಮನ್ನಾ ತುಂಬಿದ ಪಾತ್ರವೂ ಆರೋನನ ಹೂವರಳಿದ ಬಾದಾಮಿನ ಕೋಲೂ ಇತ್ತು. ಅದರ ಮುಚ್ಚಳ
ವು ಚೊಕ್ಕ ಬಂಗಾರದ್ದು. ಅದರ ಮೇಲೆ ಈ ಕಡೆಯಲ್ಲಿ ಆ ಕಡೆಯಲ್ಲಿಯೂ ಅಖಂಡವಾದ ಒಂದೇ ಬಂಗಾ
ರದ ತುಂಡಿನಿಂದ ರಚಿತವಾದ ಖೆರೂಬುಗಳೆಂಬ ದೇವದೂತ ಮೂರ್ತಿಗಳು ನಿಂತಿದ್ದವು. ಇವುಗಳ ಮೋರೆ
ಗಳು, ಒಂದಕ್ಕೊಂದು ಎದುರಾಗಿದ್ದು, ಕೃಪಾಸನವೆಂಬ ಮುಚ್ಚಳದ ಕಡೆಗೆ ಬೊಗ್ಗಿದ್ದವು. ಅವುಗಳ ರೆಕ್ಕೆ
ಗಳು ಅದರ ಮೇಲೆ ಚಾಚಿ ಇದ್ದವು. ಕೃಪಾಸನಕ್ಕೆ ಇಬ್ರಿಯದಲ್ಲಿ ಕಪೋರೆಥ್ (ವಿಮೋಚನೆಯ ಮುಚ್ಚಳ)
ಎಂಬ ಹೆಸರದೆ. ಹೊರಗಿನ ಕೋಣೆಯು ಇಪ್ಪತ್ತು ಮೊಳ ಉದ್ದವಾಗಿಯೂ ಹತ್ತು ಮೊಳ ಎತ್ತರವಾ
ಗಿಯೂ ಅಗಲವಾಗಿಯೂ ಇತ್ತು. ಇದರ ದ್ವಾರವು ಮೂಡಣ ಕಡೆಯದು. ಇದಕ್ಕೂ ಬಹಳ ಅಲಂಕಾರ
ಮಯವಾದ ತೆರೆಯು. ಈ ಕೋಣೆಯ ಹೆಸರು ಪವಿತ್ರ ಸ್ಥಳವು. ಇದರ ನಡುವೆಯಲ್ಲಿ ಧೂಪಪೀಠವು.
ಇದಕ್ಕೆ ಉತ್ತರ ಕಡೆಯಲ್ಲಿ ಏಳು ಕೈಯುಳ್ಳ ಅಖಂಡವಾದ ಬಂಗಾರದ ದೀಪಸ್ತಂಭವು, ದಕ್ಷಿಣ ಕಡೆಯ
ಲ್ಲಿ ಸಬ್ಬತ್ ಸಬ್ಬತಿಗೆ ಹನ್ನೆರಡು ರೊಟ್ಟಿ ಹೊಸ್ತಾಗಿ ಇಡಲ್ಪಡುವ ಹೊನ್ನಿನ ತಗಡು ಹಚ್ಚಿದ ಶಿಟ್ಟಿಮ್
ಮರದ ಸಮ್ಮುಖದ ರೊಟ್ಟಿಗಳ ಮೇಜು ಇತ್ತು. ದೀಪಸ್ತಂಭ ಒಡಂಬಡಿಕೆಯ ಪೆಟ್ಟಿಗೆ, ಇವುಗಳ ಹೊರ್ತು
ಸಾಮಗ್ರಿ ಎಲ್ಲವೂ ಹಲಿಗೆ ಎಲ್ಲವೂ ಹೊನ್ನಿನ ತಗಡು ಮುಚ್ಚಿದ ಶಿಟ್ಟಿಮ್ ಮರದಿಂದ ರಚಿತವಾಗಿದ್ದವು.
ಸಾಕ್ಷಿಯ ಗುಡಾರದ ಒಳಗಿನ ಗೋಡೆ ಎಲ್ಲವು ಬಹು ಬೆಲೆಯುಳ್ಳ ವರ್ಣದ ನಯ ಹತ್ತಿಯಾದ ಬಿಸ್ಸುಸೆಂ
ಬದರ ಹೆಚ್ಚಡದಿಂದ ಸೂಸಿಯಂತೆ ಮುಚ್ಚಿ ಇತ್ತು. ಅದರ ಹೊರಗಿನ ಭಾಗವು ಘಾಳಿಯೂ ಮಳೆಯೂ
ಶೇರದ ಹಾಗೆ ಎರಡು ತರದ ಕಂಬಳಿ ಮುಚ್ಚಳದಿಂದಲೂ ತೊಗಲಿನದಾದ ಒಂದು ಮುಚ್ಚಳದಿಂದ ಮರೆ
ಯಾಗಿತ್ತು. ಗುಡಾರದ ಸುತ್ತಲಾಗಿ ನೂರು ಮೊಳ ಉದ್ದವಾಗಿಯೂ, ಐವತ್ತು ಮೊಳ ಅಗಲವಾಗಿಯೂ
ಇರುವ ಪ್ರಾಕಾರವಿತ್ತು. ಮೂಡಣ ಕಡೆಯಲ್ಲಿರುವ ಅದರ ದ್ವಾರವು ಇಪ್ಪತ್ತು ಮೊಳ ಅಗಲವಾಗಿತ್ತು.
ಇದಕ್ಕೂ ಪ್ರಾಕಾರದ ಮೇರೆಯಾದ ಶಿಟ್ಟಿಮ್ ಮರದ ಸ್ತಂಭಗಳಿಗೂ ಬಿಸ್ಸುಸೆಂಬ ಹತ್ತಿಯ ತೆರೆಯು ಕಟ್ಟಿ
ದ್ದಾಗಿತ್ತು. ಈ ಪ್ರಾಕಾರದಲ್ಲಿ ತಾಂಬ್ರದಿಂದ ಹೊದಗಿಸಿದಂಥ, ಮಣ್ಣು ತುಂಬಿದಂಥ, ಶಿಟ್ಟಿಮ್ ಹಲಿಗೆಗಳಿಂ
ದ ಕಟ್ಟಿದಂಥ, ಹೋಮಪೀಠವೂ ತಾಂಬ್ರದ ಹಂಡೆಯೂ ಇದ್ದವು. ಸಾಕ್ಷಿಯ ಗುಡಾರವು ಇಸ್ರಯೇಲ
ನವರಿಗೆ ದೇವಾರಾಧನೆ ಬಲಿಯರ್ಪಣೆಗಳ ಸ್ಥಳವಾಗಿತ್ತು. ಅದಕ್ಕೆ ಒಡಂಬಡಿಕೆಯ ಗುಡಾರವೂ ಕೂಟದ
ಗುಡಾರವೂ ನಿವಾಸವೂ ಎಂಬ ಹೆಸರುಗಳಿದ್ದವು. ಏನಂದರೆ ಯೆಹೋವನು ಅದರಲ್ಲಿ ಇಸ್ರಯೇಲನ ಸಂ
ಗಡ ಕೂಡಿ ಕೊಂಡು, ಇಸ್ರಯೇಲನ ನಡುವೆಯಲ್ಲಿ ವಾಸಿಸಿ, ತನ್ನ ಪರಿಶುದ್ಧತ್ವಕ್ಕೂ ಕೃಪೆಗೂ ಸಾಕ್ಷಿ ಕೊ
ಡಲಿಕ್ಕೆ ಮನಸ್ಸಾಗಿದ್ದನು. ಹೀಗಿರುವದರಿಂದ ಅದು ಇಸ್ರಯೇಲನಲ್ಲಿರುವ ದೇವರ ರಾಜ್ಯಕ್ಕೆ ಉಪಮೆಯೂ
ಕ್ರೈಸ್ತ ಸಭೆಗೆ ಮುಂಗುರ್ತೂ ಆಗಿತ್ತು. ಅಂಧಕಾರವಾದ ಅತಿ ಪವಿತ್ರ ಸ್ಥಳದಲ್ಲಿ ಯೆಹೋವನು ತಾನು
ವಾಸ ಮಾಡುತ್ತಿದ್ದನು. ಖೆರೂಬರ ರೆಕ್ಕೆಗಳ ಮಧ್ಯದಲ್ಲಿ ಯೆಹೋವನ ಸಿಂಹಾಸನವು. ಅಲ್ಲಿ ಯೆಹೋವ
ನ ಮಹಿಮೆಯು ಮೇಘರೂಪವಾಗಿ ಇಳಿಯಿತು. (ಷೆಖಿನಾ ಲೇವಿಕ.೧೬, ೨.) ಒಂದು ಮನೆಯ ಸಾಮ
ಗ್ರಿಯು ಅದರಲ್ಲಿ ವಾಸ ಮಾಡುವವನ ಉದ್ಯೋಗವನ್ನು ಸೂಚಿಸುತ್ತದೆ. ಯೆಹೋವನು ಪಾಪಾತ್ಮ
ರಾದ ಇಸ್ರಯೇಲನವರ ಜನಾಂಗದಲ್ಲಿ ನಡಿಸಿದ ವೃತ್ತಿ ಯಾವದಂದರೆ, ಅವರ ಪಾಪಗಳನ್ನು ಮುಚ್ಚಿ ವಿ
ಮೋಚನೆ ಮಾಡುವಂಥಾದ್ದು. ಇದನ್ನು ಒಡಂಬಡಿಕೆಯ ಪೆಟ್ಟಿಗೆಯೂ ಅದರ ಮುಚ್ಚಳವಾದ ಕೃಪಾಸನ
ವೂ ಸಾಮ್ಯವಾಗಿ ತೋರಿಸುವವು. ಹ್ಯಾಗಂದರೆ ಒಡಂಬಡಿಕೆಯ ಪೆಟ್ಟಿಗೆಯಲ್ಲಿರುವ ನೇಮಶಾಸನಗಳನ್ನು
ಕೃಪಾಸನವು ಮುಚ್ಚೋಣದರ ಅರ್ಥವೇನಂದರೆ: ಪಾಪಿಯ ಮೇಲೆ ಅಪರಾಧ ಹೊರಿಸಿ, ಅವನಿಗೆ ನ್ಯಾಯ

ತೀರಿಸುವ ನೇಮಕ್ಕೆ ಬಲಿಯ ರಕ್ತಧಾರೆಯಿಂದ ಉಂಟಾಗುವ ಪರಿಹಾರದಲ್ಲಿ ಪ್ರಕಟವಾಗುವ ದೇವರ ಕೃಪೆಯು ಶಾಂತಿಕರವಾದ ಮುಚ್ಚಳವಾಗಿದ್ದು, ವಿಮೋಚನೆ ಮಾಡುವಂಥಾದ್ದಾಗಿದೆ. ಕೃಪಾಸನದಲ್ಲಿರುವ ಖೆರೂಬರು ಬೊಗ್ಗಿ ಕೊಂಡು, ಪಾಪಪರಿಹಾರವೆಂಬ ಅತಿ ಪರಿಶುದ್ಧ ಮರ್ಮವನ್ನು ಗ್ರಹಿಸಿ ಕೊಳ್ಳ ಬಯಸಿ ದೃಷ್ಟಿಸುವವರಾಗಿದ್ಧಾರೆಂದು, ಪೇತ್ರನು (೧ ಪೇತ್ರ. ೧, ೧೨.) ಬರೆದಿದ್ಧಾನೆ. ಅವರು ಯೆಜೆಕಿಯೇಲನ ಪುಸ್ತಕದಲ್ಲಿ ಬರೆದ ವರ್ಣನೆಯ ಪ್ರಕಾರ ನರ, ಗರುಡ, ವೃಷಭ, ಸಿಂಹ ರೂಪಿಗಳಾಗಿದ್ದು, ಸರ್ವ ನಿರ್ಮಾಣ ಮೂಲಮೂರ್ತಿಗಳಾಗಿ ಕಾಣಿಸುತ್ತಾರೆ.

ಪರಿಶುದ್ಧ ಸ್ಥಳವು ಯಾಜಕರಾಜೋದ್ಯೋಗಕ್ಕಾಗಿ ಆಯಿಕೆಯಾದ ಜನಾಂಗದ ನಿವಾಸವು. ಇಸ್ರಯೇಲನವರ ಜನಾಂಗವು ಪೂರ್ವದಲ್ಲಿ ತನಗೆ ಪ್ರಾಪ್ತವಾದ ಮಹಿಮೆಯುಳ್ಳ ಉದ್ಯೋಗಕ್ಕೆ ಬೇಕಾದ ಯೋಗ್ಯತೆಯನ್ನು ಪಡಕೊಳ್ಳಲಿಲ್ಲವಾದದರಿಂದ, ದೇವರು ಸಮಸ್ತ ಜನಾಂಗದೊಳಗಿಂದ ಆರಿಸಿದ ಲೇವಿ ಗೋತ್ರದವರು ಜನಾಂಗಕ್ಕೆ ಪ್ರತಿಯಾಗಿ ಯಾಜಕ ವೃತ್ತಿಯನ್ನು ನಡಿಸಿ, ಸರ್ವ ಜನಾಂಗದ ಮುಖ್ಯಸ್ಥರಾಗಿದ್ದು, ಶುದ್ಧ ಸ್ಥಳದಲ್ಲಿ ಕಾಲಿಟ್ಟು, ಯೆಹೋವನ ಮುಂದೆ ನಿಲ್ಲಲಧಿಕಾರಿಗಳಾಗಿದ್ದರು. ಶುದ್ಧ ಸ್ಥಳದಲ್ಲಿರುವ ಸಾಮಗ್ರಿಯು ಒಡಂಬಡಿಕೆಗೆ ಅನುಕೂಲವಾಗಿ ನಡದು ಕೊಳ್ಳುವ ಜನಾಂಗದ ವೃತ್ತಿಯನ್ನು ಸೂಚಿಸುವದು. ಹನ್ನೆರಡು ಸಮ್ಮುಖದ ರೊಟ್ಟಿಗಳು ಹನ್ನೆರಡು ಕುಲದ ಇಸ್ರಯೇಲನವರು ದೇವರ ರಾಜ್ಯವೆಂಬ ಹೊಲದಲ್ಲಿ ನಡಿಸ ತಕ್ಕ ಆತ್ಮಿಕ ವೃತ್ತಿಯ ಸತ್ಕ್ರಿಯೆಗಳೆಂಬ ಪುಣ್ಯ ಫಲಗಳ ಗುರ್ತುಗಳು.

ದೀಪಸ್ತಂಭವು ಸರ್ವಲೋಕಕ್ಕೆ ಜೀವವುಳ್ಳ ದೇವರ ಜ್ಞಾನವನ್ನು ತಿಳಿಸುವ ಭಾಸ್ಕರವಾದ ಜನಾಂಗಕ್ಕೆ ಉಪಮೆಯಾಗಿತ್ತು. ಧೂಪಪೀಠವು ಇಸ್ರಯೇಲನವರು ದೇವರಿಗೆ ನಿತ್ಯವಾಗಿ ಪ್ರಾರ್ಥಿಸುವದನ್ನು ಸೂಚಿಸುವದು. (ಪ್ರಕ. ೮, ೩.) ೪. ಪರಿಶುದ್ಧ ಅಭಿಷೇಕ ತೈಲವು ಪರಿಶುದ್ಧಾತ್ಮದ ಉಪಮೆಯಾಗಿತ್ತು.

ಪ್ರಾಕಾರವು, ಪಾಪದಲ್ಲಿ ಬಿದ್ದು, ಬಲಿಗಳಿಂದ ವಿಮೋಚನೆಯನ್ನು ಹೊಂದ ತಕ್ಕ ಜನಾಂಗದ ಸ್ಥಳವಾಗಿತ್ತು. ಆದದರಿಂದ ಪಾಪವಿಮೋಚನೇ ಬಲಿಗಳು ಅರ್ಪಿಸುವದಕ್ಕಾಗಿ ನೇಮಕವಾದ ಹೋಮಪೀಠವು ಪ್ರಾಕಾರದಲ್ಲಿತ್ತು.

ಲೇವಿಯವರಾದ ಯಾಜಕರ ಉದ್ಯೋಗ ವಸ್ತ್ರಾದಿಗಳು.


ಯಾಜಕರ ಉದ್ಯೋಗ ವಸ್ತ್ರವು ಬಹಳ ಸಾಧಾರಣವಾಗಿದ್ದರೂ, ಅವರ ವೃತ್ತಿಗೆ ಪೂರ್ಣವಾಗಿ ಸರಿಬೀಳುವಂಥಾದಾಗಿತ್ತು. ಹ್ಯಾಗಂದರೆ ಅವರು ನಯವಾದ ಬಿಳೀ ಹತ್ತಿಯಿಂದ ನೇದಂಥ, ಕೊರಳಿನಿಂದ ಹಿಮ್ಮಡಿಯ ಮಟ್ಟಿಗೂ ಶರೀರವನ್ನೆಲ್ಲಾ ಮುಚ್ಚುವಂಥ, ವಿಚಿತ್ರವಾದ ಉಡಿಧಾರವುಳ್ಳ ಅಂಗಿಯನ್ನು ಹೊದ್ದುಕೊಳ್ಳ ಬೇಕಾಯಿತು. ಅದರ ವರ್ಣವು ನಿರ್ಮಲತ್ವಕ್ಕೂ ಪರಿಶುದ್ಧತ್ವಕ್ಕೂ ಗುರ್ತಾಗಿತ್ತು. ಪ್ರಧಾನಯಾಜಕರು ನೀಲ ವರ್ಣವುಳ್ಳ ಮೇಲಂಗಿಯನ್ನೂ ಹಾಕಿ ಕೊಳ್ಳುತ್ತಿದ್ದರು. ಅದರ ಶೆರಗಿನಲ್ಲಿ ಭಂಗಾರದ ಮಣಿಗಳೂ ಕಾಯಿಗಳೂ ಇದ್ದವು. (ಕಾಯಿ ವಾಕ್ಯಕ್ಕೆ, ಮಣಿ ಸಾರುವಿಕೆಗೆ ಗುರ್ತು) ಇದರ ಮೇಲೆ ಎಫೋದ್ ಎಂಬ ಸಣ್ಣ ಅಂಗಿಯು ಇತ್ತು. ಅದು ಬಹಳ ಬೆಲೆಯೂ ವಿಚಿತ್ರವಾದ ವರ್ಣವೂ ಉಳ್ಳದ್ದಾಗಿತ್ತು. ಈ ಎಫೋದಿನಲ್ಲಿ ಪ್ರಧಾನ ಯಾಜಕನ ಎದೆಯನ್ನು ಮುಚ್ಚುವ ಒಂದು ಪದಕವಿತ್ತು. ಅದರ ಹೆಸರು ಇಬ್ರಿಯ ಭಾಷೆಯಲ್ಲಿ ಖೋಷೆನ್. ಇದರಲ್ಲಿ ಹೊನ್ನಿನಲ್ಲಿಟ್ಟ ಹನ್ನೆರಡು ರತ್ನವಿತ್ತು. ಇವುಗಳಲ್ಲಿ ಹನ್ನೆರಡು ಕುಲಗಳ ಹೆಸರುಗಳು ಕೆತ್ತಲ್ಪಟ್ಟಿದ್ದವು. ಪ್ರಧಾನ ಯಾಜಕನು, ಈ ಗುರಾಣಿಯನ್ನು ಎದೆಯಲ್ಲಿ ಹೊತ್ತುಕೊಳ್ಳುವ ಪ್ರಕಾರ, ಹಳೇ ಒಡಂಬಡಿಕೆಯ ಶ್ರೇಷ್ಠ ಮಧ್ಯಸ್ಥಗಾರನಾಗಿದ್ದು, ಸಮಸ್ತ ಜನಾಂಗವನ್ನು ಯಾವಾಗಲೂ ಹೃದಯದಲ್ಲಿಟ್ಟು ಕೊಳ್ಳುವ ಹಂಗಿನಲ್ಲಿದ್ದನು. ಖೋಷೆನ್ ಎಂಬದರಲ್ಲಿ ಊರಿಮೂ ತುಮ್ಮಿಮೂ ಇತ್ತು. ಈ ಶಬ್ದಗಳಿಗೆ ಬೆಳಕುಗಳೂ ಸಿದ್ಧಿಗಳೂ ಎಂಬ ಅರ್ಥವದೆ, ಅಂದರೆ ಸಿದ್ಧಿ ಪ್ರಕಾಶವು. ಅದರ ಮುಖಾಂತರವಾ

ಗಿ ಪ್ರಧಾನ ಯಾಜಕನು ದೇವರ ರಾಜ್ಯದ ವಿಶೇಷವಾದ ಕಾರ್ಯಗಳ ವಿಷಯವಾಗಿ ಅರಸನಾದ ಯೆಹೋವನ ಹತ್ತರ ಪ್ರಶ್ನೆ ಕೇಳಲು, ಕರ್ತನು ಉತ್ತರ ಕೊಡುತ್ತಾ ಇದ್ದನು. ದೈವೋತ್ತರವು ಪ್ರಧಾನ ಯಾಜಕನಿಗೆ ಪ್ರಕಟವಾದ ರೀತಿ ಯಾವದೆಂದು, ತಿಳಿಯುವದಿಲ್ಲ. ತನ್ನ ಮುಂಡಾಸಿನಲ್ಲಿ ಕರ್ತನಿಗೆ ಪರಿಶುದ್ಧವೆಂಬದು ಕೆತ್ತಿ ಬರೆದಿರುವ ಸಣ್ಣ ಚಿನ್ನದ ಪಟ್ಟಿಯನ್ನಿಟ್ಟು ಕೊಂಡವನಾಗಿರುವನು.

ಉಳಿದ ಯಾಜಕರಿಗೂ ನಿಲುವಂಗಿ ಮುಂಡಾಸು ಮಡಿ ಇಜಾರು ಮೊದಲಾದ ಉದ್ಯೋಗವಸ್ತ್ರಗಳು ನೇಮಕವಾಗಿದ್ದವು.

ಯಾಜಕರೆಲ್ಲರೂ ತಮ್ಮ ಪರಿಶುದ್ಧ ಉದ್ಯೋಗ ವೃತ್ತಿಗಾಗಿ ಸ್ನಾನ, ಅಭಿಷೇಕ, ಉಚ್ಛ್ವಾರ್ಪಣೆ, ಪಾಪಬಲಿ, ಹೋಮ, ಕೃತಜ್ಞತಾಯಜ್ಞ, ನೈವೇದ್ಯಗಳ ಅರ್ಪಣೆಯಿಂದ ಪ್ರತಿಷ್ಠೆಯಾಗುತ್ತಿದ್ದರು.

ಹೋಮಪೀಠಕ್ಕೂ ಏಳು ದಿವಸದೊಳಗೆ ಅನುದಿನವು ಆಗುವ ಪಾಪಬಲಿಯರ್ಪಣೆಯಿಂದ ಪ್ರತಿಷ್ಠೆಯಾಗ ಬೇಕಾಯಿತು.



ಸಾಕ್ಷಿಗುಡಾರದ ಒಳಗಡೆ.



ಪ್ರಧಾನಯಾಜಕನ ಚಿತ್ರವು.

ಉಳಿದ ನೇಮಧಾನವು.

I. ನೀತಿನೇಮವು.

ನೀತಿಯ ನೇಮಸಾರಾಂಶವಾದ ದಶವಾಕ್ಯಕ್ಕೆ ಬೇರೆ ಬೇರೆ ಸಮಯಗಳಲ್ಲಿಯೂ ಬೇರೆ ಬೇರೆ ದೇವರ ಪ್ರಕಟಣೆಗಳಿಂದಲೂ ಕಾಲಗತಿಯಿಂದ ಹೊಸ ಕಟ್ಟಳೆಗಳೂ ಪರಿಶಿಷ್ಟವಾದ ವಿವರೋಪಕರಣಗಳೂ ಆಗ್ಗಾಗ್ಗೆ ಶೇರುತ್ತಾ ಬಂದವು. ಇದಕ್ಕೆ ಉದಾಹರಣೆ ಏನಂದರೆ: ಸಬ್ಬತ್ ಕಟ್ಟಳೆಯ ವಿಷಯವಾಗಿ, ಅದನ್ನು ಹೊಲೆಗಲಸುವವನಾವನಾದರೂ ಸತ್ತೇ ಸಾಯ ಬೇಕು. ಅದರಲ್ಲಿ ಕೆಲಸ ಮಾಡುವವನ್ಯಾವನೋ ಅವನ ಪ್ರಾಣವು ಅವನ ಜನಾಂಗದೊಳಗಿಂದ ಕಡಿದು ಹೋಗ ಬೇಕು ಎಂದು, ಹೊರ. ೩೧, ೧೪ರಲ್ಲಿ, ಅಂಥವನನ್ನು ಸಭೆಯವರೆಲ್ಲಾ ದಂಡಿನ ಹೊರಗೆ ಕೊಂಡು ಹೋಗಿ ಕಲ್ಲೆಸೆಯ ಬೇಕೆಂದು, ಅಂಕೆ. ೧೫, ೩೫ರಲ್ಲಿ ಬರೆದದೆ. ಉಳುಕೆಯಲ್ಲಿಯೂ ಕೊಯಿಕೆಯಲ್ಲಿಯೂ ಸಬ್ಬತಿನಲ್ಲಿ ತೀರುಗಡೆಯಾಗಿರ ಬೇಕೆಂದು, ಹೊರ. ೩೪, ೨೧ರಲ್ಲಿ, ಸಬ್ಬತಿನಲ್ಲಿ ಅಡಿಗೆಗಾಗಿ ಬೆಂಕಿ ಹೊತ್ತಿಸ ಬಾರದೆಂದು, ಹೊರ. ೩೫, ೩ರಲ್ಲಿ ಬರೆದದೆ. ಉಳಿದ ಎಲ್ಲಾ ಕಟ್ಟಳೆಗಳಿಗೆ ಬಂದ ಈ ತರದ ಉಪನೇಮಕಗಳು ವಿಶೇಷವಾಗಿ ಐದನೆ ಗ್ರಂಥದಲ್ಲಿ ಕೊಟ್ಟಿರುತ್ತವೆ. ಈ ವಿಧದ ನೀತಿನೇಮೋಪಕರಣಗಳಲ್ಲಿ ಮುಖ್ಯವಾದವುಗಳನ್ನು ಚರಿತ್ರಕ್ರಮಾನುಸಾರವಾಗಿ ಆಯಾ ಸ್ಥಳಗಳಲ್ಲಿ ವಿಶೇಷಿಸ ತಕ್ಕದ್ದು.

II. ಆಚಾರನೇಮವು.

A. ಸಾಕ್ಷಿಗುಡಾರವು. ಹಿಂದೆ ನೋಡು.

B. ಹಬ್ಬಗಳು. ಸಬ್ಬತು, ದಶವಾಕ್ಯವನ್ನು ನೋಡು. ಪಸ್ಕಹಬ್ಬವು, ಪಂಚಾಶತ್‌ಹಬ್ಬವು, ಗುಡಾರವಾಸದ ಹಬ್ಬವು ಎಂಬ ಮೂರು ಮುಖ್ಯವಾದ ಹಬ್ಬಗಳ ಸಂಗತಿಯನ್ನು ಹೊರ. ೨೩. ೧೦—೧೯ರಲ್ಲಿ ನೋಡು. ವಿಮೋಚನಹಬ್ಬವು ಲೇವಿ. ೧೬ನೆ ಸಂಧಿಯಲ್ಲಿ ಬರುವದು. ಸಬ್ಬತ್ ವರ್ಷವು ಹೊರ. ೨೩, ೧೦—೧೯ರಲ್ಲಿ ಶೇರಿಯದೆ. ಸಂಭ್ರಮವರ್ಷವು (ಬಿಡುಗಡೆಯ ವರ್ಷವು) ದ್ವಿತಿ. ನ್ಯಾ. ೨೫. ಏಳನೆ ತಿಂಗಳಿನ ಬಾಲಚಂದ್ರದಿವಸವಾದ ಯುಗಾದಿಹಬ್ಬವು. ಲೇವಿ. ೨೩—೨೫.

C. ಬಲಿಗಳು. ೩ನೆ ಗ್ರಂಥದ ಪೀಠಿಕೆಯೂ ೧—೭ ಸಂಧಿಗಳೂ.

D. ಯಾಜಕರೂ ಲೇವಿಯವರೂ. ಲೇವಿ. ಸ. ೮—೧೧.

III. ರಾಜ್ಯನೇಮವು.

ಭೂಮಿಯ ಸ್ವತಂತ್ರ, ಅದನ್ನು ಮಾರೋಣ, ತಿರಿಗಿ ಕೊಳ್ಳೋಣ, ಬಾಧ್ಯವಾಗಿ ಪಡಕೊಳ್ಳೋಣ ಮುಂತಾದದರ ವಿಷಯವಾದ ಕಟ್ಟಳೆಗಳೂ, ವಾವಿ, ದೇವರೇಣವಿವಾಹ, ವಿವಾಹಪರಿತ್ಯಾಗ ಇತ್ಯಾದಿ ವಿಷಯವಾದ ಮದಿವೆಯ ಕಟ್ಟಳೆಗಳು, ಮನೆಯಾಳುಗಳ ಆಡಳಿತೆ ಬಿಡುಗಡೆಗಳ ಕಟ್ಟಳೆಗಳು, ಸಾಲ ಕೊಡೋಣ ಕೊಳ್ಳೋಣ ಕೇಳೋಣ ಬಡ್ಡಿ ಮುಂತಾದದರ ವಿಷಯವಾದ ಕಟ್ಟಳೆಗಳು, ಬಡವರನ್ನೂ ಪರದೇಶಿಗಳನ್ನೂ ರೋಗಿಗಳನ್ನೂ ಮುದುಕರನ್ನೂ ಪಶುಗಳನ್ನು ಸಹ ಪರಾಮರಿಸುವ ಕಟ್ಟಳೆಗಳು, ಇಸ್ರಯೇಲನವರಿಗೂ ನಿರ್ಮೂಲವಾಗ ತಕ್ಕ ಕಾನಾನ ದೇಶದವರಿಗೂ ಇರುವ ಗೊಡವೆಯ ವಿಷಯವಾದ ಕಟ್ಟಳೆಗಳು, ಈ ಮೊದಲಾದವುಗಳು ರಾಜ್ಯಧರ್ಮದಲ್ಲಿ ಶೇರುತ್ತಾ ಇವೆ. ನೀತಿ ಆಚಾರ ರಾಜ್ಯಧರ್ಮವೆಂಬ ಮೂರು ವಿಧದ ಧರ್ಮವು ಕಟ್ಟಳೆಗಳು ಪೂರ್ಣವಾಗಿ ವಿಶೇಷಿಸಲ್ಪಡಲಾರವು. ಯಾಕೆಂದರೆ ಅವು ಒಂದೊಂದಕ್ಕೆ

ಸಂಬಂಧವಾಗಿದ್ದು ಇಸ್ರಯೇಲನವರ ಜನಾಂಗವನ್ನು ಬೇರೆ ಎಲ್ಲಾ ಜನಾಂಗಗಳಿಗೆ ಪ್ರತ್ಯೇಕಿಸುವ ಉದ್ದಿಶ್ಯವಾಗಿ ದೇವರಿಂದ ನೇಮಕವಾಗಿದ್ದವು. ೨ನೆ ೩ನೆ ೪ನೆ ೫ನೆ ಗ್ರಂಥಗಳೊಳಗೆ ಇಲ್ಲಿಲ್ಲಿ ಚದರಿರುವ ಈ ರಾಜ್ಯಧರ್ಮದ ನೇಮಗಳು ನೇಮಧಾತನ ಅತಿಶಯವಾದ ದಯೆಯನ್ನೂ ಕರುಣೆಯನ್ನೂ ಪ್ರಕಟಿಸಿ, ನೀತಿಧರ್ಮಕ್ಕೆ ಅನುಸಾರವಾದ ಪ್ರೀತಿಯ ಗುಣವನ್ನೂ, ಮಹೋನ್ನತನಾದ ಒಡೆಯನೂ ಅರಸನೂ ಆದ ಯೆಹೋವನಿಗೆ ಸಲ್ಲಿಸ ತಕ್ಕ ವಿಧೇಯತ್ವವನ್ನೂ ಇಸ್ರಯೇಲನವರಲ್ಲಿ ಹುಟ್ಟಿಸಿ ಸಾಧಿಸ ಯುಕ್ತವಾಗಿದ್ದವು. ರಾಜ್ಯಧರ್ಮದ ಕಟ್ಟುಕಟ್ಟಳೆಗಳೂ ಕೂಡಿದ ಸಮಸ್ತ ನೇಮಧಾನಕ್ಕೆ ಯೆಹೋವನೇ ಗುರಿಯಾಗಿದ್ದನು. ಆತನ ಕಡೆಯ ಭಯಭಕ್ತಿಯನ್ನೂ ಪ್ರೀತಿಯನ್ನೂ ವಿಧೇಯತ್ವವನ್ನೂ ಜನಾಂಗವು ಬದುಕಿನ ಎಲ್ಲಾ ವೃತ್ತಿಯಲ್ಲಿ ಕೈಕೊಳ್ಳ ಬೇಕೆಂಬದು ಅದರ ಉದ್ದಿಶ್ಯವಾಗಿತ್ತು. ಸಾಧಾರಣವಾದ ನಡವಡಿಕೆಯ ವಿಷಯವಾದ ಕಟ್ಟಳೆಗಳಲ್ಲಿಯೂ ಒಂದೊಂದು ಯೆಹೋವನಿಂದ ನೇಮಕವಾದದ್ದೂ ಪ್ರತಿಷ್ಠಿತವಾದದ್ದೂ ಆಗಿತ್ತು. ಆದದರಿಂದ ಇಸ್ರಯೇಲನವರ ಲೌಕಿಕ ದೈವಿಕ ನ್ಯಾಯಪ್ರಮಾಣವೆಲ್ಲಾ ದೇವರಾಜ್ಯಧರ್ಮಾನುಸಾರವಾದದ್ದಾಗಿತ್ತು.

ಮೋಶೆಯ ಮೂರನೆ ಗ್ರಂಥ.

(ಲೇವಿಕ.)

ಬಲಿಗಳು.

ಹಳೆ ಒಡಂಬಡಿಕೆಯ ದೇವಾರಾಧನೆಯಲ್ಲಿ ಪ್ರಾಮುಖ್ಯ ಆಚಾರವಾಗಿದ್ದ ಬಲಿಯರ್ಪಣೆಯ ವಿಷಯವಾದ ಈ ಗ್ರಂಥದ ಆರಂಭವು ಎರಡನೆ ಗ್ರಂಥದ ಅಂತ್ಯದಲ್ಲಿ ಬರೆದಿರುವ ಸಾಕ್ಷಿಗುಡಾರದ ವರ್ಣನೆಗೆ ನೆರೆಕೂಡುವಂಥಾದ್ದಾಗಿದೆ. ಗ್ರಂಥದ ಸಂಧಿಗಳ ಕ್ರಮದ ಪ್ರಕಾರವಾಗಿ ಬೇರೆ ಬೇರೆ ಬಲಿಗಳನ್ನು ವಿವರಿಸುವದಕ್ಕಿಂತ ಮುಂಚೆ ಬಲಿಗಳ ವಿಷಯವಾಗಿ ಸಾಮಾನ್ಯವಾದ ಕೆಲವು ಪ್ರಸ್ತಾಪಗಳನ್ನು ಇಲ್ಲಿ ಸೇರಿಸುವದು ಉಚಿತ.

ಆದಿ ಕಾಲದಲ್ಲಿ ಪ್ರಥಮ ಮನುಷ್ಯರು, ಬಳಿಕ ಜಲಪ್ರಳಯದ ಮೇಲೆ ನೋಹನು (ಸತ್ಯವ್ರತನು) ಬಲಿಯರ್ಪಣೆ ಮಾಡಿದರೆಂದು, ಉತ್ಪ. ೪, ೪ರಲ್ಲಿಯೂ, ೮, ೨೦ಲ್ಲಿಯೂ ಬರೆದದೆ. ಅಬ್ರಹಾಮನು ಕರ್ತನಿಗೆ ತನ್ನ ಮಗನನ್ನು ಬಲಿಯಾಗಿ ಕೊಡ ಸಿದ್ಧವಾಗಿದ್ದನು. ಉತ್ಪ. ೨೨, ೯. ಅನ್ಯ ಜನರಲ್ಲಿಯೂ ಮೋಶೆಯ ಕಾಲದ ಅತ್ತಲಾಗಿಯೂ ಇತ್ತಲಾಗಿಯೂ ಬಲಿಪದ್ಧತಿಯು ರೂಢಿಯಾಗಿತ್ತೆಂದು, ಲೋಕಚರಿತ್ರದಲ್ಲಿ ಕಾಣುತ್ತದೆ. ದೇವರ ವಾಕ್ಯದಲ್ಲಿ ಬರೆದಂಥ, ಕಾಯಿನ್ ಅಬೆಲರಿಬ್ಬರು ಮಾಡಿದಂಥ ಬಲಿಯ ಕಥೆಯನ್ನು ಶೋಧಿಸಿ ನೋಡಿದರೆ, ದೇವರು ವಿಶೇಷವಾದ ಪ್ರಕಟಣೆಯಿಂದ ಮನುಷ್ಯರಿಗೆ ಯಜ್ಞ ಮಾಡಬೇಕೆಂಬ ಅಪ್ಪಣೆಯನ್ನು ಕೊಟ್ಟನೆಂತ ನೆನಸುವದು ಸಹಜವಾಗಿದೆ. ಮತ್ತು ಮೋಶೆಯ ಕಾಲದಲ್ಲಿ ಇಸ್ರಯೇಲನವರಲ್ಲಿ ವಾಡಿಕೆಯಾದ ನಾನಾ ತರದ ಬಲಿಗಳ ಆಚರಣೆಯೂ ಅದರ ಸಲವಾಗಿ ಉಂಟಾದ ನೇಮನಿಷ್ಠೆಗಳೂ ಮೋಶೆಗೆ ಬೆಟ್ಟದ ಮೇಲೆ ಪ್ರಾಪ್ತವಾದ ನೇಮಧಾನದಿಂದ ದೊರಕಿದ ಸ್ಪಷ್ಟವಾದ ದೇವಚಿತ್ತಪ್ರಕಟಣೆ ಪ್ರತಿಕೂಲವಾಗಿರಲಿಲ್ಲವೆಂಬದು ನಿಶ್ಚಯ.

ಭೂಮಂಡಲದ ಎಲ್ಲಾ ಜನಾಂಗಗಳಲ್ಲಿ ಯಜ್ಞಗಳನ್ನರ್ಪಿಸುವ ಪದ್ಧತಿಯು ಪೂರ್ವಕಾಲದಿಂದ ನಡದು ಬಂದದೆ. ದೇವರ ನೀತಿಯು ಮನುಷ್ಯರೆಲ್ಲರ ಹೃದಯಗಳಲ್ಲಿ ಅವರವರ ಮನಸ್ಸಾಕ್ಷಿಯಿಂದ ತಿಳಿ

ಯ ಬರುವದು. ರೋಮಾ. ೨, ೧೫. ಹೀಗಿರಲಾಗಿ ಅನ್ಯ ಜನರಾದ ಚಿತ್ತರು ನೀತಿನೇಮಾಚಾರದ ವಿಷಯವಾಗಿಯೂ ಬಲಿಯನ್ವಿತ ಪೂಜೆಯ ವಿಷಯವಾಗಿಯೂ ಸ್ವಾಭಾವಿಕ ಬುದ್ಧಿಯಿಂದ ಭಾವಿಸಿ ಕೊಳ್ಳುವದೇನಂದರೆ: ನೀತಿಯ ನೇಮವನ್ನು ಕೈಕೊಳ್ಳುವದರಿಂದಲೂ ದೇವರಿತ್ತ ವರಗಳಿಗಾಗಿ ತಮಗಿದ್ದ ಒಡವೆಗಳಿಂದ ಕಾಣಿಕೆ ಬಲಿಗಳನ್ನು ಕೊಡುವದರಿಂದಲೂ ದೇವರನ್ನು ಮೆಚ್ಚಿಸುವದು ಮನುಷ್ಯರಿಗೆ ನ್ಯಾಯವಾಗಿದೆ. ತಪ್ಪು ಮಾಡಿದ್ದಾದರೆ, ಪಾಪಪರಿಹಾರಕ್ಕಾಗಿ ಪುಣ್ಯಗಳನ್ನು ನಡಿಸಿ ಬಲಿಗಳನ್ನರ್ಪಿಸಲವಶ್ಯವಾಗಿರುವದು. ಆದರೆ ಮನುಷ್ಯರು ಪಾಪ ಮಾಡಿ, ದೇವದ್ರೋಹಿಗಳಾಗಿ ಪೂರಾ ಕೆಟ್ಟು, ಪರಿಶುದ್ಧ ದೇವರ ಕೋಪಕ್ಕೂ ಶಾಪಕ್ಕೂ ಒಳಗಾಗಿ ಮರಣಕ್ಕೆ ಗುರಿಯಾದವರೆಂದೂ, ಪಾಪಿಯು ಸತ್ಯ ಪುಣ್ಯವನ್ನು ಮಾಡಲಶಕ್ತನೆಂದೂ ನರಪಾಪವಿಮೋಚನೆಗೆ ಪಶುಯಜ್ಞವು ಸಾಲದೆಂದೂ ಅನ್ಯ ಜನರ ಸ್ವಾಭಾವಿಕ ಬುದ್ಧಿಗೆ ಪೂರ್ವಕಾಲದಲ್ಲಿ ಸಹ ಮರೆಯಾಯಿತು. ಆದದರಿಂದ ಅನ್ಯ ಜನರಿಗೆ ಪಾಪವಿಮೋಚನಾಮಾರ್ಗದ ಅರುಹಿಕೆಯೂ ಪಾಪಪರಿಹಾರದಿಂದುಂಟಾಗುವ ಸತ್ಯ ಸಮಾಧಾನವೂ ಸತ್ಯ ನೀತಿಯೂ ದೊರಕಲಿಲ್ಲ. ಆದರೂ ಪಾಪವಿಮೋಚನೆಗೆ ರಕ್ತಧಾರೆಯುಳ್ಳ ಯಜ್ಞವು ಅವಶ್ಯವೆಂಬದು ಸಮಸ್ತ ಜನಾಂಗಗಳಿಗೆ ಸಿದ್ಧಾಂತವಾಗಿತ್ತೆಂಬದು ಪ್ರತ್ಯಕ್ಷವಾಗುತ್ತದೆ.

ಇಸ್ರಾಯೇಲನವರಿಗೆ ಪರಿಶುದ್ಧ ದೇವರ ನೀತಿಯನ್ನೂ ಮನುಷ್ಯರ ಪಾಪವನ್ನೂ ಪಾಪಿಗಳಿಗೆ ದೇವರ ನೀತಿಯಿಂದ ನೇಮಕವಾದ ಶಿಕ್ಷೆಯನ್ನೂ ದೇವರ ಕರುಣೆಯಿಂದ ಸಿದ್ಧವಾಗುವ ರಕ್ಷಣೆಯನ್ನೂ ತಿಳಿದು ಕೊಳ್ಳುವ ಮಾರ್ಗವು ಪ್ರಾಪ್ತವಾಯಿತು. ಹ್ಯಾಗಂದರೆ ಸರ್ವಲೋಕರಕ್ಷಣೆಯು ಮುಂದಣ ಕಾಲದಲ್ಲಿ ತನ್ನನ್ನು ಸಂಪೂರ್ಣವಾದ ಆತ್ಮನಿಗ್ರಹದಿಂದ ಲೋಕಪಾಪವಿಮೋಚನಾಯಜ್ಞವಾಗಿ ದೇವರಿಗೆ ಕೊಡಲಿರುವ ಶಾಪಗ್ರಸ್ತ ಪಾಪಿಗಳ ಪ್ರತಿನಿಧಿಯಾದ ದೇವನರಪುತ್ರನಾದ ಕ್ರಿಸ್ತನಿಂದುಂಟಾಗುವದೆಂಬ ಮರ್ಮವು ಹಳೆ ಒಡಂಬಡಿಕೆಯಲ್ಲಿ ಜಾಡೆಯಾಗಿಯೂ ಸ್ಪಷ್ಟವಾಗಿಯೂ ಪ್ರಕಟವಾಗುತ್ತಿತ್ತು. ಮುಖ್ಯವಾಗಿ ನಾನಾ ವಿಧದ ಬಲಿಯರ್ಪಣೆಗಳು ಮುಂತಾದ ಆಚಾರಗಳಿಂದ ಸೀನಯಿ ಬೆಟ್ಟದ ನೇಮಧಾನವು ಬರುವ ರಕ್ಷಣೆಯ ಮರ್ಮವನ್ನು ಸೂಚಿಸುವಂಥಾದ್ದಾಗಿತ್ತು. ಬಲಿಯರ್ಪಣೆಯು ದೇವಾರಾಧನೆಯಲ್ಲಿ ಮುಖ್ಯವಾದದ್ದೆಂದು ಸ್ಥಾಪಿಸುವಂಥ ಮೋಶೆಯ ನೇಮವು ತತ್ವಗಳ ಸ್ವರೂಪವುಳ್ಳದ್ದಲ್ಲ, ಬರುವ ಮೇಲಾದವುಗಳ ನೆರಳುಳ್ಳದ್ದಾಗಿದೆಂದು, ಇಬ್ರಿ. ೧೦, ೧ರಲ್ಲಿ ಹೇಳಿರುತ್ತದೆ. ಆದರೆ ಹಳೆ ಒಡಂಬಡಿಕೆಯಲ್ಲಿಯಣ ಬಲಿಯಾಚರಣೆಯು ಅಬದ್ಧವಾದದ್ದೆಂದೆಣಿಸಲಾಗದು. ಅದು ರೂಪಕವಾದ ವಿಮೋಚನೋಪಾಯವಾಗಿದ್ದರೂ ನಿಜ ಸಂಪೂರ್ಣವಾದದ್ದನ್ನು ಸೂಚಿಸಿ, ಮುಂದೋರಿಸಿ, ಜೋಡಣೆ ಮಾಡುತಾ ಇತ್ತು. ಮುಂದಣ ರಕ್ಷಣೆಯನ್ನು ಮುಂಗುರ್ತುಗಳಿಂದ ಸೂಚಿಸೋಣವು ನೇಮದ, ವಿಶೇಷವಾಗಿ ಬಲಿಗಳ ಉದ್ದೇಶವೆಂದು, ಹಳೆ ಒಡಂಬಡಿಕೆಯು ಬಲ್ಲವರಿಗೆ ನಾನಾ ಪ್ರಕಾರವಾಗಿ ತಿಳಿಸುತ್ತದೆ. ಧ್ವಿತಿ. ನ್ಯಾ. ೩೩, ೧೯. ಕೀರ್ತ. ೫೧, ೨೦. ೨೧. ಹೊಶೇ. ೧೪, ೩. ಮಲಕಿ. ೧, ೧೧. ಯೆರೆ. ೩, ೧೬. ೧೭; ೩೧, ೩೧ – ೩೪. ನರಜಾತಿಯ ಪ್ರತಿನಿಧಿಯಾದ ಕ್ರಿಸ್ತನ ಸ್ವಯಂಕೃತ ಯಜ್ಞವು ಹಳೆ ಒಡಂಬಡಿಕೆಯ ಎಲ್ಲಾ ವಿಧದ ಬಲಿಗಳ ತತ್ವವೂ ಪೂರ್ತಿಯೂ ಸಿದ್ಧಿಯೂ ಆಗಿತ್ತು. ಇಬ್ರಿ. ೮, ೬. ಗಲಾ. ೫, ೧ ಮುಂ. ಕೊಲೊ. ೨, ೧೬. ೧೭. ಇಬ್ರಿ. ೧೦, ೨೬. ನೇಮಧಾನಬಲಿಯನ್ವಿತ ದೇವಾರಾಧನೆ ದೇವೋಕ್ತ ಪ್ರವಾದನೆಗಳ ಸಂಪ್ರಯೋಗವಾದ ಹಳೆ ಒಡಂಬಡಿಕೆ ಎಂಬ ಹೂವಿನಿಂದ ಪೂರ್ಣ ರಕ್ಷಣಾಸಿದ್ಧಿಯಾದ ಹೊಸ ಒಡಂಬಡಿಕೆಯ ಫಲವು ಹುಟ್ಟಿಯದೆ. ಫಲವು ಬಂದ ಮೇಲೆ ಹೂವಿನ ಪ್ರಯೋಜನವು ಕಳದು ಹೋಗುವದು. ಆದರೆ ಹೂವು ಇಲ್ಲದಿದ್ದರೆ, ಫಲವು ಹುಟ್ಟುವದೇ ಇಲ್ಲ.

ಪಶುಬಲಿಗಳೂ ಅವಕ್ಕೆ ಕೂಡಿದ ಕೃತಜ್ಞತೆಯ ಕಾಣಿಕೆಗಳೂ ಆಯಿಕೆಯಾದ ಜನಾಂಗಕ್ಕೆ ದೇವರ ಸಂಗಡಲಿರುವ ಐಕ್ಯವನ್ನೂ ಪರಿಶುದ್ಧ ದೇವರ ಆಜ್ಞೆಗೆ ಒಳಗಾಗಿರುವ ಅದರ ವಿಧೇಯತ್ವವನ್ನೂ ಪ್ರತಿಷ್ಠಿಸುವ

ಕ್ರಿಯೆಗಳಾಗಿರುವದಲ್ಲದೆ ರಕ್ತಧಾರೆಯಿಂದಲೇ ಉಂಟಾಗ ತಕ್ಕ ಪಾಪವಿಮೋಚನೆಯ ಸೂಚನೆಯಾದ ಸಾಧನಗಳಾಗಿದ್ದವು. ಇದು ಲೇವಿ. ೧–೭ ಸಂಧಿಗಳಲ್ಲಿ ಜಾಡೆಯಾಗಿ ತೋರುವದು. ದೇಹದ ಜೀವವು ರಕ್ತದಲ್ಲಿ ಅದೆ. ನಿಮ್ಮ ಪ್ರಾಣಗಳಿಗೆ ಅದರಿಂದ ವಿಮೋಚನೆಯಾಗುವ ಹಾಗೆ ಅದನ್ನು ಬಲಿಪೀಠದ ಮೇಲೆ ಕೊಟ್ಟನು. ಯಾಕಂದರೆ ರಕ್ತವು ಪ್ರಾಣಕ್ಕೆ ವಿಮೋಚನೆಯಾಗಿದೆ ಎಂದು, ಲೇವಿ. ೧೭, ೧೧ರಲ್ಲಿ ಬರೆದದೆ. ಈ ವಚನದಿಂದ ಬಲಿಗಳ ತಾತ್ಪರ್ಯವನ್ನು ತಿಳು ಕೊಳ್ಳ ಬಹುದು. ಪಾಪವಿಮೋಚನೆಯು ಬಲಿಯರ್ಪಣೆಯ ಉದ್ದೇಶವಾಗಿರುತ್ತದೆ. ಪಾಪವು ಇಚ್ಛೆಯಿಂದ ಹುಟ್ಟುತ್ತದೆ. ಇಚ್ಛೆಯ ಮೂಲವು ಪ್ರಾಣದಲ್ಲಿರುವದು. ಯಾಕೊ. ೧, ೧೪. ೧೫. ರಕ್ತವು ಪ್ರಾಣಸ್ಥಾನವಾಗಿದೆ. ಹೀಗಾಗಿರುವದರಿಂದ ಪಾಪವು ರಕ್ತರಿಂದ ಹುಟ್ಟುವದೆಂದು ಹೇಳ ಬಹುದು. ಆದದರಿಂದ ಪಾಪದ ಶಿಕ್ಷೆಯು ಪ್ರಾಣಸ್ಥಾನವಾದ ರಕ್ತದ ಮೇಲೆ ಬರುವದು ಯುಕ್ತವಾಗಿದೆ. ಮರಣವು ಪಾಪದ ಸಂಬಳವು. ರೋಮಾ. ೬, ೨೩. ಪಾಪಿಗೆ ಬದಲಾಗಿ ಬಲಿಗೆ ನೇಮಕವಾದ ಪಶು ಸಾಯುವದು. ದೇವರು ತಾನು ನೇಮಕ ಮಾಡಿದ ಮನುಷ್ಯನಿಗೆ ಪ್ರತಿಯಾಗಿ ಅರ್ಪಿತವಾದ ಪಶುಬಲಿಗೆ ಮೆಚ್ಚುತ್ತಾನೆ. "ರಕ್ತಧಾರೆ ಇಲ್ಲದೆ ಪಾಪಪರಿಹಾರವು ಆಗುವದಿಲ್ಲ." ಇಬ್ರಿ. ೯, ೨೨. ಆದರೆ "ಎತ್ತು ಆಡುಗಳ ರಕ್ತದಿಂದ ಪಾಪವನ್ನು ತೆಗದು ಹಾಕುವದು ಅಸಾಧ್ಯವಾಗಿತ್ತು." ಇಬ್ರಿ. ೧೦, ೪. ಯಾಕಂದರೆ ಪಶುಬಲಿಗೆ ಮೂರು ವಿಧದ ಕೊರತೆ ಅದೆ. ಏನಂದರೆ ಅದು ಸ್ವೇಚ್ಛೆಯೂ ಈಡಾದ ಬೆಲೆಯೂ ಪ್ರತಿನಿಧಿಗೆ ಇರ ತಕ್ಕ ನಿರ್ಣಯವಾದ ಸಹಜೈಕ್ಯಸಂಬಂಧವೂ ಇಲ್ಲವಾದದರಿಂದ ಅದು ಪಾಪಪರಿಹಾರವನ್ನುಂಟು ಮಾಡುವ ನಿಜಶಕ್ತಿ ಇಲ್ಲದೆ, ದೇವಮಾನುಜನಾಗಿದ್ದು ತನ್ನನ್ನು ತಾನೆ ನಮಗಾಗಿ ಮರಣಕ್ಕೆ ಒಪ್ಪಿಸಿದ ಕ್ರಿಸ್ತನ ಅಪಾರ ಕ್ರಯದ ವರ್ತಮಾನ ಭೂತ ಭವಿಷ್ಯತ್ಕಾಲದಲ್ಲಿ ನಿರಂತರವಾದ ತತ್ಪ್ರಾಣದ ಬಲಿಗೆ ನೆರಳಾದ ಮುಂಗುರ್ತಾಗಿರುವ ಅರ್ಥವುಳ್ಳದ್ದಾಗಿರುತ್ತದೆಯಷ್ಟೆ. ಹೀಗಿರಲಾಗಿ ದಯಾಪರನಾದ ದೇವರ ಪ್ರಕಟಣೆಯ ಸ್ಥಾನವಾದ ಪೀಠದ ಮೇಲೆ ಚಿಮುಕಿಸಿದ ಪಶುಬಲಿರಕ್ತದಿಂದ ಇಸ್ರಾಯೇಲನವರು ಯೆಹೋವನ ಒಡಂಬಡಿಕೆಯ ಜನಾಂಗಕ್ಕೆ ಅವಶ್ಯವಾದ ಮಾಂಸದ ಶುಚಿತ್ವವನ್ನು ಮಾತ್ರ ಪಡದು ಕೊಳ್ಳುತ್ತಾ ಬಂದರೂ, ದೇವರಿಂದ ನೇಮಕವಾದ ಬಲಿಯರ್ಪಣೆಯ ಮರ್ಮಾರ್ಥವನ್ನು ವಿಶ್ವಾಸದಿಂದ ಗ್ರಹಿಸಿ ಕೊಳ್ಳುವ ಭಕ್ತರ ಹೃದಯಗಳಲ್ಲಿ ಲೋಕಪಾಪವಿಮೋಚನಕರವಾದ ಕ್ರಿಸ್ತನ ರಕ್ತಧಾರೆಯಿಂದ ಮುಂದಣ ಕಾಲದಲ್ಲಿ ಉಂಟಾಗ ತಕ್ಕ ಸಂಪೂರ್ಣ ರಕ್ಷಣೆಯ ಆಶೆಯು ಬಿಡದೆ ಅರ್ಪಿತವಾಗುವ ಬಲಿಗಳ ಆಚರಣೆಯಿಂದ ತಿರಿಗಿ ತಿರಿಗಿ ಹುಟ್ಟಿ ಬೆಳೆಯುತ್ತಾ ಇತ್ತು. ಇದೆ ಅದರ ಮುಖ್ಯ ಉದ್ದಿಶ್ಯ.

ಎಲ್ಲಾ ಬಲಿಗಳಲ್ಲಿ ಪ್ರಾಮುಖ್ಯವಾದ ರಕ್ತಬಲಿಯನ್ನರ್ಪಿಸುವವನು ಬಲಿಪಶುವನ್ನು ಒಡಂಬಡಿಕೆಯ ಗುಡಾರದ ಬಳಿಗೆ ತಂದು, ಅದರ ತಲೆಯ ಮೇಲೆ ಕೈಗಳನ್ನಿಟ್ಟು, ತಾನು ಮಾಡಿದ ಅಪರಾಧವನ್ನು ದೋಷವಿಲ್ಲದ ಪಶುವಿನ ಪ್ರಾಣದ ಮೇಲೆ ಇರಿಸಿ, ಅದನ್ನು ತನಗೆ ಪ್ರತಿನಿಧಿಯಾಗಿಟ್ಟು ಕೊಂಡು, ತಾನು ಅಪರಾಧಿಯಾದೆನೆಂದು ಚಿಂತಾಕ್ರಾಂತನಾಗಿಯೂ, ತಿರಿಗಿ ದೇವರಿಗೆ ಪೂರ್ಣಾನ್ಯೋನ್ಯನಾಗ ಬೇಕೆಂದು ಅಪೇಕ್ಷಿತನಾಗಿಯೂ, ತಾನು ಪಾಪ ಮಾಡಿದರಿಂದ ಪಶು ಈಗ ಪಡುವ ಮರಣಕ್ಕೆ ಪಾತ್ರನಾದೆನೆಂದು ಅರಿಕೆ ಮಾಡಿ, ಪಾಪಪರಿಹಾರವನ್ನು ಕೊಡ ಬೇಕೆಂತ ದೇವರನ್ನು ಬೇಡಿ ಕೊಂಡು, ತನಗೆ ಈಡಾಗಿ ಆ ಪಶುವನ್ನು ಕಡಿದು ಕೊಂದು ಹಾಕುವನು. ಬಳಿಕ ಯಾಜಕನು ವಿಮೋಚಿಸುವ ಶಕ್ತಿಯುಳ್ಳ ಪ್ರಾಣಸ್ಥಾನವಾದ ರಕ್ತವನ್ನು ಪಾತ್ರೆಯಲ್ಲಿ ಹಿಡಿದು, ದೇವರು ವಿಮೋಚನ ಕ್ರಿಯೆಯನ್ನು ಅಂಗೀಕರಿಸಿದನೆಂತಲೂ, ಪಶುರಕ್ತಧಾರೆಯಿಂದ ಬಲಿ ಕೊಟ್ಟವನ ಪಾಪವು ದೇವರ ದೃಷ್ಟಿಗೆ ಮರೆಯಾಗಿ ಪರಿಹಾರವಾಯಿತೆಂತಲೂ, ಸೂಚಿಸುವದಕ್ಕಾಗಿ ಅಂಗಳದಲ್ಲಿಯಣ ಪೀಠದ ಕೊಂಬುಗಳ ಮೇಲೆ ತಳಿಸುವನು. ತದನಂತರ ಬಲಿಪಶುವಿನ ಮಾಂಸವನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪೀಠದಲ್ಲಿ ಇಟ್ಟು ಸುಟ್ಟು ಬಿಡುವಲ್ಲಿ ಅದರ ಹೊಗೆಯು ದೇವ

ರಿಗೆ ಹಿತವಾದ ಸುವಾಸನೆಯಾಗಿ ಏರುವದು. ಇದರ ಅಭಿಪ್ರಾಯವೇನಂದರೆ: ವಿಮೋಚನೇ ಕರ್ಮದ ಫಲವನ್ನು ಪಡೆದು ಕೊಂಡವನು ಪಾಪಪರಿಹಾರವನ್ನು ಹೊಂದಿದ ಕೃತಜ್ಞತೆಯಿಂದ ತನ್ನನ್ನು ತಾನೆ ಯೆಹೋವನಿಗೆ ಒಪ್ಪಿಸಿ ಕೊಡುವದಾದರೆ, ದೇವರು ಮೆಚ್ಚುವನು. ಮಾಂಸದೊಡನೆ ಹಿಟ್ಟು ದ್ರಾಕ್ಷಾರಸಗಳು ಎಣ್ಣೆ ಧೂಪ ಉಪ್ಪು ಸಹಿತವಾಗಿ ಆಹಾರಪಾನಬಲಿಗಳೆಂದು ಸುಡಲ್ಪಡುತ್ತಾ ಇದ್ದವು. ಇದರ ಅರ್ಥವೇನಂದರೆ: ಭಕ್ತನು ಪಾಪಪರಿಹಾರವನ್ನು ಹೊಂದಿದ ಬಳಿಕ ನೀತಿನಿರ್ಣಯದ ಕೃಪೆಗೆ ಆತ್ಮಿಕ ವೃತ್ತಿಯಿಂದ ದೇವರಾಜ್ಯವೆಂಬ ಹೊಲದಲ್ಲಿ ಆಗುವ ಧಾನ್ಯವೂ ಕರ್ತನ ಸಭೆಯೆಂಬ ದ್ರಾಕ್ಷೆತೋಟದಲ್ಲಿ ಆಗುವ ದ್ರಾಕ್ಷೆ ಫಲಗಳೂ ಎಂಬ ಸತ್ಕ್ರಿಯೆಗಳನ್ನು ಒಡಗೂಡಿಸ ಬೇಕು. ಎಣ್ಣೆ ಪರಿಶುದ್ಧಾತ್ಮಕ್ಕೆ, ಧೂಪವು ಪ್ರಾರ್ಥನೆಗೆ, ಉಪ್ಪು ನಿರ್ಲಯಭಾವಕ್ಕೆ ಉಪಮೆ. ಏನಂದರೆ ದೇವರಿಗೆ ಸಮರ್ಪಕವಾದ ಭಕ್ತನ ಸತ್ಕ್ರಿಯೆಗಳು ಪರಿಶುದ್ಧಾತ್ಮದ ತ್ರಾಣದಿಂದ ಹುಟ್ಟಿ, ಎಡೆಬಿಡದ ಪ್ರಾರ್ಥನೆಯಿಂದ ಬೆಳೆದು, ದೇವರ ಕೃಪೆಯ ಒಡಂಬಡಿಕೆಯ ನಿತ್ಯ ಪ್ರಮಾಣವಾಗಿವೆ. ಕೃತಜ್ಞತಾಬಲಿಗಳು ಮುಂತಾದ ಕೆಲವು ಬಲಿಗಳಲ್ಲಿ ಕೊಂಚವಾದದ್ದು ಮಾತ್ರ ಸುಡಲ್ಪಡುತ್ತಿತ್ತು. ಉಳಿದದರಲ್ಲಿ ಸ್ವಲ್ಪ ಭಾಗವು ಯಾಜಕರ ಪಾಲಾಗುತ್ತಿತ್ತು. ಹೆಚ್ಚಾದದ್ದು ಬಲಿ ಕೊಟ್ಟವನ ಮನೆಯವರು ಮಾಡಿದ ಔತಣದಲ್ಲಿ ಭಕ್ಷಣೆಯಾಗುತ್ತಿತ್ತು. ಯಾಕೆಂದರೆ ಕೃತಜ್ಞತೆಯ ಬಲಿಯನ್ನರ್ಪಿಸುವವರು ಯೆಹೋವನ ಅತಿಥಿಗಳಾಗಿ, ಯೆಹೋವನ ಮನೆಯಲ್ಲಿ ಶೇರಿದವರಂತೆ ಯಜಮಾನನಾದ ದೇವರ ಮೇಜಿನಲ್ಲಿ ಊಟ ಮಾಡುವವರಾಗಿರುತ್ತಿದ್ದರು. ಈ ಪ್ರಕಾರವಾಗಿ ಬಲಿಯೌತಣವು ಬಲಿಯರ್ಪಣೆಯ ಮುಖಾಂತರ ಪುನಸ್ಥಾಪಿತವಾದ ದೇವರೊಡನಿರುವ ಸಮಾಧಾನಕ್ಕೂ ಸಲಿಗೆಗೂ ಸಾಕ್ಷಿಯೂ ಸಂಚಕಾರವೂ ಆದ ಯೆಹೋವಾನ್ಯೋನ್ಯದ ಸಿದ್ಧಿಯ ಮರ್ಯಾಚಾರವಾಗಿತ್ತು.

ವಿಶೇಷವಾದ ನಾಲ್ಕು ಬಲಿಗಳ ತರಗಳು ಯಾವವೆಂದರೆ: ಹೋಮಬಲಿ, ಸಮಾಧಾನಬಲಿ, ಪಾಪಬಲಿ, ಅಪರಾಧಬಲಿ. ಈ ನಾಲ್ಕು ತರದ ಬಲಿಗಳು ರಕ್ತಮಯವಾದವುಗಳು. ರಕ್ತವಿಲ್ಲದವುಗಳು ಇವುಗಳಿಗೆ ಪರಿಶಿಷ್ಟವಾಗಿದ್ದು, ಕಾಣಿಕೆ ಆಹಾರ ಬಲಿಗಳೆಂದು ಹೆಸರ್ಗೊಂಡವು. ಇವು ಯಾವವಂದರೆ: ಹಿಟ್ಟು, ರೊಟ್ಟಿ, ದೋಶೆ, ಎಣ್ಣೆ, ದ್ರಾಕ್ಷೆರಸಾದಿ ಅರ್ಪಿತವಾದ ಬಲಿಗಳು. ಈ ಎರಡು ವಿಧದ ಬಲಿಗಳಿಗೆ ಇದ್ದ ಪರಸ್ಪರ ಸಂಬಂಧವೇನಂದರೆ: ಬೇರೆ ಬೇರೆ ಆಹಾರಗಳು ಜೀವಮೂಲವಾದ ಪ್ರಾಣಸ್ಥಾನವಾಗಿರುವ ರಕ್ತಕ್ಕೆ ಆಧಾರವಾಗಿವೆ. ಹೀಗಿರಲಾಗಿ ರಕ್ತವಿಲ್ಲದ ಬಲಿಯನ್ನು ರಕ್ತಬಲಿಗೆ ಬದಲಾಗಿ ಅರ್ಪಿಸುವದಕ್ಕೆ ಬಡವರಿಗೆ ಒಂದೊಂದು ವೇಳೆ ಅಪ್ಪಣೆ ಇತ್ತು. ಲೇವಿ. ೫, ೧೧. ಪ್ರಥಮಫಲಗಳ ಕಾಣಿಕೆಗಳಾದ ಆಹಾರಬಲಿಗಳ ಉದ್ದೇಶವೂ ಅಭಿಪ್ರಾಯವೂ ಬೇರೆ. ಅವು ಉಚಿತವಾಗಿರದೆ, ಕಟ್ಟಳೆಯಿಂದ ನೇಮಕವಾಗಿದ್ದವು. ಆದದರಿಂದ ಅವುಗಳಿಗೂ ಮೇಲೆ ಬರದಿರುವ ರಕ್ತಬಲಿಗಳಿಗೂ ಗೊಡವೆ ಇಲ್ಲ. ತಿಳಿಯದೆ ಇಲ್ಲವೆ ಬೇಕನ್ನದೆ ಒಂದು ಪಾಪ ಮಾಡಿದವರು ಪಾಪಬಲಿಗಳನ್ನೂ ಅಪರಾಧಬಲಿಗಳನ್ನೂ ಅರ್ಪಿಸ ತಕ್ಕವರಾಗಿದ್ದರು. ಬಗೆದು ನಡಿಸಿದ ಪಾಪಗಳಿಗೆ ಪರಿಹಾರವಿಲ್ಲದೆ ಪ್ರಾಣಶಿಕ್ಷೆ ನೇಮಕವಾಗಿತ್ತು. ಪಾಪಬಲಿಗೂ ಅಪರಾಧಬಲಿಗೂ ದೊಡ್ಡ ವ್ಯತ್ಯಾಸವಿಲ್ಲ. ದಂಡವನ್ನು ಸಲ್ಲಿಸುವದುಂಟಾದರೆ, ಅಪರಾಧಬಲಿಯು, ದಂಡ ಸಲ್ಲಿಸಲಾಗದಿದ್ದರೆ, ಪಾಪಬಲಿಯು. ನೇಮವನ್ನು ಮೀರಿದರಿಂದ ಒಡಂಬಡಿಕೆಯ ಜನಾಂಗದ ಅನ್ಯೋನ್ಯಕ್ಕೆ ಹೊರಗಾದವರು ಈ ಎರಡು ತರದ ಬಲಿಯರ್ಪಣೆಯ ಮೂಲವಾಗಿ ತಿರಿಗಿ ಸಭೆಯಲ್ಲಿ ಶೇರುವ ಅಧಿಕಾರವನ್ನು ಪಡ ಕೊಳ್ಳುವರು. ಹೋಮಗಳೂ ಸಮಾಧಾನಬಲಿಗಳೂ ಬೇರೆ ಬೇರೆ ಪಾಪಕರ್ಮಗಳನ್ನಲ್ಲ, ದೇವರ ಒಡಂಬಡಿಕೆಯಲ್ಲಿ ನಡಕೊಳ್ಳುತ್ತಾ ಇರುವ ಭಕ್ತರಿಗೆ ಸಹ ಇರುವ ಪಾಪಗುಣವನ್ನೇ ಪರಿಹರಿಸುವದಕ್ಕಾಗಿ ನೇಮಕವಾಗಿದ್ದು, ಯೆಹೋವನ ಅನ್ಯೋನ್ಯ ವೃದ್ಧ್ಯುಪಾಯವಾಗಿದ್ದವು. ಸಮಾಧಾನ ಬಲಿಗಳಲ್ಲಿ ಸ್ತೋತ್ರಬಲಿ, ಹರಿಕೆಯಬಲಿ, ಉಚಿತಬಲಿ ಎಂಬ ಈ ಮೂರು ವಿಧವುಂಟು. ಸಮಾಧಾನ ಬಲಿಗಳಿಗೆಲ್ಲಾ ಔತಣಾಚರಣೆಯು ಕೂಡಿತು. ಯಾಜಕರ ಊಟಕ್ಕೆ ನೇಮಕವಾದ ಬಲಿಭಾಗಗಳನ್ನು ನೈ

ವೇದ್ಯವಾಗಿ ಎತ್ತಿ ಅಲ್ಲಾಡುವ ಪದ್ಧತಿಯು ಈ ಬಲಿಗಳಿಗೆ ವಿಶೇಷವಾಗಿತ್ತು. ಅದರ ಅಭಿಪ್ರಾಯವೇನಂದರೆ: ದಿವದಲ್ಲಿ ವಾಸಿಸಿ, ಅಲ್ಲಿಂದ ಇಳಿದು ಬರುವ ವರಗಳಿಂದ ತನ್ನನ್ನು ಪ್ರಕಟ ಮಾಡಿ ಕೊಳ್ಳುವ ಯೆಹೋವನನ್ನು ಧ್ಯಾನಿಸಿ, ಬಲಿಯನ್ನು ಮೇಲಕ್ಕೆತ್ತುವದು. ಲೋಕದ ನಿರ್ಮಾಣಿಕನೂ ಪಾಲಕನೂ ಅಧಿಪತಿಯೂ ಆಗಿದ್ದು, ಅದರ ಪ್ರಾಂತ್ಯಗಳನ್ನೆಲ್ಲಾ ಆವರಿಸುವ ದೇವರನ್ನು ಧ್ಯಾನಿಸಿ ಬಲಿಯನ್ನು ನಾಲ್ಕು ದಿಕ್ಕಿಗೆ ಅಲ್ಲಾಡುವದು.

ಈ ಬಲಿಗಳಲ್ಲದೆ ಬೇರೆ ಕೆಲವು ಉಂಟು, ಯಾವವಂದರೆ ಒಡಂಬಡಿಕೆಯ ಬಲಿಯು, ಹೊರ. ೨೪; ಪ್ರತಿಷ್ಠೆಯ ಬಲಿಯು, ಹೊರ. ೨೯. ಲೇವಿ. ೮. ಅಂಕೆ. ೮, ೫ ಮುಂ.; ನಜರೀಯರ ಬಲಿಯು, ಅಂಕೆ. ೬, ೧ ಮುಂ.; ರೋಷದ ಕಾಣಿಕೆಯು, ಅಂಕೆ. ೫, ೧೫. ೧೮. ೨೫.

ಬಲಿಯಾಗಿ ಕೊಡ ತಕ್ಕ ಪ್ರಾಣಿಗಳು ಯಾವವಂದರೆ: ಎತ್ತು, ಕುರಿ, ಆಡು ಮುಂತಾದವುಗಳು. ಬಡವರಿಗೆ ಮಾತ್ರ ಪಾರಿವಾಳಗಳನ್ನು ಅರ್ಪಿಸುವದಕ್ಕೆ ಅಪ್ಪಣೆ ಇತ್ತು. ಬಲಿಗಾಗಿ ಆಯಿಕೆಯಾದ ಪ್ರಾಣಿಗಳು ಕುಂದೂ ಊನವೂ ಇಲ್ಲದಿರ ಬೇಕಾಗಿದ್ದವು. ಹೆಚ್ಚು ಎಳೆಯಾದವುಗಳೂ ಹೆಚ್ಚು ಮುದಿಯಾದವುಗಳೂ ಆಗದೆ ಇದ್ದವು. ಇದರ ಅಭಿಪ್ರಾಯವೇನಂದರೆ: ಭಕ್ತನು ತನಗೆ ಇದ್ದದರಲ್ಲಿ ಉತ್ತಮವಾದದ್ದನ್ನೂ ಎಲ್ಲಾದರಲ್ಲಿ ತನಗಿಷ್ಟವಾದದ್ದನ್ನೂ ಅರ್ಪಿಸುವದು ಯುಕ್ತವಾದದ್ದು. ಮಲಕಿ. ೧, ೬—೮. ಮತ್ತು ಪಾಪಿಗೆ ಪ್ರತಿನಿಧಿಯಾದ ಬಲಿಯು ಪರಿಶುದ್ಧವಾಗಿರುವದು ಅವಶ್ಯ. ಕಾಣಿಕೆಗೆ ತಕ್ಕ ಧಾನ್ಯಾದಿಗಳು ಯಾವವಂದರೆ — ಹಿಟ್ಟು, ರೊಟ್ಟಿ, ದೋಶೆ, ದ್ರಾಕ್ಷೆರಸ, ಎಣ್ಣೆಗಳು. ರೊಟ್ಟಿಗಳಿಗೂ ದೋಶೆಗಳಿಗೂ ಹುಳಿಹಿಟ್ಟಾಗಲಿ ಜೇನುತುಪ್ಪಾಗಲಿ ಬೆರಿಕೆಯಾಗಲಾಗದಿತ್ತು, ಯಾಕಂದರೆ ಹುಳಿ ಹಿಡಿದದ್ದಕ್ಕೆ ಕೊಳಪಿನ ದೋಷ ಉಂಟು. ಆದರೆ ಉಪ್ಪೂ ಧೂಪವೂ ಬಲಿಗಳಿಗೆ ಉಪಸ್ಕರವಾಗಿ ನೇಮಕವಾಗಿದ್ದವು.

ಬಲಿಗಳು, ಕಾಣಿಕೆಗಳು, ನೇಮಕವಾದ ಶುಚಿಕರಣಗಳು ಇವುಗಳ ವಿಷಯವಾದ ವಿವರಗಳು ಆಯಾ ಸ್ಥಳಗಳಲ್ಲಿ ಬರುತ್ತವೆ.

ದಹನ, ಆಹಾರ, ಸಮಾಧಾನ, ಪಾಪ, ಅಪರಾಧ ಬಲಿಗಳು. ಸ. ೧—ಸ. ೭.

ಸ. ೧. ದಹನಬಲಿಯು. ಅಥವಾ ಹೋಮ. ಇಬ್ರಿಯದಲ್ಲಿ ಅದು ಓಲಾ ಎಂಬದು, ಏನಂದರೆ ಏರುವಂಥಾದು, ಹ್ಯಾಗಂದರೆ ಸುಟ್ಟು ಹೋಗುವ ಬಲಿಯು ಹೊಗೆಯಾಗಿ ಮೇಲಕ್ಕೆ ಏರುವಂಥಾದ್ದಾಗಿ ತೋರುವದು. ಗ್ರೇಕ ಭಾಷೆಯಲ್ಲಿ ಅದು ಹೊಲೊಕೌಸ್ತೊನ್ ಅಂದರೆ ಕೇವಲಹೋಮ ಎಂದನ್ನಿಸಿ ಕೊಳ್ಳುವದು, ಯಾಕೆಂದರೆ ಯಾಜಕನ ಪಾಲಾದ ಚರ್ಮದ ಹೊರ್ತಾಗಿ ಹೋಮವು ಪೂರ್ಣವಾಗಿ ಸುಟ್ಟು ಹೋಗುವಂಥಾದ್ದಾಗಿತ್ತು. ಈ ವಿಧದ ಬಲಿಯು ಪ್ರತ್ಯೇಕವಾದ ತಪ್ಪುಗಳಿಗೆಲ್ಲಾ ಮೂಲವಾದ ಪಾಪಗುಣ ವಿಮೋಚನಾರ್ಥಕ್ಕಾಗಿ ಅನುದಿನವು ಅರ್ಪಿಸಲ್ಪಡುತ್ತಿತ್ತು. ಅದರ ಕ್ರಮವು ಸ. ೬, ೮—೧೩ ರಲ್ಲಿ ಬರೆದದೆ. ಈ ಮೊದಲನೆ ಸಂಧಿಯಲ್ಲಿ ಉಚಿತವಾದ ದಹನಬಲಿಯ ಪದ್ಧತಿಯೇ ಶೇರಿಯದೆ. ಅದು ಹ್ಯಾಗಂದರೆ — ಗೂಳಿಯಾಗಲಿ ಹೋತಾಗಲಿ ಬಲಿಗೆ ಯುಕ್ತವಾದದ್ದು. ಬಡವರು ಪಾರಿವಾಳಗಳ ಜೋಡು ತಂದು ಕೊಡುವದು ಸಮರ್ಪಕವಾದದ್ದು. ಬಲಿಪಶುವನ್ನು ಸಭೆಯ ಗುಡಾರದ ಬಾಗಲಿನ ಮುಂದೆ ತರುವದು, ಅದರ ತಲೆಯ ಮೇಲೆ ಕೈ ಇಡುವದು, ಅದನ್ನು ಕಡಿದು ಹಾಕುವದು, ಅದರ ತೊಗಲು ಸುಲಿಯುವದು, ಅದರ ಮೈ ತುಂಡು ತುಂಡು ಮಾಡುವದು, ಕರುಳುಗಳನ್ನೂ ತೊಡೆಗಳನ್ನೂ ನೀರಲ್ಲಿ ತೊಳೆಯುವದು ಮುಂತಾದದ್ದು ಬಲಿ ಕೊಡುವವನ ಕೆಲಸವಾಗಿತ್ತು. ಬಲಿಯ ರಕ್ತವನ್ನು ಅಂಗಳದಲ್ಲಿರುವ ಪೀಠದ ಬಳಿಗೆ ತಂದು, ಅದನ್ನು ಪೀಠದ ಸುತ್ತಲಾಗಿ ಚಿಮಿಕಿಸುವದು, ಬಲಿಪೀಠದ ಮೇಲೆ ಬೆಂಕಿ ಹೊತ್ತಿಸುವದು, ಬಲಿಯ ತುಂಡುಗಳನ್ನೂ ತಲೆಯನ್ನೂ ಕೊಬ್ಬನ್ನೂ ಮೇಲಾಗಿ ಇಡುವದು, ಎಲ್ಲಾನ್ನು ಬೇಸಿ ಬಿ

ಡುವದು ಮೊದಲಾದದ್ದು ಆರೋನನ ಮಕ್ಕಳಾದ ಯಾಜಕರ ಉದ್ಯೋಗದ ಕೆಲಸವಾಗಿತ್ತು. ಪಕ್ಷಿಬಲಿಯುಂಟಾದರೆ, ಬಲಿ ಕೊಡುವವನಲ್ಲ ಯಾಜಕನೇ ಹಕ್ಕಿಯನ್ನು ಕೊಂದು ಅದರ ತಲೆಯನ್ನು ಕಿತ್ತು ಕೊಳ್ಳದೆ ಸುಲಿದು, ಅದರ ರಕ್ತವನ್ನು ಪೀಠದ ಪಕ್ಕೇಲಿ ಸೋರಿಸುತ್ತಿದ್ದನು. ಈ ಬಲಿಯ ರೀತಿಯು ಸ್ವಲ್ಪ ವಿಶೇಷ ತರವಾವಾದದ್ದು. ಏನಂದರೆ ಬಲಿ ಕೊಡುವವನು ಅದರ ತಲೆಯ ಮೇಲೆ ಕೈ ಇಡುವ ಪದ್ಧತಿ ಇಲ್ಲ. ಯಾಜಕನು ಹಕ್ಕಿಯ ಆಹಾರಕೋಶವನ್ನೂ ಗರಿಗಳನ್ನೂ ತೆಗದು ಹಾಕಿ, ಕಡಿಯದೆ ಹರಿದು ಬಿಟ್ಟ ರೆಕ್ಕೆಗಳ ಕೂಡಾ ಇಡೀ ಹಕ್ಕಿಯನ್ನು ಪೀಠದಲ್ಲಿಟ್ಟು ಸುಟ್ಟು ಬಿಡುವನು. ವ. ೧೭.

ಸ. ೨. ಆಹಾರಬಲಿಯು. (ಕಾಣಿಕೆ, ನೈವೇದ್ಯ) ಇದರಲ್ಲಿ ೧. ನಯವಾದ ಹಿಟ್ಟಾಗಲಿ, ೨. ಒಲೆಯಲ್ಲಿ ಸುಟ್ಟಂಥ, ಇಲ್ಲವೆ ಬಾಂಡದಲ್ಲಿ ಹುರಿದಂಥ ನಯವಾದ ಹಿಟ್ಟಿನ ದೋಶೆಗಳಾಗಲಿ, ೩. ಪ್ರಥಮಫಲಗಳಾದ ಸುಟ್ಟ ತೆನೆಗಳು, ತುಂಬ ತೆನೆಗಳಿಂದ ಹೊಡೆದ ಕಾಳುಗಳು ಇವುಗಳಾಗಲಿ, ಬಳಕೆಯಾಗುವವು. ಈ ಮೂರು ವಿಧದ ಬಲಿಗಳ ಒಂದೊಂದಕ್ಕೆ ಪರಿಶುದ್ಧಾತ್ಮವನ್ನು ಸೂಚಿಸುವ ಎಣ್ಣೆ ಹೊಯ್ಯುವದೂ, ಯೆಹೋವನಿಗಾಗಿ ಸುಡಲ್ಪಡುವ ಬಲಿಭಾಗದ ಮೇಲೆ ಪ್ರಾರ್ಥನೆಯನ್ನು ಸೂಚಿಸುವ ಧೂಪವನ್ನು ಇಡುವದೂ ನೇಮಕವಾಗಿತ್ತು. ಯಾಜಕರ ಪಾಲಿಗೆ ಧೂಪವಿಲ್ಲವೆಂಬದು ಸಹಜ. ಹುಳಿ ಹಿಟ್ಟಾಗಲಿ, ಹುಳಿ ಹುಟ್ಟಿಸುವ ಜೇನುತುಪ್ಪಾಗಲಿ ಉಚಿತಬಲಿಗಳಲ್ಲೆಲ್ಲಾ ಶೇರ ಬಾರದೆ ಇತ್ತು. ಆದರೆ ನೇಮಕವಾದ ಸ್ತೋತ್ರ ಬಲಿಗಳಲ್ಲಿಯೂ ಸ. ೭, ೧೩, ಪ್ರಥಮಫಲಗಳ ಕಾಣಿಕೆಗಳಲ್ಲಿಯೂ, ಸ. ೨, ೧೨. ಸ. ೨೩, ೧೭. ಹುಳಿಹಿಟ್ಟು ಯುಕ್ತವಾಗಿತ್ತು. ಆದಾಗ್ಯೂ ಪೀಠದಲ್ಲಿ ಬರಲಾಗದಿತ್ತು. ಆಹಾರಬಲಿಗಳು ಮುಂತಾದ ಎಲ್ಲಾ ಬಲಿಗಳಲ್ಲಿ ಉಪ್ಪು ಇಲ್ಲದೆ ಇರಲಾಗದಿತ್ತು. ಯಾಕೆಂದರೆ ಪದಾರ್ಥಗಳನ್ನು ಕೊಳತು ಹೋಗಲೀಸದೆ ಸ್ವಸ್ಥವಾಗಿ ಕಾಪಾಡುವ ಶಕ್ತಿಯ ನಿಮಿತ್ತ ಉಪ್ಪು, ನಂಬಿಕೆಗೂ ದೃಢಭಕ್ತಿಗೂ ಉಪಮೆಯಾಗಿದ್ದು, ಸ. ೨, ೧೩ರಲ್ಲಿ ಒಡಂಬಡಿಕೆಯ ಉಪ್ಪು, ಅನ್ನಿಸಿ ಕೊಳ್ಳುವದು. ಯಾಜಕರು ಮಾತ್ರ ಒಂದು ಪಾಲು ಪಡ ಕೊಳ್ಳುವ ಬಲಿಯು ಪರಿಶುದ್ಧವಾದದ್ದೆಂದು, ಸ. ೨, ೧೦, ಬಲಿ ಕೊಡುವವನು ಸಹಾ ಒಂದು ಪಾಲು ಪಡ ಕೊಳ್ಳುವ ಬಲಿಯು ಶುದ್ಧವಾದದ್ದೆಂದು, ಅನ್ನಿಸಿ ಕೊಳ್ಳುವದು.

ಕಾಣಿಕೆಬಲಿಗಳು ರಕ್ತಬಲಿಗಳಿಗೆ, ಮುಖ್ಯವಾಗಿ ಹೋಮಗಳಿಗೆ ಶೇರುವ ಉಪಬಲಿಗಳಾಗಿದ್ದವೆಂತ ಮೇಲೆ ಬರೆದದೆ. ಶುದ್ಧ ಸ್ಥಳದ ಮೇಜಿನ ಮೇಲಣ ಸಮ್ಮುಖದ ರೊಟ್ಟಿಗಳ ಅರ್ಪಣೆಯು ಕಾಣಿಕೆಬಲಿಗಳಲ್ಲಿ ಮುಖ್ಯವಾದದ್ದೂ ಉತ್ಕೃಷ್ಟವಾದದ್ದೂ ಆಗಿತ್ತು. ಅದರಂತೆ ಈ ಸಂಧಿಯಲ್ಲಿ ಬರೆದಿರುವ ಆಹಾರಬಲಿಗಳೂ, ಒಡಂಬಡಿಕೆಯ ಜನಾಂಗದ ಭಕ್ತರು, ತಮ್ಮ ಒಡೆಯನಾದ ಸರ್ವಾಧಿಪತಿಯ ಸರ್ವಾಧಿಕಾರವನ್ನು ಅಲ್ಲಗಳೆಯದೆ ಅವನು ತಮಗೆ ಕೊಟ್ಟ ಭೂಮಿಯ ಫಲಗಳು ಸಹ ಅವನ ಕೃಪೆಯ ವರಗಳೆಂದು ತಿಳು ಕೊಂಡು, ಅನುದಿನದ ಜೀವಾನುಭೋಗವು ದೇವರ ಕರುಣೆಯ ಪ್ರಸಾದವೆಂದರಿತು, ತಮ್ಮನ್ನು ಅವನಿಗೆ ಕೃತಜ್ಞರಾಗಿ ಒಪ್ಪಿಸಿ ಕೊಡುತ್ತಾರೆಂಬ ಅಭಿಪ್ರಾಯವನ್ನು ಸೂಚಿಸುವ ಆಚರಣೆಯಾಗಿದ್ದವು. ಪಾಪವಿಮೋಚನಾರ್ಥಕ್ಕಾದ ರಕ್ತಬಲಿಗಳಿಗೆ ಕೂಡುವ ಉಪಬಲಿಗಳಾದ ಕಾಣಿಕೆಬಲಿಗಳು ಪಾಪವಿಮೋಚನೆಯನ್ನೂ ಪರಿಹಾರವನ್ನೂ ಹೊಂದಿದವರಲ್ಲಿ ಹುಟ್ಟುವಂಥ ಮನಃಪೂರ್ವಕ ಭಕ್ತಿಯಿಂದಲೂ ಪರಿಶುದ್ಧವಾದ ನಡತೆಯಿಂದಲೂ ದೇವರನ್ನು ಮೆಚ್ಚಿಸ ಬೇಕೆಂಬ ಆಸಕ್ತಿಯ ಆಲೋಚನೆಗಳಿಗೆ ಸಾಮ್ಯವಾಗಿದ್ದವು.

ಸ. ೩. ಸಮಾಧಾನಬಲಿಯು. ಅದಕ್ಕೆ ಸ್ತೋತ್ರಬಲಿ, ಈಡೇರಿಕೆಯ ಬಲಿ, ಕೃತಜ್ಞತಾಬಲಿ ಎಂಬ ಹೆಸರುಗಳು ಸಹ ಬರುತ್ತವೆ. ಅದು ಭಿನ್ನಹದ ಬಲಿಯಾಗಿ ಅರ್ಪಿತವಾದದ್ದೂ ಉಂಟು. ಹೋಮದಿಂದಲೂ ಪಾಪಬಲಿಯಿಂದಲೂ ಪಾಪವಿಮೋಚನೆಯನ್ನು ಪಡೆದು ಕೊಂಡ ಇಸ್ರಯೇಲನವರವನು ಈ ಬಲಿಯ ಮುಖಾಂತರ ದೇವರಿಗೆ ಒಂದು ನಿಮಿತ್ತವಾಗಿರುವ ತನ್ನ ಕೃತಜ್ಞತೆಯನ್ನು ತಿಳಿಸುವನು, ಇಲ್ಲವೆ ಒಂದಾನೊಂದು ಭಿನ್ನಹವನ್ನು ಅರಿಕೆ ಮಾಡುವನು. ಸಮಾಧಾನಬಲಿಯರ್ಪಣೆಯ ಕ್ರಮವು ಹೋ

ಮದ ವಿಧಿಗೆ ಅನುಸಾರವಾದದ್ದು; ಆದರೆ ದನ ಕುರಿ ಆಡುಗಳ ಗಂಡು ಹೆಣ್ಣುಗಳಿಗೆ ಅದರಲ್ಲಿ ಹೆಚ್ಚು ಕಡಿಮೆ ಇಲ್ಲ. ಇದಲ್ಲದೆ ಅರ್ಪಣೆ ಆದ ಕೂಡಲೇ ಬಲಿ ಕೊಟ್ಟವನು ಯೆಹೋವನ ಅತಿಥಿಯಾಗಿ ಅನುಭವಿಸುವ ಬಲಿಯೌತಣವು ನಿತ್ಯವಾಗಿ ಆಗುತ್ತಿತ್ತು. ಹೋಮದಲ್ಲಿಯೂ ಆಗುವಂತೆ ಪ್ರತಿನಿಧಿಯಾದ ಪಶುವಿನ ಮರಣದ ಮುಖಾಂತರ ಪಾಪವಿಮೋಚನೆಯನ್ನು ಪಡೆದು ಕೊಂಡು, ದೇವಾನ್ಯೋನ್ಯಸಮಾಧಾನವನ್ನು ಪುನಸ್ಥಾಪಿಸಿ, ತನ್ನನ್ನು ತಾನು ದೇವರಿಗೆ ಮೀಸಲಾಗಿ ಒಪ್ಪಿಸುವದಲ್ಲದೆ ಸಮಾಧಾನಬಲಿ ಕೊಡುವವನು ಪಾಪವಿಮೋಚನೆಯಿಂದಲೂ ದೇವವಶೀಕೃತದಿಂದಲೂ ತನಗೆ ಪ್ರಾಪ್ತವಾದ ಆತ್ಮಸೌಖ್ಯಕ್ಕಾಗಿಯೂ ಆಶೀರ್ವಾದಕ್ಕೂ ಕರ್ತನ ದಯೆಯನ್ನು ಹೊಗಳುತ್ತೇನೆಂಬದನ್ನು ಸೂಚಿಸುತ್ತಾ ಇರುವನು.

ಮೇಲಣ ಬಲಿಗಳು ಪರಿಶುದ್ಧವಾದವುಗಳೆಂತ, ಇದು ಶುದ್ಧವಾದದ್ದೆಂತ ಹೆಸರ್ಗೊಳ್ಳುವದು. ಸಮಾಧಾನಬಲಿಗಳು ಆಗ್ಯೆ ದೇವರಿಂದ ಹೊಂದಿದ ಉಪಕಾರಗಳಿಗಾಗಿ ಮಾಡ ತಕ್ಕ ಕೃತ್ಯಗಳಾದ (ಸ್ತುತಿ) ಸ್ತೋತ್ರಬಲಿಗಳು (ಸ. ೭, ೧೨.) ಆಗ್ಯೆ ಶುಭಪ್ರಾಪ್ತಿಗೋಸ್ಕರ ಕೊಡ ತಕ್ಕ ಹರಿಕೆಯ ಬಲಿಗಳು (ಸ. ೭, ೧೬.), ಆಗ್ಯೆ ವಿಶೇಷ ಕಾರಣವಿಲ್ಲದ ಉಚಿತಬಲಿಗಳು (ಸ. ೨೨, ೨೩.) ಆಗಿವೆ.

ಸ. ೪. ಪಾಪಬಲಿಯು. ಅದು ಬೇಕಾಗಿ ನಡಿಸದೆ ಇದ್ದ ತಪ್ಪುಗಳಿಗಾಗಿ ನೇಮಕವಾದದ್ದು. ದಶವಾಕ್ಯನೇಮಕ್ಕೆ ವಿರೋಧವಾಗಿ ಬೇಕೆಂದು ಮಾಡಿದ ಪಾಪಗಳಿಗೆ ಪ್ರಾಯಶ್ಚಿತ್ತವಾದರೂ ಪರಿಹಾರವಾದರೂ ಇಲ್ಲದೆ, ದಂಡನೆ ನೇಮಕವಾಗಿತ್ತು. (೧೫, ೩೧. ಇಬ್ರಿ. ೨, ೨.) ಆದರೆ ದೇವರಾಜ್ಯನೇಮದ ಬೇರೆ ಯಾವದೊಂದು ಕಟ್ಟಳೆಯನ್ನು ಒಬ್ಬನು ತಿಳಿಯದೆ ಮೀರಿದ್ದರೆ, ಇಲ್ಲವೆ ಒಬ್ಬನು ಬೇಕೆಂದು ಮಾಡಿದ ಪಾಪವು ಪ್ರಕಟವಾಗದೆ ಶಿಕ್ಷೆ ಪಡೆಯದೆ ಇದ್ದಲ್ಲಿ ಅವನು ಪಶ್ಚಾತ್ತಾಪ ಪಟ್ಟು ತನ್ನ ಅಪರಾಧವನ್ನು ತಾನೆ ಅರಿಕೆ ಮಾಡಿದ್ದರೆ, ಪಾಪಬಲಿಯರ್ಪಣೆಯು ಯುಕ್ತವಾಗಿತ್ತು. ದೇವರು ತನ್ನ ಜನಾಂಗಕ್ಕೆ ನಿರ್ಣೈಸಿದ ನೇಮನಿಷ್ಠೆಗಳ ಯಾವದೊಂದು ವಿಧಿಯನ್ನು ಮೀರಿದವನು, ಬೇಕೆಂದು ತಪ್ಪು ಮಾಡದಿದ್ದರೂ, ಅಪರಾಧಕ್ಕೆ ಒಳಗಾಗಿರುವನು. ದೇವರ ನೇಮವು ಪರಿಶುದ್ಧವಾದದ್ದೆಂದು ಪ್ರಕಟವಾಗುವ ಹಾಗೆ, ಒಂದೊಂದು ಅಪರಾಧಕ್ಕೆ ಪ್ರಾಯಶ್ಚಿತ್ತವಾಗಲವಶ್ಯವಾಗಿರುವದು.

ವರ್ಷ ವರ್ಷಕ್ಕೆ ಪಾಪಮುಚ್ಚತೆಯ ಹಬ್ಬದಲ್ಲಿ ಮಹಾ ಪಾಪಬಲಿಯರ್ಪಣೆಯು ಆಗುತ್ತಿತ್ತು. ಸ. ೧೬. ಅದರಲ್ಲಿ ಪಾಪನಿವಾರಣೆಯು ರಕ್ತ ಚೆಲ್ಲೋಣದರಿಂದ ಆಗುವ ಪ್ರಕಾರ, ನಾಲ್ಕನೆ ಸಂಧಿಯಲ್ಲಿ ಬರೆದಿರುವ ಸಾಧಾರಣವಾದ ಪಾಪಬಲಿಗಳಲ್ಲಿ ಸಹ ಪಾಪಗಳನ್ನು ಮುಚ್ಚುವ ಸಾಧನವಾದ ರಕ್ತದ ಚೆಲ್ಲುವಿಕೆಯು ಮುಖ್ಯ ಕಾರ್ಯವಾಗಿತ್ತು. ದಹನಬಲಿಗಳ ಪ್ರಯೋಗವಾದ ದೇವವಶೀಕೃತವಲ್ಲ, ಪ್ರತ್ಯೇಕ ಪ್ರತ್ಯೇಕವಾದ ಅಪರಾಧಗಳನ್ನು ಮುಚ್ಚುವದರಿಂದ ಅವುಗಳ ಪರಿಹಾರವನ್ನು ಪಡೆದು ಕೊಳ್ಳುವದೇ ಪಾಪಬಲಿಗಳ ಉದ್ದಿಶ್ಯವಾಗಿತ್ತು. ವ. ೨೦. ೨೬. ೩೧. ೩೫. ಆದರೆ ಪಾಪ ಮಾಡಿದವರಲ್ಲಿ ಹೆಚ್ಚು ಕಡಿಮೆ ಇದ್ದ ಪ್ರಕಾರ ರಕ್ತ ಚೆಲ್ಲುವ ರೀತಿಯು ಬೇರೆ ಬೇರೆಯಾಗಿತ್ತು. ಹೇಗಂದರೆ ಪ್ರಧಾನ ಯಾಜಕನು ತನಗಾಗಿ ಒಂದು ಪಾಪಬಲಿಯನ್ನರ್ಪಿಸಿದರೆ (ವ. ೧ — ೧೨.), ಅವನು ಶುದ್ಧ ಸ್ಥಳವೆಂಬದರಲ್ಲಿ ನಿಂತು, ಬಲಿಯ ರಕ್ತವನ್ನು ಏಳು ಸಾರಿ ಪರಿಶುದ್ಧ ಸ್ಥಳದ ತೆರೆಯ ಕಡೆಗೆ ಚಿಮುಕಿಸಿ, ಶುದ್ಧ ಸ್ಥಳದಲ್ಲಿಯಣ ಧೂಪಪೀಠದ ಕೊಂಬುಗಳಿಗೆ ಹಚ್ಚುವನು. ವ. ೬. ೭. ಅದೇ ಪ್ರಕಾರವಾಗಿ ಸರ್ವ ಸಭೆಯು ತಿಳಿಯದೆ ಮಾಡಿದ ಪಾಪಕ್ಕಾಗಿ ಬಲಿಯರ್ಪಣೆ ಆಗುವದಾದರೆ (ವ. ೧೩ — ೨೧.), ಸಮಸ್ತ ಜನಾಂಗವು ತನ್ನ ಪ್ರತಿನಿಧಿಯೂ ಮಧ್ಯಸ್ಥನೂ ಆದ ಅಭಿಷಿಕ್ತ ಯಾಜಕನಿಗೆ ಸರಿಯಾಗಿ ಎಣಿಕೆಯಾದದರಿಂದ ಬಲಿರಕ್ತದ ಚೆಲ್ಲುವಿಕೆಯು ಶುದ್ಧ ಸ್ಥಳದಲ್ಲಿ ಆಗ ಬೇಕಾಗಿತ್ತು. ವ. ೧೭. ೧೮. ಪಾಪಬಲಿಯು ಪ್ರಧಾನ ಯಾಜಕನಿಗಾಗಿ ಉಂಟಾದರೆ, ಅವನೇ ಬಲಿಪಶುವಾಗಿ ಆಯಿಕೆಯಾದ ಹೋರಿಯ ತಲೆಯ ಮೇಲೆ ಕೈ ಇಡುವನು. ವ. ೪. ಸಭೆಯ ಪಾಪಕ್ಕಾಗಿ ಅರ್ಪಿಸಲ್ಪಡುವ ಹೋರಿಯ ತಲೆಯ ಮೇಲೆ ಸಭೆಗೆ ಪ್ರತಿಯಾಗಿ ಸಭೆಯ ಹಿರಿಯರು

ತಮ್ಮ ಕೈಗಳನ್ನಿಕ್ಕುವರು. ವ. ೧೫. ಕುಲಗಳ ಮುಖ್ಯಸ್ಥರಾದ ಶ್ರೇಷ್ಠರಲ್ಲಿ ಒಬ್ಬನು (ವ. ೨೨—೨೬.) ಇಲ್ಲವೆ ಜನರಲ್ಲಿ ಒಬ್ಬನು (ವ. ೨೭—೩೩.) ಪಾಪಬಲಿಯನ್ನರ್ಪಿಸುವಲ್ಲಿ, ಯಾಜಕನು ಶುದ್ಧ ಸ್ಥಳದಲ್ಲಿಯಲ್ಲಿ, ಅಂಗಳದಲ್ಲಿ ನಿಂತು, ಬೆರಳನ್ನು ರಕ್ತದಲ್ಲಿ ಅದ್ದಿ, ಅದನ್ನು ಹೋಮಪೀಠದ ಕೊಂಬುಗಳಿಗೆ ತಗಲಿಸಿ, ಉಳಿದ ರಕ್ತವನ್ನು ಪೀಠದ ಅಡಿಗೆ ಹೊಯಿಸುವನು. ಶ್ರೇಷ್ಠರವನ ಪಾಪಬಲಿಗೆ ಮೇಕೆಹೋತವು, ಜನರವನ ಬಲಿಗೆ ಹೆಣ್ಣುಮೇಕೆ ಇಲ್ಲವೆ ಹೆಣ್ಣುಕುರಿ ಯುಕ್ತವಾಗಿತ್ತು. ಬಲಿಯ ತಲೆಯ ಮೇಲೆ ಕೈ ಇಕ್ಕಿ ಅದನ್ನು ಕೊಯ್ಯುವ ರೀತಿಯು ಮೇಲೆ ಬರೆದ ಪ್ರಧಾನ ಯಾಜಕನ ಪಾಪಬಲಿಯ ರೀತಿಗೂ ಎಲ್ಲಾ ರಕ್ತಬಲಿಗಳ ರೀತಿಗೂ ಸರಿಯಾಗಿತ್ತು. ಆದರೆ ಪಾಪಬಲಿಗಳಿಗೆ ವಿಶೇಷವಾದ ಒಂದು ಪದ್ಧತಿ ಇತ್ತು, ಏನಂದರೆ ಪ್ರಧಾನ ಯಾಜಕನಿಗಾಗಿಯೂ ಸಮಸ್ತ ಜನಾಂಗಕ್ಕಾಗಿಯೂ ಅರ್ಪಣೆಯಾದ ಪಾಪಬಲಿಗಳಲ್ಲಿ ಬಲಿಪಶುಗಳ ಕೊಬ್ಬು ಹೋಮಪೀಠದ ಮೇಲೆ, ಚರ್ಮ ಮಾಂಸ ಮಲ ಮುಂತಾದದ್ದು ಶುದ್ಧ ಸ್ಥಳವಾದ (ವ. ೧೨.) ದಂಡಿನ ಹೊರಗಣ ಬೂದಿ ಕುಪ್ಪೆಯ ಮೇಲೆ ಸುಡಿಸಿ ಕೊಳ್ಳುವದು. ಅದು ಹ್ಯಾಗೂ ಹೊಲೆಯಾಗ ಬಾರದು. ಆದರೆ ಅದು ಪಾಪಬಲಿಯಾಗಿದ್ದು, ಪಾಪ ಹೊತ್ತು ಕೊಂಡು ಹೋದಂಥ ಪಾಪವಸ್ತು ಆಗಿರುವದರಿಂದ, ಅದನ್ನು ಪೂರ್ಣವಾಗಿ ಸುಟ್ಟು ವಿನಾಶ ಮಾಡ ಬೇಕಾಯಿತು. ಶ್ರೇಷ್ಠರಲ್ಲಿಯಾಗಲಿ ಜನರಲ್ಲಿಯಾಗಲಿ ಒಬ್ಬನು ಪಾಪಬಲಿಯರ್ಪಿಸುವಲ್ಲಿ ಬಲಿಯ ಕೊಬ್ಬು ಹೋಮಪೀಠದ ಮೇಲೆ ದಹನವಾಗುವದು, ಅದರ ಮಾಂಸವನ್ನು ಯಾಜಕರು ಶುದ್ಧ ಸ್ಥಳದಲ್ಲಿ ತಿನ್ನುವರು. ಪರಿಶುದ್ಧ ವಿಮೋಚನಸಾಧನವಾದ ರಕ್ತವು ಹೊಲೆಗಳೆಯದ ಹಾಗೆ ಅದರ ಒಂದು ತಟಕಾದರೂ ಅವರ ವಸ್ತ್ರಗಳಲ್ಲಿ ಕಾಣ ಬಾರದು. ಸ. ೬, ೨೪—೩೦. ಯಾಜಕರಿಗೆ ನೇಮಕವಾದ ಈ ಪಾಪಬಲಿಭೋಜನಕ್ಕೂ ಯಾಜಕರೊಡನೆ ಜನರು ಮಾಡುವ ಸಮಾಧಾನಬಲಿಯೌತಣಕ್ಕೂ ಬಹಳ ಹೆಚ್ಚು ಕಡಿಮೆ. ಪಾಪಬಲಿಗೆ ಆಹಾರಬಲಿಯು ಉಪಬಲಿಯಾಗಿ ಶೇರುವ ಪದ್ಧತಿ ಇಲ್ಲ. ಪಾಪಬಲಿಗಳ ಮುಖಾಂತರ ಪರಿಹಾರವಾಗತಕ್ಕ ಹಳೆ ಒಡಂಬಡಿಕೆಯ ಚಕ್ತ್ರರ ತಪ್ಪುಗಳಿಗೆ ಸರ್ವ ಬಲಿ ತಾತ್ಪರ್ಯಸಾರವೂ ಸಿದ್ಧಿಯೂ ಆದ ಕ್ರಿಸ್ತನ ಪ್ರಾಯಶ್ಚಿತ್ತಬಲಿಯ ಮುಖಾಂತರ ಅನುದಿನದ ಮಾನಸಾಂತರದಿಂದ ದಿನ ದಿನಕ್ಕೆ ನಿವಾರಣೆಯಾಗತಕ್ಕ ಹೊಸ ಒಡಂಬಡಿಕೆಯ ಚಕ್ತ್ರರ ಬಲಹೀನತ್ವದ ಪಾಪಗಳೆಂಬ ಅಕ್ರಮಗಳು ಸರಿ ಬೀಳುತ್ತವೆ.

ಅ ಪ ರಾ ಧ ಬ ಲಿ ಯು (ಋಣಬಲಿ). ಸ. ೫, ೧—೧೯. ೬, ೧—೭. ಸಮ ನೋಡು ಅಂಕೆ. ೫, ೬ ಮುಂ., ಲೇವಿ. ೧೯, ೨೦—೨೨. ಅಂಕೆ. ೬, ೯—೧೨. ಲೇವಿ. ೧೪, ೧೨. ೨೧. ಮನುಷ್ಯರಿಗೆ ಪ್ರತಿಕಾರ ಕೊಡಲಾರದ ಅಪರಾಧಗಳಿಗಾಗಿ ಪಾಪಬಲಿಯರ್ಪಣೆ ನೇಮಕವಾಗಿತ್ತಷ್ಟೆ. ಪ್ರತಿಕಾರವನ್ನು ತೀರಿಸುವದು ಸಾಧ್ಯವಾದದ್ದೂ ಅವಶ್ಯವಾದದ್ದೂ ಆಗಿದ್ದ ಪಕ್ಷದಲ್ಲಿ, ಅಪರಾಧಬಲಿಯರ್ಪಣೆಯು ವಾಡಿಕೆಯಾಗಿತ್ತು. ಈ ಬಲಿಗಳ ವಿಷಯವಾಗಿ ಬೇರೆ ಬೇರೆ ಪಂಡಿತರಿಗೆ ಬೇರೆ ಬೇರೆ ಭಾವನೆಗಳವೆ. ಮೇಲೆ ಬರೆದ ಸ್ಥಳಗಳ ತಾತ್ಪರ್ಯಗಳನ್ನು ಸರಿ ನೋಡಿ ವಿಚಾರಿಸಿದ ಬಳಿಕ, ನಮಗೆ ನಿಜವೆಂದು ತೋರುವದೇನಂದರೆ: ಅಪರಾಧಬಲಿಗಳು ಮೇಲೆ ಹೇಳಿದ ಬಲಿಗಳಿಗೆ ನಾನಾ ತರದಿಂದ ಸಂಬಂಧವಾಗಿದ್ದು ಬಹುಶಾ ಹೋಮಗಳಿಗೂ ಪಾಪಬಲಿಗಳಿಗೂ ಆಹಾರಬಲಿಗಳಿಗೂ ಬೆರಕೆಯಾಗುತ್ತವೆ. ವಿಶೇಷವಾಗಿ ಅವು ಪಾಪಬಲಿಗಳಿಗೆ ಜೋಡಾಗಿವೆ. ಪರಿಹಾರವನ್ನು ಪಡೆದು ಕೊಳ್ಳ ಬಯಸುವವನು ಮೊದಲಾಗಿ ತಾನು ಮಾಡಿದ ತಪ್ಪನ್ನು ತಾನೇ ಅರಿಕೆ ಮಾಡ ಬೇಕು. ಪರರ ವಸ್ತು ಅಪಹರಿಸಿದ ಪಕ್ಷದಲ್ಲಿಯೂ, ವಿಶೇಷವಾಗಿ ಯಾಜಕರ ಒಡವೆಯನ್ನಾಗಲಿ, ಯಾಜಕರಿಗೆ ದಾನವಾಗಿ ಕೊಡ ಹರಿಕೆ ಹೇಳಿದ್ದನ್ನಾಗಲಿ ಕಸಕೊಂಡ ಪಕ್ಷದಲ್ಲಿಯೂ, ಲೇವಿಯರ ಕಟ್ಟು ಕಟ್ಟಳೆಗಳ ಪ್ರಕಾರವಾದ ಸೂತಕಾದಿ ದೋಷಗಳು ಉಂಟಾದ ಪಕ್ಷದಲ್ಲಿಯೂ ಅಪರಾಧಬಲಿ ನೇಮಕವಾದದ್ದು. ಬೇಕೆಂದು ತಪ್ಪು ಮಾಡದೆ, ತಿಳಿಯದೆ ತಪ್ಪಿದ ಬಳಿಕ ತಪ್ಪು ತಿಳಿದು ಅರಿಕೆ ಮಾಡುವವನು ಅಪರಾಧಬಲಿ ಕೊಡ ತಕ್ಕವನು. ನೆರೆಯವನ ಒಡವೆಯನ್ನು ಯಾವ ತೆರ

ದಿಂದಾಗಲಿ ಅನ್ಯಾಯವಾಗಿ ಅಪಹರಿಸಿದ ಪಾಪಕ್ಕೆ ಒಳಗಾದವನು ಸರಿಪಾಟಿಗೆ ಹೆಚ್ಚಾಗಿ ಐದನೆ ಪಾಲು ಕೊಡೋಣವಾಯಿತು. ಅಪಹರಣ ಪಟ್ಟವನು ಸತ್ತವನಾದರೆ, ಇಲ್ಲವೆ ಕಾಣದೆ ಹೋದರೆ, ಅನ್ಯಾಯಿಯು ಯೆಹೋವನಿಗೆ, ಅಂದರೆ ಅವನ ಪ್ರತಿನಿಧಿಗಳಾದ ಯಾಜಕರಿಗೆ ದಂಡ ತೆರ ಬೇಕಾಗಿತ್ತು. ಇದಲ್ಲದೆ ನೆರೆಯವನಿಗೆ ಅಂಥ ಅನ್ಯಾಯ ಮಾಡಿದವನು ಅವನ ಯಜಮಾನನಾದ ಯೆಹೋವನಿಗೂ ಅಪರಾಧ ಬಲಿಯಾಗಿ ಹೆಣ್ಣುಕುರಿಯನ್ನಾಗಲಿ ಹೆಣ್ಣುಮೇಕೆಯನ್ನಾಗಲಿ, ಬಡವನಾಗಿದ್ದರೆ, ಬೆಳವ ಜೋಡನ್ನಾಗಲಿ ಪಾರಿವಾಳಮರಿ ಜೋಡನ್ನಾಗಲಿ, ಹೆಚ್ಚು ಬಡವನಾಗಿದ್ದರೆ, ನಯವಾದ ಹಿಟ್ಟಿನ ಏಫದ ಹತ್ತನೆ ಪಾಲು ಅರ್ಪಿಸ ಬೇಕಾಗಿತ್ತು.

ಯಾರೊಬ್ಬನು ಯೆಹೋವನಿಗೆ ಮೀಸಲಾದದ್ದನ್ನು ಅಪಹರಿಸಿ ಕೊಂಡವನಾದರೆ, ಇಲ್ಲವೆ ಒಬ್ಬನು ನೆರೆಹೊರೆಯವನು ತನ್ನ ವಶದಲ್ಲಿ ಇಟ್ಟ ಗಂಟು, ಅಥವಾ ಎಲ್ಲಿಯಾದರೂ ದೊರಕಿದ ಒಡವೆ ತನಗೆ ಸಿಕ್ಕಲಿಲ್ಲವೆಂತ ಸುಳ್ಳಾಡಿ ಇಲ್ಲವೆ ಸುಳ್ಳು ಆಣೆ ಇಟ್ಟು ಕಸಕೊಂಡನಾದರೆ, ಒಬ್ಬನು ಬಿಡುಗಡೆಯಲ್ಲದ ಗೌಡಿಯ ಕೂಡಾ ಹಾದರ ಮಾಡಿದನಾದರೆ, ಆರು ಐದನೆ ಪಾಲಷ್ಟು ದಂಡ ತೆರುವದಲ್ಲದೆ ಒಂದು ಹೋತನ್ನು ಅಪರಾಧಬಲಿಯಾಗಿ ಅರ್ಪಿಸ ಬೇಕಾಗಿತ್ತು.

ನಜೀರನೊಬ್ಬನಿಗೆ ಸೂತಕ ಬಂದದ್ದಾದರೆ, ಅವನು ಬೆಳವ ಜೋಡಿನ ಬಲಿಯನ್ನು, ಕುಷ್ಠರೋಗಿಗೆ ಯಾಜಕನ ಕೈಯಿಂದ ಶುದ್ಧೀಕರಣವುಂಟಾದರೆ, ಅವನು ಒಂದು ಕುರಿಮರಿಯ ಅಪರಾಧಬಲಿಯನ್ನು, ಅಥವಾ ಎಣ್ಣೆ ಬೆರಸಿದ ನಯವಾದ ಹಿಟ್ಟಿನ ಹತ್ತನೆ ಪಾಲನ್ನು ಆಹಾರಬಲಿಯಾಗಿ ಒಂದು ಎಣ್ಣೇಲೋಗೆಂಬದರ ಕೂಡಾ ಅರ್ಪಿಸ ಬೇಕಾಗಿತ್ತು.

ಬಲಿಯರ್ಪಣೆಗಳಲ್ಲಿ ಯಾಜಕರಿಗೆ ನೇಮಕವಾದ ಕೆಲಸಗಳೂ ಆದಾಯಗಳೂ. ಸ. ೬, ೮—೭, ೩೬.

ಅನುದಿನದ ಹೋಮ (೬, ೮ — ೧೩), ಆಹಾರಬಲಿ (೧೪ — ೧೮), ಪ್ರತಿಷ್ಠಾಬಲಿ (೧೯ — ೨೩), ಪಾಪಬಲಿ (೨೪ — ೩೦), ಅಪರಾಧಬಲಿ (೭, ೧೦) ಇವುಗಳ ವಿಷಯವಾಗಿ ನೇಮಕವಾದದ್ದು. ಸಮಾಧಾನಬಲಿಯ ಪದ್ಧತಿ (೧೧ — ೨೧).

ರಕ್ತವನ್ನೂ ಕರುಳುಗಳ ಕೊಬ್ಬನ್ನೂ ಉಂಬೋಣ ನಿಷಿದ್ಧವಾದದ್ದು. ಯಾಕಂದರೆ ಕೊಬ್ಬೆಲ್ಲಾ ಕರ್ತನಿಗೆ ಪಾಲಾಗಿತ್ತು. ಹಾಗೂ ರಕ್ತವು ವಿಮೋಚನಕರಣವಾದದರಿಂದಲೂ (ಸ. ೮, ೩೦.) ಯಾಜಕಪ್ರತಿಷ್ಠೋಪಾಯವಾದದರಿಂದಲೂ ಅದು ಪರಿಶುದ್ಧವಾಗಿಯೂ ಆಹಾರಕ್ಕೆ ಅಯುಕ್ತವಾಗಿಯೂ ಇತ್ತು. (೨೨ — ೨೭). ಆರೋನನಿಗೂ ಅವನ ಗಂಡುಮಕ್ಕಳಿಗೂ ಸಮಾಧಾನಬಲಿಯರ್ಪಣೆಯಲ್ಲಿ ನೇಮಕವಾದ ಲಾಭಾಧಿಕಾರವು (೨೮ — ೩೬).

ಸ. ೮.

ಹೊರ. ೨೮ — ೨೯ರಲ್ಲಿ ದೇವರು ಕೊಟ್ಟ ಅಪ್ಪಣೆ ಈಗ ನೆರವೇರುವದು. ಆರೋನನೂ ಅವನ ಕುಮಾರರೂ ಮೈ ತೊಳೆದು, ಉಡಿಕೆ ಉಟ್ಟು ಕೊಂಡು, ಮೈಗೆ ಎಣ್ಣೆ ಹಚ್ಚಿ, ಪಾಪಬಲಿಯನ್ನೂ ಹೋಮವನ್ನೂ ಕರಪೂರಣ ಬಲಿಯನ್ನೂ ಅರ್ಪಿಸಿ, ಯಾಜಕಪ್ರತಿಷ್ಠೆಯನ್ನು ಹೊಂದುತ್ತಾರೆ. ಅವರು ಕರಪೂರಣ ಬಲಿಯನ್ನು ಏಳು ದಿವಸದ ವರೆಗೂ ಅರ್ಪಿಸುತ್ತಾ ಬಂದು, ಸಾಯದ ಹಾಗೆ ಯೆಹೋವನ ಕಾಪಿನ ಪದ್ಧತಿ ಕೈಕೊಳ್ಳ ಬೇಕಾಗಿತ್ತು. ಇಲ್ಲಿ ಕರಪೂರಣ ಎಂದು ಹೇಳುವದಕ್ಕೆ, ವೇದಪುಸ್ತಕದ ಕರ್ನಾಟಕ ಭಾಷಾಂತರದಲ್ಲಿ ಪ್ರತಿಷ್ಠೆ ಎಂಬ ಶಬ್ದವು ಪ್ರಯೋಗಿಸಿ ಅದೆ. ಈ ಪ್ರತಿಷ್ಠೆಗೋಸ್ಕರ ಪ್ರಧಾನ ಯಾಜಕನ ಕರ

ಗಳನ್ನು ಅಂದರೆ ಕೈಗಳನ್ನು ತುಂಬಿಸುವ ಪದ್ಧತಿ ಇರುವದರಿಂದಲೂ ತುಂಬಿಕೆ ಎಂಬ ಅರ್ಥವುಳ್ಳ ಶಬ್ದವು ಮೂಲಭಾಷೆಯಲ್ಲಿ ಇರುವದರಿಂದಲೂ ಕರಪೂರಣ ಎಂಬ ಶಬ್ದವು ಯುಕ್ತವಾಗಿದೆ. ಪ್ರತಿಷ್ಠೆ ಮಾಡು ಎಂಬುವದಕ್ಕೆ ಮೂಲಭಾಷೆಯಲ್ಲಿ ಕೈಗಳನ್ನು ತುಂಬಿಸುವದು ಎಂದು ಹೇಳಿಯದೆ.

ಆರೋನನು ಅರ್ಪಿಸಿದ ಮೊದಲನೆ ಬಲಿಯು ಯೆಹೋವನ ಬಳಿಯಿಂದ ಬಿದ್ದ ಬೆಂಕಿಯಿಂದ ಸುಟ್ಟು ಹೋದದ್ದು. ಸಂಧಿ. ೯.

೧. ಎಂಟನೆ ದಿವಸದಲ್ಲಿ೧) ಆದದ್ದೇನಂದರೆ: ಮೋಶೆ ಆರೋನನನ್ನೂ ಅವನ ಗಂಡುಮಕ್ಕಳನ್ನೂ ಇಸ್ರಯೇಲನ ಹಿರಿಯರನ್ನೂ ಕರದು — — ೨. ಆರೋನನಿಗೆ ಹೇಳಿದ್ದು: ಬಲಿಪೀಠಕ್ಕೆ ಐತಂದು೨), ನಿನ್ನ ಹೋಮವನ್ನು ಅರ್ಪಿಸಿ, ನಿನಗಾಗಿಯೂ ಜನಾಂಗಕ್ಕಾಗಿಯೂ ವಿಮೋಚನ ಮಾಡಿ, ಬಳಿಕ ಜನಾಂಗದ ಬಲಿಯನ್ನು ಅರ್ಪಿಸಿ, ಅವರಿಗಾಗಿ ಯೆಹೋವನು ಕೊಟ್ಟ ಅಪ್ಪಣೆಯ ಮೇರೆಗೆ ವಿಮೋಚನ ಮಾಡು.— — ೨೨. ಆಗಲಾರೋನನು ತನ್ನ ಕೈಗಳನ್ನು ಜನಾಂಗದ ಕಡೆಗೆ ಎತ್ತಿ೩), ಅವರನ್ನಾಶೀರ್ವದಿಸಿ, ಪಾಪಬಲಿಯನ್ನೂ ಹೋಮವನ್ನೂ ಸಮಾಧಾನಬಲಿಯನ್ನೂ೪) ಮಾಡಿದ ಬಳಿಕ ಇಳಿದು೫) ಬಂದನು. ೨೩. — — ಆಗ ಯೆಹೋವನ ತೇಜವು ಎಲ್ಲಾ ಜನಾಂಗಕ್ಕೆದುರಾಗಿ ಕಾಣಿಸಿ, ೨೪. ಬೆಂಕಿ ಯೆಹೋವನ ಬಳಿಯಿಂದ ಹೊರಟು ಬಲಿಪೀಠದ ಮೇಲಣ ಹೋಮವನ್ನೂ ಕೊಬ್ಬನ್ನೂ ತಿಂದು ಬಿಟ್ಟಿತು೬). ಜನಾಂಗವೆಲ್ಲಾ ನೋಡಲು ಆರ್ಭಟಿಸಿ ಮೋರೆ ಕೆಳಗಾಗಿ ಬಿದ್ದರು.

೧. ಸ. ೮, ೩೩ರಲ್ಲಿ ಬರದ ಪ್ರತಿಷ್ಠಾಕಾಲದ ಏಳು ದಿವಸ ಕಳೆದ ಮೇಲೆ.

೨. ಪ್ರಧಾನ ಯಾಜಕನು ಮೊದಲನೆ ಪಾಪಬಲಿಯಿಂದ ತನಗಾಗಿಯೂ ಜನಾಂಗಕ್ಕಾಗಿಯೂ ಒಟ್ಟಾಗಿ ಪಾಪವಿಮೋಚನ ಮಾಡ ಬೇಕಾದದ್ದರಿಂದ ಕಾಣ ಬರುವದೇನಂದರೆ: ಪ್ರಧಾನ ಯಾಜಕನ ಪಾಪಗಳಿಂದ ಜನಾಂಗಕ್ಕೂ ದೋಷ ಹತ್ತಿತು. ಬಳಿಕ ಜನಾಂಗದ ಪಾಪಗಳಿಗೆ ಎರಡನೆ ಪಾಪಬಲಿಯಿಂದ ಪ್ರತ್ಯೇಕವಾದ ವಿಮೋಚನೆಯುಂಟಾಗ ಬೇಕಾಯಿತು.

೩. ಆಶೀರ್ವಾದ ಕೊಡುವವನು ಆಶೀರ್ವಾದ ತಕ್ಕೊಳ್ಳುವವನ ತಲೆಯ ಮೇಲೆ ಕೈ ಇಡುವದು ಪದ್ಧತಿಯಾಗಿತ್ತು. ಜನಸಮೂಹವನ್ನಾಶೀರ್ವದಿಸುವವನು ಒಬ್ಬೊಬ್ಬನ ತಲೆಯ ಮೇಲೆ ಕೈ ಇಡಲಾರದೆ ಎಲ್ಲರ ಕಡೆಗೆ ಕೈ ಎತ್ತಿ ಆಶೀರ್ವಾದವನ್ನುಚ್ಚರಿಸುವನಷ್ಟೆ.

೪. ಈ ಮಹಾ ಆಚರಣೆಯಲ್ಲಿ ಎಲ್ಲಾ ವಿಧದ ಬಲಿಗಳು ಪ್ರಯೋಗವಾದವು. ಮೊದಲನೆಯಾದ ಪಾಪಬಲಿಯು ಕರ್ತನ ಸನ್ನಿಧಾನಪ್ರವೇಶಕ್ಕೆ ವಿಘ್ನವಾಗಿರುವದನ್ನೆಲ್ಲಾ ನಿವಾರಿಸುವಂಥಾದ್ದು. ಇದಕ್ಕೆ ಅಪರಾಧಬಲಿ ಸಂಬಂಧವಾದದ್ದು. ಎರಡನೆಯಾದ ಹೋಮವು ಕರ್ತನಿಗಾದ ಪೂರ್ಣವಶೀಕರಣದ ಅಭಿಪ್ರಾಯವುಳ್ಳದ್ದು. ಮೂರನೆಯಾದ ಸಮಾಧಾನಬಲಿಯು ಈ ವೇಳೆಯಲ್ಲಿ ದೇವರಿಂದ ಬಂದ ಉಪಕಾರಗಳಿಗಾಗಿ ಅಲ್ಲ, ಬೇರೆ ಪ್ರತಿಷ್ಠಾಚರಣೆಗಳಲ್ಲಿ ಆದಂತೆ (ಹೊರ. ೨೪, ೫. ೨ ಸಮು. ೬, ೧೮. ೧ ಅರಸು. ೮, ೬೩.) ಭಕ್ತರು ದೇವರಿಂದ ಬೇಡುವಂಥ ಹಾರೈಸುವಂಥ ವರಗಳಿಗಾಗಿ ಅರ್ಪಿತವಾದದ್ದು. ಇವೆರಡಕ್ಕೆ ದೇವರಿಗೆ ಹಿತವಾದ ನಡತೆ ಎಂಬ ಅರ್ಪಣಾರ್ಥವುಳ್ಳ ನೈವೇದ್ಯವು ಕೂಡಿತು.

೫. ಅಂದರೆ ಬಲಿಪೀಠದ ಮೆಟ್ಟುಗಳಿಂದ ಇಳಿದು ಬಂದನು.

೬. ಯೆಹೋವನ ತೇಜವು ದಿವದಿಂದಾಗಲಿ, ಅತಿಶಯ ಪ್ರಕಾಶವಾಗಿ ಸಾಕ್ಷೀಗುಡಾರದ ಮೇಲೆ ಉಳುಕೊಳ್ಳುತ್ತಿರುವ ಮೇಘಸ್ತಂಭದಿಂದಾಗಲಿ, (ಇಬ್ರಿಯ ಮೂಲಗ್ರಂಥ ನೋಡಿದರೆ, ಹೀಗಾಯಿತೆಂದು ತೋರುತ್ತದೆ) ಬಂದ ಬೆಂಕಿಯ ಮೂಲವಾಗಿ ಕಾಣಿಸಿತೆಂತ, ನೆನಸ ಸಹಜವಾದದ್ದು. ಯೆಹೋವನ ಬಳಿಯಿಂದ ಬಂದ ಬೆಂಕಿಯು ಬಲಿಯನ್ನು ಸುಟ್ಟು ಬಿಟ್ಟದರಿಂದ, ದೇವರು, ತಾನು ಆಬೆಲನ ಬಲಿಗೆ ಮೆಚ್ಚಿದಂತೆ ಈ ಬಲಿಗೂ ಮೆಚ್ಚಿದನೆಂಬದನ್ನು ಸೂಚಿಸಿದ್ದಲ್ಲದೆ, ಅಂದಿನಿಂದ ಇಸ್ರಾಯೇಲನವರಲ್ಲಿ ಸ್ಥಾಪಿತವಾದ ನಾನಾ ತರದ ಬಲಿಯರ್ಪಣಾ ನೇಮನಿಷ್ಠೆಗಳೆಲ್ಲಾ ತನ್ನ ಚಿತ್ತಕ್ಕೂ ಅಪ್ಪಣೆಗೂ ಸಮರ್ಪಕವಾಗಿವೆಂಬದಕ್ಕೆ ದೃಷ್ಟಾಂತ ಕೊಟ್ಟನು. ಆದದರಿಂದ ದೇವರಿಂದ ಬಂದ ಈ ಬೆಂಕಿಯನ್ನು ಎಡೆಬಿಡದೆ ಕಾಪಾಡಿ, ಅದು ಆರದ ಹಾಗೆ ಜೋಕೆಯಾಗಿರುವದು ಲೇವಿಯವರಿಗೆ ನೇಮಕವಾಯಿತು. ಯೆಹೂದ್ಯರ ಇತಿಹಾಸದ ಪ್ರಕಾರ ಈ ಬೆಂಕಿಯು, ಸಲೊಮೋನನ ಕಾಲದ ವರೆಗೂ ಉಳಿದ ಬಳಿಕ, ಸಲೊಮೋನನು ದೇವಾಲಯವನ್ನು ಪ್ರತಿಷ್ಠೆ ಮಾಡಿದ ದಿವಸದಲ್ಲಿ ಹೊಸ್ತಾಗಿ ಹೊತ್ತಿ (೨ ದಿನಚ. ೭, ೧), ಅರಸನಾದ ಮನಸ್ಸೆಯ ಕಾಲದ ಮಟ್ಟಿಗೂ (೨ ದಿನಚ. ೩೩.) ಉರಿಯುತ್ತಾ ಬಂತು.

ಹೊರಗಣ ಬೆಂಕಿ ಬಳಗೆ ತಂದ ನಾದಬ ಅಬೀಹು ಎಂಬವರಿಗೆ ಬಂದ ದಂಡವು. ಯಾಜಕರ ನೇಮನಿಷ್ಠೆಗಳು.

ಹೊರಗಣ ಬೆಂಕಿಯು. ಸ. ೧೦, ೧—೭.

ವ. ೧. ಮತ್ತು ನಾದಬ ಅಬೀಹು ಎಂಬ ಆರೋನನ ಮಕ್ಕಳು ಒಬ್ಬೊಬ್ಬನು
ತನ್ನ ಧೂಪಾರ್ತಿ ತಕ್ಕೊಂಡು, ಅವುಗಳಲ್ಲಿ ಬೆಂಕಿ ಮಡಗಿ, ಅದರ ಮೇಲೆ ಧೂಪವಿ
ಟ್ಟು, ಯೆಹೋವನ ಮುಂದೆ ಅವನವರಿಗೆ ಬೆಸಸದ ಬೇರೆ ಬೆಂಕಿಯನ್ನೊತ್ತರಿಸಿದರು.
೨. ಆಗ ಯೆಹೋವನ ಬಳಿಯಿಂದ ಬೆಂಕಿ ಹೊರಟು ಅವರನ್ನು ತಿಂದು ಬಿಡಲು,
ಅವರು ಯೆಹೋವನ ಬಳಿಯಲ್ಲಿ ಸತ್ತು ಹೋದರು[೧]. ಮತ್ತು ಮೋಶೆ ಆರೋನನಿ
ಗೆ ಹೇಳಿದ್ದು: ಯೆಹೋವನು ನುಡಿದದ್ದೇನಂದರೆ[೨]: ನನ್ನ ಹತ್ತರ ಬರುವವರಲ್ಲಿ ಪ
ರಿಶುದ್ಧನಾಗುತ್ತೇನೆ. ಎಲ್ಲಾ ಜನಾಂಗದ ಮುಂದೆ ಮಹಿಮೆ ಪಡುತ್ತೇನೆ[೩]. ಆರೋ
ನನು ಮೌನವಾದನು[೪].

೧. ಪರಿಶುದ್ಧವಾದ ಬಲಿಯರ್ಪಣಾಚರಣೆಗಳಲ್ಲಿ ಅವಶ್ಯವಾದ ಬೆಂಕಿಯನ್ನು ಹೋಮಪೀಠದಿಂದಲೇ ತಕ್ಕೊಳ್ಳ ಬೇಕೆಂಬ ಅಪ್ಪಣೆ ಸ. ೬, ೧೨ರಲ್ಲಿ ತೋರುತ್ತದೆ. ಮಹಾ ವಿಮೋಚನೆಯ ಹಬ್ಬದಲ್ಲಿ ಅರ್ಪಿಸ ಬೇಕಾದ ಧೂಪವನ್ನು ಬಲಿಪೀಠದ ಬೆಂಕಿಯಿಂದ ಹೊತ್ತಿಸ ಬೇಕೆಂದು, ಸ. ೧೬, ೧೨ರಲ್ಲಿ ವಿಶೇಷವಾಗಿ ನೇಮಕವಾಯಿತು. ಆರೋನನ ಮಕ್ಕಳಿಬ್ಬರು ಗರ್ವಾನ್ವಿತ ಭಕ್ತ್ಯಾಸಕ್ತಿಯಿಂದ ತಾವೇ ಹವಣಿಸಿದ ಬೆಂಕಿಯಿಂದ ಧೂಪವರ್ಪಿಸಿದ ಕಾರಣ, ಯೆಹೋವನು ಅವರಿಗೆ ಪ್ರಾಣಶಿಕ್ಷೇ ಕೊಟ್ಟು, ತನ್ನ ಮಹಿಮೆಯನ್ನು ಪ್ರಕಟ ಮಾಡಿದನು. ಯಾಜಕರು ಉಳಿದ ಜನರಿಗಿಂತ ಅಧಿಕ ವಿಧೇಯರಾಗಿರುವ ಹಂಗಿನಲ್ಲಿದ್ದರಿಂದ, ದೇವರ ಅಪ್ಪಣೇ ಮೀರಿದ ಅಪರಾಧವು ಅವರಲ್ಲಿ ಹೆಚ್ಚಾಗಿದ್ದ ಕಾರಣ ಅವರ ಶಿಕ್ಷೆಯೂ ಅಧಿಕ ಭಾರವಾದದ್ದು ಯುಕ್ತವೇ ಸರಿ. ದೇವರ ಕೃಪಾಮಯ ಸಾಮೀಪ್ಯದ ಗುರ್ತಾದ ಬೆಂಕಿಯೇ ಅವಿಧೇಯರಿಗೆ ನಾಶನಕರವಾಯಿತು. ಒಬ್ಬರಿಗೆ ಜೀವಕರವಾದ ಸುವಾಸನೆಯಾಗಿರುವ ಸುವಾರ್ತೆಯೂ ಮತ್ತೊಬ್ಬರಿಗೆ ಮೃತಿವಾಸನೆಯಾಗಿರುವದು. ೨ ಕೊರಿ. ೨, ೧೬. ಯೆಹೋವನ ಬಳಿಯಿಂದ ಬಂದ ಬೆಂಕಿ

ಶಿಡ್ಲಿನಂತೆ ಅವರನ್ನು ಹೊಡೆದದರಿಂದ, ಅವರ ವಸ್ತ್ರಗಳು ಸುಟ್ಟು ಹೋಗಲಿಲ್ಲ. ವ. ೫.

೨. ಭಯಂಕರವಾದ ಈ ಶಿಕ್ಷೆಯ ನೋಟದಿಂದ ಮೋಶೆಗೆ ಯೆಹೋವನು ಗಿರಿಯಲ್ಲಿ ಹೇಳಿದ ವಿಶೇಷೋಕ್ತಿಯ ನೆನಪು ಬರುತ್ತದೆ. ಅದರ ಅಭಿಪ್ರಾಯವು ಹೊರ. ೧೯, ೨೨; ೨೯, ೪೩ರಲ್ಲಿ ಕಾಣುವದು.

೩. ಆದದ್ದನ್ನು ಕಂಡವರೆಲ್ಲರು ದೇವರ ಪರಿಶುದ್ಧತ್ವಕ್ಕೆ ಮನಃಪೂರ್ವಕವಾಗಿ ಭಯ ಪಟ್ಟು, ಯಾರೂ ದೇವರನ್ನು ಉದಾಸೀನ ಮಾಡ ಬಾರದೆಂಬದನ್ನು ಎಂದಿಗೂ ಮರೆತು ಬಿಡಲಾರರಲ್ಲ!

೪. ಆರೋನನು ಆದದ್ದು ದೇವರಿಂದುಂಟಾಯಿತೆಂದು ತಿಳಿದು ಕೊಂಡು, ಮಕ್ಕಳ ಮರಣಕ್ಕೆ ವಾಡಿಕೆ ಇದ್ದಂತೆ ಗೋಳಾಡದೆ, ಕೀರ್ತ. ೪೬, ೧೧ರಲ್ಲಿ ಬರೆದ ಮಾತಿನ ಪ್ರಕಾರ, ದೇವರನ್ನು ಸನ್ಮಾನಿಸುತ್ತಾನೆ. ಈ ಚರಿತ್ರಕ್ಕೆ ೧ ದಿನಚ. ೧೪, ೧೬ರಲ್ಲೂ ಅಪೊ. ಕ್ರಿ. ೫ರಲ್ಲಿಯೂ ಬರದದ್ದನ್ನು ಸರಿ ನೋಡ ತಕ್ಕದ್ದು.

ವ. ೪—೭. ದೇವರು ಕೊಟ್ಟ ಶಿಕ್ಷೆಯು ನ್ಯಾಯವಾದದ್ದೆಂದು ಒಪ್ಪಿ ಕೊಂಡು, ದೇವರಿಗೆ ಅವಮಾನ ಮಾಡಿದವರು ನಾಶನವಾದದ್ದಕ್ಕೆ ಮೆಚ್ಚಿ, ನೆಂಟರಿಷ್ಟರ ಮಮತೆ ಮರತು ಬಿಟ್ಟದ್ದನ್ನು ತೋರಿಸುವ ಬಗ್ಗೆ, ಆರೋನನೂ ಸತ್ತವರ ಶವಗಳನ್ನು ಪರಿಶುದ್ಧ ಸ್ಥಳದೊಳಗಿಂದ ಕೊಂಡು ಹೋಗುತ್ತಿರುವ ಬಾಂಧವರೂ ಯಾವ ರೀತಿಯಿಂದಲಾದರೂ ಶೋಕವನ್ನು ಗೈಯದೆ ಇರ ಬೇಕಾಯಿತು. ನೆಂಟರಿಷ್ಟರಲ್ಲದ ಬೇರೆ ಇಸ್ರಯೇಲನವರಿಗೆ ಮಾತ್ರ ಕರ್ತನು ಮಾಡಿದ ಹರಿಕೆಗೆ ಶೋಕವನ್ನು ಗೈಯುವದು ಅನುಚಿತವಾಗಿರಲಿಲ್ಲ.

ಯಾಜಕರಿಗೆ ಉಂಟಾದ ದ್ರಾಕ್ಷಾರಸಪಾನದ ವಿಷಯವಾದ ಕಟ್ಟಳೆ. ವ. ೮—೧೧.

ವ. ೮. ಮತ್ತು ಯೆಹೋವನು ಆರೋನನಿಗೆ ನುಡಿದದ್ದೇನಂದರೆ: ೯. ನೀನೂ ನಿನ್ನೊಡನೆಯ ನಿನ್ನ ಮಕ್ಕಳೂ ಸಭೆಯ ಗುಡಾರಕ್ಕೆ ಸೇರುವಲ್ಲಿ, ನೀವು ಸಾಯದಂತೆ, ದ್ರಾಕ್ಷಾರಸವನ್ನೂ ಮದ್ಯವನ್ನೂ[೧] ಕುಡಿಯ ಬಾರದೆಂಬದು ನಿಮ್ಮ ಸಂತತಿಗಳಿಗೆ ನಿತ್ಯವಾದ ಕಟ್ಟು[೨]. ೧೦. ಪವಿತ್ರ ಹೊಲೆ ಎಂಬ ಭೇದವನ್ನೂ, ಮಲಿನ ನಿರ್ಮಲವೆಂಬ ಭೇದವನ್ನೂ, ನೀವು ತಿಳಿಯ ಬೇಕಲ್ಲವೋ? ೧೧. ಯೆಹೋವನು ಮೋಶೆಯ ಮುಖಾಂತರ ನಿಮಗೆ ನುಡಿದ ಎಲ್ಲಾ ಕಟ್ಟಳೆಗಳನ್ನು ಇಸ್ರಯೇಲನ ಮಕ್ಕಳಿಗೆ ಬೋಧಿಸ ಬೇಕಲ್ಲವೋ?

೧. ಜವೆಗೋಧಿ, ಜೇನು, ಖರ್ಜೂರ ಮುಂತಾದದರಿಂದ ಮಾಡಿದ ಅಮಲುರಸ.

೨. ಹಿಂದಿನ ಪ್ರಕರಣದಲ್ಲಿ ತನ್ನ ಉದ್ಯೋಗದ ಕೆಲಸವನ್ನು ಮನಃಪೂರ್ವಕವಾಗಿ ಮಾಡುವದಕ್ಕೆ ಶೋಕದಿಂದ ಅಡ್ಡಿಯಾಗ ಬಾರದೆಂಬದು ತೋರಿದ ಪ್ರಕಾರ, ಇದರಲ್ಲಿ ಯಾಜಕನು ಉದ್ಯೋಗ ನಡಿಸುವ ಯಾವ ಕಾಲದಲ್ಲ್ಯಾದರೂ, ತಾನು ದೇವರ ಸೇವಕನೆಂತ ಮರತು ಬಿಡದ ಹಾಗೆ, ಮದ್ಯಪಾನ ಮಾಡ ಬಾರದೆಂಬ ಆಜ್ಞೆ ಸೇರುವದು.

ವ. ೧೨—೨೦. ಯಾಜಕರಿಗೆ ಉಂಟಾದ ಬೇರೆ ಬೇರೆ ಕಟ್ಟಳೆಗಳು.

ಸೂತಕಾದಿ ವಿಷಯವಾದ ಕಟ್ಟಳೆಗಳು. ಸ. ೧೧—ಸ. ೧೫.

ಈ ಕಟ್ಟಳೆಗಳ ಉದ್ದೇಶವೇನಂದರೆ: ತಾವು ಪಾಪಿಗಳಾಗಿದ್ದು, ತಮ್ಮನ್ನು ಶುದ್ಧ ಮಾಡಿ ಕೊಳ್ಳುವ ಹಂಗಿನಲ್ಲಿ ಇರುವದನ್ನು ಇಸ್ರಯೇಲನವರಿಗೆ ತಿರಿಗಿ ತಿರಿಗಿ ನೆನಪು ಮಾಡುವಂಥಾದ್ದು. ಹೊರಗಣದು ಒಳಗಣದರ ಗುರ್ತೂ ಕನ್ನಡಿಯೂ ಆಗಿದೆಂಬುವದು ಲೋಕರೂಢಿಯಲ್ಲವೋ? ೧೧ನೆ ಸಂಧಿಯಲ್ಲಿ ಶುದ್ಧಾಶು

ದ್ಧ ಪಶುಗಳ ಸಂಗತಿ ಹೇಳಿಯದೆ. ಶುದ್ಧ ಪಶುಗಳೆಂದೂ ಅಶುದ್ಧ ಪಶುಗಳೆಂದೂ ಸ್ವಾಭಾವಿಕವಾಗಿರದೆ, ಎಲ್ಲಾದಕ್ಕೆ ಒಡೆಯನಾಗಿ ಇಟ್ಟಿರುವ ಮನುಷ್ಯನು ಪಾಪಿಯಾಗಿ ಹೋದ್ದರಿಂದ, ಮನುಷ್ಯನ ಪಾಪತ್ವಕ್ಕೂ ಶುದ್ಧೀಕರಣಕ್ಕೂ ಪ್ರತಿಬಿಂಬವಾಗಿರುತ್ತದೆ. ಈ ಕಾರಣದಿಂದಲೆ ಮನುಷ್ಯನು ಕೆಲವು ತರದ ಪಶುಮೃಗಗಳಿಗೆ ಸ್ವಾಭಾವಿಕವಾಗಿ ಹೇಸುತ್ತಾನೆ.

೧೨ನೆ ೧೫ನೆ ಸಂಧಿಗಳಲ್ಲಿ ಸಂಗಮ ಜನನ ಮುಂತಾದವುಗಳ ವಿಷಯ ಬರುತ್ತದೆ. ಈ ಸಂಗತಿಗಳು ತಾವೆ ಪಾಪಮಯವಾಗಿರದಿದ್ದರೂ, ಪಾಪವು ಈ ಸ್ಥಳಗಳಲ್ಲಿ ಮುಖ್ಯ ಪ್ರಬಲತೆ ತೋರಿಸುವದರಿಂದ, ಈ ಅವಸ್ಥೆಗಳು ಸಹಾ ಶುದ್ಧಾಶುದ್ಧವೆಂದು ವಿಧಿಸಿ ಅದೆ. ಆದ್ದರಿಂದ ದೇವರ ಜನಾಂಗವು ಅದಕ್ಕೆ ಶೇರಿದ ಕಾರ್ಯಗಳನ್ನೆಲ್ಲಾ ಲಜ್ಜೆಯಿಂದಲೂ ಪಾಪಭಯದಿಂದಲೂ ಪ್ರಯೋಗಿಸ ತಕ್ಕದ್ದು, ಅಥವಾ ಬಿಡ ತಕ್ಕದ್ದು.

೧೩ನೆ ೧೪ನೆ ಸಂಧಿಗಳಲ್ಲಿ ಬರುವ ಕುಷ್ಠರೋಗವು ವಿಶೇಷವಾಗಿ ಪಾಪದ ಪ್ರತಿಬಿಂಬವಾಗಿದೆ.

ಮಹಾ ವಿಮೋಚನೆಯ ಹಬ್ಬವು. ಸಂಧಿ. ೧೬.

(ಲೇವಿಕ. ೨೩, ೨೬–೩೨. ಅಂಕೆ. ೨೯, ೭–೧೧. ಇದಕ್ಕೆ ಸರಿ ನೋಡ ಬೇಕು.)

ಯೆಹೋವನ ಪರಿಶುದ್ಧತ್ವವೂ ಅವನ ಅಪ್ಪಣೆಯಿಂದ ಸ್ಥಾಪಿತವಾದ ಬಲಿಯರ್ಪಣೆಯ ಪದ್ಧತಿಯ ಪರಿಶುದ್ಧತ್ವವೂ ಮಹಾತಿಶಯವಾದವುಗಳೆಂದು ತೋರಿಸಿ, ಇಸ್ರಯೇಲನ ಜನಾಂಗವನ್ನು ಕಳವಳಿಸ ತಕ್ಕ ದೃಷ್ಟಾಂತವಾದ ಆರೋನನ ಮಕ್ಕಳಿಬ್ಬರ ಮರಣದ ಬಳಿಕ (ವ. ೧) ಯೆಹೋವನು, ಸಾಕ್ಷೀಗುಡಾರ ಪ್ರವೇಶದ ಪಾಡಿಕೆಯನ್ನು ನಿಲ್ಲಿಸಿ, ಪ್ರಧಾನ ಯಾಜಕನು ಸಹಾ ವರ್ಷಂಪ್ರತಿಯಲ್ಲಿ ಒಮ್ಮೆಯೇ ಅದರಲ್ಲಿ ಶೇರ ಬೇಕೆಂತಲೂ, ಬೇರೆ ಸಮಯದಲ್ಲಿ ಶೇರಿದರೆ ಸಾಯ ಬೇಕೆಂತಲೂ, ಅಪ್ಪಣೆ ಕೊಟ್ಟನು. ವ. ೨. ಕರ್ತನು ಮಹಾ ವಿಮೋಚನೆಯ ಹಬ್ಬಕ್ಕೆ ನೇಮಕ ಮಾಡಿದ ತಿಸ್ರಿ ತಿಂಗಳಿನ ಹತ್ತನೆ ದಿವಸದಲ್ಲಿ ಈ ಪ್ರವೇಶವು ವರ್ಷ ವರ್ಷಕ್ಕೆ ಆಗ ಬೇಕು. ವ. ೨೯ ಇತ್ಯಾದಿ. ಈ ಆಚರಣೆಯೂ ಎಲ್ಲಾ ವಿಮೋಚನೆಯ ಕ್ರಿಯೆಗಳಲ್ಲಿಯೂ ಶುದ್ಧೀಕರಣಗಳಲ್ಲಿಯೂ ಅಗ್ರವೂ ಎಲ್ಲಾ ಬಲಿಯರ್ಪಣೆಗಳ ಸಿದ್ಧಿಯೂ ಆದ್ದರಿಂದ ಈ ದಿವಸವು ವರ್ಷದ ಹಬ್ಬಗಳಲ್ಲೆಲ್ಲಾ ಪ್ರಾಮುಖ್ಯವಾದದ್ದಾಗಿತ್ತು. ಸಮಸ್ತ ಜನಾಂಗದ ಸಂಪೂರ್ಣ ಪಾಪಕ್ಕೆ ಇದರಲ್ಲಿ ವಿಮೋಚನೆಯಾಗುತ್ತಿತ್ತು. ಪಾಪವಂತ ಮನುಷ್ಯರಾದ ಯಾಜಕರು ಮೆಟ್ಟಿ ಮುಟ್ಟಿ ಹೊಲೆಗಲಸಿದ ಪರಿಶುದ್ಧ ಸ್ಥಳಗಳಿಗೂ ಸಾಮಗ್ರಿಗಳಿಗೂ ಶುದ್ಧೀಕರಣವು ಅವಶ್ಯವಾಗಿತ್ತು. ಪರಜಾತಿಯವರು ಕೂಡಿದ ಇಸ್ರಯೇಲನವರ ಜನಾಂಗವೆಲ್ಲಾ ಸಬ್ಬತುಗಳ ಸಬ್ಬತೆಂಬ ಆ ದಿವಸದಲ್ಲಿ ಕೈಕೆಲಸವನ್ನೆಲ್ಲಾ ಬಿಟ್ಟು ಬಿಟ್ಟು, ಅನಶನವಾಗಿದ್ದು, ದೇವರ ಮುಂದೆ ಪಶ್ಚಾತ್ತಾಪ ಪಡುತ್ತಾ ತನ್ನನ್ನು ತಾನು ತಗ್ಗಿಸಿ ಕೊಳ್ಳುತ್ತಾ ಬಾಗುಳಾಗಿರುವದು. ಆ ದಿವಸದಲ್ಲಿ ಸಾಕ್ಷೀಗುಡಾರದಲ್ಲಿ ಆಗ ಬೇಕಾದ ಕ್ರಿಯೆಗಳನ್ನೆಲ್ಲಾ ಒಬ್ಬನೇ ಮಾಡ ತಕ್ಕ (ವ. ೧೭) ಪ್ರಧಾನ ಯಾಜಕನು ಮೈ ತೊಳದು ಕೊಂಡವನಾಗಿ, ಪರಿಶುದ್ಧ ವಸ್ತ್ರಗಳೆಂಬ ನಾರಿನ ಬಟ್ಟೆಗಳನ್ನು ಶುದ್ಧ ಪರಿಶುದ್ಧ ಸ್ಥಳಗಳಲ್ಲಿ ಉದ್ಯೋಗದ ವೃತ್ತಿ ನಡಿಸುವಷ್ಟೊತ್ತು ಉಟ್ಟು ಕೊಂಡವನಾಗಿರ ಬೇಕೆಂತಲೂ, ಬಳಿಕ ಸಾಕ್ಷೀಗುಡಾರದ ಮುಂದೆ ಯಾಜಕೋದ್ಯೋಗ ಮಾಡುತ್ತಾ ಜನಾಂಗಕ್ಕೆ ಕಾಣಿಸುವ ವೇಳೆಯಲ್ಲಿ ಸಾಧಾರಣವಾದ ಯಾಜಕವಸ್ತ್ರಗಳನ್ನು ಧರಿಸಿ ಕೊಳ್ಳ ಬೇಕೆಂತಲೂ ನೇಮಕವಾಗಿತ್ತು.

ವ. ೨೯. ಇದು ನಿಮಗೆ ನಿತ್ಯ ಕಟ್ಟಳೆಯಾಗಿರ ಬೇಕು, ಏನಂದರೆ: ಏಳನೆ ತಿಂಗಳಲ್ಲಿ ತಿಂಗಳಿನ ಹತ್ತನೆಯಲ್ಲಿ ಸ್ವಜಾತಿಯವರೂ ನಿಮ್ಮ ನಡುವೆ ಪ್ರವಾಸ ಮಾಡುವ

ಪರರೂ ನಿಮ್ಮ ಪ್ರಾಣಗಳನ್ನು ಕುಂದಿಸಿ ಕೊಂಡು ಯಾವ ಕೆಲಸವನ್ನಾದರೂ ಮಾ
ಡ ಬಾರದು. ೩೦. ಯಾಕಂದರೆ ಈ ದಿವಸದಲ್ಲಿ ನಿಮ್ಮನ್ನು ನಿಮ್ಮ ಪಾಪಗಳಿಂದೆಲ್ಲಾ
ಯೆಹೋವನ ಮುಂದೆ ಶುದ್ಧ ಮಾಡುವ ಬಗ್ಯೆ ನಿಮಗಾಗಿ ವಿಮೋಚನೆಯಾಗುವಲ್ಲಿ
ಶುದ್ಧವಾಗುವಿರಿ. ೩೧. ಇದು ನಿಮಗೆ ಸಬ್ಬತುಗಳ ಸಬ್ಬತು. ನಿಮ್ಮ ಪ್ರಾಣಗಳನ್ನು
ಕುಂದಿಸಿ ಕೊಳ್ಳ ಬೇಕು. ಇದು ನಿತ್ಯವಾದ ಕಟ್ಟಳೆ. ೩೨. ವಿಮೋಚನೇ ಮಾಡು
ವ ಯಾಜಕನು ಯಾರಂದರೆ: ಅಭಿಷೇಕ ಪಡ ಕೊಂಡು, ತನ್ನ ತಂದೆಯ ಹಿಂದೆ ಯಾ
ಜಕವೃತ್ತಿ ಮಾಡುವದಕ್ಕೆ ಕೈ ತುಂಬಿಸಿ ಕೊಂಡವನು ಪರಿಶುದ್ಧ ಬಟ್ಟೆಗಳೆಂಬ ನಾರಿನ
ಬಟ್ಟೆಗಳನ್ನುಟ್ಟು ಕೊಂಡವನಾಗಿ ೩೩. ಅತಿಪರಿಶುದ್ಧ ಸ್ಥಳವನ್ನೂ ಸಾಕ್ಷೀಗುಡಾರ
ವನ್ನೂ ಬಲಿಪೀಠವನ್ನೂ ವಿಮೋಚನೇ ಮಾಡಿ, ಯಾಜಕರನ್ನೂ ಸಭೆಯ ಜನಾಂಗ
ಗವೆಲ್ಲಾನ್ನೂ ವಿಮೋಚನೇ ಮಾಡುವನು. ೩೪. ಇಸ್ರಯೇಲನ ಮಕ್ಕಳಿಗೆ ಎಲ್ಲಾ
ಪಾಪಗಳ ವಿಮೋಚನೆಯನ್ನು ವರ್ಷಕ್ಕೊಮ್ಮೆ ಮಾಡುವದಕ್ಕೆ ಇದು ನಿಮಗೆ ನಿತ್ಯ
ವಾದ ಕಟ್ಟಳೆಯಾಗಿರಲಿ.— —

ಎಲ್ಲಾ ಬಲಿಗಳಿಗಿಂತ ವ್ಯಾಪಕಾರ್ಥವಾದ ಸರ್ವಪಾಪವಿಮೋಚನೆಸಿದ್ಧಿಯಾಗಿರುವ ಈ ನಿವಾರ
ಣಾಚರಣೆಯು ಆಗ ಬೇಕಾದ ಕ್ರಮವೇನಂದರೆ: ಮಹಾ ವಿಮೋಚನೆಯ ದಿವಸದಲ್ಲಿ ಸಾಕ್ಷೀಗುಡಾರ
ದಲ್ಲಿ ಆಗ ತಕ್ಕ ಕ್ರಿಯೆಗಳೆಲ್ಲಾ ಪ್ರಧಾನಯಾಜಕನೊಬ್ಬನಿಂದಲೇ ಆಗ ಬೇಕಾಗಿದ್ದವು. ಹ್ಯಾಗಂದರೆ ಆರಂ
ಭದಲ್ಲಿ ಪ್ರಧಾನ ಯಾಜಕನು ತನಗಾಗಿಯೂ ತನ್ನ ಮನೆಗಾಗಿಯೂ ಪಾಪಬಲಿಯಾದ ಒಂದು ಹೋರಿ
ತಂದು, ಅದನ್ನು ಕಡಿದು, ಬಳಿಕ ವಾಡಿಕೆಯಾದ ಉದ್ಯೋಗವಸ್ತ್ರಗಳನ್ನು ತೆಗದಿಟ್ಟು, ವಿಶೇಷವಾದ ನಾರಿನ
ಬಟ್ಟೆಗಳನ್ನುಟ್ಟು ಕೊಂಡು, ಮೂರಾವರ್ತಿ ತೆರೆಯ ಒಳಗಣ ಪರಿಶುದ್ಧ ಸ್ಥಳದಲ್ಲಿ ಶೇರೋಣವಾಯಿತು.
ಮೊದಲು ಶುದ್ಧ ಸ್ಥಳದಲ್ಲಿಯಣ ಧೂಪಪೀಠದ ಕೆಂಡಗಳಿಂದಲೂ ಚೂರುಚೂರಾದ ನಾನಾ ವಿಧದ
ಸುಗಂಧವರ್ಗಗಳಿಂದಲೂ ತುಂಬಿದ ಸುವರ್ಣದ ಧೂಪಾರ್ತಿ ಹಿಡುಕೊಂಡು ಬಂದು, ದೇವಸನ್ನಿಧಾನ
ಪ್ರಕಟಣೆಯಾಗುವ ಶೆಕಿನಾ ಎಂಬ ಕರ್ತನ ಇಕ್ಕೆಯನ್ನು ಕತ್ತಲಾಗಿಸುವನು. ವ. ೧೩. ಮತ್ತು ತನಗಾಗಿ
ಯೂ ಸಮಸ್ತ ಯಾಜಕಕುಲಕ್ಕಾಗಿಯೂ ಕಡಿದ ಪಾಪಬಲಿಯಾದ ಗೂಳಿಯ ರಕ್ತವನ್ನು ಒಳಗೆ ತಂದು,
ಕೃಪಾಸನವೆಂಬ ಒಡಂಬಡಿಕೆಯ ಪೆಟ್ಟಿಗೆಯ ಮುಚ್ಚಳದ ಮೇಲೆಯೂ ಅದರ ಮುಂಗಡೆಯಲ್ಲಿಯೂ ತಳಿ
ಸುವನು. ಮೂರನೇ ಸಾರಿ ಜನಾಂಗದ ಪಾಪಬಲಿಯಾಗಿ ಹತವಾದ ಹೋತಿನ ರಕ್ತವನ್ನು ಒಳಗೆ ತಂ
ದು, ಅದೇ ಪ್ರಕಾರ ಮಾಡುವನು. ಗೂಳಿಯ ರಕ್ತದಿಂದ ತನ್ನ ಪಾಪವನ್ನೂ ತನ್ನ ಮನೆಯ ಪಾಪವನ್ನೂ,
ಹೋತಿನ ರಕ್ತದಿಂದ ಜನಾಂಗದ ಪಾಪವನ್ನೂ ವಿಮೋಚನೇ ಮಾಡುವನು. ವ. ೬. ೯. ೧೧. ೧೪. ೧೫.
ಬಳಿಕ ಅದೇ ರೀತಿಯಿಂದ ಧೂಪಪೀಠವಿರುವ ಸಾಕ್ಷೀಗುಡಾರದ ಶುದ್ಧ ಸ್ಥಳಕ್ಕೂ ಹೋಮಪೀಠಕ್ಕೂ ವಿ
ಮೋಚನೆಯುಂಟಾದ ಮೇಲೆ, ವಿಶೇಷವಾದ ಒಂದು ಕ್ರಿಯಾಕರ್ಮ ನೇಮಕವಾಗಿತ್ತು. ಅದೇನಂದರೆ:
ಜನಾಂಗಪಾಪಬಲಿಗಾಗಿ ಆಯಿಕೆಯಾದ ಎರಡು ಹೋತುಗಳಲ್ಲಿ ಚೀಟು ಹಾಕೋಣದರಿಂದ ಯೆಹೋ
ವನಿಗೆ ನೇಮಕವಾದ್ದು ಒಂದು (ವ. ೮) ಅರ್ಪಿತವಾದನಂತರ (ವ. ೧೫) ಈ ಬಲಿಯ ಮುಖಾಂತರ ಪರಿ
ಹಾರವಾದ ಜನಾಂಗದ ಪಾಪಗಳು ಎರಡನೆ ಹೋತಿನ ತಲೆಯ ಮೇಲೆ ಇಡಿಸಿ ಕೊಂಡ ಬಳಿಕ, ಇದನ್ನು ವಿ
ಮೋಚನಕಾರ್ಯಪೂರ್ತಿಯ ಪ್ರಸಿದ್ಧಿಯನ್ನು ಅಸಸೇಲನಿಗೆ ತಿಳಿಯ ಪಡಿಸಿ, ಸಂಪೂರ್ಣವಿಮೋಚನ ಪ
ಡಕೊಂಡ ಇಸ್ರಯೇಲನ ಮೇಲೆ ಪಳಿ ಹಾಕಿ ಅಧಿಕಾರ ನಡಿಸುವ ಅಪ್ಪಣೆ ಅವನಿಗಿಲ್ಲವೆಂಬ ದೃಷ್ಟಾಂತವಾಗಿ

ಲೇವಿಕ. ೧೬.

ಅವನ ಎಡೆಯಾಗಿರುವ ಶಾಪಭೂಮಿಯಾದ ಅರಣ್ಯಕ್ಕೆ ಕಳುಹಿಸೋಣವಾಯಿತು. ಈ ಸಂಗತಿ ಹೇಳಿರುವ ೮ನೆ ವಚನದ ಭಾಷಾಂತರವು ಹ್ಯಾಗಂದರೆ: ಮತ್ತು ಆರೋನನು ಆ ಎರಡು ಹೋತುಗಳ ನಿಮಿತ್ತ ಚೀಟುಗಳನ್ನು ಹಾಕ ಬೇಕು, ಒಂದು ಚೀಟು ಯೆಹೋವನಿಗೋಸ್ಕರ, ಮತ್ತೊಂದು ಚೀಟು ಅಸಸೇಲನಿಗೋಸ್ಕರ. ಈ ತೆರದಿಂದ ಮಹಾ ವಿಮೋಚನೆಯ ದಿವಸದಲ್ಲಿ ದೇವರ ಜನಾಂಗಕ್ಕೆ ಪ್ರಾಪ್ತವಾದ ಸರ್ವಪಾಪಪರಿಹಾರವು, ಪಳಿಗೈಯುವ ಸೈತಾನನಾದರೂ (ಯೋಬ್. ೧, ೨. ಜಕರಿ. ೩. ಪ್ರಕ. ೧೨, ೧೦. ೧೧.) ಅದನ್ನಲ್ಲಗಳೆಯಲಾರದಷ್ಟು, ನಿಶ್ಚಯವಾಗಿಯೂ ದೃಢವಾಗಿಯೂ ಅದೆ ಎಂಬದು ಸೂಚಿತವಾಗುತ್ತಿತ್ತು. ಈ ಹೋತು ಅಸಸೇಲನ ಬಳಿಗೆ ಹೋಗಿ, ಅರಣ್ಯದಲ್ಲಿ ಅಳಿದು ಹೋಗ ಬೇಕಾದ ಪ್ರಕಾರ ಪಾಪವಿಮೋಚನೆ ಪಡಕೊಳ್ಳುವ ಜನಾಂಗದವರಲ್ಲಿ ಯಾರಾದರೂ ಪಾಪದಲ್ಲಿ ಉಳಕೊಂಡರೆ, ಇವರು ಸಹಾ ಆ ಹೋತಿನ ಹಾಗೆ ಶಾಪಭೂಮಿಯಲ್ಲಿ ನಾಶವಾಗುವರು. ಹ್ಯಾಗೂ ಈ ಎರಡನೆ ಹೋತು ಸಹಾ ಯೆಹೋವನಿಗೆ ಪಾಪವಿಮೋಚನೆಯ ಬಲಿ ಆಗಿತ್ತಲ್ಲದೆ, ಅಸಸೇಲನಿಗೆ ಒಂದು ಬಲಿ ಕೊಟ್ಟ ಹಾಗೆ ನೆನಸ ಕಾರಣವಿಲ್ಲಾ.

ಪಾಪಬಲಿಯರ್ಪಣೆಯಿಂದ ವಿಮೋಚನೆಯುಂಟಾದ ಮೇಲೆ, ಪರಿಹಾರವನ್ನು ಹೊಂದಿದ ಭಕ್ತರು ಕರ್ತನಿಗೆ ಮನೋವಾಕ್ಕಾಯದಿಂದ ಅಧೀನರಾಗುವ ನೂತನ ಆತ್ಮವಶೀಕರಣವನ್ನು ಸೂಚಿಸುವಂಥ ಹೋಮದ ಅರ್ಪಣೆಯುಂಟಾಗುವದು. ಮೊದಲು ಯಾಜಕನಿಗಾಗಿಯೂ ಅವನ ಮನೆಗಾಗಿಯೂ ತರುವಾಯ ಜನಾಂಗಕ್ಕಾಗಿಯೂ ಹೋಮವಾಗುವದು. ಉದ್ಯೋಗವೃತ್ತಿಯಲ್ಲಿ ಶೇರುವದಕ್ಕಿಂತ ಮುಂಚೆ ಪ್ರಧಾನ ಯಾಜಕನು ಸ್ನಾನ ಮಾಡಿ, ವಾಡಿಕೆಯಾದ ಉದ್ಯೋಗವಸ್ತ್ರಗಳನ್ನುಟ್ಟು ಕೊಳ್ಳುವನು. ವ. ೨೩. ೨೪. ವಿಮೋಚನೆಯ ದಿವಸದಲ್ಲಿ ಹೋಮಪೀಠದ ಮೇಲೆ, ಎರಡು ಹೋಮಗಳಲ್ಲದೆ, ಪಾಪಬಲಿಗಳ ಕೊಬ್ಬು ಸಹ ದಹನವಾಗುವದು. ಆದರೆ ಪಾಪಬಲಿಯಾದ ಗೂಳಿಹೋತುಗಳೆರಡರ ಮಾಂಸವು, ಅವುಗಳ ರಕ್ತವು ಪರಿಶುದ್ಧ ಸ್ಥಳದಲ್ಲಿ ತಳಿಸಿ ಕೊಂಡ ಬಳಿಕ, ಚರ್ಮಕರುಳುಗಳ ಕೂಡ ದಂಡಿನ ಹೊರಗಿನಲ್ಲಿ ಸುಡಿಸಿ ಕೊಳ್ಳ ಬೇಕಾಗಿತ್ತು. ವ. ೨೭. ಬೇರೆ ಪಾಪಬಲಿಗಳ ಪದ್ಧತಿಯ ಪ್ರಕಾರ ಇದರಲ್ಲಿ ಯಾಜಕನಿಗೆ ಒಂದು ಪಾಲು ದೊರಕಲಾಗದೆ ಹೋಯಿತು. ಯಾಕೆಂದರೆ ಯಾಜಕನು ಈ ಬಲಿಯರ್ಪಣೆಯಲ್ಲಿ ವಿಮೋಚನಾಮಧ್ಯವರ್ತಿ ಮಾತ್ರವಲ್ಲ, ವಿಮೋಚನಾಶೆಯುಳ್ಳವನಾಗಿಯೂ ಕಾಣಿಸಿ ಕೊಳ್ಳುವನು. ಇದಲ್ಲದೆ ಬಲಿಪಶುವಿನಲ್ಲಿ ಶ್ರೇಷ್ಠವಾದದ್ದಾಗಿಯೂ ಪರಿಶುದ್ಧವಾದದ್ದಾಗಿಯೂ ಇರುವ ರಕ್ತವು ಪರಿಶುದ್ಧ ಸ್ಥಳದಲ್ಲಿ ತಳಿಸಲ್ಪಟ್ಟ ಬಳಿಕ ಉಳುಹು, ಕರ್ತನ ಸಾಮೀಪ್ಯಕ್ಕೆ ದೂರವಾದ ದಂಡಿನ ಹೊರಗಣ ಎಡೆಯಲ್ಲಿ ದಹನವಾಗ ಬೇಕಾಯಿತು. ಆದರೆ ಬಲಿಯೇ ಅತಿ ಘನವಾದದರಿಂದ ಅದರ ಉಳುಹನ್ನು ಸಹಾ ಬಲಿಯರ್ಪಣೆಗೆ ಸಂಬಂಧವಾದ ಒಂದು ಶುದ್ಧ ಸ್ಥಳದಲ್ಲಿ ಸುಡ ಬೇಕಾಯಿತು. ಚರ್ಮ ಮುಂತಾದದ್ದನ್ನು ಸುಟ್ಟವನಿಗೂ ಅಪರಾಧಶಾಪಗಳನ್ನು ಹೊತ್ತು ಕೊಂಡ ಹೋತನ್ನು ಅರಣ್ಯಕ್ಕೆ ವೈದವನಿಗೂ ವಿಶೇಷವಾದ ಶುಚಿಕರಣವು ಅವಶ್ಯವಾಗಿತ್ತು.

ಈ ದಿವಸದ ಬಲಿಯು ಪರಲೋಕದವನಾದ ಪ್ರಧಾನ ಯಾಜಕನಾಗಿರುವ ಕ್ರಿಸ್ತನಿಂದ ಲೋಕರಕ್ಷಣಾರ್ಥಕ್ಕಾಗಿ ಉಂಟಾದ ಬಲಿಯರ್ಪಣೆಯ ಅತಿ ಸ್ಪಷ್ಟವಾದ ಮುಂಗುರ್ತಾಗಿತ್ತು. ಇಬ್ರಿ. ೯, ೭. ೧೨ರಲ್ಲಿ ಇದರ ವಿಷಯವಾಗಿ ಬರದದ್ದೇನಂದರೆ: ಲೇವಿ ಕುಲದವನಾದ ಪ್ರಧಾನ ಯಾಜಕನು ವರ್ಷಂಪ್ರತಿಯಲ್ಲಿ ಒಮ್ಮೆ ಹೋರಿಹೋತುಗಳ ರಕ್ತವನ್ನು ತಂದು (ಭೂಲೋಕದಲ್ಲಿದ್ದ) ಪರಿಶುದ್ಧ ಸ್ಥಳದಲ್ಲಿ ಶೇರುತ್ತಿದ್ದನು. ಆದರೆ ಕ್ರಿಸ್ತನು ಬಂದು, ನಿತ್ಯವಾದ ವಿಮೋಚನೆಯನ್ನು ಕಂಡುಕೊಂಡವನಾಗಿ, (ಪರಲೋಕದಲ್ಲಿಯಣ) ಪರಿಶುದ್ಧ ಸ್ಥಳದಲ್ಲಿ ಸ್ವಂತ ರಕ್ತದಿಂದಲೇ ಶೇರಿದನು.

ಸಂಧಿ. ೧೭.

ವ. ೧—೯. ಬಲಿಯರ್ಪಣೆಗೆ ಸಾಕ್ಷೀಗುಡಾರದ ಅಂಗಳವು ಒಂದೇ ಧರ್ಮಾನುಸಾರವಾದ ಸ್ಥಳವು. ಪಶುಗಳನ್ನು ಆಹಾರಕ್ಕಾಗಿ ಕೊಯ್ಯುವ ಪಕ್ಷದಲ್ಲಿಯೂ, ಕೊಬ್ಬು (ಬಲಿಪೀಠದಲ್ಲಿ) ಸುಟ್ಟು ಬಿಟ್ಟು,

ಉಳಿದ ಬಾಡನ್ನು ಸಮಾಧಾನಬಲಿಯ ಕ್ರಮದ ಪ್ರಕಾರ ಅನುಭವಿಸಿ ಕೊಳ್ಳ ಬೇಕೆಂದು, ಇಸ್ರಯೇಲನವರಿಗೆ ಅರಣ್ಯವಾಸಕಾಲದಲ್ಲಿ ನೇಮಕವಾಗಿತ್ತು. ಅವರು ಒಂದು ದಂಡಾಗಿ ಸಾಕ್ಷೀಗುಡಾರದ ಸುತ್ತಲಾಗಿ ವಸ್ತಿಯಾಗಿದ್ದು ಅನುದಿನದಲ್ಲಿ ಬಾನಿನಿಂದ ಬೀಳುತ್ತಿರುವ ಮನ್ನಾ ಎಂಬದನ್ನು ರೊಟ್ಟಿಯಾಗಿ ತಿನ್ನುತ್ತಾ ಬದುಕಿದ ವೇಳೆಯಲ್ಲಿ ಈ ಕಟ್ಟಳೆಯು ಅವರಿಗೆ ಬೇಸರವಾದದ್ದಲ್ಲ. (ಅವರು ತದನಂತರ ವಾಗ್ದತ್ತದೇಶವನ್ನು ಸ್ವತಂತ್ರಿಸಿ ಕೊಂಡು ಕುಲಕುಲವಾಗಿ ಬೇರೆ ಬೇರೆ ಶೀಮೆಗಳಲ್ಲಿ ವಾಸ ಮಾಡಿದ ಕಾಲದಲ್ಲಿ ಈ ಕಟ್ಟಳೆಯು, ರಕ್ತವನ್ನುಣ್ಣ ಬಾರದೆಂಬ ನಿಷೇಧದ ಹೊರ್ತಾಗಿ, ನಿಂತು ಹೋಯಿತು. ದ್ವಿತೀ. ೧೨, ೧೫. ೨೨.) ಈ ನೇಮದ ಉದ್ದಿಶ್ಯವೇನಂದರೆ: ಮಿಶ್ರ ದೇಶದಲ್ಲಿ ಪ್ರವಾಸ ಮಾಡಿದ ಕಾಲದಲ್ಲೆಲ್ಲಾ, ಅನ್ಯ ಜನರಾದ ಮಿಶ್ರದವರು ನಡಿಸಿದ ನಾನಾ ತರದ ಅಸಹ್ಯವಾದ ಪ್ರಕೃತಿಪೂಜೆಗಳನ್ನು ನೋಡುತ್ತಾ ಬಂದದ್ದಲ್ಲದೆ, ಅವುಗಳಲ್ಲಿ ತಾವೂ ಮರುಳಾಗಿ ಶೇರಿದ ಇಸ್ರಯೇಲನವರು (ದ್ವಿತೀ. ೩೨, ೧೭. ಆಮೊ. ೫, ೨೫. ೨೬. ಅಪೊ. ಕ್ರಿ. ೭, ೪೨. ೪೩.) ಅಸಹ್ಯ ದೇವದ್ರೋಹವಾದ ಪೂಜೆಗಳ ಜಾಳಿ ಬಿಡ ಬೇಕೆಂಬುವದು. ವ. ೭. "ಮತ್ತು ಅವರು ಯಾರ ಹಿಂದೆ ಹಾದರಿಗರಾಗಿದ್ದರೋ ಆ ಕಾಡು ದೆವ್ವಗಳಿಗೆ ಇನ್ನೂ ಮುಂದೆ ತಮ್ಮ ಬಲಿಗಳನ್ನರ್ಪಿಸ ಬಾರದು." ಮಿಶ್ರ ದೇಶದಲ್ಲಿ ಇಸ್ರಯೇಲನವರಿಗೆ ವಾಸಸ್ಥಳವಾಗಿ ದೊರಕಿದ ಗೋಶೆನ್ ನಾಡಿನ ಗಡಿಯು ಹತ್ತರ ಮೆಂದೆಸೆಂಬ ಹೋತಿನ ದೇವಸ್ಥಾನವಿತ್ತು. ಅದರಲ್ಲಿ ಮಿಶ್ರದವರು ದೇವರ ಅವತಾರವೆನಿಸಿ ಕೊಳ್ಳುವ ಒಂದು ಹೋತಿಗೆ ಹೇಳಲಾರದ ಕಾಮಕರ್ಮಗಳನ್ನು ನಡಿಸುತ್ತಾ ಪೂಜೇ ಮಾಡುತ್ತ ಬಂದರು. ಮತ್ತಿನ ಕಾಲದಲ್ಲಿ ದೇವದ್ರೋಹಿಗಳಾದ ಇಸ್ರಯೇಲನವರು ಅಂಥ ಹೋತುಗಳಿಗೆ ಆರಾಧನೆ ಮಾಡಿ, ಅರಣ್ಯವಾಸಿಗಳೆಂತಲೂ, ಹೆಂಗಸರನ್ನು ಮೋಹಿಸುತ್ತವೆಂತಲೂ, ನಂಬಿ ಕೊಳ್ಳುವಂಥ ಗ್ರೇಕರ ಸತುರ್ ಎಂಬವುಗಳಿಗೆ ಸಮಾನವಾದ, ಹೊಲ ಕಾಯುವ ದೈವಗಳಾದ ಪಿಶಾಚರಿಗೆ ಆಯಾ ವೇಳೆಯಲ್ಲಿ ಬಲಿಗಳನ್ನರ್ಪಿಸಿದರು. (ಯೆಶಾ. ೧೩, ೨೧. ೩೪, ೧೪.)

ವ. ೧೦—೧೬. ರಕ್ತವನ್ನುಣ್ಣ ಬಾರದೆಂಬ ನಿಷೇಧವು. ವ. ೧೧. "ಯಾಕೆಂದರೆ ಮಾಂಸದ ಪ್ರಾಣವು ರಕ್ತದಲ್ಲಿದೆ. ಮತ್ತು ನಾನು ಅದನ್ನು ಬಲಿಪೀಠದ ಮೇಲೆ ನಿಮ್ಮ ಪ್ರಾಣಗಳ ಪಾಪ ಮುಚ್ಚುವ ಬಗ್ಗೆ ನಿಮಗೆ ಕೊಟ್ಟಿದ್ದೇನೆ. ಯಾಕಂದರೆ ರಕ್ತವು (ಅದರಲ್ಲಿರುವ) ಪ್ರಾಣದಿಂದ ಪಾಪ ಮುಚ್ಚುವದು."

ಸ. ೧೮.

ಇದರಲ್ಲಿ ಯೆಹೋವನು ಸ್ವಜನಾಂಗಕ್ಕೆ, ಮಿಶ್ರದವರಲ್ಲಿಯೂ ಕನಾನದವರಲ್ಲಿಯೂ ನಡವಳಿಯಾದ ಸಹೋದರಿವಿವಾಹ ಮುಂತಾದ ಅಸಹ್ಯ ಪಾತಕಗಳನ್ನೂ, ಮದಿವೆಯಾದವರಲ್ಲಿಯೂ ಮದಿವೆಯಿಲ್ಲದವರಲ್ಲಿಯೂ ಕಾಮನಿಗ್ರಹವನ್ನೂ ಲಜ್ಜೆಯನ್ನೂ ಆತ್ಮಿಕ ಶೀಲವನ್ನೂ ಕೆಡಿಸುವ ಅಕ್ರಮಗಳನ್ನೂ, ವಿಶೇಷವಾಗಿ ನರಬಲಿಯರ್ಪಣೆಯುಳ್ಳ ಮೋಲೊಕನ ಪೂಜೆಯನ್ನೂ ಬಿಟ್ಟು ಬಿಡ ಬೇಕೆಂತ, ಹೆದರಿಸಿ ಆಜ್ಞಾಪಿಸುತ್ತಾನೆ. ವ. ೨೧. (ಮೋಲೆಕ್, ಅಥವಾ ಮೋಲೊಕ್, ಬಾಲ್, ಮಿಲ್ಕೊಮ್, ಅದ್ರಮೇಲೆಕ್ ಎಂಬ ಹೆಸರುಗಳುಳ್ಳ ದೈವವು, ರಬ್ಬೀನರ ಇತಿಹಾಸದ ಪ್ರಕಾರ, ತಾಂಬ್ರದ ವಿಗ್ರಹವಾಗಿತ್ತು. ಅದರ ಮೈ ಮನುಷ್ಯನದು, ತಲೆ ಬಸವನದು. ಅದರಲ್ಲಿ ಎರಡು ಕೊಂಬು. ಇಕ್ಕಡೆಯಲ್ಲಿ ಚಾಚಿದ ಕೈಗಳಲ್ಲಿ ಮಕ್ಕಳ ಬಲಿ ಕೊಡುವವರು ಅವುಗಳನ್ನು ಮಡಗಿ ಸುಟ್ಟು ಬಿಡುವರು.) ಸಹೋದರಿವಿವಾಹ, ವ್ಯಭಿಚಾರ, ಪುರುಷಸಂಗಮ, ಪಶುಸಂಗಮ, ನರಬಲಿಯರ್ಪಣೆ ಮುಂತಾದ ಅಸಹ್ಯ ಪಾತಕಗಳಿಗೆ ಪ್ರಾಣಶಿಕ್ಷೆ ನೇಮಕವಾದದ್ದು. ವ. ೨೯. ಸ. ೨೦. - ಈ ಆಜ್ಞೆಗಳ ಮೀರಿದವರ ಮೇಲೆ ಬರ ತಕ್ಕ ಶಾಪಗಳು ದ್ವಿತೀ. ೨೭, ೨೦. ಇತ್ಯಾದಿಯಲ್ಲಿ ಬರೆದವೆ. ಇಲ್ಲಿ ಒಂದು ವಿಶೇಷ. ಒಬ್ಬನು ತನ್ನ ಸಹೋದರನು ಸಂತತಿ ಇಲ್ಲದವನಾಗಿ ಮೃತವಾದರೆ, ಈತನ ಹೆಂಡತಿಯನ್ನು ಮದಿವೆ ಮಾಡಿ ಕೊಂಡು, ದೇವರೇಣ ಸುತೋತ್ಪತ್ತಿ ಎಂಬ ಮಾ

ಶಿಗೆ ಅನುಕೂಲವಾಗಿ ನಡಿಯ ತಕ್ಕದ್ದು; ಆದರೆ, ಸಂತತಿ ಇರುವವನಾಗಿ ಮೃತವಾದರೆ, ಈತನ ಹೆಂಡತಿಯನ್ನು ಮದಿವೆ ಮಾಡಿ ಕೊಳ್ಳುವದು ಉಚಿತವಲ್ಲಾ; ಹಾಗೆ ಮಾಡಿದ ಪಕ್ಷದಲ್ಲಿ, ಸಂತತಿಹೀನನಾಗಿರುವನೆಂಬ ಶಾಪವು ಈ ಕರ್ಮದ ಮೇಲೆ ಇಟ್ಟದೆ. ೨೦, ೨೧. ಇಸ್ರಯೇಲನವರಿಗೆ ಬಹುಪತ್ನಿತ್ವದ ಅನುಜ್ಞೆ ಇದ್ದರೂ, ಒಬ್ಬನು ತನ್ನ ಹೆಂಡತಿ ಬದುಕುತ್ತಿರುವಾಗ್ಯೆ, ಆಕೆಯ ಸಹೋದರಿಯನ್ನು ಮದಿವೆ ಮಾಡಿ ಕೊಳ್ಳ ಬಾರದು. ೧೮, ೧೮. ಆದರೆ ಹೆಂಡತಿ ತೀರಿ ಹೋದ ಮೇಲೆ, ಆಕೆಯ ಸಹೋದರಿಯನ್ನು ಮದಿವೆ ಮಾಡಿ ಕೊಳ್ಳುವದು ಎಲ್ಲಿಯೂ ನಿಷೇಧಿಸಿ ಇರುವದಿಲ್ಲಾ.

ಸ. ೧೯.

ಹಿಂದಿನ ಕಟ್ಟಳೆಗಳ ಪುನರುಕ್ತಿಗಳೂ, ಅವುಗಳಿಗೆ ಶೇರಿದ ಉಪಕರಣಗಳೂ, ಧರ್ಮ ಆಚರಣ ರಾಜ್ಯ ನೇಮಗಳ ವಿಷಯವಾದ ನವೀನ ನೇಮಕಗಳೂ ಆದ ಬೇರೆ ಬೇರೆ ಕಟ್ಟಳೆಗಳ ಸಂಗ್ರಹವು ಈ ಸಂಧಿಯಲ್ಲಿ ಬರೆದದೆ. ಈ ಕಟ್ಟಳೆಗಳ ಮುಖ್ಯವಾದ ಅಭಿಪ್ರಾಯವೂ ಉದ್ದೇಶವೂ ೨ನೆ ವಚನದಲ್ಲಿ ತೋರುತ್ತದೆ. ಅದೇನಂದರೆ: ಪರಿಶುದ್ಧರಾಗಿರ್ರಿ; ಯಾಕಂದರೆ ನಿಮ್ಮ ದೇವರಾದ ಯೆಹೋವನೆಂಬ ನಾನು ಪರಿಶುದ್ಧನು. ಈ ಸಂಧಿಯ ಸಂಗ್ರಹದಲ್ಲಿ ಶೇರಿದಂಥ, ಈ ವರೆಗೆ ನಾವು ವಿವರಿಸದಂಥ ಕೆಲವು ಕಟ್ಟಳೆಗಳನ್ನು ಇಲ್ಲಿ ಬರೆಯುವದು ಯುಕ್ತವೆಂದು ಕಾಣುತ್ತದೆ. ಅವು ಯಾವವಂದರೆ: ವ. ೯. ೧೦. ಮತ್ತು ನಿಮ್ಮ ಭೂಮಿಯ ಪೈರನ್ನು ನೀವು ಕೊಯ್ಯುವಲ್ಲಿ, ನಿನ್ನ ಹೊಲದ ಅಂಚು ಕೊಯಿದು ತೀರಿಸಲೂ, ನಿನ್ನ ಪೈರಿನ ಹಕ್ಕಲನ್ನಾಯಲೂ, ನಿನ್ನ ದ್ರಾಕ್ಷೇತೋಟದ ಮಿಗುತೆಯ ಕೂಡಿಸಲೂ, ಬಾರದು — ಅದನ್ನು ಬಡವನಿಗೂ ಪರದೇಶಿಗೂ ಉಳಿಸಿ ಬಿಡ ಬೇಕು. ೧೩. ಕೂಲಿಯವನ ಜೀತವು ಹೊತ್ತಾರೆ ವರೆಗೂ ನಿನ್ನ ಬಳಿಯ ಉಳುಗೊಳ್ಳ ಬಾರದು. (ಅವನು ಕೂಳಿಲ್ಲದವನಾಗಿ ಹಸಿಯದಂತೆ). ವ. ೧೪. ಕಿವಡನನ್ನು ಶಪಿಸಲೂ, ಕುರುಡನ ಮುಂದೆ ಎಡತಡೆಯಿಡಲೂ ಬಾರದು. ವ. ೧೭. ನಿನ್ನ ಸಹೋದರನನ್ನು ನಿನ್ನ ಹೃದಯದಲ್ಲಿ ಹಗೆ ಮಾಡ ಬಾರದು. ನಿನ್ನ ನೆರೆಯವನನ್ನು, ನೀನು ಅವನಿಗಾಗಿ ಪಾಪವನ್ನು ಹೊರದಂತೆ, ಶಿಕ್ಷಿಸೇ ಶಿಕ್ಷಿಸು. ವ. ೧೯. ನಿನ್ನ ಹೊಲದಲ್ಲಿ ಬೇರೆ ಬೇರೆ ತರದ ಬೀಜ ಬಿತ್ತ ಬಾರದು (ಪ್ರಕೃತಿಯ ಸ್ವಭಾವಕ್ರಮಕ್ಕೆ ಕುಂದು ಬಾರದಂತೆ). ವ. ೨೩ — ೨೫. ತಮ್ಮ ದೇಶದಲ್ಲಿ ಶೇರಿ ಫಲ ಕಾಯುವ ಮರಗಳನ್ನು ನೆಟ್ಟ ಮೇಲೆ ಮೂರು ವರ್ಷದ ವರೆಗೂ ಅವುಗಳಲ್ಲಿ ಆಗುವ ಹಣ್ಣುಗಳನ್ನು ಹೊಲೆ ಎಂದೆಣಿಸಿ ತಿನ್ನದೆ ಬಿಟ್ಟು, ನಾಲ್ಕನೆ ವರ್ಷದ ಫಲಗಳನ್ನು ಯೆಹೋವನಿಗೆ ಮೀಸಲಾಗಿರಿಸಿ, ಐದನೆ ವರ್ಷದ ಫಲಗಳನ್ನು ತಿಂದು ಕೂಡಿಸಿ ಕೊಳ್ಳ ಬಹುದೆಂಬ ಅಪ್ಪಣೆಯು ಯೆಹೋವನ ಸ್ವಾಸ್ಥ್ಯದ ಭೂಮಿಯಲ್ಲಿ ಒಕ್ಕಲಾಗಿದ್ದ ಇಸ್ರಯೇಲನವರಿಗೆ ಯುಕ್ತವಾಗಿತ್ತು. ವ. ೨೬. (ಅನ್ಯ ಜನರ ಮರ್ಯಾದೆಯ ಪ್ರಕಾರ) ಸರ್ಪಮಂತ್ರಗಳನ್ನೂ ಮೇಘಮಂತ್ರಗಳ್ನೂ ಮಾಡ ಬಾರದು. ವ. ೨೮. ಸತ್ತವನಿಗಾಗಿ ನಿನ್ನ ಮಾಂಸದಲ್ಲಿ ಘಾಯ ಮಾಡ ಬಾರದು. ಮತ್ತು ನಿಮ್ಮಲ್ಲಿ ಅಕ್ಷರಗಳ ಬರೆ ಹಾಕ ಬಾರದು. ವ. ೩೨. ನರೆಗೂದಲಿನ ಮುಂದೆ ಏಳ ಬೇಕು; ಮುದುಕನ ಮುಖವನ್ನು ಸನ್ಮಾನಿಸಿ, ನಿನ್ನ ದೇವರಿಗೆ ಭಯ ಪಡು. ನಾನೇ ಯೆಹೋವನು. ವ. ೩೩. ಮತ್ತು ಪ್ರವಾಸಿಯು ನಿನ್ನ ಹತ್ತರ ನಿಮ್ಮ ದೇಶದಲ್ಲಿ ಪ್ರವಾಸ ಮಾಡಿದರೆ, ಅವನನ್ನು ಬೇಸರಗೊಳಿಸ ಬಾರದು. ವ. ೩೬. ನ್ಯಾಯದ ತಕ್ಕಡಿ, ನ್ಯಾಯದ ಕಲ್ಲುಗಳು, ನ್ಯಾಯದ ಎಫಾ, ನ್ಯಾಯದ ಹಿನ್ ನಿಮಗೆ ಇರ ಬೇಕು.

ಸ. ೨೦.

ಸೋದರ ಸೋದರಿ ಮುಂತಾದ ರಕ್ತಬಾಂಧವರೊಳಗೆ ನಡದ ಜಾರತ್ವ ಮೊದಲಾದ ಮಹಾಪಾತಕಗಳಿಗೆ ನೇಮಕವಾದ ಶಿಕ್ಷೆಗಳು.

ಲೇವಿಕ. ೨೧. ೨೨. ೨೩.

ಸ. ೨೧.

ವ. ೧—೯. ಯಾಜಕರು ಪರಿಶುದ್ಧ ದೇವರ ಸೇವಕರಾಗಿದ್ದು, ತಂದೆ ತಾಯಿ, ಮಗನು ಮಗಳು, ಸೋದರ ಸೋದರಿ ಇವರ ಹೊರ್ತಾಗಿ ಸತ್ತವರಾದ ಯಾರನ್ನಾದರೂ ಮುಟ್ಟಿ ಹೊಲೆಯಾಗಲೂ, ಅನ್ಯಜನರ ಪದ್ಧತಿಯ ಪ್ರಕಾರ ಸತ್ತವರಿಗಾಗಿ ಕ್ರಿಯಾಕರ್ಮ ಮಾಡಲೂ, ಆಗದಂಥ ಹೆಣ್ಣು ಮದುವೆ ಮಾಡಿ ಕೊಳ್ಳಲೂ ಬಾರದು. ವ. ೧೦—೧೫. ಪ್ರಧಾನಯಾಜಕನು ಯಾವ ಶವವನ್ನಾದರೂ ಮುಟ್ಟಲೂ, ತಂದೆ ತಾಯಿ ಮುಂತಾದ ಕುಟುಂಬದವರಿಗಾದರೂ ಮರಣ ಮೃತಕರ್ಮ ನಡಿಸಲೂ, ಸ್ವಂತ ಜನಾಂಗದವಳಾದ ದೋಷವಿಲ್ಲದ ಕನ್ಯಾಸ್ತ್ರಿಯ ಹೊರ್ತಾಗಿ ಯಾವ ಹೆಣ್ಣನ್ನಾದರೂ ಮದುವೆ ಮಾಡಿ ಕೊಳ್ಳಲೂ ಬಾರದು. ವ. ೧೬—೨೪. ಯಾಜಕವಂಶದವರ ಮೈಯಲ್ಲಿ ಯಾವದೊಂದು ಕುಂದು ಕೊರತೆಯಾದರೂ ಕಾಣಿಸಿದರೆ, ಬಲಿಪೀಠದ ಆಹಾರದಿಂದ ಬದುಕಲಧಿಕಾರಿಗಳಾಗಿದ್ದರೂ, ದೇವಾಲಯದಲ್ಲಿ ಶೇರಿ ಯಾಜಕವೃತ್ತಿ ನಡಿಸಲಯುಕ್ತರಾಗಿದ್ದರು. ಇಲ್ಲಿ ನಿಷೇಧಿಸಿದ ನಡತೆಗಳು ಸ್ವತಾ ಪಾಪಕ್ರಿಯೆಗಳಾಗಿರದಿದ್ದರೂ, ಮಹಾಚಾರ್ಯರಾದ ಯಾಜಕರಿಗೆ ಅನುಚಿತವಾಗಿದ್ದವು.

ಸ. ೨೨.

ವ. ೧—೧೬. ಯಾಜಕರಿಗೆ ಸಿಕ್ಕುವ ಬಲಿಪಾಲಿನಲ್ಲಿ ಮನೆಯವರಲ್ಲಿ ಹೊಲೆಯಾದವನ್ಯಾವನಾದರೂ, ಯಾಜಕನು ಕ್ರಯಕ್ಕೆ ಕೊಂಡುಕೊಂಡ ಕೈಯಾಳಲ್ಲದ ಪರದೇಶಿಯಾದರೂ ತಿನ್ನ ಬಾರದು. ವ. ೧೭—೩೩. ಬಲಿಪಶುಗಳು ದೋಷವಿಲ್ಲದವುಗಳಾಗಿರ ಬೇಕು.

ಸ. ೨೩.

ಪರಿಶುದ್ಧ ಕಾಲಗಳೂ ದಿವಸಗಳೂ: ಸಬ್ಬತ್. ವ. ೧—೩. ಪಸ್ಕ. ವ. ೪—೧೪. ಪಂಚಾಶತೆಂಬ ಪ್ರಥಮಫಲಗಳ ಹಬ್ಬವು. ವ. ೧೫—೨೨. ತುತೂರಿಹಬ್ಬವೆಂಬ ಯುಗಾದಿದಿವಸವು. ವ. ೨೩—೨೫. ಮಹಾ ವಿಮೋಚನೆಯ ದಿವಸವು. ವ. ೨೬—೩೨. ಗುಡಾರಗಳ ಹಬ್ಬವು. ವ. ೩೩—೪೪.

ಇಸ್ರಯೇಲ ಜನಾಂಗದ ಹಬ್ಬಗಳು ಎರಡು ವಿಧವಾದವುಗಳಾಗಿದ್ದವು: ೧. ಸಬ್ಬತ್ ಹಬ್ಬಗಳು. ೨. ವರ್ಷಂಪ್ರತಿಯಲ್ಲಿ ಆಚರಣೆಯಾಗುವ ಹಬ್ಬಗಳು.

೨ನೆ ವಚನದಲ್ಲಿ ಯೆಹೋವನು ಹೇಳುವದೇನಂದರೆ: "ಪರಿಶುದ್ಧ ಕೂಟಗಳೆಂದು ನೀವು ಕರೆಯ ತಕ್ಕ ಯೆಹೋವನ ಹಬ್ಬಗಳಾದ ಇವುಗಳೇ ನನ್ನ ಹಬ್ಬಗಳು." ಇವುಗಳ ಪಟ್ಟಿ ೨೩ನೆ ೨೫ನೆ ಸಂಧಿಗಳಲ್ಲಿ ಬರೆದದೆ.

I. ಸಬ್ಬತ್ ಹಬ್ಬಗಳು.

೧. ಸಬ್ಬತ್ ದಿವಸ. ಇದು ದೇವರು ಲೋಕನಿರ್ಮಾಣದ ಮೇಲೆ ತಕ್ಕೊಂಡ ವಿಶ್ರಾಂತಿಕೆಯ ನೆನಪಿಗಾಗಿಯೂ (ಹೊರ. ೨೦, ೮. ೧೧. ಉತ್ಪ. ೨, ೩.) ದೇವರ ಪ್ರಜೆಗೆ ಇಟ್ಟಿರುವ ವಿಶ್ರಾಂತಿಕೆಯ ಮುಂಗುರ್ತಾಗಿಯೂ (ಇಬ್ರಿ. ೪, ೯.) ಸ್ಥಾಪಿತವಾಗಿದ್ದು, ಪ್ರಾಮುಖ್ಯವಾದದ್ದಾಗಿ ಪ್ರಥಮ ಸ್ಥಳದಲ್ಲಿ ಶೇರಿಯದೆ.

೨. ತುತೂರಿ ಹಬ್ಬವೆಂಬ ಸಬ್ಬಾವರ್ಷದ ಏಳನೆ ಶುದ್ಧ ಪ್ರತಿಪದವಾದ ರಾಜ್ಯವರ್ಷ ಲೆಖ್ಖದಲ್ಲಿ ಯುಗಾದಿದಿವಸವು, ಪ್ರತಿಪದವು ಸಬ್ಬತಾಗಿ, ಅದಕ್ಕೆ ಸಂಬಂಧವಾಗಿದೆ. ಈ ದಿನದ ಆರಂಭದಲ್ಲಿ ತುತೂರಿ

ಗಳನ್ನು ಊದುತ್ತಾ ಇದ್ದರು. ವ. ೨೪. “ಏಳನೆ ತಿಂಗಳಲ್ಲಿ ತಿಂಗಳಿನ ಮೊದಲನೆ ದಿನದಲ್ಲಿ ತುತೂರಿಗಳ ಹಬ್ಬವಾದ ದೊಡ್ಡ ಸಬ್ಬತ್ ನಿಮಗೆ ಪರಿಶುದ್ಧ ಕೂಟವಾಗಿರಲಿ.”

೩. ವರ್ಷದ ಸಬ್ಬತ್. ಏಳೇಳನೆ ವರ್ಷವು ದೇಶಕ್ಕೆ ವಿಶ್ರಾಂತಿಕಾಲವಾಗಿತ್ತು. ಸ. ೨೫, ೧—೮. ಅದರಲ್ಲಿ ಆರಂಭವೆಲ್ಲಾ ನಿಂತಿತು. ಹೊಲಗಳಲ್ಲಿಯೂ ದ್ರಾಕ್ಷೆತೋಟಗಳಲ್ಲಿಯೂ ಮರಗಳಲ್ಲಿಯೂ ತನ್ನಷ್ಟಕ್ಕೆ ಬೆಳದದ್ದೆಲ್ಲಾ ಬಡವರಿಗೂ ಪರದೇಶಸ್ಥರಿಗೂ ಅಡವಿಯ ಮೃಗಗಳಿಗೂ ಬಿಡ ಬೇಕಾಗಿತ್ತು. ಹೊರ. ೨೫, ೧೧. ಕೊಟ್ಟ ಸಾಲಗಳನ್ನು ಪ್ರವಾಸಿಗಳಿಂದ ಕೇಳುವದಲ್ಲದೆ ಇಸ್ರಯೇಲನವರಿಂದ ಕೇಳಲಿಕ್ಕೆ ಈ ವರ್ಷದಲ್ಲಿ ಅಪ್ಪಣೆ ಇರಲಿಲ್ಲ. ಧ್ವಿತೀ. ೧೫, ೧. ೨. ಈ ವರ್ಷದಲ್ಲಿ ಆಗುವ ಗುಡಾರಗಳ ಹಬ್ಬದಲ್ಲಿ ಜನಾಂಗದ ಸರ್ವ ಸಭೆಗೆ ಸಮಸ್ತ ನೇಮವು (ಧ್ವಿತೀಯ ನ್ಯಾಯವೆಂಬ ಗ್ರಂಥದಲ್ಲಿ ಬರೆದ ನೇಮಸಂಗ್ರಹವು ಇಲ್ಲಿ ಸೂಚಿತವಾದದ್ದೆಂದು, ತೋರುತ್ತದೆ) ಓದಿ ಹೇಳೋಣವಾಗುತ್ತಿತ್ತು.

೪. ಮಹಾ ಸಬ್ಬತ್ ವರ್ಷವು, ಇಲ್ಲವೆ ಯೋಬೆಲ್ ವರ್ಷವು. (ಅದರ ಆರಂಭದಲ್ಲಿ ದೊಡ್ಡ ತುತೂರಿಯೂದುವ ಪದ್ಧತಿಯಿಂದ ಈ ಹೆಸರುಂಟಾಯಿತು) ಐವತ್ತೈವತ್ತನೆಯಾದ ಈ ವರ್ಷವೂ ಮಹಾ ವಿಮೋಚನೆಯೂ ವಿಶ್ರಾಂತಿಯೂ ಉಳ್ಳ ವರ್ಷವಾಗಿತ್ತು. ಸಬ್ಬತ್ ವರ್ಷದ ಕಟ್ಟಳೆಯ ಪ್ರಕಾರ ಈ ವರ್ಷದಲ್ಲಿಯೂ ಆರಂಭವೂ ದ್ರಾಕ್ಷೆತೋಟದ ಕೆಲಸವೂ ಆಗದೆ ಹೋಗುವವು. ಕಳೆದ ೪೯ ವರ್ಷಗಳಲ್ಲಿ ಯಾರಾದರೂ ಮಾರಿದಂಥ ಅಥವಾ ಅಡವಾಗಿಟ್ಟಂಥ ಭೂಮಿಗಳು ಹಣವಿಲ್ಲದೆ ಬಾಧ್ಯಸ್ಥನ ಕೈಗೆ ತಿರಿಗಿ ವಶವಾಗುವವು. (ಹೀಗಿರುವದರಿಂದ ಇಸ್ರಯೇಲನವರಲ್ಲಿ ಭೂಮಿಗಳೇ ಅಲ್ಲ ಅವುಗಳಲ್ಲಿ ಮಹಾ ಸಬ್ಬತ್ ವರ್ಷದ ವರೆಗೂ ಆಗುವ ಬೆಳೆಗಳು ಮಾರಲ್ಪಡುವವು.) ಆರನೆ ವರ್ಷದಲ್ಲಿ ಮುಂದಣ ಸಬ್ಬತ್ ವರ್ಷಕ್ಕಾಗಿ ಇಮ್ಮಡಿಯಾದ ಬೆಳೆಯು, ನಾಲ್ವತ್ತೆಂಟನೆ ವರ್ಷದಲ್ಲಿ ಮುಮ್ಮಡಿಯಾದ ಬೆಳೆಯು ಯೆಹೋವನ ವಾಗ್ದತ್ತದಿಂದಲುಂಟಾಗುತ್ತಿತ್ತು. ಕೈಯಾಳುಗಳಾದ ಇಬ್ರಿಯರು ಸಬ್ಬತ್ ವರ್ಷದಲ್ಲಿ ಯಜಮಾನರನ್ನು ಬಿಟ್ಟು ಬಿಡಲೊಲ್ಲದೆ ಮನೆಯಲ್ಲಿ ನಿಂತವರಾದರೆ, ಅಥವಾ ಮಹಾ ಸಬ್ಬತ್ ವರ್ಷಕ್ಕೆ ಮುಂಚೆ ಏಳು ವರ್ಷದ ಸೇವೆಯನ್ನು ತೀರಿಸದಿದ್ದರೆ, ಹ್ಯಾಗಾದರೂ ಯೋಬೆಲ್ ವರ್ಷದಲ್ಲಿ ಬಿಡುಗಡೆಯಾಗುವರು. ಲೇವಿ. ೨೫. ಈ ಮಹಾ ಸಬ್ಬತ್ ವರ್ಷವು ಸರ್ವಲೋಕರಕ್ಷಣೆಯ ಮುಂಗುರ್ತಾಗಿತ್ತು. ಹ್ಯಾಗಂದರೆ ಕೈಯಾಳುತನವೆಲ್ಲಾ ಮುಗಿದು, ಸಾಲವೆಲ್ಲಾ ತೀರಿ, ಮಾರಿದ್ದೆಲ್ಲಾ ತಿರಿಗಿ ಬಂದು, ಹೊಸ ಕಾಲದ ಆರಂಭವಾಗುವದು ಸರ್ವವು ಹೊಸ್ತಾಗಿ ಸ್ಥಾಪಿತವಾಗುವ ರಕ್ಷಣಾಪೂರ್ಣತೆಯನ್ನು ಸೂಚಿಸುತ್ತಿತ್ತು. ಅಪೊ. ಕ್ರಿ. ೩, ೨೧.

II. ವರ್ಷಂಪ್ರತಿಯ ಹಬ್ಬಗಳು.

ತಕ್ಕ ಪ್ರಾಯದ ಇಸ್ರಯೇಲನವರಲ್ಲಿ ಒಬ್ಬೊಬ್ಬನು ಪರಿಶುದ್ಧ ಸ್ಥಳಕ್ಕೆ ಬಂದು ಈ ಹಬ್ಬಗಳನ್ನು ಸಮಸ್ತ ಸಭೆಯೊಡನೆ ಆಚರಿಸುವ ಹಂಗಿನಲ್ಲಿದ್ದನು. ಹೊರ. ೩೪, ೨೩. ೨೪. ಬೇರೆ ಬೇರೆ ನಾಡುಗಳಲ್ಲಿ ವಸ್ತಿಯಾದ ಹನ್ನೆರಡು ಕುಲಗಳು ವರ್ಷ ವರ್ಷಕ್ಕೆ ಕೂಡಿ ಕೊಂಡು, ತಾವು ಒಂದೇ ದೇವರಿಗೆ ಆರಾಧನೇ ಮಾಡುವ ಒಂದೇ ಜನಾಂಗವೆಂತ ತಿಳಿದು ಕೊಂಡು, ಐಕ್ಯದಲ್ಲಿ ಸ್ಥಿರವಾಗುವ ಉದ್ದಿಶ್ಯವು ನೆರವೇರುವದಕ್ಕೆ ಆ ಕಟ್ಟಳೆಯು ಒಳ್ಳೆ ಉಪಾಯವಾಗಿತ್ತು.

ಮೂರಾದ ಈ ಹಬ್ಬಗಳಿಗೆ ಎರಡು ತರದ ತಾತ್ಪರ್ಯವು. ಏನಂದರೆ ಮೋಶೆಯ ಕಾಲದಲ್ಲಿ ಉಂಟಾದ ದೊಡ್ಡ ಕಾರ್ಯಗಳ ನೆನಪಿಗಾಗಿಯೂ, ಯೆಹೋವನು ದಯ ಮಾಡಿದ ಪೈರಿನ ವಿಷಯವಾದ ಕೃತಜ್ಞತೆಗಾಗಿಯೂ ಅವು ಆಚರಿಸಲ್ಪಡುತ್ತಿದ್ದವು. ಇಸ್ರಯೇಲನವರು ಯೆಹೋವನಿಗೆ ಸ್ವಕೀಯವಾದ ಪರಿಶುದ್ಧ ಜನಾಂಗವಾಗಿದ್ದದ್ದಲ್ಲದೆ, ಅವರು ಮಾಡುವ ಆರಂಭವೂ ಪರಿಶುದ್ಧ ಉದ್ಯೋಗವಾಗಿತ್ತು. ಯಾಕಂದರೆ ಅವರು ಯೆಹೋವನಿಂದ ವಾಗ್ದತ್ತವಾಗಿ ಹೊಂದಿದ ಭೂಮಿಯಲ್ಲಿ ಯೆಹೋವನ ಒಕ್ಕಲಿಗರಾಗಿದ್ದರು.

ಆದ್ದರಿಂದಲವರು ಯೆಹೋವನೆಂಬ ಧನಿಗೆ ಭೂಮಿಯ ಬೆಳೆಯಲ್ಲಿ ಪ್ರಥಮಫಲವನ್ನೂ ದಶಾಂಶವನ್ನೂ ಕೊಡುವ ಹಂಗಿನಲ್ಲಿದ್ದರು.

೧. ಪಸ್ಕ ಹಬ್ಬವು (ಹುಳಿ ಇಲ್ಲದ ರೊಟ್ಟಿಗಳ ಹಬ್ಬವು) ಇಸ್ರಯೇಲನವರ ಸಭೆಯ ವರ್ಷಕ್ಕೆ ಆದಿದಿವಸವಾಗಿದ್ದು, ಚೊಚ್ಚಲಮಕ್ಕಳಿಗೆ ಮಿಜ್ರದಲ್ಲಿ ದೊರಕಿದ ರಕ್ಷಣೆಯು, ದಾಸತ್ವದ ದೇಶದಿಂದ ಜನಾಂಗಕ್ಕೆ ಪ್ರಾಪ್ತವಾದ ಬಿಡುಗಡೆಯು, ಇವುಗಳ ಜ್ಞಾಪಕಾರ್ಥವಾದ ಹಬ್ಬವಾಗಿಯೂ ಕಾನಾನ ದೇಶದಲ್ಲಿ ಸೇರಿದವರಿಗೆ ವಸಂತದ ಪೈರಿನ ಹಬ್ಬವಾಗಿಯೂ ನೇಮಕವಾಯಿತು. ಪೈರು ಕೊಯಿಸಿ ಕೊಳ್ಳುವದಕ್ಕಿಂತ ಮುಂಚಿತವಾಗಿ ಜವೆಗೋಧಿಯ ಒಂದು ಕಟ್ಟನ್ನು ಪ್ರಥಮಫಲವಾಗಿ ಯಾಜಕನ ಮುಖಾಂತರ ಯೆಹೋವನಿಗೆ ಅರ್ಪಿಸ ಬೇಕಾಗಿತ್ತು. ಮಿಜ್ರದಿಂದ ಹೊರಟು ಬಂದವರು ಪಸ್ಕ ಕುರಿಯನ್ನು ತಿಂದಂತೆ, ಇಸ್ರಯೇಲನವರೆಲ್ಲರು ವರ್ಷಂಪ್ರತಿಯಲ್ಲಿ ನಿಸಾನ್ ಇಲ್ಲವೆ ಅಬಿಬ್ ತಿಂಗಳಿನ ೧೪ನೆ ದಿವಸದ ಹಬ್ಬದ ಮುಂಚಿನ ಸಾಯಂಕಾಲದಲ್ಲಿ ಅದೇ ಆಚರಣೆಗಳನ್ನು ನಡಿಸಿ, ಪಸ್ಕಭೋಜನ ಮಾಡುತ್ತಿದ್ದರು. ಪಸ್ಕಕುರಿಯ ರಕ್ತವು ಬಾಗಲುಗಳ ನಿಲುವು ಪಟ್ಟೆಗಳಿಗಲ್ಲ, ಬಲಿಪೀಠಕ್ಕೆ ಚಿಮುಕಿಸೋಣವಾಗುತ್ತಿತ್ತು. ಈ ಹಬ್ಬವು ಎಂಟು ದಿನದ ವರೆಗೆ ನಡೆಯುತ್ತಿತ್ತು. ಮೊದಲನೆ ದಿವಸವೂ ಕಡೆ ದಿವಸವೂ ವಿಶೇಷವಾದ ಹಬ್ಬಗಳಾಗಿ ಆಚರಿಸಲ್ಪಡುತ್ತಿದ್ದವು. ಅಂಕೆ. ೨೮. ದ್ವಿತೀ. ೧೬.

೨. ಪಂಚಾಶತ್ ಹಬ್ಬವು ಪಸ್ಕಹಬ್ಬದ ಮೇಲಿನ ೫೦ನೆ ದಿವಸದಲ್ಲಿ ಆಗುತ್ತಿತ್ತು. ಪಸ್ಕ ದಿವಸದಲ್ಲಿ ತೊಡಗಿದ ಬೆಳೆಯು ಮುಗಿದ ಬಳಿಕ ಇಸ್ರಯೇಲನವರು ಭೂಮಿಯ ಧನಿಯಾದ ಯೆಹೋವನಿಗೆ ಕೃತಜ್ಞರಾಗಿ ಸ್ತೋತ್ರ ಮಾಡುವದಕ್ಕಾಗಿ ಈ ಹಬ್ಬವನ್ನು ಆಚರಿಸುತ್ತಾ ಬಂದರು. ಒಂದೇ ದಿವಸವು ಅದಕ್ಕೆ ನೇಮಕವಾಗಿತ್ತು. ಅದು ಸಬ್ಬತ್ ದಿವಸದಂತೆ ಪರಿಶುದ್ಧವಾದದ್ದೆಂದು, ಎಣಿಕೆಯಾಗಿತ್ತು. ಇದಲ್ಲದೆ ಪಂಚಾಶತ್ ಹಬ್ಬವು ಸೀನಾಯಿ ಬೆಟ್ಟದಲ್ಲಿ ಉಂಟಾದ ನೇಮಧಾನದ ಜ್ಞಾಪಕಾರ್ಥವಾದದ್ದಾಗಿತ್ತು.

೩. ಮಹಾ ವಿಮೋಚನೆಯ ದಿವಸವು. ಈ ವಿಷಯವಾಗಿ ೧೬ನೆ ಸಂಧಿಯ ವಿವರಣೆಯನ್ನು ನೋಡ ಬೇಕು.

೪. ಗುಡಾರಗಳ ಹಬ್ಬವು ತಿಸ್ರಿ ಎಂಬ ತಿಂಗಳಿನ ೧೫ನೆ ದಿವಸದಲ್ಲಿ ತೊಡಗಿ ೮ ದಿವಸ ಹಿಡಿಯುತ್ತಿತ್ತು. ಕಡೇ ದಿನದ ಆಚರಣೆಯು ಅತಿ ಘನವಾದದ್ದಾಗಿತ್ತು. ಅರಣ್ಯಸಂಚಾರದ ನೆನಪಿಗಾಗಿ ಮನೆಗಳನ್ನು ಬಿಟ್ಟು, ಹಸರು ಕೊಂಬೆಗಳಿಂದ ಕಟ್ಟಿದ ಗುಡಾರಗಳಲ್ಲಿ ವಾಸ ಮಾಡುತ್ತಾ, ಮೇಲುಪೈರನ್ನೂ ಎಣ್ಣೆಯನ್ನೂ ದ್ರಾಕ್ಷೆರಸವನ್ನೂ ಕೂಡಿಸಿ ಇಟ್ಟ ಬಳಿಕ, ಅದಕ್ಕಾಗಿ ಕೃತಜ್ಞತೆಯ ಹಬ್ಬವನ್ನು ಇಸ್ರಯೇಲನವರು ಆಚರಿಸುತ್ತಾ ಬಂದರು.

ಸ. ೨೪.

ಸಮ್ಮುಖದ ರೊಟ್ಟಿಗಳ ಮೇಜು, ಅದರಲ್ಲಿ ಎರಡು ಸಾಲಾಗಿ ಮಡಗಲೂ ಒಂದೊಂದು ಸಬ್ಬತ್ ದಿವಸದಲ್ಲಿ ಹಸಿಯಾಗಿ ತಂದು ಇಡಲೂ, ಯಾಜಕನಿಗೆ ನೇಮಕವಾದಂಥ, ಜ್ಞಾಪಕಾರ್ಥವಾದ ಆರಾರು ರೊಟ್ಟಿಗಳ ಸಂಗತಿ ೫—೯ರಲ್ಲಿ ಬರೆದದೆ. ದೇವದೂಷಕನನ್ನು ಸಭೆಯವರು ದಂಡಿನ ಹೊರಗೆ ಕೊಂಡು ಹೋಗಿ ಕಲ್ಲೊಗೆದು ಕೊಲ್ಲ ಬೇಕೆಂಬ ಅಪ್ಪಣೆಯನ್ನು ಇಸ್ರಯೇಲನವರು ಅನುಸರಿಸಿದ್ದು; ವ. ೧೦ — ೧೬. ದೇವರು ನೇಮಕ ಮಾಡಿದ ಬೇರೆ ಬೇರೆ ಶಿಕ್ಷೆಗಳು. ವ. ೧೭—೨೩. ವ. ೧೬. ಹೆಸರನ್ನು ಬೈಯುವವನು ಎಂಬದಕ್ಕೆ ಇಸ್ರಯೇಲರು ಮತ್ತೆ ಹೆಸರನ್ನು ಉಚ್ಚರಿಸುವವನು ಎಂಬ ಅರ್ಥ ಮಾಡಿ, ಯೆಹೋವನೆಂಬ ಶಬ್ದವನ್ನು ಉಚ್ಚರಿಸದೆ, ಅದೊನ್ಯೆ ಎಂದು ಹೇಳಿದರು.

ಸ. ೨೫.

ಸಬ್ಬತ್ ವರ್ಷವು, ಯೋಬೆಲ್ ವರ್ಷವು, ಇವುಗಳ ವಿವರವು ೨೩ನೆ ಸಂಧಿಯಲ್ಲಿ ಬರೆದದೆ.

ಸಂಧಿ. ೨೬.

ಈ ಸಂಧಿಯಲ್ಲಿ ಯೆಹೋವನಿಂದ ಸೀನಾಯಿ ಬೆಟ್ಟದಲ್ಲಿ ಉಂಟಾದ ನೇಮಧಾನದ ಅಂತ್ಯವು ಬರುತ್ತದೆ. ವ. ೪೬. ವ. ೧—೩೯: ಇಸ್ರಯೇಲನವರು ವಾಗ್ದತ್ತವಾದ ದೇಶವನ್ನು ಸ್ವತಂತ್ರಿಸಿ ಕೊಂಡಂತೆ ದೇವರು ಆಶೀರ್ವಾದವನ್ನೂ ಶಾಪವನ್ನೂ ಘನವಾದ ರೀತಿಯಿಂದ ಇಸ್ರಯೇಲನವರ ಮುಂದೆ ಇಡುತ್ತಾನೆ. ವ. ೪೦—೪೬: ದೇವದ್ರೋಹ ಮಾಡಿದವರ ಮೇಲೆ ಪಾತಕಕ್ಕೆ ತಕ್ಕ ಶಿಕ್ಷೆ ಬಿದ್ದರೂ, ನಿರಂತರವಾದ ಒಡಂಬಡಿಕೆಯ ಜನಾಂಗದ ಮೇಲಣ ಯೆಹೋವನ ಕೃಪೆಯು ಎಂದಿಗೂ ನಿರರ್ಥಕವಾಗುವದಿಲ್ಲವೆಂಬ ಪ್ರವಾದನೆಯು.

ಭಕ್ತರಿಗೆ ಬರುವ ಆಶೀರ್ವಾದವು. ವ. ೧—೧೩.

— — ವ. ೩. ನನ್ನ ಕಟ್ಟಳೆಗಳಲ್ಲಿ ನಡೆದು, ನನ್ನ ಅಪ್ಪಣೆಗಳನ್ನು ಕೈಕೊಂಡು,
ಅವುಗಳನ್ನು ಮಾಡುವಿರಾದರೆ, ೪. ನಿಮ್ಮ ಮಳೆಗಳನ್ನು[೧] ಅವುಗಳ ಕಾಲದಲ್ಲಿ ಕೊ
ಡುವೆನು, ಭೂಮಿಯೂ ಅದರ ಹುಟ್ಟುವಳಿಯ ಕೊಡುವದು, ಹೊಲದ ಮರವೂ
ಅದರ ಫಲವನ್ನು ಕೊಡುವದು. ೫. ಇದಲ್ಲದೆ ಕಣ ತುಳಿಯೋಣವು ನಿಮ್ಮಲ್ಲಿ ದ್ರಾ
ಕ್ಷೆಯ ಪೈರಿಗೆ ಹತ್ತುವದು, ದ್ರಾಕ್ಷೆಯ ಪೈರು ಬೀಜ ಬಿತ್ತೋಣಕ್ಕೆ[೨] ಹತ್ತುವದು,
ಮತ್ತು ನಿಮ್ಮ ರೊಟ್ಟಿಯನ್ನು ಸಂತೃಪ್ತಿಗೆ ತಿನ್ನುತ್ತಾ, ಭದ್ರವಾಗಿ ನಿಮ್ಮ ದೇಶದಲ್ಲಿ
ವಾಸ ಮಾಡುವಿರಿ. ೬. ಮತ್ತು ಹೆದರಿಸುವವರ್ಯಾರೂ ಇಲ್ಲದೆ ನೀವು ಮಲಗಿ ಕೊ
ಳ್ಳುವ ಹಾಗೆ, ದೇಶದಲ್ಲಿ ಸಮಾಧಾನವನ್ನು ಕೊಡುವೆನು. — — ೧೦. ಮತ್ತು ಹ
ಳೇಪಳೇದನ್ನುಣ್ಣುವಿರಿ[೩]; ಹೊಸದು ಬಂದರೆ, ಹಳೇದನ್ನು ಹೊರಗಿಡುವಿರಿ[೪]. ೧೧.
ಮತ್ತು ನನ್ನ ನಿವಾಸವನ್ನು[೫] ನಿಮ್ಮ ನಡುವೆಯಲ್ಲಿ ಇರಿಸುವೆನು; ನನ್ನ ಪ್ರಾಣವು
ನಿಮಗೆ ಓಕರಿಸದು. ೧೨. ಮತ್ತು ನಿಮ್ಮ ನಡುವೆಯಲ್ಲಿ ನಡಕೊಳ್ಳುವೆನು; ನಿಮಗೆ
ದೇವರಾಗಿರುವೆನು, ನೀವು ನನಗೆ ಪ್ರಜೆಯಾಗಿರುವಿರಿ.

೧. ಅಂದರೆ, ಮುಂಗಾರೆಯನ್ನೂ ಹಿಂಗಾರೆಯನ್ನೂ.

೨. ಕಣತುಳಿಯುವದು ಎಪ್ರೀಲೆಂಬ ತಿಂಗಳಲ್ಲಿ ತೊಡಗಿತು. ದ್ರಾಕ್ಷೇ ಫಲಗಳನ್ನು ಸಪ್ತಂಬರೆಂಬ ತಿಂಗಳಲ್ಲಿ ಕೊಯ್ಯುತ್ತಿದ್ದರು. ಮೇಲಣ ಮಾತಿನ ಅಭಿಪ್ರಾಯವೇನಂದರೆ: ಧಾನ್ಯ ತುಳಿಯುವ ಕೆಲಸ ಸಪ್ತಂಬರ್ ತಿಂಗಳಿನ ವರೆಗೆ ನಡೆಯುವಷ್ಟು ದೊಡ್ಡ ಬೆಳೆ ನಿಮಗೆ ಬರುವದು. ಬೀಜ ಬಿತ್ತುವನಕ ದ್ರಾಕ್ಷೆಯ ಗಾಣ ಹಾಕುವ ಕೆಲಸ ನಡೆಯುವಷ್ಟು ದೊಡ್ಡ ದ್ರಾಕ್ಷೆಯ ಪೈರು ನಿಮಗೆ ಆಗುವದು.

೩. ಹಳೇದು ಅಂದರೆ, ಹಿಂದಿನ ವರ್ಷದ ಬೆಳೆ.

೪. ಹಿಂದಿನ ವರ್ಷದ ಹುಟ್ಟುವಳಿ ವೆಚ್ಚವಾಗುವದಕ್ಕಿಂತ ಮುಂಚೆ ಹೊಸ ಬೆಳೆ ಬರುವದರಿಂದ ಕಣಜಗಳನ್ನು, ಉಳಿದ ಧಾನ್ಯ ಹೊರಗೆ ತಂದು, ಸಿದ್ಧ ಮಾಡ ಬೇಕಾಗುವದು.

೫. ದೇಹಾತ್ಮಿಕವಾದ ದಿವ್ಯ ವರಗಳ ಸಮಸ್ತ ಪೂರ್ಣತೆಯು ಇದರಲ್ಲಿ ಅಡಕವಾಗಿದೆ.

ಅವಿಧೇಯರಿಗೆ ಬರುವ ಶಾಪವು. ವ. ೧೪—೩೯.

ವ. ೧೪. ಆದರೆ ನನಗೆ ಕಿವಿ ಕೊಡದೆ, ಈ ಅಪ್ಪಣೆಗಳನ್ನೆಲ್ಲಾ ಮಾಡದೆ ಹೋ
ಗುವಿರಾದರೆ,— — ೧೭. ನನ್ನ ಮೋರೆಯನ್ನು ನಿಮ್ಮೆದುರಿಗಿಡುವೆನು, ಆಗ ನಿಮ್ಮ

ಎದುರಾಳಿಗಳ ಮುಂದೆ ಹೊಡಿಸಿ ಕೊಂಡು, ನಿಮ್ಮ ಹಗೆಯವರಿಗೆ ಒಳಗಾಗಿ, ನಿಮ್ಮ
ನ್ನು ಹಿಂದಟ್ಟುವವರ್‍ಯಾರೂ ಇಲ್ಲದೆ ಓಡಿ ಹೋಗುವಿರಿ. ೧೮. ಇದಲ್ಲದೆ ಇದರ ವ
ರೆಗೂ ನನಗೆ ಕಿವಿ ಕೊಡದೆ ಹೋಗವಿರಾದರೆ, ನಿಮ್ಮನ್ನು ನಿಮ್ಮ ಪಾಪಗಳಿಗಾಗಿ
ಇನ್ನೂ ಏಳಷ್ಟಾಗಿ ದಂಡಿಸುವೆನು. ೧೯. ನಿಮ್ಮ ಹೆಚ್ಚಿಗೆಯ ಗರ್ವವನ್ನು ಮುರಿದು
ಬಿಡುವೆನು. ನಿಮ್ಮ ಬಾನು ಕಬ್ಬಿಣದಂತೆಯೂ ನಿಮ್ಮ ಭೂಮಿ ತಾಂಬ್ರದಂತೆಯೂ
ಆಗಲೀಸುವೆನು.— — ೨೩. ಈ ಬಗೆಯಿಂದಲೂ ನನಗೆ ಕಿವಿ ಕೊಡದೆ, ನನಗೆ ವಿ
ರೋಧವಾಗಿ ನಡಕೊಳ್ಳುವಿರಾದರೆ, ೨೪. ನಿಮಗೆ ವಿರೋಧವಾದ ಉರಿಯಿಂದ
ನಡಕೊಂಡು, ನಾನು ಸಹ ನಿಮ್ಮನ್ನು ನಿಮ್ಮ ಪಾಪಗಳಿಗಾಗಿ ಏಳಷ್ಟಾಗಿ ದಂಡಿಸು
ವೆನು[೧]. ೨೯. ಆಗ ನಿಮ್ಮ ಗಂಡುಮಕ್ಕಳ ಮಾಂಸವನ್ನು ತಿಂದು, ನಿಮ್ಮ ಹೆಣ್ಣು
ಮಕ್ಕಳ ಮಾಂಸವನ್ನು ತಿನ್ನುವಿರಿ[೨].— — ೩೧. ಮತ್ತು ನಿಮ್ಮ ಪಟ್ಟಣಗಳನ್ನು ದೇ
ಗುಲ ಮಾಡಿ, ನಿಮ್ಮ ಪರಿಶುದ್ಧ ಸ್ಥಳಗಳನ್ನು ಹಾಳು ಮಾಡುವೆನು — —. ೩೩. ಆ
ದರೆ ನಿಮ್ಮನ್ನು ಜನಾಂಗಗಳಲ್ಲಿ ಚದರಿಸಿ[೩], ನಿಮ್ಮ ಹಿಂಬಳಿಯಲ್ಲಿ[೪] ಕತ್ತಿ ಬಿಚ್ಚುವೆ
ನು — —. ೩೬. ಮತ್ತು ನಿಮ್ಮಲ್ಲಿ ಉಳಿದವರಿಗೆ ಅವರ ಎದುರಾಳಿಗಳ ದೇಶದೊ
ಳು ಅವರ ಹೃದಯದಲ್ಲಿ ಹೇಡಿತನವನ್ನು ಹುಟ್ಟಿಸುವೆನು; ಆಗ ಬಡಿದಾಡುವ ಎಲೆ
ಯ ಶಬ್ದವು ಅವರನ್ನು ಓಡಿಸಲಾಗಿ, ಖಡ್ಗ ಪಲಾಯನದಿಂದ ಪಲಾಯನರಾಗಿ, ಓ
ಡಿಸುವವರ್‍ಯಾರೂ ಇಲ್ಲದೆ, ಬೀಳುವರು.

೧. ಮನುಷ್ಯರು ಕರ್ತನ ಶಿಕ್ಷೆಯನ್ನು ಅಸಡ್ಡೆ ಮಾಡಿದರೆ, ದಂಡನೆಗಳು ಹೆಚ್ಚಾಗುವದು ಯುಕ್ತವಾಗಿದೆ.

೨. ಈ ಪ್ರವಾದನೆಯು ಎರಡಾವರ್ತಿ, ಒಂದು ಶಬ್ದವಾದರೂ ತಪ್ಪದೆ, ನೆರವೇರಿತು. ಖಲ್ದೀಯರು ಯೆರೂಸಲೇಮುವನ್ನು ಸುತ್ತಿ ಕೊಂಡ ವೇಳೆಯಲ್ಲಿ ಆದದ್ದು ೨ ಅರಸು. ೬, ೨೮. ೨೯ರಲ್ಲಿ ಬರೆದದೆ. ಕ್ರಿಸ್ತನ ಜನನದ ಈಚೆಯ ಎಪ್ಪತ್ತನೆ ವರ್ಷದಲ್ಲಿ ರೋಮಾಯರು ಯೆರೂಸಲೇಮಕ್ಕೆ ಮುತ್ತಿಗೆ ಹಾಕಿದ ಕಾಲದಲ್ಲಿ ಶಾಪಗ್ರಸ್ತವಾದ ಪಟ್ಟಣದಲ್ಲಿ ನಡೆದ ಅಸಹ್ಯವಾದ ಸಂಗತಿಗಳನ್ನು ಚರಿತ್ರಕರ್ತನಾದ ಯೋಸೆಫನು ಯೆಹೂದ್ಯರ ಕಾಳಗವೆಂಬದರಲ್ಲಿ ಬರೆದಿದ್ದಾನೆ.

೩. ಈ ಪ್ರವಾದನೆ ಸಹ ಬಬುಲೋನದ ಪ್ರವಾಸನದ ಕಾಲದಲ್ಲಿಯೂ ಇತ್ತಲಾಗಿ ಯೆರೂಸಲೇಮುವು ರೋಮಾಯರ ಕೈಯಿಂದ ಹಾಳಾದ ಮೇಲೆಯೂ ಈಡೇರಿತು.

೪. ಪೂರ್ವಕಾಲದಲ್ಲಿ ಯೆಹೋವನು ಇಸ್ರಯೇಲನವರ ಸೈನ್ಯಾಧಿಪತಿಯಾಗಿ ಅವರ ದಂಡಿನ ಮುಂದೆ ಹೋಗಿ ಶತ್ರುಗಳ ಬಲವನ್ನು ಮುರಿದು ಬಿಡುತ್ತಾ ಬಂದನು. ದ್ರೋಹಿಗಳಾದವರಿಗೆ ಶತ್ರುವಾಗಿ, ಕತ್ತಿ ಬೀಸುತ್ತಾ ಹಿಂದಟ್ಟುವ ಶೂರನಂತೆ, ಅವರನ್ನು ನಾಶನ ಮಾಡ ಬೇಕೆಂದು, ನಿರ್ಣೈಸುತ್ತಾನೆ.

ಆಯಿಕೆಯಾದ ಜನಾಂಗವು ದೇವರ ಆಜ್ಞೆ ನಿರ್ಣಯಕ್ಕೆ ಒಳಗಾದರೂ ಪುನರಂಗೀಕೃತವಾಗಿರುವದೆಂಬ ಪ್ರವಾದನೆಯು. ವ. ೪೦—೪೬.

ವ. ೪೦. ಆಗ ತಮ್ಮ ಅಕ್ರಮವನ್ನೂ ತಮ್ಮ ತಂದೆಗಳ ಅಕ್ರಮವನ್ನೂ ತಾವು
ದ್ರೋಹಿಗಳಾಗಿ ನನಗೆ ದ್ರೋಹ ಮಾಡಿ, ನನಗೆ ವಿರೋಧವಾಗಿ ನಡದು ಕೊಂಡ

೨೯೦ ಆಯಿಕೇ ಜನಾಂಗವು ಪುನರಂಗೀಕೃತವಾಗಿರುವದೆಂಬ ಪ್ರವಾದನೆ.

ಲೇವಿಕ. ೨೬, ೪೦ — ೪೫; ೨೭.

ರೆಂತ, ಆರಿಕೆ ಮಾಡುವರು[೧]. — — ೪೪. ಆದಾಗ್ಯೂ ಅವರು ಅವರ ಎದುರಾಳಿಗಳ ದೇಶದಲ್ಲಿ ಇರುವಾಗಲಾದರೂ[೨], ಅವರನ್ನು ಮುಗಿಸುವಂತೆಯೂ, ಅವರೊಡನೆಯ ನನ್ನ ಒಡಂಬಡಿಕೆ ಬೀಯವಾಗದಂತೆಯೂ, ನಾನು ಅವರನ್ನು ತಳ್ಳುವದೂ ಹೇಸುವದೂ ಇಲ್ಲ. ಯಾಕಂದರೆ ನಾನು ಅವರ ದೇವರಾದ ಯೆಹೋವನು. ೪೫. ಮತ್ತು ಅವರಿಗೆ ದೇವರಾಗಿರುವ ಬಗ್ಗೆ, ಜನಾಂಗಗಳ ಕಣ್ಣುಗಳ ಮುಂದೆ ಅವರನ್ನು ಮಿಚ್ರ ದೇಶದಿಂದ ಹೊರ ಬರಿಸಿದ ಮೊದಲಿನ ಒಡಂಬಡಿಕೆಯನ್ನು ಅವರಿಗಾಗಿ ನೆನಪು ಮಾಡುವೆನು.

೧. ತನ್ನ ಪಾಪವನ್ನು, ನೆವ ಹೇಳದೆಯೂ ಅದನ್ನು ತಗ್ಗಿಸದೆಯೂ, ನೆಟ್ಟಗಾಗಿ ಅರಿಕೆ ಮಾಡುವದು ಮಾನಸಾಂತರದ ಆರಂಭವಾಗಿದೆ.

೨. ಭೂಲೋಕದ ದೇಶಗಳಲ್ಲೆಲ್ಲಿಯೂ ಚದರಿರುವ ಯೆಹೂದ್ಯರಲ್ಲಿ ಇಂದಿನ ವರೆಗೂ ಈ ವಚನದ ಮಾತು ಸಮಾಧಾನವನ್ನೂ ಪ್ರತೀಕ್ಷೆಯನ್ನೂ ಹುಟ್ಟಿಸ ತಕ್ಕದ್ದು. "ದೇವರ ವರಗಳೂ ಕರಿಯುವಿಕೆಯೂ ಪಶ್ಚಾತ್ತಾಪವಿಲ್ಲದವುಗಳಾಗಿವೆ" ಎಂತ ರೋ. ೧೧, ೨೯ರಲ್ಲಿ ಬರೆದ ಪ್ರಕಾರ ಇಸ್ರಯೇಲನವರ ಜನಾಂಗವು ಸ್ವದೇಶದಿಂದ ಹೊರಗಾಗಿ ಭೂಲೋಕದಲ್ಲಿ ಚದರಿಹೋಗಿ ಎಲ್ಲೆಲ್ಲಿಯೂ ಪ್ರವಾಸನ ಮಾಡುತ್ತಾ ಇದ್ದರೂ, ದೇವರ ಜನಾಂಗವಾಗಿರದಿರದು. ಇಲ್ಲಿ ಬರದಿರುವಂಥ, ಬಳಿಕ ಆಗ್ಯಾಗ್ಯೆ ಪುನರುಕ್ತವಾದಂಥ ಪ್ರವಾದನೆಗಳಿಗೆ ಅನುಸಾರವಾಗಿ, ದೇವರು ತನ್ನ ರಾಜ್ಯದ ವೃದ್ಧಿಗೂ ಸಿದ್ಧಿಗೂ ಸಂಬಂಧವಾದ ಮಹಾಘನವಾದ ಕಾರ್ಯಗಳನ್ನು ಹಳೆ ಒಡಂಬಡಿಕೆಯ ಜನಾಂಗದ ಮುಖಾಂತರ ನಡಿಸುವನು. ಭೂಮಿಯ ದೇಶಗಳಲ್ಲೆಲ್ಲಾ ಚದರಿ ಹೋದದ್ದಾಗಿದ್ದರೂ ಜನಾಂಗೈಕ್ಯವು ಈ ವರೆಗೂ ಭಂಗವಾಗಲಿಲ್ಲ. ಅವರು ತಮ್ಮ ಅವಿಧೇಯತ್ವ, ತಮ್ಮ ತಂದೆಗಳ ಅವಿಧೇಯತ್ವ ಇವುಗಳ ಅಪರಾಧವನ್ನು ಇಂದಿನ ವರೆಗೆ ಹೊರುವದೇ ದಿವ್ಯಪ್ರವಾದನೆಗಳು ದೃಢವಾಗಿವೆಂಬದಕ್ಕೆ ತಿಳಿಯದೆ ಸಾಕ್ಷಿಗಳಾಗಿದ್ದಾರೆ. ಅವರ ತಿರಸ್ಕಾರವು, ದೇವರ ವಾಕ್ಯವು ಸತ್ಯವಾದದ್ದೆಂಬದಕ್ಕೆ ಯಾರೂ ಅಲ್ಲಗಳೆಯಲಾರದ ದೃಷ್ಟಾಂತವಾದ ಹಾಗೆಯೇ, ಅವರ ಪುನರಂಗೀಕಾರವೂ ದೇವರವಾಕ್ಯ ತಪ್ಪುವದಿಲ್ಲವೆಂಬದಕ್ಕೆ ಪ್ರಮಾಣವಾಗುವದು.

ಸ. ೨೭.

೨೬ನೆ ಸಂಥಿಯ ಕಡೆಯಲ್ಲಿ ಸೀನಾಯಿ ಬೆಟ್ಟದಲ್ಲಿ ಉಂಟಾದ ನೇಮಥಾನದ ಸಂಗತಿ ಮುಗಿದ ಬಳಿಕ, ಈ ಸಂಥಿ ಮೊದಲ್ಗೊಂಡು ಅಂಕೆ. ೧೦, ೧೧ರ ವರೆಗೆ ಹಿಂದಿನ ದೊಡ್ಡ ಪ್ರಕರಣಕ್ಕೆ ಸಂಬಂಧವಾದ ಬೇರೆ ಬೇರೆ ಉಪನೇಮಗಳು ಬರೆದಿರುವ ಪರಿಶಿಷ್ಟವು ಬರುತ್ತದೆ. ಈ ಸಂಥಿಯು ಹರಿಕೆ ಮುಂತಾದದರ ವಿಷಯವಾದದ್ದು. ಕರ್ತನಿಗೆ ಕೊಡ ಬೇಕಾದ ಬಲಿಗಳು ಮುಂತಾದವುಗಳು ಹೊರ್ತಾಗಿ ಮನಸುತ್ಸಾಹವಾಗಿ ವಿಶೇಷವಾದ ಹರಿಕೆಗಳನ್ನು ಮಾಡುವದು ಇಸ್ರಯೇಲನವರಿಗೆ ಯುಕ್ತವಾಗಿತ್ತು. ಮನುಷ್ಯರು ಕರ್ತನಿಗೆ ಮೀಸಲಾದದ್ದಾದರೆ, ಅವರು ಪರಿಶುದ್ಧಾಲಯದ ಕೈಯಾಳುಗಳಾಗಿ ಸಾಕ್ಷೀಗುಡಾರದ ಸೇವೆಯ ನೀಚ ಕೆಲಸಗಳನ್ನು ಮಾಡುವವರಾದರು. (ನ್ಯಾಯಾಧಿ. ೧೧, ೩೧.) ಯಾರಾದರೂ ಮನುಷ್ಯನನ್ನು ಯೆಹೋವನಿಗೆ ಹರಿಕೆ ಮಾಡಿದ್ದರೆ, ನರಬಲಿಯು ನಿಷಿದ್ಧವಾದ್ದರಿಂದ, ತನ್ನ ಹರಿಕೆ ಸಲ್ಲಿಸುವ ಬಗ್ಗೆ, ಮನುಷ್ಯನಿಗೆ ಪ್ರತಿಯಾಗಿ ಯಾಜಕನು ಕರ್ತನ ಅಪ್ಪಣೆಯಿಂದ ಲಿಂಗ, ಪ್ರಾಯ, ಸ್ಥಿತಿ ಗತಿಗಳ ಹೆಚ್ಚು ಕಡಿಮೆಯ ಪ್ರಕಾರ ಕಟ್ಟಿದ ಬೆಲೆಯ ಹಣವನ್ನು ಕೊಡ ಬೇಕಾಗಿತ್ತು. ವ. ೧ — ೮. ಒಬ್ಬನು ಹರಿಕೆ ಮಾಡಿದ ಪಶು ಶುದ್ಧವಾದದ್ದಾಗಿದ್ದರೆ, ಬಲಿಯರ್ಪಣೆಯಾಗುವದು, ಅದು ಅಶುದ್ಧವಾದದ್ದಾಗಿದ್ದರೆ, ಅದಕ್ಕೆ ತಕ್ಕ ಕ್ರಯದ

ಲೇವಿಕ. ೨೭, ೯ — ೩೪.

ಹಣವು ಸಂದು ಬರುವದು. ವ. ೯ — ೧೩., ಹರಿಕೆ ಮಾಡಿದ ಮನೆಗಳು, ವ. ೧೪. ೧೫., ಹರಿಕೆ ಮಾಡಿದ ಭೂಮಿಗಳು, ವ. ೧೬ — ೨೫., ಇದಲ್ಲದೆ ಶುದ್ಧವಾದ ಪಶುಗಳ ಮರಿಗಳು ಕಟ್ಟಳೆಯ ಪ್ರಕಾರ ಕರ್ತನ ಪಾಲಾಗಿದ್ದರಿಂದ ಅವನ್ನ ಹರಿಕೆ ಮಾಡಲಾಗದಿತ್ತು. ಅಶುದ್ಧವಾದ ಪಶುಗಳ ಚೊಚ್ಚಲು ಮರಿಗಳು ಬಲಿಯರ್ಪಣೆಯಾಗಲಯುಕ್ತವಾದದರಿಂದ, ಅವುಗಳನ್ನ ಕ್ರಯದ ಹಣಕ್ಕೆ ಮೇಲಾಗಿ ಐದನೆ ಪಾಲು ಹೆಚ್ಚಾಗಿ ಕೊಟ್ಟು ಬಿಡಿಸ ಬೇಕಾಗಿತ್ತು. ಹರಿಕೆ ಮಾಡಿದವನು ಹಣ ಕೊಟ್ಟು ಬಿಡಿಸಲೊಲ್ಲದಿದ್ದರೆ, ಯಾಜಕನು ತಕ್ಕ ಕ್ರಯಕ್ಕೆ ಮಾರುವದು. ವ. ೨೬. ೨೭. "ಆದರೆ ಮನುಷ್ಯನಾಗಲಿ, ಪಶುವಾಗಲಿ, ಬಾಧ್ಯದ ಭೂಮಿಯಾಗಲಿ, ತನಗಿದ್ದದ್ದೇನಾದರೂ ಒಬ್ಬನು ಯೆಹೋವನಿಗೆ ಶಾಪಾರ್ಪಿಸಿದ್ದಾದರೆ, ಅದನ್ನು ಮಾರಲೂ ಹಣ ಕೊಟ್ಟು ಬಿಡಿಸಲೂ ಬಾರದು. ಶಾಪಾರ್ಪಿತವಾದದ್ದೆಲ್ಲ ಯೆಹೋವನಿಗೆ ಅತ್ಯಂತ ಪರಿಶುದ್ಧವಾದದ್ದು." ವ. ೨೮. "ಮನುಷ್ಯರಲ್ಲಿ ಶಾಪಾರ್ಪಿತ ಯಾವನಾದರೂ — — ಸತ್ತೇ ಸಾಯ ಬೇಕು." ವ. ೨೯. ಶಾಪಾರ್ಪಿತವಾದದ್ದೇನಾದರೂ ಎಂದಿಗೂ ಬಲಿಯಾಗ ಬಾರದಿತ್ತು. (ಎಫ್ತಾಹನು ತನ್ನ ಮಗಳನ್ನು ಯೆಹೋವನಿಗೆ ಶಾಪಾರ್ಪಿಸಲಿಲ್ಲ, ನ್ಯಾಯಾಧಿ. ೧೧, ೩೧ ಇತ್ಯಾದಿ.) ಶಾಪಾರ್ಪಿತ ವಸ್ತುವು ನಿಜವಾಗಿ ಯೆಹೋವನಿಗೆ ಹರಿಕೆಯಾದದ್ದು ಸರಿ, ಆದರೆ ದಯಾಪ್ರಾಪ್ತಿಗಾಗಿ ಅಲ್ಲ, ಆ ವಸ್ತುವು ವಿನಾಶಕ್ಕಾಗಿಯೂ ಯೆಹೋವನ ಕೋಪಕ್ಕೊಳಗಾಗುವ ಹಾಗೆಯೂ ಹರಿಕೆಯಾಗಿರುವದು. ೨೯ನೆ ವಚನದ ಕಟ್ಟಳೆಯ ಉದಾಹರಣೆಗಳು ಇಸ್ರಾಯೇಲನವರು ಕನಾನ ದೇಶಸ್ಥರ ಸಂಗಡ ಮಾಡಿದ ಕಾಳಗಚರಿತ್ರದಲ್ಲಿ ದೊರಕುತ್ತವೆ. ದಶಮವೆಲ್ಲಾ ಕರ್ತನ ಪಾಲಾಗಿತ್ತು. ಅದನ್ನು ಹಣ ಕೊಟ್ಟು ಬಿಡಿಸ ಬೇಕೆಂದಿರುವವನು ಅದರ ಬೆಲೆಗೆ ಹೆಚ್ಚಾದ ಐದನೆ ಪಾಲು ಸಲ್ಲಿಸ ಬೇಕಾಗಿತ್ತು. ವ. ೩೦ — ೩೩. ಯೆಹೋವನು ಮೋಶೆಗೆ ಇಸ್ರಾಯೇಲನ ಮಕ್ಕಳಿಗಾಗಿ ಸೀನಾಯಿ ಬೆಟ್ಟದಲ್ಲಿ ಕೊಟ್ಟ ಅಪ್ಪಣೆಗಳು ಇವುಗಳೇ. ವ. ೩೪.

ಅಂಕೆಗಳು ಎಂಬ

ಮೋಶೆಯ ನಾಲ್ಕನೆ ಗ್ರಂಥ.

ಸೆಪ್ತುವಗಿಂತ ಎಂಬ ಗ್ರೇಕ ಭಾಷಾಂತರದವರು ಇಸ್ರಯೇಲನವರಾದ ಕಾದಾಳುಗಳ ಎಣಿಕೆ ಅದರ ಮೊದಲನೆ ಇಪ್ಪತ್ತಾರನೆ ಸಂಧಿಗಳಲ್ಲಿ ತೋರುವದರಿಂದ ಅದಕ್ಕೆ ಅಂಕೆಗಳೆಂತ ಹೆಸರಿಟ್ಟರು. ಇಸ್ರಯೇಲನವರ ದಂಡು ಸೀನಾಯಿ ಬೆಟ್ಟದಿಂದ ಹೊರಟಂದಿನಿಂದ ಮೋವಾಬದ ಬೈಲುಶೀಮೆಯಲ್ಲಿ ಶೇರಿದ ವರೆಗೆ ಕಳದ ಮೂವತ್ತೆಂಟೂಮುಕ್ಕಾಲು ವರ್ಷಗಳಲ್ಲಿ ನಡೆದ ಕಾರ್ಯಗಳ ಚರಿತ್ರವು ಆಗುವಷ್ಟು ಅಡಕವಾಗಿ ಈ ಗ್ರಂಥದಲ್ಲಿ ಬರೆದದೆ. ಅತಿ ಕ್ಲುಪ್ತವಾದ ಈ ಚರಿತ್ರದಲ್ಲಿ ವಿಧವಿಧದ ಅಧಿಕ ನೇಮಗಳೂ ಅತಿಶಯವಾದ ಇತರ ಕಾರ್ಯಗಳ ಕಥೆಗಳೂ ಶೇರಿಯವೆ. ಇಪ್ಪತ್ತು ವರ್ಷ ಪ್ರಾಯದ ಕಾದಾಳುಗಳನ್ನು ಎಣಿಕೆ ಮಾಡ ಬೇಕೆಂಬ ಅಪ್ಪಣೆಯನ್ನು ದೇವರು ಮೋಶೆಗೆ ಹೊರಡೋಣವಾದ ಹದಿಮೂರನೆ ತಿಂಗಳಿನ ಮೊದಲನೆ ದಿವಸದಲ್ಲಿ ಕೊಟ್ಟದ್ದು ಮೊದಲ್ಗೊಂಡು (ಸ. ೧, ೧.) ಅರಣ್ಯಸಂಚಾರದ ನಾಲ್ವತ್ತನೆ ವರ್ಷದ ಹನ್ನೊಂದನೆ ತಿಂಗಳಿನ ಮೊದಲನೆ ದಿವಸದ ವರೆಗೆ (ದ್ವಿತಿ. ೧, ೩.) ಕಳದ ೩೮ ವರ್ಷದ ೯ ತಿಂಗಳಿನ ಚರಿತ್ರವೆಲ್ಲಾ ಈ ಒಂದೇ ಗ್ರಂಥದಲ್ಲಿ ಸಂಗ್ರಹವಾಗಿದೆ. ಯಾಕೆಂದರೆ ಇಸ್ರಯೇಲನವರು ಅವಿಧೇಯತ್ವದಲ್ಲಿ ಬಿದ್ದು, ದೇವರು ೧೩ನೆ ಸಂಧಿಯಲ್ಲಿ ಅವರಿಗೆ ನಿರ್ಣೈಸಿದ ಶಿಕ್ಷೆಯನ್ನು ತಾಳುತ್ತಾ ಬಂದ ಕಾಲದ ಚರಿತ್ರವನ್ನು ದೇವರ ವಾಕ್ಯವು ವಿವರವಾಗಿ ವರ್ಣಿಸಲೊಲ್ಲದು. ಅದೇ ಕಾರಣದಿಂದ ಎಪ್ಪತ್ತೇಳು ವರ್ಷದ ಬಾಬೆಲದ ಪ್ರವಾಸನದ ಚರಿತ್ರದ ವಿಷಯವಾಗಿಯೂ ದೇವರ ವಾಕ್ಯದಲ್ಲಿ ಬಹಳ ಕೊಂಚವಾದದ್ದು ಲಿಖಿತವಾಗಿದೆ.

ಗ್ರಂಥದ ಸೂಚನೆ: ೧. ಇಸ್ರಯೇಲನವರ ದಂಡು ಸೀನಾಯಿ ಬೆಟ್ಟದಿಂದ ಹೊರಟು ಮರಳಿ ಅರಣ್ಯಸಂಚಾರ ಮಾಡುವದಕ್ಕೆ ಆಚೆಯ ಸಂಗತಿಗಳು. ಸ. ೧ — ೧೦, ೧೧.

೨. ದಂಡು ಸೀನಾಯಿ ಬೆಟ್ಟವನ್ನು ಬಿಟ್ಟು ಕನಾನ ದೇಶದ ಗಡಿಯಲ್ಲಿಯಣ ಕಾದೆಷ್ ಬರ್ನೇಯದ ಬಳಿಗೆ ಮಾಡಿದ ಪಯಣವು. ಸ. ೧೦, ೧೧ — ಸ. ೧೯.

೩. ಇಸ್ರಯೇಲನವರು ಕಾದೆಷದಿಂದ ಹಿಂದಿರುಗಿ, ೩೭ ವರ್ಷದ ಬಳಿಕ ಮೋವಾಬದ ಬೈಲಿಗೆ ಬಂದ ಪರಿಯಂತ ಆದ ವಿಶೇಷ ಕಾರ್ಯಗಳ ಚರಿತ್ರವು. ಸ. ೨೦ — ೩೬.

ಮೊದಲನೆ ಪ್ರಕರಣದಲ್ಲಿ ಸೀನಾಯಿ ಬೆಟ್ಟದಲ್ಲಿಯ ನೇಮಧಾನಕ್ಕೆ ಸಂಬಂಧವಾದ ಪರಿಶಿಷ್ಟಗಳುಂಟು. ಎರಡನೇದರ ತಾತ್ಪರ್ಯವೇನಂದರೆ: ಬೇಗೆಬೈಲಿನ ಬೆಂಕಿ, ಲಾವಕ್ಕಿಗಳು, ವ್ಯಾಧಿ, ಆರೋನ ಮಿರ್ಯಾಮರು ಗುಣುಗುಟ್ಟಿದ್ದು, ಕನಾನ ದೇಶಕ್ಕೆ ಹೋಗಿ ಬಂದ ಚಾರರು, ಮಾರ್ಪಲಿತ ಜನರ ಶಿಕ್ಷೆ, ಕೋರಾಹನ ಗುಂಪಿನ ದ್ರೋಹ, ಜನಾಂಗದ ಗಲ್ಲತ್ತು, ಯಾಜಕನಾದ ಆರೋನನ ಚಿಗತಕೋಲು ಇವುಗಳ ಕಥೆ. ಮೂರನೇದರ ತಾತ್ಪರ್ಯವೇನಂದರೆ: ಮಿರ್ಯಾಮಳ ಮರಣ, ಎದೋಮ್ಯರು ತಮ್ಮ ಶೀಮೆಯ ಹಾದು ಹೋಗ ಬೇಕೆಂದು ಕೇಳಿದ ಇಸ್ರಯೇಲನವರಿಗೆ ಅಡ್ಡ ಕಟ್ಟಿದ್ದು, ಆರೋನನ ಮರಣ, ತಾಂಬ್ರದ

ಅಂಕೆಗಳು.

ಹಾವು, ಅವೋರ್‍ಯ್ರರ ಮೇಲೆ ಬಿದ್ದ ಕಲ್ಮಳೆ, ಬಾಷಾನದ ಅರಸನಾದ ಓಗನ ಅಪಜಯ, ಬಿಳಾಮನ ಪ್ರವಾದನೆ, ಪಿನೆಹಾಸನ ಶೀಲ, ಯೆಹೋಷುವನ ಆಯಿಕೆ, ಮಿದ್ಯಾನ್ಯರ ಅಪಜಯ, ರೂಬೇನ್ ಗಾಡ್ ಅರ್ಧಮನಾಸೆ ಕುಲಗಳಿಗೆ ಸ್ವಾಸ್ಥ್ಯದ ಶೀಮೆ ನಿರ್ಣಯವಾದದ್ದು, ವಾಗ್ದತ್ತದೇಶದ ಗಡಿ, ಇವುಗಳ ವಿವರವು.

ಈ ಗ್ರಂಥದಲ್ಲಿ ಬರದಿರುವಂಥ, ಎರಿಕೋವಿಗೆದುರಿನ ಮೋವಾಬದ ಬೈಲಿಗೆ ಬರುವನಕಾ ಇಸ್ರಾಯೇಲನ ಮಕ್ಕಳು ಮಾಡಿದ ಅರಣ್ಯಸಂಚಾರದ ಕ್ರಮವನ್ನು ಸರಿಯಾಗಿ ತಿಳುಕೊಳ್ಳುವದು ಅಧಿಕ ಪ್ರಯಾಸವಾಗಿದೆ. ನಮಗೆ ನಿಜವಾದದ್ದೆಂದು, ತೋರುವದೇನಂದರೆ: — ಒಳ್ಳೆ ಮೇವು ದೊರಕಿದ ಸೀನಾಯಿ ಬೆಟ್ಟದ ಕಡೆಯ ನಾಡುಗಳಲ್ಲಿ ಕೊಂಚ ಕಡಿಮೆಯಾಗಿ ಒಂದು ವರ್ಷ ಉಳು ಕೊಂಡನಂತರ, ಇಸ್ರಾಯೇಲನವರು ಅಲ್ಲಿಂದ ಹೊರಟು, ಹಚೆರೋತಿನ ಮಾರ್ಗವಾಗಿ (ಸ. ೧೧, ೩೫) ಪಾರಾನ್ ಅರಣ್ಯದಲ್ಲಿ ಶೇರಿ, (ಸ. ೧೩, ೨೬. ಸ. ೨೦, ೧. ೧೪. ಮತ್ತು ಸ. ೩೩, ೩೬ ಸರಿ ನೋಡಿದರೆ, ಪಾರಾನ್ ಅರಣ್ಯಕ್ಕೂ ಚೀನ್ ಅರಣ್ಯಕ್ಕೂ ಬಹಳ ಹೆಚ್ಚು ಕಡಿಮೆ ಇಲ್ಲವೆಂತ ತೋರುವದು.) ಕನಾನ ದೇಶದ ತೆಂಕಣ ಗಡಿಗೂ ಎದೋಮ ದೇಶದ ಪಡುವಲ ಗಡಿಗೂ ಸಮೀಪವಾದ ಕಾದೇಷಿಗೆ ಮುಟ್ಟಿದರು. ಈ ಪಯಣದಲ್ಲಿ ದೇಶದ ಗುಟ್ಟು ನೆರೆಬಲ್ಲಿದ ಮೋಶೆಯ ಮಾವನಾದ ಹೊಬಾಬನು ಅವರಿಗೆ ಒತ್ತಾಸೆ ಮಾಡಿದ್ದಲ್ಲದೆ, ಮೇಘಾಗ್ನಿಮಯ ಸ್ತಂಭವು ಹೋಗಲೂ ನಿಲ್ಲಲೂ ತಕ್ಕ ಹೊತ್ತು ಸೂಚಿಸುತ್ತಾ, ನಡೆಯ ತಕ್ಕ ದಾರಿ ತೋರಿಸುತ್ತಾ ಇತ್ತು. ಹಚೆರೋತೆಂಬದು ಮೊನ್ನೆ ರೊಬಿನ್‌ಸೊನನು ಕಂಡ ಎಲ್‌ಹುದೆರವೆಂಬ ಚಾವಿಯಾಗಿದ್ದರೆ, ಇಸ್ರಾಯೇಲನವರು ಸೀನಾಯಿ ಬೆಟ್ಟದ ಬಳಿಯಿಂದ ಈಶಾನ್ಯ ದಿಕ್ಕಿಗೆ ತಿರುಗಿ, ಕಡಲಿನ ತೀರಕ್ಕೆ ಹೋಗಿ, ಅದನ್ನು ಹಿಡಿದು ಅಕಬಕ್ಕೆ ಮುಟ್ಟಿ, ಅಕಬದಿಂದ ಉತ್ತರ ವಾಯುವ್ಯಗಳ ಕಡೆಗೆ ನಡೆದು, ಎಲ್‌ಅರಬ ಎಂಬ ದೊಡ್ಡ ಹಳ್ಳವನ್ನು ಹಾದು, ಕಾದೇಷಿಗೆ ಬಂದರೆಂತ, ನೆನಸ ಸಹಜವಾಗಿದೆ. ಕಾದೇಷಿನಿಂದ ಮೋಶೆ ಕನಾನ ದೇಶಕ್ಕೆ ಕಳುಹಿದ ಚಾರರು ತಿರಿಗಿ ಬಂದು ತಿಳಿಸಿದ ವರ್ತಮಾನಕ್ಕೆ ಜನರು ಅಂಗಲಾಚಿ ಮಾರ್ಮಲೆ ಮಾಡಿದ್ದರಿಂದ, ಸಮೀಪವಾದ ವಾಗ್ದತ್ತದೇಶದಲ್ಲಿ ಬೇಗ ಶೇರದೆ, ಪ್ರಾಯಸ್ಥರಾಗಿ ಮಿಚ್ರದಿಂದ ಹೊರ ಬಂದವರೆಲ್ಲರು, ಯೆಹೋಷುವ ಕಾಲೆಬರು ಹೊರ್ತಾಗಿ, ಸಾಯುವನಕಾ, ನಾಲ್ವತ್ತು ವರ್ಷದ ಪರ್ಯಂತ ಅರಣ್ಯಸಂಚಾರ ಮಾಡುವ ಶಿಕ್ಷೆಗೊಳಗಾದರು. ಈ ಕಾಲದಲ್ಲಿ ಶಾಪಗ್ರಸ್ತರೆಲ್ಲಾ ಸತ್ತು, ಯೌವನಸ್ಥರು ಬೆಳದು, ಅಷ್ಟರೊಳಗೆ ಅರಣ್ಯದಲ್ಲಿ ಆಚೆ ಈಚೆ ತಿರುಗಾಡಿ, ಎರಡನೆ ಕಾದೇಷಿಗೆ ಬಂದರು. ಅಲ್ಲಿ ಎದೋಮ್ಯರು ತಮ್ಮ ದೇಶವನ್ನು ಹಾದು ಹೋಗುವದಕ್ಕೆ ಅಪ್ಪಣೆ ಕೊಡದೆ ಇರಲಾಗಿ, ಇಸ್ರಾಯೇಲನವರ ದಂಡು ಸೇಯಿರ್ ಘಟ್ಟಗಳನ್ನು ಸುತ್ತಿ, ಅವುಗಳ ಮೂಡಣ ಕಡೆಯಲ್ಲಿ ಬಡಗ ದಿಕ್ಕಿನ ಹಾದಿ ಹಿಡಿದು, ಸತ್ತ ಸಮುದ್ರವೆಂಬದಕ್ಕೆ ಹರಿಯುವಂಥ, ಈಗ ಕೆರೆಕೆನ್ನಿಸುವಂಥ, ಸಾರೆದ್ ಹೊಳೆಗೆ ಮುಟ್ಟಿ, ಆಚೆಯ ಮಾರ್ಗವನ್ನು ಕಟ್ಟುವ ಬಲವಾದ ದೊಡ್ಡ ಜನಾಂಗಗಳಾದ ಮೋವಾಬ್ಯರು ಅವೋರ್‍ಯ್ರರು ಇವರ ಸಂಗಡ ಮಹಾ ಕಾಳಗಗಳನ್ನು ನಡಿಸಿ, ಅವೋರ್‍ಯ್ರರ ಅರಸನಾದ ಸೀಹೋನನನ್ನೂ ಬಾಷಾನದ ಅರಸನಾದ ಓಗನನ್ನೂ ಗೆದ್ದು, ಕೊಂದ ಬಳಿಕ, ಯೊರ್ದಾನಿನ ಮೂಡಣ ಶೀಮೆಗಳನ್ನು ವಶ ಮಾಡಿ ಕೊಂಡು, ನಾಲ್ವತ್ತನೆ ವರ್ಷದಲ್ಲಿ ಯೆರಿಕೋವಿಗೆದುರಾದ ಮೋವಾಬದ ಬೈಲಿನಲ್ಲಿ ದಂಡಿಳಿಸಿ ಕೂತು ಕೊಂಡರು. ಆರೋನನು ಮುಂಚಿತವಾಗಿ, ಇಸ್ರಾಯೇಲನವರು ಹೋರ್ ಬೆಟ್ಟದ ಪ್ರದೇಶದಲ್ಲಿದ್ದ ಕಾಲದಲ್ಲಿ, ಸತ್ತು ಹೋಗಿದ್ದನು. ಮೋಶೆ ಮೋವಾಬದ ಬೈಲಿಗೆ ಬಂದು, ಪಿಸ್ಗ ಘಟ್ಟಗಳಲ್ಲಿಯ ನೇಬೋ ಬೆಟ್ಟವನ್ನೇರಿ, ವಾಗ್ದತ್ತದೇಶವನ್ನು ದೂರದಿಂದ ಕಂಡ ಮೇಲೆ, ಯೆಹೋಷುವನನ್ನು ತನಗೆ ಪ್ರತಿನಿಧಿಯಾದ ಜನಾಂಗದ ನಾಯಕನಾಗಿ ನೇಮಕ ಮಾಡಿದನಂತರ, ಜನಾಂಗದ ಕೂಟವನ್ನು ಕರಿಸಿ, ದ್ವಿತೀಯನ್ಯಾಯವೆಂಬ ಗ್ರಂಥದಲ್ಲಿ ಬರೆದದ್ದನ್ನೆಲ್ಲಾ ಸಾರಿದನು. —

ಅಂಕೆ. ೧.

ಇಸ್ರಯೇಲನವರು ಸೀನಾಯಿ ಬೆಟ್ಟದ ಬಳಿಯಿಂದ ಹೊರಟು ಮೋವಾಬದ ಬೈಲುಶೀಮೆಯ ಮಟ್ಟಿಗೂ ಮಾಡಿದ ಮುಂದಣ ಪಯಣವು. ಸ. ೧—೨೧.

ಮುಂದಣ ಪಯಣದ ಸನ್ನಾಹವು. ಸೀನಾಯಿ ಬೆಟ್ಟದಲ್ಲಿಯಣ ನೇಮಧಾನಕ್ಕೆ ಸಂಬಂಧವಾದ ಉಪನೇಮಗಳು. ಸ. ೧—೧೦, ೧೦.

ಜನಾಂಗದ ಎಣಿಕೆಯು. ಉಳಿದವರಿಗೆ ವಿಂಗಡವಾದ ಲೇವಿಯ ಕುಲಕ್ಕೆ ನೇಮಕವಾದ ಉದ್ಯೋಗವು.

ಸಂಧಿ ೧.

ವ. ೧. ಬಳಿಕ ಅವರು ಮಿಚ್ರ ದೇಶದಿಂದ ಹೊರಟು ಬಂದ ಎರಡನೆ ವರ್ಷದ ಎರಡನೆ ತಿಂಗಳಿನ ಮೊದಲನೆ ದಿವಸದಲ್ಲಿ ಯೆಹೋವನು ಸೀನಾಯಿ ಅರಣ್ಯದಲ್ಲಿ ಸಾಕ್ಷಿಯ ಗುಡಾರದೊಳು ಮೋಶೆಗೆ ನುಡಿದದ್ದೇನಂದರೆ: ೨. ಇಸ್ರಯೇಲನ ಮಕ್ಕಳ ಸಮಸ್ತ ಸಭೆಯ ಒಟ್ಟನ್ನು ಅವರ ತಂದೆಗಳ ಮನೆಗಳ ಪ್ರಕಾರವಾಗಿಯೂ ಗೋತ್ರಗಳ ಪ್ರಕಾರವಾಗಿಯೂ ತಲೆತಲೆಯಾಗಿರುವ ಗಂಡಸರೆಲ್ಲರ ಹೆಸರುಗಳ ಲೆಖ್ಖದಿಂದ ತಕ್ಕೊಳ್ಳಿರಿ. ೩. ಇಪ್ಪತ್ತು ವರ್ಷಾದಿ ಪ್ರಾಯದವರಾದ, ದಂಡಿಗೆ ಶೇರ ತಕ್ಕ, ಇಸ್ರಯೇಲನವರೆಲ್ಲರನ್ನು ಅವರವರ ದಂಡಿನ ಪ್ರಕಾರ ನೀನೂ ಆರೋನನೂ ಪರೀಕ್ಷಿಸಿರಿ. ೪. ಒಂದೊಂದು ಕುಲಕ್ಕೆ ತನ್ನ ತಂದೆಯ ಮನೆಗೆ ತಲೆಯಾದ ಒಬ್ಬನು ನಿಮ್ಮ ಕೂಡ ಇರಲಿ.


ಹೊರ. ೩೮, ೨೬ರಲ್ಲಿ ಪರಿಶುದ್ಧಾಲಯಕ್ಕಾಗಿ ಧರ್ಮದ ಹಣವನ್ನು ಕೂಡಿಸುವ ಬಗ್ಗೆ ಇಸ್ರಯೇಲನವರಲ್ಲಿ ಜನಾಂಗದ ಗಣನೆಯಾದ ಮೇಲೆ, ಇಲ್ಲಿ ದಂಡಿಳಿಸುವ ಕ್ರಮವನ್ನು ಸ್ಥಾಪಿಸುವ ಬಗ್ಗೆ ದಳದ ಎಣಿಕೆಯಾಗುವದು. ಆದದರಿಂದ ಅಲ್ಲಿಯೂ ಇಲ್ಲಿಯೂ ಹೆಂಡರು ಮಕ್ಕಳು ಮುದುಕರು ಪರಜನರು ಇವರನ್ನು ಬಿಟ್ಟು, ಕಾದಾಳುಗಳಾದ ಗಂಡಸರನ್ನೇ ಲೆಖ್ಖಕ್ಕೆ ತರುವದು ವಿಹಿತವಾಗಿತ್ತು. ಕುಲಗಳ ಮುಖ್ಯಸ್ಥರ ಹೆಸರುಗಳು ವ. ೫—೧೬ ಬರೆದವೆ. —ವ. ೧—೪ರಲ್ಲಿ ದೇವರು ಕೊಟ್ಟ ಅಪ್ಪಣೆ ವ. ೧೭—೪೬ರಲ್ಲಿ ನೆರವೇರುವದು. ೧೨ ಕುಲಗಳಲ್ಲೆಲ್ಲಾ ಇದ್ದ ಯುದ್ಧಸ್ಥರಾದ ಗಂಡಸರ ಲೆಖ್ಖವು ೯ ತಿಂಗಳ ಮೇಲೆ ಹೊರ. ೩೮, ೨೬ರ ಪ್ರಕಾರವಾಗಿಯೇ ಬರೆದದೆ, ಏನಂದರೆ ೬೦೩,೫೫೦ ಅಂದರೆ ತಿರಿಗಿ ಲೆಖ್ಖ ಮಾಡದೆ, ಮುಂಚಿನ ಲೆಖ್ಖವು ಆಧಾರವಾಗಿ ಬರೆಯಲಾಯಿತು. ಎರಡನೆ ಎಣಿಕೆಯಲ್ಲಿ ಇಸ್ರಯೇಲನವರ ಒಟ್ಟು, ಬಹಳ ಸಾವಿರ ಜನರು ಅರಣ್ಯಸಂಚಾರದ ೩೮ ವರ್ಷಗಳೊಳಗೆ ಸತ್ತು ಹೋಗಿದ್ದರೂ, ಬಹಳ ಕಡಿಮೆ ಆಗಲಿಲ್ಲವೆಂದು ಸ. ೨೬, ೫೧ರಲ್ಲಿ ಕಾಣುವದು. ಸಾಕ್ಷೀ ಗುಡಾರದ ಬಳಿಯ ವಾಸನವೃತ್ತಿಗಳುಳ್ಳ ಲೇವಿ ಕುಲದವರು ಸಾಮಗ್ರಿ ಸಹಿತವಾದ ಸಾಕ್ಷೀ ಗುಡಾರವನ್ನು ಬಿಚ್ಚೋಣ, ಹೊತ್ತು ಕೊಂಡು ಹೋಗೋಣ, ದಂಡು ಇಳಿಯುವಲ್ಲಿ ತಿರಿಗಿ ಕಟ್ಟೋಣ, ಪರರ್‍ಯಾರೂ ಹತ್ತರ ಬಂದು, ಪರಿಶುದ್ಧವಾದದ್ದನ್ನು ಮುಟ್ಟಿ, ಇಸ್ರಯೇಲನ ಜನಾಂಗದ ಮೇಲೆ ಯೆಹೋವನ ಶಿಕ್ಷೆಯನ್ನು ಬರ ಮಾಡದ ಹಾಗೆ, ಕಾದು ಕೊಳ್ಳೋಣ ಮುಂತಾದ ಉದ್ಯೋಗಗಳನ್ನು ನಡಿಸುವ ಯೆಹೋವನ ಸ್ವಕೀಯ ಸೇವಕರಾಗಿದ್ದದರಿಂದ, ಅವರು ಜನಾಂಗದ ಒಟ್ಟು ಲೆಖ್ಖದಲ್ಲಿ ಶೇರಿಸಿ ಕೊಳ್ಳಲಾಗದೆ ಹೋಯಿತು. ವ. ೪೭—೫೪.

ಅಂಕೆ. ೨, ೧. ೨.

ದಂಡು ಇಳಿಯುವ ಕ್ರಮವು. ಸಂಧಿ ೨.

ವ. ೧. ಮತ್ತು ಯೆಹೋವನು ಮೋಶೆಗೂ ಆರೋನನಿಗೂ ನುಡಿದದ್ದೇನಂದರೆ:
೨. ಇಸ್ರಯೇಲನ ಮಕ್ಕಳು ತನ್ನ ಪಳವಿಗೆಯ ಹತ್ತರ ಒಬ್ಬೊಬ್ಬನು, ಅವರವರ ತಂದೆಗಳ ಮನೇ ಕೊಡಿಗಳ ಪ್ರಕಾರ, ಇಳಿದು ಕೊಳ್ಳ ಬೇಕು. ಸಾಕ್ಷಿಯ ಗುಡಾರದ ಎದುರಾಗಿ ಸುತ್ತು ಇಳಿದು ಕೊಳ್ಳ ಬೇಕು.

ಈ ಅಪ್ಪಣೆಯ ಪ್ರಕಾರವಾಗಿ ಇಸ್ರಯೇಲನವರ ದಂಡು ಇಳುಕೊಳ್ಳ ತಕ್ಕ ವಿಧಿ ಯಾವದಂದರೆ: ಮೂರು ಮೂರು ಕುಲಕ್ಕೆ ಒಂದು ದೊಡ್ಡ ಪಳವಿಗೆ (ಪತಾಕೆ), ಒಂದೊಂದು ಕುಲಕ್ಕೆ "ತಂದೆಗಳ ಮನೆಯು" ಗುರ್ತುಳ್ಳ ಬೇರೆ ಬೇರೆ ಕೊಡಿ (ಚಿಕ್ಕ ಧ್ವಜ). ದಂಡಿನ ನಡುವೆಯಲ್ಲಿ ಸಾಕ್ಷೀ ಗುಡಾರ. ಅದರ ಸುತ್ತುಮುತ್ತು ಯಾಜಕರು ಲೇವಿಯರು ಇವರ ಗುಡಾರಗಳು. ಮೂಡಣ ಕಡೆಯಲ್ಲಿ ಯೆಹೂದ, ಇಸ್ಸಕಾರ, ಜೆಬುಲೋನರ ಕುಲಗಳು, ತೆಂಕಣ ಕಡೆಯಲ್ಲಿ ರೂಬೆನ ಸಿಮೆಯೋನ ಗಾದರ ಕುಲಗಳು, ಪಡುವಲ ಕಡೆಯಲ್ಲಿ ಎಫ್ರಯಿಮ ಮನಾಸೆ ಬೆನ್ಯಮೀನರ ಕುಲಗಳು, ಬಡಗ ಕಡೆಯಲ್ಲಿ ದಾನ ಅಶೇರ ನಫ್ಥಲಿಯರ ಕುಲಗಳು ಇಳುಕೊಳ್ಳುವದು. ಚಚ್ಚೌಕವಾಗಿ ಇಳಿದು ಕೊಂಡ ದಂಡಿನ ಪಠವು ಇಲ್ಲಿ ಬರದದೆ:



೨೯೬ ಲೇವಿಯವರ ಎಣಿಕೆ. ಅವರಿಗೆ ನೇಮಕವಾದ ಉದ್ಯೋಗ.

ಅಂಕೆ. ೩. ೪.

ಲೇವಿಯವರ ಎಣಿಕೆ. ದಂಡು ಹೊರಡುವ ವೇಳೆಯಲ್ಲಿ ಅವರಿಗೆ ನೇಮಕವಾದ ಉದ್ಯೋಗ. ಚೊಚ್ಚಲು ಮಕ್ಕಳ ವಿಮೋಚನೆಯ ವಿಷಯವಾದ ಕಟ್ಟಳೆ.

ಸಂಧಿ ೩. ೪.

ಸ. ೩, ೨೨ನೆ ೨೮ನೆ ೩೪ನೆ ವಚನಗಳ ಪ್ರಕಾರ ಲೇವಿಯವರೆಲ್ಲರ ಒಟ್ಟು ೨೨,೩೦೦ ಆಗಿತ್ತು. ೩೯ನೆ ವಚನದಲ್ಲಿ ೨೨,೦೦೦ ಮಾತ್ರ ಬರೆದದೆ, ಯಾಕೆಂದರೆ ಇಲ್ಲಿ ಚೊಚ್ಚಲು ಮಕ್ಕಳು ಎಣಿಕೆಯಾಗುವದಿಲ್ಲ. ಮೇಲಣ ಪತದಲ್ಲಿ ೮೫೮೦ ಮಂದಿ ಎಂಬದಾಗಿ ಬರೆದಿರುವ ಲೆಖ್ಖವನ್ನು ತಿಳುಕೊಳ್ಳ ಬೇಕಾದದ್ದು ಹ್ಯಾಗಂದರೆ, ಮೂವತ್ತು ವರ್ಷಕ್ಕೆ ಕಡಿಮೆ ಪ್ರಾಯದವರು, ಐವತ್ತು ವರ್ಷಕ್ಕೆ ಹೆಚ್ಚು ಪ್ರಾಯದವರು, ಯಾವದೊಂದು ಕುಂದಿಗಾಗಿ ಉದ್ಯೋಗವೃತ್ತಿಗೆ ಆಗದವರು ಇವರನ್ನು ಬಿಟ್ಟು ಪರಿಶುದ್ಧಾಲಯದ ಸೇವೆಗೆ ಯೋಗ್ಯರಾದ ಲೇವಿಯವರು, ಇಲ್ಲಿ ಬರೆದಷ್ಟು ಮಂದಿಯಾಗಿದ್ದರು*. ಲೇವಿಯವರು ಯಾಜಕರ ಸೇವಕರಾಗಿದ್ದು, ಯಜಮಾನರ ಹತ್ತರ ಸಾಕ್ಷೀ ಗುಡಾರದ ಸುತ್ತಲಿನ ಪ್ರಾಕಾರದ ಬಳಿಯಲ್ಲಿ ಇಳು ಕೊಳ್ಳುತ್ತಿದ್ದರು. ಹ್ಯಾಗಂದರೆ ಹೊರಗಣ ಒಳಗಣ ತೆರೆಗಳನ್ನೂ ಮೇಲಿನ ಮುಚ್ಚಳಗಳನ್ನೂ ಪರಾಮರಿಸುವ (ಸ. ೪, ೨೪ ಇತ್ಯಾದಿ) ಗೆರ್ಷೋನನವರು ಸಾಕ್ಷೀ ಗುಡಾರದ ಹಿಂದಿನ ಪಡುವಲಲ್ಲಿ ಇಳಿದು ಕೊಳ್ಳುತ್ತಿದ್ದರು. ಪ್ರಧಾನ ಯಾಜಕನಿಗೆ ಎರಡನೆಯವನಾದ ಲೇವಿಯವರ ಪ್ರಭುಗಳೆಲ್ಲರ ಪ್ರಭುವಾದ ಎಲ್ಯಾಜರನು ಒಬ್ಬನಾದ, ಸಾಕ್ಷೀ ಪೆಟ್ಟಿಗೆ ಮುಂತಾದ ಸಾಮಗ್ರಿಗಳ ಕಾಪಿನವರಾದ (ಸ. ೪, ೪ ಇತ್ಯಾದಿ) ಕೊಹಾಥನವರು ತೆಂಕಣದಲ್ಲಿದ್ದರು. ಹಲಿಗೆಗಳು ಅಗುಳಿಗಳು ಕಂಬಗಳು ಅಡಿಗಳು ಮೊದಲಾದ ಸಾಮಾನುಗಳ ಕೆಲಸ ನೋಡುವ (ಸ. ೪, ೩೧ ಇತ್ಯಾದಿ) ಮೆರಾರಿಯವರು ಬಡಗಿನಲ್ಲಿದ್ದರು. ಮೋಶೆ ಆರೋನರೂ ಇವನ ಗಂಡು ಮಕ್ಕಳೂ ಪರಿಶುದ್ಧಾಲಯದ ಪ್ರಧಾನ ಸೇವಕರಾಗಿದ್ದು, ಮೂಡಣದಲ್ಲಿದ್ದರು. ಕೊಹಾಥನವನಾದ ಅಮ್ರಾಮನ ಗೋತ್ರದವನಾದ ಮೋಶೆಯ ಮನೆತನದವರು ಕಾಲಗತಿಯಿಂದ ಬೇರೆ ಲೇವಿಯವರ ವಂಶಗಳಿಗೆ ಕಲಿತು ಕೊಂಡು ಹೋದರೆಂದು, ಕಾಣುತ್ತದೆ. ಇಸ್ರಯೇಲನ ಜನಾಂಗದ ಚೊಚ್ಚಲು ಮಕ್ಕಳಿಗೆ ವಿಮೋಚನಾರ್ಥಕ್ಕಾಗಿ ೨೨,೦೦೦ ಮಂದಿಯಾದ ಲೇವಿಯ ಕುಲದವರು ಯೆಹೋವನಿಗೆ ಮೀಸಲಾದರು. ಇವರಿಗಿಂತ ಹೆಚ್ಚಾದ ೨೭೩ ಮಂದಿ ಚೊಚ್ಚಲು ಮಕ್ಕಳಿಗಾಗಿ (ವ. ೪೬) ವಿಮೋಚನೆಯ ಹಣವು ಸಲ್ಲಿಸಿ ಕೊಳ್ಳ ಬೇಕಾಯಿತು. (ವ. ೩೮. ೪೩). ಇತ್ತಲಾಗಿನ ಕಾಲದಲ್ಲಿ (ಸ. ೧೮, ೮. ೧೫. ೧೬.) ಹುಟ್ಟಿದ ಎಲ್ಲಾ ಚೊಚ್ಚಲು ಮಕ್ಕಳಿಗಾಗಿ ವಿಮೋಚನೆಯ ಕ್ರಯವು ಸಲ್ಲಿಸಿ ಕೊಳ್ಳ ಬೇಕಾಗಿತ್ತು. ಅದರ ಹಣವು ಆರೋನನ ಪಾಲಾಯಿತು.

ಇಪ್ಪತ್ತು ವರ್ಷದ ಮೇಲಿನ ಗಂಡಾಳುಗಳು ೬೦೩,೫೫೦ ಆಗಿರುವಲ್ಲಿ, ಎಲ್ಲಾ ಇಸ್ರಯೇಲನವರ ಸಂಖ್ಯೆಯು ಶುಮಾರು ೨೦ ಅಥವಾ ೩೦ ಲಕ್ಷ ಆಗಿರುವದು. ಈ ಲೆಖ್ಖದಲ್ಲಿ ಶುಮಾರು ೮೦ ಅಥವಾ ೯೦ ಮಂದಿಗೆ ಒಬ್ಬ ಚೊಚ್ಚಲು ಮಗನೆಂತ ಆಗುವದು. ಇದು ಅಸಾಧ್ಯ. ಆದರೆ ಯೆಹೋವನು ಮಿಚ್ರ ದೇಶದವರ ಚೊಚ್ಚಲು ಮಗಂದಿರನ್ನು ಹತ ಮಾಡಿದ ದಿವಸದಿಂದ, ಹೊರ. ೧೩, ೨. ಅಂಕೆ. ೩, ೧೩. ೮, ೧೭., ಇಸ್ರಯೇಲನವರಲ್ಲಿ ಹುಟ್ಟಿದ ಚೊಚ್ಚಲು ಮಗಂದಿರನ್ನು ಎಣಿಸುವದಾದರೆ, ಅಂದಿನಿಂದ, ಲೆಖ್ಖ ಮಾಡಿದ ಕಾಲದ ವರೆಗೆ ೧೩ ತಿಂಗಳು ಗತಿಸಿ ಹೋಗಿರಲಾಗಿ, ಈ ಹದಿಮೂರು ತಿಂಗಳುಗಳಲ್ಲಿ ೨೨,೨೭೩ ಚೊಚ್ಚಲು ಮಗಂದಿರು ಹುಟ್ಟಿರುವದು ಏನೂ ಅಸಂಗತವಾಗಿ ಕಾಣುವದಿಲ್ಲ.

---

*೨೨೦೦೦ ಮಂದಿಯೊಳಗೆ (೩, ೪೩.) ಮೂವತ್ತು ವರ್ಷಕ್ಕೂ ಐವತ್ತು ವರ್ಷಕ್ಕೂ ನಡುವೆಯ ಪ್ರಾಯದವರಾದ ೮೫೮೦ ಮಂದಿ ದೊರಕಿದ್ದು (೪, ೪೬—೪೮.) ಚೋದ್ಯವಾಗಿದೆ. ಈ ಕುಲದವರು ಹೊರ. ೩೨ನೇ ಸಂಧಿಯಲ್ಲಿ ವಿವರಣೆಯಾದ ಶಿಕ್ಷೆಯಲ್ಲಿ ಇವರಲ್ಲಿ ಯಾರೂ ಸಾಯಲಿಲ್ಲವೆಂತಲೂ ಯೆಹೋವನ ಅತಿಶಯವಾದ ಆಶೀರ್ವಾದದಿಂದಲವರು ಶಾನೆ ಹೆಚ್ಚಿಗೆಯಾದರೆಂತಲೂ ನೆನವರಿಕೆಯಾಗಿರ ಬೇಕು. ದ್ವಿತೀ. ೩೩, ೮ ಇತ್ಯಾದಿ ಸಹ ನೋಡ ಬೇಕು.

ಅಂಕೆ. ೫. ೬, ೧—೨೭.

ಸಂಧಿ ೫.

ಕುಷ್ಠ ಮುಂತಾದದರಿಂದ ಹೊಲೆಯಾದವರು ದಂಡಿನ ಹೊರಗಾಗ ಬೇಕೆಂಬ ಕಟ್ಟಳೆ ನೆರವೇರಿದ್ದು. ವ. ೧—೪. ಅಪಹರಿಸಿದ ಪರರ ಒಡವೆ ಹಿಂದಕ್ಕೆ ಕೊಡ ಬೇಕೆಂಬ ಕಟ್ಟಳೆ. ವ. ೫—೧೦. ಮದಿವೆಯ ಪರಿಶುದ್ಧವಾದ ಒಡಂಬಡಿಕೆಯ ಬಂಧನಾರ್ಥಕ್ಕಾಗಿರುವ ಶಂಕಾರೋಷದ ಕಾಣಿಕೆ. ವ ೧೧—೩೧.

ಸಂಧಿ ೬.

ವ. ೧—೨೧. ತಾವಾಗಿ ಬೇಕೆಂದು ಯೆಹೋವನಿಗೆ ತಮ್ಮನ್ನು ಒಂದು ಕಾಲಕ್ಕೆ, ಇಲ್ಲವೆ (ಸಿಮ್ಸೋನನೂ ಸ್ನಾನಿಕನಾದ ಯೋಹಾನನು ಇವರಂತೆ) ಬದುಕಿರುವ ಕಾಲಕ್ಕೆ, ಒಪ್ಪಿಸಿ ಕೊಟ್ಟಂಥ ನಾಸೀರರೆಂತ ಹೆಸರ್ಗೊಂಡಂಥ, ವಿಾಸಲು ಜನರ ವಿಷಯವಾದ ಕಟ್ಟು.

ಜನಾಂಗಕ್ಕೆ ನುಡಿಯ ತಕ್ಕ ಆಶೀರ್ವಾದದ ವಿಷಯವಾದ ಅಪ್ಪಣೆ. ವ. ೨೨—೨೭.

ವ. ೨೨. ಬಳಿಕ ಯೆಹೋವನು ಮೋಶೆಗೆ ನುಡಿದದ್ದೇನಂದರೆ: ೨೩. ಆರೋನನಿಗೂ ಅವನ ಗಂಡು ಮಕ್ಕಳಿಗೂ ನುಡಿಯ ಬೇಕಾದದ್ದೇನಂದರೆ: ಹೀಗೆ ಇಸ್ರಯೇಲನ ಮಕ್ಕಳನ್ನು ಆಶೀರ್ವದಿಸಿರಿ೧). ಅವರಿಗೆ ಹೇಳಿರಿ: ೨೪. ಯೆಹೋವನು೨) ನಿನ್ನನ್ನು ಆಶೀರ್ವದಿಸಿ ಕಾಯಲಿ. ೨೫. ಯೆಹೋವನು ತನ್ನ ಮುಖವನ್ನು ನಿನ್ನ ಕಡೆಗೆ ಬೆಳಗಲೀಸಿ೩), ನಿನಗೆ ಕೃಪೆ ಮಾಡಲಿ. ೨೬. ಯೆಹೋವನು ತನ್ನ ಮುಖವನ್ನು ನಿನ್ನ ಕಡೆಗೆ ಎತ್ತಿ೪) ನಿನಗೆ ಸಮಾಧಾನವನ್ನೀಯಲಿ೫). ೨೭. ಅವರು ನನ್ನ ಹೆಸರನ್ನು೬) ಇಸ್ರಯೇಲನ ಮಕ್ಕಳ ಮೇಲೆ ಇಡಲು, ನಾನು ಅವರನ್ನು ಆಶೀರ್ವದಿಸುವೆನು.

೧. ಲೇವಿ. ೯, ೨೨ರ ಪ್ರಕಾರ ಆರೋನನು ಜನಾಂಗವನ್ನು ಮುಂಚಿತವಾಗಿ ಆಶೀರ್ವದಿಸಿದ್ದನು. ಇಲ್ಲಿ ಯೆಹೋವನು ತಾನು ದಿವ್ಯ ಆಶೀರ್ವಾದವಾಕ್ಯವನ್ನು ನೇಮಿಸುತ್ತಾನೆ. ಅದರ ಅಭಿಪ್ರಾಯವೇನಂದರೆ: ಯೆಹೋವನ ಹೆಸರನ್ನು ತನ್ನ ಮೇಲೆ ಇಡುವದನ್ನು ಕೇಳುವ, ಆತನ ತೇಜಸನ್ನಿಧಾನವುಳ್ಳ ಇಸ್ರಯೇಲನ ಜನಾಂಗವು ತಾನು ಯೆಹೋವನ ಸ್ವಕೀಯ ಜನಾಂಗವೆಂದು ನಿತ್ಯವಾಗಿ ತಿಳಿದು ಕೊಂಡು, ದೇವರು ನೇಮಕ ಮಾಡಿದ ಆಶೀರ್ವಾದವನ್ನು ಯಾಜಕನ ಬಾಯಿಂದ ಕೇಳುವಾಗೆಲ್ಲಾ ಯೆಹೋವನು ತನ್ನ ಸಂಗಡಲಿರುತ್ತಾನೆಂಬದನ್ನೂ ಆತನ ಆಶೀರ್ವಾದದ ಫಲವನ್ನೂ ಅನುಭವಿಸಿ ಕೊಳ್ಳ ತಕ್ಕದ್ದು.

೨. ಆಶೀರ್ವಾದವನ್ನು ನುಡಿಯುವವನು ಯಾಜಕನೇ ಸರಿ. ಆದರೆ ಯಾಜಕನ ಮುಖಾಂತರ ಬರುವ ಆಶೀರ್ವಾದವು ಸರ್ವವರದ ಮೂಲವಾದಂಥ, ತನ್ನ ಜನಾಂಗಕ್ಕೆ ಎಲ್ಲಾ ವರಗಳನ್ನು ಕೊಡ ಮನಸ್ಸುಳ್ಳಂಥ, ಅದನ್ನು ಗಂಡ ಇಕ್ಕಟ್ಟು ಮೋಸ ಮುಂತಾದ ಕೇಡಿಗೆಲ್ಲಾ ತಪ್ಪಿಸಿ ಕಾಯುತ್ತಾ ಬರುವ ಕರ್ತನಿಂದಲೇ ಉಂಟಾಗುವದು.

೩. ಕರ್ತನು ನಮಗೆ ಮಕ್ಕಳಿಗೆಂದು ಮೆಚ್ಚಿ ಕೃಪಾಳುವಾಗಿದ್ದರೆ, ವಿಶೇಷವಾಗಿ ಒಡಂಬಡಿಕೆಯ ದೂತನೆಂಬ ಹಳೆ ಹೊಸ ಒಡಂಬಡಿಕೆಗಳ ಮಧ್ಯಸ್ಥಗಾರನ ಮುಖಾಂತರ ತನ್ನ ಕೃಪೆಯನ್ನು ನಮಗೆ ಪ್ರಕಟಿಸಿದರೆ, ಕರ್ತನ ಮೋರೆ ನಮ್ಮ ಕಡೆಗೆ ಬೆಳಗುವದು.

೪. ಮುಖ ಎತ್ತಿ ಎಂಬದರ ಅರ್ಥವೇನಂದರೆ: ದೇವರು ನಿನ್ನನ್ನು ವಿಶೇಷವಾಗಿ ಪರಾಮರಿಸಿ, ತಾನೇ ಸರ್ವಶಕ್ತನಾದ ಮಮತೆಯುಳ್ಳ ತಂದೆಯಾಗಿ ನಿನ್ನನ್ನು ನಡಿಸಿ, ಬಲ ಪಡಿಸಿ, ಕಾಯಲಿ.

೫. ಕೃಪೆಯನ್ನು ಬಯಸುವ ಪಾಪಿಯಾದ ಮನುಷ್ಯನಿಗೆ ಬೇಕಾದ ರಕ್ಷಣೆಯ ಸಾರಾಂಶವೂ ಶಾಂತಿಯ ಪೂರ್ತಿಯೂ ಸಮಾಧಾನವೆಂಬದರಲ್ಲಿ ಕೂಡಿಯವೆ. ಹಳೆ ಒಡಂಬಡಿಕೆಯ ಗ್ರಂಥದಲ್ಲಿ ಈ ಆಶೀರ್ವಾದವಾಕ್ಯವು ಹೊಸ ಒಡಂಬಡಿಕೆಯಲ್ಲಿ ಸ್ಪಷ್ಟವಾಗಿ ಕಾಣ ಬರುವಂಥ ದೇವಭಾವದ ತ್ರಿಯೇಕತ್ವವನ್ನು ತಕ್ಕಷ್ಟು ಸೂಚಿಸುವ ಮೊದಲಿನ ವಚನವಾಗಿದೆ, ಹ್ಯಾಗಂದರೆ ಯೆಹೋವನ ಹೆಸರು ಇಲ್ಲಿ ಮೂರು ವಿಧದಿಂದ ಸ್ಮರಣೆಯಾಗಿದೆ. ಮೊದಲು ಯೆಹೋವನು ಸರ್ವವರದಾತನೆಂತಲೂ ಸರ್ವನಷ್ಟನಿವಾರಕನೆಂತಲೂ, ಮತ್ತು ಸ್ವಪ್ರಕಟಣೆಯ ಮೂಲವಾಗಿ ಕೃಪೆಯನ್ನು ಕೊಡುವವನೆಂತ, ಕಡೆಗೆ ತಿರಿಗಿ ಸ್ವಪ್ರಕಟಣೆಯ ಮೂಲವಾಗಿ ಸಮಾಧಾನವನ್ನು ಕೊಡುವವನೆಂತ ಅನ್ನಿಸಿ ಕೊಳ್ಳುತ್ತಾನೆ. ಮೊದಲನೆ ಸ್ಮರಣೆ ತಂದೆಯಾದ ದೇವರಿಗೆ ಒಪ್ಪುತ್ತದೆ. ಎರಡನೇದು ಪ್ರತ್ಯಕ್ಷ ದೇವಕೃಪೆಯಾಗಿರುವ ಮಗನಾದ ದೇವರನ್ನು ಸೂಚಿಸುತ್ತದೆ. ಮೂರನೇದು ದೇವಮನುಷ್ಯಾನ್ಯೋನ್ಯದಿಂದ ಸಮಾಧಾನವನ್ನುಂಟು ಮಾಡುವ ಆತ್ಮವಾದ ದೇವರಿಗೆ ಯುಕ್ತವಾಗಿದೆ. ಇಲ್ಲಿಯೂ ಹಳೆ ಒಡಂಬಡಿಕೆಯ ಆಶೀರ್ವಾದಕ್ಕೂ ಹೊಸ ಒಡಂಬಡಿಕೆಯ ಸಭೆಯಲ್ಲಿ ವಾಡಿಕೆಯಾದ ಅಪೊಸ್ತಲರ ಆಶೀರ್ವಾದಕ್ಕೂ (೨ ಕೊರಿ. ೧೩, ೧೩.) ಪರಸ್ಪರ ಸಂಬಂಧವುಂಟೆಂದು ತೋರುತ್ತದೆ.

೬. ಯೆಹೋವನ ಹೆಸರು ಬರೇ ಶಬ್ದವೆಂತ, ನೆನಸಲಾಗದು. ಅದು ನಿಜದೇವಜೀವಮಯವಾದ ನಿರ್ಮಾಣ ಸಂರಕ್ಷಣ ತ್ರಾಣವುಳ್ಳ ದೇವಪ್ರಕಟಣೆಯ ತತ್ವವಾಗಿದೆ. ಯೆಹೋವನ ಆಶೀರ್ವಾದವನ್ನು ಪಡ ಕೊಂಡವನು ನಿಜವಾದ ಆಶೀರ್ವಾದವನ್ನು ಹೊಂದಿದ್ದಾನೆ.

ಸಂಧಿ ೭.

ವ. ೧—೮೮. ಬಲಿಪೀಠದ ಪ್ರತಿಷ್ಠೆಗಾಗಿ ಕುಲಗಳ ಪ್ರಭುಗಳು ತಂದು ಕೊಟ್ಟ ದಾನಗಳೂ ಬಲಿಗಳೂ. ವ. ೮೯. ಯೆಹೋವನು ಮೋಶೆಯ ಸಂಗಡ ಮಾತಾಡಿದ ಸ್ಥಳವು.

ಸಂಧಿ ೮.

ವ. ೧—೪. ದೀಪಗಳನ್ನು ದೀಪಸ್ತಂಭದ ಮೇಲೆ ಇಡ ತಕ್ಕ ಕ್ರಮದ ವಿಷಯವಾಗಿ ಆರೋನನಿಗೆ ಮೋಶೆಯ ಮುಖಾಂತರ ಬಂದ ಅಪ್ಪಣೆ. ವ. ೫—೨೬. ಲೇವಿಯವರ ಪ್ರತಿಷ್ಠೆ.

ಸಂಧಿ ೯.

ಅರಣ್ಯದಲ್ಲಿ ಆದ ಪಸ್ಕ ಹಬ್ಬದ ಮೊದಲನೆ ಆಚರಣೆ. ಅದರ ಮಾರಣೆ ಆಚರಣೆ. ೧—೧೪.

ವ. ೧. ಮತ್ತು ಯೆಹೋವನು ಸೀನಾಯ ಅರಣ್ಯದಲ್ಲಿ ಅವರು ಮಿಸ್ರ ದೇಶದಿಂದ ಹೊರಟ ಎರಡನೇ ವರ್ಷದ ಮೊದಲನೆ ತಿಂಗಳಲ್ಲಿ ಮೋಶೆಗೆ ನುಡಿದದ್ದೇನಂದರೆ: ೨. ಇಸ್ರಯೇಲನ ಮಕ್ಕಳು ಪಸ್ಕ ಹಬ್ಬವನ್ನು ಕಟ್ಟಳೆಯ ವೇಳೆಯಲ್ಲಿ[೧]) ಮಾಡ ಬೇಕು. ೩. ಈ ತಿಂಗಳಿನ[೨]) ಹದಿನಾಲ್ಕನೆ ದಿವಸದಲ್ಲಿ ಸಂಧ್ಯಾಕಾಲದಲ್ಲಿ — — ಅದನ್ನು ಮಾಡ ಬೇಕು.— —೫. ಮತ್ತು ಪಸ್ಕ ಹಬ್ಬವನ್ನು ಮೊದಲನೆ ತಿಂಗಳಿನ ಹದಿನಾಲ್ಕನೆ ದಿವಸದಲ್ಲಿ ಸಂಧ್ಯಾಕಾಲದಲ್ಲಿ ಮಾಡಿದರು — —.

೧. ಹೊರ. ೧೨, ೨೫ರಲ್ಲಿ ದೇವರು ಇಸ್ರಯೇಲನವರಿಗೆ ಪಸ್ಕ ಹಬ್ಬವನ್ನು ಕನಾನ ದೇಶದಲ್ಲಿ ಶೇರಿದ ಬಳಿಕ ಆಚರಿಸ ಬೇಕೆಂದು, ಆಜ್ಞಾಪಿಸಿದನು. ಇಲ್ಲಿ ಅರಣ್ಯಸಂಚಾರದಲ್ಲಿಯೂ ಅದರ ಆಚರಣೆಯಾಗ

ಬೇಕೆಂಬ ಹೊಸ ಅಪ್ಪಣೆಯಾಗುತ್ತದೆ. ಆದಾಗ್ಯೂ ಇಸ್ರಾಯೇಲನವರು ಅದನ್ನು ಅರಣ್ಯದಲ್ಲಿ ಸರಿಯಾಗಿ ಕೈಕೊಳ್ಳುತ್ತಾ ಬಂದರೆಂತ, ತೋರುವದಿಲ್ಲ. ಆಮೋ. ೫, ೨೫. ೨೬. ಅಪೊ. ಕ್ರಿ. ೭, ೪೨. ಯೆಹೋಷು. ೫, ೬. ೭.

೨. ಪಸ್ಕ ಹಬ್ಬದ ಆಚರಣೆಯು ಒಂದು ತಿಂಗಳಿನ ಹಿಂದೆ ಆದ ಜನಾಂಗದ ಎಣಿಕೆಗಿಂತ ಮುಂಚೆ ಉಂಟಾಯಿತು. ಆದರೆ ಅದು ವ. ೬—೧೪ರಲ್ಲಿ ಬರುವ ಮಾರಣೆಯಾಚರಣೆಯ ಪ್ರಸ್ತಾಪಕ್ಕೆ ಸಂಬಂಧವಾಗಿರುವದರಿಂದ, ಅದರ ವಿವರವು, ಕಾಲಕ್ರಮಕ್ಕೆ ಅನನುಕೂಲವಾಗಿ, ಇಲ್ಲಿ ಶೇರಿಯದೆ.

ವ. ೬—೧೪. ಒಂದು ಶವ ಮುಟ್ಟಿ ಹೊಲೆಗಲಿಸಿದದರಿಂದಲಾಗಲಿ, ದೂರದಲ್ಲಿದ್ದದರಿಂದಲಾಗಲಿ, ಪಸ್ಕ ಹಬ್ಬವನ್ನು ಜನಾಂಗದೊಡನೆ ಆಚರಿಸಲಾರದೆ ಹೋದವರು ಮಾರಣೆ ತಿಂಗಳಿನ ೧೪ನೆ ದಿವಸದಲ್ಲಿ ಅದನ್ನು ಆಚರಿಸ ಬೇಕು. ಉಳಿದವರಲ್ಲಿ ಯಾರಾದರೂ ಪಸ್ಕ ಹಬ್ಬದ ಕಟ್ಟಳೆಯು ಕೈಕೊಳ್ಳದೆ ಇದ್ದರೆ, ಅವನಿಗೆ ಪ್ರಾಣಶಿಕ್ಷೆಯಾಗ ಬೇಕು ಎಂಬ ಅಪ್ಪಣೆ.

ವ. ೧೫—೨೩. ಮೇಘಾಗ್ನಿಸ್ತಂಭದ ಏಳಿಕೆ ಇಳಿಕೆಗಳು ದಂಡು ಏಳೋಣ ಇಳಿಯೋಣಗಳ ಸಂಜ್ಞೆ.

ಸಂಧಿ ೧೦.

ವ. ೧—೧೦. ಎರಡು ಬೆಳ್ಳಿ ತುತೂರಿಗಳು. ಅವುಗಳ ಉದ್ದಿಶ್ಯವು ಮೂರು ವಿಧವಾದದ್ದು, ಏನಂದರೆ: ೧. ಜನಾಂಗವನ್ನು ಸಭೆಗೆ ಇಲ್ಲವೆ ಹೊರಡೋಣಕ್ಕೆ ಕರೆಯುವದು. ೨. ಯುದ್ಧದಲ್ಲಿ ಶತ್ರುಗಳಿಗೆ ವಿರೋಧವಾಗಿ ಸಹಾಯ ಮಾಡುವದಕ್ಕೆ ದೇವರನ್ನು ಕರೆಯುವದು. ೩. ಹಬ್ಬಗಳಲ್ಲಿಯೂ ಪ್ರತಿಪದಗಳಲ್ಲಿಯೂ ಹೋಮಗಳನ್ನೂ ಸಮಾಧಾನಬಲಿಗಳನ್ನೂ ಅರ್ಪಿಸುವವರನ್ನು ದೇವರ ನೆನಪಿಗೆ ತರುವದು. (ಉತ್ಪ. ೯, ೧೭ರಲ್ಲಿ ಮಳೆಬಿಲ್ಲು ದೇವರಿಗೆ ಮನುಷ್ಯರೊಡನೆ ಮಾಡಿ ಕೊಂಡ ಒಡಂಬಡಿಕೆಯನ್ನು ಜ್ಞಾಪಕ ಮಾಡುವ ಸಂಜ್ಞೆಯಾಗಿ ತೋರುವ ಪ್ರಕಾರ, ಯೆಹೋವನು ತನ್ನ ಕೃಪೆಯ ಒಡಂಬಡಿಕೆಯನ್ನು ತುತೂರಿಯ ಶಬ್ದದಿಂದ ತನ್ನ ನೆನಪಿಗೆ ತರ ಬೇಕೆಂದು, ಆಯಿಕೆಯಾದ ಜನಾಂಗಕ್ಕೆ ಇಲ್ಲಿ ಅಪ್ಪಣೆ ಕೊಡುತ್ತಾನೆಂಬದು ಅತಿಶಯವಾದ ದೇವಮಮತಾಪ್ರಮಾಣವೆಂತ, ತಿಳುಕೊಳ್ಳ ತಕ್ಕದ್ದು.)

ಇಸ್ರಾಯೇಲನವರ ದಂಡು ಸೀನಾಯಿ ಬೆಟ್ಟದಿಂದ ಹೊರಟು ಮುಂದೆ ಮುಂದಕ್ಕೆ ಹೋಗಿ ಪಾರಾನ್ ಅರಣ್ಯಕ್ಕೆ (ಕಾದೇಷಿಗೆ) ಬಂದದ್ದು. ಸ. ೧೦, ೧೧—ಸ. ೧೩, ೧.

ವ. ೧೧. ಮತ್ತು ಎರಡನೆ ವರ್ಷದ ಎರಡನೆ ತಿಂಗಳಿನ[1] ಇಪ್ಪತ್ತನೆ ದಿವಸದಲ್ಲಿ ಮೇಘವು ಸಾಕ್ಷಿಯ ಗುಡಾರದ ಮೇಲಿನಿಂದ ಏಳಲಾಗಿ, ೧೨. ಇಸ್ರಾಯೇಲನ ಮಕ್ಕಳು ತಮ್ಮ ಪಯಣಗಳ ಪ್ರಕಾರ[2] ಸೀನಾಯಿ ಅರಣ್ಯದಿಂದ ಪಯಣ ಮಾಡಿದರು. ಮತ್ತು ಮೇಘವು ಪಾರಾನ್[3] ಅರಣ್ಯದಲ್ಲಿ ಇಳಿದು ಕೊಂಡಿತು.

೧. ಇಲ್ಲಿಯ ಕಾಲಗಣನೆ ಇಸ್ರಾಯೇಲನವರು ಮಿಸ್ರ ದೇಶದಿಂದ ಹೊರಟಂದಿನಿಂದ ತೊಡಗುವದು.

೨. ಪಯಣ ಮಾಡುವ ದಂಡು ಇಳುಕೊಂಡ ಠಾವುಗಳ ಪಟ್ಟಿ ಸ. ೩೩, ೧೬—೩೬ರಲ್ಲಿ ಬರೆದದೆ.

೩. ಪಾರಾನ್ ಎಂಬದು ಷೂರಿಗೂ ಸೇಯಿರಿಗೂ ನಡುವೆಯಣ ಕಾಡಾದ ದೇಶಕ್ಕೂ, ಸೀನಾಯಿ ಬೆಟ್ಟಕ್ಕೂ ಹಚೆರೋತಿಗೂ ನಡುವೆಯಣ ಅರಣ್ಯಕ್ಕೂ ಹೆಸರಾಗಿದೆ. ಇಲ್ಲಿ ಅದು ವಿಸ್ತಾರವಾದ, ಮೊದಲು ಹೇಳಿದ, ಕಾಡಿನ ಹೆಸರಾಗಿ ಪ್ರಯೋಗವಾಗಿದೆ. ಕಾದೇಷ್ ಎಂಬ ಹೆಸರು ಸಹ ಅದಕ್ಕೆ ಬರುವದು. ಕನಾನ ದೇಶದ ಕಡೆಯಲ್ಲಿರುವ ಅದರ ಭಾಗವು ಚೀನ್ ಅರಣ್ಯವೆಂದು ಅನ್ನಿಸಿ ಕೊಳ್ಳುವದು.

ದಂಡು ಕಟ್ಟಿದ ಕ್ರಮವು. ಸ. ೧೦, ೧೩--೨೮.

ಇಸ್ಸಕಾರ ಜೆಬುಲೋನರು ಕೂಡಿದ ಯೂದನು ಅಗ್ರಚರನು. ಸಾಕ್ಷಿಯ ಗುಡಾರದ ಮುಚ್ಚಳಗಳು ಮುಂತಾದವುಗಳನ್ನು ಹೊತ್ತು ಕೊಳ್ಳುವ ಗೆರ್ಷೋನನವರೂ ಹಲಿಗೆಗಳು ಮುಂತಾದವುಗಳನ್ನು ಹೊತ್ತು ಕೊಳ್ಳುವ ಮೆರಾರಿಯವರೂ ಅವನ ಹಿಂಬಳಿಯವರು. ಇವರ ಹಿಂಗಡೆಯಲ್ಲಿ ಸಿಮೆಯೋನ ಗಾಡರು ಸಹಿತವಾದ ರೂಬೆನನ ದಂಡು, ಇದರ ಹಿಂದೆಯೇ ಸಾಕ್ಷಿಯ ಪೆಟ್ಟಿಗೆ ಮುಂತಾದದ್ದನ್ನು ಹೊತ್ತು ಕೊಳ್ಳುವ ಕೊಹಾಥನವರು, ಗೆರ್ಷೋನನವರೂ ಮೆರಾರಿಯವರೂ ಮುಂಚೆ ಕಟ್ಟಿ ಹವಣು ಮಾಡಿದ ಗುಡಾರದಲ್ಲಿ ಪರಿಶುದ್ಧವಾದ ಸಾಮಗ್ರಿಗಳನ್ನು ತಡವಿಲ್ಲದೆ ಇಟ್ಟು ಕೊಳ್ಳುವದಕ್ಕೆ ಅಡ್ಡಿಯಾಗದ ಹಾಗೆ, ಬರುವರು. ಅಶೇರ ನಫ್ತಲಿಯರು ಕೂಡಿದ ದಾನನು ಕಟ್ಟಕಡೆಯವನು.

ಮೋಶೆ ಹೊಬಾಬ್ ಇವರ ಒಡಂಬಡಿಕೆ. ವ. ೨೯—೩೬.

ಯಿಥ್ರೋ ಎಂಬ ಹೊಬಾಬನು ಚಿಪ್ಪೋರಳ ಸಹೋದರನೂ ಮೋಶೆಯ ಚಾವವ್ಯೈದುನನೂ ಆಗಿದ್ದು, ಇಸ್ರಯೇಲನವರ ದಂಡು ಸೀನಾಯಿ ಬೆಟ್ಟದ ಬಳಿಯಿಂದ ಹೊರಟು ಹೋಗುವಾಗ, ಮೋಶೆ ತನ್ನ ದೇಶವಾದ ಮಿದ್ಯಾನಕ್ಕೆ ತಿರುಗಿ ಹೋಗ ಬೇಕೆಂದಿರುವವನನ್ನು ಬಹಳ ಬೇಡಿ ಕೊಂಡು, “ನಮ್ಮನ್ನು ಬಿಡ ಬೇಡ. ನಾವು ಇಳಿದು ಕೊಳ್ಳ ತಕ್ಕ ಸ್ಥಳಗಳನ್ನು ನೀನು ಬಲ್ಲೆ. ನೀನು ನಮಗೆ ಕಣ್ಣಾಗಿರ ಬೇಕು. ನಮ್ಮ ಸಂಗಡ ಹೋಗುವಿಯಾದರೆ, ಯೆಹೋವನು ನಮ್ಮಲ್ಲಿ ಮಾಡಲಿರುವ ಮೇಲನ್ನು ನಿನಗೆ ಮಾಡುವೆವು” ಎಂತ, ಬಿನ್ನೈಸಿದನು. (ವ. ೩೦—೩೨.) ದೇವರು ತನ್ನ ಜನಾಂಗವನ್ನು ಮೇಘಾಗ್ನಿಸ್ತಂಭದ ಮೂಲವಾಗಿ ಆಶ್ಚರ್ಯ ರೀತಿಯಿಂದ ನಡಿಸುತ್ತಾ ಇದ್ದರೂ, ದಾರಿ ನೆರೆಬಲ್ಲವನಾದ ಬುದ್ಧಿವಂತ ಮನುಷ್ಯನ ಸಹಾಯವು ಬೇಡೆಂದು, ಮೋಶೆ ನೆನಸಿ ಕೊಳ್ಳಲಿಲ್ಲವೆಂತ, ತೋರುತ್ತದೆ. ಹ್ಯಾಗಂದರೆ ಮೇಘವು ಸಾಕ್ಷಿಯ ಗುಡಾರದಿಂದ ಏರಿ, ದಂಡು ಹೋಗ ಬೇಕಾದ ದಿಕ್ಕಿಗೆ ಹೋಗಿ, ಮಾರ್ಗ ತೋರಿಸುತ್ತಾ ಇರಲು, ಹೊಬಾಬನು, ಆ ಸೀಮೆಯ ಗೊತ್ತು ಬಹಳ ಕಾಲದ ಹೊಕ್ಕುಬಳಿಕೆಯಿಂದ ತಿಳಿದವನಾಗಿದ್ದು, ದೊಡ್ಡ ದಂಡಿನ ಬೇರೆ ಬೇರೆ ಗುಂಪುಗಳು ಇಳಿದು ಕೊಳ್ಳ ತಕ್ಕ ಸ್ಥಳಗಳನ್ನು ತಿಳಿಸಿ ಸಹಾಯ ಮಾಡುತ್ತಾ ಇರುವನು. ಈ ಪ್ರಕಾರವಾಗಿ ಅವರು ದೇವರ ಬೆಟ್ಟದ ಬಳಿಯಿಂದ ಮೂರು ದಿನದ ದಾರಿಗೆ ಪಯಣ ಮಾಡಿದರು. (ವ. ೩೩.) ಮತ್ತು ಸಾಕ್ಷಿಯ ಪೆಟ್ಟಿಗೆ ಹೊರಡುವಾಗ, ಮೋಶೆ ಹೇಳುವದು: ಏಳೈ, ಯೆಹೋವನೇ, ನಿನ್ನ ಎದುರಾಳಿಗಳು ಚದರಿ ಹೋಗಲಿ! ನಿನ್ನ ಹಗೆಯವರು ನಿನ್ನ ಮುಂದೆ ಓಡಿ ಹೋಗಲಿ! — ಅದು ನಿಂತು ಕೊಳ್ಳುವಾಗ ಅವನು ಹೇಳುವದು: ಯೆಹೋವನೇ, ಇಸ್ರಯೇಲನ ಸಹಸ್ರ ಸಹಸ್ರಗಳ ಬಳಿಗೆ ತಿರುಗಿಕೋ!

೩೫, ೩೬ನೆ ವಚನಗಳಲ್ಲಿ ಜನಾಂಗವು ಹೋಗುವಾಗಲೂ ಬರುವಾಗಲೂ ಮೋಶೆ ಅದನ್ನು ಶರಣನೂ ಸಹಾಯಕನೂ ಆದ ಕರ್ತನ ಪರಾಮರಿಕೆಗೆ ಒಪ್ಪಿಸಿ ಕೊಡುವ ಮಧ್ಯವರ್ತನಪ್ರಾರ್ಥನಾವಿಧವು ಬರೆದದೆ. ಅದು ಬಳಿಕ ಇಸ್ರಯೇಲನವರಲ್ಲಿ ರೂಢಿಯಾಯಿತು. ಕೀರ್ತ. ೧೨೧, ೮. ಸರಿ ನೋಡು.

ಬೇಗೆಬೈಲಿನ ಬೆಂಕಿ. ಸ. ೧೧, ೧—೩.
ಆಶೆಬಡಕರಾದ ಜನರ ಶಿಕ್ಷೆ. ವ. ೪—೩೫.

ವ. ೧. ಬಳಿಕ ಜನಾಂಗವು ಯೆಹೋವನ ಕಿವಿಗಳಲ್ಲಿ ಕೇಡಿಗೆ ಅಂಗಲಾಚುವಂಥವರಾಗಿರುವದನ್ನು[೧] ಯೆಹೋವನು ಕೇಳಲು, ಅವನ ಶಿಟ್ಟು ಹೊತ್ತಿ, ಯೆಹೋವನ

ಬೆಂಕಿ೨) ಅವರಲ್ಲಿ ಉರಿದು, ದಂಡಿನ ಅಂಚಿನಲ್ಲಿರುವದನ್ನು ತಿಂದಿತು. ೨. ಆಗ ಜನಾಂಗವು ಮೋಶೆಗೆ ಮೊರೆ ಇಡಲು, ಮೋಶೆ ಯೆಹೋವನಿಗೆ ಪ್ರಾರ್ಥನೇ ಮಾಡಿದಾಗ, ಬೆಂಕಿ ಆರಿತು. ೩. ಆ ಸ್ಥಳಕ್ಕೆ, ಯೆಹೋವನ ಬೆಂಕಿ ಅವರಲ್ಲಿ ಉರಿದರಿಂದ, ತಬೇರ (ಬೇಗೆ)೩) ಎಂದು ಹೆಸರಾಯಿತು.

೧. ಭಯಂಕರವಾದ ದೇವರ ಪ್ರಕಟಣೆಗಳು ಉಂಟಾದ ಸೀನಾಯಿ ಬೆಟ್ಟದ ಬಳಿಯಲ್ಲಿ ಒಂದು ವರ್ಷ ಸೌಖ್ಯವಾಗಿ ವಿಶ್ರಾಂತಿಯಾಗಿದ್ದನಂತರ, ಅಲ್ಲಿಯಣ ಒಳ್ಳೇ ಬೀಡುಗಳನ್ನು ಬಿಟ್ಟು, ಎಲ್‌ಜೇಬ್ ಎಂಬ ಹೆಸರುಳ್ಳ ನೀರೂ ಮೇವೂ ನೆರಳೂ ಕಾಣದ ಬೀಡು ಬಿಕಾರಿಯಾದ ಅರಣ್ಯದಲ್ಲಿ ಸೇರಿದಾಗ, ಬಹು ಜನ ಪಯಣದ ಆಯಾಸಕ್ಕೆ ಹೇವರಿಸಿ, ದೇವರ ಮಹಿಮೆಯ ಭಯವನ್ನು ಮರೆತು, ತಮ್ಮ ಮೇಲೆ ಬಿದ್ದ ಕಷ್ಟ ಹೆಚ್ಚಾದದ್ದೆಂತ, ಗುಣುಗುಟ್ಟ ತೊಡಗಿದರು.

೨. ಯೆಹೋವನ ಬೆಂಕಿಯೆಂಬದು ಏನೆಂದು, ಸ್ಪಷ್ಟವಾಗಿ ಸೂಚಿತವಾಗಿರುವದಿಲ್ಲ. ಅದು ಬಾನಿನಿಂದ ಬಿದ್ದ ಸಿಡ್ಲು ಹೊತ್ತಿಸಿದ ಕಾಡಕಿಚ್ಚೋ? ಮೇಘಸ್ತಂಭದಿಂದ ಹೊರಟು ದಂಡಿನ ಸುತ್ತಲಾಗಿ ಬೇಗೆ ಹುಟ್ಟಿಸಿದ ಬೆಂಕಿಯೋ? ಹ್ಯಾಗಾದರೂ, ಅದು ದೇವರ ಕೋಪದಿಂದ ಅವಿಧೇಯರ ಮೇಲೆ ಚೋದ್ಯವಾಗಿ ಬಿದ್ದ ಶಿಕ್ಷೆಯೇ ಸರಿ.

೩. ಈ ಗ್ರಂಥದ ೩೩ನೆ ಸಂಧಿಯಲ್ಲಿಯ ಬೀಡುಗಳ ಪಟ್ಟಿಯಲ್ಲಿ ಈ ಹೆಸರು ತೋರುವದಿಲ್ಲ. ಕಿಬ್ರೋಥ್‌ಹಥಅವಾ ಎಂಬದಾಗಿ ಆಶೆಯ (ಆಶೆಬಡಕರ) ಸಮಾಧಿಗಳ ಹೆಸರು ಬೇಗೆ ಎಂಬದಕ್ಕೆ ಬದಲಾಗಿ ಅಲ್ಲಿ ಸೇರಿಯದೆಂತ ನೆನಸ ಬಹುದು.

ವ. ೪. ಮತ್ತು೧) ಅವರೊಳಗಿದ್ದ ಬೆರಿಕೇ ಜನರು೨) ಬೈಕೆ ತುಂಬಿದವರಾಗಿ, ಇಸ್ರಾಯೇಲನ ಮಕ್ಕಳೂ೩) ಕೂಡಿ ಕೊಂಡು, ಕೂತು, ಅತ್ತು, “ನಮಗೆ ಬಾಡು ತಿನ್ನಿಸುವವರ್‍ಯಾರು? ೫. ಮಿಸ್ರದಲ್ಲಿ ನಾವು ಉಚಿತವಾಗಿ ತಿಂದ ಮೀನುಗಳನ್ನೂ ಸೌತೆಕಾಯಿಗಳನ್ನೂ ಕರಬೂಜಗಳನ್ನೂ ಕಾಡುಳ್ಳಿ ನೀರುಳ್ಳಿ ಬೆಳ್ಳುಳ್ಳಿಗಳನ್ನೂ೪) ನೆನವರಿಕೆ ಮಾಡುತ್ತೇವೆ. ಆದರೆ ಈಗ ನಮ್ಮ ಪ್ರಾಣವು ಒಣಗಿ೫) ಹೋಗಿದೆ. ಈ ಮಾನಿನ೬) ಹೊರ್ತಾಗಿ ನಮ್ಮ ಕಣ್ಣುಗಳಿಗೇನೂ ಕಾಣುವದಿಲ್ಲವೆಂತ” ಹೇಳಿದರು.

೧. ಇಲ್ಲಿ “ಮತ್ತು” ಎಂಬದಕ್ಕೆ ವಿಶೇಷವಾದ ಅಭಿಪ್ರಾಯವುಂಟು, ಏನಂದರೆ ಅವರು ಅದೆ ಸ್ಥಳದಲ್ಲಿ ದೇವರಿಗೆ ವಿರೋಧವಾಗಿ ಗುಣುಗುಟ್ಟಿದ್ದಕ್ಕೆ ಶಿಕ್ಷೆಯ ಹೊಂದಿ, ಕೊಂಚ ಕಾಲ ಹೆದರಿದರೂ, ಮಾರ್ಮಲೆಯುವದನ್ನು ಬಿಡದೆ, ಮರಳಿ ಪಾಪ ಮಾಡಿದರು.

೨. ಯಾರಂದರೆ ಪರಜಾತಿಯವರಾಗಿದ್ದು, ಇಸ್ರಯೇಲನವರನ್ನು ಕೂಡಿ ಕೊಂಡು, ಅವರೊಡನೆ ಮಿಸ್ರ ದೇಶದಿಂದ ಹೊರಟು ಬಂದ ಜನರು. ಇವರು ಗುಣುಗುಟ್ಟುವದನ್ನು ತೊಡಗಿಸಿದವರು. ಆದರೆ

೩. ಅವರ ಮೋಸವೆಂಬ ಬಳ್ಳಿ ಬೇಗ ಇಸ್ರಯೇಲನವರಲ್ಲಿ ಹಬ್ಬಿತು. ತಾನೇ ವಿಶ್ವಾಸದಲ್ಲಿ ದೃಢವಿಲ್ಲದವನು ಜನರಲ್ಲಿ ಪ್ರಬಲವಾದ ಪಾಪದ ಸೆಳೆಯಿಂದ ಎಳಿಸಿ ಕೊಳ್ಳುವನು. ಕೆಲವರು ಗುಣುಗುಟ್ಟಿ ಬೊಬ್ಬೆ ಮಾಡುವಲ್ಲಿ ಬೇರೊಬ್ಬರು, ಸುಗುಣವುಳ್ಳವರು ಸಹಾ, ಮೋಸ ಪಡುತ್ತಾರೆಂಬದಕ್ಕೆ ಇದು ದೃಷ್ಟಾಂತ.

೪. ಇಲ್ಲಿ ಬರದಿರುವ ಪದಾರ್ಥಗಳು ಇಂದಿನವರೆಗೂ ಮಿಸ್ರ ದೇಶಸ್ಥರಲ್ಲಿ ವಾಡಿಕೆಯಾದ ಆಹಾರವಾಗಿವೆ.

೫. ಮಾಂಸಭಾವದವರು ಬಾಯಿಗೆ ಸವಿಯಾಗುವಲ್ಲಿ ಏನಾದರೂ ಕೊರತೆ ಬಂದರೆ, ಪ್ರಾಣ ಕುಂದಿತೆಂದು, ಹೇಳುವರು.

೬. ಮಾನ್ ಎಂಬದರ ವರ್ಣನೆಯು ವ. ೭—

೧೦ನೆ ವರೆಗೆ ಬರುತ್ತದೆ. ಅದು ಕ್ಷೇಮಕರವಾಗಿರುವ, ರುಚಿಗೆ ಇಂಪಾದ, ಚೋದ್ಯ ದೇವದಾನವಾಗಿದ್ದರೂ, ಕೃತಘ್ನರಾದ ಆಶೆಬಡಕರನ್ನು ತೃಪ್ತಿ ಪಡಿಸಿ, ಸಂತೈಸುವದಕ್ಕೆ ಸಾಲದೆ ಹೋಯಿತು. ಪಾಪಿಯ ಕೆಟ್ಟು ಹೋದ ಸ್ವಭಾವಕ್ಕೆ ಸಾಧಾರಣ ಆರೋಗ್ಯವಾದ ಸವಿಯಾದ ವಸ್ತುಗಳು ಸಾಲದು, ಹುಳಿ ಖಾರ ಕೂಡಿದ್ದು ಹ್ಯಾಗೆ ಬೇಕೆಂದು ತೋರುತ್ತದೊ, ಹಾಗೆಯೆ ಆತ್ಮಿಕ ಆಹಾರದಲ್ಲಿ ಸಹಾ ದೇವವಾಕ್ಯವೆಂಬ ಶುದ್ಧ ಸವಿಯಾದ ಆಹಾರಪಾನವು ಸಾಲದೆ, ನಾನಾ ತರದ ವಿಪರೀತ ಕಟ್ಟುಕಥೆಗಳೂ ಸುಳ್ಳು ಪುರಾಣಗಳೂ ಮಹಾತ್ಮೆಗಳೂ ಜೋಡನೆಯ ಗ್ರಂಥಗಳೂ ಅವಶ್ಯವೆಂದು ತೋರುತ್ತದೆ.

ವ. ೧೧. ಮತ್ತು ಮೋಶೆ ಯೆಹೋವನಿಗೆ[೧] ಹೇಳಿದ್ದು: ಈ ಜನಾಂಗವೆಲ್ಲಾದರ
ಹೊರೆಯನ್ನು ನನ್ನ ಮೇಲೆ ಇಡುವ ಹಾಗೆ, ಯಾಕೆ ನಿನ್ನ ಸೇವಕನನ್ನು ಕಾಡುತ್ತೀ?
ಮತ್ತು ಯಾಕೆ ನಿನ್ನ ಕಣ್ಣುಗಳಲ್ಲಿ ನನಗೆ ದಯೆಯು ದೊರಕುವದಿಲ್ಲ? — — ೧೪. ನಾ
ನೊಬ್ಬನೇ ಈ ಜನಾಂಗವನ್ನೆಲ್ಲಾ ಹೊತ್ತು ಕೊಳ್ಳಲಾರೆನು. ಅದು ನನಗೆ ಹೆಚ್ಚು ಭಾ
ರವಾಗಿದೆ. — — ೧೬. ಮತ್ತು ಯೆಹೋವನು ಮೋಶೆಗೆ ಹೇಳಿದ್ದು: ಅವರೇ ಜನಾಂ
ಗದ ಹಿರಿಯರೂ ಕಾರ್ಣಕರ್ತರೂ ಎಂತ, ನೀನು ತಿಳುಕೊಳ್ಳುವ ಇಸ್ರಯೇಲನ ಹಿರಿ
ಯರಲ್ಲಿ ಎಪ್ಪತ್ತು ಮಂದಿ[೨] ನನಗೆ ಕೂಡಿಸಿ, ಅವರನ್ನು ಸಾಕ್ಷಿಯ ಗುಡಾರಕ್ಕೆ ಕೊಂಡು
ಬಾ. ಅವರು ಅಲ್ಲಿ ನಿನ್ನೊಡನೆ ನಿಂತು ಕೊಳ್ಳಲಿ. ೧೭. ಮತ್ತು ನಾನು ಇಳಿದು, ಅಲ್ಲಿ
ನಿನ್ನೊಡನೆ ನುಡಿದು, ನಿನ್ನ ಮೇಲಣ ಆತ್ಮದಿಂದ ತೆಗದು, ಅವರ ಮೇಲೆ ಇಡುವೆನು.
ಆಗ ನೀನೊಬ್ಬನೇ ಹೊತ್ತು ಕೊಳ್ಳದ ಹಾಗೆ, ಅವರು ನಿನ್ನ ಸಂಗಡ ಜನಾಂಗದ ಹೊರೆ
ಯನ್ನು ಹೊತ್ತು ಕೊಳ್ಳುವರು[೩]. ೧೮. ಮತ್ತು ಜನಾಂಗಕ್ಕೆ ನೀನು ಹೇಳ ಬೇಕಾದ
ದ್ದು: ನಾಳೆಗೆ ನಿಮ್ಮನ್ನು, ಬಾಡು ತಿನ್ನುವ ಹಾಗೆ, ಶುದ್ಧ ಮಾಡಿ ಕೊಳ್ಳಿರಿ[೪]. ಯಾ
ಕೆಂದರೆ "ನಮಗೆ ಬಾಡು ತಿನ್ನಲೀಸುವವರ್‍ಯಾರು? ಮಿಸ್ರದಲ್ಲಿ ನಮಗೆ ಒಳ್ಳೆತಾಗಿತ್ತು"
ಎಂದು, ಯೆಹೋವನ ಕಿವಿಗಳಲ್ಲಿ ಅತ್ತು ಹೇಳಿದಿರಿ. ಆದದರಿಂದ ಯೆಹೋವನು ನಿಮ
ಗೆ ಬಾಡು ಕೊಡುವನು, ಆಗ ತಿನ್ನುವಿರಿ. ೧೯. ಒಂದು ದಿನವಲ್ಲ, ಎರಡು ದಿನವಲ್ಲ,
ಐದು ದಿನವಲ್ಲ, ಹತ್ತು ದಿನವಲ್ಲ, ಇಪ್ಪತ್ತು ದಿನವಲ್ಲ, ೨೦. ದಿವಸಗಳ ತಿಂಗಳಿನ ಮಟ್ಟಿ
ಗೆ, ಅದು ನಿಮ್ಮ ಮೂಗಿನಿಂದ ಹೊರಗೆ ಬಂದು, ನಿಮಗೆ ಹೇಸಿಕೆಯಾಗುವ ಮಟ್ಟಿಗೂ
ತಿನ್ನುವಿರಿ; ಯಾಕೆಂದರೆ ನಿಮ್ಮ ನಡುವೆಯಣ ಯೆಹೋವನನ್ನು ಅಲ್ಲಗಳೆದು, ಇದ್ಯಾಕೆ
ಮಿಸ್ರದಿಂದ ಹೊರಟೆವೆಂದು, ಅವನ ಮುಂದೆ ಅತ್ತಿರಲ್ಲ? ೨೧. ಆಗ ಮೋಶೆ ಹೇಳಿ
ದ್ದು: ನಾನು ಅವರ ನಡುವೆಯಲ್ಲಿರುವ ಜನಾಂಗವು ಆರು ಲಕ್ಷ ಪಾಯಿದಳ ಇರಲಾ
ಗಿ[೫], ನೀನು, ದಿನಗಳೊಂದು ತಿಂಗಳು ಅವರು ತಿನ್ನುವಂತೆ, ಅವರಿಗೆ ಬಾಡು ಕೊಡು
ತ್ತೇನೆಂದು ಹೇಳಿದಿ. ೨೨. ಅವರಿಗೆ ಸಾಕಾಗುವ ಹಾಗೆ, ಕುರಿ ದನಗಳು ಕೊಯ್ಯಿಸಿ
ಕೊಳ್ಳಲೋ? ಅವರಿಗೆ ಸಾಕಾಗುವ ಹಾಗೆ ಕಡಲಿನ ಮೀನುಗಳೆಲ್ಲಾ ಕೂಡಿಸಿ ಕೊಳ್ಳ
ಲೋ? ೨೩. ಆಗ ಯೆಹೋವನು ಮೋಶೆಗೆ ಹೇಳಿದ್ದು: ಯೆಹೋವನ ಕೈ ಕುಂದಿ

ತೋ?[೬] ನನ್ನ ಮಾತು ನಿನಗೆ ನೆರವೇರುವದೋ ಇಲ್ಲವೋ ಎಂದು, ಈಗ ನೋಡುವಿ.
೨೪. ಆಗ ಮೋಶೆ ಹೊರಟು, ಯೆಹೋವನ ನುಡಿಗಳನ್ನು ಜನಾಂಗಕ್ಕೆ ನುಡಿದು, ಜ
ನಾಂಗದ ಹಿರಿಯರಿಂದ ಎಪ್ಪತ್ತು ಮಂದಿ ಕೂಡಿಸಿ, ಅವರನ್ನು ಗುಡಾರದ ಸುತ್ತು ನಿಲ್ಲಿ
ಸಿದನು. ೨೫. ಮತ್ತು ಯೆಹೋವನು ಮೇಘದಲ್ಲಿ ಇಳಿದು, ಅವನಿಗೆ ನುಡಿದು, ಅ
ವನ ಮೇಲಣ ಆತ್ಮದಿಂದ ತೆಗದು, ಹಿರಿಯರಾದ ಎಪ್ಪತ್ತು ಮಂದಿಯ ಮೇಲೆ ಇಟ್ಟನು.
ಆತ್ಮವು ಅವರ ಮೇಲೆ ನಿಂತು ಕೊಳ್ಳಲು, ಅವರು ಪ್ರವಾದಿಸಿದರು; ಆದರೆ ಮತ್ತೆ ಪ್ರ
ವಾದಿಸಲಿಲ್ಲ[೭]. ೨೬. ಆದರೆ ಇಬ್ಬರು ಮನುಷ್ಯರು ದಂಡಿನಲ್ಲಿ ಉಳಿದರು; ಒಬ್ಬನ
ಹೆಸರು ಎಲ್ದಾದನು, ಎರಡನೆಯವನ ಹೆಸರು ಮೆದಾದನು. ಅವರ ಮೇಲೆಯೂ
ಆತ್ಮವು ನಿಂತು ಕೊಂಡಿತು. ಅವರೂ ಅಭಿತರಾಗಿದ್ದರೂ, ಗುಡಾರಕ್ಕೆ ಹೊರಟು
ಹೋಗದೆ ದಂಡಿನಲ್ಲಿ ಪ್ರವಾದಿಸಿದರು. ೨೭. ಆಗ ಆಳು ಬಂದು, ಮೋಶೆಗೆ ತಿಳಿ
ಸಿ ಹೇಳಿದ್ದು: ಎಲ್ದಾದ ಮೆದಾದರು ದಂಡಿನಲ್ಲಿ ಪ್ರವಾದಿಸುತ್ತಾರೆ. ೨೮. ಅದಕ್ಕೆ
ಆಯಿಕೆಯಾದವರವನಾದ ಮೋಶೆಯ ಸೇವಕನಾಗಿದ್ದ ನೂನನ ಮಗನಾದ ಯೆ
ಹೋಷುವನು ಮಾರ್ನುಡಿದದ್ದು: ನನ್ನ ಅಯ್ಯನಾದ ಮೋಶೆಯೇ, ಅವರನ್ನು ತಡಿ
ಸು! ೨೯. ಆದರೆ ಮೋಶೆ ಅವನಿಗೆ ಹೇಳಿದ್ದು: ನೀನು ನನಗಾಗಿ ಹುರುಡುತ್ತಿ
ಯಾ? ಯೆಹೋವನ ಜನಾಂಗವೆಲ್ಲಾ ಪ್ರವಾದಿಗಳಾಗುವ ಹಾಗೆ, ಯೆಹೋವನು
ತನ್ನ ಆತ್ಮವನ್ನು ಅವರ ಮೇಲೆ ಇಟ್ಟರೆಷ್ಟೋ ಲೇಸು! ೩೦. ಆಗ ಮೋಶೆ ತಾನೂ
ಇಸ್ರಾಯೇಲನ ಹಿರಿಯರೂ ದಂಡಿಗೆ ಕೂಡಿದರು. ೩೧. ಮತ್ತು ಯೆಹೋವನ ಬಳಿ
ಯಿಂದ ಘಾಳಿ ಹೊರಟು, ಕಡಲಿನಿಂದ ಲಾವಕ್ಕಿಗಳನ್ನು ಕೊಂಡು ಬಂದು, ದಂಡಿನ
ಮೇಲೆ, ದಿನದ ಹಾದಿ ಈಚೆಯಲ್ಲಿ, ದಿನದ ಹಾದಿ ಆಚೆಯಲ್ಲಿ, ದಂಡಿನ ಸುತ್ತಲು
ಭೂಮಿಯ ಮೇಲೆ ಎರಡು ಮೊಳ ಎತ್ತರವಾಗಿ ಹಾಕಿ ಬಿಟ್ಟಿತು. ೩೨. ಬಳಿಕ ಜ
ನಾಂಗವು ಆ ಹಗಲೆಲ್ಲವೂ, ಆ ಇರುಳೆಲ್ಲವೂ, ಮಾರಣೀ ದಿನವೆಲ್ಲವೂ ಎದ್ದು, ಆ
ಲಾವಕ್ಕಿಗಳನ್ನು ಕೂಡಿಸಿದರು. ಕೊರತೆಯಾದವನು ಹತ್ತು ಹೋಮೆರ್ ಕೂಡಿಸಿದ
ನು. ಮತ್ತು ದಂಡಿನ ಸುತ್ತಲು ಅವುಗಳನ್ನು ಹರವಿ ಕೊಂಡರು[೮]. ೩೩. ಬಾಡು
ಇನ್ನೂ ಅವರ ಹಲ್ಲುಗಳ ನಡುವೆ ಇರಲು, ಅದು ಮುಗಿಯುವದಕ್ಕೆ ಮುಂಚೆ, ಯೆ
ಹೋವನ ಸಿಟ್ಟು ಜನಾಂಗದಲ್ಲಿ ಉರಿದು, ಯೆಹೋವನು ಜನಾಂಗದಲ್ಲಿ ಶಾನೆ ದೊ
ಡ್ಡ ಹೊಡತ ಹೊಡೆದನು[೯]. ೩೪. ಆಶೆಬಡಕರಾದ ಜನರು ಅಲ್ಲಿ ಹೂಣಿಸಿ ಕೊಂ
ಡದರಿಂದ, ಆ ಸ್ಥಳಕ್ಕೆ ಕಿಬ್ರೋಥ್‌ಹಥಅವಾ ಎಂದು ಹೆಸರಾಯಿತು. ೩೫. ಆಶೆಬ
ಡಕರ ಸಮಾಧಿಗಳೆಂಬಲ್ಲಿಂದ ಜನಾಂಗವು ಹೊರಟು ಹಚೆರೋತಿಗೆ ಬಂದು ಹಚೆರೋ
ತಿನಲ್ಲಿ ಇದ್ದರು.

ಅಂಕೆ. ೧೧, ೧೧—೩೫.

೧. ಮೋಶೆ ತನ್ನ ಮೇಲೆ ಬಿದ್ದ ಹೊರೆಯು ಹೊರಲಾರದಷ್ಟು ಹೆಚ್ಚುವದೆಂತ, ದಾರಿ ಕಾಣದವನಾಗಿ, ಎದೆಗುಂದಿ, ತಾನೂ ಗುಣುಗುಟ್ಟುವ ಹಾಗೆ ಇರುತ್ತಾ ಇದ್ದರೂ, ಕರ್ತನಿಗೆ ಮೊರೆ ಇಟ್ಟು, ತನ್ನ ಹೃದಯದಲ್ಲಿ ಹುಟ್ಟಲಿರುವ ಅವಿಶ್ವಾಸದ ಮೋಸವನ್ನು ತಳ್ಳಿ, ಭಕ್ತಿಯಲ್ಲಿ ದೃಢಗೊಳ್ಳುತ್ತಾನೆ. ಭಕ್ತನು, ಇಕ್ಕಟ್ಟು ಬಂದಾಗ, ನಿರಾಶೆಯಾಗದೆ, ದೇವರನ್ನು ಪ್ರಾರ್ಥಿಸಿದರೆ, ಸರ್ವಶಕ್ತನಾದ ಒಡೆಯನಿಗೆ ತನ್ನನ್ನು ಒಪ್ಪಿಸಿಕೊಡುವ ವಿಶ್ವಾಸದಿಂದ ಅವಿಧೇಯತ್ವದ ಪಾಪಕ್ಕೆ ತಪ್ಪಿಸಿ ಕೊಂಡು, ಸಹಾಯವನ್ನು ಪಡ ಕೊಳ್ಳುವ ಮಾರ್ಗದಲ್ಲಿ ಸೇರ ತೊಡಗುತ್ತಾನೆ.

೨. ಯಿಥ್ರೋ ಹೇಳಿದ ಆಲೋಚನೆಯ ಪ್ರಕಾರವಾಗಿ (ಹೊರ. ೧೮, ೨೧ ಮುಂ.) ಆಯಿಕೆಯಾದ ಎಪ್ಪತ್ತು ಮಂದಿ ಹಿರಿಯರು ಮುಂಚೆ ಇದ್ದರೆಂದು, ಹೊರ. ೨೪, ೧ರಲ್ಲಿ ಕಾಣುತ್ತದೆ. ಆದರೆ ಇಲ್ಲಿ ಅವರು ದೇವರ ಅಪ್ಪಣೆಯಿಂದ ನೇಮಿಸಿ ಕೊಂಡವರಾಗಿ, ವಿಶೇಷವಾದ ಆತ್ಮದ ವರವನ್ನು ಹೊಂದಿದ ಕಾರಣ, ಅಧಿಕವಾದ ಅಧಿಕಾರವುಳ್ಳವರಾಗಿದ್ದಾರೆ.

೩. ಈಚೆ ಸಮುವೇಲನ ಕಾಲದಲ್ಲಿ ಹೆಚ್ಚಾಗಿ ಬೆಳೆದ ಪ್ರವಾದಿಗಳ ಉದ್ಯೋಗವು ಇಸ್ರಯೇಲನವರಲ್ಲಿ ಮೊಳೆದೋರಿಸುವ ಈ ಸಂಗತಿಯನ್ನು ಲಕ್ಷಿಸ ತಕ್ಕದ್ದು. ಯೇಸುವಿನ ಕಾಲದಲ್ಲಿ ಪ್ರಧಾನ ಯಾಜಕನ ಕೂಡ ಶ್ರೇಷ್ಠ ಅಧಿಕಾರವನ್ನು ನಡಿಸಿದ ಮಂತ್ರಿಸಭೆ ಎಂಬವರೂ ಎಪ್ಪತ್ತು ಮಂದಿಯಾಗಿದ್ದರು. ಅವರು ತಮ್ಮ ಸಭೆಯ ನಿರ್ಮಾಣವು ಇಲ್ಲಿ ಉಂಟಾಯಿತೆಂದು, ನೆನಸಿ ಕೊಂಡರೋ ಏನೋ, ಗೊತ್ತಿಲ್ಲ. ಇಲ್ಲಿ ಆಯಿಕೆಯಾದ ಹಿರಿಯರು ಮೋಶೆಯ ಆತ್ಮದ ಅಂಶವನ್ನು ಹೊಂದಿದದರಿಂದ, ಮೋಶೆಯ ಅನ್ಯೋನ್ಯದಲ್ಲಿಯೂ ಸಮ್ಮತಿಯಲ್ಲಿಯೂ ಇದ್ದು, ತಮ್ಮ ಉದ್ಯೋಗವನ್ನು ನಡಿಸ ಹಂಗಿಗರಾಗಿದ್ದರು. ಅವರು ಸ್ವಕೀಯ ಆತ್ಮದ ಪ್ರೇರಣೆಯಿಂದ ಮೋಶೆಯನ್ನು ಎದುರಿಸುತ್ತಿದ್ದರೆ, ಮೋಶೆಯ ಮೇಲೆ ಇದ್ದ ಹೊರೆಯು ಕಡಿಮೆಯಾಗದೆ ಹೆಚ್ಚುತ್ತಿತ್ತು.

೪. ಅವರಿಗೆ ಸಿಕ್ಕಲಿರುವ ಬಾಡು ಅದ್ಭುತವಾದ ದೇವರ ವರವಾಗಿದ್ದದರಿಂದ, ಅದನ್ನು ಪರಿಶುದ್ಧ ಭಕ್ತ್ಯಾಸಕ್ತಿಯಿಂದ ಅನುಭವಿಸುವ ಬಗ್ಯೆ, ಯಾವ ತೆರದಿಂದಲಾದರೂ ಹೊಲೆಯಾಗದ ಹಾಗೆ ಜಾಗ್ರತೆಯಾಗಿದ್ದು, ತಮ್ಮನ್ನು ಶುದ್ಧ ಮಾಡಿಕೊಳ್ಳಲವರಿಗುಚಿತವಾಗಿತ್ತು.

೫. ಶಾನೆ ಬೇಸತ್ತು ವಿಶ್ವಾಸಬಲಹೀನನಾದ ಮೋಶೆಗೆ ಯೆಹೋವನು ತಾನು ಮಾಡುತ್ತೇನೆಂತ ಹೇಳುವ ಅದ್ಭುತವು ಅತ್ಯಧಿಕವಾದದ್ದೆಂದು ತೋರುತ್ತದೆ. ಯೇಸುವಿನ ಶಿಷ್ಯರು (ಮತ್ತಾ. ೧೫, ೧೬.) ೪೦೦೦ ಮಂದಿಗೆ ಒಮ್ಮೆಯೇ ಹೊಟ್ಟೆ ತುಂಬಿಸುವದು ಅಸಾಧ್ಯವೆಂದು, ನೆನಸಿದರಲ್ಲ! ಒಂದೆರಡು ದಿವಸಕ್ಕೆ ಮಾತ್ರವಲ್ಲ, ಇಡೀ ತಿಂಗಳಿಗೆ ದೊಡ್ಡ ಜನಾಂಗವು ತಿನ್ನುವಷ್ಟು ಬಾಡು ದೊರಕಿಸಿ ಕೊಡುವದು ಯೆಹೋವನಿಂದಲಾದೀತೋ? ಎಂದು ಮೋಶೆ ಸಂಶಯ ಪಟ್ಟದ್ದು ಚೋದ್ಯವೋ? ಹ್ಯಾಗೂ ಮೋಶೆಗೂ, ಶಿಷ್ಯರಿಗೆ ಆದಂತೆ, ಯೆಹೋವನು ಮುಂಚೆತಾಗಿ ತನ್ನ ಜನಾಂಗಕ್ಕೆ ಹೊಟ್ಟೆ ತುಂಬಿಸಿದ ಅದ್ಭುತವು (ಹೊರ. ಸ. ೧೬.) ಬೇಗ ಮರತು ಹೋಗಿತ್ತು. ಮನುಷ್ಯನ ಮರಪು ಎಂಥಾದ್ದು!

೬. ಅಂದರೆ, ಯೆಹೋವನಿಂದುಂಟಾಗದ ಆಶ್ಚರ್ಯವುಂಟೋ? ಎಂದು, ಪೂರ್ವಕಾಲದಲ್ಲಿ ಅಬ್ರಹಾಮನಿಗೆ ನುಡಿದ ಪ್ರಕಾರ, ಈ ಕಾಲದಲ್ಲಿ ಅಬ್ರಹಾಮನ ಬೀಜವಾದ ಜನಾಂಗದ ರಕ್ಷಣೆಗಾಗಿ ನಿನ್ನ ಮುಖಾಂತರ ಮಿಚ್ರ ದೇಶದಲ್ಲಿಯೂ ಕೆಂಪು ಸಮುದ್ರದಲ್ಲಿಯೂ ಅರಣ್ಯದಲ್ಲಿಯೂ ನಾನಾ ಅದ್ಭುತಗಳನ್ನು ನಡಿಸುತ್ತಾ ಬಂದವನಾದ ನನ್ನ ತ್ರಾಣವು ನಿನಗೆ ಇನ್ನೂ ಗೊತ್ತಿಲ್ಲವೋ?

೭. ೨೫ನೆ ವಚನದ ಕಡೆಯಲ್ಲಿಯಣ ವೆಲೋಯಾಶಾಫು ಎಂಬ ಇಬ್ರಿಯ ಭಾಷೆಯ ಮೂಲಗ್ರಂಥದ ಮಾತಿನ ಭಾಷಾಂತರವು “ಮತ್ತೆ ನಿಲ್ಲಿಸಲಿಲ್ಲ” ಎಂಬದಾಗಿ ಅಲ್ಲ; ಅದರ ನಿಜ ಅಭಿಪ್ರಾಯವೇನಂದರೆ: ಅವರು (ಪ್ರವಾದಿಸುವದನ್ನು) ಹಿಡಿಯದೆ ಬಿಟ್ಟರು. ಆತ್ಮದ ಪ್ರೇರಣೆಯಿಂದಲಾಗುವ ಪ್ರವಾದನೆಯು ಅವರು ತಮ್ಮ ಉದ್ಯೋಗವನ್ನು ದೇವರಿಂದ ಹೊಂದಿದ್ದಕ್ಕೆ ಪ್ರಾಮಾಣ್ಯವಾಗಿತ್ತು. ಪ್ರತಿಷ್ಠೆಯ ವೇಳೆಯಲ್ಲಿ ಈ ದೃಷ್ಟಾಂತ ದೊರಕಿದ ಮೇಲೆ, ಉದ್ದಿಶ್ಯವು ಒದಗಿದರಿಂದಲೇ, ಅವರು ಸಾಕ್ಷಿಗುಡಾರ ಬಿಟ್ಟ ಬ

ಳಿಕ ಅವರ ಪ್ರವಾದನೆಯ ವರವು ನಿಂತು ಹೋಯಿತು. ಇದೆ ಶೆರದಿಂದ ಹೊಸ ಒಡಂಬಡಿಕೆಯಲ್ಲಿ ಅಪೊಸ್ತಲರ ಹಸ್ತಾವಧಾನದಿಂದ ಪ್ರವಾದನೆಯ ವರವನ್ನು ಹೊಂದಿದವರಲ್ಲಿ ಅನೇಕರು ತತ್ಕಾಲಕ್ಕೆ ಮಾತ್ರ ಪ್ರವಾದಿಸಿದರೆಂದು, ತೋರುವದಲ್ಲದೆ, ಕ್ರೈಸ್ತಸಭೆಯ ಆದಿಯಲ್ಲಿ ಪ್ರಬಲವಾಗಿದ್ದ ಅದ್ಭುತವಾದ ಆತ್ಮವರಗಳು ಬಳಿಕ ಕುಂದಿದವು.

೮. ಮುಂದಣ ಪಯಣಕ್ಕಾಗಿ ಗ್ರಾಸ ಕೂಡಿರಬೇಕೆಂದು, ಅವರು ಅವುಗಳನ್ನು ಬಿಸಲಿಗೆ ಹಾಕಿ ಒಣಗಿಸಿದರು.

೯. ಬೈಕೆ ತುಂಬ ಬೇಕೆಂಬ ಹಟದಿಂದ ಬಿಡದೆ ಬೇಡುವವರಿಗೆ ದೇವರು ದೊರಕಿಸುವ ಇಷ್ಟಾರ್ಥದಿಂದ ಸಹಾ ಮೋಸ ಬರುವದುಂಟು.

ಮಿರ್ಯಾಮ ಆರೋನರು ಗುಣುಗುಟ್ಟಿದ್ದು. ಸ. ೧೨, ೧—೩.
ಅವರ ಶಿಕ್ಷೆಯೂ ಕ್ಷಮೆಯೂ. ವ. ೪—೧೫.

ವ. ೧. ಬಳಿಕ ಮಿರ್ಯಾಮ[೧] ಆರೋನರು[೨] ಕುಷಾಳಿಯಾದ ಹೆಂಡತಿಗಾಗಿ,
ಅವನು ಕುಷಾಳಿಯಾದ ಹೆಂಡತಿಯನ್ನು[೩] ತಕ್ಕೊಂಡನೆಂತ, ಮೋಶೆಗೆ ಎದುರ್ನುಡಿ
ದು ಹೇಳಿದ್ದು: ೨. ಮೋಶೆಯ ಮುಖಾಂತರದಿಂದ ಮಾತ್ರವೆ ಯಹೋವನು ನುಡಿದ
ನೋ? ನಮ್ಮ ಮುಖಾಂತರದಿಂದ ಸಹ[೪] ನುಡಿದನಲ್ಲ? ಯೆಹೋವನು ಕೇಳಿದನು[೫].
೩. ಆದರೆ ಮೋಶೆ ಎಂಬವನು ಭೂಮಿಯ ಮೇಲಿರುವ ಎಲ್ಲಾ ಮನುಷ್ಯರಿಗಿಂತ ಅಧಿ
ಕ ದೀನ ಮನಸ್ಸುಳ್ಳವನಾಗಿದ್ದನು[೬]. ೪. ಮತ್ತು ಯೆಹೋವನು ಇದ್ದಕ್ಕಿದ್ದ ಹಾಗೆ
ಮೋಶೆಗೂ ಆರೋನನಿಗೂ ಮಿರ್ಯಾಮಳಿಗೂ ಹೇಳಿದ್ದು: ನೀವು ಮೂರು ಮಂದಿ
ಹೊರಟು ಸಾಕ್ಷಿಯ ಗುಡಾರಕ್ಕೆ ಬನ್ನಿ[೭]! ಆ ಮೂರು ಮಂದಿ ಹೊರಟು ಬಂದರು.
೫. ಆಗ ಯೆಹೋವನು ಮೇಘಸ್ತಂಭದಲ್ಲಿಳಿದು, ಗುಡಾರದ ಬಾಗಲಿನಲ್ಲಿ ನಿಂತು, ಆ
ರೋನ ಮಿರ್ಯಾಮರನ್ನು ಕರೆಯಲು, ಅವರಿಬ್ಬರು ಹೊರಟು ಬಂದರು. ೬. ಆಗ
ಲವನು ಹೇಳಿದ್ದು: ನನ್ನ ಮಾತುಗಳನ್ನು ಕೇಳಿರಿ! ಯೆಹೋವನ ಪ್ರವಾದಿ ನಿಮ್ಮಲ್ಲಿ
ದ್ದರೆ, ದರ್ಶನದಲ್ಲಿ ಅವನಿಗೆ ನನ್ನನ್ನು ಗೊತ್ತು ಮಾಡುವೆನು, ಕನಸಿನಲ್ಲಿ ಅವನೊಡನೆ
ನುಡಿಯುವೆನು[೮]. ೭. ನನ್ನ ಸೇವಕನಾದ ಮೋಶೆ ಹಾಗಲ್ಲ; ಅವನು ನನ್ನ ಮನೆಯ
ಲ್ಲೆಲ್ಲಾ ನಂಬಿಕೆಯುಳ್ಳವನು[೯]. ೮. ಒಗಟುಗಳಿಂದಲ್ಲ ಮುಖಾಮುಖಿಯಾಗಿಯೂ
ಪ್ರತ್ಯಕ್ಷವಾಗಿಯೂ ಅವನೊಡನೆ ನುಡಿಯುವೆನು. ಮತ್ತು ಯೆಹೋವನ ಹೋಲಿಕೆ
ಯನ್ನು ಕಂಡುಕೊಳ್ಳುವನು[೧೦]. ಆದರೆ ನೀವು ನನ್ನ ಸೇವಕನಾದ ಮೋಶೆಗೆ ಎದು
ರ್ನುಡಿಯುವದಕ್ಕೆ ಯಾಕೆ ಅಂಜಲಿಲ್ಲ? ೯. ಆಗ ಯೆಹೋವನ ಶಿಟ್ಟು ಅವರ ಮೇಲೆ
ಉರಿಯಲಾಗಿ, ಅವನು ಹೋದನು[೧೧]. ೧೦. ಮೇಘವೂ ಗುಡಾರದ ಮೇಲಿನಿಂದ
ತೊಲಗಿತು. ಮತ್ತು, ಇಗೊ, ಮಿರ್ಯಾಮಳು ಹಿಮದಂತೆ ಕುಷ್ಠಳು. ೧೧. ಆಗಲಾ
ರೋನನು ಮೋಶೆಗೆ ಹೇಳಿದ್ದು: ಅಕಟ, ನನ್ನ ಒಡೆಯನೇ, ನಾವು ಮರುಳಾಗಿ ಮಾ
ಡಿದ ಪಾಪವನ್ನು ನಮ್ಮ ಮೇಲೆ ಹಾಕ ಬೇಡ[೧೨]. ೧೨. ತನ್ನ ತಾಯ ಬಸುರಿನಿಂದ

ಅಂಕೆ. ೧೨, ೧೩ – ೧೬.

ಹೊರಡುತ್ತಲೇ ಅರ್ಧ ಮಾಂಸ ಕೊಳತು ಹೋದ, ಸತ್ತ ಕೂಸಿನಂತೆ ಅವಳು ಆಗದಿರ
ಲಿ! ೧೩. ಆಗ ಮೋಶೆ ಯೆಹೋವನಿಗೆ ಮೊರೆ ಇಟ್ಟು, ಹೇ ದೇವರೇ, ಅವಳನ್ನು ವಾ
ಶಿ ಮಾಡೈ[೧೩]! ಅಂದನು. ೧೪. ಬಳಿಕ ಯೆಹೋವನು ಮೋಶೆಗೆ ಹೇಳಿದ್ದು: ಅವಳ
ತಂದೆ ಅವಳ ಮೋರೆಗೆ ಉಗುಳೇ ಉಗುಳಿದ್ದರೆ, ಅವಳು ಏಳು ದಿವಸ ಹೊಲೆಯಾಗು
ತ್ತಿದ್ದಳಲ್ಲ? ಅವಳು ಏಳು ದಿವಸ ದಂಡಿನ ಹೊರಗೆ ಏಕಾಂತಬದ್ಧಳಾಗಲಿ! ಬಳಿಕ ಕೂ
ಡಿಸಿ ಕೊಳ್ಳಲಿ! ೧೫. ಮತ್ತು ಮಿರ್ಯಾಮಳು ದಂಡಿನ ಹೊರಗೆ ಏಳು ದಿವಸ ಏಕಾಂ
ತಬದ್ಧಳಾದಳು[೧೪]. ಮಿರ್ಯಾಮಳು ತಿರಿಗಿ ಕೂಡುವನಕಾ ಜನಾಂಗವು ಹೊರಡ
ಲಿಲ್ಲ. ೧೬. ಬಳಿಕ ಜನಾಂಗವು ಹಚೆರೋತಿನಿಂದ ಹೊರಟು, ಪಾರಾನ್ ಅರಣ್ಯದ
ಲ್ಲಿ ಇಳಿದು ಕೊಂಡಿತು.

೧. ಮೋಶೆ ಆರೋನರ ಸಹೋದರಿಯಾದ ಮಿರ್ಯಾಮಳು ಪ್ರವಾದಿಯಾಗಿದ್ದಳು. ಹೊರ. ೧೫, ೧೮ ಮುಂ. ಮೋಶೆಗೆ ಮಾರ್ಮಲೆಯುವ ಆತ್ಮಿಕ ಅಹಂಕಾರದ ಮೂಲವು ಇವಳಲ್ಲಿದ್ದದರಿಂದ, ಅವಳ ಹೆಸರು ಮೊದಲಾಗಿ ಬರೆದದೆ. ನಡೆದ ಪಾಪದ ಶಿಕ್ಷೆಯೂ ಅವಳ ಮೇಲೆಯೇ ಬೀಳುತ್ತದೆ.

೨. ಚಂಚಲ ಗುಣದವನಾದ ಆರೋನನು ಸಹೋದರಿಯ ಮರುಳು ಹಿಡಿದವನಾಗಿ, ಅವಳ ಅನ್ಯಾಯಕ್ಕೆ ಒಡಂಬಟ್ಟು, ಅವಳೊಡನೆ ಸಹೋದರನನ್ನು ದೂರುತ್ತಾನೆ.

೩. ಮೋಶೆ ಅರಬಿಸ್ಥಾನದ ಒಂದು ದೇಶವಾದ ಕುಷಾಳದಲ್ಲಿ ಹುಟ್ಟಿದ ಕರಿ ಹೆಂಗಸಾದವಳನ್ನು ಮದಿವೆ ಮಾಡಿ ಕೊಂಡದ್ದು ಅವರ ದೂಷಣೆಗೆ ನೆವನವಾಯಿತು. ಚಿಪ್ಪೋರಳೆಂಬ ಮೊದಲನೆ ಹೆಂಡತಿ ಕುಷಾಳಿಯಲ್ಲ, ಮಿದ್ಯಾನ್ಯ ಜಾತಿಯವಳಾಗಿದ್ದಳು. ಇವಳ ಗೊಡಿವೆ ಇಲ್ಲಿಲ್ಲ. ಒಂದು ವೇಳೆ ಇವಳು ಮೃತವಾಗಿದ್ದಳು.

೪. ಕರಿ ಹೆಂಗಸಾದ ಪರಜಾತಿಯವಳ ಮದಿವೆಯಿಂದ ಮೋಶೆಯ ಹೆಸರು ಇಸ್ರಾಯೇಲನವರಲ್ಲಿ ತಗ್ಗೀತೆಂತ ಒಡಹುಟ್ಟಿದವರಾದ ಇಬ್ಬರು ಮುನ್ನಂತೆ ಅವನನ್ನು ಮನ್ನಣೆ ಮಾಡದೆ, ಹ್ಯಾಗಾದರೂ ತಾವು ಅವನಿಗೆ ಸರಿಯಾದೆವೆಂದಂದು ಕೊಂಡರು.

೫. ದೇವರು ಕೇಳಿದ್ದಕ್ಕೆ ಮೆಚ್ಚದೆ ಹೇಸಿದನೆಂಬದು ಮುಂದಿನ ಹದನದಿಂದ ತೋರುವದು.

೬. ನೆರೆತಗ್ಗಾಳಾದ ಮೋಶೆ ಒಡ ಹುಟ್ಟಿದವರ ದೂರಿಗೆ ಏನೂ ಮಾರ್ನುಡಿಯದೆ ಎಲ್ಲಾ ಶಾಂತಿಯಾಗಿ ತಾಳಲಾಗಿ, ದೇವರು ಅವನ ಮಾನರಕ್ಷಣಕ್ಕಾಗಿ ಬಂದು, ಉಬ್ಬಿ ಕೊಂಡವರನ್ನು ಕುಗ್ಗಿಸುತ್ತಾನೆ. ಆತ್ಮಸ್ತುತಿಯ ಆಶೆಯಿಂದಲ್ಲ, ಯೆಹೋವನು ಇಷ್ಟ ಗಕ್ಕನೆಯಾಗಿ ಸಹಾಯ ಮಾಡಿದ ಕಾರಣವನ್ನು ತಿಳಿಸುವದಕ್ಕೆಯೇ ಈ ಮಾತನ್ನು ಪರಿಶುದ್ಧಾತ್ಮದ ಪ್ರೇರೇಪಣೆಯಿಂದ ಬರೆದನು. ತಾನು ಮಾಡಿದ ತಪ್ಪುಗಳನ್ನೂ ಅಪರಾಧಗಳನ್ನೂ ತಾನೆ ಸ್ಥಳಗಳಲ್ಲಿ ಸರಾಳವಾಗಿ ಬರೆದ ಮೋಶೆ ತನ್ನನ್ನು ಹೊಗಳಿ ಕೊಳ್ಳುವವನಲ್ಲ.

೭. ತಮ್ಮ ತೆರೆಗಳನ್ನು ಬಿಟ್ಟು, ತನ್ನ ಗುಡಾರಕ್ಕೆ ಬರ ಬೇಕೆಂದು, ದೇವರು ಅವರಿಗೆ ಅಪ್ಪಣೆ ಕೊಡುತ್ತಾನೆ.

೮. ದಿವ್ಯ ಪ್ರಕಟಣೆಗಳಿಗೆ ಬೇರೆ ಬೇರೆ ವಿಧಗಳುಂಟು. ಸ್ವಪ್ನಗಳ ವಿಧವು ಕನಿಷ್ಠವಾದದ್ದು. ಕನಸಿನ ದರ್ಶನಗಳು ಮಧ್ಯಮ ವಿಧವಾಗಿವೆ. ಪ್ರತ್ಯಕ್ಷ ದೃಷ್ಟಿಯ ವಿಧವು ಉತ್ತಮವಾದದ್ದು.

೯. ಮನೆಯಲ್ಲೆಲ್ಲಾ ಅಂದರೆ, ಸಾಕ್ಷಿಯ ಗುಡಾರದ ಸೇವೆಯಲ್ಲಿ ಸಿದ್ಧಿ ಪಡಕೊಂಡವನಾಗಿದ್ದದ್ದಲ್ಲದೆ, ಅವನ ಮೇಲೆ ನಂಬಿಕೆಯನ್ನಿಟ್ಟ ಯೆಹೋವನ ಅಪ್ಪಣೆಯಿಂದ ಅವನು ಸ್ಥಾಪಿಸಿ ಹವಣಿಸಿದ ಹಳೆ ಒಡಂಬಡಿಕೆ ಎಂಬ ಗೃಹನೇಮದ ಸಮಸ್ತ ವೃತ್ತಿಯಲ್ಲಿಯೂ ಹೆಚ್ಚು ಕಡಿಮೆ ಇಲ್ಲದವನಾಗಿದ್ದು, ಪೂರ್ವ

ಅಂಕೆ. ಸ. ೧೩, ೧--೧೮.

ಪ್ರವಾದಿಗಳಲ್ಲಿ ಅಗ್ರಗಣ್ಯನೂ ಹೊಸ ಒಡಂಬಡಿಕೆಯ ಮಧ್ಯಸ್ಥನಾದ ಯೇಸು ಕ್ರಿಸ್ತನ ಮುಂಗುರ್ತೂ ಎಂದು ಹೆಸರ್ಗೊಂಡನು.

೧೦. ಮೋಶೆಗೂ ಉಳಿದ ಪ್ರವಾದಿಗಳಿಗೂ ಉಂಟಾದ ಪ್ರಕಟಣೆಗಳಲ್ಲಿ ಭೇದವೇನಂದರೆ, ಇತರರು ನಿದ್ರಿತರಾಗಿ, ಇಲ್ಲವೆ ಮೂರ್ತರಾಗಿ, ಹ್ಯಾಗಾದರೂ ಸ್ವತಂತ್ರಬುದ್ಧಿ ಇಲ್ಲದ ಸ್ಥಿತಿಯಲ್ಲಿ ಶೇರಿದವರಾಗಿ ಇದ್ದು, ದರ್ಶನಗಳಿಂದಾಗಲಿ ಕನಸುಗಳಿಂದಾಗಲಿ ಶ್ರುತ ಶಬ್ದಗಳಿಂದಾಗಲಿ ದೇವಾತ್ಮಕ್ಕೆ ಪರವಶವಾದ ಪ್ರಾಣದಲ್ಲಿ ದಿವ್ಯ ಪ್ರಕಟಣೆಗಳನ್ನು ಹೊಂದುತ್ತಾ ಇದ್ದರು. ಬಳಿಕ ಸ್ಮರಣೆ ಬಂದ ಮೇಲೆ ಆ ಪ್ರವಾದಿಗಳಿಗೂ ತಮಗೆ ದೊರಕಿದ ಪ್ರಕಟಣೆಯ ಅಭಿಪ್ರಾಯವನ್ನು ಗ್ರಹಿಸಿ ಕೊಳ್ಳುವ ಬಗ್ಗೆ ಸಹಜವಾದ ಬುದ್ಧಿಯ ಧ್ಯಾನದಿಂದಲೂ ವಿಚಾರಣೆಯಿಂದಲೂ ಯತ್ನ ಮಾಡಲವಶ್ಯವಾಗಿತ್ತು. ಆದರೆ ಮೋಶೆ ಯೆಹೋವನ ತೇಜವನ್ನು ಕಣ್ಣಾರೆ ಕಂಡು (ಹೊರ. ೩೩, ೨೩.) ತನ್ನ ಸಂಗಡ ಸ್ಪಷ್ಟವಾಗಿ ಮಾತಾಡುವ ದೇವರ ಶಬ್ದವನ್ನು ಕಿವಿಯಿಂದ ಕೇಳಿ, ದೇವರು ತಿಳಿಸುವ ಅಭಿಪ್ರಾಯವನ್ನು ಸಹಜವಾದ ಬುದ್ಧಿಯಿಂದ ಗ್ರಹಿಸಿ ಕೊಳ್ಳುತ್ತಾ ಇದ್ದದರಿಂದ, ಉಳಿದ ಪ್ರವಾದಿಗಳಿಗೆಲ್ಲ ಶ್ರೇಷ್ಠನಾಗಿದ್ದಾನೆ. ಆದದರಿಂದ ಕ್ರಿಸ್ತನ ವಿಷಯವಾದ ಪ್ರವಾದನೆಯಲ್ಲಿ (ದ್ವಿತೀ. ೧೮, ೧೫.) "ನಿನ್ನ ನಡುವೆಯಿಂದ ನಿನ್ನ ಸಹೋದರರಲ್ಲಿಂದ ನನ್ನ ಹಾಗೆ ಇರುವ ಪ್ರವಾದಿಯನ್ನು ನಿನ್ನ ದೇವರಾದ ಯೆಹೋವನು ನಿನಗೆ ಎಬ್ಬಿಸುವನು. ಅವನ ಮಾತು ನೀವು ಕೇಳ ಬೇಕು" ಎಂತ, ಹೇಳುವದು ಅವನಿಗೆ ಉಚಿತವಾಗಿತ್ತು.

೧೧. ಗುಣುಗುಟ್ಟಿದವರ ಮೇಲಣ ಅಕ್ಕಸವನ್ನು ತೋರಿಸುವ ಉದ್ದಿಶ್ಯವಾಗಿ ದೇವಸಾನ್ನಿಧ್ಯದ ತೇಜವು ಅವರ ಕಡೆಯಿಂದ ತೊಲಗಿ ಹೋಯಿತು.

೧೨. ಆರೋನನು ಪಶ್ಚಾತ್ತಾಪ ಪಟ್ಟು, ತಾನು ಮರುಳಾದೆನೆಂದು ಅರಿಕೆ ಮಾಡಿ, ತನಗಾಗಿಯೂ ತನಗಿಂತ ಅಧಿಕವಾದ ಅಪರಾಧಕ್ಕೊಳಗಾದ ಸಹೋದರಿಗಾಗಿಯೂ ಕ್ಷಮೆಯನ್ನು ಬೇಡಿ ಕೊಳ್ಳುತ್ತಾನೆ.

೧೩ ಮುಯಿಗೆ ಮುಯಿ ಕೊಡುವ ಮನಸ್ಸಿಲ್ಲದ ಮೋಶೆಯ ತಾಳ್ಮೆಗೂ ಅಕ್ಕರೆಗೂ ಇದು ಪ್ರಾಮಾಣ್ಯವಾಗಿದೆಯಲ್ಲ?

೧೪. ಈ ಅಪ್ಪಣೆ ಕುಷ್ಠದ ವಿಷಯವಾದ ಕಟ್ಟಳೆಗೆ (ಲೇವಿ. ೧೩, ೪. ೫.) ಒಪ್ಪಿಕೆಯಾಗಿದೆ.

ಸಂಧಿ ೧೩.

ಚಾರರು ಕನಾನ ದೇಶವನ್ನು ಹೊಂಚಿ ನೋಡುವ ಬಗ್ಗೆ ಪಾರಾನ್ ಅರಣ್ಯದಿಂದ ಹೊರಟು ಹೋದದ್ದು. ಅವರು ತಿರಿಗಿ ಬಂದು ವರದಿ ಹೇಳಿದ್ದು.

ವ. ೧. ಮತ್ತು ಯೆಹೋವನು ಮೋಶೆಗೆ ನುಡಿದದ್ದೇನಂದರೆ: ೨. ನಾನು ಇಸ್ರಯೇಲನ ಮಕ್ಕಳಿಗೆ ಕೊಡುವ ಕನಾನ ದೇಶವನ್ನು ಹೊಂಚಿ ನೋಡ ತಕ್ಕ ಆಳುಗಳನ್ನು ಕಳುಹಿಸಿ ಕೋ[೧]. ಅವರ ತಂದೆಗಳ ಕುಲಕ್ಕೆ ಒಬ್ಬೊಬ್ಬ ಆಳನ್ನು, ಅವರಲ್ಲಿ ಎಲ್ಲಾ ಪ್ರಭುಗಳಾದವರನ್ನು[೨] ಕಳುಹು! ೩. ಆಗ ಮೋಶೆ ಯೆಹೋವನ ಬಾಯಿ ಮಾತಿನಂತೆ ಪಾರಾನ್ ಅರಣ್ಯದಿಂದ ಅವರನ್ನು ಕಳುಹಿಸಿದನು. — — — ೧೬.—ಮತ್ತು ಮೋಶೆ ನೂನನ ಮಗನಾದ ಹೋಷೇಯನಿಗೆ ಯೆಹೋಷುವನೆಂದು, ಹೆಸರಿಟ್ಟನು[೩]. ೧೭. ಮೋಶೆ ಅವರನ್ನು ಕನಾನ ದೇಶವನ್ನು ಹೊಂಚಿ ನೋಡುವದಕ್ಕೆ ಕಳುಹಿಸಲಾಗಿ, ಅವರಿಗೆ ಹೇಳಿದ್ದು: ಈ ತೆಂಕಣಕ್ಕೆ[೪] ಏರಿರಿ; ಮತ್ತು ಬೆಟ್ಟವನ್ನೇರಿರಿ. ೧೮. ಆ ದೇಶವನ್ನು, ಅದೇನು ಎಂತಲೂ, ಅದರಲ್ಲಿ ವಸ್ತಿಯಾದ ಜನಾಂಗವನ್ನು,

೩೦೮ ಚಾರರು ಕನಾನ ದೇಶವನ್ನು ಹೊಂಚಿ ನೋಡುವ ಬಗ್ಗೆ ಹೋದದ್ದು.

ಅಂಕೆ. ಸ. ೧೩, ೧೭—೨೪.

ಅವರು ಘಟ್ಟಿಯಾದವರೋ, ಕುಗ್ಗುಡಿಯಾದವರೋ, ಹೇರಳರೋ ಕೊಂಚರೋ?
೧೯. ಅವರು ವಾಸಿಸುವ ದೇಶವು ಏನು? ಅದು ಒಳ್ಳೇದೋ ಕೆಟ್ಟದ್ದೋ? ಅವರು
ವಾಸಿಸುವ ಪಟ್ಟಣಗಳೇನು? ಅವು ಗುಡಾರಗಳೋ, ಕೋಟೆಗಳೋ? ಎಂತಲೂ, ೨೦.
ಆ ಭೂಮಿ ಏನು? ಅದು ರಸವಾದದ್ದೋ, ಬತ್ತಿದಂಥಾದ್ದೋ? ಅದರಲ್ಲಿ ಮರವುಂ
ಟೋ ಇಲ್ಲವೋ? ಎಂತಲೂ, ನೋಡಿರಿ! ಗಂಡುಗೊಂಡು, ದೇಶದ ಫಲದಲ್ಲಿ ಏನಾದ
ರೂ ಕೊಂಡು ಬನ್ನಿ! ಏನಂದರೆ ಆ ದಿನಗಳು ದ್ರಾಕ್ಷೆಯ ಮುಂಫಲದ ದಿನಗಳಾಗಿದ್ದ
ವು. ೨೧. ಆಗಲವರು ಏರಿ ಹೋಗಿ, ಚೀನ್[೪] ಅರಣ್ಯದಿಂದ ಹಾಮಾಥಿಗೆ[೫] ಹೋ
ಗುವ ರೆಹೋಬಿನ[೬] ವರೆಗೆ ದೇಶವನ್ನು ಹೊಂಚಿ ನೋಡಿದರು. ೨೨. ಮತ್ತು ತೆಂಕ
ಣಕ್ಕೆ ಏರಿ, ಹೆಬ್ರೋನಿನ ವರೆಗೆ ಬಂದರು; ಅಲ್ಲಿ ಅಹಿಮಾನ ಶೇಷಾಯ ಥಲ್ಮಾಯರೆಂ
ಬ ಆನಕನ ಮಕ್ಕಳು ಇದ್ದರು. ಹೆಬ್ರೋನು ಮಿಚ್ರ ದೇಶದ ಚೋವನಿಗೆ ಏಳು ವರ್ಷ
ಮುಂಚಿತಾಗಿ ಕಟ್ಟೋಣವಾಯಿತು. ೨೩. ಮತ್ತು ಅವರು ಎಷ್ಕೋಲ್ ಹಳ್ಳದ ವ
ರೆಗೆ ಬಂದು, ಅಲ್ಲಿ ದ್ರಾಕ್ಷೇ ಗೊಂಚಲಿನ ಒಂದು ಕೊಂಬೆ ಕೊಯಿದು, ಅದನ್ನು ಅಡ್ಡೆ
ಯಲ್ಲಿಟ್ಟು ಇಬ್ಬರಾಗಿ ತಂದರು. ದಾಳಿಂಬ ಅಂಜೂರ ಹಣ್ಣುಗಳನ್ನು ಸಹಾ ತಂದರು.
೨೪. ಇಸ್ರಯೇಲನ ಮಕ್ಕಳು ಅಲ್ಲಿ ಕೊಯಿದ ದ್ರಾಕ್ಷೇ ಗೊಂಚಲಿಗಾಗಿ ಆ ಸ್ಥಳಕ್ಕೆ ಎ
ಷ್ಕೋಲ್[೭] ಹಳ್ಳವೆಂದು ಹೆಸರಿಟ್ಟರು.

೧. ದ್ವಿತೀ. ೧, ೨೨ರ ಪ್ರಕಾರ, ಜನರು ತಾವೇ
ಚಾರರು ದೇಶವನ್ನು ವಿಚಾರಿಸುವದಕ್ಕಾಗಿ ಮುಂದಾ
ಗಿ ಹೋಗ ಬೇಕೆಂದು, ಬಯಸಿದರು. ಈ ವಚನದ
ಪ್ರಕಾರವಾಗಿ, ದೇವರು ಕೊಟ್ಟ ಅಪ್ಪಣೆಯು ಅವರು
ಆಗಿನ ಮಟ್ಟಿಗೂ ಮೋಸವಿಲ್ಲದ ಹೃದಯದಲ್ಲಿ
ಭಾವಿಸಿ ಕೊಂಡ ಆಲೋಚನೆಗೆ ಒಪ್ಪಿಕೆಯಾಗಿದ್ದು,
ಅವರ ಅಪೇಕ್ಷೆಯನ್ನು ನೆರವೇರಿಸುವದು. ಅರಣ್ಯ
ಸಂಚಾರದ ಆಚೇ ಕಾಲದಲ್ಲಿ ದೇವರು ತಮ್ಮನ್ನು ನ
ಡಿಸುತ್ತಾ ಬಂದ ಆಶ್ಚರ್ಯಕ್ರಿಯೆಗಳ ಮಾರ್ಗದ
ಲ್ಲಿ ಇಸ್ರಯೇಲನವರು ತಮ್ಮ ಪಕ್ಷದವನಾದ ಒಡಂ
ಬಡಿಕೆಯ ಕರ್ತನ ಮೇಲೆ ದೃಢ ವಿಶ್ವಾಸವಿಡುವ ಪಾ
ಠವನ್ನು ನೆರೆ ಕಲಿತು ಕೊಂಡವರಾಗಿದ್ದು, ವಾಗ್ದತ್ತ
ವಾದ ದೇಶವನ್ನು ಸ್ವತಂತ್ರಿಸಿ ಕೊಳ್ಳ ಯೋಗ್ಯರಾ
ದರೋ ಏನೋ ಎಂತ, ಪರೀಕ್ಷೆ ಮಾಡ ಬೇಕೆಂದಿ
ದ್ದನು. ಹ್ಯಾಗಂದರೆ ಚಾರರು ಹೇಳಿದ ವರದಿಯಿಂ
ದ ಭಕ್ತಿಯುಳ್ಳವರು, ವಾಗ್ದತ್ತವಾದ ದೇಶವು ಆಶೀ
ರ್ವಾದಪೂರಿತವಾದದ್ದೆಂದು, ತಿಳು ಕೊಂಡು, ಇನ್ನೂ
ಎಳೆಯಾದ ನಂಬಿಕೆಯಲ್ಲಿ ಘಟ್ಟಿಯಾಗ ತಕ್ಕವ
ರಾಗಿದ್ದರು. ಆದರೆ ದೇವರಿಗೆ ಒಳಗಾಗಒಲ್ಲದವ
ರಿಗೆ ಕನಾನದವರ ಪರಾಕ್ರಮದ ಸುದ್ದಿ ಕೇಳಲು, ತ
ಮ್ಮ ಕಣ್ಣಿನ ಮುಂದಣ ವಾಗ್ದತ್ತವಾದ ಬಾಧ್ಯತೆ
ಗಾಗಿ ಬಲವಂತನಾದ ತಮ್ಮ ದೇವರನ್ನು ನಂಬಿ ಗಂ
ಡರಾಗಿ ಕಾದುವದಕ್ಕಿಂತ, ಮಿಚ್ರ ದೇಶಕ್ಕೆ ತಿರುಗಿ
ಕೊಂಡು ಕಟ್ಟಾಳುಗಳಾಗಿ ಹೊಟ್ಟೆ ತುಂಬುವದು ಲೇ
ಸೆಂದು ಮರುಗುವದರಿಂದ, ತಮ್ಮ ಹೃದಯಗಳ ಕೆ
ಟ್ಟತನವನ್ನು ಬೈಲು ಮಾಡುವ ವೇಳೆ ಬಂತು. ಹೀ
ಗಿರಲಾಗಿ ಯೆಹೋವನನ್ನು ನಂಬಿ, ಕನಾನ ದೇಶ
ವನ್ನು ಹಿಡಿದು ಕೊಳ್ಳುವದು, ಯೆಹೋವನನ್ನು ನಂ
ಬದೆ, ೩೮ ವರ್ಷ ಅರಣ್ಯಸಂಚಾರ ಮಾಡುವದು,
ಇವೆರಡರಲ್ಲಿ ಯಾವದು ತಕ್ಕದ್ದೆಂಬದು ನಿಶ್ಚಯವಾ
ಗುವದಕ್ಕೆ ಈಗ ಇಸ್ರಯೇಲನ ಜನಾಂಗಕ್ಕೆ ಸಂದು
ಕಟ್ಟು ಬಂತು.

೨. ಅಂದರೆ, ಕುಲನಾಯಕರು.

೩. ಮೊದಲಿನ ಹೆಸರಿನ ಅರ್ಥವು ಏನಂದರೆ, ಸ

ಹಾಯ. ಯೆಹೋವನು ಸಹಾಯ ಮಾಡುತ್ತಾನೆಂಬದು ಎರಡನೆಯದರ ಅರ್ಥವು. ಈ ಹೆಸರು ಯೆಹೋವನ ಪ್ರತಿನಿಧಿಯಾಗಿ ಜನಾಂಗವನ್ನಾಳುವವನಿಗೆ ಅತಿ ಯುಕ್ತವಾದದ್ದು.

೪. ತೆಂಕಣಕ್ಕೆ ಅಂದರೆ, ಕನಾನ ದೇಶದ ತೆಂಕಣ ದಿಶೆಗೆ.

೫. ಚೀನ್ ಎಂಬದು ಪಾರಾನ್ ಅರಣ್ಯದ ಬಡಗ ಕಡೆಯ ಹೆಸರು.

೬. ರೆಹೋಬು ಕನಾನದ ಬಡಗ ಪಡುವಣ ಕಡೆಯ ಗಡಿಯಲ್ಲಿಯ ಊರು. ಅದು ಬಳಿಕ ಅಶೇರನ ಕುಲದ ಪಾಲಿಗೆ ಬಿತ್ತು.

೭. ಹಾಮಾಥು ಲಿಬನ ಬೆಟ್ಟದ ಮೂಡಣ ಕಡೆಯಲ್ಲಿರುವಂಥ, ಕನಾನ ದೇಶದ ಬಡಗ ಮೂಡಣ ಗಡಿಯ ಊರು. ಅದು ಸುರ್ಯ ದೇಶಕ್ಕೆ ಶೇರಿತು.

೮. ದ್ರಾಕ್ಷೇ ಹಳ್ಳವೆಂಬ ಅರ್ಥವುಳ್ಳ ಎಷ್ಕೋಲಿನಲ್ಲಿ, ಈಗಿನವರು ಚನ್ನಾಗಿ ವ್ಯವಸಾಯ ಮಾಡದೆ ಇದ್ದರೂ, ಹತ್ತು ಹನ್ನೆರಡು ರಾತಲಿನ ಭಾರವಾದ ದ್ರಾಕ್ಷೇ ಹಣ್ಣು ಬೆಳೆಯುವದುಂಟು.

ವ. ೨೫. ಅವರು ದೇಶವನ್ನು ಹೊಂಚಿ ನೋಡಿ, ನಾಲ್ವತ್ತು ದಿನದ ಮೇಲೆ ತಿ
ರಿಗಿ ಬಂದರು. ೨೬. ಮತ್ತು ಅವರು ಹೋಗಿ, ಮೋಶೆಯ ಬಳಿಗೂ, ಆರೋನನ
ಬಳಿಗೂ, ಇಸ್ರಯೇಲನ ಮಕ್ಕಳ ಸಮಸ್ತ ಸಭೆಯ ಬಳಿಗೂ, ಪಾರಾನ್ ಅರಣ್ಯದಲ್ಲಿ
ರುವ ಕಾದೆಷಿಗೆ ಬಂದು, ಅವರಿಗೂ ಸಮಸ್ತ ಸಭೆಗೂ ವರದಿ ತಂದು, ಆ ದೇಶದ ಫಲ
ಗಳನ್ನು ಅವರಿಗೆ ಕಾಣಿಸಿದರು. ೨೭. ಮತ್ತು ಅವನಿಗೆ ವಿವರಿಸಿ ಹೇಳಿದ್ದು: ನೀನು
ನಮ್ಮನ್ನು ಕಳುಹಿಸಿದ ದೇಶಕ್ಕೆ ಬಂದೆವು. ಅದು ಹಾಲೂ ಜೇನೂ ಹರಿಯುವ ದೇಶ
ವೇ ಸರಿ. ಅದರ ಫಲವು ಇದೇ. ೨೮. ಆದರೆ ಆ ದೇಶದಲ್ಲಿ ವಾಸವಾಗಿರುವ ಜನ
ವು ಬಲವುಳ್ಳದ್ದು, ಕೋಟೆ ಕಟ್ಟಿದ ಪಟ್ಟಣಗಳು ಶಾನೆ ದೊಡ್ಡವುಗಳು ಮತ್ತು ಆನಕ
ನ ಮಕ್ಕಳನ್ನು[೧] ಅಲ್ಲಿ ಕಂಡೆವು. ೨೯. ಅಮಲೇಕನು ದೇಶದ ತೆಂಕಣದಲ್ಲಿ ವಾಸ
ವಾಗಿದ್ದಾನೆ. ಮತ್ತು ಹಿತ್ತಿಯರೂ ಯೆಬೂಸ್ಯರೂ ಅಮೋರ್ಯರೂ ಬೆಟ್ಟಗಳಲ್ಲಿ, ಕ
ನಾನದವರು ಸಮುದ್ರದ ಬಳಿಯಲ್ಲಿಯೂ ಯೊರ್ದಾನಿನ ತೀರದಲ್ಲಿಯೂ ವಾಸ
ವಾಗಿದ್ದಾರೆ. ೩೦. ಆದರೆ ಕಾಲೆಬನು ಪ್ರಜೆಯನ್ನು ಮೋಶೆಯ ಎದುರಾಗಿ[೨] ಸಂತೈ
ಸಿ: "ಏರೇ ಏರಿ, ಅದನ್ನು ಕೈಕೊಳ್ಳುವಾ, ಯಾಕಂದರೆ ನಾವು ಅದನ್ನು ಗೆದ್ದೇ ಗೆಲ್ಲ
ಬಹುದು," ಅಂದನು. ೩೧. ಆದರೆ ಅವನೊಡನೆ ಏರಿ ಹೋದ ಆಳುಗಳು: "ಆ ಪ್ರಜೆ
ಯ ಬಳಿಗೆ ಏರಿ ಹೋಗಲಾರೆವು. ಅವರು ನಮಗಿಂತ ಗಂಡರಾಗಿದ್ದಾರೆ," ಅಂದರು.
೩೨. ತಾವು ಹೊಂಚಿ ನೋಡಿದ ದೇಶದ ಮೇಲೆ ಇಸ್ರಯೇಲನ ಮಕ್ಕಳಲ್ಲಿ ಕೆಟ್ಟ ಸುದ್ದಿ
ಹುಟ್ಟಿಸಿ, ಅವರು ಹೇಳಿದ್ದು: "ನಾವು ಹೊಂಚಿ ನೋಡ ಹಾದು ಹೋದ ದೇಶವು ಅ
ದರ ನಿವಾಸಿಗಳನ್ನು ತಿಂದು ಬಿಡುವ ದೇಶವು[೩]. ನಾವು ಅದರಲ್ಲಿ ನೋಡಿದ ಜನಾಂ
ಗವು ಉದ್ದ ಉದ್ದವಾದ ಆಳುಗಳು. ೩೩. ಮತ್ತು ಅಲ್ಲಿ ರಾಕ್ಷಸರನ್ನೂ ರಾಕ್ಷಸರಿಂದ
ಹುಟ್ಟಿದ ಆನಕನ ಮಕ್ಕಳನ್ನೂ ಕಂಡೆವು. ಮತ್ತು ನಾವು ನಮ್ಮ ದೃಷ್ಟಿಯಲ್ಲಿ ಮಿಡಿತೆಗ
ಳಂತೆ ಇದ್ದೆವು. ಅವರ ದೃಷ್ಟಿಯಲ್ಲಿಯೂ ನಾವು ಹಾಗೆಯೇ[೪] ಇದ್ದೆವು."

ಅಂಕೆ. ಸ. ೧೪, ೧–೧೦.

೧. ಆನಕನಿಂದ ಚೋದ್ಯವಾಗಿ ದೊಡ್ಡ ಮೈಯುಳ್ಳ ಮೂರು ಮಂದಿ ಗಂಡು ಮಕ್ಕಳೂ ಅವರ ವಂಶದವರೂ ಹುಟ್ಟಿದರು. ಯೆಹೋಷು. ೧೫, ೧೩. ೧೪. ದ್ವಿತೀ. ೯, ೨; ೨, ೧೦. ೧೧. ೨೧. ಯೆಹೋಷು. ೧೪, ೧೫.

೨. ಚಾರರು ಎಬ್ಬಿಸಿದ ಸುದ್ದಿಗೆ ಮಿಗೆ ಬೆದರ್ಗೊಂಡು, ಮೋಶೆಯ ಮೇಲೆ ಶಿಟ್ಟು ಮಾಡುವ ಗುಂಪಿನವರನ್ನು ಸಮಾಧಾನ ಪಡಿಸುವದಕ್ಕೆ ಯೆಹೋಷುವನು ಎತ್ತುಗಡೆ ಮಾಡಿದನು.

೩. ದೇಶದಲ್ಲಿ ವಸ್ತಿಯಾದ ಜನಗಳು ಎಡೆಬಿಡದೆ ತಮ್ಮೊಳಗೆ ಕಾದುತ್ತಾ ಒಬ್ಬರನ್ನೊಬ್ಬರು ಸಮಯಿಸುತ್ತಾ ಇರುತ್ತಾರೆಂತ, ಚಾರರು ಹೇಳಿದರು

೪. ಅವಿಶ್ವಾಸದಿಂದ ಹುಟ್ಟಿದ ಹೇಡಿತನದಿಂದ ಮರುಳುಗೊಂಡು ಬಾಯಿಗೆ ಬಂದಂತೆ ಮಾತಾಡುತ್ತಾರಲ್ಲ?

ಮಾರ್ಮುಲತಿರುವ ಜನಾಂಗಕ್ಕಾಗಿ ಮೋಶೆ ಮಾಡಿದ ಬಿನ್ನಹ.

ದೇವರು ಅವರಿಗೆ ನಿರ್ಣೈಸಿದ ಶಿಕ್ಷೆ. ಸ. ೧೪, ೧ – ೩೮.

ವ. ೧. ಬಳಿಕ ಸಭೆಯೆಲ್ಲಾ ಗುಲ್ಲೆಬ್ಬಿಸಿ, ತನ್ನ ಶಬ್ದವನ್ನೆತ್ತಿತು. ಮತ್ತು ಜನಾಂಗ
ವು ಆ ಇರುಳೆಲ್ಲಾ ಅತ್ತಿತು. ೨. ಮತ್ತು ಇಸ್ರಯೇಲನ ಮಕ್ಕಳೆಲ್ಲಾ ಮೋಶೆ ಆರೋ
ನರ ಮೇಲೆ ಗುಣುಗುಟ್ಟಿ, ಸಭೆಯೆಲ್ಲಾ ಅವರಿಗೆ ಹೇಳಿದ್ದೇನಂದರೆ: ನಾವು ಮಿಚ್ರ ದೇ
ಶದಲ್ಲಿ ಸತ್ತಿದ್ದರೆ, ಇಲ್ಲವೆ ಈ ಅರಣ್ಯದಲ್ಲಿ ಸಾಯುವದಾದರೆ, ಲೇಸು. ೩. ಮತ್ತು ಕ
ತ್ತಿಯಿಂದ ಬೀಳುವ ಹಾಗೆಯೂ, ನಮ್ಮ ಹೆಂಡರು ಮಕ್ಕಳು ಸುಲಿಗೆಯಾಗುವ ಹಾಗೆ
ಯೂ, ಯೆಹೋವನು ನಮ್ಮನ್ನು ಈ ದೇಶಕ್ಕೆ ಯಾಕೆ ಬರ ಮಾಡಿದ್ಧಾನೆ? ಮಿಚ್ರ ದೇ
ಶಕ್ಕೆ ತಿರುಗುವದು ನಮಗೆ ವಾಸಿಯಲ್ಲವೋ? ೪. ಮುಖ್ಯಸ್ಥನನ್ನಿಟ್ಟು ಕೊಂಡು, ಮಿಚ್ರ
ದೇಶಕ್ಕೆ ತಿರುಗಿ ಕೊಳ್ಳುವಾ[೧], ಎಂದು ಒಬ್ಬರಿಗೊಬ್ಬರು ಹೇಳಿ ಕೊಂಡರು. ೫. ಬಳಿ
ಕ ಮೋಶೆ ಆರೋನರು ಇಸ್ರಯೇಲನ ಸಮಸ್ತ ಸಭೆಯ ಕೂಟದ ಮುಂದೆ ಮೋರೆ ಕೆ
ಳಗಾಗಿ ಬಿದ್ದರು[೨]. ೬. ಇದಲ್ಲದೆ ದೇಶವನ್ನು ಹೊಂಚಿ ನೋಡಿದವರಲ್ಲಿದ್ದ ನೂನನ
ಮಗನಾದ ಯೆಹೋಷುವನೂ ಯೆಪುನ್ನೆಯ ಮಗನಾದ ಕಾಲೆಬನೂ ತಮ್ಮ ವಸ್ತ್ರಗ
ಳನ್ನು ಹರಕೊಂಡು, ೭. ಇಸ್ರಯೇಲನ ಮಕ್ಕಳ ಸಮಸ್ತ ಸಭೆಯ ಕೂಟಕ್ಕೆ ಹೇಳಿದ್ದೇ
ನಂದರೆ: ನಾವು ಹೊಂಚಿ ನೋಡ ಹಾದು ಹೋದ ದೇಶವು ಶಾನೆ ಶಾನೆ ಒಳ್ಳೇ ದೇಶ
ವಾಗಿದೆ. ೮. ಯೆಹೋವನು ನಮಗೆ ಒಲುಮೆಯಾಗಿದ್ದರೆ, ಆ ದೇಶಕ್ಕೆ ನಮ್ಮನ್ನು ಬ
ರಲೀಸಿ, ಹಾಲೂ ಜೇನೂ ಹರಿಯುವಂಥ ಆ ದೇಶವನ್ನು ನಮಗೆ ಕೊಡುವನು. ೯.
ಆದರೆ ಯೆಹೋವನಿಗೆ ಮಾರ್ಮುಲೆಯ ಬೇಡಿರಿ. ಮತ್ತು ಆ ದೇಶದ ಜನಕ್ಕೆ ನೀವು ಬೆ
ದರ ಬೇಡಿರಿ, ಯಾಕೆಂದರೆ ಅವರು ನಮಗೆ ರೊಟ್ಟಿ. ಅವರ ನೆರಳು[೩] ಅವರಿಂದ ತೊ
ಲಗಿದೆ, ಆದರೆ ನಮ್ಮೊಡನೆ ಯೆಹೋವನು. ಅವರಿಗೆ ಹೆದರ ಬೇಡಿರಿ. ೧೦. ಆಗ ಸಭೆ
ಯವರೆಲ್ಲಾ ಅವರನ್ನು ಕಲ್ಲೆಸದು ಕೊಲ್ಲ ಬೇಕು, ಅಂದರು. ಆಗ ಯೆಹೋವನ ಮಹಿ
ಮೆಯು ಸಭೆಯ ಗುಡಾರದಲ್ಲಿ ಇಸ್ರಯೇಲನ ಮಕ್ಕಳಿಗೆಲ್ಲಾ ಕಾಣಿಸಿತು. ೧೧. ಬಳಿ

ಅಂಕೆ. ಸ. ೧೪, ೧೧–೨೪.

ಕ ಯೆಹೋವನು ಮೋಶೆಗೆ ಹೇಳಿದ್ದು: ಎಷ್ಟು ವರೆಗೆ ಈ ಜನಾಂಗವು ನನ್ನನ್ನು ಜರೆ
ಯುವದು? ಎಷ್ಟು ವರೆಗೆ ನಾನು ಅವರ ನಡುವೆ ಮಾಡಿದ ಎಲ್ಲಾ ಗುರುತುಗಳಿಂದ
ನನ್ನಲ್ಲಿ ನಂಬಿಕೆ ಇಡದೆ ಹೋಗುವರು? ೧೨. ಅವರನ್ನು ವ್ಯಾಧಿಯಿಂದ ಹೊಡೆದು,
ಅವರನ್ನು ಸಂಹರಿಸಿ, ನಿನ್ನನ್ನು ಅವರಿಗಿಂತ ಬಲವಾದ ದೊಡ್ಡ ಜನಾಂಗವಾಗ ಮಾ
ಡುವೆನು[೪]. ೧೩. ಆದರೆ ಮೋಶೆ ಯೆಹೋವನಿಗೆ ಹೇಳಿದ್ದು: ಮಿಚ್ರ್ರದವರು ಅದನ್ನು
ಕೇಳುವರಲ್ಲವೋ? ಯಾಕಂದರೆ ನೀನು ನಿನ್ನ ಶಕ್ತಿಯಿಂದಲೇ ಜನಾಂಗವನ್ನು ಅವರ ನ
ಡುವೆಯಿಂದ ಏರಿ ಬರಲೀಸಿದ್ಧಿ. ೧೪. ಬಳಿಕ ಈ ದೇಶದ ನಿವಾಸಿಗಳಿಗೆ ಅದನ್ನು ಹೇ
ಳುವರು. ಯೆಹೋವನಾದ ನೀನು ಕಣ್ಣಿಗೆ ಕಣ್ಣು ಕಾಣಿಸುವವನಾಗಿ, ಯೆಹೋವ
ನಾದ ನೀನು ಈ ಜನಾಂಗದ ನಡುವೆಯಲ್ಲಿದ್ಧಿ ಎಂತಲೂ, ನಿನ್ನ ಮೇಘವು ಅವರ ಮೇ
ಲೆ ನಿಂತದೆ ಎಂತಲೂ, ನೀನು ಅವರ ಮುಂದೆ ಹಗಲು ಹೊತ್ತು ಮೇಘಸ್ತಂಭದಲ್ಲಿ, ಇ
ರುಳು ಹೊತ್ತು ಅಗ್ನಿಸ್ತಂಭದಲ್ಲಿ ನಡಕೊಳ್ಳುತ್ತಿ ಎಂತಲೂ ಅವರು ಕೇಳಿದ ಮೇಲೆ,
೧೫. ಈ ಜನಾಂಗವನ್ನು ಒಬ್ಬ ಆಳಿನಂತೆ ನೀನು ಕೊಂದಲ್ಲಿ, ನಿನ್ನ ಸುದ್ದಿ ಕೇಳಿದ ಜನ
ಗಳು ಏನು ಹೇಳುವರು? ೧೬ ಯೆಹೋವನು ಈ ಜನಾಂಗವನ್ನು ಅವರಿಗೆ ಆಣೆ
ಇಟ್ಟ ದೇಶಕ್ಕೆ ಬರಲೀಸಲಾರದ ಕಾರಣ ಅವರನ್ನು ಅರಣ್ಯದಲ್ಲಿ ಕಡಿದು ಬಿಟ್ಟನೆಂಬು
ವರಲ್ಲ? ೧೭. ಅದು ಕಾರಣ ನನ್ನ ಒಡೆಯನ ಶಕ್ತಿಯು, ಯೆಹೋವನು ನಿಡುತಾಳ್ಮೆ
ಯೂ ಮಿಗೆಯಕ್ಕರೆಯೂ ಉಳ್ಳವನಾಗಿದ್ದು, ತಪ್ಪು ಪಾತಕಗಳನ್ನು ಮನ್ನಿಸುವವನು,
ಯಾರನ್ನೂ ನಿರ್ಮಲನೆಂದು ತೀರಿಸದೆ, ೧೮. ಮೂರನೆ ನಾಲ್ಕನೆ ತಲೆಯ ವರೆಗೆ ತಂ
ದೆಗಳ ತಪ್ಪನ್ನು ಮಕ್ಕಳ ಮೇಲೆ ಹೊರಿಸುವವನು[೫] ಎಂತ, ನೀನು ನುಡಿದಂತೆ, ದೊಡ್ಡ
ದಾಗಲಿ[೬]! ೧೯. ಈ ಜನಾಂಗದ ತಪ್ಪನ್ನು, ನಿನ್ನ ದಯೆಯ ದೊಡ್ಡತನದ ಪ್ರಕಾರ
ವಾಗಿಯೂ ನೀನು ಈ ಜನಾಂಗಕ್ಕೆ ಮಿಚ್ರದಿಂದ ಇಲ್ಲಿಯನಕಾ ಮನ್ನಿಸಿದ ಪ್ರಕಾರವಾ
ಗಿಯೂ, ಬಿಡ್ವೈ! ೨೦. ಆಗ ಯೆಹೋವನು ಹೇಳಿದ್ದು: ನಿನ್ನ ಮಾತಿನಂತೆ ಬಿಟ್ಟಿದ್ಧೇ
ನೆ[೭]. ೨೧. ಆದರೆ ನನ್ನ ಜೀವದಾಣೆ, ಯೆಹೋವನ ಮಹಿಮೆ ಭೂಮಿಯನ್ನೆಲ್ಲಾ
ತುಂಬುವದು. ೨೨. ಹ್ಯಾಗಂದರೆ ನನ್ನ ಮಹಿಮೆಯನ್ನೂ ಮಿಚ್ರದಲ್ಲಿ ಮತ್ತು ಅರ
ಣ್ಯದಲ್ಲಿ ನಾನು ಮಾಡಿದ ನನ್ನ ಗುರುತುಗಳನ್ನೂ ನೋಡಿ, ನನ್ನನ್ನು ಈಗ ಹತ್ತು
ಸಾರಿ[೮] ಶೋಧಿಸಿದಂಥ, ನನ್ನ ಶಬ್ದವನ್ನು ಕೇಳದಂಥ ಎಲ್ಲಾ ಮನುಷ್ಯರು ೨೩. ನಾ
ನು ಅವರ ತಂದೆಗಳಿಗೆ ಆಣೆ ಇಟ್ಟ ದೇಶವನ್ನು ನಿಶ್ಚಯವಾಗಿ ನೋಡರು. ನನ್ನನ್ನು
ಜರೆದವರೆಲ್ಲರು ಅದನ್ನು ನೋಡರು. ೨೪. ಆದರೆ ನನ್ನ ಸೇವಕನಾದ ಕಾಲೆಬನನ್ನು,
ಬೇರೆ ಆತ್ಮವು ಅವನೊಡನೆ ಇದ್ದದರಿಂದಲೂ, ಅವನು ನನ್ನನ್ನು ತೀರ ಹಿಂಬಾಲಿಸಿದ್ದರಿಂ
ದಲೂ, ಅವನು ಬಂದ ದೇಶದಲ್ಲಿ ಬರಲೀಸುವೆನು, ಮತ್ತು ಅವನ ಬೀಜವು ಅದನ್ನು

ಸ್ವತಂತ್ರಿಸಿ ಕೊಳ್ಳುವದು. ೨೫. (ಅಮಲೇಕನವನೂ ಕನಾನದವನೂ ತಗ್ಗಿನಲ್ಲಿ ವಾಸ ಮಾಡುವವರಲ್ಲ?) ನಾಳೆ ತಿರುಗಿ ಕೊಂಡು, ಕೆಂಪು ಕಡಲಿನ ಹಾದಿಯಿಂದ ಅರಣ್ಯಕ್ಕೆ ಹೊರಡಿರಿ.

೧. ಮೋಶೆಗೆ ಮಾತ್ರವಲ್ಲ ಯೆಹೋವನಿಗೂ ತಿರುಗಿ ಬಿದ್ದು, ನಾಚಿಕೆಯೂ ಅಂಜಿಕೆಯೂ ಇಲ್ಲದ ದ್ರೋಹಿಗಳಾಗಿದ್ದು, ದೇವರು ಆದು ಕೊಂಡ ನಾಯಕನನ್ನೂ ದೇವರು ದೊರಕಿಸಿದ ಅದ್ಭುತಮಯವಾದ ರಕ್ಷಣೆಯ ಮಾರ್ಗವನ್ನೂ ತಳ್ಳಿ ಬಿಡುವ ಭಾವನೆಯನ್ನು ಒಬ್ಬರಿಗೊಬ್ಬರು ತಿಳಿಸಿ ಮದಿಪು ಮಾಡ ತೊಡಗುತ್ತಾರೆ.

೨. ಇವರಿಬ್ಬರು ಯೆಹೋವನಿಗೂ ದ್ರೋಹಿಯಾದ ಜನಾಂಗಕ್ಕೂ ನಡುವೆ ಬಂದು, ತಮ್ಮ ಜನಕ್ಕಾಗಿ ಬಿನ್ನೈಸಿ, ಮೊರೆ ಇಡ ಬೇಕೆಂದು, ನೆಲಕ್ಕೆ ಬಿದ್ದು ಪ್ರಾರ್ಥನೇ ಮಾಡುತ್ತಾರೆ.

೩. ಉರಿಯುವ ಬಿಸಿಲಿನ ಕಾವೆಯನ್ನು ಆರಿಸುವ ನೆರಳು ಎಂಬದು ಆಸರೆ ಎಂಬದಕ್ಕೆ ಸಮಾರ್ಥವುಳ್ಳ ಶಬ್ದವಾಗಿದೆ. ಉತ್ಪ. ೧೫, ೧೬ರಲ್ಲಿ ಬರದಿರುವ ಪ್ರಕಾರ, ಕನಾನ ದೇಶದ ಜನರು ತಮ್ಮ ಪಾಪಗಳ ಅಳತೆಯು ತುಂಬುವ ಮಟ್ಟಿಗೆ, ಅವರನ್ನು ತಾಳ್ಮೆಯಿಂದ ಸಹಿಸುತ್ತಾ ಬಂದನು. ಆದರೆ ಯೆಹೋವನ ಕಾಲೆಬರು ಈಗ ಅವರ ದೇಶವನ್ನು ಹಾದು ಹೋಗುತ್ತಾ, ಅವರ ಮೇಲೆ ಇದ್ದ ದೇವರ ತಾಳ್ಮೆ ಕಳೆದು ಆಜ್ಞೋನ್ನಿರ್ಣಯ ನೆರವೇರುವ ವೇಳೆ ಹತ್ತಿರವಾಯಿತೆಂದು, ತಿಳುಕೊಂಡರು.

೪. ಇಲ್ಲಿ ಬರೆದಿರುವ ಭಯಂಕರವಾದ ಶಿಕ್ಷೆಯನ್ನೂ ಅತಿಶಯವಾದ ಕೃಪೆಯನ್ನೂ ಜೋಡಾಗಿ ಸೂಚಿಸುವ ಮಾತಿಗೆ ಹೊರ. ೩೨, ೧೦ರಲ್ಲಿ ಬರೆದದ್ದು ಒಪ್ಪಿಕೆಯಾಗಿದೆ.

೫. ಮೋಶೆ ಇಲ್ಲಿ ಯೆಹೋವನಿಗೆ ಜ್ಞಾಪಕ ಮಾಡುವ ಮಾತು ಹೊರ. ೩೪, ೬. ೭ರಲ್ಲಿ ಯೆಹೋವನು ತಾನೇ ಉಚ್ಚರಿಸಿದ ವಾಕ್ಯವಾಗಿ ಕೇರಿಯದೆ. ಅಲ್ಲಿಯ ವಿವರವನ್ನು ನೋಡ ಬೇಕು.

೬. ಇದರ ಅಭಿಪ್ರಾಯವೇನಂದರೆ: ಇಸ್ರಯೇಲನವರು ಕೃತಘ್ನರೂ ಅವಿಧೇಯರೂ ಆಗಿದ್ದರೂ ಅವರನ್ನು ವಾಗ್ದತ್ತದೇಶದಲ್ಲಿ ಕೇರಿಸುವದರಿಂದ ತಾನು ಸರ್ವಜ್ಞನೂ ಸರ್ವಶಕ್ತನೂ ಎಂಬದಕ್ಕೆ ದೃಷ್ಟಾಂತವನ್ನು ಕೊಡ ಬೇಕೆಂತ, ಮೋಶೆ ಬೇಡುತ್ತಾನೆ.

೭. ದಾವೀದನ ಚರಿತ್ರದಲ್ಲಿಯೂ ಪಾಪದ ಕ್ಷಮೆಯೂ ಶಿಕ್ಷೆಯೂ ಜೋಡಾಗಿ ಬಂದದ್ದುಂಟು. ಆದರೆ ಇಲ್ಲಿ ದೇವರು ಮಾಡುತ್ತೇನೆಂದು ಹೇಳಿದ ಭಯಂಕರ ಶಿಕ್ಷೆಯನ್ನು ಕರುಣೆಯಿಂದ ಹಗುರ ಮಾಡುತ್ತಾನೆ; ಹ್ಯಾಗಂದರೆ ೧೨ನೆ ವಚನದಲ್ಲಿ ಬರದಿರುವಂಥ, ಜನಾಂಗವೆಲ್ಲಾ ಒಟ್ಟಾಗಿ ವ್ಯಾಧಿಯ ಮೂಲವಾಗಿ ಫಕ್ಕನೆ ನಾಶನವಾಗುವದೆಂಬ ಮಾತನ್ನು ತೀರಿಸದೆ, ಅಪರಾಧ ಮಾಡಿದವರೇ ಸಾಯ ಬೇಕೆಂತ ನಿರ್ಣೈಸಿದ್ದಲ್ಲದೆ, ಸಾಯ ಬೇಕಾದವರೂ ಒಮ್ಮಿಂದೊಮ್ಮೆ ಮಡಿದು ಹೋಗದೆ, ಅರಣ್ಯಸಂಚಾರ ಕಾಲದಲ್ಲೆಲ್ಲಾ ಅವರವರು ವೇಳೆ ವೇಳೆಗೆ ತೀರಿ ಹೋಗುತ್ತಾ ಅಳಿಯುವದು ಎಂತ ನೇಮಕ ಮಾಡಿದನು.

೮. ಇಸ್ರಯೇಲನವರು ತಿರಿಗಿ ತಿರಿಗಿ ಮಾರ್ಮಲೆತು, ತಮ್ಮ ಪಾಪಗಳ ಅಳತೇ ತುಂಬುತ್ತಾ, ಮಾಡಿದ ಹತ್ತು ದೇವದ್ರೋಹ ಕರ್ಮಗಳು ಯಾವವಂದರೆ: ೧. ಕೆಂಪು ಕಡಲಿನ ಬಳಿಯಲ್ಲಿ ಮಾಡಿದ್ದು. ಹೊರ. ೧೪, ೧೧. ೧೨. ೨. ಮಾರದಲ್ಲಿ ಮಾಡಿದ್ದು. ೧೫, ೨೩. ೨೪. ೩. ಸೀನಾಯಿ ಅರಣ್ಯದಲ್ಲಿ ಮಾಡಿದ್ದು. ೧೬, ೨. ೩. ೪. ಮಾನೆಂಬದರ ವಿಷಯವಾದದ್ದು. ವ. ೨೦. ೫. ಮಾನಿನ ವಿಷಯವಾಗಿ ಅವರು ಮಾಡಿದ ಎರಡನೇ ತಪ್ಪು. ವ. ೨೬—೨೮. ೬. ರೆಫಿದೀಮಿನಲ್ಲಿ ಅವರು ಮಾಡಿದ್ದು. ೧೭, ೧. ೨. ೭. ಹೋರೆಬಿನಲ್ಲಿ ಮಾಡಿದ್ದು. ಸ. ೩೨. ೮. ತಬೇರ ಎಂಬಲ್ಲಿ ಅವರು ಮಾಡಿದ್ದು. ಲೇವಿ. ೧೧. ೧. ೯. ಆಶೆಬಡಕರ ಸಮಾಧಿಗಳೆಂಬಲ್ಲಿ ಉಂಟಾದದ್ದು. ೧೨, ೪. ಮುಂ. ೧೦. ಕಾದೆಷಿನಲ್ಲಿ ಅವರು ಮಾಡಿದ್ದು ಈ ಸ್ಥಳದಲ್ಲಿ ಬರೆದದೆ. ಮೋಶೆಯ ಐದು ಗ್ರಂಥಗಳು ಯುಕ್ತವಾದ ಆಂತರ್ಯಸಂಬಂಧವುಳ್ಳ ಏಕ ಕಲ್ಪನವೆಂಬದು ಎಥಾರ್ಥ ಬುದ್ಧಿಗೆ ಸ್ಪಷ್ಟವಾಗಿ ತೋರುತ್ತದೆ.

ಅಂಕೆ. ಸ. ೧೪, ೨೬ – ೩೮.

ವ. ೨೬. ಮತ್ತು ಯೆಹೋವನು ಮೋಶೆ ಆರೋನರಿಗೆ ನುಡಿದದ್ದೇನಂದರೆ[೧]:
೨೭. ಈ ಕೆಟ್ಟ ಸಭೆಗೆ ಎಷ್ಟು ವರೆಗೆ (ತಾಳ್ಮೆಯಾಗಿರಲಿ?) ಅವರು ನನ್ನ ಮೇಲೆ ಗು
ಣುಗುಟ್ಟುವಂಥ, ಇಸ್ರಯೇಲನ ಮಕ್ಕಳು ನನ್ನ ಮೇಲೆ ಗುಣುಗುಟ್ಟುವ ಗುಣುಗು
ಟ್ಟುಗಳನ್ನು ಕೇಳಿದ್ದೇನೆ. ೨೮. ಅವರಿಗೆ ಹೇಳು: ನೀವು ನನ್ನ ಕಿವಿಗಳಲ್ಲಿ ನುಡಿದ ಪ್ರ
ಕಾರವೇ[೨] ನಿಮಗೆ ಮಾಡುವೆನು, ೨೯. ಈ ಅರಣ್ಯದಲ್ಲಿ ನಿಮ್ಮ ಹೆಣಗಳು ಬೀಳು
ವವು. ನನ್ನ ಮೇಲೆ ಗುಣುಗುಟ್ಟಿದವರಾದ, ನಿಮ್ಮ ಲೆಖ್ಖಕ್ಕೆಲ್ಲಾ ಎಣಿಕೆಯಾದಂಥ
ಇಪ್ಪತ್ತು ಮತ್ತು ಹೆಚ್ಚು ವರ್ಷದವರು, ಯೆಫುನ್ನೆಯ ಮಗನಾದ ಕಾಲೆಬನು, ನೂನ
ನ ಮಗನಾದ ಯೆಹೋಷುವನು ಇವರಲ್ಲದೆ[೩] ನಿಮ್ಮನ್ನು ವಾಸ ಮಾಡಲೀಸುವೆನೆಂ
ತ ನಾನು ಕೈ ನೀಡಿದ[೪] ದೇಶದಲ್ಲಿ ಶೇರಲಿಕ್ಕಿಲ್ಲ. ನನ್ನ ಜೀವದಾಣೆ ಎಂತ ಯೆಹೋವ
ನು ಒರೆಯುತ್ತಾನೆ. ೩೧. ಸುಲಿಗೆಯಾಗುವರೆಂದು, ನೀವು ಹೇಳಿದ[೫] ನಿಮ್ಮ ಮಕ್ಕಳನ್ನ
ಲ್ಲಿ ಬರಲೀಸುವೆನು. ನೀವು ಜರೆದ ದೇಶವನ್ನು ಅವರು ತಿಳಿದು ಕೊಳ್ಳುವರು. ೩೨.
ಆದರೆ ನೀವು ಹೆಣಗಳಾಗಿ ಈ ಅರಣ್ಯದಲ್ಲಿ ಬೀಳುವಿರಿ[೬]. ೩೩. ಮತ್ತು ನಿಮ್ಮ ಮಕ್ಕ
ಳು, ದಿವಸವು ವರ್ಷವಾಗಿ ನೀವು ದೇಶವನ್ನು ಹೊಂಚಿ ನೋಡಿದ ನಾಲ್ವತ್ತು ದಿವಸದ
ಲೆಖ್ಖದ ಪ್ರಕಾರ, ನಾಲ್ವತ್ತು ವರ್ಷ ಅರಣ್ಯದಲ್ಲಿ ಮೇಯಿಸುವವರಾಗಿದ್ದು[೭], ನಿಮ್ಮ
ಹೆಣಗಳು ಅರಣ್ಯದಲ್ಲಿ ತೀರಿ ಹೋಗುವನಕಾ ನಿಮ್ಮ ಹಾದರಗಳನ್ನು[೮] ಹೊತ್ತು ಕೊ
ಳ್ಳುವರು. ೩೪. ದಿವಸವು ವರ್ಷವಾಗಿ, ಅವರು ನಿಮ್ಮ ತಪ್ಪುಗಳನ್ನು ಹೊತ್ತು ಕೊಳ್ಳು
ತ್ತಾ ನನ್ನ ಪರಿತ್ಯಜನೆಯನ್ನು ತಿಳಿದು ಕೊಳ್ಳುವರು. ೩೫. ಯೆಹೋವನಾದ ನಾನು
ನುಡಿದದ್ದೇನಂದರೆ: ನನಗೆ ಎದುರ್ಗೂಡಿ ಕೊಂಡಿರುವ ಈ ಕೆಟ್ಟ ಸಭೆಗೆಲ್ಲಾ ಇದನ್ನು
ಮಾಡದಿದ್ದರೆ, (ಇನ್ನೇನು)! ಈ ಅರಣ್ಯದಲ್ಲಿ ಅವರು ತೀರಿ ಹೋಗಿ, ಅದರಲ್ಲೇ ಸಾ
ಯುವರು. ೩೬. ಬಳಿಕ ಮೋಶೆ ದೇಶವನ್ನು ಹೊಂಚಿ ನೋಡ ಕಳುಹಿಸಿದಂಥ, ತಿರುಗಿ
ಕೊಂಡವರಾಗಿ ದೇಶದ ಮೇಲೆ ಚಾಡಿ ಸುದ್ದಿ ಹುಟ್ಟಿಸಿ, ಅವನ ಮೇಲೆ ಸಭೆಯನ್ನೆಲ್ಲಾ
ಗುಣುಗುಟ್ಟಿಸಿದಂಥ, ೩೭. ದೇಶಕ್ಕೆ ಚಾಡಿ ಸುದ್ದಿ ಹುಟ್ಟಿಸಿದಂಥ ಆಳುಗಳು ವ್ಯಾಧಿ
ಯಿಂದ ಯೆಹೋವನ ಮುಂದೆ ಸತ್ತರು[೯]. ೩೮. ಆದರೆ ದೇಶವನ್ನು ಹೊಂಚಿ ನೋಡ
ಹೋದ ಆಳುಗಳೊಳಗಿಂದ ನೂನನ ಮಗನಾದ ಯೆಹೋಷುವನೂ ಯೆಫುನ್ನೆಯ
ಮಗನಾದ ಕಾಲೆಬನೂ ಬದುಕಿದರು.

೧. ಇಲ್ಲಿ ಹೊಸ ಪ್ರಕಟಣೆ ತೊಡಗುವದು. ಏನಂದರೆ: ದೇವರು ಮುಂಚೆ ಗೊತ್ತು ಗುರಿ ಇಲ್ಲದೆ ಹೇಳಿದ ಶಿಕ್ಷೆಯ ನಿರ್ಣಯವನ್ನು ಈಗ ವಿವರಿಸಿ, ಜನಾಂಗವೆಲ್ಲಾ ಒಮ್ಮೆಯೇ ಸಂಹಾರವಾಗುವದೆಂಬ ಮೊದಲಿನ ತೀರ್ಪಿನ ಮಾತನ್ನು ಮೋಶೆಯ ಬಿನ್ನಹದ ನಿಮಿತ್ತ ಮಾರಿಸಿ, ನಾಲ್ವತ್ತು ವರ್ಷದ ಅರಣ್ಯಸಂಚಾರದ ದಂಡವನ್ನು ನಿರ್ಣೈಸುತ್ತಾನೆ.

೨. ಅವರು ಮರುಗಿ ಹೇಳಿದ್ದು ೨ನೆ ವಚನದಲ್ಲಿ ಬರೆದದೆ.

೩. ಯೆಹೋಷುವ ಕಾಲೆಬರಲ್ಲದೆ ಲೇವಿಯ ಕುಲದವರೂ ಅರಣ್ಯದಲ್ಲಿ ಸಾಯ ಬೇಕೆಂಬ ಕಟ್ಟಳೆಗೆ ಒಳಗಾಗಲಿಲ್ಲವೆಂತ ನೆನಸ ತಕ್ಕದ್ದು. ಯಾಕಂದರೆ ಅವರು ಮಾರ್ಮಲೆತವರನ್ನು ಕೂಡಿ ಕೊಳ್ಳಲಿಲ್ಲ. ಲೇವಿಯವರು ತಪ್ಪಿಸಿ ಕೊಂಡರೆಂಬದಕ್ಕೆ ದೃಷ್ಟಾಂತವು ಮೋಶೆಯ ಎರಡನೆ ಗ್ರಂಥದಲ್ಲಿಯೂ ಯೆಹೋಷುವನ ಪುಸ್ತಕದಲ್ಲಿಯೂ ದೊರಕುವದು. ಏನಂದರೆ ಆರೋನನ ಮಗನಾದ ಎಲೆಯಾಜರನು, ಮೊಮ್ಮಗನಾದ ಫಿನೆಹಾಸನು, ಇವರ ಹೆಸರುಗಳು ಹೊರಡೋಣದ ಅತ್ತಲಿನ ಕಾಲದಲ್ಲಿ ಲಿಖಿತವಾಗಿವೆ. ಹೊರ. ೬, ೨೩. ೨೫. ಬಳಿಕ ಫಿನೆಹಾಸನ ತಂದೆಯಾದ ಎಲೆಯಾಜರನು ದೇಶವನ್ನು ಹಂಚಿ ಕೊಡುವ ಕೆಲಸದಲ್ಲಿ ಯೆಹೋಷುವನಿಗೆ ಸಹಾಯ ಮಾಡಿದನೆಂದು, ಯೆಹೋಷು. ೧೪, ೧ರಲ್ಲಿ, ಅವನು ನೆರೆ ಮುದುಕನಾಗಿದ್ದು ಸತ್ತನೆಂದು, ಯೆಹೋಷು. ೨೪, ೩೩ರಲ್ಲಿ ಬರೆದದೆ. ಇದಕ್ಕೆ ಯೆಹೋಷು. ೨೪, ೨೯ರಲ್ಲಿ ಸಹಾ ನೋಡ ಬೇಕು.

೪. ಅಂದರೆ, ನಿಮಗೆ ಕೊಡುತ್ತೇನೆಂತ, ಆಣೆ ಇಟ್ಟ . .

೫. ಈ ಮಾತು ಮೂರನೆ ವಚನದಲ್ಲಿ ಬರೆದದೆ.

೬. ನೀವು ಸತ್ತು ಹೂಣಿಸಿ ಕೊಳ್ಳುವಿರಿ.

೭. ಅಂದರೆ, ಕಾಡ ಗೊಲ್ಲರ ತೆರದಿಂದ ಬದುಕುವವರಾಗಿದ್ದು . . .

೮. ಹಾದರವೆಂಬದಕ್ಕೆ ಹಳೆ ಒಡಂಬಡಿಕೆಯ ಗ್ರಂಥಗಳಲ್ಲಿ ವಿಗ್ರಹಾರಾಧನೆಯೆಂಬರ್ಥವು ವಾಡಿಕೆಯಾಗಿದೆ. ಆದರೆ ಇಲ್ಲಿ ಬಹುಶಾ ವಿಗ್ರಹಾರಾಧನೆಗೆ ಮೂಲಕಾರಣವಾದ ದೇವರಿಗೆ ಮಾರ್ಮಲೆಯುವ ಅವಿಧೇಯತ್ವವನ್ನು ಸೂಚಿಸುತ್ತದೆ.

೯. ದೇವರ ನುಡಿ ಮುಗಿದ ಕೂಡಲೇ ಹನ್ನೆರಡು ಮಂದಿಯಾದ ಚಾರರಲ್ಲಿ ಹತ್ತು ಜನ ದೇವರ ಅಪ್ಪಣೆಯಿಂದ ಫಕ್ಕನೆ ಸತ್ತು ಹೋದರು. ಆಯಿಕೆಯಾದ ನಾಯಕರು ದೇವದ್ರೋಹ ಮಾಡುವರಾದರೆ, ಅವರ ದುರ್ಬೋಧನೆಯಿಂದ ಮೋಸ ಹೋದವರಿಗಿಂತ ಇವರಿಗೆ ಹೆಚ್ಚು ಬೇಗವಾಗಿ ಶಿಕ್ಷೆ ಬರುವದು ನ್ಯಾಯವಾಗಿದೆ.

ಇಸ್ರಯೇಲನವರು ಶಿಕ್ಷೆಯನ್ನು ನಿವಾರಿಸಿ ಕೊಳ್ಳ ಬೇಕೆಂಬ ಗುರಣದಿಂದ ಹೊಸ ತಪ್ಪು ಮಾಡಿದ್ದು. ವ. ೩೯—೪೫.

ವ. ೩೯. ಮತ್ತು ಮೋಶೆ ಈ ನುಡಿಗಳನ್ನು ಇಸ್ರಯೇಲನ ಮಕ್ಕಳಿಗೆಲ್ಲಾ ನುಡಿ
ದನು; ಆದದರಿಂದ ಜನಾಂಗವು ಶಾನೆ ಗೋಳಾಡಿದರು[೧]. ೪೦. ಬಳಿಕ ಹೊತ್ತಾರೆ ಅ
ವರು ಎದ್ದು, ಬೆಟ್ಟದ ತುದಿಗೆ ಏರಿ, "ಇಗೋ ನಾವು ಯೆಹೋವನು ಹೇಳಿದ ಸ್ಥಳಕ್ಕೆ
ಏರಿ ಹೋಗಲಿಕ್ಕಿದ್ಧೇವೆ; ಯಾಕೆಂದರೆ ಪಾಪ ಮಾಡಿದ್ಧೇವೆ[೨]" ಅಂದರು. ೪೧. ಆಗ
ಮೋಶೆ ಹೇಳಿದ್ದು: "ಯಾಕೆ ನೀವು ಹೀಗೆ ಯೆಹೋವನ ಬಾಯ ಮಾತು ಮಿರಾರುತ್ತೀ
ರಿ[೩]? ಅದು ಒದಗದು. ೪೨. ಏರಿ ಹೋಗ ಬೇಡಿರಿ; ಯಾಕಂದರೆ ಯೆಹೋವನು ನಿ
ಮ್ಮ ನಡುವೆಯಲ್ಲಿಲ್ಲ, ನಿಮ್ಮ ಎದುರಾಳಿಗಳ ಮುಂದೆ ಹೊಡಿಸಿ ಕೊಳ್ಳ ಬೇಡಿರಿ. ೪೩.
ಯಾಕಂದರೆ ಅಮಲೇಕನವನೂ ಕನಾನದವನೂ ನಿಮ್ಮ ಎದುರಿನಲ್ಲಿದ್ಧಾರೆ. ಕತ್ತಿಯಿಂ
ದ ಬೀಳುವಿರಿ, ಯಾಕೆಂದರೆ ನೀವು ಯೆಹೋವನ ಹಿಂಬಳಿಯಿಂದ[೪] ತಿರುಗಿದ ಕಾರಣ,
ಯೆಹೋವನು ನಿಮ್ಮೊಡನೆ ಇರುವದಿಲ್ಲ." ೪೪. ಆದರೆ ಅವರು ಬೆಟ್ಟದ ತುದಿಗೆ ಏರ
ಲುಬ್ಬಿ ಕೊಂಡರು[೫]. ಹ್ಯಾಗೂ ಯೆಹೋವನ ಒಡಂಬಡಿಕೆಯ ಪೆಟ್ಟಿಗೆಯೂ, ಮೋಶೆ

ಯೂ ದಂಡಿನೊಳಗಿಂದ ತೊಲಗಲಿಲ್ಲ೬). ೪೫. ಬಳಿಕ ಆ ಬೆಟ್ಟದಲ್ಲಿ ವಾಸವಾಗಿದ್ದ ಅಮಲೇಕನವನೂ ಕನಾನದವನೂ ಇಳಿದು, ಅವರನ್ನು ಹೊರ್ಮಾದ ವರೆಗೆ೭) ಹೊಡದು ನಲುಗಿಸಿದರು.

೧. ೩೪, ೩೫ನೆ ವಚನಗಳಲ್ಲಿ ಬರದ ಶಿಕ್ಷೆಯ ನಿರ್ಣಯಕ್ಕೆ ಚಿಂತಾಕ್ರಾಂತರಾದರು.

೨. ತಮ್ಮ ಪಾಪವನ್ನರಿಕೆ ಮಾಡುವವರಾಗಿದ್ದರೂ, ಸ್ವೇಚ್ಛೆಯನ್ನು ಹಿಡಿದು ಕೊಳ್ಳುವ ಅಹಂಕಾರವನ್ನು ಬಿಡದೆ ಇದ್ದಾರೆ. ಸರಿಯಾದ ಹಾದಿ ಕಂಡು ಕೈಕೊಳ್ಳುವದು ಸ್ವಾಭಾವಿಕ ಗುಣದವರಿಗೆ ಎಷ್ಟೋ ದುರ್ಲಭವಾಗಿದೆ! ಇಂದು ಮನಗುಂದಿ, ನಾಳೆ ತಲೆಕೊಬ್ಬಿದವರಾಗಿ, ಒಂದು ಸಲ ಹೆಚ್ಚಾಗಿ ಏರಿ, ಮತ್ತೊಂದು ಸಲ ಹೆಚ್ಚಾಗಿ ಇಳಿದು, ಜೀವಕ್ಕೆ ಹೋಗುವ ಮಾರ್ಗಕ್ಕೆ ತಪ್ಪುವರು. ಇಸ್ರಯೇಲನವರು ತಾವು ಮಾಡಿದ ತಪ್ಪು ತಿಳು ಕೊಂಡದ್ದಲ್ಲದೆ, ಅದನ್ನು ಅರಿಕೆ ಮಾಡಿದರು. ಆದರೆ ವಿಧೇಯರಾಗ ಬೇಕೆಂದಿದ್ದು, ದೇವರ ಚಿತ್ತವನ್ನಲ್ಲ ತಮ್ಮ ಸ್ವಾಭಾವಿಕ ಚಿತ್ತವನ್ನು ಅನುಸರಿಸುವವರಾಗಿ ದೇವರ ಅಪ್ಪಣೆಯನ್ನು ಕೈಕೊಳ್ಳುತ್ತೇವೆ ಅಂದು ಕೊಂಡು ಮೀರುತ್ತಾರೆ.

೩. ದೇವರು ೩೫ನೆ ವಚನದಲ್ಲಿ ಹೇಳಿದ ಮಾತು ಸಲ್ಲ ಬೇಕಾಯಿತು. ಅದಕ್ಕೆ ಸರಿಯಾಗಿ ನಡ ಕೊಳ್ಳದವರು ದೇವರ ಅಪ್ಪಣೇ ಮೀರಿದವರಾದರು.

೪. ಅಮಲೇಕನವರೂ ಕನಾನದವರೂ ನಿಮ್ಮೆದುರು ನಿಂತು, ದೇವರ ಸಹಾಯವಿಲ್ಲದವರಾದ ನಿಮ್ಮನ್ನು ಸೋಲಿಸುವರು ಎಂಬದು ಈ ಮಾತಿನ ಅಭಿಪ್ರಾಯವಾಗಿದೆ. ಇಸ್ರಯೇಲನವರು ಮೊದಲು ದೇವರಲ್ಲಿ ನಂಬಿಕೆ ಇಟ್ಟು, ವಾಗ್ದತ್ತವಾದ ದೇಶದಲ್ಲಿ ಕೇರ ಎತ್ತುಗಡೆ ಮಾಡಿದ್ದರೆ, ದೇವರ ಸಹಾಯ ಪಡಕೊಂಡು, ಗಂಡರಾಗಿ, ವೈರಿಗಳಿಂದ ಸೋತು ಹೋಗುತ್ತಿದ್ದಿಲ್ಲ. ಆದರೆ ಈಗಲವರು ದೇವರ ಅಪ್ಪಣೆಯೂ ಸಹಾಯವೂ ಇಲ್ಲದೆ ಕಾದಿದರಿಂದ ಗೆಲ್ಲಲಾರದಿದ್ದರು.

೫. ಅವರು ಕಟ್ಟುಮಸ್ತಿಯವರಾಗಿದ್ದು, ಹಿಡಿದದ್ದನ್ನು ಬಿಡಲೊಲ್ಲದೆ, ದೇವರ ಅಪ್ಪಣೇ ಅಸಡ್ಡೆ ಮಾಡಿ, ಮುಂದೆ ಬೀಳುತ್ತಾರೆ.

೬. ಸಾಕ್ಷೀಪೆಟ್ಟಿಗೆಯೂ ಮೋಶೆಯೂ ಹಿಂದುಳಿಯುವದನ್ನು ಪರಾಮರಿಸಿ ಅಂಜ ಬೇಕಾಗಿತ್ತು. ಆದರೆ ಹಮ್ಮಿನಿಂದ ಮರುಳರಾಗಿ, ಏನೂ ಚಿಂತಿಸದೆ ಮುಂದೆ ಹೋಗುತ್ತಾರೆ.

೭. ಹೊರ್ಮಾ ಅಂದರೆ ಶಾಪಪಟ್ಟಣ. ಈ ಹೆಸರು ಇತ್ತಲಾಗಿ ಹುಟ್ಟಿತೆಂದು, ಸ. ೨೧, ೩ರಲ್ಲಿ ಕಾಣುತ್ತದೆ. ಪರಿಶುದ್ಧ ಬರಹವು ಕೊಂಚ ಮಾತುಗಳನ್ನಲ್ಲದೆ ವಿವರವಾದ ಚರಿತ್ರವನ್ನು ಹೇಳದೆ ಬಿಟ್ಟಿರುವ ೩೮ ವರ್ಷದ ನಡುವೇಳೆಯು ಇಲ್ಲಿ ತೊಡಗಿ, ಇಪ್ಪತ್ತನೆ ಸಂಧಿಯ ಆರಂಭದಲ್ಲಿ ಮುಗಿಯುವದು. ದ್ವಿತೀ. ೨, ೧೪ ಸರಿ ನೋಡ ಬೇಕು.

ಸಂಧಿ ೧೫.

ಸಂಧಿಯ ಸೂಚನೆ: ಬೇರೆ ಬೇರೆ ಬಲಿನೇಮಕಗಳು. ಇವುಗಳಲ್ಲಿ ಕೆಲವು ಮುಂಚಿನವುಗಳಿಗೆ ಕೂಡಿದ ಉಪನೇಮಕಗಳು, ಕೆಲವು ಪೂರ್ವನೇಮಗಳನ್ನು ಅಧಿಕವಾಗಿ ಕಾಠಿಣ್ಯ ಪಡಿಸುವ ಕಟ್ಟಳೆಗಳು. ದವಸವಲ್ಲದೆ ಹಿಟ್ಟು ಸಹ ಮುಂಫಲಗಳ ನೈವೇದ್ಯಕ್ಕೆ ಕೂಡ ತಕ್ಕದ್ದು. ಬೇರೆ ಬಲಿಗಳಿಗೆಲ್ಲಾ ಆಹಾರ ಬಲಿಗಳನ್ನೂ ಕಲಿಸ ಬೇಕು. ಸಮಸ್ತ ಸಭೆಯು ಅಪರಾಧ ಮಾಡಿದ ಪಕ್ಷದಲ್ಲಿ ಮಾತ್ರವಲ್ಲ, ಯಾರಾದರೊಬ್ಬನೇ ಪಾಪ ಮಾಡಿ ಸಮಸ್ತ ಸಭೆಯ ಮೇಲೆ ಅಪರಾಧ ಬರಲೀಸಿದ ಪಕ್ಷದಲ್ಲಿಯೂ ಪಾಪಬಲಿಯರ್ಪಣೆಯಾಗುವದು. ವ. ೧ — ೩೧. ಸಬ್ಬತ್ತಿನ ವಿಷಯವಾದ ಕಟ್ಟಳೆಯ ಕಾಠಿಣ್ಯವನ್ನು ಹೆಚ್ಚಿಸುವ ಬಗ್ಯೆ, ಅದನ್ನು ಮೀರಿದ ಒಬ್ಬನಿಗೆ ಪ್ರಾಣಶಿಕ್ಷೆಯಾದದ್ದು. ವ. ೩೨ — ೩೬. ದೇವಾಜ್ಞಾಸ್ಮರಣಕರಣವಾದ ಗೊಂಡೆಗಳು. ವ. ೩೭ — ೪೧.

೩೧೬. ಕೋರಹ ದಾಥಾನ ಅಬೀರಾಮರು ಮಾರ್ಮಲೆತು ಶಿಕ್ಷೆ ಹೊಂದಿದ್ದು.

ಅಂಕೆ. ೧೬, ೧—೧೦.

ಕೋರಹ ದಾಥಾನ ಅಬೀರಾಮರು ಗುಂಪು ಕೂಡಿಸಿ
ಕೊಂಡು, ಯಾಜಕತ್ವಕ್ಕೆ ವಿರೋಧವಾಗಿ ಮಾರ್ಮಲೆತು, ಭಯಂಕರವಾದ
ಶಿಕ್ಷೆಯನ್ನು ಹೊಂದಿದ್ದು. ಸ. ೧೬, ೧—೪೦.

ದ್ರೋಹಿಗಳಾದ ಇಸ್ರಯೇಲನವರು ಅರಣ್ಯಸಂಚಾರ ಮಾಡಿದ ಮೂವತ್ತೆಂಟು ವರ್ಷಗಳ ಚರಿತ್ರದೊಳಗಿಂದ ಇದೊಂದೆ ಭಯಂಕರವಾದ ಕಥೆಯು ದೇವವಾಕ್ಯದಲ್ಲಿ ಹೇಳಿಯದೆ. ಈ ಕಥೆಯಿಂದ ಆ ಸಂತತಿಯು ಕೇವಲ ದುಷ್ಟರೂ ಭ್ರಷ್ಟರೂ ಆಗಿದ್ದರೆಂಬದು ಚನ್ನಾಗಿ ಕಾಣ ಬರುತ್ತದೆ. ಅಂದಿನಿಂದ ಆಶಾಭ್ರಷ್ಟರಾಗಿ ಆ ಸಂತತಿಯೆಲ್ಲಾ ಕಾಲಾನುಗತವಾಗಿ ಸಾಯುವದೆ ಹೊರ್ತು, ಬೇರೇನೂ ಸಮಾಧಾನಕರವಾದ್ದು ಅವರ ವಿಷಯದಲ್ಲಿ ಬರುವದಿಲ್ಲ.

ವ. ೧. ಬಳಿಕ ಲೇವಿಯ ಮಗನಾದ ಕೊಹಾಥನ ಮಗನಾದ ಇಚೆಹಾರನ ಮ
ಗನಾದ ಕೋರಹನು೧), ರೂಬೆನನ೨) ಮಗನಾದ ಎಲಿಯಾಬನ ಮಕ್ಕಳಾದ ದಾಥಾ
ನ ಅಬೀರಾಮರು, ರೂಬೆನನ ಮಗನಾದ ಪೆಲೆಥನ ಮಗನಾದ ಓನನು, ಇವರು ಜ
ನರನ್ನು ತಕ್ಕೊಂಡು, ೨. ಸಭೆಯ ನಾಯಕರೂ ಕೂಟಕ್ಕೆ ಕರೆಸಿ ಕೊಳ್ಳ ತಕ್ಕವರೂ ಹೆ
ಸರ್ವಾಸಿಯಾದ ಜನರೂ ಆದ ಇಸ್ರಯೇಲನ ಮಕ್ಕಳವರಾದ ಆಳುಗಳು ಸಹ ಎದ್ದು,
೩. ಮೋಶೆ ಆರೋನರಿಗೆ ಎದುರ್ಗೂಡಿ ಕೊಂಡು, "ನಿಮಗೆ ಹೆಚ್ಚಿಗೆ೩); ಯಾಕಂದರೆ ಸ
ರ್ವ ಸಭೆಯಾದವರೆಲ್ಲರು ಪರಿಶುದ್ಧರು. ಯೆಹೋವನು ಅವರ ನಡುವೆಯಲ್ಲಿದ್ದಾನೆ೪).
ಮತ್ತ್ಯಾತಕ್ಕೆ ಯೆಹೋವನ ಕೂಟದ ಮೇಲೆ ನಿಮ್ಮನ್ನು ಹೆಚ್ಚಿಸಿ ಕೊಳ್ಳುತ್ತೀರಿ?" ೪.
ಮೋಶೆ ಇದನ್ನು ಕೇಳಲು, ತನ್ನ ಮೋರೆ ಕೆಳಗಾಗಿ ಬಿದ್ದನು. ೫. ಬಳಿಕ ಕೋರಹನಿ
ಗೂ ಅವನ ಸಮಸ್ತ ಸಭೆಗೂ ಅವನು ನುಡಿದದ್ದೇನಂದರೆ: ಯೆಹೋವನು ತನ್ನವರಾ
ಗಿಯೂ ಪರಿಶುದ್ಧರಾಗಿಯೂ ಇದ್ದು, ತನ್ನ ಹತ್ತರ ಬರಲೀಸ ತಕ್ಕವರೂ ಯಾರೆಂದು,
ಹೊತ್ತಾರೆ ತಿಳಿಸುವನು. ಮತ್ತು ಯಾವನನ್ನು ಆದು ಕೊಳ್ಳುವನೋ ಅವನನ್ನೇ ಹ
ತ್ತರ ಬರಲೀಸುವನು. ೬. ಇದನ್ನು ಮಾಡಿರಿ! ಕೋರಹನೂ ಅವನ ಸಭೆಯೆಲ್ಲವೂ
ಧೂಪಾರ್ತಿಗಳನ್ನು ತಕ್ಕೊಂಡು, ೭. ನಾಳೆ ಅವುಗಳಲ್ಲಿ ಬೆಂಕಿ ಇಟ್ಟು, ಅವುಗಳ ಮೇ
ಲೆ ಯೆಹೋವನ ಮುಂದೆ ಧೂಪ ಹಾಕಿರಿ! ಆಗ ಯೆಹೋವನು ಆದು ಕೊಳ್ಳುವವನೇ
ಪರಿಶುದ್ಧನು೫). ನಿಮಗೆ ಹೆಚ್ಚಿಗೆ, ಲೇವಿಯ ಮಕ್ಕಳೇ! ೮. ಬಳಿಕ ಮೋಶೆ ಕೋರಹನಿ
ಗೆ ಹೇಳಿದ್ದು: ಕೇಳಿರೆಲಾ, ಲೇವಿಯ ಮಕ್ಕಳೇ! ೯. ಯೆಹೋವನ ಗುಡಾರದ ಊಳಿಗ
ಮಾಡುವದಕ್ಕೂ, ಸಭೆಯ ಮುಂದೆ, ಅವರನ್ನು ಸೇವಿಸುವ ಬಗ್ಯೆಯೂ, ಅವನ ಆಚ
ರಣೆಯಲ್ಲಿ ನಿಲ್ಲುವದಕ್ಕೂ, ಇಸ್ರಯೇಲನ ದೇವರು, ನಿಮ್ಮನ್ನು ತನ್ನ ಹತ್ತರ ಬರಲೀ
ಸುವ೬) ಬಗ್ಯೆ, ಇಸ್ರಯೇಲನವರ ಸಭೆಯೊಳಗಿಂದ ನಿಮ್ಮನ್ನು ವಿಂಗಡಿಸಿದ್ದು ನಿಮಗೆ
ತುಸವೋ? ೧೦. ಅವನು ನಿನ್ನನ್ನೂ, ನಿನ್ನ ಸಂಗಡ ಲೇವಿಯ ಮಕ್ಕಳಾದ ನಿನ್ನ ಸಹೋ

ದರರನ್ನೂ, ಹತ್ತರ ಬರಲೀಸಿದ್ದಾನೆ. ನೀವು ಯಾಜಕತ್ವವನ್ನೂ ಅರಸುತ್ತೀರೋ? ೧೧.
ಈ ಕಾರಣದಿಂದ ನೀನೂ ನಿನ್ನ ಸಮಸ್ತ ಸಭೆಯೂ ಯೆಹೋವನಿಗೆ ಮಾರ್ಮಲೆತಿದ್ದೀ
ರಿ. ಆರೋನನೂ, ನೀನು ಅವನನ್ನು ಜರೆಯುವ ಹಾಗೆ, ಅವನೆಷ್ಟರವನು[೭]? ೧೨.
ಬಳಿಕ ಮೋಶೆ ಎಲಿಯಾಬನ ಮಕ್ಕಳಾದ ದಾಥಾನ ಅಬೀರಾಮರನ್ನು ಕರೆಯ ಕಳು
ಹಿಸಿದನು. ಆದರೆ ಅವರು, “ಏರಲೊಲ್ಲೆವು[೮]. ೧೩. ಅರಣ್ಯದಲ್ಲಿ ನಮ್ಮನ್ನು ಸಾಯ
ಲೀಸುವದಕ್ಕೆ ಹಾಲೂ ಜೇನೂ ಹರಿಯುವ ದೇಶದೊಳಗಿಂದ ನಮ್ಮನ್ನು ವೈದದ್ದು
ತುಸವೋ? ನಮ್ಮ ಮೇಲೆ ಆಳ್ಕೆಯನ್ನು ಮಾಡುತ್ತೀಯಾ? ಆಳ್ಕೆ ಮಾಡುತ್ತೀಯೇ ಸರಿ.
೧೪. ಮತ್ತು ಹಾಲೂ ಜೇನೂ ಹರಿಯುವ ದೇಶಕ್ಕೆ ನಮ್ಮನ್ನು ಬರಲೀಸಿದಿಯಲ್ಲಾ!
ಹೊಲಗಳನ್ನೂ ದ್ರಾಕ್ಷೇ ತೋಟಗಳನ್ನೂ ನಮಗೆ ಸ್ವಾಸ್ಥ್ಯವಾಗಿ ಕೊಟ್ಟಿಯಲ್ಲಾ! ಈ
ಆಳುಗಳ ಕಣ್ಣುಗಳನ್ನು ಕಿತ್ತು ಬಿಡುವಿಯೋ[೯]? ಏರಲೊಲ್ಲೆವು,” ಅಂದರು. ೧೫. ಆ
ಗ ಮೋಶೆ ಶಾನೆ ಉರಿದು[೧೦], ಯೆಹೋವನಿಗೆ ಹೇಳಿದ್ದು: ಅವರ ಬಲಿಯ ಕಡೆಗೆ ಕ
ಣ್ಣಿಡ ಬೇಡ[೧೧]! ಅವರಲ್ಲಿಂದ ನಾನು ಒಂದು ಕತ್ತೆಯನ್ನಾದರೂ ತಕ್ಕೊಳ್ಳಲಿಲ್ಲ, ಅವ
ರಲ್ಲಿ ಒಬ್ಬನಿಗಾದರೂ ಅನ್ಯಾಯ ಮಾಡಲಿಲ್ಲ[೧೨]. ೧೬. ಮತ್ತು ಕೋರಹನಿಗೆ ಮೋ
ಶೆ ಹೇಳಿದ್ದು: ನೀನೂ ನಿನ್ನ ಸಭೆಯೆಲ್ಲವೂ, ನೀನೂ ಅವರೂ ಆರೋನನೂ ನಾಳೆ ಯೆ
ಹೋವನ ಮುಂದೆ ಇರ್ರಿ. ೧೭. ಒಬ್ಬೊಬ್ಬನು ತನ್ನ ಧೂಪಾರ್ತಿ ತಕ್ಕೊಂಡು, ಅವುಗ
ಳ ಮೇಲೆ ಧೂಪವಿಟ್ಟು, ಒಬ್ಬನಿಗೆ ಒಂದು ಎಂದು ಇನ್ನೂರ ಐವತ್ತು ಧೂಪಾರ್ತಿಗ
ಳಾದ ನಿಮ್ಮ ಧೂಪಾರ್ತಿಗಳನ್ನು ಯೆಹೋವನ ಮುಂದೆ ತನ್ನಿರಿ; ನೀನೂ ಆರೋನ
ನೂ ಸಹ ನಿಮ್ಮ ನಿಮ್ಮ ಧೂಪಾರ್ತಿಗಳನ್ನು ತನ್ನಿರಿ. ೧೮. ಬಳಿಕ ಒಬ್ಬೊಬ್ಬನು ತನ್ನ
ಧೂಪಾರ್ತಿ ತಕ್ಕೊಂಡು, ಅದರ ಮೇಲೆ ಬೆಂಕಿ ಇಟ್ಟು, ಅದರ ಮೇಲೆ ಧೂಪ ಹಾಕಿ,
ಸಭೆಯ ಗುಡಾರದ ಬಾಗಲಿನ ಮುಂದೆ ಮೋಶೆ ಆರೋನರು ಸಹಿತವಾಗಿ ನಿಂತರು.
೧೯. ಮತ್ತು ಕೋರಹನು ಅವರೆದುರಿಗೆ ಸಭೆಯನ್ನೆಲ್ಲಾ[೧೩] ಗುಡಾರದ ಬಾಗಲಿನ
ಕಡೆಗೆ ಕೂಡಿಸಿದನು; ಆಗ ಯೆಹೋವನ ಮಹಿಮೆಯು ಸಭೆಗೆಲ್ಲಾ ಕಾಣಿಸಿತು.
೨೦. ಮತ್ತು ಯೆಹೋವನು ಮೋಶೆ ಆರೋನರಿಗೆ ನುಡಿದದ್ದೇನಂದರೆ: ೨೧. ನೀವು
ಈ ಸಭೆಯ ನಡುವೆಯಲ್ಲಿಂದ ವಿಂಗಡವಾಗಿರಿ; ನಾನು ಅವರನ್ನು ಬಿರ್ರೆಂದು ನುಂಗಿ ಬಿ
ಡುತ್ತೇನೆ[೧೪]. ೨೨. ಆಗಲವರು ಮೋರೆ ಕೆಳಗಾಗಿ ಬಿದ್ದು, “ಎಲ್ಲಾ ಮಾಂಸದ ಆತ್ಮಗ
ಳ ದೇವರಾದ ದೇವಾ, ಒಬ್ಬ ಆಳು ಪಾಪ ಮಾಡಲು, ಎಲ್ಲಾ ಸಭೆಯ ಮೇಲೆ ಮು
ನಿಯುತ್ತೀಯಾ?” ಅಂದಾಗ, ೨೩. ಯೆಹೋವನು ಮೋಶೆಗೆ ನುಡಿದದ್ದೇನಂದರೆ: ೨೪.
ಸಭೆಗೆ ನುಡಿ, ಏನಂದರೆ, ಕೋರಹ ದಾಥಾನ ಅಬೀರಾಮರ ಬೀಡಿನ ಸುತ್ತಲಿಂದ ಏಳಿ
ರಿ! ೨೫. ಬಳಿಕ ಮೋಶೆ ಎದ್ದು, ದಾಥಾನ ಅಬೀರಾಮರ ಬಳಿಗೆ ಹೋದನು; ಇಸ್ರ

ಯೇಲನವರ ಹಿರಿಯರು ಅವನ್ನ ಹಿಂಬಳಿಸಿದರು. ೨೬. ಆಗಲವನು ಸಭೆಗೆ ನುಡಿದ
ದ್ದೇನಂದರೆ: ಎಲಾ, ಆ ದುಷ್ಟ ಆಳುಗಳ ಗುಡಾರಗಳ ಮೇಲಿನಿಂದ ತೊಲಗಿರಿ. ಮ
ತ್ತು ನೀವು ಅವರ ಪಾಪಗಳಲ್ಲೆಲ್ಲಾ ಮಡಿದು ಹೋಗದ ಹಾಗೆ, ಅವರಿಗಿದ್ದದ್ದೇನಾದ
ರೂ ಮುಟ್ಟದೆ ಇರ್ರಿ. ೨೭. ಆಗಲವರು ಕೋರಹ ದಾಥಾನ ಅಬೀರಾಮರ ಬೀಡಿನ
ಬಳಿಯಿಂದ ಸುತ್ತಲಾಗಿ ಎದ್ದರು. ಆದರೆ ದಾಥಾನ ಅಬೀರಾಮರೂ ಅವರ ಹೆಂಡ
ರೂ ಮಕ್ಕಳೂ ಒಕ್ಕಲುದಕ್ಕಲೂ ಹೊರಟು, ತಮ್ಮ ಗುಡಾರಗಳ ಬಾಗಲಲ್ಲಿ ನಿಂತು
ಕೊಂಡರು. ೨೮. ಬಳಿಕ ಮೋಶೆ ಹೇಳಿದ್ದು[೧೫]: ಈ ಕೆಲಸಗಳನ್ನೆಲ್ಲಾ ಮಾಡಲಿಕ್ಕೆ
ಯೆಹೋವನು ನನ್ನನ್ನು ಕಳುಹಿಸಿದ್ಧಾನೆಂತಲೂ, ಅವು ನನ್ನ ಹೃದಯದಿಂದಾದವುಗ
ಳಲ್ಲವೆಂತಲೂ, ಇದರಿಂದ ತಿಳು ಕೊಳ್ಳುವಿರಿ. ೨೯. ಎಲ್ಲಾ ಮನುಷ್ಯರ ಸಾವಿನಂತೆ
ಇವರು ಸತ್ತರೆ, ಎಲ್ಲಾ ಮನುಷ್ಯರ ಶಿಕ್ಷೆಯು ಇವರ ಮೇಲೆ ಶಿಕ್ಷೆಯಾಗಿ ಬಂದರೆ, ಯೆ
ಹೋವನು ನನ್ನನ್ನು ಕಳುಹಿಸಿದ್ದಿಲ್ಲಾ. ೩೦. ಆದರೆ ಯೆಹೋವನು ಉಂಟಾಗಿರದ್ದನ್ನು
ಉಂಟು ಮಾಡುವದರಿಂದ ನೆಲವು ತನ್ನ ಬಾಯಿ ತೆರೆದು, ಅವರನ್ನೂ ಅವರಿಗಿದ್ದದ್ದೆಲ್ಲ
ವನ್ನೂ ನುಂಗಲು, ಅವರು ಬದುಕುವವರಾಗಿ ಪಾತಾಳಕ್ಕೆ[೧೬] ಇಳಿದರೆ, ಈ ಆಳುಗ
ಳು ಯೆಹೋವನನ್ನು ಜರೆದರೆಂದು, ತಿಳು ಕೊಳ್ಳುವಿರಿ. ೩೧. ಅವನು ಈ ನುಡಿಗಳನ್ನೆ
ಲ್ಲಾ ನುಡಿಯುವದನ್ನು ಮುಗಿಸುತ್ತಲೇ ಆದದ್ದೇನಂದರೆ: ೩೨. ಅವರ ಕೆಳಗಣ ನೆಲ
ವು ಶೀಳಿ, ಭೂಮಿಯು ತನ್ನ ಬಾಯಿ ತೆರದು, ಅವರನ್ನೂ ಅವರ ಮನೆಗಳನ್ನೂ ಕೋ
ರಹನಿಗಿದ್ದ ಎಲ್ಲಾ ಆಳುಗಳನ್ನೂ ಎಲ್ಲಾ ಒಡವೆಯನ್ನೂ ನುಂಗಿತು. ೩೩. ಅವರೂ
ಅವರಿಗಿದ್ದ ಎಲ್ಲವೂ ಬದುಕುವವರಾಗಿ ಪಾತಾಳಕ್ಕೆ ಇಳಿದರು. ಭೂಮಿ ಅವರ ಮೇ
ಲೆ ಮುಚ್ಚಿ ಕೊಂಡಿತು; ಕೂಟದ ನಡುವೆಯಲ್ಲಿಂದ ಅವರು ಅಳಿದು ಹೋದರು. ೩೪.
ಆಗಲವರ ಸುತ್ತಲಿದ್ದ ಇಸ್ರಯೇಲನವರೆಲ್ಲರು ಅವರ ಶಬ್ದಕ್ಕೆ ಓಡಿ ಹೋದರು; ಯಾ
ಕೆಂದರೆ ಭೂಮಿ ನಮ್ಮನ್ನು ನುಂಗೀತೆಂದು, ಹೇಳಿದರು. ೩೫. ಮತ್ತು ಬೆಂಕಿ ಯೆಹೋ
ವನ ಬಳಿಯಿಂದ ಹೊರಟು, ಧೂಪವನ್ನರ್ಪಿಸಿದ ಆ ಇನ್ನೂರ ಐವತ್ತು ಮಂದಿಯನ್ನು
ತಿಂದು ಬಿಟ್ಟಿತು[೧೭]. ೩೬. ಮತ್ತು ಯೆಹೋವನು ಮೋಶೆಗೆ ನುಡಿದದ್ದೇನಂದರೆ: ೩೭.
ಯಾಜಕನಾದ ಆರೋನನ ಮಗನಾದ ಎಲೆಯಾಜರನಿಗೆ ಧೂಪಾರ್ತಿಗಳನ್ನು ಬೇಗೆ
ಯ ನಡುವೆಯಿಂದ ಎತ್ತ ಬೇಕೆಂತಲೂ ಬೆಂಕಿಯನ್ನು ಅತ್ತಿತ್ತ ಚೆಲ್ಲ ಬೇಕೆಂತಲೂ ಹೇಳು.
೩೮. ಯಾಕಂದರೆ ಪಾಪ ಮಾಡಿದಂಥ ಅವರ ಧೂಪಾರ್ತಿಗಳು ಅವರ ಪ್ರಾಣದಿಂದ
ಪರಿಶುದ್ಧವಾಗಿವೆ[೧೮]. ಅವುಗಳನ್ನು ಬಲಿಪೀಠವನ್ನು ಮುಚ್ಚ ತಕ್ಕ ಅಗಲವಾದ ತಗಡು
ಗಳಾಗಿ ಮಾಡುವದು; ಯಾಕಂದರೆ ಅವುಗಳನ್ನು ಯೆಹೋವನ ಮುಂದೆ ಅರ್ಪಿಸಿದ
ಕಾರಣ ಅವು ಪರಿಶುದ್ಧವಾದವು. ಅವು ಇಸ್ರಯೇಲನ ಮಕ್ಕಳಿಗೆ ಗುರುತಿಗಾಗುವ

ಅಂಕೆ. ೧೬, ೧—೪೦.

ವ. ೩೯. ಬಳಿಕ ಯಾಜಕನಾದ ಎಲೆಯಾಜರನು ಸುಟ್ಟು ಹೋದವರು ತಂದ ಹಿತ್ತಾಳಿಯ ಧೂಪಾರ್ತಿಗಳನ್ನು ತಕ್ಕೊಂಡು, ಬಲಿಪೀಠ ಮುಚ್ಚುವದಕ್ಕಾಗಿ ಅವುಗಳನ್ನು ತಗಡುಗಳಾಗಿ ಮಾಡಿದನು. ೪೦. ಆರೋನನ ಬೀಜದವನಲ್ಲದ ಪರ ಜನರವನು ಯೆಹೋವನ ಮುಂದೆ ಧೂಪವನ್ನರ್ಪಿಸುವದಕ್ಕೆ ಹತ್ತರ ಬಾರದ ಹಾಗೆಯೂ, ಕೋರಹನು ಅವನ ಸಭೆಯು ಇವರಂತೆ ಯಾರೂ ಇರದ ಹಾಗೆಯೂ, ಯೆಹೋವನು ಮೋಶೆಯ ಕೈಯಿಂದ ನುಡಿದ ಪ್ರಕಾರ ಇಸ್ರಯೇಲನ ಮಕ್ಕಳಿಗೆ ಇದು ನೆನೆವರಿಕೆಯಾಗಿದೆ.

೧. ಮೋಶೆ ಆರೋನರ ಕುಲವಾದ ಲೇವಿಯ ಕುಲದಲ್ಲಿ ಹುಟ್ಟಿದವನಾದ ಕೋರಹನು ಮತ್ತೊಬ್ಬರನ್ನು ಕೆಡಿಸಿದ ದುರ್ಬೋಧಕನಾಗಿದ್ದರೂ, ಅವನ ಮಕ್ಕಳು ಅವನು ಎಬ್ಬಿಸಿದ ಕಲಹದಲ್ಲಿ ಸೇರಲಿಲ್ಲವೆಂಬದಕ್ಕೆ ಅವರ ಹೆಸರುಗಳು ಇತ್ತಲು (ಸ. ೨೩, ೧೧ ಮುಂ. ಕೀರ್ತ. ೪೪—೪೯) ಬರೆದಿರುವದು ದೃಷ್ಟಾಂತವಾಗಿದೆ. ಹಾಗಾದರೆ ಅವರು ಇಲ್ಲಿ ತಮ್ಮ ತಂದೆಯ ಕೂಡ ಯೆಹೋವನ ಶಿಕ್ಷೆಗೆ ಒಳಗಾಗಿ ಸಾಯಲಿಲ್ಲ.

೨. ರೂಬೇನನವರು ದೇವರ ಆಯಿಕೆಗಿಂತ ತಮ್ಮ ಚೊಚ್ಚಲತನದ ಬಾಧ್ಯಸ್ಥಿಕೆ ದೊಡ್ಡದೆಂಬ ಬಿಂಕದಿಂದ ಕೆಟ್ಟರು.

೩. ಅವರು ಹೇಳಿದ ದೂರಿನ ಅಭಿಪ್ರಾಯವೇನಂದರೆ: ನಮ್ಮ ಮೇಲೆ ನೀವು ಅಧಿಕಾರವನ್ನು ನಡಿಸುವದು ಅನ್ಯಾಯ; ಯಾಕಂದರೆ ನಾವು ನಿಮ್ಮಂತೆ ಅಬ್ರಹಾಮನ ಬೀಜದವರೂ ಒಡಂಬಡಿಕೆಯ ಜನಾಂಗದವರೂ ಆಗಿದ್ದೇವೆ.

೪. ಸಭೆಯ ನಡುವೆಯೂ ನಿತ್ಯ ದೇವಸನ್ನಿಧಾನವು ಸಭೆಯವರೆಲ್ಲರು ಹೆಚ್ಚು ಕಡಿಮೆಯಿಲ್ಲದ ಪರಿಶುದ್ಧತ್ವವುಳ್ಳವರಾಗಿದ್ದಾರೆಂಬದಕ್ಕೆ ಪ್ರಾಮಾಣ್ಯವೆಂದು ಹೇಳಿ ಕೊಳ್ಳುತ್ತಾ, ತಮಗೂ ಮೋಶೆ ಆರೋನರಿಗೂ ಸಭೆಯಲ್ಲಿ ಸಮಾನವಾದ ಅಧಿಕಾರ ಉಂಟೆಂತ ಸ್ಥಾಪಿಸ ಮುಂಗೊಳ್ಳುತ್ತಾರೆ. ತಮ್ಮ ದುರಾಲೋಚನೆಗಳನ್ನು ಭಕ್ತಿವಾಕ್ಯಗಳಿಂದ ಮಾಜುತ್ತಾ, ತಮ್ಮ ನಡುವೆಯಲ್ಲಿ ವಾಸ ಮಾಡುತ್ತಾನೆಂದು, ಅವರು ಅರಿಕೆ ಮಾಡುವ ಯೆಹೋವನಿಗೆ ಮಾರ್ಮಲೆಯುತ್ತಾರೆ. ಇಲ್ಲಿ ಹೊರ. ೧೯, ೬ರಲ್ಲಿ ಹೇಳಿದ ವಾಕ್ಯವನ್ನು ನೋಡಿದರೆ, ಈ ಜನರು ಹೇಳುವ ಮಾತು ದೇವವಾಕ್ಯಕ್ಕೆ ಸರಿ ಎಂಬ ಹಾಗೆ ತೋರುವದು. ಹೊಸ ಒಡಂಬಡಿಕೆಯಲ್ಲಿ ಸಮಸ್ತ ಪರಿಶುದ್ಧ ಭಕ್ತರಾದ ಕ್ರೈಸ್ತರ ಸರ್ವಸಾಧಾರಣ ಯಾಜಕತ್ವವು ಹೆಚ್ಚಾಗಿ ಖಂಡಿತವಾಗಿ ಹೇಳಿಯದೆ. ರೋಮಿಸಾಯ ಸಭೆಯವರೂ ಹೈಚರ್ಚ್ ಎಂಬ ಅಂಗ್ಲರ ಉಚ್ಚಸಭಾಪಕ್ಷದವರೂ ತಮಗೋಸ್ಕರ ಅಪಹರಿಸಿ ಕೊಳ್ಳ ನೋಡುವ ಯಾಜಕ ಕುಲವೆಂಬ ಮಾತು ಹ್ಯಾಗೂ ವ್ಯರ್ಥ. ಆದಾಗ್ಯೂ ಕ್ರೈಸ್ತ ಸಭೆಯಲ್ಲಿ ಉದ್ಯೋಗಗಳೂ ಬಿರುದುಗಳೂ ಇರುತ್ತವೆ; ಹೀಗಿರುವದರಿಂದ ಈ ವಿಷಯದಲ್ಲಿ ಮಾರ್ಮಲೆ ಮಾಡುವದು ಅನೇಕ ಸರ್ತಿ ಕೋರಹ ಪಕ್ಷದವರ ಆತ್ಮಕ್ಕೆ ಸಂಬಂಧವಾದ್ದೆಂತ ಹೇಳ ಬೇಕಾಗುತ್ತದೆ.

೫. ಕರ್ತನು ತಾನೇ ತೀರ್ಪು ಮಾಡಲಿ ಎಂದು ಕೊಂಡು, ಮೋಶೆಯು ಯಾಜಕೋದ್ಯೋಗದ ವಿಶೇಷ್ಯವಾದ ಒಂದು ವೃತ್ತಿಯಾಗಿರುವಂಥ, ಜನಾಂಗದ ಪ್ರಾರ್ಥನೆಗಳನ್ನು ದೇವರ ಸನ್ನಿಧಿಗೆ ಏರಲೀಸುವ, ಧೂಪಬಲಿಯರ್ಪಣೆಯನ್ನು ಅವರಿಗೆ ಒಪ್ಪಿಸಿ ಬಿಡುತ್ತಾನೆ.

೬. ಅಂದರೆ, ನೀವು ಬೇರೆ ಕುಲದವರಿಗಿಂತ ಯೆಹೋವನಿಗೆ ಹೆಚ್ಚು ಹತ್ತರ ಬರುವ ಅಪ್ಪಣೆ ಹೊಂದಿದ್ದಕ್ಕೆ ಕೃತಜ್ಞರಾಗಿದ್ದು, ಬಲಿಯರ್ಪಿಸುವ ಉದ್ಯೋಗವು ನಿಮಗೆ ದೊರಕಿಸಿ ಕೊಳ್ಳದೆ ಇರುವದರಿಂದ ಹೊಟ್ಟೆಕಿಚ್ಚು ಪಡ ಬಾರದು.

೭. ನೀವು ಆರೋನನಿಗೆ ಅಲ್ಲ, ಯೆಹೋವನಿಗೆಯೇ ಗುಣುಗುಟ್ಟುವವರಾಗಿದ್ದೀರಿ.

೮. ಇವರಿಬ್ಬರು ಕೋರಹನ ಸಂಗಡ ಯೆಹೋವನ ಮುಂದೆ ಬಾರದೆ ಇರುವದರಿಂದ ಎಲ್ಲರ ಮಾತು ತೀರುವ ಹಾಗೆ, ಅವರನ್ನು ಸಹಾ ಕರೆ ಕಳುಹಿಸುತ್ತಾನೆ. ಆದರೆ ಅವರು ಆಗಡ ಮಾಡಿ ಬೈಯ್ಯುತ್ತಾರೆ.

೯. ಅಂದರೆ, ಜನಾಂಗವು ನಿನ್ನ ಮೋಸಗಳನ್ನು ಎಂದಿಗೂ ತಿಳು ಕೊಳ್ಳದ ಹಾಗೆ, ನೀನು ಜನರಿಗೆ ಕಣ್ಣು ಕಟ್ಟುವದು ಸಾಲದೆಂದು, ಅವರನ್ನು ಕಣ್ಣಿಲ್ಲದವರಾಗ ಮಾಡ ಬೇಕೆಂದಿದ್ದೀಯಾ? ಈ ಜನರು ಭಕ್ತಿಯ ವೇಷವನ್ನು ಧರಿಸಿದರೂ, ವ. ೧೩ ೧೪ರಲ್ಲಿ ಅವರು ಹೇಳುವ ಮಾತುಗಳಿಂದ, ಅವರ ನಿಜದುಷ್ಟ ಭಾವವು ಎಷ್ಟು ಭಯಂಕರವಾಗಿತ್ತೆಂತ ಚನ್ನಾಗಿ ಪ್ರತ್ಯಕ್ಷವಾಗುತ್ತದೆ. ಹಾಗೆಯೇ ಸಭೆಯಲ್ಲಿ ನಡಿಯುವ ಮಾರ್ಮಲೆಗಳ ಸ್ವಭಾವವು ಇಂದು ಸಹಾ ಅದೆ ತರದ್ದು. ಹೊರಗೆ, ಭಕ್ತಿಯ ವೇಷ, ಮತ್ತು ಭೋಳೆ ಜನರನ್ನು ಮರುಳುಗೊಳಿಸುವದಕ್ಕೆ ದೇವರ ವಾಕ್ಯದಿಂದ ತಕ್ಕೊಂಡ ವಚನಗಳು; ಆದರೆ ಒಳಗೆ, ಕರ್ತನಾದ ಕ್ರಿಸ್ತನಿಗೂ ಆತನ ಸಭೆಗೂ ಕೇವಲ ವಿರೋಧವಾದ ದುಷ್ಟ ಭಾವ.

೧೦. "ಶಾನೆ ಉರಿದು" ಎಂಬದಕ್ಕೆ ಇಲ್ಲಿ ಮಹಾ ಶಾಪ ಪಟ್ಟು ಎಂಬ ಅರ್ಥವು. ಈ ಕಾರ್ಯದಲ್ಲಿ ದೇವರ ಕಾರ್ಯಭಾರಿಯಾದ ಮೋಶೆಯು ಕೋಪಗೊಂಡದ್ದು ಬಹು ಯುಕ್ತವಾಗಿತ್ತು. ಆದಾಗ್ಯೂ ಬಲಹೀನರ ಕಡೆಗೆ ಕರುಣೆ ತೋರಿಸುವದನ್ನು ಮರತು ಬಿಡಲಿಲ್ಲವೆಂಬದು ವ. ೨೨ರಿಂದ ಪ್ರತ್ಯಕ್ಷವಾಗುತ್ತದೆ.

೧೧. ಜನಾಂಗವು ಹೆದರಿ, ವಿಶ್ವಾಸದಲ್ಲಿಯೂ ವಿಧೇಯತ್ವದಲ್ಲಿಯೂ ದೃಢವಾಗುವ ಹಾಗೆ, ಮಾರ್ಮಲೆತ ಪುಂಡರು ಎದೆಗುಂದಿ ಶಿಕ್ಷೆಯನ್ನು ತಾಳುವದು ಅವಶ್ಯವಾಗಿತ್ತು.

೧೨. ಮೋಶೆ ಸ್ವಾರ್ಥವಿಲ್ಲದವನಾಗಿದ್ದು, ದೇವರಿಗೆ ಮಾಡುವ ಪ್ರಾರ್ಥನೆಯಲ್ಲಿ, ತಾನು ಪರರ ಒಡವೆ ಅಪಹರಿಸಿದ್ದಿಲ್ಲವೆಂತಲೂ, ಯಾರನ್ನೂ ತಿಪ್ಪುಲಿಟ್ಟದ್ದಿಲ್ಲವೆಂತಲೂ ಹೇಳಿದ್ದು ನಿಜವೇ ಸರಿ. ಜನಾಂಗಗಳ ನಾಯಕರಲ್ಲಿ ಅಪುರೂಪವಾದ ಮನಸ್ಸಾಕ್ಷಿ ಶುದ್ಧಿ ಅವನಲ್ಲಿತ್ತು. ಸತ್ಯವಾದ ಭಕ್ತಿಯು ಅವನ ಶೀಲದ ಮೂಲವಾಗಿತ್ತು.

೧೩. ಕೋರಹನು ಶಾನೆ ಕೆಟ್ಟವನಾಗಿದ್ದರೂ, ತಾನು ಗೆಲ್ಲುವೆನೆಂತ, ತನ್ನಲ್ಲಿ ನಿಶ್ಚೈಸಿ ಕೊಂಡು, ತಾನು ಎಬ್ಬಿಸಿದ ಗಲ್ಲತ್ತಿನಲ್ಲಿ ಶೇರಲೊಲ್ಲದ ಜನರು ಹ್ಯಾಗಾದರೂ ಅದಕ್ಕೆ ಸಾಕ್ಷಿಗಳಾಗಿರ ಬೇಕೆಂದು, ಬಯಸಿ ಎಲ್ಲರನ್ನು ಕೂಡಾ ಕರೆಯುತ್ತಾನೆ.

೧೪. ಸಭೆಯವರೆಲ್ಲರು ಕೋರಹನ ದ್ರೋಹಕ್ಕೆ ಮೆಚ್ಚದೆ ಇದ್ದರೂ, ಅದನ್ನು ಹೇಸದೆಯೂ ಎದುರಿಸದೆಯೂ ಸುಮ್ಮನೆ ಇದ್ದದರಿಂದ, ಕರ್ತನು ಅವರನ್ನೆಲ್ಲಾ ಅಳಿಸ ಬೇಕೆಂದಿದ್ದನು.

೧೫. ಮೋಶೆ ರೂಬೆನನವರ ದಂಡಿಗೆ ಹೋಗಿ, ದಾಥಾನ ಅಬೀರಾಮರಿಗೆ ಬುದ್ಧಿ ಹೇಳಿ, ಅವರು ಕೇಳಲೊಲ್ಲದ ಕಿವುಡರೆಂದು ಕಂಡಾಗ, ವ. ೨೫—೨೭ರಲ್ಲಿ ಬರೆದಿರುವಂತೆ, ಕೇಳ ಮನಸ್ಸುಳ್ಳವರೆಲ್ಲರನ್ನು ಎಚ್ಚರಿಸಿದನಂತರ, ದೇವರು ತೀರ್ಪು ಮಾಡುವನೆಂದು, ಸಾರುತ್ತಾನೆ.

೧೬. ಪಾತಾಳವು ಸತ್ತವರೆಲ್ಲರ ಇಕ್ಕೆಯಾಗಿದೆ. ಭಕ್ತರೂ ದುಷ್ಟರೂ ಅದರೊಳಗಿದ್ದು, ಅಂತ್ಯವಾದ ನ್ಯಾಯ ತೀರ್ವಿಕೆಯನ್ನು ಎದುನೋಡುತ್ತಾರೆ. ಆದರೆ ಇವರು ಸಾಮಾನ್ಯವಾದ ಮನುಷ್ಯರ ಕಟ್ಟಳೆಯ ಪ್ರಕಾರ ಸತ್ತು ಹೋಗದೆ, ಫಕ್ಕನೆ ಪಾತಾಳದಲ್ಲಿ ಇಳಿದು ಹೋದ್ದೇ ದೇವರು ಮಾಡಿದ ಅದ್ಭುತವು.

೧೭. ೩೫ನೆ ವಚನದ ಸಂಗತಿಯನ್ನು ಹ್ಯಾಗೆ ತಿಳುಕೊಳ್ಳ ಬೇಕಂದರೆ: ೩೧ನೆಯಿಂದ ೩೩ನೆ ವರೆಗೆ ಬರೆದಿರುವ ಕಾರ್ಯವು ದಂಡಿನಲ್ಲಿ, ರೂಬೆನನ ಕುಲದವರ ಗುಡಾರಗಳು ಇದ್ದಲ್ಲಿ, ನಡದ ವೇಳೆಯಲ್ಲಿ ೨ನೆ ವಚನದಲ್ಲಿ ಬರೆದಂಥ ೨೫೦ ಮಂದಿ ಶ್ರೇಷ್ಠರು ಸಾಕ್ಷೀ ಗುಡಾರದ ಬಳಿಯಲ್ಲಿ ಧೂಪಾರ್ತಿಗಳನ್ನು ಹಿಡುಕೊಳ್ಳುತ್ತಾ ನಿಂತಿದ್ದರು. ಮೋಶೆ ಅವರ ಬಳಿಗೆ ತಿರಿಗಿ ಬಂದ ಮೇಲೆ, ಯೆಹೋವನ ಮಹಿಮೆಯ ಕಡೆಯಿಂದ ಹೊರಟು ಬಂದ ಬೆಂಕಿಯಿಂದ ಸುಟ್ಟು ಹೋದರೆಂದು, ಕಾಣುತ್ತದೆ.

೧೮. "ಅವರ ಪ್ರಾಣದಿಂದ ಪರಿಶುದ್ಧವಾಗಿವೆ," ಅಂದರೆ, ಧೂಪಾರ್ಪಣೆಯಿಂದ ಪಾಪ ಮಾಡಿದವರಿಗೆ ಪ್ರಾಣಶಿಕ್ಷೆ ಬಂದದರಿಂದ ಪಾಪಕರಣವಾದ ಧೂಪಾರ್ತಿಗಳು ಪರಿಶುದ್ಧವಾದವು. ಹ್ಯಾಗಂದರೆ, ಶಿಕ್ಷೆಯ ಮೂಲವಾಗಿ ದೇವರ ಪರಿಶುದ್ಧ ನೇಮವು ಪಾಪವನ್ನು ನುಂಗಿ ಬಿಡಲಾಗಿ, ದೇವರ ಪರಿಶುದ್ಧತ್ವಕ್ಕೆ ಹೊಸ ಹೊಳವು ಹುಟ್ಟುವದು. ಒಂದು ವೇಳೆ ೩೮ನೆ ವಚನದ ಆರಂಭದ ಭಾಷಾಂತರವನ್ನು ತಿದ್ದಿ, ಯಾ

ಕೆಂದರೆ ತಮ್ಮ ಪ್ರಾಣನಷ್ಟಕ್ಕೆ ಪಾಪ ಮಾಡಿದಂಥವರ ಧೂಪಾರ್ತಿಗಳು ಪರಿಶುದ್ಧವಾಗಿವೆಂದು ಟೀಕಿಸಿದರೆ, ಶೇಸು. ಹ್ಯಾಗೂ ಮುಖ್ಯ ತಾತ್ಪರ್ಯವು ಮಾರಿ ಹೋಗುವದಿಲ್ಲ.

ವ. ೪೧. ಆದರೆ ಮಾರಣೆ ದಿವಸದಿಂದ ಇಸ್ರಯೇಲನ ಸಭೆಯೆಲ್ಲಾ ಮೋಶೆ
ಆರೋನರ ಮೇಲೆ ಗುಣುಗುಟ್ಟಿದ್ದೇನಂದರೆ: ನೀವು ಯೆಹೋವನ ಜನಾಂಗವನ್ನು
ಕೊಂದು ಹಾಕಿದ್ದೀರಿ. ೪೨. ಮತ್ತು ಸಭೆಯು ಮೋಶೆ ಆರೋನರಿಗೆ ವಿರೋಧವಾ
ಗಿ ಕೂಡಿ ಕೊಂಡಾಗ, ಅವರು ಸಾಕ್ಷಿಯ ಗುಡಾರಕ್ಕೆ ತಿರುಗಲು೧), ಅಗೋ, ಮೇಘ
ವು ಅದನ್ನು ಕವಿದು, ಯೆಹೋವನ ಮಹಿಮೆ ಕಾಣಿಸಿತು. ೪೩. ಮತ್ತು ಮೋಶೆ
ಆರೋನರು ಸಾಕ್ಷಿಯ ಗುಡಾರದ ಮುಂದೆ ಬಂದರು. ೪೪. ಬಳಿಕ ಯೆಹೋವನು
ಮೋಶೆಗೆ ನುಡಿದದ್ದೇನಂದರೆ: ೪೫. ಈ ಸಭೆಯ ನಡುವೆಯಿಂದ ಎದ್ದು ಬನ್ನಿ; ಅವ
ರನ್ನು ಒಮ್ಮಿದೊಮ್ಮೆ ನುಂಗಿ ಬಿಡುತ್ತೇನೆ. ಆಗಲವರು ಮೋರೆ ಕೆಳಗಾಗಿ ಬಿದ್ದರು೨).
೪೬. ಬಳಿಕ ಮೋಶೆ ಆರೋನನಿಗೆ ಹೇಳಿದ್ದು: ಧೂಪಾರ್ತಿ ತಕ್ಕೊಂಡು, ಅದರ ಮೇಲೆ
ಬಲಿಪೀಠದ ಮೇಲಿನಿಂದ ಬೆಂಕಿ ಇಟ್ಟು, ಧೂಪ ಹಾಕಿ, ತೀವ್ರವಾಗಿ ಸಭೆಗೆ ಹೋಗಿ,
ಅವರಿಗಾಗಿ ವಿಮೋಚಿಸು; ಯಾಕಂದರೆ ಯೆಹೋವನ ಮುಂದಿನಿಂದ ಶಿಟ್ಟು ಹೊರ
ಟು, ವ್ಯಾಧಿ ತೊಡಗಿಯದೆ. ೪೭. ಆಗಲಾರೋನನು ಮೋಶೆ ನುಡಿದಂತೆ ಅದನ್ನು
ತಕ್ಕೊಂಡು, ಸಭೆಯ ನಡುವಿಗೆ ಓಡಿ ಹೋಗಲು, ಇಗೋ, ವ್ಯಾಧಿಯು ಜನಾಂಗ
ದಲ್ಲಿ ತೊಡಗಿತ್ತು. ಆಗಲವನು ಧೂಪವಿಟ್ಟು ಜನಾಂಗಕ್ಕಾಗಿ ವಿಮೋಚನೇ ಮಾಡಿ
ದನು. ೪೮. ಅವನು ಸತ್ತವರಿಗೂ ಬದುಕುವವರಿಗೂ ನಡುವೆಯಲ್ಲಿ ನಿಂತು ಕೊಂ
ಡದರಿಂದ ವ್ಯಾಧಿ ಅಣಗಿತು೩). ೪೯. ಆದರೆ ಕೋರಹನ ನಿಮಿತ್ತ ಸತ್ತು ಹೋದ
ವರು ಹೊರ್ತಾಗಿ, ವ್ಯಾಧಿಯಿಂದ ಸತ್ತವರು ಹದಿನಾಲ್ಕು ಸಾವಿರದ ಏಳುನೂರು
ಮುಂದಿಯಾಗಿದ್ದರು. ೫೦. ಆಗ ಆರೋನನು ವ್ಯಾಧಿ ನಿಂತಿರಲಾಗಿ, ಮೋಶೆಯ ಬ
ಳಿಗೆ ತಿರುಗಿ, ಸಾಕ್ಷಿಯ ಗುಡಾರದ ಬಾಗಲಿಗೆ ಬಂದನು೪).

೧. ಮಾರ್ಮಲೆತಿರುವ ಜನರ ಕಡೆಯಿಂದ ಓಡಿ, ದೇವರನ್ನು ಆಶ್ರಯಿಸಿ ಕೊಳ್ಳ ಬಂದರು.

೨. ಯೆಹೋವನಿಗೆ ಪ್ರಾರ್ಥನೆ ಮಾಡುವದಕ್ಕಾಗಿ ಎರಗಿದರು. ಇದೇ ಮಾತು ಸ. ೧೪, ೫ರಲ್ಲಿಯೂ, ಈ ಸಂಧಿಯ ೪ನೆ, ೨೨ನೆ ವಚನಗಳಲ್ಲಿಯೂ ಬರೆದದೆ. ಅವರು ಮಾಡಿದ ಬಿನ್ನಹದ ತಾತ್ಪರ್ಯವು ೧೨ನೆ ವಚನದಲ್ಲಿಯೇ ವಿವರಿಸಿಯದೆ. ಆದರೆ ಬೇರೆ ವೇಳೆಯಲ್ಲಿಯೂ ಅವರು ತಮ್ಮ ಜನಾಂಗಕ್ಕಾಗಿ ದೇವರನ್ನು ಪ್ರಾರ್ಥಿಸಿದರೆಂತ ನೆನಸುವದು ಸಹಜವಾಗಿದೆ.

೩. ಮೋಶೆ ಆರೋನರ ಬಿನ್ನಹವು ಜನಾಂಗವನ್ನು ರಕ್ಷಿಸಿತೆಂಬದು ಆರೋನನ ಧೂಪಬಲಿಯರ್ಪಣೆಯ ಮೂಲಕವಾದ ವ್ಯಾಧಿನಿವಾರಣೆಯಿಂದ ಜನಾಂಗಕ್ಕೆಲ್ಲಾ ಕಣ್ಣಾರೆ ಕಾಣ ಬಂತು. ಇದಲ್ಲದೆ ಸತ್ತವರಿಗೂ ಬದುಕುವವರಿಗೂ ನಡುವೆಯಲ್ಲಿ ನಿಲ್ಲುತ್ತಾ ವ್ಯಾಧಿ ಶಾಂತಿ ಮಾಡುವ ಆರೋನನ ಮಹತೆಯು ಸಮೆ ಹೊಳೆಯಲಾಯಿತು.

೪. ವ್ಯಾಧಿ ನಿಂತಿದ್ದ ಬಳಿಕ ಆರೋನನು ಮಧ್ಯವರ್ತನೋದ್ದೇಶವನ್ನು ನೆರವೇರಿಸಿದ ದೇವರ ದಯೆಯನ್ನು ಮೋಶೆಗೆ ತಿಳಿಸಿ, ಅವನೊಡನೆ ಕೃತಜ್ಞತಾ ಪ್ರಾರ್ಥನೇ ಮಾಡುವ ಬಗ್ಯೆ ತಿರುಗಿ ಕೊಂಡನು.

ಆರೋನನ ಚಿಗಿತ ಕೋಲು. ಸ. ೧೭, ೧—೧೩.

ನ್ಯಾಯವಾದ ಯಾಜಕತ್ವಕ್ಕೆ ಮಾರ್ಮಲೆಯುವ ಮನಸ್ಸನ್ನು ಶೀರಾ ಅಡಗಿಸುವ ಬಗ್ಗೆ ಕೋರಹನಿಗೂ ಅವನನ್ನು ಕೂಡಿ ಕೊಂಡ ೨೫೦ ಆಳುಗಳು, ಅವರ ಟಂಟಿಗೆ ಬಂದ ದಂಡಕ್ಕೆ ಹೆದರದೆ ಹೋದ ೧೪,೭೦೦ ಜನರು ಇವರಿಗೂ ಮಾಡಿದ್ದಲ್ಲದೆ, ತನ್ನ ಪರಿಶುದ್ಧಾಲಯದ ಊಳಿಗತನಕ್ಕೆ ತಾನು ಕರೆದವರು ಯಾರು ಎಂದು, ತನ್ನ ಅಯಿಕೆಯ ಬೇರೊಂದು ಸಂಜ್ಞೆಯಿಂದ ಸಂಶಯವುಳಿಯದಂತೆ ಪ್ರಕಟಿಸಿ ನಿಶ್ಚಯ ಮಾಡಿದ್ದು ಹ್ಯಾಗಂದರೆ: ಕುಲಪ್ರಭುಗಳಲ್ಲಿ ಒಬ್ಬೊಬ್ಬನು ತನ್ನ ಕುಲದ ಹೆಸರು ಕೆತ್ತಿ ಬರೆದ ಬಾದಾಮಿ ಕೋಲುಗಳನ್ನು ಆರೋನನ ಮನೆಗಾಗಿ ಇವನ ಹೆಸರು ಬರೆದ ಒಂದು ಕೋಲಿನ ಸಂಗಡ ಸಾಕ್ಷಿಯ ಗುಡಾರದೊಳಗೆ ತಂದಿಟ್ಟು ಬಿಡ ಬೇಕೆಂತ ಬೆಸಸಿ, ಯಾವನನ್ನು ಆದು ಕೊಳ್ಳುತ್ತೇನೋ ಅವನ ಕೋಲು ಚಿಗುರುವದು. ಹೀಗೆ ಇಸ್ರಯೇಲನ ಮಕ್ಕಳು ನಿಮ್ಮ ಮೇಲೆ ಆಡುವ ಗುಣುಗುಟ್ಟನ್ನು ನಿಲ್ಲಿಸಿ ಬಿಡುವೆನು, ಅಂದನು. ವ. ೫. ಮೋಶೆ ಈ ಅಪ್ಪಣೆಯನ್ನು ಅನುಸರಿಸಿ, ಮಾರಣೆ ದಿನದಲ್ಲಿ ಹದಿಮೂರು ಕೋಲುಗಳನ್ನು ಸಾಕ್ಷೀ ಗುಡಾರದೊಳಗಿಂದ ತಕ್ಕೊಂಡು ಬರಲು, ಅಗೋ, ಆರೋನನ ಕೋಲು ಚಿಗಿತು, ಮೊಗ್ಗೆ ಬಿಟ್ಟು, ಹೂವರಳಿ, ಬಾದಾಮಿ ಹಣ್ಣುಗಳನ್ನು ಫಲಿಸಿತೆಂದು, ಕಂಡರು. ಈ ತೆರದಿಂದ ಕರ್ತನು ತಾನು ಜೀವಪೂರ್ಣತೆಯ ವರವನ್ನು ಕೊಟ್ಟು, ನ್ಯಾಯವಾದ ಮಧ್ಯವರ್ತಿಯಾಗಿ ನೇಮಕ ಮಾಡಿದವನ್ಯಾರೆಂದು, ಹೊಸದಾದ ಅದ್ಭುತದಿಂದ ಪ್ರಕಟ ಮಾಡಿದನು. ಇದರ ಗುರುತಾಗಿಯೂ, ಜನಾಂಗವು ಗುಣುಗುಟ್ಟಿದ ತಪ್ಪಿನ ನೆನೆವರಿಕೆಗಾಗಿಯೂ, ಆರೋನನ ಚಿಗಿತ ಕೋಲು ಪರಿಶುದ್ಧ ಸ್ಥಳದಲ್ಲಿಯಣ ಸಾಕ್ಷೀ ಪೆಟ್ಟಿಗೆಯ ಬಳಿಯ ಇರಿಸಲಪ್ಪಣೆಯಾಯಿತು. ಇದರಿಂದ ಜನಾಂಗದಲ್ಲಿ ಮಾನಸಾಂತರಯುಕ್ತವಿಶ್ವಾಸವು ಹುಟ್ಟದಿದ್ದರೂ, ಶಿಕ್ಷೋಪಯೋಗವಾದ ಅಂಜಿಕೆಯುಂಟಾಯಿತು.

ಸಂಧಿ ೧೮.

ಯಾಜಕರ ಉದ್ಯೋಗವು. ಅವರ ಊಳಿಗದವರಾದ ಲೇವಿಯವರ ಕಟ್ಟಳೆ. ಆರೋನನ ಮನೆಯವರಲ್ಲದೆ ಲೇವಿಯ ಕುಲದವರಲ್ಲಿ ಮತ್ಯಾರೂ ಯಾಜಕೋದ್ಯೋಗವನ್ನು ನಡಿಸಲಧಿಕಾರಿಗಳಾಗಿರುವದಿಲ್ಲ. ಅವರೆಲ್ಲರು ಯಾಜಕರಾದ ಆರೋನನವರಿಗೆ ಸಹಾಯ ಮಾಡುವ ಊಳಿಗದವರಷ್ಟೇ. ವ. ೧—೭. ಯಾಜಕರು ಮುಂತಾದ ಲೇವಿಯವರ ಜೀವನದ ನೇಮಕವು. ಉಳಿದ ಕುಲದವರಿಗೆ ಸಿಕ್ಕಿದಂತೆ, ಲೇವಿಯ ಕುಲದವರಿಗೆ ಸ್ವಾಸ್ಥ್ಯದ ಭೂಮಿ ಇಲ್ಲ. ಕರ್ತನು ತಾನೇ ಅವರ ಸ್ವಾಸ್ಥ್ಯವೆಂದು, ವ. ೨೦ರಲ್ಲಿ ಬರೆದದೆ. ಯೆಹೋವನು ಸಮಸ್ತ ಭೂಮಿಗೆ ಒಡೆಯನು. ತಮ್ಮ ದೇಶದ ಧನಿಗೆಂದು, ಇಸ್ರಯೇಲನವರು ಯೆಹೋವನಿಗೆ ಮುಂಫಲಗಳ ಹೊರ್ತು ಹೊಲಗಳಲ್ಲಿಯೂ ತೋಟಗಳಲ್ಲಿಯೂ ಮರಗಳಲ್ಲಿಯೂ ಆಗುವ ಹುಟ್ಟುವಳಿಯ ಹತ್ತನೆ ಪಾಲು ಕೊಡ ಹಂಗಿಕರಾದ ಒಕ್ಕಲಿಗರಾಗಿದ್ದರು. ಯಜಮಾನನಾದ ಯೆಹೋವನ ಕೈಯಿಂದ ಅವನ ಮನೆಯಾಳುಗಳಾದ ಯಾಜಕರೂ ಲೇವಿಯವರೂ ಜನಾಂಗದ ಹನ್ನೆರಡು ಕುಲಗಳು ತೆರುತ್ತಾ ಬರುವ ದಶಮಾಂಶವನ್ನು ನಿತ್ಯವಾದ ಸಂಬಳವಾಗಿ ಹೊಂದುವವರಾಗಿದ್ದರು. ವ. ೮—೩೨. ಇದಕ್ಕೆ ದ್ವಿತೀ. ೧೪, ೨೨ ಮುಂ. ಸರಿ ನೋಡ ಬೇಕು.

ಸಂಧಿ ೧೯.

ಯಾವದೊಂದು ಶವವನ್ನು ಮುಟ್ಟಿದ ಕಾರಣ ಹೊಲೆಯಾದವರು ಕೆಂಪು ಆಕಳಿನ ಬೂದಿಯಿಂದ ಮಾಡಿ ಕೊಳ್ಳ ಬೇಕಾದ ಶುಚೀಕರಣದ ಕಟ್ಟಳೆ. ವ. ೧—೨೨.

ಮೂವತ್ತೆಂಟು ವರ್ಷದ ಶಿಕ್ಷೆಯ ಕಾಲದಲ್ಲಿ ಹೆಚ್ಚು ಕಡಿಮೆ ೩೮ ವರ್ಷ ಕಳದ ಬಳಿಕ, ಅಪ್ಪರೊಳಗೆ ಅವಿಶ್ವಾಸ ಅವಿಧೇಯತ್ವಗಳ ಫಲವನ್ನು ತಿನ್ನುತ್ತಾ, ಅರಣ್ಯಸಂಚಾರ ಮಾಡಿದ ಇಸ್ರಯೇಲನವರು, ೨೦ನೆ ಸಂಧಿಯ ಆರಂಭದಲ್ಲಿ ಬರೆದಿರುವ ಪ್ರಕಾರ, ಮರಳಿ ಕಾದೆಷಿಗೆ ಬಂದು ಇಳಕೊಂಡರು. ಕೋರಹನ ಗಲ್ಲತ್ತು, ಆರೋನನ ಯಾಜಕೋದ್ಯೋಗದೃಢೀಕರಣವು, ಇವುಗಳ ವಿಷಯವಾಗಿ ಹಿಂದಿನ ಸಂಧಿಗಳಲ್ಲಿ ಬರೆದ ಚರಿತ್ರದ ಹೊರ್ತಾಗಿ ವಿವರವಾದ ವೃತ್ತಾಂತವು ಪರಿಶುದ್ಧವಾದ ಬರಹದಲ್ಲಿ ದೊರಕುವದಿಲ್ಲ. ಇಸ್ರಯೇಲನವರ ಜನಾಂಗವು, ಯೆಹೋವನ ಶಿಕ್ಷೆಯ ನಿರ್ಣಯವು ೧೪ನೆ ಸಂಧಿಯಲ್ಲಿ ಅವರಿಗೆ ಪ್ರಕಟವಾದಂದಿನಿಂದ, ಕಾದೆಷದಿಂದ ಹೊರಟ ಬಳಿಕ ಅದರ ಪಯಣ ಯಾವ ದಿಕ್ಕಿಗೆ ಹೋಯಿತೆಂತಲೂ, ಯಾವ ಮಾರ್ಗದಿಂದ ಅರಣ್ಯಸಂಚಾರ ಮಾಡುತ್ತಾ, ಯಾವ ಸ್ಥಳಗಳಲ್ಲಿ ಎಷ್ಟೊತ್ತು ತಂಗುತ್ತಾ, ಮೂವತ್ತು ವರ್ಷಕ್ಕೆ ಹೆಚ್ಚಾದ ಕಾಲ ಕಳೆದರೆಂತಲೂ, ಸ. ೩೩, ೧೯—೩೯ರಲ್ಲಿ ಲಿಖಿತವಾದ ಪಯಣದ ಮೆಟ್ಟುಗಳಲ್ಲಿ ದಂಡು ಉಳು ಕೊಂಡ ಕಾಲಗಳ ಸರಿಯಾದ ಗಣನೆ ಯಾವದೆಂತಲೂ, ಎಲ್ಲರೂ ಒಪ್ಪಿ ಕೊಳ್ಳುವಂತೆ ಯಾರೂ ಎಂದೂ ನಿಶ್ಚೈಸಲಾರರು. ಹ್ಯಾಗಾದರೂ ಆ ಕಾಲವೆಲ್ಲಾ ಇಸ್ರಯೇಲನವರ ಜನಾಂಗಕ್ಕೂ ಎಲ್ಲಾ ಮನುಷ್ಯರಲ್ಲಿ ಹೆಚ್ಚು ತೊಂದರೆ ತಾಳಿಧ ನಾಯಕನಾದ ಮೋಶೆಗೂ ದೀರ್ಘವಾದ ಪರೀಕ್ಷಣೆಯ ವೇಳೆಯಾಗಿತ್ತು. ಮೋಶೆಯು, ಕೋರಹನೂ ಅವನ್ನ ಕೂಡಿದ ಗುಂಪಿನವರೂ ಅವರಿಗೆ ಮೆಚ್ಚಿದ ೧೪,೭೦೦ ಮಂದಿಯೂ, ತಾನು ದೇವರ ಶಿಕ್ಷೆಯನ್ನು ಅವರಿಗೆ ಸಾರಿದ ಸಂಗಡಲೇ, ಥಕ್ಕನೆ ಅಳಿದು ಹೋಗುವದನ್ನೂ, ಇಪ್ಪತ್ತು ಮುಂತಾದ ವರ್ಷದವರಾಗಿ ತನ್ನ ಕೂಡ ಮಿಚ್ರದಿಂದ ಹೊರಟು ಬಂದ ಕೊಂಚ ಮಂದಿ ಉಳಿದ ಜನರೆಲ್ಲರೂ ಮುಪ್ಪಿನಿಂದಲೂ ರೋಗಗಳಿಂದಲೂ ಗುಣುಗುಟ್ಟಿದ ದ್ರೋಹಕ್ಕೆ ಬಂದ ದೇವರ ಶಿಕ್ಷೆಯಿಂದಲೂ ಸಾಯುವದನ್ನೂ, ಕಂಡವನಾಗಿ, ನೂರ ಇಪ್ಪತ್ತನೆ ವರ್ಷವು ತುಂಬಲು, ತನಗೂ ಜೀವಾಂತ್ಯವು ಹತ್ತರವಾಯಿತೆಂದು ತಿಳುಕೊಂಡು, ದೂರದಿಂದ ಬಂದು ಬಿಸಿಲಿನಿಂದ ಬಳಲಿದಂಥ ಪಯಣದ ಶ್ರಮೆಯಿಂದ ದಣಿದಂಥ ಹಾದಿಗಾರನಂತೆ, ತೀರ್ವಿಕೆಯನ್ನು ಹಾರೈಸುತ್ತಾ ಇರುವಾಗ, ಅವನ ಹೃದಯದೊಳಗಿದ್ದ ಚಾವನೆಗಳು ಮೋಶೆಯ ಕೀರ್ತನೆಯೆಂದು ಹೆಸರ್ಗೊಂಡ ತೊಂಬತ್ತನೆ ಕೀರ್ತನೆಯಲ್ಲಿ, ಭಕ್ತರು ಮನಃಪೂರ್ವಕವಾಗಿ ಮೆಚ್ಚಿ ಕೊಳ್ಳುವಂತೆ, ಪರಿಶುದ್ಧಾತ್ಮದ ಚಮತ್ಕೃತಿಯಿಂದ ವರ್ಣಿಸಿಯವೆ. ಆ ಕೀರ್ತನೆಯನ್ನು ಚನ್ನಾಗಿ ಶೋಧಿಸಿ, ಅದರ ತಾತ್ಪರ್ಯವನ್ನು ಸರಿಯಾಗಿ ಗ್ರಹಿಸಿ ಕೊಂಡವನಿಗೆ ತೋರುವದೇನಂದರೆ: ಮೋಶೆಯು ಅದನ್ನು ರಚಿಸಿದ ಕಾಲದಲ್ಲಿ ತಾನು ಗೈದ ಕೆಲಸವೂ ತಾಳಿದ ಬೇಸರವೂ ಬದುಕಿದ ಆಯುಷ್ಯವೂ ಸಾಕೆಂದು, ಸತ್ತು ತೀರುಗಡೆಯಾಗುವದು ಲೇಸೆಂತಲೂ, ತನ್ನ ಜನಾಂಗದವರಾದ ಎಷ್ಟೋ ಮಂದಿ ಅರಣ್ಯಸಂಚಾರದಲ್ಲಿ ದೇವರ ಕೋಪದಿಂದ ಮಡಿದು ಹೋದರಕಟ! ಎಂತಲೂ, ಎಳೇ ಪ್ರಾಯದವರಾಗಿ ಮಿಚ್ರದಿಂದ ಹೊರಟು ಬಂದು, ಅರಣ್ಯದಲ್ಲಿ ಬೆಳೆದು, ದೇವರಿತ್ತ ಮಾನ್ ಎಂಬದನ್ನು ತಿನ್ನುತ್ತಾ, ದೇವರು ಹರಿಸಿದ ನೀರು ಕುಡಿಯುತ್ತಾ, ದೇವರು ಮಾಡಿದ ಅದ್ಭುತಗಳನ್ನು ನೋಡುತ್ತಾ, ಭಕ್ತಿಯ ಸಾಧನೇ ಪಡಕೊಂಡ ಹೊಸಬರಾದ ಇಸ್ರಯೇಲನವರು ವಾಗ್ದತ್ತವಾದ ದೇಶವನ್ನು ಸ್ವತಂತ್ರಿಸಿ ಕೊಳ್ಳ ತಕ್ಕ ಕಾಲವು ಈಗ ಬಂದದೆಯೋ ಏನೋ? ಹ್ಯಾಗಾದರೂ ಯೆಹೋವನು ತನ್ನ ಮಾತು ಕೈಕೊಳ್ಳುವನೆಂತಲೂ, ತನ್ನಲ್ಲಿ ಚಾವಿಸಿ ಕೊಂಡು, ತನ್ನ ಕರ್ತನಾದ ದೇವರನ್ನು ನಂಬಿ, ವಿಶ್ವಾಸಸಿದ್ಧಿ ಪಡಕೊಂಡವನಾಗಿ, ಯೆಹೋವನನ್ನು ಮನಃಪೂರ್ವಕವಾಗಿ ಹೊಗಳ ಬೇಕೆಂದು, ಈ ಪ್ರಾರ್ಥನೆಯನ್ನು ರಚಿಸಿದ್ದಾನೆ.

ಅರಣ್ಯಸಂಚಾರದ ಕಡೇ ವರ್ಷ. ಅಂಕೆ. ಸ. ೨೦, ೧—೨೨, ೧.

ದೇವರಾಜ್ಯವೃದ್ಧಿಗೆ ಪ್ರಯೋಜನವಾದ ಕಾರ್ಯಗಳೇ ಪರಿಶುದ್ಧ ಚರಿತ್ರದಲ್ಲಿ ಶೇರುವದಕ್ಕೆ ಯುಕ್ತವಾಗಿರುವ ಕಾರಣ, ಸ. ೧೪, ೨೮ ಮುಂ. ನೇಮಕವಾದ ಶಿಕ್ಷೆಯು ಇಸ್ರಯೇಲನ ಜನಾಂಗದಲ್ಲಿ ನಡೆಯುತ್ತಿ

ರಲಾಗಿ, ಅವರು ವಿಸ್ತಾರವಾದ ಅರಣ್ಯದಲ್ಲಿ ಅಲೆದಾಡಿದಂಥ, ಯೆಹೋವನು ತಳ್ಳಿದ ತಲಾಂತರದವರು ದೇವಾಜ್ಞಾನಿರ್ಣಯದ ಪ್ರಕಾರವಾಗಿ ಬರ ಬರ ಸಾಯುತ್ತಾ ಬಂದಂಥ ಕಾಲದ ಕೆಲವು ಸಂಗತಿಗಳು ಅಡಕವಾಗಿಯೂ ಜಾಡೆಯಾಗಿಯೂ ಬರೆದಿರುವದಲ್ಲದೆ, ವಿವರವಾದ ಕಥೆಯು ಮೋಶೆಯ ಗ್ರಂಥಗಳಲ್ಲಿ ದೊರಕುವದಿಲ್ಲ. ಇಲ್ಲಿಯ ಸಂಧಿಯ ಆರಂಭದಲ್ಲಿ ಬರೆದದ್ದು ಸಂಚಾರದ ಕಡೇ ವರ್ಷದ ಆದಿಯಲ್ಲಿ ಸಂಭವಿಸಿತು. ನಮ್ಮ ಸಂಧಿ ಮೊದಲ್ಗೊಂಡು ದ್ವಿತೀಯ ನೇಮದ ಮೊದಲನೆ ಸಂಧಿಯ ಮೂರನೆ ವಚನದ ವರೆಗೆ ನಾಲ್ವತ್ತನೆಯಾದ ಕಡೇ ವರ್ಷದ ಮೊದಲಿನ ಹತ್ತು ತಿಂಗಳಿನ ಚರಿತ್ರವು ಬರೆದದೆ.

ಇಸ್ರಯೇಲನವರಿಗೆ ಈಗ ಹೊಸ ಕಾಲವು ತೊಡಗಿ ಇತ್ತು. ಕೊಂಚರ ಹೊರ್ತಾಗಿ ಹಳಬರೆಲ್ಲರು ಸತ್ತು ಹೋಗಿದ್ದರು. ಆದರೆ ಹೊಸಬರು ಸಹ ಅವರಂತೆಯೇ ದೇವರ ಮಾತು ಕೇಳಲೊಲ್ಲದ ಮಾರ್ಮಲೆಯುತ್ತಿರುವ ಜನರಾಗಿದ್ದರು. ಅವರು ದೇವರಿತ್ತ ಕಟ್ಟುಕಟ್ಟಳೆಗಳನ್ನು ತೆಗದು ಹಾಕಿ, ಒಡಂಬಡಿಕೆಯ ಗುರ್ತಾದ ಪರಿಚ್ಛೇದನೆಯ ನೇಮವನ್ನು ಬಿಟ್ಟು, ಕರ್ತನ ಸಬ್ಬತುಗಳನ್ನು ಅಶುದ್ಧ ಮಾಡಿ, ಅವನ ನ್ಯಾಯಗಳನ್ನು ಅಲಕ್ಷಿಸಿ, ಅವನ ಕಟ್ಟಳೆಗಳನ್ನು ಮೀರುತ್ತಾ ಇದ್ದರು. (ಹೆಜೇ. ೨೦.) ಅವರು ಹೋಮಗಳನ್ನೂ ಆಹಾರಬಲಿಗಳನ್ನೂ ಅರ್ಪಿಸದೆ, ಮೋಲೋಕನ ಗುಡಾರವನ್ನೂ ರೆಂಫನ್ ಎಂಬ ದೆವ್ವದ ನಕ್ಷತ್ರವನ್ನೂ (ಶನಿ) ತಾವು ಮಾಡಿ ಕೊಂಡ ವಿಗ್ರಹಗಳನ್ನೂ ಅಂಗೀಕರಿಸಿ ಆರಾಧಿಸುತ್ತಾ ಇದ್ದರು. (ಅಪೊ. ಕ್ರಿ. ೭, ೪೩.) ಆಮೋ. ೫, ೨೫. ೨೬. ಮತ್ತು ಮರಳಿ ಮರಳಿ ಮಾರ್ಮಲೆತದರಿಂದ ಹೊಸ ಶಿಕ್ಷೆಗಳಿಗೆ ಒಳಗಾದರು. ಆದಾಗ್ಯೂ ಅವರು ಹೊಸಬರಾಗಿದ್ದು, ಶೀರಾ ಮೊರಡರಾಗಿದ್ದ ಕೆಟ್ಟ ಹಳಬರಿಗಿಂತ ಮೆತ್ತಗಾಗಿದ್ದು, ತಮ್ಮ ತಂದೆಗಳಂತೆ ಕರ್ತನ ತಾಳ್ಮೆಯನ್ನು ದಣಿಸದೆ ಇದ್ದದರಿಂದ, ವಾಗ್ದತ್ತವಾದ ದೇಶವನ್ನು ಸ್ವತಂತ್ರಿಸಿ ಕೊಳ್ಳುವದಕ್ಕೆ ಹೆಚ್ಚು ಯೋಗ್ಯರಾಗಿದ್ದರು.

ಮಿರ್ಯಾಮಳ ಮರಣ. ಸ. ೨೦, ೧.

ವ. ೧. ಬಳಿಕ ಇಸ್ರಯೇಲನ ಮಕ್ಕಳು, ಎಲ್ಲಾ ಸಭೆಯಾಗಿ, ಜಿನ್ ಅರಣ್ಯದಲ್ಲಿ ಮೊದಲನೇ ತಿಂಗಳಲ್ಲಿ[1] ಶೇರಿದರು. ಆಗ ಜನಾಂಗವು ಕಾದೆಷದಲ್ಲಿ[2] ವಸ್ತಿಯಾಗಿತ್ತು. ಅಲ್ಲಿ ಮಿರ್ಯಾಮಳು ಸತ್ತು, ಅಲ್ಲೇ ಹೂಣಲ್ಪಟ್ಟಳು[3].

೧. ಅಂದರೆ, ನಾಲ್ವತ್ತನೆ ವರ್ಷದ ಮೊದಲನೆ ತಿಂಗಳಲ್ಲಿ.

೨. ಸ. ೧೪, ೨೬ನೆ ಮುಂತಾದ ವಚನಗಳ ಪ್ರಕಾರವಾಗಿ ಇಸ್ರಯೇಲನವರು ದೇವರ ಶಿಕ್ಷೆಗೆ ಒಳಗಾಗಿ, ತಿರಿಗಿ ಅರಣ್ಯಸಂಚಾರ ಮಾಡ ಬೇಕೆಂಬ ಅಪ್ಪಣೆ ಹೊಂದಿ, ಅಲ್ಲಿಂದ ಅರಣ್ಯದ ಕಡೆಗೆ ತಿರುಗಿ ಕೊಂಡಿದ್ದರು. ಈಗಲವರು ೩೭ ವರ್ಷದ ಪಯಣದ ಬಳಿಕ, ಅದೇ ಸ್ಥಳಕ್ಕೆ ಬಂದರು. ೩೩ನೆ ಸಂಧಿಯಲ್ಲಿ ಬರೆದ ಪಯಣದ ಮೆಟ್ಟುಗಳ ಪಟ್ಟಿಯನ್ನು ಸರಿಯಾಗಿ ಟೀಕಿಸಿ, ಎಣಿಕೆ ಮಾಡಿದರೆ, ಅವರು ೧೩ ಸ್ಥಳಗಳಲ್ಲಿ ದಂಡು ಇಳಿಸಿ, ಹೆಚ್ಚು ಕಾಲ ಉಳಿ ಕೊಂಡರೆಂದು, ತೋರುವದು.

೩. ಅವಳು ಸಹ ಮಾರ್ಮಲೆತದರಿಂದ ದೇವರ ಶಿಕ್ಷೆಗೆ ಒಳಗಾಗಿ ವಾಗ್ದತ್ತವಾದ ದೇಶವನ್ನು ನೋಡಲಾರದೆ ಹೋದಳು.

ಗುಣುಗುಟ್ಟುವ ಜನಾಂಗಕ್ಕಾಗಿ ನೀರು ಬಂಡೆಯಿಂದ ಹರಿದು ಬಂದದ್ದು. ಸ. ೨೦, ೨–೧೩.

ವ. ೨. ಆಗ ಸಭೆಗೆ ನೀರು ಇಲ್ಲದೆ ಇರಲಾಗಿ, ಅವರು ಮೋಶೆ ಆರೋನರಿಗೆದು
ರಾಗಿ ಕೂಟ ಮಾಡಿ ಕೊಂಡರು. ೩. ಮತ್ತು ಜನಾಂಗವು ಮೋಶೆಯೊಡನೆ ಎದುರಾ

ಅಂಕೆ. ೨೦, ೨—೧೩.

ಡಿ ಹೇಳಿದ್ದೇನಂದರೆ: ನಮ್ಮ ಸಹೋದರರು ಯೆಹೋವನ ಮುಂದೆ ಮಡಿದು ಹೋ
ದಲ್ಲಿ೧) ಮಡಿದೆವಾದರೆ ಲೇಸಕಟ! ೪. ನಾವೂ ನಮ್ಮ ದನವೂ ಇಲ್ಲಿ ಸಾಯುವ
ಹಾಗೆ ಯಾಕೆ ಯೆಹೋವನ ಕೂಟವನ್ನು ಈ ಅರಣ್ಯಕ್ಕೆ ಬರಲೀಸಿದಿರಿ? ೫. ಮತ್ತು
ಯಾಕೆ ಬಿತ್ತನೆಯೂ ಅಂಜೂರವೂ ದ್ರಾಕ್ಷೇ ತೋಟವೂ ದಾಳಿಂಬರವೂ೨) ಕುಡಿ
ಯುವ ನೀರೂ ಇಲ್ಲದ ಈ ಕೆಟ್ಟ ಸ್ಥಳಕ್ಕೆ ಬರಲೀಸುವ ಬಗ್ಯೆ ನಮ್ಮನ್ನು ಮಿಶ್ರದಿಂದ ಏರ
ಲೀಸಿದಿರಿ?

೧. ಕನಾನ ದೇಶವನ್ನು ಹೊಂಚಿ ನೋಡಿ ಬಂದ ಚಾರರಾದ ಹತ್ತು ಮಂದಿ ಈ ಸ್ಥಳದಲ್ಲಿ ವ್ಯಾಧಿಯಿಂದ ಫಕ್ಕನೆ ಸತ್ತು ಹೋಗಿ ಈಗ ೩೭ ವರ್ಷವಾಗಿತ್ತು. ನೀರು ಇಲ್ಲದ ಕಾರಣ ಇದೇ ತೆರದಿಂದ ಹುಟ್ಟಿದ ಕಲಹವು ಹದಿನೇಳನೆ ಸಂಧಿಯಲ್ಲಿಯೂ ಬರೆದದೆ. ಅದು ಪಯಣದ ಮೊದಲನೆ ವರ್ಷದಲ್ಲಿ ಹೋರೆಬ್ ಬೆಟ್ಟದ ಅಡಿಯಲ್ಲಿ ಉಂಟಾಯಿತು.

೨. ಇಸ್ರಯೇಲನವರು ಮುಂಚೆ ವಾಸವಾಗಿದ್ದ ಮಿಶ್ರದ ಕೀಳ್ನಾಡಿನಲ್ಲಿ ಹುಟ್ಟುತ್ತಿರುವ ಮೇಲಾದ ಫಲಗಳ ಹೆಸರುಗಳು ಇಲ್ಲಿ ಬರೆದವೆ.

ವ. ೬. ಆಗ ಮೋಶೆ ಆರೋನರು ಕೂಟದ ಮುಂದಿನಿಂದ ಸಾಕ್ಷಿಯ ಗುಡಾರದ
ಬಾಗಲಿಗೆ ಬಂದು, ಮೋರೆ ಕೆಳಗಾಗಿ ಬೀಳಲು, ಯೆಹೋವನ ಮಹಿಮೆ ಅವರಿಗೆ ಕಾ
ಣಿಸಿ ಕೊಂಡಿತು. ೭. ಮತ್ತು ಯೆಹೋವನು ಮೋಶೆಗೆ ನುಡಿದದ್ದೇನಂದರೆ: ೮.
ಕೋಲು ತಕ್ಕೊಂಡು, ನೀನೂ ನಿನ್ನ ಅಣ್ಣನಾದ ಆರೋನನೂ ಸಭೆಯನ್ನು ಕೂಡಿಸಿ
ಕೊಂಡು, ಅವರ ಕಣ್ಣುಗಳ ಮುಂದೆ ಬಂಡೆಗೆ ನುಡಿಯಿರಿ೧). ಆಗಲದು ತನ್ನ ನೀರು
ಕೊಡುವದು. ಕೊಡಲು, ಅವರಿಗೆ ಬಂಡೆಯೊಳಗಿಂದ ನೀರು ಹರಿಸಿ, ಸಭೆಯನ್ನೂ
ಅವರ ದನಗಳನ್ನೂ ಕುಡಿಸು. ೯. ಬಳಿಕ ಮೋಶೆ ಯೆಹೋವನ ಎದುರಿನಿಂದ, ಅವನ
ವನಿಗೆ ಬೆಸಸಿದಂತೆ, ಕೋಲು ತಕ್ಕೊಂಡನು. ೧೦. ಮತ್ತು ಮೋಶೆ ಆರೋನರು ಕೂಟ
ವನ್ನು ಬಂಡೆಯ ಮುಂದೆ ಕೂಡಿಸಿ, ಅವರಿಗೆ ಹೇಳಿದ್ದು: ಮಾರ್ಮಲವರೇ, ಕೇಳಿರಿ!
ನಾವು ಈ ಬಂಡೆಯೊಳಗಿಂದ ನಿಮಗೆ ನೀರು ಹರಿಸ ಬೇಕೋ೨)? ೧೧. ಮತ್ತು ಮೋ
ಶೆ ಕೈಯೆತ್ತಿ, ತನ್ನ ಕೋಲಿನಿಂದ ಬಂಡೆಯನ್ನು ಇಮ್ಮೆ ಬಡಿದನು೩). ಆಗ ಬಹಳ ನೀರು
ಹೊರಗೆ ಬರಲು, ಸಭೆಯೂ ಅವರ ದನಗಳೂ ಕುಡಿದವು. ೧೨. ಬಳಿಕ ಯೆಹೋ
ವನು ಮೋಶೆ ಆರೋನರಿಗೆ ಹೇಳಿದ್ದು: ನೀವು ಇಸ್ರಯೇಲನ ಮಕ್ಕಳ ಕಣ್ಣುಗಳ ಮುಂ
ದೆ ನನ್ನನ್ನು ಪರಿಶುದ್ಧ ಮಾಡುವದಕ್ಕೆ೪) ನನ್ನಲ್ಲಿ ನಂಬಿಕೆಯಿಡದೆ೫) ಇದ್ದ ಕಾರಣ, ನೀ
ವು ಈ ಕೂಟವನ್ನು ನಾನು ಅವರಿಗೆ ಕೊಟ್ಟ ದೇಶದಲ್ಲಿ ಬರಲೀಸರಿ. ೧೩. ಇಸ್ರಯೇ
ಲನ ಮಕ್ಕಳು ಯೆಹೋವನಿಗೆ ಎದುರಾಡಿದ್ದಲ್ಲಿ ಅವನು ಅವರಲ್ಲಿ ತನ್ನನ್ನು ಪರಿಶುದ್ಧ
ಮಾಡಿ ಕೊಂಡ೬) ಎದುರಾಟದ ನೀರೆಂಬದು೭) ಇದೇ.

ಅಂಕೆ. ೨೦, ೬—೧೩.

೧. ಯೆಹೋವನು ಬಂಡೆಗೆ ಬಡಿಯಿರಿ ಎಂದಲ್ಲ, ನುಡಿಯಿರಿ ಎಂದು ಅಪ್ಪಣೆ ಕೊಟ್ಟನು. ಹೀಗೆ ಮಾಡಿ, ಬಂಡೆಯನ್ನು ಬಡಿಯದೆ, ಯೆಹೋವನ ಹೆಸರಿನಿಂದ ಮಾತಾಡಿದರಾದರೆ, ನೀರು ಹರಿದು ಬರಲು, ಆದ ಅದ್ಭುತವು ಯೆಹೋವನಿಂದಲೇ ಉಂಟಾಯಿತೆಂದು, ನೆರೆಬೈಲಾಗುತ್ತಿತ್ತು.

೨. ಈ ವರೆಗೆ ದೇವರ ನೀತಿಯ ಶಿಕ್ಷೆಗಳನ್ನು ಶಾನೆ ತೆರದಿಂದ ಸೈರಿಸಿದರೂ, ತಮ್ಮ ಒಡೆಯನ ಪರಿಶುದ್ಧತ್ವಕ್ಕೆ ಹೆದರದೆ, ಅನನುಕೂಲವಾದ ಮನಸ್ಸನ್ನು ಬಿಡಲೊಲ್ಲದ ಜನಾಂಗದ ಅವಿಧೇಯತ್ವವನ್ನು ನಿಧಾನವಾಗಿ ತಾಳುತ್ತಾ ಬಂದ ಮೇಲೆ, ಮೋಶೆ ಈಗ ತಾಳ್ಮೆಯನ್ನು ಮರತು, ವಿಪರೀತವಾದ ಪ್ರಶ್ನೆಯನ್ನು ಕೇಳಿ, ಅಪುರೂಪವಾದ ಮುಮ್ಮಡಿಯ ತಪ್ಪು ಮಾಡಿದನು. ಅವನ ಜೀವನದಲ್ಲೆಲ್ಲಾ ಅವನ ದೃಢವಾದ ನಂಬಿಕೆಗೆ ಇಂಥ ಮೋಸವಾದದ್ದು ತೋರುವದಿಲ್ಲ. ಇಲ್ಲಿ ಅವನು ಮಾಡಿದ ತಪ್ಪು ಏನಂದರೆ: ಈ ವಚನದ ಮಾತು ೧, ಅವನು ಉದ್ಯೋಗಸಾಧನೆಯಿಂದ ಬೇಸರಾದದ್ದನ್ನೂ, ೨, ದೇವರು ತಿರಿಗಿ ಒತ್ತಾಸೆ ಮಾಡುವನೋ ಏನೋ ಎಂತ ಅನುಮಾನ ಪಟ್ಟದ್ದನ್ನೂ, ೩, ತನ್ನನ್ನೂ ತನ್ನ ಕೋಲನ್ನೂ ಮಿಗೆ ನಂಬಿದ್ದನ್ನೂ ತೋರಿಸುವದು. ಈ ಪಾಪಕ್ಕೆ ೧೨ನೆ ವಚನದಲ್ಲಿ ಬರೆದ ಶಿಕ್ಷೆಯು ನೇಮಕವಾಯಿತು.

೩. ನೀರು ಹರಿಸ ಬೇಕೆಂತ, ದೇವರ ಅಪ್ಪಣೆಯಂತೆ, ಬಂಡೆಗೆ ನೆಟ್ಟನೆ ಬೆಸಸದೆ, ಕರ್ತನ ಸಹಾಯದಿಂದ ಶಾನೆ ಸಲ ಅದ್ಭುತಕಾರ್ಯಗಳನ್ನು ನಡಿಸಿದ ಕೋಲಿನ ಮೇಲೆ ಅಧಿಕ ಭರವಸವಿಟ್ಟು, ಬಂಡೆಯನ್ನು ಕೋಲಿನಿಂದ ಬಡಿದನು. ಯಾಕೆಂದರೆ ದೇವರ ಅಪ್ಪಣೆಯಿಂದ ಅವನ ಕೈಯಲ್ಲಿ ಇರ ತಕ್ಕ ಕೋಲು (ವ. ೮) ಆತ್ಮಿಕ ಚೈತನ್ಯವು ಕುಂದಿದ ಈ ವೇಳೆಯಲ್ಲಿ ಅವನಿಗೆ, ಜನಾಂಗದ ಕೊರತೆ ತುಂಬುವದಕ್ಕೆ, ವಾಕ್ಯದ ಉಚ್ಚರಣೆಯೇ ಸಾಕೆಂದು ಹೇಳಿದ ಯೆಹೋವನ ಅಭಯದ ಮಾತಿಗಿಂತ ಅಧಿಕವೆಂದು, ಕಾಣಿಸುವದಾಯಿತು.

೪. ಮೋಶೆ ಆರೋನರು ಮಾಡಿದ ತಪ್ಪು ಯಾವದಂದರೆ: ಜನಾಂಗದವರು ಈ ಸಾರಿಯೂ ಮುಂಚಿನಂತೆ ವಾಡಿಕೆಯಾದ ಹಟದಿಂದಲೂ ಗರ್ವದಿಂದಲೂ ತಮಗೆದುರು ಗುಣುಗುಟ್ಟುತ್ತಾರೆಂದು ನೆನಸಿ, ನೀರಡಿಕೆಯಿಂದಲೇ ಪೇಚಾಡಿ ಗದ್ದಲಿಸುತ್ತಾರೆಂದು, ಎಣಿಕೆ ಮಾಡದೆ ಹೋದರು. ಬಳಿಕ ತಾವು ದೇವರ ಕೈಯಲ್ಲಿಯ ಕರಣಗಳೆಂದು, ಮರೆಯದೆ, ತಮ್ಮ ಬುದ್ಧಿಚಮತ್ಕೃತಿಗಳು ಕರ್ತನ ಅಪ್ಪಣೇ ಕೈಕೊಳ್ಳುವ ವಿಧೇಯತ್ವಕ್ಕಿಂತ ಲೇಸೆಂಬ ಆತ್ಮವಂಚನೆಯನ್ನು ತಳ್ಳಿ ಬಿಟ್ಟು, ಕರ್ತನ ಬೆಸಗದ ಮಾತನ್ನೇ ಅನುಸರಿಸುವದರಿಂದ, ತಮ್ಮ ಜನರಲ್ಲಿ ಪರಿಶುದ್ಧನಾದ ದೇವರ ಭಯಭಕ್ತಿಯನ್ನು ಹುಟ್ಟಿಸಿ ಬೆಳಿಸುವದು ಅವರಿಗೆ ಯುಕ್ತವಾಗಿತ್ತು. ಮೋಶೆ ತಾನೆಂಬದು ದೊಡ್ಡದೆಂಬ ಮರುಳಿನಿಂದ ಮೋಸ ಪಟ್ಟು, ಯೆಹೋವನ ಮಾನವನ್ನಲ್ಲದೆ ತನ್ನ ಸ್ವಂತ ಮಾನವನ್ನೂ ಅರಸಿದ್ದು ಅವನಿಗೆ ಪಾಪವಾಯಿತು.

೫. ಸ್ಥೂಲವಾದ ಅಕ್ರಮಗಳನ್ನು ನಡಿಸದೆ ಇರುವಂಥ ತನ್ನ ಸೇವಕರು ಆಗ್ಯಾಗ್ಯೆ ಮಾಡುವ ಸೂಕ್ಷ್ಮವಾದ ಪಾಪಗಳನ್ನು ಕರ್ತನು ಹೆಚ್ಚು ಜಾಗ್ರತೆಯಾಗಿ ಪರಿಶೋಧಿಸಿ, ಹೆಚ್ಚು ಕಠಿಣವಾಗಿ ಶಿಕ್ಷಿಸುವನು. ಇದಲ್ಲದೆ ಪರಿಶುದ್ಧ ಬರಹವು ಉತ್ತಮೋತ್ತಮರಾದ ದೇವದಾಸರ ಚರಿತ್ರದಲ್ಲಿ ಅವರ ತಪ್ಪುಗಳನ್ನೂ ಕುಂದುಗಳನ್ನೂ ಮಾಜದೆ, ನಿಶ್ಚಿಂತರಾದ ಮೈಗಳ್ಳರನ್ನು ಸಂತೈಸುವದಕ್ಕಾಗಿಯಲ್ಲ, ಒಳ್ಳೆಯವರನ್ನು ಎಚ್ಚರಿಸುವದಕ್ಕಾಗಿಯೇ ಸರಾಳವಾಗಿ ವಿವರಿಸುವದು.

೬. ತನ್ನ ಜನಾಂಗವನ್ನು ಇಕ್ಕಟ್ಟಿಗೆ ತಪ್ಪಿಸುವದರಿಂದಲೂ, ಮೋಶೆ ಆರೋನರ ಉತಾವಳಿಯಾದ ಅವಿಧೇಯತ್ವವನ್ನು ದಂಡಿಸುವದರಿಂದಲೂ, ಇವೆರಡು ವಿಧದಿಂದ ಯೆಹೋವನು ಅತ್ಯಂತ ಕರುಣಾನೂ ಅತ್ಯಂತ ನೀತಿವಂತನೂ ಆಗಿರುವ ತನ್ನ ಅತೀಂದ್ರಿಯವಾದ ಪರಿಶುದ್ಧತ್ವವನ್ನು ಪ್ರಮಾಣಿಸಿದನು.

೭. ಇಬ್ರಿಯದಲ್ಲಿ ಈ ಹೆಸರು ಮೆರೀಬಾ ಎಂದು ಅನ್ನಿಸಿ ಕೊಳ್ಳುತ್ತದೆ. ಹೊರ. ೧೭, ೭. ದ್ವಿತೀ. ೩೦, ೩೧ ಸರಿ ನೋಡ ಬೇಕು.

ಎದೋಮಿನವರು ತಮ್ಮ ದೇಶವನ್ನು ಹಾದು ಹೋಗುವ ದಾರಿಯನ್ನು ಇಸ್ರಯೇಲನವರಿಗೆ ಕಟ್ಟುತ್ತಾರೆ. ಸ. ೨೦, ೧೪ -- ೨೧.

ವ. ೧೪. ಬಳಿಕ ಮೋಶೆ ಕಾದೆಷಿನಿಂದ೧) ಎದೋಮನ ಅರಸನ ಬಳಿಗೆ ದೂತರ
ನ್ನು ಕಳುಹಿ, ನಿನ್ನ ಸಹೋದರನಾದ೨) ಇಸ್ರಯೇಲನು ಹೀಗೆ ಹೇಳುತ್ತಾನೆ: ನಮಗೆ
ದೊರಕಿದ ತೊಂದರೆಯನ್ನೆಲ್ಲಾ ನೀನು ಬಲ್ಲೆ. ೧೫. ಏನಂದರೆ ನಮ್ಮ ಹಿರಿಯರು ಮಿಚ್ರ
ಕ್ಕೆ ಇಳಿದು ಹೋದದ್ದು; ನಾವು ಶಾನೆ ದಿವಸ ಮಿಚ್ರದಲ್ಲಿ ವಾಸವಾಗಿದ್ದದ್ದು; ಮತ್ತು
ಮಿಚ್ರದವರು ನಮಗೂ ನಮ್ಮ ಹಿರಿಯರಿಗೂ ಮೋಸ ಮಾಡಿದ್ದು. ೧೬. ಬಳಿಕ ನಾ
ವು ಯೆಹೋವನಿಗೆ ಮೊರೆ ಇಡಲು, ಅವನು ನಮ್ಮ ಶಬ್ದವನ್ನು ಕೇಳಿ, ದೂತನನ್ನು ಕ
ಳುಹಿ೩), ನಮ್ಮನ್ನು ಮಿಚ್ರದಿಂದ ಹೊರ ಬರಲೀಸಿದ್ದು. ಇಗೋ, ನಾವು ನಿನ್ನ ಮೇರೆ
ಯ ಕಡೆ ಊರಾದ ಕಾದೆಷಿನಲ್ಲಿದ್ಧೇವೆ. ೧೭. ನಮ್ಮನ್ನು ನಿನ್ನ ದೇಶವನ್ನು ಹಾದು
ಹೋಗಲೀಸ್ಯೆ. ಹೊಲವನ್ನೂ ದ್ರಾಕ್ಷೇ ತೋಟವನ್ನೂ ಹಾದು ಹೋಗೆವು. ಭಾವಿ
ಯಳ೪) ನೀರು ಕುಡಿಯೆವು. ರಾಜಮಾರ್ಗದಲ್ಲಿ ಹೋಗುತ್ತೇವೆ. ನಿನ್ನ ಮೇರೆ ಹಾದು
ಹೋಗುವನಕಾ ಬಲಗಡೆಗಾದರೂ ಎಡಗಡೆಗಾದರೂ ತಿರುಗೆವು, ಅಂದನು. ೧೮.
ಎದೋಮನು ಅವನಿಗೆ ಹೇಳಿದ್ದು: ನೀನು ನನ್ನನ್ನು ಹಾದು ಹೋಗಲಾರೆ; ಹೋದ
ರೆ, ನಾನು ಕತ್ತಿಯಿಂದ ನಿನ್ನನ್ನೆದುರಿಸುವ ಬಗ್ಯೆ ಹೊರಟು ಬರುತ್ತೇನೆ. ೧೯. ಆಗ ಇ
ಸ್ರಯೇಲನ ಮಕ್ಕಳು ಅವನಿಗೆ ಹೇಳಿದ್ದು: ಕಟ್ಟಿದ ಮಾರ್ಗದಲ್ಲಿ ಏರಿ ಹೋಗುತ್ತೇವೆ.
ಮತ್ತು ನಾವೂ ನಮ್ಮ ದನವೂ ನಿನ್ನ ನೀರು ಕುಡಿಯೋಣವಾದರೆ, ಅದರ ಬೆಲೆಯ
ಕೊಡುತ್ತೇವೆ; ನಮ್ಮ ಕಾಲುಗಳಿಂದ ಹಾದು ಹೋಗುವದಲ್ಲದೆ ಮತ್ತೇನೂ ಇಲ್ಲ.
೨೦. ಅವನು ಹೇಳಿದ್ದು: ನೀನು ಹಾದು ಹೋಗಲಾರೆ. ಮತ್ತು ಎದೋಮನು ಘಟ್ಟಿ
ದಳದಿಂದಲೂ ಗಡಸರಿಯಾದ ಕೈಯಿಂದಲೂ೫) ಅವನನ್ನು ಎದುರಿಸುವ ಬಗ್ಯೆ ಹೊ
ರಟನು. ೨೧. ಅಂತೂ ಎದೋಮನು ಇಸ್ರಯೇಲನನ್ನು ತನ್ನ ಗಡಿಯನ್ನು ಹಾದು
ಹೋಗಲೀಸಲಿಲ್ಲ. ಬಳಿಕ ಇಸ್ರಯೇಲನು ಅವನ ಕಡೆಯಿಂದ ತಿರುಗಿ ಕೊಂಡನು೬).

೧. ಇಸ್ರಯೇಲನವರು ತಿರಿಗಿ ಕಾದೆಷಿಗೆ ಬಂದ ಈ ವೇಳೆಯಲ್ಲಿಯೂ ಕನಾನ ದೇಶದ ತೆಂಕಣ ಮೇರೆಯ ಘಟ್ಟಗಳನ್ನು ದಳದಿಂದ ದಾಟಿ ದೇಶವನ್ನು ಹೊಗುವದಕ್ಕೆ ಕೈ ಸಾಲದೆಂದು, ತಿಳು ಕೊಂಡರು. ಹೀಗಿರಲಾಗಿ ಕನಾನ ದೇಶವನ್ನು ಮೂಡಣ ಕಡೆಯಿಂದ ಹೊಗುವ ಬಗ್ಯೆ ಸೇಯಿರ್ ಬೆಟ್ಟಗಳ ಸಾಲನ್ನು ಪಡುವಲದಿಂದ ಮೂಡಣ ಕಡೆಗೆ ವಿಂಗಡಿಸುವ ಘೋವ್ಯೆರೆಂಬ ಹೆಸರುಳ್ಳ ತಗ್ಗಿನ ದಾರಿ ಹಿಡಿದು, ಎದೋಮನ್ನು ಹಾದು ಹೋಗ ಬೇಕಾಗಿತ್ತು. ಈ ದಾರಿಯಿಂದಲವರು ಸಾವಿನ ಕಡಲಿನ ಮೂಡಣ ತೀರದಲ್ಲಿ ಪಯಣ ಮಾಡುತ್ತಾ ಕನಾನ ದೇಶದ ಹೆಚ್ಚು ಬೈಲಾದ ಗಡಿಗೆ ಬರುತ್ತಿದ್ದರು.

೨. ಇಸ್ರಯೇಲನವರಿಗೂ ಎದೋಮಿನವರಿಗೂ ಯಾಕೋಬ ಏಸಾವರ ತಂದೆಯಾದ ಇಸಾಕನು ಮೂಲತಂದೆಯಾಗಿದ್ದದರಿಂದ, ಅವರು ಇಲ್ಲಿ ಒಡಹುಟ್ಟಿದವರೆಂದು, ಹೆಸರ್ಗೊಳ್ಳುತ್ತಾರೆ.

ಅಂಕೆ. ೨೦, ೨೨—೨೯.

೩. ಈ ದೂತನ ವಿಷಯವಾಗಿ ಹೊರ. ೧೪, ೧೯ ಮುಂತಾದದರಲ್ಲಿಯೂ, ೨೩, ೨ನೆಯಲ್ಲಿಯೂ ಬರೆದದ್ದನ್ನು ನೆನಪು ಮಾಡಿ ಕೊಳ್ಳ ತಕ್ಕದ್ದು.

೪. ಬೆಯೇರೆಂಬ ಇಬ್ರಿಯ ಪದದ ಮೂಲಾರ್ಥವೇನಂದರೆ, ತೋಡಿದ್ದು. ಎದೋಮಿನಲ್ಲಿ ಮಳೆಯು ಕಾನೆ ಅರಬಾದ್ದದರಿಂದ, ಆ ದೇಶದವರು ದೊಡ್ಡ ದೊಡ್ಡ ತೊಟ್ಟಿಗಳನ್ನು ಅಲ್ಲಲ್ಲಿ ಅಗಿದು, ಮುಂಗಾರೆ ಹಿಂಗಾರೆಗಳ ನೀರು ಬಚ್ಚಲು ಗುಂಡಿಗಳಲ್ಲಿ ಜೋಪಾನದಿಂದ ಕೂಡಿಸುವರು.—ಇಸ್ರಯೇಲನವರು ಎದೋಮಿನವರ ಹತ್ತಿರ, ಕ್ರಯ ಕೊಡದೆ, ತುಸವಾದರೂ ಬೇಡಲೊಲ್ಲದವರಾಗಿದ್ದರು. ಇದರಲ್ಲಿ ಅವರ ಮೂಲತಂದೆಯಾದ ಅಬ್ರಹಾಮನ ಗುಣವು ಕಾಣುವದು. ಉತ್ಪ. ೧೪, ೨೧—೨೪.

೫. ಮೋಶೆ ಎರಡನೆ ಸಾರಿ ಕಳುಹಿಸಿದ ದೂತರ ಮಾತಿಗೆ ಸಹ ಜಗಳಗಂಟರಾದ ಎದೋಮಿನವರು ಕಿವಿ ಕೊಡದೆ ಹೋದರು.

೬ ನ್ಯಾಯಾಧಿ. ೧೧, ೧೭. ೧೮.

ಆರೋನನ ಮರಣ. ವ. ೨೨—೨೯.

ವ. ೨೨. ಬಳಿಕ ಇಸ್ರಯೇಲನ ಮಕ್ಕಳು ಎಲ್ಲಾ ಸಭೆಯಾಗಿ ಕಾದೆಷಿನಿಂದ ಹೊರಟು, ಹೋರ್ ಬೆಟ್ಟಕ್ಕೆ೧) ಬಂದರು. ೨೩. ಆಗ ಯೆಹೋವನು ಮೋಶೆ ಆರೋನರಿಗೆ ಎದೋಮಿನ ಗಡಿಯ ಮೇಲಣ ಹೋರ್ ಬೆಟ್ಟದಲ್ಲಿ ಹೇಳಿದ್ದೇನಂದರೆ: ೨೪. ಆರೋನನು ತನ್ನ ಜನಕ್ಕೆ ಕೂಡಿಸಿ ಕೊಳ್ಳುವದು೨); ಯಾಕೆಂದರೆ ನೀವು ಎದುರಾಟದ ನೀರಿನ ಬದೀಲಿ ನನ್ನ ಬಾಯಿಗೆ ಎಡರಿದರಿಂದ೩), ನಾನು ಇಸ್ರಯೇಲನ ಮಕ್ಕಳಿಗೆ ಕೊಟ್ಟ ದೇಶದಲ್ಲಿ ಬಾರನು. ೨೫. ಆರೋನನನ್ನೂ ಅವನ ಮಗನಾದ ಎಲಿಯೇಜರನನ್ನೂ ಕರಕೊಂಡು, ಅವರನ್ನು ಹೋರ್ ಬೆಟ್ಟವನ್ನೇರಿಸಿ, ೨೬. ಆರೋನನನ್ನು ತನ್ನ ವಸ್ತ್ರಗಳನ್ನು ತೆಗದಿಡಿಸಿ, ಅವನ್ನು ಅವನ ಮಗನಾದ ಎಲಿಯೇಜರನಿಗೆ ತೊಡಿಸು; ಮತ್ತು ಆರೋನನು ಅಲ್ಲಿ ಕೂಡಿಸಿ ಕೊಂಡು ಸಾಯುವದು೪). ೨೭. ಬಳಿಕ ಮೋಶೆ ಯೆಹೋವನು ಬೆಸಸಿದಂತೆ ಮಾಡಲಾಗಿ, ಅವರು ಸಭೆಯೆಲ್ಲಾದರ ಕಣ್ಣಾರೆ ಹೋರ್ ಬೆಟ್ಟವನ್ನೇರಿದರು. ೨೮. ಮತ್ತು ಮೋಶೆ ಆರೋನನನ್ನು ತನ್ನ ವಸ್ತ್ರಗಳನ್ನು ತೆಗದಿಡಿಸಿ, ಅವನ್ನು ಅವನ ಮಗನಾದ ಎಲಿಯೇಜರನಿಗೆ ತೊಡಿಸಿದನು೫); ಆಗಲಾರೋನನು ಅಲ್ಲಿ ಬೆಟ್ಟದ ತುದಿಯಲ್ಲಿ ಸತ್ತನು. ಬಳಿಕ ಮೋಶೆ ಎಲಿಯೇಜರರು ಬೆಟ್ಟದಿಂದ ಇಳಿದರು. ೨೯. ಆರೋನನು ತೀರಿ ಹೋದನೆಂದು, ಸಭೆಯೆಲ್ಲಾ ನೋಡಲಾಗಿ, ಇಸ್ರಯೇಲನ ಮನೆಯೆಲ್ಲಾ ಮೂವತ್ತು ದಿವಸ ಅತ್ತರು.

೧. ಇಸ್ರಯೇಲನವರ ದಂಡು ಹೆಚ್ಚು ಕಡಿಮೆಯಾಗಿ ಒಂದು ದಿನದ ದಾರಿಯ ದೂರಕ್ಕೆ ತೆಂಕಣ ಪಯಣ ಮಾಡುತ್ತಾ ಅರಬಾ ತಗ್ಗಿನ ಮಾರ್ಗವಾಗಿ ಎಲಾನಿಕವೆಂಬ ಕೆಂಪು ಕಡಲಿನ ಕೊಲ್ಲಿಗೆ ಹೋಯಿತು. ಈ ದಾರಿ ಹಿಡಿದು ಪಯಣ ಮಾಡುವವರಾಗಿ ಸೇಯಿರ್ ಘಟ್ಟಗಳ ಅಡಿಯ ತಗ್ಗಾದ ಹುಲ್ಲುಗಾವಲುಗಳಲ್ಲಿ ಮಂದೆಗಳನ್ನು ಮೇಯಿಸುತ್ತಾ ಎದೋಮಿನ ಗಡಿ ಆಗ್ಯಾಗ್ಯೆ ದಾಟೋಣವಾಗಿದ್ದೀತು. ಹ್ಯಾಗಾದರೂ ಅರಬಿಯರು ಆರೋನನ ಸಮಾಧಿಯ ಸ್ಥಳವೆಂದು ಇಂದಿನ ವರೆಗೆ ನಂಬುತ್ತಾ ಬರುವ ಹೋರ್ ಬೆಟ್ಟವು

ಕಾಲಗತಿಯಿಂದ ಉಂಟಾದ ಎದೋಮಿನ ರಾಜಪಟ್ಟಣವಾದ ಪೇತ್ರಾ ಇಲ್ಲವೆ ಶೈಲ ಇದ್ದ ಸ್ಥಳಕ್ಕೆ ಹತ್ತರವಾಗಿದೆ.

೨. ಮೂಲಪಿತೃಗಳ ಚರಿತ್ರದಲ್ಲಿ ಬಳಿಕೆಯಾದ ಈ ಇಂಪು ಮಾತು ಇಲ್ಲಿ ನಡೆಯುವ ಆರೋನನ ಜೀವಾಂತ್ಯದ ಕಥೆಯಲ್ಲಿ ತಿರಿಗಿ ಶೇರುವದನ್ನು ಪರಾಮರಿಸ ತಕ್ಕದ್ದು. ಅವನು ಆಗ್ಯಾಗ್ಯೆ ಹೇಡಿಯಾಗಿ ತಪ್ಪು ಮಾಡಿದರೂ, ವಿಶೇಷವಾಗಿ ಹೆಚ್ಚು ಪ್ರಾಯದವನಾದ ಬಳಿಕ, ಕರ್ತನಿಗೆ ನೆರೆನಂಬಿಕೆಯುಳ್ಳವನಾಗಿದ್ದದರಿಂದ, ಪರಿಶುದ್ಧ ಬರಹದಲ್ಲಿ ಅವನಿಗೆ ಪ್ರಾಪ್ತವಾದ ಈ ಮಾನಕ್ಕೆ ಯೋಗ್ಯನಾಗಿ ಕಾಣುತ್ತಾನೆ. ತನ್ನ ಜನಾಂಗವನ್ನು ಇಲ್ಲವೆ ತನ್ನ ತಂದೆಗಳನ್ನು ಕೂಡೋಣವೆಂಬ ಪದವು ಪರಜೀವದ ಆಶೆಯನ್ನಲ್ಲದೆ ಮರಣದ ಮೇಲೆ ಉತ್ತಮವಾದ ನೂತನ ಜೀವವು ತೊಡಗುವದೆಂಬ ವಿಶ್ವಾಸವನ್ನು ಘಟ್ಟಿಯಾಗಿ ಕೈಕೊಳ್ಳುವ ಬುದ್ಧಿಯಿಂದ ಹುಟ್ಟಿಯದೆ.

೩. ಅಂದರೆ ನನ್ನ ಬಾಯಿಂದ ಬಂದ ಮಾತು ಮೀರಿದಿರಿ.

೪. ಇನ್ನೊಮ್ಮೆ ಅವನ ಮರಣವು ಅವನು ಮಾಡಿದ ತಪ್ಪಿನ ಶಿಕ್ಷೆಯೆಂಬದನ್ನು ದೇವರು ನೆನಪು ಮಾಡುತ್ತಾನೆ.

೫. ಪ್ರಧಾನಯಾಜಕನ ವಸ್ತ್ರಧಾರಣೆಯು ಪ್ರಧಾನಯಾಜಕೋದ್ಯೋಗಪ್ರವೇಶದ ಗುರ್ತಾಗಿತ್ತು.

ಅರಾದ ರಾಜನ ಅಪಜಯ. ಸ. ೨೧, ೧—೩.

ವ. ೧. ಬಳಿಕ ತೆಂಕಣದಲ್ಲಿ ವಾಸಿಸುವ ಕನಾನದವನಾದ ಅರಾದ ರಾಯನು[೧],
ಇಸ್ರಯೇಲನು ಅಥರೀಮ್[೨] ದಾರಿಯಿಂದ ಬರುತ್ತಾನೆಂದು ಕೇಳಲು, ಅವನೊಡನೆ
ಕಾದಿ, ಕೆಲವರನ್ನು ಕೈಶೆರೆಯಾಗಿ ಮೈದನು. ೨. ಆಗ ಇಸ್ರಯೇಲನು ಯೆಹೋವನಿಗೆ
ಹರಿಕೆ ಹೇಳಿ ಕೊಂಡು, ನೀನು ಈ ಜನಾಂಗವನ್ನು ನನ್ನ ಕೈಯಲ್ಲಿ ಕೊಟ್ಟೇ ಕೊಟ್ಟರೆ, ಅ
ವರ ಪಟ್ಟಣಗಳನ್ನು ಶಪಿಸಿ ಹಾಳು ಮಾಡುತ್ತೇನೆ[೩], ಅನ್ನಲಾಗಿ, ೩. ಯೆಹೋವನು
ಇಸ್ರಯೇಲನ ಶಬ್ದವನ್ನು ಕೇಳಿ, ಕನಾನದವನನ್ನು ಕೊಟ್ಟನು. ಬಳಿಕ ಇಸ್ರಯೇಲನು
ಅವನನ್ನೂ ಅವನ ಪಟ್ಟಣಗಳನ್ನೂ ಶಪಿಸಿ ಹಾಳು ಮಾಡಿದನು. ಮತ್ತು ಆ ಸ್ಥಳಕ್ಕೆ
ಹಾಳೂರು[೪] ಎಂದು ಹೆಸರಿಟ್ಟನು.

೧. ಪಲೆಸ್ತೀನದ ತೆಂಕಣ ಕಡೆಯಲ್ಲಿರುವ ಅರಾದ ರಾಜನು ಇಸ್ರಯೇಲನವರ ಬೆನ್ನಿನಲ್ಲಿ ಬೀಳುವದಕ್ಕೆ ಇದೇ ಒಳ್ಳೇ ಹೊತ್ತೂ ಒಳ್ಳೇ ಎಡೆಯೂ ಎಂದು ತಿಳು ಕೊಂಡನು. ಇಲ್ಲಿಯೇ ಇಸ್ರಯೇಲನವರು ಅರಣ್ಯಸಂಚಾರದ ಆರಂಭದಲ್ಲಿ, ಚಂಡಿತನದಿಂದ ದೇವರ ಅಪ್ಪಣೆ ಮೀರಿದಾಗ, ಅಮಲೇಕನವರು ಕನಾನದವರು ಇವರ ಸಂಗಡ ಮಾಡಿದ ಕಾಳಗದಲ್ಲಿ ಸೋತು ಹೋಗಿದ್ದರು. ೧೪, ೪೫. ಈಗಲವರು ಬಹಳ ಇಕ್ಕಟ್ಟಿನಲ್ಲಿದ್ದರು, ಹ್ಯಾಗಂದರೆ ಮೂಡಣ ಕಡೆಯಲ್ಲಿ ಎದೋಮಿನವರು ಅವರಿಗೆ ಮಾರ್ಗ ಕಟ್ಟಿದರು. ತೆಂಕಣದಲ್ಲಿ ಅಮಲೇಕನವರು ಕಾದುವದಕ್ಕೆ ನಿಂತರು. ಪಡುವಲಲ್ಲಿ ದೊಡ್ಡ ದೊಡ್ಡ ಮಳಲ್ನಾಡು ಅವರಿಗೆ ಅಡ್ಡವಾಗಿತ್ತು. ಹೀಗಿರಲಾಗಿ ಅರಾದ ರಾಜನು ತನ್ನ ಬಲ ಕಡಿಮೆ ಎಂದು ತಿಳಿದರೂ, ಇಸ್ರಯೇಲನವರ ಸಂಗಡ ಕಾದಿ ಗೆಲ್ಲ ಬಹುದೆಂದು, ನಂಬಿ ಮೋಸವಾದನು.

೨. ಈ ಪದವು ಊರಿನ ಹೆಸರು. ಲೂಥೆರನೂ ವುಲ್ಗಾತ ಎಂಬ ಭಾಷಾಂತರವೂ "ಹೊಂಚುಗಾರರ ಮಾರ್ಗದಿಂದ" ಎಂತ ಕಲ್ಪಿಸಿದ ಟೀಕು ಭಾಷಾಭಾವಾನುಕೂಲವಾದದ್ದಾಗಿ ತೋರುವದಿಲ್ಲ. ಸೆಪ್ತುವಗಿಂತ ಎಂಬ ಭಾಷಾಂತರದಲ್ಲಿಯೂ ನಮ್ಮ ಟೀಕಿನ ಪ್ರಕಾರ ಅಥರೀಮ್ ಎಂಬದು ಹೆಸರಾಗಿ ಬರೆದದೆ.

೩. ಇಬ್ರಿಯ ಪದದ ಅರ್ಥವೇನಂದರೆ: ದೇವರಿಗೆ ಮೀಸಲಾಗಿರಿಸಿ, ಹಾಳು ಮಾಡುತ್ತೇನೆಂತ, ಹರಿಕೇ ಹೇಳುವದು. ಈ ಹರಿಕೆಯು ದೇವರ ಅಪ್ಪಣೆಗೆ ಒಪ್ಪಿಕೆಯಾಗಿತ್ತು. ಲೇವಿ. ೨೭, ೨೮.

೪. ಈ ಹೆಸರು ಮುಂಚಿನ ಸ್ಥಳದಲ್ಲಿ (ಸ. ೧೪, ೪೫ರಲ್ಲಿ) ಬರೆದದ್ದು. ಆದರೆ ಅಲ್ಲಿಯ ಚರಿತ್ರದ ವೇಳೆಯಲ್ಲಿ ಅದು ಉಂಟಾಗಿದ್ದಿಲ್ಲ. ಅದು ಈಗಲೇ ಹುಟ್ಟಿತೆಂಬದು ಈ ಸಂಧಿಯ ತುದಿಯಲ್ಲಿ ಕಾಣುವದು. ಚರಿತ್ರಕರ್ತನು ತನಗೆ ಬಳಿಕೆಯಾದ ಹೆಸರನ್ನು ಮುಂಚಿನ ಸ್ಥಳದಲ್ಲಿ ಪ್ರಯೋಗಿಸಿದ್ದಾನೆ ಅಷ್ಟೆ. ಈ ಹರಿಕೆ ತೀರಾ ನೆರವೇರಿದ್ದು ಯೆಹೋಷು. ೧೨, ೧೪ರಲ್ಲಿಯೂ ನ್ಯಾಯಾಧಿ. ೧, ೧೬. ೧೭ರಲ್ಲಿಯೂ ಬರೆದದೆ. ದ್ವಿತೀ. ೧, ೪೪ರ ಪ್ರಕಾರ ಅದು ಕನಾನ ದೇಶದೊಳಗಣದ್ದಲ್ಲ, ಸೇಯಿರಿಗೆ ಸಂಬಂಧವಾಗಿದ್ದು, ಪಲೆಸ್ತೀನದ ಗಡಿಯ ಹೊರಗಣ ನಾಡಾಗಿತ್ತು. ಅದರ ಮುನ್ನಿನ ಹೆಸರು ಜೆಫಥ್. ಸಿಮೆಯೋನ ಯೂದರು ಅದನ್ನು ದಿಟ್ಟವಾಗಿ ಕೈವಶ ಮಾಡಿ ಕೊಂಡಂದಿನಿಂದಲೇ ಅದಕ್ಕೆ ಹಾಳೂರೆಂಬ ಹೆಸರುಂಟಾಯಿತು. ಈ ವೇಳೆಯಲ್ಲಿ ಇಸ್ರಯೇಲನವರು ಅದನ್ನು ಕಾದಿ ಗೆದ್ದ ಬಳಿಕ, ಅದನ್ನು ಹಾಳು ಮಾಡಿ ಹರಿಕೇ ಸಲ್ಲಿಸಿದ್ದಲ್ಲದೆ, ಸ್ವಾಧೀನ ಮಾಡಿ ಕೊಳ್ಳಲಿಲ್ಲ.

ಕಂಚಿನ ಹಾವು. ವ. ೪—೯.

ವ. ೪. ಬಳಿಕ ಅವರು ಹೋರ್ ಬೆಟ್ಟದಿಂದ ಕೆಂಪು ಕಡಲಿನ ಮಾರ್ಗವಾಗಿ ಹೊ
ರಟು, ಎದೋಮ್ ದೇಶವನ್ನು ಸುತ್ತಿ ಕೊಳ್ಳಲಾಗಿ೧), ಪ್ರಜೆಯ ಪ್ರಾಣವು ಮಾರ್ಗ
ದಲ್ಲಿ ಕುಂದಿತು. ೫. ಆಗ ಪ್ರಜೆಯು ದೇವರಿಗೂ ಮೋಶೆಗೂ ಎದುರ್ನುಡಿದು, ನಾ
ವು ಅರಣ್ಯದಲ್ಲಿ ಸಾಯುವ ಹಾಗೆ ನಮ್ಮನ್ನು ಮಿಚ್ರದಿಂದ ಯಾಕೆ ಏರಲೀಸಿದಿರಿ?
ಯಾಕೆಂದರೆ ಇಲ್ಲಿ ರೊಟ್ಟಿ ಇಲ್ಲ, ನೀರು ಇಲ್ಲ. ನಮ್ಮ ಪ್ರಾಣವು ಹುರುಳಿಲ್ಲದ ರೊಟ್ಟಿ
ವಾಕರಿಸುತ್ತದೆ೨), ಅಂದಿತು. ೬. ಆಗ ಯೆಹೋವನು ಜನಾಂಗದೊಳಗೆ ಉರಿ ಹಾ
ವುಗಳನ್ನು ಕಳುಹಿಸಿದನು೩). ಅವು ಜನರನ್ನು ಕಚ್ಚಿದರಿಂದ, ಶಾನೆ ಜನರು ಸತ್ತರು.
೭. ಆದದರಿಂದ ಜನರು ಮೋಶೆಯ ಹತ್ತರ ಬಂದು, ಹೇಳಿದ್ದು: ಪಾಪ ಮಾಡಿದ್ಧೇವೆ,
ಏನಂದರೆ ಯೆಹೋವನಿಗೂ ನಿನಗೂ ಎದುರಾಡಿದ್ಧೇವೆ. ಅವನು ನಮ್ಮ ಮೇಲಣ
ಹಾವನ್ನು ತಿರುಗಿಸುವ ಹಾಗೆ, ಅವನಿಗೆ ಪ್ರಾರ್ಥನೆ ಮಾಡು. ಆಗ ಮೋಶೆ ಪ್ರಜೆಯ
ನಿಮಿತ್ತವಾಗಿ ಪ್ರಾರ್ಥನೆ ಮಾಡಲು, ೮. ಯೆಹೋವನು ಮೋಶೆಗೆ ಹೇಳಿದ್ದು: ಒಂ
ದು ಉರಿ ಹಾವನ್ನು ಮಾಡಿ ಕೊಂಡು, ಒಂದು ಗಣೆಯ ಮೇಲೆ ಇಡು೪). ಆಗ ಕಚ್ಚ
ಲ್ಪಟ್ಟವರೆಲ್ಲರು, ಅದರ ಮೇಲೆ ಕಣ್ಣಿಟ್ಟರೆ, ಬದುಕುವರು೫). ೯. ಆಗ ಮೋಶೆ ಕಂಚಿನ
ಹಾವನ್ನು ಮಾಡಿ, ಅದನ್ನು ಗಣೆಯ ಮೇಲೆ ಇಡಲಾಗಿ, ಆದದ್ದೇನಂದರೆ, ಹಾವು
ಒಬ್ಬನನ್ನು ಕಚ್ಚಿದರೆ, ಅವನು ಕಂಚಿನ ಹಾವಿಗೆ ಕಣ್ಣಿಟ್ಟರೆ, ಬದುಕಿದನು೬).

೧. ತೆಂಕಣ ಕಡೆಯಿಂದ ವಾಗ್ದತ್ತದೇಶದಲ್ಲಿ ಸೇರುವ ಬಗ್ಯೆ ಮಾರ್ಗ ಕಾಣದ್ದರಿಂದಲೂ, ಮೂಡಣ ಕಡೆಯಿಂದ ಪ್ರವೇಶ ಮಾಡ ಬೇಕೆಂದಿದ್ದವರಿಗೆ ಸರಿಯಾದಂಥ ಎದೋಮನ್ನು ಹಾದು ಹೋಗುವಂಥ ದಾರಿಯನ್ನು ಎದೋಮಿನವರು ಕಟ್ಟಿದ್ದದರಿಂದಲೂ, ಸಹಜಾತರಾದ ಇವರ ಸಂಗಡ ಕಾದಲಾಗದಿರಲಾಗಿ,

ಅಂಕೆ. ೨೧, ೪–೯.

ಇಸ್ರಯೇಲನವರು ಎದೋಮಿನ ಘಟ್ಟಗಳನ್ನು ಸುತ್ತಿಕೊಂಡು, ಬಳಿಕ ಬಡಗಿಗೆ ಹೋಗಿ, ಅಲ್ಲಿರುವ ಮೋವಾಬಿನ ಗಡಿಗೆ ಬರೋಣವಾಯಿತು.

೨. ಅವರು ಪಯಣದ ಕಷ್ಟಕ್ಕೂ, ಅನುದಿನದ ಆಹಾರವಾದ ಮನ್ನಾ ಎಂಬದಕ್ಕೂ ಬೇಸರ ಪಟ್ಟು, ತಿರಿಗಿ ಗುಣುಗುಟ್ಟಿದ ತಪ್ಪಿಗೆ ಈಗ ಹೆಚ್ಚಾದ ಶಿಕ್ಷೆ ಬಂದದ್ದು ಯುಕ್ತವಾದದ್ದೇ ಸರಿ.

೩. "ಉರಿ ಹಾವುಗಳನ್ನು." ಅವುಗಳ ಕಚ್ಚಾಟದಿಂದ ಶಾನೆ ಉರಿಯುವ ನೋವು ಹುಟ್ಟಿದ ಕಾರಣ, ಅವುಗಳಿಗೆ ಉರಿ ಹಾವುಗಳೆಂಬ ಹೆಸರುಂಟಾಯಿತು. ಈ ಶಬ್ದಕ್ಕೆ ಉಪಪದವಾದ ದರ್ಶಕಸರ್ವನಾಮವಾದ ಹ ಎಂಬದು ಇಬ್ರಿಯದಲ್ಲಿ ಕೂಡುವದು. ಇದನ್ನು ಕನ್ನಡಿಸ ಬೇಕಾದರೆ ಆ ಉರಿ ಹಾವುಗಳೆಂದು ಹೇಳಲಾದೀತು. ಇದರ ಅರ್ಥವೇನಂದರೆ, ಎಲ್ಲರಿಗೆ ಗೊತ್ತಾದ ಉರಿ ಹಾವುಗಳು. ಆ ಹಾವಿನ ಜಾತಿ ಯಾವದೆಂತ ಇಲ್ಲಿ ಸೂಚಿತವಾಗಿರುವದಿಲ್ಲ. ಇತ್ತಲಿನ ಕಾಲದ ಸಂಚಾರಿಗಳು ಆ ಕಡೆಯ ಕೆಂಪು ಕಡಲಿನ ಜಬ್ಬಲಿನಲ್ಲಿ ದೊಡ್ಡ ಹಾವುಗಳ ಬಹಳ ಜಾಡೆಗಳನ್ನು ಕಂಡುಕೊಂಡಿದ್ದಾರೆ. ಪೂರ್ವಕಾಲದವರಿಗೆ ಒಂದು ತರದ ಹಾವುಗಳು ಗೊತ್ತಾಗಿದ್ದವು. ಅವುಗಳ ಕಚ್ಚು ಜೇನುನೊಣದ ಕಚ್ಚಾಟದಂತೆ ವಿಷವಾಗಿದ್ದು, ಬಿಸಿಲು ಬರುವಾಗ ಉರಿದು ಉರಿದು ಹೆಚ್ಚುವ ನೋವು ಹುಟ್ಟಿಸುತ್ತಿತ್ತು. ಅವು ನೀರೊಳಗಿದ್ದರೆ ಅವಕ್ಕೆ ಉದಕಸರ್ಪವೆಂತಲೂ, ಭೂಮಿಯಲ್ಲಿದ್ದರೆ ಧರಾಸರ್ಪವೆಂತಲೂ ಹೆಸರಿಟ್ಟರು. ಅಂಥ ಜಾತಿಯ ಹಾವುಗಳು ಇಸ್ರಯೇಲನವರನ್ನು ಅಲ್ಲಿ ಕಾಡಿದವೆಂದು, ಊಹಿಸಬಹುದು. ಈ ಹಾವುಗಳ ಕಥೆಯನ್ನು ಓದಿ ಧ್ಯಾನಿಸುವವನಿಗೆ ಉತ್ಪ. ೩, ೧೫ರಲ್ಲಿ ಬರೆದದ್ದು ನೆನವರಿಕೆಯಾದೀತು.

೪. ಮೋಶೆ ಈ ಕಂಚಿನ ಹಾವನ್ನು ಅಡ್ಡಕೋಲು ಕಟ್ಟಿದ ಜಂತೆಯಲ್ಲಿ ತೂಗ ಹಾಕಿದನೆಂದು ತೋರುವದು. ಅದರ ಮೇಲೆ ನಂಬಿ ದೃಷ್ಟಿ ಇಟ್ಟವರೆಲ್ಲರಿಗೆ ಗುಣವಾದದರಿಂದ, ಅದು ಬಹಳ ಹೆಸರ್ವಾಶಿಯಾಯಿತು. ಬಳಿಕ ಜನರು ಅದಕ್ಕೆ ಪೂಜೆ ಮಾಡಲಿಕ್ಕೆ ತೊಡಗಿದರು. ಈ ಪೂಜೆಯು ಹಿಸ್ಕೀಯನ ಕಾಲದ ವರೆಗೂ ನಡೆಯುತ್ತಾ ಇರಲಾಗಿ, ಭಯಭಕ್ತಿಯುಳ್ಳ ಆ ಅರಸನು ಅದನ್ನು ಬೇರೆ ವಿಗ್ರಹಗಳೊಡನೆ ನಾಶಮಾಡಿದನು. ೨ ಅರಸು. ೧೮, ೪.

೫. ಗಣೆಯಲ್ಲಿ ತೂಗುತ್ತಿರುವ ಕಂಚಿನ ಹಾವಿನ ಮೇಲೆ ಕಣ್ಣಿಟ್ಟು, ಅದು ದೇವರ ಅಪ್ಪಣೆಯಿಂದ ರಚಿತವಾದದ್ದಾಗಿ, ಕ್ಷೇಮಕರವಾದ ದೇವರ ಕೃಪೆಯ ಗುರ್ತೂ ಮುಂಗಡವೂ ಎಂದೂ, ನಂಬಿ ನೋಡುವರಿಗೆ ವಿಷಪರಿಹಾರವಾಗುವದೆಂದೂ ವಿಶ್ವಾಸಿಸಿದವರೆಲ್ಲರು ಸ್ವಸ್ಥವಾದರು. ಕಚ್ಚಿದವರನ್ನೆಲ್ಲಾ ಕೊಲ್ಲುವ ಉರಿ ಹಾವು ಪಾಪಿಯನ್ನು ನಾಶಗೊಳಿಸುವ ಪಾಪವನ್ನು ಸೂಚಿಸುವಂಥಾದ್ದೇ ಸರಿ. ಆದಾಗ್ಯೂ ದೇವರ ಅಪ್ಪಣೆಯಿಂದುಂಟಾದ ಕಂಚಿನ ಹಾವು ನಂಬಿ ನೋಡಿದವರಿಗೆಲ್ಲಾ ವಿಷಪರಿಹಾರ ಮಾಡಿದದರಿಂದ, ಅದು ನಮ್ಮ ರಕ್ಷಕನಾದ ಯೇಸು ಕ್ರಿಸ್ತನಿಗೆ ಬಹಳ ಉಚಿತವಾದ ಮುಂಗುರ್ತಾಗಿತ್ತು. ನಾವು ದೇವರ ನೀತಿಯಾಗುವ ಹಾಗೆ ದೇವರು ಕ್ರಿಸ್ತನನ್ನು ನಮಗಾಗಿ ಪಾಪವಾಗಮಾಡಿದನೆಂದು, ೨ ಕೊರಿ. ೫, ೨೧ರಲ್ಲಿ ಬರೆದದೆ. ಮತ್ತು ಯೇಸು ತಾನೇ ಯೋಹಾ. ೩, ೧೪ನೆಯಲ್ಲಿ — ಮೋಶೆ ಅರಣ್ಯದಲ್ಲಿ ಹಾವನ್ನು ಎತ್ತಿದ್ದು, ತಾನು ಹಳೆ ಹಾವು ಕಡಿದ ಮನುಷ್ಯರನ್ನು ಪಾಪದಿಂದಲೂ ಮರಣದಿಂದಲೂ ರಕ್ಷಿಸುವದಕ್ಕಾಗಿ ಕ್ರೂಜೆಯಲ್ಲಿ ಎತ್ತಿಸಿ ಕೊಳ್ಳೋಣಕ್ಕೆ ಮುಂಗುರ್ತಾಗಿತ್ತೆಂದು, ಹೇಳುತ್ತಾನೆ. ಹಾವಿನ ವಿಷವು ಹಾವಿನ ರೂಪದ ದೃಷ್ಟಿಯಿಂದ ಪರಿಹಾರವಾದಂತೆ, ಆತ್ಮಿಕ ಮರಣವು ಮೃತನಾದವನ ಮೇಲಣ ವಿಶ್ವಾಸದೃಷ್ಟಿಯಿಂದ ಪರಿಹಾರವಾಗುವದು.

೬. ಕಡಿದ ಉರಿ ಹಾವುಗಳು ಮಡಿದು ಹೋಗಲಿಲ್ಲ. ಆದರೆ ಅದರ ವಿಷವು ಹುರುಳಿಲ್ಲದೆ ಹೋಯಿತು. ಪಾಪದಲ್ಲಿ ಬಿದ್ದ ಮನುಷ್ಯನು ಪಾಪಿಯಾಗಿರುವದೇ ಸರಿ. ಆದರೆ ನಂಬಿ ಪಾಪಪರಿಹಾರವನ್ನು ಪಡಕೊಂಡವನು ಪಾಪದಿಂದ ನಾಶವಾಗುವದಿಲ್ಲ.

೩೩೨ ಪಯಣದ ಕಡೇ ಮೆಟ್ಟುಗಳು, ಶೀಹೋನ ಓಗರ ಅಪಜಯವು.

ಅಂಕೆ. ೨೧, ೧೦ — ೩೫.

ಇಸ್ರಯೇಲನವರು ಮೋವಾಬದ ಬೈಲಿನ ಮಟ್ಟಿಗೂ ಮಾಡಿದ ಪಯಣದ ಕಡೇ ಮೆಟ್ಟುಗಳು, ಅರಸುಗಳಾದ ಶೀಹೋನ ಓಗರ ಅಪಜಯವು, ಇವುಗಳ ವಿವರವು. ಸ. ೨೧, ೧೦ — ೩೫.

ಈ ಪ್ರಕರಣದ ತಾತ್ಪರ್ಯಸಾರಾಂಶವೇನಂದರೆ: ಇಸ್ರಯೇಲನವರು ಎದೋಮದ ಘಟ್ಟಗಳ ಮೂಡಣ ಕಡೆಗೆ ಬಂದಾಗ, ಎದೋಮದವರು ಬಹಳವಾಗಿ ಹೆದರಿ, ಆ ಗಡಿಯಲ್ಲಿ ದುರ್ಗಗಳಿಲ್ಲದದರಿಂದ, ಇಸ್ರಯೇಲಿನವರ ದಂಡಿನ ಪಯಣಕ್ಕೆ ತಡೆ ಹಾಕಲಿಲ್ಲ. ಆದದರಿಂದ ದಂಡು ಅಡ್ಡಿಯಿಲ್ಲದೆ ಮೋವಾಬದ ಪ್ರಾಂತ್ಯದಲ್ಲಿಯಣ ಅಬರೀಮ್ ಬೆಟ್ಟದ ಬಳಿಗೆ ಬಂತು. ಆದರೆ ಕೊಂಚ ವೇಳೆಗೆ ಮುಂಚೆ ಅಮೋರನವರು ಪಡುವಲಿಂದ ಬಂದು, ಯೊರ್ದಾನ ನದಿಯ ಮೂಡಣ ದೇಶವನ್ನು ಹೊಕ್ಕು, ಅರ್ನೋನ ಯಬ್ಬೋಖ ಹೊಳೆಗಳ ನಡುವೆಯಣ ನಾಡನ್ನೆಲ್ಲಾ, ಮೋವಾಬನವರು ಅಮ್ಮೋನನವರು, ಇವರ ಕೈಯಿಂದ ಕಸ ಕೊಂಡು, ತಮಗೆ ವಶ ಮಾಡಿ ಕೊಂಡಿದ್ದರು. ಯೊರ್ದಾನ ನದಿಯ ಮೂಡಣ ಸೀಮೆಯೂ ದೇವರಿಂದ ತಮಗೆ ನೇಮಕವಾದದ್ದೆಂದು, ಇಸ್ರಯೇಲನವರು ಅರಿತಿದ್ದರೂ, ಆಗ ಮೋವಾಬ ದೇಶದ ಗಡಿಯಾದ ಅರ್ನೋನ ಹಳ್ಳಕ್ಕೆ ಬಂದ ಮೇಲೆ, ದಂಡು ಇಳಿಸಿ, ನೀತಿಯ ಪ್ರಕಾರ ಅಮೋರನವರ ಅರಸನಾದ ಶೀಹೋನನ ಬಳಿಗೆ ದೂತರನ್ನು ಕಳುಹಿಸಿ, ತನ್ನ ದೇಶವನ್ನು ಸಮಾಧಾನವಾಗಿ ಹಾದು ಹೋಗುವದಕ್ಕೆ ಅಪ್ಪಣೆ ಕೊಡಬೇಕೆಂತ, ಬೇಡಿ ಕೊಂಡರು. ಶೀಹೋನನು ಕತ್ತಿಯಿಂದ ಉತ್ತರ ಕೊಡುವದಕ್ಕೆ ಬರಲಾಗಿ, ಇಸ್ರಯೇಲನವರು, ಪರಕುಲದವನಾದ ಅರಸನೊಡನೆ ಕಾದುವದಕ್ಕೆ ಅಂಜದೆ, ಅವನ ದಳವನ್ನು ಹೊಡೆದು, ಅರ್ನೋನ ಯಬ್ಬೋಖ ಹೊಳೆಗಳ ನಡುವೆಯಣ ನಾಡನ್ನೆಲ್ಲಾ ಹಿಡಿದು ಕೊಂಡು, ಅದರ ನಿವಾಸಿಗಳನ್ನು ನಿರ್ಮೂಲ ಮಾಡಿ, ಕೊಳ್ಳೆಯನ್ನು ಹಂಚಿ ಕೊಂಡರು. ಬಳಿಕ ದಂಡು ಯಬ್ಬೋಖ ನದಿಯನ್ನು ದಾಟಿ, ಬಡಗು ದಿಕ್ಕಿಗೆ ಪಯಣ ಮಾಡಲಾಗಿ, ಸೈಂಧವನಾದ ಓಗೆಂಬ ಬಾಷಾನದ ಅರಸನು ದಳ ಕಟ್ಟಿ ಕೊಂಡು, ಇಸ್ರಯೇಲನವರೆದುರಿಗೆ ಬಂದನು. ಆದರೆ ಇಸ್ರಯೇಲನವರು ಎದ್ರೆಯಿಯಲ್ಲಿ ಅವನನ್ನು ಗೆದ್ದು, ಹೊಡೆದು, ಅವನ ಜನವನ್ನೆಲ್ಲಾ ನಿರ್ಮೂಲ ಮಾಡಿ, ಕೊಳ್ಳೆಯನ್ನು ಹಂಚಿ ಕೊಂಡು, ಗೆದ್ದು ಕೊಂಡ ದೇಶದಲ್ಲಿ ವಸ್ತಿಯಾದರು.

ಈ ಸಂಧಿಯಲ್ಲಿರುವ ಕೆಲವು ಮಾತುಗಳಿಗೆ ಟಿಪ್ಪಣಿ ಕಟ್ಟುವದೂ ಕೆಲವು ವಚನಗಳಿಗೆ ಟೀಕು ಮಾಡುವದೂ ವಿಹಿತವಾಗಿ ತೋರುವದು.

ವ. ೧೨. ಜಾರೆದ್ ಎಂಬ ಹಳ್ಳವು ಇಸ್ರಯೇಲನ ದಂಡಿನ ಕಡೇ ಪಯಣದ ಬೀಡುಗಳಲ್ಲಿ ಮೂರನೇದು. ೧ನೇದು ಓಬೋಥ್ ಎಂಬದು. ಈ ಪದದ ಅರ್ಥವೇನಂದರೆ: ಶಿದ್ದಿಗೆಗಳು. ಒಂದು ವೇಳೆ ಈ ಹೆಸರು ಅರಣ್ಯಸಂಚಾರವನ್ನು ತೀರಿಸಿದವರು ಇಲ್ಲಿ ನೀರಿನ ಶಿದ್ದಿಗೆಗಳನ್ನು ಹೊಸತಾಗಿ ತುಂಬುತ್ತಾ ಇದ್ದದರಿಂದ ಹುಟ್ಟಿಯದೆ. ೨ನೇದು ಇಯ್ಯೀಮ್. ಅದೇನಂದರೆ: ಹಾಳು ಗೋಡೆಗಳು. ಒಂದು ವೇಳೆ ಇದು ಮುನ್ನು ಹಾಳಾದ ಪಟ್ಟಣದ ಸ್ಥಳವಾಗಿತ್ತು. ಅಬರೀಮ್ ಎಂಬದಕ್ಕೆ ಸೆಪ್ತುವಗಿಂತದಲ್ಲಿ "ಆಚೆಯದು" ಎಂಬ ಟೀಕು ಬರೆದದೆ. ಆದರೆ ಅದು ಬೆಟ್ಟಗಳ ಹೆಸರೆಂದು, ತೋರುತ್ತದೆ. ಹ್ಯಾಗೂ, ಇಸ್ರಯೇಲನವರು ಮೋವಾಬ ದೇಶವನ್ನೆಲ್ಲಾ ಮೂಡಣ ಕಡೆಯಲ್ಲಿ ಸುತ್ತಿ ಕೊಂಡ ಮೇಲೆ, ಅದರ ಆಗಿನ ಗಡಿಯಾದ ಅರ್ನೋನ್ ಹೊಳೆಯ ಬಡಗಿನಲ್ಲಿ ವಸ್ತಿಯಾದ ಅಮೋರನವರ ದೇಶವನ್ನು ಹೊಗ ಬೇಕೆಂದಿದ್ದರು. ಜಾರೆದ್ ಹಳ್ಳವು ಯಾವದೆಂದು, ನಿಶ್ಚಯವಾಗಿರುವದಿಲ್ಲ. ಕೆಲವರು ಅದು ಸಾವಿನ ಕಡಲಿನ ತೆಂಕಣ ಕಡೆಯಲ್ಲಿ ಅದಕ್ಕೆ ಕೂಡುವಂಥ, ಪಡುವಲ ದಿಕ್ಕಿನಿಂದ ಬರುವಂಥ, ಈಗ ವಾದಿ ಎಲ್ ಅಹ್ಸ ಅನ್ನಿಸಿ ಕೊಳ್ಳುವಂಥ ಹಳ್ಳವೆಂತ, ನೆನಸುತ್ತಾರೆ; ಕೆಲವರು ಅದು ಅಹ್ಸ ಹಳ್ಳಕ್ಕೆ ಬಡಗು ಕಡೆಯಲ್ಲಿ ಸಾವಿನ ಕಡಲಿನಲ್ಲಿ ಬೀಳುವಂಥ ಕೇರೆಕ್ ಎಂಬದೆಂದು ಭಾವಿಸುತ್ತಾರೆ. ಇಸ್ರಯೇಲನವರು ಇಲ್ಲಿಗೆ ಬಂದ ಕಾಲದಲ್ಲಿ ಮಿಚ್ರದಿಂದ ಹೊರಟು ಬಂದ ಕಾದಾಳುಗಳೆಲ್ಲರು ತೀರಿ ಹೋಗಿದ್ದರೆಂದು, ದ್ವಿತೀ. ೨, ೧೬ನೆಯಲ್ಲಿ ಬರೆದದೆ.

ಅಂಕೆ. ೨೧, ೧೦ — ೩೫.

ವ. ೧೩. ಇಬ್ರಿಯದಲ್ಲಿ ಇಸ್ರಯೇಲನ ದಂಡು ಮೋವಾಬ ದೇಶಕ್ಕೂ ಅಮೋರನವರ ದೇಶಕ್ಕೂ ಮೇರೆಯಾದ ಅರ್ನೋನ ಹೊಳೆಯ ಆಚೆಯಲ್ಲಿ ಇಳು ಕೊಂಡಿತೆಂದು, ಬರೆದದೆ. ಯಾಕೆಂದರೆ ಮೋಶೆ ಕನಾನ ದೇಶದಲ್ಲಿ ತಾನು ಶೇರದೆ ಇದ್ದರೂ, ವಾಗ್ದತ್ತವಾದ ದೇಶದಲ್ಲಿ ವಸ್ತಿಯಾದವನಂತೆ ದಿಕ್ಕುಗಳನ್ನು ಸೂಚಿಸುತ್ತಾನೆ ಇದು ಅವನಿಗೆ ವಾಡಿಕೆಯಾಗಿತ್ತೆಂಬದು ದ್ವಿತೀ. ೧, ೧ರಲ್ಲಿಯೂ, ಅಂಕೆ. ೩೨, ೧೯ರಲ್ಲಿಯೂ ಸಂಶಯವಿಲ್ಲದೆ ತೋರುವದು.

ವ. ೧೪ — ೧೮. ಶಿಕ್ಷೆಯ ಕಾಲವು ತೀರಿ ಹೋದ ಮೇಲೆ, ಕರ್ತನ ದಯೆಯು ಅವರಿಗೆ ತಿರುಗಿ ಬಂದಾಗ, ಎಳೇ ಪ್ರಾಯದವರಾದ ಕಾದಾಳುಗಳು ಎದೆಗುದಿಯಾಗಿ ಗಂಡರಾದರು. ಇದಕ್ಕೆ ಕರ್ತನ ಕಾಳಗಗಳೆಂಬ ಹೆಸರುಳ್ಳ, ಕಳದು ಹೋದಂಥ, ಜಯಗೀತಗಳ ಗ್ರಂಥವು ಸಾಕ್ಷಿಯಾಗಿದೆ. ಅದರಲ್ಲಿದ್ದ ಕೆಲವು ಪದಗಳು ಉಳಿದು, ೧೪ನೆ, ೧೫ನೆ, ೧೭ನೆ, ೧೮ನೆ ವಚನಗಳಲ್ಲಿ ಬರೆದವೆಂದು, ತೋರುತ್ತದೆ. ಇಸ್ರಯೇಲನವರ ಚರಿತ್ರದ ಬೇರೆ ಕೆಲವು ಗ್ರಂಥಗಳು ಕಳದು ಹೋದವೆಂಬ ಜಾಡೆಗಳು ಕಾಣುವ ಪರಿಶುದ್ಧ ಬರಹದ ಸ್ಥಳಗಳು ಯಾವವೆಂದರೆ: ಯೆಹೋಶು. ೧೦, ೧೩. ೧ ಸಮು. ೧೦, ೨೫. ೨ ಸಮು. ೧, ೧೮. ೧ ಅರಸು. ೪, ೩೨; ೧೧, ೪೧. ೧ ದಿನಚ. ೩೦, ೨೯. ೨ ದಿನಚ. ೯, ೨೯; ೧೨, ೧೫; ೨೦, ೩೪; ೨೧, ೧೨; ೩೩, ೧೮. ಎಜ್ರ. ೫, ೧೭; ೬, ೨. ಎಸ್ತೇರ. ೯, ೨೦. ಯೆರೆ. ೫೧, ೬೦. ಆದರೆ ದೇವರ ವಾಕ್ಯವು ಕಳದು ಹೋಗದೆ, ಪರಿಶುದ್ಧ ಲೇಖನವೆಂಬದರಲ್ಲಿ ಉಳಿದಿರುತ್ತದೆ. ಹಿಂದೆ ಸೂಚಿತವಾದ ನಾಲ್ಕು ವಚನಗಳಲ್ಲಿ ಬರೆದಿರುವ ಕರ್ತನ ಕಾಳಗಗಳೆಂಬ ಗ್ರಂಥದ ಪದಗಳ ಯಥಾರ್ಥವಾದ ಭಾಷಾಂತರವು ಯಾವದಂದರೆ: ವ. ೧೪. ೧೫. "ಆದದರಿಂದ ಯೆಹೋವನ ಕಾಳಗಗಳ ಗ್ರಂಥದಲ್ಲಿ ನುಡಿದದ್ದು: ಬಿರುಘಾಳಿಯಿಂದ ವಾಹೆಬನ್ನೂ, ಹಳ್ಳಗಳನ್ನೂ, ಅರ್ನೋನ ನದಿಯನ್ನೂ, ಆರ್ ಪಟ್ಟಣದ ವಾಸನಕ್ಕೆ ತಗಲುವಂಥ, ಮೋವಾಬದ ಮೇರೆಗೆ ಮುಟ್ಟುವಂಥ, ಹಳ್ಳಗಳ ಪ್ರವಾಹಗಳನ್ನೂ" — ಅಂದರೆ, ಇಸ್ರಯೇಲನು ಆಕ್ರಮಿಸಿ ಕೊಂಡನು. ವಾಹೆಬೆಂಬದು ಯಾವ ಊರೆಂದು, ನಮಗೆ ಗೊತ್ತಿಲ್ಲ. ಪದದ ಅಭಿಪ್ರಾಯವೇನಂದರೆ, ಇಸ್ರಯೇಲನ ದಳವು ಬಿರುಘಾಳಿಯಂತೆ ಬಂದು, ವಿವರಿತವಾದ ಸ್ಥಳಗಳನ್ನೆಲ್ಲಾ ತಡೆಯಿಲ್ಲದೆ ಗೆದ್ದು ಕೊಂಡಿತು. ಆರೆಂಬದು ಮೋವಾಬದ ಮುನ್ನಿನ ಪ್ರಾಮುಖ್ಯ ಪಟ್ಟಣವಾಗಿತ್ತು. ಶೀಃಹೊನ ರಾಜನು ಮೋವಾಬದ ಒಂದು ಭಾಗವನ್ನು ಆಕ್ರಮಿಸಿದ ಕಾಲಕ್ಕೆ ಮುಂಚೆ ಅದು ಮೋವಾಬ ದೇಶದ ನಡುವೆಯಲ್ಲಿತ್ತು. ಆದರೆ ಈಗ ಅದು ದೇಶದ ಬಡಗು ಮೇರೆಯಲ್ಲಿತ್ತು. ವ. ೧೬. ೧೭. ೧೮. "ಅಲ್ಲಿಂದ ಭಾವಿಗೆ ಬಂದರು. ಯೆಹೋವನು ಮೋಶೆಗೆ, ಪ್ರಜೆಯನ್ನು ಕೂಡಿಸು. ಅವರಿಗೆ ನೀರು ಕೊಡುತ್ತೇನೆಂದು ಹೇಳಿದ ಭಾವಿ ಇದೇ. ಆಗ ಇಸ್ರಯೇಲನು ಈ ಹಾಡು ಹಾಡಿದನು: ಭಾವಿಯೇ ಏರು! ಅದಕ್ಕೆ ಗಾನ ಮಾಡಿರಿ! ಭಾವಿಯನ್ನು ಪ್ರಭುಗಳು ಅಗಿದರು. ಜನಾಂಗದ ಅಧಿಪತಿಗಳು ಗದೆಯಿಂದಲೂ ಕೋಲುಗಳಿಂದಲೂ ತೋಡಿಸಿದರು." ಹಾಗಂದರೆ ಮುಖ್ಯಸ್ಥರು ಗದೆಯಿಂದಲೂ ಕೋಲುಗಳಿಂದಲೂ ಜನರನ್ನು ಎಚ್ಚರಿಸಿ, ನಡಿಸಿ, ಆ ಭಾವಿಯನ್ನುಂಟು ಮಾಡಿದರು.

ವ. ೨೭. ಆದದರಿಂದ ಕಬ್ಬಿಗಳು[೧)] ಹೇಳುವದೇನಂದರೆ[೨)]: ಹೆಷ್ಬೋನಕ್ಕೆ ಬನ್ನಿ, ಶೀಃಹೊನನ ನಗರವು ಕಟ್ಟಲ್ಪಟ್ಟು ಘಟ್ಟಿಯಾಗುವಂತೆ. ೨೮. ಯಾಕಂದರೆ ಬೆಂಕಿ ಹೆಷ್ಬೋನದಿಂದ, ಉರಿ ಶೀಃಹೊನನ ಪಟ್ಟಣದಿಂದ ಹೊರಟು, ಮೋವಾಬದ ಆರ್ ನಗರವನ್ನೂ ಅರ್ನೋನ ನದಿಯ ಮೇಡುಗಳ ಒಡೆಯರನ್ನೂ ತಿಂದಿತು. ೨೯. ನಿನಗಯ್ಯೋ ಮೋವಾಬವೇ, ಕಮೋಷನ ಪ್ರಜೆಯೇ, ಮಡಿದು ಹೋಗಿದ್ದೀ. ಅಮೋರನವರ ಅರಸನಾದ ಶೀಃಹೊನನಿಗೆ ಅವನ ಗಂಡು ಮಕ್ಕಳನ್ನು ಪಲಾಯನವಾಗಲೂ

ಅವನ ಹೆಣ್ಣು ಮಕ್ಕಳನ್ನು ಕೈಸೆರೆಯಾಗಲೂ ಕೊಡಲ್ಪಡಬೇಕಾಯಿತು. ೩೦. ಅವರಿಗಂಬೆಸೆದೆವು. ಹೆಷ್ಬೋನ್ ದೀಬೋನದ ವರೆಗೆ ಮಡಿದು ಹೋಗಿದೆ. ಅವರನ್ನು ಮೇದೆಬಕ್ಕೆ ತಗಲುವ ನೊಫಃಹದ ವರೆಗೆ ಅಳಿಸಿದೆವು."

೧. ಇಲ್ಲಿ ಬರೆದ ಪದಗಳೂ ಕರ್ತನ ಕಾಳಗಗಳೆಂಬ ಗ್ರಂಥದವುಗಳೆಂದು, ತೋಚುತ್ತದೆ. ಬೇರೆ ಬೇರೆ ಯುದ್ಧದಲ್ಲಿ ಜಯವನ್ನು ಹೊಂದಿದ್ದಕ್ಕೆ ಇಸ್ರಾಯೇಲನ ದಂಡಿನವರು ಹೆಚ್ಚಿಚ್ಚಾಗಿ ಸಂತೋಷ ಪಟ್ಟ ಸಮಯಗಳಲ್ಲಿ ಅವರಲ್ಲಿದ್ದ ಕಬ್ಬಿಗಳು ಜಯಶಾಲಿಗಳ ಶೌರ್ಯವನ್ನು ಹಾಡಿ ಕೊಂಡಾಡಿದರೆಂದು, ಕಾಣುತ್ತದೆ.

೨. ಈ ಪದದ ಅಭಿಪ್ರಾಯವೇನಂದರೆ: ಜಯಶಾಲಿಯಾದ ಇಸ್ರಾಯೇಲನು ಅಮೋರನವರ ರಾಜಪಟ್ಣವಾದ ಹೆಷ್ಬೋನವನ್ನು ಹಾಳು ಮಾಡಿದ ಬಳಿಕ, ಎಲ್ಲರನ್ನು, ಅದನ್ನು ಇಸ್ರಾಯೇಲನವರ ಪಟ್ಣವಾಗಿ ಹೊಸ್ತಾಗಿ ಕಟ್ಟಿಸುವದಕ್ಕೆ, ಕರೆದು ಎಚ್ಚರಿಸುತ್ತಾನೆ. ಅದನ್ನು ಹೊಗಳುವ ಬಗ್ಯೆ ಮೋವಾಬದವರನ್ನೂ ಅಮ್ಮೋನನವರನ್ನೂ ಜೈಸಿದಂಥ, ಅದರ ಮುಂಚಿನ ಅರಸನಾದ ಶೀಹೋನನ ಪರಾಕ್ರಮವನ್ನು ವರ್ಣಿಸುತ್ತಾನೆ. ಇಂಥವನನ್ನು ನಾನು ಸೋಲಿಸಿ, ಅವನ ರಾಜ್ಯವನ್ನು ಹಾಳು ಮಾಡಿದ್ದೇನೆಂತ, ಜಯಗಾನವನ್ನು ಹಾಡುತ್ತಾನೆ. ವಾದಿ ಹೆಷ್ಬೋನೆಂಬ ತಗ್ಗಿನ ಕೊನೆಯಲ್ಲಿ ಇಂದಿನ ವರೆಗೆ ಉಳಿದಿರುವ ಹೇರಳವಾದ ಹಾಳು ಗೋಡೆಗಳು, ಪೂರ್ವಕಾಲದಲ್ಲಿದ್ದ ನಗರದ ಮಹಿಮೆಯು ಅತಿಶಯವಾದದ್ದಾಗಿತ್ತೆಂದು, ಪ್ರಮಾಣಿಸುತ್ತವೆ.

ಇಸ್ರಾಯೇಲನವರು ಮೋವಾಬದ ಬೈಲುಸೀಮೆಯಲ್ಲಿ ದಂಡು ಇಳಿಸಿಕೊಂಡು, ಬೀಡು ಮಾಡಿದ ಕಾಲದ ವೃತ್ತಾಂತವು.

ಬಾಲಾಖ ಬಿಲೆಯಾಮರ ಸಂಗತಿ. ಸಂ. ೨೨–೨೪.

ಪೀಠಿಕೆಯು.

ಇಸ್ರಾಯೇಲನವರ ಜನಾಂಗವು ವಾಗ್ದತ್ತವಾದ ದೇಶದ ಹೊಸ್ತಿಲಿನ ಬಳಿಗೆ ಬಂದಾಗ, ಅದರ ಪ್ರವೇಶವಾಗ ತಕ್ಕ ವೇಳೆಗಿಂತ ಮುಂಚೆ, ಅವರ ದೇವರಾದ ಯೆಹೋವನು, ತಾನು ಶರಣಾಗತರಕ್ಷಕನಾಗಿದ್ದು, ತನ್ನನ್ನು ನಂಬಿದ ಅಬ್ರಹಾಮನ ಬೀಜವಾದ ವಂಶಕ್ಕೆ ನಂಬಿಕೆಯುಳ್ಳ ಬಲವಂತ ಸಹಾಯಕನೆಂಬದನ್ನು ಮಹಾ ಪೂರ್ವಕಾಲದ ಪದ್ಧತಿಗೆ ಪೂರ್ಣಾನುಕೂಲವಾದ ರೀತಿಯಾಗಿ ಚೋದ್ಯವಾದ ಪ್ರಮಾಣದಿಂದ ಪ್ರಕಟ ಮಾಡಿದನು. ಹ್ಯಾಗಂದರೆ, ಶೀಹೋನ ಓಗರೆಂಬ ಅರಸುಗಳು ಇಸ್ರಾಯೇಲನವರ ದಂಡಿನಿಂದ ಸೋತು ಹೋದಂದಿನಿಂದ, ಮೋವಾಬ ದೇಶದವರು ತಮ್ಮ ಹತ್ತರ ಸೇರಿದ ದೊಡ್ಡ ಜನಾಂಗಕ್ಕೆ ಶಾನೆ ಚಯಪಡುತ್ತಾ ಇರಲಾಗಿ, ಮೋವಾಬದ ರಾಜನಾದ ಬಾಲಾಖನು, ಇಸ್ರಾಯೇಲನ ದಳದ ಸಂಗಡ ಕಾದುವದಕ್ಕೆ ಧೈರ್ಯ ಸಾಲದದರಿಂದ, ಅಜ್ಞಾನಿಗಳಾದ ವಿಗ್ರಹಾರಾಧಕರಲ್ಲಿ ಬಳಿಕೆಯಾದ ಒಂದು ಮೋಸದ ಉಪಾಯವನ್ನು ಕಲ್ಪಿಸುತ್ತಾನೆ. ಏನಂದರೆ, ಹೆಸರ್ವಾಸಿಯಾದ ಒಬ್ಬ ದೀರ್ಘದರ್ಶಿಯನ್ನು ಕರೇ ಕಳುಹಿಸಿ, ಅವನಿಗೆ ಜಾರಿ ಸಂಬಳವಿತ್ತು, ಇಸ್ರಾಯೇಲನಿಗೆ ಶಾಪ ಕೊಡ ಬೆಸಸುತ್ತಾನೆ. ಬಿಲೆಯಾಮನೆಂಬ ಈ ಮಂತ್ರಗಾರನ ಸ್ಥಿತಿಗತಿಗಳು ನಾನಾ ಪ್ರಕಾರದಿಂದ ಪರಮಶ್ಚರ್ಯವಾಗಿಯೂ ಪರಸ್ಪರ ವಿರೋಧವಾಗಿ ತೋರುವ ಲಕ್ಷಣಮಯವಾಗಿಯೂ ಅವೆ. ಅವನು ಸತ್ಯದೇವನಾದ ಯೆಹೋವನ ಸೇವಕನಾಗಿದ್ದು, ಯೆಹೋವನ ಅಪ್ಪಣೆಯಿಲ್ಲದೆ ಏನೂ ನುಡಿಯಲಮ್ಮನು; ಆದಾಗ್ಯೂ ವಿಗ್ರಹಾರಾಧಕನಾದ ಅರಸನ ಬೆಸಗದಿಂದ ಸಂಬಳಕ್ಕಾಗಿ ದೀರ್ಘದರ್ಶನವನ್ನು ಹೇಳುತ್ತಾನೆ. ಈ ಬಿಲೆಯಾಮನು ಉಚ್ಚರಿಸಿದಂಥ, ಪೂರ್ವನಿರ್ಧಾರಲೇ

ಅಂಕೆ. ೨೨.

ಖನಗಳಲ್ಲಿ ಅತಿ ಗಾಂಭೀರ್ಯಕಾವ್ಯಲಕ್ಷಣಮಯವಾಗಿಯೂ, ಘನತರ ತಾತ್ಪರ್ಯಪೂರ್ಣವಾಗಿಯೂ ಇರುವಂಥ, ಪ್ರವಾದನೆಗಳು ಇಸ್ರಯೇಲನ ಆಯಿಕೆಯ ಉದ್ದೇಶವನ್ನೂ ಮುಂದಣ ಗತಿಯನ್ನೂ ಬಲ್ಲವನಿಗೆ ಪ್ರಾಪ್ತವಾದ ಮರ್ಮಜ್ಞವಾದ ದೂರದೃಷ್ಟಿಯಿಂದಲೂ, ವರವಾಗ್ದತ್ತಬಾಧ್ಯವಾದ ಜನಾಂಗದ ಚರಿತ್ರದ ವಿಶೇಷವಾದ ಅರುವಿನಿಂದಲೂ ಹುಟ್ಟಿಯವೆ; ಆದಾಗ್ಯೂ ದೇವಾತ್ಮಪ್ರೇರಣೆಯಿಂದಲಲ್ಲದೆ ಪ್ರಕಟವಾಗಲಾರದ ಮರ್ಮಗಳನ್ನು ಮನಮುಟ್ಟುವ ದಿವ್ಯ ವಾಕ್ಚಾತುರ್ಯದಿಂದ ನುಡಿದವನಾದ ಉತ್ಕೃಷ್ಟ ಪುರುಷನ ಅಂತ್ಯವೇನಂದರೆ, ಇಸ್ರಯೇಲನ ಕತ್ತಿಯಿಂದ ಕಡಿಸಿ ಕೊಂಡು ಸತ್ತದ್ದು. ಸ. ೩೧, ೮. ಹಿಂದೆ ಪ್ರಸ್ತಾಪಿಸಿದ ಸಂಗತಿಗಳೆಲ್ಲಾ ಒಂದಕ್ಕೊಂದು ಸರಿ ಬೀಳುವ ಬಗೆಯನ್ನು ಗ್ರಹಿಸಿ ಕೊಳ್ಳುವಂತೆ, ವಿವೇಕದಿಂದ ತೂಗಿಸಿ ತಿಳಿಯ ಬೇಕಾದದ್ದೇನಂದರೆ: ಬಿಲೆಯಾಮನು ಫ್ರಾತ ನದಿಯ ಬಳಿಯಣ ಪೆಥೋರದಲ್ಲಿ ವಸ್ತಿಯಾಗಿದ್ದು, ಬಹು ಕಾಲದಿಂದ ದೊಡ್ಡ ಕಣಿಗನೂ ಮಂತ್ರಗಾರನೂ ಎಂಬ ಹೆಸರು ಪಡ ಕೊಂಡಂಥ ಪರಜನರವನಾದ ಮಹಾತ್ಮನಾಗಿದ್ದನು. ಅವನಲ್ಲಿದ್ದ ವಿದ್ಯೆಯು ಶುದ್ಧ ಭ್ರಮೆಯೆಂತಲೂ, ಅವನ ಮಾಟವು ಕಣ್ಣು ಕಟ್ಟಿದವರ ಮುಂದೆ ನಡಿಸಿದ ಕೈಚಾಳಕವೇ ಎಂತಲೂ, ಎಣಿಸಲಾಗದು. ಅತೀಂದ್ರಿಯ ವಸ್ತುಗಳನ್ನು ಗ್ರಹಿಸುವ ಶಕ್ತಿಯ ಗುಣವುಳ್ಳ ಬಿಲೆಯಾಮನು ಅಂಧಕಾರರಾಜ್ಯವರ್ತನೆಯಲ್ಲಿ ಬಳಿಕೆಯಾದ ಬಲಗಳನ್ನು ಪಡಕೊಂಡು, ಅದ್ಭುತಕಾರ್ಯಗಳನ್ನು ನಡಿಸಿದ್ದು ಉಂಟಾದೀತು. ಹ್ಯಾಗೂ, ಏಬೆರನ ವಂಶದಲ್ಲಿದ್ದ ಸಾಂಪ್ರದಾಯಿಕ ಜ್ಞಾನೋಪದೇಶದಿಂದಲಾಗಲಿ, ಯೆಹೋವನು ತನ್ನ ಜನಾಂಗವನ್ನು ಮಿಚ್ರದಿಂದ ಬಿಡಿಸಿ, ಅದರ ರಕ್ಷಣ ಪೋಷಣಗಳಿಗಾಗಿ ಮಾಡಿದ ಆಶ್ಚರ್ಯ ಕ್ರಿಯೆಗಳ ವರ್ತಮಾನದಿಂದಲಾಗಲಿ, ಎಲ್ಲಾ ದೇವರುಗಳಿಗಿಂತ ಯೆಹೋವನು ಅತಿ ಶಕ್ತನೆಂದು ತಿಳುಕೊಂಡು, ಯೆಥ್ರೋನನಂತೆ (ಹೊರ. ೧೮, ೧೧) ಯೆಹೋವನನ್ನು ತನ್ನ ದೇವರೆಂದು ಅಂಗೀಕರಿಸಿ ಪೂಜಿಸಿದನು. ಈವನ ಸುದ್ದಿಯನ್ನು ಬಾಲಾಖನು ಕೇಳಿ, ಪೂಜಾರಿಯು ಸ್ವದೇವತಾಂಶದವನಾಗಿದ್ದು, ಅದರ ಶಕ್ತಿಯನ್ನು ಸಾಧಿಸಲಧಿಕಾರಿಯಾಗಿದ್ದಾನೆಂಬ ಪರಜನಭಾವನೆಯ ಪ್ರಕಾರ, ಯೆಹೋವನ ಶಕ್ತಿಯು ಬಿಲೆಯಾಮನಿಗೆ ಅಧೀನವಾಗಿದೆಂತ ನೆನಸಿ, ಅವನನ್ನು ಯೆಹೋವನ ಜನಾಂಗಕ್ಕೆ ವಿರೋಧವಾಗಿ ಮಾಟ ನಡಿಸುವದಕ್ಕಾಗಿ, ಲಂಚ ಕೊಟ್ಟು, ತನ್ನ ಪಕ್ಷಕ್ಕೆ ಎಳೆಯುವ ಆಲೋಚನೆಯಿಂದ ದೂತರನ್ನು ಅವನ ಬಳಿಗೆ ಕಳುಹಿಸಿದನು. ಬಿಲೆಯಾಮನು ಹಣದ ಬೈಕೆಯಿಂದ ಮರುಳುಗೊಂಡು, ಯೇಸುವನ್ನು ಹಿಂಬಲಿಸದೆ ಯೇಸುವಿನ ಹೆಸರಿನಿಂದ ದೆವ್ವಗಳನ್ನು ಹೊರಡಿಸಿದವರಿಗೆ ಸರಿಯಾಗಿದ್ದನು. (ಮಾರ್ಕ. ೯, ೩೮. ಲೂಕ. ೯, ೪೯.) ಅವನು ವಿಶೇಷವಾಗಿ ಮಂತ್ರಗಾರನಾದ ಸೀಮೋನನಿಗೆ ಸಮಾನ ಮನೋಭಾವವುಳ್ಳವನಾಗಿದ್ದನು. (ಅಪೊ. ಕ್ರಿ. ೮, ೧೮ ಮುಂ.) ಸತ್ಯ ದೇವರ ಆರಾಧನೆ ಮಾಡುತ್ತಾ ಇದ್ದ ಲಾಬಾನನು ವಿಗ್ರಹಪೂಜೆಯನ್ನು ಸಹ ನಡಿಸುವವನಾಗಿದ್ದನೆಂತಲೂ, ಒಡಂಬಡಿಕೆಯ ಧರ್ಮಕ್ಕೆ ಶೇರದೆ ಇದ್ದ ಮೆಲ್ಕಿಜೇದೆಕನು ಮಹೋನ್ನತನಾದ ದೇವರ ಯಾಜಕನೆಂದನ್ನಿಸಿ ಕೊಂಡನೆಂತಲೂ ನೆನಸಿ ಕೊಂಡರೆ, ನಿಜವೂ ಸುಳ್ಳೂ ರಾಡಿಯಾಗಿ ಕಲಬೆರಿಕೆಯಾದ ಮನಸ್ಸುಳ್ಳ ಒಬ್ಬ ಪ್ರವಾದಿಯು ಒಡಂಬಡಿಕೆಯ ಹೊರಗಣ ಜನರಲ್ಲಿಯೂ ದೇವರಿಗೆ ಇದ್ದನೆಂಬದನ್ನು ಅಲ್ಲಗಳೆಯಲಾಗದು. ಹೊಸ ಒಡಂಬಡಿಕೆಯ ಬರಹದಲ್ಲಿಯೂ, ದಿವ್ಯ ಪ್ರಕಟಣೆಯ ವಾಕ್ಯಗಳನ್ನು ಹೊಂದಿ ಸಾರುವ ಸಾಮರ್ಥ್ಯವಾಗಿರುವ ಪ್ರವಾದನವರವನ್ನು ಪಡಕೊಂಡವರ ಪ್ರಾಣಗಳು, ಪರವಶದ ಸ್ಥಿತಿಯಲ್ಲಿದ್ದ ಸಮಯದಲ್ಲಿ ಆಗ್ಗಾಗ್ಯೆ ಪರಿಶುದ್ಧಾತ್ಮಕ್ಕೆ ವಿರೋಧವಾದ ಅಂಧಕಾರದ ಬಲಗಳಿಗೆ ಅಧೀನವಾಗುವ ಮೋಸದಲ್ಲಿ ಬೀಳೋಣವುಂಟಾಯಿತೆಂದು, ಸೂಚಿತವಾಗಿದೆ; ಹ್ಯಾಗೆಂದರೆ ಅಪೊಸ್ತಲರು ದುರಾತ್ಮಗಳಿಂದ ಸಭೆಯಲ್ಲಿ ಹುಟ್ಟಲಾಗುವ ಮೋಸಗಳನ್ನರಿತು, ಎಲ್ಲಾ ಆತ್ಮಗಳನ್ನು ಸುಮ್ಮನೆ ನಂಬದೆ, ಅವುಗಳನ್ನು ಪರೀಕ್ಷಿಸ ಬೇಕೆಂತ, ಸಭೆಯವರನ್ನು ಎಚ್ಚರಿಸಿ, (೧ ಯೋಹಾ. ೪, ೧ ಮುಂ.; ೧ ಥೆಸ್ಸ. ೫, ೨೧. ೨೨.) ಅವುಗಳ ಪರೀಕ್ಷಣೆಯ ಪ್ರಮಾಣವನ್ನು ಬೋಧಿಸುತ್ತಾರೆ. (ರೋಮಾ. ೧೨, ೬; ೧ ಕೊರಿ. ೧೨, ೧ ಮುಂ.) ಅಪರೂ

ಪವಾಗಿ ಪ್ರವಾದನವರವನ್ನು ಪಡ ಕೊಂಡವರಾದ ಅನ್ಯ ಜನರವರಿಗೂ, ಸಭೆಯಲ್ಲಿ ದೇವರಿಂದ ನೇಮಕವಾದ ಉದ್ಯೋಗದಲ್ಲಿ ಶೇರಿದ ಪ್ರವಾದಿಗಳಿಗೂ ಹೆಚ್ಚು ಕಡಿಮೆ ಉಂಟೆಂದು, ಚನ್ನಾಗಿ ತಿಳಿದಿರ ಬೇಕು. ಏನಂದರೆ ಇವರು ಪರಿಶುದ್ಧಾತ್ಮದ ಪ್ರೇರೇಪಣೆಯಿಂದಲೇ ಮಾತಾಡುತ್ತಾ, ಒಬ್ಬೊಬ್ಬನು ದೇವರಾಜ್ಯದ ಮುಂದಣ ಗತಿಯ ಕಾರ್ಯಗಳನ್ನೆಲ್ಲಾ ತಿಳಿಯದೆ, ಮಿತಿಯಾದ ಅರುಹುಳ್ಳವರಾಗಿದ್ದರೂ, ಆಮೋಸ. ೩, ೭ರ ಪ್ರಕಾರ, ತನ್ನ ಸೇವಕರಾದ ಪ್ರವಾದಿಗಳಿಗೆ ತನ್ನ ಮರ್ಮವನ್ನು ಪ್ರಕಟ ಮಾಡದೆ, ಕರ್ತನಾದ ಯೆಹೋವನು ಯಾವದನ್ನಾದರೂ ಮಾಡಲಿಲ್ಲ. ಇದಲ್ಲದೆ ಭೂಲೋಕದಲ್ಲಿ ಉಂಟಾಗ ತಕ್ಕ ದೇವರಾಜ್ಯಮಹಿಮಾಸಿದ್ಧಿಯ ಪ್ರಕಟಣೆಯೇ ನಿರ್ಮಲ ದೇವವಾಕ್ಯದ ಬೋಧನೆಯಲ್ಲಿ ನೆಲೆಗೊಂಡಿರುವ ಪರಿಶುದ್ಧಾತ್ಮದ ಪ್ರವಾದನೆಯ ಒಂದೇ ಮುಖ್ಯ ತಾತ್ಪರ್ಯವಾಗಿತ್ತು. ಆದರೆ ಬಿಲೆಯಾಮನ ಗುಣಭಾವಗಳು ಬೇರೆಯಾಗಿದ್ದವು. ಅವನು ಸಹಜ ಭಾವದ ಪ್ರವಾದನೆಯ ವರವುಳ್ಳವನಾಗಿದ್ದು, ಯೆಹೋವನ ಸೇವೆಯಲ್ಲಿ ಸತ್ಯವಾದದ್ದನ್ನು ಹೇಳುತ್ತಿದ್ದರೂ, ಅಶುದ್ಧವಾದ ಗೂಢ ತಂತ್ರಗಳ ನಡಿಸುವದನ್ನು ಬಿಡದೆ ಇದ್ದದರಿಂದ, ಸತ್ಯವನ್ನು ನಿರ್ಮಲವಾಗಿ ಗ್ರಹಿಸಲಧಿಕಾರಿಯಾಗದೆ ಹೋದನು. ಅರಸನಾದ ಬಾಲಾಖನು ಅಜ್ಞಾನಿಗಳಾದ ಪರಜನರ ಬುದ್ಧಿಯಿಂದ ಆಲೋಚನೆ ಮಾಡಿ, ಯೆಹೋವನ ಭಕ್ತನಾದ ದೀರ್ಘದರ್ಶಿಯು ಆತ್ಮಲೋಕವನ್ನು ತನಗೆ ವಶೀಕರಿಸುವದನ್ನಲ್ಲದೆ, ದೇವರ ಚಿತ್ತವನ್ನೂ ಸ್ವಾಧೀನ ಮಾಡಿ ಕೊಳ್ಳ ಬಲ್ಲವನೆಂದು, ನಂಬಿದನು. ಬಿಲೆಯಾಮನು ಇಸ್ರಯೇಲನ ವಿಷಯವಾಗಿ ಪ್ರವಾದನೆ ಹೇಳಲಪ್ಪಣೆ ಹೊಂದಿದವನಾಗಿ, ತಾನು ಒಡೆಯನಾದ ಯೆಹೋವನ ಕೈಕೆಳಗಿರುವವನೆಂತ, ಭಾವಿಸಿ ಕೊಂಡರೂ, ದೇವರ ಸೇವೆಯನ್ನೂ ಅರಸನ ಸೇವೆಯನ್ನೂ ಜೋಡಿಸ ಬಹುದೆಂತಲೂ, ಒಂದು ವೇಳೆ ದೇವರ ಚಿತ್ತವನ್ನು ತಿರುಗಿಸೋಣವಾದೀತು, ಆಗದೆ ಹೋದರೆ, ದಿವ್ಯಚಿತ್ತವು ಬದಲಾಗುವದನ್ನು ಕಾದು ಕೊಳ್ಳ ಬಹುದೆಂತಲೂ, ಕೋರುತ್ತಿರುವನು. ಒಂದು ವೇಳೆ, ಪರ ಜನರಾದ ದೀರ್ಘದರ್ಶಿಗಳಲ್ಲಿ ಹಲಬರು ಮಾಡಿದ ಪ್ರಕಾರ, ಗೂಢಾರ್ಥವಾಕ್ಯಯುಕ್ತಿಯಿಂದ ವಂಚನೆ ಮಾಡುವ ಯೋಚನೆ ಕಲ್ಪಿಸುತ್ತಿರುವನು. ಅವನು ಪಾಪದ ಉರ್ಲಿನಲ್ಲಿ ತೀರಾ ಸಿಕ್ಕಿಕೊಳ್ಳುವದಕ್ಕಿಂತ ಮುಂಚೆ, ಯೆಹೋವನು ಅವನಿಗೆ ಬಾಲಾಖನ ದೂತರ ಸಂಗಡ ಹೋಗ ಬಾರದೆಂದು, ಅಪ್ಪಣೆ ಕೊಟ್ಟನು. ಬಳಿಕ, ಅವನು ದೇವರ ಮಾತು ಕೈಕೊಳ್ಳುತ್ತಾ ಇದ್ದರೂ, ಪಾಪದ ಜೀತವನ್ನು ಹೆಚ್ಚೆಚ್ಚಾಗಿ ಬಯಸುತ್ತಾ ಬರಲಾಗಿ, ದೇವರು ಅವನನ್ನು ಅಂಧಕಾರದ ಬಲಗಳಿಗೆ ವಶವಾಗಲೀಸಿ, ಹೆಣ್ಣು ಕತ್ತೆಯ ಬಾಯು ಮಾತಿನಿಂದಲವನನ್ನು ನಾಚಿಕೆ ಪಡಿಸಿ, ಕಡೆಯಲ್ಲಿ ತನ್ನಲ್ಲಿದ್ದ ದುರಾಶೆಗೆ ವಿರೋಧವಾದ ವಾಕ್ಯವನ್ನು ಉಚ್ಚರಿಸುವ ಹಾಗೆ, ಅವನಿಗೆ ಬಲ ಬಂದು ಮಾಡ ಬೇಕಾಯಿತು. ಬಿಲೆಯಾಮನೆಂಬದಕ್ಕೂ, ಪ್ರಕ. ೨, ೬. ೧೫ರಲ್ಲಿ ಬರೆದಿರುವ ನಿಕೊಲಾಯಿತ ಎಂಬದಕ್ಕೂ ಒಂದೇ ಅರ್ಥವದೆ, ಏನಂದರೆ, ಜನಾಂಗವನ್ನು ಜೈಸುವವನು, ಇಲ್ಲವೆ ಜನಾಂಗವನ್ನು ಕೆಡಿಸುವವನು.

ಬಾಲಾಖನು ಎರಡು ಸಾರಿ ಬಿಲೆಯಾಮನ ಬಳಿಗೆ ದೂತರನ್ನು ಕಳುಹಿಸಿದ್ದು. ಸ. ೨೨, ೨ – ೨೦.

ಬಾಲಾಖನೆಂಬ ಮೋವಾಬದವರ ಅರಸನು ಮೋವಾಬದ ಹತ್ತಿರ ವಾಸವಾದಂಥ, ಸೀನಾಯ ಬೆಟ್ಟದ ಅರ್ಧದ್ವೀಪದಲ್ಲಿದ್ದ ಜನಾಂಗಕ್ಕೆ (ಹೊರ. ೨, ೧೫ ಮುಂ.) ಬಂಧುವರ್ಗದವರಾದಂಥ, ಮಿದ್ಯಾನರ (ಇವರು ಬಹುಕಾಲದಿಂದ ಮೋವಾಬದ ಬಳಿಯಲ್ಲಿ ವಸ್ತಿಯಾಗಿದ್ದು, ಉತ್ಪ. ೩೬, ೩೫. ಅರಸನಾದ ಶೀಹೋನನ ರಾಜ್ಯಾಧಿಕಾರಕ್ಕೆ ಒಳಗಾದರು. ಯೆಹೋಶು. ೧೩, ೨೧. ಬಳಿಕ ನ್ಯಾಯಾಧಿಪತಿಗಳ ಕಾಲದಲ್ಲಿ ಅವರು ಬೇರೆ ಕೆಲವು ಜನಾಂಗಗಳಿಗೆ ಕೂಡಿ ಕೊಂಡು, ಇಸ್ರಯೇಲನವರನ್ನು ತೊಂದರೆ ಪಡಿಸಿದರೆಂದು, ನ್ಯಾಯಾಧಿ. ೬ನೆ ಮುಂತಾದ ಸಂಧಿಗಳಲ್ಲಿ ವಿವರವಾಗಿ ಬರೆದದೆ.) ಹಿರಿಯರ ಸಂಗಡ

ಆಲೋಚನೇ ಮಾಡಿ, ತೆಂಕಣದಿಂದ ಬಂದ ಇಸ್ರಯೇಲನ ಬಲವಾದ ದಂಡಿಗೆ ಹೆದರಿ, ಅದಕ್ಕೆ ಅಡ್ಡ ಕಟ್ಟುವದಕ್ಕೆ ಸ್ವಂತ ದೇವತೆಗಳ ಬಲ ಸಾಲದೆಂದೆಣಿಸಿ ಕೊಂಡು, ಪ್ರಖ್ಯಾತಿಯಾದ ಮಂತ್ರಗಾರನಾಗಿರುವ ಮೆಸೊಪೊತಮ್ಯವೆಂಬ ದ್ವಾಬಿನವನಾದ ಬಿಲೆಯಾಮನ ಸಹಾಯವನ್ನು ಹುಡುಕಿದನು. ಯಾಕಂದರೆ ಇವನು ಯೆಹೋವನ ಪ್ರವಾದಿಯೆಂದು ಹೆಸರ್ಗೊಂಡವನಾಗಿದ್ದದರಿಂದ, ಇಸ್ರಯೇಲನವರ ಸಹಾಯಕನಾದ ಯೆಹೋವನು ಅವರನ್ನು ಕೈ ಬಿಟ್ಟರೆ, ತಾನು ಗೆಲ್ಲ ಬಹುದೆಂದು, ನೆನಸಿ ಕೊಂಡನು. ಈ ಯುಕ್ತಿಯನ್ನು ನಡಿಸುವದಕ್ಕಾಗಿ ದೂತರನ್ನು, ಬಹು ಬೆಲೆಯುಳ್ಳ ಕಾಣಿಕೆಗಳನ್ನು ಅವರ ಕೈಯಲ್ಲಿ ಕೊಟ್ಟು, ಬಿಲೆಯಾಮನ ಬಳಿಗೆ ಕಳುಹಿಸಿದನು.

ಬಾಲಾಖನ ದೂತರು ಮಿದ್ಯಾನರ ಹಿರಿಯರ ಸಂಗಡ ಬಂದು, ಬಿಲೆಯಾಮನಿಗೆ ಅರಸನ ಅಪ್ಪಣೆ ತಿಳಿಸಿದಾಗ, ಯೆಹೋವನು ರಾತ್ರಿಯಲ್ಲಿ ಇವನೊಡನೆ ಮಾತಾಡಿ, ನೀನು ಅವರ ಸಂಗಡ ಹೋಗಲೂ ಆ ಜನಾಂಗವನ್ನು ಶಪಿಸಲೂ ಬಾರದು. ಯಾಕೆಂದರೆ ಅದು ಆಶೀರ್ವಾದವುಳ್ಳದ್ದಾಗಿದೆ ಎಂತ, ಬೆಸಸಿದರಿಂದ, ಬಿಲೆಯಾಮನು ಅವರನ್ನು ಸುಮ್ಮನೇ ತಿರಿಗಿ ಕಳುಹಿಸಿದನು. ಬಳಿಕ ಬಾಲಾಖನು ಹೆಚ್ಚು ಘನವುಳ್ಳ ದೂತರನ್ನು ಹೆಚ್ಚು ಬೆಲೆಯುಳ್ಳ ಕಾಣಿಕೆಗಳ ಸಹಿತ ಎರಡನೆ ಸಾರಿ ಕಳುಹಿಸಲಾಗಿ, ಇಬ್ಬಗೆಯುಳ್ಳವನಾದ ಬಿಲೆಯಾಮನು ಎಲ್ಲಾ ನೋಡಿ, ಬಾಲಾಖನಿಗೆ ಒಪ್ಪಿಗೆಯಾಗ ತೊಡಗಲು, ಯೆಹೋವನು, ದೂತರ ಸಂಗಡ ಹೋಗು, ಆದರೆ ನಾನು ನಿನಗೆ ಹೇಳುವದನ್ನು ಮಾಡ ಬೇಕು ಎಂದು, ಅಪ್ಪಣೇ ಕೊಡುತ್ತಾನೆ. ಬಿಲೆಯಾಮನು ದ್ರವ್ಯಾಶೆಯಿಂದ ಮರುಳಾಗಿ, ದೇವರಿಗೆ ಮನಃಪೂರ್ವಕವಾಗಿ ವಶವಾಗಲೊಲ್ಲದದರಿಂದ ಶಿಕ್ಷೆಗೊಳಗಾಗ ತಕ್ಕವನಾಗುತ್ತಾನೆ. ಆದಾಗ್ಯೂ ದೇವರು ಅವನನ್ನು ತಳ್ಳಿ ಬಿಡದೆ, ಅವನಿಗೆ ಮಾನಸಾಂತರದ ದಾರಿ ತೋರಿಸುತ್ತಾನೆ.

ಬಿಲೆಯಾಮನ ಪಯಣವು, ಹೆಣ್ಣು ಕತ್ತೆಯ ಮಾತಾಟವು, ಇವುಗಳ ವಿವರ. ಸ. ೨೨, ೨೧ — ೩೫.

ಮಂತ್ರಗಾರನ ಅಶುದ್ಧ ಮನಸ್ಸಿನಲ್ಲಿ ಬಾಲಾಖನ ಚಂಗಾರ ಮಾನಾದಿಗಳ ಮೇಲೆ ಹುಟ್ಟಿದ ಆಶೆ ಹೆಚ್ಚು ಹೆಚ್ಚಾದದರಿಂದ, ದೇವರ ಕೋಪವು ಅವನು ಬಾಲಾಖನ ಬಳಿಗೆ ಹೋದದ್ದಕ್ಕೆ ಎದ್ದಿತು. ಬಳಿಕ ಪಯಣದಲ್ಲಿ ಆದಷ್ಟೇನಂದರೆ: ಬಿಚ್ಚುಕತ್ತಿ ಕೈಯಲ್ಲಿ ಹಿಡಿದ ಯೆಹೋವನ ದೂತನು ಮಾರ್ಗದಲ್ಲಿ ನಿಂತು, ಬಿಲೆಯಾಮನನ್ನು ತಡೆದನು. ಇವನು ಏನೂ ನೋಡದೆ ಇರಲಾಗಿ, ಅವನು ಕೂತ ಹೆಣ್ಣು ಕತ್ತೆ ದೂತನನ್ನು ಕಂಡು, ಹೆದರಿ ಕೊಂಡು, ವಾರೆ ಹೋಯಿತು. ಧನಿ ಎಷ್ಟು ಪೆಟ್ಟು ಹೊಡೆದರೂ, ಕತ್ತೆ ಮುಂದೆ ನಡೆಯಲಾರದೆ, ನೆಲಕ್ಕೆ ಬಿತ್ತು. ಆಗ ಬಿಲೆಯಾಮನ ಕೋಪವು ಘೋರವಾಗಿ ಉರಿಯಲು, ಯೆಹೋವನು ಕತ್ತೆಯ ಬಾಯಿ ತೆರೆದು, ಅದನ್ನು ಮಾತಾಡಿಸಿದನು. ಅದು ನರಶಬ್ದದಿಂದ (೨ ಪೇತ್ರ. ೨, ೧೫, ೧೬.) ನುಡಿದು, ಗೋಳಾಡುವದನ್ನು ಬಿಲೆಯಾಮನು ಕೇಳುತ್ತಲೇ, ಯೆಹೋವನು ಅವನ ಕಣ್ಣು ತೆರೆದದರಿಂದ, ಅವನು ಯೆಹೋವನ ದೂತನನ್ನು ಕಂಡು, ಅವನು ಗದರಿಸುವ ಮಾತುಗಳನ್ನು ಕೇಳಿದನು. ಆಗ ಬಿಲೆಯಾಮನು, ನಾನು ಪಾಪ ಮಾಡಿದೆನೆಂದು, ಅರಿಕೆ ಮಾಡಿ, ಅರ್ಧ ಹೃದಯದಿಂದ ದೇವರಿಗೆ ವಿಧೇಯನಾಗಲಿಕ್ಕೆ ಮನಸ್ಸು ಮಾಡಿ, ನಿನ್ನ ಚಿತ್ತವಾದರೆ, ನಾನು ತಿರಿಗಿ ಹೋಗುತ್ತೇನೆಂತ, ಹೇಳಿದನು. ಆದರೆ ಈಗ ಯೆಹೋವನು ಅವನಿಗೆ ಮುಂದೆ ಹೋಗು; ಆದರೆ ನಾನು ನಿನಗೆ ನುಡಿಯುವ ನುಡಿಯನ್ನಲ್ಲದೆ ಏನೂ ನುಡಿಯ ಬಾರದು ಎಂದು ಬೆಸಸುತ್ತಾನೆ. ಬಳಿಕ ಬಿಲೆಯಾಮನು ಬಾಲಾಖನ ಪ್ರಭುಗಳ ಸಂಗಡ ಹೋದನು.

ಇಲ್ಲಿ ಬರೆದ ಚರಿತ್ರವು ಅವಿಶ್ವಾಸಿಗಳಾದ ತರ್ಕವಾದಿಗಳಲ್ಲಿ ಅಬದ್ಧ ಕಥೆಯೆಂದನ್ನಿಸಿ ಕೊಂಡರೂ,

ಅದು ನಿಜವಾದದ್ದೇ ಸರಿ. ಯಾಕೆಂದರೆ ಅಪೊಸ್ತಲನಾದ ಪೇತ್ರನು ಎರಡನೆ ಪತ್ರಿಕೆಯ ಎರಡನೆ ಸಂಧಿಯಲ್ಲಿ, ಇಛ್ಛಾಚೋಗಿಗಳೂ ಲೋಭಿಗಳೂ ಆದ ಮೋಸಗಾರರನ್ನು ಗದರಿಸುವ ಪ್ರಕರಣದಲ್ಲಿ, ಅದನ್ನು ಉದಾಹರಣೆಯಾಗಿ ಪ್ರಯೋಗಿಸುತ್ತಾನೆ. ಈ ಅದ್ಭುತಕಾರ್ಯದ ಉದ್ದೇಶವೇನಂದರೆ: ತಾನು ಆದುಕೊಂಡ ಜನಾಂಗದ ವಿಷಯವಾಗಿ ಅತಿ ಘನವಾದ ಪ್ರವಾದನೆಯನ್ನು ಹೇಳುವದಕ್ಕೆ ನೇಮಕ ಮಾಡಿದ ಬಿಲೆಯಾಮನು ತನ್ನಲ್ಲಿರುವ ದೀರ್ಘದರ್ಶನವರವು ತನ್ನದೆಂತಲೂ, ಅದನ್ನು ಮನಸ್ಸು ಬಂದಂತೆ ಬಳಸಿ, ಬಹಳ ಇಷ್ಟವಾದ ಸಂಬಳ ಪಡಕೊಳ್ಳ ಬಹುದೆಂತಲೂ, ಅಹಂಕಾರದಿಂದಲೂ ದ್ರವ್ಯಾಶೆಯಿಂದಲೂ ಮರುಳಾದನೆಂದು, ದೇವರು ತಿಳು ಕೊಂಡು, ಅವನನ್ನು ಶಿಕ್ಷಿಸಿ ತಗ್ಗಿಸುವ ಬಗ್ಗೆ, ಕತ್ತೆಯನ್ನು ಮಾತಾಡಿಸಿ, ತೋರಿಸುವದೇನಂದರೆ: "ಒಂದು ಪಶುವಾದರೂ ಪಾಪದ ಮರುಳಿನಿಂದ ಮೋಸ ಪಟ್ಟ ಮನುಷ್ಯನಾದ ದೀರ್ಘದರ್ಶಿಗಿಂತ ದೇವರ ಪ್ರಕಟಣೆಯನ್ನು ಹೊಂದಲಧಿಕಾರಿಯಾಗಿದೆ. ಸ್ವಾರ್ಥಿಯಾದ ದೀರ್ಘದರ್ಶಿಯು ಮೂಕನಾದ್ದಲ್ಲಿ ಪಶುವಾದರೂ ಮಾತಾಡ ಬಲ್ಲದು. ಪ್ರವಾದಿಗೆ ಬದಲಾಗಿ ಹೆಣ್ಣುಕತ್ತೆಯನ್ನು ಬಾಯಿ ಕೊಟ್ಟು ಮಾತಾಡಿಸುವ ತ್ರಾಣವು ಯೆಹೋವನಿಗೆ ಉಂಟು." ಬಿಲೆಯಾಮನು ಬೆರಗಾಗಿ, ತಗ್ಗಿಸಿ ಕೊಂಡು, ಹ್ಯಾಗಾದರೂ ಮಹೋನ್ನತನಾದ ದೇವರಿಗೆ ಎದುರು ಬೀಳ ಬಾರದೆಂದೂ, ದೇವರು ತನಗೆ ಪ್ರಕಟಿಸುವದನ್ನೇ ಸಾರ ಬೇಕೆಂದೂ, ತನ್ನಲ್ಲಿ ನಿಶ್ಚೈಸಿ ಕೊಳ್ಳುವಂತೆ ಈ ಆಶ್ಚರ್ಯ ಕಾರ್ಯವುಂಟಾಯಿತೆಂದು, ಕಾಣುವದು.

ಬಿಲೆಯಾಮನು ಬಾಲಾಖನ ಬಳಿಗೆ ಬಂದದ್ದು. ವ. ೩೬—೪೦.

ವ. ೩೬. ಬಿಲೆಯಾಮನು ಬಂದನೆಂದು, ಬಾಲಾಖನು ಕೇಳಲು, ಅವನನ್ನೆದುರುಗೊಳ್ಳುವದಕ್ಕೆ ಗಡಿಯ ಅಂಚಿನಲ್ಲಿಯಣ ಅರ್ನೋನ ನದಿಯ ಗಡಿಯಲ್ಲಿದ್ದ ಮೋವಾಬದ ಪಟ್ಟಣಕ್ಕೆ೧) ಹೊರಟನು. ೩೭. ಮತ್ತು ಬಾಲಾಖನು ಬಿಲೆಯಾಮನಿಗೆ ಹೇಳಿದ್ದು: ನಿನ್ನನ್ನು ಕರೇ ಕಳುಹಿಸೇ ಕಳುಹಿಸಿದೆನಲ್ಲ? ಯಾಕೆ ನನ್ನ ಬಳಿಗೆ ಬರಲಿಲ್ಲ? ನಿಜವಾಗಿ ನಿನ್ನನ್ನು ಮನ್ನಣೆ ಮಾಡಲಾರೆನೋ?೨) ೩೮. ಬಿಲೆಯಾಮನು ಬಾಲಾಖನಿಗೆ ಹೇಳಿದ್ದು: ಇಗೋ, ಈಗ ನಿನ್ನ ಬಳಿಗೆ ಬಂದಿದ್ದೇನೆ. ಏನಾದರೂ ಹ್ಯಾಗಾದರೂ ನುಡಿಯಲಾಪೆನೋ?೩) ದೇವರು ನನ್ನ ಬಾಯಲ್ಲಿಡುವ ನುಡಿಯನ್ನೇ ನುಡಿಯುವೆನು. ೩೯. ಆಗ ಬಿಲೆಯಾಮನು ಬಾಲಾಖನ ಕೂಡ ಹೋಗಲು, ಅವರು ವೀಧಿಪುರಕ್ಕೆ೪) ಬಂದರು. ೪೦. ಬಳಿಕ ಬಾಲಾಖನು ಎತ್ತುಗಳನ್ನೂ ಕುರಿಗಳನ್ನೂ ಬಲಿಯಾಗಿ ಕಡಿದು, ಬಿಲೆಯಾಮನಿಗೂ ಅವನ ಸಂಗಡಲಿದ್ದ ಪ್ರಭುಗಳಿಗೂ ಕಳುಹಿಸಿದನು.

೧. ಬೇರೆ ಸ್ಥಳಗಳಲ್ಲಿ ಆರ್ ಮೋವಾಬೆಂದು ಅನ್ನಿಸಿ ಕೊಳ್ಳುವಂಥ, ಅರ್ನೋನ ನದಿಯ ತೀರದಲ್ಲಿದ್ದಂಥ, ಮೋವಾಬದ ಪ್ರಾಮುಖ್ಯ ಪಟ್ಟಣವು ಪೂರ್ವದಲ್ಲಿ ದೇಶದ ನಡುವೆಯಲ್ಲಿತ್ತು. ಶೀಹೋನನು ದೇಶದ ಅರೆವಾಶಿ ಆಕ್ರಮಿಸಿ ಕೊಂಡ ಮೇಲೆ, ಅರ್ನೋನ್ ಮೋವಾಬದ ಬಡಗು ಗಡಿಯಾಯಿತು.

೨. ಬಾಲಾಖನು ಬಿಲೆಯಾಮನ ದ್ರವ್ಯಾಶೆಯನ್ನು ನೆರೆತಿಳುಕೊಂಡವನಾಗಿದ್ದರೂ, ಬಹಳ ಮರ್ಯಾದೆಯಿಂದ ಮಾತಾಡಿ, ಹಣವೆಂಬ ಶಬ್ದವನ್ನಾದರೂ ಎತ್ತದೆ, "ನಿನಗೆ ಬೇಕಾದ ಹಣವನ್ನು ಕೊಡಲಾರೆನೋ?" ಎಂಬದಕ್ಕೆ ಬದಲಾಗಿ "ನಿನ್ನನ್ನು ಮನ್ನಣೆ ಮಾಡಲಾರೆನೋ?" ಎಂತ, ಹೇಳುತ್ತಾನೆ.

೩. ಇಗೋ, ದ್ವಿಭಾವನೆಯುಳ್ಳ ಮನುಷ್ಯನ ಯುಕ್ತಿ! ದೇವರಿಗೂ ಮಮ್ಮೋನನಿಗೂ ಜೊತೆಯಾಗಿ

ಸೇವೆ ಮಾಡಲೆಸಗುತ್ತಾನೆ. ಅರಸನನ್ನು ಮೆಚ್ಚಿಸುವ ಬಗ್ಯೆ, ನಿನ್ನ ಮಾತು ಕೈಕೊಂಡು ನಿನ್ನ ಬಳಿಗೆ ಬರ ಬೇಕೆಂದು ಮೊದಲೇ ಮನಸ್ಸು ಮಾಡಿದೆನು. ಯೆಹೋವನು ಅಡ್ಡಿ ಮಾಡಿದದರಿಂದಲೇ ಕೊಂಚ ತಡವಾಯಿತು. ಆದರೆ ಈಗ ನಿನ್ನ ಕಿಂಕರನಾದ ನಾನು ಸನ್ನಿಧಾನಕ್ಕೆ ಬಂದೆನಲ್ಲಾ? ದೇವರು ನನಗೆ ಅಪ್ಪಣೆ ಕೊಡುವ ಪ್ರಕಾರವೇ ನುಡಿಯುವದಲ್ಲದೆ, ಬೇರೆ ಏನೂ ಹೇಳಲಾಗದೆಂದು, ಯೆಹೋವನ ಭಯದಿಂದ ಅನ್ನುತ್ತಾನೆ. ಆದರೆ ಹ್ಯಾಗಾದರೂ ಅರಸನ ಮನಸ್ಸಿನಲ್ಲಿ ತನ್ನ ಮೇಲೆ ಕುಂದು ಬಾರದ ಹಾಗೆ, ಒಂದು ವೇಳೆ ಯೆಹೋವನು ನಿನಗೆ ಅಹಿತವಾದದ್ದನ್ನು ನುಡಿಸ್ಯಾನು ಎಂದು, ನಾನು ಅಂಜಿ ಕೊಂಡು, ಬರುವದಕ್ಕೆ ತಡ ಮಾಡಿದೆನೆಂದು, ತಿಳುಕೊಂಡು, ನನ್ನ ಮೇಲೆ ದಯವಿಟ್ಟು ನಾನು ಯೆಹೋವನ ಪ್ರೇರೇಪಣೆಯಿಂದಲೇ ಹೇಳುವ ವಾಕ್ಯವು ಅನನುಕೂಲವಾಗಿ ತೋರಿದರೆ, ನನ್ನನ್ನು ಮನ್ನಿಸ ಬೇಕೆಂದು, ಬೇಡುತ್ತಾನೆ.

೪. ಈ ಶಬ್ದವು ಬಹಳ ಅಂಗಡಿಗಳುಳ್ಳ ದೊಡ್ಡ ಪೇಟೆಯ ಹೆಸರೆಂದು, ಕಾಣುತ್ತದೆ.

ಬಿಲೆಯಾಮನು ಹೇಳಿದ ಮೊದಲನೆ ಪ್ರವಾದನೆ. ಸ. ೨೨, ೪೧—೨೩, ೧೨.

ವ. ೪೧. ಬಳಿಕ ಹೊತ್ತಾರೆ ಆದದ್ದೇನಂದರೆ, ಬಾಲಾಖನು ಬಿಲೆಯಾಮನನ್ನು ಕೊಂಡು ಹೋಗಿ, ಬಾಳನ ಗುಡ್ಡಗಳಿಗೆ ಏರಿಸಲಾಗಿ, ಅಲ್ಲಿಂದ ಜನಾಂಗದ ಕಡೆಯನ್ನು[೧] ನೋಡಿದನು.

ಸಂಧಿ ೨೩, ೧—೧೨.

ವ. ೧. ಮತ್ತು ಬಿಲೆಯಾಮನು ಬಾಲಾಖನಿಗೆ, ಏಳು ಬಲಿಪೀಠಗಳನ್ನು ಇಲ್ಲಿ ನನಗೆ ಕಟ್ಟಿ, ಏಳು ಹೋರಿಗಳನ್ನೂ ಏಳು ಟಗರುಗಳನ್ನೂ ನನಗೆ ಹವಣಿಸು[೨], ಅಂದನು. ೨. ಬಾಲಾಖನು ಬಿಲೆಯಾಮನು ನುಡಿದಂತೆ ಮಾಡಲು, ಬಾಲಾಖ ಬಿಲೆಯಾಮರು ಒಂದೊಂದು ಬಲಿಪೀಠದ ಮೇಲೆ ಹೋರಿಯನ್ನೂ ಟಗರನ್ನೂ ಅರ್ಪಿಸಿದರು. ೩. ಆಗ ಬಿಲೆಯಾಮನು ಬಾಲಾಖನಿಗೆ, ನಿನ್ನ ಹೋಮದ ಹತ್ತರ ನಿಂತುಕೋ. ಒಂದು ವೇಳೆ ಯೆಹೋವನು ನನ್ನನ್ನೆದುರ್ಗೊಳ್ಳುವನೆಂತ, ಹೋಗುತ್ತೇನೆ. ಅವನು ನನ್ನನ್ನು ನೋಡಲೀಸುವದನ್ನು ನಿನಗೆ ತಿಳಿಸುವೆನೆಂದು, ಹೇಳಿ, ಬೈಲ್ಮೇಡಿಗೆ ಹೋಗಲು, ೪. ದೇವರು ಬಿಲೆಯಾಮನನ್ನು ಎದುರ್ಗೊಂಡನು. ಆಗಲವನಿಗೆ, ಏಳು ಬಲಿಪೀಠಗಳನ್ನು ಹವಣಿಸಿ, ಒಂದೊಂದು ಬಲಿಪೀಠದ ಮೇಲೆ ಹೋರಿಯನ್ನೂ ಟಗರನ್ನೂ ಅರ್ಪಿಸಿದ್ಧೇನೆ, ಅಂದನು. ೫. ಆಗ ಯೆಹೋವನು ಬಿಲೆಯಾಮನ ಬಾಯಲ್ಲಿ ನುಡಿಯನ್ನಿಟ್ಟು, "ಬಾಲಾಖನ ಬಳಿಗೆ ತಿರುಗಿ ಕೊಂಡು, ಹೀಗೆ ನುಡಿಯ ಬೇಕು," ಅಂದನು. ೬. ಆಗಲವನು ಅವನ ಬಳಿಗೆ ತಿರುಗಿ ಕೊಳ್ಳಲು, ಅಗೋ, ಅವನೂ ಮೋವಾಬದ ಎಲ್ಲಾ ಪ್ರಭುಗಳೂ ಅವನ ಹೋಮದ ಹತ್ತರ ನಿಂತಿದ್ದರು. ಬಳಿಕ ಅವನು ತನ್ನ ಗಾದೆಯನ್ನೆತ್ತಿ, ಹೇಳಿದ್ದು: ಅರಾಮದಿಂದ, ಮೂಡಣ ಬೆಟ್ಟಗಳಿಂದ ಮೋವಾಬದ ಅರಸನಾದ ಬಾಲಾಖನು ನನ್ನನ್ನು ಕರೇ ಕಳುಹಿಸಿದ್ಧಾನೆ, "ಬಂದು, ಯಾಕೋಬನನ್ನು ನನಗಾಗಿ ಶಪಿಸು!" "ಬಂದು, ಇಸ್ರಯೇಲನನ್ನು ಹಾಕರಿಸು!" ಎಂತಾ. ೭. ದೇವನು

ಶಪಿಸದವನನ್ನು ಹ್ಯಾಗೆ ಶಪಿಸಲಾಪೆನು? ಯೆಹೋವನು ವಾಕರಿಸದವನನ್ನು ಹ್ಯಾಗೆ
ವಾಕರಿಸಲಾಪೆನು? ೯. ಯಾಕೆಂದರೆ ಬಂಡೆಗಳ ತುದಿಯಿಂದ ಅವನನ್ನು ನೋಡುತ್ತೇ
ನೆ. ಮೇಡುಗಳಲ್ಲಿಂದಲವನನ್ನು ಕಾಣುತ್ತೇನೆ[3]. ಇಗೋ, ಆ ಪ್ರಜೆಯು ಒಂಟಿಯಾ
ಗಿ ವಾಸಿಸುತ್ತಾ[4], ಜನಾಂಗಗಳಲ್ಲಿ ಎಣಿಕೆಯಾಗುವದಿಲ್ಲ. ೧೦. ಯಾಕೋಬನ ಧೂ
ಳನ್ನೂ ಇಸ್ರಯೇಲನ ಕಾಲುಪಾಲನ್ನೂ ಲೆಖ್ಖ ಮಾಡುವವನ್ಯಾರು[5]? ನನ್ನ ಪ್ರಾಣ
ವು ಸಜ್ಜನರು[6] ಸಾಯುವಂತೆ ಸಾಯಲಿ[7]! ನನ್ನ ಅಂತ್ಯವು ಇವರದಂತೆಯಾಗಲಿ.
೧೧. ಆಗ ಬಾಲಾಖನು ಬಿಲೆಯಾಮನಿಗೆ ಹೇಳಿದ್ದು: ನನಗೇನು ಮಾಡಿದಿ! ನನ್ನ
ಹಗೆಯವರನ್ನು ಶಪಿಸುವದಕ್ಕೆ ನಿನ್ನನ್ನು ಕೊಂಡು ಬಂದೆನಲ್ಲ? ಆದರೆ, ಇಗೋ,
ಆಶೀರ್ವದಿಸೇ ಆಶೀರ್ವದಿಸಿದ್ಧೀ. ೧೨. ಅದಕ್ಕವನು ಮಾರ್ನುಡಿದದ್ದೇನಂದರೆ: ಯೆ
ಹೋವನು ನನ್ನ ಬಾಯಲ್ಲಿಡುವದನ್ನು ನುಡಿಯುವ ಹಾಗೆ ಜೋಕೆ ಮಾಡ ಬೇಕ
ಲ್ಲವೋ?

೧. "ಜನಾಂಗದ ಕಡೆಯನ್ನು ನೋಡಿದನು" ಅಂದರೆ, ಇಸ್ರಯೇಲನವರ ದಂಡು ಇಳುಕೊಂಡ ಪ್ರದೇಶವೆಲ್ಲಾ, ಕಡೇ ಗುಡಾರಗಳು ಕಟ್ಟಿದ್ದ ಮೇರೆಯ ವರೆಗೆ ಬೈಲಾಗಿ ಕಾಣುವ ಸ್ಥಳದಲ್ಲಿ ನಿಂತು, ಜನಾಂಗವನ್ನೆಲ್ಲಾ ಒಟ್ಟಾಗಿ ನೋಡಿದನು.

೨. ಈ ಬಲಿಗಳನ್ನರ್ಪಿಸಲವಶ್ಯವಾದದ್ದೆಂದು, ಯೆಹೋವನನ್ನು ತಮ್ಮ ಪಕ್ಷಕ್ಕೆ ವಶೀಕಾರ ಮಾಡಬೇಕೆಂದಿದ್ದ ಬಾಲಾಖ ಬಿಳೆಯಾಮರಿಬ್ಬರು ನಂಬಿದರು. ತಾನೆಳಸಿದ ಕಜ್ಜವು ಕೈಗೂಡದಿದ್ದರೆ, ಹ್ಯಾಗಾದರೂ ಸಾಧನೆಯಲ್ಲಿ ಅಲಸನಾಗಿದ್ದ ಕುಂದು ತನಗೆ ಬಾರದಂತೆ, ಬಿಳೆಯಾಮನು ಇಷ್ಟು ದೊಡ್ಡ ಬಲಿಯನ್ನು ಬಾಲಾಖನ ಕೈಯಿಂದ ಕೊಡಿಸಿದನೆಂದು, ಊಹಿಸ ತಕ್ಕದ್ದು.

೩. ಬಿಳೆಯಾಮನು ಇಸ್ರಯೇಲನ ದಂಡನ್ನು ಕಣ್ಣಿನಿಂದ ನೋಡುತ್ತಲೇ ಯೆಹೋವನಾದು ಕೊಂಡ ಜನಾಂಗದ ಮಹಿಮೆಯು ಅವನ ಆತ್ಮದೃಷ್ಟಿಗೆ ಕಾಣ ಬಂತೆಂಬದನ್ನು ಈ ವಚನವು ಸೂಚಿಸುವದು.

೪. ಇಸ್ರಯೇಲನವರು ಯೆಹೋವನಿಂದ ಹೊಂದಿದ ದೇವಾರಾಧನೆ ರಾಜ್ಯನೀತಿಗಳ ನೇಮವನ್ನು ಅನುಸರಿಸುವವರಾಗಿ ವಾಗ್ದತ್ತದೇಶದಲ್ಲಿಯೇ ಪ್ರತ್ಯೇಕವಾಗಿ ವಾಸ ಮಾಡುತ್ತಾ, ಉಳಿದ ಜನಾಂಗಗಳಿಗೆಲ್ಲಾ ವಿಂಗಡವಾಗಿದ್ದು, ಸರ್ವಲೋಕಕ್ಕೆ ಆಶೀರ್ವಾದಮೂಲವಾದ ದೇವಪ್ರಜೆಯಾಗ ಬೇಕೆಂದು, ಬಿಳೆಯಾಮನು ಇಲ್ಲಿ ಪ್ರವಾದಿಸುತ್ತಾನೆ.

೫. ಮಿತಿ ಮೀರಿ ಬೆಳೆದು ಹಬ್ಬುವ ವರವು ಅಬ್ರಹಾಮನ ಬೀಜಕ್ಕೆ ಆರಂಭದಲ್ಲಿಯೇ ಪ್ರಾಪ್ತವಾಯಿತೆಂದು (ಉತ್ಪ. ೧೨, ೩) ಬಿಳೆಯಾಮನಿಗೆ ಮುಂಚೆ ಗೊತ್ತಾಗಿತ್ತೋ, ಈಗಲೇ ಪ್ರಕಟವಾಯಿತೋ ಎಂದು ನಿಶ್ಚೈಸ ಕೂಡದು. ೯ನೆ ೧೦ನೆ ವಚನಗಳಲ್ಲಿಯಣ ಆಶೀರ್ವಾದಕ್ಕೆ ಹಳೆ ಒಡಂಬಡಿಕೆಯ ಜನಾಂಗವು ಮಾತ್ರವಲ್ಲ, ಹೊಸ ಒಡಂಬಡಿಕೆಯ ಜನಾಂಗವಾದ ಕ್ರೈಸ್ತ ಸಭೆಯೂ ಆತ್ಮೀಕವಾದ ಅಭಿಪ್ರಾಯದ ಪ್ರಕಾರ ಬಾಧ್ಯವಾಗಿದೆ.

೬. "ಸಜ್ಜನರು" ಇಬ್ರಿಯದಲ್ಲಿ "ಎಫಾರೀಮ್." ಇದು ದ್ವಿತೀ. ೩೨, ೪ರಲ್ಲಿ ದೇವನ ವಿಶೇಷಣಪದವಾಗಿ ಪ್ರಯೋಗವಾಗಿದೆ. ಇಸ್ರಯೇಲನ ಜನಾಂಗವು ಸಜ್ಜನನಾದ ದೇವನ ಅನ್ಯೋನ್ಯದಲ್ಲಿರುವದರಿಂದ, ಅದಕ್ಕೂ ಅದರ ದೇವನ ಭಾವಲಕ್ಷಣವು ಹತ್ತುವದು. ಇದೇ ರೀತಿಯಿಂದ ಕ್ರೈಸ್ತ ಸಭೆಯೂ, ಪರಿಶುದ್ಧನಾದ ಕ್ರಿಸ್ತನದಾಗಿರುವದರಿಂದ ಹೊಸ ಒಡಂಬಡಿಕೆ ಗ್ರಂಥದಲ್ಲಿ ಪರಿಶುದ್ಧವಾದದ್ದೆಂದು, ಅನ್ನಿಸಿ ಕೊಳ್ಳುತ್ತದೆ.

೭. ಪ್ರವಾದಿಸುತ್ತಾ ಇರುವ ಬಿಲೆಯಾಮನು ಈ ಮಾತು ನುಡಿಯುವ ಕ್ಷಣದಲ್ಲಿ, ತಾನು ಸಾಯುಲಾಗುವ ಹದನವನ್ನು ಊಹಿಸಿ ಮುಂತಿಳುಕೊಂಡನೋ ಏನೋ? ಹ್ಯಾಗಾದರೂ ಸಜ್ಜನರಂತೆ ಬದುಕುವ ಬ್ಯೆಕೆಯು ಅವರಂತೆ ಸಾಯುವ ಬ್ಯೆಕೆಗಿಂತ ಲೇಸಾಗಿರುತ್ತಿತ್ತು.

ಬಿಲೆಯಾಮನ ಎರಡನೆ ಪ್ರವಾದನೆ. ವ. ೧೩—೩೦.

ಬಾಲಾಖನು ಇಷ್ಟಾರ್ಥವನ್ನು ಪಡ ಕೊಳ್ಳುವ ಬಗ್ಯೆ ಇನ್ನೊಂದು ಎತ್ತುಗಡೆ ಮಾಡ ಬೇಕೆಂದು, ಬಿಲೆಯಾಮನನ್ನು ಇಸ್ರಯೇಲನವರ ದಂಡಿಗೆ ಹೆಚ್ಚು ಹತ್ತರವಾದಂಥ, ಅವರು ಮೋವಾಬದ ಬ್ಯೆಲುಶೀಮೆಯಲ್ಲಿಯೂ ಯೊರ್ದಾನ ನದಿಯ ಬಳಿಯಲ್ಲಿಯೂ ಶೇರುವದಕ್ಕಿಂತ ಮುಂಚೆ ಕಡೇ ಬೀಡು ಮಾಡಿದಂಥ. ಪಿಶ್ಗಾ ಗುಡ್ಡದ ತುದಿಗೆ ಕರಕೊಂಡು ಹೋಗಿ, ತಿರಿಗಿ ಬಲಿಯರ್ಪಣೆ ಮಾಡಿದ ಮೇಲೆ, ದೇವರು ನುಡಿದದ್ದೇನೆಂದು ಕೇಳಲು, ಬಿಲೆಯಾಮನು ಮೊದಲನೇದಕ್ಕಿಂತ ಘನವಾದ ಪ್ರವಾದನೆ ಹೇಳುತ್ತಾನೆ. ವ. ೧೩—೧೭.

ವ. ೧೮. ಬಳಿಕ ಅವನು ತನ್ನ ಗಾದೆಯನ್ನೆತ್ತಿ ಹೇಳಿದ್ದು: ಬಾಲಾಖನೇ, ಎದ್ದು, ಕೇಳು! ನನಗೆ ಕಿವಿಗೊಡು, ಚಿಪ್ಪೋರನ ಮಗನೇ! ೧೯. ದೇವನು ಹುಸಿಯುವಂಥ ಮನುಷ್ಯನೂ, ಮರಳುವಂಥ ಮಾನವನೂ ಅಲ್ಲ. ಅವನು ಹೇಳಿದ್ದರೆ, ಉಂಟು ಮಾಡನೇ? ನುಡಿದಿದ್ದರೆ, ಕ್ಯೆಕೊಳ್ಳನೇ?[೧] ೨೦. ಇಗೋ, ಆಶೀರ್ವದಿಸಲಿಕ್ಕೆ ತರಲ್ಪಟ್ಟಿದ್ಧೇನೆ. ಆಶೀರ್ವದಿಸಿದ್ಧಾನೆ; ಅದನ್ನು ತಿರುಗಿಸಲಾರೆನು. ೨೧. ಯಾಕೋಬನಲ್ಲಿ ಕೆಟ್ಟತನವನ್ನು ಕಂಡುಕೊಳ್ಳುವದಿಲ್ಲ. ಇಸ್ರಯೇಲನಲ್ಲಿ ಕಾಟವನ್ನು ನೋಡುವದಿಲ್ಲ[೨]. ಅವನ ದೇವನಾದ ಯೆಹೋವನು ಅವನೊಡನೆ ಇದ್ಧಾನೆ, ಅರಸನ ರಣನಾದವು ಅವನಲ್ಲಿ ಉಂಟು. ೨೨. ದೇವನು ಅವರನ್ನು ಮಿಚ್ರದೊಳಗಿಂದ ಹೊರ ತಂದಿದ್ಧಾನೆ, ಅವನಿಗೆ ಕಾಡಕೋಣದಂತೆ ಆಣ್ಮೆಯದೆ. ೨೩. ಯಾಕೆಂದರೆ ಯಾಕೋಬನಲ್ಲಿ ಶಕುನವಿಲ್ಲ, ಇಸ್ರಯೇಲನಲ್ಲಿ ಕಣಿಯಿಲ್ಲ. ದೇವನು ನಡಿಸಿದ್ಧಾನೆಂದು, ಯಾಕೋಬನಿಗೂ ಇಸ್ರಯೇಲನಿಗೂ ತಕ್ಕ ವೇಳೆಯಲ್ಲಿ ಹೇಳೋಣವಾದೀತು. ೨೪. ಇಗೋ, ಪ್ರಜೆಯು ಎಳೇ ಸಿಂಹದಂತೆ ಏಳುವದು, ಸಿಂಹದಂತೆ ಎದ್ದು ಕೊಳ್ಳುವದು. ಕೊಳ್ಳೇ ತಿನ್ನುವ ಮಟ್ಟಿಗೂ, ಕಡಿಸಿ ಕೊಂಡವರ ರಕ್ತ ಕುಡಿಯುವ ಮಟ್ಟಿಗೂ, ಮಲಗಿ ಕೊಳ್ಳದು.

೧. ದೇವನು ಸತ್ಯವಂತನೂ ನಂಬಿಕೆಯುಳ್ಳವನೂ ನಿಶ್ಚಂಚಲಚಿತ್ತನೂ ಆಗಿದ್ದು, ಮೊದಲು ನನಗೆ ತಿಳಿಸಿದ ಮಾತು ಕ್ಯೆಕೊಂಡು ನೆರೆವೇರಿಸುವನು. ಅವನ ನಿರ್ಣಯವನ್ನು ತಿರುಗಿಸುವದಕ್ಕೆ ಯಾವ ಉಪಾಯವಾದರೂ ಸಾಲದು. ಇದಕ್ಕೆ ಸಮು. ೧೫, ೨೮ ಸರಿ ನೋಡ ಬೇಕು. ದೇವರು ಆಗ್ಯಾಗ್ಯೆ ಮನುಷ್ಯರ ಪಾಪಗಳಿಗಾಗಿ ತನ್ನ ಆಲೋಚನೆಗಳನ್ನು ಮಾರ್ಪಡಿಸುವವನಂತೆ ಕಾಣಿಸಿ ಕೊಂಡರೂ, ಕಡೆಯಲ್ಲಿ ದೇವರ ಆದಿನಿರ್ಣಯವು ಸ್ಥಿರವಾದದ್ದೆಂದು, ಪ್ರಕಟವಾಗುವದು.

೨. ಪಾಪವಿಲ್ಲದ್ದಲ್ಲಿ ಶಾಪವಿಲ್ಲವೆಂಬದು ನಿಜ. ಆದರೆ ಇಸ್ರಯೇಲನವರು ಅರಣ್ಯಸಂಚಾರಕಾಲದಲ್ಲಿ

ಯಾಗಲಿ, ಇತ್ತಲಾಗಿನ ಯಾವತ್ಕಾಲದಲ್ಲಿಯಾಗಲಿ ಪಾಪವಿಲ್ಲದವರಾಗಿದ್ದರೋ? ಅವರು ನಾನಾ ತರದ ದೇವದ್ರೋಹಗಳನ್ನು ನಡಿಸಿ, ಭಯಂಕರವಾದ ದೇವ ಶಿಕ್ಷೆ ಶಾಪಗಳಿಗೆ ವೇಳೆ ವೇಳೆಗೆ ಒಳಗಾಗಲಿಲ್ಲವೋ? ಇಂದಿನ ವರೆಗೂ ವಾಗ್ದತ್ತದೇಶದ ಬಾಧ್ಯತೆ ಕಳೆ ಕೊಂಡವರಾಗಿ, ಭೂಲೋಕದಲ್ಲೆಲ್ಲಾ ಚದರಿ ಇದ್ದಾರಲ್ಲವೋ? ಹಾಗಾದರೆ ಈ ಪ್ರವಾದನೆಯ ಅಭಿಪ್ರಾಯವನ್ನು ಹ್ಯಾಗೆ ತಿಳುಕೊಳ್ಳ ಬೇಕು? ಈ ಪ್ರಶ್ನೆಗೆ ಹೇಳ ತಕ್ಕ ಪ್ರತ್ಯುತ್ತರವೇನಂದರೆ: ಪ್ರವಾದಿಯ ಜ್ಞಾನದೃಷ್ಟಿಗೆ ಪರಕಾಲದ್ದು ಇಹಕಾಲದ್ದಂತೆ ತೋರುವದು. ಬಿಲೆಯಾಮನು, ಆಯಿಕೆಯ ಜನಾಂಗಕ್ಕೆ ಕಟ್ಟಕಡೆಯಲ್ಲಿ ಪ್ರಾಪ್ತವಾಗುವ ಪುಣ್ಯಸೌಖ್ಯಗಳ ಸಿದ್ಧಿಯನ್ನು ಆತ್ಮದೃಷ್ಟಿಯಿಂದ ಕಂಡು, ನುಡಿಯುತ್ತಾನೆ. ನಡುವೆಯ ಕಾಲದಲ್ಲಿ ದೇವಜನಾಂಗವು ಈ ವಾಕ್ಯಕ್ಕೆ ಒಪ್ಪಿಕೆಯಾಗಿ ಇದ್ದಿಲ್ಲ, ಆಗುವದೂ ಇಲ್ಲ ಎಂಬದು ಸರಿ.

೩. ಶತ್ರುಗಳೆನ್ನೆಲ್ಲಾ ಜೈಸುವ ಸರ್ವಶಕ್ತನಾದ ತನ್ನ ದೇವರ ಸನ್ನಿಧಿಯಲ್ಲಿ ಹರ್ಷವಾಗಿರುವ ಪ್ರಜೆಯು ಜಯಧ್ವನಿ ಮಾಡುವದು.

೪. ದೇವರು ತನ್ನ ನಡುವೆಯಲ್ಲಿದ್ದಾನೆಂದು, ತಿಳುಕೊಳ್ಳುವ ವಿಶ್ವಾಸವುಳ್ಳ ಜನಾಂಗಕ್ಕೆ ದೀರ್ಘದರ್ಶಿಗಳನ್ನೂ ಕಣಿಗಾರರನ್ನೂ ಕೇಳ ಕೆಲಸವಿಲ್ಲ. ತಕ್ಕ ಕಾಲದಲ್ಲಿ ಯೆಹೋವನು ತಾನು ಮಾಡುವದನ್ನು ತನ್ನ ಜನಾಂಗಕ್ಕೆ ಆತ್ಮದ ಪ್ರಕಟಣೆಯಿಂದಲೇ ತಿಳಿಸುತ್ತಾನೆ ಎಂಬದು ೨೩ನೆ ವಚನದ ಅಭಿಪ್ರಾಯ.

೫. ವ. ೨೪ನೆಯಿಂದ ಬಿಲೆಯಾಮನು ಬಾಲಾಖನಿಗೆ ಇಸ್ರಯೇಲನವರ ಸಂಗಡ ಯುದ್ಧ ಮಾಡುವವರಿಗೆ ಏನು ಆಗುವದೆಂದು, ಸೂಚಿಸುತ್ತಾನೆ.

ವ. ೨೫–೩೦. ಬಾಲಾಖನು ಬಿಲೆಯಾಮನಿಗೆ, ಇಸ್ರಯೇಲನವರನ್ನು ಶಪಿಸಲಾಗದೆ ಹೋದರೆ, ಹ್ಯಾಗೂ ಆಶೀರ್ವದಿಸ ಬಾರದೆಂತ, ಹೇಳಲಾಗಿ, ಇವನು ತಾನು ಯೆಹೋವನ ಅಪ್ಪಣೆಯನ್ನೇ ಕೇಳುತ್ತೇನೆಂದು, ಹೇಳಲಿಲ್ಲವೋ ಎಂದು ಮಾರ್ನುಡಿದನು. ಸ. ೨೭, ೨೮. ಬಾಲಾಖನು ಮೂರನೇ ಸರ್ತಿ ಇಸ್ರಯೇಲನವರಿಗೆ ಶಾಪ ಕೊಡಿಸುವದಕ್ಕೆ ಎತ್ತುಗಡೆ ಮಾಡ ಬೇಕೆಂದು, ಬಿಲೆಯಾಮನನ್ನು ಪೆಯೋರ್ ಬೆಟ್ಟಕ್ಕೆ ಕರಕೊಂಡು ಹೋಗುತ್ತಾನೆ. ಅಲ್ಲಿ ನಿಂತು ಕೊಂಡು, ಸಾವಿನ ಕಡಲಿನ ಬಡಗಮೂಡಣದಲ್ಲಿಯೂ ಯೊರ್ದಾನ ನದಿಯ ಮೂಡಣ ತೀರದಲ್ಲಿಯೂ ಪಸರವಾದ ಅರಣ್ಯವನ್ನು ನೋಡ ಬಹುದು. ಇಲ್ಲಿಂದ, ಸಮೀಪವಾದ ದಂಡನ್ನೆಲ್ಲಾ ದೃಷ್ಟಿಸಿ, ಅವರಿಗೆ ಶಾಪ ಕೊಡುವದು ಕೈಗೂಡೀತೆಂತ, ಬಾಲಾಖನು ನೆನಸಿ ಕೊಂಡನು. ಆದದರಿಂದ ಮುಂಚಿನಂತೆ ಬಲಿಗಳನ್ನು ಅರ್ಪಿಸಿದನು.

ಬಿಲೆಯಾಮನ ಮೂರನೆ ನಾಲ್ಕನೆ ಪ್ರವಾದನೆಗಳು. ಸಂಧಿ ೨೪.

ಮೂರನೆ ಪ್ರವಾದನೆ. ವ. ೧–೧೩.

ವ. ೧. ಬಳಿಕ ಬಿಲೆಯಾಮನು, ಇಸ್ರಯೇಲನನ್ನು ಆಶೀರ್ವದಿಸೋಣ ಯೆಹೋವನ ಕಣ್ಣಿಗೆ ಲೇಸೆಂದು ನೋಡಲು, ವೇಳೆ ವೇಳೆಗೆ ಮಾಡಿದಂತೆ ಶಕುನಗಳನ್ನು ಎದುರ್ಗೊಳ್ಳ ಹೋಗದೆ[೧], ಅರಣ್ಯದ ಕಡೆಗೆ ತನ್ನ ಮೋರೆ ಇಟ್ಟನು[೨]. ೨. ಮತ್ತು ಬಿಲೆಯಾಮನು ತನ್ನ ಕಣ್ಣುಗಳನ್ನೆತ್ತಿ, ಕುಲ ಕುಲವಾಗಿ ಇಳುಕೊಂಡಿರುವ ಇಸ್ರಯೇಲನನ್ನು ನೋಡುತ್ತಲೇ, ದೇವನ ಆತ್ಮವು ಅವನ ಮೇಲೆ ಬಂತು. ೩. ಆಗ ತನ್ನ ಗಾದೆಯನ್ನೆತ್ತಿ ಹೇಳಿದ್ದೇನಂದರೆ: ಬೆಯೋರನ ಮಗನಾದ ಬಿಲೆಯಾಮನು ಒರೆದದ್ದು; ಕಣ್ಣು ಮುಚ್ಚಿದಂಥ ಆಳು ಒರೆದದ್ದು, ೪. ದೇವನ ಮಾತುಗಳನ್ನು ಕೇಳುವಂಥ, ಸರ್ವಶಕ್ತನ ಕಾಣ್ಕೆಯನ್ನು ಕಂಡಂಥ, ಬೀಳಲೇ ಕಣ್ಣುಗಳ ತೆರಿಸಿ ಕೊಂಡವನು[೩] ಒರೆದದ್ದು:

೫. ನಿನ್ನ ಗುಡಾರಗಳು, ಯಾಕೋಬನೇ, ನಿನ್ನ ಇಕ್ಕೆಗಳು, ಇಸ್ರಯೇಲನೇ, ೬. ಪಸ
ರಿಸುವ ಹಳ್ಳಗಳಂತೆ, ನದಿತೀರದಲ್ಲಿಯಣ ತೋಟಗಳಂತೆ, ಯೆಹೋವನು ನೆಟ್ಟ ಅಗರು
ಮರಗಳಂತೆ, ನೀರಿನ ಬಳಿಯಣ ದೇವದಾರುಗಳಂತೆ ಎಷ್ಟೋ ಚೆಲ್ವಾಗಿವೆ[೪]! ೭. ಅ
ವನ ಕಪಲೆಯಿಂದ ನೀರು ಹರಿಯುವದು[೫]. ಅವನ ಬೀಜವು ಬಹಳ ನೀರುಗಳಲ್ಲಿರು
ವದು[೬]. ಅವನ ಅರಸನು[೭] ಅಗಾಗನಿಗಿಂತ[೮] ಎತ್ತರಾಗುವನು. ಅವನ ರಾಜ್ಯವು
ಏರಿಸಿ ಕೊಳ್ಳುವದು. ೮. ದೇವನು ಅವನನ್ನು ಮಿಚ್ರದಿಂದ ಹೊರ ತಂದನು. ಅವನಿ
ಗೆ ಕಾಡಕೋಣದಂತೆ ಆಣ್ಮೆಯದೆ[೯]. ತನ್ನನ್ನು ಇಕ್ಕಟ್ಟು ಪಡಿಸುವ ಜನಾಂಗಗಳ
ನ್ನು ತಿಂದು, ಅವರ ಎಲುವುಗಳನ್ನು ಅಗಿದು ಕೊಂಡು, ಅವರ ಅಂಬುಗಳನ್ನು ಮು
ರಿದು ಬಿಡುವನು. ೯. ಸಿಂಹದ ಹಾಗೆಯೂ ಎಳೇ ಸಿಂಹದ ಹಾಗೆಯೂ ಕುಗ್ಗಿ ಮಲ
ಗುತ್ತಾನೆ; ಅವನನ್ನು ಎಬ್ಬಿಸುವವನ್ಯಾರು[೧೦]? ನಿನ್ನನ್ನು ಆಶೀರ್ವದಿಸುವವರಿಗೆ ಆ
ಶೀರ್ವಾದವು, ನಿನ್ನನ್ನು ಶಪಿಸುವವರಿಗೆ ಶಾಪವು ಬರುವದು[೧೧], ಅಂದನು. ೧೦. ಆ
ಗ ಬಾಲಾಖನು ಬಿಲೆಯಾಮನ ಮೇಲೆ ಶಿಟ್ಟು ಮಾಡಿ, ಚಪ್ಪಳಿಯಿಟ್ಟನು[೧೨]. ಮತ್ತು
ಬಾಲಾಖನು ಬಿಲೆಯಾಮನಿಗೆ ಹೇಳಿದ್ದು: ನನ್ನ ಹಗೆಯವರನ್ನು ಶಪಿಸುವದಕ್ಕೆ ನಿನ್ನ
ನ್ನು ಕರೆದೆನು; ಆದರೆ, ಇಗೋ, ನೀನು ಈ ಮೂರು ಸಾರಿ ಆಶೀರ್ವದಿಸೇ ಆಶೀರ್ವ
ದಿಸಿದಿ. ೧೧. ಈಗ ನಿನ್ನ ಇಕ್ಕೆಗೆ ಓಡಿ ಹೋಗು! ನಿನ್ನನ್ನು ಬಹಳ ಘನ ಪಡಿಸುವೆನೆಂ
ದು, ಹೇಳಿದೆನು; ಆದರೆ, ಇಗೋ, ಯೆಹೋವನು ನಿನಗೆ ಘನವಾಗದಂತೆ ಅಡ್ಡಿ ಮಾ
ಡಿದ್ಧಾನೆ. ೧೨. ಆಗ ಬಿಲೆಯಾಮನು ಬಾಲಾಖನಿಗೆ ಹೇಳಿದ್ದು: ನೀನು ನನ್ನ ಬಳಿಗೆ
ಕಳುಹಿಸಿದ ದೂತರಿಗೂ, ೧೩. ಬಾಲಾಖನು ಅವನ ಮನೆ ತುಂಬ ಬೆಳ್ಳಿ ಹೊನ್ನುಗಳ
ನ್ನು ನನಗಿತ್ತರೂ, ನನ್ನ ಹೃದಯದಿಂದಲೇ ಮೇಲನ್ನಾದರೂ ಕೇಡನ್ನಾದರೂ ಮಾ
ಡುವಂತೆ, ಯೆಹೋವನ ಮಾತು ಮಿರಲಾರೆನು. ಯೆಹೋವನು ನುಡಿಯುವದನ್ನೇ
ನುಡಿಯುವೆನೆಂದು, ಹೇಳಿದೆನಲ್ಲವೋ?

೧. ಯೆಹೋವನು ಇಸ್ರಯೇಲನವರಿಗೆ ಆಶೀರ್ವಾದವನ್ನೆ ನೇಮಕ ಮಾಡಿದ್ಧಾನೆಂದು, ತಿಳಿದು, ದೇವನ ಆತ್ಮಕ್ಕೆ ಅಧೀನವಾಗ ಸಮ್ಮತನಾದ ಬಿಲೆಯಾಮನು ಈಗ ತನ್ನ ವಿದ್ಯೆಯ ಚಮತ್ಕೃತಿಗಳನ್ನು ಬಿಟ್ಟು, ಯಥಾರ್ಥವಾದ ಮನಸ್ಸಿನಿಂದ ಯೆಹೋವನ ಚಿತ್ತದ ಪ್ರಕಟಣೆಯನ್ನು ಎದುರುನೋಡುತ್ತಾನೆ.

೨. ಕೆಳಗಣ ಬೈಲಿನಲ್ಲಿಳಿದ ಇಸ್ರಯೇಲನವರದಂಡು ದೃಷ್ಟಿಸ ಬೇಕೆಂದು, ಆ ಕಡೆಗೆ ಮೋರೆಯನ್ನು ತಿರುಗಿಸುತ್ತಾನೆ.

೩. ಅವನು ಮೈಗಣ್ಣು ಮುಚ್ಚಿ ಕೊಂಡವನಾಗಿದ್ದನೆಂದು, ಮೂರನೆ ವಚನದಲ್ಲಿ ಬರೆದದೆ. ಇಲ್ಲಿ ಸೂಚಿತವಾದದ್ದೇನಂದರೆ, ದೇವಾತ್ಮವು ಬಿಲೆಯಾಮನನ್ನು ಹಿಡಿಯುವ ವೇಳೆಯಲ್ಲಿ ಅವನು ನೆಲಕ್ಕೆ ಬಿದ್ದು, ಜ್ಞಾನದೃಷ್ಟಿಯನ್ನು ಪಡ ಕೊಳ್ಳುವನು.

೪. ದೇವಾಶೀರ್ವಾದತೃಪ್ತ ಜನಾಂಗದ ಸುಖಪೂರ್ಣತೆಯು ಈ ಸಾಮ್ಯಗಳಿಂದ ಇಂಪಾಗಿ ವರ್ಣಿತವಾಗೋದು.

೫. ಈ ಉಪಮೆಯ ಅಭಿಪ್ರಾಯವೇನಂದರೆ,

ಅವನ ದೇಶವು ಕಪಲೆ ನೀರು ಎಡೆ ಬಿಡದೆ ತೋಯಿಸುವಂಥ ರಮ್ಯವಾದ ತೋಟಕ್ಕೆ ಸರಿಯಾಗಿದೆ.

೬. ವ್ಯಾಖ್ಯಾನಿಗಳಲ್ಲಿ ಒಬ್ಬರು ಇಬ್ರಿಯ ಮಾತುಗಳ ಅರ್ಥವನ್ನು ಇಸ್ರಯೇಲನು ಬೆಳೆದು ಬೆಳೆದು ದೊಡ್ಡ ಜನಾಂಗೋಘವಾಗುವನೆಂಬದಾಗಿ ಟೀಕಿಸುತ್ತಾರೆ, ಒಬ್ಬರು ಅವನ ಜನಾಂಗವು ನೀರು ತುಂಬಿದಂಥ ಜಲಮಯವಾದ ಬಹಳ ಸಾರವುಳ್ಳ ದೇಶದಲ್ಲಿ ವಸ್ತಿಯಾಗಿರುವದೆಂಬ ಟಿಪ್ಪಣಿ ಕಟ್ಟುತ್ತಾರೆ. ೧ನೆ ಅಭಿಪ್ರಾಯಕ್ಕೆ ಅವನ ಬೀಜವು ಬಹಳ ನೀರಾಗುವದೆಂಬ ಭಾಷಾಂತರವು, ೨ನೆ ಅಭಿಪ್ರಾಯಕ್ಕೆ ಅವನ ಬೀಜವು ಬಹಳ ನೀರಿನಲ್ಲಿರುವದೆಂಬ ಭಾಷಾಂತರವು ಮೂಲವಾಗಿದೆ. ೨ನೇದು ಲೇಸೆಂದು ಕಾಣುವದು.

೭. ಈ ಪ್ರವಾದನೆಯುಂಟಾದ ಕಾಲದಲ್ಲಿ ಯೆಹೋವನು ತಾನು ತನ್ನ ಜನಾಂಗದ ಅರಸನಾಗಿದ್ದು, ಮೋಶೆ ಆರೋನರು ಕುಲಗಳ ಹಿರಿಯರು ಇವರ ಮುಖಾಂತರ ಸೀನಾಯ ಬೆಟ್ಟದಲ್ಲಿ ಕೊಟ್ಟ ನೇಮದ ಪ್ರಕಾರವಾಗಿ ಅದನ್ನು ಆಳುತ್ತಾ ಇದ್ದನು. ಬಿಲೆಯಾಮನ ವಾಕ್ಯದ ಲೌಕೀಕವಾದ ಪೂರ್ಣತೆಯು ದಾವೀದನಲ್ಲಿ, ಆತ್ಮೀಕವಾದದ್ದು ದಾವೀದನ ಮಗನಾದ ಯೇಸು ಕ್ರಿಸ್ತನಲ್ಲಿ ತೋರ ಬಂತು.

೮. ಮಿಸ್ರದ ಅರಸುಗಳಿಗೆ ಫರೋ ಎಂಬ ನಾಮವು ಪಟ್ಟದ ಹೆಸರಾಗಿದ್ದಂತೆ, ಅಮಲೇಕನವರ ರಾಜರು ಅಗಾಗ್ ಎಂಬ ಪಟ್ಟದ ಹೆಸರನ್ನು ಧರಿಸುತ್ತಿದ್ದರು.

೯. ಇದೇ ಮಾತು ಸ. ೨೩, ೨೨ರಲ್ಲಿ ಬರೆದದೆ.

೧೦. ಈ ಮಾತು ಯಾಕೋಬನು ಉತ್ಪ. ೪೯, ೯ರಲ್ಲಿ ಯೂದನ ವಿಷಯವಾಗಿ ಹೇಳಿದ ಪ್ರವಾದನೆಯಿಂದ ಎತ್ತಿದ ಯಥೋಕ್ತವಾಗಿದೆ. ಅಲ್ಲಿ ರಾಜಕುಲದ ಮುಂದಣ ಪರಾಕ್ರಮವನ್ನು ವರ್ಣಿಸುವ ಲಕ್ಷಣವು ಅದರ ರಾಜನಿಗೆ ಚನ್ನಾಗಿ ಒಪ್ಪುವದು.

೧೧. ಉತ್ಪ. ೧೨, ೩ ಸರಿ ನೋಡ ಬೇಕು.

೧೨. ಬಾಲಾಕನು ಈ ಚೇಷ್ಟೆಯಿಂದ, ತನ್ನ ಬೈಕೆ ತಪ್ಪಿಸಿದ ಬಿಲೆಯಾಮನಿಗೆ ಮುನಿದು, ಗೇಲೆಬ್ಬಿಸುತ್ತಾನೆ.

೧೩. ಸ. ೨೨, ೧೮.

ಬಿಲೆಯಾಮನ ನಾಲ್ಕನೆ ಪ್ರವಾದನೆ. ವ. ೧೪ — ೨೫.

ಇದು ಮುಂಚಿನ ಪ್ರವಾದನೆಗಳ ಪ್ರಮಾಣವನ್ನು ಅಧಿಕವಾಗಿ ಅತಿಕ್ರಮಿಸಿ, ಇಸ್ರಯೇಲನ ರಾಜ್ಯವನ್ನು ಲೋಕಸಾಮ್ರಾಜ್ಯಗಳನ್ನೆಲ್ಲಾ ಸಂಹಾರ ಮಾಡುವ ದೇವಸಾಮ್ರಾಜ್ಯವೆಂಬದಾಗಿ ವರ್ಣಿಸುವದು.

ವ. ೧೪. ಈಗ, ಇಗೋ, ನನ್ನ ಪ್ರಜೆಯ ಬಳಿಗೆ ಹೋಗುತ್ತೇನೆ. ಬಾ, ಈ ಪ್ರಜೆಯು ನಿನ್ನ ಪ್ರಜೆಗೆ ಕಡೇ ದಿವಸಗಳಲ್ಲಿ ಏನು ಮಾಡುವದೆಂದು, ನಿನಗೆ ಬುದ್ಧಿ ಹೇಳುತ್ತೇನೆ. ೧೫. ಬಳಿಕ ತನ್ನ ಗಾದೆಯನ್ನೆತ್ತಿ ಹೇಳಿದ್ದು: ಬೆಯೋರನ ಮಗನಾದ ಬಿಲೆಯಾಮನು ಒರೆದದ್ದು, ಕಣ್ಣು ಮುಚ್ಚಿದಂಥ ಆಳು ಒರೆದದ್ದು, ೧೬. ದೇವನ ಮಾತುಗಳನ್ನು ಕೇಳುವಂಥ, ಸರ್ವಶಕ್ತನ ಕಾಣ್ಕೆಯನ್ನು ಕಂಡಂಥ, ಬೀಳಲೇ ಕಣ್ಣುಗಳ ತೆರಿಸಿ ಕಂಡವನು ಒರೆದದ್ದು[೧]: ೧೭. ಅವನನ್ನು ನೋಡುತ್ತೇನೆ, ಆದರೆ ಈಗಲಲ್ಲ. ಅವನನ್ನು ದೃಷ್ಟಿಸುತ್ತೇನೆ, ಆದರೆ ಹತ್ತರವಲ್ಲ[೨]. ಯಾಕೋಬನಿಂದ ಅರಿಲು ಮೂಡುವದು. ಇಸ್ರಯೇಲನಿಂದ ಪಟ್ಟದ ಕೋಲು[೩] ಏಳುವದು. ಅದು ಮೋವಾಬದ ಕೊನೆಗಳನ್ನು[೪] ಮುರಿಯುವದು, ಗಲಿಬಿಲಿಯ ಮಕ್ಕಳನ್ನೆಲ್ಲಾ ನಿರ್ಮೂಲ ಮಾಡುವದು[೫]. ೧೮. ಎದೋಮನು ಸ್ವಾಸ್ಥ್ಯವಾಗುವನು, ಸೇಯಿರವೂ ಸ್ವಾಸ್ಥ್ಯವಾಗುವದು[೬],

ಅದರ ಹಗೆಯವರೇ. ಆದರೆ ಇಸ್ರಯೇಲನು ಬಲವನ್ನು ನಡಿಸುವನು೬). ೧೯. ಯಾಕೋಬನಲ್ಲಿಂದ ಆಳುವನು, ಮತ್ತು ಪಟ್ಟಣದ ಉಳುಹನ್ನು ಮಡಿಸುವನು೮). ೨೦. ಬಳಿಕ ಅಮಲೇಕನನ್ನು೯) ನೋಡಲು, ತನ್ನ ಗಾದೆಯನ್ನೆತ್ತಿ, ಅವನು ಹೇಳಿದ್ದು: ಜನಾಂಗಗಳಲ್ಲಿ ಮೊದಲಿನವನು ಅಮಲೇಕನು, ಆದರೆ ಅವನ ಕಡೆಯು ಅಳಿಯುವದಕ್ಕಿರುವದು. ೨೧. ಬಳಿಕ ಖೇನೀಯನನ್ನು೧೦) ನೋಡಿ, ತನ್ನ ಗಾದೆಯನ್ನೆತ್ತಿ, ಹೇಳಿದ್ದು: ನಿನ್ನ ಇಕ್ಕೆಯು ಘಟ್ಟಿಯಾಗಿದೆ. ಬಂಡೆಯಲ್ಲಿ ನಿನ್ನ ಗೂಡು ಇಟ್ಟದೆ೧೧). ೨೨. ಆದಾಗ್ಯೂ ಖಾಯಿನನು ಸುಟ್ಟು ಹೋಗ ತಕ್ಕವನಾಗಿದ್ದಾನೆ. ಅಷ್ಹೂರನು ನಿನ್ನನ್ನು ಶೆರೆಯಾಗಿ ವೈಯುವನಕಾ ಏಸು ಹೊತ್ತು೧೨)! ೨೩. ಬಳಿಕ ಅವನು ತನ್ನ ಗಾದೆಯನ್ನೆತ್ತಿ, ಹೇಳಿದ್ದು: ಅಯ್ಯೋ, ದೇವನು ಅದನ್ನು ಮಾಡುವಂದಿನಿಂದ ಬದುಕುವವರಾರು೧೩)? ೨೪. ಕಿತ್ತೀಮದ ಬದಿಯಿಂದಣ ಹಡಗಗಳು ಅಷ್ಹೂರನನ್ನು ಕಾಡಿಸುವವು, ಏಬೆರನನ್ನೂ ಕಾಡಿಸುವವು೧೪); ಆದರೆ ಅವನೂ ಅಳಿಯುವದಕ್ಕಾಗಿದ್ದಾನೆ೧೫). ೨೫. ಆಗ ಬಿಲೆಯಾಮನು ಎದ್ದು, ತನ್ನ ಎಡೆಗೆ ತಿರಿಗಿ ಹೋದನು೧೬. ಬಾಲಾಖನು ಸಹ ತನ್ನ ಮಾರ್ಗವಾಗಿ ಹೋದನು.

೧. ೧೫ನೆ ೧೬ನೆ ವಚನಗಳು ೩. ೪ನೆ ವಚನಗಳಿಗೆ ಸರಿಯಾಗಿವೆ.

೨. "ಈಗಲಲ್ಲ", "ಹತ್ತರವಲ್ಲ" ಎಂಬ ಪದಗಳು, ಬಹಳ ಕಾಲ ಕಳೆದ ಮೇಲೆಯೇ ಈ ಪ್ರವಾದನೆ ನೆರೆವೇರುವದೆಂಬದನ್ನು ಸೂಚಿಸುತ್ತವೆ. ಬಿಲೆಯಾಮನ ಆತ್ಮದೃಷ್ಟಿಗೆ ಕಾಣಿಸಿ ಕೊಂಡವನಾವನೆಂದರೆ, ಯಾಕೋಬನಿಂದ ಹುಟ್ಟಲಿರುವ ಅರಿಲೆಂಬವನು. (ಅರಿಲು = ನಕ್ಷತ್ರ.)

೩. "ಪಟ್ಟದ ಕೋಲು." ಈ ಪದಕ್ಕೆ ದಾವೀದನಲ್ಲಿ ಉಂಟಾಗಲೆಸಗಿ, ತಂದೆಗಿಂತ ಅಧಿಕಾಧಿಕನಾದ ದಾವೀದನ ಮಗನಲ್ಲಿ ಸಂಪೂರ್ಣವಾಗಲಿರುವ ದೇವರಾಜ್ಯಾಧಿಕಾರಮಹಿಮೆಗಳೆಂಬ ಅರ್ಥವದೆ.

೪. ಮೋವಾಬದ ಕೊನೆಗಳನ್ನು, ಅಂದರೆ, ಮೋವಾಬ ದೇಶದ ಮೇರೆಗಳನ್ನು ಮುರಿಯುವದು ಎಂಬದು ಪಟ್ಟದ ಕೋಲಿಗೆ ಶೇರುವ ಲಕ್ಷಣವು. ಅಭಿಪ್ರಾಯವೇನಂದರೆ, ಪಟ್ಟದ ಕೋಲುಳ್ಳ ಅರಸನು ಮೋವಾಬ ದೇಶವನ್ನೆಲ್ಲಾ ಆಕ್ರಮಿಸಿ ಕೊಂಡು ತನ್ನ ರಾಜ್ಯಕ್ಕೆ ಕೂಡಿಸುವನು.

೫. ಮೋವಾಬದವರು ಮೊದಲಾದ ಕಾಳಗಪ್ರಿಯ ಜಗಳಗಂಟಿಗಳಾದ ನೆರೆಯುವರನ್ನು ಗೆದ್ದು ಅವರ ದಳಗಳನ್ನು ಚದರಿಸುವನು.

೬. ಇದಕ್ಕೆ ಕೀರ್ತ. ೬೦, ೧೪; ೧೧೮, ೧೫. ೧೬. ಸರಿ ನೋಡ ಬೇಕು. ಎದೋಮೆಂಬದು ಜನಾಂಗದ ಹೆಸರಾಗಿ, ಸೇಯಿೂರೆಂಬದು ದೇಶದ ಹೆಸರಾಗಿ ಬಳಿಕೆಯಾಗಿದೆ. ಉತ್ಪ. ೨೭, ೩೯.—ಎದೋಮನವರ ಸಳಿಗೆಯನ್ನು ಕೈಕೊಳ್ಳ ಬೇಕೆಂದು, ಯೆಹೋವನು ಇಸ್ರಯೇಲನವರಿಗೆ ಅಪ್ಪಣೆ ಕೊಟ್ಟದ್ದು ಸರಿ. (ದ್ವಿತೀ. ೨, ೫. ೬.) ಆದರೆ ಎದೋಮನವರು ತಿರಿಗಿ ತಿರಿಗಿ ತಂಟೇ ಮಾಡಿದದರಿಂದ, ದಾವೀದನು ಅವರೊಡನೆ ಕಾದಿ, ಅವರನ್ನು ಗೆದ್ದು ವಶೀಕರಿಸ ತೊಡಗಿದನು. (೧ ಸಮು. ೮, ೧೪.) ಆಮೋ. ೯, ೧೨. ಈ ಮೊದಲಾದ ಹಲವು ಪ್ರವಾದನವಾಕ್ಯಗಳಲ್ಲಿ ಅವರು ಅವಿಧೇಯರಾದಂಥ, ದೇವರು ನೇಮಕ ಮಾಡಿದ ಕಾಲದಲ್ಲಿ ದೇವರಾಜ್ಯದಲ್ಲಿ ಶೇರ ತಕ್ಕಂಥ ಅನ್ಯ ಜನಾಂಗಗಳಲ್ಲಿ ಅಗ್ರಗಣ್ಯರಾಗಿ ಕಾಣಿಸಿ ಕೊಳ್ಳುತ್ತಾರೆ. ಇದಕ್ಕೆ ಅಪೊ. ಕ್ರಿ. ೧೫, ೧೬. ೧೭. ಸರಿ ನೋಡ ಬೇಕು. ಅದರ ಹಗೆಯವರೇ ಅಂದರೆ ಕೋಲೆಂಬವನ ಶತ್ರುಗಳಾದ ಎದೋಮನವರು.

೭. ದೇವಜನಾಂಗವು ಲೋಕವನ್ನೆಲ್ಲಾ ವಶೀಕರಿಸಿ ಆಳಿ ಕೊಳ್ಳ ಬೇಕು. ಎದುರಾಳಿಗಳೆಲ್ಲರೂ ಅದರ ಅರಸನಾದ ಕರ್ತನ ಅಡಿಗಳಿಗೆ ಎರಗ ಬೇಕು. (ಕೀರ್ತ. ೧೧೦. ಫಿಲಿ. ೨.)

೮. ಜಯಶಾಲಿಯಾದ ಅರಸನು ಆಕ್ರಮಿಸಿದ ಪಟ್ಟಣದಿಂದ ಓಡಿ ತಪ್ಪಿಸಿ ಕೊಂಡವರು ಸಹ ಬಳಿಕ ಅವನ ಕೈಯಲ್ಲಿ ಬಿದ್ದು ನಾಶನವಾಗುವರು.

೯. ಸೀನಾಯ ಅರ್ಧದ್ವೀಪದಲ್ಲಿ ವಸ್ತಿಯಾಗಿದ್ದ ಅಮಲೇಕನವರನ್ನು ಬಿಲೆಯಾಮನು ಮೈಗಣ್ಣಿನಿಂದ ನೋಡಲಾರದೆ, ಆತ್ಮದೃಷ್ಟಿಯಿಂದ ಕಂಡನು. ಮೊದಲಿನವರಂದರೆ, ಅರಬಸ್ಥಾನದ ಜನಾಂಗಗಳಲ್ಲಿ ಶ್ರೇಷ್ಠರು. ಅವರು ಮೊದಲು ಇಸ್ರಯೇಲನವರಿಂದ ಸೋತು (ಹೊರ. ೧೭, ೮.), ಬಳಿಕ ಅವರನ್ನು ಗೆದ್ದು, (ಅಂಕೆ. ೧೫, ೪೫.) ಇತ್ತಲಾಗಿ ಸಾಲನ ಕೈಯಿಂದ ಅಳಿದು ಹೋಗ ತೊಡಗಿದರು. (೧ ಸಮು. ೧೫.) ಅವರ ಅಪಜಯದ ಪ್ರವಾದನೆಯು ಹೊರ. ೧೭, ೧೪ರಲ್ಲಿ ಬರೆದದೆ.

೧೦. ಕೇನೀಯರು ಕನಾನ ದೇಶದ ತೆಂಕಣ ಬೆಟ್ಟಗಳಲ್ಲಿ ವಸ್ತಿಯಾದ ಜನರು, ಉತ್ಪ. ೧೫, ೧೯. ಒಂದು ವೇಳೆ ಅವರಿದ್ದ ಘಟ್ಟದ ಶೀಮೆಯು ಪೆಯೋರ್ ಬೆಟ್ಟದ ತುದಿಯಲ್ಲಿ ನಿಂತು ಕೊಳ್ಳುವವನಿಗೆ ಗೋಚರವಾದದರಿಂದಲೇ ಇವರ ಹೆಸರು, ಭಾಗವು ಸರ್ವವನ್ನು ಸೂಚಿಸುವ ಕಟ್ಟಳೆಯ ಪ್ರಕಾರ, ಕನಾನ ದೇಶದ ಜನಾಂಗಗಳಿಗೆಲ್ಲಾ ಪ್ರತಿಯಾಗಿ ಇಲ್ಲಿ ಪ್ರಯೋಗವಾಗಿದೆ.

೧೧. ಇಬ್ರಿಯದಲ್ಲಿ ಗೂಡಿಗೆ ಕೇನ್ ಎಂದನ್ನುವದು. ಆದರೆ ಕೇನೀಯರ ಹೆಸರು ಈ ಪದದಿಂದ ಹುಟ್ಟದೆ, ಮೂಲತಂದೆಯಾದ ಖಾಯಿನನೆಂಬ ಒಬ್ಬನ ಹೆಸರಿನಿಂದುಂಟಾಯಿತೆಂದು, ೨೨ನೆಯಲ್ಲಿ ತೋರುವದು.

೧೨. ಅಷ್ಶೂರರು ಕೇನೀಯರನ್ನಲ್ಲ, ಇಸ್ರಯೇಲನವರನ್ನೇ ಶೆರೆಯಾಗಿ ವೈದರು. ಆದದರಿಂದ "ನಿನ್ನನ್ನು" ಎಂಬದು ಇಸ್ರಯೇಲನನ್ನು ಸೂಚಿಸುವದೆಂತ ತಿಳಿ ಕೊಳ್ಳ ತಕ್ಕದ್ದು. ಇಸ್ರಯೇಲನವರು ದೇವನ ಕಟ್ಟಳೆಯಿಂದ ಕನಾನ ದೇಶದ ಜನಾಂಗಗಳನ್ನು ನಾಶ ಮಾಡಿದ ಮೇಲೆ, ಅಷ್ಶೂರ್ ಎಂಬ ಜನಾಂಗವು ದೇವದ್ರೋಹಿಗಳಾದ ಇಸ್ರಯೇಲನವರನ್ನು ದೇವಾಜ್ಞಾನಿರ್ಣಯಕ್ಕೆ ಅನುಸಾರವಾಗಿ ಶಿಕ್ಷಿಸುವ ಬಗ್ಯೆ ನೇಮಕವಾಯಿತು.

೧೩. ಅಷ್ಶೂರದ ಮತ್ತು ಬಬಿಲೋನದ ಶೆರೆಯ ಕಾಲವು ದೇವಜನಾಂಗಕ್ಕೆ ಅಪಾರ ಶ್ರಮೆಯ ಕಾಲವಾಗಿತ್ತು.

೧೪. ಅಷ್ಶೂರ್ ಏಬೆರ್ ಎಂಬ ಪದಗಳು ಒಂದೇ ಜನಾಂಗದ ಹೆಸರುಗಳು. ದೇವಜನಾಂಗಕ್ಕೆ ಇಸ್ರಯೇಲ ಯಾಕೋಬ ಎಂಬ ಎರಡು ಹೆಸರು ಇದ್ದಂತೆ, ಅದರ ಶತ್ರುವಾದ ಜನಾಂಗಕ್ಕೂ ಎರಡು ಹೆಸರುಂಟು. ಫ್ರಾಥ ನದಿಯ ಮೂಡಣದಲ್ಲಿಯಣ ಜನಾಂಗವು ಸಹ, ಇಸ್ರಯೇಲನವರನ್ನು ದಂಡಿಸಿದ ಮೇಲೆ, ಕಿತ್ತೀಮ್ ದೇಶದ ಕಡೆಯಿಂದ ಬಂದ ಹಡಗಗಳ ಧನಿಯಾದ ಅರಸನ ಮುಖಾಂತರ ತನ್ನ ಮೇಲೆ ಬಿದ್ದ ದೇವಶಿಕ್ಷೆಗೆ ತಪ್ಪಿಸಿ ಕೊಳ್ಳಲಾರದೆ ಇತ್ತು. ಆಗಮಿಕನಾದ ಬಿಲೆಯಾಮನು ಅಲೆಕ್ಸಂದ್ರನೆಂಬ ಮಕೆದೋನ ರಾಜನಿಂದಲೂ ರೋಮಪುರಸಾಮ್ರಾಜ್ಯದವರಿಂದಲೂ ಬರಲಿಕ್ಕಿದ್ದ ಅಷ್ಶೂರನವರ ಶಿಕ್ಷೆಯನ್ನು ೧೧೦೦, ೧೪೦೦ ವರ್ಷಕ್ಕಿಂತ ಮುಂಚೆ ಕಂಡದ್ದು ಚೋದ್ಯವಲ್ಲವೋ?

೧೫. ಅಳಿಯುವದಕ್ಕಿರುವವನ್ಯಾವನೆಂತ, ಕೇಳುವದು ಉಚಿತವಾದದ್ದು. ಹಲಬರಾದ ವ್ಯಾಖ್ಯಾನಿಗಳು ಅವನು ಅಷ್ಶೂರನೆಂದು ಭಾವಿಸಿ ಕೊಳ್ಳುತ್ತಾರೆ. ಆದರೆ ಕಿತ್ತೀಮದ ಕಡೆಯಿಂದ ಬಂದ ಅಲೆಕ್ಸಂದ್ರನೂ ರೋಮಪುರದವರೂ, ಇವರನ್ನು ಬಿಲೆಯಾಮನು ಜ್ಞಾನದೃಷ್ಟಿಯಿಂದ ಕಂಡು, ಅವರು ಒಬ್ಬನ ಮೇಲೆ ಒಬ್ಬನು ಮಡಿದು ಹೋಗುವರೆಂದು, ಹೇಳುತ್ತಾನೆಂತ, ತಿಳಿ ಕೊಳ್ಳುವದು ನಮಗೆ ಲೇಸೆಂದು ಕಾಣುವದು. ಬೇರೆ ಬೇರೆ ಜನಾಂಗಗಳು, ತಮ್ಮೊಳಗೆ ಒಂದನ್ನೊಂದು ನಾಶ ಮಾಡಿದನಂತರ, ಬಿದ್ದು ಹೋಗಬೇಕು. ದೇವಜನಾಂಗವೊಂದೇ ಉಳಿದು, ಎಂದೆಂದಿಗೂ ಬೆಳೆದು ಬಾಳುವದು.

೧೬. ತನ್ನ ಊರಿಗೆ ಹೋಗುವದಕ್ಕೆ ಹೊರಟು ಹೋದ ಮೇಲೆ, ಬಿಲೆಯಾಮನು ಮಿದ್ಯಾನದವರ

ನಡುವೆ ತಡೆದು, ಭಕ್ತಿಭ್ರಷ್ಟ ಭಾವನೆಯಿಂದ ಬಾಲಾಖನಿಗೆ ವಿಗ್ರಹಪೂಜೆಯಿಂದಲೂ ಹಾದರದಿಂದಲೂ ಇಸ್ರಯೇಲನವರನ್ನು ಕೆಡಿಸಿ, ದೇವನ ಶಾಪಕ್ಕೆ ಗುರಿಯಾಗಲೀಸುವ ಮೋಸವನ್ನು ಬೋಧಿಸಿದನೆಂದು, ಪ್ರಕ. ೨, ೧೪ರಲ್ಲಿ ಬರೆದದೆ. ಅವನು ಮಿದ್ಯಾನದವರೆಲ್ಲರೊಡನೆ ಹತವಾದದ್ದು ಸ. ೩೧, ೮ರಲ್ಲಿ ಲಿಖಿತವಾಗಿದೆ.

ಇಸ್ರಯೇಲನವರು ಮಿದ್ಯಾನದವರೊಡನೆ ವಿಗ್ರಹಪೂಜೆಯನ್ನೂ ಜಾರತ್ವವನ್ನೂ ನಡಿಸಿದ್ದು. ಫಿನೆಹಾಸನು ದೇವಮಾನರಕ್ಷಣಕ್ಕಾಗಿ ಮಾಡಿದ ಭಕ್ತ್ಯಾತುರ ಸಾಧನೆ. ಸಂಧಿ ೨೫.

ಮೋವಾಬದ ಬೈಲೊಳಗಣ ಶಿಟ್ಟೀಮೆಂಬ ಅರಣ್ಯಸಂಚಾರದ ಕಡೇ ಮೆಟ್ಟಿನಲ್ಲಿ ಇಸ್ರಯೇಲನವರದಂಡು ಶಾನೆ ದಿವಸ ಉಳು ಕೊಳ್ಳುತ್ತಾ ಇರಲಾಗಿ, ಅವರು ಸುತ್ತಮುತ್ತಿನ ಮೋವಾಬದವರ ಮತ್ತು ಮಿದ್ಯಾನದವರ ಹೊಕ್ಕುಬಳಿಕೆಯಲ್ಲಿ ಶೇರಿ, ಅವರ ಹೆಣ್ಣುಮಕ್ಕಳನ್ನು ಮೋಹಿಸಿ, ವಿಗ್ರಹಪೂಜೆಗಳ ಔತಣಗಳಿಗೆ ಬಂದು, ಕುಲೀನರಾದ ಸ್ತ್ರೀಪುರುಷರು ಮೊದಲಾದವರು ಸೂರ್ಯದೇವರೆಂದನ್ನಿಸುವ ಫೆಯೋರನ ಬೆಟ್ಟದಲ್ಲಿರುವ ಗುಡಿಯು ಬಳಿಯಲ್ಲಿ ಅಸಹ್ಯವಾದ ನಾಚಿಕೆ ಇಲ್ಲದ ಕಾಮವಿಕಾರ ಚೇಷ್ಟಾನಾಟ್ಯಾದಿಗಳು ಬೆರಸಿದ ಆರಾಧನೆಗಳಿಗೆ ಎಳಸಿ ಕೊಂಡು ಹೋದರು. ಇದಕ್ಕಾಗಿ ಯೆಹೋವನ ಶಿಟ್ಟು ಇಸ್ರಯೇಲನ ಮೇಲೆ ಹೊತ್ತಲಾಗಿ, ಮೋಶೆಗೆ, ಪಾಪ ಮಾಡಿದ ಹಿರಿಯರನ್ನೆಲ್ಲಾ, ದೇವರು ಅವರ ಮರಣದಿಂದಲೇ ಪರಿಶುದ್ಧನಾಗಿ ಕಾಣಿಸಿ ಕೊಳ್ಳುವ ಹಾಗೆ, ದೇವರಿಗಾಗಿ ಗಲ್ಲುಮರದಲ್ಲಿ ತೂಗಿಸಿ, ಬಿಸಿಲಿನಲ್ಲಿ ಹಾಕಬೇಕೆಂತ, ಅಪ್ಪಣೆಯಾಯಿತು. ಈ ಪ್ರಾಣಶಿಕ್ಷೆಯ ವಿಧವು ಹೊಲೆಗಲಸುವಂಥಾದ್ದಾಗಿ ಪೂರ್ಣ ಮಾನಭಂಗ ಮಾಡುವದಾಯಿತು. ಇದಲ್ಲದೆ ನ್ಯಾಯಾಧಿಪತಿಗಳಿಗೆ ತಮ್ಮ ಬಳಿಯ ಅಪರಾಧಿಗಳನ್ನೆಲ್ಲಾ ಕೊಲ್ಲಬೇಕೆಂತ, ಅಪ್ಪಣೆಯಾಯಿತು. ಅಷ್ಟರೊಳಗೆ ವ್ಯಾಧಿ ಸಹ ಉಂಟಾದದರಿಂದ, ಇಪ್ಪತ್ತನಾಲ್ಕು ಸಾವಿರ ಮಂದಿ ತಮ್ಮ ಮರುಳುತನಕ್ಕಾಗಿ ಮಡಿದು ಹೋದರು. ೧ಕೊರಿ. ೧೦, ೮ರಲ್ಲಿ ಈ ವೇಳೆಯಲ್ಲಿ ಸತ್ತವರು ಇಪ್ಪತ್ತಮೂರು ಸಾವಿರ ಮಂದಿ ಎಂದು, ಬರೆದದ್ದು ತಪ್ಪು ಎಂತ, ನೆನಸ ಕೆಲಸವಿಲ್ಲ. ಪೌಲನು ಮೋಶೆ ನ್ಯಾಯಾಧಿಪತಿಗಳು ಇವರ ಕೈಯಿಂದ ಕೊಲೆಯಾದವರನ್ನು ಲೆಖ್ಖದಲ್ಲಿ ಶೇರಿಸದೆ, ರೋಗದಿಂದಲೇ ಸತ್ತವರನ್ನು ಮಾತ್ರ ಎಣಿಕೆ ಮಾಡುತ್ತಾನಷ್ಟೇ.

ಜನಾಂಗದ ಮೇಲೆ ಬಿದ್ದ ದೇವನ ಶಿಕ್ಷೆಗಾಗಿ ಒಳ್ಳೆಯವರು ಅಳುತ್ತಾ ಬಿನ್ನೈಸುತ್ತಾ ಮೋಶೆಯ ಮುಂದೆಯೂ ಸಾಕ್ಷೀ ಗುಡಾರದ ಮುಂದೆಯೂ ನಿಲ್ಲುತ್ತಿರಲಾಗಿ, ಸಿಮೆಯೋನ ಕುಲದವನಾದ ಒಬ್ಬ ಪ್ರಭು ಅಂಜಿಕೆ ನಾಚಿಕೆ ಇಲ್ಲದವನಾಗಿದ್ದು, ಎಲ್ಲರಿಗೆ ಕಣ್ಣಾರೆ ಮಿದ್ಯಾನದವಳಾದ ಹೆಂಗಸಿನ ಕೂಡ ಸೂಳೆತನ ಮಾಡಿದನು. ಇದನ್ನು ನೋಡಿ, ಆರೋನನ ಮೊಮ್ಮಗನಾದ ಫಿನೆಹಾಸನು ಯೆಹೋವ ಭಕ್ತ್ಯಾಸಕ್ತಿಯಿಂದ ಉರಿಗೊಂಡು, ಅವರಿದ್ದ ಗುಡಾರವನ್ನು ಹೊಕ್ಕು, ಜಾರರಾದ ಅವರಿಬ್ಬರನ್ನು ಒಟ್ಟಾಗಿ ಚಲ್ಲೆಯಿಂದ ತಿವಿದು ಕೊಂದನು. ತಾನು ಕುಲದ ಹಿರಿಯನಾಗಿದ್ದು, ಶಿಕ್ಷೆಗೆ ತಪ್ಪಿಸಿ ಕೊಳ್ಳಲಾಪೆನೆಂದು, ಒಂದು ವೇಳೆ ಅಂದು ಕೊಂಡಂಥ ಅಧಿಕ ಘನವುಳ್ಳ ಮನುಷ್ಯನಿಗೆ ಪ್ರಾಣಶಿಕ್ಷೆಯಾದದ್ದು ದೇವನಿಗೆ ಯುಕ್ತವಾದ ಪ್ರಾಯಶ್ಚಿತ್ತವಾಗಿ ತೋರಿದದರಿಂದ, ವ್ಯಾಧಿಯು ನಿಂತು ಹೋಯಿತು. ಫಿನೆಹಾಸನು ಮಾಡಿದ್ದನ್ನು ಯೆಹೋವನು ಅವನಿಗೆ ನೀತಿಯೆಂದು, ಎಣಿಕೆ ಮಾಡಿ, ಕೀರ್ತ. ೧೦೬, ೩೧. ಅವನಿಗೂ ಅವನ ಬೀಜಕ್ಕೂ ನಿರಂತರವಾದ ಯಾಜಕೋದ್ಯೋಗವನ್ನು ನೇಮಿಸಿದನು. ಮಿದ್ಯಾನದವರಿಗೆ ಕರ್ತನು ಮುಯಿಗೆ ಮುಯಿ ಕೊಟ್ಟ ವಿವರ ಈ ಗ್ರಂಥದ ೩೧ನೆ ಸಂಧಿಯಲ್ಲಿ ಬರೆದದೆ.

ಅಂಕೆ. ೨೬.

ಜನಾಂಗದ ಎರಡನೆ ಎಣಿಕೆ. ದೇಶವಿಭಾಗದ ವಿಷಯವಾದ ಅಪ್ಪಣೆ. ಲೇವಿಯವರ ಲೆಖ್ಖ. ಸಂಧಿ ೨೬.

ವ. ೧—೫೧. ಮೋಶೆ ಯೆಹೋಷುವ ಕಾಲೇಬರುಳಿದ ಪ್ರಾಯಸ್ಥರಾದ ಇಸ್ರಾಯೇಲನವರೆಲ್ಲರು ತೀರಿ ಹೋದನಂತರ, ವಾಗ್ದತ್ತದೇಶ ವಿಭಾಗವಾಗ ತಕ್ಕ ಕಾಲವು ಹತ್ತರ ಬರಲಾಗಿ, ಈ ಉದ್ದಿಶ್ಯವಾಗಿ ಜನಾಂಗದ ಎರಡನೆ ಕಾಣಿಕೆಯುಂಟಾಗ ಬೇಕಾಯಿತು. ಈ ಸಂಧಿಯಲ್ಲಿ ಬರೆದಿರುವ ಇಸ್ರಾಯೇಲನವರ ಲೆಖ್ಖಕ್ಕೂ, ೧ನೆ ಸಂಧಿಯಲ್ಲಿ ಬರೆದಿರುವಂಥ ಮಿಸ್ರದಿಂದ ಹೊರಟು ಬಂದ ಗಂಡಸರ ಲೆಖ್ಖಕ್ಕೂ ಹೆಚ್ಚು ಕಡಿಮೆ ಏನೆಂದು ವಿಚಾರಿಸೆ, ದೇವನ ನಾಶಕರವಾದ ಶಿಕ್ಷೆಗಳಿಂದ ಅರಣ್ಯಸಂಚಾರಕಾಲದೊಳಗೆ ಬಹು ಜನ ಸತ್ತು ಹೋಗಿದ್ದರೂ, ಕಾದಾಳುಗಳ ಒಟ್ಟು ಲೆಖ್ಖವು ಈ ಸಮಯದಲ್ಲಿ ೧೮೨೦ ಮಂದಿ ಮಾತ್ರ ಕಡಿಮೆಯಾಗಿತ್ತೆಂದು, ತೋರುತ್ತದೆ. ಆದರೆ ಆಯಾ ಕುಲಗಳಲ್ಲಿ ಈಗಿನ ಲೆಖ್ಖಕ್ಕೂ ಆಗಿನ ಲೆಖ್ಖಕ್ಕೂ ಅಧಿಕವಾದ ವ್ಯತ್ಯಾಸವುಂಟು. ಜನರು ಕಡಿಮೆಯಾದ ಕುಲಗಳು ಯಾವವಂದರೆ: ಸಿಮೆಯೋನ ಕುಲಕ್ಕೆ ೩೭,೧೦೦ ಮಂದಿ ಕಡಿಮೆ. ಬಾಲ್‌ಫೆಯೋರನ ಪೂಜೆಯ ನಿಮಿತ್ತವಾದ ಶಿಕ್ಷೆ ಇವರ ಮೇಲೆ ವಿಶೇಷವಾಗಿ ಬಿತ್ತು. ಗಾದನ ಕುಲಕ್ಕೆ ೫,೧೫೦ ಮಂದಿ ಕಡಿಮೆ. ದ್ರೋಹಿಗಳಾದ ದಾಥಾನ ಅಬೀರಾಮರ ಮೋಸದಲ್ಲಿ ಹೆಚ್ಚಾಗಿ ಶೇರಿದವರ ತಂದೆಯಾದ ರೂಬೆನನ ಕುಲಕ್ಕೆ ೨,೭೭೦ ಮಂದಿ ಕಡಿಮೆ. ಎಫ್ರಯಿಮನ ಕುಲಕ್ಕೆ ೮,೦೦೦ ಮಂದಿ ಕಡಿಮೆ. ನಪ್ಥಲಿಯ ಕುಲಕ್ಕೆ ೮,೦೦೦ ಮಂದಿ ಕಡಿಮೆ. ಜನರು ಹೆಚ್ಚಿದ ಕುಲಗಳ್ಯಾವವಂದರೆ: ಯೆಹೂದನ ಕುಲದಲ್ಲಿ ೧,೯೦೦ ಮಂದಿ, ಇಸ್ಸಕಾರನ ಕುಲದಲ್ಲಿ ೯,೯೦೦ ಮಂದಿ, ಜೆಬುಲೋನನ ಕುಲದಲ್ಲಿ ೩,೧೦೦ ಮಂದಿ, ಎಲ್ಲಾ ಕುಲಗಳಲ್ಲಿ ಹೆಚ್ಚಾಗಿ ಬೆಳದ ಮನಸ್ಸೆಯದರಲ್ಲಿ ೨೦,೫೦೦ ಮಂದಿ, ಬೆನ್ಯಮೀನನ ಕುಲದಲ್ಲಿ ೧೦,೨೦೦, ದಾನನ ಕುಲದಲ್ಲಿ ೧,೭೦೦, ಅಶೇರನ ಕುಲದಲ್ಲಿ ೧೧,೯೦೦ ಮಂದಿ ಹೆಚ್ಚಾದರು. ಕೆಲವು ಹೆಸರುಗಳು ಈ ಸಂಧಿಯಲ್ಲಿ ೧ನೆ ಸಂಧಿಯ ಬರೆವಣಿಗೆಗೆ ತುಸ ಬೇರೆಯಾಗಿ ಬರೆದವೆ. ೩೮ ವರ್ಷದ ಸಂಚಾರಕಾಲದಲ್ಲಿ ಇಷ್ಟು ಛೇದವಾದದ್ದು ಆಶ್ಚರ್ಯವಾದದ್ದಲ್ಲ. ಆದರೆ ಕಾಣುವಂಥ ಹೆಚ್ಚು ಕಡಿಮೆಯೇ ಗ್ರಂಥಕರ್ತನು ಸತ್ಯವಂತನೆಂಬದಕ್ಕೆ ಪ್ರಾಮಾಣ್ಯವಾಗಿದೆ. ಯಾಕೆಂದರೆ ಕಳ್ಳ ಬರೆವಣಿಗೆಯವನು, ತನ್ನ ಮೋಸವು ಬಲ್ಲವರಿಗೆ ಕಾಣ ಬಾರದಂತೆ, ಪರಸ್ಪರ ವಿರೋಧವಾಗಿ ಕಾಣುವ ಮಾತುಗಳನ್ನು ಅದೇ ಗ್ರಂಥದಲ್ಲಿ ಶೇರಿಸಲೂ, ಲಿಖಿತವಾಗಿದ್ದರೂ ಅದರಲ್ಲಿ ಉಳಿಸಿ ಬಿಡಲೂ, ಮನಸ್ಸುಳ್ಳವನಾಗಿರುತ್ತಿದ್ದಿಲ್ಲವಲ್ಲೆ?

ವ. ೫೨—೬೩. ದೇಶವನ್ನು ವಿಭಾಗಿಸುವ ಪ್ರಮಾಣದ ವಿಷಯವಾಗಿ ನೇಮಕವಾದದ್ದೇನಂದರೆ: ೧, ಹನ್ನೆರಡು ಕುಲಕ್ಕೆ ವಿಂಗಡವಾದ ಹನ್ನೆರಡು ನಾಡುಗಳಲ್ಲಿ ಯಾವ ನಾಡು ಯಾವ ಕುಲಕ್ಕೆ ಸಿಕ್ಕುವದೆಂಬದಕ್ಕೆ ಚೀಟು ಹಾಕುವದು. ೨, ನಾಡುಗಳ ಉದ್ದಗಲವನ್ನು ಆಯಾ ಕುಲದವರ ಲೆಖ್ಖಕ್ಕೆ ಈಡಾಗಿ ನಿರ್ಣೈಸುವದು. ೩, ಆಯಾ ಕುಲದವರ ಭೂಮಿಗಳನ್ನು ಒಂದೆ ನಾಡಾಗಿ ಒಟ್ಟುಗೂಡಿಸುವದು.

ಪ್ರತ್ಯೇಕವಾದ ನಾಡು ಹೊಂದದೆ ಇದ್ದ ಲೇವಿಯವರ ಲೆಖ್ಖವು ಉಳಿದ ಕುಲಗಳ ಜನಗಣನೆಯ ಪಟ್ಟಿಯಲ್ಲಿ ಶೇರದೆ, ಅದರ ಹಿಂದಣ ಪರಿಶಿಷ್ಟವಾಗಿ ಬರೆದದೆ. ಒಂದು ತಿಂಗಳಿನ ಪ್ರಾಯದ ಮಕ್ಕಳು ಮುಂತಾದ ಗಂಡಸರಾದ ಲೇವಿಯವರು ಒಟ್ಟುಗೂಡಿ ೨೩,೦೦೦ ಮಂದಿಯಾಗಿದ್ದರು. ಅವರ ವಂಶಾವಳಿಯು ಆರೋನನ ವರೆಗೆಯೇ ವಿವರವಾಗಿ ಬರೆದದೆ. ಲೇವಿಯ ಮಗಳೆಂದು, ೫೯ನೆ ವಚನದಲ್ಲಿ ಹೆಸರ್ಗೊಂಡವಳಾದ ಆರೋನನ ತಾಯಾದ ಯೋಕೆಬೆದಳು ಲೇವಿಯ ಮರಿಮಗಳಾಗಿದ್ದಳೆಂದು ಎಣಿಸ ಬಹುದು.

ಹೆಣ್ಣು ಮಕ್ಕಳ ಸಂತಾನ ಮೊದಲಾದ ಕಟ್ಟಳೆಗಳು. ಸ. ೨೭, ೧—೧೧.

ಮನಸ್ಸೆಯ ಕುಲದವನಾದ ಚೆಲಾಫೆಹಾದನು ಗಂಡು ಮಕ್ಕಳಿಲ್ಲದೆ ಸತ್ತ ಬಳಿಕ, ಅವನಿಗುಳಿದ ನಾಲ್ಕು ಮಂದಿ ಹೆಣ್ಣು ಮಕ್ಕಳು ಸಭೆಯ ಮುಂದೆ ಬಂದು, ತಮ್ಮ ತಂದೆಯ ಹೆಸರೂ ಮನೆಯೂ ಅಳಿದು

ಹೋಗ ಬಾರದೆಂತಲೂ, ಅವನ ಭೂಮಿಗೆ ಹೆಣ್ಣುಗಳಾದ ತಾವು ಬಾಧ್ಯಸ್ಥರಾಗ ಬೇಕೆಂತಲೂ, ಬೇಡಿ
ಕೊಂಡಾಗ, ಯೆಹೋವನು ಮೋಶೆಗೆ ಕೊಟ್ಟ ಅಪ್ಪಣೆ ಏನಂದರೆ: ವ. ೭. "ಚೆಲಾಫಃಹಾದನ ಹೆಣ್ಣು
ಮಕ್ಕಳು ನುಡಿದದ್ದು ಸರಿ. ಅವರ ತಂದೆಯ ಸಹೋದರರ ನಡುವೆ ಅವರಿಗೆ ಬಾಧ್ಯತೆಯ ಸ್ವತಂತ್ರವನ್ನು
ಅವರಿಗೆ ಕೊಟ್ಟೇ ಕೊಡ ಬೇಕು. ಅವರ ತಂದೆಯ ಬಾಧ್ಯತೆಯನ್ನು ಅವರಿಗೆ ಶೇರಿಸ ಬೇಕು. ೮. ಮತ್ತು
ಇಸ್ರಯೇಲನ ಮಕ್ಕಳಿಗೆ ನುಡಿಯ ಬೇಕಾದದ್ದೇನಂದರೆ: ಒಬ್ಬನು ಸಾಯುವಾಗ ಅವನಿಗೆ ಮಗನಿಲ್ಲದಿರೆ, ಅ
ವನ ಬಾಧ್ಯತೆಯನ್ನು ಅವನ ಮಗಳಿಗೆ ಶೇರಿಸ ಬೇಕು. ೯. ಅವನಿಗೆ ಮಗಳೂ ಇಲ್ಲದಿರೆ, ಅವನ ಬಾಧ್ಯತೆ
ಯನ್ನು ಅವನ ಒಡಹುಟ್ಟಿದವರಿಗೆ ಕೊಡ ಬೇಕು. ೧೦. ಅವನಿಗೆ ಒಡಹುಟ್ಟಿದವರೂ ಇಲ್ಲದಿರೆ, ಅವನ
ಬಾಧ್ಯತೆಯನ್ನು ಅವನ ತಂದೆಯ ಒಡಹುಟ್ಟಿದವರಿಗೆ ಕೊಡ ಬೇಕು. — — "

ಮೋಶೆಯ ಮರಣಕಾಲ ಪ್ರಕಟಣೆ. ಯೆಹೋಷುವನು ಅವನ ಪ್ರತಿನಿಧಿಯಾಗಿ ನೇಮಕವಾದದ್ದು. ಸ. ೨೭, ೧೨—೨೩.

೧೨. ಬಳಿಕ ಯೆಹೋವನು ಮೋಶೆಗೆ ಹೇಳಿದ್ದು: ಈ ಅಬರೀಮ್[೧] ಬೆಟ್ಟದ ಮೇ
ಲೆ ಏರಿ, ನಾನು ಇಸ್ರಯೇಲನ ಮಕ್ಕಳಿಗೆ ಕೊಟ್ಟ ದೇಶವನ್ನು ನೋಡು. ೧೩. ಅದನ್ನು
ನೋಡಿದ ಮೇಲೆ, ನಿನ್ನ ಅಣ್ಣನಾದ ಆರೋನನು ಕೂಡಿಸಿ ಕೊಂಡ ಪ್ರಕಾರ, ನೀನೂ
ನಿನ್ನ ಜನಕ್ಕೆ ಕೂಡಿಸಿ ಕೊಳ್ಳುವಿ. ೧೪. ಯಾಕಂದರೆ ನೀವು ಚಿನ್ ಅರಣ್ಯದೊಳಗಾದ
ಸಭೆಯ ಎದುರಾಟದಲ್ಲಿ ನನ್ನ ಮಾತು ಮೀರಿ, ಅವರ ಕಣ್ಣಾರೆ ನೀರಿನ ಬಳಿಯ ನನ್ನ
ನ್ನು ಪರಿಶುದ್ಧ ಮಾಡದೆ ಹೋದಿರಿ[೨]. ಚಿನ್ ಅರಣ್ಯದ ಕಾದೆಷದಲ್ಲಿಯಣ ಎದುರಾ
ಟದ ನೀರು ಇದೇ. ೧೫. ಬಳಿಕ ಮೋಶೆ ಯೆಹೋವನಿಗೆ ನುಡಿದದ್ದೇನಂದರೆ: ೧೬.
ಎಲ್ಲಾ ಮಾಂಸದ ಆತ್ಮಗಳ ದೇವನಾದ[೩] ಯೆಹೋವನು ಈ ಸಭೆಯ ಮೇಲೆ, ಅವರ
ಮುಂದೆ ಹೋಗುವಂಥ ಅವರ ಮುಂದೆ ಬರುವಂಥ, ಅವರನ್ನು ಹೋಗಲೀಸುವಂಥ,
೧೭. ಅವರನ್ನು ಬರಲೀಸುವಂಥ ಮನುಷ್ಯನನ್ನು, ಯೆಹೋವನ ಸಭೆಯು ಕುರುಬನಿ
ಲ್ಲದ ಕುರಿಗಳಂತೆ ಇರದ ಹಾಗೆ, ನೇಮಿಸಲಿ. ೧೮. ಆಗ ಯೆಹೋವನು ಮೋಶೆಗೆ ಹೇ
ಳಿದ್ದು: ಆತ್ಮವುಳ್ಳ ಮನುಷ್ಯನಾಗಿರುವ ನೂನನ ಮಗನಾದ ಯೆಹೋಷುವನನ್ನು ನಿನ
ಗೆ ತಕ್ಕೊಂಡು, ಅವನ ಮೇಲೆ ನಿನ್ನ ಕೈಯಿಟ್ಟು, ೧೯. ಅವನನ್ನು ಯಾಜಕನಾದ ಎಲಿ
ಯೇಜರನ ಮುಂದೆಯೂ, ಸಭೆಯೆಲ್ಲಾದರ ಮುಂದೆಯೂ ನಿಲ್ಲಿಸಿ, ಅವರಿಗೆ ಕಣ್ಣಾರೆ
ಅವನಿಗೆ ಅಪ್ಪಣೆ ಕೊಡು. ೨೦. ಮತ್ತು ಇಸ್ರಯೇಲನ ಮಕ್ಕಳ ಸಭೆಯೆಲ್ಲಾ ಅವನಿ
ಗೆ ಕಿವಿ ಕೊಡುವ ಹಾಗೆ, ಅವನ ಮೇಲೆ ನಿನ್ನ ಮಹಿಮೆಯ ಪಾಲು[೪] ಇಡು. ೨೧.
ಬಳಿಕ ಅವನು ಯಾಜಕನಾದ ಎಲಿಯೇಜರನ ಮುಂದೆ ನಿಲ್ಲಲಿ. ಇವನು ಯೆಹೋವನ
ಮುಂದೆ ಊರೀಮಿನ ನ್ಯಾಯದಿಂದ ಅವನಿಗಾಗಿ ಪ್ರಶ್ನೆ ಕೇಳುವನು. ಅವನೂ ಅವನೊ
ಡನೆ ಇರುವ ಇಸ್ರಯೇಲನ ಮಕ್ಕಳೆಲ್ಲರೂ, ಸಭೆಯೆಲ್ಲಾ ಅವನ ಬಾಯ ಪ್ರಕಾರ ಹೋ
ಗುವದು, ಅವನ ಬಾಯ ಪ್ರಕಾರ ಬರುವದು. ೨೨. ಮತ್ತು ಮೋಶೆ, ಯೆಹೋ

ವನು ಅವನಿಗೆ ಬೆಸಸಿದಂತೆ, ಮಾಡಿ, ಯೆಹೋಷುವನನ್ನು ತಕ್ಕೊಂಡು, ಅವನನ್ನು ಯಾ
ಜಕನಾದ ಎಲಿಯೇಜರನ ಮುಂದೆಯೂ, ಎಲ್ಲಾ ಸಭೆಯ ಮುಂದೆಯೂ ನಿಲ್ಲಿಸಿ,
೨೩. ಅವನ ಮೇಲೆ ತನ್ನ ಕೈಗಳನ್ನಿಟ್ಟು, ಯೆಹೋವನು ಮೋಶೆಯ ಕೈಯಿಂದ ನುಡಿದ
ಪ್ರಕಾರ, ಅವನಿಗೆ ಅಪ್ಪಣೆ ಕೊಟ್ಟನು.

೧. ದ್ವಿತೀ. ೩೨, ೪೯. ೫೦; ೩೪, ೧ರಲ್ಲಿ ನೆಬೋ ಎಂಬದಾಗಿ ಬರೆದಿರುವ ಗುಡ್ಡವು ಈ ಬೆಟ್ಟದಲ್ಲಿ ಇತ್ತೆಂದು, ಕಾಣುತ್ತದೆ. ಹ್ಯಾಗಾದರೂ ಅದು ಯರೇಹೋವಿಗೆದುರಾದ ಯೊರ್ದಾನ ನದಿಯ ಮೂಡಣ ಕಡೆಯಲ್ಲಿ ಹೆಷ್ಬೋನಿಗೂ ಸಾವಿನ ಕಡಲಿಗೂ ನಡುವೆಯಲ್ಲಿತ್ತು.

೨. ಮೋಶೆಯು ಮರಣಕ್ಕೆ ಮುಂಚೆ ತನ್ನ ಆಧಿಪತ್ಯದ ಮುಂದಣ ಸಾಧನೆಗೆ ಅವಶ್ಯವಾದದ್ದನ್ನು ಹವಣಿಸುವ ಹಾಗೆ, ಎದುರಾಟದ ನೀರೆಂಬಲ್ಲಿ ಮಾಡಿದ ತಪ್ಪನ್ನು ಅವನಿಗೆ ಯೆಹೋವನು ನೆನಪಿಗೆ ತಂದು, ಸಾಯುವ ಹೊತ್ತು ಹತ್ತರವಾಯಿತೆಂಬದನ್ನು ಮುಂತಿಳಿಸುತ್ತಾನೆ. ಅವನಿಂದಲಾಗ ಬೇಕಾಗಿದ್ದ ಮೊದಲನೇದು ಏನಂದರೆ: ಜನಾಂಗವನ್ನಾಳ ತಕ್ಕ ಪ್ರತಿನಿಧಿಯ ನೇಮಕವು, ಎರಡನೇದು, ಮಿದ್ಯಾನದವರ ದಂಡನೆಯು.

೩. ಅಂದರೆ ಸರ್ವಜೀವಮೂಲಕಾರಣವು.

೪. ನಿನ್ನ ಮಹಿಮೆ—ಅಂದರೆ. ದೇವನಿಂದ ನಿನಗೆ ಉಂಟಾದ ಅದ್ಭುತಶಕ್ತಿ ಆಧಿಪತ್ಯಘನತೆಗಳು, ಅದರ ಪಾಲು ಯೆಹೋಷುವನಿಗೆ ಪ್ರಾಪ್ತವಾದದ್ದು ಅವನಿಗೆ ಅತಿಶಯವಾದ ಪ್ರತಿಷ್ಠೆಯಾಯಿತು. ಆದರೂ ಅವನು ಮೋಶೆಗಿಂತ ಕಡಿಮೆಯವನಾದನು. ಯಾಕಂದರೆ ನಿನ್ನ ಮಹಿಮೆಯೆಂದಲ್ಲ, ನಿನ್ನ ಮಹಿಮೆಯ ಪಾಲು ಎಂದು, ಬರೆದದೆ. ಹೀಗಿರಲಾಗಿ ಎಲಿಯೇಜರನನ್ನು ಊರೀಮ್ ಥುಮ್ಮೀಮ್ ಎಂಬದರಿಂದ ಪ್ರಶ್ನೆ ಕೇಳಿಸ ಬೇಕೆಂಬ ಅಪ್ಪಣೆ ಹೊಂದುತ್ತಾನೆ. ವ. ೨೧.

ಸಂಧಿ. ೨೮. ೨೯.

ವಾಗ್ದತ್ತದೇಶ ಪ್ರವೇಶವು ಸಮೀಪಿಸಲಾಗಿ, ಯೊರ್ದಾನ ನದಿಯ ಮೂಡಣ ದಿಕ್ಕಿನಲ್ಲಿರುವ ದೊಡ್ಡ ಸೀಮೆಯನ್ನು ಆಕ್ರಮಿಸಿ ಕೊಂಡು, ಶಾನೆ ಕೊಳ್ಳೆ ಮಾಡಿ, ಹೇರಳ ಪಶ್ವಾದಿಗಳನ್ನು ಘಳಿಸಿದಂಥ ಜನಾಂಗಕ್ಕೆ ಬಲಿಯರ್ಪಣೆಯ ಕಟ್ಟಳೆಗಳನ್ನು ಕೊಡುವದಕ್ಕೆ ತಕ್ಕ ಸಮಯವು ಉಂಟಾಗಿತ್ತು. ಇವೆರಡು ಸಂಧಿಗಳಲ್ಲಿ ಬಲಿನೇಮಧಾನವಿವರವು ಬರೆದದೆ. ಹ್ಯಾಗಂದರೆ, ಅನುದಿನದ ಬಲಿಗಳು. ಸ. ೨೮, ೧—೮. ಸಬ್ಬಥ್ ಪಾಡ್ಯ ದಿವಸಗಳ ಬಲಿಗಳು. ೯—೧೫. ಪಸ್ಕಾಃ ಹಬ್ಬದ ಬಲಿಗಳು. ೧೬—೨೫. ಪಂಚಾಶತ್ತಮದಿನಹಬ್ಬದ ಬಲಿಗಳು. ೨೬—೩೧. ತುತೂರಿಯ ದಿನದ ಬಲಿಗಳು. ಸ. ೨೯, ೧—೬. ಪಾಪವಿಮೋಚನದಿನದ ಬಲಿಗಳು. ೭—೧೧. ಗುಡಾರಗಳ ಹಬ್ಬದ ಬಲಿಗಳು. ೧೨—೩೯. ಸ. ೩೧, ೧. ನೇಮಕವಾಗುತ್ತವೆ.

ಸಂಧಿ ೩೦.

ಇದರ ತಾತ್ಪರ್ಯವು ಸ್ವಾಧೀನರೂ ಪರಾಧೀನರೂ ಮಾಡಿದ ಹರಿಕೆಗಳನ್ನು ಸಲ್ಲಿಸುವ ಹಂಗಿನ ವಿಷಯವಾದದ್ದು. ಬೇರೆ ಬೇರೆ ಹರಿಕೆಯ ವಿಧಗಳನ್ನು ಕುರಿತು ಈ ಗ್ರಂಥದ ೬ನೆ ಸಂಧಿಯಲ್ಲಿಯೂ ಲೇವಿ. ೭, ೬. ಸ. ೨೭ರಲ್ಲಿಯೂ ಬೇಕಾದದ್ದು ಬರೆದದೆ. ಈ ಸಂಧಿಯು ಮಾಡಿದ ಹರಿಕೆಯನ್ನು ಸಲ್ಲಿಸುವ ಹಂಗಿನ ವಿಷಯವಾದದ್ದೇ, ಏನಂದರೆ ಮಾಡಿದ ಹರಿಕೆಯನ್ನು ತೀರಿಸುವದಕ್ಕೆ ಯಾರಿಗೆ ಅಪ್ಪಣೆಯೂ ಬಲವೂ ಉಂಟೋ, ಅವರು ಹರಿಕೆ ತೀರಿಸುವ ಹಂಗಿನಲ್ಲಿದ್ದಾರೆ. ಆದರೆ ಮಕ್ಕಳು ಹೆಂಗಸರು ಕೈಯಾಳುಗಳು ಮುಂತಾದ ಪರಾಧೀನರ ಯಜಮಾನರು ಒಪ್ಪಿ ಕೊಂಡಲ್ಲಿಯೇ ಅವರು ತಮ್ಮ ಹರಿಕೆಯನ್ನು ತೀರಿಸಲಾಪರು. ಯಜಮಾನರು, ಸಮ್ಮತಿಸಿದನಂತರ, ಅಡ್ಡಿ ಮಾಡಿದರೆ, ಹರಿಕೆಯನ್ನು ಮೀರಿದ ಅಪರಾಧಕ್ಕೆ ಒಳಗಾಗುತ್ತಾರೆ.

ಕರ್ತನು ಮಿದ್ಯಾನದವರ ಪಾಪಕ್ಕೆ ಮುಯ್ಯಿ ಕೊಟ್ಟದ್ದು. ಕೊಳ್ಳೆಯ ಹಂಚಿಕೆ. ಸ. ೩೧, ೧—೮.

೧. ಮತ್ತು ಯೆಹೋವನು ಮೋಶೆಗೆ ನುಡಿದದ್ದೇನಂದರೆ: ೨. ಇಸ್ರಯೇಲನ ಮ
ಕ್ಕಳ ಮುಯ್ಯನ್ನು ಮಿದ್ಯಾನದವರಲ್ಲಿ[೧] ತೀರಿಸು. ಬಳಿಕ ನಿನ್ನ ಜನಕ್ಕೆ[೨] ಕೂಡಿಸಿ ಕೊ
ಳ್ಳ ಬೇಕು. ೩. ಆಗ ಮೋಶೆ ಜನಾಂಗಕ್ಕೆ ನುಡಿದದ್ದೇನಂದರೆ: ನಿಮ್ಮಲ್ಲಿಂದ ಆಳುಗಳ
ನ್ನು ದಳಕ್ಕೆ ಅಣಿ ಮಾಡಿರಿ. ಅವರು ಯೆಹೋವನ ಮುಯ್ಯನ್ನು ಮಿದ್ಯಾನದವರಲ್ಲಿ
ತೀರಿಸುವ ಬಗ್ಯೆ ಮಿದ್ಯಾನದವರನ್ನು ಎದುರಿಸ ಬೇಕು. ೪. ಇಸ್ರಯೇಲನವರ ಎಲ್ಲಾ
ಕುಲಗಳಲ್ಲಿ ಕುಲ ಕುಲಕ್ಕೆ ಸಾವಿರ ಸಾವಿರ ಮಂದಿ ದಳಕ್ಕೆ ಕಳುಹಿಸ ಬೇಕು. ೫. ಆಗ
ಇಸ್ರಯೇಲನವರ ಸಾವಿರಗಳೊಳಗಿಂದ ಕುಲಕ್ಕೆ ಸಾವಿರ ಮಂದಿಯಾಗಿ ದಳಕ್ಕೆ ಅಣಿ
ಯಾದ ಹನ್ನೆರಡು ಸಾವಿರ ಆಳುಗಳು ಆಯಿಕೆಯಾದರು. ೬. ಮೋಶೆ, ಕುಲಕ್ಕೆ ಸಾ
ವಿರ ಮಂದಿಯಾಗಿ, ಅವರನ್ನೂ, ಯಾಜಕನಾದ ಎಲಿಯೇಜರನ ಮಗನಾದ ಫಿನೆಹಾ
ಸನನ್ನೂ[೩] ಪರಿಶುದ್ಧ ಸಾಮಗ್ರಿಯನ್ನೂ[೪] ಜಯಧ್ವನಿಯ ತುತೂರಿಗಳನ್ನೂ ಅವನ
ಕೈಯಲ್ಲಿಟ್ಟು ದಳಕ್ಕೆ ಕಳುಹಿಸಿದನು. ೭. ಯೆಹೋವನು ಮೋಶೆಗೆ ಬೆಸಸಿದಂತೆ ಅವ
ರು ಮಿದ್ಯಾನದವರ ಮೇಲೆ ದಳವನ್ನು ಕೊಂಡು ಹೋಗಿ ಗಂಡಸರನ್ನೆಲ್ಲಾ ಕೊಂದರು.

೧. ಮಿದ್ಯಾನದವರು ಬಿಲೆಯಾಮನ ಆಲೋಚನೆಯ ಪ್ರಕಾರ ಇಸ್ರಯೇಲನವರನ್ನು ಮೋಸಗೊಳ್ಳಿಸಿ, ವಿಗ್ರಹಪೂಜೆ ಸೂಳೆತನಗಳ ಪಾಪಕ್ಕೆ ಎಳಸಿದ್ದರು. ದೇವರ ಜನಾಂಗವನ್ನು ಮಹಾ ಪಾತಕದಲ್ಲಿ ಬೀಳಿಸಿ ೨೪೦೦೦ ಮಂದಿಯನ್ನು ವ್ಯಾಧಿಯಿಂದ ನಾಶವಾಗಲೀಸಿದ್ದಕ್ಕಾಗಿ ಅವರು ಈಡಾದ ಶಿಕ್ಷೆಯನ್ನು ತಾಳುವದು ನ್ಯಾಯವಾಗಿತ್ತು.

೨. ಜನಾಂಗನಾಯಕನಾದ ಮೋಶೆ ಸಾಯುವದಕ್ಕಿಂತ ಮುಂಚೆ ನಡಿಸಿದ ಈ ಕಡೇ ಕೆಲಸದಿಂದ ತನಗಿದ್ದ ಸೈನ್ಯಾಧಿಪತ್ಯೋದ್ಯೋಗವೃತ್ತಿಯನ್ನು ಮುಗಿಸಿದನು.

೩. ಅವನಲ್ಲಿದ್ದ ಅಧಿಕವಾದ ಭಕ್ತ್ಯಾಸಕ್ತಿಯ ವರ್ಣನೆ ಸ. ೨೫, ೭ರಲ್ಲಿ ಬರೆದದೆ.

೪. ಕೆರೂಬರ ಮೂರ್ತಿಗಳು ನಿಂತಿರುವ ಮುಚ್ಚಳವುಳ್ಳ ಸಾಕ್ಷೀ ಪೆಟ್ಟಿಗೆಯು ಇಲ್ಲಿ ಪರಿಶುದ್ಧ ಸಾಮಗ್ರಿಯೆಂದೆನ್ನಿಸಿ ಕೊಳ್ಳುತ್ತದೆಂತ, ತೋರುತ್ತದೆ. ಯಾಜಕರವನೊಬ್ಬನು ಒಡಂಬಡಿಕೆಯ ಪೆಟ್ಟಿಗೆ ತಕ್ಕೊಂಡು ರಣಕ್ಕೆ ಹೋದದ್ದು, ಈ ಕಾಳಗವು ಪರಿಶುದ್ಧವಾದದ್ದೆಂದು, ಸೂಚಿಸಿತು.

ವ. ೯—೨೪. ಈ ಪ್ರಕರಣದ ಮುಖ್ಯ ತಾತ್ಪರ್ಯವೇನಂದರೆ: ಮಿದ್ಯಾನದವರೊಡನೆ ನಡೆದ ಈ ಯುದ್ಧವು ಒಂದು ಪರಿಯಾಗಿ ಇತ್ತಲಾಗಿ ಕನಾನ ದೇಶದವರ ಸಂಗಡ ಇಸ್ರಯೇಲನವರು ಮಾಡ ಬೇಕಾದ ಸಂಹಾರಾರ್ಥ ಕಾಳಗಗಳಿಗೆ ಮಾದರಿಯಾಗಿತ್ತು. ಹ್ಯಾಗಂದರೆ, ಇಸ್ರಯೇಲನವರು ದೇವಾಜ್ಞೆಗೆ ಅನುಸಾರವಾಗಿ ಪಶ್ವಾದಿಗಳೆಲ್ಲಾನ್ನೂ ಹೊನ್ನು ಹಣ ಮುಂತಾದ ಒಡವೆಗಳೆಲ್ಲಾನ್ನೂ ಸೂರೆಗೊಂಡು, ಪಟ್ಟಣ ಕೋಟೆಗಳನ್ನೆಲ್ಲಾ ಹಾಳು ಮಾಡಿ, ಕೊಳ್ಳೆಯನ್ನೆಲ್ಲಾ ಮೋಶೆ ಪ್ರಧಾನಯಾಜಕರ ಮುಂದೆ ತಂದಿಟ್ಟು, ಗಂಡಸರನ್ನೆಲ್ಲಾ ಕೊಂದು, ಹೆಂಗಸರನ್ನೇ ಬದುಕಲೀಸಿದರು. ಮತ್ತು ಕೊಳ್ಳೆ ಮಾಡಿದ ಪಂಚಲೋಹ ಪದಾರ್ಥಗಳನ್ನು ಬೆಂಕಿಯಿಂದ ಕಾಸಿ, ತೊಗಲು ಬಟ್ಟೆ ಕಂಬಳಿ ಮುಂತಾದದ್ದನ್ನು ನೀರಿನಿಂದ ತೊಳೆದು ಪವಿತ್ರ ಮಾಡಿದರು.

೩೫೨ ರೂಬೇನ ಗಾದರ ಕುಲಗಳಿಗೆ ಸ್ವಾಸ್ಥ್ಯ ನೇಮಕವಾದದ್ದು.

ಅಂಕೆ. ೩೧, ೨೫—೫೪; ೩೨.

ವ. ೨೫—೫೪. ಕೊಳ್ಳೆಯಿಟ್ಟ ಮನುಷ್ಯರನ್ನೂ ಪಶ್ವಾದಿಗಳನ್ನೂ ಎರಡು ಪಾಲು ಮಾಡಿ, ಅರ ಪಾಶಿಯನ್ನು ಕೊಳುಗುಳಕ್ಕೆ ಹೋದ ಕಾದಾಳುಗಳಿಗೆ, ಅರಪಾಶಿಯನ್ನು ದಂಡಿಳಿದ ಸ್ಥಳದಲ್ಲಿ ನಿಂತಿದ್ದ ಸಭೆಗೆ ಹಶಿಗೆ ಮಾಡಿ, ಕಾದಾಳುಗಳ ಪಾಲಿನ ಐನೂರರಲ್ಲಿ ಒಂದು ಪ್ರಾಣಿಯನ್ನು ಯೆಹೋವನ ಗುತ್ತಿಗೆಯಾಗಿ ಯಾಜಕರಿಗೆ ಕೊಡ ಬೇಕೆಂತಲೂ, ಸಭೆಯವರ ಪಾಲಿನ ಐವತ್ತು ಪ್ರಾಣಿಗಳಲ್ಲಿ ಒಂದು, ಹೆಚ್ಚು ಮಂದಿಯಾದ ಲೇವಿಯವರಿಗೆ ಸಿಕ್ಕ ಬೇಕೆಂತಲೂ, ಅಪ್ಪಣೆಯಾಯಿತು. ಬಳಿಕ ದಳದ ಅಧಿಪತಿಗಳು ಬಂದು, ತಮ್ಮ ಪಾಪವಿಮೋಚನೆಗಾಗಿಯೂ, ದಳದವರಲ್ಲಿ ಒಬ್ಬನಾದರೂ ರಣದಲ್ಲಿ ಸತ್ತು ಹೋಗದೆ, ಎಲ್ಲರೂ ಉಳಿದದ್ದಕ್ಕೆ ಕೃತಜ್ಞಾರ್ಥವಾಗಿಯೂ, ಸುಲಿಗೆ ಮಾಡಿದ ಬೆಳ್ಳಿ ಚಿಂಗಾರದಿಂದ ಉಚಿತಂಗಳನ್ನು ತಂದು ಕೊಟ್ಟರು. ಹೀಗಾಗಿ ನೇಮಕವಾದ ಹಶಿಕೆಯಿಂದ ಲೇವಿಯವರಿಗೂ ಯಾಜಕರಿಗೂ ಸಿಕ್ಕಿದ್ದನ್ನಲ್ಲದೆ, ೧೬,೭೫೦ ಷೆಕೆಲ್ ಹೊನ್ನು ಸಾಕ್ಷೀ ಗುಡಾರದ ಬೊಕ್ಕಸಕ್ಕೆ ಬಂತು.

ರೂಬೇನ ಗಾದರ ಕುಲಗಳು ಬೇಡಿದ ಪ್ರಕಾರ, ಯೊರ್ದಾನದ ಮೂಡಣದ ನಾಡುಗಳು ಅವರಿಗೆ ಸ್ವಾಸ್ಥ್ಯವಾಗಿ ನೇಮಕವಾದದ್ದು. ಮನಸ್ಸೆಯ ಅರ್ಧಕುಲವೂ ನದಿಯ ಮೂಡಣ ದಿಕ್ಕಿನಲ್ಲಿ ಸ್ವಾಸ್ಥ್ಯವನ್ನು ಹೊಂದಿದ್ದು. ಸಂಧಿ ೩೨.

ಹೇರಳ ದನ ಕುರಿ ಮುಂತಾದ ಪಶುಗಳ ಮಂದೆಗಳುಳ್ಳ ರೂಬೇನ ಗಾದರ ಕುಲಗಳವರು ತಮ್ಮಿಂದ ಅಪಜಯರಾದ ಓಗ ಶೀಹೋನರು ಮುಂಚೆ ಆಳಿದ ಶೀಮೆಯ ವಿಸ್ತಾರವಾದ ಹುಲ್ಲುಗಾವಲುಗಳನ್ನೂ ಮಳೆಗಾಲದಲ್ಲಿಯಾದರೂ ಹಸುರು ಮೇವು ದೊರಕುವ ನೆರೆಯಾದ ಅರಣ್ಯಗಳನ್ನೂ ಕಂಡು, ಈ ಹಸಗಟ್ಟಿಯಾದ ನಾಡುಗಳಲ್ಲಿಯೇ ವಸ್ತಿಯಾಗುವದು ಶಾನೆ ಅನುವಾದದ್ದೆಂದು, ಎಣಿಸಿ ಕೊಂಡರು. ನದಿಯ ಮೂಡಣದಲ್ಲಿರುವ ನಾಡುಗಳು ನಿಜವಾದ ಕನಾನ ದೇಶದ ಅಂಶವಲ್ಲವೆಂಬುವದು ಸರಿ. ಆದರೆ ನಾಶನಕ್ಕೆ ವಿಶೇಷವಾಗಿ ಹಣ್ಣಾಗುತ್ತಾ ಬರುವ ಕನಾನದವರಾದ ಅಮೋರಿಯರು ಅಲ್ಲಿದ್ದ ಪೂರ್ವ ನಿವಾಸಿಗಳ ಸಂಗಡ ಬಲವಾಗಿ ಕಾದಿ, ಅವರನ್ನು ಗೆದ್ದು, ಅಲ್ಲಿ ದೊಡ್ಡ ರಾಜ್ಯವನ್ನು ಕಟ್ಟಿ ಕೊಂಡದರಿಂದ, ಇಸ್ರಾಯೇಲನವರು ಅವರ ಶೀಮೆಯನ್ನು ವಶೀಕರಿಸಿ, ವಾಗ್ದತ್ತವಾದ ಕನಾನ ದೇಶಕ್ಕೆ ಕೂಡಿಸಲಧಿಕಾರಿಗಳಾದರು. ರೂಬೇನ ಗಾದರ ಕುಲಗಳವರೂ, ಅವರನ್ನನುಸರಿಸುವ ಅರ್ಧ ಮನಸ್ಸೆಯ ಕುಲದವರೂ, ಅಚ್ಚವಾದ ಕನಾನ ದೇಶದಲ್ಲಿ ತಮಗೆ ಬರ ತಕ್ಕ ಬಾಧ್ಯತೆಯನ್ನು ಬಿಟ್ಟು, ಈ ಶೀಮೆಯನ್ನು ಸ್ವತಂತ್ರಿಸಿ ಕೊಳ್ಳಲಪೇಕ್ಷಿಸಿ, ತಮ್ಮ ಬಯಕೆಯನ್ನು ಮೋಶೆಗೂ ಎಲಿಯೇಜರನಿಗೂ ಉಳಿದ ಕುಲಗಳ ಹಿರಿಯರಿಗೂ ಅರಿಕೆ ಮಾಡಲು, ಮೋಶೆ ಮೊದಲಾಗಿ, ಅವರು ಪರಿಶುದ್ಧ ಕಾಳಗಕ್ಕೆ ತಪ್ಪಿಸಿ ಕೊಂಡು, ತಮ್ಮ ಸಹೋದರರು ಕಾದುವದನ್ನು ಸುಮ್ಮನೆ ದೃಷ್ಟಿಸುತ್ತಾ ಇರ ಮನಸ್ಸಾಗಿದ್ದಾರೆಂತ, ನೆನಸಿ, ಅವರನ್ನು ಘಟ್ಟಿಯಾಗಿ ಗದರಿಸುತ್ತಾನೆ. ಅವರು ಮೋಶೆಯ ವಾಗ್ದಂಡನೆಯಿಂದ ಎಚ್ಚರವಾದರೋ, ಮೊದಲೇ ಮೋಸದ ಬಗೆಯಿಲ್ಲದವರಾಗಿದ್ದು, ತಮ್ಮ ಬಯಕೆಯನ್ನು ಸ್ಪಷ್ಟವಾಗಿ ತಿಳಿಸಲಿಲ್ಲವಷ್ಟೆಯೋ ಏನೋ; ಹ್ಯಾಗಾದರೂ ವ. ೧೬ರಲ್ಲಿ "ನಮ್ಮ ದನಕ್ಕೆ ಹಟ್ಟಿಗಳನ್ನೂ ನಮ್ಮ ಮಕ್ಕಳಿಗೆ ಊರುಗಳನ್ನೂ ಕಟ್ಟ ಬೇಕೆಂದಿದ್ದೇವೆ ಅಷ್ಟೆ." ವ. ೧೭. "ಆದರೆ ನಾವು ಇಸ್ರಾಯೇಲನ ಮಕ್ಕಳ ಮುಂದೆ, ಅವರನ್ನು ತಮ್ಮ ಎಡೆಗೆ ಬರಲೀಸುವನಕಾ ತಟಾರನೆ ದಂಡೆತ್ತಿ ಹೋಗುತ್ತೇವೆ. ಅಷ್ಟರೊಳಗೆ ನಮ್ಮ ಮಕ್ಕಳು ದಕ್ಕಳು ದೇಶವಾಸಿಗಳ ದೆಸೆಯಿಂದ ಘಟ್ಟಿಯಾದ ಊರುಗಳಲ್ಲಿ ವಾಸವಾಗಿರ ಬೇಕು. ೧೮. ಇಸ್ರಾಯೇಲನ ಮಕ್ಕಳು ಆಳಾಳು ತನ್ನ ಸ್ವಾಸ್ಥ್ಯವನ್ನು ಪಡೆದು ಕೊಳ್ಳುವನಕಾ ನಮ್ಮ ಮನೆಗಳಿಗೆ ತಿರುಗಲೊಲ್ಲೆವು," ಅಂದರು. ಅವರು ಕೊಟ್ಟ ಈ ಮಾತಿಗೆ ಮೋಶೆ ಒಲಿದು, ಕೊಟ್ಟ ಮಾತು ಸರೀಸರಿಯಾಗಿ ಕೈಕೊಳ್ಳುವಿರಾದರೆ, ಮನಸ್ಸು ಬಂದಂತೆ ಮಾಡ ಬಹುದೆಂತ, ಅಪ್ಪಣೆ ಕೊಟ್ಟನು. ಗಿಲೆಯಾದವನ್ನು ಕಾದಿ ಗೆದ್ದ (೩೯. ೪೦.) ಅರ್ಧ ಮನಸ್ಸೆಯ ಕುಲಕ್ಕೆ ಅದನ್ನು ಸ್ವಾಸ್ಥ್ಯವಾಗಿ ಕೊಟ್ಟನು.

ಅಂಕೆ. ೩೩, ೧—೪೯.

ಮೋವಾಬದ ಗಡಿಗೆ ತಗಲಿರುವ ತೆಂಕಣ ಶೀಮೆಯು ರೂಬೇನನವರಿಗೆ, ರೂಬೇನನವರಿಗೂ ಮನಸ್ಸೆಯವರಿಗೂ ನಡುವೆಯಣ ಶೀಮೆಯು ಗಾದನವರ ಪಾಲಾಯಿತು. ಇವರ ಪಡುವಲಲ್ಲಿ ಯೊರ್ದಾನ ನದಿಯು, ಮೂಡಣದಲ್ಲಿ ಅಮ್ಮೋನನವರ ದೇಶವು. ಅರ್ಧ ಮನಸ್ಸೆಯ ಕುಲದವರಿಗೆ ಅವರು ತೋರಿಸಿದ ಕಲಿತನದ ಬಹುಮಾನಕ್ಕಾಗಿ ಯೊರ್ದಾನದ ಮೂಡಣ ಶೀಮೆಯಲ್ಲಿ ಹೆಚ್ಚಾದ ಪಾಲು ಸಿಕ್ಕಿತು.

ಹೀಗೆ ಈ ಎರಡೂವರೆ ಕುಲಗಳು ಉಳಿದ ಕುಲಗಳಿಗಿಂತ ಮುಂಚೆ ನೆಲೆಯಾದ ಇಕ್ಕೆಗಳನ್ನು ಪಡೆದು ಕೊಂಡವು. ಆದರೆ ಇತ್ತ್ರಲಾಗಿ ಅವು ತಮ್ಮ ಪಾಪಗಳಿಗಾಗಿ ಮೊದಲಾಗಿಯೇ ದೇಶಭ್ರಷ್ಟವಾದವು. ೧ ದಿನಚ. ೫, ೨೬.

ಸಂಧಿ ೩೩.

ಸೂಚನೆ: ೧, ಅರಣ್ಯಸಂಚಾರದ ಬೀಡುಗಳ ಅನುಕ್ರಮಣಿಕೆ. ವ. ೧—೪೯.
೨, ಆಗ ಶೇರಿ ಕೈವಶ ಮಾಡಿ ಕೊಳ್ಳ ತಕ್ಕ ಕನಾನ ದೇಶದ
ವಿಷಯವಾದ ಕಟ್ಟಳೆಗಳು. ವ. ೫೦—೫೬.

೧. ಈ ವಿಷಯವಾಗಿ ಮುಂಚೆ ಮಾಡಿದ ಕೆಲವು ಪ್ರಸ್ತಾಪಗಳಿಗೆ ಈಗ ಜೋಡಿಸ ತಕ್ಕದ್ದೇನಂದರೆ: ಈ ಸಂಧಿಯ ಪಟ್ಟಿಯಲ್ಲಿ ಶೇರಿದ ಪಯಣದ ಮೆಟ್ಟುಗಳಲ್ಲಿ ಹಲವು ಪೂರ್ವ ಚರಿತ್ರಗ್ರಂಥಗಳಲ್ಲಿ ಗೊತ್ತಾದವುಗಳು. ಕೆಲವಕ್ಕೆ ಇಸ್ರಯೇಲನವರೇ ಹೆಸರಿಟ್ಟರು. ವ. ೧೯—೩೬ರಲ್ಲಿ ಬರದಿರುವ ಬೀಡುಗಳ ಕ್ರಮವನ್ನು ಪಂಡಿತರು ಎರಡು ವಿಧವಾಗಿ ನಿರ್ಣೈಸುತ್ತಾರೆ. ಒಬ್ಬರು ಅವು ಸೀನಾಯಿಂದ ಹೊರಟು ಕಾದೆಷಕ್ಕೆ ಮೊದಲು ಬಂದ ಪಯಣದಲ್ಲಿ ಇಸ್ರಯೇಲನವರ ದಂಡು, ಅಲ್ಲಿ ಉಂಟಾದ ಆಜ್ಞೆಯ ನಿರ್ಣಯಕ್ಕೆ ಮುಂಚಿನ ಕಾಲದಲ್ಲಿ ಇಳು ಕೊಂಡ ಸ್ಥಳಗಳೆಂದು, ಸ್ಥಾಪಿಸುತ್ತಾರೆ. ಮತ್ತೊಬ್ಬರು ಅವನ್ನೆಲ್ಲಾ ಇಲ್ಲವೆ ಅವುಗಳಲ್ಲಿ ಕೆಲವನ್ನು (ವ. ೩೨—೩೬ರಲ್ಲಿ ಬರೆದವುಗಳನ್ನು) ೩೮ ಶಿಕ್ಷೆಯ ವರ್ಷಗಳ ಸಂಚಾರದಲ್ಲಿ ಶೇರಿಸುತ್ತಾರೆ. ಇವರ ಎಣಿಕೆ ಯಾವದಂದರೆ: ೩೨ನೆ ವಚನದಲ್ಲಿ ಬರೆದಿರುವ ಬ್ನೇಯಅಖಾನ್ ಎಂಬದಕ್ಕೆ (ಇದಕ್ಕೆ ದ್ವಿತೀ. ೧೦, ೬ರಲ್ಲಿ ಬೇರೋಥ್ ಬ್ನೇಯಅಖಾನ್ ಎಂಬ ಹೆಸರದೆ, ಅಂದರೆ, ಯಅಖಾನನ ಮಕ್ಕಳ ಚಾವಿಗಳು) ಅಥವಾ ೧೮ನೆ ವಚನದಲ್ಲಿ ಬರೆದಿರುವ ಹಚೆರೋತೆಂಬ ಸ್ಥಳಕ್ಕೆ ಇಸ್ರಯೇಲನವರು ಇತ್ತ್ರಲಾಗಿ ಕಾದೆಷೆಂಬ ಹೆಸರಿಟ್ಟರೆಂತಲೂ, ಅಲ್ಲಿಂದ ಅವರು ಯೆಹೋವನ ಶಿಕ್ಷೆಯ ನಿರ್ಣಯದ ಪ್ರಕಾರ ತಿರಿಗಿ ಎಚ್ಯೊನ್ ಗೆಬೆರ್ ಇದ್ದ ಆಪಿನ ಕಡಲಿಗೆ ಬಂದರೆಂತಲೂ, ನೆನಸುತ್ತಾರೆ. ಆ ಪಂಡಿತರ ಚಾವನೆಯೇನಂದರೆ: ಇಸ್ರಯೇಲನವರು ನೀಟಾದ ದಾರಿ ಹಿಡಿಯದೆ, ತಮ್ಮ ಮಂದೆಗಳಿಗಾಗಿ ಮೇವಿನ ಸ್ಥಳಗಳನ್ನರಸುತ್ತಾ, ಎಡ ಬಲ ಕಡೆಗೆ ತಿರುಗುತ್ತಾ, ಪಯಣ ಮಾಡಿದರೆಂತಲೂ, ಅವರು ಶಾಪಕ್ಕೊಳಗಾಗಿದ್ದು ಕಳೆದ ೩೮ ವರ್ಷದ ಪಯಣದ ಮೆಟ್ಟುಗಳ ಹೆಸರುಗಳು ಲಿಖಿತವಾಗಲಿಲ್ಲ, ಕಟ್ಟಕಡೆಯಲ್ಲಿ ಇಸ್ರಯೇಲನವರ ದಂಡು ೩೮ ವರ್ಷ ಕಳೆದ ಬಳಿಕ ತಿರಿಗಿ ಕಾದೆಷಕ್ಕೆ ಬಂದು ಇಳು ಕೊಂಡಂಥಾದ್ದಾಗಿ ಕಾಣಿಸಿ ಕೊಳ್ಳುತ್ತದೆಂತಲೂ, ಚಾವಿಸುತ್ತಾರೆ. ಆದರೆ ಈ ಎಣಿಕೆಗೆ ದ್ವಿತೀ. ೧೦, ೬ರಲ್ಲಿ ಬರೆದದ್ದು ಎಷ್ಟು ಮಾತ್ರವೂ ಒಪ್ಪಲಾರದು. ಇದನ್ನು ತಿಳು ಕೊಂಡು, ಆ ಬಗೆಯ ಪಂಡಿತರು, ಈ ವಚನಗಳು ಮುನ್ನಿನ ಕೈತಪ್ಪಿನಿಂದ ಆಗಿನದಲ್ಲಿ ಶೇರಿಯವೆಂದು, ಊಹಿಸುತ್ತಾರೆ. ಈ ಉಪಾಯವು ಅನುಚಿತವಾದದ್ದೇ ಸರಿ. ಆದದರಿಂದ ಮೊದಲಿನ ವ್ಯಾಖ್ಯಾನವು ಸುಲಭವಲ್ಲದಿದ್ದರೂ, ಅದನ್ನು ಕೈಕೊಳ್ಳುವದು ಲೇಸು. ಮೋಶೆಯ ಗ್ರಂಥಗಳಲ್ಲಿ ಬರದಿರುವ ಚರಿತ್ರದ ಸ್ಥಳ ಕಾಲಗಳು ನಮಗೆ ಬಹಳ ದೂರವಾಗಿರುವದರಿಂದ, ಆ ಸಂಗತಿಗಳನ್ನು ಅಚ್ಚುಕಟ್ಟಾಗಿ ಗ್ರಹಿಸುವದು ಶಾನೆ ಕಷ್ಟವಾದರೆ, ಬೆರಗ ಬೇಡ. ಎಚ್ಯೊನ್ ಗೆಬೆರಕ್ಕೂ ಕಾದೆಷಕ್ಕೂ (ವ. ೩೬.)

ನಡುವೆಯಣ ದೂರವಾದ ದಾರಿಯ ಬೀಡು ಒಂದಾದರೂ ಯಾಕೆ ಬರೆದಿರುವದಿಲ್ಲವೆಂಬ ಪ್ರಶ್ನೆಗೆ ತಕ್ಕ ಪ್ರತ್ಯುತ್ತರವೇನಂದರೆ: ಇಸ್ರಯೇಲನವರು ಎರಡನೆ ಸಾರಿ ದಂಡಿಳಿಸಿದ ಬೀಡುಗಳ ಹೆಸರುಗಳನ್ನು ತಿರಿಗಿ ಬರೆಯುವದು ಅನವಶ್ಯವೆಂದು, ಗ್ರಂಥಕರ್ತನು ಅವನ್ನ ಬಿಟ್ಟು ಬಿಟ್ಟನು. ಮಿಚ್ರದಿಂದ ಸೀನಾಯ ವರೆಗೂ, ಎರಡನೆ ಸಾರಿ ಕಾದೆಷದಲ್ಲಿ ಇಳು ಕೊಂಡಂದಿನಿಂದ ಮೋವಾಬದ ಬೈಲಿಗೆ ಶೇರಿದ ವರೆಗೂ, ಇಸ್ರಯೇಲನವರು ನಡದ ದಾರಿಯನ್ನು, ಕೆಲವು ಬೀಡುಗಳ ಸ್ಥಳಗಳು ಶೀರಾ ಗೊತ್ತಾಗಲಾರದಿದ್ದರೂ, ಸರಿಯಾಗಿ ತಿಳು ಕೊಳ್ಳ ಬಹುದು.

೨. ವಾಗ್ದತ್ತದೇಶವನ್ನು ಹೊಕ್ಕ ಬಳಿಕ ಇಸ್ರಯೇಲನವರು ಕೈಕೊಳ್ಳ ಬೇಕೆಂದು, ದೇವನು ಕೊಟ್ಟ ಅಪ್ಪಣೆಗಳು ಯಾವವಂದರೆ: ದೇಶವಾಸಿಗಳನ್ನೆಲ್ಲಾ ಹೊರಡಿಸಿ, ಅವರ ದೆವ್ವ ಪೂಜೆಗೆ ಸಂಬಂಧವಾದ ಶಿಲಾಪ್ರತಿಮೆಗಳು, ಎರಕ ಹೊಯಿದ ವಿಗ್ರಹಗಳು ಮುಂತಾದ್ದನ್ನೂ, ಗುಡ್ಡಗಳಲ್ಲಿರುವ ಅವರ ಗುಡಿಗಳನ್ನೂ, ಅವರ ತೋಪುಗಳನ್ನೂ, ಹಾಳು ಮಾಡಿ, ಕೈವಶ ಮಾಡಿದ ಅವರ ದೇಶವನ್ನು ಬೇರೆ ಬೇರೆ ಕುಲಗಳಿಗೆ, ಆಯಾ ಕುಲದ ಜನರ ಲೆಖ್ಖದ ಹೆಚ್ಚು ಕಡಿಮೆಯ ಪ್ರಕಾರ, ಹಶಿಕೆ ಮಾಡ ಬೇಕು. "ಮುನ್ನಿನ ವಾಸಿಗಳನ್ನು ಹೊರಡಿಸದೆ ಹೋದರೆ, ಆಗುವದೇನಂದರೆ: ಅವರಲ್ಲಿ ಯಾರನ್ನು ಉಳಿಸುವಿರೋ ಅವರು ನಿಮ್ಮ ಕಣ್ಣುಗಳಲ್ಲಿ ಮೊಳೆಗಳಾಗಿಯೂ ನಿಮ್ಮ ಬಾಗಲಗಳಲ್ಲಿ ಮುಳ್ಳುಗಳಾಗಿಯೂ ಇದ್ದು, ನೀವು ವಾಸಿಸುವ ದೇಶದಲ್ಲಿ ನಿಮ್ಮನ್ನು ಕಾಡುವರು." ವ. ೫೫. ೫೬. ಮಾನಸಾಂತರ ಪಡುವ ವೇಳೆಯಲ್ಲಿ ಕ್ರೈಸ್ತರವನೊಬ್ಬನು ಮುನ್ನಿನ ಪಾಪಗಳನ್ನು ಕಿತ್ತು ಹಾಕದೆ ಉಳಿಸಿ ಬಿಟ್ಟರೆ, ಅವನ ತಪ್ಪು ದುಷ್ಟರ ಆಜ್ಞೆಯ ನಿರ್ಣಯಕ್ಕೆ ಒಳಗಾಗುವದಕ್ಕೆ ಹೇತುವಾಗೋಣವು ಅದಕ್ಕೆ ಪಾಟಿಯಲ್ಲವೋ?

ಕನಾನ ದೇಶದ ಗಡಿಗಳು; ದೇಶದ ಹಶಿಕೆಯ ಉದ್ಯೋಗಕ್ಕೆ ನೇಮಕವಾದವರು. ಸ. ೩೪.

ವ. ೧—೧೫. ದೇಶದ ಗಡಿಗಳು.

ಯೆಹೋವನ ಅಪ್ಪಣೆಯಿಂದ ಇಸ್ರಯೇಲನವರು ಸ್ವಾಸ್ಥ್ಯವಾಗಿ ಪಡೆದು ಕೊಳ್ಳ ತಕ್ಕ ಕನಾನವೆಂಬ ದೇಶಕ್ಕೆ ನೇಮಕವಾದ ಪ್ರಾಂತ್ಯಗಳು ಈ ಸಂಧಿಯಲ್ಲಿ ಬರೆದವೆ. ಏನಂದರೆ, ಇಸ್ರಯೇಲನವರು ಸದ್ಯಕ್ಕೆ ಎತ್ತಾಣಕ್ಕೆ ಮುಂಗೊಂಡು ಹೋಗ ಬೇಕೆಂತಲೂ, ಕನಾನದ ಜನಾಂಗಗಳು ದೇವಶಾಪಕ್ಕೊಳಗಾದ ಪ್ರಮಾಣ ಯಾವದೆಂತಲೂ, ಇದರಲ್ಲಿ ಪ್ರಕಟವಾಗಿದೆ. ಉತ್ಪ. ೧೫, ೧೮ರಲ್ಲಿಯೂ, ದ್ವಿತೀ. ೧೦, ೧೪ರಲ್ಲಿಯೂ ನಿರ್ಣಯವಾದ ಮೇರೆಗಳು ದಾವೀದನ ಕಾಲದಲ್ಲಿ ಮಾತ್ರ ಅವನ ರಾಜ್ಯದ ಗಡಿಗಳಾದವು. ಆದಾಗ್ಯೂ ಸುತ್ತಮುತ್ತಿನ ಅನ್ಯ ಜನಾಂಗಗಳು ರಾಜ್ಯಸಂಬಂಧದಲ್ಲಿ ಶೇರದೆ, ಇಸ್ರಯೇಲಸಾಮ್ರಾಜ್ಯಕ್ಕೆ ಅಧೀನವಾಗಿದ್ದು ಕಪ್ಪ ಕಟ್ಟುತ್ತಾ ಇದ್ದವು. ತೆಂಕಣ ಗಡಿಯಾವದಂದರೆ: ವ. ೩. "ಮತ್ತು ತೆಂಕಣ ಕೊನೆಯು ಎದೋಮದ ಕಡೆಯು ಚಿನ್ ಅರಣ್ಯದಿಂದ ನಿಮಗಿರಲಿ. ತೆಂಕಣ ಗಡಿಯು ಮೂಡಣ ದೆಸೆಯ ಉಪ್ಪಿನ ಕಡಲಿನ ಮೂಲೆಯಿಂದ ನಿಮಗಿರಲಿ. ೪. ಮತ್ತು ನಿಮಗೆ ಗಡಿಯು ಅಕ್ರಬೀಮೆಂಬ ಮೇಡಿಗೆ ತಿರುಗಿ, ಚಿನ್ ಅರಣ್ಯವನ್ನು ಹಾದು, ಅದರ ಕೊನೆಯು ತೆಂಕಣದಿಂದ ಕಾದೆಷ್ ಬರ್ನೇಯಕ್ಕೆ ಬಂದು, ಅದ್ದರೆಂಬ ಗ್ರಾಮದಿಂದ, ಹೊರಟು, ಅಚ್ಮೋನವನ್ನು ಹಾದು, ೫. ಮತ್ತು ಗಡಿಯು ಅಚ್ಮೋನದಿಂದ ಮಿಚ್ರದ ಹಳ್ಳಕ್ಕೆ ತಿರುಗಿ, ಅದರ ಮೊನೆಯು ಸಮುದ್ರದ ಕಡೆಗೆ ಇರಲಿ." ಅದೇನಂದರೆ, ವಾಗ್ದತ್ತದೇಶದ ಗಡಿಯು ಉಪ್ಪಿನ ಕಡಲಿನ ಮೂಡಣ ತೆಂಕಣ ತುದಿಯಿಂದ ತೆಂಕಣದಲ್ಲಿಯಣ ಘೋರಿನಲ್ಲಿ ಶೇರಿ, ಸೇಯಿರ್ ಘಟ್ಟಗಳ ಸಾಲು ಹಿಡಿದು, ಅಕ್ರಬೀಮ್ ಬೆಟ್ಟಗಳನ್ನು ಹಾದು, ಕಾದೆಷಕ್ಕೆ ತಗಲಿ, ಇಸ್ರಯೇಲನವರು ದೇಶವನ್ನು ಹೊಗದ ಹಾಗೆ ಮುಂಚೆ ಬಂದೋಬಸ್ತಾಗಿದ್ದ ಸ್ಥಳಗಳನ್ನು ಸುತ್ತಿ, ಕಾದೆಷದಿಂದ ಕೊಂಚ

ಮೂಡಣಕ್ಕೆ ತಿರುಗಿದ ಬಳಿಕ ಅರಣ್ಯವನ್ನು ಹಾದು, ಮಧ್ಯ ಸಮುದ್ರದಲ್ಲಿ ಬೀಳುವ ವಾಲಿ ಎಲ್ ಅರಿಷ್ ಎಂಬ ಮಿಶ್ರದ ಹಳ್ಳದ ವರೆಗೆ ಮುಟ್ಟ ಬೇಕೆಂಬದಾಗಿ ನೇಮಕವಾಯಿತು. ಪಡುವಲ ಗಡಿ ಯಾವದಂದರೆ: ಮಧ್ಯಸಮುದ್ರವೆಂಬ ದೊಡ್ಡ ಕಡಲು. ಇಸ್ರಯೇಲನವರು ದೇವಾಜ್ಞೆಯನ್ನು ತೀರಾ ಅನುಸರಿಸುವದಕ್ಕೆ ಯಾವಾಗಲೂ ಅಲಸಿಕೆಯಾಗಿದ್ದದರಿಂಪಲವರು ಕನಾನ ದೇಶಕ್ಕೆ ಕೂಡುವಂಥಾದ್ದೆಂದು ಅನ್ನಿಸಿ ಕೊಳ್ಳುವ ಫೊಯಿನೀಕೆ ದೇಶವನ್ನು ಕೈವಶ ಮಾಡಿ ಕೊಳ್ಳಲಾರದೆ, ದೇವನೇಮಕವಾದ ಪಡುವಲ ಗಡಿಯನ್ನು ಸ್ವತಂತ್ರಿಸಿ ಕೊಳ್ಳದೆ ಹೋದರು. ಬಡಗು ಗಡಿ ಯಾವದಂದರೆ: ಅದು ದೊಡ್ಡ ಕಡಲಿನಿಂದ ಲಿಬನೋನ್ ಘಟ್ಟಗಳಿಗೆ ಕೂಡಿದ ಹೋರೆಂಬ ಹೆರ್ಮೋನ್ ಬೆಟ್ಟಕ್ಕೂ, ಒರೊಂತೆ ಹೊಳೆಯ ಹತ್ತರವಾದಂಥ ಮುಂಚೆ ಜಿಮೆಸ, ಈಗ ಹೆಮ್ಸ್ ಎಂದು ಹೆಸರ್ಗೊಂಡ ಸುರ್ಯದೇಶದ ಊರಾದ ಹ್ಮಮಾಥಕ್ಕೂ, ಅಲ್ಲಿಂದ ಜಿಫ್ರೊನಕ್ಕೂ, ಅಲ್ಲಿಂದ ಜಿನಾನ ಗ್ರಾಮಕ್ಕೂ ಹೋಗುವದು. ಮೂಡಣ ಗಡಿಯು ಯಾವದಂದರೆ: ಜಿನಾನಿಂದ ಷಫಾಮಿಗೆ, ಷಫಾಮಿನಿಂದ ರಿಬ್ಲಕ್ಕೆ, ಮೂಡಣ ಕಡೆಯಿಂದ ಆಯಿನಕ್ಕೆ ಅಲ್ಲಿಂದ ಕಿನ್ನೆರೆಥ್ (ಹೊಸ ಒಡಂಬಡಿಕೆಯಲ್ಲಿ ರೂಢಿಯಾದ ಪ್ರಕಾರ ಗೆನೆಜರೆಥ್) ಎಂಬ ಕಡಲಿನ ಮೂಡಣ ಧಡವನ್ನು ಹಿಡಿದು, ಯೊರ್ದನ್ ನದಿಗೆ ಹತ್ತಿ, ಉಪ್ಪಿನ ಕಡಲಿಗೆ ಬರುವದು. ಇವು ಚೀಟು ಹಾಕಿ ಒಂಬತ್ತೂವರೆ ಕುಲಕ್ಕೆ ಹಂಚಿ ಕೊಡ ಬೇಕಾಗಿದ್ದ ದೇಶದ ಮೇರೆಗಳಾಗಿದ್ದವು. ಇದಕ್ಕೆ ಎರಡೂವರೆ ಕುಲಗಳು ಆಗಲೇ ಕೈವಶ ಮಾಡಿ ಕೊಂಡು ಸ್ವಾಸ್ಥ್ಯವಾಗಿ ಹೊಂದಿದಂಥ, ಯೊರ್ದನದ ಮೂಡಣ ದೆಸೆಯ ಗಿಲೆಯಾದೆಂಬ ಶೀಮೆಯು ಕೂಡಿತು.

ವ. ೧೬—೨೯. ಹಶಿಕೆ ಮಾಡುವ ಉದ್ಯೋಗಕ್ಕೆ ಪ್ರಧಾನ ಯಾಜಕನಾದ ಎಲಿಯೇಜರನೂ, ಮೋಶೆಯ ಪ್ರತಿನಿಧಿಯಾದ ಯೆಹೋಷುವನೂ, ಕುಲಗಳ ಹಿರಿಯರಾದ ಹತ್ತು ಮಂದಿಯೂ ನೇಮಕವಾದರು.

ಲೇವಿಯವರ ಊರುಗಳು. ಕೊಲೆಗೈದವರಿಗೆ ನೇಮಕವಾದ ಆಶ್ರಯಸ್ಥಳಗಳು. ಸ. ೩೫.

೧. ಲೇವಿಯವರ ಊರುಗಳು. ವ. ೧—೮.

ಲೇವಿಯ ಕುಲವು ಪ್ರತ್ಯೇಕವಾದ ಸ್ವಾಸ್ಥ್ಯದ ನಾಡು ಪಡಕೊಳ್ಳದೆ, ಬೇರೆ ಬೇರೆ ಕುಲ ಶೀಮೆಗಳಲ್ಲಿ, ಪಶುಗಳ ಕೊಟ್ಟಿಗೆ ಹಟ್ಟಿಗಳು ಮುಂತಾದದ್ದಕ್ಕೆ ಬೇಕಾದ ಸಾವಿರ ಮೊಳದ ಚಚ್ಚೌಕವಾದ ಊರುಗಳಲ್ಲದೆ, ಇನ್ನೂ ಸಾವಿರ ಮೊಳದ ಅಳತೆಯ ದೂರಕ್ಕೆ ಎಲ್ಲಾ ಕಡೆಯಲ್ಲಿಯೂ ಇಂಬಾದ ಸ್ಥಳವುಳ್ಳ ನಾಲ್ವತ್ತೆಂಟು ವಿಂಗಡವಾದ ಊರುಗಳನ್ನು ಹೊಂದಿದದರಿಂದ, ದೇವಾರಾಧನೆಯ ಊಳಿಗರಾದ ಲೇವಿಯವರು, ಪ್ರಜೆಯೆಂಬ ಹಿಟ್ಟನ್ನೆಲ್ಲಾ ಸವಿಯಾಗಲೀಸ ತಕ್ಕ ಉಪ್ಪಿನೋಪಾದಿಯಾಗಿ ಚೆಲ್ಲಿಸಿ ಕೊಂಡವರಾಗಿ, ದೇಶದ ನಾಡುಗಳಲ್ಲೆಲ್ಲಾ ಅಲ್ಲಲ್ಲಿ ವಾಸ ಮಾಡುತ್ತಾ ಇದ್ದರು. ಆಯಾ ಕುಲಗಳ ಪ್ರಮಾಣದ ಪ್ರಕಾರ ಲೇವಿಯವರಿಗೆ ಆಯಾ ನಾಡುಗಳಲ್ಲಿ ಹೆಚ್ಚು ಇಲ್ಲವೆ ಕಡಿಮೆ ಊರುಗಳು ಸಿಕ್ಕಿದವು, ಹ್ಯಾಗಂದರೆ ಯೂದ ಸಿಮೆಯೋನರ ಕುಲಗಳ ನಾಡುಗಳಲ್ಲಿ ಅವರು ಒಂಬತ್ತು, ನೆಫ್ತಲಿ ಕುಲದ ನಾಡಿನಲ್ಲಿ ಮೂರು, ಉಳಿದ ಕುಲಗಳ ನಾಡುಗಳಲ್ಲಿ ನಾಲ್ಕು ನಾಲ್ಕು ಊರುಗಳನ್ನು ಪಡಕೊಂಡರೆಂದು, ಯೆಹೋಷುವನ ಗ್ರಂಥದ ೨೦ನೆ ೨೧ನೆ ಸಂಧಿಗಳಲ್ಲಿ ವಿವರವಾಗಿ ಬರದದೆ.

೨. ಕೊಲೆಗೈದವರಿಗಾದ ಆಶ್ರಯಸ್ಥಳಗಳು. ವ. ೯—೩೪.

ನರರಕ್ತ ಚೆಲ್ಲಿದವನ ರಕ್ತ ಚೆಲ್ಲಿ ಹೋಗ ಬೇಕೆಂಬ ನರರಕ್ತಧಾರಾಪ್ರತೀಕಾರನೇಮವು, ಪೂರ್ವಕಾಲಾರಭ್ಯ ಭೂಲೋಕದ ಎಲ್ಲಾ ಜನಾಂಗಗಳಲ್ಲಿ ನಡೆಯುತ್ತಾ ಬರುವದಲ್ಲದೆ, ದೇವನೀತಿಗೂ ಅನುಕೂಲವಾಗಿದೆ. ಆದರೆ ತಿಳಿಯದೆಯೂ ಬಗೆಯದೆಯೂ ಮನುಷ್ಯನ ಪ್ರಾಣವನ್ನು ಅಳಿಸಿದವನ ಕೊಲೆಯು ಅನ್ಯಾಯವಾದದ್ದೆಂದು, ಯೆಹೋವನು ತಿಳುಕೊಂಡು, ತಾನು ಆದು ಕೊಂಡ ಜನಾಂಗವನ್ನು ನೀತಿಯ ಸಾಧನೆ

ಯಿಂದ ತನ್ನ ರಾಜ್ಯದ ಧರ್ಮಕ್ಕೆ ಅನುಕೂಲ ಪಡಿಸ ಬೇಕೆಂದು, ಇದ್ದಕ್ಕಿದ್ದ ಹಾಗೆ, ಎರಡು ಬಗೆಯದೆ, ನೆರೆಯವರನ್ನು ಕೊಂದವರಿಗೆ ಹೋಮಪೀಠವನ್ನು ಆಶ್ರಯಸ್ಥಳವಾಗಿ ನೇಮಿಸಿದನು. ಬಳಿಕ ಇಸ್ರಾಯೇಲನವರು ಸಾಕ್ಷೀಗುಡಾರದ ಸುತ್ತಲಾಗಿ ದಂಡು ಇಳಿಸಿ ವಾಸ ಮಾಡುತ್ತಾ ಇರುವದನ್ನು ಬಿಟ್ಟು, ವಾಗ್ದತ್ತವಾದ ವಿಶಾಲ ದೇಶದ ನಾಡುಗಳಲ್ಲಿ, ಪಟ್ಟಣ ಗ್ರಾಮ ಹಳ್ಳಿಗಳನ್ನು ಕಟ್ಟಿ ಕೊಂಡು, ಒಕ್ಕಲು ಮಾಡ ತೊಡಗಿದಾಗ, ಯೊರ್ದನದ ಈಚೆಯಲ್ಲಿಯೂ ಆಚೆಯಲ್ಲಿಯೂ ಮೂರು ಮೂರು ಆಶ್ರಯಪಟ್ಟಣಗಳಾಗ ಬೇಕೆಂದು, ಅಪ್ಪಣೆಯಾಯಿತು. ಈ ಆರು ಪಟ್ಟಣಗಳು, ಬೇಕೆಂದು ಬಗೆಯದೆ, ಮನುಷ್ಯರನ್ನು ಕೊಂದವರ ಜೀವರಕ್ಷಣಾರ್ಥವಾದ ವಿಮೋಚನಕ್ಷೇತ್ರಗಳಾಗಿದ್ದವು; ಹ್ಯಾಗಂದರೆ, ಅಂಥವರು ದೇಶದ ತೆಂಕಣದಲ್ಲಿಯೂ ಬಡಗದಲ್ಲಿಯೂ ನಡುವೆಯಲ್ಲಿಯೂ ಇದ್ದ ಆರು ಆಶ್ರಯಸ್ಥಳಗಳಲ್ಲಿ ಒಂದಕ್ಕೆ ಓಡಿ ಬಂದರೆ, ಅವರನ್ನು ರಕ್ತಾಪರಾಧ ನಿವಾರಕನಾದ ಗೋವೆಲೆಂಬವನು ಮುಟ್ಟಲಾಗದೆ ಹೋಯಿತು. ಬೇಕೆಂದು ನರಜೀವ ಹಾನಿ ಮಾಡಿದವನನ್ನು ಸತ್ತವನ ನೆಂಟರವನಾದ ಗೋವೆಲೆಂಬವನು ಯೆಹೋವನ ಹೋಮಪೀಠದ ಬಳಿಯಿಂದಲಾದರೂ ಎಳದು ಕೊಲ್ಲುವದು ನ್ಯಾಯವಾಗಿತ್ತು. ಹೊರ. ೨೧, ೧೪. ಯಾಕಂದರೆ ರಕ್ತಾಪರಾಧಿಯು ಶಿಕ್ಷೆ ಇಲ್ಲದೆ ತಪ್ಪಿಸಿ ಕೊಂಡರೆ, ಪರಿಶುದ್ಧ ದೇವನ ವಾಸಸ್ಥಳವಾದ ದೇಶವು ಹೊಲೆಗಲಸುತ್ತಿತ್ತು. ಆದರೆ ಕೊಂದವನೊಬ್ಬನು ಶೇರಿದ ಆಶ್ರಯಸ್ಥಳಕ್ಕೆ ಗೋವೆಲೆಂಬವನು ಬರಲಾಗಿ, ನ್ಯಾಯಾಧಿಪತಿಗಳು ಕೂಡಿ ಕೊಂಡು, ಓಡಿ ಬಂದವನು ಬೇಕೆಂದು ನರಹತ್ಯ ಮಾಡಿದನೋ ಏನೋ ಅಂತ ವಿಚಾರಿಸಿ, ಇಲ್ಲವೆಂತ ತೀರ್ಪು ಮಾಡಿದ ಪಕ್ಷದಲ್ಲಿ, ಅವನು ಆಶ್ರಯಕ್ಷೇತ್ರದಲ್ಲಿದ್ದು ಕೊಂಡು ಸ್ವಸ್ಥವಾಗಿರುವನು. ಮತ್ತು ಆಗಿನ ಪ್ರಧಾನ ಯಾಜಕನು ಸತ್ತ ಮೇಲೆ, ತೀರ ಬಿಡುಗಡೆಯಾಗಿ, ತನ್ನ ಊರಿಗೆ ತಿರುಗಿ ಕೊಳ್ಳಲಧಿಕಾರಿಯಾಗಿರುವನು. ಆದರೆ ಪ್ರಧಾನ ಯಾಜಕನು ಬದುಕುವ ವೇಳೆಯೊಳಗೆ ಆಶ್ರಯಸ್ಥಳವನ್ನು ಬಿಟ್ಟು ಹೋಗಿ, ಗೋವೆಲೆಂಬವನ ಕೈಯಲ್ಲಿ ಸಿಕ್ಕಿ ಬಿದ್ದರೆ, ಮರಣಕ್ಕೊಳಗಾಗಿರುವನು. ಈ ಕಟ್ಟಳೆಯು ಬರುವದಕ್ಕಿದ್ದ ಪ್ರಧಾನ ಯಾಜಕನ ಮರಣದಿಂದಲಾಗುವ ಬಂಧನವಿಮೋಚನಕ್ಕೆ ಮುಂಗುರ್ತಾಗಿತ್ತು.

ತಂದೆಯ ಆಸ್ತಿಗೆ ಬಾಧ್ಯಸ್ಥರಾದ
ಹೆಣ್ಣು ಮಕ್ಕಳ ವಿಷಯವಾದ ಉಪನೇಮ. ಸ. ೩೬.

ಮನಸ್ಸೆಯ ಕುಲದ ಹಿರಿಯರು ಮೋಶೆಗೂ ಕುಲಗಳ ಹಿರೆ ಕೂಟಕ್ಕೂ, ದೇವನ ಅಪ್ಪಣೆಯ ಪ್ರಕಾರ (ಸ. ೨೭.) ಚೆಲೊಫಃಹಾದನ ಹೆಣ್ಣು ಮಕ್ಕಳು ಬೇರೆ ಕುಲದ ಗಂಡಸರಿಗೆ ಮದಿವೆಯಾದರೆ, ನಮ್ಮ ಕುಲದ ಭೂಮಿಗಳಲ್ಲಿ ಒಂದು ಬೇರೆ ಕುಲದವರ ಪಾಲಿಗೆ ಶೇರಿ, ಯೋಬೆಲೆಂಬ ಪಂಚಾಶತ್ತಮ ವರ್ಷದಲ್ಲಿಯಾದರೂ ನಮ್ಮ ಕುಲದ ಪಾಲಿಗೆ ತಿರಿಗಿ ಬಾರದು (ವ. ೪) ಎಂದು ಅರಿಕೆ ಮಾಡಲಾಗಿ, ಯೆಹೋವನು, ಬಾಧ್ಯಸ್ಥರಾದ ಹೆಣ್ಣು ಮಕ್ಕಳು ತಮ್ಮ ಕುಲದ ಗಂಡಸರನ್ನೇ ಮದಿವೆ ಮಾಡಿ ಕೊಳ್ಳ ಬೇಕೆಂದು ಮೋಶೆಯ ಬಾಯಿಂದ ಬೆಸಸಿದನು. ಬಳಿಕ, ಚೆಲೊಫಃಹಾದನ ಹೆಣ್ಣು ಮಕ್ಕಳು ಈ ಅಪ್ಪಣೆಯ ಕೈಕೊಂಡು, ಮನಸ್ಸೆಯ ಕುಲದವರಿಗೆ ಮದಿವೆಯಾದರು. — ಯೆಹೋವನು ಮೋಶೆಯ ಕೈಯಿಂದ ಇಸ್ರಾಯೇಲನ ಮಕ್ಕಳಿಗೆ ಯೆರೇಃಹೋವಿನ ಬಳಿಯ ಯೊರ್ದನದ ಥಡದ ಕಡೆಯ ಮೋವಾಬದ ಬೈಲಿನಲ್ಲಿ ಬೆಸಸಿದ ಅಪ್ಪಣೆಗಳೂ ನ್ಯಾಯಗಳೂ ಇವೇ (ವ. ೧೩) ಎಂಬದಾಗಿ, ಮೋಶೆಯ ೪ನೆ ಗ್ರಂಥವು ಮುಗಿಯುವದು.

ಮೋಶೆಯ ಐದನೆ ಗ್ರಂಥ.

ಎರಡನೆ ನೇಮಧಾನವೆಂಬ ನೇಮಪುನರುಕ್ತಿಯಾದ ದ್ವಿತೀಯನೇಮವು.

ಪೀಠಿಕೆ.

ಇಸ್ರಯೇಲನವರಿಗೆ ಉಂಟಾದ ನೇಮಧಾನವು ನಾಲ್ಕನೆ ಗ್ರಂಥದಲ್ಲಿ ಮುಗಿದಿರಲಾಗಿ, ಹಿಂದಿನ ಗ್ರಂಥಗಳಲ್ಲಿ ಬರೆದ ಕಟ್ಟುಕಟ್ಟಳೆಗಳ ತಾಕು ಪೈಣಗಳು ವಿವರಗಳು ಪರಿಚ್ಛೇದಗಳು ಮುಂತಾದದ್ದಲ್ಲದೆ, ಹೊಸದೇನಾದರೂ ಕೂಡಿಸಿ ಹೆಚ್ಚಿಸುವದು ಅನುವಾಗದಿತ್ತು. ಆದರೆ ಕೆಲವರೇ ಹೊರ್ತಾಗಿ ಹೊಸ ತಲಾಂತರದ ಜನರೆಲ್ಲ ಅರಣ್ಯಸಂಚಾರ ಕಾಲದಲ್ಲಿ ಹುಟ್ಟಿದವರಾಗಿಯೂ ಬೆಳೆದವರಾಗಿಯೂ ಇದ್ದರು. ಸೀನಾಯಿ ಬೆಟ್ಟದಲ್ಲಿ ಉಂಟಾದ ಕರ್ತನ ಮಹಿಮೆಯುಳ್ಳ ಪ್ರಕಟಣೆಗಳನ್ನು ೩೮ ವರ್ಷಕ್ಕೆ ಮುಂಚೆ ಕಣ್ಣಾರೆ ಕಂಡವರಲ್ಲಿ ಹೆಚ್ಚು ಮಂದಿ ತೀರಿ ಹೋಗಿ, ಉಳಿದವರಲ್ಲಿ ಹಲಬರು ಎಳೇ ಪ್ರಾಯದವರೂ ಭಕ್ತಿನೇಮ ರಾಜ್ಯನೀತಿಗಳ ಒಳ್ಳೇ ಅರುವಿಲ್ಲದವರೂ ಆಗಿದ್ದರು. ಈ ವರೆಗೆ ಜನಾಂಗವೆಂಬ ಶರೀರಕ್ಕೆ ಪ್ರಾಣವಾಗಿಯೂ, ಯೆಹೋವನಿಗೂ ಇಸ್ರಯೇಲನವರಿಗೂ ಮಧ್ಯವರ್ತಿಯೂ, ಸ್ವಜನರ ಪ್ರಧಾನ ನಾಯಕನೂ ಆಗಿದ್ದು, ನಾನಾ ಕಷ್ಟಗಳಿಂದ ದಣಿದವರನ್ನು ಆದರಿಸುತ್ತಾ, ಎದೆಕೊಬ್ಬಿದವರನ್ನು ಅಣಚುತ್ತಾ, ಎಲ್ಲಾ ಕಾರ್ಯಗಳಲ್ಲಿ ಉತ್ತಮ ಆಲೋಚನಾಕರ್ತನಾಗಿರುತ್ತಾ ಬಂದಂಥ, ಇತ್ತಣ ಕಾಲದಲ್ಲಿ ಪೂರ್ವನಿರೀಕ್ಷೆಯು ಬೇಗ ಪೂರ್ತಿಯಾಗುವ ಆಶೆಯನ್ನು ತೋರಿಸಿ, ಅವರ ಗುಂಡಿಗೆಯನ್ನೂ ನಂಬಿಕೆಯನ್ನೂ ಮರಳಿ ಹೆಚ್ಚಿಸಿದಂಥ ಮೋಶೆಯು ಜೀವಾಂತ್ಯವು ಹತ್ತರವಾದದ್ದನ್ನು ತಿಳು ಕೊಂಡನು. ಯೇಸು ತಾನೇ ಶಿಷ್ಯರನ್ನು ಬಿಟ್ಟು ಹೋಗುವದಕ್ಕಿಂತ ಮುಂಚೆ, ಆದಿಯಿಂದ ಹೇಳಿದ ಬೋಧನೆಗಳನ್ನು ಅವರ ನೆನಪಿಗೆ ತಂದು, ಅವರನ್ನು ಬೆಸೆಯಾಗಿ ಎಚ್ಚರಿಸಿ, ದೇವರಾಜ್ಯದ ಮುಂದಣ ಗತಿಯನ್ನು ಅವರಿಗೆ ಮುಂತಿಳಿಸಿ, ಕಡೆಯಪ್ಪಣೆಯ ನುಡಿಗಳನ್ನು ಘನತರ ರೀತಿಯಿಂದಲವರಿಗೆ ಹೇಳಿದಂತೆ, ಮೋಶೆಯೂ ದೇವನಿತ್ತ ಉದ್ಯೋಗದ ವೃತ್ತಿಯನ್ನು ತೀರಿಸಿದವನಾಗಿ, ಇಹಲೋಕದ ಪಯಣದ ಕಡೇ ಮೆಟ್ಟಿಗೆ ಮುಟ್ಟಿದಲ್ಲಿ ಜನಾಂಗವನ್ನು ಕೂಡಾ ಕರಿಸಿ, ಮಿಚ್ರದಿಂದ ಹೊರಟು ಬಂದಂದಿನಿಂದ ಯೆಹೋವನು ಗೈಯ್ಯುತ್ತಾ ಬಂದ ಬಲವಾದ ಒತ್ತಾಸೆಯನ್ನು ಪುನಃಸ್ಮರಣೆ ಮಾಡಿ, ನೇಮವನ್ನು ಕೈಕೊಂಡೇ ಕೈಕೊಳ್ಳ ಬೇಕೆಂದು, ತಿರಿಗಿ ಘಟ್ಟಿಯಾಗಿ ಬೆಸಸಿ, ಅವರಿಗಾಗಿ ಬಿನ್ನೈಸುತ್ತಾ ಆಗಾಮಿಯಾಶೀರ್ವಾದಗಳನ್ನು ಸಾರುತ್ತಾ ಕಡೆಯಪ್ಪಣೇ ತಕ್ಕೊಂಡನು. ಇದಲ್ಲದೆ ಯೇಸು ಶಿಷ್ಯರ ಸಹವಾಸವನ್ನು ಬಿಟ್ಟು ಹೋಗುವ ವೇಳೆಯಲ್ಲಿ, ತಾನು ಪರಿತಂದ ಬಳಿಕ ತನಗೆ ಪ್ರತಿನಿಧಿಯಾಗಿ ತಂದೆಯಿಂದ ವಾಗ್ದತ್ತನಾದ ಸಮಾಧಾನಕರ್ತನು ಬರುವನೆಂಬ ಮಾತು ಕೊಟ್ಟಂತೆ, ಮೋಶೆಯೂ ತನ್ನ ಜನರನ್ನು ಅಗಲಿ ಹೋಗಲು, ಅವರನ್ನಾದರಿಸುವ ಬಗ್ಗೆ ದೇವನಾದ ಯೆಹೋವನು ಅವರ ನಡುವೆಯಣ ಅವರ ಸಹೋದರರಲ್ಲಿಂದ ಗೆಳೆಯನಿಗೆ ಗೆಳೆಯನೊಡನೆ ಇರುವ ಹೊಕ್ಕುಬಳಿಕೆಯ ಪ್ರಕಾರ ದೇವನ ಸಲಿಗೆಯಲ್ಲಿರುವ ತನಗೆ ಸರಿಯಾದ ಪ್ರವಾದಿಯನ್ನು ಎಬ್ಬಿಸುವನೆಂತ ಪ್ರವಾದಿಸಿ, ಅವನಿಗೆ ಕಿವಿ ಕೊಡ ಬೇಕೆಂದು ಬೆಸಸುತ್ತಾನೆ. ಯೇಸು ಮೋಶೆಯರಿಬ್ಬರು ನುಡಿದ ಆಗಾಮಿವಾಕ್ಯಗಳು ಅವರಿದ್ದ ಕಾಲಕ್ಕೂ, ದೇವರಾಜ್ಯದಲ್ಲಿ ಅವರಿಗಿದ್ದ ಉದ್ಯೋಗಗಳಿಗೂ, ದೇವಾತ್ಮಪ್ರೇರಣ ದೇವಭಾವೈಕ್ಯಗಳ

ವ್ಯತ್ಯಾಸಕ್ಕೂ, ಅನುಸಾರವಾಗಿ ಭೇದವಾಗಿವೆ. ಏನಂದರೆ ಹಳೆ ಒಡಂಬಡಿಕೆಯವರಲ್ಲಿ ಈಡುಪಾಡಿಲ್ಲದಂಥ, ದೇವನ ಸಲಿಗೆಯಲ್ಲಿದ್ದವರಲ್ಲಿ ಮೊದಲಿಗನಾದಂಥ, ಯೆಹೋವನ ಗೆಳೆತನವೆಂಬ ಪದವಿ ಪಡಕೊಂಡಂಥ, ಮೋಶೆಗಿಂತ ದೇವನ ಮಗನಾದ ಯೇಸು ಅತ್ಯಧಿಕವಾದ ವರವನ್ನು ಕೊಡಲಧಿಕಾರಿಯಾಗಿದ್ದನು. ಏನಂದರೆ ಭೂಲೋಕದಲ್ಲಿಯೂ ಕನಾನ ದೇಶದ ಪ್ರವೇಶವನ್ನು ಸಾರುವ ಮೋಶೆ, ಅದರ ಬಾಧ್ಯತೆ ಅತ್ಯುತ್ತಮ ಸ್ವದೇಶದ ಬಾಧ್ಯತೆಯ ಮುಂಪೋಲಿಕೆ ಎಂದು, ಜಾಡೆಯಾಗಿ ಊಹಿಸಿದರೂ, ಆತ್ಮಿಕವಾದ ಈ ಅಭಿಪ್ರಾಯವನ್ನು ಸ್ಪಷ್ಟವಾಗಿ ಸೂಚಿಸಲಾರದಿದ್ದನು. ಆದರೆ ಯೇಸು ತಂದೆಯ ಬಳಿಗೆ ಏರುಗಿ ಕೊಳ್ಳುವ ಸಮಯದಲ್ಲಿ, ತನ್ನವರು ನಿರಂತರವಾಗಿ ತನ್ನ ಬಳಿಯಲ್ಲಿರ ತಕ್ಕ ತಂದೆಯ ಇಕ್ಕೆಗಳಿರುವ ಸ್ವರ್ಗೀಯ ಕನಾನದ ಆಶೆಯನ್ನು ಶಿಷ್ಯರಿಗೆ ತೋರಿಸಲಧಿಕಾರಿಯಾಗಿದ್ದನು.

ಮೋಶೆ ಈ ಗ್ರಂಥದಲ್ಲಿಯೂ ಮಾತುಗಳನ್ನು ನುಡಿದು, ಅವುಗಳ ಹೆಚ್ಚಾದ ಪಾಲನ್ನು ತಾನೇ ಬರೆದು, ಕಡೇ ಸಂಧಿಗಳನ್ನೂ ಯೆಹೋಷುವನಿಗೆ ಹೇಳಿ ಬರಿಸಿಯಾಗಲಿ, ಮುಂದೆ ಬರೆಯ ಬೆಸಸಿಯಾಗಲಿ, ಉಂಟು ಮಾಡಿದ್ದು, ಅಂತರ್ಬಹಿರ್ಲಕ್ಷಣಗಳನ್ನು ನೆರೆ ವಿಚಾರಿಸೆ, ನಿಜವೆಂದು ತೋರುವದಲ್ಲದೆ, ಪೂರ್ವಿಕರಲ್ಲಿಯೂ ಒಪ್ಪಿತವಾಗಿದೆ. ಮೋಶೆಯ ಗೀತ ಆಶೀರ್ವಾದಗಳನ್ನು ಯೆಹೋಷುವನು ಆಗಲೇ ಬರೆದು, ಮೋಶೆಯ ಮರಣ ಹೂಳಿಕೆಗಳ ವಿವರವನ್ನು ಅವನು ಮುದುಕನಾಗಿದ್ದು, ಮೋಶೆಯ ಬಾಯಿಂದ ಕರ್ತನು ಅವನಿಗೆ ಕೊಟ್ಟ ಅಪ್ಪಣೆ ವಾಗ್ದತ್ತಗಳನ್ನು ಮುಂಚೆ ಕೇಳಿದ ನೆನೆವರಿಕೆಯ ಪ್ರಕಾರ ಬರೆದು, ಈ ಗ್ರಂಥಕ್ಕೆ ಪರಿಶಿಷ್ಟವಾಗಿ ಕೂಡಿಸಿದನೆಂಬ ಎಣಿಕೆ ಉಚಿತವಾದದ್ದು. ಸ. ೨, ೧೦—೧೨, ೨೦—೨೩. ಸ. ೩, ೧೧—೧೪. ಸ. ೧೦, ೬. ೭. ಮುಂತಾದ ಕೆಲವು ವಚನಗಳನ್ನು ಯೆಹೋಷುವನು ಮೋಶೆ ಉಳಿಸಿದ ಪತ್ರಗಳಿಂದ ಎತ್ತಿ, ಮೋಶೆಯ ಗ್ರಂಥಗಳ ನಡುವೆಯಲ್ಲಿ ಸೇರಿಸಿದನೆಂತಲೂ, ಈ ತರದ ಪ್ರಕರಣಗಳಿಗೆ ಹಿಂದಣ ಮುಂದಣ ಪ್ರಸ್ತಾಪಗಳ ಸಂಬಂಧವು ಕಾಣದ ಕುಂದು ಬಂದದ್ದೆಂತಲೂ ಕೆಲವು ಪಂಡಿತರು ಸ್ಥಾಪಿಸುವ ಮಾತಿಗೆ ನೇರ್ಪಾದ ಪ್ರಮಾಣವಿಲ್ಲ. ಚರಿತ್ರರಚನೆಯ ವಿಷಯವಾಗಿಯೂ, ಬರವಣಿಗೆಯ ಲಕ್ಷಣಗಳ ವಿಷಯವಾಗಿಯೂ, ಈ ಗ್ರಂಥಕ್ಕೂ ಮೋಶೆಯ ಬೇರೆ ಗ್ರಂಥಗಳಿಗೂ ಹೆಚ್ಚು ಕಡಿಮೆಯುಂಟೆಂಬದು ಸರಿ. ಏನಂದರೆ ಈ ಗ್ರಂಥದಲ್ಲಿ ನುಡಿಯೆಂಬ ಹೊಳೆ ಹೆಚ್ಚು ಸರಾಗವಾಗಿಯೂ ಬಲವಾಗಿಯೂ ಇರುವ ಸೆಳೆಯಿಂದ ಹರಿಯುವದು. ಆದರೆ ಇದರ ಉದ್ದಿಶ್ಯವನ್ನೂ, ಮೋಶೆ ಅದರ ತಾತ್ಪರ್ಯವನ್ನು ಜನಾಂಗಕ್ಕೂ ಯೆಹೋಷುವನಿಗೂ ಪ್ರಕಟ ಮಾಡಿದ ಕಾಲವನ್ನೂ ಎಣಿಕೆ ಮಾಡಿದರೆ, ಆ ವ್ಯತ್ಯಾಸವು ಸಹಜವಾದದ್ದಾಗಿಯೂ ಉಚಿತವಾದದ್ದಾಗಿಯೂ ತೋರುವದು. ಯಾಕಂದರೆ ಮೋಶೆ ತನ್ನ ಕಣ್ಣುಗಳ ಮುಂದೆ ಬೆಳದ ಜನಾಂಗಕ್ಕೆ ವಾಗ್ದತ್ತದೇಶದ ದೃಷ್ಟಿ ದೊರಕಿದ ಮೇಲೆ, ತನ್ನ ಜೀವದ ಅಂತ್ಯವಾದ ಎರಡು ತಿಂಗಳೊಳಗೆ, ಚುರುಕಾದ ಶಿಕ್ಷಾಶಾಭಯವಾಕ್ಯಗಳನ್ನು ಬೆರಸಿ, ಸಾರಿದ ಚರಿತ್ರ ನೇಮಧಾನಗಳ ಸಂಗ್ರಹ ಪುನರುಕ್ತಿಗಳು ಅದರಲ್ಲಿ ಬರೆಯಲ್ಪಟ್ಟವೆ.

ಐದನೆ ಗ್ರಂಥದ ಸಾರಾಂಶವು ಮುಖ್ಯವಾದ ನಾಲ್ಕು ಭಾಗವುಳ್ಳದ್ದು, ಏನಂದರೆ:

I. ಸಂಧಿ ೧—೪, ೪೩. ಎರಡನೆ ನೇಮಧಾನಕ್ಕಾಗಿ ಮನಸ್ಸನ್ನಾಹಾರ್ಘವಾದಂಥ, ಪಿತೃಗಳು ಮಿಸ್ರದಿಂದ ಹೊರಟಂದಿನಿಂದ ಯೊರ್ದನದ ಮೂಡಣ ಸೀಮೆ ಇಸ್ರಾಯೇಲನವರ ಕೈವಶವಾದ ಪರ್ಯಂತ ಯೆಹೋವನು ನಡಿಸಿದ ಕಾರ್ಯಗಳ ನೆನೆವರಿಕೆ.

II. ಸಂಧಿ ೪, ೪೪—ಸಂಧಿ ೨೬. ನೇಮಪುನರುಕ್ತಿ ನೂತನ ದೀಕ್ಷಾಬೋಧನೆ, ಇವುಗಳ ವಿವರ.

III. ಸಂಧಿ ೨೭—ಸಂಧಿ ೩೦. ದೇವನ ಒಡಂಬಡಿಕೆಯನ್ನು ದಿಟ್ಟವಾಗಿ ಕೈಕೊಳ್ಳ ಬೇಕೆಂಬ ನೀತಿಬೋಧನೆ. ನೇಮಸಾಧನಕ್ಕೆ ಬರುವ ಆಶೀರ್ವಾದವು. ನೇಮಾತಿಕ್ರಮಣಕ್ಕೆ ಬರುವ ಶಾಪವು.

IV. ಸಂಧಿ ೩೧—೩೪. ಮೋಶೆಯ ಕಡೇ ನುಡಿ ಆಶೀರ್ವಾದ ಮರಣಗಳ ವಿವರ.

ದ್ವಿತೀ. ೧, ೧—೫.

I. ಮೋಶೆ ಜನಾಂಗದ ಕೂಟಕ್ಕೆ ದೇವನು ಅವರನ್ನಾಳಿದ ನಾಲ್ವತ್ತು ವರ್ಷಗಳೊಳಗೆ ನಡಿಸಿದ ಕಾರ್ಯಗಳನ್ನು ನೆನಪು ಮಾಡುವದು. ಸ. ೧--೪, ೪೩.

ವ. ೧. ಮೋಶೆ ಇಸ್ರಯೇಲನಿಗೆಲ್ಲಾ ಯೊರ್ದನದ ಆಚೆಯ[೧] ಅರಣ್ಯದ,
ಆಪಿನ ಕಡಲಿಗೆದುರಾದಂಥ, ಪಾರಾನ್, ಥೋಪೆಲ್, ಲಾಬಾನ್, ಹಚೆರೋ
ತ್, ದೀಜಾಹಾಬ್ ಇವುಗಳ ನಡುವೆಯಣ ಬೈಲಿನಲ್ಲಿ ನುಡಿದ ನುಡಿಗಳು ಇವೇ.
೨. (ಹೋರೆಬಿನಿಂದ ಕಾದೆಷ್ ಬರ್ನೇಯಕ್ಕೆ[೨] ಸೇಯೀರ್ ಬೆಟ್ಟದ ಮಾರ್ಗವಾಗಿ ಹ
ನ್ನೊಂದು ದಿನದ ಪಯಣವದೆ[೩]. ೩. ನಾಲ್ವತ್ತನೆ ವರ್ಷದ ಹನ್ನೊಂದನೆ ತಿಂಗಳಿನ
ಮೊದಲನೆ ದಿವಸದಲ್ಲಿ ಆದದ್ದೇನಂದರೆ: ಮೋಶೆ ಇಸ್ರಯೇಲನ ಮಕ್ಕಳಿಗೆ ಯೆಹೋ
ವನವನಿಗೆ ಅವರಿಗಾಗಿ ಬೆಸಸಿದೆಲ್ಲಾದರಂತೆ ನುಡಿದನು. ೪. ಅವನು ಹೆಷ್ಬೋನದಲ್ಲಿ
ವಸ್ತಿಯಾದ ಅಮೋರ್ಯರ ಅರಸನಾದ ಶೀಹೋನನನ್ನೂ, ಅಷ್ಟರೋಥದಲ್ಲಿಯೂ, ಎ
ದ್ರೆಯಿಯಲ್ಲಿಯೂ, ವಸ್ತಿಯಾದ ಬಾಷಾನದ ಅರಸನಾದ ಓಗನನ್ನೂ ಹೊಡೆದ ಬಳಿ
ಕ, ೫. ಮೋಶೆ ಯೊರ್ದನದ ಆಚೆಯ ಮೋವಾಬದ ದೇಶದಲ್ಲಿ ಈ ನೇಮವನ್ನು
ಕೆತ್ತ[೪] ತೊಡಗಿದ್ದೇನಂದರೆ:— —

೧. ಅಂದರೆ ಯೊರ್ದನದ ಮೂಡಣ ಕಡೆಯು. ಅದೇ ತೆರದಿಂದ ಈ ಮಾತು ಅಂಕೆ. ೨೧, ೧೫ರಲ್ಲಿ ಪ್ರಯೋಗವಾಗಿದೆ. ಕನಾನದವರಲ್ಲಿಯೂ, ಸೀನಾಯಿಗೆ ಶೇರಿದ ದೇಶದವರಲ್ಲಿಯೂ, ಮಿಶ್ರದವರಲ್ಲಿಯೂ ಯೊರ್ದನದ ಮೂಡಣ ದೇಶಕ್ಕೆ ಯೊರ್ದನದ ಆಚೆಯದೆಂಬ ಹೆಸರು ವಾಡಿಕೆಯಾದದರಿಂದ ಮೋಶೆಯೂ, ಆ ವೇಳೆಯಲ್ಲಿ ಇಸ್ರಯೇಲನವರ ಸಂಗಡ ನದಿಯ ಮೂಡಣ ಕಡೆಯಲ್ಲಿ ತಾನು ಇದ್ದರೂ, ಅದೇ ಹೆಸರ ಬಳಸುವದು ಸಾಧಾರಣವಾದದ್ದು. ಈ ಗ್ರಂಥವನ್ನು ರಚಿಸಿದವನು ಮೋಶೆಯಲ್ಲ, ಇಸ್ರಯೇಲನವರು ಯೊರ್ದನ್ ನದಿಯನ್ನು ದಾಟಿ, ಕನಾನದಲ್ಲಿ ವಸ್ತಿಯಾದ ಕಾಲದಲ್ಲಿದ್ದ ಗ್ರಂಥಕರ್ತನಾದ ಯಾರೋ ಒಬ್ಬನು ಎಂಬದಕ್ಕೆ ಈ ಹೆಸರಿನ ಪ್ರಯೋಗವು ಪ್ರಾಮಾಣಿಕವಾದದ್ದಲ್ಲ.

೨. ಕಾದೆಷ್ ಬರ್ನೇಯಕ್ಕೆ ತಗಲುವ ಅರಬಾ ಎಂಬ ಬೈಲು ಲಿಬನೋನ್ ಘಟ್ಟಗಳ ಬುಡದಲ್ಲಿ ತೊಡಗಿ, ಯೊರ್ದನದ ತಗ್ಗಿನ ಮಾರ್ಗವಾಗಿ ಕೆಂಪು ಕಡಲಿನ ಎಲಾನಿಕವೆಂಬ ಕೊಲ್ಲಿಗೆ ಮುಟ್ಟುವದು. ಮೋಶೆ ಆಗಲೇ ಇಸ್ರಯೇಲನವರ ದಂಡು ಇಳಿಸಿ ಇದ್ದ ಮೋವಾಬದ ಬೈಲ್ಸೀಮೆ ಸಹ ಈ ಅರಬಾ ಎಂಬದರ ಒಂದು ಭಾಗವಾಗಿದೆ.

೩. ಶಾನೆ ಮುಂಚಿತಾಗಿ ಅರಬಾ ಎಂಬದರ ತೆಂಕಣದಲ್ಲಿರುವ ಕಾದೆಷದ ಕಡೆಯಿಂದ ಕನಾನ ದೇಶವನ್ನು ಹೊಗುವದಕ್ಕೆ ತಕ್ಕ ಸಮಯವಿತ್ತು. ಆದರೆ ಇಸ್ರಯೇಲನವರು ಯೆಹೋವನ ಅಪ್ಪಣೆ ಮೀರಿದರಿಂದ, ಹನ್ನೊಂದು ದಿನದ ಪಯಣದಿಂದಲ್ಲ, ೩೮ ವರ್ಷದ ಸಂಚಾರದಿಂದ ಮೂಡಣ ಕಡೆಯ ಮಾರ್ಗವಾಗಿ ವಾಗ್ದತ್ತದೇಶ ಪ್ರವೇಶ ಮಾಡ ಬೇಕೆಂಬ ಶಿಕ್ಷೆ ಪಡಕೊಂಡರು.

೪. ಹತ್ತು ಕಟ್ಟಳೆಗಳು ಕಲ್ಲಿನ ಹಲಿಗೆ ಎರಡರಲ್ಲಿ ಕೆತ್ತಲ್ಪಟ್ಟ ಪ್ರಕಾರ ಮೋಶೆ ಜೀವದ ಅಂತ್ಯದಲ್ಲಿ ನೇಮವನ್ನು ಇಸ್ರಯೇಲನವರ ಹೃದಯಗಳಲ್ಲಿ ದೃಢಪಡಿಸಲೆಸಗಿದನು. ಆರನೆ ವಚನ ಮುಂತಾದದರಲ್ಲಿ ಮೋಶೆಯು ಹೋರೆಬಿನಿಂದ ಕಾದೆಷಕ್ಕೆ, ಕಾದೆಷದಿಂದ ಜೆರೆದ್ ಹಳ್ಳಕ್ಕೆ ಹೋದ ಜನಾಂಗದ ಪಯಣದ ಕಥೆಯನ್ನೂ, ಮಾರ್ಗದಲ್ಲಿ ಉಂಟಾದ ಮುಖ್ಯ

೩೬೦ ಮೋಶೆ ನಾಲ್ವತ್ತು ವರ್ಷಗಳ ಕಾರ್ಯಗಳನ್ನು ನೆನಪು ಮಾಡುವದು.

ದ್ವಿತೀ. ೧, ೨೩—೨೭.

ಕಾರ್ಯಗಳನ್ನೂ, ವಿವರಿಸಿ, "ನಾವು ಕಾದೇಷ್ ಬರ್ನೇಯದಿಂದ ಜೆರೆದ್ ಹಳ್ಳ ದಾಟುವ ವರೆಗೆ ನಡದು ಹೋದ ದಿವಸಗಳು ೩೮ ವರ್ಷ" ಎಂದು, ಸ. ೨, ೧೪ರಲ್ಲಿ ಸ್ಪಷ್ಟವಾಗಿ ಹೇಳುತ್ತಾನೆ. ಬಳಿಕ ಇಸ್ರಯೇಲನವರು ಜೆರೆದ್ ಹಳ್ಳದಿಂದ ಹೊರಟು, ಅರ್ನೋನವನ್ನು ದಾಟುವನಕಾ ಮುಂದೆ ನಡದು, ಹೆಷ್ಬೋನದಲ್ಲಿ ವಾಸವಾದ ಅಮೋರ್ಯರ ಅರಸನಾದ ಶೀಹೋನನನ್ನು, ಅಡ್ಡಿಯಿಲ್ಲದೆ ತನ್ನ ದೇಶ ಹಾದು ಹೋಗಲಪ್ಪಣೆಯನ್ನು ತಮಗೆ ಕೊಡ ಬೇಕೆಂತ, ಬೇಡಿದರೆಂದು. ಬರದಿರುವಲ್ಲಿ, (ಸ. ೨, ೨೮. ೨೯.) "ಸೇಯಿರೊರದ ನಿವಾಸಿಗಳಾದ ಏಸಾವನ ಮಕ್ಕಳು. ನನಗೆ ಮಾಡಿದ ಪ್ರಕಾರ" ಎಂಬದು ಎದೋಮದವರು ಇಸ್ರಯೇಲನವರಿಗೆ ತಿಂಡಿಯನ್ನೂ ನೀರನ್ನೂ ಹಣಕ್ಕೆ ಮಾರಿದರೆಂತಲೂ, ಇಸ್ರಯೇಲನವರು ಎದೋಮದವರ ದೇಶವನ್ನು ಹಾದು ಹೋದರೆಂತಲೂ, ಸೂಚಿಸುವದೆಂತ ತೋರುತ್ತದೆ. ಈ ಅಭಿಪ್ರಾಯವನ್ನು ಅಂಕೆ. ೨೦, ೧೯. ೨೦ರಲ್ಲಿ ಬರೆದದ್ದು ಬಡದು ಹಾಕುವಂಥಾದ್ದಾಗಿ ತೋರುತ್ತದೆ. ಆದರೆ ಹಿಂದಣ ಮುಂದಣ ಕಾಲದ ಸಂಗತಿಗಳ ಭೇದವನ್ನು ಪರಾಮರಿಸಿದರೆ, ಕಾಣುವಂಥ ತೋರಿಕೆ ಕಳೆದು ಹೋಗುವದು. ಹ್ಯಾಗಂದರೆ ಮೊದಲು ಇಸ್ರಯೇಲನವರು ಪಡುವಲಿಂದ ಬಂದು, ಬಂದೋಬಸ್ತಾದ ಆ ಕಡೆಯಿಂದ ದೇಶವನ್ನು ಹೊಗಲೆತ್ತುಗಡೆ ಮಾಡಲಾಗಿ, ಎದರಾಳಿಗಳು ದಂಡು ಕಟ್ಟಿ, ಕಾದಿ, ಅವರನ್ನು ನೂಕಿ ಹಾಕಿದರು ಸರಿ. ಆದರೆ, ಇಸ್ರಯೇಲನವರು, ತದನಂತರ ಸೇಯಿರೂರದ ಘಟ್ಟಗಳನ್ನು ಸುತ್ತಿದ ಬಳಿಕ, ಎದೋಮದವರು ಬೈಲಾದ ತಮ್ಮ ಮೂಡಣ ಗಡಿಯ ಮಾರ್ಗವಾಗಿ ಬಡಗಿಗೆ ನಡೆದು ಹೋಗುತ್ತಿರುವವರ ದಂಡಿಗೆ ಹಾದಿ ಕಟ್ಟಲಾರದೆ ಇದ್ದದರಿಂದ, ಅವರನ್ನು ಸ. ೨, ೨೮. ೨೯ರಲ್ಲಿ ಬರೆದಿರುವ ಒಡಂಬಡಿಕೆಯ ಪ್ರಕಾರ, ತಮ್ಮ ಗಡಿಯೊಳಗೆ ಶೇರಿ, ಪಯಣ ಮಾಡ ಗೊಡಿಸಿದರು.

ಬಳಿಕ ಮೋಶೆಯು ಕರ್ತನ ಒತ್ತಾಸೆಯಿಂದ ಶೀಹೋನನನ್ನು ಜೈಸಿ, ಅವನ ದೇಶವನ್ನು ಆಕ್ರಮಿಸಿ, ಸ. ೨, ೩೦. ೩೬, ಓಗನನ್ನು ಹೊಡೆದು, ಅವನಿಗಿದ್ದ ಆರ್ವತ್ತು ಪಟ್ಟಣಗಳನ್ನು ತಕ್ಕೊಂಡು, ಸ. ೩, ೧—೧೧, ಯೊರ್ದನದ ಮೂಡಣ ದೇಶವನ್ನು ವಿಂಗಡಿಸಿದ್ದನ್ನು ವಿವರಿಸಿ, ಸ. ೩, ೧೨—೨೨, ಕರ್ತನು ವಾಗ್ದತ್ತದೇಶದಲ್ಲಿ ಶೇರ ಬೇಕೆಂಬ ತನ್ನ ಬೈಕೆಯನ್ನು ಇಸ್ರಯೇಲನವರ ತಪ್ಪಿಗಾಗಿ ತಳ್ಳಿ ಹಾಕಿದನೆಂದು ಹೇಳುತ್ತಾನೆ. ಯಾಕೆಂದರೆ ಜನಾಂಗದ ಪಾಪದಿಂದ ಜನಾಂಗದ ನಾಯಕರಿಗೂ ಶಾನೆ ಸಲ ಕುಂದು ಬರುವದುಂಟು. ಸ. ೧, ೩೭; ೩, ೨೬ರಲ್ಲಿ ಬರೆದದ್ದನ್ನೂ ಅಂಕೆ. ೨೭, ೧೪. ದ್ವಿತೀ. ೩೨, ೫೧ರಲ್ಲಿ ಬರೆದದ್ದನ್ನೂ ಸರಿ ನೋಡ ತಕ್ಕದ್ದು. ನೋಡಿದರೆ, ಮೋಶೆ ತಾನೇ ಮಾಡಿದ ತಪ್ಪು ಕಡೇ ಎರಡು ಸ್ಥಳಗಳಲ್ಲಿ ಸೂಚಿತವಾಗಿದೆಂದು, ಕಾಣುವದು.

ವ. ೨೩—೨೭ರಲ್ಲಿ ಮೋಶೆ ನೆಬೋ ಬೆಟ್ಟದ ತುದಿಯಾದ ಪಿಸ್ಗಾ ಗುಡ್ಡವನ್ನೇರಿ, ಅದರಲ್ಲಿ ನಿಂತು, ವಾಗ್ದತ್ತದೇಶವನ್ನು ದೂರದಿಂದ ನೋಡಲಪ್ಪಣೆ ಪಡ ಕೊಂಡನೆಂತಲೂ, ವ. ೨೮, ೨೯ರಲ್ಲಿ ಯೆಹೋಷುವನಿಗೆ ವಾಗ್ದತ್ತದೇಶ ಪ್ರವೇಶವು ನೇಮಕವಾಯಿತೆಂತಲೂ, ಹೇಳುವ ಪ್ರಸ್ತಾಪದಿಂದ ಈ ಪ್ರಕರಣವು ಮುಗಿಯುವದು. ಈ ಚರಿತ್ರದ ವೈಣಗಳನ್ನು ಮೊದಲು ವಿವರಿಸಿದ ಬಳಿಕ ಮೋಶೆ ತನ್ನ ಜನಾಂಗಕ್ಕೆ ಬೋಧಿಸಿ ಹೇಳುವದೇನಂದರೆ:

ಸಂಧಿ ೪.

ವ. ೧. ಈಗ, ಇಸ್ರಯೇಲನೇ, ನಾನು ನಿಮ್ಮನ್ನು ಕಲಿಸುವ ಅಪ್ಪಣೆಗಳನ್ನೂ
ನ್ಯಾಯಗಳನ್ನೂ,—ನೀವು ಬದುಕಿ[1], ಬಂದು, ನಿಮ್ಮ ತಂದೆಗಳ ದೇವನಾದ ಯೆಹೋ

ವನು ನಿಮಗೆ ಕೊಡುತ್ತಿರುವ ದೇಶವನ್ನು ಸ್ವತಂತ್ರಿಸಿ ಕೊಳ್ಳುವ ಬಗ್ಗೆ, ಮಾಡುವ ಹಾ
ಗೆ ಕೇಳಿರಿ! ೨. ನಾನು ನಿಮಗೆ ಬೆಸಸುತ್ತಿರುವ ನಿಮ್ಮ ದೇವನಾದ ಯೆಹೋವನ ಬೆಸ
ಗಗಳನ್ನು ಕೈಕೊಳ್ಳುವ ಬಗ್ಗೆ, ನಾನು ನಿಮಗೆ ಬೆಸಸುತ್ತಿರುವ ವಾಕ್ಯದ ಮೇಲೆ ಏನೂ
ಕೂಡಿಸಲೂ, ಅದರಿಂದಲೇನೂ ಕಳೆಯಲೂ, ಬೇಡಿರಿ[೨]! ೩. ಬಅಲ್‌ಫೆಯೋರನ
ಸಲವಾಗಿ ಯೆಹೋವನು ಮಾಡಿದ್ದನ್ನು ನಿಮ್ಮ ಕಣ್ಣುಗಳು ನೋಡಿದ್ದಾವೆ, ಏನಂದರೆ
ಬಅಲ್‌ಫೆಯೋರನ ಹಿಂದೆ ಹೋದ ಒಬ್ಬೊಬ್ಬನನ್ನು ನಿನ್ನ ದೇವನಾದ ಯೆಹೋವ
ನು ನಿನ್ನ ನಡುವೆಯಿಂದ ಮಡಿಸಿದನು. ೪. ಆದರೆ ನಿಮ್ಮ ದೇವನಾದ ಯೆಹೋವನಿಗೆ
ಹತ್ತಿ ಕೊಂಡವರಾದ ನೀವು, ನೀವೆಲ್ಲರೂ ಇಂದು ಬದುಕುತ್ತೀರಿ. ೫. ನೋಡಿರಿ! ನೀ
ವು ಸ್ವತಂತ್ರಿಸಿ ಕೊಳ್ಳ ಹೋಗುತ್ತಿರುವ ದೇಶದ ನಡುವೆಯಲ್ಲಿ ಹಾಗೆ ಮಾಡುವದಕ್ಕೆ
ನನ್ನ ದೇವನಾದ ಯೆಹೋವನು ನನಗೆ ಬೆಸಸಿದ ಕಟ್ಟಳೆಗಳನ್ನೂ ನ್ಯಾಯಗಳನ್ನೂ ನಿ
ಮ್ಮನ್ನು ಕಲಿಸಿದ್ದೇನೆ. ೬. ಮತ್ತು ಅವುಗಳನ್ನು ಕೈಕೊಂಡು, ಅವುಗಳನ್ನು ಮಾಡಿರಿ.
ಯಾಕಂದರೆ ಜನಾಂಗಗಳ ಮುಂದೆ ಇದೇ ನಿಮ್ಮ ಜ್ಞಾನವೂ ನಿಮ್ಮ ಬುದ್ಧಿಯೂ. ಅ
ವು ಈ ಕಟ್ಟಳೆಗಳನ್ನೆಲ್ಲಾ ಕೇಳಿ, ಹೇಳುವದೇನಂದರೆ: ಈ ದೊಡ್ಡ ಜನವು ಜ್ಞಾನವೂ
ಬುದ್ಧಿಯೂ ಉಳ್ಳ ಜನಾಂಗವಾಗಿದೆ, ಸರಿ[೩]. ೭. ಯಾಕಂದರೆ, ನಾವು ಅವನಿಗೆ ಮೊ
ರೆಯಿಡುವಾಗೆಲ್ಲಾ ನಮ್ಮ ಹತ್ತರ ಬರುವ ಯೆಹೋವನ ಹಾಗಿರುವ ದೇವರುಗಳುಳ್ಳ
ದೊಡ್ಡ ಜನವು ಯಾವದು[೪]? ೮. ಮತ್ತು ನಾನು ಇಂದು ನಿಮ್ಮ ಮುಂದೆ ಇಡುತ್ತಿ
ರುವ ಈ ನೇಮವೆಲ್ಲಾದರಂತೆ ನೀತಿಯುಳ್ಳ ಕಟ್ಟಳೆಗಳೂ ನ್ಯಾಯಗಳೂ ಉಳ್ಳ ದೊಡ್ಡ
ಜನವು ಯಾವದು? ೯. ನಿನ್ನ ಕಣ್ಣುಗಳು ನೋಡಿದ ಕಾರ್ಯಗಳನ್ನು ನೀನು ಮರೆ
ಯದ ಹಾಗೆಯೂ, ನಿನ್ನ ಜೀವದ ದಿನಗಳಲ್ಲೆಲ್ಲಾ ಅವು ನಿನ್ನ ಹೃದಯದಿಂದ ಹಿಂಜರಿ
ಯದ ಹಾಗೆಯೂ, ನಿನಗೆ ಜೋಕೆಯಾಗಿದ್ದು, ನಿನ್ನ ಪ್ರಾಣವನ್ನು ಉರೆ ಜೋಕೆ
ಮಾಡ ಬೇಕಪ್ಪೆ, ಅವುಗಳನ್ನು ನಿನ್ನ ಮಕ್ಕಳಿಗೂ ನಿನ್ನ ಮಕ್ಕಳ ಮಕ್ಕಳಿಗೂ ತಿಳಿಸು!
೧೦. ನೀನು ಹೋರೆಬಿನಲ್ಲಿ ನಿನ್ನ ದೇವನಾದ ಯೆಹೋವನ ಮುಂದೆ ನಿಂತ ದಿವಸದಲ್ಲಿ,
ಅವರು ಭೂಮಿಯ ಮೇಲೆ ಬದುಕುವ ದಿವಸಗಳೆಲ್ಲಾ ನನಗೆ ಭಯ ಪಡುವದನ್ನು
ಕಲಿತು ಕೊಂಡು, ತಮ್ಮ ಮಕ್ಕಳಿಗೂ ಕಲಿಸುವ ಹಾಗೆ, ಅವರನ್ನು ನನ್ನ ವಾಕ್ಯಗಳ
ನ್ನು ಕೇಳಿಸುವ ಬಗ್ಗೆ, ಜನಾಂಗವನ್ನು ನನಗೆ ಕೂಡಿಸು, ಎಂದು ನನಗೆ ಹೇಳಿದನು.
೧೧. ಆಗ ನೀವು ಹತ್ತರ ಬಂದು, ಬೆಟ್ಟದ ಅಡಿಯಲ್ಲಿ ನಿಂತಿರಿ. ಆ ಬೆಟ್ಟವು, ಮುಬ್ಬು
ಮೋಡ ಕಾರ್ಗತ್ತಲೆಗಳು ಉಂಟಾಗಿ, ನಡು ಬಾನಿನ ಮಟ್ಟಿಗೂ ಬೆಂಕಿಯಿಂದ ಉರಿ
ಯುತ್ತಿರಲಾಗಿ, ೧೨. ಯೆಹೋವನು ಬೆಂಕಿಯ ನಡುವೆಯಿಂದ ನಿಮಗೆ ನುಡಿದನು.
ನುಡಿಗಳ ಶಬ್ದವನ್ನು ನೀವು ಕೇಳುತ್ತಾ, ಶಬ್ದವನ್ನಲ್ಲದೆ ಹೋಲಿಕೆಯನ್ನು ನೋಡದವ

ರಾಗಿದ್ದಿರಿ. ೧೩. ಆಗಲವನು ನಿಮಗೆ ಮಾಡ ಬೆಸಸಿದಂಥ, ತನ್ನ ಒಡಂಬಡಿಕೆಯಾದಂ
ಥ ಹತ್ತು ನುಡಿಗಳನ್ನು ನಿಮಗೆ ತಿಳಿಸಿ, ಅವುಗಳನ್ನು ಕಲ್ಲಿನ ಹಲಿಗೆ ಎರಡರ ಮೇಲೆ
ಬರೆದನು. ೧೪. ಆ ವೇಳೆಯಲ್ಲಿ ಯೆಹೋವನು ನನಗೆ, ನೀವು ಸ್ವತಂತ್ರಿಸಿ ಕೊಳ್ಳುವ ಬ
ಗ್ಯೆ ದಾಟಿ ಹೋಗುತ್ತಿರುವ ದೇಶದಲ್ಲಿ ಅವನ್ನ ಮಾಡುವ ಹಾಗೆ, ಕಟ್ಟಳೆಗಳನ್ನೂ
ನ್ಯಾಯಗಳನ್ನೂ ನಿಮ್ಮನ್ನು ಕಲಿಸ ಬೆಸಸಿದನು. ೧೫. ಹೀಗಿರಲಾಗಿ ನಿಮ್ಮ ಪ್ರಾಣಗ
ಳನ್ನು ಉರೆ ಜೋಕೆ ಮಾಡಿರಿ. ಯಾಕೆಂದರೆ ಯೆಹೋವನು ಹೋರೇಬಿನಲ್ಲಿ ಬೆಂಕಿಯ
ನಡುವೆಯೊಳಗಿಂದ ನಿಮಗೆ ನುಡಿದ ದಿವಸದಲ್ಲಿ ನೀವು ಯಾವ ಹೋಲಿಕೆಯನ್ನಾದ
ರೂ ನೋಡಲಿಲ್ಲ. ೧೬. ನೀವು ಕೆಟ್ಟು ಹೋಗಿ, ನಿಮಗೆ ಹೋಲಿಕೆಯ ಗೊಂಬೆಯಾ
ದ, ಗಂಡಾಗಲಿ ಹೆಣ್ಣಾಗಲಿ, ಯಾವದೊಂದು ಪ್ರತಿಮೆಯ ರೂಪವನ್ನಾದರೂ,
೧೭. ಭೂಮಿಯಲ್ಲಿಯಣ ಯಾವದೊಂದು ಮೃಗದ ಪ್ರತಿಮೆಯನ್ನಾದರೂ, ಬಾನಿ
ನಲ್ಲಿ ಹಾರುವಂಥ ರೆಕ್ಕೆಯುಳ್ಳ ಯಾವ ಹಕ್ಕಿಯ ಪ್ರತಿಮೆಯನ್ನಾದರೂ, ೧೮. ನೆಲದಲ್ಲಿ
ಹರಿಯುವಂಥ ಯಾವದೊಂದರ ಪ್ರತಿಮೆಯನ್ನಾದರೂ, ಭೂಮಿಯ ಕೆಳಗಣ ನೀರಿ
ನಲ್ಲಿರುವ ಯಾವ ಮೀನಿನ ಪ್ರತಿಮೆಯನ್ನಾದರೂ ಮಾಡ ಬಾರದು. ೧೯. ಮತ್ತು
ನಿನ್ನ ಕಣ್ಣುಗಳನ್ನು ಆಕಾಶಕ್ಕೆತ್ತಿ, ಸೂರ್ಯ ಚಂದ್ರ ನಕ್ಷತ್ರಗಳಾದ ಆಕಾಶಸೇನೆಯನ್ನು
ನೋಡಿ, ಮೋಸ ಪಟ್ಟು, ಅವಕ್ಕೆ ಅಡ್ಡ ಬಿದ್ದು, ನಿನ್ನ ದೇವನಾದ ಯೆಹೋವನು ಆಕಾ
ಶದ ಕೆಳಗಣ ಜನಾಂಗಗಳಿಗೆಲ್ಲಾ ಹಂಚಿ ಕೊಟ್ಟವುಗಳನ್ನು ಪೂಜಿಸ ಬಾರದು.
೨೦. ಆದರೆ ನಿಮ್ಮನ್ನು ಯೆಹೋವನು ತಕ್ಕೊಂಡು, ಅವನಿಗೆ ಇಂದಿನಂತೆ ಬಾಧ್ಯತೆಯ
ಪ್ರಜೆಯಾಗುವದಕ್ಕಾಗಿ, ಕಬ್ಬಿಣದ ಒಲೆಯಾದ[೫] ಮಿಚ್ರದೊಳಗಿಂದ ಹೊರ ಬರಲೀ
ಸಿದ್ದಾನೆ. ೨೧. ಬಳಿಕ ಯೆಹೋವನು ನಿಮಗಾಗಿ ನನಗೆ ಶಿಟ್ಟು ಮಾಡಿ, ನಾನು ಯೊ
ರ್ದನವನ್ನು ದಾಟಲಾಗದೆಂತಲೂ, ನಿನ್ನ ದೇವನಾದ ಯೆಹೋವನು ನಿನಗೆ ಬಾ
ಧ್ಯವಾಗಿ ಕೊಡುತ್ತಿರುವ ಆ ಒಳ್ಳೇ ದೇಶಕ್ಕೆ ಬರಲಾಗದೆಂತಲೂ ಆಣೆಯಿಟ್ಟನು.
೨೨. ಹ್ಯಾಗಂದರೆ ನಾನು ಈ ದೇಶದಲ್ಲಿ ಸಾಯುತ್ತೇನೆ. ನಾನು ಯೊರ್ದನವನ್ನು
ದಾಟಿ ಹೋಗುವವನಲ್ಲ. ನೀವೇ ದಾಟಿ, ಆ ಒಳ್ಳೇ ದೇಶವನ್ನು ಸ್ವತಂತ್ರಿಸಿ ಕೊಳ್ಳುವಿರಿ.
೨೩. ನಿಮ್ಮ ದೇವನಾದ ಯೆಹೋವನು ನಿಮ್ಮೊಡನೆ ಕಟ್ಟಿದ ಒಡಂಬಡಿಕೆಯನ್ನು ನೀ
ವು ಮರತು, ನಿಮಗೆ ಹೋಲಿಕೆಯ ಗೊಂಬೆಯನ್ನು ಮಾಡದ ಹಾಗೆ, ನಿಮ್ಮ ದೇವ
ನಾದ ಯೆಹೋವನು ಬೆಸಸಿದ್ದೆಲ್ಲಾದರಂತೆ, ಜೋಕೆಯಾಗಿರ್ರಿ. ೨೪. ಯಾಕೆಂದರೆ ನಿ
ನ್ನ ದೇವನಾದ ಯೆಹೋವನು ಬೇಯಿಸುವ ಬೆಂಕಿಯೂ ಆಸಕ್ತನಾದ[೬] ದೇವನೂ ಆ
ಗಿದ್ದಾನೆ. ೨೫. ನೀನು ಮಕ್ಕಳನ್ನೂ ಮಕ್ಕಳ ಮಕ್ಕಳನ್ನೂ ಹುಟ್ಟಿಸಿ, ಬಹು ಕಾಲ ದೇ
ಶದಲ್ಲಿ ಉಳು ಕೊಂಡ ಮೇಲೆ, ಕೆಟ್ಟು ಹೋಗಿ, ಯಾವದೊಂದಾದರೂ ಹೋಲಿಕೆಯ

ಗೊಂಬೆ ಮಾಡಿ, ನಿನ್ನ ದೇವನಾದ ಯೆಹೋವನ ಮುಂದೆ ಕೇಡು ಗೈದು, ಅವನನ್ನು
ಕೆಣಕಿದರೆ, ೨೬. ನಾನು ಇಂದು ಆಕಾಶವನ್ನೂ ಭೂಮಿಯನ್ನೂ ನಿಮ್ಮ ಮೇಲೆ
ಸಾಕ್ಷಿಗೆ ಕರೆಯುತ್ತೇನೆ, ಏನಂದರೆ, ನೀವು ಸ್ವತಂತ್ರಿಸಿ ಕೊಳ್ಳಲಿಕ್ಕೆ ಯೊರ್ದನವನ್ನು ದಾ
ಟುತ್ತಿರುವ ದೇಶದಲ್ಲಿಂದ ಬೇಗನೇ ಅಳಿದು ಹೋಗುವಿರಿ. ನಿಮ್ಮ ದಿವಸಗಳು ಅದರ
ಲ್ಲಿ ನೀಟಾಗದೆ, ಮಡಿದೇ ಮಡಿದು ಹೋಗುವಿರಿ. ೨೭. ಆಗ ಯೆಹೋವನು ನಿಮ್ಮ
ನ್ನು ಜನಾಂಗಗಳಲ್ಲಿ ಚದರಿಸುವನು. ಯೆಹೋವನು ನಿಮ್ಮನ್ನು ಕೊಂಡು ಹೋಗುವ
ಲ್ಲಿಯ ಜನಗಳಲ್ಲಿ ಕೆಲಬರಾಗಿಯೇ ಉಳಿಯುವಿರಿ. ೨೮. ಅಲ್ಲಿ ನೀವು ಮನುಷ್ಯರ ಕೈ
ಕೆಲಸಗಳಾದಂಥ, ನೋಡದೆ, ಕೇಳದೆ, ಉಣ್ಣದೆ, ಮೂಸದೆ ಇರುವಂಥ, ಮರವೂ ಕ
ಲ್ಲೂ ಆಗಿರುವಂಥ ದೇವರುಗಳನ್ನು ಸೇವಿಸುವಿರಿ[೭]. ೨೯. ಆದರೆ ಅಲ್ಲಿಂದ ನಿನ್ನ
ದೇವನಾದ ಯೆಹೋವನನ್ನು ಅರಸಿ, ಅವನನ್ನು ನಿನ್ನ ಪೂರ್ಣ ಹೃದಯದಿಂದಲೂ,
ನಿನ್ನ ಪೂರ್ಣ ಪ್ರಾಣದಿಂದಲೂ ಹುಡುಕಿದರೆ, ಅವನನ್ನು ದೊರಕಿಸಿ ಕೊಳ್ಳುವಿ.
೩೦. ನಿನಗೆ ಇಕ್ಕಟ್ಟು ಇದ್ದಲ್ಲಿಯೂ, ದಿನಗಳ ಕಡೆಯಲ್ಲಿ ಈ ನುಡಿಗಳೆಲ್ಲಾ ನಿನ್ನನ್ನು
ದೊರಕಿಸಿ ಕೊಂಡಲ್ಲಿಯೂ, ನಿನ್ನ ದೇವನಾದ ಯೆಹೋವನ ಕಡೆಗೆ ತಿರುಗಿ ಕೊಂಡು,
ಅವನ ಶಬ್ದಕ್ಕೆ ಕಿವಿ ಕೊಡುವಿ. ೩೧. ಯಾಕೆಂದರೆ ನಿನ್ನ ದೇವನಾದ ಯೆಹೋವನು
ಕರುಣಾಳುವುಳ್ಳ ದೇವನಾಗಿದ್ದು, ನಿನ್ನನ್ನು ಬಿಟ್ಟು ಬಿಡದೆ, ಅವರಿಗಾಣೆಯಿಟ್ಟಂಥ ನಿ
ನ್ನ ತಂದೆಗಳ ಒಡಂಬಡಿಕೆಯನ್ನು ಮರೆಯದೆ ಇರುವನು. ೩೨. ನಿನ್ನ ಮುಂಚೆ ಇದ್ದ
ಮೊದಲಿನ ದಿವಸಗಳನ್ನು, ದೇವನು ಭೂಮಿಯ ಮೇಲೆ ಮನುಷ್ಯನನ್ನು ಉಂಟು
ಮಾಡಿದಂದಿನಿಂದ, ಆಕಾಶದ ಈ ಕಡೆಯಿಂದ ಅದರ ಆ ಕಡೆಯ ವರೆಗೂ, ಇದರಂತೆ
ದೊಡ್ಡ ಕಾರ್ಯವುಂಟಾಯಿತೋ? ಇದರಂತೆ ಕೇಳಲಾಯಿತೋ? ಎಂತ ವಿಚಾರಿಸೆಲಾ!
೩೩. ಬೆಂಕಿಯ ನಡುವೆಯಿಂದ ದೇವನ ಶಬ್ದವನ್ನು ನೀನು ಕೇಳಿದಂತೆ, ಒಂದು ಜನಾಂಗ
ವು ಕೇಳಿ ಬದುಕಿತೋ? ೩೪. ಇಲ್ಲವೆ ನಿಮ್ಮ ದೇವನಾದ ಯೆಹೋವನು ಮಿಚ್ರದಲ್ಲಿ ನಿ
ನ್ನ ಕಣ್ಣೆದುರೆ ನಿಮಗೆ ಮಾಡಿದ್ದೆಲ್ಲಾದರಂತೆ, ದೇವನು ಒಂದು ಜನವನ್ನು ಮತ್ತೊಂದು
ಜನದ ನಡುವೆಯಿಂದ ಶೋಧನೆಗಳಿಂದಲೂ, ಗುರುತುಗಳಿಂದಲೂ ಲಕ್ಷಣಗಳಿಂದ
ಲೂ, ಕಾದಾಟದಿಂದಲೂ ಘಟ್ಟಿ ಕೈಯಿಂದಲೂ, ನೀಡಿದ ತೋಳಿನಿಂದಲೂ ಹಿರಿದಾ
ದ ಬೆದರುಗಳಿಂದಲೂ, ತಕ್ಕೊಳ್ಳುವ ಬಗ್ಯೆ ಬರಲೆಸಗಿದನೋ? ೩೫. ಯೆಹೋವನು
ಆತನೇ ದೇವನು, ಅವನಲ್ಲದೆ ಮತ್ತೊಬ್ಬನಿಲ್ಲವೆಂದು ನೀನು ತಿಳುಕೊಳ್ಳುವ ಹಾಗೆ, ಅ
ದು ನಿನಗೆ ಕಾಣಿಸಿ ಕೊಂಡಿತು. ೩೬. ನಿನ್ನನ್ನು ಶಿಕ್ಷಿಸುವ ಬಗ್ಯೆ[೮] ಆಕಾಶದೊಳಗಿಂದ
ತನ್ನ ಶಬ್ದವನ್ನು ನಿನಗೆ ಕೇಳಿಸಿದನು; ಭೂಮಿಯ ಮೇಲೆ ದೊಡ್ಡದಾದ ತನ್ನ ಬೆಂಕಿ
ಯನ್ನು ನಿನ್ನನ್ನು ನೋಡಲೀಸಿದನು. ಬೆಂಕಿಯ ನಡುವೆಯಿಂದಲವನ ನುಡಿಗಳನ್ನು

ಕೇಳಿದಿ. ೩೭. ಅವನು ನಿನ್ನ ತಂದೆಗಳನ್ನು ಒಲಿದ ಸಲವಾಗಿ, ಅವರ ಬಳಿಕ ಅವರ
ಬೀಜವನ್ನು ಆದು ಕೊಂಡು[೯], ತಾನು ಮುಂದಾಗಿದ್ದು[೧೦], ದೊಡ್ಡದಾದ ತನ್ನ ಬಲ
ದಿಂದ ಮಿಶ್ರದೊಳಗಿಂದ ನಿನ್ನನ್ನು ಹೊರ ಬರಲೀಸಿದನು, ೩೮. ನಿನಗಿಂತ ದೊಡ್ಡ
ದಾದ, ನಿನಗಿಂತ ಆಣ್ಮೆಯಾದ ಜನಗಳನ್ನು ನಿನ್ನ ಮುಂದೆ ಹೊರಡಿಸಿ, ನಿನ್ನನ್ನು ಒ
ಳ ಬರಲೀಸಿ, ಇಂದಿನಂತೆ ಅವರ ದೇಶವನ್ನು ನಿನಗೆ ಸ್ವಾಸ್ಥ್ಯವಾಗಿ ಕೊಡ ಬೇಕೆಂತ.
೩೯. ಹೀಗಿರಲಾಗಿ, ಮೇಲಣ ಆಕಾಶದಲ್ಲಿಯೂ ಕೆಳಗಣ ಭೂಮಿಯಲ್ಲಿಯೂ ಯೆ
ಹೋವನು ಆತನೇ ದೇವನು, ಮತ್ತೊಬ್ಬನಿಲ್ಲವೆಂದು, ಇಂದು ತಿಳಿದು, ನಿನ್ನ ಹೃದಯ
ಕ್ಕೆ ತಂದು ಕೊಂಡು, ೪೦. ನಿನಗೂ ನಿನ್ನ ಬಳಿಕ ನಿನ್ನ ಮಕ್ಕಳಿಗೂ ಲೇಸಾಗುವ ಹಾ
ಗೆಯೂ, ನಿನ್ನ ದೇವನಾದ ಯೆಹೋವನು ದಿನಗಳಲ್ಲೆಲ್ಲಾ ನಿನಗೆ ಕೊಡುವ ಭೂಮಿ
ಯ ಮೇಲೆ ನೀನು ದಿವಸಗಳನ್ನು ನೀಟಿಸುವ ಹಾಗೆಯೂ, ನಾನು ಇಂದು ನಿನಗೆ ಬೆ
ಸಸುತ್ತಿರುವ ಅವನ ಕಟ್ಟಳೆಗಳನ್ನೂ ಬೆಸಗಗಳನ್ನೂ ಕಾಪಾಡು!

೧. ಬದುಕೋಣವೆಂಬದು ದೇಹ ಜೀವ ಸಂರಕ್ಷಣೆಯನ್ನಲ್ಲದೆ, ಇಹಪರ ಪದವಿಯಾದ ಇಷ್ಟಾರ್ಥಪೂರ್ತಿಯನ್ನು ಸೂಚಿಸುವದು.

೨. ಸಂಪೂರ್ಣವಾದ ದೇವನ ನೇಮವನ್ನು ಹೆಚ್ಚುಕಡಿಮೆಯಿಲ್ಲದ ಜಾಗ್ರತೆಯಿಂದ ಕೈಕೊಳ್ಳಲಾಸಕ್ತವಾದ ವಿಧೇಯತ್ವವಿಲ್ಲದವರಲ್ಲಿ ಪೌಲನು ರೋಮಾ. ೩, ೨೦. ಗಲಾ. ೩, ೨೪ರಲ್ಲಿ ವಿವರಿಸುವ ನೇಮದ ಉದ್ದೇಶವು ನೆರೆವೇರಲಾರದು.

೩. ಈ ತರದ ಭಾವನೆಯು ಅರಬಿಸ್ಥಾನದ ರಾಣಿಯ ಮನಸ್ಸಿನಲ್ಲಿ ಹುಟ್ಟಿತೆಂದು, ೧ ಅರ. ೧೦, ೬ ಮುಂತಾದದರಲ್ಲಿ ಬರದದೆ.

೪. ಹಳೆ ಹೊಸ ಒಡಂಬಡಿಕೆಗಳ ಬರಹಗಳಲ್ಲಿ ಪ್ರಕಟವಾಗಿರುವಂಥ ದೇವಸಾಮಿಪ್ಯ ಸಾಯುಜ್ಯಮಾರ್ಗವು ಲೋಕದೊಳು ವಾಡಿಕೆಯಾದ ಧರ್ಮಗಳ ಯಾವದೊಂದರಲ್ಲಿಯೂ ಕಾಣುವದಿಲ್ಲ. ಪರಜನರ ಧರ್ಮಶಾಸ್ತ್ರಗಳಲ್ಲಿ ಈ ಪದವಿಯ ಆಶೆಯು ಕೊಂಚ ಜಾಡೆಯಾಗಿ ಕಾಣಿಸಿ ಕೊಂಡರೂ, ಅದರ ಸಿದ್ಧಿಯು ಎಷ್ಟು ಮಾತ್ರವೂ ದೊರಕುವದಿಲ್ಲ. ಹೀಗಿರಲಾಗಿ ದೇವವಾಕ್ಯಧರ್ಮವೇ ಲೋಕರಕ್ಷಣೆಗಾಗಿ ಉಪಯೋಗವಾದದ್ದು. ಇತರ ಧರ್ಮಗಳು ಲೋಕವಂಚನೋದಿಶ್ಯವಾಗಿವೆಯಷ್ಟೆ.

೫ ಕಬ್ಬಿಣ ಕರಗುವ ಚುಲ್ಲಿಯು ಶಾನೆ ಕಠಿಣವಾದ ದಂಡನೆಗೆ ತಕ್ಕ ಉಪಮೆಯಾಗಿದೆ. ಯೆಶಾ. ೪೮, ೧೦.

೬. ಯೆಹೋವನು ವಿವಾಹಧರ್ಮಾತಿಕ್ರಮಣವನ್ನು ತಾಳಲಾರದೆ ಗಂಡನಂತೆ ತನ್ನ ಒಡಂಬಡಿಕೆಯಲ್ಲಿ ಶೇರಿದವರ ದ್ರೋಹಗಳನ್ನು ದಂಡಿಸದೆ ಬಿಡಲೊಲ್ಲದವನಾಗಿದ್ಧಾನೆ. ಯೆಶಾ. ೪೮, ೧೧.

೭. ಪಾಪವೇ ಪಾಪಕ್ಕೆ ಅಧಿಕಾಧಿಕವಾದ ಶಿಕ್ಷೆಯಾಗಿ ದೇವರಿಂದ ನೇಮಕವಾಗಿದೆ. ರೋಮಾ. ೧. ೨೪.

೮. ಇಲ್ಲಿ ಪ್ರಯೋಗವಾದ ಯಶರ್ ಎಂಬ ಇಬ್ರಿಯ ಶಬ್ದಕ್ಕೆ ಎಚ್ಚರಿಸೋಣ, ಬೋಧಿಸೋಣ, ದಂಡಿಸೋಣವೆಂಬ ಅಭಿಪ್ರಾಯಗಳವೆ.

೯. ಇಸ್ರಯೇಲನವರ ಶ್ರೇಷ್ಠತ್ವಕ್ಕೆ ಅವರ ಪುಣ್ಯವಲ್ಲ, ಅಬ್ರಹಾಮನು ಮೊದಲಾದ ಅವರ ತಂದೆಗಳನ್ನೊಲಿದ ದೇವನ ಆಯಿಕೆಯೇ ಮೂಲಕಾರಣವಾಗಿದೆ.

೧೦. ತಾನು ಮುಂದಾಗಿದ್ದು ಎಂಬದು ಇಸ್ರಯೇಲನವರ ದಂಡಿನ ಮುಂದೆ ಹೋಗುತ್ತಾ, ದಾರಿ ತೋರಿಸುತ್ತಾ ಬರುವ ಯೆಹೋವನ ಪ್ರತ್ಯಕ್ಷ ಮಹಿಮೆಯನ್ನು ಸೂಚಿಸುತ್ತದೆ.

II. ನೇಮಪುನರುಕ್ತಿಯೂ, ಅದರ ನೂತನವಾದಂಥ, ಹೆಚ್ಚಾದ ಹೇತೂಪನ್ಯಾಸ ಪರಿಶಿಷ್ಟಗಳು ಅಲ್ಲಲ್ಲಿ ಕೂಡಿದಂಥ ದಿಕ್ಷಾಬೋಧನೆಯೂ. ಸ. ೪, ೪೪—ಸ. ೨೬.

ನೇಮಧಾನದ ಮುಖ್ಯ ಭಾಗವಾದ ಹತ್ತು ಕಟ್ಟಳೆಗಳ ಪುನರುಕ್ತಿ. ಸ. ೫.

ವ. ೧. ಬಳಿಕ ಮೋಶೆ ಇಸ್ರಯೇಲನನ್ನೆಲ್ಲಾ ಕರೆದು, ಅವರಿಗೆ ಹೇಳಿದ್ದು: ಇಸ್ರ
ಯೇಲನೇ, ನಾನು ಇಂದು ನಿಮ್ಮ ಕಿವಿಗಳಲ್ಲಿ ನುಡಿಯುತ್ತಿರುವ ಕಟ್ಟಳೆಗಳನ್ನೂ ನ್ಯಾ
ಯಗಳನ್ನೂ ಕೇಳು. ಅವುಗಳನ್ನು ಕಲಿತು, ಮಾಡುವರೆ ಕೈಕೊಳ್ಳಿರಿ. ೨. ನಮ್ಮ
ದೇವನಾದ ಯೆಹೋವನು ಹೋರೆಬಿನಲ್ಲಿ ನಮ್ಮೊಡನೆ ಒಡಂಬಡಿಕೆಯನ್ನು ಕಟ್ಟಿದನು.
೩. ನಮ್ಮ ತಂದೆಗಳೊಡನೆಯಲ್ಲ[೧], ನಮ್ಮೊಡನೆಯೇ ಈ ಒಡಂಬಡಿಕೆಯನ್ನು ಕಟ್ಟಿದನು.
ನಾವೆಲ್ಲರು ಇಲ್ಲಿ ಇಂದು ಬದುಕುತ್ತಾ ಇದ್ಧೇವೆ. ೪. ಮೋರೆಮೋರೆಯಾಗಿ ಯೆಹೋ
ವನು ನಿಮ್ಮೊಡನೆ ಬೆಟ್ಟದಲ್ಲಿ ಬೆಂಕಿಯ ನಡುವೆಯಿಂದ ನುಡಿದನು. ೫. ಯೆಹೋವನ
ನುಡಿಯನ್ನು ನಿಮಗೆ ಸಾರುವ ಬಗ್ಯೆ ನಾನು ಆ ವೇಳೆಯಲ್ಲಿ ಯೆಹೋವನಿಗೂ ನಿಮ
ಗೂ ನಡುವೆ ನಿಲ್ಲುತ್ತಾ ಇದ್ದೆನು; ಯಾಕೆಂದರೆ ಬೆಂಕಿಯ ಮುಂದೆ ಹೆದರಿ ಬೆಟ್ಟವನ್ನೇ
ರದೆ ಇದ್ದಿರಿ.— —೨೮. ಯೆಹೋವನು ನನಗೆ ಹೇಳಿದ್ದು: ಈ ಜನಾಂಗವು ನುಡಿದ
ನುಡಿಗಳ ಶಬ್ದ ಕೇಳಿದ್ಧೇನೆ; ಅವರು ನುಡಿದದ್ದೆಲ್ಲಾ ಒಳ್ಳೇದು. ೨೯. ಅವರಿಗೂ ಅ
ವರ ಮಕ್ಕಳಿಗೂ ಸದಾಕಾಲಕ್ಕೆ ಒಳ್ಳೇದಾಗುವಂತೆ, ಅವರು ನನಗೆ ಹೆದರಿ[೨], ನನ್ನ ಬೆ
ಸಗಗಳನ್ನೆಲ್ಲಾ ದಿವಸಗಳಲ್ಲೆಲ್ಲಾ ಕೈಕೊಳ್ಳುವ ಹೃದಯವನ್ನವರಿಗುಂಟಾಗಲೀಸುವವ
ನ್ಯಾರು?— —೩೨. ಮತ್ತು ನಿಮ್ಮ ದೇವನಾದ ಯೆಹೋವನು ನಿಮಗೆ ಬೆಸಸಿದಂತೆ
ಮಾಡುವರೆ ಕಾದು ಕೊಳ್ಳಿರಿ. ಬಲಕ್ಕಾದರೂ ಎಡಕ್ಕಾದರೂ ತೊಲಗದೆ, ೩೩. ನೀವು
ಬದುಕುವ ಹಾಗೆಯೂ, ನಿಮಗೆ ಒಳ್ಳೇದಾಗುವ ಹಾಗೆಯೂ, ನೀವು ಸ್ವತಂತ್ರಿಸಿ ಕೊ
ಳ್ಳಲಿರುವ ದೇಶದಲ್ಲಿ ದಿವಸಗಳನ್ನು ನೀಟಾಗಿರಿಸುವ ಹಾಗೆಯೂ, ನಿಮ್ಮ ದೇವನಾದ
ಯೆಹೋವನು ನಿಮಗೆ ಬೆಸಸಿದ ಮಾರ್ಗದಲ್ಲೆಲ್ಲಾ ನಡೆಯ ಬೇಕು.

---

೧. ಅಬ್ರಹಾಮ ಇಸಾಕ ಯಾಕೋಬರ ಸಂಗಡಲೂ ಯೆಹೋವನು ಒಂದು ಒಡಂಬಡಿಕೆಯನ್ನು ಕಟ್ಟಿ ಕೊಂಡದ್ದು ಸರಿ. ಆದರೆ ಆ ಒಡಂಬಡಿಕೆಯು ದಯೆಯ ಒಡಂಬಡಿಕೆಯಾಗಿತ್ತು. ಗಲಾ. ೩, ೧೭. ಮೋಶೆಯ ಮುಖಾಂತರ ಉಂಟಾದ ಒಡಂಬಡಿಕೆಯು ನೇಮದ ಒಡಂಬಡಿಕೆಯಾಗಿತ್ತು.

೨. ಇದು ಇಸ್ರಯೇಲನವರಲ್ಲಿ ನೆರೆವೇರ ತಕ್ಕ ಒಡಂಬಡಿಕೆಯ ಕಟ್ಟಾಗಿತ್ತು. ಇದು ಈ ಒಡಂಬಡಿಕೆಯ ಆಶೀರ್ವಾದಾನುಭೋಗಕ್ಕೆ ಸಹೇತುವಾಗಿತ್ತು. ಇಂಥ ಹೃದಯವನ್ನು ಪಾಪದಿಂದ ಕೆಟ್ಟು ಹೋದ ಮನುಷ್ಯರಲ್ಲಿ ಉಂಟು ಮಾಡ ಬಲ್ಲವನು ದೇವನ ಹೊರ್ತು ಯಾರೂ ಇಲ್ಲ. ಯೆರೆ. ೩೨, ೩೯. ೪೦. ಫಿಲಿ. ೨, ೧೩. ದೇವನಿಂದಲೇ ಬೇಡಿ ಕೊಂಡು ಅದನ್ನು ಪಡೆದು ಕೊಂಡವನು ಮಂಗಳನು.

೩೬೬. ಎಚ್ಚರದ ಮಾತು. ಯೆಹೋವನ ದಯೆ ಆಶೀರ್ವಾದಗಳ ನೆನೆವರಿಕೆ.

ದ್ವಿತೀ. ೬, ೪. ೫; ೭, ೬; ೮, ೩—೧೦.

ದೇವಭಯಪ್ರೀತಿಗಳ ವಿಷಯವಾದ ಮೊದಲನೆ ಕಟ್ಟಳೇ ಕೈಕೊಳ್ಳ ಬೇಕೆಂಬ ಬೆಸೆಯಾದ ಎಚ್ಚರದ ಮಾತು. ಸ. ೬.

——ವ. ೪. ಕೇಳು, ಇಸ್ರಯೇಲನೇ, ನಮ್ಮ ದೇವನಾದ ಯೆಹೋವನು ಒಬ್ಬನೆ ಯೆಹೋವನು. ೫. ಮತ್ತು ನಿನ್ನ ದೇವನಾದ ಯೆಹೋವನನ್ನು ನಿನ್ನ ಹೃದಯವೆಲ್ಲಾದರಿಂದಲೂ, ನಿನ್ನ ಪ್ರಾಣವೆಲ್ಲಾದರಿಂದಲೂ, ನಿನ್ನ ಸಾಮರ್ಥ್ಯವೆಲ್ಲಾದರಿಂದಲೂ ಪ್ರೀತಿ ಮಾಡ ಬೇಕು.

ಈ ಕಟ್ಟಳೆಗೆ ಮಕ್ಕಳು ಮೊಮ್ಮಕ್ಕಳು ಮುಂತಾದ ಕಿರಿಯರ ಮನಸ್ಸನ್ನು ಚುರುಕಾಗಿ ತಗಲಿಸ ಬೇಕು. ವ. ೨೦—೨೫.

ಕನಾನ ದೇಶದವರನ್ನೂ ಅವರ ವಿಗ್ರಹಗಳನ್ನೂ ಬುಡಮುಟ್ಟ ಅಳಿಸಿ ಬಿಡ ಬೇಕು. ಸ. ೭.

——ವ. ೬. ಯಾಕಂದರೆ ನೀನು ನಿನ್ನ ದೇವನಾದ ಯೆಹೋವನಿಗೆ ಪರಿಶುದ್ಧ ಪ್ರಜೆಯಾಗಿದ್ದೀ. ನಿನ್ನ ದೇವನಾದ ಯೆಹೋವನು ಭೂಮಿಯ ಮೇಲಣ ಎಲ್ಲಾ ಪ್ರಜೆಗಳೊಳಗಿಂದ, ತನಗೆ ಸ್ವಕೀಯ ಪ್ರಜೆಯಾಗುವ ಹಾಗೆ, ನಿನ್ನನ್ನು ಆದು ಕೊಂಡಿದ್ದಾನೆ.

ಯೆಹೋವನು ಅವರ ತಂದೆಗಳೊಡನೆ ಕಟ್ಟಿದ ಒಡಂಬಡಿಕೆಯನ್ನು ಕೈಕೊಳ್ಳುವ ಉದ್ದೇಶ್ಯವಾಗಿಯೇ ಇದನ್ನು ಮಾಡಿದ್ದರಿಂದಲೂ, ಇಸ್ರಯೇಲನವರು ದೊಡ್ಡತನದಿಂದಲಾದರೂ ಯಾವ ಪುಣ್ಯದಿಂದಲಾದರೂ ಈ ಪದವಿಗೆ ಪಾತ್ರರಾಗಲಿಲ್ಲವಾದ್ದರಿಂದಲೂ, ಅವರು ಪರಜನರ ಸಲಿಗೆ ಹೊಕ್ಕುಬಳಿಕೆಗಳಿಂದ ಹೊಲೆಗಲಿಸಿ ಕೊಳ್ಳುವ ಮೋಸಕ್ಕೆ ಶಾನೆ ದೂರವಾಗಿರ ಬೇಕಾಗಿತ್ತು.

ಯೆಹೋವನು ನಾಲ್ವತ್ತು ವರ್ಷದೊಳಗೆ ತೋರಿಸುತ್ತಾ ಬಂದ ದಯೆ ನಂಬಿಕೆತನಗಳು, ವಾಗ್ದತ್ತದೇಶದ ಆಶೀರ್ವಾದವು, ಇವುಗಳ ನೆನೆವರಿಕೆ. ಸ. ೮.

——ವ. ೩. ಅವನು ನಿನ್ನನ್ನು ಕಾಡಿ, ನಿನ್ನನ್ನು ಹಶಿಯಾಗಿಸಿ, ರೊಟ್ಟಿಯಿಂದಲೇ ಮನುಷ್ಯನು ಬದುಕದೆ, ಯೆಹೋವನ ಬಾಯಿಂದ ಹೊರಡುವದೆಲ್ಲಾದರಿಂದಲೂ ಬದುಕುತ್ತಾನೆಂದು[1], ನಿನಗೆ ತಿಳಿಸುವ ಬಗ್ಯೆ, ನೀನು ತಿಳಿಯದಂಥ, ನಿನ್ನ ತಂದೆಗಳು ತಿಳಿಯದಂಥ ಮಾನ್ ಎಂಬದನ್ನು ನಿನಗೆ ತಿನ್ನಿಸಿದನು. ೪. ಈ ನಾಲ್ವತ್ತು ವರ್ಷ ನಿನ್ನ ಉಡವು ನಿನ್ನ ಮೇಲೆ ಹಳಸಲಿಲ್ಲ, ನಿನ್ನ ಕಾಲು ಬಾಯಲಿಲ್ಲ.——೭. ನಿನ್ನ ದೇವನಾದ ಯೆಹೋವನು ನಿನ್ನನ್ನು ಒಳ್ಳೇ ದೇಶಕ್ಕೆ ಬರಲೀಸುತ್ತಾನೆ.——೧೦. ಮತ್ತು ನೀನು ಉಂಡು, ಹೊಟ್ಟೆ ತುಂಬಿ, ನಿನ್ನ ದೇವನಾದ ಯೆಹೋವನನ್ನು, ನಿನಗೆ ಕೊಟ್ಟ ಒಳ್ಳೇ ದೇಶಕ್ಕಾಗಿ, ಹರಸ ಬೇಕು.

ದ್ವಿತೀ. ೯, ೧—೬; ೧೦; ೧೧; ೧೨.

೧. ಈ ಮಾತಿನ ಅಭಿಪ್ರಾಯವೇನಂದರೆ, ಕರ್ತನಾದ ದೇವನು, ಮನವರಿದರೆ, ರೂಢಿಯಾದ ಸೃಷ್ಟಿಯ ಪದ್ಧತಿಯನ್ನು ಬಿಟ್ಟು, ಮನುಷ್ಯನ ಜೀವವನ್ನು ಆಶ್ಚರ್ಯ ರೀತಿಯಿಂದ ತನ್ನ ಅಮಿತವಾದ ಸೃಷ್ಟಿಶಕ್ತಿಯ ಮೂಲವಾಗಿ ಸಂರಕ್ಷಿಸಲಾಪನೆಂತ.

೨. ಅವರ ಪಯಣದಲ್ಲೆಲ್ಲಾ ಅವರಿಗೆ ಅನುವಾದ ಪಾದರಕ್ಷೆಗಳು ಸಹ ದೊರಕದೆ ಹೋಗಿದ್ದಿಲ್ಲಾ. ಯೆಹೋವನು ತನ್ನ ಜನಾಂಗವನ್ನು ನಿಜ ಮಕ್ಕಳೆಂದು ತಂದೆಯ ಮಮತೆಯಿಂದ ಆರೈಕೆ ಮಾಡುತ್ತಾ ಬಂದನು.

ಕನಾನ ದೇಶದ ಪ್ರವೇಶವು ಇಸ್ರಯೇಲನವರು ಮಾಡಿದ ವಿಧೇಯತ್ವ ಮೊದಲಾದ ಪುಣ್ಯಗಳ ಫಲವಲ್ಲ, ಯೋಗ್ಯತೆಯಿಲ್ಲದವರ ಮೇಲೆ ದಯೆಯೂ ಕರುಣೆಯೂ ಉಳ್ಳ ದೇವನ ಉಚಿತವರವೇ ಎಂಬ ನೆನೆವರಿಕೆ. ಸ. ೯.

ವ. ೧. ಕೇಳು, ಇಸ್ರಯೇಲನೇ! ನೀನು ಇಂದು, ನಿನಗಿಂತ ಆಣ್ಮೆಯುಳ್ಳ ದೊಡ್ಡ ಜನಗಳನ್ನೂ ಆಕಾಶದ ವರೆಗೂ ಘಟ್ಟಿಯಾಗಿ ಕಟ್ಟಿದ ದೊಡ್ಡ ಪಟ್ಟಣಗಳನ್ನೂ ಸ್ವತಂತ್ರಿಸಿ ಕೊಳ್ಳುವ ಬಗ್ಯೆ, ಯೊರ್ದನವನ್ನು ದಾಟಿ ಹೋಗುತ್ತೀ.— —೪.— —ನನ್ನ ನೀತಿಗಾಗಿ ಯೆಹೋವನು ಈ ದೇಶವನ್ನು ಸ್ವತಂತ್ರಿಸಿಕೊಳ್ಳುವಬಗ್ಯೆ ನನ್ನನ್ನು ಸೇರಿಸಿದ್ದಾನೆಂದು ನಿನ್ನ ಹೃದಯದಲ್ಲಿ ಹೇಳಿ ಕೊಳ್ಳದೆ ಇರು.— —೫. ನಿನ್ನ ನೀತಿಗಾಗಿಯೂ, ನಿನ್ನ ಹೃದಯದ ನೆಟ್ಟನೆತನಕ್ಕಾಗಿಯೂ ನೀನು ಅವರ ದೇಶವನ್ನು ಸ್ವತಂತ್ರಿಸಿ ಕೊಳ್ಳ ಸೇರುವದಿಲ್ಲ. ಆ ಜನಾಂಗಗಳ ಕೆಟ್ಟತನಕ್ಕಾಗಿಯೂ, ಯೆಹೋವನು ನಿನ್ನ ತಂದೆಗಳಾದ ಅಬ್ರಹಾಮ ಇಸಾಕ ಯಾಕೋಬರಿಗೆ ಇಟ್ಟ ಆಣೆಯನ್ನು ಕೈಕೊಳ್ಳುವದಕ್ಕಾಗಿಯೂ, ನಿನ್ನ ದೇವನಾದ ಯೆಹೋವನು ಅವರನ್ನು ನಿನ್ನ ಮುಂದೆ ಹೊರಡಿಸುತ್ತಾನೆ. ೬.— —ಯಾಕೆಂದರೆ ನೀನು ಘಟ್ಟಿ ಕತ್ತಿನ ಜನಾಂಗವಾಗಿದ್ದೀ.— —(ಹಾಗಾದರೆ ಇಸ್ರಯೇಲನ ಹೆಚ್ಚಳವೆಲ್ಲಿ?)

ಇಸ್ರಯೇಲನವರು ಮನಃಪೂರ್ವಕವಾದ ಕೃತಜ್ಞತೆಯಿಂದ ನೆನಪು ಮಾಡಿಕೊಳ್ಳ ತಕ್ಕ ದೇವನ ಕೃಪೆ ನಂಬಿಕೆತನಗಳ ಉದಾಹರಣೆಗಳ ಹೆಚ್ಚಾದ ವರ್ಣನೆ. ಸ. ೧೦.

ಯೆಹೋವನಿಗೆ ವಿಧೇಯರಾಗಿ ನಡದು ಕೊಳ್ಳ ಬೇಕೆಂಬ ಉಪದೇಶವು. ಆಶೀರ್ವಾದ ಶಾಪಗಳ ಪ್ರಸಂಗ. ಸ. ೧೧.

ದೆವ್ವಪೂಜೆಗೆ ಸಂಬಂಧವಾದ ಪೀಠ ಗೊಂಬೆ ತೋಪುಗಳು ಮುಂತಾದ್ದನ್ನು ಹಾಳು ಮಾಡುವದು, ಯೆಹೋವನನ್ನು ಒಂದೇ ಸ್ಥಳದಲ್ಲಿ ಜನಾಂಗದವರೆಲ್ಲರು ಆರಾಧಿಸುವದು, ಮೋಸವಾಗದ ಹಾಗೆ ಎಚ್ಚರವಾಗಿರುವದು, ಈ ಮೊದಲಾದ ಬೋಧನೆಗಳು. ಸ.೧೨.

"ಇಸ್ರಯೇಲನವರು ಅರಣ್ಯಸಂಚಾರಕಾಲದಲ್ಲಿ ಒಂದೇ ದಂಡಾಗಿ ಕೂಡಿ ಕೊಂಡಿರುವ ಪದ್ಧತಿಯನ್ನು ಬಿಟ್ಟು, ಎರಡೂವರೆ ಕುಲಗಳು ಮಾಡಿದಂತೆ, ಉಳಿದ ಕುಲಗಳೂ ಅಗಲಿ, ತಮ್ಮ ತಮ್ಮ ನಾಡುಗಳಲ್ಲಿ ವಸ್ತಿಯಾಗಿ ವಿಸ್ತಾರವಾದ ದೇಶವನ್ನು ಎಲ್ಲೆಲ್ಲಿಯೂ ತುಂಬಿದ ವೇಳೆಯಲ್ಲಿ, ಇನ್ನೂ ಒಂದೇ ಧರ್ಮಸಭೆಯಾಗಿಯೂ ಒಂದೇ ದೇವಜನಾಂಗವಾಗಿಯೂ ಛಿನ್ನವಿಲ್ಲದ ಐಕ್ಯದ ಸಂಬಂಧವನ್ನು ದೃಢವಾಗಿ ಕೈಕೊಳ್ಳ

ಬೇಕಾಗಿತ್ತು. ಇದು ೧೨ನೆ ಸಂಧಿಯಲ್ಲಿ ನೇಮಕವಾದ ಕಟ್ಟಳೆಗಳ ಉದ್ದಿಶ್ಯವು. ಏನಂದರೆ, ಯೆಹೋವನು ತನ್ನ ಪರಿಶುದ್ಧಾಲಯಕ್ಕೆ ಆದು ಕೊಳ್ಳಲಾಗುವಂಥ ಸ್ಥಳದಲ್ಲಿಯೇ, ಹತ್ತರವಾಗಲಿ ದೂರವಾಗಲಿ ವಾಸಿಸುತ್ತಿರುವ, ಇಸ್ರಯೇಲನವರೆಲ್ಲರೂ ಅನ್ಯೋನ್ಯವಾದ ಕರ್ತನ ಆರಾಧನೆಗಾಗಿ ಆಯಾ ಕಾಲಗಳಲ್ಲಿ ಕೂಡಿ ಬರ ಬೇಕಾಗಿತ್ತು. ಇದರ ಸಲವಾಗಿ ಸಂಧಿಯು ಆರಂಭದಲ್ಲಿ, ಕನಾನ ದೇಶದಲ್ಲಿಯೂ ಎಲ್ಲಾ ಪೀಠಗಳನ್ನೂ ಲಿಂಗಗಳನ್ನೂ ತೋಪುಗಳನ್ನೂ ಬೇರೆ ಬೇರೆ ಗೊಂಬೆಗಳನ್ನೂ ಪೂರ್ವ ನಿವಾಸಿಗಳ ದೆವ್ವಾರಾಧನೆಗಳ ನೆನಪು ಹುಟ್ಟಿಸುವ ಒಡವೆಗಳನ್ನೂ ಹಾಳು ಮಾಡಿ, ತೆಗದು ಹಾಕ ಬೇಕೆಂಬದು ನೇಮಕವಾಗಿದೆ. ಇಸ್ರಯೇಲನ ಜನಾಂಗದ ಐಕ್ಯದ ಸಂಬಂಧವು ಕಳದು ಹೋಗುವದಾದರೆ, ಇಸ್ರಯೇಲನ ಕುಲಗಳು ಬೇಗ ಛೇದ ಛೇದವಾಗಿ, ಬಳಿಕ ಕಾಲಗತಿಯಿಂದ ಅಬ್ರಹಾಮನ ವಂಶದವರು ಕನಾನದ ಪೂರ್ವ ನಿವಾಸಿಗಳು ನಡಿಸುತ್ತಾ ಬಂದ ದೆವ್ವ ಪೂಜೆ ಮುಂತಾದ ಪಾಪಗಳ ಗುಂಡಿಯಲ್ಲಿ ಜಾರಿ ಬಿದ್ದು ನಾಶವಾಗುತ್ತಿದ್ದರು. ಕೆಟ್ಟದ್ದನ್ನು ಮಾಡುವದು ಒಳ್ಳೇದನ್ನು ಮಾಡುವದಕ್ಕಿಂತ ಮನುಷ್ಯನಿಗೆ ಕಡಿಮೆ ಬೇಸರವಾಗಿದೆಯಲ್ಲವೋ? ಪಾಪದಿಂದ ಕೆಟ್ಟು ಹೋದ ಮನುಷ್ಯರಿಗೆ, ವಿಶೇಷವಾಗಿ ದೆವ್ವಭಕ್ತರಾದ ಪರಜನರೊಳಗೆ ಬದುಕುತ್ತಿರುವವರಿಗೆ, ಅದೃಶ್ಯನಾದ ಏಕದೇವನನ್ನು ನಂಬಿ ಆರಾಧಿಸುವ ಆತ್ಮಿಕ ಸಾಧನೆಗಿಂತ ಪ್ರಕೃತಿಪೂಜೆ ನಡಿಸುತ್ತಾ, ಮಾಂಸದ ಬೈಕೆಗಳನ್ನು ತುಂಬುವದು ಹೆಚ್ಚು ಇಂಪಾದದ್ದೇ ಸರಿ. ಆದ್ದರಿಂದ ಇಸ್ರಯೇಲನವರು ವಾಗ್ದತ್ತದೇಶವನ್ನು ಸ್ವೀಕರಿಸಿ, ಅದರ ನಾಡುಗಳಲ್ಲಿ ವಸ್ತಿಯಾದ ಬಳಿಕ, ಹೋಮಗಳು ಅಪರಾಧ ಪಾಪ ಕೃತಜ್ಞತಾಬಲಿಗಳು, ದಶಮಾಂಶಗಳು, ಕಾಣಿಕೆಗಳು ಉಚಿತವಾಗಿ ಮೀಸಲಾಗಿರಿಸಿದ ಒಡವೆಗಳು, ಇವುಗಳನ್ನೆಲ್ಲಾ, ಬೇರೆ ಯಾವ ಗುಡಿಗಾದರೂ ಹೋಗದೆ, ಸಾಮಾನ್ಯವಾದ ಆರಾಧನೆಯ ಕೂಟದ ಎಡೆಯಲ್ಲಿಯೇ ಅರ್ಪಿಸ ಬೇಕೆಂತಲೂ, ಅಲ್ಲಿಯೇ ಒಟ್ಟಾಗಿ ಕೂಡಿ ಬರುವ ಜನಾಂಗದೊಂದಿಗೆ ಯೆಹೋವನ ಮುಂದೆ ಬಲಿಯೌತಣಗಳನ್ನು ಆಚರಿಸುತ್ತಾ, ಉತ್ಸವ ಮಾಡ ಬೇಕೆಂತಲೂ, ನೇಮಕವಾಗಲವಶ್ಯವಾಗಿತ್ತು. ಆದರೆ ಕರ್ತನು ಆ ವೇಳೆಯಲ್ಲಿ, ಅರಣ್ಯಸಂಚಾರಕ್ಕೆ ಯುಕ್ತವಾದಂಥ, ಲೇವಿ. ೧೭ನೆ ಸಂಧಿಯಲ್ಲಿ ಬರದಿರುವಂಥ, ಆಹಾರಕ್ಕೆ ಬೇಕಾದ ಪಶುಗಳನ್ನೆಲ್ಲಾ ಸಾಕ್ಷೀ ಗುಡಾರದ ಬಳಿಗೆ ತಂದು, ಅದರ ಮುಂದೆಯೇ ಕಡಿಯ ಬೇಕೆಂಬ ಕಟ್ಟಳೆಯನ್ನು ನಿಲ್ಲಿಸಿದನು. ತಮ್ಮ ತಮ್ಮ ಊರುಗಳಲ್ಲಿ ಕಡಿದ ಪಶುಗಳ ರಕ್ತವನ್ನು ಇಸ್ರಯೇಲನವರು ಸವಿಯದೆ, ಭೂಮಿಯಲ್ಲಿ ಚೆಲ್ಲಿ ಬಿಡ ಬೇಕೆಂಬ ಕಟ್ಟಳೆ ಮಾತ್ರವೇ ಕೊಟ್ಟಿತ್ತು.

ನೆರೆಹೊರೆಯವರನ್ನು ಕೆಡಿಸಿ, ವಿಗ್ರಹಪೂಜೆ ಮಾಡಿಸಲೆಸಗುವವರಿಗೆ ನೇಮಕವಾದ ಶಿಕ್ಷೆ. ಸ. ೧೩.

ವ. ೧. ಪ್ರವಾದಿಯಾಗಲಿ ಕನಸು ಕಾಂಬವನಾಗಲಿ ನಿನ್ನ ನಡುವೆಯಲ್ಲಿ ಎದ್ದು, ನಿನಗೆ ಗುರುತನ್ನಾದರೂ, ಲಕ್ಷಣವನ್ನಾದರೂ ಕೊಡಲಾಗಿ, ೨. ನೀನು ತಿಳಿಯದ ಬೇರೆ ದೇವರುಗಳನ್ನು ಹಿಂಬಳಿಸಿ, ಅವರನ್ನು ಓಲೈಸೋಣವೆಂತ, ಅವನು ನಿನಗೆ ನುಡಿದ ಗುರುತೂ ಲಕ್ಷಣವೂ ಬಂದರೆ, ೩. ಆ ಪ್ರವಾದಿಯ ಇಲ್ಲವೆ ಆ ಕನಸು ಕಾಂಬವನ ನುಡಿಗಳನ್ನು ಕೇಳ ಬಾರದು; ಯಾಕೆಂದರೆ ನಿಮ್ಮ ದೇವನಾದ ಯೆಹೋವನು, ನೀವು ನಿಮ್ಮ ಹೃದಯವೆಲ್ಲಾದರಿಂದಲೂ, ನಿಮ್ಮ ಪ್ರಾಣವೆಲ್ಲಾದರಿಂದಲೂ, ನಿಮ್ಮ ದೇವನಾದ ಯೆಹೋವನನ್ನು ಪ್ರೀತಿ ಮಾಡುತ್ತೀರೇನೋ ಎಂದು, ತಿಳಿಯುವ ಬಗ್ಯೆ ನಿಮ್ಮನ್ನು ಪರೀಕ್ಷಿಸುತ್ತಾನೆ[1].

ದ್ವಿತೀ. ೧೪.

೧. ದೇವನು ಯೋಬನನ್ನು ಸಹ ಈ ರೀತಿಯಾಗಿ ಶೋಧಿಸುವದಕ್ಕಾಗಿ ಸೈತಾನನಿಗೆ ಅವನ ಮೇಲೆ ಕೈಹಾಕ ಬಹುದೆಂದು, ಅಪ್ಪಣೆ ಕೊಟ್ಟನು. ಹಾಗಾದರೆ ಅಮಾನುಷವಾದದ್ದು ಆಗ್ಯಾಗ್ಯೆ ಸೈತಾನನ ಯತ್ನದಿಂದ ಹುಟ್ಟುವದುಂಟೆಂಬದು ಗೊತ್ತಾಗಿರುವದರಿಂದ, ಒಂದು ಬೋಧನೆಯಾಗಲಿ ಅಪ್ಪಣೆಯಾಗಲಿ ದೇವಮೂಲಕವಾದದ್ದೆಂಬದಕ್ಕೆ ಗುರ್ತುಗಳು ಲಕ್ಷಣಗಳು ಇವುಗಳ ದೃಷ್ಟಾಂತ ಮಾತ್ರವೆ ಸಾಲದೆಂತಲೂ, ಪಾಪಿಯಾದ ಮನುಷ್ಯನ ಮಂದವಾದ ಬುದ್ಧಿಗೆ ಅಗ್ರಾಹ್ಯವಾದ ಅಭಿಪ್ರಾಯವು ಸತ್ಯವಾಗಿಯೂ ನ್ಯಾಯವಾಗಿಯೂ ಅದೆ ಎಂಬ ಎರಡನೆ ಪ್ರಮಾಣ ಸಹ ದೊರಕ ಬೇಕೆಂತಲೂ, ಹಳೆ ಒಡಂಬಡಿಕೆಯ ಬರಹದಿಂದ ಮುನ್ನು ತಿಳಿಯಲಾಯಿತೆಂದು ಕಾಣುತ್ತದೆ.

ಪಾಪಮನುಷ್ಯನೆಂಬವನು, ೨ ಥೆಸ್ಸ. ೨, ೩. ೯. ೧೦ ಪ್ರಕಾರ, ಮಾಡಲಿಕ್ಕಿರುವಂತೆ ಸೈತಾನನ ಶಕ್ತಿಯಿಂದ ವಂಚನಮಯವಾದ ಅದ್ಭುತವನ್ನು ನಡಿಸಿದಂಥ ಅಬದ್ಧ ಪ್ರವಾದಿಯನ್ನು ಕಲ್ಲೆಸದು ಕೊಲ್ಲ ಬೇಕು. ಸಹೋದರನಾಗಲಿ, ಮಗನಾಗಲಿ, ಹೆಂಡತಿಯಾಗಲಿ, ಮಗಳಾಗಲಿ, ದೇವದ್ರೋಹ ಮಾಡುವ ದುರಾಲೋಚನೆಯನ್ನು ಹುಟ್ಟಿಸುವರಾದರೆ, ಅವರನ್ನು ಕನಿಕರಿಸದೆ ಅದೇ ರೀತಿಯಿಂದ ಶಿಕ್ಷಿಸ ಬೇಕು.

ಶ್ರಾದ್ಧಾದಿಗಳ ನಿಷೇಧ. ಆಹಾರನೇಮಗಳು. ಎರಡನೆ ದಶಮಾಂಶವು ವೆಚ್ಚವಾಗ ತಕ್ಕ ಪ್ರೀತಿಯ ಔತಣಗಳು. ಸ. ೧೪.

ಪರಜನರ ಪದ್ಧತಿಯ ಪ್ರಕಾರ ಸತ್ತವರ ಸಾವು ಮಾಡಿ, ಮೈದೊಗಲು ಕೊಯ್ಯುವದೂ ಮುಂದಲೆಯನ್ನು ಬೋಳಿಸಿ ಕೊಳ್ಳುವದೂ ಇಸ್ರಾಯೇಲನವರಿಗೆ ಆಗದ ಕರ್ಮವು. ಅವರು ದೇವನಾದ ಯೆಹೋವನ ಮಕ್ಕಳಾಗಿರುವದರಿಂದ, ಪರಜನರಲ್ಲಿ ವಾಡಿಕೆಯಾದ ಆಚರಣೆಗಳನ್ನು ನಡಿಸಿ, ಅವರನ್ನು ಹೋಲುವದು ಅತ್ಯನುಚಿತವಾಗಿದೆ. ವ. ೧. ೨.

ಆಹಾರನೇಮಗಳು. (ಲೇವಿ. ಸ. ೧೧.) ವ. ೩ – ೨೧.

ಎರಡನೆ ದಶಮಾಂಶವು. ವ. ೨೨ – ೨೯.

ಅಂಕೆ. ೧೮, ೨೦ ಮುಂ. ಭೂಮಿಯ ಬಾಧ್ಯತೆಯಿಲ್ಲದ ಯಾಜಕರಿಗೂ ಲೇವಿಯ ಕುಲದವರಿಗೂ ದೇಶದ ಹುಟ್ಟುವಳಿಯ ದಶಮಾಂಶವು ಅವರ ಬಾಳು ಎಂಬದಾಗಿ ನೇಮಕವಾಯಿತು. ಯಾಜಕರಾಗಿರದ ಲೇವಿಯವರು ತಮ್ಮ ಪಾಲಾದ ದಶಮಾಂಶವು ತಮ್ಮ ಬಾಧ್ಯತೆಯ ಬೆಳೆಯೆಂದೆಣಿಸಿ ಕೊಂಡು, ಅದರ ದಶಮಾಂಶವನ್ನು ಕರ್ತನಿಗೆ ಕಾಣಿಕೆಯಾಗಿ ಅರ್ಪಿಸಿ, ತಮ್ಮನ್ನು ಪರಿಶುದ್ಧ ಮಾಡಿ ಕೊಳ್ಳುವದು. ಲೇವಿಯವರು ಕೊಡುತ್ತಾ ಬರುವ ಈ ದಶಮಾಂಶವು ನಿಜ ಯಾಜಕರಿಗೆ ಪರಿಶುದ್ಧಾಲಯ ಸೇವೆಯ ಸಂಬಳವಾಗಿ ಸಿಕ್ಕುತ್ತಿತ್ತು. ಮೇಲಣ ಸ್ಥಳದಲ್ಲಿ ಬರೆದಿರುವ ದಶಮಾಂಶವೂ ಈ ಸಂಧಿಯಲ್ಲಿ ಕಾಣುವ ದಶಮಾಂಶವೂ ಬೇರೆ ಬೇರೆಯಾಗಿವೆ. ಇಲ್ಲಿ ಬರೆದದ್ದು ಎರಡನೆ ದಶಮಾಂಶ. ಹೀಗಿರಲಾಗಿ ಇಸ್ರಾಯೇಲನವರು ಯೋಸೇಫನು ಮಿಚ್ರದವರಿಗೆ (ಉತ್ಪ. ೪೭, ೨೬.) ಮಾಡಿದ ಕಟ್ಟಳೆಯಂತೆ ಪಂಚಮಾಂಶ ತೆತ್ತರೆಂದು, ತೋರುತ್ತದೆ. ಈ ಎರಡನೆ ದಶಮಾಂಶವು ಎರಡು ವರ್ಷಗಳಲ್ಲಿ ಲೇವಿಯವರೂ ಅರ್ಪಣೆ ಮಾಡುವ ಭಕ್ತರೂ ಪರಿಶುದ್ಧಾಲಯದ ಬಳಿಯಲ್ಲಿ ಕೂಡಿ ಕೊಂಡು ಆಚರಿಸುವ ಪ್ರೀತಿಯೌತಣದಿಂದ ವೆಚ್ಚವಾಗುತ್ತಿತ್ತು. ಮೂರನೆ ವರ್ಷದಲ್ಲಿ ಅದು ಅವರವರ ಊರುಗಳಲ್ಲಿ ಹಾಗೆಯೇ ಖರ್ಚಾಗುತ್ತಿತ್ತು. ಆದರೆ ಈ ನಾಡಿನ ಔತಣಗಳಿಗೆ ಲೇವಿಯರಲ್ಲದೆ ಪರದೇಶಸ್ಥರೂ ತಂದೆತಾಯಿ ಇಲ್ಲದ ಮಕ್ಕಳೂ ವಿಧವೆಗಳೂ ಬಂದು ಎಲ್ಲಾನ್ನು ಅನುಭವಿಸಿ, ಮನೆಯವರೊಡನೆ ಕರ್ತನ ಮುಂದೆ ಸಂತೋಷ ಪಟ್ಟು, ಕೃತಜ್ಞರಾಗಿ ಸ್ತೋತ್ರ ಮಾಡುತ್ತಾ ಬರುವರು. ಏಳನೆ ವರ್ಷವು ಬಿಡುಗಡೆಯ ವರ್ಷವಾಗಿತ್ತು. ಹೀಗಿರಲಾಗಿ

ಬಿಡುಗಡೆಯ ವರ್ಷವುಳಿದ ಮೂರನೆ ಆರನೆ ವರ್ಷಗಳಲ್ಲಿ ಈ ದಶಮಾಂಶವು ವಿಶೇಷವಾಗಿ ಬಡವರಿಗೂ ದಿಕ್ಕಿಲ್ಲದವರಿಗೂ ಪಾಲಾಗುತ್ತಿತ್ತು. ಚೊಚ್ಚಲ ದನಕುರಿಗಳ ಅರ್ಪಣೆಯೂ (ವ. ೨೩.) ದಶಮಾಂಶದಂತೆ ಇಮ್ಮಡಿಯಾದದ್ದಾಗಿತ್ತು. ಯಾಕೆಂದರೆ ಚೊಚ್ಚಲವಾದ ಗಂಡುಗಳೆಲ್ಲಾ ಹ್ಯಾಗೂ ಕರ್ತನಿಗೆ ಪರಿಶುದ್ಧವಾಗಿದ್ದವು. ಸ. ೧೫, ೧೯. ಈ ಸಂಧಿಯ ಪ್ರಕಾರ ಅರ್ಪಣೆಯಾಗ ಬೇಕಾದದ್ದು ಎರಡನೆ ಗಂಡು ಮರಿಯೋ ಚೊಚ್ಚಲ ಹೆಣ್ಣು ಮರಿಯೋ ಎಂದು ನಿಶ್ಚಯವಾಗಿರುವದಿಲ್ಲ. — ಇಸ್ರಯೇಲನ ಜನಾಂಗದವರೆಲ್ಲರ ಸಲಿಗೆಯ ವೃದ್ಧಿಯಲ್ಲದೆ, ಸಹೋದರಪ್ರೀತಿ ಬಡವರ ಪರಾಮರಿಕೆಗಳು ಈ ಕಟ್ಟಳೆಯ ಉದ್ದಿಶ್ಯವಾಗಿದ್ದವು.

ಸಂಧಿ ೧೫.

ಅಧಿಕನೇಮಗಳು: ೧) ಬಿಡುಗಡೆಯ ವರ್ಷದ ವಿಷಯವಾಗಿ ಲೇವಿ. ೨೫, ೧ ಸರಿ ನೋಡಬೇಕು. ಇಲ್ಲಿ ಬಿಡುಗಡೆಯ ವರ್ಷದಲ್ಲಿ ಸಾಲ ಕೇಳ ಬಾರದೆಂಬ ಹೆಚ್ಚಾದ ಕಟ್ಟಳೆ ಬರೆದದೆ. ಸಾಲಗಳನ್ನು ಬಿಟ್ಟು ಬಿಡ ಬೇಕೆಂಬ ಕಟ್ಟಳೆಯಲ್ಲ, ಕೇಳ ಬಾರದೆಂಬದೇ ನೇಮಕವಾಗಿದೆ. ವ. ೧—೧೧. ೨) ಊಳಿಗದ ಆರು ವರ್ಷ ಕಳದ ಬಳಿಕ, ಸಾಯುವನಕ ಆಳುಗಳಾಗಿರಲೊಲ್ಲದ ಮನೆಯಾಳುಗಳು ಏಳನೆ ವರ್ಷದಲ್ಲಿ ಬಿಡುಗಡೆಯಾಗ ಬೇಕೆಂಬ ಕಟ್ಟಳೆ. ವ. ೧೨—೧೮. ೩) ಚೊಚ್ಚಲವಾದ ಪಶುಮರಿಗಳು ದೇವನಿಗೆ ಪರಿಶುದ್ಧವಾಗೆವೆಂಬದು. ವ. ೧೯—೨೩.

ವರ್ಷಂಪ್ರತಿಯಲ್ಲಿ ಆಗುವ ಮುಖ್ಯವಾದ ಹಬ್ಬಗಳು. ಸ. ೧೬. ೧೭.

ಸ. ೧೬, ೧೮. ನ್ಯಾಯವಿಚಾರಣೆಯ ವೃತ್ತಿ. ನ್ಯಾಯಾಧಿಪತಿಗಳು, ಅಧಿಕಾರಿಗಳು (ಇಬ್ರಿಯದಲ್ಲಿ ಬರವಿಕೆಗಾರರೆಂಬ ಅರ್ಥವುಳ್ಳ ಶಬ್ದವು ಇದಕ್ಕೆ ಪ್ರಯೋಗವಾಗಿದೆ) ಇವರ ನೀತಿಪಾಠ. — ವ. ೧೯. "ನ್ಯಾಯವನ್ನು ತಿರುಗಿಸಲೂ ಮುಖದಾಕ್ಷಿಣ್ಯ ನೋಡಲೂ ಬಾರದು. ಲಂಚವನ್ನೂ ತಕ್ಕೊಳ್ಳ ಬಾರದು; ಯಾಕಂದರೆ ಲಂಚವು ಬುದ್ಧಿವಂತರ ಕಣ್ಣು ಕಟ್ಟುವದು, ಮತ್ತು ನೀತಿವಂತರ ನುಡಿಗಳನ್ನು ಮರಳಿಸುವದು." — — ವ. ೨೧. ೨೨. ತೋಪುಗಳೂ ಲಿಂಗಗಳೂ ಉಂಟಾಗ ಬಾರದು. — ಸ. ೧೭, ೧—೭. ಯಜ್ಞಪಶುಗಳು ದೋಷವಿಲ್ಲದೆ ಇರ ಬೇಕು. ಪರದೈವಪೂಜೆ ಮಾಡಿದವರ ಶಿಕ್ಷೆ.

ವ. ೮—೧೩. ನ್ಯಾಯವಿಚಾರಣೆಯ ವಿಷಯವಾದ ಹೊಸತಾದ ಕಟ್ಟು. ತಿರ್ಪು ಮಾಡಲಧಿಕ ಕಠಿಣವಾದ ಕಾರ್ಯಗಳ ನಿರ್ಣಯವು ಮುಖ್ಯ ನ್ಯಾಯಾಧಿಪತಿಗಳಾದ ಯಾಜಕರಿಂದುಂಟಾಗ ಬೇಕು.

ವ. ೧೪—೨೦. ಮುಂದಿನ ಕಾಲದ ಅರಸನ ವಿಷಯವಾದ ಅಪ್ಪಣೆಗಳು.

ಪರಜಾತಿಯವನಲ್ಲ, "ನಿನ್ನ ಸಹೋದರರವನೊಬ್ಬನು" ಅರಸಾಗ ಬೇಕು. ವ. ೧೫. "ನಿನ್ನ ದೇವನಾದ ಯೆಹೋವನು ಯಾವನನ್ನು ಆದುಕೊಳ್ಳುವನೋ, ಅವನನ್ನು ನಿನ್ನ ಮೇಲೆ ಇಟ್ಟೇ ಇಟ್ಟುಕೊಳ್ಳ ಬೇಕು." (ಯೆಹೋವನು ತನ್ನ ಪ್ರವಾದಿಗಳ ಮುಖಾಂತರದಿಂದಾಗಲಿ, ಪ್ರಧಾನ ಯಾಜಕನ ಮುಖಾಂತರದಿಂದಾಗಲಿ ಇಸ್ರಯೇಲನವರ ಅರಸುಗಳನ್ನು ಆದು ಕೊಳ್ಳುತ್ತಾ ಬಂದನು.)

ಯಾಜಕರು ಲೇವಿಯವರು, ಇವರ ನ್ಯಾಯದ ವಿಷಯವಾದ ಅಪ್ಪಣೆ. ಸ. ೧೮, ೧—೮.

ಕನಾನದವರಲ್ಲಿ ನಡವಡಿಕೆಯಾದ ದೇವದ್ರೋಹವಾದ ದುರಾಚಾರಗಳು. ಸ. ೧೮, ೯—೧೪.

ವ. ೯. ನಿನ್ನ ದೇವನಾದ ಯೆಹೋವನು ನಿನಗೆ ಕೊಡುವ ದೇಶಕ್ಕೆ ನೀನು ಬಂದಾಗ, ಆ ಜನಗಳ ಹೇಸಿಗೆಗಳನ್ನು ಮಾಡ ಕಲಿತು ಕೊಳ್ಳ ಬಾರದು. ೧೦. ತನ್ನ

ದ್ವಿತೀ. ೧೮, ೧೫ – ೧೯.

ಮಗನನ್ನಾದರೂ ಮಗಳನ್ನಾದರೂ ಬೆಂಕಿ ದಾಟಿಸುವವನೂ[೧], ಕಣಿ ಹೇಳುವವನೂ[೨], ಕ್ರೂರ ದೃಷ್ಟಿಯವನೂ[೩], ಹಾವಾಡಿಗನೂ, ಶಕುನಗಾರನೂ, ೧೧. ಗಾರುಡಿಗಾರನೂ, ಯಕ್ಷಿಣಿಗಾರನೂ, ಜಾಣನೂ[೪], ಸತ್ತವರನ್ನು ಪ್ರಶ್ನೆ ಕೇಳುವವನೂ ನಿನ್ನಲ್ಲಿ ದೊರಕ ಬಾರದು[೫]. ೧೨. ಯಾಕಂದರೆ ಇಂಥವುಗಳನ್ನು ಮಾಡುವವರೆಲ್ಲಾ ಯೆಹೋವನಿಗೆ ಹೇಸಿಗೆಯಾಗಿದ್ದಾರೆ.— —೧೪.— —ಆದರೆ ನೀನು—ನಿನ್ನ ದೇವನಾದ ಯೆಹೋವನು ನಿನಗೆ ಹೀಗೆ (ಅಪ್ಪಣೆ) ಕೊಡಲಿಲ್ಲ.

೧. ಲೇವಿ. ೧೮, ೨೧ ಸರಿ ನೋಡ ಬೇಕು. ಮೋಲೆಕನೆಂಬ ದೇವ್ವಕ್ಕೆ ಈ ತರದ ಬಲಿಯರ್ಪಣೆ ಆಗುತ್ತಿತ್ತು.

೨. ಇದು ಪರಜನಗಳಲ್ಲಿ ವಾಡಿಕೆಯಾದ ಅಬದ್ಧ ಪ್ರವಾದನವಿಧವು.

೩. ಕೆಟ್ಟ ಕಣ್ಣಿನ ದೃಷ್ಟಿಯಿಂದ ಪರರಿಗೆ ಕೇಡು ಮಾಡುವವನು.

೪. ಇದ್ದೆಯೊನೀ ಎಂಬ ಇಬ್ರಿಯ ಪದಕ್ಕೆ ಒಂದು ವೇಳೆ ಅಪೊ. ಕ್ರಿ. ೧೬, ೧೬ರಲ್ಲಿ ಬರದ ಪ್ನೈಮ ಪುಥೋನೊಸ್ ಎಂಬ ಶಬ್ದದ ಅಭಿಪ್ರಾಯವು ಹೆಚ್ಚುಕಡಿಮೆಯಾಗಿ ಒಪ್ಪುತ್ತದೆ.

೫ ಇಲ್ಲಿ ಹೇಳಿರುವ ಅಂಧಕಾರದ ಕೆಲಸಗಳೆಲ್ಲಾ ಇಂದಿನ ವರೆಗೂ, ಅಕ್ರೈಸ್ತರಾದ ಜನಗಳಲ್ಲಿ ಬಹಿರಂಗವಾಗಿಯೂ, ಅವಿಶ್ವಾಸಿಗಳಾದ ಕ್ರೈಸ್ತರಲ್ಲಿ ಅಂತರಂಗವಾಗಿಯೂ, ನಡವಡಿಕೆಯಾಗಿವೆ.

ಇಸ್ರಯೇಲನ ಜನಾಂಗದ ಉತ್ತಮ ಪದವಿಯಾಗಿರುವ
ಸಿದ್ಧಿಸಂಪೂರ್ಣ ಸತ್ಯಪ್ರವಾದಿಯಾದ ಮೆಷಿಯಃಹನ ವಿಷಯವಾದ
ದೇವೋಕ್ತಿಯು. ಸ. ೧೮, ೧೫ – ೨೨.

ವ. ೧೫. ನನ್ನ ಹಾಗಿರುವ[೧] ಪ್ರವಾದಿಯನ್ನು[೨] ನಿನ್ನ ನಡುವೆಯಿಂದ, ನಿನ್ನ ಸಹೋದರರಲ್ಲಿಂದ[೩], ನಿನ್ನ ದೇವನಾದ ಯೆಹೋವನು ನಿನಗೆ ಎಬ್ಬಿಸುವನು. ಅವನಿಗೆ ಕಿವಿ ಕೊಡ ಬೇಕು[೪]. ೧೬. ನಿನ್ನ ದೇವನಾದ ಯೆಹೋವನ ಬಳಿಯಿಂದ ಹೋರೆಬಿನ ಮೇಲೆ ಕೂಟದ ದಿನದಲ್ಲಿ, "ನನ್ನ ದೇವನಾದ ಯೆಹೋವನ ಶಬ್ದವನ್ನು ಕೇಳುತ್ತಾ ಇರಲಾರೆನು. ಈ ದೊಡ್ಡ ಬೆಂಕಿಯನ್ನು ಇನ್ನೂ ನೋಡಲಾರೆನು. ಸಾಯಲಾರೆನು" ಎಂದು, ನೀನು ಕೇಳಿದ ಪ್ರಕಾರ ಎಲ್ಲಾ ಆಯಿತಲ್ಲಾ? ೧೭. ಆಗ ಯೆಹೋವನು ನನಗೆ ಹೇಳಿದ್ದು: ಅವರು ಹೇಳಿದ್ದು ಲೇಸಾಯಿತು. ೧೮. ನಿನ್ನ ಹಾಗಿರುವ ಪ್ರವಾದಿಯನ್ನು ಅವರ ಸಹೋದರರ ನಡವೆಯಲ್ಲಿಂದ ಅವರಿಗೆ ಎಬ್ಬಿಸುವೆನು. ನನ್ನ ನುಡಿಗಳನ್ನು ಅವನ ಬಾಯಲ್ಲಿ ಕೊಡುವೆನು. ನಾನು ಅವನಿಗೆ ಬೆಸಸುವದನ್ನೆಲ್ಲಾ ಅವರಿಗೆ ನುಡಿಯುವನು. ೧೯. ಅವನು ನನ್ನ ಹೆಸರಿನಲ್ಲಿ ನುಡಿಯುವ ನನ್ನ ನುಡಿಗಳನ್ನು ಕೇಳದವನ್ಯಾವನೋ, ಅವನ ಬಳಿಯಿಂದ ದಂಡ ತಕ್ಕೊಳ್ಳುವೆನು. — —

೩೭_೨ ಸತ್ಯಪ್ರವಾದಿಯಾದ ಮೆಷಿಯಃಹನ ವಿಷಯವಾದ ದೇವೋಕ್ತಿಯು.

ದ್ವಿತೀ. ೧೮, ೧೫—೨೨; ೧೯.

೧. ನನ್ನ ಹಾಗಿರುವ ಎಂಬದಕ್ಕೆ ಒಂದು ಪರಿಯಾಗಿ ಸಮಾನವಾದಂಥ, ಮತ್ತೊಂದು ಪರಿಯಾಗಿ ವಿಶೇಷವಾದಂಥ ಲಕ್ಷಣವುಳ್ಳ ಎಂಬ ಅರ್ಥವದೆ. ಹ್ಯಾಗಂದರೆ ಮೋಶೆ ಗೆಳೆಯನೊಡನೆ ಗೆಳೆಯನಿಗಿರುವ ಸಲಿಗೆಯಿಂಗ ದೇವಾನ್ಯೋನ್ಯದ ಪದವಿಯನ್ನು ಪಡೆದು ಕೊಂಡಿದ್ದ ಪರಿಯಾಗಿ ಮೆಷಿಯಃಹನಿಗೆ ಸರಿಯಾಗಿದ್ದನು. ಆದರೆ ಇವನು ದೇವರಾಜ್ಯರಕ್ಷಣೆಯ ಗೃಹಕೃತ್ಯಗಳ ವರ್ಧನದ ಪ್ರಕಾರವಾಗಿ ಅಧಿಕಾಧಿಕವಾದ ಪ್ರಕಟಣೆಗಳನ್ನು ದಯ ಮಾಡಲೂ, ಮೋಶೆಯೂ ಅವನಿಗೆ ಇತ್ತಣ ಪ್ರವಾದಿಗಳೂ ವಾಕ್ಯ ಕೃತ್ಯಗಳಿಂದಲೆಸಗಿ ಅಣಿ ಮಾಡಿದ್ದನ್ನು ತೀರಿಸಿ ನೆರವೇರಿಸಲೂ ಬಲ್ಲವನಾಗಿದ್ದು, ಮೋಶೆಗಿಂತ ಶ್ರೇಷ್ಠ ಅದ್ಭುತಕಾರಿಯೂ ರಕ್ಷಕನಾಗಿಯೂ ಮಧ್ಯವರ್ತಿಯಾಗಿಯೂ ಒಡಂಬಡಿಕೆಯ ಕರ್ತನಾಗಿಯೂ ಇದ್ದನು.

೨. ಯೆಹೂದನವರಾದ ಪಂಡಿತರಲ್ಲಿ ಕೆಲವರು ಪ್ರವಾದಿಯೆಂಬದು ಇಲ್ಲಿ ಸಾಮಾನ್ಯಾರ್ಥವುಳ್ಳ ಪದವಾಗಿದ್ದು, ಕನಾನದವರಾದ ಕಣಿಗಾರರು ದೀರ್ಘದರ್ಶಿಗಳು ಇವರಿಗೆ ಶಾನೆ ಬೇರೆಯಾದ ಸತ್ಯಪ್ರವಾದಿಗಳೆಲ್ಲರನ್ನು ಸೂಚಿಸುತ್ತದೆಂದು, ವಿವರಿಸುವ ಅಭಿಪ್ರಾಯಕ್ಕೆ ಏಕವಚನ ಪ್ರಯೋಗವೂ, "ನನ್ನ ಹಾಗೆ" ಎಂತಲೂ, "ನಿನ್ನ ಹಾಗೆ" ಎಂತಲೂ ಬರೆದಿರುವ ಲಕ್ಷಣವೂ ಒಪ್ಪುವದಿಲ್ಲ. ಮೋಶೆಯಂತೆ ಇರುವ ಪ್ರವಾದಿಯು ಯಾರೆಂದರೆ: ಮೆಷಿಯಃಹನೆಂಬ ಪ್ರವಾದನಸಿದ್ಧಿಪೂರ್ಣನಾದ ಕ್ರಿಸ್ತನೊಬ್ಬನೇ. ಪೂರ್ವಕಾಲದ ಯೆಹೂದನವರಾದ ವ್ಯಾಖ್ಯಾನಿಗಳು ಈ ಸಂಧಿಯಲ್ಲಿ ಮುಂಪೇಳಲ್ಪಟ್ಟಿರುವವನು ಮೆಷಿಯಃಹನೆಂದು, ಟೀಕಿಸಿದ್ದಲ್ಲದೆ, ಈ ಪ್ರವಾದನೆಯನ್ನು ಉದಾಹರಿಸುವ ಹೊಸ ಒಡಂಬಡಿಕೆಯ ಗ್ರಂಥಕರ್ತರೂ ಮೋಶೆ ಇಲ್ಲಿ ಪ್ರವಾದಿಸಿದವನು ಕ್ರಿಸ್ತನೇ ಎಂದು, ತಿಳುಕೊಂಡದ್ದಕ್ಕೆ ಸಂಶಯವಿಲ್ಲ; ಯೋಹಾ. ೧, ೪೫; ೬, ೧೪; ೪, ೨೫ (ಮೋಶೆಯ ಐದು ಗ್ರಂಥಗಳೇ ದೇವಾತ್ಮೋತ್ಪನ್ನವಾದವುಗಳೆಂತ, ನಂಬಿದ ಸಮಾರ್ಯದವರು ಸಹ ಮೆಷಿಯಃಹನ ತಿಳಿಯುವಿಕೆಯುಳ್ಳವರಾಗಿದ್ದರೆಂಬದು ಈ ಚರಿತ್ರದಲ್ಲಿ ಪ್ರಕಟವಾಗಿದೆ; ಆದರೆ ಈ ತಿಳಿಯುವಿಕೆಗೆ ಮೋಶೆಯ ಐದು ಗ್ರಂಥಗಳಲ್ಲಿ ಈ ಸ್ಥಳದ ಹೊರತಾಗಿ ಬೇರೆ ಯಾವ ಮೂಲವೂ ತೋರುವದಿಲ್ಲ.) ಲೂಕ. ೨೪, ೪೪; ಅಪೋ. ಕ್ರಿ. ೩, ೨೨, ೨೩; ೭, ೩೭. ಮತ್ತಾ. ೧೭, ೫ರಲ್ಲಿ ಬರೆದದ್ದನ್ನು ತೂಗಿಸ ಬೇಕು. ಆದರೆ ಮುಂದಣ ಕಾಲದಲ್ಲಿ ಬರಲಿರುವಂಥ ಪರಮೋತ್ತಮ ಪ್ರವಾದಿಯು ಮೋಶೆಯ ದೀರ್ಘದರ್ಶನದಲ್ಲಿ ಪ್ರಮುಖನಾಗಿದ್ದರೂ, ನಡುವೇಳೆಯಲ್ಲಿ ಮೆಷಿಯಃಹನ ಮುಂಚೆ ಬಂದು, ಅವನು ಬರುತ್ತಾನೆಂಬದಕ್ಕೆ ಸಾಕ್ಷೀ ಕೊಡುತ್ತಾ ಇದ್ದ ಸತ್ಯಪ್ರವಾದಿಗಳನ್ನು ಅವನು ಗಣನೆ ಮಾಡದೆ ಇದ್ದನೆಂತ, ಎಣಿಸಿ ಕೊಳ್ಳ ಕೆಲಸವಿಲ್ಲ. ಆದರೆ ದೀರ್ಘದರ್ಶಿಗೂ ಅವನ ದರ್ಶನದ ಅಂತ್ಯಕ್ಕೂ ನಡುವೆಯಣದ್ದೆಲ್ಲಾ ಕೊಂಚ ತುಸವಾದದ್ದಾಗಿ ಕಾಣಿಸಿ ಕೊಂಡು, ದೂರದಿಂದ ತೋರಿದ್ದು ಅವನ ಆತ್ಮದೃಷ್ಟಿಯ ವಿಶೇಷವಾದ ಗುರಿಯಾಗಿತ್ತು.

೩. ಅಬ್ರಹಾಮನ ಬೀಜದಿಂದ ಹುಟ್ಟಿದವರೆಲ್ಲರೂ ಇಲ್ಲಿ ನಿನ್ನ ಸಹೋದರರೆಂದನ್ನಿಸಿ ಕೊಳ್ಳುತ್ತಾರೆ.

೪. ಇವನಿಗೆ ಅವಿಧೇಯರಾದವರು ಮೋಶೆಯ ಬಾಯಿಂದ ಕರ್ತನು ಕೊಟ್ಟ ಅಪ್ಪಣೆಗಳನ್ನು ಮೀರಿದವರಿಗಿಂತ ಹೆಚ್ಚಾದ ಶಿಕ್ಷೆಗೆ ಪಾತ್ರರಾಗಿದ್ದಾರೆಂಬ ಮಾತಿನಿಂದ ಕ್ರಿಸ್ತನು ಮೋಶೆಗಿಂತ ಅತಿಗಣ್ಯನೆಂಬದು ಪ್ರಾಮಾಣ್ಯವಾಗಿದೆ.

ವ. ೨೦ – ೨೨. ವಂಚಕರಾದ ಪ್ರವಾದಿಗಳನ್ನು ಹೆದರಿಸುವಂಥ, ಅವರ ಮೋಸಕ್ಕೆ ಜನರನ್ನು ತಪ್ಪಿಸುವಂಥ ಮಾತುಗಳು.

ಸಂಧಿ ೧೯.

ಅಚ್ಚ ಕನಾನ ದೇಶದಲ್ಲಿ ನೇಮಕವಾದ ಬೇರೆ ಆಶ್ರಯಸ್ಥಳಗಳು. ವ. ೧—೧೫. ಗಡಿ ಎತ್ತಿಡ ಬಾರದೆಂಬ ನಿಷೇಧ. ವ. ೧೪. ಸಾಕ್ಷಿಗಳ ವಿಷಯವಾದ ಅಪ್ಪಣೆ. ಸುಳ್ಳು ಸಾಕ್ಷಿಗಳು ಪರರ

ಮೇಲೆ ಯಾವ ಶಿಕ್ಷೆಯನ್ನು ಹೊರಿಸಲೆಸಗಿದರೋ ಅದೇ ಶಿಕ್ಷೆಯನ್ನು ತಾವೇ ತಾಳ ಬೇಕೆಂಬ ಕಟ್ಟಳೆ. ವ ೧೫ — ೨೧.

ಸಂಧಿ ೨೦.

ಕಾದಾಟದ ಕಟ್ಟಳೆಗಳು. ದೇವಜನಾಂಗವು ಯೆಹೋವನ ಹೆಸರಿನಲ್ಲಿಯೇ ಯುದ್ಧಕ್ಕೆ ಹೋಗಿ, ಯುದ್ಧದಲ್ಲಿಯಾದರೂ ಸಾಧು ಗುಣದ ನಡತೆಯನ್ನು ಬಿಟ್ಟು ಬಿಡ ಬಾರದು. ವ. ೧ — ೨೦.

ಸಂಧಿ ೨೧.

ಕೊಲೆಗಾರನು ಕಾಣದ ಕೊಲೆಯುಂಟಾದ ಸ್ಥಳಕ್ಕೆ ಸಮೀಪವಾದ ಊರುಗಳವರು ರಕ್ತಾಪರಾಧ ನಿವಾರಣಾರ್ಥಕ್ಕಾಗಿ ಪ್ರಾಯಶ್ಚಿತ್ತಬಲಿಯನ್ನು ಅರ್ಪಿಸಿ, ಹಿರಿಯರೆಲ್ಲರು ತಮ್ಮ ಕೈಗಳನ್ನು ತೊಳ ಕೊಂಡು, ನಮ್ಮ ಕೈಗಳು ಈ ರಕ್ತವನ್ನು ಚೆಲ್ಲಲಿಲ್ಲವೆಂದು, ಹೇಳಿ, ದೇವರಿಗೆ ಬಿನ್ನೈಸಿ, ತಮಗೆ ರಕ್ತಾಪರಾಧ ನಿವಾರಣೆ ಮಾಡ ಬೇಕೆಂದು, ಬೇಡುವದು. ವ. ೧ — ೯. ಕಾದಿ ಕೈಶೆರೆ ಹಿಡುಕೊಂಡು ಬಂದ ಹೆಂಗಸನ್ನು, ಮನಸ್ಸಿದ್ದರೆ, ಮದಿವೆ ಮಾಡಿ ಕೊಳ್ಳ ಬಹುದು. ಆದರೆ ಮದಿವೆಯಾದ ಬಳಿಕ ಅವಳನ್ನು ಬಿಟ್ಟು ಬಿಡ ಬೇಕೆಂದಿದ್ದರೆ, ಅವಳನ್ನು ಹಣಕ್ಕೆ ಮಾರಿ ಬಿಡ ಬಾರದೆಂಬ ಕಟ್ಟಳೆ. ವ. ೧೦ — ೧೪. ಚೊಚ್ಚಲತನದ ಬಾಧ್ಯವನ್ನು ಮೊದಲಿನ ಹೆಂಡತಿಯಿಂದ ಹುಟ್ಟಿದ ಚೊಚ್ಚಲ ಮಗನಿಂದ ತಪ್ಪಿಸ ಬಾರದೆಂಬದು. ವ. ೧೫ — ೧೭. ಹೆತ್ತವರಿಗೆ ಮಾರ್ಮಲೆತವರಾದ ಮಕ್ಕಳಿಗೆ ಪ್ರಾಣಶಿಕ್ಷೆ ನೇಮಕವಾದದ್ದು. ವ. ೧೯ — ೨೧. ಕಲ್ಲೆಸದು ಕೊಂದ ಅಪರಾಧಿಗಳು ಮುಂತಾದವರ ಶವಗಳ ವಿಷಯವಾದ ಕಟ್ಟಳೆ. ವ. ೨೨ — ೨೩.

ಸಂಧಿ ೨೨.

ಪಶ್ವಾದಿಗಳಿಗೂ ಮನುಷ್ಯರಿಗೂ ನಷ್ಟವಾದರೂ ಕಷ್ಟವಾದರೂ ಬಾರದಂತೆ, ಜೋಕೆಯಾದ ಪರಾಮರಿಕೆ ಇರ ಬೇಕು ಎಂಬದು ಮುಂತಾದ ಚಿಲ್ಲರೆ ಕಟ್ಟಳೆಗಳು. ವ. ೧ — ೧೨. ಕನ್ನಿಕೆಯ ಹೆಸರನ್ನು ಸುಮ್ಮನೆ ಕೆಡಿಸಿದವನಿಗೂ ವ್ಯಭಿಚಾರ ಮಾಡಿದವಳಿಗೂ ನೇಮಕವಾದ ಶಿಕ್ಷೆ. ವ. ೧೩ — ೩೦.

ಸಂಧಿ ೨೩.

ಕರ್ತನ ಸಭೆಯು ಪರಿಶುದ್ಧವಾದದ್ದಾಗಿರುವದರಿಂದ, ನಪುಂಸಕನಾದರೂ ಅತ್ಯುತ್ಕಟ ವ್ಯಭಿಚಾರದಿಂದ ಹುಟ್ಟಿದಂಥ, ಸೂಳೇ ಮಕ್ಕಳೆಂದೆಣಿಕೆಯಾಗ ತಕ್ಕಂಥ, (೩ನೆ ವಚನದಿಂದ ಎರಡನೇದಕ್ಕೆ ಟೀಕು ಉಂಟಾಗುವದು) ಕೊಂಚ ವೇಳೆಗೆ ಮುಂಚಿತವಾಗಿ ಇಸ್ರಯೇಲನ ಮಕ್ಕಳಿಗೆ ಎರಡು ಬಗೆದಂಥ, ಮೋವಾಬನವರೂ ಅಮ್ಮೋನನವರೂ ಅದರಲ್ಲಿ ಶೇರಲಧಿಕಾರಿಗಳಾಗಿರಲಿಲ್ಲ. ಆದರೆ ಮೂರನೆ ತಲಾಂತರದ ಎದೋಮನವರೂ ಮಿಚ್ರದವರೂ ಶೇರಲಧಿಕಾರಿಗಳಾಗಿದ್ದರು. ವ. ೧ — ೮. ಯೆಹೋವನು ನಡುವೆಯಲ್ಲಿ ವಾಸ ಮಾಡುವ ಇಸ್ರಯೇಲ ಜನಾಂಗದ ದಳ ಸಹ ಪರಿಶುದ್ಧವಾದದ್ದಾಗಿರ ಬೇಕೆಂಬದರ ವಿಷಯವಾಗಿ ನೇಮಕವಾದದ್ದು. ವ. ೯ — ೧೪. ತಮ್ಮನ್ನು ಆಶ್ರೈಸ ಬಂದ ಕೈಯಾಳುಗಳನ್ನು ಇಸ್ರಯೇಲನವರು ಅವರ ಒಡೆಯರಿಗೆ ಒಪ್ಪಿಸಿ ಕೊಡ ಬಾರದು. ವ. ೧೫. ೧೬. ಪರ ಜನಗಳಲ್ಲಿ ವಾಡಿಕೆಯಾದಂಥ, ತಮ್ಮ ತಮ್ಮ ದೇವರುಗಳ ಹೆಸರಿನಲ್ಲಿ ಗಂಡಸರೂ ಹೆಂಗಸರೂ ಸೂಳೆಗಾರಿಕೆ ನಡಿಸುವ ಹೇಸಿಗೆಯಾದ ಪಾಪವು ಇಸ್ರಯೇಲನಲ್ಲಿ ಇರ ಬಾರದೆಂತಲೂ, ಅವರ "ನ್ಯಾಸಂಬಳ" ದೇವಾಲಯಕ್ಕೆ ಸಲ್ಲ ಬಾರದೆಂತಲೂ, ನಿಷೇಧವಾದದ್ದು. ವ. ೧೭. ೧೮. ಪರರ ಕೈಯಿಂದ ಬಡ್ಡಿ ತಕೊಳ್ಳ ಬಹುದು, ಸಹೋದರರ ಕೈಯಿಂದ ತಕ್ಕೊಳ್ಳ ಬಾರದು. ವ. ೧೯. ೨೦. ಹರಿಕೆಗಳ ಸಲವಾದ ಅಪ್ಪಣೆ. ವ. ೨೧. ೨೨. ನೆರೆಹೊರೆಯುವನ ದ್ರಾಕ್ಷೇ ತೋಟದಲ್ಲಿಯೂ ಹೊಲದಲ್ಲಿಯೂ ಹೊಟ್ಟೆಗೆ ಬೇಕಾದದ್ದನ್ನು, ಇದ್ದಕ್ಕಿದ್ದ ಹಾಗೆ, ತಿನ್ನ ಬಹುದು; ಹೆಚ್ಚಾದದ್ದನ್ನು ಕೊಂಡು ಹೋಗ ಬಾರದು. ವ. ೨೪. ೨೫. ಮತ್ತಾ. ೧೨, ೧. ಇದಕ್ಕೆ ಸರಿ ನೋಡ ಬೇಕು.

ಸಂಧಿ ೨೪.

ಮೆಚ್ಚಿಗೆ ಆಗದ ಹೆಂಡತಿಯನ್ನು, ತ್ಯಾಗ ಪತ್ರ ಬರದು, ಕಳುಹಿಸಿ ಬಿಡ ಬಹುದು. ಆದರೆ ಮುಂಚೆ ಕಳುಹಿಸಿ ಬಿಟ್ಟವಳನ್ನು ಬಳಿಕ ತಿರಿಗಿ ಶೇರಿಸಿ ಕೊಳ್ಳ ಬಾರದು. ವ. ೧—೪. ನೀತಿ, ಸರಿಯಾದ ನ್ಯಾಯ, ಬಡವರ ಮೇಲಣ ಕೃಪೆ ಮುಂತಾದ ಸದ್ಗುಣಾನ್ವಿತವಾದ ನಡತೆಯ ವಿಷಯವಾದ ಕಟ್ಟಳೆಗಳು. ವ. ೫—೨೨.

ಸಂಧಿ ೨೫.

ಅನ್ಯಾಯ ಮಾಡಿದವನಿಗೆ ಕೊರಡೆಯ ಪೆಟ್ಟಿನ ದಂಡವು ನ್ಯಾಯಾಧಿಪತಿಯಿಂದ ನಿರ್ಣಯವಾದರೆ, ನಾಲ್ವತ್ತು ಪೆಟ್ಟಿಗಿಂತ ಹೆಚ್ಚು ಹೊಡಿಯುವದು ನಿಷೇಧಿತವಾಗಿದೆ. [ಹೀಗಿರಲಾಗಿ ಇತ್ತಣ ಕಾಲದ ಯೆಹೂದನವರಲ್ಲಿ ಒಂದು ಕಡಿಮೆ ನಾಲ್ವತ್ತು ಪೆಟ್ಟು ತಿನ್ನ ಬೇಕೆಂಬ ತೀರ್ಪು ಮಾಡುವ ಪದ್ಧತಿ ಹುಟ್ಟಿತು. (೨ಕೊರಿ. ೧೧, ೧೪.)] ಕಣ ತುಳಿಯುವ ಎತ್ತಿನ ಬಾಯಿ ಕಟ್ಟ ಬಾರದೆಂಬದು, ಸ. ೨೩, ೨೪. ೨೫ರಲ್ಲಿ ಬರದಿರುವಂಥ ಬಡವರಿಗೆ ದಯಾಳುವಾಗಿರ ಬೇಕೆಂಬ ಅಪ್ಪಣೆಗೆ ಚನ್ನಾಗಿ ಅನುಕೂಲವಾದದ್ದು. ವ. ೪. ದೇವರೇಣ ವಿವಾಹ. ವ. ೫—೧೦. ಗಂಡಸರು ಜಗಳಾಡುವಲ್ಲಿ, ಹೆಂಗಸು ಲಜ್ಜೆ ಬಿಟ್ಟು ನಡದರೆ, ನ್ಯಾಯಾಧಿಪತಿ ಕೊಡ ತಕ್ಕ ಶಿಕ್ಷೆ. ವ ೧೧. ೧೨. ಈಡಾದ ಅಳತೆಯೂ ತೂಕದ ಕಟ್ಲೆಯೂ ಇರ ಬೇಕು. ವ. ೧೩—೧೬. ಅಮಲೇಕನವರ ಸಂಹಾರ. ವ. ೧೭—೧೯.

ಸಂಧಿ ೨೬.

ವ. ೧—೧೫. ವಾಗ್ದತ್ತದೇಶದ ವರ್ಷಂಪ್ರತಿಯ ಹುಟ್ಟುವಳಿಯು ದೇವನ ಪರಿಶುದ್ಧ ವರವೆಂದು, ಇಸ್ರಯೇಲನವರು ತಿಳುಕೊಂಡು, ಕೃತಜ್ಞರಾಗಿ ಪ್ರಥಮ ಫಲಗಳ ಕಾಣಿಕೆಗಳನ್ನು ತಂದು, ಮೂರನೆ ಮೂರನೆ ವರ್ಷದಲ್ಲಿ ಭೋಜನಕ್ಕಾಗಿರುವ ದಶಮಾಂಶವನ್ನು ಕೊಟ್ಟು, ಯೆಹೋವನನ್ನು ಸ್ತುತಿಸಿ ಪ್ರಾರ್ಥಿಸ ಬೇಕೆಂಬ ನೇಮಕವು. ಆ ಪ್ರಾರ್ಥನೆ ಏನಂದರೆ: "ನಿನ್ನ ಪರಿಶುದ್ಧ ಮಂದಿರವಾದ ಆಕಾಶದಿಂದ ಕಡೆಗಣ್ಣಿಟ್ಟು, ನಿನ್ನ ಜನಾಂಗವಾದ ಇಸ್ರಯೇಲನನ್ನೂ, ನಮ್ಮ ತಂದೆಗಳಿಗೆ ಆಣೆ ಇಟ್ಟಂತೆ, ನಮಗೆ ಕೊಟ್ಟ ಭೂಮಿಯಾದಂಥ, ಹಾಲೂ ಜೇನೂ ಹರಿಯುವಂಥ ದೇಶವನ್ನೂ ಆಶೀರ್ವದಿಸು." ವ. ೧೫.

ವ. ೧೬—೧೯. ನೇಮವನ್ನೆಲ್ಲಾ ಮನಃಪೂರ್ವಕವಾಗಿ ಕೈಕೊಳ್ಳ ಬೇಕೆಂಬ ಬೆಸೆಯಾದ ಕಡೆಯ ನೀತ್ಯೋಪದೇಶ.

III. ದೇವನ ಒಡಂಬಡಿಕೆಯನ್ನು ಘಟ್ಟಿಯಾಗಿ ಕೈಕೊಳ್ಳ ಬೇಕೆಂಬ ನೀತಿಯ ಬೋಧನೆ. ನೇಮಾನುಸರಣೆಯ ಆಶೀರ್ವಾದವೂ ನೇಮಾತಿಕ್ರಮಣದ ಶಾಪವೂ. ಸ. ೨೭—೩೦.

ನೇಮಜ್ಞಾಪಕಶಿಲೆಗಳೂ ಬಲಿಪೀಠವೂ. ಸ. ೨೭, ೧—೧೦.

ಮೋಶೆ ೨೬ನೆ ಸಂಧಿಯ ಅಂತ್ಯದಲ್ಲಿ ನೇಮಪುನರುಕ್ತಿಯನ್ನು ಮುಗಿಸಿ, ಈ ಪ್ರಕರಣದ ಆರಂಭದಲ್ಲಿ ದೇವನಿತ್ತ ದೇಶವನ್ನು ಕಟ್ಟಿ ಕೊಂಡ ಮೇಲೆ ಜ್ಞಾಪಕಶಿಲೆಗಳನ್ನು ಅಣಿ ಮಾಡಿ, ಗಾರೆ ಹಾಕಿ, "ಈ ನೇಮದ ನುಡಿಗಳನ್ನೆಲ್ಲಾ ಅವುಗಳಲ್ಲಿ ಕೆತ್ತಿ ಬರೆದು, ಅವನ್ನೂ, ಹುಟ್ಟು ಕಲ್ಲುಗಳಿಂದ ಕಟ್ಟಿದ ಪೀಠವನ್ನೂ, ಜನಾಂಗವು ಕರ್ತನಿಗೆ ತಿರಿಗಿ ಬಿದ್ದರೆ, ಅದರ ಪಾಪಕ್ಕೆ ವಿರೋಧವಾದ ನಿತ್ಯ ಸಾಕ್ಷಿಗಾಗಿ, ಏಬಾಲ್ ಬೆಟ್ಟದಲ್ಲಿ ಇರಿಸ ಬೇಕೆಂತ ಅಪ್ಪಣೆ ಕೊಡುತ್ತಾನೆ. ೫ನೆ ಸಂಧಿಯಿಂದ ೨೬ನೆ ಸಂಧಿಯ ವರೆಗೆ ಬರೆದಿರುವ ನೇಮದ ಈ ನುಡಿಗಳೆಲ್ಲಾ ವಿವರವಾಗಿ ಈ ಜ್ಞಾಪಕದ ಕಲ್ಲುಗಳಲ್ಲಿ ಕೆತ್ತಿ ಬರಿಯಲ್ಪಡ ಬೇಕಾಗಿತ್ತೋ, ದಶವಾಕ್ಯ ಕೂಡಿದ

ದ್ವಿತೀ. ೨೭, ೧೧—೨೬; ೨೮, ೧—೩.

ಒಂದು ಸಂಗ್ರಹ ಮಾತ್ರ ಶಿಲೆಗಳಲ್ಲಿ ಲಿಖಿತವಾಯಿತೋ ಎಂದು, ನಿಶ್ಚೈಸ ಕೂಡದು. ಆದರೆ ಕ್ಲುಪ್ತ ಸಂಗ್ರಹ ಮಾತ್ರ ಶಿಲೆಗಳಲ್ಲಿ ಬರೆಯಲಾಯಿತೆಂದು, ನೆನಸುವದು ಸಹಜವಾಗಿ ತೋರುವದು. ೪ನೆ ವಚನದಲ್ಲಿಯೂ ಏಬಾಲೆಂಬದನ್ನು ಸಮಾರ್ಯದವರಾದ ಬರವಣಿಗಾರರು ಮಾರಿಸಿ, ಗ್ರಿಜ್ಜೀಮ್ ಎಂದು ಬರೆದು, ಈ ಶಬ್ದದಿಂದಲೂ, ೧೨ನೆ ವಚನದಿಂದಲೂ, ಯೋಹ. ೪, ೨೦ನೆಯಲ್ಲಿ ಬರದ ತಾತ್ಪರ್ಯವನ್ನು ಸಾಧಿಸುತ್ತಿದ್ದರು. ಈ ಜ್ಞಾಪಕಶಿಲೆಗಳನ್ನೂ ಈ ಹೋಮಪೀಠವನ್ನೂ ಕಟ್ಟಿದರಿಂದ, ಇಸ್ರಯೇಲ ಜನಾಂಗವು ಯೆಹೋವನ ಒಡಂಬಡಿಕೆಗೆ ಮುದ್ರೆ ಹಾಕಿದ ಬಳಿಕ, ಸಾಕ್ಷೀ ಪೆಟ್ಟಿಗೆಯಲ್ಲಿ ಎಲ್ಲರ ಕಣ್ಣಿಗೆ ಮರೆಯಾಗಿ ಇರಿಸಿದಂಥ, ಜ್ಞಾಪಕಶಿಲೆಗಳಲ್ಲಿ ಬಹಿರಂಗವಾಗಿ ಲಿಖಿತವಾದಂಥ, ದೇವನೇಮದ ಧರ್ಮವನ್ನು ಮೀರಿದ ಪಕ್ಷದಲ್ಲಿ, ವ. ೧೧—೨೬ರಲ್ಲಿ ಸಾರಿದ ಶಾಪಕ್ಕೆ ಒಳಗಾಗುವದಕ್ಕೆ ಪಾತ್ರವಾಗಿತ್ತು.

ಆಶೀರ್ವಾದ ಶಾಪಗಳು. ವ. ೧೧—೨೬.

ಏಬಾಲ್ ಗುಡ್ಡಕ್ಕೆದುರು ಅದಕ್ಕಿಂತ ಎತ್ತರವಾದ ಗ್ರಿಜ್ಜೀಮೆಂಬ ಬೆಟ್ಟವುಂಟು (ಗರಿಜೀಮ್). ಅವೆರಡರ ನಡುವೆಯೂ ತಗ್ಗಿನಲ್ಲಿ ಷೆಕೆಮೆಂಬ ಊರು ಅದೆ. (ಸಿಕರ್) ಯೋಹ. ೪, ೫. ದೇಶ ವಶೀಕಾರವಾದ ಮೇಲೆ, ಒಡತಿಯರಾದ ಯಾಕೋಬನ ಹೆಂಡರಿಂದ ಹುಟ್ಟಿದ ಕುಲಗಳು ಗ್ರಿಜ್ಜೀಮದಲ್ಲಿ ಕೂಡಿ ನಿಂತು, ನೇಮವನ್ನು ಕೈಕೊಳ್ಳುವವರಿಗೆ ಬಪ್ಪ ಆಶೀರ್ವಾದವನ್ನು, ಉಳಿದ ಆರು ಕುಲಗಳು ಏಬಾಲದಲ್ಲಿ ಕೂಡಿ ನಿಂತು, ಮೀರುವವರಿಗೆ ಬಪ್ಪ ಶಾಪವನ್ನೂ ಸಾರ ಬೇಕೆಂದು ಅಪ್ಪಣೆಯಾಯಿತು. (ಎಫ್ರಯಿಮ್ ಮನಾಸೆ ಕುಲಗಳೆರಡು ಒಂದೇ ಯೋಸೇಫನದೆಂಬ ಕುಲವಾಗಿ ಎಣಿಕೆಯಾಗಿದೆ.) ಏಬಾಲ್ ಬೆಟ್ಟದವರಲ್ಲಿ ಲೇವಿಯವರಾದ ಯಾಜಕರೇ ಕುಲಗಳ ಲೆಖ್ಖದಂತೆ ಹನ್ನೆರಡು ಸಲವಾದ ಶಾಪವನ್ನು, ವ. ೧೫—೨೬, ಸಾರುವದು. ಗ್ರಿಜ್ಜೀಮದವರು ಸಾರ ತಕ್ಕ ಆಶೀರ್ವಾದಗಳು ಇಲ್ಲಿ ಕಾಣುವದಿಲ್ಲ. ಒಂದು ವೇಳೆ ಅವು ಸ. ೨೮, ೩—೬ರಲ್ಲಿ ಬರೆದವೆ. ಕೆಟ್ಟವರು ಮರೆಯಾಗಿ ನಡಿಸುವಂಥ, ಸಂಸ್ಥಾನದವರ ನ್ಯಾಯವಿಚಾರಣೆಗೆ ಶಾನೆ ಸರ್ತಿ ತಪ್ಪಿಸಿ ಕೊಳ್ಳುವಂಥ, ಅಂತರಂಗವಾದ ದೆವ್ವಪೂಜೆ, ಹೆತ್ತವರ ಅಲಕ್ಷ್ಯ, ಅನಾಥರ ಬಾಧೆ, ಅತ್ಯುತ್ಕಟ ವ್ಯಭಿಚಾರ, ಪಶುಸಂಗಮ, ಲಂಚ ಕೊಡೋಣ ಕೊಳ್ಳೋಣ ಮುಂತಾದ ಕೆಲವು ಮುಖ್ಯವಾದ ನೇಮವಿಧಿಗಳನ್ನು ಮೀರಿದವರ ಮೇಲೆ ಈ ಶಾಪಗಳು ಬರುವವೆಂದು, ಹೇಳಿಯಾದ ಮೇಲೆ, ನೇಮವನ್ನು ಕೈಕೊಳ್ಳದೆ ಮೀರುವವರಿಗೆಲ್ಲಾ ಶಾಪ! ಎಂದು, ಹೇಳಿಯದೆ. ಈ ಶಾಪಗಳಲ್ಲಿ ಒಂದೊಂದನ್ನು ಜನಾಂಗದ ಕೂಟವೆಲ್ಲಾ ನಿಜವೇ ಎಂಬರ್ಥವುಳ್ಳ ಆಮೆನ್ ಎಂಬದರಿಂದ ಸ್ಥಿರ ಪಡಿಸ ಬೇಕೆಂದು, ನೇಮಕವಾಗಿದೆ.

ಈ ಅಪ್ಪಣೆ ನೆರವೇರಿದ್ದು ಯೆಹೋಷು. ೮, ೩೦ ಮುಂ. ಬರೆದದೆ.

ಆಶೀರ್ವಾದ ಶಾಪಗಳ ವಿವರಣ ವಿಮರ್ಶೆಗಳು. ಸ. ೨೮.

ವ. ೧—೧೪. ಆಶೀರ್ವಾದ.

ವ. ೧. ಮತ್ತು ಆಗುವದೇನಂದರೆ: ನಿನ್ನ ದೇವನಾದ ಯೆಹೋವನ ಶಬ್ದವನ್ನಾಲೈಸೇ ಆಲೈಸಿ, ನಾನಿಂದು ನಿನಗೆ ಬೆಸಸುತ್ತಿರುವ ಬೆಸಗಗಳನ್ನೆಲ್ಲಾ ಕಾದು ಕೊಂಡು ಮಾಡುವಿಯಾದರೆ, ನಿನ್ನ ದೇವನಾದ ಯೆಹೋವನು ನಿನ್ನನ್ನು ಇಳೆಯ ಎಲ್ಲಾ ಜನಗಳ ಮೇಲೆ ಉಚಾದದ್ದಾಗಲೀಸುವನು. ೨. ಮತ್ತು ನಿನ್ನ ದೇವನಾದ ಯೆಹೋವನ ಶಬ್ದವನ್ನಾಲೈಸುವದರ ಸಲವಾಗಿ ಈ ಆಶೀರ್ವಾದಗಳೆಲ್ಲಾ ನಿನ್ನ ಮೇಲೆ ಬಂದು, ನಿನಗೆ ಹತ್ತುವವು. ೩. ಪಟ್ಟಣದಲ್ಲಿಯೂ ನಿನಗೆ ಆಶೀರ್ವಾದ! ಹೊಲದ

ದ್ವಿತೀ. ೨೮, ೪—೩೭.

ಲ್ಲಿಯೂ ನಿನಗೆ ಆಶೀರ್ವಾದ! ೪. ನಿನ್ನ ಒಡಲಿನ ಫಲಕ್ಕೆ ಆಶೀರ್ವಾದ! ನಿನ್ನ ಭೂ
ಮಿಯ ಹುಟ್ಟುವಳಿಗೆ ಆಶೀರ್ವಾದ! ನಿನ್ನ ಪಶುಗಳ ಹುಟ್ಟುವಳಿಗೆ ಆಶೀರ್ವಾದ!
ನಿನ್ನ ದನಗಳ ಮರಿಮುಂದೆಗೆ ಆಶೀರ್ವಾದ! ನಿನ್ನ ಕುರಿ ಹಿಂಡಿಗೆ ಆಶೀರ್ವಾದ! ೫.
ನಿನ್ನ ಪುಟ್ಟಿಗೂ ನಾದುವ ದೋಣಿಗೂ ಆಶೀರ್ವಾದ! ೬. ನಿನ್ನ ಬರೋಣದರ
ಲ್ಲಿಯೂ ನಿನಗೆ ಆಶೀರ್ವಾದ! ನಿನ್ನ ಹೋಗೋಣದರಲ್ಲಿಯೂ ನಿನಗೆ ಆಶೀರ್ವಾದ!
೭. ನಿನಗೆದುರು ಬೀಳುವಂಥ ನಿನ್ನ ಎಡರಾಳಿಗಳನ್ನು ಯೆಹೋವನು ನಿನ್ನ ಮುಂದೆ
ಸೋತು ಹೋಗಲೀಸುವನು. ಒಂದು ದಾರಿಯಿಂದ ನಿನಗೆದುರಾಗಿ ಹೊರಟು
ಬಂದು, ಏಳು ದಾರಿಯಿಂದ ನಿನ್ನ ಮುಂದೆ ಓಡಿ ಹೋಗುವರು. ೮. ಯೆಹೋವ
ನು ನಿನ್ನ ಹಗೇವುಗಳಲ್ಲಿಯೂ, ನೀನು ನಿನ್ನ ಕೈ ಹಾಕುವಂಥಾದ್ದೆಲ್ಲಾದರಲ್ಲಿಯೂ,
ಆಶೀರ್ವಾದವನ್ನು ಬೆಸಸಿ, ನಿನ್ನ ದೇವನಾದ ಯೆಹೋವನು ನಿನಗೆ ಕೊಡುತ್ತಿರುವ
ದೇಶದಲ್ಲಿ ನಿನ್ನನ್ನು ಆಶೀರ್ವದಿಸುವನು. ೯. ನಿನಗೆ ಆಣೆ ಇಟ್ಟಂತೆ ಯೆಹೋವ
ನು ನಿನ್ನನ್ನು, ನಿನ್ನ ದೇವನಾದ ಯೆಹೋವನ ಬೆಸಗಗಳನ್ನು ಕಾದು ಕೊಂಡು, ಅವ
ನ ಹಾದಿಗಳಲ್ಲಿ ನಡಕೊಳ್ಳುವಿಯಾದರೆ, ತನಗೆ ಪರಿಶುದ್ಧ ಜನಾಂಗವಾಗಿ ಸ್ಥಾಪಿಸು
ವನು. ೧೦. ಮತ್ತು ಇಳೆಯ ಜನಾಂಗಗಳೆಲ್ಲಾ ಯೆಹೋವನ ಹೆಸರು ನಿನ್ನ ಮೇಲೆ
ಕರಿಯಲ್ಪಡುತ್ತದೆಂದು, ನೋಡಿ, ನಿನಗೆ ಅಂಜುವವು. — —

ವ. ೧೫—೬೮. ಅವಿಧೇಯರಿಗೆ ಬರುವ ಶಾಪ.

ವ. ೧೫. ಮತ್ತು ಆಗುವದೇನಂದರೆ: ನಿನ್ನ ದೇವನಾದ ಯೆಹೋವನ ಶಬ್ದವನ್ನಾ
ಲೈಸದೆ, ನಾನಿಂದು ನಿನಗೆ ಬೆಸಸುತ್ತಿರುವ ಎಲ್ಲಾ ಬೆಸಗಗಳನ್ನೂ ಕಟ್ಟಳೆಗಳನ್ನೂ ಕಾ
ದು ಕೊಳ್ಳದೆ, ಮಾಡದೆ ಹೋಗುವಿಯಾದರೆ, ಈ ಶಾಪಗಳೆಲ್ಲಾ ನಿನ್ನ ಮೇಲೆ ಬಂದು,
ನಿನಗೆ ಹತ್ತುವವು.

ಈ ವಚನ ಮೊದಲ್ಗೊಂಡು ೩೫ನೆ ವರೆಗೆ ಅಧಿಕ ವಿವರವಾಗಿ ಶೇರಿದ ಶಾಪಗಳು ವ. ೧—೧೪ರಲ್ಲಿ
ಬರೆದ ಆಶೀರ್ವಾದಗಳಿಗೆ ತುಸ ಕಡಿಮೆ ನೇರವಾಗಿ ಪ್ರತಿಕೂಲವಾಗಿವೆ.

ವ. ೩೬. ಯೆಹೋವನು ನಿನ್ನನ್ನೂ, ನೀನು ನಿನ್ನ ಮೇಲೆ ಇಟ್ಟು ಕೊಳ್ಳುವ ನಿನ್ನ
ಅರಸನನ್ನೂ, ನೀನೂ ನಿನ್ನ ತಂದೆಗಳೂ ಅರಿಯದಂಥ ಜನರ ಬಳಿಗೆ ಹೋಗಲೀಸುವ
ನು. ಅಲ್ಲಿ ನೀನೂ ನಿನ್ನ ತಂದೆಗಳೂ ಅರಿಯದಂಥ, ಮರವೂ ಕಲ್ಲೂ ಆದಂಥ ಬೇರೆ
ದೇವರುಗಳನ್ನೋಲೈಸುವಿ. ೩೭. ಮತ್ತು ಯೆಹೋವನು ನಿನ್ನನ್ನು ನಡಿಸುವಲ್ಲಿಯ
ಎಲ್ಲಾ ಜನಾಂಗಗಳಲ್ಲಿ ಬಕ್ಕುಡಿಯೂ ಗಾದೆಯೂ ಗೇಲಿಯೂ ಆಗಿರುವಿ.

ಇವೆರಡು ವಚನಗಳ ಶಾಪಪ್ರವಾದನಗಳು ಅಷ್ಸೂರ ಬಾಬೆಲ ದೇಶಗಳ ಪ್ರವಾಸದಲ್ಲಿ ನೆರವೇರಿದ್ದು
ಪ್ರಕಟವಾಗಿದೆ. ವ. ೩೮—೬೮ರಲ್ಲಿರುವ ಜಯವಾದಗಳು ಕ್ರಿಸ್ತಶಕದ ೭೦ನೆ ವರ್ಷದಲ್ಲಿ ಉಂಟಾದ

ದ್ವಿತೀ. ೨೮, ೪೯—೬೫; ೨೯, ೧.

ಯೆರೂಸಲೇಮ್ ಪಟ್ಟಣದ ಎರಡನೆ ನಾಶನದ ಈಚೇ ಕಾಲದ ವರೆಗೆ ನಡೆದ ಯೆಹೂದ ಜನಾಂಗದ ಇತ್ತಣ ಚರಿತ್ರಸಂಗತಿಗಳನ್ನು ಮುಂದೋರಿಸುತ್ತವೆ, ೪೯ನೆ ಮುಂತಾದ ವಚನಗಳು ಕ್ರಿಸ್ತನ ಅತ್ತಣ ೬೭ನೆ ೭೦ನೆ ವರ್ಷಗಳು ಮೊದಲ್ಗೊಂಡು ರೋಮಿಯರು ಯೆಹೂದನವರನ್ನು ತಮ್ಮ ವಶ ಮಾಡಿ ಕೊಳ್ಳುತ್ತಾ ಬಂದು, ವೆಸ್ಪಸಿಯಾನ ತೀತರು ಆಳಿದ ವೇಳೆಯಲ್ಲಿ ಅವರ ಸಂಸ್ಥಾನವನ್ನು ಕಡೆ ಮುಟ್ಟಿ ಕೆಡವಿ ಹಾಳು ಮಾಡಿದ ಚರಿತ್ರಕ್ಕೆ ಒಪ್ಪುತ್ತವೆ. ಹ್ಯಾಗಂದರೆ:

ವ. ೪೯. ಯೆಹೋವನು ಇಳೆಯ ಕೊನೆಯಾದ ದೂರದಿಂದ ಒಂದು ಜನವನ್ನು, ನೀನು ಕೇಳದೆ ಇದ್ದ ನುಡಿಯ ಜನವನ್ನು, ನಿನ್ನ ಮೇಲೆ ಕೊಂಡು ಬರುವನು. — —
೫೨. ಅದು ನಿನ್ನ ಬಾಗಲುಗಳಲ್ಲೆಲ್ಲಾ, ನಿನ್ನ ದೇಶವೆಲ್ಲಾದರಲ್ಲಿ ನೀನು ನಂಬಿ ಕೊಂಡಿರುವ ಎತ್ತರವಾದಂಥ, ಘಟ್ಟಿಯಾದಂಥ ನಿನ್ನ ಗೋಡೆಗಳು ಕೆಡವುವ ಮಟ್ಟಿಗೂ, ನಿನ್ನನ್ನು ತಿಕ್ಕುವದು. ಮತ್ತು ನಿನ್ನ ಬಾಗಲುಗಳಲ್ಲೆಲ್ಲಾ ನಿನ್ನ ದೇವನಾದ ಯೆಹೋವನು ನಿನಗಿತ್ತ ದೇಶವೆಲ್ಲಾದರಲ್ಲಿ ನಿನ್ನನ್ನು ತಿಕ್ಕುವದು. ೫೩. ಮತ್ತು ನಿನ್ನ ಎದರಾಳಿಗಳು ನಿನ್ನನ್ನು ಪೀಡಿಸುವ ಪೀಡೆಯಲ್ಲಿಯೂ ಇಕ್ಕಟ್ಟಿನಲ್ಲಿಯೂ, ನಿನ್ನ ಒಡಲಿನಿಂದ ಹುಟ್ಟಿದಂಥ, ನಿನ್ನ ದೇವನಾದ ಯೆಹೋವನು ನಿನಗಿತ್ತ ನಿನ್ನ ಗಂಡು ಹೆಣ್ಣು ಮಕ್ಕಳ ಮಾಂಸವನ್ನು ತಿನ್ನುವಿ. — — ೬೪. ಮತ್ತು ಯೆಹೋವನು ಇಳೆಯ ಈ ಮೂಲೆಯಿಂದಲಿಳೆಯ ಆ ಮೂಲೆಗೆ ಎಲ್ಲಾ ಜನಾಂಗಗಳಲ್ಲಿ ನಿನ್ನನ್ನು ಹರವಿ ಹಾಕುವನು. ಅಲ್ಲಿ ನೀನೂ ನಿನ್ನ ತಂದೆಗಳೂ ಅರಿಯದ, ಮರವೂ ಕಲ್ಲೂ ಆದ ಬೇರೆ ದೇವರುಗಳನ್ನೋಲೈಸುವಿ.
೬೫. ಆ ಜನಗಳಲ್ಲಿ ನಿನಗೆ ತೇರುಪಡಿ ಇಲ್ಲ. ನಿನ್ನ ಅಂಗಾಲಿಗೆ ನಿಲಕಡೆಯೂ ಇಲ್ಲ. ಯೆಹೋವನು ಅಲ್ಲಿ ಹಾರುವ ಎದೆಯನ್ನೂ ಮಬ್ಬಾಗುವ ಕಣ್ಣುಗಳನ್ನೂ ಕುಂದುವ ಪ್ರಾಣವನ್ನೂ ನಿನಗೀಯುವನು. — —

ಯೆರೂಸಲೇಮ್ ಎರಡನೆ ಸಲ ನಾಶನವಾದ ಚರಿತ್ರವನ್ನೂ ಯೆಹೂದ ಜನಾಂಗದ ಇತ್ತಣ ಪ್ರತ್ಯಾಂತವನ್ನೂ ಆಲೋಚಿಸುವವನಿಗೆ, ಪ್ರವಾದಿಯಾದ ಮೋಶೆಯ ದೃಷ್ಟಿಗೆ ಮೂವತ್ತು ಶತವರ್ಷದಲ್ಲಿ ನಡದು ಬರುವಂಥ ಅವನ ಜನಾಂಗದ ಸ್ಥಿತಿಗತಿಗಳು ಚನ್ನಾಗಿ ಗೋಚರವಾಗಿದ್ದವೆಂದು, ಚೋದ್ಯವಾಗಿ ತಿಳಿಯ ಬರುವದು. ಆದಾಗ್ಯೂ ಹೋಷೆಯನ ಮೂರನೆ ಸಂಧಿಯಲ್ಲಿ ಸ್ಪಷ್ಟವಾಗಿ ಮುಂಪೇಳಿರುವ ದೇವಜನಾಂಗದ ಚರಿತ್ರಸಂಪೂರ್ತಿಯನ್ನು ನೆನಪು ಮಾಡಿ ಕೊಳ್ಳದೆ ಹೋಗ ಬಾರದು.

ಯೆಹೋವನ ಸಂಗಡಲುಂಟಾದ ಒಡಂಬಡಿಕೆಯನ್ನು ಸರೀಸರಿಯಾಗಿ ಕೈಕೊಳ್ಳ ಬೇಕೆಂದು, ಮೋಶೆ ಇಸ್ರಯೇಲ ಜನಾಂಗವನ್ನು ಮುಟ್ಟುವ ಘನತರ ಪ್ರಸಂಗದಿಂದ ಎಚ್ಚರಿಸುವದು. ಸ. ೨೯.

ವ. ೧. ಹೋರೆಬದಲ್ಲಿ ಅವರೊಡನೆ ಕಟ್ಟಿ ಕೊಂಡ ಒಡಂಬಡಿಕೆಯ ಹೊರ್ತಾಗಿ, ಮೋವಾಬ ದೇಶದಲ್ಲಿ ಇಸ್ರಯೇಲನ ಮಕ್ಕಳೊಡನೆ ಕಟ್ಟಿ, ಯೆಹೋವನು ಮೋಶೆಗೆ ಬೆಸಸಿದ ಒಡಂಬಡಿಕೆಯ ನುಡಿಗಳು ಯಾವವಂದರೆ:

೩೭೮ ಯೆಹೋವನ ಒಡಂಬಡಿಕೆಯನ್ನು ಕೈಕೊಳ್ಳ ಬೇಕೆಂದು ಎಚ್ಚರಿಸುವದು.

ದ್ವಿತೀ. ೨೯, ೨—೧೪.

(ಇಬ್ರಿಯ ಗ್ರಂಥದಲ್ಲಿ ಈ ವಚನವು ಕಡೇದಾಗಿ ಇಪ್ಪತ್ತೆಂಟನೆ ಸಂಧಿಗೆ ಶೇರುತ್ತದೆ.)

ವ. ೨. ಮೋಶೆ ಇಸ್ರಯೇಲನವರನ್ನೆಲ್ಲಾ ಕರೆದು, ಅವರಿಗೆ ಹೇಳಿದ್ದು: ಯೆಹೋ
ವನು ನಿಮ್ಮ ಕಣ್ಣಾರೆ ಮಿಚ್ರ ದೇಶದಲ್ಲಿ ಫರೋನನಿಗೂ ಅವನ ಎಲ್ಲಾ ಆಳುಗಳಿಗೂ
ಅವನ ಎಲ್ಲಾ ದೇಶಕ್ಕೂ ಮಾಡಿದ್ದನ್ನೆಲ್ಲಾ, ೩. ನಿಮ್ಮ ಕಣ್ಣುಗಳು ನೋಡಿದ ದೊಡ್ಡ
ಶೋಧನೆಗಳನ್ನೂ ಗುರುತುಗಳನ್ನೂ ಲಕ್ಷಣಗಳನ್ನೂ ನೀವು ನೋಡಿದಿರಿ. ೪. ಆದರೆ
ಯೆಹೋವನು ನಿಮಗೆ ತಿಳಿಯುವ ಹೃದಯವನ್ನೂ, ನೋಡುವ ಕಣ್ಣುಗಳನ್ನೂ, ಕೇಳು
ವ ಕಿವಿಗಳನ್ನೂ, ಈ ದಿನದ ವರೆಗೆ ಕೊಡಲಿಲ್ಲ[೧]. ೫. ನಿಮ್ಮನ್ನು ನಾಲ್ವತ್ತು ವರ್ಷ ಅ
ರಣ್ಯದಲ್ಲಿ ನಡಿಸಿದನು. ನಿಮ್ಮ ಮೇಲಣ ಉಡವುಗಳು ಹಳಸಲಿಲ್ಲ. ನಿಮ್ಮ ಕಾಲುಗಳ
ಮೇಲಣ ಮೆಟ್ಟುಗಳು ಹಳಸಲಿಲ್ಲ. ರೊಟ್ಟಿಯನ್ನು ತಿನ್ನದೆ ದ್ರಾಕ್ಷೇರಸ ಮದ್ಯಗಳನ್ನು
ಕುಡಿಯದೆ ಇದ್ದಿರಿ, ನಾನೇ ನಿಮ್ಮ ದೇವನಾದ ಯೆಹೋವನೆಂದು, ನೀವು ತಿಳು ಕೊ
ಳ್ಳುವ ಹಾಗೆಯೇ. ೬. ನೀವು ಈ ಸ್ಥಳಕ್ಕೆ ಬಂದಾಗ, ಹೆಷ್ಬೋನದ ಅರಸನಾದ ಶೀ
ಹೊನನೂ, ಬಾಷಾನದ ಅರಸನಾದ ಓಗನೂ, ನಮ್ಮೆದುರು ಯುದ್ಧಕ್ಕೆ ಹೊರಟಾಗ,
ಅವರನ್ನು ಹೊಡೆದು, ೭. ಅವರ ದೇಶವನ್ನು ತಕ್ಕೊಂಡು ಅದನ್ನು ರೂಬೇನನವರಿ
ಗೂ ಗಾಡನವರಿಗೂ ಮನಾಸೆಯವರ ಅರ್ಧ ಕುಲಕ್ಕೂ, ಸ್ವಾಸ್ಥ್ಯವಾಗಿ ಕೊಟ್ಟೆವು.
೮. ಹಾಗಾದರೆ ಈ ಒಡಂಬಡಿಕೆಯ ನುಡಿಗಳನ್ನು, ನೀವು ಮಾಡುವದನ್ನೆಲ್ಲಾ ಒದ
ಗಿಸುವ ಹಾಗೆ[೨], ಕಾದು ಕೊಂಡು ಮಾಡಿರಿ. ೯. ನೀವು ಇಂದು ನಿಮ್ಮ ದೇವನಾದ
ಯೆಹೋವನ ಮುಂದೆ ನಿಂತು ಕೊಳ್ಳುತ್ತೀರಿ; ನೀವೆಲ್ಲರು, ನಿಮ್ಮ ಮುಖ್ಯಸ್ಥರು, ನಿಮ್ಮ
ಕುಲಗಳು, ನಿಮ್ಮ ಮುಪ್ಪಿನವರು, ನಿಮ್ಮ ಅಧಿಕಾರಿಗಳು ಮುಂತಾದ ಇಸ್ರಯೇಲನವರೆ
ಲ್ಲರು, ೧೦. ನಿಮ್ಮ ಮಕ್ಕಳು, ನಿಮ್ಮ ಹೆಂಡತಿಯರು, ನಿನ್ನ ದಂಡಿನ ನಡುವೆಯಲ್ಲಿರುವ
ನಿನ್ನ ಪರರವನು, ನಿನ್ನ ಕಟ್ಟಿಗೆ ಕಡಿಯುವವನು, ನಿನ್ನ ನೀರು ಶೇದುವವನು, ೧೧. ನಿನ್ನ
ದೇವನಾದ ಯೆಹೋವನ ಒಡಂಬಡಿಕೆಯಲ್ಲಿಯೂ, ನಿನ್ನ ದೇವನಾದ ಯೆಹೋವನು
ಇಂದು ನಿನ್ನ ಸಂಗಡ ಕಟ್ಟುವ ಆಣೆಯಲ್ಲಿಯೂ[೩] ಶೇರುವದಕ್ಕೆ ಇದ್ಧೀರಿ. ೧೨. ಯಾ
ವ ಉದ್ದಿಶ್ಯ ಅಂದರೆ: ಅವನು ಇಂದು ನಿನನ್ನು, ನಿನಗೆ ನುಡಿದಂತೆಯೂ, ನಿನ್ನ ತಂದೆಗ
ಳಾದ ಅಬ್ರಹಾಮ ಇಸಾಕ ಯಾಕೋಬರಿಗೆ ಆಣೆಯಿಟ್ಟಂತೆಯೂ, ತನಗೆ ಜನಾಂ
ಗವಾಗಿ ಸ್ಥಾಪಿಸ ಬೇಕು[೪], ಮತ್ತು ಅವನು ನಿನಗೆ ದೇವನಾಗ ಬೇಕು. ೧೩. ಮತ್ತು
ನಾನು ನಿಮ್ಮ ಸಂಗಡ ಮಾತ್ರ ಈ ಒಡಂಬಡಿಕೆಯನ್ನೂ ಈ ಆಣೆಯನ್ನೂ ಕಟ್ಟಿ
ಕೊಳ್ಳುವದಿಲ್ಲ. ೧೪. ಇಂದು ಇಲ್ಲಿ ನಮ್ಮ ಸಂಗಡ ನಮ್ಮ ದೇವನಾದ ಯೆಹೋವನ
ಮುಂದೆ ನಿಂತಿರುವವನ ಸಂಗಡಲೂ, ಇಂದು ಇಲ್ಲಿ ನಮ್ಮೊಡನೆ ಇರದವನ[೫] ಸಂಗಡ
ಲೂ ಅದನ್ನು ಕಟ್ಟಿ ಕೊಳ್ಳುತ್ತೇನೆ.

ದ್ವಿತೀ. ೨೯, ೨೯; ೩೦, ೧—೩.

೧. ಮೋಶೆ ಇಲ್ಲಿ ಹೇಳಿದ ಮಾತಿಗೂ, ಯೇಸು ಮತ್ತಾ. ೩೪. ೩೭ರಲ್ಲಿ ಹೇಳಿದ ಮಾತಿಗೂ, ಇಸ್ರಯೇಲನವರ ಸಹಜಗುಣವಾದ ಅವಿಧೇಯತ್ವವನ್ನು ಸೂಚಿಸುವಂಥ ಪರಸ್ಪರ ಸಂಬಂಧವುಂಟು.

೨. ಇಬ್ರಿಯ ಶಬ್ದವಾದ ಹಿಸ್ಕೀಲೆಂಬದಕ್ಕೆ ಬುದ್ಧಿಯಿಂದ ನಡದು ಕೊಳ್ಳುವದು, ಕೆಲಸವನ್ನು ಚನ್ನಾಗಿ ಸಾಗಿಸುವದು ಇಲ್ಲವೆ ಒದಗಿಸುವದು, ಇವೆರಡು ಅರ್ಥವುಂಟು. ಇವೆರಡು ದೇವಕೃಪೆಯ ವರವಾಗಿದೆ.

೩. ಕರ್ತನು ಆಣೆ ಎಂಬ ಮುದ್ರೆ ಹಾಕಿದಂಥ, ಜೋಡಿಸಿದ ಆಶೀರ್ವಾದ ಶಾಪಗಳೊಡನೆ ನಿರಂತರವಾಗಿ ಕೈಕೊಳ್ಳುತ್ತಾ ಇರುವಂಥ, ಒಡಂಬಡಿಕೆಯಲ್ಲಿ ಶೇರುವದು ಭಕ್ತರಾದ ಇಸ್ರಯೇಲನವರ ಪದವಿ.

೪. ಮಿಚ್ರದಿಂದ ಹೊರಟು ಬರುವವರನ್ನು ಯೆಹೋವನು ಸ್ವಜನಾಂಗವಾಗಿ ಅಂಗೀಕರಿಸಿದಂತೆ, ಈಗ ವಾಗ್ದತ್ತದೇಶದಲ್ಲಿ ಶೇರುವವರನ್ನು ಸಹ ನಿಜರಾಜ್ಯದವರೆಂದು, ಅಂಗೀಕರಿಸುತ್ತಾನೆ.

೫. ಇಂದು ಇಲ್ಲಿ ಇರದವರು ಯಾರಂದರೆ, ಜನಾಂಗದ ಮಕ್ಕಳು ಮೊಮ್ಮಕ್ಕಳು ಮುಂತಾದವರು. ಕಿರಿಯರ ಹೆಸರಿನಲ್ಲಿ ಹಿರಿಯರಾದ ಇಸ್ರಯೇಲನವರು ಹೋರೆಬಿನಲ್ಲಿ ಯೆಹೋವನೊಡನೆ ಒಡಂಬಟ್ಟ ಪ್ರಕಾರವೇ ಅರಣ್ಯಸಂಚಾರ ಕಾಲದೊಳಗೆ ಹುಟ್ಟಿದವರೂ ವಾಗ್ದತ್ತದೇಶಪ್ರವೇಶಕ್ಕೆ ಮುಂಚೆ ತಮ್ಮ ಹೆಸರಿನಲ್ಲಿಯೂ ಮಕ್ಕಳ ಮೊಮ್ಮಕಳ ಹೆಸರಿನಲ್ಲಿಯೂ ತಮ್ಮನ್ನು ಯೆಹೋವನಿಗೆ ವಿಧೇಯವಾದ ಸ್ವಕೀಯ ಜನಾಂಗವಾಗಿ ಸದಾಕಾಲಕ್ಕಾಗಿ ದೃಢ ಮನಸ್ಸಿನಿಂದ ಒಪ್ಪಿಸಿ ಕೊಡುವದು ಉಚಿತವಾಗಿತ್ತು.

— —ವ. ೨೯. ಮರೆಯಾದವುಗಳು[೧] ನಮ್ಮ ದೇವನಾದ ಯೆಹೋವನಿಗೆ; ಬೈಲಾದವುಗಳು, ನಾವು ಈ ನೇಮದ ನುಡಿಗಳನ್ನೆಲ್ಲಾ ಎಂದೆಂದಿಗೂ ಮಾಡುವ ಹಾಗೆ[೨], ನಮಗೂ ನಮ್ಮ ಮಕ್ಕಳಿಗೂ ಬರುತ್ತವೆ.

೧. ಮರೆಯಾದವುಗಳು ಏನಂದರೆ: ೨೮ನೆ ಸಂಧಿಯಲ್ಲಿ ಇಸ್ರಯೇಲನವರ ಮುಂದಣ ಗತಿಯ ವಿಷಯವಾಗಿ ಬರದಿರುವಂಥ, ತಿಳು ಕೊಳ್ಳುವದಕ್ಕೆ ದುರ್ಲಭವಾದಂಥ, ಪ್ರವಾದನೆಗಳ ಪ್ರಸ್ತಾಪ ಮಾತ್ರವಲ್ಲ, ಯೆಹೋವನಲ್ಲಿರುವ ನಿಜ ಸಂಕಲ್ಪ; ಇದನ್ನು ತಾವು ತಿಳಿಯಲಾರೆವು.

೨. ಅಂದರೆ, ಅವಿಧೇಯರ ಶಾಪಗಳಿಗೆ ತಪ್ಪಿಸಿಕೊಳ್ಳುವ ಬಗ್ಯೆ ನಾವು ದೇವಚಿತ್ತವನ್ನು ಅತಿವಿಧೇಯವಾದ ಭಕ್ತ್ಯಾಸಕ್ತಿಯಿಂದ ನಡಿಸಿ ಪೂರೈಸ ಹಂಗಿಗರಾಗಿರುವದರಿಂದ, ಅದು ನಮಗೆ ನಿರ್ಮಲವಾಗಿಯೂ ಸ್ಪಷ್ಟವಾಗಿಯೂ ಪ್ರಕಟವಾಗಿದೆ.

ಮಾನಸಾಂತರವುಳ್ಳವರಿಗೆ ಕೃಪೆ ಆಶೀರ್ವಾದಗಳು ದೊರಕುವದು. ಮರಳಿ ಹೇಳಿರುವ ನೀತಿಬೋಧನೆಯೂ ಭಯವಚನವೂ. ಸ. ೩೦.

ವ. ೧. ಮತ್ತು ಆಗುವದೇನಂದರೆ: ನಾನು ನಿನ್ನ ಮುಂದೆ ಕೊಟ್ಟ ಆಶೀರ್ವಾದವೂ ಶಾಪವೂ ಆದ ಈ ನುಡಿಗಳೆಲ್ಲಾ ನಿನ್ನ ಮೇಲೆ ಬಂದಿರಲಾಗಿ, ನಿನ್ನ ದೇವನಾದ ಯೆಹೋವನು ನಿನ್ನನ್ನು ಹರವಿ ಹಾಕಿದ ಎಲ್ಲಾ ಜನಗಳ ನಡುವೆಯಲ್ಲಿ ನೀನು ನಿನ್ನ ಮನಸ್ಸಿಗೆ ತಂದು, ೨. ನಿನ್ನ ದೇವನಾದ ಯೆಹೋವನ ಕಡೆಗೆ ತಿರುಗಿ ಕೊಂಡು, ನೀನೂ ನಿನ್ನ ಮಕ್ಕಳೂ ನಾನು ಇಂದು ನಿನಗೆ ಬೆಸಸುವದೆಲ್ಲಾದರಲ್ಲಿ ನಿನ್ನ ಹೃದಯವೆಲ್ಲಾದರಿಂದಲೂ ನಿನ್ನ ಪ್ರಾಣವೆಲ್ಲಾದರಿಂದಲೂ ಅವನ ಶಬ್ದವನ್ನಾಲೈಸಿದರೆ, ೩. ನಿನ್ನ ದೇವನಾದ ಯೆಹೋವನು ನಿನ್ನ ಶೆರೆಯನ್ನು ತಿರುಗಿಸಿ[೧], ನಿನ್ನನ್ನು ಕನಿಕರಿಸಿ, ತಿ

ರುಗಿ ಕೊಂಡು, ನಿನ್ನ ದೇವನಾದ ಯೆಹೋವನು ನಿನ್ನನ್ನು ಚದರಿಸಿದ ಎಲ್ಲಾ ಜನಾಂ
ಗಗಳೊಳಗಿಂದ ನಿನ್ನನ್ನು ಒಟ್ಟುವಿಸುವನು. ೪. ಹರವಿದವರಾದ ನಿನ್ನವರು ಆಕಾಶದ
ಮೂಲೆಯಲ್ಲಿದ್ದರೂ, ಅಲ್ಲಿಂದ ನಿನ್ನ ದೇವನಾದ ಯೆಹೋವನು ನಿನ್ನನ್ನು ಒಟ್ಟುವಿಸು
ವನು[೨], ಅಲ್ಲಿಂದ ನಿನ್ನನ್ನು ಕೊಂಡು ಬರುವನು. ೫. ಇದಲ್ಲದೆ ನಿನ್ನ ದೇವನಾದ
ಯೆಹೋವನು ನಿನ್ನ ತಂದೆಗಳು ಸ್ವತಂತ್ರಿಸಿ ಕೊಂಡ[೩] ದೇಶಕ್ಕೆ ನಿನ್ನನ್ನು ಬರಲೀಸುವ
ನು. ನೀನು ಅದನ್ನು ಸ್ವತಂತ್ರಿಸಿ ಕೊಳ್ಳುವಿ. ಅವನು ನಿನ್ನನ್ನು ಮೇಲುಗೊಳ್ಳಿಸಿ,
ನಿನ್ನ ತಂದೆಗಳಿಗಿಂತ ನಿನ್ನನ್ನು ಹೆಚ್ಚಿಸುವನು. ೬. ಆಗ ನೀನು ನಿನ್ನ ದೇವನಾದ
ಯೆಹೋವನನ್ನು ನಿನ್ನ ಹೃದಯವೆಲ್ಲಾದರಿಂದಲೂ, ನಿನ್ನ ಪ್ರಾಣವೆಲ್ಲಾದರಿಂದಲೂ
ಪ್ರೀತಿ ಮಾಡಿ ಬದುಕುವ ಹಾಗೆ, ನಿನ್ನ ದೇವನಾದ ಯೆಹೋವನು ನಿನ್ನ ಹೃದಯವ
ನ್ನೂ ನಿನ್ನ ಬೀಜದ ಹೃದಯವನ್ನೂ ಪರಿಛೇದಿಸುವನು[೪]. ೭. ಆದರೆ ಈ ಶಾಪಗಳ
ನ್ನೆಲ್ಲಾ ನಿನ್ನ ದೇವನಾದ ಯೆಹೋವನು ನಿನ್ನ ಎಡರಾಳಿಗಳ ಮೇಲೆಯೂ, ನಿನ್ನನ್ನು
ಹಿಂದಟ್ಟಿದ ನಿನ್ನ ಹಗೆಗಾರರ ಮೇಲೆಯೂ ಈಯುವನು.

೧. ಇಬ್ರಿಯ ಮೂಲಗ್ರಂಥದಲ್ಲಿ "ನಿನ್ನ ಶೆರೆಗೆ ತಿರುಗುತ್ತಾನೆ" ಎಂದು ಬರೆದದೆ. ಅದೇನಂದರೆ, ಶೆರೆಯಲ್ಲಿ ಬಿದ್ದು ಇಕ್ಕಟ್ಟಿನಲ್ಲಿರುವ ನಿನ್ನನ್ನು ಕರುಣಿಸಿ, ನಿನಗೆ ತಿರಿಗಿ ಒತ್ತಾಸೆ ಮಾಡುತ್ತಾನೆ. ಮನಃಪೂರ್ವಕವಾದ ಪಶ್ಚಾತ್ತಾಪವೂ ಮಾನಸಾಂತರವೂ ಉಂಟಾದರೆ, ಕೃಪೆಯೂ ಪಾಪಪರಿಹಾರವೂ ದೊರಕದೆ ಹೋಗವು.

೨. ದುಷ್ಟರನ್ನು ಶಿಕ್ಷಿಸುವ ದೇವನೀತಿಗಿಂತ ದೇವಕೃಪೆಯು ಅಧಿಕವಾಗಿದೆ.

೩. ಯೆಹೋವನು ಇಸ್ರಯೇಲ ಜನಾಂಗವನ್ನು ಪುನರಂಗೀಕರಿಸಿ, ಅದರ ತಂದೆಗಳಿಗೆ ವಾಗ್ದತ್ತವಾದ ದೇಶದಲ್ಲಿ ತಿರಿಗಿ ಶೇರಿಸುವನೆಂಬದನ್ನು ಮುಂಪೇಳ್ಳುವಂಥ ಮೊದಲನೇ ಸ್ಥಳವು ಇದೇ. ಟಿಪ್ಪಣಿಗಾರರಲ್ಲಿ ಕೆಲವರು ಈ ವಚನಕ್ಕೆ ಆತ್ಮಿಕ ಅಭಿಪ್ರಾಯವನ್ನು ಕಲ್ಪಿಸಿ, ಇಸ್ರಯೇಲನವರು ತಿರಿಗಿ ಮಾನಸಾಂತರವಾಗಿ ಏಕ ಮನಸ್ಸಿನಿಂದ ಯೆಹೋವನಿಗೆ ಒಳ ಬೀಳುವರೆಂಬದು ಇಲ್ಲಿ ಪ್ರವಾದಿತವಾಗಿದೆಂತ, ವಿವರಿಸುವದು ಸರಿಯಲ್ಲ. ಯಾಕೆಂದರೆ ೨೮ನೆ ಸಂಧಿಯಲ್ಲಿ ಬರೆದಂಥ, ಇಸ್ರಯೇಲನವರು ಎಲ್ಲಾ ಜನಾಂಗಗಳಲ್ಲಿ ಚದರಿ ಹೋಗುವರೆಂಬಂಥ ಪ್ರವಾದನೆಯು ಅಕ್ಷರಾರ್ಥ ಪ್ರಕಾರವಾಗಿ ಪೂರ್ತಿಯಾದದ್ದು ಪ್ರತ್ಯಕ್ಷವಾಗಿರಲಾಗಿ, ಅದಕ್ಕೆ ಅಗಲಿಸಲಾಗದಂತೆ ಕೂಡಿದಂಥ ಜನಾಂಗದ ಪುನರಂಗೀಕಾರ ಪುನಸ್ಸಂಗಗಳ ಪ್ರವಾದನೆಗೆ ಬೇರೆ ವಿಧವಾದ ಟೀಕು ಹುಟ್ಟಿಸುವದು ಅನುಚಿತವಾಗಿ ತೋರುವದು.

೪. ಇಸ್ರಯೇಲ ಜನಾಂಗವು ಮರ್ಮವನ್ನರಿಯತೊಡಗಿ, ಪರಿಛೇದನೆಯಿಂದಲುಂಟಾದ ಒಡಂಬಡಿಕೆಯ ಪ್ರಮಾಣವನ್ನೆಲ್ಲಾ ಗ್ರಹಿಸಿ ಕೊಂಡು, ತನ್ನ ದೇವನಾದ ಯೆಹೋವನಿಗೆ ಮನೋಹರವಾದ ಪ್ರೀತಿಯಿಂದ ಪೂರ್ಣ ಹೃದಯದ ಸೇವೆಯನ್ನು ಮಾಡುವ ಕಾಲವು ಆಗಲೇ ಬರುವದು.

ವ. ೧೧. ಯಾಕೆಂದರೆ ನಾನು ಇಂದು ನಿನಗೆ ಬೆಸಸುತ್ತಿರುವ ಈ ಬೆಸಗವು ನಿನಗೆ
ಮರ್ಮವಾದದ್ದಲ್ಲ[೧], ದೂರವಾದದ್ದೂ ಅಲ್ಲ. ೧೨. ನಾವು ಅದನ್ನು ಮಾಡುವಂತೆ,
ನಮಗಾಗಿ ದಿವಕ್ಕೇರಿ, ಅದನ್ನು ನಮಗಾಗಿ ತಕ್ಕೊಂಡು, ನಮ್ಮನ್ನು ಕೇಳಿಸುವವರಾರು?

ಎಂಬುವ ಹಾಗೆ, ಅದು ದಿವದಲ್ಲಿಯದಲ್ಲ. ೧೩. ನಾವು ಅದನ್ನು ಮಾಡುವಂತೆ, ನಮ
ಗಾಗಿ ಕಡಲ ದಾಟಿ, ಅದನ್ನು ನಮಗಾಗಿ ತಕೊಂಡು, ನಮ್ಮನ್ನು ಕೇಳಿಸುವವರಾರು?
ಎಂಬುವ ಹಾಗೆ, ಅದು ಕಡಲಿನಾಚೆಯದಲ್ಲ[2]. ೧೪. ನುಡಿಯು ನಿನಗೆ ಶಾನೆ ಹತ್ತರ
ವಾಗಿದೆ. ಅದನ್ನು ಮಾಡುವ ಹಾಗೆ, ನಿನ್ನ ಬಾಯಲ್ಲಿಯೂ ನಿನ್ನ ಹೃದಯದಲ್ಲಿ
ಯೂ ಅದೆ[3].

೧. ನಿನ್ನ ಬುದ್ಧಿಯನ್ನು ಮಿಾರುವಷ್ಟು ಸುಪ್ರಾರ್ಥವಾದದ್ದಲ್ಲ.

೨. ದಿವದ ಕರ್ತನಾದ ಯೆಹೋವನು ತನ್ನ ಜನಾಂಗವನ್ನು ಮಿಚ್ರದಿಂದ ಕರಕೊಂಡು ಬಂದು, ಕೆಂಪು ಕಡಲ ದಾಟಿಸಿ, ಸೀನಾಯಿ ಬೆಟ್ಟದಲ್ಲಿ ಮೋಶೆಯ ಮುಖಾಂತರ ನೇಮವನ್ನು ಇಬ್ರಿಯರಿಗೆ ಇಬ್ರಿಯ ಭಾಷೆಯಿಂದ ನುಡಿಸಿದನಂತರ ಇಸ್ರಯೇಲನವರು ತಮಗೆ ಉಂಟಾದ ನೇಮಪ್ರಕಟಣೆಯಲ್ಲಿ ಕುಂದು ಕಾಣುವದೆಂದು ಅದರ ಮೇಲೆ ತಪ್ಪು ಹೊರಿಸಲಾಗಮಿಲ್ಲ.

೩. ದೇವನು ತನ್ನ ಚಿತ್ತವನ್ನು ಮನುಷ್ಯರಿಗೆ ನೇರ್ಪಾಗಿ ತಿಳಿಸಿದರಿಂದಲೂ, ತನ್ನ ವಾಕ್ಯವನ್ನು ದೇವವಾಕ್ಯವೆಂದು, ನಂಬಿ, ಅಂಗೀಕರಿಸುವವರಿಗೆ ಅದನ್ನು ಅನುಸರಿಸುವ ಸಾಮರ್ಥ್ಯವನ್ನು ದಯ ಮಾಡುವದರಿಂದಲೂ, ಅದನ್ನ ಕೈಕೊಳ್ಳುವದು ಸಾಧ್ಯವಾಗಿದೆಂಬದನ್ನು ಪೌಲನು ರೋಮಿಾ. ೧೦, ೬—೮ರಲ್ಲಿ ಚನ್ನಾಗಿ ಸಾಧಿಸುತ್ತಾನೆ.

ವ. ೧೫. ಕಂಡಿಯಾ, ಇಂದು ಜೀವವನ್ನೂ ಮೇಲನ್ನೂ ಮತ್ತು ಮರಣವನ್ನೂ
ಕೇಡನ್ನೂ ನಿನ್ನ ಮುಂದೆ ಇಟ್ಟಿದ್ಧೇನೆ[1]. ೧೬. ನಿನ್ನ ದೇವನಾದ ಯೆಹೋವನನ್ನು
ಪ್ರೀತಿ ಮಾಡಿ, ಅವನ ಮಾರ್ಗಗಳಲ್ಲಿ ನಡದು ಕೊಂಡು, ಅವನ ಬೆಸಗಗಳನ್ನೂ ಕಟ್ಟಳೆ
ಗಳನ್ನೂ ನ್ಯಾಯಗಳನ್ನೂ ಕಾದು ಕೊಂಡು, ನೀನು ಬದುಕಿ, ಹೆಚ್ಚಿ, ನೀನು ಸ್ವತಂತ್ರಿಸಿ
ಕೊಳ್ಳುವದಕ್ಕೆ ಬರುವ ದೇಶದಲ್ಲಿ ನಿನ್ನ ದೇವನಾದ ಯೆಹೋವನ ಆಶೀರ್ವಾದವನ್ನು
ಪಡದು ಕೊಳ್ಳ ಬೇಕೆಂತ, ನಾನಿಂದು ನಿನಗೆ ಬೆಸಸಿದ್ಧೇನಲ್ಲಾ? ೧೭. ಆದರೆ ನಿನ್ನ ಹೃದ
ಯವನ್ನು ತಿರುಗಿಸಿ, ಕೇಳದೆ, ಮೋಸ ಪಟ್ಟು, ಬೇರೆ ದೇವರುಗಳಿಗೆ ಎರಗಿ ಸೇವೆ ಮಾ
ಡುವಿಯಾದರೆ, ಮಡಿಯಲೇ ಮಡಿಯುವಿರೆಂದೂ, ೧೮. ನೀನು ಬಂದು, ಸ್ವತಂತ್ರಿಸಿ
ಕೊಳ್ಳುವದಕ್ಕೆ ಯೊರ್ದನವನ್ನು ದಾಟಿ ಹೋಗುವ ದೇಶದಲ್ಲಿ ನಿನ್ನ ದಿವಸಗಳು ನೀಡಾ
ಗವೆಂದೂ, ಇಂದು ನಿಮಗೆ ಸಾರಿದ್ಧೇನೆ. ೧೯. ಜೀವವನ್ನೂ ಮರಣವನ್ನೂ, ಮತ್ತು
ಆಶೀರ್ವಾದವನ್ನೂ ಶಾಪವನ್ನೂ ನಿನ್ನ ಮುಂದೆ ಇಟ್ಟಿದ್ಧೇನೆಂಬುವದಕ್ಕೆ ದಿವವನ್ನೂ
ಇಳೆಯನ್ನೂ ಇಂದು ನಿಮ್ಮ ಮೇಲೆ ಸಾಕ್ಷಿಗಳಾಗಿ ಕರೆಯುತ್ತೇನೆ. ೨೦. ಆದದರಿಂದ
ನಿನ್ನ ದೇವನಾದ ಯೆಹೋವನನ್ನು ಪ್ರೀತಿ ಮಾಡಿ, ಅವನ ಶಬ್ದವನ್ನು ಕೇಳಿ, ಅವನಿಗೆ
ಅಂಟಿ ಕೊಳ್ಳುವದಕ್ಕೆ, ನೀನೂ ನಿನ್ನ ಬೀಜವೂ ಬದುಕುವ ಹಾಗೆ, ಜೀವವನ್ನು ಆದು
ಕೋ[2]. ಯಾಕಂದರೆ ಅವನೇ ನಿನ್ನ ಜೀವವೂ[3], ಯೆಹೋವನು ನಿನ್ನ ತಂದೆಗಳಾದ
ಅಬ್ರಹಾಮ ಇಸಾಕ ಯಾಕೋಬರಿಗೆ ಕೊಡುತ್ತೇನೆಂದು ಆಣೆ ಇಟ್ಟ ಭೂಮಿಯ
ಲ್ಲಿ ನೀನು ವಾಸ ಮಾಡುವ ನಿನ್ನ ದಿನಗಳ ನೀಡುತನವೂ, ಆಗಿದ್ದಾನೆ.

೩೮೨ ಮೋಶೆ ತನ್ನ ಉದ್ಯೋಗ ಸಾಕು ಮಾಡಿ ಕೊಂಡದ್ದು.

ದ್ವಿತೀ. ೩೧, ೧–೭.

೧. ಮನಸ್ಸು ಬಂದ ಪರಿಯಾಗಿ ಆದು ಕೊಳ್ಳಿರಿ. ಆದರೆ ಅವಿಧೇಯರು ಆಶೀರ್ವಾದವನ್ನು ಪಡದು ಕೊಳ್ಳಲೂ, ಶಾಪಕ್ಕೆ ತಪ್ಪಿಸಿ ಕೊಳ್ಳಲೂ ಆಗದೆಂದು, ಎಲ್ಲರೂ ನಿಶ್ಚಯವಾಗಿ ತಿಳುಕೊಳ್ಳಲಿ.

೨. ಅವನ ಜೀವದ ಕಡೇ ಕಾಲದಲ್ಲಿ ಮೋಶೆಯ ಬೋಧನೆಗಳ ಔನ್ನತ್ಯವೂ ಆಸಕ್ತಿಯೂ ಅಧಿಕಾಧಿಕವಾಗುವದಲ್ಲದೆ, ನಿಜ ಮಕ್ಕಳನ್ನು ಹೃದಯದಲ್ಲಿಟ್ಟು ಕೊಂಡಿರುವ ತಂದೆಯ ಅಕ್ಕರೆಯಿಂದ ತನ್ನ ಜನಾಂಗವನ್ನು ಬಲಿದಾದರಿಸದಿರದ ಮಮತೆಯು ಅವನಲ್ಲಿ ಹೆಚ್ಚೆಚ್ಚಾಗಿ ಮೆರೆಯುವದು.

೩. ಈ ವಚನದ ಅಭಿಪ್ರಾಯವೇನಂದರೆ: ನಿನ್ನ ಜೀವವೂ ಅದರ ಪ್ರಮಾಣವೂ ಕರ್ತನ ಕೈಯಲ್ಲಿರುವದರಿಂದ, ನೀನು ವಾಗ್ದತ್ತದೇಶದಲ್ಲಿ ಸೇರಿ, ಬಹುಕಾಲ ಸೌಖ್ಯವಾಗಿರ ಬೇಕೆಂದು ಬೈಸುವಿಯಾದರೆ, ಕರ್ತನಿಗೆ ನಂಬಿಕೆಯುಳ್ಳವನಾಗಿದ್ದು, ಕೃಪಾಳುವಾದ ಸರ್ವಶಕ್ತನಾಗಿರುವ ನಿನ್ನ ಒಡೆಯನನ್ನು ಸದ್ಭಕ್ತನಾಗಿ ನೆರೆಮೆಚ್ಚಿಸ ಬೇಕು.

IV. ಮೋಶೆಯ ಕಡೆ ನುಡಿ ಆಶೀರ್ವಾದ ಮರಣಗಳ ವಿವರವು. ಸಂಧಿ ೩೧–೩೪.

ಮೋಶೆ ತನ್ನ ಉದ್ಯೋಗವನ್ನು ಸಾಕು ಮಾಡಿಕೊಂಡು, ಯೆಹೋಷುವನನ್ನು ತನ್ನ ಪ್ರತಿನಿಧಿಯಾಗಿ ನೇಮಕ ಮಾಡಿ, ನೇಮವನ್ನು ಬರೆದು, ಯಾಜಕರಿಗೆ ಒಪ್ಪಿಸಿ, ಅದನ್ನು ಏಳೇಳನೆ ವರ್ಷದಲ್ಲಿ ಜನಾಂಗದ ಕೂಟಕ್ಕೆ ಓದಿ ಸಾರ ಬೇಕೆಂದು ಅಪ್ಪಣೇ ಕೊಟ್ಟದ್ದು. ಯೆಹೋವನು ಮೋಶೆಗೆ ತನ್ನ ಅಂತ್ಯಗೀತವನ್ನು ಇಸ್ರಯೇಲ ಜನಾಂಗಕ್ಕೆ ವಿರೋಧವಾದ ಸಾಕ್ಷಿಗಾಗಿ ಬರೆದಿಡ ಬೇಕೆಂದು, ಬೆಸಸಿದ್ದು. ಸ. ೩೧.

ವ. ೧. ಬಳಿಕ ಮೋಶೆ ಹೋಗಿ, ಇಸ್ರಯೇಲನವರಿಗೆಲ್ಲಾ ಈ ನುಡಿಗಳನ್ನು ನು
ಡಿದು, ೨. ಅವರಿಗೆ ಹೇಳಿದ್ದು: ನಾನು ಇಂದು ನೂರ ಇಪ್ಪತ್ತು ವರ್ಷದವನು, ನಾನಿ
ನ್ನು ಹೋಗಲೂ ಬರಲೂ ಆರೆನು. ಇದಲ್ಲದೆ ಯೆಹೋವನು ನನಗೆ, ನೀನು ಈ
ಯೊರ್ದನವನ್ನು ದಾಟ ಬಾರದೆಂದು ಹೇಳಿದ್ದಾನೆ. ೩. ನಿನ್ನ ದೇವನಾದ ಯೆಹೋ
ವನು ತಾನು ನಿನ್ನ ಮುಂದೆ ದಾಟುವನು. ಅವನು ಈ ಜನಗಳನ್ನು ನಿನ್ನ ಮುಂದೆ
ಮಡಿಸುವನು. ನೀನು ಅವುಗಳನ್ನು ಸ್ವತಂತ್ರಿಸಿ ಕೊಳ್ಳುವಿ. ಯೆಹೋವನು ನುಡಿದಂತೆ,
ಈ ಯೆಹೋಷುವನು[1] ನಿನ್ನ ಮುಂದೆ ದಾಟುವನು. ೪. ಯೆಹೋವನು ಅಮೋ
ರಿಯರ ಅರಸರಾದ ಸೀಹೊನ ಓಗರಿಗೂ ಅವನು ಮಡಿಸಿದವರ ದೇಶಕ್ಕೂ ಮಾ
ಡಿದಂತೆ, ಅವರಿಗೆ ಮಾಡುವನು. ೫. ನಾನು ನಿಮಗೆ ಬಿಸಸಿದ ಬೆಸಗೆಲ್ಲಾದರ ಪ್ರಕಾ
ರ ನೀವು ಅವರಿಗೆ ಮಾಡುವ ಬಗ್ಯೆ ಯೆಹೋವನು ಅವರನ್ನು ನಿಮಗೆ ಒಪ್ಪಿಸಿ ಬಿಡು
ವನು. ೬. ಬಲಗೊಂಡು, ಆಣ್ಮೆಯಾಗಿರ್ರಿ! ಅಂಜದೆ, ಅವರಿಗೆ ಹೆದರದೆ ಇರ್ರಿ!
ಯಾಕಂದರೆ ನಿನ್ನ ದೇವನಾದ ಯೆಹೋವನೇ ನಿನ್ನ ಸಂಗಡ ಹೋಗುತ್ತಾನೆ. ಅವ
ನು ನಿನ್ನನ್ನು ಕೈ ಬಿಡನು, ನಿನ್ನನ್ನು ಬಿಟ್ಟು ಬಿಡನು. ೭. ಬಳಿಕ ಮೋಶೆ ಯೆಹೋಷು
ವನನ್ನು ಕರೆದು, ಎಲ್ಲಾ ಇಸ್ರಯೇಲನವರ ಕಣ್ಣಾರೆ ಅವನಿಗೆ ಹೇಳಿದ್ದು: ಬಲಗೊಂ

ದ್ವಿತೀ. ೩೧, ೮—೧೧.

ಡು, ಆಣ್ಮೆಯಾಗಿರು! ಯಾಕಂದರೆ ನೀನು ಈ ಜನಾಂಗದೊಡನೆ ಯೆಹೋವನು ಅ
ವರ ತಂದೆಗಳಿಗೆ ಕೊಡುತ್ತೇನೆಂದು ಆಣೆ ಇಟ್ಟ ದೇಶಕ್ಕೆ ಬರುವಿ. ನೀನು ಅದನ್ನು ಅ
ವರಿಗೆ ಸ್ವಾಸ್ಥ್ಯವಾಗೀಯುವಿ. ೮. ಇದಲ್ಲದೆ ಯೆಹೋವನು ತಾನು ನಿನ್ನ ಮುಂದೆ
ಹೋಗುತ್ತಾನೆ. ಅವನು ನಿನ್ನೊಡನೆ ಇರುವನು. ಅವನು ನಿನ್ನನ್ನು ಕೈಬಿಡನು, ನಿನ್ನ
ನ್ನು ಬಿಟ್ಟು ಬಿಡನು. ಅಂಜದೆ ಇರು! ಅಳರದೆ ಇರು! ೯. ಬಳಿಕ ಮೋಶೆ ಈ ನೇಮ
ವನ್ನು ಬರೆದು೨), ಯೆಹೋವನ ಒಡಂಬಡಿಕೆಯ ಪೆಟ್ಟಿಗೆಯನ್ನು ಹೊರುವಂಥ ಲೇವಿ
ಯ ಮಕ್ಕಳಾದ ಯಾಜಕರಿಗೂ ಇಸ್ರಯೇಲನವರ ಎಲ್ಲಾ ಹಿರಿಯರಿಗೂ ಅದನ್ನು
ಕೊಟ್ಟನು೩). ೧೦. ಮತ್ತು ಮೋಶೆ ಅವರಿಗೆ ಬೆಸಸಿದ್ದೇನಂದರೆ: ಏಳು ವರ್ಷದ ಕಡೆ
ಯಲ್ಲಿ, ಬಿಡುಗಡೆಯ ವರ್ಷದ ಕಾಲದಲ್ಲಿ ಗುಡಾರಗಳ ಹಬ್ಬದಲ್ಲಿ, ೧೧. ಇಸ್ರಯೇಲ
ನವರೆಲ್ಲರು ನಿನ್ನ ದೇವನಾದ ಯೆಹೋವನ ಮುಂದೆ, ಅವನು ಆದು ಕೊಳ್ಳುವ ಸ್ಥಳ
ದಲ್ಲಿ ಕಾಣಿಸಿ ಕೊಳ್ಳುವದಕ್ಕೆ ಬಂದಲ್ಲಿ ಈ ನೇಮವನ್ನು ಇಸ್ರಯೇಲನವರೆಲ್ಲರೆದುರಿ
ನಲ್ಲಿ ಅವರ ಕಿವಿಗಳಲ್ಲಿ ಓದಿ ಹೇಳು.

೧. ಒಂದು ಸ್ಥಳದಲ್ಲಿ ಯೆಹೋವನು ತಾನೆ ನಿನ್ನ ಮುಂದಾಗಿ ಹೋಗುತ್ತಾನೆಂದು, ಮತ್ತೊಂದು ಸ್ಥಳದಲ್ಲಿ (ಯೆಹೋವನ ಸಹಾಯವೆಂಬ ಅರ್ಥವುಳ್ಳ ಹೆಸರನ್ನು ಪಡಕೊಂಡ ಮೋಶೆಯ ಪ್ರತಿನಿಧಿಯಾದ) ಯೆಹೋಷುವನು ನಿನ್ನ ಮುಂದಾಗಿ ಹೋಗುತ್ತಾನೆಂದು, ಬರೆದದೆ. ಏನಂದರೆ ಕರ್ತನು ತಾನೇ ಜನಾಂಗದ ಅದೃಶ್ಯನಾದ ಸಹಾಯಕನಾಗಿದ್ದನು. ಆದರೆ ಯೆಹೋಷುವನು ಅದೃಶ್ಯಸಹಾಯದ ಹೊಣೆಗಾರನೂ ಮಧ್ಯವರ್ತಿಯೂ ಆಗಿದ್ದನು. ಅವನ ಹೆಸರಿನ ಘನವಾದ ಅರ್ಥವನ್ನಲ್ಲದೆ, ಯೆಹೋವನು ಅವನನ್ನು ಜನಾಂಗನಾಯಕೋದ್ಯೋಗಕ್ಕೆ ಕರೆದದ್ದು, ಮೋಶೆಯ ಮರಣದ ಮೇಲೆಯೂ ಕರ್ತನು ತನ್ನ ಜನಾಂಗವನ್ನು ಪರಿಪಾಲನೆ ಮಾಡುವನೆಂಬ ನಂಬಿಕೆಯನ್ನು ಭಕ್ತರಾದ ಇಸ್ರಯೇಲನವರಲ್ಲಿ ಹುಟ್ಟಿಸ ಯುಕ್ತವಾಗಿತ್ತು.

೨. ಮೋಶೆ ಈ ಗ್ರಂಥದಲ್ಲಿ ಪುನರ್ಲಿಖಿತವಾದ ಸಂಗತಿಗಳನ್ನೂ, ಹೊಸ್ತಾಗಿ ಕೇರಿಸಿದ ಪ್ರಸ್ತಾಪಗಳನ್ನೂ ಎಲ್ಲಾನ್ನು ಈ ವೇಳೆಯಲ್ಲಿ ಬರೆದನು. ಮುಂಚಿನ ಗ್ರಂಥಗಳ ರಚನೆ ಇದಕ್ಕಿಂತ ಮೊದಲು ಉಂಟಾಗಿತ್ತು. ಪರಿಶುದ್ಧ ಬರಹದಲ್ಲಿ ಮೋಶೆಯ ಹೆಸರುಳ್ಳವುಗಳಾಗಿ ಶೇರಿದ ಐದು ಗ್ರಂಥಗಳ ಕರ್ತನು ಮೋಶೆಯೇ ಎಂಬದಕ್ಕೆ ಈ ವಚನವೂ, ವ. ೨೪—೨೬ರಲ್ಲಿ ಬರೆದ ಮಾತುಗಳೂ ದೃಷ್ಟಾಂತವಾಗಿವೆ.

೩. ಇಸ್ರಯೇಲ ಜನಾಂಗದಲ್ಲಿ ಸ್ಥಾಪಿತವಾದ ಸಭೆಯ ಧರ್ಮವೂ ರಾಜ್ಯಧರ್ಮವೂ ಅಧಿಕ ಪರಸ್ಪರ ಸಂಬಂಧವಾಗಿವೆಂತಲೂ, ಲೇವಿಯವರೂ ಹಿರಿಯರಾದ ಅಧಿಕಾರಿಗಳೂ ದೇವನೇಮಕ್ಕೆ ಅನುಸಾರವಾಗಿಯೇ ತಮ್ಮ ಉದ್ಯೋಗವನ್ನು ನಡಿಸ ಬೇಕೆಂತಲೂ, ಗೊತ್ತಾಗುವ ಹಾಗೆ, ಮೋಶೆಯು ತಾನು ಬರೆದ ನೇಮವನ್ನು ದೇವರ ಅಪ್ಪಣೆಯಿಂದ ಪ್ರತಿಷ್ಠೆಯಾಗಿರುವ ಹಿರಿಯರಿಗೂ ಯಾಜಕರಿಗೂ ಒಪ್ಪಿಸುವದು ಉಚಿತವಾಗಿತ್ತು. ಮತ್ತು ಮಕ್ಕಳೂ, ಮಕ್ಕಳ ಮಕ್ಕಳೂ, ಇಸ್ರಯೇಲನವರ ಸಹವಾಸಿಗಳಾದ ಪರಜಾತಿಯವರೂ, ದೇವನಿತ್ತ ನೇಮವನ್ನು ಪರಿಶುದ್ಧವೆಂದೆಣಿಸಿ ಕೊಂಡು, ತಪ್ಪಿಲ್ಲದೆ ಕೈಕೊಳ್ಳುವ ಉದ್ದಿಶ್ಯವಾಗಿ, ಏಳೇಳನೆ ವರ್ಷದಲ್ಲಿ ಸಭೆಯ ಕೂಟದ ಮುಂದೆ ಅದು ಪ್ರಕಟವಾಗಿ ಪಠಣೆಯಾಗ ಬೇಕೆಂಬ ಕಟ್ಟಳೆಯುಂಟಾಯಿತು. ವ. ೧೦. ಮುಂ. ಮೋಶೆ ನೇಮಗ್ರಂಥವನ್ನು ಮೊದಲಾಗಿ ಯಾಜಕರ ಮತ್ತು ಹಿರಿಯರ ಕೈಗೆ ಒಪ್ಪಿಸಿ ಕೊಟ್ಟನಂತರ, ಅವನು ಅದನ್ನು

೩೮೪ ಯೆಹೋಷುವನ ನೇಮಕ. ನೇಮುವನ್ನು ಸಾರ ಬೇಕೆಂಬ ಅಪ್ಪಣೆ.

ದ್ವಿತೀ. ೩೧, ೧೪—೨೧.

ಇನ್ನೊಂದು ಸಲ ಹಿರಿಯರೂ ಸಭೆಯವರೂ ಕೂಡಿ ಕೊಳ್ಳದೆ ಇದ್ದ ಲೇವಿಯುವರ ವಶ ಕೊಟ್ಟನೆಂದು, ವ. ೨೪—೨೬ರಲ್ಲಿ ಬರೆದದೆ. ಇದರಿಂದ ಮೋಶೆ ತದನಂತರ ನೇಮುಗ್ರಂಥವನ್ನು ತಿರಿಗಿ ತಕ್ಕೊಂಡು, ವ. ೧೪—೨೩ರಲ್ಲಿ ಕಾಣುವ ವೆಜ್ಜುಗವನ್ನು ಬರೆದು ಶೇರಿಸಿದನೆಂದು, ತಕ್ಕಷ್ಟು ನಿಶ್ಚಯವಾಗಿ ತೋರುವದು.

ವ. ೧೪. ಬಳಿಕ ಯೆಹೋವನು ಮೋಶೆಗೆ ಹೇಳಿದ್ದು: ಇಗೋ, ನಿನ್ನ ಸಾಯೋ
ದಿನಗಳು ನೆರೆಯಾಗಿವೆ. ಯೆಹೋಷುವನನ್ನು ಕರೆ. ಒಡಂಬಡಿಕೆಯ ಗುಡಾರದಲ್ಲಿ
ನಿಂತು ಕೊಳ್ಳಿರಿ. ಆಗಲವನಿಗೆ ಅಪ್ಪಣೆ ಕೊಡುವೆನು. ಮೋಶೆ ಯೆಹೋಷುವರು
ಹೋಗಿ, ಒಡಂಬಡಿಕೆಯ ಗುಡಾರದಲ್ಲಿ ನಿಂತು ಕೊಳ್ಳಲಾಗಿ, ೧೫. ಯೆಹೋವನು
ಗುಡಾರದಲ್ಲಿ ಮೇಘಸ್ತಂಭದಿಂದ ಕಾಣಿಸಿ ಕೊಂಡನು; ಹ್ಯಾಗಂದರೆ ಮೇಘಸ್ತಂಭವು
ಗುಡಾರದ ಬಾಗಲಿನ ಬಳಿಯ ನಿಂತಿತು[೧]. ೧೬. ಆಗ ಯೆಹೋವನು ಮೋಶೆಗೆ
ಹೇಳಿದ್ದು: ಇಗೋ, ನೀನು ನಿನ್ನ ತಂದೆಗಳ ಕೂಡ ಮಲಗುವಿ. ಮತ್ತು ಈ ಜನಾಂ
ಗವು ಎದ್ದು, ಅದು ಒಳಗೆ ಬರುವ ದೇಶದ ಬೇರೆ ದೇವರುಗಳ ಹಿಂದೆ ಹಾದರವಾ
ಡಿ, ನನ್ನನ್ನು ಬಿಟ್ಟು ಬಿಟ್ಟು, ನಾನು ಅದರ ಸಂಗಡ ಕಟ್ಟಿದ ಒಡಂಬಡಿಕೆಯನ್ನು ಮು
ರಿಯುವದು. ೧೭. ಅಂದು ನನ್ನ ಶಿಟ್ಟು ಅದರ ಮೇಲೆ ಹೊತ್ತುವದು. ನಾನು ಅ
ದನ್ನು ಬಿಟ್ಟು ಬಿಟ್ಟು, ನನ್ನ ಮೋರೆಯನ್ನು ಅದಕ್ಕೆ ಮರೆ ಮಾಡುವೆನು. ಅದು ತಿಂ
ಡಿಗಾಗುವದು. ಶಾನೆ ಕೇಡುಗಳೂ ಇಕ್ಕಟ್ಟುಗಳೂ ಅದನ್ನು ಹಿಡಿಯುವವು. ಅಂದು
ಅದು, ನನ್ನ ದೇವನು ನನ್ನ ನಡುವೆಯಲ್ಲಿಲ್ಲದ ಕಾರಣ ಈ ಕೇಡುಗಳು ನನ್ನನ್ನು ಹಿ
ಡಿದವಲ್ಲಾ[೨] ಎಂದು, ಹೇಳುವದು. ೧೮. ಆದರೆ ನಾನು ಅದು ಮಾಡಿದ ಎಲ್ಲಾ
ಕೆಟ್ಟತನಕ್ಕಾಗಿಯೂ, ಬೇರೆ ದೇವರುಗಳ ಕಡೆಗೆ ತಿರುಗಿದ ಸಲವಾಗಿಯೂ, ಅಂದು
ನನ್ನ ಮೋರೆಯನ್ನು ಮರೆ ಮಾಡಲೇ ಮರೆ ಮಾಡುವೆನು. ೧೯. ಈಗ ಈ ಹಾಡನ್ನು
ನಿಮಗೆ ಬರೆದು ಕೊಳ್ಳಿರಿ. ಇಸ್ರಯೇಲನ ಮಕ್ಕಳಿಗೆ ಅದನ್ನು ಕಲಿಸು. ಇಸ್ರಯೇಲ
ನ ಮಕ್ಕಳ ಮೇಲೆ ಈ ಹಾಡು ನನಗೆ ಸಾಕ್ಷಿಯಾಗಿರುವ ಹಾಗೆ[೩], ಅದನ್ನು ಅವರ
ಬಾಯಲ್ಲಿರಿಸು[೪]. ೨೦. ನಾನು ಅದರ ತಂದೆಗಳಿಗೆ ಆಣೆ ಇಟ್ಟಂಥ, ಹಾಲೂ
ಜೇನೂ ಹರಿಯುವಂಥ ಭೂಮಿಗೆ ಅದನ್ನು ಬರಲೀಸುವೆನು. ಮತ್ತು ಉಂಡು,
ತುಂಬಿ, ಕೊಬ್ಬಿ, ಬೇರೆ ದೇವರುಗಳ ಕಡೆಗೆ ತಿರುಗಿ ಕೊಂಡು, ಅವನ್ನ ಸೇವಿಸಿ, ನನ್ನ
ನ್ನು ಕೆಣಕಿ, ನನ್ನ ಒಡಂಬಡಿಕೆಯನ್ನು ಮುರಿಯುವದು. ೨೧. ಮತ್ತು ಆಗುವದೇ
ನಂದರೆ: ಬಹಳ ಕೇಡುಗಳೂ ಇಕ್ಕಟ್ಟುಗಳೂ ಅದನ್ನು ಹಿಡಿದಾಗ, ಈ ಹಾಡು ಅದ
ರ ಮುಂದೆ ಸಾಕ್ಷಿಯಾಗಿ ಮಾರ್ನುಡಿಯುವದು; ಯಾಕೆಂದರೆ ಅದು ಅದರ ಬೀಜದ
ಬಾಯಿಗೆ ಮರತು ಹೋಗದು. ನಾನು ಆಣೆ ಇಟ್ಟ ದೇಶಕ್ಕೆ ಅದನ್ನು ಬರಲೀಸುವ
ದಕ್ಕಿಂತ ಮುಂಚೆ ಅದು ಇಂದು ಮಾಡುವ ಕಲ್ಪನೆಗಳನ್ನು ಬಲ್ಲೆನಲ್ಲ? ೨೨. ಬಳಿಕ

ಮೋಶೆ ಅಂದಿನಲ್ಲಿ ಈ ಹಾಡು[೫] ಬರೆದು, ಇಸ್ರಯೇಲನ ಮಕ್ಕಳಿಗೆ ಕಲಿಸಿದನು.
೨೩. ಮತ್ತು (ಯೆಹೋವನು) ನೂನನ ಮಗನಾದ ಯೆಹೋಷುವನಿಗೆ ಬೆಸಸಿ ಹೇಳಿದ್ದು: ಬಲಗೊಂಡು ಆಣ್ಮೆಯಾಗಿರು; ಯಾಕೆಂದರೆ ನೀನು ಇಸ್ರಯೇಲನ ಮಕ್ಕಳನ್ನು ನಾನವರಿಗೆ ಆಣೆ ಇಟ್ಟ ದೇಶಕ್ಕೆ ಬರಲೀಸುವಿ. ಮತ್ತು ನಾನು ನಿನ್ನ ಸಂಗಡಲಿರುವೆನು.

೧. ದೇವಸನ್ನಿಧಿಯ ವಿಶೇಷವಾದ ಈ ಪ್ರಕಟಣೆಯಿಂದ ಯೆಹೋಷುವನು ಜನಾಂಗನಾಯಕೋದ್ಯೋಗಕ್ಕೆ ಆಯಿಕೆಯಾದದರ ಆಶ್ಚರ್ಯವಾದ ದೃಢೀಕರಣವುಂಟಾಯಿತು.

೨. ಇಲ್ಲಿ ಬರೆದಿರುವಂಥ ಶಿಕ್ಷೆಗಳು ಪಶ್ಚಾತ್ತಾಪವನ್ನೂ ಮಾನಸಾಂತರವನ್ನೂ ಇಸ್ರಯೇಲನವರಲ್ಲಿ ಹುಟ್ಟಿಸುವ ಉದ್ದಿಶ್ಯವಾಗಿ ಅವರು ಮಾಡಿದ ದೇವದ್ರೋಹಗಳಿಗಾಗಿಯೂ ದೆವ್ವಪೂಜೆಗಳಿಗಾಗಿಯೂ ಅವರ ಮೇಲೆ ಬಿದ್ದವು.

೩. ಈ ಹಾಡಿನ ಪದಗಳನ್ನು ಬಾಯಿಪಾಠ ಮಾಡಿದವರು, ತಮಗೆ ದೊರಕಿದ ನೀತ್ಯುಪದೇಶವು ಕಡಿಮೆಯಾದದ್ದೆಂದು, ನೆವನ ಹೇಳಲಾರದಿದ್ದರು.

೪. "ಅದನ್ನು ಅವರ ಬಾಯಿಯಲ್ಲಿರಿಸು" ಅಂದರೆ, ಬಾಯಿಪಾಠ ಮಾಡಿಸಿ, ಗಾನವನ್ನೂ ಕಲಿಸು. ಈ ಹಾಡು ೩೨ ಸಂಧಿಯಲ್ಲಿ ವಿವರವಾಗಿ ಬರೆದದೆ.

೫. ಈ ಮಾತಿನಿಂದ ಮೋಶೆ ಈ ಹಾಡಿನ ಕಡೆವರೆಗೆ ಐದು ಗ್ರಂಥಗಳನ್ನು ಬರೆದನೆಂಬದು ಪ್ರಾಮಾಣ್ಯವಾಗಿದೆ. ಆಶೀರ್ವಾದವನ್ನು ಯೆಹೋಷುವನು ಮೋಶೆಯ ಬಾಯಿಂದ ಕೇಳಿ ಬರೆದನೋ ಏನೋ ನೆಲವರವಾಗಿರುವದಿಲ್ಲ. ಹ್ಯಾಗಾದರೂ ಈ ಗ್ರಂಥದ ಕಡೇ ಸಂಧಿಯನ್ನು ಯೆಹೋಷುವನು, ಮೋಶೆ ತೀರಿದ ಬಳಿಕ, ಬರೆದಿರ ಬೇಕು.

ವ. ೨೪. ಇದಲ್ಲದೆ ಮೋಶೆ ಈ ನೇಮದ ನುಡಿಗಳನ್ನು ಪುಸ್ತಕದಲ್ಲಿ ಬರೆದು,
ತೀರ ಮುಗಿಸಲು, ಆದದ್ದೇನಂದರೆ: ೨೫. ಮೋಶೆ ಯೆಹೋವನ ಒಡಂಬಡಿಕೆಯ
ಪೆಟ್ಟಿಗೆಯನ್ನು ಹೊರುವ ಲೇವಿಯವರಿಗೆ ಬೆಸಸಿದ್ದೇನಂದರೆ: ೨೬. ಈ ನೇಮದ
ಪುಸ್ತಕವನ್ನು ತಕ್ಕೊಂಡು[೧], ನಿಮ್ಮ ದೇವನಾದ ಯೆಹೋವನ ಒಡಂಬಡಿಕೆಯ ಪೆಟ್ಟಿಗೆಯ ಒಂದು ಪಕ್ಕೆಯಲ್ಲಿ[೨] ಇಡಿರಿ. ಅದು ಅಲ್ಲಿ ನಿಮ್ಮ ಮೇಲೆ ಸಾಕ್ಷಿಗಾಗಿರಲಿ.
೨೭. ಯಾಕಂದರೆ ನಿನ್ನ ಮಾರ್ಮಲತಗಳನ್ನೂ ನಿನ್ನ ಘಟ್ಟಿ ಕತ್ತನ್ನೂ ನಾನು ಬಲ್ಲೆನು. ಇಗೋ, ನಾನಿನ್ನು ನಿಮ್ಮೊಡನೆ ಬದುಕುತ್ತಿರುವ ಇಂದಿನಲ್ಲಿ ಯೆಹೋವನಿಗೆ
ಮಾರ್ಮಲತವರಾದಿರಿ; ನನ್ನ ಮರಣದ ಮೇಲೆ ಇನ್ನೇನಾಗುವದು? ೨೮. ನಿಮ್ಮ
ಕುಲಗಳ ಎಲ್ಲಾ ಹಿರಿಯರನ್ನೂ ನಿಮ್ಮ ಅಧಿಕಾರಿಗಳನ್ನೂ ನನ್ನ ಬಳಿಯ ಕೂಟಕ್ಕೆ ಕರೆಯಿರಿ. ಬಳಿಕ ಈ ನುಡಿಗಳನ್ನು ಅವರ ಕಿವಿಗಳಲ್ಲಿ ನುಡಿದು, ದಿವವನ್ನೂ ಇಳೆಯನ್ನೂ
ಅವರ ಮೇಲೆ ಸಾಕ್ಷಿಗೆ ಕರೆಯುವೆನು. ೨೯. ಯಾಕಂದರೆ ನನ್ನ ಮರಣದ ಮೇಲೆ
ನಿಮ್ಮ ನಡೆಯನ್ನು ಕೆಡಿಸೇ ಕೆಡಿಸುವಿರೆಂದೂ, ನಾನು ನಿಮಗೆ ಬೆಸಸಿದ ಹಾದಿಯಿಂದ ತೊಲಗುವಿರೆಂದೂ, ಬಲ್ಲೆನು. ಬಳಿಕ ನೀವು ಯೆಹೋವನ ಮುಂದೆ ಕೆಟ್ಟದ್ದನ್ನು

ಮಾಡಿ, ನಿಮ್ಮ ಕೈಕೆಲಸಗಳಿಂದ ಅವನನ್ನು ಸಿಟ್ಟುಗೊಳಿಸಿದ ಸಲವಾಗಿ ದಿನಗಳ ಕಡೆಯಲ್ಲಿ ಕೇಡು ನಿಮಗೆ ಎದುರ್ಬರುವದು. ೩೦. ಆಗ ಮೋಶೆ ಇಸ್ರಯೇಲನ ಕೂಟವೆಲ್ಲಾದರ ಕಿವಿಗಳಲ್ಲಿ ಈ ಹಾಡಿನ[೩] ನುಡಿಗಳನ್ನು ತೀರ ನುಡಿದನು.

೧. ೨೩ನೆ ವಚನದ ವರೆಗೆ ಹೊಸ ಪ್ರಸ್ತಾಪವನ್ನು ಬರದು ಕೂಡಿಸಿದ ಮೋಶೆ ಗ್ರಂಥವನ್ನು ಎರಡನೆ ಸಲ ಲೇವಿಯವರಿಗೆ ಒಪ್ಪಿಸಿ ಕೊಟ್ಟನು.

೨. ಸಾಕ್ಷೀ ಪೆಟ್ಟಿಗೆಯಲ್ಲಿ ದಶವಾಕ್ಯ ಲಿಖಿತವಾದ ಎರಡು ಶಾಸನಗಳು ಇದ್ದವಷ್ಟೆ. ಆದ್ದರಿಂದ ಗ್ರಂಥವನ್ನು ಪೆಟ್ಟಿಗೆಯ ಹೊರಗಣ ಒಂದು ಪಕ್ಕೆಯಲ್ಲಿ ಇರಿಸಿದನು.

೩. ಅದು ನಮ್ಮ ಗ್ರಂಥದ ೩೨ನೆ ಸಂಧಿಯಲ್ಲಿ ಬರೆದದೆ.

ಮೋಶೆಯ ಜೀವಾಂತ್ಯಕಾಲಗೀತ.

ಅವನ ಮರಣದ ವಿಷಯವಾದ ಅಪ್ಪಣೆ. ಸ. ೩೨, ೧—೪೪.

ಪೀಠಿಕೆ. ವ. ೧. ೨.

ವ. ೧. ಆಲೈಸು, ದಿವವೇ, ನುಡಿಯುತ್ತೇನೆ. ಮತ್ತು ಇಳೆಯು ನನ್ನ ಬಾಯ ಮಾತುಗಳನ್ನು ಕೇಳಲಿ[೧]. ೨. ನನ್ನ ಕಲಿಕೆಯು ಮಳೆಯಂತೆ[೨] ಸುರಿಯಲಿ. ನನ್ನ ಮಾತು ಮಂಜಿನಂತೆಯೂ, ಹಸುರಿನ ಮೇಲೆ ಬೀಳುವ ತುಂಪರೆಯಂತೆಯೂ, ಪಲ್ಯದ ಮೇಲೆ ಬೀಳುವ ಪೇರ್ಮಳೆಗಳಂತೆಯೂ ಗರೆಯಲಿ.

೧. ಅಧಿಕ ಭಕ್ತ್ಯಾಸಕ್ತಿಯಿಂದ ಘನತರವಾದ ನುಡಿಗಳನ್ನು ಉಚ್ಚರಿಸಲೆಸಗುತ್ತಿರುವ ಮೋಶೆ ತನ್ನ ಮಾತುಗಳನ್ನು ಕೇಳುವದಕ್ಕೂ, ಇಸ್ರಯೇಲನವರು ಯೆಹೋವನಿಗೆ ತಿರುಗಿ ಬಿದ್ದ ಪಕ್ಷದಲ್ಲಿ ಅವರ ಮೇಲೆ ಅಪರಾಧ ಹೊರಿಸಿ, ಆಜ್ಞೋ ನಿರ್ಣಯಿಸುವದಕ್ಕೂ ದಿವ ಇಳೆಗಳನ್ನು ಸಾಕ್ಷಿಗೆ ಕರೆಯುತ್ತಾನೆ.

೨. ಮೂಡಣ ತೆಂಕಣ ದಿಕ್ಕುಗಳ ದೇಶಗಳ ನಿವಾಸಿಗಳಿಗೆ ಬಿಸಿಲಿನ ತಾಪ ಹೋಗಲಾಡಿಸುವಂಥ, ಬಳಲಿದ ಪ್ರಾಣಿಗಳನ್ನು ಮಡುವಂಥ, ಗದ್ದೆ ಹೊಲ ಮುಂತಾದ ಭೂಮಿಗಳಲ್ಲಿ ಸಾರ ಕೊಟ್ಟು ಬೆಳೆ ಹುಟ್ಟಿಸುವಂಥ ಮಳೆಯ ಉಪಮೆ ಅತಿ ಮನೋಹರವಾದದ್ದು. ಇಲ್ಲಿ ಬರೆದಿರುವ ಅಭಿಪ್ರಾಯವು ಮೋಶೆಗೆ ಅನುಚಿತವಾದದ್ದೆಂದು ನೆನಸಲಾಗದು. ಯಾಕೆಂದರೆ ಮನುಷ್ಯರ ಪಾಪಕ್ಕೆ ನೇಮದಿಂದ ಆಜ್ಞೆಯು ನಿರ್ಣಯ ಮಾಡುವ ದೇವವಾಕ್ಯವು ವಿಶ್ವಾಸಿಗಳಿಗೆ ಜೀವವುಳ್ಳ ಕೃಪೆಯ ಮರ್ಮವನ್ನೂ ಪ್ರಕಟ ಮಾಡುತ್ತದೆ. ಕಡೇ ಎರಡು ವಚನಗಳಲ್ಲಿ ಸೇರಿದ ನೂತನ ಭಾವನೆಗಳು ದೇವಜನಾಂಗದ ಪರಿಶುದ್ಧ ಕಾವ್ಯಗಳಲ್ಲಿಯೂ, ಇತ್ತಣ ಕಾಲದ ಪ್ರವಾದಿಗಳ ನುಡಿಗಳಲ್ಲಿಯೂ ಪ್ರತಿಧ್ವನಿಯೋಪಾದಿಯಾಗಿ ತಿರಿಗಿ ತಿರಿಗಿ ಕೇಳಿಸಿಕೊಳ್ಳುತ್ತವೆ. ಯೆಹೋಶು. ೧, ೩. ಯೆರೆ. ೧೧, ೧೨. ಮೀಕ. ೬, ೩. ೪.

ನಂಬಿಕೆಯುಳ್ಳ ಪರಿಶುದ್ಧನಾದ ಒಡಂಬಡಿಕೆಯ ದೇವನ ಸ್ತೋತ್ರ. ವ. ೩. ೪.

ವ. ೩. ಯಾಕಂದರೆ ಯೆಹೋವನ ಹೆಸರನ್ನು ಕರೆಯುತ್ತೇನೆ: ನಮ್ಮ ದೇವನಿಗೆ ದೊಡ್ಡತನವನ್ನು ಕೊಡಿರಿ! ೪. ಅವನು ಬಂಡೆ[೧]. ಅವನ ಕೆಲಸ ಸಂಪೂರ್ಣವಾದದ್ದು.

ದ್ವಿತೀ. ೩೨, ೫—೯.

ಅವನ ಮಾರ್ಗಗಳೆಲ್ಲಾ ನ್ಯಾಯ. ದೇವನು ನಂಬಿಕೆಯುಳ್ಳವನು, ಮೋಸವಿಲ್ಲದವನು. ಅವನು ನೀತಿವಂತನೂ ನೆಟ್ಟಾನವನೂ೨) ಆಗಿದ್ದಾನೆ.

೧. ಅಚಲನೆಯಾದ ಬಂಡೆಯು ನಿರಂತರವಾಗಿ ತನ್ನ ಮಾತು ಕೈಕೊಳ್ಳುವ ಸರ್ವತ್ರಾಣಿಯಾದ ದೇವರ ಭಾವಕ್ಕೆ ಯುಕ್ತವಾದ ಸಾಮ್ಯವಾಗೆದೆ.

೨. ಇಬ್ರಿಯ ಶಬ್ದವಾದ ಯಾಷಾರ್ ಎಂಬದಕ್ಕೆ ನೆಟ್ಟಾನ ಎಂಬ ಅರ್ಥವದೆ. ಪ್ರಸಂ. ೭, ೩೦ರಲ್ಲಿ ಮನುಷ್ಯನು ನೆಟ್ಟಾನವನಾಗಿ ನಿರ್ಮಾಣವಾದನೆಂಬದು ಅವನ ಆದಿ ಸ್ಥಿತಿಯ ಮುಖ್ಯ ಲಕ್ಷಣವಾಗಿ ಹೇಳಿರುತ್ತದೆ. ಸೈತಾನನ ಗುಣವು ಇದಕ್ಕೆ ಪೂರ್ಣ ವಿರೋಧವಾದದ್ದೆಂದು, ಯೇಸು ಯೋಹಾ. ೮, ೪೪ರಲ್ಲಿ ಹೇಳುತ್ತಾನೆ.

ಇಸ್ರಯೇಲನ ಅಪರಾಧ. ವ. ೫. ೬.

ವ. ೫. ಅವನ ಮಕ್ಕಳಲ್ಲದಂಥ, ಮಾಸಿ ಕೊಂಡಂಥ, ಅಕಟವಿಕಟವಾದ ವಕ್ರ ಸಂತತಿಯು ನಡೆಯನ್ನು ಕೆಡಿಸಿ ಕೊಂಡದೆ೧). ೬. ಯೆಹೋವನಿಗೆ ಇದನ್ನು ಸಲ್ಲಿಸುತ್ತೀರೋ? ಬುದ್ಧಿಯಿಲ್ಲದ ಹೆಡ್ಡ ಜನಾಂಗವೇ! ನಿನ್ನ ತಂದೆಯೂ೨) ನಿನ್ನನ್ನು ಕಲಿಸಿದವನೂ ಅವನಲ್ಲವೋ? ಅವನು ನಿನ್ನನ್ನು ಮಾಡಿ, ನೆಲಸಿದ್ದಾನೆ.

೧. ಯೆಹೋವನು ಇಸ್ರಯೇಲನ ಜನಾಂಗಕ್ಕೆ ತನ್ನನ್ನು ನೀತಿವಂತನಾಗಿಯೂ ನೆಟ್ಟಾನವನಾಗಿಯೂ ತೋರಿಸುತ್ತಾ ಬಂದರೂ, ಅದು ತನ್ನ ಒಡೆಯನಾದ ದೇವನಿಗೆ ವಿಧೇಯವಾಗಿರಲೊಲ್ಲದು. ತಂದೆಯ ನಂಬುಳಿತನವು ತಾನೆ ದೊಡ್ಡದಾಗಿದ್ದರೂ, ಮಕ್ಕಳ ಅಕಟವಿಕಟತನವು ಇನ್ನು ಹೆಚ್ಚಾಗಿದೆ.

೨. ಉಳಿದ ಎಲ್ಲಾ ಜನಾಂಗಗಳಲ್ಲಿ ಇಸ್ರಯೇಲ ಜನಾಂಗವು ಆಯಿಕೆಯಾದದ್ದೂ, ಇದಕ್ಕಾಗಿಯೇ ದೇವನಿಂದ ನಿರ್ಮಾಣವಾದದ್ದೂ, ಆಗಿದೆ. ಹ್ಯಾಗೆಂದರೆ ಯೆಹೋವನು ಇಸ್ರಯೇಲನವರನ್ನು ಸ್ವಕೀಯ ಜನರಾಗಿ ಆದು ಕೊಂಡು, ಮಿಚ್ರದಿಂದ ಬಿಡುಗಡೆ ಮಾಡಿ, ಅವರ ಸಂಗಡ ಒಡಂಬಡಿಕೆ ಕಟ್ಟಿಕೊಂಡ ಪಕ್ಷದಲ್ಲಿ, ನೇಮದ ಮರೆಯಲ್ಲಿಯಾದರೂ ವಿಶ್ವಾಸಕ್ಕೆ ಗೋಚರವಾಗ ತಕ್ಕ, ದಿವ್ಯ ಕೃಪೆಯನ್ನು ನಂಬಿ ಕೈಕೊಳ್ಳುವವರೆಲ್ಲರಿಗೆ ಅಚ್ಚ ತಂದೆಯಾಗಿದ್ದನು. ಇನ್ನೂ ವಿಶೇಷವಾದಂಥ, ಸಿದ್ಧಿಪೂರ್ಣವಾದಂಥ ರೀತಿಯಿಂದ ದೇವನು ಯೇಸು ಕ್ರಿಸ್ತನಲ್ಲಿ ತಾನು ಆದು ಕೊಂಡಿರುವ ಭಕ್ತರಿಗೆ ನಿಜ ತಂದೆಯಾಗಿದ್ದಾನೆ.

ದೇವನು ಈ ವರೆಗೆ ಇಸ್ರಯೇಲನಿಗೆ ಮಾಡಿದ ಉಪಕಾರಗಳ ವಿವರ. ವ. ೭—೧೪.

ವ. ೭. ಮುನ್ನಿನ ಯುಗದ ದಿವಸಗಳನ್ನು ನೆನಸು! ತಲತಲಾಂತರ ವರ್ಷಗಳನ್ನು ಬಗೆಯಿರಿ! ನಿನ್ನ ತಂದೆಯನ್ನು ಕೇಳಿದರೆ, ನಿನಗೆ ತಿಳಿಸುವನು. ನಿನ್ನ ಹಿರಿಯರನ್ನು ಕೇಳಿದರೆ, ನಿನಗೆ ಹೇಳುವರು. ೮. ಮಹೋನ್ನತನು ಜನಗಳಿಗೆ ಸ್ವಾಸ್ಥ್ಯಗಳನ್ನು ಕೊಡುವಲ್ಲಿ, ಆದಾಮನ ಮಕ್ಕಳನ್ನು ವಿಂಗಡಿಸುವಲ್ಲಿ, ಇಸ್ರಯೇಲನ ಮಕ್ಕಳ ಲೆಖ್ಖಕ್ಕೆ೧) ಜನಾಂಗಗಳ ಗಡಿಗಳನ್ನು ನಿಲ್ಲಿಸಿದನು. ೯. ಯಾಕೆಂದರೆ ಯೆಹೋವನ ಪಾಲು ಅವನ ಜನಾಂಗವೇ; ಯಾಕೋಬನು ಅವನ ಸ್ವಾಸ್ಥ್ಯದ ಹುರಿ೨). ೧೦. ಅವನು ಅರಣ್ಯಾ

೩೮೮ ದೇವನು ಈ ವರೆಗೆ ಇಸ್ರಯೇಲನಿಗೆ ಮಾಡಿದ ಉಪಕಾರಗಳ ವಿವರ.

ದ್ವಿತೀ. ೩೨, ೧೦—೧೪.

ವಾದ ದೇಶದಲ್ಲಿಯೂ, ಬಯಿಲಾದ ಹುಯಿಲಿನ ಅರಣ್ಯದಲ್ಲಿಯೂ೩) ಅವನನ್ನು ಕಂಡು ಕೊಂಡು, ಸುತ್ತಿ ಕೊಂಡು, ವಿವೇಕ ಪಡಿಸಿ, ಕಣ್ಣುಗುಡ್ಡೆನಂತೆ ಕಾಪಾಡಿದನು೪). ೧೧. ಹದ್ದು ತನ್ನ ಗೂಡನ್ನು ಎಚ್ಚರಿಸಿ, ಮರಿಗಳ ಮೇಲೆ ಅಡ್ಡಾಡಿ ರೆಕ್ಕೆಗಳನ್ನು ಪಸರಿಸಿ೫), ಅವುಗಳನ್ನು ತಕ್ಕೊಂಡು, ಪಕ್ಕೆಯ ಮೇಲೆ ಎತ್ತಿ ಕೊಳ್ಳುವಂತೆ೬), ೧೨. ಯೆಹೋವನು ಒಬ್ಬನೇ ಅವನನ್ನು ನಡಿಸಿದನು, ಪರದೇವರು೭) ಅವನ ಸಂಗಡ ಇದ್ದಿಲ್ಲ. ೧೩. ಭೂಮಿಯ ಮೇಡುಗಳ ಮೇಲೆ೮) ಅವನನ್ನು ರಥವೇರಿ ಹೋಗಲೀಸಿದನು. ಅವನು ಹೊಲದ ಆದಾಯವನ್ನು ಉಂಡನು. ಬಂಡೆಯಿಂದ ಜೇನನ್ನು, ಉರಿಕಲ್ಲಿನ ಬಂಡೆಯಿಂದ ಎಣ್ಣೆಯನ್ನು ಅವನಿಗೆ ಕುಡಿಸಿದನು. ೧೪. ಹಸಗಳ ಕೆನೆಯನ್ನು, ಕುರಿಗಳ ಹಾಲನ್ನು, ಕುರಿಮರಿಗಳ ಕೊಬ್ಬಿನ ಸಂಗಡ, ಬಾಷಾನದ ಟಗರುಗಳನ್ನೂ ಹೋತುಗಳನ್ನೂ ಗೋಧಿಯ೯) ಗುಂಡಿಗೆ ಕೊಬ್ಬಿನ ಸಂಗಡ ಕೊಟ್ಟನು. ದ್ರಾಕ್ಷೇ ರಸವನ್ನು ಬೆರಸದೆ ಕುಡಿದಿ.

೧. ಹೊಸ ಒಡಂಬಡಿಕೆಯ ಕಾಲದಲ್ಲಿ ಹ್ಯಾಗೆ ಕ್ರೈಸ್ತ ಜನಾಂಗಗಳು ಎಲ್ಲಾ ಜನಗಳಲ್ಲಿ ಮಧ್ಯಸ್ಥಾನ ಶ್ರೇಷ್ಠತ್ವವುಳ್ಳವಾಗಿವೆಯೋ, ಹಾಗೆಯೇ ಹಳೆ ಒಡಂಬಡಿಕೆಯ ಕಾಲದಲ್ಲಿ ಇಸ್ರಯೇಲ ಜನಾಂಗವು ದೇವನಿಂದ ಆಯಿಕೆಯಾದದ್ದಾಗಿಯೂ, ಭಕ್ತಿಧರ್ಮಸ್ಥಾಪನ ಸಾಧನಗಳಿಂದ ಪ್ರಾಮುಖ್ಯವಾದದ್ದಾಗಿಯೂ, ಆಗಿನ ಎಲ್ಲಾ ಜನಗಳಲ್ಲಿ ಮಧ್ಯಸ್ಥಾನವನ್ನು ಪಡ ಕೊಂಡದ್ದಾಗಿತ್ತು. ಇಳೆಯ ದೇಶಗಳನ್ನು ಬೇರೆ ಬೇರೆ ಜನಾಂಗಗಳಿಗೆ ಹಸಿಕೆ ಮಾಡುವಾಗಲೇ, ಕರ್ತನು ಉಳಿದ ಜನಾಂಗಗಳಿಗೆ ಇಸ್ರಯೇಲನ ಜನಾಂಗವು ವಿಂಗಡವಾಗಿರ ಬೇಕೆಂಬ ಆಲೋಚನೆಯಿಂದಿದ್ದನೆಂದು, ಇಲ್ಲಿ ಕಾಣುವದು. ಹಾಗಾದರೆ ಇಸ್ರಯೇಲನವರು ನೇಮಕವಾದ ಕಾಲದಲ್ಲಿ ಹೊಕ್ಕು, ತಮ್ಮ ಕುಲ ಲೆಖ್ಖಕ್ಕೆ ಸರಿಯಾದ ಇಂಬು ಗೈದು, ಸಮಾಧಾನವಾಗಿ ವಸ್ತಿಯಾಗುವದಕ್ಕೆ ಕನಾನ ದೇಶವು ಅನುವಾಗೋಣವನ್ನು ದೇವನ ಬುದ್ಧಿಯು ಅಬ್ರಹಾಮನ ದಿನಗಳಿಗಿಂತ ಮುಂಚೆಯೇ ಅಣಿ ಮಾಡಿದ್ದನು. ಉತ್ಪ. ೧೨, ೩. ಅಪೊ. ಕ್ರಿ. ೧೭. ೨೬. ೨೭.

೨. ಆಯಾ ಕುಲಕ್ಕೆ ದೊರಕಿದ ನಾಡಿನೊಳು ಬೇರೆ ಬೇರೆ ಮನೆಗಳಿಗೆ ಬರ ತಕ್ಕ ಭೂಮಿಗಳು ಪ್ರಮಾಣಸೂತ್ರದಿಂದ ಅಳೆದು ಕೊಡೋಣವಾಯಿತು. ಹೀಗಿರಲಾಗಿ "ಯಾಕೋಬನು ಅವನ ಬಾಧ್ಯತೆಯ ಹುರಿ" ಎಂಬದರ ಅಭಿಪ್ರಾಯವೇನಂದರೆ: ತಾನು ಆರಿಸಿ ಕೊಂಡ ಯಾಕೋಬನ ವಂಶವು ಅಳತೆಯ ಹುರಿಯಿಂದ ವಿಂಗಡವಾಗಿ ತನ್ನ ಪಾಲಾದ ಸ್ವಾಸ್ಥ್ಯದ ಭೂಮಿಯೋಪಾದಿಯಾಗಿದೆಂಬದು.

೩. ಏನಂದರೆ: ಇಸ್ರಯೇಲನವರು ತದನಂತರ ಸ್ವಾಸ್ಥ್ಯವಾಗಿ ಪಡಕೊಳ್ಳಲಿರುವ ಸಾರವತ್ತಾದ ಕನಾನ ದೇಶದ ಹಸಗಟ್ಟಿತನವನ್ನೂ, ಏನೂ ಪುಣ್ಯವಿಲ್ಲದವರಿಗೆ ದೊರಕುವ ನಂಬಿಕೆಯೂ ಒಲುಮೆಯೂ ಉಳ್ಳ ದೇವನ ಕರುಣವನ್ನೂ, ವರ್ಣಿಸುವ ಉದ್ದಿಶ್ಯವಾಗಿ, ಮೋಶೆಯು, ಮಾರ್ಗ ತಪ್ಪಿದಂಥ, ದಿಕ್ಕು ತಿಳಿಯದಂಥ ಹಾದಿವಾಕನಂತೆ ಇಸ್ರಯೇಲನು ಹುಯಿಲಿಡುವ ಮೃಗಗಳ ಟಾಣವಾದ ಅರಣ್ಯದಲ್ಲಿ ಅಲೆದಾಡುವವನಾಗಿ ಯೆಹೋವನ ಕೈಗೆ ಶಿಕ್ಕಿದನೆಂದು ಹೇಳುತ್ತಾನೆ.

೪. ಕಣ್ಣ್ಗವೆಯು ಗುಡ್ಡನ್ನು ಎಡೆ ಬಿಡದೆ ಕಾಯುವಂತೆ ಯೆಹೋವನ ಕೃಪೆಯು ಇಸ್ರಯೇಲನೆಂಬ ಮುದ್ದು ಮಗುವನ್ನು ಅತಿಶಯ ಮಮತೆಯಿಂದ ಜೋಕೆ ಮಾಡಿದನು. ಮಿಶ್ರದ ತಿಪ್ಪಲುಪಾಟದಿಂದ ಎದೆಗುಂದಿ, ಹೇಡಿಗಳಾದ ಜನರು ಅರಣ್ಯದಲ್ಲಿ ಶೇರಿ, ತೀರ ದಿಕ್ಕಿಲ್ಲದವರಾಗಿದ್ದ ವೇಳೆಯಲ್ಲಿ ಯೆಹೋವನು

ಅವರಿಗೆ ಆಶ್ರಯುವನ್ನು ಕೊಟ್ಟು, ಬಲಾಢ್ಯ ಸಹಾಯಕನಾಗಿದ್ದನು. ಹೊರ. ೧೭, ೮ ಮುಂ.

೫. ಈ ಮಾತು ಹಗಲು ಹೊತ್ತಿನಲ್ಲಿ ದಂಡಿನ ಮೇಲೆ ಹಬ್ಬುತ್ತಾ ಇದ್ದ ಮೇಘಸ್ತಂಭಕ್ಕೆ ಒಪ್ಪುತ್ತದೆ.

೬. ಅರಣ್ಯಸಂಚಾರ ಕಷ್ಟಗಳಿಂದ ಅವರು ದಣಿದು ಕಳವಳಗೊಂಡ ವೇಳೆಗಳಲ್ಲಿ, ಕರ್ತನು ಅವರಿಗೆ ತಿರಿಗಿ ಬಲವನ್ನೂ ಧೈರ್ಯವನ್ನೂ ಕೊಟ್ಟನು. ಹದ್ದಿನ ಉಪಮೆಯು ಈ ವಚನದಲ್ಲಿ ಹೇಳಿದ ಎರಡು ಬಗೆಯ ಅಭಿಪ್ರಾಯಕ್ಕೆ ಚನ್ನಾಗಿ ಸರಿ ಬೀಳುವದು.

೭. ಯೆಹೋವನೊಬ್ಬನೇ ಅಂದರೆ, ಅವರ ಮುಂದೆ ನಡದ ದೂತನು ಸಹ ಒತ್ತಾಸೆಗೆ ಬಂದ ಬೇರೊಂದು ದೇವತೆಯಾಗಿರಲಿಲ್ಲ. ದೂತನೆಂಬವನು ಪ್ರತ್ಯಕ್ಷನಾದ ದೇವನೇ. ಹೊರ. ೩. ೨ ಮುಂ.; ೧೯, ೧೮; ೨೦, ೨.

೮. ಪ್ರವಾದಿಯಾದ ಮೋಶೆಯ ಆತ್ಮದೃಷ್ಟಿಗೆ ಮುಂದಣ ಕನಾನ ದೇಶ ಸ್ವಾಧೀನಕರಣವು ಉಂಟಾದದ್ದಾಗಿ ತೋರುವದರಿಂದ ಕನಾನವನ್ನೆಲ್ಲಾ ಗೆದ್ದ ದಂಡಿನ ಜಯದ ಮೆರವಣಿಗೆಯನ್ನು ಕಂಡವನಂತೆ ನುಡಿಯುತ್ತಾನೆ.

೯. ಸಾರವುಳ್ಳ ಫಲಭರಿತವಾದ ಕನಾನ ದೇಶದ ಈ ವರ್ಣನೆಯು ಬಹಳ ಮನೋಹರವಾಗಿದೆ.—ಬಂಡೆಗಳಲ್ಲಿ ಜೇನುನೊಣಗಳು ಕಟ್ಟಿದ ತೊಟ್ಟಿಗಳಿಂದ ಕಾನೆ ಸಲ ಜೇನು ತನ್ನಷ್ಟಕ್ಕೆ ಇಳಿಯುವದು.—ಕಲ್ಲು ನೆಲದಲ್ಲಿಯಾದರೂ ಇಪ್ಪೇ ಗಿಡಗಳು ಚನ್ನಾಗಿ ಬೆಳೆಯುವವು.—ಯೊರ್ದನದ ಮೂಡಣ ಶೀಮೆಯಾದ ಬಾಷಾನದಲ್ಲಿ ದನ ಮೇಯಿಸುವದಕ್ಕೆ ಕಾನೆ ಅನುವಾದ ಹುಲ್ಲುಗಾವಲುಗಳು ಇದ್ದವು.—"ಗೋಧಿಯ ಗುಂಡಿಗೆ ಕೊಬ್ಬಿನ ಸಂಗಡ" ಅಂದರೇನು? "ಉತ್ತಮೋತ್ತಮ ಗೋಧಿಯ ಹಿಟ್ಟಿನ ಸಂಗಡ"—ಕೊಬ್ಬು ಎಂಬದಕ್ಕೆ ಉತ್ತಮವಾದದ್ದೆಂಬರ್ಥ. ಉತ್ತಮವಾದ ಕೊಬ್ಬು ಗುಂಡಿಗೆ ಕೊಬ್ಬೆಂದನಿಸುತ್ತದೆ.

ಈ ಆಶೀರ್ವಾದವೈಭೋಗದಿಂದ ಇಸ್ರಯೇಲನವರು ಬಿಂಕಗೊಂಡು, ಮರುಳಾಗಿ, ಯೆಹೋವನಿಗೆ ತಿರುಗಿ ಬೀಳುವರು. ವ. ೧೫—೧೮.

ವ. ೧೫. ಬಳಿಕ ಯೆಷುರೂನನು[1] ಕೊಬ್ಬಿ, ಒದ್ದನು; ಕೊಬ್ಬಿ ಕೊಂಡು, ದಡಿಗನಾಗಿ, ಕೊಬ್ಬು ಮುಚ್ಚಿ ಹೋದಿ. ತನ್ನನ್ನು ಉಂಟು ಮಾಡಿದ ದೇವನಿಂದ ತೊಲಗಿ, ತನ್ನ ರಕ್ಷಣೆಯ ಬಂಡೆಯನ್ನು ಅಸಡ್ಡೆ ಮಾಡಿದನು. ೧೬. ಪರುವರಿಂದ ಅವನನ್ನು ಕೆಣಕಿದನು. ಹೇಸಿಗೆಗಳಿಂದ ಅವನನ್ನು ಸಿಣಿಸಿದನು. ೧೭. ದೇವನಲ್ಲದ ಪಿಶಾಚಿಗಳಿಗೆ[2], ಅವರು ಅರಿಯದ ದೇವರುಗಳಿಗೆ, ಇತ್ತಲಾಗಿ ಬಂದಂಥ[3] ಹೊಸಬರಿಗೆ, ನಿಮ್ಮ ತಂದೆಗಳು ಅಳುಕದವರಿಗೆ ಬಲಿಯರ್ಪಿಸಿದರು. ೧೮. ನಿನ್ನನ್ನು ಹುಟ್ಟಿಸಿದ ಬಂಡೆಯಿಂದ ಸರಿಸಿದಿ, ನಿನ್ನನ್ನು ಹೆತ್ತ ದೇವನನ್ನು ಮರತು ಹೋದಿ.

೧. ಯೆಷುರೂನ್ ಎಂಬ ಹೆಸರು, ನೆಟ್ಟನವನು ಇಲ್ಲವೆ ಯಥಾರ್ಥನು ಎಂಬ ಅರ್ಥವುಳ್ಳದ್ದಾಗಿದ್ದು, ದ್ರೋಹ ಮಾಡುವ ಜನಾಂಗವನ್ನು ತನ್ನ ಅಭಿಪ್ರಾಯದ ನೆನೆವರಿಕೆಯಿಂದ ನಾಚಿಕೆ ಪಡಿಸುವ ಉದ್ದಿಶ್ಯ, ಬೇಕಾಗಿ ಪ್ರಯೋಗವಾಗಿದೆ.

೨. ಇಬ್ರಿಯದಲ್ಲಿ ಸೆದೀಮೆಂದು ಬರೆದದೆ. ಅದೇನಂದರೆ, ಒಂದು ತರದ ಪಿಶಾಚಿಗಳು. ಲೇವಿ. ೧೭, ೭. ಇದಕ್ಕೆ ೧ ಕೊರಿ. ೧೦, ೧೯. ೨೦ ಸರಿ ನೋಡ ಬೇಕು.

೩. ಅವುಗಳ ಪೂಜೆಗಳನ್ನು ನೆರೆಯವರಾದ ಕನಾನ ದೇಶವಾಸಿಗಳಿಂದ ಕಲಿತು ಕೊಂಡರು. ಈ ವಚನಗಳಲ್ಲಿ ಮೋಶೆ ಭವಿಷ್ಯವಾದದ್ದನ್ನು ಭೂತವಾದದ್ದಾಗಿ ಕಂಡವನಂತೆ ಇಸ್ರಯೇಲನವರು ಮಾಡ ಹೋಗುವ ದ್ರೋಹವನ್ನು ಪೂರ್ಣ ನಿಶ್ಚಯದಿಂದ ಪ್ರವಾದಿಸುತ್ತಾನೆ.

೩೯೦ ದ್ರೋಹಿಗಳ ಶಿಕ್ಷೆಗಳು. ಒಡಂಬಡಿಕೆಯ ಕೃಪೆ ಪರಜನಗಳಿಗೆ ಪ್ರಾಪ್ತ.

ದ್ವಿತೀ. ೩೨, ೧೯—೩೩.

ದ್ರೋಹಿಗಳ ಮೇಲೆ ಬರುವ ಶಿಕ್ಷೆಗಳು. ಒಡಂಬಡಿಕೆಯ ಕೃಪೆಯು
ಇಸ್ರಯೇಲನವರಿಂದ ಜಾರಿ ಪರಜನಗಳಿಗೆ ಪ್ರಾಪ್ತಿಯಾಗುವದು. ವ. ೧೯—೩೩.

ವ. ೧೯. ಯೆಹೋವನು ನೋಡಿ, ತನ್ನ ಗಂಡು ಹೆಣ್ಣು ಮಕ್ಕಳ ಸಿಟ್ಟಿನಿಂದ
ಕನಲ್ದು, ೨೦. ಹೇಳಿದ್ದು: ನನ್ನ ಮೋರೆಯನ್ನು ಅವರಿಗೆ ಮರೆ ಮಾಡುತ್ತೇನೆ. ಅವ
ರ ಕಡೇದು ಏನೆಂದು, ನೋಡುತ್ತೇನೆ[೧]; ಯಾಕಂದರೆ ಅವರು ಎಡಗೋಟ್ಟಾದ ಸಂತ
ತಿಯೇ, ನಂಬಿಕೆ ಇಡಲಾರದ ಮಕ್ಕಳೇ. ೨೧. ದೇವರಲ್ಲದ್ದಕ್ಕಾಗಿ ನನಗೆ ಹೊಟ್ಟೆಯು
ರಿಸಿದರು. ತಮ್ಮ ಗೊಂಬೆಗಳಿಗಾಗಿ ನನ್ನನ್ನು ಸಿಟ್ಟಿಸಿದರು. ನಾನು ಜನಾಂಗವಲ್ಲ
ದ್ದಕ್ಕಾಗಿ ಅವರಿಗೆ ಹೊಟ್ಟೆಯುರಿಸುತ್ತೇನೆ. ಹೆಡ್ಡ ಜನಾಂಗಕ್ಕಾಗಿ ಅವರನ್ನು ಸಿಟ್ಟಿಸು
ತ್ತೇನೆ[೨]. ೨೨. ಯಾಕಂದರೆ ನನ್ನ ಸಿಟ್ಟಿನಿಂದ ಬೆಂಕಿ ಹೊತ್ತಿ, ಕೆಳಗಣ ಪಾತಾಳದ
ವರೆಗೂ ಉರಿದು, ಭೂಮಿಯನ್ನೂ ಅದರ ಹುಟ್ಟುವಳಿಯನ್ನೂ ತಿಂದು, ಬೆಟ್ಟಗಳ
ಬುಡವನ್ನು ಬೆಯಿಸಿತು. ೨೩. ಅವರ ಮೇಲೆ ಕೇಡುಗಳನ್ನು ಕೂಡಿಸುವೆನು. ನನ್ನ
ಬಾಣಗಳನ್ನು ಅವರ ಮೇಲೆ ತೀರಿಸುವೆನು. ೨೪. ಹಸಿವೆಯಿಂದ ಕುಂದಿ, ಉರಿಯಿಂ
ದಲೂ ಕಹಿಯಾದ ವ್ಯಾಧಿಯಿಂದಲೂ ನುಂಗಿ ಹೋಗುವರು; ಕಾಡ ಮೃಗಗಳ ಹ
ಲ್ಲನ್ನು ಧೂಳಿಯಲ್ಲಿ ಹರಿಯುವ ಹಾವುಗಳ ವಿಷದೊಡನೆ ಅವರ ಮೇಲೆ ಕಳುಹಿಸು
ವೆನು. ೨೫. ಹೊರಗೆ ಕತ್ತಿ, ಒಳಗೆ ಅದರು, ಹುಡುಗರನ್ನೂ ಕನ್ನಿಕೆಯರನ್ನೂ, ನ
ರೆಗೂದಲಿನವನ ಸಂಗಡ ಮೊಲೆಕೂಸನ್ನೂ, ಮಡಿಸುವವು. ೨೬. ಅವರನ್ನು ಕಡಿ
ದು ಬಿಡುವೆನೆಂದು, ಹೇಳಿ ಕೊಂಡೆನು. ಅವರ ನೆನಪನ್ನು ಮನುಷ್ಯರಲ್ಲಿಂದ ಮುಗಿ
ಸುವೆನು. ೨೭. ಎಡರಾಳಿಯ ಸಿಟ್ಟಿಗೆ ಮಾತ್ರ ಅಂಜುತ್ತೇನೆ, ಅವರ ಕಂಟಗಾರರು
ಬೇರೆ ತರದಿಂದ ಬಗೆದಾರು. "ನನ್ನ ಕೈ ಎತ್ತರವಾಗಿದೆ, ಯೆಹೋವನು ಇದನ್ನೆಲ್ಲಾ
ಗೈಯಲಿಲ್ಲವೆಂದು", ಹೇಳ್ಯಾರೆಂತ. ೨೮. ಯಾಕಂದರೆ ಅವರು ಆಲೋಚನಭ್ರಷ್ಟ
ಜನವು, ಅವರಲ್ಲಿ ವಿವೇಕವಿಲ್ಲ[೩]. ೨೯. ಅವರು ಬುದ್ಧಿವಂತರಾದರೆ, ಇದನ್ನು ಬಲ್ಲ
ವರಾಗುವರು, ತಮ್ಮ ಕಡೇದನ್ನು ವಿವೇಚಿಸುವರು[೪]. ೩೦. ಒಬ್ಬನು ಸಾವಿರ ಮಂದಿ
ಹಿಂದಟ್ಟುವದು, ಇಬ್ಬರು ಹತ್ತು ಸಾವಿರ ಮಂದಿ ಓಡಿಸುವದು ಹ್ಯಾಗೆ? ಅವರ ಬಂಡೆ
ಅವರನ್ನು ಮಾರಿ, ಯೆಹೋವನು ಅವರನ್ನು ಒಪ್ಪಿಸಿ ಬಿಟ್ಟದರಿಂದಲಲ್ಲವೋ?[೫]
೩೧. ಯಾಕಂದರೆ ನಮ್ಮ ಬಂಡೆಯ ಹಾಗೆ ಅವರ ಬಂಡೆಯಲ್ಲ, ಇದಕ್ಕೆ ನಮ್ಮ ಹಗೆಗಾ
ರರೂ[೬] ಸಾಕ್ಷಿಗಳು. ೩೨. ಯಾಕಂದರೆ ಸೆದೋಮದ ದ್ರಾಕ್ಷೇ ಗಿಡದಿಂದಲೂ, ಗ
ಮೋರದ ತೋಟಗಳಿಂದಲೂ, ಅವರ ದ್ರಾಕ್ಷೇ ಗಿಡವುಂಟಾಗೆದೆ. ಅವರ ಹಣ್ಣುಗಳು
ನಂಜು ಹಣ್ಣುಗಳು, ಅವರಿಗೆ ಕಹಿಯಾದ ಗೊಂಚಲುಗಳವೆ. ೩೩. ಅವರ ದ್ರಾಕ್ಷೇ ರಸ
ವು ಹಾವುಗಳ ನಂಜೂ ಅಹಿಗಳ ಕಾಳಕೂಟವೂ ಆಗಿದೆ.

ದ್ವಿತೀ. ೩೨, ೩೪—೩೭.

೧. ಇಲ್ಲಿ ಅವಿಧೇಯರಿಗೆ ಬರುವ ಶಿಕ್ಷೆಗಳ ಪ್ರವಾದನೆಯ ಆರಂಭವು.

೨. ಈ ಪ್ರವಾದನೆ ಅತಿ ಘನವಾದದ್ದು. ಅದರ ತಾತ್ಪರ್ಯವೇನಂದರೆ: ಯೆಹೋವನು, ವ್ಯರ್ಥ ವಿಗ್ರಹಪೂಜೆಯಲ್ಲಿ ಬಿದ್ದು, ತನಗೆ ಮಾಡಿದ ದ್ರೋಹದಿಂದ ತನಗೆ ಸಿಟ್ಟು ಎಬ್ಬಿಸಿದ ಮಾಂಸಭಾವದ ಇಸ್ರಯೇಲ ಜನಾಂಗವನ್ನು ತಳ್ಳಿ ಬಿಟ್ಟು, ಅದಕ್ಕೆ ಪ್ರತಿಯಾಗಿ ಪರಜನಗಳನ್ನು ಆತ್ಮಭಾವದ ಇಸ್ರಯೇಲ ಜನಾಂಗವಾಗಿ ಆದು ಕೊಳ್ಳುವನು. ರೋಮಾ. ೧೦, ೧೯. ಪರ ಜನಗಳು ಮೊದಲು ದೇವನ ಒಡಂಬಡಿಕೆಯಲ್ಲಿ ಶೇರದೆ ಇದ್ದದರಿಂದ, ಜೀವವುಳ್ಳ ಸತ್ಯದೇವನಿಗೆ ಅಧೀನವಾಗಿರದ ಜನಾಂಗವು ದೇವಜನಾಂಗವೆಂಬ ಹೆಸರಿಗೆ ಅಪಾತ್ರವಾಗಿರಲಾಗಿ, ಜನಾಂಗವಲ್ಲದ್ದೆಂತಲೂ, ದೇವನನ್ನು ತಿಳಿಯದೆ, ತಾವು ಜ್ಞಾನಿಗಳೆಂದು ನೆನಸಿ ಕೊಂಡದರಿಂದ ಹೆಡ್ಡ ಜನಾಂಗವೆಂತಲೂ, ಹೆಸರ್ಗೊಳ್ಳುತ್ತವೆ.

೩. ಇಸ್ರಯೇಲನ ಮೇಲೆ ದೇವನ ಶಿಕ್ಷೆಗಳು ಬಿದ್ದದ್ದು ಯಾಕೆಂದರೆ: ಕಣ್ಣಿನಿಂದ ಕಾಣಲೊಲ್ಲದವರಾಗಿಯೂ, ಕಿವಿಯಿಂದ ಕೇಳಲೊಲ್ಲದವರಾಗಿಯೂ, ತಮ್ಮನ್ನು ತಾವು ಮೋಸಗೊಳ್ಳಿಸಿ ಕೊಂಡರು. ಈ ಮೋಸದಿಂದ ಹೃತ್ಕಾಠಿಣ್ಯವು ಪ್ರಥಮಫಲವಾಗಿ ಹುಟ್ಟಿತು.—೨೮ ವಚನ ಮೊದಲ್ಗೊಂಡು ಯೆಹೋವನು ತಾನೇ ನುಡಿಯುವದನ್ನು ಬಿಟ್ಟು, ದೇವಪ್ರವಾದಿಯಾದ ಮೋಶೆಯ ಮುಖಾಂತರ ನುಡಿಯ ತೊಡಗುತ್ತಾನೆ.

೪. ಕಡೆಯದನ್ನು ಅಂದರೆ, ಕಡೇ ಕಾಲದ ಶಿಕ್ಷೆಗಳನ್ನು.

೫. ಇದರ ಅರ್ಥವೇನಂದರೆ: ಯೆಹೋವನು ಅವರನ್ನು ಕೈಬಿಟ್ಟ ಬಳಿಕ, ಅವರು ಬಲಗುಂದಿದವರಾಗಿ, ಕೊಂಚ ಮಂದಿ ಕಂಟಗಾರರಿಂದ ಸೋತು ಹೋಗುವರು. ಹ್ಯಾಗಂದರೆ, ದೇವನು ಅವರ ಸಹಾಯಕನಾಗಿರುವದನ್ನು ಬಿಟ್ಟರೆ, ಅವರಿಗೆ ವಿರೋಧಿಯಾಗಿ ಅವರನ್ನು ಅವರ ಎಡರಾಳಿಗಳ ಕೈಯಲ್ಲಿ ಒಪ್ಪಿಸಿ ಬಿಡುವನು.

೬. ಮೋಶೆ ಮೊದಲಾದ ಹಳೆ ಒಡಂಬಡಿಕೆಯ ಭಕ್ತರೆಲ್ಲರೂ ನಂಬುತ್ತಾ ಬಂದ ಬಂಡೆಯೆಂಬ ಕರ್ತನು ಬೇರೆ, ನಂಬದ ಮಾರ್ಮಲವರ ಆಶೆಯನ್ನು ಕೆಡಿಸದೆ ಬಿಡದಂಥ ದೈವಗಳಾದ ಬಂಡೆ ಬೇರೆ. ಸತ್ಯದಿಂದ ನಂಬಿ ವಿಧೇಯರಾಗಿ ನಡ ಕೊಂಡ ಯಥಾರ್ಥಗುಣವುಳ್ಳ ಪೂರ್ವಕಾಲದ ಯೆಹೋವನ ಸೇವಕರಿಗೂ ಇತ್ತಲಾಗಿನ ಮುಖಸ್ತುತಿವಂಚಕರಾದ, ಹೃದ್ಭಕ್ತಿಯಿಲ್ಲದ ದುರಾಚಾರಿಗಳಾದ, ಯೆಹೂದನವರ ಜನಾಂಗಕ್ಕೂ ಬಹಳ ಹೆಚ್ಚು ಕಡಿಮೆಯುಂಟೆಂದು, ಹಳೆ ಒಡಂಬಡಿಕೆಯ ಜನಾಂಗದ ವೈರಿಗಳು ಸಹ ತಿಳಕೊಂಡು, ಅರಿಕೆ ಮಾಡಿ, ದೇವನನ್ನು ಹೊಗಳುವವರಾದರು.—ಮೋಶೆಯ ಆತ್ಮದೃಷ್ಟಿಗೆ ಹೊಸ ಒಡಂಬಡಿಕೆಯ ರಕ್ಷಣಾರ್ಥವಾದ ಗೃಹಕೃತ್ಯದ ಮರ್ಮವು ಕಾಣಿಸಿ ಕೊಂಡಿತೆಂದು, ಈ ವಚನದಲ್ಲಿಯೂ ತೋರ ಬರುವದು.

ಯೆಹೋವನು ಇಸ್ರಯೇಲನ ಎದುರಾಳಿಗಳಿಗೆ ನ್ಯಾಯ ತೀರಿಸಿ, ಸ್ವಕೀಯ ಜನಾಂಗಕ್ಕೆ ತಿರಿಗಿ ಕರುಣೆಯನ್ನು ತೋರಿಸುವನೆಂಬ ಪ್ರವಾದನೆ. ವ. ೩೪—೪೩.

ವ. ೩೪. ಇದು ನನ್ನೊಡನೆ ಬಚ್ಚಿಟ್ಟದ್ದಲ್ಲವೋ? ನನ್ನ ಭಂಡಾರಗಳಲ್ಲಿ ಮುದ್ರಿತವಾದದ್ದಲ್ಲವೋ?೧) ೩೫. ಮುಯ್ಯಿಗೆ ಮುಯ್ಯಿ ಕೊಡುವದೂ, ಪ್ರತಿಫಲ ಸಲ್ಲಿಸುವದೂ, ನನ್ನ ಕೈಲಿಯದೆ. ತಕ್ಕ ವೇಳೆಯಲ್ಲಿ ಅವರ ಕಾಲು ಜಾರುವದು೨). ಯಾಕಂದರೆ ಅವರ ನಾಶನದ ದಿವಸವು ಹತ್ತರವಾಯಿತು. ಅವರಿಗೆ ಅಣಿಯಾದದ್ದು೩) ಬೇಗ ಬರುತ್ತದೆ. ೩೬. ಯಾಕಂದರೆ ಯೆಹೋವನು ತನ್ನ ಜನಾಂಗಕ್ಕೆ ನ್ಯಾಯ ತೀರಿಸುವನು; ಘಟ್ಟಿ ಕೈ ಹೋಯಿತೆಂದೂ, ಇಟ್ಟದ್ದೂ ಬಿಟ್ಟದ್ದೂ ಏನೂ ಇಲ್ಲವೆಂದೂ೪) ನೋಡಲಾಗಿ, ತನ್ನ ಆಳುಗಳನ್ನು ಕನಿಕರಿಸುವನು. ೩೭. ಆಗಲವನು ಹೇಳುವದು: ಅವರ ದೇ

ವರುಗಳೆಲ್ಲಿ? ಅವರು ನಂಬಿ ಕೊಂಡಂಥ, ೩೮. ಅವರ ಬಲಿಗಳ ಕೊಬ್ಬು ತಿಂದಂಥ, ಅ
ವರ ಪಾನಾರ್ಪಣೆಗಳ ದ್ರಾಕ್ಷೇ ರಸ ಕುಡಿದಂಥ ಅವರ ಬಂಡೆಯು ಎಲ್ಲಿ? ಅವರೆದ್ದು
ನಿಮಗೆ ಒತ್ತಾಸೆ ಮಾಡಲಿ, ನಿಮ್ಮ ಮರೆಯಾಗಿರಲಿ[೫]. ೩೯. ನಾನು ಅವನೇ ಎಂದೂ,
ನನ್ನ ಸಂಗಡ ಬೇರೆ ದೇವನಿಲ್ಲವೆಂದೂ, ಈಗ ನೋಡಿರಿ! ನಾನೇ ಸಾಯಲೀಸುವವನೂ
ಬದುಕಿಸುವವನೂ ಆಗಿದ್ಧೇನೆ. ಹೊಡೆಯುವವನೂ ಮಾಯಿಸುವವನೂ ನಾನೇ.
ನನ್ನ ಕೈಯಿಂದ ತಪ್ಪಿಸುವವನಿಲ್ಲ[೬]. ೪೦. ನಾನು ಆಕಾಶಕ್ಕೆ ನನ್ನ ಕೈ ಎತ್ತಿ, ನಾನು
ಯುಗಯುಗಕ್ಕೆ ಬದುಕುತ್ತೇನೆಂದು, ಹೇಳುತ್ತೇನೆ[೭]. ೪೧. ನನ್ನ ಕತ್ತಿಯ ಹದ ಮಾಡ
ಲು, ನನ್ನ ಕೈ ನ್ಯಾಯವನ್ನು ಹಿಡಕೊಳ್ಳುವದು. ನನ್ನ ಕಂಟಗಾರರಿಗೆ ಮುಯ್ಯಿಗೆ
ಮುಯ್ಯಿ ತೀರಿಸಿ, ನನ್ನ ಹಗೆಯವರಿಗೆ ಸಲ್ಲಿಸುವೆನು. ೪೨. ಹತವಾದವರ ಮತ್ತು ಶೆರೆ
ಯವರ ರಕ್ತದಿಂದಲೂ, ಶತ್ರುವಿನ ಮುಖ್ಯಸ್ಥರ ತಲೆಯಿಂದಲೂ ನನ್ನ ಬಾಣಗಳನ್ನು
ಮತ್ತವಾಗ ಮಾಡುವೆನು, ನನ್ನ ಕತ್ತಿ ಮಾಂಸವನ್ನು ತಿನ್ನುವದು[೮]. ೪೩. ಅವನ ಜ
ನಾಂಗವಾದ ಜನಗಳೇ, ಉತ್ಸವ ಮಾಡಿರಿ; ಯಾಕಂದರೆ ತನ್ನ ಆಳುಗಳ ರಕ್ತಕ್ಕೆ ಮು
ಯ್ಯಿ ತೀರಿಸುತ್ತಾನೆ. ತನ್ನ ಕಂಟಗಾರರಿಗೆ ಮುಯ್ಯಿಗೆ ಮುಯ್ಯಿ ತೀರಿಸುವನು. ತನ್ನ
ಭೂಮಿಯನ್ನೂ ತನ್ನ ಜನಾಂಗವನ್ನೂ[೯] ವಿಮೋಚನೆ ಮಾಡುವನು.

೧. ಇಸ್ರಯೇಲ ಜನಾಂಗ ದೇವರಾಜ್ಯಗಳ ಮುಂದಿನ ಗತಿಯ ವಿಷಯವಾದ ದೇವನ ಆಲೋಚನೆಗಳು ಲೋಕಕ್ಕೆ ಮರೆಯಾಗಿದ್ದರೂ, ಪೂರ್ಣ ಸ್ಥಿರವಾಗಿವೆ. ಆಗ ಬೇಕೆಂದು, ದೇವನು ನಿರ್ಣೈಸಿದ್ದೆಲ್ಲಾ ತಪ್ಪದೆ ನೆರವೇರುವದು.

೨. ಬಹು ಕಾಲ ಶೋಧನೇ ಸೈರಿಸುತ್ತಾ ಬಂದ ಇಸ್ರಯೇಲನ ಮೇಲೆ ಭಾರವಾಗಿದ್ದ ದೇವಶಿಕ್ಷೆಯು ಸಡ್ಲಿಸಿ ಕೊಂಡು, ಹೊರಳಿ, ಇಸ್ರಯೇಲನಿಗೂ ಇಸ್ರಯೇಲನ ದೇವನಿಗೂ ಎದುರಾಳಿಗಳಾದವರ ತಲೆಯ ಮೇಲೆ ಬೀಳುವ ಕಾಲವು ಬರುವದು. ಆದರೆ ಇಸ್ರಯೇಲ ಜನಾಂಗವು ತಾನೇ ಮುಯ್ಯಿಗೆ ಮುಯ್ಯಿ ಮಾಡುವಂಥಾದ್ದಲ್ಲ. ಯೆಹೋವನು ನ್ಯಾಯ ತೀರಿಸಿ, ತನ್ನ ಜನಾಂಗವನ್ನು ದಂಡಿಸಿದವರನ್ನು, "ಅವರ (ಎದುರಾಳಿಗಳ) ಕಾಲು ಜಾರುವ" ವೇಳೆಯಲ್ಲಿ, ದಂಡಿಸುವನು.

೩. ಅಣಿಯಾದದ್ದು ಏನಂದರೆ, ದೇವನು ಅವರಿಗಾಗಿ ಜೋಡಣೆ ಮಾಡಿದ ಶಿಕ್ಷೆ.

೪. ಅಂದರೆ, ಅವರು ತೀರ ಕುಂದಿದವರಾಗಿದ್ಧಾರೆಂತಲೂ, ಜೋಕೆಯಾದದ್ದೂ ಪರಾಮರಿಕೆಯಿಲ್ಲದ್ದೂ (ದೊಡ್ಡವರೂ ಬಡವರೂ) ಎಲ್ಲರೂ ಮಡಿದು ಹೋಗಿದ್ಧಾರೆಂತಲೂ, ನೋಡಿ, ಅವರ ಕಡುಗಕ್ಕಸದ ವೇಳೆಯಲ್ಲಿ ಅವರ ಸಹಾಯಕ್ಕೆ ಬರುತ್ತಾನೆ.

೫. ಆಗಲವರು ತಾವು ಕರ್ತನಿಗೆ ವಿರೋಧವಾಗಿ ಮಾಡಿದ್ದೆಲ್ಲಾ ಮೋಸವೆಂದೂ, ವಿಗ್ರಹಗಳ ಮೇಲೆ ಇಟ್ಟ ಭರವಸವು ವ್ಯರ್ಥವಾದದ್ದೆಂದೂ, ತಿಳಕೊಂಡು, ನಾಚಿ ಕೊಂಡು, ಅರಿಕೆ ಮಾಡುವರು.

೬. ಇಲ್ಲಿ ಸತ್ಯ ದೇವನು ತನ್ನ ಮಹಿಮೆಯನ್ನು ಭಕ್ತರ ಹೃದಯಗಳಲ್ಲಿ ವರ್ಣಿಸುತ್ತಾ, ತಾನು ವೈರಿಗಳನ್ನು ಕೊಲೆ ಮಾಡಲೂ, ಸತ್ತವರನ್ನು (ನಾಶವಾದ ಇಸ್ರಯೇಲನವರನ್ನು) ಬದುಕಿಸಲೂ, ಬಲ್ಲೆನೆಂದು, ಹೇಳಿ, ಭಕ್ತರ ಹೃದಯಗಳಲ್ಲಿ ಭಯವನ್ನೂ ನಂಬಿಕೆಯನ್ನೂ ಹುಟ್ಟಿಸಲೆಸಗುತ್ತಾನೆ. ಜೀವವುಳ್ಳ ದೇವನ ಕೈಯಲ್ಲಿ ಬೀಳುವದು ಎಷ್ಟೋ ಭಯಂಕರವಾದದ್ದು! ಇಬ್ರಿ. ೧೦, ೫. ೬.

೭. ೪೧ನೆ ೪೨ನೆ ವಚನಗಳಲ್ಲಿ ಬರೆದ ಮಾತು ನಿಶ್ಚಯವಾಗಿಯೂ ಪೂರ್ಣವಾಗಿಯೂ ಈಡೇರುವದೆಂಬದಕ್ಕೆ ಸಂದೇಹವು ಹುಟ್ಟದ ಹಾಗೆ, ದೇವನು ಆಣೆಯಿಟ್ಟು, ನುಡಿಯುತ್ತಾನೆ.

೮. ಈ ವಚನದ ಎರಡು ವಾಕ್ಯಗಳಲ್ಲಿ ಒಂದೊಂದಕ್ಕೆ ಎರಡು ಭಾಗ. ಅದರದರ ಮೊದಲನೆ ಭಾಗಗಳೂ ಎರಡನೇ ಭಾಗಗಳೂ ಪರಸ್ಪರ ಸಂಬಂಧವಾಗಿವೆ. ಬಾಣಗಳು ರಕ್ತಪಾನದಿಂದ ಮತ್ತಾಗ ಬೇಕು, ಕತ್ತಿಯು ಮುಖ್ಯಸ್ಥರ ತಲೆಯ ಮಾಂಸವನ್ನು ತಿನ್ನ ಬೇಕು.—ಯೆಹೋವನು ತನಗೂ ತನ್ನ ರಾಜ್ಯಕ್ಕೂ ವಿರುದ್ಧ ಮಾಡುವವರನ್ನು ಭಯಂಕರವಾದ ರೀತಿಯಿಂದ ಶಿಕ್ಷಿಸುವನೆಂದೂ, ದೇವನನ್ನು ಅಸಡ್ಡೆ ಮಾಡುವ ಬಡ ಪಾಪಿ ಹುಚ್ಚು ಹಿಡಿದವನಂತೆ ಕಾಣಿಸಿ ಕೊಳ್ಳುವನೆಂದೂ, ಇಲ್ಲಿ ಅಚ್ಚುಕಟ್ಟಾಗಿ ತೋರುವದು.

೯. ಈ ವಚನದಲ್ಲಿ ದೇವಶಿಕ್ಷೆಗಳನ್ನು ತಾಳಿ, ನಂಬಿಕೆಯಲ್ಲಿ ದೃಢಗೊಂಡು, ಶೋಧನೆಯಿಂದ ಸಿದ್ಧೀಪಡ ಕೊಂಡ ಕರ್ತನ ಸಭೆಯ ಜಯಗೀತವು ಬರದದೆ. ಅದರ ಮಾತು ರೋಮಾ. ೧೫, ೧೦ರಲ್ಲಿ ಅಪೊಸ್ತಲನಾದ ಪೌಲನಿಂದ ಪ್ರಯೋಗವಾಗಿದೆ. ಇಸ್ರಯೇಲ ಜನಾಂಗದ ಪುನರಂಗೀಕಾರದಿಂದ ಪರಮೋತ್ತಮ ಆಶೀರ್ವಾದವು ಪರಜನಗಳಿಗೆ ಬರುವದು.

ಮೋಶೆ ಇಸ್ರಯೇಲ ಜನಾಂಗವನ್ನು ಎಚ್ಚರಿಸಿ ಸಾರಿದ ಕಡೇ ಮಾತು. ವ. ೪೫—೪೭.

ವ. ೪೫. ಮೋಶೆ ಈ ನುಡಿಗಳನ್ನೆಲ್ಲಾ ಇಸ್ರಯೇಲನವರಿಗೆಲ್ಲಾ ನುಡಿದು ಮುಗಿಸಿದಾಗ, ೪೬. ಅವರಿಗೆ ಹೇಳಿದ್ದು: ನಾನು ಇಂದು ನಿಮಗೆ ಸಾಕ್ಷಿಯಾಗಿ ಹೇಳುತ್ತಿರುವ ನುಡಿಗಳ ಮೇಲೆಲ್ಲಾ ನಿಮ್ಮ ಹೃದಯಗಳನ್ನು ಇಡಿರಿ! ಈ ನೇಮದ ನುಡಿಗಳನ್ನೆಲ್ಲಾ ಕಾಪಾಡಿ ಮಾಡುವದಕ್ಕೆ ನಿಮ್ಮ ಮಕ್ಕಳಿಗೆ ಬೆಸಸ ಬೇಕು. ೪೭. ಯಾಕಂದರೆ ಇದು ನಿಮಗೆ ಬೀಯ ಮಾತಲ್ಲ, ಇದು ನಿಮ್ಮ ಜೀವವೇ. ನೀವು ಸ್ವತಂತ್ರಿಸಿ ಕೊಳ್ಳುವದಕ್ಕೆ ಯೊರ್ದನವನ್ನು ದಾಟಿ ಹೋಗುವ ಭೂಮಿಯಲ್ಲಿ ಈ ಮಾತಿನಿಂದಲೇ ನಿಮ್ಮ ದಿವಸಗಳನ್ನು ನೀಟಾಗಲೀಸುವಿರಿ.

ಯೆಹೋವನು ಮೋಶೆಗೆ, ಅವನು ತನ್ನನ್ನು ಸಾಯುವದಕ್ಕೆ ಸಿದ್ಧಮಾಡಿ ಕೊಳ್ಳ ಬೇಕೆಂದು, ಕೊಟ್ಟ ಅಪ್ಪಣೆ. ವ. ೪೮—೫೨.

ವ. ೪೮. ಅದೇ ದಿವಸದಲ್ಲಿ ಯೆಹೋವನು ಮೊಶೆಗೆ ನುಡಿದದ್ದೇನಂದರೆ: ೪೯. ಈ ಅಬರೀಮ್ ಬೆಟ್ಟದ ಮೇಲೆ ಮೋವಾಬ ದೇಶದಲ್ಲಿಯೂ, ಯೆರೇಹೋವಿಗೆ ಎದುರಾಗಿಯೂ, ಇರುವ ನೆಬೋ[1] ಬೆಟ್ಟದ ಮೇಲೆ ಏರಿ ಹೋಗಿ, ನಾನು ಇಸ್ರಯೇಲನ ಮಕ್ಕಳಿಗೆ ಸ್ವಾಸ್ಥ್ಯವಾಗಿ ಕೊಡುತ್ತಿರುವ ದೇಶವನ್ನು ನೋಡು. ೫೦. ನಿನ್ನ ಸಹೋದರನಾದ ಆರೋನನು ಹೋರ್ ಬೆಟ್ಟದಲ್ಲಿ ಸತ್ತು, ತನ್ನ ಜನಾಂಗಕ್ಕೆ ಕೂಡಿ ಕೊಂಡ ಹಾಗೆ, ನೀನು ಏರಿ ಹೋಗುವ ಬೆಟ್ಟದಲ್ಲಿ ಸತ್ತು, ನಿನ್ನ ಜನಾಂಗಕ್ಕೆ ಕೂಡಿಕೋ[2]. ೫೧. ಯಾಕಂದರೆ ನೀವು ಚಿನ್ ಅರಣ್ಯದಲ್ಲಿ ಕಾದೆಷದ ಮೆರೀಬದ ನೀರಿನ ಬಳಿಯಲ್ಲಿ ನನ್ನನ್ನು ಇಸ್ರಯೇಲನ ಮಕ್ಕಳ ನಡುವೆ ಪರಿಶುದ್ಧ ಮಾಡದೆ[3], ನನಗೆ ವಿರೋಧವಾಗಿ

ತಪ್ಪು ಮಾಡಿದಿರಿ. ೫೨. ನೀನು ಆ ದೇಶವನ್ನು ಎದುರಿನಿಂದ ನೋಡುವಿ; ಆದರೆ
ನಾನು ಇಸ್ರಾಯೇಲನ ಮಕ್ಕಳಿಗೆ ಕೊಡುವ ಆ ದೇಶದಲ್ಲಿ ನೀನು ಬರಲಾರೆ.

೧. ಅಂಕೆ. ೨೭, ೧೨ ಸರಿ ನೋಡ ಬೇಕು.
೨. ಅಂಕೆ. ೨೦, ೨೫ ಮುಂ. ಸರಿ ನೋಡ ಬೇಕು. ಜನಾಂಗಕ್ಕೆ ಅಥವಾ ತಂದೆಗಳಿಗೆ ಕೂಡಿಕೊಳ್ಳುವದು ಎಂಬದು ಬೇರೆ ಸ್ಥಳಗಳಲ್ಲಿಯೂ ಪ್ರಯೋಗವಾಗಿದೆ ಉತ್ಪ. ೨೫, ೮; ೩೫, ೨೯; ೪೯, ೨೯.
೩. ಅಂಕೆ. ೨೦, ೧೩ ಮುಂ.

ಮೋಶೆಯ ಆಶೀರ್ವಾದ. ಸ. ೩೩.

ಮೋಶೆಯ ಆಶೀರ್ವಾದವು ಹಿಂದಿನ ಸಂಧಿಯಲ್ಲಿ ಬರೆದಿರುವಂಥ, ಅವನ ಹಾಡಿಗೆ ಮನೋಹರವಾದ ಪ್ರತಿಧ್ವನಿಯಾಗಿದೆ. ಹ್ಯಾಗೆಂದರೆ, ವರ್ತಮಾನ ಭವಿಷ್ಯತ್ಕಾಲಗಳನ್ನು ಕುರಿತು ಕಠಿಣವಾದ ಭಕ್ತ್ಯಾಸಕ್ತಿಯಿಂದ ಆಜ್ಞೇ ನಿರ್ಣೈಸುವಂಥ, ಶಿಕ್ಷಿಸುವಂಥ, ನೇಮಧರ್ಮವನ್ನು ಕೈಕೊಳ್ಳುವ ಮೋಶೆ ಅದರಲ್ಲಿ ಇಸ್ರಾಯೇಲ ಜನಾಂಗಕ್ಕೆಲ್ಲಾ, ಕುಲ ಕುಲದ ಪ್ರಕಾರ, ಯೆಹೋವನು ತಂದೆಗಳಿಗೆ ಮಾಡಿದ ವಾಗ್ದತ್ತಕ್ಕೆ ಅನುಸಾರವಾದ ಆಶೀರ್ವಾದವನ್ನು ನುಡಿಯುವದಲ್ಲದೆ ಮತ್ತೇನೂ ಹೇಳುವದಿಲ್ಲ. ಮೋಶೆ ತನ್ನ ಜನಾಂಗದ ಸೇವೆಯಲ್ಲಿ ಮಾಡಿದ ಉದ್ಯೋಗ ಕರ್ಮಗಳಲ್ಲಿ ಈ ಆಶೀರ್ವಾದವು ಕಡೇದಾಗಿತ್ತು. ಮೂಲ ಪಿತೃಗಳ ಪದ್ಧತಿಗೆ ಪೂರ್ಣಾನುಕೂಲವಾದ ರೀತಿಯಿಂದ, ಆಶೀರ್ವಾದಗಳನ್ನೂ ವಾಗ್ದತ್ತಗಳನ್ನೂ ಉಚ್ಚರಿಸುತ್ತಾ, ತನ್ನ ಜನಾಂಗವನ್ನು ಬಿಟ್ಟು ಹೋಗುತ್ತಾನೆ. ಈ ಮೋಶೆಯ ಆಶೀರ್ವಾದವನ್ನು ಓದುವವನಿಗೆ ಯಾಕೋಬನ ಆಶೀರ್ವಾದವು (ಉತ್ಪ. ೪೮, ೪೯.) ವಿಶೇಷವಾಗಿ ನೆನವರಿಕೆಯಾದೀತು. ಮೋಶೆಯ ಆಶೀರ್ವಾದಕ್ಕೆ ಮೂರು ಭಾಗವದೆ: ೧) ಪೀಠಿಕೆ. ವ. ೧ — ೫. ೨) ಆಶೀರ್ವಾದೋಕ್ತಿ. ವ. ೬ — ೨೫. ೩) ಅದರ ಸಮಾಪ್ತಿ. ವ. ೨೬ — ೨೯.

೧. ಪೀಠಿಕೆ.

೧. ದೇವನ ಮನುಷ್ಯನಾದ ಮೋಶೆ ಸಾಯುವದಕ್ಕಿಂತ ಮುಂಚೆ ಇಸ್ರಾಯೇಲನ
ಮಕ್ಕಳನ್ನು ಆಶೀರ್ವದಿಸಿದ ಆಶೀರ್ವಾದವೇನಂದರೆ: ೨. ಯೆಹೋವನು ಸೀನಾಯಿಂ
ದ ಬಂದು, ಸೇಯಿರದಿಂದ ಅವರಿಗೆ ಮೂಡಿ, ಪಾರಾನ್ ಬೆಟ್ಟದಿಂದ ಹೊಳದನು.
ಪರಿಶುದ್ಧರ ಅಯುತಗಳ ಸಂಗಡ ಬಂದನು[೧]. ಅವನ ಬಲಕಡೆಯಿಂದ ಅವರಿಗೆ ಬೆಂಕಿ
ಯ ನಿಯೋಗವು[೨] ಐತಂತು. ೩. ಜನಾಂಗಗಳನ್ನು ಒಲಿಯುತ್ತಾನೆಂಬದು ಸರಿ[೩].
ಅವನ ಪರಿಶುದ್ಧರೆಲ್ಲರು ನಿನ್ನ ಕೈಯಲ್ಲಿದ್ಧಾರೆ[೪]. ಅವರು ನಿನ್ನ ಅಡಿಗಳ ಬಳಿಯ ಎರಗಿ
ದರು[೫]. ನೀನು ನುಡಿದವುಗಳಲ್ಲಿಂದ ಕೊಂಡು ಹೋಗುವರು[೬]. ೪. ಮೋಶೆ ಯಾ
ಕೋಬನ ಸಭೆಯ ಸ್ವಾಸ್ಥ್ಯವಾದ[೭] ನೇಮವನ್ನು ನಮಗೆ ಬೆಸಸಿದ್ಧಾನೆ. ೫. ಜನಾಂ
ಗದ ಮುಖ್ಯಸ್ಥರು ಇಸ್ರಾಯೇಲನ ಕುಲಗಳ ಜೊತೆಯಾಗಿ ಕೂಡಿ ಕೊಂಡಿರಲಾಗಿ, ಯೆ
ಷುರೂನನಲ್ಲಿ[೮] ಅರಸಾಗಿದ್ದನು.

೧. ದೇವನ ಕೃಪೆಯಿಂದ ಇಸ್ರಾಯೇಲನವರಿಗೆ ಬಂದ ವರಗಳಿಗೆಲ್ಲಾ ಯೆಹೋವನು ಸೀನಾಯಿ ಬೆಟ್ಟದ ಮೇಲೆ ಮಾಡಿದಂಥ ನೇಮಧಾನಕಾಲದಲ್ಲಿಯೂ ಅದರ ಮುಖಾಂತರವಾಗಿಯೂ ಸ್ವಜನಾಂಗದೊಡನೆ

ಕಟ್ಟಿ ಕೊಂಡ ಒಡಂಬಡಿಕೆಯು ಅವುಗಳ ನೆಲವೂ ಒರ್ತೆಯೂ ಆಗಿದೆ. ನೇಮಧಾನಕ್ಕೆ ಬರುವ ಕರ್ತನ ಪ್ರತ್ಯಕ್ಷತೆ ಸೂರ್ಯೋದಯವೆಂದನ್ನಿಸಿ ಕೊಳ್ಳುತ್ತದೆ. ಅವನು ಪೊರಮಡುವ ದೇಶವು ಪಾಗ್ದತ್ತದೇಶವೆಂಬದು. ತೆಂಕಣದಲ್ಲಿರುವ ಸೇಯಿರ ಘಟ್ಟಗಳ ಕಡೆಯಿಂದ ಅವನು ಮೂಡಿ, ಸೇಯಿರಕ್ಕೂ ಸೀನಾಯಿಗೂ ನಡುವೆಯಣ ಪಾರಾನವನ್ನು ಹಾದು ಬಂದು, ಸೀನಾಯಿ ಬೆಟ್ಟದಲ್ಲಿ ಅಪಾರ ಮಹಿಮೆಯಿಂದ ಪ್ರಕಾಶಮಾನವಾಗುತ್ತಾ ಇದ್ಧಾನೆ.

೨. ಈ ಮಾತಿಗೆ ಎರಡು ತರದ ಟೀಕು ಮಾಡುವದುಂಟು: ೧) "ನೇಮದ ಬೆಂಕಿ ಅವನ ಬಲಕೈಯಲ್ಲಿರುವದು;" ಅದೇನಂದರೆ, ನೇಮಧಾನವು ಗುಡುಗು ಮಿಂಚುಗಳೊಡನೆ ಉಂಟಾಯಿತು.—೨) "ಅವನ ಬಲಕೈಯಲ್ಲಿ ಕಲಿಗಳು." ಇದಕ್ಕೆ ಸಪ್ತತಿ ಎಂಬ ಭಾಷಾಂತರದಲ್ಲಿ ದೂತರೆಂಬ ವ್ಯಾಖ್ಯಾನ ಬರೆದದೆ. ಈ ಅಭಿಪ್ರಾಯವು ಹಿಂದಿನ "ಪರಿಶುದ್ಧರು" ಎಂಬದಕ್ಕೆ ಸಲೆ ಒಪ್ಪುಗಿದೆ. ನೇಮಧಾನವು ದೂತರ ಮುಖಾಂತರ ಉಂಟಾಯಿತು ಎಂದು, ಅಪೊ. ಕ್ರಿ. ೭, ೫೩. ಗಲಾ. ೩, ೧೯. ಇಬ್ರಿ. ೨, ೨ರಲ್ಲಿ ಬರೆದದೆ. ಅವರ ಸಾಮೀಪ್ಯವು ಸೀನಾಯಲ್ಲಿ ಕಾಣ ಬಂದ ಅದ್ಭುತಗಳಿಂದ ಪ್ರತ್ಯಕ್ಷವಾಯಿತು.

೩. ಯೆಹೋವನು ನೇಮದ ವಿಧಿಬೋಧೆಗಳಿಂದಲೂ ನೇಮದೀಕ್ಷೆಯಿಂದ ಅತ್ಯುತ್ತಮ ಆಶೆಯ ಪದವಿಗೆ ಸಿದ್ಧರಾಗ ತಕ್ಕ ತನ್ನ ಪರಿಶುದ್ಧರೆಂಬ ಇಸ್ರಯೇಲನವರ ಕುಲಗಳನ್ನೆಲ್ಲಾ ಸ್ವಂತ ಜನಾಂಗವಾಗಿ ಆದು ಕೊಂಡದರಿಂದಲೂ, ತನ್ನ ದಿವ್ಯ ಪ್ರೀತಿಯನ್ನು ಪ್ರಕಟ ಮಾಡಿದನು.

೪. ನುಡಿಯುವವರು ಕೇಳುವವರು ಇವರ ಪದೇಪದೇಯಾಗುವ ಮಾರಾಟವು ಪ್ರವಾದನಭಾಷೆಯ ವಿಶೇಷವಾದ ಒಂದು ಲಕ್ಷಣವಾಗಿದೆ.

೫. ಎಲ್ಲಿ ಅಂದರೆ, ಸೀನಾಯಲ್ಲಿ.

೬. ಅಂದರೆ, ಅವರು ದೇವನ ಬಾಯಿಂದ ಬಂದ ವಾಕ್ಯಗಳನ್ನು ಕೇಳಿ ಗ್ರಹಿಸಿ ಕೊಂಡರು.

೭. ನೇಮವು ಯಾಕೋಬನ ಸಭೆಯಾದ ಇಸ್ರಯೇಲ ಜನಾಂಗಕ್ಕೆ ಬೆಲೋ ಸೊತ್ತೆಂಬ ಮಹಾ ಘನವಾದಂಥ ಪ್ರಿಯವಾದ ಒಡವೆಯಾಗಿತ್ತು.

೮. ಯೆಷುರೂನನೆಂಬ ಇಸ್ರಯೇಲನ ಅರಸು ಯಾರಂದರೆ, ನೇಮಧಾನಾರಭ್ಯ ರಾಜ್ಯಾಧಿಕಾರವನ್ನು ನಡಿಸ ತೊಡಗಿದ ಯೆಹೋವನೇ. ಮೋಶೆ ಯೆಹೋವನ ಹೆಸರಿನಲ್ಲಿಯೇ ಪ್ರಕಟ ಮಾಡಿದ ನೇಮವು ಸಾನೇ ಯೆಹೋವನು ಎಂಬದರಿಂದ ತೊಡಗುವದು ಪ್ರಸ್ತಾಪೋಚಿತವಾದದ್ದೇ ಸರಿ.

೨. ಆಶೀರ್ವಾದೋಕ್ತಿ. ವ. ೬—೨೫.

ಇದಕ್ಕೆ ಯಾಕೋಬನ ಆಶೀರ್ವಾದವನ್ನು ಚನ್ನಾಗಿ ಸಂಪ್ರತಿಸ ತಕ್ಕದ್ದು. ಅದಕ್ಕೂ ಇದಕ್ಕೂ ಹೆಚ್ಚು ಕಡಿಮೆ ಏನಂದರೆ: ಅಲ್ಲಿ ಅಡಕವಾಗಿ ಹೇಳಿದ ಮಾತುಗಳು ಇಲ್ಲಿ ವಿವರವಾಗಿ ಹೇಳಿಯವೆ; ಅಲ್ಲಿ ವಿವರವಾಗಿ ಬರೆದದ್ದು ಇಲ್ಲಿ ಅಡಕವಾಗಿ ಬರುತ್ತದೆ. ಆದರೆ ಇದರಲ್ಲಿ ಆಶೀರ್ವಾದವೇ ಹೊರ್ತು ಶಿಕ್ಷೆಯ ಮಾತು ಶೇರಿರುವದಿಲ್ಲ. ಈ ಕಾರಣದಿಂದ ಅಧಿಕಾಪರಾಧಿಯಾದ (ಉತ್ಪ. ೪೯, ೭; ಅಂಕೆ. ೨೫.) ಸಿಮೆಯೋನನ ಹೆಸರಾದರೂ ಇಲ್ಲಿ ಕಾಣುವದಿಲ್ಲ. ಹೀಗಾಗಿದ್ದರೂ, ಯಾಕೋಬನ ಆಶೀರ್ವಾದದಲ್ಲಿ ಸಿಮೆಯೋನನಿಗೆ ಸಮಾನನಾಗಿ ಕಾಣುವ ಲೇವಿ, ನಡುವೇಳೆಯಲ್ಲಿ ತೋರಿಸಿದ ಯೆಹೋವನಾಮಮಹಿಮಾಸಕ್ತಿಯಿಂದ ಪುಣ್ಯ ಪಡ ಕೊಂಡವನಾದದರಿಂದ (ಹೊರ. ೩೨, ೨೬; ಅಂಕೆ. ೪೨, ೫.) ಇಲ್ಲಿ ಅಧಿಕವಾದ ವರವನ್ನು ಹೊಂದುತ್ತಾನೆ.

ವ. ೬. ರೂಬೇನ್ ಸಾಯದೆ ಬದುಕಲಿ! ಅವನ ಮಂದಿ ಲೆಖ್ಖವಾಗಿರಲಿ!

ತಂದೆಯಾದ ಯಾಕೋಬನ ಆಜ್ಞೇ ನಿರ್ಣಯದಿಂದ ಚೊಚ್ಚುಲತನದ ಬಾಧ್ಯವನ್ನು ಕಳ ಕೊಂಡ ರೂಬೇನ್ ಸಹ ಇಲ್ಲಿಯ ಆಶೀರ್ವಾದದಲ್ಲಿ ಪಾಲುಗಾರನಾಗ ಬೇಕು. "ಅವನ ಮಂದಿ ಲೆಖ್ಖವಾಗಿರಲಿ"

ಎಂಬದರ ಅರ್ಥವೇನಂದರೆ: ಅವನ ಜನರು ಕಡಿಮೆಯಾಗದೆ ಹೆಚ್ಚಾಗ ಬೇಕು. ಈ ಮಾತು ನೆರವೇರಿದ್ದು ಹ್ಯಾಗಂದರೆ: ರೂಬೆನವರು ಹೆಚ್ಚೆಚ್ಚಾಗಿ ಬಳೆದು, ಪೆರಾಥ ನದಿಯ ಮಟ್ಟಿಗೂ ಪಸರವಾಗಿ ದೊಡ್ಡ ಸಮೂಹವಾದರು.

ವ. ೭. ಯೆಹೂದನಿಗೆ ಇದು, ಏನಂದರೆ: ಯೆಹೋವನೇ, ಯೆಹೂದನ ಶಬ್ದವ
ನ್ನು ಕೇಳು. ಅವನ ಜನಾಂಗದ ಬಳಿಗೆ ಅವನನ್ನು ಬರಲೀಸು[೧]! ಅವನ ಕೈಗಳು[೨]
ಅವನಿಗಾಗಿ ಕಾದುವವು. ಅವನ ಕಂಟಗಾರರಿಗೆ ತಪ್ಪಿಸುವ ಸಹಾಯಕನಾಗಿರುವಿ.

೧. ಯೆಹೂದ ಕುಲದ ಕಾದಾಳುಗಳು ಅಸ್ರಬಲವಾಗಿ ಪರಿಶುದ್ಧ ಕಾಳಗಕ್ಕೆ ಹೋಗಿ, ಜಯಶಾಲಿಗಳಾಗಿ ತಮ್ಮ ಜನಾಂಗದ ಬಳಿಗೆ ತಿರುಗಿ ಬರಲಿ!

೨. ಈ ಪ್ರಸ್ತಾಪದ ಅಭಿಪ್ರಾಯವೇನಂದರೆ: ಬಲವಂತ ಕಲಿಯಾದ ಯೆಹೂದನು ಅವಸರದಲ್ಲಿಯೂ ಇಕ್ಕಟ್ಟಿನಲ್ಲಿಯೂ ಬಿದ್ದರೆ, ಯೆಹೋವನು ಅವನಿಗೆ ಸಹಾಯಕನಾಗಿದ್ದು, ಅವನನ್ನು ಎದುರಾಳಿಗಳನ್ನು ಗೆಲ್ಲಗೊಡಿಸುತ್ತಾನೆ. ಈ ಪ್ರವಾದನೆಯು ಮೆಷಿಯನಲ್ಲಿ ಆತ್ಮಿಕ ಅಭಿಪ್ರಾಯದ ಪ್ರಕಾರ ಸಂಪೂರ್ಣವಾಯಿತು.

ವ. ೮ ಬಳಿಕ ಲೇವಿಗಾಗಿ[೧] ಅವನು ಹೇಳಿದ್ದು: ನಿನ್ನ ಥುಮ್ಮಿಮ್ ನಿನ್ನ ಊರೀ
ಮ್ ಎಂಬವುಗಳು ಮಸ್ಸದಲ್ಲಿ ನೀನು ಶೋಧಿಸಿದಂಥ, ಮೆರೀಬದ ನೀರಿನ ಬಳಿಯಲ್ಲಿ
ನೀನು ಜಗಳ ಮಾಡಿದಂಥ ನಿನ್ನ ಭಕ್ತಮನುಷ್ಯನಿಗೆ[೨] ಇರಲಿ! ೯. ತನ್ನ ತಂದೆಗೂ
ತನ್ನ ತಾಯಿಗೂ, ಅವರನ್ನು ನೋಡೆನೆಂದು, ಹೇಳಿ, ತನ್ನ ಒಡಹುಟ್ಟಿದವರನ್ನು ನೆನೆವರಿಕೆ
ಮಾಡಲೂ, ತನ್ನ ಮಕ್ಕಳನ್ನು ಅರಿಯಲೂ ಇಲ್ಲ[೩], ಯಾಕೆಂದರೆ ನಿನ್ನ ಮಾತು ಕೈ
ಕೊಂಡು, ನಿನ್ನ ಒಡಂಬಡಿಕೆ ಕಾಪಾಡುತ್ತಾರೆ. ೧೦. ಅವರು ಯಾಕೋಬನಿಗೆ ನಿನ್ನ
ನ್ಯಾಯಗಳನ್ನೂ ಇಸ್ರಯೇಲನಿಗೆ ನಿನ್ನ ನೇಮವನ್ನೂ ಕಲಿಸುವರು, ನಿನ್ನ ಮೂಗಿನ
ಮುಂದೆ ಧೂಪವನ್ನೂ ನಿನ್ನ ಬಲಿಪೀಠದ ಮೇಲೆ ಸರ್ವಾಂಗದಹನಗಳನ್ನೂ ಇಡು
ವರು. ೧೧. ಯೆಹೋವನೇ, ಅವನ ಪ್ರಾಣವನ್ನು ಆಶೀರ್ವದಿಸು. ಅವನ ಕೈಕೆಲಸಕ್ಕೆ
ಮೆಚ್ಚು. ಅವನಿಗೆದುರು ಏಳುವವರು, ಅವನನ್ನು ಹಗೆ ಮಾಡುವವರು, ಇವರ ಸೊಂ
ಟಗಳನ್ನು, ಅವರು ಏಳದ ಹಾಗೆ, ಒಡಿ[೪].

೧. ಮೋಶೆ ತಾನು ಈ ಕುಲದಲ್ಲಿ ಹುಟ್ಟಿದವನಾಗಿದ್ದನು. ಆದರೆ ಅವನ ಸ್ವಂತ ಸಂತತಿಯ ಹದನವು ಬಳಿಕ ನಡದ ಇಸ್ರಯೇಲನವರ ಚರಿತ್ರದಲ್ಲಿ ಕಾಣದೆ ಹೋಗುವದು. ಆದದರಿಂದ ಅವನು ಕುಲಮಮತೆಯಿಂದ ಲೇವಿಯವರನ್ನು ಹೆಚ್ಚಾಗಿ ಹೊಗಳಿದನೆಂದು, ನೆನಸಲಾಗದು. ಅವರಿಗೆ ಅಧಿಕವಾದ ಆಶೀರ್ವಾದ ಪ್ರಾಪ್ತಿಯಾಗುವ ನಿಜ ಕಾರಣವೇನಂದರೆ: ಲೇವಿ ಕುಲದವರು ಈ ವರೆಗೆ ಯೆಹೋವನ ಮಹಿಮೆಗಾಗಿ ವಿಶೇಷವಾದ ಆಸಕ್ತಿಯನ್ನು ತೋರಿಸುತ್ತಾ ಬಂದದ್ದಲ್ಲದೆ, ಸ್ವಾಸ್ಥ್ಯದ ಭೂಮಿಯಿಲ್ಲದವರಾಗಿದ್ದು, ಭಕ್ತಿ ಧರ್ಮಸಾಧನೆ ಕುಂದಿದ ಕಾಲಗಳಲ್ಲಿ ಕಾನೆ ಸಲ ಬದುಕು ಬಾಳು ಕಡಿಮೆಯಾಗಿ, ಬಡತನವನ್ನು ತಾಳುತ್ತಾ, ಸ್ವಾರ್ಥವನ್ನು ಮರತು, ಯೆಹೋವನ ಆರಾಧನೆಯನ್ನು ದೃಢವಾಗಿ ನಡಿಸುವದಕ್ಕಿದ್ದರು.

೨. ಇವನ್ಯಾರಂದರೆ, ಆರೋನನು. ಪ್ರಧಾನ

ಯಾಜಕೋದ್ಯೋಗವು ಅವನಿಗೂ ಅವನ ಮನೆಗೂ ನಿರಂತರವಾಗಿ ನೇಮಕವಾಗ ಬೇಕೆಂತ ಬೇಡುತ್ತಾನೆ.

೩. ದೇವಸೇವೆಗಾಗಿಯೂ ದೇವನೇಮಾಚರಣೆಗಾಗಿಯೂ ನೆಂಟರಿಷ್ಟರ ಮಮತೆಯನ್ನು ಗಣ್ಯ ಮಾಡದೆ ಮರೆತು ಬಿಡುವ ಮನಸ್ಸುಳ್ಳವನೇ ಯಾಜಕೋದ್ಯೋಗಕ್ಕೂ ದೇವರಾಜ್ಯಕ್ಕೂ ಯೋಗ್ಯನಾಗಿದ್ದಾನೆಂಬದು ದೇವವಾಕ್ಯಬೋಧೆಯಾಗಿದೆ. ಹೊರ. ೩೨, ೨೯ ಮುಂ. ಲೇವಿ. ೨೧, ೧೦. ೧೧. ಮತ್ತಾ. ೧೦, ೩೭ರಲ್ಲಿ ಯೇಸು ಹೇಳಿದ್ದನ್ನೂ ಇದಕ್ಕೆ ಸಮ ನೋಡ ಬೇಕು.

೪. ಲೇವಿಗಾಗಿ ಈ ಪ್ರಕಾರ ಬಿನ್ನೈಸುವದು ಅವಶ್ಯವಾಗಿತ್ತು, ಯಾಕೆಂದರೆ ಯಾಕೋಬನ ಆಶೀರ್ವಾದದಲ್ಲಿ ಅವನಿಗೆ ಬಂದ ಪಾಲು ಕಡಿಮೆಯಾಗಿತ್ತು. ಇದಲ್ಲದೆ ಜನಾಂಗದ ಹಟದಿಂದ ಯಾಜಕಕುಲಕ್ಕೆ ವಿಶೇಷವಾದ ಕಷ್ಟಗಳು ಹುಟ್ಟದೆ ಇರಲಾಗದು.

ವ. ೧೨. ಬಳಿಕ ಬೆನ್ಯಮೀನನಿಗೆ ಅವನು ಹೇಳಿದ್ದು: ಯೆಹೋವನ ಮುದ್ದಾದವನು ಅವನ ಮೇಲೆ ನಂಬಿಕೆಯಾಗಿ ವಾಸ ಮಾಡುವನು[೧]. ದಿನವೆಲ್ಲಾ ಅವನನ್ನು ಹೊದಗಿಸುವನು. ಅವನ ಹೆಗಲುಗಳ ನಡುವೆ ವಾಸ ಮಾಡುವನು[೨].

೧. ಅವನ ಮೇಲೆ, ಅಂದರೆ ಯೆಹೋವನ ಮೇಲೆ. ಯಾಕೋಬನ ಮುದ್ದು ಮಗನಾಗಿದ್ದು, ಕರ್ತನು ನಿತ್ಯ ದೃಢವಾದ ಬಂಡೆ ಎಂದು ನಂಬಿ, ಅವನ ಮೇಲೆ ಪೂರ್ಣ ಭರವಸವಿಡುವವನಾದರೆ, ಮೋಸ ಪಡನು.

೨. ಈ ಮಾತಿನ ಅರ್ಥವನ್ನು ಗ್ರಹಿಸಿ ಕೊಳ್ಳುವದಕ್ಕೆ ಬೆನ್ಯಮೀನ ಕುಲದ ಸ್ವಾಸ್ಥ್ಯವಾದ ನಾಡಿನ ಹದನ ನೆನೆವರಿಕೆ ಮಾಡ ಬೇಕು. ದೇವಾಲಯವೇ ಯೆಹೂದ ಕುಲದ ಭೂಮಿಯಲ್ಲಿತ್ತು. ಆದರೆ ದೇವಾಲಯದ ಸುತ್ತಲಿನ ಅಂಗಳದ ಹೆಚ್ಚಾದ ಭಾಗವು ಬೆನ್ಯಮೀನನ ಕುಲದ ನಾಡಿಗೆ ಶೇರಿತ್ತು. ಹೀಗಿರಲಾಗಿ ದೇವಾಲಯದಲ್ಲಿ ವಾಸಿಸುತ್ತಿರುವ ದೇವಮಹಿಮೆಯು ಯೆಹೂದ ಬೆನ್ಯಮೀನರ ನಾಡುಗಳಲ್ಲಿಯಣ ಗುಡ್ಡಗಳಲ್ಲಿ ಇಕ್ಕೆ ಮಾಡಿ ಕೊಂಡು, ಆ ಎರಡು ಕುಲಗಳಿಗೆ ವಿಶೇಷವಾದ ಆಶ್ರಯವಾಗಿದ್ದರಿಂದ. ಚಿಯ್ಯೋನ ಗಿರಿಯಲ್ಲಿ ಕೂತು, ಚಾಚಿದ ರೆಕ್ಕೆಗಳಿಂದ ಬೆನ್ಯಮೀನ್ ಮೊದಲಾದ ಮರಿಗಳೆಂಬ ಇಸ್ರಯೇಲನ ಕುಲಗಳನ್ನು ಹೊದಗಿಸುವ ಹದ್ದಿನೋಪಾದಿಯಾಗೆದೆಂಬದು ಪ್ರಸ್ತಾಪೋಚಿತವಾದ ಕಲ್ಪನೆಯಾಗಿದೆ.

ವ. ೧೩. ಮತ್ತು ಯೋಶೆಫನಿಗೆ ಅವನು ಹೇಳಿದ್ದು: ಆಕಾಶದ ಮೇಲೊಡವೆಗಳಿಂದಲೂ, ಮಂಜಿನಿಂದಲೂ, ಕೆಳಗೆ ಹಾಸಿದ ಆಳದಿಂದಲೂ[೧], ೧೪. ಸೂರ್ಯನ ಹುಟ್ಟುವಳಿಯಾದ ಮೇಲ್ತರಗಳಿಂದಲೂ, ತಿಂಗಳುಗಳ ಮೊಳಿಕೆಯಾದ ಮೇಲ್ತರಗಳಿಂದಲೂ, ೧೫. ಮುನ್ನಾದ ಬೆಟ್ಟಗಳ ತುದಿಯಿಂದಲೂ, ಯುಗಾಂತರ ಗಿರಿಗಳ ಮೇಲ್ತರಗಳಿಂದಲೂ, ೧೬. ಭೂಮಿಯ ಮೇಲ್ಫಲಗಳಿಂದಲೂ, ಅದರ ತುಂಬಿಕೆಯಿಂದಲೂ, ಅವನ ದೇಶವು ಯೆಹೋವನ ಆಶೀರ್ವಾದವನ್ನು ಪಡೆದು ಕೊಳ್ಳಲಿ! ಪೊದೆಯಲ್ಲಿ ವಸ್ತಿಯಾದವನ ಮೆಚ್ಚಿಕೆಯು ಯೋಶೆಫನ ತಲೆಯ ಮೇಲೆಯೂ, ತನ್ನ ಒಡಹುಟ್ಟಿದವರಲ್ಲಿ ಶ್ರೇಷ್ಠನ[೨] ನೆತ್ತಿಯ ಮೇಲೆಯೂ, ಬರಲಿ! ೧೭. ಚೊಚ್ಚಲ ಹೋರಿಯ ಪ್ರಭೆಯೂ ಅವನಿಗುಂಟು. ಅವನ ಕೊಂಬುಗಳು ಕಾಡಕೋಣದ ಕೊಂಬುಗಳಾಗಿವೆ. ಅವುಗಳಿಂದ ಜನಾಂಗಗಳನ್ನು ಒಟ್ಟಿಗೆ ಭೂಮಿಯ ಅಂಚುಗಳಿಗೆ ನೂಕುವನು. ಇವು ಎಫ್ರಯಿಮನ ಅಯುತಗಳು, ಇವು ಮನಾಸೆಯ ಸಹಸ್ರಗಳು.

೧. ಎಫ್ರಯಿಮ ಮನಾಸೆಯರು ಶೇರಿದ ಯೋಶೆಫನಿಗೆ ದೊರಕಿದ ಆಶೀರ್ವಾದವು ಫಲಭರಿತವಾದ ನಾಡುಗಳ ಸ್ವಾಸ್ಥ್ಯ, ಅಧಿಕವಾದ ಪರಾಕ್ರಮ, ಬಲವಂತ ಹೇರಳವಾದ ಸಂತತಿ ಮುಂತಾದ ಪದವಿಯಾಗಿದೆ. ಸಮ ನೋಡು ಉತ್ಪ. ೪೯, ೨೨.

೨. ಉತ್ಪ. ೧೯,೨೭ರಲ್ಲಿ ಬರೆದದ್ದನ್ನು ನೋಡ ಬೇಕು.

ವ. ೧೮. ಮತ್ತು ಜೆಬುಲೋನನಿಗೆ ಅವನು ಹೇಳಿದ್ದು: ಜೆಬುಲೋನನೇ, ನೀನು ಹೊರಡುವದರಲ್ಲಿ[೧], ಇಸ್ಸಕಾರನೇ, ನಿನ್ನ ಗುಡಾರಗಳಲ್ಲಿ[೨] ಹಿಗ್ಗು. ೧೯. ಜನಾಂಗಗಳನ್ನು[೩] ಬೆಟ್ಟಕ್ಕೆ ಕರೆಯುವರು. ಅಲ್ಲಿ ನೀತಿಯ ಬಲಿಗಳನ್ನು ಅರ್ಪಿಸುವರು. ಯಾಕೆಂದರೆ ಕಡಲುಗಳ ಉಗ್ರಾಣವನ್ನೂ ಮರಳಿನ ಮರೆಯಾದ ದ್ರವ್ಯವನ್ನೂ ಹೀರಿ ಕೊಳ್ಳುವರು[೪].

೧. ಅಂದರೆ, ವ್ಯಾಪಾರಸಂಚಾರಕ್ಕೆ ಹೊರಟು ಹೋಗುತ್ತಾ ಸುಖಿಯಾಗಿರು.

೨. ಅಂದರೆ, ಗುಡಾರಗಳಲ್ಲಿ ವಸ್ತಿಯಾಗಿದ್ದು ಆರಂಭ ಗೈಯ್ಯುವದರಲ್ಲಿ ಸೌಖ್ಯವಾಗಿರು.

೩. ಜನಾಂಗಗಳೆಂಬ ಹೆಸರು ಇಲ್ಲಿ ಬಹಳವಾಗಿ ಬೆಳೆದ ಕುಲಗಳನ್ನು ಸೂಚಿಸುತ್ತದೆ.

೪. ಸಮುದ್ರವರ್ತಕತನದಿಂದ ನಾನಾ ದೇಶಗಳಿಂದಲೂ ದ್ವೀಪಗಳಿಂದಲೂ ಭಾರಿ ಐಶ್ವರ್ಯವನ್ನು ಘಳಿಸುವರು. ಬಳಿಕ ಯೆಹೋವನಿಗೆ ತಕ್ಕ ಕಾಣಿಕೆಗಳನ್ನೂ ಬಲಿಗಳನ್ನೂ ತಂದು ಕೊಡುವರು.

ವ. ೨೦. ಮತ್ತು ಗಾಡನಿಗೆ ಅವನು ಹೇಳಿದ್ದು: ಗಾಡನನ್ನು ಇಂಬಾಗಿರಿಸುವವನಿಗೆ[೧] ಆಶೀರ್ವಾದ! ಅವನು ಸಿಂಹದಂತೆ ಮಲಗಿ, ತೋಳು ನೆತ್ತಿಗಳನ್ನು[೨] ಶೀಳುತ್ತಾನೆ. ೨೧. ಅವನು ಮೊದಲನೆ ಪಾಲು ನೋಡಿ ಕೊಂಡನು[೩]; ಯಾಕೆಂದರೆ ಅಲ್ಲಿ ನ್ಯಾಯಾಧಿಪತಿಯ ಭಾಗವು[೪] ನೇಮಕವಾಗಿದೆ. ಜನಾಂಗದ ಮುಖ್ಯಸ್ಥರ ಸಂಗಡ ಬಂದು, ಯೆಹೋವನ ನೀತಿಯನ್ನೂ ಇಸ್ರಯೇಲನೊಡನೆ ಇರುವ ಅವನ ನ್ಯಾಯಗಳನ್ನೂ ನಡಿಸಿದನು[೫].

೧. ಅಂದರೆ, ಅವನ ಶೀಮೆಯನ್ನು ವಿಸ್ತರಿಸುವವನಿಗೆ. ೨ ಅರ. ೯, ೧೦.

೨. ತೋಳು ನೆತ್ತಿಗಳು ದೇಹದ ಪ್ರಾಮುಖ್ಯ ಭಾಗಗಳಾಗಿರುವದರಿಂದ ಈ ಉಪಮೆಯ ಅಭಿಪ್ರಾಯವೇನಂದರೆ: ಗಾಡನ ಕುಲವು ಅತಿಶಯವಾದ ಬಲದಿಂದ ಮೃಗ ಪಶ್ವಾದಿಗಳನ್ನು ಹರಿದು ಬಿಡುವ ಸಿಂಹದಂತೆ ಶತ್ರುಗಳನ್ನು ಗೆದ್ದು, ಅವರ ಕಲಿಗಳನ್ನೂ ಅರಸರನ್ನೂ ಹೊಡದು ಬಿಡುವನು.

೩. ಅದೇನಂದರೆ, ಇಸ್ರಯೇಲನವರ ದಂಡು ಮೊದಲು ಶೇರಿದ ಯೊರ್ದನದ ಮೂಡಣ ಶೀಮೆಯನ್ನು ಕಂಡು, ಬಯಸಿ, ಸ್ವಾಸ್ಥ್ಯವಾಗಿ ಪಡ ಕೊಂಡನು.

೪. ನ್ಯಾಯಾಧಿಪತಿಯಾದ ಮೋಶೆಗೆ ಸಮಾಧಿಯ ಸ್ಥಳವಾಗಿ ನೇಮಕವಾದ ದೇಶವು ತನ್ನ ಸ್ವತಂತ್ರವಾಗುವದೆಂದು, ಬೇಗ ತಿಳಕೊಂಡನು.

೫. ಅದೇನಂದರೆ: ಗಾಡನ ಕುಲವು ಉಳಿದ ಕುಲಗಳಿಗೆ ಕನಾನ ದೇಶವನ್ನು ಗೆದ್ದು, ಕಟ್ಟಿ ಕೊಳ್ಳುವ ಕೆಲಸದಲ್ಲಿ ಸಮೆ ನೆರವಾಗಿದ್ದು, ನೀತಿಯುಳ್ಳ ದೇವನು ಕನಾನ ದೇಶದ ಜನಗಳಿಗೆ ತೀರಿಸಿದ ಆಜ್ಞೆನಿರ್ಣಯಗಳನ್ನು ಯಥಾರ್ಥವಾದ ವಿಧೇಯತ್ವದಿಂದ ಈಡೇರಿಸುವದಕ್ಕೆ ಒತ್ತಾಸೆ ಮಾಡಿತು.

ವ. ೨೨. ಮತ್ತು ದಾನನಿಗೆ ಅವನು ಹೇಳಿದ್ದು: ದಾನನು ಸಿಂಹದ ಮರಿಯಾಗಿದ್ದು, ಬಾಷಾನದಿಂದ ಹಾರಿ* ಬರುವನು.

*ಅದೇನಂದರೆ, ದಾನನು ಬಾಷಾನದ ಕಾಡಿನಿಂದ ಹಾರಿ ಬರುವ ಸಿಂಹದಂತೆ ಬಲವಂತನೂ ಕ್ರೂರಮದವನೂ ದುಘುಂಪ್ರವೇಶಕನೂ ಆಗಿದ್ದಾನೆ.

ವ. ೨೩. ಮತ್ತು ನಫ್ತಲಿಗೆ ಅವನು ಹೇಳಿದ್ದು: ನಫ್ತಲಿ ಮೆಚ್ಚಿಗೆಯಿಂದ ತುಂಬಿದವನೂ, ಯೆಹೋವನ ಆಶೀರ್ವಾದದಿಂದ ನೆರೆಹಿದವನೂ, ಆಗಿದ್ದಾನೆ. ಪಡುವಲವೂ ತೆಂಕಣವೂ ಅವನ ಸ್ವಾಧ್ಯವಾಗಿವೆ*.

*ಈ ವಚನದ ಅರ್ಥವೇನಂದರೆ: ನಫ್ತಲಿ ಕುಲವು ಪಡುವಲ ಕಡಲಿನ ಬಳಿಯಲ್ಲಿಯೂ, ದಾನನ ಕುಲವು ನ್ಯಾಯಾಧಿಪತಿಗಳ ಕಾಲದಲ್ಲಿ ತನಗೆ ವಶ ಮಾಡಿ ಕೊಂಡ ಕನಾನದ ಉತ್ತರ ದಿಕ್ಕಿನ ಶೀಮೆಗೆ (ನ್ಯಾಯಾಧಿ. ಸ. ೧೮.) ತೆಂಕಣದಲ್ಲಿಯೂ ಇದ್ದ ನಾಡನ್ನು ಸ್ವತಂತ್ರಿಸಿ ಕೊಂಡನು.

ವ. ೨೪. ಮತ್ತು ಅಶೇರನಿಗೆ ಅವನು ಹೇಳಿದ್ದು: ಅಶೇರನು ಮಕ್ಕಳ ಆಶೀರ್ವಾದವನ್ನು ಹೊಂದಲಿ. ಒಡಹುಟ್ಟಿದವರ ಒಲ್ಮೆಯುಳ್ಳವನಾಗಿರಲಿ. ತನ್ನ ಅಡಿಯನ್ನು ಎಣ್ಣೆಯಲ್ಲಿ ಅದ್ದಲಿ೧). ೨೫. ನಿನ್ನ ಅಡ್ಡ ಕೋಲುಗಳು ಕಬ್ಬಿಣವೂ ತಾಮ್ರವೂ ಆಗಿರಲಿ! ನಿನ್ನ ದಿನಗಳಂತೆ ನಿನ್ನ ತೀರುಗಡೆ೨) ಇರಲಿ!

೧. ಅಂದರೆ, ಸಾರವುಳ್ಳ ಭೂಮಿಯ ಹುಟ್ಟುವಳಿಯ ಹೆಚ್ಚಿಗೆಯನ್ನನುಭವಿಸುತ್ತಾ ವೈಭವದಿಂದಿರುವನು.

೨. ಹೊರಗಡೆಗೆ ಭದ್ರವಾಗಿಯೂ ಒಳಗಡೆಯಲ್ಲಿ ಸಮಾಧಾನವಾಗಿಯೂ ಬಾಳುವನು.

೩. ಸರ್ವ ಜನಾಂಗಾಶೀರ್ವಾದ ಸಮಾಪ್ತಿ. ವ. ೨೬—೨೯.

ವ. ೨೬. ದೇವನಂತೆ ಯಾರೂ ಇಲ್ಲವು, ಯೆಷುರೂನನೇ. ಅವನು ನಿನ್ನ ಒತ್ತಾಸೆಗೆ ರಥವನ್ನೇರಿ, ಆಕಾಶವನ್ನೂ, ತನ್ನ ಘನತೆಯಲ್ಲಿ ಮೇಘಗಳನ್ನೂ ಹಾದು ಹೋಗುವವನಾಗಿದ್ದಾನೆ. ೨೭. ಅನಾದಿಯಾದ ದೇವನು ಆಶ್ರಯವು೧). ನಿತ್ಯವಾದ ತೋಳುಗಳು೨) ಅಡಿಯಲ್ಲಿವೆ. ಎದುರಾಳಿಯನ್ನು ನಿನ್ನ ಮುಂದೆ ಹೊರಡಿಸಿ, ಮಡಿದು ಹೋಗಲಿ ಎಂದು, ಹೇಳುವನು. ೨೮. ಇಸ್ರಾಯೇಲನು ಒಂಟಿಯಾಗಿ೩) ಭದ್ರದಿಂದ ವಾಸಿಸುವನು. ಗೋಧಿ ದ್ರಾಕ್ಷೇ ರಸಗಳುಳ್ಳ ದೇಶದಲ್ಲಿ ಯಾಕೋಬನ ಬುಗ್ಗೆ೪) ಇರುವದು. ಅವನ ಆಕಾಶಮಂಡಲಗಳು ಮಂಜು ಸುರಿಸುವವು. ೨೯. ಇಸ್ರಾಯೇಲನೇ, ನಿನಗೆ ಮಂಗಳ! ನಿನ್ನಂತೆ ಯಾರು? ನಿನ್ನ ಸಹಾಯದ ಗುರಾಣಿಯೂ, ನಿನ್ನ ಹೆಚ್ಚಳದ೫) ಕತ್ತಿಯೂ ಆಗಿರುವ ಯೆಹೋವನಿಂದ ರಕ್ಷಿತವಾದ ಜನಾಂಗವೇ! ನಿನ್ನ ಎದುರಾಳಿಗಳು ನಿನಗೆ ಮುಖಸ್ತುತಿ೬) ಮಾಡುವರು. ನೀನು ಅವರ ಎತ್ತರಗಳ ಮೇಲೆ೭) ನಡದು ಹೋಗುವಿ.

೪೦೦ ವಾಗ್ದತ್ತದೇಶ ನೋಡ ಬಹುದೆಂದು, ಮೋಶೆಗೆ ಅಪ್ಪಣೆ ಕೊಟ್ಟದ್ದು.

ದ್ವಿತೀ. ೩೪, ೧—೪.

೧. ಅನಾದಿಯಾದ ದೇವನು ನಿನ್ನನ್ನು ಕನಿಕರದಿಂದ ಸ್ವೀಕರಿಸಿ, ನಿನ್ನ ಒಡೆಯನಾಗಿ ನಿನ್ನನ್ನು ಪರಾಮರಿಸುತ್ತಾನೆ.

೨. ಭಕ್ತರನ್ನು ಸೈರಿಸಿ, ಪಾಲಿಸಿ, ರಕ್ಷಿಸಿ, ದಣಿಯದೆ ಇರುವ ಯೆಹೋವನ ಕೃಪೆಯು ಇಲ್ಲಿ ನಿತ್ಯವಾದ ತೋಳುಗಳನ್ನಿಸಿ ಕೊಳ್ಳುತ್ತದೆ.

೩. ವಿಗ್ರಹಪೂಜೇ ನಡಿಸುವ ಪರಜನಗಳಿಗೆಲ್ಲಾ ವಿಂಗಡವಾಗಿ ಬದುಕುವನು.

೪. ಯಾಕೋಬನ ಬುಗ್ಗೆ ಏನಂದರೆ: ಇಸ್ರಯೇಲನ ವಂಶದ ಕೂಟವಿಶ್ರಾಂತಿವಾಸಗಳ ಸ್ಥಳವು.

೫. ಹೆಚ್ಚಳದ ಕತ್ತಿ ಅಂದರೆ, ನಿನಗೆ ಜಯವನ್ನುಂಟು ಮಾಡಿದ ಕತ್ತಿ. ಹೆಚ್ಚಳವೆಂಬದಕ್ಕೆ ಇಲ್ಲಿ ಮೆರವಣಿಗೆ, ಜಯೋತ್ಸವವೆಂಬ ವಿಶೇಷವಾದ ಅರ್ಥವದೆ ಎಂದು, ತೋರುವದು.

೬. ನಿನ್ನನ್ನು ಹೃದಯದಲ್ಲಿ ಹಗೆ ಮಾಡಿದರೂ, ಭಯದಿಂದ ನಿನ್ನನ್ನು ಹೊಗಳುವರು.

೭. ಬೆಟ್ಟಗಳಲ್ಲಿ ಅವರು ಕಟ್ಟಿದ ಅವರ ದುರ್ಗಗಳನ್ನಾಕ್ರಮಿಸಿ ಕೊಂಡು ಒಂದೊಂದರಲ್ಲಿ ಶೇರು

೮.—ನಿತ್ಯವಾದ ಸಹಾಯ ಆಶೀರ್ವಾದಗಳ ಒರ್ತೆಯಾಗಿರುವ ಒಡಂಬಡಿಕೆಯ ದೇವನ ಬಲವಾದ ಒತ್ತಾಸೆ ದೇವಜನಾಂಗಕ್ಕೆ ತಪ್ಪಿ ಹೋಗುವದಿಲ್ಲವೆಂಬ ಮಾತು ಕೊಟ್ಟು, ಮೋಶೆ ತನ್ನ ಜನಾಂಗದ ಅಪ್ಪಣೆ ತೆಗದು ಕೊಂಡು ಹೋಗುತ್ತಾನೆ. ಯಾಕೋಬನ ದೇವನ ಸಹಾಯ ಇರುವವರೆಲ್ಲರೂ ಮಂಗಳರು. ಅವನನ್ನು ನಂಬುವವರೆಲ್ಲರು ಮಂಗಳರು.

ಮೋಶೆಯ ಮರಣ. ಸಂಧಿ. ೩೪.

ವಾಗ್ದತ್ತದೇಶವನ್ನು ದೂರದಿಂದ ಹಣಿಕಿ ನೋಡ ಬಹುದೆಂಬ ಅಪ್ಪಣೆಯನ್ನು ಮೋಶೆಗೆ ಯೆಹೋವನು ಕೊಟ್ಟದ್ದು. ವ. ೧—೪.

ವ. ೧. ಬಳಿಕ ಮೋಶೆ ಯೆರೇಃಹೋವಿಗೆದುರಾಗಿರುವ ಪಿಸ್ಗದ ತಲೆಯಾದ ನೆಬೋ
ಬೆಟ್ಟಕ್ಕೆ ಮೋವಾಬದ ಬೈಲಿನಿಂದ ಏರಿ ಹೋಗಲಾಗಿ, ಯೆಹೋವನು ದಾನದ ವರೆ
ಗೂ ಇರುವ ಗಿಲ್ಯಾದವನ್ನೂ, ೨. ನಫ್ತಲಿಯದೆಲ್ಲಾನ್ನೂ, ಎಫ್ರಯಿಮು ಮನಾಸೆ
ಯರ ದೇಶವನ್ನೂ ಹಿಂಗಡೆಯ ಕಡಲಿನ ವರೆಗೂ ಇರುವ ಯೆಹೂದ ದೇಶವೆಲ್ಲಾ
ನ್ನೂ೧), ೩. ದಕ್ಷಿಣವನ್ನೂ ಖರ್ಜೂರಗಳ ಪಟ್ಟಣವಾದ ಯೆರೇಃಹೋವಿನ ತಗ್ಗೆಂಬ
ಬೈಲನ್ನೂ೨), ಚೋವರದ ವರೆಗೂ೩) ದೇಶವನ್ನೆಲ್ಲಾ ನೋಡಲೀಸಿದನು. ೪. ಬಳಿಕ
ಯೆಹೋವನು ಅವನಿಗೆ ಹೇಳಿದ್ದು: ನಿನ್ನ ಬೀಜಕ್ಕೆ ಕೊಡುತ್ತೇನೆಂದು, ಅಬ್ರಹಾಮ
ಇಸಾಕ ಯಾಕೋಬರಿಗೆ ನಾನಾಣೆಯಿಟ್ಟ ದೇಶವು ಇದೇ. ನಿನ್ನ ಕಣ್ಣುಗಳಿಂದ ನಿ
ನ್ನನ್ನದನ್ನು ನೋಡಲೀಸಿದ್ದೇನೆ; ಆದರೆ ಅಲ್ಲಿ ದಾಟಿ ಶೇರಲಾರೆ.

೧. ಮೋಶೆ ತಾನೆ ಎತ್ತರವಾದ ಬೆಟ್ಟದ ತಲೆಯಲ್ಲಿ ನಿಂತು, ಬಹಳ ವಿಸ್ತಾರವಾದ ಶೀಮೆಯನ್ನು ಕಣ್ಣಾರೆ ಕಂಡದ್ದಲ್ಲದೆ, ಆತ್ಮದೃಷ್ಟಿಯಿಂದ ಕನಾನ ದೇಶದ ನಾಡುಗಳನ್ನೆಲ್ಲಾ ನೋಡಿದನೆಂದು, ಇಲ್ಲಿ ಬರೆದಿರುವ ವಿವರಣೆಯಿಂದ ಮಾತ್ರವಲ್ಲ, ಹಿಂದಿನ ಸಂಧಿಯ ಆಶೀರ್ವಾದಗಳ ಪ್ರಸ್ತಾಪದಿಂದಲೂ, ತೋರುತ್ತದೆ.

೨. ಅಂದರೆ ಯೊರ್ದನ ಹೊಳೆಯ ಇತ್ತಟ್ಟದಲ್ಲಿರುವ ತಗ್ಗಾದ ನಾಡು.

೩. ಕರ್ತನು ಈ ವೇಳೆಯಲ್ಲಿ ವಾಗ್ದತ್ತದೇಶದ

ನಾಡುಗಳನ್ನು ಮೋಶೆಗೆ, ಆಯಾ ಕುಲಗಳಿಗೆ ಸೇಮುಕವಾದ ಸ್ವಾಸ್ಥ್ಯಗಳಾಗಿ, ತೋರಿಸಿದರಿಂದ ಅವು ದೇಶವಶೀಕರಣದ ಇತ್ತಲಾಗೆ ಹೊಂದಿದ ಹೆಸರುಗಳುಳ್ಳವುಗಳಾಗಿ ಇಲ್ಲಿಯೆ ಬರೆದವೆ.

ಮೋಶೆ ಸತ್ತು ಹೂಣಲ್ಪಟ್ಟದ್ದು. ವ. ೫—೮.

ವ. ೫. ಬಳಿಕ ಯೆಹೋವನ ಆಳಾದ ಮೋಶೆ ಅಲ್ಲಿ ಮೋವಾಬದ ದೇಶದಲ್ಲಿ
ಯೆಹೋವನ ಬಾಯ ಅಪ್ಪಣೆಯಿಂದ[೧] ಸತ್ತನು. ೬. ಮತ್ತು ಅವನನ್ನು ತಗ್ಗಿನಲ್ಲಿ,
ಮೋವಾಬದ ದೇಶದಲ್ಲಿ, ಬೇತ್ಪೆಯೋರಕ್ಕೆದುರಾಗಿ ಹೂಣಿಟ್ಟನು. ಅವನ ಗೋರಿ
ಯ ಎಡೆಯನ್ನು ಇಂದಿನ ವರೆಗೆ ಯಾರೂ ಅರಿಯರು[೨]. ೭. ಮೋಶೆ ಸಾಯುವಾ
ಗ, ನೂರ ಇಪ್ಪತ್ತು ವರ್ಷದವನಾಗಿದ್ದನು. ಅವನ ಕಣ್ಣು ಮೊಬ್ಬಾಗಲಿಲ್ಲ, ಅವನ
ತ್ರಾಣವು ಕುಂದಲಿಲ್ಲ. ೮. ಇಸ್ರಯೇಲನ ಮಕ್ಕಳು ಮೋವಾಬದ ಬೈಲಿನಲ್ಲಿ ಮೋಶೆ
ಗಾಗಿ ಮೂವತ್ತು ದಿವಸ ಅತ್ತರು. ಈ ಪ್ರಕಾರ ಮೋಶೆಯ ಗೋಳಾಟದಲ್ಲಿ ಅಳುವ
ದಿವಸಗಳು ತುಂಬಿದವು.

೧. ಇಬ್ರಿಯದಲ್ಲಿ ಬಾಯ ಮೇಲೆ ಎಂಬದಕ್ಕೆ ಅಪ್ಪಣೆಯಿಂದ ಇಲ್ಲವೆ ಅಪ್ಪಣೆಯ ಪ್ರಕಾರವೆಂಬ ಅರ್ಥವು ವಾಡಿಕೆಯಾಗಿದೆ. ಇಲ್ಲಿ ಬರದ ಮಾತಿಗೆ ಯೆಹೋವನು ತಾನು ಕೊಟ್ಟ ಅಪ್ಪಣೆಯಿಂದ, ಅದು ಉಂಟಾದ ಕೂಡಲೇ ಎಂಬ ಅಭಿಪ್ರಾಯವುಂಟೆಂದು ತೋರುತ್ತದೆ. ಆದರೆ ರಬ್ಬಿಯವರು ಮೋಶೆ ಯೆಹೋವನ ಬಾಯಿಯಲ್ಲಿ ಸತ್ತನೆಂದು ಭಾಷಾಂತರ ಮಾಡಿ, ಯೆಹೋವನು ಮೋಶೆಗೆ ಕೊಟ್ಟ ಪ್ರಾಣವನ್ನು ತಿರಿಗಿ ತೆಗದು ಕೊಳ್ಳ ಬೇಕೆಂದು ಅವನಿಗೆ ಮುದ್ದಿಟ್ಟು, ಅವನ ಜೀವವನ್ನು ಹೀರಿ ಕೊಂಡದರಿಂದ ಅವನು ದೇವನಿಟ್ಟ ಮುದ್ದಿನಿಂದ ಸತ್ತನೆಂಬ ಮನೋಹರವಾದ ವ್ಯಾಖ್ಯಾನವನ್ನು ಕಲ್ಪಿಸಿದ್ದಾರೆ.

೨. ಮೋಶೆ ಸಹ ಆರೋನನಂತೆ ಸಾಯ ಬೇಕಾಯಿತು. ಯಾಕೆಂದರೆ ಯೆಹೋವನು ತನ್ನ ಉತ್ತಮ ಭಕ್ತರಾದ ಸೇವಕರಲ್ಲಿಯೂ ಕಂಡ ಪಾಪಗಳನ್ನು ದಂಡಿಸದೆ ಬಿಡದ ನೀತ್ಯಾಸಕ್ತ ಪರಿಶುದ್ಧತ್ವವನ್ನು ಪ್ರಕಟ ಮಾಡುವವನಾಗಿದ್ದಾನೆ. ಆದಾಗ್ಯೂ ಆರೋನನಿಗಿಂತ ವಿಶೇಷವಾದ ಮಾನವನ್ನು ಪಡ ಕೊಂಡನು; ಅದೇನಂದರೆ, ಯೆಹೋವನು (ಯೆಹೂದನ ಪತ್ರಿಕೆಯ ೯ನೆ ವಚನದ ಪ್ರಕಾರ, ದೂತನ ಕೈಯಿಂದ) ಅವನನ್ನು ಹೂಣಿಟ್ಟನು. ಇದು, ಮೋಶೆಯು ಪಾಪವಿಮೋಚನೆಯನ್ನು ಹೊಂದಿದವನಾಗಿ, ನಂಬಿಕೆಯುಳ್ಳ ಆಳಿಗೆ ಯೋಗ್ಯವಾದ ಪದವಿಯಲ್ಲಿ ಶೇರಿ, ದೇವನ ಅದೃಶ್ಯವಾದ ಕೈಯಲ್ಲಿ ವಿಶ್ರಾಂತಿ ಪಡ ಕೊಂಡಿದ್ದಾನೆಂಬದಕ್ಕೆ ದೃಷ್ಟಾಂತವಾಗಿದೆ.

ಯೆಹೋಷುವನು ಅವನ ಪ್ರತಿನಿಧಿಯಾದದ್ದು. ವ. ೯.

ವ. ೯. ಆದರೆ ನೂನನ ಮಗನಾದ ಯೆಹೋಷುವನು ಬುದ್ಧಿಯ ಆತ್ಮದಿಂದ
ತುಂಬಿದ್ದನು. ಯಾಕೆಂದರೆ ಮೋಶೆ ಅವನ ಮೇಲೆ ತನ್ನ ಕೈಗಳನ್ನು ಇಟ್ಟಿದ್ದನು.*
ಮತ್ತು ಇಸ್ರಯೇಲನ ಮಕ್ಕಳು, ಯೆಹೋವನು ಮೋಶೆಗೆ ಬೆಸಸಿದಂತೆ ಮಾಡಿ, ಅವನ
ಮಾತು ಕೇಳಿದರು.

*ಅಂಕೆ. ೨೭, ೧೮ ಮುಂ.

ದ್ವಿತೀ. ೩೪, ೧೦–೧೨.

ಮೋಶೆಯ ಸಾಕ್ಷೀ ಲೇಖನ (ಗೋರೀ ಬರಹ). ವ. ೧೦–೧೨.

ವ. ೧೦. ಆದರೆ ಮಿಚ್ರ ದೇಶದಲ್ಲಿ ಫರೋನನಿಗೂ ಅವನ ಎಲ್ಲಾ ಆಳುಗಳಿಗೂ
ಅವನ ಎಲ್ಲಾ ದೇಶಕ್ಕೂ ಮಾಡುವದಕ್ಕೆ ಯೆಹೋವನು ಅವನನ್ನು ಕಳುಹಿದ ಎಲ್ಲಾ
ಗುರುತುಗಳು ಲಕ್ಷಣಗಳು ಇವುಗಳ ಪ್ರಕಾರವಾಗಿಯೂ, ೧೧. ಮೋಶೆ ಇಸ್ರಯೇ
ಲನವರೆಲ್ಲರ ಮುಂದೆ ಮಾಡಿದ ಎಲ್ಲಾ ಬಲವಾದ ಕೈಕೆಲಸಗಳು, ಎಲ್ಲಾ ಮಹಾ ಅ
ದ್ಭುತಗಳು, ಇವುಗಳ ಪ್ರಕಾರವಾಗಿಯೂ, ೧೨. ಯೆಹೋವನು ಮೋರೆ ಮೋರೆ
ಯಾಗಿ ತಿಳಿದಂಥ, ಮೋಶೆಯ ಹಾಗೆ ಇನ್ನೊಬ್ಬ ಪ್ರವಾದಿ ಇಸ್ರಯೇಲನಲ್ಲಿ ಏಳಲಿಲ್ಲ.*

*ಹಳೆ ಒಡಂಬಡಿಕೆಯ ಕಾಲದ ದೇವಸೇವಕರೆಲ್ಲರಲ್ಲಿ ಮೋಶೆ ಯೆಹೋವನೊಡನೆ ಇದ್ದ ಪೂರ್ಣಾನ್ಯೋನ್ಯವಾದ ಸಲಿಗೆಯಿಂದಲೂ, ಯೆಹೋವನಿಂದ ಹೊಂದಿದ ಮಹಾ ಅದ್ಭುತ ಕಾರ್ಯಗಳನ್ನು ಮಾಡುವ ಶಕ್ತಿಯಿಂದಲೂ, ಶ್ರೇಯಸ್ವಿಯಾಗಿದ್ದನು.

A

…MENTARY

ON

…Pentateuch

…CANARESE

…M THE GERMAN

… ಐದು ಗ್ರಂಥಗಳ

…ಖ್ಯಾನ ಪು

…ANGALORE

… & HIRNER, BASEL MISSION PRESS

1873